॥ ಓಂ ॥

ಭಗವಾನಕುಂದಕುಂದಾಚಾರ್ಯದೇವವಿರಚಿತ

# ಪಂಚಾಸ್ತಿಕಾಯ ಪರಿಮಳ

## (ಭಾಗ - 1)

ಸಂಪಾದಕರು :

ಶ್ರೀ ಎಂ. ಬಿ. ಪಾಟೀಲ, ಸೇಡಬಾಳ

ಶಹಾಪುರ - ಬೆಳಗಾವಿ.

ಪ್ರಕಾಶಕರು :

ಶ್ರೀ ದಿಗಂಬರ ಜೈನ ಸ್ವಾಧ್ಯಾಯ ಮಂಡಲ ಟ್ರಸ್ಟ,

ಬೆಂಗಳೂರು.

◆ ಪ್ರಥಮಾವೃತ್ತಿ : ಒಂದು ಸಾವಿರ (1000) ಪ್ರತಿಗಳು
ಚೈತ್ರ ಶುದ್ಧ ತ್ರಯೋದಶಿ, 22 ಎಪ್ರಿಲ್ 2005
ದ್ವಿತಿಯಾವೃತ್ತಿ : ಐದುನೂರು (500) ಪ್ರತಿಗಳು
30 ನವ್ಹಂಬರ, 2009.


◆ ಬೆಲೆ : ಇಪ್ಪತ್ತೈದು ರೂಪಾಯಿ 25/-
(ಮೂಲ ಬೆಲೆ : ರೂ. 75/-)

◆ ಸಂಪೂರ್ಣ ಹಕ್ಕು ಸುರಕ್ಷಿತ


◆ ದೊರಕುವ ಸ್ಥಳ :
**ಶ್ರೀ ದಿಗಂಬರ ಜೈನ ಸ್ವಾಧ್ಯಾಯ ಮಂಡಲ ಟ್ರಸ್ಟ,**
141, ರಂಗಸ್ವಾಮಿ ಗುಡಿ ಬೀದಿ,
ಬೆಂಗಳೂರು - 560 053.
ದೂರವಾಣಿ : 22911890, 22912990

''ಶ್ರುತ ಭಂಡಾರ'',
36, ಶುದ್ಧಾತ್ಮ ಸದನ, ಹುಲಬತ್ತಿ ಕಾಲೋನಿ,
ಶಹಾಪುರ-ಬೆಳಗಾವಿ.
ಫೋನಃ 2466991


◆ ಮುದ್ರಕರು :
**ಇಮೇಜ ಪ್ರಿಂಟ್ಸ,**
2393, ಕಚೇರಿ ಗಲ್ಲಿ, ಶಹಾಪೂರ, ಬೆಳಗಾವಿ.
ಫೋನ : 9341103880



ದೇವಾಧಿದೇವ ಶ್ರೀ ಋಷಭದೇವ ಜಿನಬಿಂಬ, ಬೆಂಗಳೂರು



ಶ್ರೀಮದ್ ಭಗವದ್ ಕುಂದಕುಂದಾಚಾರ್ಯದೇವ



परम पूज्य अध्यात्ममूर्ति सद्गुरुदेवश्री कानजीस्वामी

# ಪ್ರಕಾಶಕೀಯ

ಭಗವಾನ ಕುಂದಕುಂದಾಚಾರ್ಯದೇವ ವಿರಚಿತ 'ಪಂಚಾಸ್ತಿಕಾಯ ಸಂಗ್ರಹ'ವೆಂಬ ಪರಮೋತ್ಕೃಷ್ಟ ಪೂಜನೀಯ ಪರಮಾಗವು ಶ್ರೀಮದಮೃತಚಂದ್ರಾಚಾರ್ಯದೇವ ಲಿಖಿತ 'ಸಮಯವ್ಯಾಖ್ಯೆ'ಯೆಂಬ ಟೀಕೆಯೊಂದಿಗೆ ಸಮಗ್ರವಾಗಿ ಕನ್ನಡದಲ್ಲಿ ಅನುವಾದಗೊಂಡು ಸರ್ವಾಂಗ ಸುಂದರವಾದ ಗ್ರಂಥವು ಈಗಾಗಲೇ ನಮ್ಮ ಸಂಸ್ಥೆಯಿಂದ ಮೂರು ಆವೃತ್ತಿಗಳಲ್ಲಿ ಪ್ರಕಾಶನಗೊಂಡಿದೆ ಮೋಕ್ಷ ಮಾರ್ಗದಲ್ಲಿ ಆರೂಢರಾಗಬಯಸುವರೆಲ್ಲರಿಗೂ ಈ ಪರಮಾಗಮವು ಪರಮೋಪಕಾರಿಯೂ ಪ್ರಯೋಜನಭೂತವೂ ಆಗಿರುವುದರಿಂದ ಎಲ್ಲರಿಗೆ ಅಧ್ಯಯನ ಯೋಗ್ಯವಾಗಿದೆ. ಆದರೇನು ಮಾಡುವುದು ಇಂದು ಬುದ್ಧಿಯ ಮಂದತೆ ಮತ್ತು ಸ್ವಾಧ್ಯಾಯದಿಂದ ವಂಚಿತವಿರುವಂಥ ಸಾಮಾನ್ಯ ಜನರೆಲ್ಲರಿಗೂ ಇಂಥ ವಸ್ತುಭೂತ ಸತ್ ಶಾಸ್ತ್ರಗಳ ಮರ್ಮವನ್ನು ತಿಳಿದುಕೊಳ್ಳುವುದು ದುಸ್ತರವಾಗಿದೆ. ಇಂದು ಬಹಳಷ್ಟು ಜನರು ಧರ್ಮಬುದ್ಧಿಯಿಂದ ಸ್ವಾಧ್ಯಾಯ ಮಾಡುತ್ತಿದ್ದರೂ ಕೂಡ ಅಧ್ಯಾತ್ಮ ಪರಂಪರೆಯು ಮಧ್ಯದಲ್ಲಿ ಬಿಟ್ಟು ಹೋಗಿರುವುದರಿಂದ ಇವುಗಳ ಭಾವವು ಬುದ್ಧಿ ಗಮ್ಯವಾಗುತ್ತಿಲ್ಲ ಅದರಿಂದ ಕೆಲವೊಮ್ಮೆ ನಿರಾಶೆಯು ಕೂಡ ತಲೆದೋರಬಹುದಾಗಿದೆ.

ಈ ಪರಮಾಗಮವು ಪ್ರತಿಯೊಂದು ಪದದ ಅರ್ಥವನ್ನು ಶಬ್ದಾರ್ಥ, ನಯಾರ್ಥ, ಮತಾರ್ಥ, ಆಗಮಾರ್ಥ ಮತ್ತು ಭಾವಾರ್ಥವೆಂದು ಐದು ಪ್ರಕಾರಗಳಿಂದ ಮಾಡಿ, ಮರ್ಮವನ್ನು - ಭಾವವನ್ನು ಅಂತರ್ಗತ ಮಾಡಿಕೊಳ್ಳಬೇಕೆಂದು ಪ್ರಾರಂಭದಲ್ಲಿಯೇ ನಿರ್ದೇಶಿಸಲಾಗಿದೆ. ಈ ಕಾರ್ಯವು ಎಲ್ಲರಿಗೆ ಸುಲಭ ಸಾಧ್ಯವಿರುವುದಿಲ್ಲ. ಆದುದರಿಂದ ವರ್ತಮಾನದಲ್ಲಿ ಬುದ್ಧಿಯ ಮಂದತೆಯಿದ್ದರೂ ಆಂತರ್ಯದಲ್ಲಿ ಪ್ರಚುರ ಅಭಿರುಚಿಯುಳ್ಳ ಪಾತ್ರ ಜೀವರುಗಳ ಸಲುವಾಗಿ 1951 ರಲ್ಲಿ ಈ ಪರಮಾಗಮದ ಮೇಲೆ ಮಾಡಿರುವ ಪೂ. ಗುರುದೇವರ ಸಾರಭೂತ ಪ್ರವಚನವನ್ನು ಗುಜರಾತಿಯಿಂದ ಕನ್ನಡಿಸಿ ಈ ಮೊದಲೇ ಪ್ರಕಾಶಿತಪಡಿಸಿದ್ದು ಅದರಲ್ಲಿ ಮೊದಲನೆಯ ಭಾಗದ ಸಾವಿರ ಪ್ರತಿಗಳು ಹಲವಾರು ತಿಂಗಳುಗಳಿಂದ ಮುಗಿದುಹೋಗಿ ಪಾಠಕರ ಬೇಡಿಕೆಯು ನಮ್ಮ ಗಮನಕ್ಕೆ ಬಂದಿದ್ದರೂ ಅನೇಕ ಅಪರಿಹಾರ್ಯಕಾರಣಗಳಿಂದ ಎರಡನೆಯ ಆವೃತ್ತಿಯನ್ನು ಪ್ರಕಾಶಿತಗೊಳಿಸುವುದು ವಿಲಂಬವಾಗಿದೆ. ಅಭಿರುಚಿಯುಳ್ಳಪಾಠಕರು ಕ್ಷಮಿಸಬೇಕು.

ಮೊದಲಿನಿಂದಲೇ ಸರಳ ಹೃದಯದ ಕನ್ನಡಿಗರು ಇಂದು ವಾಸ್ತವಿಕ ವೀತರಾಗ ಧರ್ಮದ ಸಂಯೋಗವು ದೊರಕಿರುವುದರಿಂದ ಧನದ ಮಮತೆಯನ್ನು ಬಿಟ್ಟುಕೊಡುವ ಮತ್ತು ತಮಗಾದ ಲಾಭವು ಇತರರಿಗೂ ಆಗಲೆಂಬ ಸದುದ್ದೇಶದಿಂದ ಸ್ವಸಂತೋಷದಿಂದ ಒಬ್ಬೊಬ್ಬರೇ ಪೂರ್ಣ ಪ್ರಕಾಶನದ ಧನರಾಶಿಯನ್ನು ಭರಿಸಲು ಮುಂದಾಗುತ್ತಿದ್ದಾರೆ.

ಅಂಥವರಲ್ಲಿ ಬೆಳಗಾವಿ ನಿವಾಸಿಗಳಾದ ಪ್ರಸಿದ್ಧ ಉದ್ಯೋಗಪತಿ ಶ್ರೀ ಭೂಷಣ ಮಿರ್ಜಿ ಮತ್ತು ಅವರ ಧರ್ಮಪತ್ನಿ ಸೌ. ಜುತಿಕಾ ಮಿರ್ಜಿ ಇವರುಗಳು 2004 ಡಿಸೆಂಬರ್‌ನಲ್ಲಿ ತಮ್ಮ ಸ್ವಗೃಹದಲ್ಲಿ 5 ದಿವಸಗಳ ಧಾರ್ಮಿಕ ಶಿಬಿರನ್ನು ನಡೆಸಿ ಸಮಸ್ತ ಮುಮುಕ್ಷುಗಳ ಪರಿಚಯದಲ್ಲಿ ಬಂದಿದ್ದಾರೆ. ಅವರು ಈ ಆವೃತ್ತಿಯ ಸಂಪೂರ್ಣ ಖರ್ಚನ್ನು ತಮ್ಮ ಮಾತೋಶ್ರೀಯವರಾದ ಸುಧಾತಾಯಿ ಮಿರ್ಜಿ ಅವರ ವಿಯೋಗದಿಂದ ಸಂಸಾರದ ಅಸಾರತೆಯನ್ನು ಮನಗಂಡು ಈ ಅಸಾರ ಸಂಸಾರದಿಂದ ಪಾರಾಗಿ ಹೋಗುವ ಸಲುವಾಗಿ ಒಂದು ಯಥಾರ್ಥ ಜ್ಞಾನವೇ ಆಧಾರವಿದೆಯೆಂಬ ಪ್ರಜ್ಞೆ ಮೂಡಿಸುವಲ್ಲಿ ಪ್ರಬಲ ನಿಮಿತ್ತವಾದ ಜಿನವಾಣಿ ಮಾತೆಯ ಸೇವೆ ಮಾಡಿದ್ದಾರೆ. ಅವರಿಗೆ ಆದರದ ಅಭಿನಂದನೆಗಳು.

ಇನ್ನು ಈ ಕೃತಿಯನ್ನು ಸುಂದರವಾಗಿ ಮುದ್ರಿಸಿಕೊಟ್ಟ ಇಮೇಜ ಪ್ರಿಂಟ್ಸದ ಮಾಲೀಕರಾದ ಶ್ರೀ ಅಜಿತ ಪಾಟೀಲ ಅವರಿಗೂ ಹಾಗೂ ಅಲ್ಲಿನ ಕುಶಲ ಕಾರ್ಮಿಕರಿಗೂ ಪ್ರೀತಿಯ ಧನ್ಯವಾದಗಳು.

**ಶ್ರೀ ಸಿ. ಬಿ. ಭಂಡಾರಿ,**

ಅಧ್ಯಕ್ಷರು, ಶ್ರೀ ದಿಗಂಬರ ಜೈನ ಸ್ವಾಧ್ಯಾಯ ಮಂಡಲ ಟ್ರಸ್ಟ,
ಬೆಂಗಳೂರು.

ಬೆಂಗಳೂರು
25-11-2009

# ಪ್ರಸ್ತಾವನೆ

ಭಗವಾನ ಕುಂದಕುಂದಾಚಾರ್ಯದೇವ ವಿರಚಿತ ಉಪಲಬ್ಧ ಪಂಚ ಪರಮಾಗಮಗಳಲ್ಲಿ ಒಂದು ಸಮಯಸಾರ ಪರಮಾಗಮವು ಎಷ್ಟು ಪ್ರಸಾರ-ಪ್ರಸಿದ್ಧಿಯನ್ನು ಪಡೆಯಿತು ಅಷ್ಟು ಅನ್ಯ ಪರಮಾಗಮಗಳು ಪಡೆಯಲಿಲ್ಲ. ದೃಷ್ಟಿ ಪ್ರಧಾನವಿರುವ ಈ ಸಮಯಸಾರದ ಪ್ರಚಂಡ ಪ್ರಭೆಯಲ್ಲಿ ಜ್ಞಾನಪ್ರಧಾನ, ಭಾವಪ್ರಧಾನವಿರುವಂಥ ಪರಮಾಗಮಗಳು ಅದೇನು ಮರೆಯಾಗಿ ಮಸುಳಿಸಿ ಹೊದವೋ ಅಥವಾ ಇಂದಿನ ಪಂಡಿತರುಗಳೇ ಅವುಗಳ ಕಡೆಗೆ ವಿಶೇಷ ಗಮನ ಹರಿಸಲಿಲ್ಲವೋ ಏನೋ ! ಅಂತೂ ಸಾಮಾನ್ಯ ಜನರು ಜ್ಞಾನದ ವಿಷಯದಿಂದ ವಂಚಿತರಾಗಿ ಹೋಗಿರುವುದು ಯಾರಿಗೂ ಶೋಭನೀಯವಿಲ್ಲ.

ಪಂಚಾಸ್ತಿಕಾಯ, ಪ್ರವಚನಸಾರ, ಸಮಯಸಾರ ಇವು ಮೂರನ್ನು ಪ್ರಾಭೃತತ್ರಯವೆಂದು ಹೇಳಿರುವುದರ ತಾತ್ಪರ್ಯವೇನೆಂದರೆ ಕ್ರಮಪೂರ್ವಕವಾಗಿ ಆತ್ಮಲಕ್ಷಿಯಾಗಿ ಸೂಕ್ಷ್ಮ ದೃಷ್ಟಿಯಿಂದ ಈ ಮೂರರ ಅಧ್ಯಯನ ಮಾಡಿ ಮೂಲ ಪ್ರಯೋಜನಭೂತ ಸತ್ವವನ್ನು ಅಂತರ್ಗತ ಮಾಡಿಕೊಂಡಾಗಲೇ ಜೀವನು ತನ್ನ ಸರ್ವವಿಶುದ್ಧ ಜ್ಞಾನವನ್ನು ಪ್ರಕಟಪಡಿಸಿಕೊಂಡು ಆ ಆನಂದಮಯವಾದ ಶಾಂತ ಸುಧಾರಸದಲ್ಲಿ ಸಾದಿ ಅನಂತ ಕಾಲದವರೆಗೆ ಸ್ಥಿರವಾಗಿ ಉಳಿಯಬಹುದಾಗಿದೆ, ನೆಲೆಸಿ ನಿಲ್ಲಬಹುದಾಗಿದೆ.

ಪ್ರಥಮ ಸ್ಥಾನದಲ್ಲಿ ಬರುವಂಥ ಈ ಪಂಚಾಸ್ತಿಕಾಯ ಸಂಗ್ರಹ ಗ್ರಂಥವನ್ನು ಪ್ರಾರಂಭ ಮಾಡುತ್ತ ಆಚಾರ್ಯ ಭಗವಂತರು ''**ಪವಯಣಸಾರಂ ಪಂಚತ್ಥಿಯ ಸಂಗಹಂ ಸುತ್ತಂ**'' ಎಂದರೆ ಪ್ರತ್ಯಕ್ಷ ಸರ್ವಜ್ಞ ಭಗವಂತರ ದಿವ್ಯಧ್ವನಿಯ ಸಾರಭೂತ ಸಂದೇಶವನ್ನೇ ಇದರಲ್ಲಿ ತುಂಬಿ ಬಿಟ್ಟಿದ್ದೇನೆಂದು ಹೇಳಿದ್ದಾರೆ. ಆ ದಿವ್ಯ ಧ್ವನಿಯಲ್ಲಿ ಸಮಸ್ತ ಪದಾರ್ಥಗಳ ಪ್ರತಿಪಾದನೆ, ಚತುರ್ಗತಿ ನಿವಾರಣೆ ಮತ್ತು ನಿರ್ವಾಣದ ಕಾರಣವು ಒಳಗೊಂಡಿದೆಯೆಂದು ಸ್ಪಷ್ಟ ಪಡಿಸಿದ್ದಾರೆ. ಆದುದರಿಂದ ಈ ಪಂಚಾಸ್ತಿಕಾಯ ಪರಮಾಗಮವು ದುಃಖತಪ್ತ ಸಂಸಾರೀ ಪ್ರಾಣಿಗೆ ಸುಖದ ಮಾರ್ಗವನ್ನು ತೋರುತ್ತದೆಂಬುದು ನಿಶ್ಚಿತವಿದೆ.

ಕಾಲ ಸಹಿತ ಐದು ಅಸ್ತಿಕಾಯಗಳ ಸಮುದಾಯವಿರುವ ಈ ವಿಶ್ವದಲ್ಲಿ ಪ್ರತಿಯೊಂದು ವಸ್ತುವು ಅನುತ್ಪನ್ನ ಮತ್ತು ಅವಿನಾಶಿಯಿದ್ದು ಪ್ರತಿಯೊಂದರಲ್ಲಿ ಅನಂತ ಶಕ್ತಿ ಅಥವಾ ಗುಣಗಳಿವೆ, ಅವು ತ್ರೈಕಾಲಿಕ ನಿತ್ಯವಿವೆ. ಪ್ರತಿಯೊಂದು ವಸ್ತುವು ಸಮಯ-ಸಮಯಕ್ಕೆ ನವೀನ ಪರ್ಯಾಯ ಧಾರಣ ಮಾಡುತ್ತಿದ್ದರೂ ಯಾವುದೂ ತನ್ನ ಜಾತಿಯನ್ನು ಬಿಟ್ಟುಕೊಟ್ಟು ಬೇರೆ ರೂಪವಾಗುವುದಿಲ್ಲ. ಹೀಗೆ ಪ್ರತಿಯೊಂದು ಜಡ-ಚೇತನವು ತನ್ನ ತನ್ನ ಸ್ವರೂಪ ಸೀಮೆಯಲ್ಲಿದ್ದುಕೊಂಡು ನಿರಂತರ ತಮ್ಮ ಅಸ್ತಿತ್ವವನ್ನು ಉಳಿಸಿಕೊಂಡು ಬರುತ್ತಲಿವೆ. ಜಗತ್ತಿಗೆ ಉಪಕಾರ ಮಾಡುತ್ತಿವೆ.

ಐದು ಅಸ್ತಿಕಾಯಗಳಲ್ಲಿ ಜೀವಾಸ್ತಿಕಾಯದೊಳಗೆ ಅಂತರ್ಗತವಿರುವ ನಿಜಾತ್ಮನನ್ನು ಸ್ವರೂಪದಿಂದ ಅತ್ಯಂತ ವಿಶುದ್ಧ, ಚೈತನ್ಯ ಸ್ವಭಾವವುಳ್ಳವನೆಂದು ಸ್ವಾಶ್ರಿತ ನಿಶ್ಚಯನಯದ ಕಥನದಿಂದ ನಿರ್ಣಯ ಮಾಡಬೇಕು ಮತ್ತು ಪರದೊಡನೆ ತನ್ನ ಸಂಬಂಧವಿರುವ ರೂಪದ ನಿರೂಪಣೆ ಮಾಡುವ ಪರಾಶ್ರಿತ ವ್ಯವಹಾರನಯದ ಕಥನವನ್ನು ಅಭೂತಾರ್ಥವೆಂದು ತಿಳಿದು ಬಿಟ್ಟುಕೊಡಬೇಕು. ಈ ಪ್ರಕಾರ ಮೂಲಭೂತ ವಸ್ತುತತ್ತ್ವದ ನಿರೂಪಣೆ ಮಾಡುವ ಈ ಶಾಸ್ತ್ರದಲ್ಲಿ ತಿಳಿಸಿಕೊಟ್ಟ ರೀತಿಯನ್ನು ಹೊರತುಪಡಿಸಿ ಅನ್ಯ ಪ್ರಕಾರದಿಂದ ಜೀವನು ತನ್ನ ಅನಾದಿ ಕಾಲೀನವಾದ ದುಃಖದಿಂದ ಬಿಡುಗಡೆ ಹೊಂದಿ ತನ್ನ ಸ್ವಾಭಾವಿಕ ಸುಖವನ್ನು ಪಡೆಯುವುದಿಲ್ಲ.

ಅಂಥ ಸ್ವರೂಪ ಸುಖದ ಪ್ರಾಪ್ತಿಯ ಸಲುವಾಗಿಯೇ ಈ ಪೂಜ್ಯ ಪಂಚಾಸ್ತಿಕಾಯ ಪರಮಾಗಮದ ಮೇಲೆ ಬರೆದ ಅಮೃತಚಂದ್ರಾಚಾರ್ಯದೇವರ ಟೀಕೆ ಸಹಿತವಿರುವ ಪರಿಪೂರ್ಣ ಗ್ರಂಥದ ಶಬ್ದ ಶಬ್ದದ ಭಾವವನ್ನು ಆತ್ಮಜ್ಞಾನೀ ಮಹಾಪುರುಷರಿಂದ ತೆಗೆಯಲ್ಪಟ್ಟಿದ್ದು ಅದನ್ನೇ ಇಲ್ಲಿ ''**ಪಂಚಾಸ್ತಿಕಾಯ ಪರಿಮಳ**'' ಯೆಂಬ ಹೆಸರಿನಲ್ಲಿ ಕೊಡುತ್ತಿದ್ದೇವೆ. ಕನ್ನಡಿಗರೆಲ್ಲರೂ ಇದರ ಸದುಪಯೋಗ ಪಡೆದು ಮೋಕ್ಷಮಾರ್ಗದಲ್ಲಿ ಆರೂಢರಾಗಬೇಕೆಂದು ಆಶಿಸುತ್ತೇನೆ.

**– ಶ್ರೀ ಎಂ. ಬಿ. ಪಾಟೀಲ, ಸೇಡಬಾಳ.**

# INDEX


| Sl. No. | Gatha No. | Page No. |
|---|---|---|
| 1. | Gatha -1 | 1 |
| 2. | Gatha -2 | 3 |
| 3. | Gatha -3 | 5 |
| 4. | Gatha -4 | 12 |
| 5. | Gatha -5 | 20 |
| 6. | Gatha -6 | 32 |
| 7. | Gatha -7 | 34 |
| 8. | Gatha -8 | 35 |
| 9. | Gatha -9 | 47 |
| 10. | Gatha -10 | 54 |
| 11. | Gatha -11 | 59 |
| 12. | Gatha -12 | 61 |
| 13. | Gatha -13 | 65 |
| 14. | Gatha -14 | 67 |
| 15. | Gatha -15 | 70 |
| 16. | Gatha -16 | 72 |
| 17. | Gatha -17 | 77 |
| 18. | Gatha -18 | 80 |
| 19. | Gatha -19 | 82 |
| 20. | Gatha -20 | 84 |
| 21. | Gatha -21 | 92 |
| 22. | Gatha -22 | 98 |
| 23. | Gatha -23 | 99 |
| 24. | Gatha -24 | 101 |
| 25. | Gatha -25 | 105 |
| 26. | Gatha -26 | 106 |
| 27. | Gatha -27 | 107 |
| 28. | Gatha -28 | 113 |
| 29. | Gatha -29 | 117 |
| 30. | Gatha -30 | 125 |
| 31. | Gatha -31 | 131 |
| 32. | Gatha -32 | 131 |
| 33. | Gatha -33 | 135 |
| 34. | Gatha -34 | 138 |
| 35. | Gatha -35 | 141 |
| 36. | Gatha -36 | 142 |
| 37. | Gatha -37 | 145 |
| 38. | Gatha -38 | 150 |
| 39. | Gatha -39 | 156 |
| 40. | Gatha -40 | 158 |
| 41. | Gatha -41 | 159 |
| 42. | Gatha -42 | 166 |
| 43. | Gatha -43 | 171 |
| 44. | Gatha -44 | 175 |
| 45. | Gatha -45 | 180 |
| 46. | Gatha -46 | 189 |
| 47. | Gatha -47 | 200 |
| 48. | Gatha -48 | 203 |
| 49. | Gatha -49 | 209 |
| 50. | Gatha -50 | 215 |
| 51. | Gatha -51 | 216 |
| 52. | Gatha -52 | 216 |
| 53. | Gatha -53 | 220 |
| 54. | Gatha -54 | 223 |
| 55. | Gatha -55 | 224 |
| 56. | Gatha -56 | 226 |
| 57. | Gatha -57 | 230 |
| 58. | Gatha -58 | 232 |
| 59. | Gatha -59 | 238 |
| 60. | Gatha -60 | 243 |
| 61. | Gatha -61 | 246 |
| 62. | Gatha -62 | 247 |
| 63. | Gatha -63 | 253 |
| 64. | Gatha -64 | 255 |
| 65. | Gatha -65 | 256 |
| 66. | Gatha -66 | 259 |
| 67. | Gatha -67 | 261 |
| 68. | Gatha -68 | 264 |
| 69. | Gatha -69 | 267 |
| 70. | Gatha -70 | 272 |
| 71. | Gatha -71 | 275 |
| 72. | Gatha -72 | 275 |
| 73. | Gatha -73 | 293 |
| 74. | Gatha -74 | 295 |
| 75. | Gatha -75 | 296 |
| 76. | Gatha -76 | 300 |
| 77. | Gatha -77 | 304 |
| 78. | Gatha -78 | 306 |
| 79. | Gatha -79 | 313 |
| 80. | Gatha -80 | 318 |
| 81. | Gatha -81 | 329 |
| 82. | Gatha -82 | 331 |
| 83. | Gatha -83 | 334 |
| 84. | Gatha -84 | 335 |
| 85. | Gatha -85 | 336 |
| 86. | Gatha -86 | 339 |
| 87. | Gatha -87 | 340 |
| 88. | Gatha -88 | 342 |
| 89. | Gatha -89 | 346 |
| 90. | Gatha -90 | 348 |

॥ ಓಂ ॥

ಪರಮಾತ್ಮನೇ ನಮಃ

## ಭಗವಾನ ಕುಂದಕುಂದಾಚಾರ್ಯದೇವವಿರಚಿತ

# ಪಂಚಾಸ್ತಿಕಾಯ ಪರಿಮಳ

ಭಗವಾನ್ ಕುಂದಕುಂದಾಚಾರ್ಯದೇವ ಪ್ರಣೀತ ''ಪಂಚಾಸ್ತಿಕಾಯ ಸಂಗ್ರಹ'' ನಾಮದ ಪೂಜನೀಯ ಗ್ರಂಥದ ಪ್ರಾರಂಭವು ಗಾಥಾ ಸೂತ್ರದ ಅವತಾರದೊಡನೆ ಆಗುತ್ತಲಿರುವುದು.

ಇಂದಸದವಂದಿಯಾಣಂ ತಿಹುವಣಹಿದಮಧುರವಿಸದವಕ್ಕಾಣಂ ।
ಅಂತಾತೀದಗುಣಾಣಂ ಣಮೋ ಜಿಣಾಣಂ ಜಿದಭವಾಣಂ ॥೧॥

**ಶತೇಂದ್ರವಂದಿತನು ತ್ರಿಜಗಹಿತನು ನಿರ್ಮಲಮಧುರವಾಣಿಯುತನು ।**
**ಜಿತಭವನು ನಿಸ್ಸೀಮಗುಣಧರನುಮಾದ ಜಿನವರಗೆ ನಮಿಸುವೆನು ॥**
**''ಸಮ್ಯಗ್ಜ್ಞಾನದ ಉತ್ಪತ್ತಿಯಾಗಿ ಶುದ್ಧ ಸ್ವಭಾವದ ಪ್ರಾಪ್ತಿಯಾಗುವುದು ಈ ಶಾಸ್ತ್ರದ ಫಲವಿದೆ''.**

ಇದು ಪಂಚಾಸ್ತಿಕಾಯ ಸಂಗ್ರಹದ ಮೊದಲನೆಯ ಗಾಥೆ ಇದೆ. ಭಗವಂತರಿಗೆ ನಮಸ್ಕಾರ ಮಾಡುವುದೇ ಮಂಗಲಾಚರಣವಿದೆ. ಮಂಗಲಾಚರಣದಿಂದ ಜ್ಞಾನದ ವೃದ್ಧಿಯಾಗಿ ವಿಘ್ನದ ನಾಶವಾಗುತ್ತದೆ ಮತ್ತು ಸುಖದ ಪ್ರಾಪ್ತಿಯಾಗುತ್ತದೆ.

ಈ ಪಂಚಾಸ್ತಿಕಾಯವನ್ನು ದೊರೆ ಶಿವಕುಮಾರ ಮೊದಲಾದ ಶಿಷ್ಯರ ಸಲುವಾಗಿ ರಚಿಸಲಾಗಿದೆ. ಅಜ್ಞಾನದ ನಾಶ, ಸಮ್ಯಗ್ಜ್ಞಾನದ ಉತ್ಪತ್ತಿ ಮತ್ತು ಶುದ್ಧ ಸ್ವಭಾವದ ಪ್ರಾಪ್ತಿಯಾಗುವುದೇ ಇದರ ಹೇತುವಿದೆ. ಗಾಥಾ ಸಂಖ್ಯೆಯು ಇದರ ಪರಿಣಾಮವಿದೆ, ಇದರ ಹೆಸರು ಪಂಚಾಸ್ತಿಕಾಯವಿದೆ, ಇದರ ಮೂಲ ಕರ್ತೃಗಳು ಸರ್ವಜ್ಞ ಭಗವಾನ ಶ್ರೀ ವರ್ಧಮಾನ ಸ್ವಾಮಿಗಳು ಇದ್ದಾರೆ. ಉತ್ತರ ಕರ್ತೃಗಳು ಶ್ರೀ ಗೌತಮಗಣಧರರಿದ್ದಾರೆ. ಮತ್ತು ಪರಂಪರಾ ಕರ್ತೃಗಳು ಶ್ರೀ ಕುಂದಕುಂದಾಚಾರ್ಯದೇವರಿದ್ದಾರೆ.

ಶ್ರೀ ಕುಂದಕುಂದಾಚಾರ್ಯ ಭಗವಂತರು ನಮಸ್ಕಾರ ಮಾಡಬೇಕಾದರೆ ಆ ಭಗವಂತರು ಎಂಥವರಿರಬೇಕು? ಅವರು ನೂರು ಇಂದ್ರರುಗಳಿಂದ ಪೂಜ್ಯರಿದ್ದಾರೆ, ಅನಾದಿಯಿಂದಿದ್ದಾರೆ, ಭಗವಂತರ ವಾಣಿಯು ಸಿಹಿ ಮಧುರ ರಸದಂತಿರುತ್ತದೆ. ಆ ವಾಣಿಯನ್ನು ಆಲಿಸುವಂಥ ಪಾತ್ರ ಜೀವರುಗಳೂ ಕೂಡ ಸಮ್ಯಗ್ಜ್ಞಾನ ಪಡೆಯಲು ಯೋಗ್ಯರಿರುತ್ತಾರೆ. ಅವರಿಗೆ ಸಂಸಾರದ ಅರುಚಿಯಾಗಿ ಸ್ವರೂಪದ ಪ್ರಾಪ್ತಿಮಾಡಿಕೊಳ್ಳುವುದಿರುತ್ತದೆ. ''ಪಂಚಾಸ್ತಿಕಾಯದ ಫಲವು ಅಜ್ಞಾನದ ನಿವೃತ್ತಿ ಮತ್ತು ಜ್ಞಾನಸ್ವಭಾವದ ಪ್ರಾಪ್ತಿ ಇದೆ. ಸಮ್ಯಗ್ಜ್ಞಾನ ಪಡೆದು ಶುದ್ಧಿಯ ವೃದ್ಧಿಮಾಡಿಕೊಳ್ಳುವುದು ಹಾಗೂ ಚೈತನ್ಯದ ಅನುಭವ ಮಾಡುವುದು ಇದು ಈ ಪೂಜ್ಯ ಶಾಸ್ತ್ರದ ಪವಿತ್ರ ಫಲವಿದೆ''.

**'' ಭಗವಂತರು ಅನಂತಜ್ಞಾನ-ದರ್ಶನ ಮೊದಲಾದ ಗುಣಗಳ ಪರಿಪೂರ್ಣ ಭಂಡಾರರಿದ್ದಾರೆ.''**

ಈಗ ಭಗವಂತರ ಗುಣಗಳ ವಿಚಾರ ಮಾಡುತ್ತಾರೆ. ಭಗವಂತರಿಗೆ ಅಲೌಕಿಕ ಗುಣಗಳಿರುತ್ತವೆ. ಭಗವಂತರಿಗೆ ಅನಂತಜ್ಞಾನ, ಅನಂತದರ್ಶನ ಮೊದಲಾದ ಗುಣಗಳು ಪ್ರಕಟವಾಗಿರುತ್ತವೆ. ಸೀಮಾತೀತವಿರುವಂಥ ತಮ್ಮ ಜ್ಞಾನದಿಂದ ಸಮಸ್ತ ವಸ್ತುಗಳನ್ನು ಕ್ಷೇತ್ರಗಳನ್ನು ಕಾಲದ ಮರ್ಯಾದೆಯಿಲ್ಲದೆ ತಿಳಿದುಕೊಳ್ಳುತ್ತಾರೆ. ಆ ಜ್ಞಾನ ಮೊದಲಾದ ಗುಣಗಳು ತಮ್ಮ ಅಸಂಖ್ಯ ಪ್ರದೇಶೀ ಕ್ಷೇತ್ರದಲ್ಲಿರುತ್ತವೆ. ಆದರೆ ಇತರರ ಕ್ಷೇತ್ರದಲ್ಲಿರುವುದಿಲ್ಲ. ಒಂದು ಸಮಯದಲ್ಲಿ ಅನಂತಜ್ಞಾನ, ಅನಂತದರ್ಶನ, ಅನಂತವೀರ್ಯ ಮತ್ತು ಅನಂತಸುಖಗಳು ಪ್ರಕಟವಾಗಿರುತ್ತವೆ. ಒಂದು ಸಮಯದಲ್ಲಿಅನಂತ ಗುಣಗಳಿಂದ ಅನಂತ ಪರ್ಯಾಯಗಳಾಗುತ್ತವೆ. ಒಂದು ಪರ್ಯಾಯದಲ್ಲಿ ಅನಂತ ಅವಿಭಾಗ ಪ್ರತಿಚ್ಛೇದಗಳಿರುತ್ತವೆ.

**''ಭಗವಂತರು ಪಂಚಪರಾವರ್ತನರೂಪದ ಸಂಸಾರವನ್ನು ಜಯಿಸಿದ್ದಾರೆ.''**

ಭಗವಂತರು ಮತ್ತೆ ಹೇಗೆ ಇದ್ದಾರೆ ? ಅವರು ದ್ರವ್ಯ, ಕ್ಷೇತ್ರ, ಕಾಲ, ಭವ ಮತ್ತು ಭಾವರೂಪ ಪಂಚಪ್ರಕಾರದ ಪರಾವರ್ತನಗಳನ್ನು ಜಯಿಸಿದ್ದಾರೆ ಎಂದರೆ ಅವರು ಮಾಡಬೇಕಾಗಿರುವುದನ್ನೆಲ್ಲಾ ಮಾಡಿಬಿಟ್ಟಿದ್ದಾರೆ ಮತ್ತು ಸಂಸಾರದಿಂದ ಜೀವನ್ಮುಕ್ತರಾಗಿದ್ದಾರೆ. ಅದೆಷ್ಟೋ ಜನರು ಹೇಳುವುದೇನೆಂದರೆ ಭಗವಂತರು ಎಲ್ಲರ ಒಳ್ಳೆಯದು ಮಾಡುತ್ತಾರೆ, ಉಪದೇಶ ಕೊಡುತ್ತಾರೆ, ನಾಲ್ಕು ತೀರ್ಥಗಳ ಸ್ಥಾಪನೆ ಮಾಡಿದ್ದಾರೆ, ಹಿಂಸೆಯ ನಿರೋಧ ಮಾಡಿದ್ದಾರೆ, ಜಗತ್ತಿಗೆ ಸತ್ಯದ ಬೋಧ ಮಾಡಿದ್ದಾರೆ-ಆದರೆ ಇದೆಲ್ಲವೂ ನಿಮಿತ್ತದ ಕಥನವಿದೆ. ಭಗವಂತರು ಪರದ್ದೇನೂ ಮಾಡಿಲ್ಲ, ಏಕೆಂದರೆ ಯಾವುದೇ ಜೀವನು ಪರದಲ್ಲೇನೂ ಮಾಡುವ ಸಾಧ್ಯತೆವಿಲ್ಲ. ತಾವು ತಮ್ಮಲ್ಲಿ ಭಾವಮೋಕ್ಷದ ಪರ್ಯಾಯವನ್ನು ಉತ್ಪಾದ ಮಾಡಿದರು ಮತ್ತು ಸಂಸಾರದ ಪರ್ಯಾಯವನ್ನು ಜಯಿಸಿದರು ಇದನ್ನು ಹೊರತುಪಡಿಸಿ ಬೇರೇನನ್ನೂ ಮಾಡಲಿಲ್ಲ. ''ತಿನ್ನಾಣಂ ತಾರಯಾಣಂ'' ವೆಂಬ ಪಾಠ ಬರುತ್ತದೆ. ತರಣ ತಾರಣರಿದ್ದಾರೆ ಏಕೆಂದರೆ ಯಾರು ತಮ್ಮಿಂದ ತಾವು ಪಾರಾಗುತ್ತಾರೆ ಅವರಿಗೆ ಭಗವಂತರು ನಿಮಿತ್ತರಿದ್ದಾರೆ.

**''ಛದ್ಮಸ್ಥ ಜೀವರುಗಳು ಮೋಕ್ಷ ಪಡೆಯುವಲ್ಲಿ ಭಗವಂತರು ಕೆಲ ಅಪೇಕ್ಷೆಯಿಂದ ಕಾರಣಭೂತರಿದ್ದಾರೆ.''**

ಯಾವ ಜೀವರುಗಳಿಗೆ ಮೋಕ್ಷ ದಶೆಯು ಪ್ರಾಪ್ತವಾಗಿದೆ ಅವರಿಗೆ ಭಗವಂತರು ಕಾರಣಭೂತರಿಲ್ಲ ಇವೆರಡೂ ಕಥನಗಳು ನಿಮಿತ್ತದಿಂದಿವೆ. ಯಾರೂ ಯಾರಿಗೆ ಆಶ್ರಯ ಕೊಡುವ ಸಾಧ್ಯತೆಯಿಲ್ಲ. ಜೀವನು ತನ್ನ ಆತ್ಮನನ್ನು ಸರಿಯಾಗಿ ತಿಳಿದುಕೊಂಡರೆ ಅಂತರ್ದಶೆಯಲ್ಲಿ ಏಕಾಗ್ರನಾದರೆ ಹಾಗೂ ಅಲ್ಪಜ್ಞತೆಯು ದೂರವಾದರೆ ವೀತರಾಗ ಮತ್ತು ಸರ್ವಜ್ಞ ದಶೆ ಪ್ರಾಪ್ತಮಾಡಿಕೊಂಡರೆ ಭಗವಂತರನ್ನು ನಿಮಿತ್ತರೆಂದು ಹೇಳಲಾಗುತ್ತದೆ. ನಾಲ್ಕು ಶರಣಗಳ ಪಾಠವಂತೂ ಜೀವನು ಅನಂತಬಾರಿ ಹೇಳಿದ್ದಾನೆ. ಆದರೆ ತನ್ನ ಆತ್ಮನು ನಿಮಿತ್ತರಹಿತ ಹಾಗೂ ರಾಗರಹಿತನಿದ್ದಾನೆ. ಎಂದರೆ ತನ್ನ ಸ್ವರೂಪ ತಿಳಿದುಕೊಂಡಲ್ಲದೆ ಮತ್ತು ಅದರ ಆಶ್ರಯ ಮಾಡಿದಲ್ಲದೆ ಭಗವಂತರ ಶರಣವು ನಿಮಿತ್ತದ ಹೆಸರನ್ನು ಪಡೆಯಲಾರದು. ಸ್ವಭಾವದ ಆಶ್ರಯ ತೆಗೆದುಕೊಂಡವರಿಗೆ ಭಗವಂತರ ಶರಣವನ್ನು ನಿಮಿತ್ತವೆಂದು ಹೇಳಲಾಗುತ್ತದೆ.

**ಇಂಥ ಜಿನೇಶ್ವರ ಭಗವಂತರಿಗೆ ನಮಸ್ಕಾರವಿರಲಿ !**

ಇಂಥ ಜಿನೇಶ್ವರ ಭಗವಂತರಿಗೆ ನಮಸ್ಕಾರವಿರಲಿ, ಯಾವ ಜೀವನು ನಿಮಿತ್ತ , ಸಂಯೋಗ, ರಾಗ-ದ್ವೇಷ ಮತ್ತು ಪುಣ್ಯದ ಅಭಿರುಚಿ ಬಿಟ್ಟು ಒಳಗೆ ಏಕಾಗ್ರತೆ ಮಾಡುತ್ತಾನೆ ಅದು ಭಾವನಮಸ್ಕಾರವಿದೆ. ತನ್ನ ಆತ್ಮನಿಗೆ ಇಂಥ ಭಾವನಮಸ್ಕಾರ ಮಾಡುವವನು ಭಗವಂತರಿಗೆ ನಿಜವಾದ ದ್ರವ್ಯನಮಸ್ಕಾರ ಮಾಡಿದನೆಂದು ಹೇಳಲಾಗುವುದು ಭಗವಂತರಿಗೆ ಮೂರು ಕಾಲ ಮೂರು ಲೋಕದ ಜ್ಞಾನವು ವರ್ತಿಸುತ್ತದೆ. ಅವರನ್ನುಳಿದು ಬೇರೆ ಯಾವ ದೇವನನ್ನು ಆ ಜೀವನು ಮನ್ನಿಸುವದಿಲ್ಲ. ಈ ಪ್ರಕಾರ ಮೇಲೆ ಹೇಳಿರುವಂಥ ಗುಣಗಳುಳ್ಳ ಭಗವಂತರಿಗೆ ನಮಸ್ಕಾರ ಮಾಡಿದ್ದಾರೆ.

ಈಗ ಆಚಾರ್ಯ ಭಗವಂತರು ಜಿನಾಗಮಕ್ಕೆ ನಮಸ್ಕಾರ ಮಾಡಿ ಪಂಚಾಸ್ತಿಕಾಯರೂಪದ ಸಮಯಸಾರ ಗ್ರಂಥ ಹೇಳುವುದರ ಪ್ರತಿಜ್ಞೆ ಮಾಡುತ್ತಾರೆ.

ಸಮಣಮುಹುಗ್ಗದಮಟ್ಠಂ ಚದುಗ್ಗದಿಣಿವಾರಣಂ ಸಣಿವ್ವಾಣಂ ।
ಏಸೋ ಪಣಮಿಯ ಸಿರಸಾ ಸಮಯಮಿಣಂ ಸುಣಹ ವೋಚ್ಛಾಮಿ ॥೨॥

**ಶ್ರಮಣಮುಖೋದ್ಗತ ಅರ್ಥಮಯ ಚತುರ್ಗತಿಹರಣ ಶಿವಹೇತುಮಾದೀ ।**
**ಸಮಯವನು ಶಿರನಮನಪೂರ್ವಕ ಪೇಳುವೆನು ತಾವು ಕೇಳುವುದು ॥೨॥**

**''ಆತ್ಮನು ವಾಣಿಯ ಕರ್ತೃವಿಲ್ಲ, ಆದರೆ ನಿಮಿತ್ತದ ಜ್ಞಾನ ಮಾಡಿಸುವ ಸಲುವಾಗಿ ಉಪಚಾರದಿಂದ ವಾಣಿಯ ಕರ್ತೃವೆಂದು ಹೇಳಲಾಗಿದೆ.''**

'ನಾನು (ಶ್ರೀ ಕುಂದಕುಂದಾಚಾರ್ಯರು) ಈ ಪಂಚಾಸ್ತಿಕಾಯರೂಪ ಸಮಯಸಾರ ನಾಮದ ಗ್ರಂಥವನ್ನು ಹೇಳುವೆನು' ಇದು ವ್ಯವಹಾರವಚನವಿದೆ, ಆತ್ಮನು ವಾಣಿ ಆಡುವ ಸಾಧ್ಯತೆಯಿಲ್ಲ, ಅದರಂತೆ ವಾಣಿಯಿಂದ ಆತ್ಮನು ತಿಳಿದುಕೊಳ್ಳುವುದಿಲ್ಲ. ಆದರೂ ಈ ವಾಕ್ಯವನ್ನೇಕೆ ಹೇಳಿದರು ? ನಿಮಿತ್ತದ ಕಾರ್ಯವೇನು ? - ಎಂದು ಯಾರಾದರೂ ಕೇಳಿದರೆ ನೋಡಿರಿ ! ಭಾಷೆಯಂತೂ ಭಾಷೆಯ ಕಾರಣದಿಂದ ಹೊರಟಿದೆ, 'ನಾನು ಹೇಳುವೆ' ನೆಂಬ ಶಬ್ದವು ಶಬ್ದದ ಕಾರಣದಿಂದ ಹೊರಟಿದೆ. ಆದರೆ ಪಂಚಾಸ್ತಿಕಾಯ ಹೇಳುವಲ್ಲಿ ಯಾರು ನಿಮಿತ್ತರಿದ್ದರು, ಆ ನಿಮಿತ್ತದ ಜ್ಞಾನ ಮಾಡಿಸಿ ಕೊಡಲಾಗಿದೆ.

'ಈ ಗ್ರಂಥವನ್ನು ತಾವು ಆಲಿಸಿರೆ'ಂದು ಇಲ್ಲಿ ಹೇಳಿದ್ದಾರೆ. ಇದು ಕೂಡ ತಿಳಿದುಕೊಳ್ಳುವ ಯೋಗ್ಯತೆಯಿದ್ದವರು ತಿಳಿದುಕೊಳ್ಳುತ್ತಾರೆ, ಇತರರು ತಿಳಿಸಿಕೊಡುವಂತಿಲ್ಲ. ಆದಾಗ್ಯೂ 'ಆಲಿಸಿರೆ'ಂದು ಹೇಳಿರುವುದರಿಂದ ಎದುರಿಗಿರುವ ಜೀವನು ಪಾತ್ರನಿದ್ದಾನೆ, ಪಂಚಾಸ್ತಿಕಾಯ ಆಲಿಸಲು ಯೋಗ್ಯನಿದ್ದಾನೆ ಅದರಿಂದ ಹೇಳಲಾಗಿದೆ. 'ಪರದ ಕಡೆಗಿರುವ ಚಿತ್ತವನ್ನು ತೆಗೆದು ಏಕಾಗ್ರನಾಗು ಮತ್ತು ನಾನು ಹೇಳುವುದನ್ನು ಆಲಿಸು'- ಎಂದು ಹೇಳುವ ಭಾವವಿದೆ. ಇದೆಲ್ಲವೂ ನಿಮಿತ್ತದ ಕಥನವಿದೆ. ವಾಣಿಯು ಜಡವಿದೆ, ಜಡವು ಜಡದ ಕಾರಣದಿಂದ ಪರಿಣಮಿಸಿದೆ, ಅದು ನಿರಪೇಕ್ಷವಿದೆ ಅದರ ಕರ್ತೃ, ಕರ್ಮ ಮೊದಲಾದ ಆರು ಕಾರಕಗಳು ಅದರಲ್ಲಿವೆ. ಆತ್ಮನ ಕಾರಣದಿಂದ ವಾಣಿ ಇಲ್ಲ-ವಾಣಿಯ ಕರ್ತೃ ಸ್ವಯಂ ವಾಣಿಯ ಪರಮಾಣುಗಳಿವೆ. ಅಲ್ಲಿ ವಾಣಿ ಹೊರಡುವುದಿರಲಿಲ್ಲ, ಆದರೆ ಆಚಾರ್ಯ ಭಗವಂತರ ವಿಕಲ್ಪದಿಂದ ವಾಣಿಯ ಪರಿಣಮನವಾಗಿದೆಯೆಂಬುದಾಗಿಲ್ಲ ಆದರೆ ವಾಣಿಯ ಕರ್ತೃ-ಉಪಾದಾನಕರ್ತೃ ಸ್ವಯಂ ಜಡ ಪರಮಾಣುಗಳಿವೆ ಆಗ ಆಚಾರ್ಯ ಭಗವಂತರಿಗೆ ವಿಕಲ್ಪವಿರುವುದರಿಂದ ಆಚಾರ್ಯ ಭಗವಂತರು ನಿಮಿತ್ತ ಕರ್ತೃ ಇದ್ದಾರೆ. ಎಂದರೆ ಉಪಚಾರದಿಂದ ವಾಣಿಯ ಕರ್ತೃವೆಂದು ಹೇಳಲಾಗಿದೆ. ನಿಮಿತ್ತದ ಕರ್ತೃ ಎಂದರೆ ಜಡದ ಪರ್ಯಾಯವಾಗುವಲ್ಲಿ ಸ್ವಲ್ಪ ಸಹಾಯ ಮಾಡಿದ್ದಾರೆಂದು ಇದರ ಅರ್ಥವಲ್ಲ. ವಾಣಿಯು ಜಡವಿದೆ ಅದನ್ನು ಆತ್ಮನು ಮಾಡುವ ಸಾಧ್ಯತೆಯಿಲ್ಲ. ವಾಣಿಯು ವಾಣಿಯ ಕಾರಣದಿಂದ ಪರಿಣಮಿಸಿದೆ. ಆಗ ಆಚಾರ್ಯ ಭಗವಂತರಿಗೆ ವಿಕಲ್ಪವು ಉತ್ಪನ್ನವಾಗಿದೆ ಅದರ ಜ್ಞಾನಮಾಡಿಸಲಾಗಿದೆ. ಅದರಂತೆ 'ಆಲಿಸಿರಿ'! ಎಂದು ಹೇಳಿರುವುದರ ಮೇಲಿಂದ ಆಲಿಸುವವರು ಕೂಡ ಇರಲೇಬೇಕಾಗುವುದೆಂಬುದರ ಜ್ಞಾನ ಮಾಡಿಸಲಾಗಿದೆ.

**''ಸರ್ವಜ್ಞರ ವಚನವು ಪ್ರಮಾಣಭೂತವಿರುವುದರಿಂದ ಅವರ ಆಗಮಗಳಿಗೆ ನಮಸ್ಕಾರ ಮಾಡುವುದು ಯೋಗ್ಯವಿದೆ.''**

ಶ್ರಮಣ ಎಂದರೆ ಸರ್ವಜ್ಞ ವೀತರಾಗ ದೇವರ ಶ್ರೀಮುಖದಿಂದ ಉತ್ಪನ್ನವಾಗಿರುವ ವಚನಗಳಿಗೆ ಮಸ್ತಕದಿಂದ ಪ್ರಣಾಮಮಾಡಿ ಹೇಳುವೆನು ಎಂದರೆ ಸರ್ವಜ್ಞರ ವಚನಗಳೇ ಪ್ರಮಾಣಭೂತವಿವೆ. ಆ ಕಾರಣದಿಂದ ಅವರ ಆಗಮಗಳಿಗೇ ನಮಸ್ಕಾರ ಮಾಡುವುದು ಯೋಗ್ಯವಿದೆ. ಭಗವಂತರನ್ನು ಪ್ರಮಾಣರೆಂದು ಹೇಳಿದೆ. ಭಗವಂತರ ವಾಣಿಯು ಆತ್ಮನ ಸಮಸ್ತ ಪ್ರದೇಶಗಳಿಂದ ಹೊರಡುತ್ತದೆ. ನಾಲಿಗೆ, ತುಟಿ ಮೊದಲಾದ ಸಮಸ್ತ ನಿಮಿತ್ತಗಳಿಂದ ರಹಿತವಾಗಿ ಹೊರಡುತ್ತದೆ. ವಾಣಿಯು ಹೊರಡುವ ಸಮಯದಲ್ಲಿ ನಾಲಿಗೆ, ತುಟಿ ಮೊದಲಾದವು ಚಲಿಸುವುದಿಲ್ಲ ಶ್ವಾಸ ತೆಗೆದುಕೊಳ್ಳಬೇಕಾಗುವುದಿಲ್ಲ. ಹೀಗೆ ಅಸಂಖ್ಯ ಪ್ರದೇಶಗಳಿಂದ ವಾಣಿಯು ಹೊರಡುತ್ತದೆ. ಅದು ಭಗವಂತರ ಶ್ರೀ ಮುಖದಿಂದ ಹೊರಡುತ್ತದೆ - ಎಂದು ಹೇಳಿರುವುದು ವಾಣಿಯ ಗೌರವ ಮಾಡುವ ಸಲುವಾಗಿ ಹೇಳಲಾಗಿದೆ ಮತ್ತು ಮಸ್ತಕದಿಂದ ಪ್ರಣಾಮ ಮಾಡಿರುವುದನ್ನು ಹೇಳಲಾಗಿದೆ. ಆದರೆ ಮಸ್ತಕವಂತೂ ಜಡವಿದೆ ಆತ್ಮನು ಮಸ್ತಕವನ್ನು ಮಣಿಸುವ ಸಾಧ್ಯತೆಯಿಲ್ಲ ಆದರೆ ಅವರ ವಿನಯಭಾವವನ್ನು ತಿಳಿಸುವುದಿದೆ. ಲೌಕಿಕದಲ್ಲಿ ಯಾವ ಪ್ರಕಾರ ಸೂರ್ಯನ ಪೂಜೆಯನ್ನು ದೀಪದಿಂದ ಸಾಗರದ ಪೂಜೆಯನ್ನು ಸಾಗರದ ಜಲದಿಂದ ಮಾಡಲಾಗುತ್ತದೆ ಅದೇ ಪ್ರಕಾರ ಭಗವಂತರ ವಾಣಿಯ ಯಾವ ಪ್ರಬಲ ಪ್ರವಾಹವು ಹೊರಡುತ್ತದೆ ಆ ಸರಸ್ವತಿಯ ಪೂಜೆಯನ್ನು ಕೂಡ ವಾಣಿಯಿಂದಲೇ ಮಾಡಲಾಗುತ್ತದೆ, ವಾಣಿಯಿಂದಲೇ ಆಗುತ್ತದೆ.

ಮತ್ತು ಸರ್ವಜ್ಞರ ವಾಣಿಯಿದೆಯೆಂದು ವಾಣಿಗೆ ನಮಸ್ಕಾರ ಮಾಡಲಾಗಿದೆ. ಪುರುಷ ಪ್ರಮಾಣದಿಂದ ವಚನ ಪ್ರಮಾಣವಿರುವುದೆಂದು ಅವರ ವಾಣಿಗೆ ನಮಸ್ಕಾರ ಮಾಡಲಾಗಿದೆ. ಯಾರ ರಾಗವು ಬಿಟ್ಟು ಹೋಗಿದೆ ಮತ್ತು ಸರ್ವಜ್ಞದಶೆಯು ಪ್ರಕಟವಾಗಿದೆ ಅಂಥ ಪುರುಷನ ವಾಣಿಯು ಪ್ರಮಾಣವಿರುವ ಸಾಧ್ಯತೆಯಿದೆ. ಮಿಥ್ಯಾದೃಷ್ಟೀ, ರಾಗೀ ಜೀವದ ವಾಣಿಯು ಪ್ರಮಾಣವಿರುವ ಸಾಧ್ಯತೆಯಿಲ್ಲ. ಆದರೆ ಛದ್ಮಸ್ಥ ಜ್ಞಾನೀ ಮುನಿ ಇದ್ದರೆ ಅವರ ವಾಣಿಯನ್ನು ಕೂಡ ಪ್ರಮಾಣವೆಂದು ಗಣಿಸಲಾಗಿದೆ ಏಕೆಂದರೆ ಭಗವಂತರಿಗೆ ಪ್ರಕಟವಾದಂಥ ಪೂರ್ಣ ಆತ್ಮನನ್ನು ಮುನಿಯು ಪ್ರತೀತಿಯಲ್ಲಿ ತಂದುಕೊಂಡಿದ್ದಾನೆ ಮತ್ತು ಆ ದಶೆಯನ್ನುಕೂಡ ಸತತ ಸಾಧಿಸುತ್ತಿರುವದರಿಂದ ಭಾವಲಿಂಗೀ ಮುನಿಯ ವಚನವನ್ನು ಕೂಡ ಪ್ರಮಾಣವೆಂದು ಗಣಿಸಲಾಗಿದೆ. ಸರ್ವಜ್ಞ ಭಗವಂತರ ವಾಣಿಯು ಪ್ರಮಾಣವಿರುವುದರಿಂದ ಆ ವಾಣಿಯನ್ನು ಅಥವಾ ಅವರ ಆಗಮವನ್ನು ಪ್ರಮಾಣವೆಂದು ಗಣಿಸಿ ಅದಕ್ಕೆ ನಮಸ್ಕಾರ ಮಾಡಲಾಗಿದೆ.

**''ಭಗವಂತರ ಆಗಮಗಳು ಸಂಸಾರದಲ್ಲಿನ ದುಃಖವನ್ನು ನಾಶಮಾಡುವಂಥವುಗಳಿವೆ.''**

ಭಗವಂತರ ಆಗಮಗಳು ನರಕ, ತಿರ್ಯಂಚ, ಮನುಷ್ಯ ಮತ್ತು ದೇವ ಈ ನಾಲ್ಕು ಗತಿಗಳ ನಿವಾರಣೆ ಮಾಡುವಂಥವುಗಳಿವೆ. ಎಂದರೆ ಸಂಸಾರ ದುಃಖದ ನಾಶಮಾಡುವಂಥವುಗಳಿವೆ. ಭವದ ಅಭಾವವಾಗಿ ಗತಿರಹಿತ ಶುದ್ಧ ಸ್ವಭಾವದ ಪ್ರಾಪ್ತಿ ಹೇಗಾಗುವುದೆಂದು ತಿಳಿಸಿಕೊಡುವುದನ್ನು ಆಗಮವೆಂದು ಹೇಳಿದೆ. ಭವದ ಜ್ಞಾನ ಮಾಡಿಸಿ ಭವ ನಿವಾರಿಸುವುದು ಅದು ಆಗಮವಿದೆ. ನಾಲ್ಕು ಗತಿರೂಪದ ಭವ ಮತ್ತು ಭವದ ಕಾರಣವಿರುವ ವಿಕಾರಮಾಡುವುದನ್ನು ಯಾವುದು ಹೇಳುವುದು ಅದು ಆಗಮವಲ್ಲ. ಆ ಭವವು ಸರ್ವಾರ್ಥಸಿದ್ಧಿಯ ದೇವನದಿರಲಿ ಅಥವಾ ತೀರ್ಥಂಕರರ ಭವವಿರಲಿ ಆ ಭವ ಮಾಡುವುದನ್ನು ಆಗಮವು ಹೇಳುವುದಿಲ್ಲ. ಭಗವಂತರು ಗತಿರಹಿತರಾಗಿದ್ದಾರೆ ಅಂಥ ಭಗವಂತರು ಇತರ ಜೀವರುಗಳಿಗೆ ಗತಿಯಲ್ಲಿ ನಿಮಿತ್ತರಾಗುವುದಿಲ್ಲ ಗತಿಯ ಜ್ಞಾನ ಮಾಡಿಸುವುದೂ ಕೂಡ ಗತಿರಹಿತರಾಗುವ ಸಲುವಾಗಿ ಇದೆ.

ಈ ಶಾಸ್ತ್ರದ ೧೭೨ನೆ ಗಾಥೆಯಲ್ಲಿ ಸಮಸ್ತ ಶಾಸ್ತ್ರಗಳ ಸಾರವು ವೀತರಾಗ ಭಾವವಿದೆಯೆಂದು ಹೇಳಿದೆ. ನಿಶ್ಚಯ ಮತ್ತು ವ್ಯವಹಾರದ ಮಾತು ಅವಿರೋಧವಿರಬೇಕಾಗುವುದು. ವಿಕಾರ ಮತ್ತು ಅದರ ಫಲ ಸಂಸಾರವನ್ನು ಉಳಿಸಿಕೊಳ್ಳುವ ಸಲುವಾಗಿ ಭಗವಂತರ ವಾಣಿ ಇರುವ ಸಾಧ್ಯತೆಯಿಲ್ಲ ಆದರೆ ವಾಣಿಯು ಸಂಸಾರದ ದುಃಖಗಳನ್ನು ನಾಶಮಾಡುವಂಥದ್ದಿದೆ. ಆಗಮವಂತೂ ಪರವಿದೆ ಆದರೆ ಅದರ ನಿಮಿತ್ತದಿಂದ ಭಾವ-ಆಗಮ ಅಥವಾ ಸಮ್ಯಗ್ಜ್ಞಾನವನ್ನು ಯಾವ ಜೀವನು ತನ್ನಲ್ಲಿ ಪ್ರಕಟಪಡಿಸಿಕೊಳ್ಳುತ್ತಾನೆ ಮತ್ತು ಸಂಸಾರದ ನಾಶಮಾಡುತ್ತಾನೆ ಅವನಿಗೆ ದ್ರವ್ಯ-ಆಗಮವು ನಿಮಿತ್ತವಾಗುವುದೆಂದು ಹೇಳಲಾಗುವುದು. ಆಗಮದಲ್ಲಿ ಅವಿರೋಧ ಮಾತುಗಳಿವೆಯೆಂದು ಯಾರು ಒಪ್ಪಿಕೊಳ್ಳುವರು? ಅಂತರ್ಮುಖ ಜ್ಞಾನದ ಮಹಿಮೆಯುಳ್ಳವನೇ ತನ್ನ ಜ್ಞಾನದ ಮಹಿಮೆ ಹಾಡುತ್ತಾನೆ ಆಗ ನಿಮಿತ್ತದಿಂದ ಆಗಮದ ಮಹಿಮೆಯನ್ನು ಹಾಡುತ್ತಾನೆ ಮತ್ತು ಆ ಆಗಮವು ಸಂಸಾರದ ನಾಶಮಾಡುತ್ತದೆಯೆಂದು ಕಥನ ಮಾಡಲಾಗುತ್ತದೆ.

**''ಭಗವಂತರ ಆಗಮಗಳು ಪರಂಪರೆಯಿಂದ ಮೋಕ್ಷ ಪದದ ಕಾರಣವಿವೆ.''**

ಆ ಆಗಮಗಳು ಮೋಕ್ಷಫಲ ಸಹಿತವಿವೆ ಎಂದರೆ ಶುದ್ಧಾತ್ಮನ ಪ್ರಾಪ್ತಿರೂಪದ ಮೋಕ್ಷಪದಕ್ಕೆ ಪರಂಪರೆಯಿಂದ ಕಾರಣಭೂತವಿವೆ. ಮೋಕ್ಷದ ಕಾರಣವಂತೂ ತಮ್ಮ ಶುದ್ಧ ಚೈತನ್ಯ ಸ್ವಭಾವದ ಶ್ರದ್ಧೆ, ಜ್ಞಾನ ಹಾಗೂ ಚಾರಿತ್ರದ ಪರ್ಯಾಯವಿದೆ. ಆದರೆ ಆ ಪರ್ಯಾಯದಲ್ಲಿ ಶಾಸ್ತ್ರದ ಕಡೆಯ ಶುಭರಾಗ ಶಾಸ್ತ್ರದ ವ್ಯವಹಾರ ಜ್ಞಾನವು ನಿಮಿತ್ತವಿದೆ. ಆ ರಾಗದ ಅಭಾವ ಮಾಡಿ ವೀತರಾಗತೆಯನ್ನು ಪ್ರಕಟಮಾಡುವುದರಿಂದ ಶಾಸ್ತ್ರಗಳನ್ನು ಪರಂಪರೆಯಿಂದ ಮೋಕ್ಷದ ಕಾರಣವೆಂದು ಹೇಳಲಾಗುತ್ತದೆ.

ಈಗ ಶಬ್ದ, ಜ್ಞಾನ ಮತ್ತು ಅರ್ಥವೆಂದು ಮೂರು ಭೇದಗಳೊಳಗಿಂದ ಸಮಯ ಶಬ್ದದ ಅರ್ಥ ಅಥವಾ ಲೋಕಾಲೋಕದ ಭೇದವನ್ನು ಹೇಳುತ್ತಾರೆ.

**ಸಮವಾಓ ಪಂಚಣ್ಹಂ ಸಮಉ ತ್ತಿ ಜಿಣುತ್ತಮೇಹಿಂ ಪಣ್ಣತ್ತಂ ।**
**ಸೋ ಚೇವ ಹವದಿ ಲೋಓ ತತ್ತೋ ಅಮಿಓ ಅಲೋಓ ಖಂ ॥೩॥**

**ಸಮವಾದವಿಲ್ಲವೆ ಸಮವಾಯವೈದಕೆ ಸಮಯವೆಂದು ಜಿನರು ಪೇಳಿಹರು ।**
**ಅಮಾಪ ಅಲೋಕಾಕಾಶ ಸ್ವರೂಪವಿದೆ ಉಳಿದುದದು ತಾನೆ ಲೋಕವಿದೆ ॥೩॥**

ಇಲ್ಲಿ ಐದು ಅಸ್ತಿಕಾಯಗಳ ಸಮೂಹವನ್ನು ಸಮಯವೆಂದು ಹೇಳಿದೆ. ಕಾಲದ ಕಥನವು ಗೌಣವಿದೆ, ಕಾಲವು ಅಸ್ತಿಯಿದೆ ಆದರೆ ಅಸ್ತಿಕಾಯವಿಲ್ಲ. ಜೀವ, ಪುದ್ಗಲ, ಧರ್ಮ, ಅಧರ್ಮ ಮತ್ತು ಆಕಾಶವೆಂದು ಐದು ಅಸ್ತಿಕಾಯಗಳಿವೆ. ಜೀವ, ಧರ್ಮ ಹಾಗೂ ಅಧರ್ಮಗಳು ಅಸಂಖ್ಯ ಪ್ರದೇಶಿಗಳಿವೆ ಮತ್ತು ಆಕಾಶವು ಅನಂತ ಪ್ರದೇಶಿಯಿದೆ ಅದರಿಂದ ಕಾಯವೆಂದು ಹೇಳಿದೆ ಪರಮಾಣುವು ಏಕಪ್ರದೇಶಿಯಿದ್ದರೂ ಕೂಡ ಸ್ಕಂಧರೂಪವಾಗುವ ಯೋಗ್ಯತೆಯಿರುವುದರಿಂದ ಪುದ್ಗಲದ್ರವ್ಯವನ್ನು ಉಪಚಾರದಿಂದ ಅಸ್ತಿಕಾಯವೆಂದು ಹೇಳಿದೆ ಮತ್ತು ಕಾಲದಲ್ಲಿ ಸ್ಪರ್ಶಗುಣವಿಲ್ಲದಿರುವುದರಿಂದ ಒಂದು ಕಾಲಾಣುವಿನದು ಇನ್ನೊಂದು ಕಾಲಾಣುವಿನ ಜೊತೆ ಸ್ಕಂಧರೂಪವಾಗುವ ಯೋಗ್ಯತೆಯಿಲ್ಲ ಅದರಿಂದ ಕಾಲಾಣುವು ಅಸ್ತಿಕಾಯವಿಲ್ಲ ಆದುದರಿಂದ ಇಲ್ಲಿ ಕಾಲಾಣುವಿನ ಸೇರ್ಪಡೆಯು ಗೌಣವಿದೆ. ಐದು ಅಸ್ತಿಕಾಯಗಳ ಸಮೂಹವನ್ನು ಅರ್ಥಸಮಯವೆಂದು ಹೇಳಲಾಗಿದೆ. ಈ ಪ್ರಕಾರದಿಂದ ಸರ್ವಜ್ಞ ವೀತರಾಗ ಭಗವಂತರು ಹೇಳಿದ್ದಾರೆ.

**''ಶಬ್ದಸಮಯ, ಜ್ಞಾನಸಮಯ ಮತ್ತು ಅರ್ಥಸಮಯವೆಂದು ಸಮಯದಲ್ಲಿ ಮೂರು ಭೇದಗಳಿವೆ.''**

ಶಬ್ದಸಮಯ, ಜ್ಞಾನಸಮಯ, ಅರ್ಥಸಮಯವೆಂದು ಸಮಯ ಶಬ್ದದಲ್ಲಿ ಮೂರು ಪ್ರಕಾರಗಳಿವೆ.

ಹೇಗೆಂದರೆ ಸಕ್ಕರೆ ಶಬ್ದವು ಅದು ಶಬ್ದಸಮಯವಿದೆ. ಸಕ್ಕರೆಯ ಸಂಬಂಧವಾಗಿರುವ ತಮ್ಮ ಜ್ಞಾನವು ಅದು ಜ್ಞಾನಸಮಯವಿದೆ ಮತ್ತು ಸಕ್ಕರೆ ಪದಾರ್ಥವು ಅದು ಅರ್ಥಸಮಯವಿದೆ.

ಸೌಧ ಶಬ್ದವು ಅದು ಶಬ್ದಸಮಯವಿದೆ, ಸೌಧ ಸಂಬಂಧದ ತಮ್ಮ ಜ್ಞಾನವು ಅದು ಜ್ಞಾನಸಮಯವಿದೆ ಮತ್ತು ಸೌಧ ಪದಾರ್ಥವು ಅದು ಅರ್ಥ ಸಮಯವಿದೆ.

ಆತ್ಮ ಶಬ್ದವು ಅದು ಶಬ್ದಸಮಯವಿದೆ, ಆತ್ಮ ಸಂಬಂಧದ ತಮ್ಮ ಜ್ಞಾನವು ಅದು ಜ್ಞಾನಸಮಯವಿದೆ ಮತ್ತು ಆತ್ಮ ವಸ್ತುವು ಅದು ಅರ್ಥಸಮಯವಿದೆ.

ಪಂಚಾಸ್ತಿಕಾಯ ಶಬ್ದವು ಅದು ಸಮಯವಿದೆ, ಪಂಚಾಸ್ತಿಕಾಯ ಸಂಬಂಧದ ತಮ್ಮ ಜ್ಞಾನವು ಅದು ಜ್ಞಾನ ಸಮಯವಿದೆ ಮತ್ತು ಪಂಚಾಸ್ತಿಕಾಯ-ಐದು ಅಸ್ತಿಕಾಯ (ಪದಾರ್ಥಗಳು) ಅದು ಅರ್ಥಸಮಯವಿದೆ.

ಮೂರು ಸ್ವತಂತ್ರವಿವೆ ಶಬ್ದದಲ್ಲಿ ಜ್ಞಾನ ಮೊದಲಾದ ಪದಾರ್ಥವಿಲ್ಲ, ಜ್ಞಾನದಲ್ಲಿ ಶಬ್ದ ಹಾಗೂ ಪದಾರ್ಥವಿಲ್ಲ, ಅರ್ಥದಲ್ಲಿ (ಪದಾರ್ಥದಲ್ಲಿ) ಜ್ಞಾನ ಹಾಗೂ ಶಬ್ದವಿಲ್ಲ.

ಹೇಗೆಂದರೆ ''ಪಂಚಾಸ್ತಿಕಾಯ''ವೆಂಬ ಶಬ್ದ ಆಡುವುದರಲ್ಲಿ ಪಂಚಾಸ್ತಿಕಾಯದ ಜ್ಞಾನವಿಲ್ಲ ಮತ್ತು ಅದರಲ್ಲಿ ಪಂಚಾಸ್ತಿಕಾಯ ಪದಾರ್ಥಗಳಿಲ್ಲ ಅದರಂತೆ ಪಂಚಾಸ್ತಿಕಾಯದಲ್ಲಿ (ಸಮೂಹ ರೂಪದಿಂದ ಮಾತು ಹೇಳಲಾಗಿದೆ. ಒಂದು ಜೀವದಲ್ಲಿ ಜ್ಞಾನವಿದೆ ಅದು ಬೇರೆ ಮಾತಿದೆ) ಪದಾರ್ಥಗಳಲ್ಲಿ ಜ್ಞಾನವಿಲ್ಲ ಅದರಂತೆ ಶಬ್ದವೂ ಇಲ್ಲ, ಜ್ಞಾನದಲ್ಲಿ ಶಬ್ದ ಮತ್ತು ಪದಾರ್ಥಗಳಿಲ್ಲ, ಆದರೆ ಶಬ್ದಗಳ ಹಾಗೂ ಪದಾರ್ಥಗಳ ಜ್ಞಾನವು ಬಂದುಬಿಡುತ್ತದೆ.

**''ರಾಗರಹಿತ ದ್ರವ್ಯಶ್ರುತದ ರಚನೆಯು ಅದು ಶಬ್ದ ಸಮಯವಿದೆ.''**

ಈ ಮೂರೂ ಭೇದಗಳಿಂದ ಪಂಚಾಸ್ತಿಕಾಯದ ರಾಗ-ದ್ವೇಷರಹಿತ ಯಥಾರ್ಥ ಅಕ್ಷರ, ಪದ ಮತ್ತು ವಾಕ್ಯದ ರಚನೆಯಿದೆ. ಅದನ್ನು ದ್ರವ್ಯಶ್ರುತರೂಪದ ಶಬ್ದಸಮಯವೆಂದು ಹೇಳಿದೆ. ಈ ಪಂಚಾಸ್ತಿಕಾಯದಲ್ಲಿ - ದ್ರವ್ಯಶ್ರುತರೂಪದ ಶಬ್ದಗಳಲ್ಲಿ ಎಲ್ಲಿಯೂ ಕಷಾಯಕಣದ ರಾಗ-ದ್ವೇಷ ಸ್ಥಾಪಿಸುವಂಥ ಕಥನವಿಲ್ಲ. ಪಂಚಾಸ್ತಿಕಾಯದ ವಾಚನಮಾಡಿ ಶುಭಭಾವ ಮಾಡುವಂತಿದೆಯೆಂದು ಯಾರು ಭಾವ ತೆಗೆಯುತ್ತಾರೆ ಅವರು ಪಂಚಾಸ್ತಿಕಾಯದ ವಾಚನ ಮಾಡಿಯೇಇಲ್ಲ. ವ್ಯವಹಾರದಿಂದ ಅಥವಾ ಪುಣ್ಯದಿಂದ ಧರ್ಮವಾಗುತ್ತದೆಯೆಂಬ ಕಥನವು ಪಂಚಾಸ್ತಿಕಾಯದಲ್ಲಿ ಇಲ್ಲ. ಯಾವ ಜೀವನು ತನ್ನ ಸ್ವಭಾವವು ರಾಗ-ದ್ವೇಷಗಳಿಂದ ರಹಿತವಿದೆಯೆಂದು ನಿರ್ಣಯ ಮಾಡಿ ಸಮ್ಯಗ್ಜ್ಞಾನ ಪ್ರಕಟಪಡಿಸಿಕೊಂಡಿದ್ದಾನೆ ಆ ಜೀವನು ದ್ರವ್ಯ-ಆಗಮದ ಕಥನವನ್ನು ರಾಗ-ದ್ವೇಷಗಳಿಂದ ರಹಿತವಾಗಿ ಮಾಡುವ ಸಾಧ್ಯತೆಯಿದೆ. ವ್ಯವಹಾರದ ಕಥನ ಅಥವಾ ಶುಭಭಾವ ಬಂದಿದೆ ಅದು ವೀತರಾಗತೆಯ ಸಾಧನವಿಲ್ಲ, ಆಗ ಧರ್ಮಾತ್ಮ ಜೀವನು ಇದು ಉಪಚಾರದ ಕಥನವಿದೆಯೆಂದು ತಿಳಿಯುತ್ತಾನೆ. ರಾಗವು ನಿಜವಾಗಿ ಸಾಧನವಿಲ್ಲವೆಂದು ಅರ್ಥ ತಿಳಿದುಕೊಂಡು ರಾಗದ ಸ್ಥಾಪನೆ ಮಾಡುವುದಿಲ್ಲ. ವೀತರಾಗರ ಶಬ್ದಗಳು ರಾಗ-ದ್ವೇಷಗಳ ಜ್ಞಾನ ಮಾಡಿಸುತ್ತವೆ. ಆದರೆ ರಾಗ-ದ್ವೇಷದ ಸ್ಥಾಪನೆ ಮಾಡಿಸುವುದಿಲ್ಲ. ಈ ಪ್ರಕಾರ ಶಬ್ದಸಮಯವು ಕೂಡ ವೀತರಾಗತೆಯಲ್ಲಿ ನಿಮಿತ್ತವಾಗುತ್ತದೆ.

**''ಯಾವ ಶಾಸ್ತ್ರವು ಪುಣ್ಯದಿಂದ ಮತ್ತು ನಿಮಿತ್ತದಿಂದ ಧರ್ಮವಾಗುವುದೆಂದು ಹೇಳುತ್ತದೆ ಅಥವಾ ದ್ರವ್ಯವು ಪರಾಧೀನವೆಂದು ತಿಳಿಸಿಕೊಡುತ್ತದೆ ಅದು ಶಾಸ್ತ್ರವಲ್ಲ-ಅದನ್ನು ಶಬ್ದಸಮಯವೆಂದು ಹೇಳುವುದಿಲ್ಲ.''**

ಶಬ್ದಸಮಯ, ಜ್ಞಾನಸಮಯ, ಅರ್ಥಸಮಯವೆಂದು ಮೂರು ಪ್ರಕಾರದಿಂದ ಶಬ್ದ ಹೇಳಿದೆ ಅದರಲ್ಲಿ ಮೊದಲು ಶಬ್ದಸಮಯದ ಮಾತು ಹೇಳುತ್ತಾರೆ ಯಾವುದು ರಾಗ-ದ್ವೇಷರಹಿತ ಪಂಚಾಸ್ತಿಕಾಯದ ಯಥಾರ್ಥ ಅಕ್ಷರ, ಪದ ಮತ್ತು ವಾಕ್ಯದ ರಚನೆಯನ್ನು ದ್ರವ್ಯಶ್ರುತರೂಪದಿಂದ ಮಾಡುತ್ತದೆ ಅದು ಶಬ್ದಸಮಯವಿದೆ. ''ಜೀವ''ವೆಂಬ ಶಬ್ದ ಹೇಳುವಾಗ ಅದರಲ್ಲಿ ''ಜೀ'' ಮತ್ತು ''ವ''ವೆಂಬ ಅಕ್ಷರಗಳಿವೆ ಮತ್ತು ''ಜೀವ'' ಅದು ಪದವಿದೆ ಮತ್ತು ''ಜೀವವು ಅನಾದಿ ಅನಂತವಿದೆ'' ಇದು ವಾಕ್ಯವಿದೆ ಹೀಗೆ ಅಕ್ಷರ, ಪದ ಮತ್ತು ವಾಕ್ಯದ ರಚನೆಯನ್ನು ದ್ರವ್ಯಶ್ರುತವೆಂದು ಹೇಳಿದೆ, ಆದರೆ ಯಾವ ''ರಾಗ-ದ್ವೇಷರಹಿತ'' ವೆಂಬ ಶಬ್ದ ಹೇಳಿದೆ ಅದರ ಮೇಲೆ ಅಧಿಕ ಒತ್ತು ಇದೆ. ಯಾವ ಶಾಸ್ತ್ರದಲ್ಲಿ ರಾಗ-ದ್ವೇಷರಹಿತ ಲಕ್ಷಣವು ಬರುತ್ತದೆ ಅದು ಯಥಾರ್ಥ ಶಾಸ್ತ್ರವಿದೆ ಮತ್ತು ಅದೇ ಶಬ್ದಸಮಯವಿದೆ. ಆದರೆ ಯಾವ ಶಾಸ್ತ್ರದಲ್ಲಿ ''ಒಂದು ದ್ರವ್ಯವು ಇನ್ನೊಂದು ದ್ರವ್ಯದ ಕಾರ್ಯಮಾಡುವುದು, ಪುಣ್ಯದಿಂದ ಧರ್ಮವಾಗುವುದು, ಜೀವವು ಜಡದ ಅಥವಾ ಶರೀರದ ಕಾರ್ಯ ಮಾಡುವ ಸಾಧ್ಯತೆಯಿದೆ, ಒಂದು ಗುಣದಿಂದ ಇನ್ನೊಂದು ಗುಣಕ್ಕೆ ಲಾಭವಾಗುವುದು, ಒಂದು ದ್ರವ್ಯವು ಇನ್ನೊಂದು ದ್ರವ್ಯವನ್ನು ಪರಾಧೀನವಮಾಡುವುದು, ರಾಗ-ದ್ವೇಷ ಅಥವಾ ಪುಣ್ಯ ಭಾವಮಾಡುವಂಥದ್ದಿದೆಯೆಂದು ಹೇಳುವುದು, ವ್ಯವಹಾರ ಮಾಡುತ್ತ ಮಾಡುತ್ತ ನಿಶ್ಚಯವಾಗುವುದು, ನಿಮಿತ್ತದಿಂದ ಉಪಾದಾನದಲ್ಲಿ ಕಾರ್ಯವಾಗುವುದು'' - ಎಂಬ ಲಕ್ಷಣಗಳು ಬರುತ್ತಿದ್ದರೆ ಅದನ್ನು ಶಬ್ದಸಮಯವೆಂದು ಹೇಳುವುದಿಲ್ಲ. ಯಾವ ಲಕ್ಷಣವು ರಾಗ-ದ್ವೇಷ ಎಂದರೆ ಮಿಥ್ಯಾತ್ವ, ರಾಗ-ದ್ವೇಷಗಳನ್ನು ಉತ್ಪನ್ನಮಾಡುವಲ್ಲಿ ನಿಮಿತ್ತವಾಗುತ್ತದೆ ಅದನ್ನು ಶಬ್ದಸಮಯವೆಂದು ಹೇಳುವುದೇ ಇಲ್ಲ.

**''ಯಾವ ಶಾಸ್ತ್ರ ರಚನೆಯ ಸಾರವು ವೀತರಾಗತೆಯ ಪೋಷಕವಿದೆ ಅದೇ ನಿಜವಾದ ಶಾಸ್ತ್ರವಿದೆ ಮತ್ತು ಶಬ್ದ ಸಮಯವಿದೆ.''**

ಯಾವುದರಲ್ಲಿ ವೀತರಾಗತೆಯ ಮಾತು ಬರುವುದು, ತನ್ನ ಆತ್ಮನಿಗೆ ಲಾಭವಾಗುವಂತಹ ಮಾತು ಬರುವುದು, ಸಮಸ್ತ ಆತ್ಮ ಮತ್ತು ಪರಮಾಣು ಸ್ವತಂತ್ರವಿವೆ, ಅವೆಲ್ಲವುಗಳ ದ್ರವ್ಯ-ಗುಣ-ಪರ್ಯಾಯಗಳು ಸ್ವತಂತ್ರವಿವೆ, ಕರ್ಮವು ರಾಗಮಾಡಿಸುವುದಿಲ್ಲ ಮತ್ತು ಗುರುವು ಧರ್ಮ ಪ್ರಾಪ್ತಮಾಡಿಸುವುದಿಲ್ಲ. ಆದರೆ ತಾನು ರಾಗ ಮಾಡಿದರೆ ರಾಗವಾಗುತ್ತದೆ ಮತ್ತು ಸ್ವರೂಪದ ಆಶ್ರಯದಿಂದ ಮಿಥ್ಯಾತ್ವ-ರಾಗ-ದ್ವೇಷ ತ್ಯಜಿಸಿ ಧರ್ಮ ಮಾಡುವ ಸಾಧ್ಯತೆಯಿದೆ ಇತ್ಯಾದಿ ಪ್ರಕಾರದಿಂದ ಯಥಾರ್ಥ ಲಕ್ಷಣವು ಯಾವುದರಲ್ಲಿ ಬರುವುದು ಅದನ್ನು ಶಬ್ದಸಮಯವೆಂದು ಹೇಳಿದೆ. ದ್ರವ್ಯಶ್ರುತವೆನ್ನಿರಿ, ದ್ರವ್ಯ ಆಗಮವೆನ್ನಿರಿ, ಶಬ್ದಸಮಯವೆನ್ನಿರಿ ಎಲ್ಲವೂ ಒಂದೇ ಇದೆ. ಇಲ್ಲಿ ಶಬ್ದ ಸಮಯವಂತೂ ಜಡದ ಪರ್ಯಾಯವಿದ್ದರೂ ಅದಕ್ಕೆ ರಾಗ-ದ್ವೇಷರಹಿತವೆಂದೇಕೆ ಹೇಳಿದೆ ? ಏಕೆಂದರೆ ಅದರಲ್ಲಿ ರಾಗವಿಲ್ಲ ಅದರಂತೆ ರಾಗ ರಹಿತತೆಯೂ ಕೂಡ ಇಲ್ಲ. ಅದಂತೂ ಪುದ್ಗಲದ ಪರ್ಯಾಯವಿದೆ. ಆದರೆ ಶಬ್ದಸಮಯದಲ್ಲಿ ಏನು ಹೇಳಿದೆ ಅದರ ಭಾವ ತಿಳಿದುಕೊಂಡು ಜೀವನು ತನ್ನಲ್ಲಿ ಮಿಥ್ಯಾತ್ವರಹಿತ ಯಥಾರ್ಥಜ್ಞಾನ ಮಾಡಿಕೊಳ್ಳುತ್ತಾನೆ ಹೇಗೆಂದರೆ ಶಬ್ದಸಮಯದಲ್ಲಿ 'ಜೀವನು ತನ್ನ ಆಶ್ರಯದಿಂದ ಮಿಥ್ಯಾತ್ವ, ರಾಗ-ದ್ವೇಷದ ನಾಶಮಾಡುವ ಸಾಧ್ಯತೆಯಿದೆ.'- ಎಂದು ಹೇಳಿಕೆ ಬರುತ್ತದೆ ಆ ಹೇಳಿಕೆಯ ಯಥಾರ್ಥ ಭಾವ ತಿಳಿದುಕೊಂಡು ಧರ್ಮಾತ್ಮ ಜೀವನು ತನ್ನ ಸ್ವಭಾವದ ಆಶ್ರಯದಿಂದ ಮಿಥ್ಯಾತ್ವ, ರಾಗ ಮತ್ತು ದ್ವೇಷದ ನಾಶ ಮಾಡುತ್ತಾನೆ ಮತ್ತು ತನ್ನಲ್ಲಿ ಜ್ಞಾನಸಮಯವನ್ನು ಪ್ರಕಟಮಾಡುತ್ತಾನೆ ಅಥವಾ ನಿಮಿತ್ತದ ಇಲ್ಲವೆ ವ್ಯವಹಾರದ ಕಥನವು ಬಂದಿದೆ ಅದನ್ನು ಉಪಚಾರ ಕಥನವೆಂದು ತಿಳಿದು ಅದರಲ್ಲಿ ವೀತರಾಗತೆ ತೆಗೆಯುತ್ತಾನೆ. ಎಂದರೆ ಶಬ್ದಸಮಯದಲ್ಲಿ ಯಾವ ಭಾವ ಹೇಳಲಾಗಿತ್ತೋ ಅಂಥದೇ ಜ್ಞಾನ ಮಾಡಿಕೊಳ್ಳುತ್ತಾನೆ. ಅದರಿಂದ ಶಬ್ದಸಮಯವು ಮಿಥ್ಯಾತ್ವ, ರಾಗ ಮತ್ತು ದ್ವೇಷದ ನಾಶಮಾಡುತ್ತದೆ ಮತ್ತು ಅದು ರಾಗ-ದ್ವೇಷರಹಿತವಿದೆಯೆಂದು ಕಥನ ಮಾಡಲಾಗುವುದು. ಅದುವೇ ಯಥಾರ್ಥ ಶಾಸ್ತ್ರವಿದೆ ಅಥವಾ ಶಬ್ದಸಮಯವಿದೆ.

**''ಶಬ್ದಸಮಯದ ನಿಮಿತ್ತವಾಗಿ ಆತ್ಮನ ಆಶ್ರಯದಿಂದಾಗುವ ಭಾವಶ್ರುತಜ್ಞಾನವನ್ನು ಜ್ಞಾನಸಮಯವೆಂದು ಹೇಳಲಾಗಿದೆ.''**

ಪಂಚಾಸ್ತಿಕಾಯದಲ್ಲಿ ಐದು ಅಸ್ತಿಕಾಯಗಳ ಎಂದರೆ ಜೀವ, ಪುದ್ಗಲ, ಧರ್ಮ, ಅಧರ್ಮ ಮತ್ತು ಆಕಾಶದ ವರ್ಣನೆಯಿದೆ ಅವೆಲ್ಲ ದ್ರವ್ಯಗಳು ಸ್ವತಂತ್ರವಿವೆ ಆ ಶಬ್ದಗಳನ್ನು ಶಬ್ದಸಮಯವೆಂದು ಹೇಳಲಾಗಿದೆ. ಆ ಶಬ್ದಗಳನ್ನು ಪರದ ಕಡೆಗಿರುವ ಲಕ್ಷ್ಯವನ್ನು ಬಿಡಿಸುವುದು ಮತ್ತು ಮಿಥ್ಯಾತ್ವದ ನಿವಾರಕವೆಂದು ಹೇಳಲಾಗಿದೆ.

ಶಬ್ದಶ್ರುತದ ಅಥವಾ ಶಬ್ದಸಮಯದ ಯಥಾರ್ಥಜ್ಞಾನ ಮಾಡಿತೆಂದು ಯಾವಾಗ ಹೇಳಲಾಗುವುದು ? ಭ್ರಾಂತಿಯ ನಾಶವು ನಿಮಿತ್ತದಿಂದ ಅಥವಾ ಪರ್ಯಾಯ ದೃಷ್ಟಿಯಿಂದ ಆಗುವುದಿಲ್ಲ. ಆದರೆ ಆತ್ಮನ ಲಕ್ಷ್ಯದಿಂದ ಭ್ರಾಂತಿಯ ನಾಶವಾಗುತ್ತದೆಯೆಂದು ಪಂಚಾಸ್ತಿಕಾಯದ ಹೇಳಿಕೆಯಿದೆ. ಸರ್ವಜ್ಞರ ಎದುರು ನೋಡಿದರೆ ನಿನ್ನ ಮಿಥ್ಯಾತ್ವವು ನಾಶವಾಗುತ್ತದೆಯೆಂದು ಪಂಚಾಸ್ತಿಕಾಯದಲ್ಲಿ ಬರುವುದಿಲ್ಲ. ಆದರೆ ನೀನು ನಿನ್ನ ಎದುರು ನೋಡಿದರೆ ನಿನ್ನ ಮಿಥ್ಯಾತ್ವ, ರಾಗ-ದ್ವೇಷದ ನಾಶವಾಗುವುದೆಂದು ಇದೆ. ಅದಿಲ್ಲದೆ ಅದರ ನಾಶವಾಗುವುದಿಲ್ಲ. ಮಿಥ್ಯಾತ್ವ, ರಾಗ-ದ್ವೇಷದ ನಾಶಮಾಡಿದೆಯೆಂದು ಹೇಳುವುದು ಕೂಡ ವ್ಯವಹಾರ ಕಥನವಿದೆ. ತನ್ನ ಜ್ಞಾನಸ್ವಭಾವದಲ್ಲಿ ಏಕಾಗ್ರವಾದ ಮೇಲೆ ಮಿಥ್ಯಾತ್ವ, ರಾಗ-ದ್ವೇಷಗಳು ಉತ್ಪನ್ನವಾಗುವುದೇ ಇಲ್ಲ. ಎಂದರೆ ಮಿಥ್ಯಾತ್ವ, ರಾಗ-ದ್ವೇಷದ ನಾಶವಾಗುತ್ತದೆಯೆಂದು ಹೇಳುವುದರಲ್ಲಿ ಬರುತ್ತದೆ. ಹೀಗೆ ತಮ್ಮಲ್ಲಿ ನಿಜವಾದ ಜ್ಞಾನ ಪ್ರಕಟವಾಗುವುದು ಅದು ಜ್ಞಾನಸಮಯವಿದೆ. ಜ್ಞಾನ ಸಮಯವೆನ್ನಿರಿ, ಭಾವಶ್ರುತಜ್ಞಾನವೆನ್ನಿರಿ, ಭಾವಆಗಮವೆನ್ನಿರಿ ಇವೆಲ್ಲವೂ ಒಂದೇ ಇದೆ. ಅದು ಸಮ್ಯಗ್ಜ್ಞಾನೀ ಜೀವದ ಜ್ಞಾನಗುಣದ ಪರ್ಯಾಯವಿದೆ. ಶಬ್ದಸಮಯದಿಂದ ಜ್ಞಾನವಾಗುತ್ತದೆಯೆಂದು ಹೇಳುವುದಿಲ್ಲ. ಆದರೆ ಜೀವವು ತನ್ನ ಆತ್ಮನ ಆಶ್ರಯದಿಂದ ಸಮ್ಯಗ್ಜ್ಞಾನವನ್ನು ಪ್ರಕಟಪಡಿಸಿಕೊಳ್ಳುತ್ತದೆ. ಆಗ ಯಾವ ಪ್ರಕಾರ ಹೇಳಿದೆ ಮತ್ತು ಅದೇ ಪ್ರಕಾರ ಅವನು ಮಾಡುವುದರಿಂದ ಶಬ್ದಸಮಯದ ಮೂಲಕ ಆಗಿದೆಯೆಂದು ಕಥನ ಮಾಡುವುದರಲ್ಲಿ ಬರುತ್ತದೆ ಮತ್ತು ಶಬ್ದ ಸಮಯದ್ದೂ ಕೂಡ ಯಥಾರ್ಥ ಜ್ಞಾನಮಾಡಿತೆಂದು ಹೇಳಲಾಗುವುದು.

**''ಸಮ್ಯಗ್ಜ್ಞಾನದ ಮೂಲಕ ಯಾವುದು ಯಥಾರ್ಥವಾಗಿ ತಿಳಿದುಬರುತ್ತದೆ ಅದನ್ನು ಅರ್ಥಸಮಯವೆಂದು ಹೇಳಲಾಗಿದೆ. ತಾನು ಸಮ್ಯಗ್ಜ್ಞಾನ ಪ್ರಕಟಪಡಿಸಿಕೊಂಡರೆ ಆಗಮ ಹಾಗೂ ಪದಾರ್ಥಗಳನ್ನು ಯಥಾರ್ಥ ತಿಳಿದನೆಂದು ಹೇಳಲಾಗುವುದು.''**

ಯಾವುದು ಸಮ್ಯಗ್ಜ್ಞಾನದ ಮೂಲಕ ಯಥಾರ್ಥ ತಿಳಿಯುತ್ತದೆ ಅದರ ಹೆಸರು ಅರ್ಥಸಮಯವಿದೆ. ಅರ್ಥ ಸಮಯ ಅಥವಾ ಪದಾರ್ಥಸಮಯ ಎರಡೂ ಒಂದೇ ಇವೆ. ಶಬ್ದವು ವಾಚಕವಿದೆ ಮತ್ತು ಪದಾರ್ಥವು ವಾಚ್ಯವಿದೆ.

ಇಲ್ಲಿ ಅರ್ಥಸಮಯದ ವ್ಯಾಖ್ಯೆಯಲ್ಲಿ ಜ್ಞಾನದ ಮೂಲಕ ಪದಾರ್ಥವು ತಿಳಿದು ಬರುವುದಕ್ಕೆ ಅರ್ಥವೆಂದು ಸ್ಪಷ್ಟವಾಗಿ ಹೇಳಲಾಗಿದೆ. ಆದರೆ ಅರ್ಥದ ಮೂಲಕ ಎಂದರೆ ಪದಾರ್ಥದ ಮೂಲಕ ಜ್ಞಾನವಾಗುತ್ತದೆಯೆಂದು ಹೇಳಿಲ್ಲ. ಸ್ವಭಾವದ ಆಶ್ರಯದಿಂದ ಮಿಥ್ಯಾತ್ವದ ನಾಶವಾಗಿ ಯಾವ ಸಮ್ಯಗ್ಜ್ಞಾನವು ಉತ್ಪನ್ನವಾಗಿದೆ ಆ ಜ್ಞಾನವು ಪದಾರ್ಥವನ್ನು ಯಥಾರ್ಥವಾಗಿ ತಿಳಿಯುತ್ತದೆ. ಪಂಚಾಸ್ತಿಕಾಯ ಎಂದರೆ ಜೀವ, ಪುದ್ಗಲ ಮೊದಲಾದ ಐದು ಪದಾರ್ಥಗಳೆಂದು ಎಂದರೆ ಅರ್ಥಸಮಯದಿಂದ ಜ್ಞಾನವಾಗುತ್ತದೆಯೆಂದು ಹೇಳಿಲ್ಲ. ಪಂಚಾಸ್ತಿಕಾಯವೆಂಬ ಶಬ್ದ ಹೇಳಿದೆ ಆ ಶಬ್ದಸಮಯದಿಂದ ಜ್ಞಾನವಾಗುತ್ತದೆಯೆಂದು ಹೇಳಿಲ್ಲ. ಆದರೆ ಸ್ವಯಂ ತನ್ನಿಂದ ಜ್ಞಾನವಾಗುವುದು, ಎಂದರೆ ಜ್ಞಾನಸಮಯದಲ್ಲಿ ಅರ್ಥ

ಸಮಯ ಹಾಗೂ ಶಬ್ದಸಮಯಗಳು ತಿಳಿದುಬರುತ್ತವೆ ಎಂದರೆ ಪಂಚಾಸ್ತಿಕಾಯ ಪದಾರ್ಥಗಳು ಸಮ್ಯಗ್ಜ್ಞಾನದ ಮೂಲಕ ಗೋಚರಿಸುವ ಮತ್ತು ತಿಳಿದುಬರುವ ಸಾಧ್ಯತೆಯಿದೆ. ಆದರೆ ಪದಾರ್ಥಗಳಿಂದ ಹಾಗೂ ಶಬ್ದಸಮಯದಿಂದ ಎಂದರೆ ಪಂಚಾಸ್ತಿಕಾಯ ಶಾಸ್ತ್ರದಿಂದ ಪಂಚಾಸ್ತಿಕಾಯದ ಜ್ಞಾನವಾಗುವುದಿಲ್ಲ ಎಂದರೆ ಆಗಮದ ಮೂಲಕ ಜ್ಞಾನವಾಗುವುದಿಲ್ಲ ಆತ್ಮನು ಜ್ಞಾನಸ್ವಭಾವಿಯಿದ್ದಾನೆಯೆಂಬ ಶ್ರದ್ಧೆ-ಜ್ಞಾನವಾದಮೇಲೆ ಸಮ್ಯಗ್ಜ್ಞಾನವು ಪ್ರಕಟವಾಗುತ್ತದೆ ಮತ್ತು ಆ ಸಮ್ಯಗ್ಜ್ಞಾನವು ಶಬ್ದಸಮಯದ ಭಾವ ಹಾಗೂ ಪದಾರ್ಥಗಳನ್ನು ತಿಳಿದುಕೊಳ್ಳುತ್ತದೆ ಮತ್ತು ಅದುವೇ ಶಬ್ದಸಮಯ ಹಾಗೂ ಅರ್ಥ ಸಮಯವನ್ನು ಸರಿಯಾಗಿ ತಿಳಿಯಿತೆಂದು ಹೇಳಲಾಗುವುದು.

ಜ್ಞಾನಸಮಯವಿಲ್ಲದೆ ಶಬ್ದಸಮಯ ಮತ್ತು ಅರ್ಥಸಮಯದ ಯಥಾರ್ಥಜ್ಞಾನ ಮಾಡಿತೆಂದು ಹೇಳಲಾಗುವುದಿಲ್ಲ. ಸಂಕ್ಷೇಪದಲ್ಲಿ ತಾನು ಸಮ್ಯಗ್ಜ್ಞಾನವನ್ನು ಪ್ರಕಟಪಡಿಸಿಕೊಂಡರೆ ಆಗಮ ಹಾಗೂ ಪದಾರ್ಥಗಳನ್ನು ಯಥಾರ್ಥವಾಗಿ ತಿಳಿದುಕೊಂಡನೆಂದು ಹೇಳಲಾಗುವುದು. ಇದು ಇದರೊಳಗಿಂದ ಹೊರಟ ಸಾರವಿದೆ.

**''ಅರ್ಥಸಮಯದಲ್ಲಿ ೧. ಪಂಚಾಸ್ತಿಕಾಯರೂಪ ಸಮೂಹ-ಲೋಕ. ೨. ಏಕಾಕೀ ಆಕಾಶ ಅದು ಅಲೋಕವೆಂದು ಎರಡು ಭೇದಗಳಿವೆ.''**

ಯಾವ ಅರ್ಥಸಮಯವಿದೆ ಅದರಲ್ಲಿ ಐದು ಅಸ್ತಿಕಾಯವನ್ನು ಲೋಕವೆಂದು ಹೇಳಿದೆ. ಕಾಲವು ಅಸ್ತಿಯಿದೆ ಲೋಕದೊಳಗಿಂದ ಅದರ ಅಭಾವ ಹೇಳಿಲ್ಲ. ಕಾಲವು ಅಸ್ತಿಕಾಯವಿಲ್ಲದಿರುವುದರಿಂದ ಅದು ಲೋಕದೊಳಗಿನಿಂದ ಹೊರಟು ಹೋಗಿದೆಯೆಂದು ಅದರ ಅರ್ಥವಿರುವುದಿಲ್ಲ. ಕಾಲಾಣುವು ವಸ್ತುವಿದೆ ಅದರಲ್ಲಿ ಒಂದು ಕಾಲಾಣು ಇನ್ನೊಂದು ಕಾಲಾಣುವಿನ ಜೊತೆ ಕೂಡಿ ಹೋಗುವುದಿಲ್ಲ. ಪರಮಾಣುವು ಏಕವಿದ್ದರೂ ಕೂಡ ರೂಕ್ಷತೆ ಹಾಗೂ ಸ್ನಿಗ್ಧತೆಯ ಯೋಗ್ಯತೆಯ ಕಾರಣದಿಂದ ಅಸ್ತಿಕಾಯವೆಂದು ಉಪಚಾರದಿಂದ ಹೇಳಲಾಗುತ್ತದೆ. ಆದರೆ ಕಾಲಾಣುವಿನಲ್ಲಿ ಅಂಥ ರೂಕ್ಷತೆ – ಸ್ನಿಗ್ಧತೆಯ ಯೋಗ್ಯತೆಯಿಲ್ಲದಿರುವಕಾರಣ ಅವುಗಳಲ್ಲಿ ಸ್ಪರ್ಶಗುಣವಿಲ್ಲದಿರುವುದರಿಂದ ಅವು ಉಪಚಾರದಿಂದ ಕೂಡ ಅಸ್ತಿಕಾಯವೆಂದು ಕರೆಯಿಸಿಕೊಳ್ಳುವುದಿಲ್ಲ. ಆದರೆ ಅಸ್ತಿಕಾಯವಿಲ್ಲವೆಂದು ಲೋಕದಲ್ಲಿ ಬರುವುದಿಲ್ಲವೆಂದು ತಿಳಿದುಕೊಳ್ಳಬಾರದು. ಅವು ಕೂಡ ಅಸ್ತಿಯಿಂದ ಪದಾರ್ಥಗಳಿವೆ. ಅವು ಲೋಕದಲ್ಲಿ ಬಂದುಬಿಡುತ್ತವೆ ಆದರೆ ಅವುಗಳ ವರ್ಣನೆ ಈ ಶಾಸ್ತ್ರದಲ್ಲಿ ಗೌಣವಿದೆ ಮತ್ತು ಐದು ಅಸ್ತಿಕಾಯಗಳ ವರ್ಣನೆಯು ಮುಖ್ಯವಿದೆ. ಆದುದರಿಂದ ಐದು ಅಸ್ತಿಕಾಯವನ್ನು ಲೋಕವೆಂದು ಹೇಳಿಬಿಡಲಾಗಿದೆ. ಆದರೆ ಕಾಲವು ಲೋಕದಲ್ಲಿ ಬಂದುಬಿಡುತ್ತದೆ. ಎಂದು ತಿಳಿದುಕೊಳ್ಳಬೇಕು. ಜೀವ, ಪುದ್ಗಲ, ಧರ್ಮ, ಅಧರ್ಮ ಮತ್ತು ಆಕಾಶವೆಂಬ ಐದನ್ನೇ ಲೋಕವೆಂದು ಹೇಳಿದೆ ಮತ್ತು ಲೋಕದಿಂದ ಭಿನ್ನ ಮರ್ಯಾದಾತೀತ ಅನಂತ ಆಕಾಶವನ್ನು ಅಲೋಕವೆಂದು ಹೇಳಿದೆ ಇಲ್ಲಿ ಆಕಾಶದೊಳಗೆ ಎರಡು ಭಾಗಗಳಾಗುತ್ತವೆಂದು ತಿಳಿದುಕೊಳ್ಳಬಾರದು ಲೋಕ ಮತ್ತು ಅಲೋಕದಲ್ಲಿ ಆಕಾಶವು ಒಂದು ಅಖಂಡ ದ್ರವ್ಯವಿದೆ ಆದರೆ ಎಲ್ಲಿ ಐದು ಅಸ್ತಿಕಾಯಗಳಿವೆ ಆ ಭಾಗವನ್ನು ಲೋಕವೆಂದು ಹೇಳಿದೆ ಮತ್ತು ಎಲ್ಲಿ ಒಂದು ಏಕಾಕೀ ಆಕಾಶವಿದೆ ಅದನ್ನು ಅಲೋಕವೆಂದು ಹೇಳಲಾಗಿದೆ.

**''ಭಾವಶ್ರುತಜ್ಞಾನದ ಒಂದು ಸಮಯದ ಪರ್ಯಾಯದಲ್ಲಿ ಅನಂತ ದ್ರವ್ಯಗಳನ್ನು, ಅನಂತ ಕ್ಷೇತ್ರವನ್ನು, ಅನಾದಿ ಅನಂತ ಕಾಲವನ್ನು ಹಾಗೂ ಅನಂತ ಭಾವಗಳನ್ನು (ಪರೋಕ್ಷ) ತಿಳಿದುಕೊಳ್ಳುವ ಸಾಮರ್ಥ್ಯವಿದೆ, ಎಂದರೆ ಜ್ಞಾನಸಮಯವು ಶಬ್ದಸಮಯ ಹಾಗೂ ಅರ್ಥಸಮಯ ಇವು ಎರಡನ್ನೂ ತಿಳಿಯುವುದರಿಂದ ಜ್ಞಾನಸಮಯದ ಮಹಿಮೆಯಿದೆ.''**

೧. ಅರ್ಥ ಸಮಯದಲ್ಲಿ ಲೋಕಾಲೋಕವು ಬಂದು ಬಿಡುವುದು. ಅರ್ಥಸಮಯದ ವಿಸ್ತಾರ ಅಥವಾ ಕ್ಷೇತ್ರವು ಲೋಕಾಲೋಕದಷ್ಟಿದೆ, ಮತ್ತು ಜ್ಞಾನಸಮಯದ ಅಥವಾ ಭಾವಶ್ರುತಜ್ಞಾನದ ವಿಸ್ತಾರವು ತನ್ನ ಆತ್ಮನ ಅಸಂಖ್ಯ ಪ್ರದೇಶಗಳಷ್ಟು ಇದೆ. ಅರ್ಥಸಮಯದ ಕ್ಷೇತ್ರವು ಜ್ಞಾನಸಮಯಕ್ಕಿಂತಲೂ ವಿಶಾಲವಾಗಿದ್ದರೂ ಕೂಡ ಕ್ಷೇತ್ರದ ಮಹಿಮೆ ಇರುವುದಿಲ್ಲ.

೨. ಒಂದು ಸಮಯದ ಜ್ಞಾನದ ಪರ್ಯಾಯದಲ್ಲಿ ಅರ್ಥಸಮಯವನ್ನು ಎಂದರೆ ಲೋಕಾಲೋಕವನ್ನು ತಿಳಿದುಕೊಳ್ಳುವ ಸಾಮರ್ಥ್ಯವು ಬಿದ್ದುಕೊಂಡಿದೆ. ಲೋಕಾಲೋಕವನ್ನು ತಿಳಿದುಕೊಳ್ಳುವ ಸಲುವಾಗಿ ಆತ್ಮನ ಪ್ರದೇಶಗಳನ್ನು ಲೋಕಾಲೋಕದಷ್ಟು ಮಾಡಬೇಕಾಗುತ್ತದೆಯೆನ್ನುವಂತಿಲ್ಲ. ಆತ್ಮನಿಗೆ ದೀರ್ಘವಾಗಬೇಕಾಗುವುದಿಲ್ಲ. ಆದರೆ ತನ್ನ ಅಸಂಖ್ಯ ಪ್ರದೇಶದಲ್ಲಿದ್ದುಕೊಂಡು ಜ್ಞಾನದ ಪರ್ಯಾಯವು ಲೋಕಾಲೋಕದ ಜ್ಞಾನ ಮಾಡಿಕೊಳ್ಳುತ್ತದೆ ಅದಕ್ಕಾಗಿ ಜ್ಞಾನ ಸಮಯದ ಅಥವಾ ಭಾವಶ್ರುತಜ್ಞಾನದ ಮಹಿಮೆ ಇದೆ.

೩. ಆ ಜ್ಞಾನದ ಪರ್ಯಾಯದಲ್ಲಿ ಲೋಕಾಲೋಕವು ತಿಳಿದುಬರುತ್ತದೆ. ಅದರಲ್ಲಿ ಏನೇನು ತಿಳಿದು ಬರುತ್ತದೆ ಎಂಬುದು ಈ ಕೆಳಗಿನಂತಿದೆ.

ಅ) ದ್ರವ್ಯ = ಅದು ಅನಂತ ದ್ರವ್ಯಗಳನ್ನು ತಿಳಿದುಕೊಳ್ಳುತ್ತದೆ. ಅದರಲ್ಲಿ ಆರೂ ದ್ರವ್ಯಗಳು ಬಂದು ಹೋಗುತ್ತವೆ ಮತ್ತು ಜೀವ ದ್ರವ್ಯದಲ್ಲಿ ಅನಂತ ಸಿದ್ಧರೂ ಹಾಗೂ ಕೇವಲೀ ಭಗವಂತರು, ಆಚಾರ್ಯ, ಉಪಾಧ್ಯಾಯ, ಸಾಧು ಎಂದು ಪಂಚಪರಮೇಷ್ಠಿ ಜೀವರು, ಸಾಧಕ ಹಾಗೂ ಬಾಧಕ ಜೀವರುಗಳು, ನಾಲ್ಕು ಗತಿಯ ಹಾಗೂ ಅನಂತ ನಿಗೋದ ಇತ್ಯಾದಿ ಜೀವರುಗಳೆಲ್ಲರುಗಳನ್ನು ಅದು ತಿಳಿದುಕೊಳ್ಳುತ್ತದೆ. ಅದರಂತೆ ಅನಂತ ಪುದ್ಗಲಗಳು ಹಾಗೂ ಧರ್ಮ, ಅಧರ್ಮ ಇತ್ಯಾದಿ ದ್ರವ್ಯಗಳನ್ನು ತಿಳಿದುಕೊಳ್ಳುವುದು. ಹೀಗೆ ಅನಂತ ದ್ರವ್ಯಗಳನ್ನು ತಿಳಿಯುತ್ತದೆ.

ಬ) ಕ್ಷೇತ್ರ = ಕ್ಷೇತ್ರವು ಅನಂತ ಪ್ರದೇಶೀ ಇರುವುದರಿಂದ ಜ್ಞಾನವು ಕ್ಷೇತ್ರದಿಂದ ಅನಂತ ಪ್ರದೇಶವನ್ನು ತಿಳಿಯುತ್ತದೆ.

ಕ) ಕಾಲ = ಎಲ್ಲ ದ್ರವ್ಯಗಳು ತ್ರಿಕಾಲೀ-ಅನಾದಿ ಅನಂತವಿವೆ ಹೀಗೆ ಕಾಲ ಅಪೇಕ್ಷೆಯಿಂದ ಕೂಡ ಜ್ಞಾನವು ಅನಂತವನ್ನು ತಿಳಿಯುತ್ತದೆ.

ಡ) ಭಾವ = ಪ್ರತಿಯೊಂದು ದ್ರವ್ಯದಲ್ಲಿ ಅನಂತ ಗುಣಗಳು ಅಥವಾ ಭಾವಗಳಿವೆ, ಆ ಅನಂತ ಗುಣಗಳನ್ನು ಜ್ಞಾನವು ತಿಳಿಯುತ್ತವೆ ಆದುದರಿಂದ ಜ್ಞಾನವು ಭಾವ ಅಪೇಕ್ಷೆಯಿಂದ ಅನಂತ ಭಾವಗಳನ್ನು ತಿಳಿಯುತ್ತವೆ.

ಹೀಗೆ ಜ್ಞಾನ ಸಮಯವು ಅನಂತದ್ರವ್ಯ, ಕ್ಷೇತ್ರ, ಕಾಲ, ಭಾವವನ್ನು ತಿಳಿದುಕೊಳ್ಳುವಂಥ ಸಾಮರ್ಥ್ಯವುಳ್ಳದ್ದಿದೆ ಅನಂತ ಸಿದ್ಧರನ್ನು ತಿಳಿದುಕೊಳ್ಳುತ್ತದೆ, ಪಂಚ ಪರಮೇಷ್ಠಿಗಳನ್ನು ತಿಳಿದುಕೊಳ್ಳುತ್ತದೆ. ಪಂಚಪರಮೇಷ್ಠಿಗಳ ಜ್ಞಾನವಾಗುವುದಿಲ್ಲ ಆದರೆ ತಾನು ಪಂಚಪರಮೇಷ್ಠಿಗಳನ್ನು ತಿಳಿದುಕೊಳ್ಳುತ್ತದೆ.

೪. ಇದಂತೂ ಆತ್ಮನ ಆಶ್ರಯದಿಂದ ಉತ್ಪನ್ನವಾದ ಭಾವಶ್ರುತಜ್ಞಾನದ ಒಂದು ಸಮಯದ ಪರ್ಯಾಯದ ಸಾಮರ್ಥ್ಯವಿದೆ ಛದ್ಮಸ್ಥ ಜೀವನಿಗೆ ಬೇಕಾದರೆ ಅಸಂಖ್ಯ ಸಮಯದಲ್ಲಿ ಲಕ್ಷ್ಯದೊಳಗೆ ಬರುತ್ತಿದ್ದರೂ ಮತ್ತು ಸಮಸ್ತ ಪದಾರ್ಥಗಳ ದ್ರವ್ಯ, ಕ್ಷೇತ್ರ, ಕಾಲ ಮತ್ತು ಭಾವಗಳನ್ನು ಪರೋಕ್ಷ ರೀತಿಯಿಂದ ತಿಳಿಯುತ್ತಿದ್ದರೂ ಕೂಡ ಅವನ ಸಮ್ಯಗ್ಜ್ಞಾನದ ಒಂದು ಸಮಯದ ಪರ್ಯಾಯದಲ್ಲಿ ಲೋಕಾಲೋಕದ ಅನಂತ ಪದಾರ್ಥಗಳನ್ನು ದ್ರವ್ಯ, ಕ್ಷೇತ್ರ, ಕಾಲ, ಭಾವದಿಂದ ತಿಳಿದುಕೊಳ್ಳುವ ಸಾಮರ್ಥ್ಯವಿರುವುದು. ಮತ್ತು ಅವನು ತನ್ನ ಅಸಂಖ್ಯ ಪ್ರದೇಶಗಳಲ್ಲಿ ಇದ್ದುಕೊಂಡು

ಅನಂತ ದ್ರವ್ಯಗಳನ್ನು, ಅನಂತ ಪ್ರದೇಶಿಯಾದ ಕ್ಷೇತ್ರವನ್ನು, ಅನಾದಿಕಾಲವನ್ನು ಹಾಗೂ ಅನಂತ ಭಾವಗಳನ್ನು (ಪರೋಕ್ಷ) ತಿಳಿದುಕೊಳ್ಳುತ್ತಾನೆ. ಈ ಪ್ರಕಾರ ಜ್ಞಾನದ ಮಹಿಮೆಯಿದೆ.

೫. ಅಯ್ಯಾ ! ಸಮ್ಯಗ್ಜ್ಞಾನದ ಒಂದು ಸಮಯದ ಪರ್ಯಾಯದಲ್ಲಿ ಇಷ್ಟು ಸಾಮರ್ಥ್ಯವಿದೆಯೆಂದಮೇಲೆ ಕೇವಲಜ್ಞಾನದ ಸಾಮರ್ಥ್ಯವು ಎಷ್ಟು ಇರುವುದೆಂದು ತಿಳಿದುಕೊಳ್ಳುವುದು ! ಅದಂತೂ ಅನಂತವನ್ನು ಒಂದು ಸಮಯದಲ್ಲಿ ಪ್ರತ್ಯಕ್ಷ ತಿಳಿದುಕೊಳ್ಳುತ್ತದೆ. (ಆದರೆ ಇಲ್ಲಿಯಂತೂ ಛದ್ಮಸ್ಥನ ಜ್ಞಾನಸಮಯದ ಮಾತು ಇದೆ)

೬. ಒಂದು ಜ್ಞಾನಗುಣದ ಒಂದು ಸಮಯದ ಪರ್ಯಾಯದ ಸಾಮರ್ಥ್ಯವು ಇಷ್ಟಿದೆಯೆಂದಬಳಿಕ ಆ ಪರ್ಯಾಯವು ಯಾರ ಆಶ್ರಯದಿಂದ ಪ್ರಕಟವಾಗುತ್ತದೆ ಅಂಥ ಜ್ಞಾನ ಮೊದಲಾದ ಅನಂತ ಗುಣಗಳ ಭಂಡಾರವಿರುವ ಆತ್ಮದ್ರವ್ಯದ ಮಾಹಾತ್ಮ್ಯದ ಮಾತೇನು ಹೇಳುವುದು ? ಅಯ್ಯಾ ! ನನ್ನ ಜ್ಞಾನ ಸ್ವಭಾವವು ಇಷ್ಟು ಮಹಿಮಾವಂತವಿದೆ. ಹೀಗೆ ಯಾರಿಗೆ ತಮ್ಮ ಜ್ಞಾನಸ್ವಭಾವಿಯಾದ ಆತ್ಮನ ಮಹಿಮೆಯು ಬರುತ್ತದೆ ಅವರಿಗೆ ಸಮ್ಯಗ್ಜ್ಞಾನವು ಪ್ರಕಟವಾಗುತ್ತದೆ ಮತ್ತು ಅವರು ಸಮಸ್ತ ಪದಾರ್ಥಗಳನ್ನು ಯಥಾರ್ಥ ತಿಳಿದುಕೊಳ್ಳುತ್ತಾರೆ ಮತ್ತು ಕ್ರಮದಿಂದ ವೀತರಾಗತೆಯನ್ನು ಪ್ರಕಟಮಾಡಿ ಕೇವಲಜ್ಞಾನ ಪಡೆಯುತ್ತಾರೆ.

೭. ದ್ರವ್ಯಆಗಮದ (ಶಬ್ದಸಮಯದ) ಜ್ಞಾನವು ಭಾವಆಗಮದಿಂದ (ಜ್ಞಾನಸಮಯದಿಂದ) ಆಗುತ್ತದೆ. ಭಾವ ಆಗಮದ ಉತ್ಪಾದವು ಮಿಥ್ಯಾತ್ವದ ನಾಶದಿಂದ ಆಗುತ್ತದೆ. ಮಿಥ್ಯಾತ್ವದ ನಾಶವು ಜ್ಞಾನಸ್ವಭಾವಿಯಾದ ಆತ್ಮನ ಆಶ್ರಯದಿಂದ ಆಗುತ್ತದೆ. ಮತ್ತು ಆ ಭಾವಆಗಮವು ಸಮಸ್ತ ಪದಾರ್ಥಗಳನ್ನು (ಅರ್ಥಸಮಯವನ್ನು) ಯಥಾರ್ಥವಾಗಿ ತಿಳಿದುಕೊಳ್ಳುತ್ತದೆ. ಈ ಪ್ರಕಾರ ಜ್ಞಾನಸಮಯವು ಶಬ್ದಸಮಯ ಹಾಗೂ ಅರ್ಥಸಮಯಗಳನ್ನು ತಿಳಿಯುತ್ತದೆ. ಅದಕ್ಕಾಗಿ ಜ್ಞಾನಸ್ವಭಾವದ ಮಹಿಮೆ ಇದೆ. ಎಂದರೆ ಭಾವಶ್ರುತಜ್ಞಾನದಿಂದ ಪಂಚಾಸ್ತಿಕಾಯವು ತಿಳಿದುಬರುತ್ತದೆ, ಆದರೆ ಪಂಚಾಸ್ತಿಕಾಯದಿಂದ ತಿಳಿದುಬರುವುದಿಲ್ಲ. ಅಥವಾ ಶಾಸ್ತ್ರದಿಂದ ಭಾವಶ್ರುತಜ್ಞಾನವಾಗುವುದಿಲ್ಲ ಆದರೆ ತನ್ನಿಂದ ಜ್ಞಾನವಾಗುತ್ತದೆ.

**ಭಾವಾರ್ಥ :-** ಅರ್ಥಸಮಯವು ಲೋಕ ಹಾಗೂ ಅಲೋಕವೆಂದು ಎರಡು ಪ್ರಕಾರದಿಂದಿದೆ. ಎಲ್ಲಿ ಜೀವ, ಪುದ್ಗಲ, ಧರ್ಮ, ಅಧರ್ಮ, ಆಕಾಶವೆಂಬ ಐದು ಅಸ್ತಿಕಾಯಗಳ ಸಮೂಹವಿದೆ ಅದನ್ನು ಲೋಕವೆಂದು ಹೇಳುತ್ತಾರೆ ಮತ್ತು ಎಲ್ಲಿ ಒಂದು ಏಕಾಕೀ ಆಕಾಶವಿದೆ ಅದನ್ನು ಅಲೋಕವೆಂದು ಹೇಳುತ್ತಾರೆ. ಇಲ್ಲಿ ಯಾರೋ ಪ್ರಶ್ನೆ ಮಾಡಬಹುದು- ಆರು ದ್ರವ್ಯಗಳ ಸಮೂಹವನ್ನು ಲೋಕವೆಂದು ಹೇಳುತ್ತಾರೆ, ಆದರೆ ಇಲ್ಲಿ ಐದು ಅಸ್ತಿಕಾಯಗಳಿಗೆ ಲೋಕವೆಂಬ ಸಂಜ್ಞೆಯನ್ನು ಹೇಗೆ ಕೊಡುತ್ತಿದ್ದಾರೆ ?

**ಉತ್ತರ :-** ಈ ಗ್ರಂಥದಲ್ಲಿ ಮುಖ್ಯತೆಯಿಂದ ಐದು ಅಸ್ತಿಕಾಯಗಳ ವರ್ಣನೆಯಿದೆ. ಕಾಲದ್ರವ್ಯದ ಕಥನವು ಗೌಣವಿರುವ ಕಾರಣ ಪಂಚಾಸ್ತಿಕಾಯಕ್ಕೆ ಲೋಕಸಂಜ್ಞೆ ಕೊಡಲಾಗಿದೆ ಆದರೆ ಇದರಿಂದ ಕಾಲಾಣುವಿನ ಅಭಾವವಿದೆ ಮತ್ತು ಲೋಕದಲ್ಲಿ ಆ ದ್ರವ್ಯವೇ ಇಲ್ಲವೆಂದು ಅರ್ಥವಲ್ಲ. ಕಾಲಾಣುವಿನ ಕಥನ ಮಾಡಲಾಗಿಲ್ಲವೆಂದು ತಿಳಿದುಕೊಳ್ಳಬೇಕು; ಅದರಲ್ಲಿ ಮುಖ್ಯ-ಗೌಣದ ಭೇದದ ಅಪೇಕ್ಷೆಯಿದೆ ಆರು ದ್ರವ್ಯಗಳ ಸಮೂಹವನ್ನು ಲೋಕವೆಂದು ಹೇಳುವ ಕಥನವೂ ಕೂಡ ಪ್ರಮಾಣವಿದೆ ಆದರೆ ಇಲ್ಲಿ ಅದರ ಅಪೇಕ್ಷೆ ಇರುವುದಿಲ್ಲ.

ಈಗ ಐದು ಅಸ್ತಿಕಾಯಗಳ ವಿಶೇಷ ನಾಮ ಅಥವಾ ಸಾಮಾನ್ಯ, ವಿಶೇಷ, ಅಸ್ತಿತ್ವ ಅಥವಾ ಕಾಯವನ್ನು ಹೇಳುತ್ತಾರೆ,-

**ಜೀವಾ ಪೋಗ್ಗಲಕಾಯಾ ಧಮ್ಮಾಧಮ್ಮಾ ತಹೇವ ಆಗಾಸಂ ।**
**ಅತ್ಥಿತ್ತಮ್ಹಿ ಯ ಣಿಯದಾ ಅಣಣ್ಣಮಇಯಾ ಅಣುಮಹಂತಾ ।।೪।।**

**ಜೀವದ್ರವ್ಯ ಪುದ್ಗಲಕಾಯ ಧರ್ಮ ಅಧರ್ಮ ಮತ್ತದರಂತೆ ಆಕಾಶಸಹಿತ ।**
**ಈ ವಸ್ತುಗಳಸ್ತಿತ್ವನಿಯತ ಅನನ್ಯಮಯ ಮೇಣಣುಮಹಾನವಿವೆ ।।೪।।**

**ಅರ್ಥ :-** ಅನಂತ ಜೀವದ್ರವ್ಯವಿವೆ, ಅನಂತ ಪುದ್ಗಲದ್ರವ್ಯವಿವೆ, ಒಂದು ಧರ್ಮದ್ರವ್ಯವಿದೆ, ಒಂದು ಅಧರ್ಮದ್ರವ್ಯವಿದೆ, ಮತ್ತು ಒಂದು ಆಕಾಶದ್ರವ್ಯವಿದೆ ಹೀಗೆ ಐದರ ವಿಶೇಷ ಹೆಸರುಗಳನ್ನು ಸಮೂಹರೂಪದಿಂದ ಪಂಚಾಸ್ತಿಕಾಯವೆಂದು ಹೇಳಿದೆ.

ಜೀವಗಳು ಅನಂತವಿವೆ. ಅದರಲ್ಲಿ ಸಿದ್ಧರು ನಿಗೋದ ಜೀವಗಳ ಅನಂತದ ಒಂದು ಭಾಗದಷ್ಟಿದ್ದರೂ ಕೂಡ ಸಿದ್ಧರು ಅನಂತರಿದ್ದಾರೆ. ನಿಗೋದದ ಜೀವಗಳು ಆ ಸಿದ್ಧರಿಗಿಂತ ಅನಂತಗುಣಿತವಿವೆ. ಇವಲ್ಲದೆ ಇತರ ಜೀವಗಳು ಅಸಂಖ್ಯಾತ ಮತ್ತು ಸಂಖ್ಯಾತವಿವೆ. ಅವು ಜ್ಞಾನದಲ್ಲಿ ತಿಳಿದುಬರುತ್ತವೆ. ಅನಂತ ಸಿದ್ಧರು ನಿನ್ನ ದೇವರಿದ್ದಾರೆ ಮತ್ತು ಅನಂತ ನಿಗೋದದ ಜೀವಗಳು ನೀನು ದಯೆಮಾಡಲು ಯೋಗ್ಯವಿವೆಯೆಂದು ಹೇಳಿಲ್ಲ. ಅಯ್ಯಾ ! ನಮ್ಮ ಜೈನ ಧರ್ಮದಲ್ಲಿ ಅನಂತ ಜೀವಗಳನ್ನು ಹೇಳಿದ್ದಾರೆ. ಇಂಥ ಲಕ್ಷಣವು ನಮ್ಮ ಹೊರತಾಗಿ ಬೇರೆ ಯಾವುದೇ ಮತದಲ್ಲಿ ಇಲ್ಲ .ಆದುದರಿಂದ ನಾವು ನಿಗೋದದ ಜೀವಗಳ ಮೇಲೆ ದಯೆ ಮಾಡಬೇಕಾಗುವುದೆಂದು ಅಜ್ಞಾನೀ ಜೀವರುಗಳು ಹೇಳುತ್ತಾರೆ ಅವರಿಗೆ ಹೀಗೆ ತಿಳಿಸಿ ಕೊಡುತ್ತಾರೆ.

೧) ನಮ್ಮನ್ನು ದೇವರೆಂದು ಮನ್ನಿಸು ಅಥವಾ ಪೂಜ್ಯರೆಂದು ಮನ್ನಿಸೆಂದು ಸಿದ್ಧ ಜೀವರುಗಳು ನಿನಗೆ ಹೇಳುವುದಿಲ್ಲ. ಹಾಗೆ ಜೀವದ ಸ್ವಭಾವವಿಲ್ಲ. ಅವನ ಸ್ವಭಾವವಂತೂ ಕೇವಲ ತನ್ನ ಜ್ಞಾನದಲ್ಲಿ ಜೀವ ದ್ರವ್ಯದ ಹಾಗೆ ತಿಳಿದುಕೊಳ್ಳುವುದಿದೆ.

೨) ನಿನ್ನ ಜ್ಞಾನದ ಸ್ವಭಾವವು ಸಿದ್ಧರಂತಿಲ್ಲದಿರುವುದರಿಂದ ನೀನು ಅವರನ್ನು ದೇವ ಅಥವಾ ಪೂಜ್ಯರೆಂದು ಮನ್ನಿಸೆಂದು ಹೇಳುವುದಿಲ್ಲ. ನಿನ್ನ ಜ್ಞಾನದ ಸ್ವಭಾವವು ಸಿದ್ಧರು ಜೀವರುಗಳಿದ್ದಾರೆಂದು ಕೇವಲ ತಿಳಿದುಕೊಳ್ಳುವುದಿದೆ.

೩) ನೀನು ನಮ್ಮ ಮೇಲೆ ದಯೆಮಾಡೆಂದು ನಿಗೋದದ ಜೀವಗಳು ನಿನಗೆ ಹೇಳುವುದಿಲ್ಲ. ಆ ಜೀವಗಳು ದಯೆಮಾಡಲು ಯೋಗ್ಯಸ್ವಭಾವವುಳ್ಳವುಗಳಿಲ್ಲ. ಅವಂತೂ ಕೇವಲ ನಿನ್ನ ಜ್ಞಾನದಲ್ಲಿ ಜೀವ ದ್ರವ್ಯದ ಹಾಗೆ ತಿಳಿದುಕೊಳ್ಳಲು ಯೋಗ್ಯವಿವೆ.

೪) ನೀನು ಅವುಗಳ ಮೇಲೆ ದಯೆ ಮಾಡುವಂತೆ ನಿನ್ನ ಜ್ಞಾನದ ಸ್ವಭಾವವಿರುವುದಿಲ್ಲ ದಯೆಯಂತೂ ರಾಗವಿದೆ ಮತ್ತು ರಾಗವು ನಿನ್ನ ಸ್ವರೂಪವಿರುವುದಿಲ್ಲ ಆದರೆ ಅದನ್ನು ತಿಳಿದುಕೊಳ್ಳುವುದು ಮಾತ್ರ ನಿನ್ನ ಸ್ವಭಾವವಿದೆ.

೫) ಇನ್ನು ಆ ನಿಗೋದದ ಹಾಗೂ ಸಿದ್ಧಜೀವರುಗಳು ಇರುವುದರಿಂದ ನಿನಗೆ ಜ್ಞಾನವಾಗುತ್ತದೆಂಬುದಾಗಿಕೂಡ ಇರುವುದಿಲ್ಲ ಆದರೆ ನಿನ್ನ ಆತ್ಮನ ಸ್ವ-ಪರಪ್ರಕಾಶಕ ಸ್ವಭಾವವನ್ನು ಯಥಾರ್ಥವಾಗಿ ತಿಳಿದುಕೊಂಡಮೇಲೆ ಅನಂತ ಪರಪದಾರ್ಥಗಳನ್ನು ನೀನು ತಿಳಿದುಕೊಳ್ಳುವಂಥವನಿರುವೆ ಈ ಪದಾರ್ಥಗಳ ಮೂಲಕ ನೀನು ತಿಳಿದುಕೊಳ್ಳುವಂಥವನಿಲ್ಲ ಆದರೆ ನೀನು ನಿನ್ನ ಮೂಲಕ ತಿಳಿದುಕೊಳ್ಳುವಂಥವನಿರುವೆ.

ಈ ಪ್ರಕಾರ ನಿಜವಾದ ಜ್ಞಾನವಾದಮೇಲೆ ಪರದ ಮೇಲಿರುವ ದೃಷ್ಟಿಯು ಬಿಟ್ಟುಹೋದಮೇಲೆ ಮತ್ತು ತನ್ನಲ್ಲಿ ಏಕಾಗ್ರವಾದಮೇಲೆ ಸಮ್ಯಗ್ಜ್ಞಾನವು ಪ್ರಕಟವಾಗುತ್ತದೆ.

**''ತನ್ನನ್ನು ತಿಳಿದುಕೊಳ್ಳುವುದು ಅದು ನಿಶ್ಚಯವಿದೆ ಮತ್ತು ರಾಗವನ್ನು ತಿಳಿದುಕೊಳ್ಳುವುದು ಅದು ವ್ಯವಹಾರವಿದೆ. ಇಂಥ ನಿಶ್ಚಯ-ವ್ಯವಹಾರವನ್ನು ಸಾಧಕ ಜೀವನು ಅವಿರೋಧವಾಗಿ ತಿಳಿಯುತ್ತಾನೆ.''**

**ಪ್ರಶ್ನೆ :-** ತಾವು ದಯೆಪಾಲಿಸುವದನ್ನಂತೂ ನಿರಾಕರಿಸುತ್ತಿರುವಿರಿ, ಆದರೆ ಶುಭರಾಗವನ್ನು ಶುದ್ಧತೆಯ ಸಾಧನವೆಂದು ಹೇಳುತ್ತಿರುವಿರಲ್ಲವೇನು ? (ಗಾಥೆ - ೧೬೨)

**ಉತ್ತರ :-** ಶಾಸ್ತ್ರದ ತಾತ್ಪರ್ಯವು ವೀತರಾಗತೆ ಇದೆ. ೧೬೨ ನೇ ಗಾಥೆಯಲ್ಲಿ ಶುಭರಾಗವನ್ನು ವ್ಯವಹಾರವೆಂದು ಹೇಳಿದ್ದಾರೆ ಮತ್ತು ವ್ಯವಹಾರವನ್ನು ನಿಶ್ಚಯದ ಸಾಧನವೆಂದು ಹೇಳಿದ್ದಾರೆ. ಆದರೆ ಅದು ಶುಭರಾಗದ ಜ್ಞಾನಮಾಡಿಕೊಳ್ಳುವ ಸಲುವಾಗಿ ಇದೆ. ಸಾಧಕ ಜೀವನು ಯಾವಾಗ ಭಾವಶ್ರುತಜ್ಞಾನವು ಪ್ರಕಟವಾಗುತ್ತದೆ ಆಗ ಸ್ವ-ಪರಪ್ರಕಾಶಕ ಜ್ಞಾನವು ವಿಕಸಿತಗೊಂಡು ರಾಗವು ಬಾಧಕಭಾವರೂಪದಿಂದ ಎಷ್ಟು ಬಾಕಿ ಇದೆ ಅದನ್ನು ಪರರೂಪದಿಂದ ತಿಳಿದುಕೊಳ್ಳುತ್ತದೆ. ಆ ರಾಗವು ದೇವ-ಶಾಸ್ತ್ರ-ಗುರುಗಳ ಕುರಿತು ಇರುತ್ತದೆ, ಅದು ವ್ಯವಹಾರ ರತ್ನತ್ರಯದ ಪರಿಣಾಮವನ್ನು ತಿಳಿದುಕೊಳ್ಳುತ್ತದೆ, ಅಲ್ಲಿ ರಾಗದ ಜ್ಞಾನ ಮಾಡಿಸುತ್ತದೆ ಆದರೆ ರಾಗದ ಮೂಲಕ ಹಾಗೂ ದೇವ-ಶಾಸ್ತ್ರ-ಗುರು ಮೊದಲಾದ ಪರದ್ರವ್ಯಗಳ ಮೂಲಕ ನಿರ್ಮಲತೆ ಅಥವಾ ಶುದ್ಧತೆಯು ಉಂಟಾಗುತ್ತದೆಯೆಂದು ಹೇಳುವುದಿಲ್ಲ.

೧) ಒಂದು ವೇಳೆ ಸಾಧಕದಶೆಯಲ್ಲಿ ರಾಗವು ಸ್ವಲ್ಪ ಕೂಡ ಬರುವುದೇ ಇಲ್ಲವೆಂದು ಮನ್ನಿಸಿದರೆ ವಿರೋಧವು ಬರುತ್ತದೆ. ಕಾರಣವೇನೆಂದರೆ ಇನ್ನೂ ಸಂಪೂರ್ಣ ವೀತರಾಗತೆಯು ಪ್ರಕಟವಾಗಿರುವುದಿಲ್ಲ.

೨) ಒಂದು ವೇಳೆ ರಾಗದಿಂದ ಕಲ್ಯಾಣವಾಗುವುದೆಂದು ಮನ್ನಿಸಿದರೂ ಕೂಡ ವಿರೋಧವು ಬರುತ್ತದೆ ಕಾರಣವೇನೆಂದರೆ ರಾಗದಿಂದ ಅರಾಗತೆಯು ಪ್ರಕಟವಾಗುವುದಿಲ್ಲ.

೩) ಆದರೆ ಸಾಧಕ ಜೀವನಿಗೆ ಭಾವಶ್ರುತಜ್ಞಾನವು ಪ್ರಕಟವಾದಮೇಲೆ ಸ್ವ-ಪರಪ್ರಕಾಶಕ ಸ್ವಭಾವವು ವಿಕಸಿತಗೊಳ್ಳುತ್ತದೆ ಅವನಿಗೆ ಆಂಶಿಕ ವೀತರಾಗತೆಯಾಗುತ್ತದೆ ಮತ್ತು ಆಂಶಿಕ ರಾಗವಿರುತ್ತದೆ.

ತನ್ನನ್ನು ತಿಳಿದುಕೊಂಡರೆ ರಾಗವನ್ನು ತಿಳಿದುಕೊಳ್ಳುತ್ತಾನೆ, ಹೀಗೆ ತನ್ನನ್ನು ತಿಳಿದುಕೊಳ್ಳುವುದು ಅದು ನಿಶ್ಚಯವಿದೆ, ರಾಗವನ್ನು ಪರವೆಂದು ತಿಳಿದುಕೊಳ್ಳುವುದು ಅದು ವ್ಯವಹಾರವಿದೆ. ಈ ಪ್ರಕಾರ ನಿಶ್ಚಯ ಹಾಗೂ ವ್ಯವಹಾರವನ್ನು ಅವಿರೋಧರೂಪದಿಂದ ತಿಳಿದುಕೊಳ್ಳುವುದನ್ನು ೧೬೨ ನೇ ಗಾಥೆಯಲ್ಲಿ ತಿಳಿಸಿಕೊಡಲಾಗಿದೆ. ಸಮಸ್ತ ಶಾಸ್ತ್ರಗಳ ತಾತ್ಪರ್ಯವು ಒಂದು ವೀತರಾಗತೆಯಿದೆ.

**''ಭಾವಶ್ರುತಜ್ಞಾನವು ಐದು ಅಸ್ತಿಕಾಯಗಳನ್ನು ಸ್ವ-ಪರಪ್ರಕಾಶಕ ಸ್ವಭಾವದಿಂದ ತಿಳಿಯುತ್ತದೆ, ಆದರೆ ಅದು ಪದಾರ್ಥಗಳಿರುವುದರಿಂದ ತಿಳಿಯುತ್ತದೆಂಬುದಾಗಿಲ್ಲ.''**

ಪಂಚಾಸ್ತಿಕಾಯದ ವರ್ಣನೆ ಮಾಡುತ್ತ ಅನಂತ ಜೀವಗಳನ್ನು ಹೇಳಿದೆ ಅನಂತಾನಂತ ಪುದ್ಗಲಗಳಿವೆ, ಧರ್ಮ ಮತ್ತು ಅಧರ್ಮದ್ರವ್ಯಗಳು ಲೋಕಪ್ರಮಾಣ ಅರೂಪಿ ಪದಾರ್ಥವಿವೆ ಹಾಗೂ ಆಕಾಶವು ಸರ್ವವ್ಯಾಪಿಯಿದೆ ಮತ್ತು ಅರೂಪಿಯಿದೆ. ಆ ಪದಾರ್ಥಗಳು ಆತ್ಮನ ಜ್ಞಾನಮಾಡಿಕೊಳ್ಳುವಂತೆ ಆ ಪದಾರ್ಥಗಳ ಸ್ವಭಾವವಿಲ್ಲ. ಅದರಂತೆ ಆತ್ಮನ ಸ್ವಭಾವವೂ ಕೂಡ ಅವುಗಳ ಮೂಲಕ ಜ್ಞಾನಮಾಡಿಕೊಳ್ಳುವಂತಿಲ್ಲ. ಆದರೆ ಜೀವನು ಸ್ವಯಂ ಭಾವಶ್ರುತಜ್ಞಾನ ಪ್ರಕಟಮಾಡಿಕೊಂಡರೆ ಧರ್ಮ ಮೊದಲಾದ ದ್ರವ್ಯಗಳನ್ನು ಯಥಾರ್ಥರೀತಿಯಿಂದ ಪರೋಕ್ಷ ತಿಳಿಯುತ್ತಾನೆ ಮತ್ತು ಕೇವಲೀ ಭಗವಂತರು ಪ್ರತ್ಯಕ್ಷ ತಿಳಿಯುತ್ತಾರೆ ಹೀಗೆ ಐದರ ಸಮೂಹದಲ್ಲಿ ಪಂಚಾಸ್ತಿಕಾಯ ಹೇಳಿದೆ ಅದರ ಕಥನ ಶಬ್ದ ಸಮಯದಲ್ಲಿ ಹೇಳಲಾಗಿದೆ ಮತ್ತು ಆ ಶಬ್ದಸಮಯದ ಜ್ಞಾನವು ಆತ್ಮನ ಮೂಲಕ ಆಗುತ್ತದೆ. ರಾಗರಹಿತವಾಗಿ ಇಷ್ಟು ತಿಳಿದುಕೊಳ್ಳುವ ಸಾಮರ್ಥ್ಯವುಳ್ಳುದು ಜ್ಞಾನವಿದೆಯೆಂದು ಯಾರು ಸ್ವೀಕರಿಸಿಲ್ಲ ಅದರಂತೆ ಆರು ದ್ರವ್ಯಗಳ ಕಥನವನ್ನು

ಸ್ವೀಕರಿಸಿಲ್ಲ ಅವರ ಶಾಸ್ತ್ರ ಅಸತ್ಯ, ಪದಾರ್ಥಗಳು ಅಸತ್ಯ ಮತ್ತು ಜ್ಞಾನವೂ ಕೂಡ ಅಸತ್ಯವಿದೆ. ಆ ಪದಾರ್ಥಗಳಿಂದ ಜ್ಞಾನವಾಗುವುದಿಲ್ಲ ಆದರೆ ಆತ್ಮನು ರಾಗರಹಿತ ಜ್ಞಾನದ ಮೂಲಕ ಪದಾರ್ಥಗಳನ್ನು ತಿಳಿಯುತ್ತಾನೆ ಜ್ಞಾನಸಮಯ ಅಥವಾ ಶ್ರುತಜ್ಞಾನವು ಜೀವದ ಜ್ಞಾನಗುಣದ ಪರ್ಯಾಯವಿದೆ. ಆದರೆ ಆ ಜ್ಞಾನಸಮಯವು ಪದಾರ್ಥಗಳ ದ್ರವ್ಯ-ಗುಣ-ಪರ್ಯಾಯ ಈ ಮೂರನ್ನು ತಿಳಿಯುತ್ತದೆ.

**ಪ್ರತಿಯೊಂದು ದ್ರವ್ಯದ ಸಾಮಾನ್ಯ ಮತ್ತು ವಿಶೇಷ ಸತ್ತಾವು ತನ್ನಲ್ಲಿದೆ ಒಂದು ದ್ರವ್ಯದ ಸತ್ತಾ ಇನ್ನೊಂದು ದ್ರವ್ಯದ ಕಾರಣದಿಂದ ಇಲ್ಲ.**

ಈ ಪ್ರಕಾರ ಪ್ರತಿಯೊಂದು ಪದಾರ್ಥವು ತನ್ನ ಸಾಮಾನ್ಯ ಮತ್ತು ವಿಶೇಷ ಅಸ್ತಿತ್ವದಲ್ಲಿ ನಿಶ್ಚಿತವಿದೆ. ಅಸ್ತಿಕಾಯದ ಅಪೇಕ್ಷೆಯಿಂದ ಸಾಮಾನ್ಯತನವಿದೆ ಮತ್ತು ಜೀವ, ಪುದ್ಗಲ, ಧರ್ಮ, ಅಧರ್ಮ, ಆಕಾಶವೆಂದು ಬೇರೆ ಬೇರೆ ನಾಮದ ಅಪೇಕ್ಷೆಯಿಂದ ವಿಶೇಷತೆಯಿದೆ. ಮತ್ತು ಅದರಲ್ಲಿ ಕೂಡ ಪ್ರತಿಯೊಂದು ದ್ರವ್ಯದಲ್ಲಿ ಅದರೊಳಗೆ ತ್ರಿಕಾಲೀ ಅಸ್ತಿತ್ವ ಎಂದರೆ ಸಾಮಾನ್ಯ ಅಸ್ತಿತ್ವವಿದೆ. ಮತ್ತು ಸಮಯ ಸಮಯದ ವರ್ತಮಾನವು ಅದು ವಿಶೇಷ ಅಸ್ತಿತ್ವವಿದೆ. ಇದೇ ರೀತಿಯಿಂದ ಪ್ರತಿಯೊಂದು ಅಸ್ತಿಕಾಯವು ತನ್ನ ತ್ರಿಕಾಲಿತನದಲ್ಲಿ (ದ್ರವ್ಯ-ಗುಣದಲ್ಲಿ) ಮತ್ತು ವರ್ತಮಾನ (ಪರ್ಯಾಯ)ದಲ್ಲಿ ಎಂದರೆ ಸಾಮಾನ್ಯ-ವಿಶೇಷದಲ್ಲಿ ನಿಶ್ಚಿತವಿದೆ. ಯಾವ ಇನ್ನೊಂದು ದ್ರವ್ಯದ ಕಾರಣದಿಂದ ಇಲ್ಲ. ಹಾಗೂ ತನ್ನ ಸತ್ತಾದಿಂದ ಭಿನ್ನವಿಲ್ಲ, ಆದರೆ ಏಕಮೇಕವಿದೆ. ಜೀವದ ಪರ್ಯಾಯವು ಕರ್ಮದ ಕಾರಣದಿಂದ ಇದ್ದರೆ ಜೀವದ ವಿಶೇಷವು ಉಳಿಯುವುದಿಲ್ಲ. ಜೀವದ ಕಾರಣದಿಂದ ಶರೀರದ ಪರ್ಯಾಯವು ಇದ್ದರೆ ಜಡಪರಮಾಣುವಿನ ವಿಶೇಷವು ಉಳಿಯುವುದಿಲ್ಲ. ಪ್ರತಿಯೊಂದರ (ವರ್ತಮಾನ) ವಿಶೇಷ ಸತ್ತಾವು ತನ್ನಲ್ಲಿ ಅಭಿನ್ನವಿರುತ್ತದೆ. ಹೀಗೆ ಪ್ರತಿಯೊಂದು ಪದಾರ್ಥದ ಸಾಮಾನ್ಯ ಮತ್ತು ವಿಶೇಷ ಸತ್ತಾವು ತನ್ನಲ್ಲಿ ತನ್ನ ಕಾರಣದಿಂದ ಉಳಿದುಕೊಂಡಿರುತ್ತದೆ ಆದರೆ ಪರದ ಕಾರಣದಿಂದ ಇರುವುದಿಲ್ಲವೆಂದು ಭಾವಶ್ರುತಜ್ಞಾನವು ತಿಳಿಯುತ್ತದೆ.

**''ಜಗತ್ತಿನಲ್ಲಿ ಐದು ಅಸ್ತಿಕಾಯಗಳಿವೆ ಮತ್ತು ಅವೆಲ್ಲವನ್ನು ತಿಳಿದುಕೊಳ್ಳುವುದು ಜೀವದ ಸ್ವಭಾವವಿದೆ''**

ಆತ್ಮನದು ಜ್ಞಾನಸ್ವಭಾವವಿದೆ ಮತ್ತು ಅದು ಐದು ಅಸ್ತಿಕಾಯಗಳನ್ನು ತಿಳಿದುಕೊಳ್ಳುತ್ತದೆ ಆ ಪದಾರ್ಥಗಳಿರುವುದರಿಂದ ಜ್ಞಾನಮಾಡಿಕೊಳ್ಳುತ್ತಾನೆಂಬುದಾಗಿಲ್ಲ. ಆದರೆ ಆತ್ಮನ ಸ್ವ-ಪರಪ್ರಕಾಶಕ ಸ್ವಭಾವದ ಕಾರಣದಿಂದ ಐದೂ ಅಸ್ತಿಕಾಯಗಳು ತಿಳಿದುಬರುತ್ತವೆ. ಐದೂ ಇರುವಿಕೆಯ ಅಪೇಕ್ಷೆಯಿಂದ ಸಾಮಾನ್ಯವಿವೆ ಮತ್ತು ಪ್ರತಿಯೊಂದರ ಅಸ್ತಿತ್ವವು ಬೇರೆ ಬೇರೆಯಿದೆ ಅದು ವಿಶೇಷವಿದೆ. ಅದರಲ್ಲಿ ಕಾಯವು ಎಷ್ಟಿದೆ ಎಂಬುದರ ವರ್ಣನೆ ಮಾಡಲಾಗುವುದು.

೧) ಅನಂತ ಜೀವದ್ರವ್ಯಗಳಿಗೆ ಅವು ಆತ್ಮನ ಭಾವಶ್ರುತಜ್ಞಾನದ ಪರ್ಯಾಯದಲ್ಲಿ ತಿಳಿದುಬರುವಂತಿವೆ. ಅನಂತ ಸಿದ್ಧರು ಮತ್ತು ಕೇವಲಿಗಳು ಮೊದಲಾದ ಜೀವರುಗಳು ಅವರು ಅರ್ಥಸಮಯವಿದ್ದಾರೆ ಎಂದರೆ ಪದಾರ್ಥಗಳಿದ್ದಾರೆ ಅವರನ್ನು ತಿಳಿದುಕೊಳ್ಳುವ ಸಾಮರ್ಥ್ಯವು ಭಾವಶ್ರುತಜ್ಞಾನದ ಪರ್ಯಾಯದಲ್ಲಿ ಎಂದರೆ ಜ್ಞಾನಸಮಯದಲ್ಲಿ ಇರುವುದು. ಆ ಸಿದ್ಧರಿಂದ ಜ್ಞಾನವಾಗುವುದಿಲ್ಲ ಆದರೆ ತನ್ನ ಜ್ಞಾನಸ್ವಭಾವದ ಮೂಲಕ ಅನಂತ ಸಿದ್ಧರು ಹಾಗೂ ಅನಂತ ನಿಗೋದದ ಜೀವಗಳು ರಾಗರಹಿತತನದಿಂದ ತಿಳಿದುಬರುತ್ತವೆ.

೨) ಜೀವದ್ರವ್ಯಗಳಿಗಿಂತ ಅನಂತಗುಣಿತವಾಗಿ ಪುದ್ಗಲದ್ರವ್ಯಗಳಿವೆ ಒಂದು ಪರಮಾಣುವಿನಿಂದ ಹಿಡಿದು ಅನಂತ ಪೌದ್ಗಲಿಕ ಸ್ಕಂಧಗಳಿವೆ. ಅವುಗಳ ಮೂಲಕ ಜ್ಞಾನವಾಗುತ್ತದೆಂಬುದಾಗಿಲ್ಲ ಆದರೆ ಭಾವಶ್ರುತಜ್ಞಾನವು ಅವೆಲ್ಲವುಗಳನ್ನು ತಿಳಿದುಕೊಳ್ಳುತ್ತದೆ.

೩-೪) ಹದಿನಾಲ್ಕು ಬ್ರಹ್ಮಾಂಡದಲ್ಲಿ ಲೋಕಪ್ರಮಾಣ ಧರ್ಮ ಹಾಗೂ ಅಧರ್ಮ ದ್ರವ್ಯಗಳಿವೆ ಅವು ಪದಾರ್ಥಗಳಿವೆ, ಅದಕ್ಕಾಗಿ ಜ್ಞಾನವು ಅವನ್ನು ತಿಳಿಯುತ್ತದೆಂಬುದಾಗಿಲ್ಲ, ಆದರೆ ಜೀವವು ತನ್ನ ಸಾಮರ್ಥ್ಯದಿಂದ ಭಾವಶ್ರುತಜ್ಞಾನದ ಮೂಲಕ ಅವನ್ನು ತಿಳಿದುಕೊಳ್ಳುತ್ತದೆ.

೫) ಲೋಕಾಕಾಶ ಮತ್ತು ಅಲೋಕಾಕಾಶ ಸೇರಿ ಅಖಂಡ ಆಕಾಶದ್ರವ್ಯವಿದೆ. ಅದನ್ನು ಕೂಡ ಆತ್ಮನು ತಿಳಿದುಕೊಳ್ಳುತ್ತಾನೆ ಹೀಗೆ ಆತ್ಮನು ಐದು ಅಸ್ತಿಕಾಯಗಳನ್ನು ತಿಳಿದುಕೊಳ್ಳುತ್ತಾನೆ. ಕಾಲವು ಅಸ್ತಿಯಿದೆ, ಆದರೆ ಕಾಯವಿಲ್ಲ. ಹೀಗೆ ಕಾಲವು ಸೇರಿ ಆರು ದ್ರವ್ಯಗಳನ್ನು ತಿಳಿದುಕೊಳ್ಳುವ ಸ್ವಭಾವವು ಜ್ಞಾನದ್ದಿದೆ. ಇಷ್ಟು ದೊಡ್ಡ ಸ್ವಭಾವವನ್ನು ಒಪ್ಪಿಕೊಳ್ಳುವುದಿಲ್ಲ ಅಥವಾ ಅಲ್ಪ ತಿಳಿದುಕೊಳ್ಳುವ ಸಾಮರ್ಥ್ಯವುಳ್ಳವನೆಂದು ಮನ್ನಿಸಿದರೆ ಅಥವಾ ವಿಪರೀತ ತಿಳಿದುಕೊಳ್ಳುವವರೆಗೆ ನಿಜವಾದ ಜ್ಞಾನವಾಗುವುದಿಲ್ಲ ಮತ್ತು ನಿಜವಾದ ಜ್ಞಾನವಾಗದವರೆಗೆ ಧರ್ಮವು ಆಗುವುದಿಲ್ಲ.

**''ಪ್ರತಿಯೊಂದು ದ್ರವ್ಯವು ಉತ್ಪಾದ-ವ್ಯಯ-ಧ್ರುವರೂಪವಿದೆ, ಉತ್ಪಾದ-ವ್ಯಯ-ಧ್ರುವರೂಪವನ್ನು ಸತ್ತಾ ಅಥವಾ ಅಸ್ತಿತ್ವವೆಂದು ಹೇಳಲಾಗಿದೆ. ಪ್ರತಿಯೊಂದರ ಸತ್ತಾ ತನ್ನ ಕಾರಣದಿಂದ ಇದೆ ಪರದ್ರವ್ಯದ ಕಾರಣದಿಂದ ಇಲ್ಲ.''**

ಐದು ಅಸ್ತಿಕಾಯಗಳು ಮಹಾಸತ್ತಾರೂಪದಿಂದ ಇವೆ ಮತ್ತು 'ಇವೆ' ಯೆಂದು ಹೇಳಿದಮೇಲೆ ಐದು ಅಸ್ತಿಕಾಯಗಳು ಬಂದುಬಿಡುತ್ತವೆ ಆದರೆ 'ಇವೆ' ಯೆಂದು ಹೇಳಿರುವುದರಿಂದ ಎಲ್ಲವೂ ಸೇರಿ ಒಂದೇ ಆಗಿ ಹೋಗುತ್ತವೆಯೆಂಬುದಾಗಿಲ್ಲ. ಒಂದರ ಸತ್ತಾ ಇನ್ನೊಂದರಲ್ಲಿ ಸೇರುವುದಿಲ್ಲ. ಪ್ರತಿಯೊಂದು ಪದಾರ್ಥವು ತನ್ನ ಸತ್ತಾ ಭಿನ್ನವಾಗಿ ತಿಳಿದುಕೊಂಡು ಬಿಟ್ಟಿದೆ ಪ್ರತಿಯೊಂದು ದ್ರವ್ಯವು ಸಾಮಾನ್ಯ ಮತ್ತು ವಿಶೇಷ ಅಸ್ತಿತ್ವದಲ್ಲಿ ನಿಶ್ಚಿತವಿದೆ. ಅದು ತನ್ನ ಸತ್ತಾದಿಂದ ಬೇರೆಯಿಲ್ಲ. ಸತ್ತಾ ಮತ್ತು ಸತ್ತಾವುಳ್ಳದು ಅಭೇದವಿದೆ, ಭೇದವಿಲ್ಲ. ಪ್ರತಿಯೊಂದು ಪರಮಾಣುವು ಒಂದು ಸಮಯದಲ್ಲಿ ತನ್ನ ಉತ್ಪಾದ-ವ್ಯಯ-ಧ್ರುವರೂಪದ ಸತ್ತಾಮಯವಿದೆ. ಉತ್ಪಾದ ಎಂದರೆ ನವೀನ ಅವಸ್ಥೆಯ ತನದಿಂದ ಉತ್ಪನ್ನವಾಗುವುದು ಮತ್ತು ವ್ಯಯ ಎಂದರೆ ಪೂರ್ವ ಅವಸ್ಥೆಯ ನಾಶವಾಗುವುದು ಮತ್ತು ಧ್ರುವ ಎಂದರೆ ಯಾವಾಗಲೂ ಇರುವುದು, ಸದೃಶರೂಪದಿಂದ ಇರುವುದು, ಹೀಗೆ ಮೂರು ಒಂದಾಗಿ ವಸ್ತುವಿದೆ. ಒಂದು ಜೀವದಲ್ಲಿನ ಉತ್ಪಾದ-ವ್ಯಯ-ಧ್ರುವವು ಇನ್ನೊಂದು ಜೀವದ ಅಥವಾ ಪರಮಾಣುವಿನ ಉತ್ಪಾದ-ವ್ಯಯ-ಧ್ರುವದ ಕಾರಣದಿಂದ ಇಲ್ಲ, ಮತ್ತು ಪರಮಾಣುವಿನ ಉತ್ಪಾದ-ವ್ಯಯ-ಧ್ರುವವು ಜೀವದ ಉತ್ಪಾದ-ವ್ಯಯ-ಧ್ರುವದ ಕಾರಣದಿಂದ ಇಲ್ಲ ಯಾವುದೇ ಪದಾರ್ಥವು ತನ್ನ ಸತ್ತಾವನ್ನು ಬಿಟ್ಟುಕೊಟ್ಟು ಇನ್ನೊಂದರ ಸತ್ತಾವನ್ನು ತಡೆಯುವುದಿಲ್ಲ ಆತ್ಮನಲ್ಲಿ ಅನಂತ ಗುಣಗಳ ಅವಸ್ಥೆಯು ಒಂದು ಸಮಯದಲ್ಲಿ ಉತ್ಪಾದವು ಆಗುತ್ತದೆ ಮತ್ತು ಒಂದು ಸಮಯದಲ್ಲಿ ವ್ಯಯವಾಗುತ್ತದೆ ಮತ್ತು ತಾನು ಧ್ರುವರೂಪದಿಂದ ಯಾವಾಗಲೂ ಉಳಿಯುತ್ತದೆ. ಹೀಗಿರುವುದರಿಂದ ಓರ್ವ ಆತ್ಮನು ಇನ್ನೊರ್ವ ಆತ್ಮನ ಅಥವಾ ಶರೀರ ಇತ್ಯಾದಿ ಜಡದಲ್ಲಿ ಏನಾದರೂ ಮಾಡಿಬಿಡುತ್ತಾನೆಂಬುದು ಸಂಭವನೀಯವಿಲ್ಲ ಒಂದರ ಇರುವಿಕೆಯು ಇನ್ನೊಂದರ ಕಾರಣದಿಂದ ಇಲ್ಲ. ಹೀಗಿರುವುದರಿಂದ ನಾನಿದ್ದೇನೆಂದರೆ ಇತರ ಮನುಷ್ಯರು ತಿಳಿಯುತ್ತಾರೆ, ನಾನಿದ್ದೇನೆಂದರೆ ಇನ್ನೋರ್ವನು ಭಯಪಡುತ್ತಾನೆ, ಇನ್ನೋರ್ವನ ಕಾರಣದಿಂದ ನಾನು ಭಯಪಡುವೆನು, ನಾನಿದ್ದೇನೆಂದರೆ ಪುತ್ರನು ಮನ್ನಿಸುವನೆಂಬ ಮಾತು ಉಳಿಯುವುದಿಲ್ಲ. ಏಕೆಂದರೆ ಪದಾರ್ಥವು ತನ್ನ ಉತ್ಪಾದ-ವ್ಯಯ-ಧ್ರುವ ಸ್ವಭಾವದಿಂದ ಸ್ಥಿರವಾಗಿ ಉಳಿದುಕೊಂಡಿದೆ.

೧) ಎಲ್ಲ ಪದಾರ್ಥಗಳಿರುವ ಅಪೇಕ್ಷೆಯಿಂದ ಎಲ್ಲವುಗಳಲ್ಲಿ ಸಾಮಾನ್ಯತನವಿದೆ ಮತ್ತು ಪ್ರತಿಯೊಂದು ಬೇರೆ ಬೇರೆ ಕೂಡ ಇವೆ, ಅದು ವಿಶೇಷವಿದೆ.

೨) ಪ್ರತಿಯೊಂದು ದ್ರವ್ಯದಲ್ಲಿ ತ್ರಿಕಾಲೀ ಇರುವಿಕೆಯು ಅದು ಸಾಮಾನ್ಯವಿದೆ ಮತ್ತು ವರ್ತಮಾನವು ಅದು ವಿಶೇಷವಿದೆ ಅಥವಾ ಧ್ರುವತನವು ಅದು ಸಾಮಾನ್ಯವಿದೆ ಮತ್ತು ಉತ್ಪಾದ-ವ್ಯಯತನವು ಅದು ವಿಶೇಷವಿದೆ. ಹೀಗೆ ಪ್ರತಿಯೊಂದು ಪ್ರದಾರ್ಥವು ತನ್ನ ಸತ್ತಾ-ಸಾಮಾನ್ಯ ಮತ್ತು ವಿಶೇಷದಿಂದ ಬೇರೆಯಿಲ್ಲ.

ಯಾವುದು ಉತ್ಪಾದ-ವ್ಯಯರೂಪವಿದೆ ಅದು ಸತ್ತಾಯಿದೆ ಮತ್ತು ಯಾವುದು ಸತ್ತಾಯಿದೆ ಅದನ್ನು ಅಸ್ತಿತ್ವವೆಂದು ಹೇಳುತ್ತಾರೆ ಮತ್ತು ಯಾವುದು ಅಸ್ತಿತ್ವವಿದೆ ಅದು ಸಾಮಾನ್ಯ ಮತ್ತು ವಿಶೇಷಾತ್ಮಕವಿದೆ. ಐದು ಅಸ್ತಿಕಾಯಗಳು ತಮ್ಮ ತಮ್ಮ ಅಸ್ತಿತ್ವದಲ್ಲಿವೆ. ಯಾವ ಅಸ್ತಿತ್ವವಿದೆ ಅದು ತನ್ನ ದ್ರವ್ಯದಿಂದ ಅಭೇದರೂಪವಿದೆ. ಪ್ರತಿಯೊಂದು ವಸ್ತುವಿನ ಇರುವಿಕೆಯು ಅದು ವಸ್ತುವಿನಿಂದ ಬೇರೆಯಿಲ್ಲ, ಸಕ್ಕರೆಯ ಪ್ರದೇಶಗಳು ಸಕ್ಕರೆಯಿಂದ ಬೇರೆಯಿಲ್ಲ, ಕರ್ಮದ ಪರಮಾಣುವು ತನ್ನ ದ್ರವ್ಯದಿಂದ ಬೇರೆಯಿಲ್ಲ - ಏಕಮೇಕವಿವೆ ಆದರೆ ಅದು ಆತ್ಮನಿಂದ ಬೇರೆಯಿದೆ. ಕರ್ಮ ಮತ್ತು ಆತ್ಮನು ನೀರ-ಕ್ಷೀರದ ತೆರದಲ್ಲಿ ಏಕವಿದೆಯೆಂದು ಹೇಳಿದೆಯೆಲ್ಲವೇನು ? - ಎಂದು ಯಾರಾದರೂ ಕೇಳಿದರೆ ಅವರಿಗೆ ಹೀಗೆ ಹೇಳಲಾಗುತ್ತದೆ ಹಾಲು ಮತ್ತು ನೀರು ಏಕತ್ರವೆಂದು ಹೇಳಿದರೂ ಕೂಡ ಹಾಲು ಮತ್ತು ನೀರು ಇವೆರಡೂ ಭಿನ್ನವಸ್ತುಗಳಿವೆ. ಅದರಂತೆ ಮೂರ್ತ ಕರ್ಮ ಮತ್ತು ಅಮೂರ್ತ ಆತ್ಮ ಇವು ಏಕಕ್ಷೇತ್ರದಲ್ಲಿವೆಯೆಂದು ಹೇಳಿದರೂಕೂಡ ಎರಡೂ ಬೇರೆ ಬೇರೆಯಿವೆ. ಕರ್ಮದ ಉತ್ಪಾದವು ಕರ್ಮದ ಪರಮಾಣುವಿನ ಸಾಮಾನ್ಯದ ಕಾರಣದಿಂದ ಇದೆ, ಅದು ಆತ್ಮನ ಕಾರಣದಿಂದ ಇಲ್ಲ. ಆತ್ಮನಲ್ಲಿ ವಿಕಾರದ ಉತ್ಪಾದವು ಆತ್ಮನ ಕಾರಣದಿಂದ ಇದೆ, ಕರ್ಮದ ಉತ್ಪಾದದ ಕಾರಣದಿಂದ ಇಲ್ಲ. ಹೀಗೆ ನಿಜವಾಗಿ ತಿಳಿದುಕೊಂಡರೆ ಶಾಂತಿಯಾಗುವುದು.

**''ಸತ್ತಾ ಗುಣವು ತನ್ನ ದ್ರವ್ಯದಿಂದ ಭಿನ್ನವಿಲ್ಲ, ಆದರೆ ಸತ್ತಾ ಮತ್ತು ಸತ್ತಾವುಳ್ಳುದು ಅಭಿನ್ನವಿವೆ.''**

ಈ ಪ್ರಕಾರ ಪ್ರತಿಯೊಂದು ವಸ್ತುವಿನ ಸತ್ತಾ ತನ್ನಿಂದ ಅಭೇದವಿದೆ, ಆದರೆ ಯಾವುದೇ ಒಂದು ಪಾತ್ರೆಯಲ್ಲಿ ಯಾವುದೇ ಒಂದು ವಸ್ತುವನ್ನು ಇರಿಸಿದ ತೆರದಲ್ಲಿ ಇರುವುದಿಲ್ಲ. ತಟ್ಟೆಯಲ್ಲಿ ಉಂಡೆಗಳನ್ನು ಇಟ್ಟಿರುವ ಹಾಗೆ, ಡಬ್ಬದಲ್ಲಿ ಎಣ್ಣೆ ತುಂಬಿರುವ ಹಾಗೆ ದ್ರವ್ಯದಲ್ಲಿ ಸತ್ತಾ ಗುಣವು ವಾಸಮಾಡಿಕೊಂಡಿದೆಯೆನ್ನುವಂತಿಲ್ಲ. ಆದರೆ ಎಣ್ಣೆಯ ಸ್ನಿಗ್ಧತೆ ಮತ್ತು ಎಣ್ಣೆ ಹೇಗೆ ವಾಸಮಾಡಿವೆ ಹಾಗೆ ದ್ರವ್ಯ ಮತ್ತು ಅದರ ಸತ್ತಾ ಇರುತ್ತವೆ. ಅಥವಾ ಕೊಡದಲ್ಲಿ ರೂಪು ಇದೆ ಅದರ ಸ್ಪರ್ಶ, ರಸ, ಗಂಧ, ವರ್ಣ ಇವು ಕೊಡದಿಂದ ಬೇರೆಯಿಲ್ಲ. ಯಾವ ಪ್ರಕಾರ ಅಗ್ನಿ ಮತ್ತು ಉಷ್ಣತೆ ಏಕವಿವೆ-ಬೇರೆಯಿಲ್ಲ ಅದೇ ಪ್ರಕಾರ ಆತ್ಮ ಮತ್ತು ಅವನ ಸತ್ತಾಗುಣ ಬೇರೆಯಿಲ್ಲ, ಆದರೆ ಏಕಮೇಕವಿವೆ. ಆತ್ಮನು ಒಂದು ಮಗ್ಗಲು ಇರುವನು ಮತ್ತು ಅವನ ಸತ್ತಾ ಬೇರೆ ಕಡೆಯಲ್ಲಿ ಉಳಿದುಬಿಡುವಂತೆ ಸಂಭವಿಸುವುದಿಲ್ಲ. ಸತ್ತಾ ಹಾಗೂ ದ್ರವ್ಯದಲ್ಲಿ ಸಂಜ್ಞೆ, ಸಂಖ್ಯೆ ಮತ್ತು ಲಕ್ಷಣ ಭೇದದಿಂದ ಭೇದವಿದ್ದರೂ ಕೂಡ ಪ್ರದೇಶ ಭೇದದಿಂದ ಭೇದವಿಲ್ಲ. ಸತ್ತಾ ಮತ್ತು ದ್ರವ್ಯ ಅಭೇದವಿದೆ.

**''ಶ್ರುತಜ್ಞಾನದಲ್ಲಿ ನಯವಾಗುತ್ತವೆ ಅದರಲ್ಲಿ ದ್ರವ್ಯಾರ್ಥಿಕನಯ ಹಾಗೂ ಪರ್ಯಾಯಾರ್ಥಿಕನಯವೆಂದು ಎರಡು ಪ್ರಕಾರವಿವೆ.''**

ಜಿನೇಂದ್ರ ಭಗವಂತರು ಎರಡು ನಯ ಹೇಳಿದ್ದಾರೆ. ನಯ ಎಂದರೆ ಶ್ರುತಜ್ಞಾನದ ಪಕ್ಷವಿವೆ. ಜ್ಞಾನಗುಣವು ತ್ರಿಕಾಲವಿದೆ, ಶ್ರುತಜ್ಞಾನವು ಅದರ ಒಂದು ಪರ್ಯಾಯವಿದೆ. ಅದರಲ್ಲಿ ಎರಡು ಅಂಶಗಳಾಗುತ್ತವೆ, ಅವನ್ನು ನಯವೆಂದು ಹೇಳುತ್ತಾರೆ.

**ಮತಿಜ್ಞಾನವು ವರ್ತಮಾನಕಾಲದ ಜ್ಞಾನವಿದೆ, ಅದು ತ್ರಿಕಾಲವನ್ನು ತಿಳಿಯುವುದಿಲ್ಲ. ಶ್ರುತಜ್ಞಾನವು ತ್ರಿಕಾಲವನ್ನು ತಿಳಿಯುತ್ತದೆ, ಮತಿಜ್ಞಾನದಲ್ಲಿ ಅಂಥ ಸಾಮರ್ಥ್ಯವಿಲ್ಲ ಅದರಿಂದ ಮತಿಜ್ಞಾನದಲ್ಲಿ ನಯಗಳಾಗುವುದಿಲ್ಲ ಆದರೆ ಶ್ರುತಜ್ಞಾನದಲ್ಲಿ ತ್ರಿಕಾಲೀ ವಿಷಯವನ್ನು ತಿಳಿದುಕೊಳ್ಳುವ ಸಾಮರ್ಥ್ಯವಿರುವುದರಿಂದ ನಯಗಳಾಗುತ್ತವೆ. ಮತ್ತು**

ನಯವು ಪರೋಕ್ಷ ಜ್ಞಾನವಿದೆ ಹಾಗೂ ಅವಧಿ-ಮನಃಪರ್ಯಯ ಜ್ಞಾನಗಳು ಆಂಶಿಕ ಪ್ರತ್ಯಕ್ಷವಿವೆ ಮತ್ತು ಕೇವಲಜ್ಞಾನವು ಸಕಲ ಪ್ರತ್ಯಕ್ಷವಿದೆ. ಪ್ರತ್ಯಕ್ಷ ಜ್ಞಾನದ ಭಾಗವು ಪರೋಕ್ಷವಿರುವ ಸಾಧ್ಯತೆಯಿಲ್ಲದಿರುವುದರಿಂದ ಆ ಮೂರು ಜ್ಞಾನಗಳಲ್ಲಿ ಕೂಡ ನಯಗಳಾಗುವುದಿಲ್ಲ. ಕೇವಲ ಒಂದು ಶ್ರುತಜ್ಞಾನದಲ್ಲಿ ನಯಗಳಾಗುತ್ತವೆ.

**ಆತ್ಮನು ರಾಗರಹಿತನಿದ್ದಾನೆಂದು ಅಂತರ್ಯದಲ್ಲಿ ನಿರ್ಣಯಮಾಡಿದಮೇಲೆ ಯಾವ ಭಾವಶ್ರುತಜ್ಞಾನವು ಪ್ರಕಟವಾಗುತ್ತದೆ** ಅದರಲ್ಲಿ ಒಂದು ದ್ರವ್ಯಾರ್ಥಿಕನಯ ಮತ್ತು ಇನ್ನೊಂದು ಪರ್ಯಾಯಾರ್ಥಿಕನಯವೆಂದು ಎರಡು ನಯಗಳಾಗುತ್ತವೆ.

**ದ್ರವ್ಯಾರ್ಥಿಕನಯ** :-ದ್ರವ್ಯ ಸಾಮಾನ್ಯ, ಆರ್ಥಿಕ=ಯಾವುದರ ಪ್ರಯೋಜನವು, ಎಂದರೆ ಯಾವ ಜ್ಞಾನದ ಅಂಶದ ಪ್ರಯೋಜನವು ಆತ್ಮ ಅಥವಾ ಪರಮಾಣುವಿನ ಸಾಮಾನ್ಯವನ್ನು ಎಂದರೆ ತ್ರಿಕಾಲೀ ಶಕ್ತಿಯನ್ನು ಲಕ್ಷ್ಯದಲ್ಲಿ ತಂದುಕೊಳ್ಳುವುದಿದೆ ಆ ಜ್ಞಾನದ ಅಂಶವನ್ನು ದ್ರವ್ಯಾರ್ಥಿಕನಯವೆಂದು ಹೇಳುತ್ತಾರೆ.

**ಪರ್ಯಾಯಾರ್ಥಿಕನಯ** :- ಪರ್ಯಾಯ = ವರ್ತಮಾನ ಅವಸ್ಥೆ, ಆರ್ಥಿಕ = ಯಾವುದರ ಪ್ರಯೋಜನವು, ಎಂದರೆ ಯಾವ ಜ್ಞಾನದ ಅಂಶದ ಪ್ರಯೋಜನವು ಆತ್ಮ ಅಥವಾ ಪರಮಾಣುವಿನ ವರ್ತಮಾನ ಪರ್ಯಾಯವನ್ನು ಲಕ್ಷ್ಯದಲ್ಲಿ ತಂದುಕೊಳ್ಳುವುದಿದೆ ಆ ಜ್ಞಾನದ ಅಂಶವನ್ನು ಪರ್ಯಾಯಾರ್ಥಿಕನಯವೆಂದು ಹೇಳುತ್ತಾರೆ.

**''ಓರ್ವ ಜೀವನ ಒಂದು ಅಂಶವನ್ನು ಏಕಾಂತವೆಂದು ಮನ್ನಿಸಿದರೆ ಅವನ ಜ್ಞಾನವು ನಿಜವಿಲ್ಲ.''**

ಅಜ್ಞಾನೀಜೀವರುಗಳಿಗೆ ನಯಗಳ ಸ್ವರೂಪದ ಅರಿವಿಲ್ಲ ಎಂದರೆ ಅವರು ನನ್ನಿಂದ ಪರರ ಕಾರ್ಯವಾಗುತ್ತದೆ ಮತ್ತು ಪರದಿಂದ ನನ್ನಲ್ಲಿ ಕಾರ್ಯವಾಗುತ್ತದೆಂಬ ಭ್ರಾಂತಿಯುಳ್ಳವರಿದ್ದಾರೆ, ಶಾಸ್ತ್ರದಲ್ಲಿ ಎರಡು ನಯಗಳ ಕಥನ ಬರುತ್ತದೆ ಅವರು ಅದರೊಳಗಿಂದ ಒಂದು ನಯ ಮನ್ನಿಸದಿದ್ದರೆ ತತ್ತ್ವವನ್ನು ಸರಿಯಾಗಿ ತಿಳಿದನೆಂದು ಹೇಳುವ ಸಾಧ್ಯತೆಯಿಲ್ಲ. ಏಕೆಂದರೆ ಯಾವುದೇ ಜೀವನು ಸಾಮಾನ್ಯ ಸದೃಶ್ಯ ಸ್ವಭಾವವೊಂದನ್ನೇ ಲಕ್ಷ್ಯದಲ್ಲಿ ತಂದುಕೊಂಡರೆ ಆತ್ಮನನ್ನು ಏಕಾಂತ ಕೂಟಸ್ಥ ಮನ್ನಿಸಿದರೆ ಮತ್ತು ಇನ್ನೊಂದು ಪರಿಣಮನದ ಎಂದರೆ ಬದಲಾಗುವ ಅಂಶವನ್ನು ಲಕ್ಷ್ಯದಲ್ಲಿ ತಂದುಕೊಳ್ಳದಿದ್ದರೆ ಅವನ ಜ್ಞಾನವು ನಿಜವಿರುವುದಿಲ್ಲ ಮತ್ತು ಯಾವುದೇ ಜೀವನು ಅನಿತ್ಯ-ಕ್ಷಣಿಕಪಕ್ಷ ಎಂದರೆ ಪರ್ಯಾಯವೊಂದನ್ನೇ ಲಕ್ಷ್ಯದಲ್ಲಿ ತಂದುಕೊಳ್ಳುವುದು ಆದರೆ ಧ್ರುವವಿರುವಂಥ ಪದಾರ್ಥವನ್ನು - ಸಾಮಾನ್ಯ ಸ್ವಭಾವವನ್ನು ಲಕ್ಷ್ಯದಲ್ಲಿ ತಂದುಕೊಳ್ಳದಿದ್ದರೆ ಅವನ ಜ್ಞಾನವು ಕೂಡ ನಿಜವಿರುವುದಿಲ್ಲ. ಆದರೆ ಉತ್ಪಾದ-ವ್ಯಯ ಅದು ಪರ್ಯಾಯ, ಧ್ರುವ ಅದು ಸಾಮಾನ್ಯವೆಂದು ಲಕ್ಷ್ಯದಲ್ಲಿ ತಂದುಕೊಂಡರೆ ಪೂರ್ಣ ವಸ್ತುವು ಲಕ್ಷ್ಯದಲ್ಲಿ ಬಂದುಬಿಡುವುದು.

**''ದ್ರವ್ಯಾರ್ಥಿಕನಯದಿಂದ ಪ್ರತಿಯೊಂದು ದ್ರವ್ಯವು ತನ್ನ ಸತ್ತಾಗುಣದಿಂದ ಅಭೇದವಿದೆ ಮತ್ತು ಗುಣಭೇದದ ಅಪೇಕ್ಷೆಯಿಂದ ಅನೇಕವಿದೆ, ಭೇದಸ್ವರೂಪವಿದೆ.''**

ಆತ್ಮ ಮತ್ತು ಪರಮಾಣುವಿನಲ್ಲಿ ಇರುವಿಕೆಯ ಗುಣವಿದೆ ಆ ಗುಣವು ಗುಣಿಯಿಂದ ಅಭೇದವಿದೆ (ಇಲ್ಲಿ ಆತ್ಮ ಮತ್ತು ಪುದ್ಗಲದ್ರವ್ಯದ ಉದಾಹರಣೆ ಕೊಟ್ಟಿದ್ದಾರೆ, ಉಳಿದ ನಾಲ್ಕು ದ್ರವ್ಯಗಳಲ್ಲಿ ಕೂಡ ಹೀಗೆ ತಿಳಿದುಕೊಳ್ಳುವುದು.) ಸತ್ತಾಗುಣ ಮತ್ತು ಸತ್ತಾವುಳ್ಳ ದ್ರವ್ಯವು ಅಭೇದವಿದೆ, ಪ್ರದೇಶದಿಂದ ಭೇದವಿದೆಯೆಂದು ದ್ರವ್ಯಾರ್ಥಿಕನಯದಿಂದ ತಿಳಿದುಕೊಳ್ಳುವುದರಲ್ಲಿ ಬರುತ್ತದೆ. ಮತ್ತು ಪರ್ಯಾಯಾರ್ಥಿಕನಯದಿಂದ ನೋಡಹೋದರೆ ಗುಣ ಮತ್ತು ಗುಣಿಯ ಭೇದವಿದೆ.

ದ್ರವ್ಯಾರ್ಥಿಕನಯದಿಂದ ತನ್ನ ಜತೆಯಲ್ಲಿ ಸಂಬಂಧವಿರಿಸುವುದು ಆ ಪರ್ಯಾಯಾರ್ಥಿಕನಯದಿಂದ ಪರದ ಜೊತೆಯಲ್ಲಿ ಸಂಬಂಧವಿರಿಸುವುದೆಂಬುದಾಗಿಲ್ಲ. ಇಲ್ಲಿಯಂತೂ ಎರಡೂ ನಯಗಳನ್ನು ತನ್ನಲ್ಲಿ ಅನ್ವಯಿಸಿಕೊಂಡಿದೆ.

ಆತ್ಮ ಮತ್ತು ಅವನ ಸತ್ತಾಗುಣವನ್ನು ಅಭೇದದಿಂದ ನೋಡಿದರೆ ಏಕನಿದ್ದಾನೆ ಮತ್ತು ಗುಣ-ಗುಣಿಯ ಭೇದದಿಂದ ಅಥವಾ ಪರ್ಯಾಯಗಳಿಂದ ಅನೇಕನಿದ್ದಾನೆ. ಪರಮಾಣು ಮತ್ತು ಅದರ ಸತ್ತಾಗುಣವನ್ನು ಅಭೇದ ದೃಷ್ಟಿಯಿಂದ ನೋಡಿದರೆ ಏಕವಿದೆ ಮತ್ತು ಭೇದ ದೃಷ್ಟಿಯಿಂದ ನೋಡಿದರೆ ಗುಣಗಳು ಮತ್ತು ಪರ್ಯಾಯಗಳು ಅನೇಕವಿವೆ.

ಆತ್ಮ ಮತ್ತು ಪರಮಾಣುವಂತೂ ಮೂರು ಕಾಲದಲ್ಲಿ ಭೇದಸ್ವರೂಪವಿವೆ ಈ ಭೇದ-ಅಭೇದವನ್ನಂತೂ ತನ್ನಲ್ಲಿ ಇಳಿಸಲಾಗಿದೆ. ಈ ಪ್ರಕಾರ ಪ್ರತಿಯೊಂದು ಅಸ್ತಿಕಾಯವು ತನ್ನ ಸತ್ತಾದಿಂದ ಅಭಿನ್ನವಿದೆ.

**''ಜೀವ, ಧರ್ಮ, ಅಧರ್ಮ, ಆಕಾಶ-ಈ ನಾಲ್ಕು ಅಸ್ತಿಕಾಯಗಳು ಅಖಂಡಕಾಯರೂಪವಿವೆ.''**

ಮತ್ತು ಐದು ಅಸ್ತಿಕಾಯಗಳು ಅನೇಕ ಪ್ರದೇಶಿಯಿವೆ. ಆತ್ಮ, ಧರ್ಮ, ಅಧರ್ಮ, ಆಕಾಶ ಇವು ಅಮೂರ್ತಿಕ ಅನೇಕ ಪ್ರದೇಶಿಯಿವೆ ಮತ್ತು ಪುದ್ಗಲವು ಅದು ಮೂರ್ತಿಕವಿದೆ. ಬಹಳಷ್ಟು ಪರಮಾಣುಗಳು ಏಕತ್ರವಾಗಿ ಸ್ಕಂಧರೂಪವಾಗುವ ಯೋಗ್ಯತೆಯಿದೆ ಆದುದರಿಂದ ಪುದ್ಗಲವು ಕೂಡ ಮೂರ್ತಿಕ ಅನೇಕಪ್ರದೇಶಿಯಿದೆ. ಪ್ರದೇಶ ಎಂದರೆ ಚಿಕ್ಕದರಲ್ಲಿ ಚಿಕ್ಕ ಕ್ಷೇತ್ರವು. ಒಂದು ಪರಮಾಣುವು ಆಕಾಶದ ಎಷ್ಟು ಸ್ಥಳದಲ್ಲಿ ನಿಲ್ಲುವುದು ಅದನ್ನು ಪ್ರದೇಶವೆಂದು ಹೇಳುತ್ತಾರೆ.

**ಭಾವಾರ್ಥ :-** ಮೊದಲು ಐದು ದ್ರವ್ಯಗಳನ್ನು ಅಸ್ತಿರೂಪವೆಂದು ಸಿದ್ಧಮಾಡಿತು. ಈಗ ಕಾಯವುಳ್ಳವು ಕೂಡ ಇವೆ ಎಂದರೆ ಪ್ರದೇಶವುಳ್ಳವುಗಳಿವೆಯೆಂದು ತಿಳಿಸುತ್ತಾರೆ. ಜೀವ, ಧರ್ಮ, ಅಧರ್ಮಗಳು ಅಸಂಖ್ಯ ಪ್ರದೇಶಿಯಿವೆ-ಪ್ರದೇಶದಿಂದ ಸಮಾನವಿವೆ, ಆದರೆ ಕ್ಷೇತ್ರದಿಂದ ಸಮಾನವಿಲ್ಲ. ಧರ್ಮ-ಅಧರ್ಮಗಳು ಲೋಕದ ಕ್ಷೇತ್ರ ಪ್ರಮಾಣದಷ್ಟಿವೆ ಮತ್ತು ಜೀವವು ತನ್ನ ಶರೀರ ಪ್ರಮಾಣ ಕ್ಷೇತ್ರದಲ್ಲಿದೆ ಮತ್ತು ಕೇವಲೀ ಸಮುದ್ಘಾತದ ಸಮಯದಲ್ಲಿ ಲೋಕಪ್ರಮಾಣವಿದೆ. ಆಕಾಶವು ಅನಂತ ಪ್ರದೇಶಿಯಿದೆ. ಹೇಗೆ ಶರೀರವು ಅಂಗೀ-ಅವಯವಿಯಿದೆ ಮತ್ತು ಕೈ, ಕಾಲು, ಮುಖ ಇತ್ಯಾದಿ ಅದರ ಅವಯವವಿವೆ ಹಾಗೆ (ಪ್ರತಿಯೊಬ್ಬ) ಆತ್ಮನು ದ್ರವ್ಯದಿಂದ ಏಕ ಮತ್ತು ಅವನ ಪ್ರದೇಶಗಳು ಅಸಂಖ್ಯವಿವೆ. ಧರ್ಮದ್ರವ್ಯವು ದ್ರವ್ಯದಿಂದ ಏಕ ಮತ್ತು ಅದರ ಪ್ರದೇಶಗಳು ಅಸಂಖ್ಯವಿವೆ. ಇನ್ನು ಅಧರ್ಮದ್ರವ್ಯವು ದ್ರವ್ಯದಿಂದ ಏಕ ಮತ್ತು ಅದರ ಪ್ರದೇಶಗಳು ಅಸಂಖ್ಯವಿವೆ, ಆಕಾಶವು ದ್ರವ್ಯದಿಂದ ಏಕ ಮತ್ತು ಅದರ ಪ್ರದೇಶಗಳು ಅನಂತವಿವೆ, ಹೇಗೆ ಶರೀರಕ್ಕೆ ಕೈ, ಕಾಲು ಇತ್ಯಾದಿ ಅವಯವಗಳಿರುವುದರಿಂದ ಶರೀರವನ್ನು ಕಾಯವೆಂದು ಹೇಳಿದೆ ಹಾಗೆ ಆತ್ಮ ಮೊದಲಾದುವುಕ್ಕೆ ಅನೇಕ ಪ್ರದೇಶಗಳಿರುವುದರಿಂದ ಕಾಯವೆಂದು ಹೇಳಿದೆ. ನಾಲ್ಕು ದ್ರವ್ಯಗಳು ಅಖಂಡಕಾಯವುಳ್ಳವಿವೆ ಅದರಲ್ಲಿ ಯಾವುದಕ್ಕೆ ಎಷ್ಟು ಪ್ರದೇಶಗಳಿವೆ ಅವುಗಳಿಂದ ತಿಳಿದುಕೊಳ್ಳುವುದಾಗುವುದಿಲ್ಲ.

**''ಪರಮಾಣುವಿನಲ್ಲಿ ಸ್ಕಂಧರೂಪವಾಗುವ ಯೋಗ್ಯತೆಯಿರುವುದರಿಂದ ಅದನ್ನು ಕೂಡ ಅಸ್ತಿಕಾಯವೆಂದು ಹೇಳಿದೆ.''**

ಏಕೆಂದರೆ ಪುದ್ಗಲಪರಮಾಣುವು ಏಕಪ್ರದೇಶಿಯಿದ್ದರೂ ಕೂಡ ಅದರಲ್ಲಿ ಸ್ನಿಗ್ಧ ಶಕ್ತಿಯಿದೆ ಎಂದರೆ ಸ್ಕಂಧರೂಪವಾಗುವ ಯೋಗ್ಯತೆಯಿದೆ ಎರಡು ಅಂಶದ ಸ್ಕಂಧದಿಂದ ಹಿಡಿದು ಅನಂತ ಪರಮಾಣುಗಳ ಸ್ಕಂಧವಾಗುವ ಸಾಧ್ಯತೆಯಿರುವುದರಿಂದ ಪುದ್ಗಲದ್ರವ್ಯವು ಕಾಯವುಳ್ಳದು ಎಂದರೆ ಪ್ರದೇಶವುಳ್ಳದೆಂದು ಕರೆಸಿಕೊಳ್ಳುತ್ತದೆ. ಕಾಲದಲ್ಲಿ ಸ್ಪರ್ಶಗುಣವಿಲ್ಲದಿರುವುದರಿಂದ ಅದರಲ್ಲಿ ಸ್ನಿಗ್ಧಶಕ್ತಿಯಿಲ್ಲ ಈ ಪ್ರಕಾರ ಕಾಲವನ್ನು ಅಸ್ತಿಕಾಯವೆಂದು ಹೇಳಲಾಗಿಲ್ಲ.

**''ಒಂದು ಪರಮಾಣವು ಇನ್ನೊಂದರ ಜತೆ ಸೇರಿ ಸ್ಕಂಧರೂಪದಿಂದಾರೂ ಕೂಡ ಪ್ರತಿಯೊಂದು ಪರಮಾಣುವು ತನ್ನ ಸತ್ತಾದಲ್ಲಿ ಇರುತ್ತದೆ, ಇನ್ನೊಂದರಲ್ಲಿ ಸೇರಿಹೋಗುವುದಿಲ್ಲ.''**

ಮತ್ತೆ ಆ ಪರಮಾಣುವು ಇನ್ನೊಂದರಲ್ಲಿ ಸೇರಿ ಸ್ಕಂಧರೂಪದಿಂದ ಆದಾಗ ಆ ಪರಮಾಣುವು ಆ ಕಾಲದಲ್ಲಿ

ವಿಸ್ತಾರವಾಗಿ ಹೋಗುವುದಿಲ್ಲ ಸ್ಥೂಲರೂಪದಿಂದ ಅಥವಾ ಸೂಕ್ಷ್ಮರೂಪದಿಂದ ಪರಿಣಮಿಸುವುದು ಆಯಾ ಪರಮಾಣುವಿನ ಯೋಗ್ಯತೆಯಿದೆ. ಅದು ಇನ್ನೊಂದು ಪರಮಾಣುವಿನ ಕಾರಣದಿಂದ ಇಲ್ಲ ಮತ್ತು ಆ ಪರಮಾಣುವು ಸ್ಕಂಧದಲ್ಲಿ ಸೇರಿಲ್ಲ. ಆಕಾರದಲ್ಲಿ ದೊಡ್ಡದಾಗುವುದಿಲ್ಲ. ಅದು ಕೂಡ ತನ್ನ ಸತ್ತಾವನ್ನು ಬಿಟ್ಟುಕೊಡುವುದಿಲ್ಲ.

ಅದರಂತೆ ತನ್ನ ಸ್ನಿಗ್ಧ ಹಾಗೂ ರೂಕ್ಷ ಗುಣಗಳ ಕಾರಣದಿಂದ ಅನೇಕ ಪರಮಾಣುರೂಪ ಸ್ಕಂಧದ ಅವಸ್ಥೆಯನ್ನು ಧಾರಣಮಾಡಿ ವ್ಯವಹಾರದಿಂದ ಏಕಸ್ಕಂಧವೆಂದು ಕರೆಯಿಸಿಕೊಳ್ಳುತ್ತದೆ. ಆದಾಗ್ಯೂ ಪ್ರತಿಯೊಂದು ಪರಮಾಣವು ತನ್ನ ಏಕರೂಪ ಸ್ವಭಾವವನ್ನು ಬಿಡುವುದಿಲ್ಲ ಯಾವಾಗಲೂ ಒಂದೇ ದ್ರವ್ಯವಿರುತ್ತದೆ. ವ್ಯವಹಾರದಿಂದ ಸ್ಕಂಧರೂಪವಾಗುವ ಯೋಗ್ಯತೆಯೂ ಕೂಡ ತನ್ನ ಕಾರಣದಿಂದ ಇದೆ. ಇನ್ನೊಂದು ಪರಮಾಣುವಿನ ಕಾರಣದಿಂದ ಇಲ್ಲ. ಮತ್ತು ವ್ಯವಹಾರದಿಂದ ಸ್ಕಂಧವಾದರೂ ಕೂಡ ಪ್ರತಿಯೊಂದು ಪರಮಾಣು ದ್ರವ್ಯವು ಸ್ವತಂತ್ರ ಸತ್ತಾ ತಿಳಿದುಕೊಂಡಿರುತ್ತದೆ ಹೀಗೆ ಪರಮಾಣು ಜಡವಿದ್ದರೂ ಜಡದ ಶಕ್ತಿಯಿಂದ ಜ್ಞಾನವಿಲ್ಲದೆ ಕಾರ್ಯಮಾಡುತ್ತದೆ ಹೀಗೆ ಕರ್ಮದ ಸ್ಕಂಧದಲ್ಲಿ ಕೂಡ ಒಂದು ಕರ್ಮದ ಪರಮಾಣುವಿನದು ಇನ್ನೊಂದು ಪರಮಾಣುವಿನ ಜೊತೆಯಲ್ಲಿ ಅಭಾವವಿದೆ ಮತ್ತು ತಾನು ಸ್ವತಂತ್ರ ಉಳಿದುಕೊಂಡಿದೆಯೆಂದಮೇಲೆ ಕರ್ಮದ ಉದಯವು ಆತ್ಮನನ್ನು ಗಾಸಿಗೊಳಿಸಿದೆಯೆಂಬ ಮಾತು ತೀರ ಭ್ರಮೆಯಿದೆ. ಕರ್ಮ ಮತ್ತು ಆತ್ಮನಲ್ಲಿ ಅತ್ಯಂತ ಅಭಾವವಿದೆ ಮತ್ತು ಆತ್ಮನನ್ನು ಪೀಡಿತ ಮಾಡುವ ಯೋಗ್ಯತೆಯಿಲ್ಲವೆಂದು ೮೧ನೇ ಗಾಥೆಯಲ್ಲಿ ಹೇಳಿದೆ ಈ ಪ್ರಕಾರ ಪುದ್ಗಲ ಸಹಿತ ಐದು ಅಸ್ತಿಕಾಯಗಳನ್ನು ತಿಳಿಯುವುದು.

**''ಐದೂ ಅಸ್ತಿಕಾಯಗಳನ್ನು ರಾಗರಹಿತವಾಗಿ ತಿಳಿದುಕೊಳ್ಳುವುದು ನನ್ನ ಸ್ವಭಾವವಿದೆಯೆಂದು ತನ್ನ ಮಹಿಮೆ ಬಂದರೆ ಮತ್ತು ತನ್ನ ಕಡೆಗೆ ಪ್ರವೃತ್ತನಾದರೆ ಸಮ್ಯಗ್ದರ್ಶನವು ಪ್ರಕಟವಾಗುತ್ತದೆ, ಮತ್ತು ಕ್ರಮದಿಂದ ವೀತರಾಗತೆಯಾಗುತ್ತದೆ.''**

ಈ ಪ್ರಕಾರ ಐದು ಅಸ್ತಿಕಾಯಗಳ ಸ್ವರೂಪ ಹೇಳಿದೆ ಅದನ್ನು ಅರ್ಥಸಮಯವೆಂದು ಹೇಳುತ್ತಾರೆ. ಅರ್ಥ ಸಮಯವೆಂದರೆ ಆಯಾ ಪದಾರ್ಥಗಳ ಭಗವಾನ, ಮೂರ್ತಿ, ಭಾಷೆ ಇತ್ಯಾದಿಗಳ ಅವಸ್ಥೆ ಎಂದರೆ ವಿಶೇಷವು ಆಯಾ ಪದಾರ್ಥಗಳ ಕಾರಣದಿಂದ ಇದೆ. ಪರದ ಕಾರಣದಿಂದ ಇಲ್ಲ. ಅವೆಲ್ಲವುಗಳನ್ನು ಹೇಗೆ ಇವೆ ಹಾಗೆ ತಿಳಿದುಕೊಳ್ಳುವುದು ಜ್ಞಾನದ ಕಾರ್ಯವಿದೆ ಮತ್ತು ಜ್ಞಾನದ ವಿಶೇಷ ಅವಸ್ಥೆಯು ಕೂಡ ತನ್ನ ಸಾಮಾನ್ಯಜ್ಞಾನಸ್ವಭಾವದ ಕಾರಣದಿಂದ ಪ್ರಕಟವಾಗುತ್ತದೆ, ಆದರೆ ಪರಪದಾರ್ಥಗಳ ಹಾಗೂ ರಾಗದ ಕಾರಣದಿಂದ ಪ್ರಕಟವಾಗುವುದಿಲ್ಲ. ಆ ಪದಾರ್ಥಗಳಿವೆ ಅಥವಾ ಶಾಸ್ತ್ರ ತಿಳಿದುಕೊಳ್ಳುವ ಪ್ರೀತಿಯಿರುವುದರಿಂದ ಜ್ಞಾನವಾಗುತ್ತದೆಂಬುದಾಗಿಲ್ಲ.

ಹೀಗೆ ತನ್ನ ರಾಗರಹಿತ ಜ್ಞಾನಸ್ವಭಾವವನ್ನು ತಿಳಿದುಕೊಂಡವನಿಗೆ ಸಮ್ಯಗ್ದರ್ಶನವು ಪ್ರಕಟವಾಗುತ್ತದೆ ಮತ್ತು ಆ ಪದಾರ್ಥಗಳನ್ನು ತಿಳಿದುಕೊಳ್ಳುವುದು ಕೂಡ ವ್ಯವಹಾರವಿದೆ. ನಿಶ್ಚಯದಿಂದ ತನ್ನ ಆತ್ಮನನ್ನು ತಿಳಿದುಕೊಂಡಮೇಲೆ ಪರಪದಾರ್ಥಗಳನ್ನು ವ್ಯವಹಾರದಿಂದ ತಿಳಿದುಕೊಳ್ಳಲಾಗುತ್ತದೆ. ನಿಜವಾಗಿ ತಾನೇ ಜ್ಞಾನ ಮತ್ತು ಜ್ಞೇಯನಿದ್ದಾನೆ. ಅಯ್ಯಾ! ವಸ್ತುಸ್ವರೂಪವು ಹೀಗೆಯಿದೆ, ಐದು ಅಸ್ತಿಕಾಯದೊಳಗಿನ ಜೀವವು ಅಸ್ತಿಕಾಯದಲ್ಲಿ ತಾನು ಕೂಡ ಆತ್ಮನು ಅಸ್ತಿತ್ವವುಳ್ಳ ಅಸಂಖ್ಯ ಪ್ರದೇಶಿಯಿದ್ದೇನೆಂಬುದು ಬಂದುಬಿಡುತ್ತದೆ. ಎಲ್ಲವನ್ನೂ ತಿಳಿದುಕೊಳ್ಳುವುದು ತನ್ನ ಸ್ವಭಾವವಿದೆ. ಪರವನ್ನು ಮನ್ನಿಸುವ ಅಥವಾ ರಾಗ-ದ್ವೇಷ ಮಾಡುವುದು ಅದು ನನ್ನ ಸ್ವಭಾವವಿಲ್ಲವೆಂದು ಯಾರಿಗೆ ತಮ್ಮ ಜ್ಞಾನದ ಹಿರಿಮೆಯು ತಿಳಿದಿದೆ ಅವರಿಗೆ ಸತ್ಯದ ಮಾಹಾತ್ಮ್ಯವು ಬರುತ್ತಿರುವಂತೆ ಸ್ವಭಾವದ ಕಡೆಗೆ ಪ್ರವೃತ್ತಿಯಾಗಿ ಸಾಧಕದಶೆಯು ಉತ್ಪನ್ನವಾಗುತ್ತದೆ ಮತ್ತು ಪರಿಪೂರ್ಣಪ್ರವೃತ್ತನಾದರೆ ವೀತರಾಗತೆ ಮತ್ತು ಕೇವಲಜ್ಞಾನವು ಉತ್ಪನ್ನವಾಗುತ್ತದೆ. ಇದು ಪಂಚಾಸ್ತಿಕಾಯವನ್ನು ತಿಳಿದುಕೊಳ್ಳುವುದರ ಫಲವಿದೆ.

**''ಈ ಶರೀರವು ಪುದ್ಗಲದ ಕಾಯವಿದೆ, ಆತ್ಮನ ಕಾಯವಿಲ್ಲ. ಅಸಂಖ್ಯ ಪ್ರದೇಶಗಳು ಆತ್ಮನ ಕಾಯವಿದೆಯೆಂದು ಜೀವನು ತಿಳಿದುಕೊಂಡರೆ ಭೇದಜ್ಞಾನವಾಗುವುದು ಮತ್ತು ಭ್ರಾಂತಿಯ ನಾಶವಾಗುವುದು.''**

ಆತ್ಮನು ದೇಹದಿಂದ ಬೇರೆಯಿದ್ದಾನೆ. ದೇಹವಂತೂ ಅನೇಕ ರಜಕಣಗಳ ಪಿಂಡವಿದೆ, ಮೂಲವಸ್ತುವಲ್ಲ. ಇದೆಲ್ಲವೂ ತೋರುತ್ತದೆ ಅದು ಪುದ್ಗಲವಿದೆ. ಅದು ಪರಮಾಣುಗಳಿಂದ ರಚನೆಗೊಂಡಿದೆ. ಅದರಿಂದ ಅದನ್ನು ಅಸ್ತಿಕಾಯವೆಂದು ಹೇಳಿದೆ ಆತ್ಮನು ಅದರಿಂದ ಬೇರೆಯಿದ್ದಾನೆ. ಒಂದು ಪರಮಾಣುವಿನ ಅಳತೆಯಿಂದ ಅಳೆಯಹೋದರೆ ಆತ್ಮನು ಅಸಂಖ್ಯ ಪ್ರದೇಶದಷ್ಟು ವಿಸ್ತಾರನಿದ್ದಾನೆ. ಅಸ್ತಿ ಎಂದರೆ ಇದೆ, ಕಾಯ ಎಂದರೆ ಪ್ರದೇಶಗಳ ಸಮೂಹ. ಆತ್ಮನ ಅಸಂಖ್ಯ ಪ್ರದೇಶಗಳು ಅದು ಆತ್ಮನ ಕಾಯವಿದೆ. ಈ ಕಂಡುಬರುತ್ತಿರುವ ಶರೀರವು ಆತ್ಮನ ಕಾಯವಲ್ಲ. ಅದಂತೂ ಪುದ್ಗಲಾಸ್ತಿಕಾಯವಿದೆ ಮತ್ತು ಅದು ಸ್ಪರ್ಶ, ರಸ, ಗಂಧ, ವರ್ಣಗಳ ಧಾರಕವಿದೆ. ಮತ್ತು ಆತ್ಮನು ಜ್ಞಾನ, ದರ್ಶನ, ಚಾರಿತ್ರ ಮೊದಲಾದವುಗಳ ಧಾರಕನಿದ್ದಾನೆ. ಆತ್ಮನು ಜಡನಾಗುವುದಿಲ್ಲ ಮತ್ತು ಜಡವು ಚೈತನ್ಯವಾಗುವುದಿಲ್ಲ. ಎರಡರಲ್ಲಿ ಅತ್ಯಂತ ಅಭಾವವಿದೆ.

ಕಾಲದ್ರವ್ಯವು ಏಕಪ್ರದೇಶಿಯಿದೆ. ಅದರಲ್ಲಿ ಸ್ಪರ್ಶಗುಣವಿಲ್ಲದಿರುವುದರಿಂದ ಒಂದು ಕಾಲಾಣುವು ಇನ್ನೊಂದು ಕಾಲಾಣುವಿನ ಜೊತೆ ಕೂಡುವುದಿಲ್ಲ. ಶಕ್ತಿ ಹಾಗೂ ವ್ಯಕ್ತತೆಯ ಅಪೇಕ್ಷೆಯಿಂದ ಎಂದೂ ಸ್ಕಂಧರೂಪದ ಯೋಗ್ಯತೆಯಿಲ್ಲ ಆದುದರಿಂದ ಕಾಲದ್ರವ್ಯವನ್ನು ಕಾಯವುಳ್ಳುದೆಂದು ಹೇಳಲಾಗುವುದಿಲ್ಲ. ಮತ್ತು ಉಳಿದ ಐದು ದ್ರವ್ಯಗಳಿಗೆ ಅಸ್ತಿಕಾಯವೆಂದು ಹೇಳಿದೆ. ಪ್ರತಿಯೊಂದು ಸ್ವತಂತ್ರವಿದೆ ಮತ್ತು ಪರದಿಂದ ಅಭಾವರೂಪವಿದೆ ಹೀಗಿದ್ದರೂಕೂಡ ಶರೀರವನ್ನು ನನ್ನದೆಂದು ಮನ್ನಿಸುವುದೇ ಭ್ರಾಂತಿಯಿದೆ ಹಾಗೂ ಅಜ್ಞಾನವಿದೆ. ನಾನು ಶುದ್ಧ ಚೈತನ್ಯಸ್ವಭಾವಿಯಾದ ಜೀವಾಸ್ತಿಕಾಯನಿದ್ದೇನೆಂಬುದನ್ನು ಮರೆತು ಪರಜೀವದ ಜತೆ ಹಾಗೂ ಪರಪುದ್ಗಲದ ಜೊತೆ ಏಕತೆಯ ಬುದ್ಧಿ ಮಾಡುವುದೇ ಸಂಸಾರವಿದೆ. ಜೀವನು ಐದು ಅಸ್ತಿಕಾಯಗಳು ಸ್ವತಂತ್ರವಿವೆಯೆಂದು ತಿಳಿದುಕೊಂಡರೆ ಅವನ ಭ್ರಾಂತಿಯು ನಾಶವಾಗಿ ಹೋಗುವುದು.

ಈಗ ಐದನೆಯ ಗಾಥೆಯಲ್ಲಿ ಯಾವುದಕ್ಕೆ ಅಸ್ತಿಕಾಯವೆನ್ನುತ್ತಾರೆಂಬುದನ್ನು ತಿಳಿಸಿಕೊಡುತ್ತಾರೆ,-

**ಜೇಸಿಂ ಅತ್ಥಿ ಸಹಾಓ ಗುಣೇಹಿಂ ಸಹ ಪಜ್ಜಏಹಿಂ ವಿವಿಹೇಹಿಂ ।**
**ತೇ ಹೋಂತಿ ಅತ್ಥಿಕಾಯಾ ಣಿಪ್ಪಣ್ಣಂ ಜೇಹಿಂ ತೇಲ್ಲೋಕ್ಕಂ ॥೫॥**

**ವಿವಿಧ ಗುಣಮೇಣ್ ಪರ್ಯಾಯಗಳೊಡನೆ ಯಾವವುಗಳಿಗನನ್ಯತೆಯಿದೆ ।**
**ಅವು ಅಸ್ತಿಕಾಯವೆಂದರಿವುದವುಗಳಿಂ ನಿಷ್ಪನ್ನವಿವೆ ಮೂರು ಲೋಕಗಳು ॥೫॥**

**ಅರ್ಥ :** ಯಾವವುಗಳಿಗೆ ವಿವಿಧ ಗುಣಗಳು ಮತ್ತು ಪರ್ಯಾಯಗಳ (ಪ್ರವಾಹಕ್ರಮದ ಮತ್ತು ವಿಸ್ತಾರಕ್ರಮದ ಅಂಶಗಳ) ಜೊತೆಯಲ್ಲಿ ತಮ್ಮತನವಿದೆ ಅವು ಅಸ್ತಿಕಾಯಗಳಿವೆ ಏಕೆಂದರೆ ಅವುಗಳಿಂದ ಮೂರು ಲೋಕಗಳು ನಿಷ್ಪನ್ನವಿವೆ.

**''ಪ್ರತಿಯೊಂದು ಪದಾರ್ಥವು ತನ್ನ ಅನೇಕ ಗುಣ-ಪರ್ಯಾಯಗಳೊಡನೆ ಅಸ್ತಿತ್ವವುಳ್ಳದ್ದಿದೆ''**

ಐದು ಅಸ್ತಿಕಾಯಗಳು ಅನೇಕ ಪ್ರಕಾರದ ಸಹಭೂತಗುಣ ಹಾಗೂ ವ್ಯತಿರೇಕರೂಪ ಅನೇಕ ಪರ್ಯಾಯಗಳೊಡನೆ ಅಸ್ತಿತ್ವ ಸ್ವಭಾವಗಳುಳ್ಳವುಗಳಿವೆ.

ಜೀವದಲ್ಲಿ ಜ್ಞಾನ-ದರ್ಶನ-ಚಾರಿತ್ರ-ವೀರ್ಯ-ಪ್ರಭುತ್ವ ಮೊದಲಾದ ತ್ರಿಕಾಲೀ ಶಕ್ತಿಗಳು ಬಿದ್ದುಕೊಂಡಿವೆ.

ಅದರಂತೆ ಪರಮಾಣುವಿನಲ್ಲಿ ಸ್ಪರ್ಶ-ರಸ-ಗಂಧ-ವರ್ಣಗಳಿವೆ ಗುಣಗಳು ಏಕಕಾಲದಲ್ಲಿ ಎಲ್ಲವುಗಳಿರುವುದರಿಂದ ಸಹಭೂತವೆಂದು ಹೇಳಲಾಗುತ್ತದೆ ಮತ್ತು ಪರ್ಯಾಯಗಳು ಒಂದರ ನಂತರ ಒಂದು ಇರುತ್ತವೆ; ಬೇರೆ ಬೇರೆ ಇರುತ್ತವೆ. ಹೇಗೆಂದರೆ ಆತ್ಮನಲ್ಲಿ ಶುಭಭಾವದ ನಂತರ ಅಶುಭ ಭಾವ, ಕ್ಷಣದಲ್ಲಿ ದಯೆ, ದಾನದ ಭಾವ ನಂತರ ಅಶುಭ, ನಂತರ ಸ್ವಲ್ಪ ತಿಳಿದುಕೊಳ್ಳುವುದು, ಅಧಿಕ ತಿಳಿದುಕೊಳ್ಳುವುದು ಹೀಗೆ ಪರ್ಯಾಯಗಳು ಬೇರೆ ಬೇರೆ ಇರುತ್ತವೆ ಮತ್ತು ಪರಮಾಣುವಿನಲ್ಲಿ ಕೂಡ ಸ್ಪರ್ಶ-ರಸ-ಗಂಧ-ವರ್ಣಗಳು ನಿರಂತರ ಇರುತ್ತವೆ ಆದರೆ ಅವುಗಳದ್ದು ಒಂದರ ನಂತರ ಒಂದು ಪರ್ಯಾಯವಾಗುತ್ತದೆ. ಆತ್ಮನ ಪರ್ಯಾಯವು ಶರೀರ ಅಥವಾ ಕರ್ಮದ ಕಾರಣದಿಂದ ಇಲ್ಲ ಮತ್ತು ಶರೀರ ಅಥವಾ ಕರ್ಮದಅವಸ್ಥೆಯು ಆತ್ಮನ ಕಾರಣದಿಂದ ಇಲ್ಲ. ಹೀಗೆ ಪ್ರತಿಯೊಂದು ಅಸ್ತಿಕಾಯವು ತನ್ನ ಗುಣ-ಪರ್ಯಾಯಗಳೊಡನೆ ಅಸ್ತಿತ್ವವುಳ್ಳದ್ದಿದೆ.

**''ಪದಾರ್ಥಗಳು ಎಂದೂ ಸರ್ವಥಾ ನಾಶವಾಗುವುದಿಲ್ಲ ಮತ್ತು ಇಲ್ಲದಂಥದು ಎಂದೂ ನವೀನ ಉತ್ಪನ್ನವಾಗುವುದಿಲ್ಲ''.**

೧) ಈ ಜಗತ್ತಿನಲ್ಲಿ ಯಾವ ಪದಾರ್ಥಗಳಿವೆ ಅವುಗಳ ಸರ್ವಥಾ ಅಭಾವವಾಗುವುದಿಲ್ಲ ಆದರೆ ಸ್ವಯಂ ಸ್ಥಿರವಾಗಿದ್ದುಕೊಂಡು ಪರಿವರ್ತನ ಮಾಡುತ್ತವೆ. ಅದರ ಗುಣಗಳು ಸ್ಥಿರವಿರುತ್ತವೆ ಮತ್ತು ವ್ಯತಿರೇಕ ರೂಪದ ಪರ್ಯಾಯಗಳು ಬದಲಾಗುತ್ತವೆ ತಾನು ತನ್ನ ಕಾರಣದಿಂದ ಧ್ರುವವಿರುತ್ತದೆ ಮತ್ತು ಬದಲಾಗುವುದು ಕೂಡ ತನ್ನ ಕಾರಣದಿಂದ ಆಗುತ್ತದೆ ಪರದ ಕಾರಣದಿಂದ ಇಲ್ಲ.

೨) ಯಾವ ವಸ್ತುವು ಜಗತ್ತಿನಲ್ಲಿ ಇಲ್ಲ ಅಥವಾ ಅಭಾವಸ್ವರೂಪವಿದೆ ಅದು ಎಂದೂ ಭಾವ ಸ್ವರೂಪವಾಗುವುದಿಲ್ಲ.

೩) ಒಂದು ವೇಳೆ ಆತ್ಮನು ಯಾವಾಗಲೂ ಏಕರೂಪವೇ ಇದ್ದು ಪರಿವರ್ತನವೇ ಆಗದಿದ್ದರೆ ದುಃಖವನ್ನು ದೂರಮಾಡಿ ಸುಖ ಪ್ರಕಟಪಡಿಸಿಕೊಳ್ಳುವ ಸಾಧ್ಯತೆಯಿಲ್ಲ.

೪) ಒಂದು ವೇಳೆ ಆತ್ಮನು ನಿರಂತರ ಪರಿವರ್ತನಶೀಲವೇ ಇದ್ದರೆ ಮತ್ತು ಧ್ರುವವಿಲ್ಲದಿದ್ದರೆ ದುಃಖವನ್ನು ದೂರಮಾಡಿ ಸುಖದ ಅನುಭವ ಮಾಡುವವನಾಗಿ ಉಳಿಯುವುದಿಲ್ಲ, ಸುಖದ ಅನುಭವವಾಗುವುದಿಲ್ಲ.

೫) ಅದರಿಂದ ಆತ್ಮ ಹಾಗೂ ಪ್ರತಿಯೊಂದು ವಸ್ತುವು ಸ್ಥಿರವಿದ್ದುಕೊಂಡು ಬದಲಾಗುತ್ತದೆ.

ಧನವು ಸ್ವಯಂ ಪರಮಾಣುರೂಪದಿಂದ ಧ್ರುವವಿದ್ದುಕೊಂಡು ಅವಸ್ಥೆಯು ಬದಲಾಗುತ್ತದೆ. ಕ್ಷೇತ್ರಾಂತರ ಪಡೆಯುತ್ತದೆ. ಆದರೆ ನನ್ನ ಬುದ್ಧಿವಂತಿಕೆಯ ಕಾರಣದಿಂದ ಧನ ಬಂದಿದೆಯೆಂದು ಯಾವ ಜೀವನು ಮನ್ನಿಸುತ್ತಾನೆ ಅವನು ಧನದ ಅಸ್ತಿಯನ್ನು ಹಾರಿಸಿ ಬಿಡುತ್ತಾನೆ. ಆತ್ಮನಲ್ಲಿ ತ್ರಿಕಾಲೀ ಶಕ್ತಿಗಳಿವೆ ಮತ್ತು ಅದರಲ್ಲಿ ಒಂದರ ನಂತರ ಒಂದು ಪರ್ಯಾಯವಾಗುತ್ತದೆ ಅದರ ಕರ್ತೃವು ಸ್ವಯಂ ಆತ್ಮನಿದ್ದಾನೆ, ಯಾವನು ಸ್ವತಂತ್ರರೂಪದಿಂದ ಮಾಡುತ್ತಾನೆ ಅವನು ಕರ್ತೃವಿದ್ದಾನೆ. ಆತ್ಮನ ಅವಸ್ಥೆಯಲ್ಲಿ ಜಡದ ಅಧಿಕಾರವಿಲ್ಲ ಮತ್ತು ಜಡದ ಅವಸ್ಥೆಯಲ್ಲಿ ಆತ್ಮನ ಅಧಿಕಾರವಿಲ್ಲ. ಪ್ರತಿಯೊಂದು ದ್ರವ್ಯದಲ್ಲಿ ಎರಡು ಪ್ರಕಾರದ ಶಕ್ತಿಗಳಿವೆ ಅದರಲ್ಲಿ ಒಂದು ತ್ರಿಕಾಲೀ ಶಕ್ತಿಯಿದ್ದರೆ ಇನ್ನೊಂದು ವರ್ತಮಾನ ಅವಸ್ಥೆಯ ರೂಪದ ಶಕ್ತಿಯಿದೆ. ಹೀಗೆ ಪ್ರತಿಯೊಂದರ ಪರ್ಯಾಯವು ಅದು ಪ್ರತಿಯೊಂದರ ಸ್ವಭಾವವಿದೆ ಅದು ನಾಶವಾಗುವುದಿಲ್ಲ ಮತ್ತು ಯಾವುದು ಇಲ್ಲ ಅದು ನವೀನ ಉತ್ಪನ್ನವಾಗುವುದಿಲ್ಲ ಜಡ ಮತ್ತು ಆತ್ಮ ಸೇರಿ ಸಂಪೂರ್ಣ ಜಗತ್ತು ಇದೆ. ಜಗತ್ತು ಬೇರೆ ಯಾವ ವಸ್ತುವಿಲ್ಲ ಮತ್ತು ಆ ಪದಾರ್ಥಗಳು ಜಗತ್ತಿನಲ್ಲಿ ಇರುವುದಿಲ್ಲವೆಂಬುದು ಸಂಭವಿಸುವುದಿಲ್ಲ ಅದರಂತೆ ಜಗತ್ತಿನ ಪ್ರಲಯವಾಗುತ್ತದೆಂಬುದು ಸಂಭವಿಸುವುದಿಲ್ಲ ಜಗತ್ತು ಮೊದಲು ಇರಲಿಲ್ಲ ಮತ್ತು ನವೀನ ಉತ್ಪನ್ನವಾಗಿದೆ

ಎಂಬುದಾಗಿಲ್ಲ.

ಆತ್ಮನಲ್ಲಿ ಜ್ಞಾನ-ದರ್ಶನ ಮೊದಲಾದ ಗುಣಗಳಿವೆ ಮತ್ತು ಸಮಯ-ಸಮಯಕ್ಕೆ ಅವುಗಳ ಅವಸ್ಥೆ ಬದಲಾಗುತ್ತದೆ ಜಡದ ಅವಸ್ಥೆಯು ಬೇರೆ-ಬೇರೆಯಾಗುತ್ತದೆ ಅದು ಜಡದ ಕಾರ್ಯವಿದೆ, ಅದು ಆತ್ಮನ ಅಧಿಕಾರದ ಮಾತಲ್ಲ ಆತ್ಮನಲ್ಲಿ ಶಕ್ತಿಯು ಸ್ಥಿರವಾಗಿದ್ದುಕೊಂಡು ತನ್ನಲ್ಲಿ ಪರಿವರ್ತನವಾಗುವುದು ಅದು ಆತ್ಮನ ಕಾರ್ಯವಿದೆ. ಹಿಂಸೆ, ಅಸತ್ಯ, ಕಳವಿನ ಭಾವಗಳಾಗುತ್ತವೆ ಅದರಂತೆ ದಯೆ, ದಾನಾದಿಗಳ ಭಾವಗಳು ಕೂಡ ಆಗುತ್ತವೆ. ಆತ್ಮನು ಅವುಗಳ ಪರಿವರ್ತನ ಮಾಡುತ್ತಾನೆ. ಶುಭ-ಅಶುಭ ಭಾವಗಳಾಗುತ್ತವೆ. ಅದು ಉಪಾಧಿ ಸ್ವಭಾವವಿದೆ ಅದು ಆತ್ಮನ ನಿಜವಾದ ಸ್ವಭಾವವಿಲ್ಲ ಆದಾಗ್ಯೂ ಎಲ್ಲಿಯವರೆಗೆ ವೀತರಾಗ ದಶೆಯಾಗುವುದಿಲ್ಲ ಅಲ್ಲಿಯವರೆಗೆ ವಿಕಾರವಾಗುತ್ತದೆ. ಆದರೆ ಆ ವಿಕಾರವು ಪರದ ಕಾರಣದಿಂದಿಲ್ಲ ಅದರಂತೆ ಸ್ವಭಾವದ ಸ್ಥಿರ ವಸ್ತುವೂ ಇಲ್ಲ ಮತ್ತು ಆ ವಿಕಾರವು ತೀರ ಅಭಾವರೂಪವು ಕೂಡ ಇಲ್ಲ ಹೀಗೆ ಪದಾರ್ಥಗಳನ್ನು ತಿಳಿದುಕೊಂಡರೆ ಜ್ಞಾನವು ನಿರ್ಮಲವಾಗುತ್ತದೆ.

**''ಆತ್ಮನ ಗುಣ ಪರ್ಯಾಯಗಳು ಆತ್ಮನಿಂದ ಅಭೇದವಿವೆ ಮತ್ತು ಜಡದ ಗುಣ-ಪರ್ಯಾಯಗಳು ಜಡದಿಂದ ಅಭೇದವಿವೆ''**

ಇನ್ನು ವಸ್ತುವಿದೆ ಅದು ತನ್ನತನದಿಂದ ಇದೆ ಮತ್ತು ಪರತನದಿಂದ ಇಲ್ಲ. ಇನ್ನೊಂದು ವಸ್ತುವು ಅದರತನದಿಂದ ಇದೆ ಮತ್ತು ಆತ್ಮತನದಿಂದ ಇಲ್ಲ ಈ ಬೆರಳು ತನ್ನತನದಿಂದ ಇದೆ ಮತ್ತು ಇನ್ನೊಂದು ಬೆರಳಿನ ರೂಪದಿಂದ ಇಲ್ಲ ಹೀಗೆ ವಸ್ತುವಿನ ಸ್ವಭಾವವಿದೆ. ಇದನ್ನು ಸರಿಯಾಗಿ ತಿಳಿದುಕೊಂಡರೆ ಪರದ ಅಹಂಕಾರವು ಬಿಟ್ಟು ಹೋಗುತ್ತದೆ. ಐದು ಅಸ್ತಿಕಾಯ ಅಥವಾ ಯಾವವುಗಳಿಂದ ಜಗತ್ತು ಆಗಿದೆ ಅದರ ಸ್ವರೂಪ ಹೇಗಿದೆಯೆಂಬುದನ್ನು ಹೇಳುತ್ತಾರೆ. ಈ ಐದು ಅಸ್ತಿಕಾಯಗಳು ತಮ್ಮ ಅನೇಕ ಪ್ರಕಾರದ ಗುಣ-ಪರ್ಯಾಯದ ಕ್ಷೇತ್ರದಿಂದ ಭೇದರೂಪವಿಲ್ಲ ಆದರೆ ಏಕರೂಪವಿವೆ ಗುಣ-ಪರ್ಯಾಯ ಮತ್ತು ದ್ರವ್ಯದಿಂದ ಸಂಜ್ಞೆ, ಲಕ್ಷಣ, ಪ್ರಯೋಜನ ಭೇದದಿಂದ ಭೇದವಿದೆ ಆದರೆ ಕ್ಷೇತ್ರಭೇದವಿಲ್ಲ. ಅವು ಮೂರು ಕಾಲದಲ್ಲೂ ಬೇರೆಯಿರುತ್ತವೆ. ಆತ್ಮನ ಕಾರಣದಿಂದ ಶರೀರವು ನಡೆಯುತ್ತದೆಯೆಂದು ಅಜ್ಞಾನಿ ಜೀವನು ಮನ್ನಿಸುತ್ತಾನೆ. ಶರೀರದ ರೂಪಾಂತರ, ಕ್ಷೇತ್ರಾಂತರ ಅದು ಪರಮಾಣುವಿನ ಕಾರಣದಿಂದ ಇದೆ ಆದರೆ ಆತ್ಮನ ಕಾರಣದಿಂದ ಇಲ್ಲ. ಆತ್ಮನು ಜ್ಞಾತಾ-ದೃಷ್ಟಾರೂಪನಿದ್ದಾನೆ. ಅವನು ಜ್ಞಾನ ಮಾಡಿಕೊಳ್ಳುತ್ತಾನೆ ಅಥವಾ ನಾನು ಪರದ ಕಾರ್ಯಮಾಡುತ್ತೇನೆಂದು ಅಭಿಮಾನ ಪಡುತ್ತಾನೆ ಆದರೆ ಪರದ ಕಾರ್ಯವೆಂದೂ ಮಾಡುವ ಸಾಧ್ಯತೆಯಿಲ್ಲ ಒಂದು ವೇಳೆ ಆತ್ಮನು ಶರೀರದ ಕಾರ್ಯ ಮಾಡುತ್ತಾನೆಂದು ಮನ್ನಿಸಹೋದರೆ ಆತ್ಮ ಮತ್ತು ಶರೀರ ಎರಡೂ ಒಂದಾಗಿ ಹೋಗುವವು.

ಭಗವಂತರು ಕೂಡ ಮೊದಲು ಸಂಸಾರ ದಶೆಯಲ್ಲಿ ಇದ್ದರು ಅವರು ಕೂಡ ಮೊದಲು ಭೇದಜ್ಞಾನ ಮಾಡಿದರು. ಪರ ಪದಾರ್ಥದಿಂದರಹಿತ ಹಾಗೂ ರಾಗರಹಿತ ತಮ್ಮ ಜ್ಞಾನಸ್ವಭಾವವಿದೆಯೆಂದು ಮೊದಲು ಶ್ರದ್ಧೆ ಮಾಡಿದರು ನಂತರ ಪರಿಣತಿಯು ರಾಗ-ದ್ವೇಷದಲ್ಲಿ ನಿಂತುಕೊಳ್ಳುತ್ತಿತ್ತು ಅವರು ಸ್ವಭಾವದ ಪರಿಪೂರ್ಣ ಆಶ್ರಯ ಮಾಡಿದಮೇಲೆ ಸರ್ವಜ್ಞ ದಶೆಯು ವ್ಯಕ್ತವಾಯಿತು ಮತ್ತು ರಾಗರಹಿತವಾಣಿಯು ಹೊರಟಿತು. ಆ ಜ್ಞಾನದಲ್ಲಿ ಹೇಗೆ ವಸ್ತುಸ್ವರೂಪ ನೋಡಿದರು ಹಾಗೆ ವಾಣಿಯಲ್ಲಿ ಬಂದುಬಿಟ್ಟಿತು. ವಾಣಿಯು ಜಡ ರೂಪಿಯಿದೆ ಆತ್ಮನು ಅರೂಪಿ ಚೈತನ್ಯನಿದ್ದಾನೆ ವಾಣಿಯನ್ನು ಆತ್ಮನು ಮಾಡಲಿಲ್ಲ ಪರಮಾಣುವು ವರ್ತಮಾನ ಭಾಷಾರೂಪವಾಗುವುದು ಅದು ಪರಮಾಣುವಿನ ಆಧಾರದಿಂದ ಇದೆ. ಆತ್ಮನು ಆ ವರ್ತಮಾನ ಮಾಡಿದನೆಂದು ಮನ್ನಿಸಹೋದರೆ ಪರಮಾಣುವಿನ ನಾಶವಾಗಿ ಹೋಗುವುದು ಆ ಪರಮಾಣುಗಳು ಸ್ಥಿರವಿದ್ದು ಅವಸ್ಥೆ ಬದಲಾಗುತ್ತದೆ. ಆತ್ಮನ ಕಾರಣದಿಂದ ಬದಲಾಗುವುದಿಲ್ಲ. ಪರಮಾಣುವಿನ ಕಾರ್ಯವು ಪರಮಾಣುವಿನ ಕಾರಣದಿಂದಿದೆ ಮತ್ತು ಆತ್ಮನ ಕಾರ್ಯವು ಆತ್ಮನ ಕಾರಣದಿಂದ ಇದೆ. ಅದರಿಂದಲೇ ವಸ್ತುವು ಸಿದ್ಧವಾಗುತ್ತದೆ ಯಾವನೋ

ಜೀವನು ಕಣ್ಣುಮುಚ್ಚಿಕೊಂಡು ಹೋದರೆ ಸೂಕ್ಷ್ಮ ಜೀವಗಳನ್ನು ನೋಡುವುದಿಲ್ಲ ಅದರಂತೆ ಸಮ್ಯಗ್ಜ್ಞಾನದ ವಿಕಾಸವಿಲ್ಲದೇ ಮಿಥ್ಯಾಜ್ಞಾನದಿಂದ ಕಾರ್ಯ ಮಾಡಿದರೆ ಸೂಕ್ಷ್ಮ ತತ್ತ್ವದ ನ್ಯಾಯವು ಲಕ್ಷ್ಯದಲ್ಲಿ ಬರುವುದಿಲ್ಲ ಹೀಗೆ ಮಿಥ್ಯಾಜ್ಞಾನ ಅಥವಾ ಅಸತ್ಯವು ಅದು ದುಃಖವಿದೆ. ದುಃಖವೇನು ಬೇರೆ ವಸ್ತುವಿಲ್ಲ ಆತ್ಮನ ಗುಣ ಮತ್ತು ಪರ್ಯಾಯಗಳು ಆತ್ಮನಿಂದ ಅಭೇದವಿವೆ ಹಾಗೂ ಜಡದ ಗುಣ ಮತ್ತು ಪರ್ಯಾಯಗಳು ಜಡದಿಂದ ಅಭೇದವಿವೆ. ಶರೀರದ ರೋಗವು ಶರೀರದಲ್ಲಿ ಆಗುತ್ತದೆ ಆತ್ಮನಲ್ಲಿ ಆಗುವುದಿಲ್ಲ ಅಜ್ಞಾನೀ ಜೀವನು ರೋಗವು ನನಗೆ ಆಗಿದೆಯೆಂದು ಕಲ್ಪನೆ ಮಾಡುತ್ತಾನೆ ಅದೇ ದುಃಖವಿದೆ. ಪರವಸ್ತುವು ದುಃಖದ ಕಾರಣವಿಲ್ಲ ಅದರಂತೆ ಆತ್ಮನ ಸ್ವಭಾವವು ದುಃಖದ ಕಾರಣವಿಲ್ಲ; ಆದರೆ ಎರಡು ವಸ್ತುಗಳನ್ನು ಒಂದೆಂದು ಮನ್ನಿಸುವುದು ಅದು ದುಃಖವಿದೆ.

ಪ್ರತಿಯೊಬ್ಬ ಆತ್ಮನು ತನ್ನ ನಿರಂತರದ ಶಕ್ತಿ ಮತ್ತು ಅವಸ್ಥೆಯಿಂದ ಏಕಮೇಕನಿದ್ದಾನೆ-ಅಭೇದನಿದ್ದಾನೆ ಆದರೆ ಪರವಸ್ತುವಿನಿಂದ ಭೇದವಿದೆ. ಶರೀರದ ಪರಮಾಣುಗಳು ತಮ್ಮ ಶಕ್ತಿ ಮತ್ತು ಅವಸ್ಥೆಯಿಂದ ಅಭೇದವಿದ್ದರೂ ಆತ್ಮನಿಂದ ಭಿನ್ನವಿವೆ. ಹೇಗೆ ಬೆಲ್ಲ ಮತ್ತು ಸಿಹಿತನವು ಏಕವಿದೆ. ಅಗ್ನಿ ಮತ್ತು ಉಷ್ಣತೆಯು ಏಕವಿದೆ ಹಾಗೆ ಪ್ರತಿಯೊಂದು ಪರ್ಯಾಯವಿದೆ ಅದು ತನ್ನ ಶಕ್ತಿ ಮತ್ತು ಅವಸ್ಥೆಯಿಂದ ಅಭೇದವಿದೆ ಮತ್ತು ಇನ್ನೊಂದರಿಂದ ಭೇದವಿದೆ ಜೀವದ ಇಚ್ಛೆ ಇದ್ದರೂ ಕೂಡ ಎಷ್ಟೋ ಬಾರಿ ಮಾತನಾಡುವುದಿಲ್ಲ. ಪಾರ್ಶ್ವವಾಯುದ ಸಮಯದಲ್ಲಿ ಇಚ್ಛೆ ಇದ್ದರೂ ಕೂಡ ಶರೀರವೂ ನಡೆಯುವುದಿಲ್ಲ ಏಕೆಂದರೆ ವಸ್ತುಗಳು ಭಿನ್ನ - ಭಿನ್ನವಿವೆ. ಹಿಟ್ಟಿನಿಂದ ರೊಟ್ಟಿಯಾಗುವುದು ಅದನ್ನು ತಿನ್ನುವುದರಿಂದ ರಕ್ತ, ಮಾಂಸ, ಮಲ ಮೊದಲಾದುವಾಗುತ್ತವೆ. ಅವೆಲ್ಲವು ತಮ್ಮ ಕಾರಣದಿಂದ ಆಗುತ್ತಲಿವೆ. ನೀನು ಅವನ್ನು ತಿಳಿಯುವವ-ನೋಡುವವನಿರುವೆ. ಜೀವದಿಂದ ಜಡದ ಅವಸ್ಥೆಯಾಗುತ್ತದೆಂದು ಮನ್ನಿಸುವುದು ಅದು ಪಾಖಂಡವಿದೆ. ನಿನ್ನ ಪ್ರಭುತೆಯಂತೂ ತಿಳಿಯುವ ನೋಡುವದಿದೆ. ನಿನಗೆ ಸುಖವು ಬೇಕಿದೆಯಲ್ಲವೇನು ? ಸುಖವು ಸತ್‌ದಲ್ಲಿರುವುದೋ ಅಥವಾ ಅಸತ್‌ದಲ್ಲಿರುವುದು? ದ್ರವ್ಯವನ್ನು ಪರಾಧೀನವೆಂದು ಮನ್ನಿಸುವುದು. ಅದು ಅಸತ್‌ಇದೆ. ಆ ಮನ್ನಣೆಯನ್ನು ಬಿಟ್ಟುಕೊಡು ಮತ್ತುಪ್ರತಿಯೊಂದು ದ್ರವ್ಯವು ಸ್ವತಂತ್ರವಿದೆಯಂಬ ಸತ್ ಮನ್ನಣೆ ಮಾಡಿದರೆ ಸುಖವು ದೊರಕುವಂತಿದೆ. ನೀನು ಪರವಸ್ತುವಿನ ಕಾರ್ಯ ಮಾಡುವೆನೆಂದು ಅಭಿಮಾನ ಮಾಡುತ್ತಿರುವೆ ಮತ್ತು ರಾಗವು ಕಡಿಮೆಯಾಗುತ್ತದೆ ಎನ್ನುವುದು ಅದು ಮಿಥ್ಯಾತ್ವ ಸಹಿತವಾದ ಪುಣ್ಯವಿದೆ. ಆದರೆ ಪವಿತ್ರತೆ ತರುತ್ತೇನೆಂಬ ಮಾತು ಮಿಥ್ಯೆಯಿದೆ. ಅಜ್ಞಾನೀ ಜೀವನು ಮನ್ನಿಸಲಿ ಅಥವಾ ಮನ್ನಿಸದಿರಲಿ ವಸ್ತು ಸ್ವರೂಪವು ಹೇಗೆ ಇದೆ ಹಾಗೆ ಇದೆ. ಪ್ರತಿಯೊಂದು ವಸ್ತುವು ತನ್ನ ಗುಣ ಪರ್ಯಾಯದಿಂದ ಏಕವಿದೆ ಮತ್ತು ಪರದಿಂದ ಭಿನ್ನವಿದೆ.

**''ಯಾವುದರಲ್ಲಿ ಗುಣ-ಪರ್ಯಾಯಗಳಿವೆ ಅದನ್ನು ವಸ್ತುವೆನ್ನುತ್ತಾರೆ. ಹೀಗೆ ಜ್ಞಾನ ಮಾಡಿಕೊಳ್ಳುವುದು ಅದು ವಸ್ತುವಿನ ಸ್ತವನವಿದೆ. ವಸ್ತುವಿನ ಸ್ತವನವಿಲ್ಲದೆ ಭಗವಂತರ ಸ್ತವನವು ಯಥಾರ್ಥವಿಲ್ಲ.''**

ಆತ್ಮ ಮತ್ತು ಜಡ ಪದಾರ್ಥಗಳಲ್ಲಿ ಕ್ಷಣ-ಕ್ಷಣಕ್ಕೆ ಯಾವ ಅನೇಕ ಅವಸ್ಥೆಯಿಂದ ಪರಿಣಮನವಾಗುತ್ತದೆ ಅದನ್ನು ಪರ್ಯಾಯವೆಂದು ಹೇಳುತ್ತಾರೆ. ಅವಸ್ಥಾಯಿ ಎಂದರೆ ಸ್ಥಿರ ಪದಾರ್ಥ; ಮತ್ತು ಅವಸ್ಥೆಯೆಂದರೆ ಕ್ಷಣಿಕ ಪರ್ಯಾಯ. ಅವ = ನಿಶ್ಚಯದಿಂದ; ಸ್ಥಾಯಿ = ತನ್ನಲ್ಲಿ ಸ್ಥಿರವಿರುವುದು ಅದು. ಮತ್ತು ಪರಿಣಮನದಲ್ಲಿ ಪರಿ = ಸಮಸ್ತ ಪ್ರಕಾರದಿಂದ ಣಮನ = ಸ್ರವಿಸುವುದು. ಹೀಗೆ ಪರಿಣಮನದ ಅರ್ಥವೇ ತನ್ನಲ್ಲಿ ಸ್ರವಿಸುವುದೆಂದು ಆಗುತ್ತದೆ. ಆದರೆ ಪರದಲ್ಲಿ ಸ್ರವಿಸುವುದು ಅಥವಾ ಪರದ ಕಾರಣದಿಂದ ಸ್ರವಿಸುವುದು ಎಂಬುದಾಗಿ ಅರ್ಥ ಅಥವಾ ಭಾವವಿಲ್ಲ ಮತ್ತು ಪದಾರ್ಥದಲ್ಲಿ ಯಾವಾಗಲೂ ಅವಿನಾಶೀ ರೂಪದಿಂದ ಜತೆಯಲ್ಲಿರುವುದನ್ನು ಗುಣವೆಂದು ಹೇಳುತ್ತಾರೆ. ಆತ್ಮನಲ್ಲಿ ಜ್ಞಾನ, ದರ್ಶನ, ಚಾರಿತ್ರ ಮೊದಲಾದ ಶಕ್ತಿಯಿವೆ ಮತ್ತು ವರ್ತಮಾನ ಅವಸ್ಥೆಯು ಬದಲಾಗುತ್ತಿರುತ್ತದೆ. ಅದರಂತೆ ಪರಮಾಣುವಿನಲ್ಲಿ

ಸ್ಪರ್ಶ, ರಸ, ಗಂಧ, ವರ್ಣ ಶಕ್ತಿಯ ಕಪ್ಪು, ಕೆಂಪು, ಸುಗಂಧ ಅಥವಾ ದುರ್ಗಂಧರೂಪದ ಅವಸ್ಥೆಯಾಗುತ್ತಿರುತ್ತದೆ. ಹೀಗೆ ಗುಣಗಳು ಸ್ಥಿರವಾಗಿದ್ದುಕೊಂಡು ಅವಸ್ಥೆಯು ಬದಲಾಗುವುದು ಅದು ದ್ರವ್ಯದ ಸ್ವರೂಪವಿದೆ. ಆತ್ಮ ಮತ್ತು ಪರಮಾಣುಗಳು ನವೀನ ಅವಸ್ಥೆಯ ರೂಪದಿಂದ ಉತ್ಪನ್ನವಾಗುತ್ತವೆ, ಹಳೆಯ ಅವಸ್ಥೆಯ ರೂಪದಿಂದ ವ್ಯಯವಾಗುತ್ತವೆ ಮತ್ತು ಶಕ್ತಿರೂಪದಿಂದ ಸ್ಥಿರವಿರುತ್ತವೆ. ಹೇಗೆ ಕುಂಡಲದ ವ್ಯಯವಾಗುತ್ತದೆ, ಬಳೆಯ ಉತ್ಪಾದವಾಗುತ್ತದೆ ಮತ್ತು ಚಿನ್ನವು ಸದೃಶ, ಸ್ನಿಗ್ಧ, ಭಾರ ಮೊದಲಾದ ಶಕ್ತಿರೂಪದಿಂದ ಧ್ರುವವಿರುತ್ತದೆ. ಯಾವುದರಲ್ಲಿ ಗುಣ-ಪರ್ಯಾಯಗಳು ವಾಸಿಸುತ್ತವೆ ಅದನ್ನು ವಸ್ತುವೆಂದು ಹೇಳುತ್ತಾರೆ ಹೀಗೆ ತಿಳಿದುಕೊಳ್ಳುವುದು ಅದು ವಸ್ತುವಿನ ಸ್ತವನವಿದೆ. ಆ ಸ್ತವನವಿಲ್ಲದೆ ಪರದ ಸ್ತವನ ಎಂದರೆ ಭಗವಂತರ ಸ್ತವನವು ನಿರರ್ಥಕವಿದೆ.

ಜನರು ತಿಳಿದುಕೊಂಡಲ್ಲದೆ ಕ್ರಿಯಾಕಾಂಡ ಮತ್ತು ಸಾಮಾಯಿಕ ಮೊದಲಾದುವನ್ನು ಮಾಡುತ್ತಾರೆ; ಆದರೆ ಸಹೋದರರನೇ ! ಅಂಥ ಅಜ್ಞಾನರೂಪದ ಕ್ರಿಯೆಯಿಂದ ಒಂದಿಷ್ಟು ಕಷಾಯದ ಮಂದತೆಯಿದ್ದರೆ ಪುಣ್ಯವಾಗುವುದು. ಆದರೆ ಸಂಸಾರವು ದೂರವಾಗುವುದಿಲ್ಲ. ಪಾತ್ರೆಯು ಮಲಿನವಾಗಿದ್ದರೆ ಎಂದರೆ ಅದರ ಒಳಗೆ ಮಲಿನತೆಯಿದ್ದರೆ ಅದರ ಬಾಹ್ಯವನ್ನು ಸ್ವಚ್ಛ ಮಾಡುವುದರಿಂದ ಆಂತರ್ಯದ ಮಲಿನತೆಯು ದೂರವಾಗುವುದಿಲ್ಲ ಅದರ ಸಲುವಾಗಿ ಆಂತರ್ಯವನ್ನು ಸ್ವಚ್ಛಮಾಡಬೇಕಾಗುವುದು. ಅದರಂತೆ ಆತ್ಮನು ವಸ್ತುವಿದ್ದಾನೆ ಅವನಲ್ಲಿ ಜ್ಞಾನ ಮೊದಲಾದ ಸ್ಥಾಯೀ ವಸ್ತುಗಳಿವೆ ಮತ್ತು ಅದರಲ್ಲಿ ಸಮಯ ಸಮಯಕ್ಕೆ ಆಗುವ ಅವಸ್ಥೆಯು ತನ್ನ ಕಾರಣದಿಂದ ಇದೆ. ಹೀಗೆ ಪ್ರತಿಯೊಂದು ದ್ರವ್ಯವು ಪೃಥಕ್-ಪೃಥಕ್ ಸ್ವತಂತ್ರವಿದೆಯೆಂದು ಮನ್ನಿಸದ ಹೊರತು ಮಿಥ್ಯಾತ್ವರೂಪದ ಆಂತರ್ಯದ ಮಲವು ದೂರವಾಗುವುದಿಲ್ಲ. ಸ್ವಲ್ಪ ಸಮಯ ಕಷಾಯ ಮಂದ ಮಾಡಿದರೆ ಶುಭದ ಬಂಧವಾಗುತ್ತದೆ ಆದರೆ ವಾಸ್ತವಿಕ ಶಾಂತಿಯು ದೊರಕುವುದಿಲ್ಲ ಮತ್ತು ಜನ್ಮ ಮರಣಗಳ ಕೊನೆಯು ಬರುವುದಿಲ್ಲ.

ಅಜ್ಞಾನೀ ಜೀವರುಗಳು ಆತ್ಮನನ್ನು ತಿಳಿದುಕೊಂಡಲ್ಲದೆ ಧ್ಯಾನ ಮಾಡುವುದರ ಬೆನ್ನು ಹತ್ತಿದ್ದಾರೆ, ಆದರೆ ತಿಳಿದುಕೊಂಡಲ್ಲದೆ ಧ್ಯಾನವಿರುವುದಿಲ್ಲ. ಆತ್ಮನ ಸತ್ಯಸ್ವರೂಪ ತಿಳಿದುಕೊಂಡು ಆಂತರ್ಯದಲ್ಲಿ ಏಕಾಗ್ರವಾಗುವುದು ಅದು ಧ್ಯಾನವಿದೆ. ವಸ್ತುವಿನ ಸ್ವರೂಪವು ದಿವ್ಯಧ್ವನಿಯಲ್ಲಿ ಬಂದಿದೆ ಮತ್ತು ವಸ್ತು ಸ್ವರೂಪವು ಹೀಗೆಯೇ ಇದೆ. ಪ್ರತಿಯೊಂದು ವಸ್ತುವು ನವೀನ ಅವಸ್ಥೆಯರೂಪದಿಂದ ಉತ್ಪನ್ನವಾಗುತ್ತದೆ ಪೂರ್ವ ಅವಸ್ಥೆಯ ರೂಪದಿಂದ ನಾಶವಾಗುತ್ತದೆ ಮತ್ತು ವಸ್ತುರೂಪದಿಂದ ಧ್ರುವವಿರುತ್ತದೆ. ಹೀಗೆ ವಸ್ತುವಿನ ಸ್ವಭಾವವಿದೆಯೆಂದು ಸರಿಯಾಗಿ ತಿಳಿದುಕೊಂಡರೆ ಭ್ರಾಂತಿಯ ಪರ್ಯಾಯದ ನಾಶವಾಗುತ್ತದೆ ಮತ್ತು ಸಮ್ಯಗ್ಜ್ಞಾನವು ಉತ್ಪನ್ನವಾಗುತ್ತದೆ.

ಸರ್ವಜ್ಞ ಭಗವಂತರು ಕೇವಲಜ್ಞಾನದ ಮುಖಾಂತರ ಈ ಜಗತ್ತಿನಲ್ಲಿ ಆರು ಪದಾರ್ಥಗಳನ್ನು ನೋಡಿದ್ದಾರೆ. ಅವು ಆರೂ ಅಸ್ತಿರೂಪವಿದ್ದು ಅವುಗಳಲ್ಲಿ ಐದು ಅಸ್ತಿಕಾಯರೂಪವಿವೆ ಜೀವ, ಪುದ್ಗಲ, ಧರ್ಮ, ಅಧರ್ಮ, ಆಕಾಶ ಮತ್ತು ಕಾಲ ಈ ಆರು ದ್ರವ್ಯಗಳಲ್ಲಿ ಕಾಲದ್ರವ್ಯವೊಂದನ್ನು ಹೊರತುಪಡಿಸಿ ಉಳಿದ ಐದು ದ್ರವ್ಯಗಳು ಅಸ್ತಿಕಾಯಗಳಿವೆ.

ಆ ಎಲ್ಲ ದ್ರವ್ಯಗಳು ತಮ್ಮ - ತಮ್ಮ ಗುಣಪರ್ಯಾಯಗಳೊಡನೆ ಸ್ಥಿರವಾಗಿ ಉಳಿದುಕೊಂಡಿವೆ. ಯಾವುದೇ ದ್ರವ್ಯದ ಗುಣ-ಪರ್ಯಾಯಗಳ ಜೊತೆ ಇನ್ನೊಂದು ದ್ರವ್ಯದ ಸಂಬಂಧವಿಲ್ಲ . ಪದಾರ್ಥಗಳದ್ದು ಅಸ್ತಿತ್ವಸ್ವಭಾವವಿದೆ ಅದು ಉತ್ಪಾದ-ವ್ಯಯ-ಧ್ರುವ ಸಹಿತವಿದೆ ಎಂದರೆ ಅವು ಧ್ರುವತ್ವದಿಂದ ಸ್ಥಿರವಿದ್ದು ಹೊಸ ಪರ್ಯಾಯಗಳು ಉತ್ಪನ್ನವಾಗುತ್ತವೆ ಹಳೆಯ ಪರ್ಯಾಯಗಳು ವ್ಯಯವಾಗುತ್ತವೆ.

ಶರೀರದ ಕ್ರಿಯೆಯಿಂದ ಧರ್ಮವಾಗುತ್ತದೆಯೆಂದು ಜನರಿಗೆ ಎನಿಸಿದೆ. ಆದರೆ ಆತ್ಮನ ಪರಿಣಾಮದಲ್ಲಿ ತಾನು ಏನು ಮಾಡಿದ್ದೇನೆಂಬುದನ್ನು ನೋಡುವುದಿಲ್ಲ . ಶರೀರವು ಎರಡು ಗಳಿಗೆ ಸ್ಥಿರವಿರುವುದಂತೂ ಅದು ಜಡದ

ಪರ್ಯಾಯದ ಉತ್ಪಾದವಿದೆ ಅದರ ಪರಿಣಾಮದಲ್ಲಿ ಆತ್ಮನ ಅಧಿಕಾರವಿಲ್ಲ ಎಂದರೆ ಅದರಲ್ಲಿ ಆತ್ಮನ ಸಾಮಾಯಿಕವಿಲ್ಲ. ಆತ್ಮನ ಅಸ್ತಿತ್ವವಂತೂ ಆತ್ಮನ ಉತ್ಪಾದ-ವ್ಯಯ-ಧ್ರುವದಲ್ಲಿದೆ. ತನ್ನ ಪರಿಣಾಮವು ಶರೀರದ ಕ್ರಿಯೆಯಿಂದ ಆಗುವುದಿಲ್ಲ. ಆದಾಗ್ಯೂ ಶರೀರದ ಕ್ರಿಯೆಯಿಂದ ತನ್ನ ಉತ್ಪಾದ-ವ್ಯಯ-ಧ್ರುವವನ್ನು ಮನ್ನಿಸುವುದು ಅದು ಮಿಥ್ಯಾತ್ವವಿದೆ. ತನ್ನಲ್ಲಿ ಶುಭ ಪರಿಣಾಮಗಳಾಗುವುದು ಕೂಡ ಕ್ಷಣಿಕ ಪರ್ಯಾಯವಿದೆ ಅದರ ಆಧಾರದಿಂದಲೇ ಧರ್ಮವಾಗುತ್ತದೆಯೆಂದು ಮನ್ನಿಸಿಕೊಂಡರೆ ಅವನು ದ್ರವ್ಯ-ಗುಣಗಳನ್ನು ಮನ್ನಿಸಲಿಲ್ಲ, ಆದರೆ ಪರ್ಯಾಯವನ್ನೇ ಪೂರ್ಣದ್ರವ್ಯವೆಂದು ಮನ್ನಿಸಿದನು ಎಂದರೆ ಅವನು ಕೂಡ ಪರ್ಯಾಯಮೂಢನಿದ್ದಾನೆ.

ಗುಣಗಳು ಯಾವಾಗಲೂ ಧ್ರುವವಿದ್ದರೆ ಪರ್ಯಾಯಗಳು ಕ್ಷಣಿಕ ಉತ್ಪಾದ-ವ್ಯಯರೂಪವಿವೆ. ಹೀಗೆ ವಸ್ತುವಿನ ಅಸ್ತಿತ್ವವನ್ನು ಉತ್ಪಾದ-ವ್ಯಯ-ಧ್ರುವರೂಪವೆಂದು ಮನ್ನಿಸಬೇಕು. ಪ್ರತಿಯೊಂದು ದ್ರವ್ಯದ ಅಸ್ತಿತ್ವವು ತನ್ನ ಉತ್ಪಾದ-ವ್ಯಯ-ಧ್ರುವದಿಂದಿದೆ. ಯಾವುದರ ಕಾರಣ ಯಾವುದೇ ಪದಾರ್ಥದ ಉತ್ಪಾದವಾಗುವುದಿಲ್ಲ . ವಸ್ತುವು ತಾನು ತನ್ನ ಸಾಮರ್ಥ್ಯದಿಂದ ಹೊಸ-ಹೊಸದಾಗಿ ಉತ್ಪನ್ನವಾಗುತ್ತದೆ.

ಭಾಷೆ ಹೊರಡುವುದು ಅದು ಪುದ್ಗಲದ ಉತ್ಪಾದವಿದೆ, ಆತ್ಮನು ಅದರ ಕರ್ತೃವಿಲ್ಲ . ಯಾವ ರೀತಿ ವಸ್ತುಸ್ವರೂಪವಿದೆ ಹಾಗೆ ಆಗಮದಿಂದ ಎಂದರೆ ಭಾವಶ್ರುತಜ್ಞಾನದಿಂದ ತಿಳಿದುಕೊಳ್ಳುವ ಮಾತಿದೆ. ಪ್ರತಿಯೊಂದು ಆತ್ಮ ಮತ್ತು ಜಡಪದಾರ್ಥಗಳು ಅಸ್ತಿತ್ವಸ್ವಭಾವವುಳ್ಳವುಗಳಿವೆ. ಅಸ್ತಿತ್ವವು ಉತ್ಪಾದ-ವ್ಯಯ ಮತ್ತು ಧ್ರುವ ಸಹಿತವಿದೆ. ಶರೀರದಲ್ಲಿ ರೋಗವಾಗುವುದು ಅದು ಪುದ್ಗಲಪರ್ಯಾಯದ ಉತ್ಪಾದವಿದೆ. ಅದರ ಅಸ್ತಿತ್ವದಲ್ಲಿನ ರೋಗವನ್ನು ಹೋಗಲಾಡಿಸುವಂತೆ ಆತ್ಮನ ಅಧಿಕಾರವಿಲ್ಲ .

ಪ್ರತಿಯೊಂದು ಪದಾರ್ಥವು ತನ್ನ ಗುಣ-ಪರ್ಯಾಯ ಸಹಿತವಾಗಿ ಇಲ್ಲದಿದ್ದರೆ ವಸ್ತುವಿನ ಲೋಪವೇ ಆಗುವ ಸಾಧ್ಯತೆಯಿದೆ. ದ್ರವ್ಯ-ಗುಣ-ಪರ್ಯಾಯದಲ್ಲಿ ಕಥಂಚಿತ್ ಭೇದವಿದೆ, ಆದರೆ ಸರ್ವಥಾ ಭೇದವಿಲ್ಲ . ಯಾವ ಪ್ರಕಾರ ಒಂದು ಪರಮಾಣವು ಇನ್ನೊಂದು ಪರಮಾಣುವಿನಿಂದ ಸರ್ವಥಾ ಭಿನ್ನವಿದೆ, ಆದರೆ ಆ ಪರಮಾಣವು ತನ್ನ ಗುಣ-ಪರ್ಯಾಯಗಳಿಂದ ಸರ್ವಥಾ ಭಿನ್ನವಿಲ್ಲ . ಅದೇ ಪ್ರಕಾರ ವಸ್ತುವಿದೆ. ತನ್ನ ಗುಣ-ಪರ್ಯಾಯಗಳ ಜೊತೆ ನಾಮಭೇದ, ಸಂಖ್ಯಾಭೇದ, ಪ್ರಯೋಜನ ಭೇದದಂಥ ಭೇದಗಳಿದ್ದರೂ ಕೂಡ ಸತ್ತಾ ಭೇದ ಅಥವಾ ಕ್ಷೇತ್ರಭೇದವಿಲ್ಲ. ದ್ರವ್ಯ-ಗುಣ-ಪರ್ಯಾಯದ ಸತ್ತಾವಂತೂ ಒಂದೇ ಇದೆ. ಆ ದ್ರವ್ಯದಿಂದ ಗುಣ-ಪರ್ಯಾಯಗಳು ಬೇರೆಯಾದರೆ ವಸ್ತುವಿನದೇ ಅಭಾವವಾಗಿ ಹೋಗುವುದು.

ವಸ್ತುವಿನ ಅಸ್ತಿತ್ವವು ಯಾವ ರೀತಿಯಿದೆಯೆಂಬುದನ್ನು ತಿಳಿದುಕೊಂಡಲ್ಲದೆ ಪರದ ಕುರಿತಾಗಿರುವ ಅಹಂಕಾರದ ಮಿಥ್ಯಾಭಾವವು ದೂರವಾಗುವುದಿಲ್ಲ; ಎಂದರೆ ಧರ್ಮವಾಗುವುದಿಲ್ಲ . ಮೊದಲು ನಿಜವಾದ ತಿಳಿವಳಿಕೆ ಮಾಡಿಕೊಳ್ಳುವುದೇ ಅಜ್ಞಾನದ ಪ್ರತಿಕ್ರಮಣವಿದೆ; ಆ ಪ್ರತಿಕ್ರಮಣವು ಹೇಗಾಗುತ್ತದೆಯೆಂಬುದರ ಮಾತು ನಡೆಯುತ್ತಿದೆ. ಮೊದಲು ಅಜ್ಞಾನಿಯು ಮಿಥ್ಯಾತ್ವದ ಪ್ರತಿಕ್ರಮಣ ಮಾಡಿದ ನಂತರವೇ ಅವ್ರತದ ಪ್ರತಿಕ್ರಮಣವಾಗುವ ಸಾಧ್ಯತೆಯಿದೆ. ಮಿಥ್ಯಾತ್ವದ ತ್ಯಾಗವಿಲ್ಲದೆ ಅವ್ರತದ ತ್ಯಾಗವಾಗುವುದೇ ಇಲ್ಲ . ಮೊದಲು ಮಿಥ್ಯಾತ್ವದ ಶಲ್ಯವು ತೊಲಗಿ ನಿಃಶಲ್ಯವಾದ ನಂತರವೇ ಅವ್ರತದ ಪಾಪ ತೊಲಗುವುದು. ಮಿಥ್ಯಾತ್ವವು ದೊಡ್ಡ ಪಾಪವಿದ್ದು ಅದರ ಪ್ರತಿಕ್ರಮಣವು ನಿಜವಾದ ತಿಳಿವಳಿಕೆಯಿಂದಲೇ ಆಗುತ್ತದೆ. ಇದರ ಹೊರತಾಗಿ ಮಿಥ್ಯಾತ್ವದ ಪ್ರತಿಕ್ರಮಣದ ಸಲುವಾಗಿ ಬೇರೆ ಯಾವುದೇ ಕ್ರಿಯೆಯಿಲ್ಲ - ಈ ಕ್ರಿಯೆಯನ್ನು ಜೀವನು ಅನಾದಿಯಿಂದ ಎಂದೂ ಮಾಡಿಯೇ ಇಲ್ಲ ಎಂದರೆ ಅಪೂರ್ವವಿದೆ.

ಪ್ರತಿಯೊಂದು ಆತ್ಮ ಅಥವಾ ಜಡಪದಾರ್ಥವು ತನ್ನ ಗುಣ-ಪರ್ಯಾಯ ಸಹಿತ ಅಸ್ತಿತ್ವವುಳ್ಳದ್ದಿದೆ. ಪದಾರ್ಥವನ್ನು

ಅದರ ಗುಣ-ಪರ್ಯಾಯದಿಂದ ಸರ್ವಥಾಭಿನ್ನವೆಂದು ಮನ್ನಿಸಿದರೆ ಹೇಗೆ ಆತ್ಮ ಮತ್ತು ಪರಮಾಣುವಿನದು ಒಂದು ಇನ್ನೊಂದರಲ್ಲಿ ಸರ್ವಥಾ ಅಭಾವವಿದೆ ಹಾಗೆ ಗುಣ-ಪರ್ಯಾಯವಿಲ್ಲದೆ ದ್ರವ್ಯದ ಸರ್ವಥಾ ಅಭಾವವಾಗಿ ಹೋಗುವುದು ವಸ್ತುವಿನ ಅಸ್ತಿತ್ವವನ್ನು ತಿಳಿದುಕೊಂಡಲ್ಲದೆ ಧರ್ಮವಾಗಲಾರದು ಹೇಗೆ ದುಂಬಿಯು ಮೂಗಿನಲ್ಲಿ ಹೊಲಸನ್ನಿಟ್ಟುಕೊಂಡು ಗುಲಾಬಿ ಪುಷ್ಪದ ಮೇಲೆ ಕುಳಿತುಕೊಂಡರೆ ಅದಕ್ಕೆ ಗುಲಾಬದ ಸುಗಂಧ ಬರುವುದಿಲ್ಲ ಹಾಗೆ ಯಾರಿಗೆ ವಸ್ತುವಿನ ಸಮ್ಯಕ್ ಸ್ವರೂಪದ ಅರಿವಿಲ್ಲ ಅವರು ಅಂತರಂಗದಲ್ಲಿ ಮಿಥ್ಯಾಬುದ್ಧಿ ಮತ್ತು ಮಿಥ್ಯಾಜ್ಞಾನವಿಟ್ಟುಕೊಂಡು ಬೇಕಾದಷ್ಟು ಮಾಡಿದರೂ ಕೂಡ ಅದೆಲ್ಲವೂ ಅಧರ್ಮವಿದೆ ; ಅವರಿಗೆ ಧರ್ಮದ ಸುಗಂಧದ ಅನುಭವವಾಗುವುದಿಲ್ಲ.

ವಸ್ತುವನ್ನು ಸಿದ್ಧಮಾಡುವುದಕ್ಕಾಗಿ ದ್ರವ್ಯ-ಗುಣ -ಪರ್ಯಾಯದ ಭೇದದಿಂದ ಕಥನ ಮಾಡಿದೆ. ಆದರೆ ನಿಜವಾಗಿ ದ್ರವ್ಯದಿಂದ ಅದರ ಗುಣ-ಪರ್ಯಾಯಗಳು ಭಿನ್ನವಿಲ್ಲ . ವಸ್ತುವಿನ ಗುಣ-ಪರ್ಯಾಯದ ಕ್ಷೇತ್ರ ಅಥವಾ ಸತ್ತಾ ಭಿನ್ನವಿಲ್ಲ. ಸರ್ವಥಾ ಅಭೇದವಿದ್ದರೆ ಒಂದು ಪರ್ಯಾಯದಷ್ಟು ಅಥವಾ ಒಂದು ಗುಣದಷ್ಟೇ ದ್ರವ್ಯವಾಗಿ ಹೋಗುವುದು. ಅದರಂತೆ 'ಇದು ದ್ರವ್ಯ ಮತ್ತು ಇದು ಗುಣ'ವೆಂದು ಭೇದ ಮಾಡಿ ಕಥನ ಕೂಡ ಆಗುವ ಸಾಧ್ಯತೆಯಿಲ್ಲ ಎಂದರೆ ಕಥಂಚಿತ್ ಗುಣ ಗುಣಿಯೆಂಬ ಭೇದಕೂಡ ಇದೆ, ಆದರೆ ಸರ್ವಥಾಭೇದವಿಲ್ಲ . ವಸ್ತುವನ್ನು ಸಿದ್ಧಮಾಡುವುದಕ್ಕಾಗಿ ಗುಣ-ಪರ್ಯಾಯದ ಭೇದಮಾಡಿ ಕಥನ ಮಾಡಿದೆ. ಆದರೆ ವಸ್ತುವಂತೂ ಕಥಂಚಿತ್ ಅಭೇದವಿದೆ ಎಂದರೆ ಈ ರೀತಿ ವಸ್ತುವು ಕಥಂಚಿತ್ ಭೇದ-ಅಭೇದರೂಪವಿದೆ.

ಅಹಾ ! ಆಚಾರ್ಯದೇವರು ಕಾಡಿನಲ್ಲಿ ಆತ್ಮನ ಅನುಭವ ಪಡೆಯುತ್ತಿರುವಾಗ ವಿಕಲ್ಪವುಂಟಾಯಿತು ಮತ್ತು ಈ ಶಾಸ್ತ್ರದ ರಚನೆಯಾಗಿಬಿಟ್ಟಿತು. ಆದರೆ ಅವರು ಇದು ಶಬ್ದ ಪರ್ಯಾಯವಾಗಿದೆ ಅದು ಪುದ್ಗಲದ ಜೊತೆ ಅಭೇದವಿದೆಯೆಂದು ಹೇಳಿದ್ದಾರೆ. ಇದರದು ನನ್ನಿಂದ ಅತ್ಯಂತ ಭೇದವಿದೆ, ನಾವಂತೂ ಪುದ್ಗಲ ಪರ್ಯಾಯದ ಕರ್ತೃಗಳಿಲ್ಲ. ನಮ್ಮ ಆತ್ಮನು ನಮ್ಮ ಗುಣ-ಪರ್ಯಾಯಗಳ ಜೊತೆ ಅಭೇದನಿದ್ದಾನೆ. ಪ್ರತಿಯೊಂದು ದ್ರವ್ಯವು ತನ್ನ-ತನ್ನ ಗುಣ-ಪರ್ಯಾಯಗಳಿಂದ ಅಭೇದವಿದೆ ಮತ್ತು ಪರದಿಂದ ಭೇದರೂಪವಿದೆ. ಭಿನ್ನವಿದೆ ಈ ಪ್ರಕಾರ ವಸ್ತುವಿನ ಸ್ವರೂಪವು (ಅಸ್ತಿತ್ವವು) ಗುಣಪರ್ಯಾಯ ಸಹಿತ ಮತ್ತು ಉತ್ಪಾದ-ವ್ಯಯ-ಧ್ರುವ ಸಹಿತವಿದೆಯೆಂದು ಹೇಳಿದೆ,

ಈಗ ಐದು ದ್ರವ್ಯಗಳಿಗೆ ಅಸ್ತಿಕಾಯತನವಿದೆ, ಅದರಲ್ಲಿ ಕಾಯಕ ತನವು ಯಾವ ರೀತಿಯಿದೆ ಅದನ್ನು ಹೇಳುತ್ತಾರೆ. ಕಾಯ ಎಂದರೆ ಈ ಸ್ಥೂಲ ಶರೀರದ ಮಾತಿಲ್ಲ . ಆದರೆ ವಸ್ತುವಿನ ಅನೇಕ ಪ್ರದೇಶಗಳ ಯಾವ ಪಿಂಡವಿದೆ ಅದೇ ಕಾಯಕವಿದೆ ಅದೇ ಅದರ ಕಾಯವಿದೆ.

ಈ ಶರೀರವು ಆತ್ಮನ ಕಾಯವಲ್ಲ ಅದಂತೂ ಪುದ್ಗಲದ ಕಾಯವಿದೆ. ಆತ್ಮನ ಅಸಂಖ್ಯ ಚೈತನ್ಯ ಪ್ರದೇಶಗಳಿವೆ ಅದೇ ಆತ್ಮನ ಕಾಯವಿದೆ. ಜಡಕಾಯವು ಆತ್ಮನಿಗೆ ಎಂದೂ ಇಲ್ಲ . ಜಡಕಾಯವು ಅದು ಪುದ್ಗಲಾಸ್ತಿಕಾಯವಿದೆ. ಅದರಲ್ಲಿ ಆತ್ಮನ ಅಸ್ತಿತ್ವವಿಲ್ಲ . ಎಂದರೆ ಜಡಶರೀರವನ್ನು ಆತ್ಮನೆಂದು ಮನ್ನಿಸಿದವನು ಜೀವಾಸ್ತಿಕಾಯವನ್ನು ಮತ್ತು ಪುದ್ಗಲಾಸ್ತಿಕಾಯವನ್ನು ಬೇರೆಯೆಂದು ತಿಳಿದುಕೊಂಡಿಲ್ಲ .

ಕಾಲವನ್ನು ಹೊರತುಪಡಿಸಿ ಐದೂ ದ್ರವ್ಯಗಳಿಗೆ ಕಾಯಗಳಿವೆ, ಕಾಯವೆಂದರೆ ಪ್ರದೇಶಗಳ ಸಮೂಹವು. ಪ್ರದೇಶಕ್ಕೆ ಸೂಕ್ಷ್ಮ ಅವಿಭಾಗ ಅಂಶವಿದೆ ಅದನ್ನು ಸರ್ವಜ್ಞರ ಹೊರತಾಗಿ ಬೇರೆಯಾರೂ ತಿಳಿಯುವ ಸಾಧ್ಯತೆಯಿಲ್ಲ , ಆತ್ಮನಿಗೆ ಅವಯವ ಇವೆ. ಈ ಕೈ-ಕಾಲುಗಳು ಜಡದ ಅವಯವವಿವೆ, ಅವೇನು ಆತ್ಮನ ಅವಯವವಲ್ಲ . ಅಸಂಖ್ಯ ಚೈತನ್ಯ ಪ್ರದೇಶಗಳು ಅವು ಆತ್ಮನ ಅವಯವವಿವೆ. ಆತ್ಮನ ಅವಯವಗಳೆಷ್ಟೆಂದರೆ ಅಸಂಖ್ಯವಿವೆ. ಜೀವ, ಧರ್ಮ, ಮತ್ತು ಅಧರ್ಮ ಈ ಮೂರರ ಕಾಯಗಳು ಅಸಂಖ್ಯಾತ ಪ್ರದೇಶಿಯಿವೆ. ಪುದ್ಗಲದ ಕಾಯವು ಎರಡು ಅಂಶದಿಂದ ಹಿಡಿದು

ಅನಂತ ಅಂಶವುಳ್ಳದ್ದಿದೆ. ಆಕಾಶದ ಕಾಯವು ಅನಂತ ಪ್ರದೇಶಿಯಿದೆ. ಕಾಲಕ್ಕೆ ಒಂದೇ ಪ್ರದೇಶವಿರುವುದರಿಂದ ಅದಕ್ಕೆ ಕಾಯವಿಲ್ಲ.

ಇಲ್ಲಿ ಜೀವದ ಅಸಂಖ್ಯ ಪ್ರದೇಶಗಳನ್ನು ಹೇಳಿದೆ ಅವು ಅಂಶ ಕಲ್ಪನೆಯಿಂದಿವೆ. ಆ ಪ್ರದೇಶಗಳೆಂದೂ ಬೇರೆಯಾಗುವುದಿಲ್ಲ . ಇದೇ ಪ್ರಕಾರ ಧರ್ಮ, ಅಧರ್ಮ ಮತ್ತು ಆಕಾಶದಲ್ಲಿ ಕೂಡ ಅಂಶಗಳು ಬೇರೆಯಾಗುವುದಿಲ್ಲ . ಪುದ್ಗಲದಲ್ಲಿ ಸ್ಕಂಧಗಳಾಗುತ್ತವೆ ಮತ್ತು ಬೇರೆ ಕೂಡ ಆಗುತ್ತವೆ ಎಂದರೆ ಪುದ್ಗಲಕ್ಕೆ ಕಾಯತನವು ಉಪಚಾರದಿಂದಿದೆ.

ಒಂದು ದ್ರವ್ಯದಲ್ಲಿ ಅನೇಕ ಪ್ರದೇಶಗಳ ಯಾವ ಅಂಶ ಕಲ್ಪನೆಯಿದೆ ಅದನ್ನು ಪರ್ಯಾಯವೆಂದು ಹೇಳಿದೆ. ಇಡೀ ಕ್ಷೇತ್ರಗಳ ಒಂದು ಅಂಶ ಮಾಡುವುದಕ್ಕಾಗಿ ಅದು ಕೂಡ ಪರ್ಯಾಯವಿದೆ. ಒಂದು ಪ್ರದೇಶವು ಅದು ಇನ್ನೊಂದರಂತಿಲ್ಲ . ಅದು ಹೀಗಿಲ್ಲದಿದ್ದರೆ ಮತ್ತು ಒಂದು ಪ್ರದೇಶವು ಅದು ಇನ್ನೊಂದು ಪ್ರದೇಶತ್ವದಿಂದಿದ್ದರೆ ವಸ್ತುವಿನ ಅನೇಕ ಪ್ರದೇಶಗಳೇ ಸಿದ್ಧವಾಗುವುದಿಲ್ಲ . ಆತ್ಮನ ಅಸಂಖ್ಯ ಪ್ರದೇಶಗಳು ಅನಾದಿ ಅನಂತವಿವೆ. ಅವನ ಯಾವ ಪ್ರದೇಶವು ಬೇರೆ ಪ್ರದೇಶತನದಿಂದ ಎಂದೂ ಆಗುವುದಿಲ್ಲ . ಆ ಪ್ರದೇಶಗಳ ಕಲ್ಪನೆಗೆ ಪರ್ಯಾಯವೆಂದು ಹೇಳುತ್ತಾರೆ. ಇದು ಕ್ಷೇತ್ರ ಪರ್ಯಾಯವಿದೆ ಎಂದರೆ ಕ್ಷೇತ್ರ ಅಪೇಕ್ಷೆಯಿಂದ ಅದನ್ನು ಉತ್ಪಾದ-ವ್ಯಯ-ಧ್ರುವವೆಂದು ಹೇಳಲಾಗುವುದು. ಅದು ಹೇಗೆಂದರೆ-ಒಂದು ಪ್ರದೇಶವನ್ನು ಲಕ್ಷದಲ್ಲಿ ತೆಗೆದುಕೊಂಡರೆ ಅದು ಪ್ರದೇಶತ್ವ ಪಡೆಯುವುದರಿಂದ ಉತ್ಪಾದರೂಪ, ಪೂರ್ವಪ್ರದೇಶದ ಅಪೇಕ್ಷೆಯಿಂದ ವ್ಯಯರೂಪ ಮತ್ತು ವಸ್ತುವಿನ ಅಸಂಖ್ಯ ಕ್ಷೇತ್ರದ ಅಪೇಕ್ಷೆಯಿಂದ ಅದು ಧ್ರುವರೂಪವಿದೆ. (ಹೆಚ್ಚು ತಿಳಿದುಕೊಳ್ಳಬೇಕಾದರೆ ವಸ್ತುವಿಜ್ಞಾನ ಅಂಶವನ್ನು ನೋಡಿರಿ.)

ಆನೆಯ ಅಥವಾ ಚಿಕ್ಕ ಕ್ರಿಮಿಯ ಆತ್ಮದಲ್ಲಿ ಅಸಂಖ್ಯ ಪ್ರದೇಶಗಳು ಸಮಾನವೇ ಇವೆ. ಅಸಂಖ್ಯ ಪ್ರದೇಶವೆಂದು ಹೇಳುವುದರಿಂದೇನು ವಸ್ತುವು ಖಂಡಿತವಾಗಿ ಹೋಗುವುದಿಲ್ಲ . ಅಖಂಡ ಒಂದು ವಸ್ತುವಿದ್ದರೂ ಕೂಡ ಅಸಂಖ್ಯ ಪ್ರದೇಶಗಳು ಅದರಲ್ಲಿವೆ. ಹೀಗೆ ಅದರ ಸ್ವಭಾವವಿದೆ. ೪೦ ಮೀಟರ ಬಟ್ಟೆಯನ್ನು ಮೀಟರದಿಂದ ಅಳೆದ ಮೇಲೆ ಅದರಲ್ಲೇನು ೪೦ ತುಂಡುಗಳಾಗಿ ಹೋಗುವುದಿಲ್ಲ . ಆದಾಗ್ಯೂ ಅದು ೪೦ ಮೀಟರ ಇದೆ' ಅಳೆಯುವುದು ಕೂಡ ಅಸತ್ಯವಿಲ್ಲ . ಅದರಿಂತೆ ಆತ್ಮನು ಅಖಂಡವಿದ್ದು ಅವನನ್ನು ಸೂಕ್ಷ್ಮ ಪ್ರದೇಶದ ಅಳತೆಯಿಂದ ಅಳೆದರೆ ಅಸಂಖ್ಯ ಪ್ರದೇಶಿಯಾಗುತ್ತಾನೆ ಆದಾಗ್ಯೂ ಅವನ ಅಸಂಖ್ಯ ತುಂಡುಗಳಾಗಿ ಆಗಿಹೋಗುವುದಿಲ್ಲ .

ಯಾವ ಪ್ರಕಾರ ಶ್ರದ್ಧೆ-ಜ್ಞಾನ ಮೊದಲಾದ ಭಾವಗಳ ಪರ್ಯಾಯಗಳಿವೆ ಹಾಗೆ ಕ್ಷೇತ್ರದ ಪರ್ಯಾಯಗಳೂ ಕೂಡ ಇವೆ. ಎಲ್ಲ ದ್ರವ್ಯಗಳಿಗೆ ತಮ್ಮ ಸ್ವರೂಪದಿಂದ ಏಕತೆಯಿದೆ. ಯಾವ ಪ್ರಕಾರ ಗುಣ-ಪರ್ಯಾಯಗಳದ್ದು ಕಥಂಚಿತ್ ಭೇದವಿದ್ದರೂ ಕೂಡ ಅವುಗಳಿಂದ ವಸ್ತುವು ಬೇರೆಯಿಲ್ಲ ಅದೇ ಪ್ರಕಾರ ಕ್ಷೇತ್ರದಲ್ಲಿ ಅಂಶ ಕಲ್ಪನೆಯಿಂದ ಭೇದವಿದ್ದರೂ ಕೂಡ ವಸ್ತುವಿನಲ್ಲಿ ಭೇದವಾಗಿ ಹೋಗುವುದಿಲ್ಲ . ವಸ್ತು ತ್ವದಿಂದಂತೂ ಒಂದು -ಅಖಂಡವೇ ಇದೆ.

ಹೀಗೆ ವಸ್ತುವಿನ ಸ್ವರೂಪ-ಅಸ್ತಿತ್ವ ತಿಳಿದುಕೊಂಡರೆ ಭೂಮಿಕೆಯ ಶುದ್ಧಿಯಾಗುವುದು. ಅನಂತರ ಅಭಿರುಚಿಯ ಅಂತರಂಗದಲ್ಲಿ ವಾಣಿರೂಪದ ಬೀಜ ಬಿದ್ದರೆ ಧರ್ಮರೂಪದ ಮರವಾಗುವುದು. ವಸ್ತುವನ್ನು ತಿಳಿದುಕೊಂಡಲ್ಲದೆ ಮತ್ತು ಅದರ ಅಭಿರುಚಿಯಿಲ್ಲದೆ ಧರ್ಮವಾಗುವುದಿಲ್ಲ .

ಮನೆಯು ಇದು ಆತ್ಮನ ಕ್ಷೇತ್ರವಲ್ಲ . ಯಾರ ಮನೆ, ಯಾರ ಆಹಾರ, ಯಾರ ಶರೀರ ಇವೆಲ್ಲವೂ ಪುದ್ಗಲವಿವೆ. ಆತ್ಮನ ಕ್ಷೇತ್ರವಂತೂ ತನ್ನ ಅಸಂಖ್ಯ ಪ್ರದೇಶಗಳಿವೆ. ಐದೂ ದ್ರವ್ಯಗಳಿಗೆ ತಮ್ಮ-ತಮ್ಮ ಅನೇಕ ಪ್ರದೇಶಗಳಿರುವುದರಿಂದ ಅವು ಕಾಯವುಳ್ಳವುಗಳಿವೆ. ಈ ರೀತಿಯಾಗಿ ಐದು ಅಸ್ತಿಕಾಯಗಳ ವರ್ಣನೆ ಮಾಡಲಾಯಿತು.

**ಪ್ರಶ್ನೆ** :- ಪುದ್ಗಲ ಪರಮಾಣುವಂತೂ ನಿರಂತರ ಏಕಪ್ರದೇಶಿಯಿದೆ, ಎಂದ ಬಳಿಕ ಅದು ಕಾಯವುಳ್ಳದ್ದು

ಯಾವ ರೀತಿಯಿದೆ ?

**ಉತ್ತರ :-** ಪುದ್ಗಲ ಪರಮಾಣುಗಳು ರೂಪಿ ಇವೆ, ಸ್ಪರ್ಶ ಮೊದಲಾದ ಗುಣಗಳುಳ್ಳವುಗಳಿವೆ ಎಂದರೆ ಅವುಗಳಲ್ಲಿ ಪರಸ್ಪರ ಮಿಲನ ಶಕ್ತಿಯಿದೆ. ಅದರಿಂದ ಸ್ಕಂಧರೂಪವಾಗುತ್ತವೆ ! ಮತ್ತು ಸ್ಕಂಧ ಅಪೇಕ್ಷೆಯಿಂದ ಅವು ಯಾವಾಗಲೂ ಇವೆ.

ಪುದ್ಗಲವನ್ನು ಹೊರತುಪಡಿಸಿ ಉಳಿದ ಐದು ದ್ರವ್ಯಗಳಂತೂ ಅರೂಪಿಯಿವೆ. ಆ ದ್ರವ್ಯಗಳ ಸಂಬಂಧವು ಇನ್ನೊಂದು ದ್ರವ್ಯದೊಡನೆ ಸ್ಕಂಧರೂಪದಿಂದ ಆಗುವುದಿಲ್ಲ . ಒಂದು ಪುದ್ಗಲದಲ್ಲಿಯೇ ಅಂಥ ಯೋಗ್ಯತೆಯಿರುವುದರಿಂದ ಅನೇಕ ಪುದ್ಗಲಗಳ ಸ್ಕಂಧವಾಗುತ್ತದೆ. ಆದರೆ ಸ್ಕಂಧದಲ್ಲೂ ಕೂಡ ಅದು ದ್ರವ್ಯತನದಿಂದ ಬೇರೆಯೇ ಇದೆ. ಆದಾಗ್ಯೂ ಸ್ಕಂಧ ಅಪೇಕ್ಷೆಯಿಂದ ಅದಕ್ಕೂ ಕೂಡ ಯೋಗ್ಯತೆಯಿದೆ.

''ಜೀವ, ಧರ್ಮಾಸ್ತಿ, ಅಧರ್ಮಾಸ್ತಿ ಮತ್ತು ಆಕಾಶಗಳಂತೂ ಅಖಂಡ ಅಮೂರ್ತಿಕ ದ್ರವ್ಯಗಳಿವೆ ಅದಕ್ಕಾಗಿ ಅವುಗಳಲ್ಲಿ ಪ್ರದೇಶಗಳ ಅಂಶ ಕಲ್ಪನೆಯಾಗುವ ಸಾಧ್ಯತೆಯಿಲ್ಲ''ವೆಂದು ಇಲ್ಲಿ ಯಾರೂ ಆಶಂಕೆ ಮಾಡಲಾರರು. ಪುದ್ಗಲವು ಮೂರ್ತಿಕವಿದೆ ಅದಕ್ಕಾಗಿ ಅದರಲ್ಲಿಯೇ ಅಂಶ ಕಲ್ಪನೆಯಿದೆ ಮತ್ತು ಜೀವ ಮೊದಲಾದ ಅಮೂರ್ತಿಕ ಅಖಂಡ ದ್ರವ್ಯಗಳಲ್ಲಿ ಅಂಶ ಕಲ್ಪನೆಯಾಗುವ ಸಾಧ್ಯತೆಯೇ ಇಲ್ಲ. ಅಖಂಡ ಮತ್ತು ಅಮೂರ್ತಿಕ ಪದಾರ್ಥಗಳಲ್ಲಿ ಕೂಡ ಅಂಶ ಕಲ್ಪನೆಯ ಸಾಧ್ಯತೆಯಿದೆಯೆಂಬ ಮಾತನ್ನು ಆಕಾಶದ ದೃಷ್ಟಾಂತವಿತ್ತು ತಿಳಿಸಿ ಕೊಡುತ್ತಾರೆ.

ಸರ್ವಜ್ಞ ಭಗವಂತರು ಈ ಜಗತ್ತಿನಲ್ಲಿ ಐದು ಅಸ್ತಿಕಾಯಗಳನ್ನು ನೋಡಿದ್ದಾರೆ; ಅವನ್ನು ಹೇಗಿದೆ ಹಾಗೆ ತಿಳಿದುಕೊಂಡರೆ ಜ್ಞಾನವು ರಾಗರಹಿತವಾಗಿ ಆತ್ಮನ ಶಾಂತಿಯ ಅನುಭವ ಪಡೆಯುವ ಸಾಧ್ಯತೆಯಿದೆ. ಜಗತ್ತಿನ ಪದಾರ್ಥಗಳನ್ನು ಜ್ಞಾನದಲ್ಲಿ ತಿಳಿದುಕೊಳ್ಳುವಂತೆ ಜ್ಞಾನದ ಸಾಮರ್ಥ್ಯವಿದೆ, ಯಾವ ಜೀವನು ಜಗತ್ತಿನ ಆರು ದ್ರವ್ಯಗಳನ್ನು ಮನ್ನಿಸುವುದಿಲ್ಲ ಅವನು ಆರು ದ್ರವ್ಯಗಳನ್ನು ತಿಳಿಯುವ ಸಾಮರ್ಥ್ಯವು ಜ್ಞಾನಕ್ಕಿದೆಯೆಂಬುದನ್ನು ಕೂಡ ಮನ್ನಿಸುವುದಿಲ್ಲ ಎಂದರೆ ಅವನಿಗೆ ಜ್ಞಾತಾ ಸ್ವಭಾವದ ಪ್ರತೀತಿಯಿಲ್ಲ.

ಪಂಚಾಸ್ತಿಕಾಯದಲ್ಲಿ ಜೀವ, ಧರ್ಮಾಸ್ತಿ, ಅಧರ್ಮಾಸ್ತಿ ಮತ್ತು ಆಕಾಶ ಇವು ನಾಲ್ಕು ಅರೂಪಿ ದ್ರವ್ಯಗಳಿವೆ ಅವುಗಳಲ್ಲಿ ಕೂಡ ಪ್ರದೇಶಗಳ-ಅಂಶಗಳ ಕಲ್ಪನೆಯಾಗುವ ಸಾಧ್ಯತೆಯಿದೆ; ಅರೂಪಿ ಪ್ರದಾರ್ಥಗಳಿವೆ ಅದಕ್ಕಾಗಿ ಅವುಗಳಲ್ಲಿ ಅಂಶ ಕಲ್ಪನೆಯಾಗುವ ಸಾಧ್ಯತೆಯಿಲ್ಲ ಎನ್ನುವಂತಿಲ್ಲ.

ಭಗವಂತರು ಆರು ದ್ರವ್ಯಗಳನ್ನು ಹೇಳಿದ್ದಾರೆ ಅದರಲ್ಲಿ ಸಂದೇಹಪಟ್ಟರೆ, ವಿಪರೀತವಾಗಿ ಮನ್ನಿಸಿದರೆ ಅಥವಾ ಅವುಗಳ ನಿರ್ಣಯ ಮಾಡದ ಜ್ಞಾನವು ಮಿಥ್ಯಾಜ್ಞಾನವಿದೆ. ಮಿಥ್ಯಾಜ್ಞಾನವಿರುವವರೆಗೆ ಆತ್ಮನ ಅನುಭವವಾಗುವ ಸಾಧ್ಯತೆಯಿಲ್ಲ. ಆತ್ಮನ ಜ್ಞಾನದ ಸಾಮರ್ಥ್ಯವೆಷ್ಟಿದೆ ಅದನ್ನು ತಿಳಿದುಕೊಂಡರೆ ಅದರಲ್ಲಿ ಆರು ದ್ರವ್ಯಗಳ ಪ್ರತೀತಿಯಾಗಿ ಹೋಗುವುದು. ಆರು ದ್ರವ್ಯಗಳನ್ನೇ ಮನ್ನಿಸದಿದ್ದರೆ ಜ್ಞಾನದ ಸಾಮರ್ಥ್ಯದ ಪ್ರತೀತಿಯೇ ಇಲ್ಲ.

ಯಾವ ಐದು ಅಸ್ತಿಕಾಯ ಪದಾರ್ಥಗಳಿವೆ ಅವುಗಳಲ್ಲಿ ಪುದ್ಗಲ ಸ್ಕಂಧದಲ್ಲಂತೂ ಅಂಶಗಳಾಗುತ್ತವೆ. ಆದರೆ ಜೀವ ಮತ್ತು ಧರ್ಮಾಸ್ತಿ ಮೊದಲಾದ ದ್ರವ್ಯಗಳಂತೂ ಅನೇಕ ಪ್ರದೇಶಗಳುಳ್ಳ ಅಖಂಡ ದ್ರವ್ಯಗಳಿವೆಯೆಂದ ಮೇಲೆ ಅವುಗಳಲ್ಲಿ ಅಂಶಗಳು ಹೇಗಾಗುತ್ತವೆ ? ಎಂಬ ಮಾತನ್ನು ತಿಳಿಸಿಕೊಡುತ್ತಾರೆ. ಯಾವ ಪ್ರಕಾರ ಆಕಾಶವು ಒಂದು ಅಖಂಡ ಅಮೂರ್ತ ದ್ರವ್ಯವಿದ್ದರೂ ಕೂಡ ಅದರಲ್ಲಿ 'ಇದು ಘಟಾಕಾಶವಿದೆ ಮತ್ತು ಇದು ಪಟಾಕಾಶವಿದೆ'ಯೆಂಬ ಭಾಗವಾಗುತ್ತದೆ ಅಥವಾ ಎರಡು ಬೆರಳುಗಳಿವೆ ಅದರಲ್ಲಿ ಅವೆರಡರ ಕ್ಷೇತ್ರ ಬೇರೆಯಿವೆ ಒಂದು ಬೆರಳಿನ ಕ್ಷೇತ್ರವಿದೆ ಅದು ಬೇರೆ ಬೆರಳಿನ ಕ್ಷೇತ್ರವಿಲ್ಲವೆಂದು ಹೇಳಬಹುದಾಗಿದೆ. ಆ ಆಕಾಶದಲ್ಲಿ ಅಂಶ ಕಲ್ಪನೆಯಾಗುವ ಸಾಧ್ಯತೆಯಿಲ್ಲದಿದ್ದರೆ

ಎರಡು ಬೆರಳುಗಳು ಬೇರೆಯೆಂದು ಹೇಗೆ ಹೇಳುವ ಸಾಧ್ಯತೆಯಿದೆ ?

ನೋಡಿರಿ ! ಹೀಗೆ ಪದಾರ್ಥವನ್ನು ತಿಳಿದುಕೊಳ್ಳುವುದು ತನ್ನ ಜ್ಞಾನದ ಸ್ವಭಾವವಿದೆ, ಆಕಾಶವೇನು ಆಕಾಶವನ್ನು ತಿಳಿಯುವುದಿಲ್ಲ, ಆದರೆ ಜ್ಞಾನವೇ ಅದನ್ನು ತಿಳಿಯುತ್ತದೆ ಅದು ಜ್ಞಾನ ಸಾಮರ್ಥ್ಯದ ಮಹಿಮೆಯಿದೆ. ಆತ್ಮನ ಅಸಂಖ್ಯ ಪ್ರದೇಶಗಳೇನು ಬಿಡಿ ಬಿಡಿಯಾಗಿ ಹರಡಿಕೊಂಡಿರುವುದಿಲ್ಲ, ಅಸಂಖ್ಯ ಪ್ರದೇಶಗಳಿದ್ದರೂ ಕೂಡ ವಸ್ತುತ್ವದಿಂದ ಅವುಗಳ ಅಖಂಡತೆಯಿದೆ. ಆತ್ಮನ ಅಸಂಖ್ಯ ಪ್ರದೇಶಗಳಿವೆ ಅವುಗಳ ಯಾವ ಒಂದು ಭಾಗವಿದೆ ಆ ಭಾಗವು ಬೇರೆ ಭಾಗದಲ್ಲಿಲ್ಲ, ಹೀಗೆ ಅವುಗಳಲ್ಲಿ ಅಂಶಗಳಾಗುವ ಸಾಧ್ಯತೆಯಿದೆ, ಆದಾಗ್ಯೂ ವಸ್ತುವು ಅಖಂಡವಿದೆ. ಆಕಾಶದಲ್ಲಿ ಕೊಡವು ಯಾವ ಸ್ಥಳದಲ್ಲಿ ನಿಂತುಕೊಂಡಿದೆ ಆ ಸ್ಥಳದಲ್ಲಿ ವಸ್ತ್ರವಿಲ್ಲ ಮತ್ತು ವಸ್ತ್ರವು ಯಾವ ಸ್ಥಳದಲ್ಲಿದೆ ಆ ಸ್ಥಳದಲ್ಲಿ ಕೊಡವಿಲ್ಲ, ಆಕಾಶದಲ್ಲಿ ಕೊಡವಿದ್ದ ಅಂಶ ಬೇರೆಯಿದೆ ಮತ್ತು ವಸ್ತ್ರವಿದ್ದ ಅಂಶ ಬೇರೆಯಿದೆ. ಇದೇ ಪ್ರಕಾರ ಅಖಂಡ ಆಕಾಶದಲ್ಲಿ ಕೂಡ ಪ್ರದೇಶಗಳ ಕಲ್ಪನೆ ಸಂಭವಿಸುವ ಸಾಧ್ಯತೆಯಿದೆ.

ಈ ರೀತಿಯಾಗಿ ಕಾಲದ್ರವ್ಯವೊಂದನ್ನು ಹೊರತುಪಡಿಸಿ ಐದೂ ದ್ರವ್ಯಗಳಿಗೆ ಅಸ್ತಿಕಾಯತನವಿದೆ, ಈ ಐದು ದ್ರವ್ಯಗಳ ಉತ್ಪಾದ-ವ್ಯಯ-ಧ್ರುವದಿಂದ ಮೂರು ಲೋಕದ ರಚನೆಯಿದೆ. ಕಾಲಸಹಿತ ಈ ಐದು ದ್ರವ್ಯಗಳ ಹೊರತಾಗಿ ಜಗತ್ತೇನು ಬೇರೆಯಿಲ್ಲ. ಈ ಆರು ದ್ರವ್ಯಗಳ ಸಮೂಹವೇ ಜಗತ್ತಿದೆ. ಸರ್ವಜ್ಞರ ಹೊರತಾಗಿ ಇಂಥ ಜಗತ್ತನ್ನು ಯಾರೂ ತಿಳಿಯುವ ಸಾಧ್ಯತೆಯಿಲ್ಲ.

ಮುನಿಸುವ್ರತ ಭಗವಂತರ ಸ್ತುತಿ ಮಾಡುತ್ತ ಸ್ವಾಮಿ ಸಮಂತಭದ್ರಾಚಾರ್ಯದೇವರು ಹೀಗೆ ಹೇಳುತ್ತಾರೆ. 'ಓ ಪ್ರಭು ! ಜಗತ್ತಿನ ಪದಾರ್ಥಗಳು ಒಂದು ಸಮಯದಲ್ಲಿಯೇ ಉತ್ಪಾದ-ವ್ಯಯ-ಧ್ರುವಾತ್ಮಕವಿವೆಯೆಂಬ ಯಾವ ವಸ್ತು ಸ್ವರೂಪದ ಕಥನವಿದೆ ಅದು ತಮ್ಮದಿದೆ ಮತ್ತು ಅದು ತಮ್ಮ ಸರ್ವಜ್ಞತೆಯ ಚಿಹ್ನವಿದೆ.' ಸರ್ವಜ್ಞರ ಹೊರತಾಗಿ ಪದಾರ್ಥಗಳ ಇಂಥ ಸೂಕ್ಷ್ಮ ಸ್ವರೂಪವನ್ನು ಯಾರೂ ಪ್ರತ್ಯಕ್ಷ ತಿಳಿಯುವ ಸಾಧ್ಯತೆಯಿಲ್ಲ, ಓ ಪ್ರಭು ! ಈ ರೀತಿ ನಮಗೆ ಎಂದರೆ ತಮ್ಮ ಸರ್ವಜ್ಞತೆಯ ಪರೀಕ್ಷೆ ಮಾಡಿ ಮನ್ನಿಸುವವರಿಗೆ, ಹೀಗೆ ಸರ್ವಜ್ಞತೆಯನ್ನು ತಿಳಿದುಕೊಳ್ಳುವವರಿಗೆ ಸಮ್ಯಗ್ದರ್ಶನ ಮತ್ತು ಸಮ್ಯಗ್ಜ್ಞಾನವಾದಲ್ಲದೆ ಇರಲಾರದು.

ಪಂಚಾಸ್ತಿಕಾಯಗಳ ಪರಿಣಮನದಿಂದಲೇ ಮೂರು ಲೋಕದ ರಚನೆಯಿದೆ. ಓ ಪ್ರಭು ! ತಾವು ಸರ್ವಜ್ಞತೆಯಿಂದ ಯಾವ ವಸ್ತು ಸ್ವಭಾವವನ್ನು ತಿಳಿದುಕೊಂಡಿದ್ದೀರಿ ಆ ಸರ್ವಜ್ಞತೆ ಮತ್ತು ವಸ್ತು ಸ್ವಭಾವವು ನಮಗೆ ನಮ್ಮ ಪ್ರತೀತಿಯಲ್ಲಿ ಕುಳಿತುಕೊಂಡಿದೆ. ನಮ್ಮ ಜ್ಞಾನದಲ್ಲಿ ನಿರ್ಣಯ ಮಾಡಿ ನಾವು ತಮ್ಮನ್ನು ಸರ್ವಜ್ಞ ದೇವರೆಂದು ಮನ್ನಿಸಿದ್ದೇವೆ.

ಓ ಸರ್ವಜ್ಞದೇವ ! ತಾವು ಲೋಕದ ಪ್ರಭು ಹೇಗಿದ್ದೀರಿ ? ಓ ಪ್ರಭು ! ತಮ್ಮ ಆಶ್ರಯದಿಂದ ನಾನು ನನ್ನ ಯಾವ ಸರ್ವಜ್ಞ ಶಕ್ತಿಯ ಪ್ರತೀತಿ ಪಡೆದಿದ್ದೇನೆ ಅದನ್ನು ಬಿಟ್ಟು ಕೊಡಲಾರೆನು ಮತ್ತು ಇದುವರೆಗೆ ದೊರಕಿರದಂಥ ಪರಮಾತ್ಮ ದಶೆಯನ್ನು ಪ್ರಾಪ್ತ ಮಾಡಿಕೊಳ್ಳುವೆನು, ತಾವು ಅದರಲ್ಲಿ ನಿಮಿತ್ತವಿರುವುದರಿಂದ ತಾವೇ ನಮ್ಮ ಪ್ರಭು ಇದ್ದೀರಿ.

ಜಗತ್ತಿನ ಪದಾರ್ಥಗಳಲ್ಲಿ ಉತ್ಪಾದ, ವ್ಯಯ, ಧ್ರುವಗಳೆಲ್ಲವು ತಮ್ಮ ಕಾರಣದಿಂದ ಆಗುತ್ತಲಿವೆ ಅದರಲ್ಲಿ ಯಾರಿಗೆ ಹರ್ಷ ಮತ್ತು ಯಾರಿಗೆ ಶೋಕ ? ಎಂದರೆ ಜ್ಞಾತಾನಾಗಿರುವುದೇ ನನ್ನ ಸ್ವಭಾವವಿದೆ. ಹೀಗೆ ರಾಗದಿಂದ ರಹಿತವಾಗಿ ಜ್ಞಾತಾನಾಗಿರುವುದೇ ಇದನ್ನು ತಿಳಿದುಕೊಳ್ಳುವುದರ ಫಲವಿದೆ.

ಯಾವ ಐದು ಅಸ್ತಿಕಾಯಗಳಿವೆ ಅವುಗಳಿಂದಲೇ ಮೂರು ಲೋಕದ ರಚನೆಯಿದೆ. ಅದರಲ್ಲಿ ಆಕಾಶ, ಧರ್ಮಾಸ್ತಿ ಮತ್ತು ಅಧರ್ಮಾಸ್ತಿಕಾಯಗಳಂತೂ ಊರ್ಧ್ವ, ಮಧ್ಯ ಮತ್ತು ಅಧೋ ಈ ಮೂರು ಲೋಕದಲ್ಲಿ ಕ್ಷಣ ಕ್ಷಣಕ್ಕೆ ಪರಿಣಮಿಸುತ್ತಿವೆ, ಅವು ಅಖಂಡತೆಯಿಂದ ಮೂರು ಲೋಕದಲ್ಲಿ ವ್ಯಾಪಿಸಿವೆಯೆಂದು ಹೇಳಿದೆ, ಮತ್ತು ಊರ್ಧ್ವ, ಮಧ್ಯ

ಮತ್ತು ಅಧೋವೆಂದು ಮೂರು ಲೋಕಗಳನ್ನು ಹೇಳಿ ಅದರಲ್ಲಿ ಭೇದವನ್ನು ಕೂಡ ಹೇಳಿದೆ, ಆಕಾಶವಂತೂ ಅಲೋಕದಲ್ಲಿ ಕೂಡ ವ್ಯಾಪಿಸಿದೆ ಆದರೆ ಇಲ್ಲಿ ಲೋಕದ ವರ್ಣನೆ ಮಾಡುವುದಿರುವುದರಿಂದ ಆಕಾಶವನ್ನು ಲೋಕವ್ಯಾಪಕವೆಂದು ಹೇಳಿದೆ.

ಜೀವಕ್ಕೆ ಅಸಂಖ್ಯ ಪ್ರದೇಶಗಳಿರುವುದರಿಂದ ಅದಕ್ಕೆ ಕಾಯತನವಿದೆ ಮತ್ತು ಕೇವಲೀ ಸಮುದ್ಘಾತದ ಸಮಯದಲ್ಲಿ ಅದು ಮೂರು ಲೋಕದಲ್ಲಿ ವ್ಯಾಪಿಸುತ್ತದೆ ಎಂದರೆ ಅದರಲ್ಲಿ ಕೂಡ ಅಖಂಡದ ಕಲ್ಪನೆಯು ಸಿದ್ಧವಾಗುತ್ತದೆ.

ಪರಮಾಣುವು ತಾನು ಏಕ ಪ್ರದೇಶಿಯಿದ್ದರೂ ಕೂಡ ಮೂರು ಲೋಕಗಳನ್ನು ವ್ಯಾಪಿಸುವಂತೆ ಅನಂತ ಪರಮಾಣುಗಳ ಸ್ಕಂಧವಾಗುತ್ತದೆ, ಆ ಅಪೇಕ್ಷೆಯಿಂದ ಅದಕ್ಕೂ ಕೂಡ ಕಾಯತನ ಮತ್ತುಪ್ರದೇಶತನವು ಸಿದ್ಧವಾಗುತ್ತದೆ.

ಹೀಗೆ ಈ ಪಂಚಾಸ್ತಿಕಾಯಗಳು ಸ್ವಯಂ ಸಿದ್ಧವಿವೆ, ಅವುಗಳ ಉತ್ಪಾದ, ವ್ಯಯ, ಧ್ರುವ ಸ್ವರೂಪವಾಗಿಯೇ ಈ ಲೋಕವಿದೆ. ಲೋಕದ ರಚನೆಯನ್ನು ಯಾರೂ ಹೊಸದಾಗಿ ಮಾಡಿಲ್ಲ, ಯಾವ ಈಶ್ವರನು ಈ ಜಗತ್ತನ್ನು ರಚಿಸಿದಂತಿಲ್ಲ, ವಸ್ತು ನಿತ್ಯವಿದೆಯೆಂದಮೇಲೆ ಅದನ್ನು ಯಾರು ಮಾಡುವರು ? ವಸ್ತುವನ್ನು ರಚಿಸಿದ್ದಾರೆಂದು ಹೇಳ ಹೋದರೆ ಅದು ಕ್ಷಣಿಕವೆಂದು ನಿರ್ಣಯಿಸಲ್ಪಡುತ್ತದೆ. ಸರ್ವಜ್ಞ ದೇವರು ಜಗತ್ತನ್ನು ಅನಾದಿ ಅನಂತ ಐದು ಅಸ್ತಿಕಾಯ ಸಮೂಹ ರೂಪವಾಗಿ ತಿಳಿದಿದ್ದಾರೆ.

ಜಗತ್ತಿನಲ್ಲಿ ಐದು ಅಸ್ತಿಕಾಯ ಮತ್ತು ಕಾಲವೆಂದು ಆರು ದ್ರವ್ಯಗಳಿವೆ. ಕಾಲವು ಅದು ಅಸ್ತಿಕಾಯವಿಲ್ಲ. ಆದರೆ ದ್ರವ್ಯವಿದೆ ಅಸ್ತಿರೂಪವಿದೆ. ಶರೀರವು ಅದು ಪುದ್ಗಲಕಾಯವಿದೆ, ಜೀವವು ಅದರಲ್ಲಿ ವಾಸಿಸುವುದಿಲ್ಲ, ಅಸಂಖ್ಯ ಚೈತನ್ಯ ಪ್ರದೇಶಗಳ ಪಿಂಡವು ಅದು ಜೀವದ ಕಾಯವಿದೆ. ಅದರಲ್ಲಿಯೇ ಜೀವವು ವಾಸಿಸುತ್ತದೆ. ತನ್ನ ಅಸಂಖ್ಯ ಪ್ರದೇಶಗಳು ಜೀವದ ಮನೆಯಿದೆ. ಜೀವದ ಋದ್ಧಿ, ಸಮೃದ್ಧಿ, ಆಲಯ, ಸುಖ, ದುಃಖ, ವಿಚಾರ, ಬದಲಾವಣೆಗಳೆಲ್ಲವು ಅದರ ಅಸಂಖ್ಯ ಪ್ರದೇಶರೂಪ ಅಸ್ತಿಕಾಯದಲ್ಲಿಯೇ ಇವೆ. ಇದರ ಹೊರತಾಗಿ ಬಾಹ್ಯದ ಯಾವ ಋದ್ಧಿ, ಸಿದ್ಧಿ, ಸಮೃದ್ಧಿ, ಶರೀರ ಮೊದಲಾದವುಗಳು ಅದರವಿಲ್ಲ, ತನ್ನ ಅಸಂಖ್ಯ ಪ್ರದೇಶಗಳಲ್ಲಿಯೇ ಚೈತನ್ಯದ ಸ್ವರಾಜ್ಯವಿದೆ; ಬಾಹ್ಯದಲ್ಲೆಲ್ಲೂ ಅದರ ಅಸ್ತಿತ್ವವಿಲ್ಲ, ಮತ್ತು ಅದರಲ್ಲೇನು ಬಾಹ್ಯದ ಅಸ್ತಿತ್ವವಿಲ್ಲ. ಹೀಗೆ ಜ್ಞಾನ ಮಾಡಿಕೊಂಡರೆ ಪರ ಪದಾರ್ಥಗಳ ಅಹಂಕಾರವು ಹೊರಟುಹೋಗುವುದು ಮತ್ತು 'ನಾನಂತೂ ಜೀವಾಸ್ತಿಕಾಯನಿದ್ದೇನೆ'ಂದು ತಿಳಿದುಕೊಂಡರೆ ಮಿಥ್ಯಾತ್ವಪೂರ್ವಕದ ರಾಗಾದಿಗಳು ಹೊರಟು ಹೋಗುವವು. ನಿನ್ನ ಅಸ್ತಿಕಾಯತ್ವವು ನಿನ್ನ ಅಸಂಖ್ಯ ಪ್ರದೇಶಗಳಲ್ಲಿದೆ. ಅನಂತ ಗುಣಗಳ ಮೂರು ಕಾಲದ ಪರ್ಯಾಯಗಳೆಲ್ಲವು ನಿನ್ನ ಅಸಂಖ್ಯ ಪ್ರದೇಶಿ ಅಸ್ತಿತ್ವದಲ್ಲಿ ಸಮಾವೇಶವಾಗಿ ಹೋಗುವವು. ನಿನ್ನ ಸಂಸಾರದ ಅಥವಾ ಮೋಕ್ಷದ ಆಗುವಿಕೆಯು ನಿನ್ನ ಅಸ್ತಿಕಾಯದಲ್ಲಿಯೇ ಇದೆ. ಕರ್ಮದ ಕಾರಣ ಅದರ ಆಗುವಿಕೆಯಿಲ್ಲ, ಕರ್ಮದ ಅಸ್ತಿತ್ವವು ನಿನ್ನಲ್ಲಿಲ್ಲ. ಹೀಗೆ ತಿಳಿದುಕೊಂಡವರು ಪರದಿಂದ ಹಿಂದಿರುಗಿ ತಮ್ಮ ಸ್ವಭಾವದ ಕಡೆಗೆ ಪ್ರವೃತ್ತರಾದಲ್ಲದೆ ಇರಲಾರರು.

ನಿನ್ನ ಅಸ್ತಿಕಾಯತ್ವವು ಅನಾದಿ ಅನಂತವಿದೆ ಎಂದರೆ ಎಲ್ಲ ಗುಣ-ಪರ್ಯಾಯಗಳು ಕೂಡ ಅದರಲ್ಲಿಯೇ ಸಮಾವೇಶವಾಗಿ ಹೋಗುತ್ತದೆ. 'ಅಸ್ತಿ ಸ್ವಭಾವ'ವೆಂದು ಹೇಳುವಲ್ಲಿ ಎಲ್ಲ ಗುಣ-ಪರ್ಯಾಯಗಳು ಬಂದು ಬಿಡುತ್ತವೆ. ಎಂದರೆ ವಿಕಾರೀಪರ್ಯಾಯ ಅಥವಾ ಅವಿಕಾರೀ ಪರ್ಯಾಯಗಳೆರಡೂ ತನ್ನ ಅಸ್ತಿತ್ವದಿಂದಲೇ ಇವೆ ಪರದಿಂದಿಲ್ಲ. ಪದಾರ್ಥವು ತನ್ನ ಗುಣ-ಪರ್ಯಾಯಗಳಲ್ಲಿರುವ ಅಸ್ತಿ ಸ್ವಭಾವವುಳ್ಳದಿದ್ದದೆ. ಗುಣ-ಪರ್ಯಾಯಗಳಿಲ್ಲದ ಅಸ್ತಿತ್ವವಿರುವ ಸಾಧ್ಯತೆಯಿಲ್ಲ, ಪ್ರತಿಯೊಂದರ ಅಸ್ತಿತ್ವವು ಭಿನ್ನ-ಭಿನ್ನ ತನ್ನಿಂದ ಸ್ವತಂತ್ರವಿಲ್ಲದಿದ್ದರೆ ಐದು ಅಸ್ತಿಕಾಯಗಳೇ ಸಿದ್ಧವಾಗುವುದಿಲ್ಲ. ಯಾವುದೇ ದ್ರವ್ಯದ ಅಸ್ತಿತ್ವವು ತನ್ನಿಂದ ಒಂದು ಪ್ರದೇಶ ಕೂಡ ಹೊರಗಿರುವುದಿಲ್ಲ. ಆತ್ಮನ ಅಸ್ತಿತ್ವವು ಸ್ವತಂತ್ರ ಸ್ವಾಧೀನ

ತನ್ನಲ್ಲಿಯೇ ಪೂರ್ಣವಿದೆಯೆಂದು ತಿಳಿದುಕೊಂಡವನಿಗೆ ಸಮ್ಯಗ್ದರ್ಶನ ಮತ್ತು ಸಮ್ಯಗ್ಜ್ಞಾನರೂಪದ ಧರ್ಮವಾದಲ್ಲದೆ ಇರಲಾರದು.

ಅಸಂಖ್ಯ ಪ್ರದೇಶಿಯಾದ ಅನಂತ ಚೈತನ್ಯ ಜ್ಯೋತಿಯು ಪ್ರಕಟವಾಗಿರುವಂಥ ಸರ್ವಜ್ಞ ಭಗವಂತರು ಹೀಗೆ ಹೇಳುತ್ತಾರೆ. ಜಗತ್ತಿನಲ್ಲಿ ಐದೂ-ಅಸ್ತಿಕಾಯಗಳು ತಮ್ಮ ತಮ್ಮ ಗುಣ-ಪರ್ಯಾಯ ಸಹಿತವಾಗಿವೆ ಮತ್ತು ಒಂದು ಇನ್ನೊಂದರಿಂದ ಪೃಥಕ್ ಇವೆ. ನಿನ್ನ ಅಸ್ತಿತ್ವವು ನಿನ್ನಲ್ಲಿದೆ, ಇನ್ನೊಂದರ ಕಾರಣದಿಂದ ನಿನ್ನ ಅಸ್ತಿತ್ವವಿಲ್ಲ.

ಜೀವದಲ್ಲಿ ಅಸಂಖ್ಯ ಪ್ರದೇಶಗಳಿಲ್ಲದಿದ್ದರೆ ಚಿಕ್ಕ ಕ್ರಿಮಿ ಮತ್ತು ಆನೆಯ ಶರೀರ ಪ್ರಮಾಣವಾಗಿ ಅದರ ಸಂಕೋಚ-ವಿಸ್ತಾರವಾಗುವ ಸಾಧ್ಯತೆಯಿಲ್ಲ, ಮತ್ತು ಅನಂತ ಗುಣಗಳಲ್ಲಿ ಸಮಯ-ಸಮಯಕ್ಕೆ ಪರಿಣಮನವಾಗದಿದ್ದರೆ ಜ್ಞಾನ ಮೊದಲಾದುವಲ್ಲಿ ಹೀನಾಧಿಕತೆಯಾಗುವ ಸಾಧ್ಯತೆಯಿಲ್ಲ. ಅದಕ್ಕಾಗಿ ಅಸಂಖ್ಯ ಪ್ರದೇಶಿ ಮತ್ತು ಅನಂತ ಗುಣಗಳ ಪರಿಣಮನವುಳ್ಳ ಜೀವನಿಗೆ ಅಸ್ತಿಕಾಯ ಸ್ವಭಾವವಿದೆ.

ಸಂಸಾರಿಗೆ ಯಾವ ಸಂಕೋಚ-ವಿಕಾಸಗಳಾಗುತ್ತವೆ ಅವು ಅವನ ಅಸಂಖ್ಯ ಪ್ರದೇಶಿ ಅಸ್ತಿಕಾಯದ ಪರಿಣಮನದ ಯೋಗ್ಯತೆಯಿದೆ, ಅದರಲ್ಲಿ ನಾಮಕರ್ಮದ ಅಭಾವವಿದೆ-ಎಂದರೆ ನಾಮಕರ್ಮದ ಕಾರಣದಿಂದ ಆತ್ಮನಲ್ಲಿ ಸಂಕೋಚ-ವಿಸ್ತಾರಗಳಾಗುತ್ತವೆನ್ನುವಂತಿಲ್ಲ, ಸಿದ್ಧರಲ್ಲಿ ಅಂಥ ಸಂಕೋಚ-ವಿಸ್ತಾರದ ಯೋಗ್ಯತೆಯಿಲ್ಲ ಅದಕ್ಕಾಗಿ ಸಂಕೋಚ-ವಿಸ್ತಾರಗಳಾಗುವುದಿಲ್ಲ, ಸಂಕೋಚ ವಿಸ್ತಾರಗಳು ಜೀವದ ಅಸ್ತಿಕಾಯದಲ್ಲಿ ಆಗುತ್ತವೆ. ಜೀವದ ಅಸ್ತಿತ್ವದಲ್ಲಿ ಕರ್ಮವಂತೂ ಪಾದ ಕೂಡ ಇರಿಸಿಲ್ಲ, ಕರ್ಮವನ್ನಂತೂ ಪುದ್ಗಲದ ಅಸ್ತಿಕಾಯದಲ್ಲಿ ತಿಳಿದುಕೊಂಡಿದೆ, ಇದೇ ಪ್ರಕಾರ ವಿಸ್ತಾರವಾಗುತ್ತದೆ ಅದು ಕೂಡ ತನ್ನ ಅಸ್ತಿಕಾಯದ ಪರಿಣಮನವಿದೆ, ಅದು ಕರ್ಮದ ಕಾರಣದಿಂದಲ್ಲ. ಜೀವದ ಅಸ್ತಿಕಾಯವನ್ನು ತಿಳಿದುಕೊಂಡರೆ ಅದರಲ್ಲಿ ಇದೆಲ್ಲವೂ ಬಂದು ಹೋಗುವುದು.

ಎಲೈ ನೀನು ನಿನ್ನ ಅಸ್ತಿತ್ವದಲ್ಲಿ ನಿನ್ನನ್ನು ನೋಡು ! ಪರದ ಪ್ರಕಾಶಕವಂತೂ ವ್ಯವಹಾರವಿದೆ. ಸ್ವಪ್ರಕಾಶಕದ ಮಧ್ಯದಲ್ಲಿ ಪರ ಪ್ರಕಾಶಕ ಸಾಮರ್ಥ್ಯ ಕೂಡ ಬಂದು ಹೋಗುತ್ತದೆ. ಆಹಾ ! ಸರ್ವಜ್ಞರ ಕಥನವೇ ಹೀಗಿದೆ. ಯಾರೇ ಆಗಲಿ ಇದನ್ನು ತಿಳಿದುಕೊಂಡರೆ ಎಲ್ಲವೂ ಸಿದ್ಧವಾಗಿ ಹೋಗುವುದು. 'ವಸ್ತುವಿದೆ'ಯೆಂದು ಹೇಳಿದರೆ ಅದರೊಳಗಿಂದ ಸರ್ವಜ್ಞತೆಯು ಎದ್ದು ನಿಲ್ಲುತ್ತದೆ.

ನನ್ನ ಆತ್ಮವು ಅಸಂಖ್ಯ ಪ್ರದೇಶಿ ಅನಂತ ಗುಣವುಳ್ಳ ಅಸ್ತಿಕಾಯವಿದೆಯೆಂದು ಪರದಿಂದ ಬೇರೆಯಾದ ಅಸ್ತಿತ್ವವನ್ನು ನಿರ್ಣಯ ಮಾಡಿದರೆ ಅಲ್ಲಿ ಪರ ಲಕ್ಷ್ಯವು ಹೊರಟು ಹೋಗಿ ತನ್ನ ಅನಂತ ಜ್ಞಾನಾನಂದ ಸ್ವಭಾವದ ಪ್ರತೀತಿಯಾಗುವುದೇ ಪ್ರಯೋಜನವಿದೆ. ಶ್ರೀ ಜಯಸೇನಾಚಾರ್ಯದೇವರು ಈ ಗಾಥೆಯ ಭಾವಾರ್ಥ ತಿಳಿಸಿ ಕೊಡುತ್ತ ಹೀಗೆ ಹೇಳುತ್ತಾರೆ -

**''ತತ್ರ ಶುದ್ಧ ಜೀವಾಸ್ತಿಕಾಯಸ್ಯ ಯಾನಂತಜ್ಞಾನಾದಿಗುಣಸತ್ತಾ ಸಿದ್ಧಪರ್ಯಾಯಸತ್ತಾ ಚ ಶುದ್ಧಸಂಖ್ಯಾತ ಪ್ರದೇಶರೂಪಂ ಕಾಯತ್ವಮುಪಾದೇಯಮಿತಿ ಭಾವಾರ್ಥಃ ॥''**

ಎಂದರೆ ಯಾವ ಪಂಚಾಸ್ತಿಕಾಯಗಳಿವೆ ಅವುಗಳಲ್ಲಿ ಅನಂತಜ್ಞಾನಾದಿಗುಣಸತ್ತಾ ಅದರಂತೆ ಸಿದ್ಧ-ಪರ್ಯಾಯ ಸತ್ತಾಸಹಿತ ಶುದ್ಧ ಜೀವಾಸ್ತಿಕಾಯದ ಯಾವ ಅಸಂಖ್ಯಾತ ಪ್ರದೇಶರೂಪ ಕಾಯತ್ವವಿದೆ ಅದು ಉಪಾದೇಯವಿದೆ - ಹೀಗೆ ಭಾವಾರ್ಥವಿದೆ. ಓಹೋ ! ಸಿದ್ಧ ಭಗವಾನರಂಥ ಶುದ್ಧ ಜ್ಞಾನಾನಂದ ಸ್ವಭಾವ ಅಸ್ತಿತ್ವವುಳ್ಳ ನನ್ನ ಆತ್ಮನೇ ನನಗೆ ಉಪಾದೇಯನಿದ್ದಾನೆ, ಇದರ ಹೊರತಾಗಿ ಜಗತ್ತಿನಲ್ಲಿ ಬೇರೆ ಯಾವುದೂ ಉಪಾದೇಯವಿಲ್ಲವೆಂದು ತಿಳಿದುಕೊಳ್ಳುವುದೇ ಈ ಗಾಥೆಯ ಸಾರಾಂಶವಿದೆ.

ಈಗ ಆರನೆಯ ಗಾಥೆಯಲ್ಲಿ ಐದು ಅಸ್ತಿಕಾಯಗಳನ್ನು ಅದರಂತೆ ಕಾಲವನ್ನು 'ದ್ರವ್ಯ' ಸಂಜ್ಞೆಯಿಂದ ಕರೆಯಲಾಗಿದೆ,-

**ತೇ ಚೇವ ಅತ್ಥಿಕಾಯಾ ತೇಕ್ಕಾಲಿಯಭಾವ ಪರಿಣದಾ ಣಿಚ್ಚಾ ।**
**ಗಚ್ಛಂತಿ ದವಿಯಭಾವಂ ಪರಿಯಟ್ಟಣಲಿಂಗಸಂಜುತ್ತಾ ।।೬।।**

**ಯಾವವು ತ್ರಿಕಾಲಭಾವಗಳರೂಪದಿಂದ ಪರಿಣಮಿಪವು ಮೇಣ್ ನಿತ್ಯವಿವೆ ।**
**ಅವು ಅಸ್ತಿಕಾಯಗಳಿದ್ದು ಪರಿವರ್ತನಲಿಂಗಸಹ ದ್ರವ್ಯತ್ವ ಪಡೆಯುವವು ।।೬।।**

**ಅರ್ಥ :-** ಯಾವವು ಮೂರು ಕಾಲಗಳ ಭಾವರೂಪವಾಗಿ ಪರಿಣಮಿತವಾಗುತ್ತವೆ ಹಾಗೂ ನಿತ್ಯವಿವೆ ಅಂಥವೇ ಅಸ್ತಿಕಾಯಗಳು ಪರಿವರ್ತನೆ ಲಿಂಗ (ಕಾಲ)ದೊಡನೆ ದ್ರವ್ಯತ್ವಕ್ಕೆ ಪ್ರಾಪ್ತವಾಗುತ್ತವೆ. (ಎಂದರೆ ಅವು ಆರು ದ್ರವ್ಯಗಳಿವೆ.)

ಇಲ್ಲಿ ಅಸ್ತಿಕಾಯಗಳ ವರ್ಣನೆಯು ಮುಖ್ಯವಿದೆ, ಮತ್ತು ಕಾಲದ್ರವ್ಯದ ವರ್ಣನೆಯು ಗೌಣವಿದೆ. 'ಕಾಲ'ವು ಅಸ್ತಿಕಾಯವಿಲ್ಲ, ಆದರೆ ಅದು 'ದ್ರವ್ಯ'ವಿದೆ. ಐದು ಅಸ್ತಿಕಾಯಗಳು ಕೂಡ ದ್ರವ್ಯವಿವೆ ಮತ್ತು ಕಾಲಕೂಡ ದ್ರವ್ಯವಿದೆ. ಹೀಗೆ ಜಗತ್ತಿನಲ್ಲಿ ಆರು ದ್ರವ್ಯಗಳಿವೆ. ಪುದ್ಗಲ ಮೊದಲಾದವುಗಳ ಪರಿಣಮನದ ಮೇಲಿಂದ ಕಾಲದ್ರವ್ಯದ ಅನುಮಾನವಾಗುವ ಸಾಧ್ಯತೆಯಿದೆ. ಒಂದು ಪರಮಾಣವು ಒಂದು ಪ್ರದೇಶದಿಂದ ಇನ್ನೊಂದು ಪ್ರದೇಶಕ್ಕೆ (ಮಂದಗತಿಯಿಂದ) ಹೋಗುವಷ್ಟು ವೇಳೆಯನ್ನು ಒಂದು ಸಮಯವೆಂದು ಹೇಳಲಾಗಿದೆ. ಆ 'ಸಮಯ'ವು ಕಾಲದ್ರವ್ಯದ ಪರ್ಯಾಯವಿದೆ. ಎಲ್ಲಕ್ಕಿಂತ ಚಿಕ್ಕದಾದ ಕಾಲದ ಅಳತೆ ಎಷ್ಟೆಂದರೆ ಒಂದು ಪರಮಾಣವು ಒಂದು ಪ್ರದೇಶದಿಂದ ಇನ್ನೊಂದು ಪ್ರದೇಶಕ್ಕೆ ಹೋಗುವಷ್ಟು ವೇಳೆಯಲ್ಲಿ ಕಾಲದ ಪರ್ಯಾಯವಾಗಿ ಹೋಗುವುದು. ಕಾಲದ ಪರ್ಯಾಯದ ಅಳತೆಯು ಒಂದು ಪ್ರದೇಶದಲ್ಲಿ ಬಂದುಬಿಡುತ್ತದೆ ಎಂದರೆ ಆ ಪರ್ಯಾಯವನ್ನು ಸ್ವೀಕರಿಸುವ ದ್ರವ್ಯ ಕೂಡ ಒಂದು ಪ್ರದೇಶದಲ್ಲಿ ಪೂರ್ಣವಾಗಿ ಹೋಗುತ್ತದೆ, ಪರ್ಯಾಯದ ಮೇಲಿಂದ ಪರ್ಯಾಯವುಳ್ಳ ದ್ರವ್ಯದ ಸಿದ್ಧಿಯಾಗಿ ಬಿಡುತ್ತದೆ. ಎಂದರೆ ಕಾಲವು ಏಕಪ್ರದೇಶಿಯೇ ಇದೆ. ಐದೂ ದ್ರವ್ಯಗಳು ಕಾಯವುಳ್ಳವುಗಳಿವೆ ಮತ್ತು ಕಾಲದ್ರವ್ಯವು ಅಕಾಯವಿದೆ.

ಈ ಆರು ದ್ರವ್ಯಗಳು ತಮ್ಮ ಗುಣ-ಪರ್ಯಾಯಗಳಿಂದ ಮೊದಲು ಪರಿಣಮಿಸಿದ್ದವು, ವರ್ತಮಾನದಲ್ಲಿ ಪರಿಣಮಿಸುತ್ತಿವೆ ಮತ್ತು ಭವಿಷ್ಯಕಾಲದಲ್ಲಿ ಪರಿಣಮಿಸತಕ್ಕವಿವೆ. ಮೂರು ಕಾಲದಲ್ಲಿ ತನ್ನ ಗುಣ-ಪರ್ಯಾಯಗಳಿಂದ ಯಾವುದು ಪರಿಣಮನಶೀಲವಿದೆ ಅದರ ಹೆಸರು 'ದ್ರವ್ಯ'ವಿದೆ. ಯಾವುದೇ ದ್ರವ್ಯದ ಪರ್ಯಾಯವು ಪರದ ಕಾರಣದಿಂದ ಆಗಿಲ್ಲ, ಆಗುತ್ತಿಲ್ಲ ಮತ್ತು ಮುಂದೆ ಆಗುವುದಿಲ್ಲ. ಆತ್ಮನು ವಿಕಾರತನದಿಂದ ಪರಿಣಮಿಸಿದ್ದು ಅದು ತನ್ನ ಗುಣ-ಪರ್ಯಾಯದಿಂದಲೇ ಪರಿಣಮಿಸಿದ್ದಾನೆ, ಪರದ ಕಾರಣದಿಂದಿಲ್ಲವೆಂಬುದನ್ನು ತಿಳಿದುಕೊಂಡರೆ ಅರ್ಥ ಸಮಯವನ್ನು ತಿಳಿದುಕೊಂಡನೆಂದು ಹೇಳಲಾಗುವುದು, ಮತ್ತು ಅವನ 'ಭಾವಜ್ಞಾನ'ವೇ ನಿಜವಾಗಿದೆ. ಯಾವ ದ್ರವ್ಯವೂ ಕೂಡ ಇನ್ನೊಂದರ ಗುಣ-ಪರ್ಯಾಯದ ಕಾರಣ ಪರಿಣಮಿಸುವುದಿಲ್ಲ, ಆದರೆ ಮೂರು ಕಾಲದಲ್ಲಿ ತನ್ನ ಸ್ವಭಾವದಿಂದಲೇ ಪರಿಣಮಿಸುತ್ತದೆ. ಇಂಥ ಅರ್ಥವು ಸಮಯದ ಸ್ವಭಾವವಿದೆ. ಹಾಗೆಯೇ ಜ್ಞಾನ ಸಮಯವು ತಿಳಿಯುತ್ತದೆ ಮತ್ತು ಹಾಗೆಯೇ ವಾಣಿಯಲ್ಲಿ ಬರುತ್ತದೆ.

ಈ ರೀತಿಯಾಗಿ ಪಂಚಾಸ್ತಿಕಾಯದೊಳಗಿಂದ ಕೂಡ ವೀತರಾಗ ಭಾವವೇ ಹೊರಡುತ್ತದೆ. ಯಾವುದೇ ಸಿದ್ಧಾಂತವನ್ನು ತೆಗೆದುಕೊಂಡರೂ ಅದರೊಳಗಿಂದ ವೀತರಾಗಭಾವದ ತಾತ್ಪರ್ಯವೇ ಹೊರಡುತ್ತದೆ.

ಜೀವ, ಪುದ್ಗಲ, ಧರ್ಮ, ಅಧರ್ಮ, ಆಕಾಶ ಮತ್ತು ಕಾಲ ಇವು ಆರು ದ್ರವ್ಯಗಳಿವೆ ಯಾವುದು ಮೂರು ಕಾಲದಲ್ಲಿ ತನ್ನ ಗುಣ-ಪರ್ಯಾಯದಿಂದ ಪರಿಣಮಿಸುತ್ತಿದೆ ಅದನ್ನು ದ್ರವ್ಯವೆಂದು ಹೇಳಿದೆ. ಯಾವುದೇ ದ್ರವ್ಯವು ಬೇರೆ ಯಾವುದರ ಕಾರಣದಿಂದ ಪರಿಣಮಿಸುತ್ತದೆಂಬುದಾಗಿಲ್ಲ. ಒಂದು ವೇಳೆ ಕಾಲದ ಕಾರಣದಿಂದ ಪರಿಣಮಿಸುತ್ತಿದ್ದರೆ ಆ ದ್ರವ್ಯದ ದ್ರವ್ಯತನವೆಲ್ಲಿ ಉಳಿಯುತ್ತದೆ ? ಕರ್ಮದ ಕಾರಣದಿಂದ ವಿಕಾರವಾಗುವುದು ಅಥವಾ ಕಾಲದ ಕಾರಣದಿಂದ ಸಿದ್ಧ ಭಗವಂತರಿಗೆ ಪರಿಣಮನವಾಗುವುದು ಎಂಬುದಾಗಿಲ್ಲ ದ್ರವ್ಯವು ತಾನೇ ತನ್ನ ಅವಸ್ಥೆಯರೂಪದಿಂದ ಮೂರೂ ಕಾಲದಲ್ಲಿ ಪರಿಣಮಿಸುತ್ತದೆ ಮೂರೂ ಕಾಲದ ಪರ್ಯಾಯತನದಿಂದ ದ್ರವ್ಯವು ತನ್ನ ಸ್ವಭಾವದಿಂದಲೇ ಪರಿಣಮಿಸುತ್ತದೆ. ಅದರಲ್ಲಿ ಬೇರೆಪನು ಮಾಡುವುದು ಮೃತ್ತಿಕೆಯ ಪರಮಾಣುವು ಸ್ವತಂತ್ರ ದ್ರವ್ಯವಿದೆ. ಆ ಪರಮಾಣುಗಳು ತಾವು ಸ್ವಯಂ ಕೊಡದರೂಪದಿಂದ ಪರಿಣಮಿಸುತ್ತವೆ ; ಕುಂಭಕಾರನ ಕಾರಣದಿಂದ ಇಲ್ಲ. ದ್ರವ್ಯವು ತನ್ನಿಂದ ಪರಿಣಮಿಸುತ್ತಿತ್ತು , ಪರಿಣಮಿಸುತ್ತಿದೆ ಮತ್ತು ಪರಿಣಮಿಸುವುದು ಎಂದರೆ ಇನ್ನೊಂದರಿಂದ ಅದು ಎಂದೂ ಪರಿಣಮಿಸುವುದಿಲ್ಲ, ಪರಿಣಮಿಸುತ್ತಿಲ್ಲ ಮತ್ತು ಭವಿಷ್ಯದಲ್ಲಿ ಕೂಡ ಪರಿಣಮಿಸುವುದಿಲ್ಲ ನಿಗೋದದ ಸಮಯದಲ್ಲಿ ಕೂಡ ಜೀವವು ತಾನು ತನ್ನ ಗುಣ-ಪರ್ಯಾಯದಿಂದಲೇ ಪರಿಣಮಿಸುತ್ತಿತ್ತು ಮತ್ತು ಸಿದ್ಧ ದಶೆಯಲ್ಲಿ ಕೂಡ ತಾನು ತನ್ನ ಗುಣ-ಪರ್ಯಾಯದಿಂದಲೇ ಪರಿಣಮಿಸುತ್ತದೆ. ಮೂರೂ ಕಾಲದ ಭಾವರೂಪದಿಂದ ದ್ರವ್ಯವು ಸ್ವಯಂ ಪರಿಣಮಿಸುತ್ತಲಿದೆ.

ಜಗತ್ತಿನಲ್ಲಿ ಅನಂತಾನಂತ ಆತ್ಮರುಗಳಿದ್ದಾರೆ, ನಿಗೋದದ ಅನಂತ ಜೀವಗಳಿವೆ. ಸರ್ವಜ್ಞ ಭಗವಂತರಿಗೆ ಒಂದು ಸಮಯದಲ್ಲಿ ಮೂರೂ ಕಾಲ ಮೂರೂ ಲೋಕದ ಜ್ಞಾನವಿದೆ. ಈ ಮಾತು ಸರ್ವಜ್ಞರ ಶ್ರದ್ಧೆಯ ಹೊರತಾಗಿ ಇತರರು ಮನ್ನಿಸುವ ಸಾಧ್ಯತೆಯಿಲ್ಲ. ಜಗತ್ತಿನ ಆರೂ ದ್ರವ್ಯಗಳು ತಮ್ಮ ತಮ್ಮ ಸ್ವಭಾವದಲ್ಲಿ ಉಳಿದುಕೊಂಡಿವೆ, ಅವು ಪರಿಣಮನಶೀಲವಿದ್ದರೂ ಕೂಡ ಯಾವಾಗಲೂ ಉಳಿಯುವಂಥವುಗಳಿವೆ. ಪರಿಣಮಿಸಿದರೆ ಅವುಗಳ ನಾಶವಾಗುವುದಿಲ್ಲ ಆದರೆ ಸ್ವಭಾವದಿಂದ ನಿತ್ಯಸ್ಥಿರವಿದ್ದು ಪರಿಣಮಿಸುತ್ತವೆ. ಯಾವುದೇ ಪದಾರ್ಥವು ಬೇರೆ ಯಾವುದೇ ಪದಾರ್ಥದಲ್ಲಿ ಒಂದಾಗಿ ಹೋಗುವುದಿಲ್ಲ. ಏಕಕ್ಷೇತ್ರದಲ್ಲಿರುತ್ತಿದ್ದರೂ ಕೂಡ ಜೀವ ಅಥವಾ ಅಜೀವ ಯಾವುದೇ ಪದಾರ್ಥವು ತನ್ನ ಸ್ವರೂಪವನ್ನು ಬಿಟ್ಟುಕೊಡುವುದಿಲ್ಲ. ಜೀವವು ಪುದ್ಗಲವನ್ನು ಪರಿಣಮಿಸುತ್ತದೆಯೆಂಬ ಮಾತು ಉಳಿಯುವುದಿಲ್ಲ. ಶರೀರತನದಿಂದ. ಪುದ್ಗಲಗಳು ಪರಿಣಮಿಸುತ್ತವೆ ಜೀವವು ಅವನ್ನು ಪರಿಣಮಿಸಲ್ಪಡುವುದಿಲ್ಲ ಜೀವನು ತಾನು ತನ್ನ ಅಪರಾಧದಿಂದ ರಾಗಾದಿಗಳನ್ನು ಮಾಡುತ್ತಾನೆ. ಪುದ್ಗಲಗಳು ಅವನ್ನು ಪರಿಣಮಿಸಲ್ಪಡುವುದಿಲ್ಲ. ನಾನು ಪರವನ್ನು ಪರಿಣಮಿಸಲ್ಪಡುತ್ತೇನೆಂದು ಮನ್ನಿಸುವವನಿಗೆ ಅನಂತಾನುಬಂಧಿಯ ಲೋಭವಿದೆ.

೧) ಮೊದಲು ಉತ್ತಮ ಕ್ಷಮಾಧರ್ಮವಿದೆ ಅದರಲ್ಲಿ ಕ್ರೋಧದ ಅಭಾವವಿದೆ.

೨) ಎರಡನೆಯ ಮಾರ್ದವ ಧರ್ಮದಲ್ಲಿ ಮಾನದ ಅಭಾವವಿದೆ.

೩.) ಮೂರನೆಯ ಆರ್ಜವ ಧರ್ಮದಲ್ಲಿ ಮಾಯೆಯ ಅಭಾವವಿದೆ.

೪) ನಾಲ್ಕನೆಯ ಶೌಚ ಧರ್ಮದಲ್ಲಿ ಲೋಭದ ಅಭಾವವಿದೆ.

ಹೀಗೆ ಮೊದಲಿನ ನಾಲ್ಕು ಧರ್ಮಗಳಲ್ಲಿ ಕ್ರೋಧ-ಮಾನ-ಮಾಯೆ-ಲೋಭದ ಅಭಾವ ತಿಳಿಸಲಾಗಿದೆ.

ಸ್ವಾಮಿ ಕಾರ್ತಿಕೇಯಾನುಪ್ರೇಕ್ಷೆಯಲ್ಲಿ ಹೇಳಿರುವುದೇನೆಂದರೆ ಸಂಸಾರದ ಮದುವೆ ಮೊದಲಾದ ಕಾರ್ಯಗಳಲ್ಲಿ ಧನ ಖರ್ಚುಮಾಡುವ ಲೋಭ ಮಾಡಿದರೆ ಅದು ಮಾಯೆಯಿಲ್ಲ ಆದರೆ ಅಲ್ಲಿಯಂತೂ ಮುಕ್ತ ಮನಸ್ಸಿನಿಂದ ಖರ್ಚು ಮಾಡುವ ಉಲ್ಲಾಸ ಬರುತ್ತದೆ ಮತ್ತು ಧರ್ಮದ ಪ್ರಸಂಗದಲ್ಲಿ ಧನ ಖರ್ಚುಮಾಡುವ ಲೋಭಮಾಡಿದರೆ ಅವನಿಗೆ

ಮಾಯೆ-ಕಪಟ ಮತ್ತು ಲೋಭವಿದೆ. ಅವನಿಗೆ ದೇವ-ಗುರು-ಧರ್ಮದ ಕುರಿತು ಉಲ್ಲಾಸವಿಲ್ಲ ಮತ್ತು ಸಂಸಾರದ ರುಚಿಯಿದೆ ಎಂದರೆ ಅವನಿಗೆ ಅನಂತಾನುಬಂಧಿ ಲೋಭವಿದೆ.

ಜಡ ಪದಾರ್ಥದ ರಜಕಣವು ನನ್ನದಿಲ್ಲ ಅದು ತನ್ನ ಸ್ವಭಾವದಿಂದ ನಿತ್ಯಸ್ಥಿರವಿದ್ದು ಬದಲಾಗುವಂಥದ್ದಿದೆ. ಮತ್ತು ನಾನು ನನ್ನ ಚೈತನ್ಯ ಸ್ವಭಾವದಿಂದ ನಿತ್ಯಸ್ಥಿರವಿದ್ದು ಬದಲಾಗುವವನಿದ್ದೇನೆ. ಇಂಥ ದೃಷ್ಟಿ ಮಾಡಿದರೆ ಅಧಿಕ ಮಮತೆಯು ಬಿಟ್ಟು ಹೋಗುತ್ತದೆ. ಮೊದಲು ಯಥಾರ್ಥ ವಸ್ತು ಸ್ವಭಾವವು ಹೇಗೆ ಇದೆ ಹಾಗೆ ತಿಳಿದುಕೊಳ್ಳಬೇಕಾಗುವುದು ಎಂದರೆನೇ ಸಮ್ಯಗ್ಜ್ಞಾನ ಮತ್ತು ಧರ್ಮವಾಗುತ್ತದೆ

ಜಗತ್ತಿನಲ್ಲಿ ಆರು ದ್ರವ್ಯಗಳು ಪರಸ್ಪರ ಒಂದಾಗಿ-ಏಕಕ್ಷೇತ್ರದಲ್ಲಿದ್ದರೂ ಕೂಡ ಅವು ತಮ್ಮ - ತಮ್ಮ ಸ್ವರೂಪವನ್ನು ಬಿಟ್ಟುಕೊಡುವುದಿಲ್ಲವೆಂಬುದನ್ನು ಈಗ ಏಳನೆಯ ಗಾಥೆಯಲ್ಲಿ ಹೇಳುತ್ತಾರೆ.

ಅಣ್ಣೋಣ್ಣಂ ಪವಿಸಂತಾ ದೇಂತಾ ಓಗಾಸಮಣ್ಣಮಣ್ಣಸ್ಸ ।
ಮೇಲಂತಾ ವಿ ಯ ಣಿಚ್ಚಂ ಸಗಂ ಸಭಾವಂ ಣ ವಿಜಹಂತಿ ॥೭॥

**ಅನ್ಯೋನ್ಯದಿಂ ಪ್ರವೇಶಿಸುವವು ಮೇಣನ್ಯೋನ್ಯದಿಂದವಕಾಶಕೊಡುವವು ।**
**ಅನ್ಯೋನ್ಯದಿಂದೊಡಗೂಡಿದರು ನಿತ್ಯ ತಮ್ಮ ಸ್ವಭಾವವನು ಬಿಡಲಾರವು ॥೭॥**

ಅರ್ಥ ಃ- ಅವು ಒಂದು ಇನ್ನೊಂದರಲ್ಲಿ ಪ್ರವೇಶ ಮಾಡುತ್ತವೆ, ಒಂದು ಇನ್ನೊಂದಕ್ಕೆ ಅವಕಾಶ ಕೊಡುತ್ತವೆ, ಪರಸ್ಪರ (ಕ್ಷೀರ ನೀರಿನಂತೆ) ಬೆರೆತು ಹೋಗುತ್ತವೆ, ಆದಾಗ್ಯೂ ಯಾವಾಗಲೂ ತಮ್ಮ-ತಮ್ಮ ಸ್ವಭಾವವನ್ನು ಬಿಟ್ಟುಕೊಡುವುದಿಲ್ಲ.

ಎಲ್ಲಿ ಒಂದು ಜೀವವಿದೆ ಅಲ್ಲಿ ಬೇರೆ ಅನಂತ ಆತ್ಮಗಳ ಪ್ರದೇಶಗಳಿವೆ, ಅಲ್ಲಿ ಬೇರೆ ಅನಂತ ಪುದ್ಗಲಗಳು, ಧರ್ಮಾಸ್ತಿ, ಅಧರ್ಮಾಸ್ತಿ, ಆಕಾಶ ಮತ್ತು ಕಾಲ ಈ ಆರೂ ದ್ರವ್ಯಗಳು ಇರುತ್ತವೆ. ಕ್ಷೇತ್ರದ ಅಪೇಕ್ಷೆಯಿಂದ ಪರಸ್ಪರ ಸಂಬಂಧವಿದ್ದರೂ ಕೂಡ ಅವು ಅತ್ಯಂತ ಭಿನ್ನಭಿನ್ನವಿವೆ. ಯಾವುದೂ ಯಾವುದರಲ್ಲಿ ಸೇರಿಹೋಗುವುದಿಲ್ಲ. ಒಂದು ಕ್ಷೇತ್ರದಲ್ಲಿರುವುದರಿಂದ ಯಾವುದೂ ಯಾವುದಕ್ಕೆ ಬಾಧೆ ಮಾಡುವುದಿಲ್ಲ. ಒಂದೇ ಕ್ಷೇತ್ರದಲ್ಲಿ ಆರೂ ದ್ರವ್ಯಗಳೂ ಏಕತ್ರವಿರುವಲ್ಲಿ ಯಾವ ತೊಂದರೆಯಾಗುವುದಿಲ್ಲ. ಯಾವಾಗಲೂ ಆರೂ ದ್ರವ್ಯಗಳು ಏಕಕ್ಷೇತ್ರಾವಗಾಹತನದಿಂದ ಇದ್ದರೂ ಕೂಡ ಪ್ರತಿಯೊಂದು ದ್ರವ್ಯವು ತನ್ನ ಸ್ವಭಾವಶಕ್ತಿಯಿಂದ ಮೂರು ಕಾಲದಲ್ಲಿ ಬೇರೆ ಬೇರೆಯೇ ಇವೆ, ಪ್ರತಿಯೊಂದು ದ್ರವ್ಯದ ಪರಿಣಾಮವು ತನ್ನ ಸ್ವಭಾವದಿಂದ ಆಗುತ್ತದೆ. ಯಾವುದೇ ದ್ರವ್ಯವು ತನ್ನ ಪರಿಣಾಮವನ್ನು ಬಿಟ್ಟು ಬೇರೊಂದರ ಜೊತೆ ಸೇರಿಹೋಗುವುದಿಲ್ಲ. ಅಹಾ, ದ್ರವ್ಯದ ಸ್ವತಂತ್ರತೆಯನ್ನಾದರೂ ನೋಡಿರಿ ! ಅಪೇಕ್ಷೆ ಪಡುವುದರಿಂದ ಆತ್ಮದ್ರವ್ಯಕ್ಕೆ ಬಾಧೆಯಾಗುವುದಿಲ್ಲ. ಆತ್ಮದ್ರವ್ಯದ ಪರಿಣಾಮವು ಆತ್ಮನಲ್ಲಿ, ಶರೀರದ್ದು ಶರೀರದಲ್ಲಿ ಮತ್ತು ಇಚ್ಛೆಯದು ಇಚ್ಛೆಯಲ್ಲಿ, ಏಕಕ್ಷೇತ್ರದಲ್ಲಿದ್ದರೂ ಕೂಡ ಪ್ರತಿಯೊಂದರ ಪರಿಣಾಮವು ಭಿನ್ನ-ಭಿನ್ನವಿದೆ. ಯಾವುದೂ ಯಾವುದರ ಪರಿಣಾಮದಲ್ಲಿ ಬಾಧೆಯನ್ನುಂಟು ಮಾಡುವುದಿಲ್ಲ. ಇಚ್ಛೆ ಮಾಡುವುದರಿಂದ ಆತ್ಮನ ಪರಿಣಾಮವು ಕೆಟ್ಟುಹೋಗುತ್ತದೆಯೆನ್ನುವಂತಿಲ್ಲ. ಆತ್ಮನ ಪರಿಣಾಮದಲ್ಲಿ ಆತ್ಮನು ತನ್ನಿಂದಲೇ ಪರಿಣಮಿಸುತ್ತಾನೆ. ಆ ಸಮಯದಲ್ಲಿ ದ್ವೇಷವಾದರೆ ಆ ಪರಿಣಾಮವು ಸ್ವಯಂ ಆತ್ಮನಿಂದಲೇ ಆಗಿದೆ, ಬೇರೊಂದರ ಕಾರಣದಿಂದ ಆಗಿಲ್ಲ. ಯಾವುದೇ ದ್ರವ್ಯವು ಬೇರೊಂದಕ್ಕೆ ಬಾಧೆಯನ್ನುಂಟು ಮಾಡುವುದಿಲ್ಲ, ಅದರಂತೆ ಸಹಾಯ ಕೂಡ ಮಾಡುವುದಿಲ್ಲ. ಎಲ್ಲವೂ ತಮ್ಮ ತಮ್ಮ ಸತ್ತಾದಲ್ಲಿಯೇ ವಾಸಿಸುತ್ತಿವೆ,

ಯಾವುದೂ ಇನ್ನೊಂದರ ಸತ್ತಾದಲ್ಲಿ ಪ್ರವೇಶ ಮಾಡುವುದಿಲ್ಲವೆಂದಮೇಲೆ ಅದು ಬೇರೊಂದರಲ್ಲಿ ಏನು ಮಾಡಬಹುದಾಗಿದೆ ? ಒಂದು ಪದಾರ್ಥವು ತನ್ನ ಸತ್ತಾವನ್ನು ಬಿಟ್ಟುಕೊಟ್ಟು ಇನ್ನೊಂದರ ಸತ್ತಾದಲ್ಲಿ ಪ್ರವೇಶ ಮಾಡಿದರೆ ಆ ಪದಾರ್ಥದ್ದೇ ಅಭಾವವಾಗಿ ಹೋಗುವುದು.

ಏಕೆಂದರೆ ಆರೂ ದ್ರವ್ಯಗಳು ಒಂದು ಕ್ಷೇತ್ರದಲ್ಲಿರುತ್ತಿದ್ದರೂ ಕೂಡ ತಮ್ಮ ತಮ್ಮ ಸ್ವತಂತ್ರ ಸತ್ತಾವನ್ನು ಯಾವ ದ್ರವ್ಯವೂ ಕೂಡ ಬಿಟ್ಟುಕೊಡುವುದಿಲ್ಲ. ಎಂದರೆ ಆ ದ್ರವ್ಯಗಳು ಪರಸ್ಪರ ಸೇರಿ ಒಂದಾಗಿ ಹೋಗುವುದಿಲ್ಲ. ಎಲ್ಲವೂ ತಮ್ಮ ತಮ್ಮ ಸ್ವಭಾವದಿಂದ ಬೇರೆ ಬೇರೆಯಾಗಿಯೇ ಇರುತ್ತವೆ. ಎಲ್ಲ ದ್ರವ್ಯಗಳ ಸ್ವಭಾವವು ಪರಸ್ಪರದಲ್ಲಿ ಒಂದು ಇನ್ನೊಂದಕ್ಕೆ ಸ್ಥಾನದಾನ ಮಾಡುವಂಥದ್ದಿದೆ. ಪರಮಾಣು ಮೊದಲಾದವುಗಳಿಗೆ ಜ್ಞಾನವಿಲ್ಲದಿದ್ದರೂ ಕೂಡ ತಾನು ಎಲ್ಲಿದೆ ಅಲ್ಲಿ ಬೇರೆ ಅನಂತ ಪರಮಾಣು ಮೊದಲಾದವುಗಳಿದ್ದರೂ ಕೂಡ ಅವಕ್ಕೆ ವಿಘ್ನವನ್ನೊಡ್ಡುವುದಿಲ್ಲ ಎಂದರೆ ಪರಸ್ಪರ ಒಂದು ಇನ್ನೊಂದಕ್ಕೆ ಅವಕಾಶ ಕೊಡುತ್ತವೆ. ಹೀಗೆ ಅವುಗಳ ಸ್ವಭಾವವಿದೆ. ಯಾವುದು ಯಾವುದಕ್ಕೆ ಬಾಧೆಯನ್ನೊಡ್ಡುವುದಿಲ್ಲ ಮತ್ತು ಇನ್ನೊಂದಕ್ಕೆ ಸ್ಥಳ ಕೊಟ್ಟಲ್ಲದೆ ಇರುವುದಿಲ್ಲ. ಒಂದೊಂದು ಶರೀರದ ಆಶ್ರಯದಲ್ಲಿ ಅನಂತ ನಿಗೋದಿ ಜೀವಗಳು ಇರುತ್ತವೆ, ಆದಾಗ್ಯೂ ಅಲ್ಲಿ ಸಂಕಟವಾಗಲಿ ಅಥವಾ ಪರಸ್ಪರ ಬಾಧೆಯಾಗಲಿ ಆಗುವುದಿಲ್ಲ. ನಿಗೋದಿಗಳಿಗೆ ಅಥವಾ ಪರಮಾಣುಗಳಿಗೆ ಇಲ್ಲಿ ಬೇರೆ ಅನಂತ ಆತ್ಮಗಳು ಮತ್ತು ಅನಂತ ಪರಮಾಣುಗಳು ವಾಸಿಸುತ್ತಿವೆಯೆಂಬ ಅರಿವು ಇರುವುದಿಲ್ಲ. ಆದರೆ ಪರಸ್ಪರ ಒಂದು ಇನ್ನೊಂದಕ್ಕೆ ವಾಸಿಸುವಲ್ಲಿ ವಿಘ್ನವನ್ನುಂಟು ಮಾಡದಿರುವಂತೆ ಅವುಗಳ ಸ್ವಭಾವವೇ ಇದೆ.

ಆತ್ಮ ಮತ್ತು ಕರ್ಮ ಇವು ವ್ಯವಹಾರ ನಯದಿಂದ ಬಂಧದ ಅಪೇಕ್ಷೆಯಿಂದ ಒಂದೆಂದು ತಿಳಿಯಲಾಗಿದೆ, ಆದರೆ ನಿಶ್ಚಯದಿಂದಂತೂ ಎರಡೂ ತಮ್ಮ-ತಮ್ಮ ಸ್ವರೂಪದಲ್ಲಿ ಬೇರೆ-ಬೇರೆಯೇ ಇವೆ. ಯಾವುದೂ ತನ್ನ ಸ್ವರೂಪವನ್ನು ಬಿಟ್ಟು ಪರದೊಡನೆ ಒಂದಾಗಿ ಹೋಗುವುದಿಲ್ಲ.

ಇನ್ನು ಮುಂದೆ ಎಂಟನೆಯ ಗಾಥೆಯಲ್ಲಿ ಪದಾರ್ಥಗಳ ಸತ್ತಾದ ಸ್ವರೂಪವನ್ನು ಹೇಳುತ್ತಾರೆ, -

**ಸತ್ತಾ ಸವ್ವಪಯತ್ಥಾ ಸವಿಸ್ಸರೂವಾ ಅಣಂತಪಜ್ಜಾಯಾ ।**
**ಭಂಗುಪ್ಪಾದಧುವತ್ತಾ ಸಪ್ಪಡಿವಕ್ಖಾ ಹವದಿ ಏಕ್ಕಾ ॥೮॥**

**ಸವಿಶ್ವರೂಪ ಸರ್ವಪದಾರ್ಥಸ್ಥಿತ ಅನಂತಪರ್ಯಾಯಮಯವಾದಾಸತ್ತಾ ।**
**ಸವಿಪಕ್ಷವಿದೆ ಮತ್ತೇಕವಿದೆ ಉತ್ಪಾದವ್ಯಯಧ್ರೌವ್ಯಮಯ ತಾನಾಗಿದೆ ॥೮॥**

**ಅರ್ಥ :-** ಸತ್ತಾ ಇದು ಉತ್ಪಾದ-ವ್ಯಯ-ಧ್ರೌವ್ಯಾತ್ಮಕ, ಏಕ, ಸರ್ವಪದಾರ್ಥಸ್ಥಿತ, ಸವಿಶ್ವರೂಪ, ಅನಂತ ಪರ್ಯಾಯಮಯ ಮತ್ತು ಸಪ್ರತಿಪಕ್ಷವಿದೆ.

ಸತ್ತಾ ಇದು ಅಸ್ತಿತ್ವಸ್ವರೂಪವಿದೆ, ಪದಾರ್ಥದ ಅಸ್ತಿತ್ವದ ಹೆಸರು ಸತ್ತಾ ಇದೆ. ಮತ್ತು ಸತ್ತಾ ಒಂದು ಇದೆ. ಎಂದರೆ ಮಹಾಸತ್ತಾದ ರೀತಿಯಿಂದ ಎಲ್ಲ ಪದಾರ್ಥಗಳ ಅಸ್ತಿತ್ವವಿದೆ, ಎಲ್ಲವೂ ಆಗಿ ಒಂದೇ ಪದಾರ್ಥವಿದೆಯೆಂಬುದು ಅದರ ಅರ್ಥವಲ್ಲ, ಮಹಾಸತ್ತಾ ಎಂದರೆ ಎಲ್ಲವೂ ಇವೆ - ನಿಗೋದಿಗಳು ಕೂಡ ಇವೆ ಮತ್ತು ಸಿದ್ಧರೂ ಕೂಡ ಇದ್ದಾರೆ ಚೇತನ ಕೂಡ ಇವೆ ಮತ್ತು ಜಡ ಕೂಡ ಇವೆ. ಇದರಲ್ಲಿ ಕೇವಲ ಜ್ಞಾತಾ ಉಳಿದು ಬಿಟ್ಟಿತು. 'ಇದೆ' ಎನ್ನುವುದರಿಂದ ಯಾವುದು ಬಾಕಿ ಉಳಿಯಿತು ? ಎಲ್ಲವೂ ಇವೆಯೆಂದು ತಿಳಿದುಕೊಳ್ಳುವಲ್ಲಿ ವೀತರಾಗ ಭಾವವು ಬಂದುಬಿಡುತ್ತದೆ.

ಮಹಾಸತ್ತಾ ಒಂದು ಇದ್ದು ಅದು ಸಮಸ್ತ ಪದಾರ್ಥಗಳಲ್ಲಿದೆ ಎಂದರೆ ಅಸ್ತಿತ್ವವಂತೂ ಎಲ್ಲ ಪದಾರ್ಥಗಳಲ್ಲಿದೆ

ಮಹಾಸತ್ತಾವು ಒಂದೇ ಇದ್ದರೂ ಕೂಡ ಇದು ಅನೇಕ ಪ್ರಕಾರದ ಸ್ವರೂಪದಿಂದ ಸಂಯುಕ್ತವಿದೆ. ಅಸ್ತಿತ್ವದಿಂದ ಎಲ್ಲವೂ ಸತ್ ಇದ್ದರೂ ಕೂಡ ಅದರಲ್ಲಿ ಕೆಲವು ಜಡ, ಕೆಲವು ಸಿದ್ಧ, ಕೆಲವು ನಿಗೋದಿಯೆಂದು ಅನೇಕ ಪ್ರಕಾರವಿವೆ . ಮತ್ತೆ ಸತ್ತಾದಲ್ಲಿ ಅನಂತ ಪರಿಣಾಮಗಳಿವೆ, ಸತ್ತಾವು ಉತ್ಪಾದ-ವ್ಯಯ-ಧ್ರುವ ಸ್ವರೂಪವಿದೆ; ಮತ್ತು ಸತ್ತಾವು ಪ್ರತಿಪಕ್ಷ ಸಹಿತವಿದೆ, ಎಂದರೆ ಮಹಾಸತ್ತಾದ ರೀತಿಯಲ್ಲಿ ಮಹಾಸತ್ತಾವು ಸತ್ ಇದೆ, ಆದರೆ ಅದರ ಉಪಭೇದದ ರೀತಿಯಲ್ಲಿ ಮಹಾಸತ್ತಾ ಇಲ್ಲ ಏಕೆಂದರೆ ಮಹಾಸತ್ತಾದಲ್ಲಿ ಭೇದವಾಗುವುದಿಲ್ಲ. ಮಹಾಸತ್ತಾವು ಪ್ರತಿಪಕ್ಷ ಸಹಿತವಿದೆ. ಅದು ಈ ಪ್ರಕಾರವಾಗಿದೆ -

ಮಹಾಸತ್ತಾ ಒಂದು ಇದ್ದರೆ ಅವಾಂತರ ಸತ್ತಾಗಳು ಅನೇಕವಿವೆ.

ಮಹಾಸತ್ತಾವು ಸಮಸ್ತ ಪದಾರ್ಥಗಳಲ್ಲಿ ವ್ಯಾಪಕವಾಗಿದ್ದರೆ ಅವಾಂತರ ಸತ್ತಾವು ಒಂದು ಪದಾರ್ಥದಲ್ಲಿ ವ್ಯಾಪಕವಿದೆ.

ಮಹಾಸತ್ತಾವು ಅನೇಕ ಸ್ವರೂಪವುಳ್ಳದ್ದಿದ್ದರೆ ಅವಾಂತರ ಸತ್ತಾವು ಏಕಸ್ವರೂಪವುಳ್ಳದ್ದಿದೆ.

ಮಹಾಸತ್ತಾದಲ್ಲಿ ದ್ರವ್ಯದ ಉತ್ಪಾದ-ವ್ಯಯ-ಧ್ರುವ ಈ ಮೂರೂ ಸಮಾವೇಶವಾಗಿ ಹೋಗಿದ್ದರೆ ಅವಾಂತರ ಸತ್ತಾದಲ್ಲಿ ಉತ್ಪಾದವು ಅದು ಉತ್ಪಾದವಿದೆ, ವ್ಯಯವು ಅದು ವ್ಯಯವಿದೆ ಮತ್ತು ಧ್ರುವವು ಅದು ಧ್ರುವವಿದೆ.

ಲೋಕಾಲೋಕವನ್ನು ಮಹಾಸತ್ತಾವೆಂದು ಹೇಳಿದಾಗ ಒಂದೊಂದು ದ್ರವ್ಯವು ಅವಾಂತರ ಸತ್ತಾಯಿದೆ.

ಒಂದು ದ್ರವ್ಯವನ್ನು ಮಹಾಸತ್ತಾವೆಂದು ಹೇಳಿದಾಗ ಅದರ ಉಪಭೇದವು ಅದು ಅವಾಂತರ ಸತ್ತಾಯಿದೆ.

ಎಲ್ಲ ಪದಾರ್ಥಗಳ ಮಧ್ಯದಲ್ಲಿ ಮಹಾಸತ್ತಾದ ಬೇರೆ ದಾರವನ್ನು ಪೋಣಿಸಲಾಗಿದೆ, ಅಥವಾ ಎಲ್ಲ ಪದಾರ್ಥಗಳದ್ದು ಒಂದು ಅಧಿಷ್ಠಾನವಿದೆಯೆಂಬುದು ಮಹಾಸತ್ತಾದ ಅರ್ಥವಲ್ಲ. ಎಲ್ಲ ಪದಾರ್ಥಗಳಲ್ಲಿ ಅಸ್ತಿತ್ವವಿದೆಯೆಂಬುದೇ ಮಹಾಸತ್ತಾದ ಅರ್ಥವಿದೆ. ಅಸ್ತಿತ್ವದೊಳಗಿಂದ ಯಾವ ಪದಾರ್ಥವೂ ಹೊರ ಹೊರಡುವುದಿಲ್ಲ. ಎಲ್ಲ ಪದಾರ್ಥಗಳ ಅಸ್ತಿತ್ವವನ್ನು ಒಟ್ಟಿಗೆ ಹೇಳುವುದರ ಹೆಸರು ಮಹಾಸತ್ತಾ ಇದೆ. ಮೊದಲು 'ಎಲ್ಲವೂ ಇವೆ'ಯೆಂದು ಸ್ಥಾಪನೆ ಮಾಡಿದ ನಂತರ ಅದರಲ್ಲಿ ಇದು ಜೀವ, ಇದು ಅಜೀವ ಮೊದಲಾಗಿ ಭೇದ ಮಾಡಲಾಗುವುದು.

ಸತ್ತಾಸಹಿತವಾದ ಪದಾರ್ಥವೇ ವಸ್ತುವಿದೆ. ಪದಾರ್ಥದ ಯಾವ ಅಸ್ತಿತ್ವವಿದೆ ಅದೇ ಸತ್ತಾ ಇದೆ. ಮತ್ತು ಸತ್ತಾಸಹಿತವಾಗಿದ್ದುದೇ ವಸ್ತುವಿದೆ. ಸತ್ತಾ ಇಲ್ಲದ ವಸ್ತುವಿರುವ ಸಾಧ್ಯತೆಯಿಲ್ಲ. ಸತ್ತಾವುಳ್ಳ ವಸ್ತುವು ಹೇಗಿದೆಯೆಂದರೆ ಅದು ನಿತ್ಯ-ಅನಿತ್ಯ ಸ್ವರೂಪವಿದೆ. ವಸ್ತುವು ಯಾವಾಗಲೂ ಸ್ಥಿರವಾಗಿಯೂ ಇರುತ್ತದೆ ಮತ್ತು ಕ್ಷಣಕ್ಷಣಕ್ಕೆ ಅನಿತ್ಯತೆಯಿಂದ ಮಾರ್ಪಾಡು ಕೂಡ ಆಗುತ್ತದೆ.

ವಸ್ತುವನ್ನು ಸರ್ವಥಾ ನಿತ್ಯವೆಂದೇ ಮನ್ನಿಸಿದರೆ ಸತ್ತಾದ ನಾಶವಾಗಿ ಹೋಗುವುದು. ಏಕೆಂದರೆ ಸರ್ವಥಾ ನಿತ್ಯವಾದ ವಸ್ತುವಿನಲ್ಲಿ ಕ್ಷಣವರ್ತಿಯಾದ ಪರ್ಯಾಯದ ಅಭಾವದಿಂದ ಪರಿಣಾಮದ ಅಭಾವವಾಗಿ ಬಿಡುವುದು ಮತ್ತು ಪರಿಣಾಮದ ಅಭಾವವಾದರೆ ವಸ್ತುವಿನ ಅಸ್ತಿತ್ವದ್ದೇ ಅಭಾವವಾಗುವುದು.

ವಸ್ತುವಿನ ಕಾರ್ಯದಿಂದಂತೂ ವಸ್ತುವಿನ ಅಸ್ತಿತ್ವದ ನಿರ್ಣಯವಾಗುತ್ತದೆ. ಆ ವಸ್ತುವಿನಲ್ಲಿ ಕಾರ್ಯವೇ ಇಲ್ಲದಿದ್ದರೆ ನಿತ್ಯ ವಸ್ತು ಕೂಡ ಇರುವ ಸಾಧ್ಯತೆಯೇ ಇಲ್ಲ. ಪರಿಣಾಮದ ಬದಲಾವಣೆಯಾದಲ್ಲದೆ ವಸ್ತುವೆಲ್ಲಿಂದ ನಿಶ್ಚಿತವಾಗುತ್ತದೆ? ವರ್ತಮಾನ ಪರಿಣಾಮದ ಅಸ್ತಿತ್ವವಿಲ್ಲದೆ ದ್ರವ್ಯದ ಪೂರ್ಣ ಭಿನ್ನ ಅಸ್ತಿತ್ವವು ನಿಶ್ಚಿತವಾಗುವ ಸಾಧ್ಯತೆಯಿಲ್ಲ. ಅವಸ್ಥೆಯಿಲ್ಲದೆ 'ಈ ವಸ್ತು ಬೇರೆ ಪದಾರ್ಥಗಳಿಂದ ಭಿನ್ನವಾಗಿ ಪರಿಣಮಿಸುತ್ತಿದೆ'ಯೆಂದು ಪದಾರ್ಥದ ಅಸ್ತಿತ್ವವನ್ನು ಯಾವ ರೀತಿಯಿಂದ

ತಿಳಿಯುವುದು ? ವಸ್ತುವನ್ನು ಸಿದ್ಧ ಮಾಡುವುದಂತೂ ಪರ್ಯಾಯವಿದೆ, ಈ ಪರ್ಯಾಯವಿದೆ ಅದು ಈ ವಸ್ತುವಿನ ಪರಿಣಾಮವಿದೆಯೆಂದು ಪರ್ಯಾಯದಿಂದ ವಸ್ತುವಿನ ಸಿದ್ಧಿಯಾಗುತ್ತದೆ. ಪರ್ಯಾಯದ ಕಾರಣವು ದ್ರವ್ಯವಿದೆ. ಈ ಮಾತಂತೂ ಬೇರೆಯಿದೆ, ಆದರೆ ದ್ರವ್ಯದ ನಿರ್ಣಯ ಮಾಡುವುದಿದ್ದರೆ ಅದು ಪರ್ಯಾಯದ ಮೇಲಿಂದ ನಿರ್ಣಯವಾಗುತ್ತದೆ. ಪರ್ಯಾಯವಿಲ್ಲದೆ ಸ್ಥಾಯೀ ವಸ್ತುವಿನ ಸಿದ್ಧಿಯಾಗುವ ಸಾಧ್ಯತೆಯಿಲ್ಲ. ಪರ್ಯಾಯವು ವ್ಯಕ್ತವಿದೆ, ಪ್ರಕಟವಿದೆ, ಕಾರ್ಯವಿದೆ ಮತ್ತು ದ್ರವ್ಯವಂತೂ ಅವ್ಯಕ್ತ-ಅಪ್ರಕಟ-ಕಾರಣರೂಪವಿದೆ. ಆ ವ್ಯಕ್ತಪರ್ಯಾಯದಿಂದ ಅವ್ಯಕ್ತ ದ್ರವ್ಯದ ಸಿದ್ಧಿಯಾಗುತ್ತದೆ.

ಇದು ಅರ್ಥಸಮಯದ ಸ್ವರೂಪವನ್ನು ಹೇಳಲಾಗಿದೆ. ಇಂಥ ಅರ್ಥಸಮಯವನ್ನು ತಿಳಿದುಕೊಳ್ಳುವಂಥದು ಜೀವದ ಜ್ಞಾನಸಮಯದ ಸಾಮರ್ಥ್ಯವಿದೆ.

ಪದಾರ್ಥವು ಪರಿಣಮಿಸದಿದ್ದರೆ 'ಇದು ಪದಾರ್ಥವಿದೆ'ಎಂದು ಹೇಗೆ ನಿಶ್ಚಿತ ಮಾಡುವುದು ? ನಿತ್ಯ ಪದಾರ್ಥದಲ್ಲಿ ಕ್ಷಣ-ಕ್ಷಣಕ್ಕೆ ಪರಿಣಮನವಾಗದಿದ್ದರೆ ಅದರ ವರ್ತಮಾನ ಸತ್ತಾವು ಉಳಿಯುವುದಿಲ್ಲ. ಎಂದರೆ ವರ್ತಮಾನ ಸತ್ತಾಯಿಲ್ಲದೆ ತ್ರಿಕಾಲ ಸತ್ತಾದ ಕೂಡ ಅಭಾವವಾಗಿ ಹೋಗುವುದು. ವಸ್ತುವಂತೂ ವರ್ತಮಾನದಲ್ಲಿ ವರ್ತಮಾನತನದಿಂದಿದ್ದು ತ್ರಿಕಾಲವಿದೆ. ಆ ವರ್ತಮಾನವನ್ನು ಮನ್ನಿಸದಿದ್ದರೆ ನಿತ್ಯತನದ ನಿಶ್ಚಯವೇ ಆಗಲಾರದು. ವಸ್ತುವಿನ ವರ್ತಮಾನ-ವರ್ತಮಾನತನವನ್ನು ಮನ್ನಿಸಿದಲ್ಲದೆ 'ಈ ತತ್ತ್ವ ನಿತ್ಯವಿದೆ'ಯೆಂದು ನಿಶ್ಚಿತವಾಗುವ ಸಾಧ್ಯತೆಯೇ ಇಲ್ಲ. ಸರ್ವಥಾ ಕೂಟಸ್ಥ ಮನ್ನಿಸುವವನೂ ವಸ್ತುವಿನ ಅಸ್ತಿತ್ವವನ್ನು ತಿಳಿದೇ ಇಲ್ಲ.

ಹೇಗೆ ಮಣ್ಣು ಪದಾರ್ಥದಲ್ಲಿ ಕೊಡ, ಗಡಿಗೆ ಮೊದಲಾದ ಯಾವುದೇ ಪರ್ಯಾಯವಿಲ್ಲದಿದ್ದರೆ ಮಣ್ಣಿನ ಅಸ್ತಿತ್ವವೇ ಸಿದ್ಧಿಸುವುದಿಲ್ಲ. ಮಣ್ಣು ಇದೆ ಆದರೆ ವರ್ತಮಾನದಲ್ಲಿ ಯಾವ ಅವಸ್ಥೆಯಿಲ್ಲವೆಂದರೆ 'ಮಣ್ಣು ಇದೆ'ಯೆಂದು ಯಾವುದರ ಆಶ್ರಯದಿಂದ ಹೇಳುವುದು ? ಪದಾರ್ಥವು ತಾನು ತನ್ನ ಪರ್ಯಾಯತನದಿಂದ ಪರಿಣಮಿಸುವಂಥದ್ದಿದೆ, ಹೀಗೆ ಪದಾರ್ಥದ ಸ್ವರೂಪವೇ ಇದೆ, ಎಂದರೆ ಬೇರೆ ಯಾವುದು ಅದರ ಪರ್ಯಾಯವನ್ನು ಮಾಡುವಂತಿಲ್ಲ. 'ವಸ್ತು ಇದೆ'ಯೆಂದು ಹೇಳಿದರೂ ವರ್ತಮಾನದಲ್ಲಿ ವರ್ತಿಸುವ ಅದರ ಯಾವ ಅವಸ್ಥೆಯನ್ನೇ ಮನ್ನಿಸದಿದ್ದರೆ ಅವನು ವಸ್ತುವಿನ ಅಸ್ತಿತ್ವವನ್ನು ತಿಳಿದುಕೊಂಡಿಲ್ಲ. ವಸ್ತುವಂತೂ ಯಾವ ಸ್ವರೂಪದಿಂದಿದೆ ಅದೇ ಸ್ವರೂಪದಿಂದಲೇ ಉಳಿಯುತ್ತದೆ, ಆದರೆ ವಿಪರೀತ ಮನ್ನಿಸುವವನಿಗೆ ತನ್ನ ಜ್ಞಾನಸಮಯದಲ್ಲಿ ಅಪರಾಧವಾಗುತ್ತದೆ. ಎಂದರೆ ಮಿಥ್ಯಾಜ್ಞಾನವಾಗುತ್ತದೆ. ಪದಾರ್ಥ ಸಮಯದ ಸ್ವರೂಪವಂತೂ ಹೇಗಿದೆ ಹಾಗೆಯೇ ಇದೆ.

ನನ್ನ ಪರ್ಯಾಯವು ಇನ್ನೊಂದರ ಕಾರಣದಿಂದಾಗುತ್ತದೆಯೆಂದು ಮನ್ನಿಸುವವನು ಕೂಡ ತ್ರಿಕಾಲೀ ದ್ರವ್ಯದ ಸತ್ತಾವನ್ನು ಮನ್ನಿಸಿಲ್ಲ. ಆದ್ದರಿಂದ ವಸ್ತುವು ಏಕಾಂತ ನಿತ್ಯವಿಲ್ಲ. ಆದರೆ ಕ್ಷಣಕ್ಷಣಕ್ಕೆ ಬದಲಾವಣೆ ಕೂಡ ಆಗುತ್ತದೆಯೆಂದು ಸಿದ್ಧಮಾಡಲಾಯಿತು.

ಬೇರೆ ಬೌದ್ಧ ಮೊದಲಾದವರು ವಸ್ತುವನ್ನು ಸರ್ವಥಾ ಕ್ಷಣಿಕವೆಂದೇ ಮನ್ನಿಸಿದ್ದಾರೆ ಅವರೆದುರು ವಸ್ತುವನ್ನು ನಿತ್ಯವೆಂದು ಸಿದ್ಧಮಾಡಿದೆ.

ನಿನ್ನೆ ಯಾವ ಮನುಷ್ಯನನ್ನು ನೋಡಲಾಗಿತ್ತು ಅದೇ ಮನುಷ್ಯನು ಇವನಿದ್ದಾನೆಂಬ ಜ್ಞಾನವಾಗುವುದು ಅದು ಎದುರಿನ ವಸ್ತುವಿನ ನಿತ್ಯತೆಯನ್ನು ಸಿದ್ಧಮಾಡುತ್ತದೆ. ಆ ವಸ್ತುವಿನಲ್ಲಿ ನಿತ್ಯತೆಯಿಲ್ಲದಿದ್ದರೆ 'ಯಾರಿಗೆ ನಿನ್ನೆ ಹಣ ಕೊಟ್ಟಿತ್ತು ಅದೇ ಮನುಷ್ಯನು ಇಂದು ತಿರುಗಿ ಕೊಟ್ಟಿದ್ದಾನೆ'ಂಬ ಜ್ಞಾನವಾಗುವ ಸಾಧ್ಯತೆಯಿಲ್ಲ. ವಸ್ತುವನ್ನು ಸರ್ವಥಾ ಕ್ಷಣಿಕವೆಂದು ಮನ್ನಿಸಿದರೆ ನಿತ್ಯತೆಯನ್ನು ತಿಳಿಯುವ ಜ್ಞಾನ ಕೂಡ ಮಿಥ್ಯೆಯಾಗುವುದು ಅದಕ್ಕಾಗಿ 'ನಿನ್ನೆ ಯಾರನ್ನು ನೋಡಲಾಗಿತ್ತು

ಅವನೇ ಇವನಿದ್ದಾನೆ'ಂಬ ಜ್ಞಾನದ ನಿಮಿತ್ತರೂಪ ವಸ್ತುವಿನಲ್ಲಿ ಧ್ರುವತನವು ಸಿದ್ಧವಾಗುತ್ತವೆ.

ಹೇಗೆ ಬಾಲಕನಿದ್ದವನು ಯುವಕನಾಗುತ್ತಾನೆ, ಆದರೆ ಅಲ್ಲಿ ಪುರುಷನಂತೂ ಅವನೇ ಉಳಿದನು ಪರ್ಯಾಯವು ಬದಲಾಯಿತು, ಆದರೆ ಪುರುಷನು ಅವನೇ ಉಳಿದನು ಎಂದರೆ ಬಾಲಕ, ಯುವಕ ಮೊದಲಾದ ಪರ್ಯಾಯದಲ್ಲಿ ಪುರುಷನ ನಿತ್ಯತೆಯುಳಿಯಿತು ಹಾಗೆ ನಿಗೋದದಿಂದ ಸಿದ್ಧವರೆಗಿನ ಎಲ್ಲ ಪರ್ಯಾಯಗಳಲ್ಲಿ ಆತ್ಮನು ವಸ್ತುತ್ವದಿಂದ ನಿತ್ಯನಿದ್ದಾನೆ ಮತ್ತು ಪರ್ಯಾಯತ್ವದಿಂದ ಬದಲಾಗುತ್ತಾನೆ.

ನಿತ್ಯ-ಅನಿತ್ಯ ವಸ್ತುವು ಉತ್ಪಾದ-ವ್ಯಯ-ಧ್ರುವ ಸ್ವರೂಪವಿದೆ. ಗುಣದ ನಿತ್ಯತೆಯುಳಿದಿದೆ ಆ ಅಪೇಕ್ಷೆಯಿಂದ ಧ್ರುವತೆಯಿದೆ ಮತ್ತು ಪರ್ಯಾಯದ ಅನಿತ್ಯತೆಯ ಅಪೇಕ್ಷೆಯಿಂದ ಉತ್ಪಾದ-ವ್ಯಯಗಳಿವೆ. ಪ್ರತಿಯೊಂದು ಪದಾರ್ಥದ ಅಸ್ತಿತ್ವವು ಹೀಗೆ ಉತ್ಪಾದ-ವ್ಯಯ-ಧ್ರುವರೂಪವಿದೆ. ನಿತ್ಯ ಅನಿತ್ಯತೆಯನ್ನು ಮನ್ನಿಸದಿದ್ದರೆ ಉತ್ಪಾದ-ವ್ಯಯ-ಧ್ರುವದ ಸಿದ್ಧಿಯಾಗುವ ಸಾಧ್ಯತೆಯಿಲ್ಲ. ಹೀಗೆ ವಸ್ತುವಿನ ಧರ್ಮವಿದೆ ಎಂದರೆ ವಸ್ತುವಿನ ಪರ್ಯಾಯವು ವಸ್ತುವಿನಿಂದ-ತನ್ನಿಂದ ಆಗುತ್ತದೆ ಯಾವುದು ಯಾವುದನ್ನು ಬದಲಾವಣೆ ಮಾಡುವಂತಿಲ್ಲ.

ಸತ್ತಾದ ಅನುಸಾರ ವಸ್ತು ಒಂದಿದೆಯೆಂದು ಹೇಳಿತು, ನಂತರ ನಿತ್ಯ-ಅನಿತ್ಯದ ಅನುಸಾರ ಎರಡು ಧರ್ಮಗಳನ್ನು ಹೇಳಿತು. ಇದಾದ ನಂತರ ಉತ್ಪಾದ-ವ್ಯಯ-ಧ್ರುವವೆಂಬ ಮೂರು ಪ್ರಕಾರಗಳನ್ನು ಹೇಳಿತು.

ತನ್ನ ಸತ್ತಾವು ನಿತ್ಯ-ಅನಿತ್ಯ ಸ್ವರೂಪ ಮತ್ತು ಉತ್ಪಾದ-ವ್ಯಯ-ಧ್ರುವಾತ್ಮಕವಿದೆಯೆಂದು ತನ್ನ ಸತ್ತಾವನ್ನು ಸ್ವತಂತ್ರವಾಗಿ ನೋಡದೆ ಅಜ್ಞಾನಿಯು ಸಂಯೋಗವನ್ನೇ ನೋಡುತ್ತಾನೆ. ಅನಾದಿಯಿಂದ ಸಂಯೋಗೀ ವಸ್ತುವಿನ ಉತ್ಪಾದ-ವ್ಯಯ-ಧ್ರುವಗಳು ಅದರಲ್ಲಿಯೇ ಇವೆ ಮತ್ತು ತನ್ನ ಉತ್ಪಾದ-ವ್ಯಯ-ಧ್ರುವಗಳು ತನ್ನಲ್ಲಿ ಇವೆ.

ಸತ್ತಾದಲ್ಲಿ ನಿತ್ಯ ಮತ್ತು ಅನಿತ್ಯವೆಂಬ ಎರಡು ಭೇದಗಳಿದ್ದರೂ ಕೂಡ ಸಾಮಾನ್ಯ ಸತ್ತಾದ ಅಪೇಕ್ಷೆಯಿಂದಂತೂ ಏಕತೆಯಿದೆ. ಯಾವುದು ನಿತ್ಯ-ಅನಿತ್ಯ ಸ್ವರೂಪವಿದೆ ಮತ್ತು ಉತ್ಪಾದ-ವ್ಯಯ-ಧ್ರುವಾತ್ಮಕವಿದೆ ಅದೇ ಸತ್ತಾ ಇದೆ. ಸಮಸ್ತ ಪದಾರ್ಥಗಳ ಸಾಮಾನ್ಯ ಕಥನ ಮಾಡುವಾಗ ಸತ್ತಾ ಏಕವಿದೆ, ಸಮಸ್ತ ಪದಾರ್ಥಗಳಲ್ಲಿ ವಾಸಿಸಿದೆ ; ಏಕೆಂದರೆ ಪದಾರ್ಥವು 'ಇದೆ'ಯೆಂಬ ಯಾವ ಕಥನವಿದೆ ಮತ್ತು ಪದಾರ್ಥವು 'ಇದೆ'ಯೆಂಬ ಯಾವ ಜ್ಞಾನವಿದೆ ಅದು ಪದಾರ್ಥದ ಸತ್ತಾಯಿಲ್ಲದೆ ಆಗುವ ಸಾಧ್ಯತೆಯಿಲ್ಲ. ಆ 'ಸತ್ತಾ' ಇಲ್ಲದಿದ್ದರೆ ಪದಾರ್ಥದ ಅಭಾವವೇ ಆಗುವುದು. ಯಾವ ವಿಸ್ತಾರವಿದೆ ಅದೆಲ್ಲವು 'ಸತ್ತಾ'ದಲ್ಲಿ ಗರ್ಭಿತವಿದೆ. ಏಕೆಂದರೆ ಮೊದಲು 'ಸತ್ತಾ ಇದೆ'ಯೆಂದು ನಿಶ್ಚಯ ಮಾಡಿದ ನಂತರವೇ ಅದರ ವಿಸ್ತಾರವಾಗುವ ಸಾಧ್ಯತೆಯಿದೆ. ಪದಾರ್ಥವೇ ಇಲ್ಲದೆ ಹೋದರೆ ವಿಸ್ತಾರ ಯಾವುದರದು ? ಉತ್ಪಾದ-ವ್ಯಯ-ಧ್ರುವ ಅವು ಮೂರು ಸತ್ತಾದ ಅಂಶಗಳಿವೆ. ಸತ್ತಾವು ಉತ್ಪಾದ-ವ್ಯಯ-ಧ್ರುವವುಳ್ಳದ್ದು ಇದೆ. ಅನಂತ ಪದಾರ್ಥಗಳ ಎಷ್ಟು ಭೇದಗಳಿವೆ ಅವೆಲ್ಲವು ಉತ್ಪಾದ-ವ್ಯಯ-ಧ್ರುವದಿಂದ ತಿಳಿದು ಬರುವ ಸಾಧ್ಯತೆಯಿದೆ.

ಪ್ರತಿಯೊಂದು ಪದಾರ್ಥವು ಸತ್ತಾವುಳ್ಳದ್ದಿದೆ. ಉತ್ಪಾದ-ವ್ಯಯ-ಧ್ರುವಯುಕ್ತ ಸತ್ ಇದೆ ಕ್ಷಣ ಕ್ಷಣಕ್ಕೆ ನವೀನ ಅವಸ್ಥೆಯು ಉತ್ಪನ್ನವಾಗುತ್ತವೆ. ಹಳೆಯದು ಹೊರಟುಹೋಗುತ್ತದೆ ಮತ್ತು ವಸ್ತುರೂಪದಿಂದ ಧ್ರುವತೆ ಉಳಿಯುತ್ತದೆ. ಹೀಗೆ ಸತ್ತಾದ ಸ್ವರೂಪವಿದೆ, ವಸ್ತುಸ್ವರೂಪವು ಹೀಗೆ ಇದೆ. ಮಹಾಸತ್ತಾತನದಿಂದ ಎಲ್ಲವೂ ಸತ್ ಇವೆ. ಸರ್ವಜ್ಞರು ಅವುಗಳ ಪೂರ್ಣ ಜ್ಞಾಯಕರಿದ್ದಾರೆ ಮತ್ತು ನನ್ನ ಸ್ವಭಾವವು ಕೂಡ ಅವನ್ನು ತಿಳಿದುಕೊಳ್ಳುವುದಿದೆ. ಅದರಲ್ಲಿ ''ಇದು ಹೀಗೆ ಏಕೆ'' ಎಂದು ವಿಕಲ್ಪವನ್ನುತ್ಪನ್ನ ಮಾಡುವುದು ನನ್ನ ಸ್ವಭಾವವಿಲ್ಲವೆಂದು ಸಮ್ಯಗ್ದೃಷ್ಟಿಗೆ ಜ್ಞಾತಾತನದ ಪ್ರತೀತಿಯಿದೆ. ನಾನು ಜ್ಞಾತಾ ಮತ್ತು ಸಮಸ್ತ ಪದಾರ್ಥಗಳು ನನ್ನ ಜ್ಞೇಯ, ಅದರಲ್ಲಿ ಯಾವುದೇ ಬದಲಾವಣೆ ಮಾಡುವವನು ನಾನಿಲ್ಲವೆಂದು ಸಮ್ಯಗ್ದೃಷ್ಟಿಗೆ ಪ್ರತೀತಿ ಇರುತ್ತದೆ.

ಪದಾರ್ಥ ಸಮಯವನ್ನು ತಿಳಿಯುವಂತೆ ಜ್ಞಾನಸಮಯದ ಸ್ವಭಾವವಿದೆ. ಆದರೆ ಪದಾರ್ಥದಲ್ಲಿ ಯಾವುದೇ ಬದಲಾವಣೆ ಮಾಡುವಂತೆ ಜ್ಞಾನದ ಸ್ವಭಾವವಿಲ್ಲ. ಇಂಥ ಜ್ಞಾತಾ ಸ್ವಭಾವದ ಪ್ರತೀತಿ ಮಾಡಿ ಜ್ಞಾತಾ-ದೃಷ್ಟಾರೂಪದಿಂದಿರುವುದರ ಹೆಸರು ಸಮ್ಯಗ್ದರ್ಶನ-ಜ್ಞಾನ -ಚಾರಿತ್ರವಿದೆ.

ಮಹಾಸತ್ತಾವನ್ನು ಎಂದರೆ ಜಗತ್ತಿನ ಸಮಸ್ತ ಪದಾರ್ಥಗಳನ್ನು ಒಂದು ಸಮಯದಲ್ಲಿ ತಿಳಿದುಕೊಳ್ಳುವುದು ಜ್ಞಾನದ ಸಮರ್ಥ್ಯವಿದೆ ಇಂಥ ಜ್ಞಾನವನ್ನು ಮನ್ನಿಸುವವನಿಗೆ ರಾಗದಲ್ಲಿ ಏಕತ್ವಬುದ್ಧಿ ಉಳಿಯುವುದಿಲ್ಲ. ಪರದಲ್ಲಿ ಏಕಾಕಾರ ಮಾಡುವಬುದ್ಧಿ ಉಳಿಯುವುದಿಲ್ಲ.

''ಮಹಾಸತ್ತಾ'' ಎಂದರೆ ಅದರಲ್ಲಿ ಎಲ್ಲವೂ ಸಮಾವೇಶವಾಗಿ ಹೋಗುತ್ತವೆ.ಮತ್ತು ಅದರಲ್ಲಿ ಒಳಭೇದ ಮಾಡುವುದು ಅದು ಅವಾಂತರ ಸತ್ತಾ ಇದೆ. ಮಹಾಸತ್ತಾದ ಪ್ರತಿಪಕ್ಷಿಯಾಗಿ ಅವಾಂತರ ಸತ್ತಾ ಇದೆ ಮಹಾಸತ್ತಾ ಸಾಮಾನ್ಯವಿದೆ ಮತ್ತು ಅವಾಂತರಸತ್ತಾಶೇಷವಿದೆ. ಎಂದರೆ ಮಹಾಸತ್ತಾ ಮತ್ತು ಅವಾಂತರಸತ್ತಾವೆಂದು ಸತ್ತಾದಲ್ಲಿ ಎರಡು ಪ್ರಕಾರವಿವೆ. ಜಗತ್ತಿನಲ್ಲಿ ಸಿದ್ಧರು ಕೂಡ ಇದ್ದಾರೆ ಮತ್ತು ನಿಗೋದಿಗಳು ಕೂಡ ಇವೆ ; ಚಿನ್ನವು ಕೂಡ ಇದೆ ಮತ್ತು ಲೋಹವು ಕೂಡ ಇದೆ. ಹೀಗೆ ಎಲ್ಲವುಗಳ ಅಸ್ತಿತ್ವವನ್ನು ತಿಳಿದುಕೊಳ್ಳುವುದು ಜ್ಞಾನದ ಸ್ವಭಾವವಿದೆ ಆದರೆ ಅವುಗಳಲ್ಲಿ ಇದು ಒಳ್ಳೆಯದು ಇದು ಕೆಡಕೆಂಬ ಬುದ್ಧಿ ಮಾಡುವುದು ಜ್ಞಾನದ ಸ್ವಭಾವವಿಲ್ಲ. ಈ ಜ್ಞಾನದ ಪ್ರತೀತಿಯು ಅದು ಸಮ್ಯಗ್ದರ್ಶನವಿದೆ-ಧರ್ಮವಿದೆ.

೧) ಮಹಾಸತ್ತಾ ಅದು ಉತ್ಪಾದ, ವ್ಯಯ ಮತ್ತು ಧ್ರುವ ಈ ಮೂರು ಲಕ್ಷಣವುಳ್ಳದ್ದಿದೆ.

೨) ಮಹಾಸತ್ತಾ ಏಕವಿದೆ.

೩) ಮಹಾಸತ್ತಾ ಎಲ್ಲ ಪದಾರ್ಥಗಳಲ್ಲಿ ಇರುವಂಥದ್ದಿದೆ. ಯಾವುದೇ ಪದಾರ್ಥವನ್ನು ಮಹಾಸತ್ತಾದಿಂದ ಬೇರೆ ಮಾಡುವ ಸಾಧ್ಯತೆಯಿಲ್ಲ. ಮಹಾಸತ್ತಾದಲ್ಲಿ ನಿಗೋದವು ಕೂಡ ಬರುತ್ತದೆ ಮತ್ತು ಸಿದ್ಧರು ಕೂಡ ಬರುತ್ತಾರೆ ; ಪರಮಾಣುವು ಕೂಡ ಬರುತ್ತದೆ ಮತ್ತು ಮಹಾಸ್ಕಂಧವು ಕೂಡ ಬರುತ್ತದೆ.

೪) ಮಹಾಸತ್ತಾ ಸಮಸ್ತರೂಪವಿದೆ.

೫) ಮತ್ತು ಮಹಾಸತ್ತಾ ಅದು ಅನಂತ ಪರ್ಯಾಯಾತ್ಮಕವಿದೆ.

ಈ ಪ್ರಕಾರ ಐದು ವಿಶೇಷಣ ಹೇಳಿದೆ. ಅದರಿಂದ ವಿರುದ್ಧವಾಗಿ ಅವಾಂತರಸತ್ತಾ ಇದೆ. ಮಹಾಸತ್ತಾ ಅದೇನು ಸ್ವತಂತ್ರ ದ್ರವ್ಯವಿಲ್ಲ ಆದರೆ ಆರೂ ದ್ರವ್ಯಗಳನ್ನು ಸಂಗ್ರಹರೂಪದಿಂದ ಹೇಳುವುದರ ಹೆಸರು ಮಹಾಸತ್ತಾ ಇದೆ.

ಯಾವ ಪ್ರಕಾರ ಅನೇಕ ಪ್ರಕಾರದ ವೃಕ್ಷಗಳಿರುವುದನ್ನು ''ವನ''ವೆಂದು ಹೇಳುವುದು ಅದು ಮಹಾಸತ್ತಾ ಎನಿಸುತ್ತದೆ. ಮತ್ತು ಅದರಲ್ಲಿ ಬೇವು ಮಾವು ಮೊದಲಾದುವನ್ನು ಬೇರೆ ಹೇಳುವುದು ಅದು ಅವಾಂತರಸತ್ತಾಯಿದೆ.

ಮಹಾಸತ್ತಾದ ಒಳಭೇದರೂಪವಾಗಿ ಅವಾಂತರಸತ್ತಾಯಿದೆ ; ಆ ಅವಾಂತರಸತ್ತಾ ಮಹಾಸತ್ತಾದ ಅಪೇಕ್ಷೆಯಿಂದ ಅಸತ್ ಇದೆ. ಎಲ್ಲವು ಇವೆಯೆಂದು ಹೇಳಿದಮೇಲೆ ಒಳಭೇದವು ಅಸತ್ ಆಗಿ ಹೋಗುವುದು, ಮತ್ತು ಒಳಭೇದ ಹೇಳಿದಾಗ ಮಹಾಸತ್ತಾಗೌಣವಾಗಿ ಹೋಗುವುದು.

ಮಹಾಸತ್ತಾದಿಂದ ವಿರುದ್ಧವಾಗಿ ಅವಾಂತರಸತ್ತಾ ಇದೆ ಅದು ಹೇಗೆ ಇದೆ ?

೧) ಉತ್ಪಾದ-ವ್ಯಯ-ಧ್ರುವವುಳ್ಳದ್ದಿಲ್ಲ, ಆದರೆ ಏಕ ಲಕ್ಷಣವುಳ್ಳದ್ದಿದೆ. ಉತ್ಪಾದವು ಅದು ಉತ್ಪಾದವಿದೆ, ವ್ಯಯವು ಅದು ವ್ಯಯವಿದೆ ಮತ್ತು ಧ್ರುವವು ಅದು ಧ್ರುವವುದೆಯೆಂದು ಮೂರರ ಲಕ್ಷಣವು ಬೇರೆ ಬೇರೆಯಿದೆ. ಸಾಮಾನ್ಯ ಸತ್

ಹೇಳುವುದು ಅದಾ ಮಹಾಸತ್ತಾವಿದೆ ಮತ್ತು ಅದರಲ್ಲಿ ಉತ್ಪಾದ-ವ್ಯಯ-ಧ್ರುವವೆಂದು ಮೂರು ಭೇದ ಮಾಡಿ ಹೇಳುವುದು ಅದು ಅವಾಂತರಸತ್ತಾಇದೆ.

ಸಿದ್ಧರು ಕೂಡ ಇದ್ದಾರೆ ಮತ್ತು ನಿಗೋದವು ಕೂಡ ಇದೆ, ಅದು ಮಹಾಸತ್ತಾದಲ್ಲಿ ಬಂದುಹೋಯಿತು ಆದರೆ ಅದರಲ್ಲಿ ಯಾವ ಸಿದ್ಧರಿದ್ದಾರೆ ಅದು ನಿಗೋದವಿಲ್ಲ ; ನಿಗೋದವಿದೆ ಅದು ಸಿದ್ಧವಿಲ್ಲ. ಹೀಗೆ ಅವಾಂತರಸತ್ತಾ ಬೇರೆ ಬೇರೆಯಿದೆ. ಮಹಾಸತ್ತಾದಲ್ಲಿ ಉತ್ಪಾದ-ವ್ಯಯ-ಧ್ರುವ ಮೂರೂ ಬಂದು ಹೋಗುತ್ತವೆ ಆದರೆ ಅದರಲ್ಲಿ ಯಾವ ಉತ್ಪಾದವಿದೆ ಅದು ವ್ಯಯವಿಲ್ಲ ಯಾವ ವ್ಯಯವಿದೆ ಅದು ಉತ್ಪಾದವಿಲ್ಲ ಹೀಗೆ ಉತ್ಪಾದ-ವ್ಯಯ ಮತ್ತು ಧ್ರುವದ ಲಕ್ಷಣವು ಭಿನ್ನ ಭಿನ್ನವಿದೆ ಅದು ಅವಾಂತರಸತ್ತಾಯಿದೆ. ಸಾಮಾನ್ಯ ಸತ್ತಾದಲ್ಲಿ ಮೂರೂ ಒಂದಾಗಿ ಸಮಾವೇಶವಾಗಿ ಹೋಗುತ್ತವೆ ; ಆದರೆ ವಿಶೇಷರೂಪದಿಂದ ನೋಡಿದರೆ ಉತ್ಪಾದ-ವ್ಯಯ-ಧ್ರುವ ಮೂರರ ಲಕ್ಷಣವು ಭಿನ್ನ ಭಿನ್ನವಿದೆ ಏಕೆಂದರೆ ಸಿದ್ಧದಶೆಯಾದಲ್ಲಿ ಆ ಆತ್ಮನಿಗೆ ಸಿದ್ಧ ಪರ್ಯಾಯವಾಗುವುದು ಅದು ಉತ್ಪಾದದ ಲಕ್ಷಣವಿದೆ ಸಂಸಾರ ಪರ್ಯಾಯ ಹೋಗುವುದು ಅದು ವ್ಯಯದ ಲಕ್ಷಣವಿದೆ ಮತ್ತು ಸದೃಶತೆ ಉಳಿಯುವುದು ಅದು ಧ್ರುವದ ಲಕ್ಷಣವಿದೆ. ಈ ಪ್ರಕಾರ ಅವಾಂತರಸತ್ತಾದಲ್ಲಿ ಭೇದವಾಗುತ್ತದೆ ಮಹಾಸತ್ತಾದಲ್ಲಿ ಭೇದವಾಗುವುದಿಲ್ಲ.

ಸಾಮಾನ್ಯವಾಗಿ ಎಲ್ಲವೂ ಒಟ್ಟಿಗೆ ಸತ್‌ರೂಪದಿಂದ ಜ್ಞಾನದಲ್ಲಿ ಬರುತ್ತವೆ, ಆದರೂ ಆ ಪದಾರ್ಥಗಳ ಭಿನ್ನ ಭಿನ್ನ ಸ್ವರೂಪವನ್ನು ಜ್ಞಾನವು ತಿಳಿಯುತ್ತದೆ

ಮಿಥ್ಯಾತ್ವದ ವ್ಯಯ ಸಮ್ಯಕ್ತ್ವದ ಉತ್ಪಾದ ಮತ್ತು ಶ್ರದ್ಧೆಯ ಧ್ರುವತೆ ಇವು ಮೂರು ಪ್ರಕಾರಗಳು ಸತ್ತಾದಲ್ಲಿ ಬಂದು ಹೋದರೂ ಆ ಮೂರೂ ಪ್ರಕಾರದ ಲಕ್ಷಣಗಳು ಭಿನ್ನ ಭಿನ್ನವಿವೆ ಚಾರಿತ್ರಗುಣವು ಸ್ಥಿರವಿರುತ್ತದೆ ಅದು ಧ್ರುವದಲ್ಲಿ ಬರುತ್ತದೆ ಅದರ ದಶೆಯಲ್ಲಿ ರಾಗದ ನಾಶವಾಗುವುದು ಅದು ವ್ಯಯದಲ್ಲಿ ಬರುತ್ತದೆ ಮತ್ತು ವೀತರಾಗತೆ ಪ್ರಕಟವಾಗುವುದು ಅದು ಉತ್ಪಾದದಲ್ಲಿ ಬರುತ್ತದೆ. ಹೀಗೆ ಉತ್ಪಾದ-ವ್ಯಯ-ಧ್ರುವದ ಭೇದ ಮಾಡಿ ಹೇಳುವುದರ ಹೆಸರು ಅವಾಂತರ ಸತ್ತಾಯಿದೆ. ಸಾಮಾನ್ಯ ಮತ್ತು ವಿಶೇಷ ಇವೆರಡೂ ಪ್ರಕಾರದಿಂದ ಪದಾರ್ಥಗಳನ್ನು ತಿಳಿದುಕೊಳ್ಳುವುದು ಜ್ಞಾನದ ಸ್ವಭಾವವಿದೆ.

ಮಹಾಸತ್ತಾರೂಪದಿಂದ ಇಡೀ ವಿಶ್ವವು ಸತ್ ಇದೆ. ಮತ್ತು ಅದರಲ್ಲಿ ಪ್ರತಿಯೊಂದು ಪದಾರ್ಥವು ತಮ್ಮ ತಮ್ಮ ಅವಾಂತರ ಸತ್ತಾದಿಂದ ಭಿನ್ನ ಭಿನ್ನವಿವೆ. ಮಹಾಸತ್ತಾದಲ್ಲಿ ಭವ್ಯ ಮತ್ತು ಅಭವ್ಯ ಎಲ್ಲವೂ ಬಂದು ಹೋಗುತ್ತವೆ. ಅಲ್ಲಿ ''ಈತ ಅಭವ್ಯ ಹೇಗೆ ಮತ್ತು ಈತ ಭವ್ಯಹೇಗೆ''? ಇಂಥ ಪ್ರಶ್ನೆ ಉಳಿಯುವುದಿಲ್ಲ ಎಲ್ಲವೂ ಸತ್ ಇದೆ. ಅನಾದಿ ಸಿದ್ಧ ಇದೆ ಅದು ಸತ್ ಇದೆ. ಹೀಗೆ ಮಹಾಸತ್ತಾದಲ್ಲಿ ಎಲ್ಲವೂ ಸತ್ ಇವೆ. ಆದರೆ ಅದರಲ್ಲಿ ಭವ್ಯವು ಅದು ಅಭವ್ಯವಿಲ್ಲ ಮತ್ತು ಅಭವ್ಯವು ಅದು ಭವ್ಯವಿಲ್ಲ. ಸಿದ್ಧರು ಅವರು ಸಂಸಾರಿಯಿಲ್ಲ. ಜೀವವು ಅದು ಜೀವವಿದೆ, ಅಜೀವವು ಅದು ಅಜೀವವಿದೆ. ಹೀಗೆ ಎಲ್ಲವುಗಳ ಅವಾಂತರಸತ್ತಾ ಬೇರೆಯಿದೆಯೆಂದು ತಿಳಿಯುವುದರಲ್ಲಿ ವೀತರಾಗತೆಯಿದೆ.

ಜಗತ್ತಿನಲ್ಲಿ ಬೇರೆ ಆತ್ಮರುಗಳಿದ್ದಾರೆ ಅವರನ್ನು ಆತ್ಮನು ತಿಳಿಯುವ ಸಾಧ್ಯತೆಯಿದೆ, ಆದರೆ ಅವರದೇನನ್ನೂ ಮಾಡುವ ಸಾಧ್ಯತೆಯಿಲ್ಲ, ಜಗತ್ತಿನಲ್ಲಿ ದುಃಖೀ ಜೀವರುಗಳಿದ್ದಾರೆಂದು ಜ್ಞಾನವು ತಿಳಿಯುತ್ತದೆ, ಆದರೆ ಅವರ ದುಃಖವನ್ನು ದೂರ ಮಾಡುವ ಸಾಧ್ಯತೆಯಿದೆಯೆಂಬುದು ಜ್ಞಾನದ ಸ್ವಭಾವವಿಲ್ಲ. ಅನಂತ ಸಂಸಾರೀ ಜೀವಗಳೂ ಕೂಡ ಇವೆ ಮತ್ತು ಏಕ ಭವಾವತಾರಿ ಜೀವಗಳು ಕೂಡ ಇವೆ ಹೀಗೆ ಎಲ್ಲವನ್ನೂ ತಿಳಿಯುವುದರಲ್ಲಿ ಒಂದರ ಮೇಲೆ ದ್ವೇಷ ಮತ್ತು ಇನ್ನೊಂದರ ಮೇಲೆ ರಾಗ ಮಾಡುವುದು ಉಳಿಯುವುದಿಲ್ಲ. ಆದರೆ ಜ್ಞಾತಾನಾಗಿರುವುದೇ ಉಳಿಯುತ್ತದೆ. ಎಂದರೆ ಜ್ಞಾನವು ಜ್ಞಾನದಲ್ಲಿ ಸ್ಥಿರಗೊಳ್ಳುತ್ತ ಸ್ಥಿರಗೊಳ್ಳುತ್ತ ವೀತರಾಗತೆಯೇ ಆಗುತ್ತದೆ.

ಎಲ್ಲವೂ ಇದೆಯೆಂದು ಹೇಳಿದಮೇಲೆ ಅವುಗಳಿಂದೇನೂ ಬೇರೆಯಾಗದಿರುವುದರ ಹೆಸರು ಮಹಾಸತ್ತಾ ಇದೆ.

ಮತ್ತು ಅದರಲ್ಲಿ ಭಾಗ ಮಾಡಿ ಬೇರೆ ಬೇರೆ ಹೇಳುವುದು ಅದು ಅವಾಂತರಸತ್ತಾ ಇದೆ.

ಮಿಥ್ಯಾತ್ವ, ಸಮ್ಯಕ್ತ್ವ ಮತ್ತು ಶ್ರದ್ಧೆ ಇವು ಮೂರು ಜತೆಯಲ್ಲಿರುವುದಿಲ್ಲ, ಆದರೆ ಮಿಥ್ಯಾತ್ವದ ವ್ಯಯ, ಸಮ್ಯಕ್ತ್ವದ ಉತ್ಪಾದ ಮತ್ತು ಶ್ರದ್ಧೆಯ ಧ್ರುವತೆ ಹೀಗೆ ಮೂರು ಜತೆಯಲ್ಲಿರುತ್ತವೆ. ಅಯ್ಯಾ ಒಂದೊಂದು ಗಾಥೆಯೊಳಗಿಂದ ಹದಿನಾಲ್ಕು ಪೂರ್ವಗಳ ಸಾರವು ಹೊರಡುವಂತೆ ಅದ್ಭುತ ರಚನೆಯನ್ನು ಭ. ಕುಂದಕುಂದಾಚಾರ್ಯದೇವರು ಮಾಡಿದ್ದಾರೆ. ರಾಗವನ್ನು ರಾಗ ತಿಳಿಯುತ್ತದೆ ಮತ್ತು ವೀತರಾಗತೆಯನ್ನು ವೀತರಾಗತೆ ತಿಳಿಯುತ್ತದೆ ಹೀಗೆ ಜ್ಞಾನಸಮಯದ ಸ್ವಭಾವವಿದೆ. ಆದರೆ ಅದರಲ್ಲಿ ರಾಗವನ್ನು ಬದಲಿಸುವ ಬುದ್ಧಿಮಾಡಿದರೆ ಅವನಿಗೆ ಜ್ಞಾನಸಮಯದ ಪ್ರತೀತಿ ಉಳಿಯುವುದಿಲ್ಲ. ಜ್ಞಾನದ ಪ್ರತೀತಿಯೆನ್ನಿರಿ, ದ್ರವ್ಯದೃಷ್ಟಿಯೆನ್ನಿರಿ, ವೀತರಾಗಭಾವವೆನ್ನಿರಿ, ಕ್ರಮಬದ್ಧ ಪರ್ಯಾಯದ ಪ್ರತೀತಿಯೆನ್ನಿರಿ, ಜ್ಞಾತಾ-ದೃಷ್ಟಾಭಾವವೆನ್ನಿರಿ ಅವೆಲ್ಲವೂ ಇದರಲ್ಲಿ ಬಂದು ಹೋಗುವವು.

ಮಹಾಸತ್ತಾ ಏಕವಿದೆ ಮತ್ತು ಅವಾಂತರಸತ್ತಾ ಅನೇಕವಿವೆ, ಓರ್ವನು ಸಿದ್ಧ ಮತ್ತು ಓರ್ವನು ಅಭವ್ಯ, ಓರ್ವನು ಏಕಾವತಾರಿ ಮತ್ತು ಓರ್ವನು ಅನಂತಸಂಸಾರಿ, ಒಂದು ಚೇತನ ಮತ್ತು ಒಂದು ಜಡ ಹೀಗೆ ಅನೇಕತೆಯು ಅವಾಂತರ ಸತ್ತಾದಲ್ಲಿ ಇದೆ ಮಹಾಸತ್ತಾದಲ್ಲಿ ಅಂಥ ಭೇದವಾಗುವುದಿಲ್ಲ.

ಮಹಾಸತ್ತಾದಲ್ಲಿ ಅನಂತ ಪರ್ಯಾಯಗಳು ಸಮಾವೇಶವಾಗುತ್ತವೆ ಮತ್ತು ಅವಾಂತರಸತ್ತಾದಲ್ಲಿ ಒಂದೇ ಪರ್ಯಾಯವಿರುತ್ತದೆ. ಉತ್ಪಾದವು ಅದು ಉತ್ಪಾದವಿದೆ, ವ್ಯಯವು ಅದು ವ್ಯಯವಿದೆ ಮತ್ತು ಧ್ರುವವು ಅದು ಧ್ರುವವಿದೆ.

ಹೀಗೆ ಪರ್ಯಾಯದ ಸ್ವಭಾವವಿದೆ. ಅದನ್ನು ತಿಳಿದುಕೊಳ್ಳುವುದು ಜ್ಞಾನದ ಸ್ವಭಾವವಿದೆ. ಮತ್ತು ಅದನ್ನು ಹೇಳುವುದು ವಾಣಿಯ ಸ್ವಭಾವವಿದೆ. ಆದರೆ ಅವು ಪ್ರತಿಯೊಂದು ಸ್ವತಂತ್ರವಿವೆ. ವಾಣಿಯಕಾರಣದಿಂದ ಜ್ಞಾನವಿಲ್ಲ ಅಥವಾ ಪದಾರ್ಥವಿಲ್ಲ.

ಪದಾರ್ಥದ ಸ್ವಭಾವವನ್ನು ತಿಳಿದುಕೊಂಡು ಜ್ಞಾನವನ್ನು ಸಮ್ಯಕ್ ಮಾಡುವುದರಲ್ಲಿಯೇ ಅನಂತ ಪುರುಷಾರ್ಥವಿದೆ.

ಈ ಪ್ರಕಾರ ಮಹಾಸತ್ತಾ ಮತ್ತು ಅದರಲ್ಲಿ ಸಮಸ್ತ ಅವಾಂತರಸತ್ತಾವೆಂದು ಎರಡು ಪ್ರಕಾರದ ಸತ್ತಾದ ವರ್ಣನೆ ಮಾಡಲಾಯಿತು, ಆತ್ಮನ ಆನಂದದಲ್ಲಿ ಜೀಕುತ್ತ-ಜೀಕುತ್ತ ವೀತರಾಗೀ ಸಂತರಿಗೆ ವಿಕಲ್ಪವುತ್ಪನ್ನವಾದ ಮೇಲೆ ಇಂಥ ಅದ್ಭುತ ರಚನೆಯಾಗಿ ಹೋಗಿದೆ. ಆಂತರ್ಯದ ಜ್ಞಾನದಲ್ಲಿ ಆ ಪ್ರಕಾರದ ಭಾವಗಳ ಭಾಸನವಿತ್ತು ಮತ್ತು ಬಾಹ್ಯದಲ್ಲಿ ಈ ಪಂಚಾಸ್ತಿಕಾಯ ಮೊದಲಾದ ಶಬ್ದಗಳ ರಚನೆಯು ಜಗತ್ತಿನ ಭಾಗ್ಯದಿಂದ ಆಗಿಹೋಯಿತು ಮುನಿರಾಜರಿಗೆ ಸ್ವಾಭಾವಿಕವಾಗಿ ನಗ್ನದಿಗಂಬರ ದಶೆಯಾಗುತ್ತದೆ ಮತ್ತು ಆಂತರ್ಯದಲ್ಲಿ ಸ್ಥಿರಗೊಳ್ಳುತ್ತ-ಸ್ಥಿರಗೊಳ್ಳುತ್ತ ಪೂರ್ಣಸ್ಥಿರರಾದ ಮೇಲೆ ವೀತರಾಗತೆ ಹಾಗೂ ಕೇವಲಜ್ಞಾನವಾಗಿ ಹೋಗುತ್ತದೆ. ಉಪಯೋಗವು ಸೂಕ್ಷ್ಮವಾಗುತ್ತ ವಾಗುತ್ತ ಸ್ವರೂಪದಲ್ಲಿ ಸ್ಥಿರಗೊಳ್ಳುವುದೇ ಪುರುಷಾರ್ಥವಿದೆ.

ಸಮಯದಲ್ಲಿ ಶಬ್ದ, ಅರ್ಥ ಮತ್ತು ಜ್ಞಾನವೆಂದು ಮೂರು ಪ್ರಕಾರವಿವೆ. ಅವುಗಳಲ್ಲಿ ಜ್ಞಾನಸಮಯವು ಅದು ಆತ್ಮನ ಜ್ಞಾನದ ನಿರ್ದೋಷ ಪರ್ಯಾಯವಿದೆ. ಪದಾರ್ಥಗಳ ಸ್ವರೂಪವು ಅದು ಅರ್ಥಸಮಯವಿದೆ ಮತ್ತು ಅದನ್ನು ಯಾವ ಜ್ಞಾನವು ತಿಳಿಯುವುದು ಆ ಜ್ಞಾನವನ್ನು ಜ್ಞಾನಸಮಯವೆಂದು ಹೇಳುತ್ತಾರೆ ಹಾಗೂ ಅದರ ಸ್ವರೂಪ ಹೇಳುವಂಥ ವಾಣಿಯು ಅದು ಶಬ್ದಸಮಯವಿದೆ.

ಜಗತ್ತಿನಲ್ಲಿ ಆರು ದ್ರವ್ಯಗಳಿವೆ. ಆ ಆರೂ ದ್ರವ್ಯಗಳ ಸತ್ತಾ ಇದೆ. ಅವುಗಳ ಸಾಮಾನ್ಯ ಸಂಗ್ರಹದ ಹೆಸರು ಮಹಾಸತ್ತಾಯಿದೆ. ಮತ್ತು ಅದರಲ್ಲಿ ಜಡ-ಚೇತನ, ಸಿದ್ಧ-ಸಂಸಾರಿಯೆಂದು ಒಳಭೇದಗಳಿದ್ದು ಅವು ಅವಾಂತರಸತ್ತಾಯಿವೆ.

ಇಂಥ ಸತ್ತಾವನ್ನು ತಿಳಿದುಕೊಳ್ಳುವುದು ಜ್ಞಾನದ ಸ್ವಭಾವವಿದೆ. ಆದರೆ ಅದರಲ್ಲಿ ವ್ಯತ್ಯಾಸ ಮಾಡುವಂತೆ ಜ್ಞಾನದ ಸ್ವಭಾವವಿಲ್ಲ.

ಆರೂ ಪದಾರ್ಥಗಳ ಸಂಗ್ರಹದ ಹೆಸರು ಮಹಾಸತ್ತಾಯಿದೆ. ಆರು ದ್ರವ್ಯಗಳಿಂದ ಬೇರೆ ಯಾವ ಮಹಾಸತ್ತಾ ನಾಮದ ವಸ್ತುವಿಲ್ಲ ಮತ್ತು ಆರೂ ದ್ರವ್ಯಗಳು ಭಿನ್ನ-ಭಿನ್ನವಿವೆ. ಅವುಗಳಲ್ಲಿ ಅನಂತ ಜೀವಗಳು ಭಿನ್ನ-ಭಿನ್ನವೆಂದು ಪೃಥಕ್-ಪೃಥಕ್ ಸತ್ತಾ ಇದೆ ಅದರ ಹೆಸರು ಅವಾಂತರ ಸತ್ತಾಯಿದೆ. ಜ್ಞಾನದ ಸ್ವಭಾವವು ಎರಡೂ ಪ್ರಕಾರಗಳನ್ನು ತಿಳಿದುಕೊಳ್ಳುವುದಿದೆ. ಪದಾರ್ಥದ ಸತ್ತಾವನ್ನು ಹೇಗಿದೆ ಹಾಗೆ ತಿಳಿದುಕೊಂಡರೆ ಆ ಜ್ಞಾನವು ಸಮ್ಯಕ್ ಆಗುವುದು. ಸಮಸ್ತ ಪದಾರ್ಥಗಳು ಸತ್ ಇವೆಯೆಂದು ತಿಳಿದುಕೊಳ್ಳುವಲ್ಲಿ ವೀತರಾಗತೆ ಬರುತ್ತದೆ. ಅನಂತ ಪದಾರ್ಥಗಳು ಸತ್ ಇವೆ ಅದರಲ್ಲಿ ಪ್ರತಿಯೊಂದು ಪದಾರ್ಥದ ಸ್ವರೂಪಸತ್ತಾ ಭಿನ್ನ-ಭಿನ್ನವಿದೆ. ಪ್ರತಿಯೊಂದು ಪದಾರ್ಥವು ಬೇರೆ-ಬೇರೆ ತನ್ನ ತನ್ನ ಸ್ವರೂಪದಲ್ಲಿಯೇ ನಿಶ್ಚಿತವಿದೆ. ಎಲ್ಲವೂ ಒಂದಾಗಿ ಏಕವಾಗಿ ಹೋಗುವುದಿಲ್ಲ. ಒಂದು ತತ್ತ್ವವು ಇನ್ನೊಂದು ತತ್ತ್ವದ ಕಾರಣದಿಂದ ಇಲ್ಲ ಮತ್ತು ಯಾವ ಸಮಯದಲ್ಲಿ ಹೇಗೆ ಇದೆ ಆ ಸಮಯದಲ್ಲಿ ಹಾಗೆಯೇ ಇದೆ. ಅದರಲ್ಲಿ ವ್ಯತ್ಯಾಸವಾಗುವುದಿಲ್ಲ. ಹೀಗೆ ಅವಾಂತರಸತ್ತಾದ ಸ್ವರೂಪವಿದೆ.

ಸಾಮಾನ್ಯ ಸಂಗ್ರಹದ ಅಪೇಕ್ಷೆಯಿಂದ ಒಳ ಭೇದವು ಅಸತ್‌ಯಿದೆ ಮತ್ತು ಒಳಭೇದದ ಅಪೇಕ್ಷೆಯಿಂದ ಸಾಮಾನ್ಯ ಸಂಗ್ರಹ ಅಸತ್‌ಯಿದೆ.

ಎಂದರೆ ಮಹಾಸತ್ತಾದ ಅಪೇಕ್ಷೆಯಿಂದ ಅವಾಂತರಸತ್ತಾ ಅಸತ್ತಾಯಿದೆ ಮತ್ತು ಅವಾಂತರಸತ್ತಾದ ಅಪೇಕ್ಷೆಯಿಂದ ಮಹಾಸತ್ತಾ ಅಸತ್ತಾಯಿದೆ.

ಸಾಮಾನ್ಯವು ಅದು ವಿಶೇಷವಿಲ್ಲ ಮತ್ತು ವಿಶೇಷವು ಅದು ಸಾಮಾನ್ಯವಿಲ್ಲ.

ವಸ್ತುಸ್ವರೂಪವಂತೂ ಹೇಗೆ ಇದೆ ಹಾಗೇ ಇದೆ, ಆದರೆ ಅದನ್ನು ತಿಳಿದುಕೊಳ್ಳುವಲ್ಲಿ ಇದು ಮುಖ್ಯ-ಗೌಣತೆಯ ಮಾತು ಇದೆ ಯಾವಾಗ ಸಾಮಾನ್ಯ ಸಂಗ್ರಹತನದಿಂದ ತಿಳಿಯುತ್ತದೆ ಆಗ ಅದರಲ್ಲಿ ಒಳ ಭೇದಗಳು ಲಕ್ಷ್ಯದಲ್ಲಿ ಬರುವುದಿಲ್ಲ. ಮಹಾಸತ್ತಾದ ಅಪೇಕ್ಷೆಯಿಂದ ಅವಾಂತರಸತ್ತಾ ಅದು ಒಂದು ಅಂಶವಿದೆ. ಒಂದು ವೇಳೆ ಅವಾಂತರ ಸತ್ತಾ ಸ್ವಯಂ ಮಹಾಸತ್ತಾ ಇದ್ದರೆ ಒಂದು ಅಂಶವೇ ಪೂರ್ಣವೆಂದು ಸಿದ್ಧವಾಗುವುದು. ಆದುದರಿಂದ ಯಾವುದು ಸತ್ತಾಯಿದೆ ಅದುವೇ ಅಸತ್ತಾಕೂಡ ಇದೆ. ಮಹಾಸತ್ತಾದ ಅಪೇಕ್ಷೆಯಿಂದ ಅವಾಂತರಸತ್ತಾ ಅಸತ್ತಾ ಇದೆ ಮತ್ತು ಅವಾಂತರ ಸತ್ತಾದ ಅಪೇಕ್ಷೆಯಿಂದ ಮಹಾಸತ್ತಾ ಕೂಡ ಅಸತ್ತಾ ಇದೆ.

ಇಡೀ ಮಾಲೆಯು ಅದು ಮಹಾಸತ್ತಾಯಿದೆ ಅದರ ಒಂದೊಂದು ಮುತ್ತು ಅದು ಅವಾಂತರಸತ್ತಾಯಿದೆ. ಅದರಲ್ಲಿ ಮಾಲೆಯ ಮಹಾಸತ್ತಾತನದಿಂದ ಒಂದೊಂದು ಮುತ್ತು ಇಲ್ಲ ಏಕೆಂದರೆ ಇಡೀ ಮಾಲೆಯರೂಪದಿಂದ ಅದರ ಒಂದೊಂದು ಮುತ್ತು ಇದ್ದರೆ ಮಾಲೆಯು ಒಂದು ಮುತ್ತಿನಷ್ಟೇ ಆಗಿ ಹೋಗುವುದು. ಈ ರೀತಿಯಿಂದ ಮಹಾಸತ್ತಾ ಮತ್ತು ಅವಾಂತರಸತ್ತಾ ಒಂದು ಇನ್ನೊಂದರ ಅಪೇಕ್ಷೆಯಿಂದ - ಹೀಗೆ ಸತ್ತಾದ ಅನೇಕಾಂತ ಸ್ವಭಾವವಿದೆ.

ಮತ್ತು ಯಾವ ಸತ್ತಾ ಮಹಾಸತ್ತಾದ ಅಪೇಕ್ಷೆಯಿಂದ ಉತ್ಪಾದ-ವ್ಯಯ-ಧ್ರುವವೆಂದು ಮೂರೂ ಲಕ್ಷಣ ಸಂಯುಕ್ತವಿದೆ ಅದೇ ಸತ್ತಾ ಅವಾಂತರಸತ್ತಾದ ಅಪೇಕ್ಷೆಯಿಂದ ಉತ್ಪಾದ-ವ್ಯಯ-ಧ್ರುವವೆಂಬ ಮೂರು ಲಕ್ಷಣ ಸಂಯುಕ್ತವಿಲ್ಲ. ಏಕೆಂದರೆ ಯಾವುದು ಸ್ವರೂಪದಿಂದ ಉತ್ಪಾದವಿದೆ ಅದು ಸ್ವರೂಪದಿಂದ ಉತ್ಪಾದವಿದೆ, ಯಾವುದು ಸ್ವರೂಪದಿಂದ ವ್ಯವವಿದೆ ಅದು ಸ್ವರೂಪದಿಂದ ವ್ಯಯವೇ ಇದೆ ಮತ್ತು ಯಾವುದು ಸ್ವರೂಪದಿಂದ ಧ್ರುವತೆಯಿದೆ ಅದು ಸ್ವರೂಪದಿಂದ ಧ್ರುವತೆಯಿದೆಯೆಂದು ಮೂರರ ಲಕ್ಷಣವು ಬೇರೆ-ಬೇರೆಯಿದೆ. ಯಾವ ಪ್ರಕಾರ ಸಮ್ಯಗ್ದರ್ಶನವು ಸ್ವರೂಪದಿಂದ ಉತ್ಪಾದವಿದೆ ಮತ್ತು

ಮಿಥ್ಯಾದರ್ಶನರೂಪದಿಂದ ವ್ಯಯವಿದೆ ಹಾಗೂ ಶ್ರದ್ಧಾ ಸ್ವರೂಪದಿಂದ ಧ್ರುವತೆಯಿದೆ ಹೀಗೆ ಅವಾಂತರಸತ್ತಾದ ಅಪೇಕ್ಷೆಯಿಂದ ಮೂರರ ಲಕ್ಷಣಗಳು ಬೇರೆ ಬೇರೆಯಿವೆ. ಮಹಾಸತ್ತಾದಲ್ಲಿ ಉತ್ಪಾದ-ವ್ಯಯ-ಧ್ರುವ ಇವು ಮೂರೂ ಅಂಶಗಳು ಸಮಾವೇಶವಾಗಿ ಹೋಗುತ್ತವೆ, ಆದರೆ ಅವಾಂತರಸತ್ತಾದಲ್ಲಿ ಮೂರೂ ಅಂಶಗಳು ನಿರಪೇಕ್ಷವಿವೆ. ಒಂದು ವೇಳೆ ಉತ್ಪಾದ-ವ್ಯಯ-ಧ್ರುವಗಳು ಯಾವುದಾದರೂ ಒಂದು ಇನ್ನೊಂದರ ಕಾರಣದಿಂದ ಇದ್ದರೆ ಆ ಅಂಶಗಳ ಹಾನಿಯಾಗುತ್ತದೆ. ಧ್ರುವದ ಕಾರಣದಿಂದ ಉತ್ಪಾದದ ಅಂಶವಿಲ್ಲ. ಆದರೆ ಉತ್ಪಾದದ ಅಂಶವು ತಾನು ತನ್ನಿಂದ ಇದೆ. (ಈ ವರ್ಣನೆಯು ಪ್ರವಚನಸಾರದ ನೂರೊಂದನೆಯ ಗಾಥೆಯಲ್ಲಿ ವಿಸ್ತಾರಪೂರ್ವಕ ಬಂದಿದೆ.)

**ಪ್ರಶ್ನೆ :-** ಆತ್ಮನಿದ್ದಾನೆಂದು ಹೇಳುವುದು ಅವಾಂತರಸತ್ತಾ ಇದೆಯೋ ಅಥವಾ ಮಹಾಸತ್ತಾಯಿದೆಯೋ ?

**ಉತ್ತರ :-** ಆತ್ಮನನ್ನು ಲೋಕದಿಂದ ಭಿನ್ನಮಾಡಿ ಹೇಳುವ ಅಪೇಕ್ಷೆಯಿಂದ ಅವಾಂತರಸತ್ತಾ ಇದೆ ಮತ್ತು ಪ್ರತಿಯೊಬ್ಬ ಆತ್ಮನು ಉತ್ಪಾದ-ವ್ಯಯ-ಧ್ರುವ ಅಂಶವುಳ್ಳವನಿದ್ದಾನೆಂಬ ಅಪೇಕ್ಷೆಯಿಂದ ಪ್ರತಿಯೊಬ್ಬ ಆತ್ಮನು ಮಹಾಸತ್ತಾ ಇದ್ದಾನೆ ಮತ್ತು ಅವನಲ್ಲಿ ಉತ್ಪಾದ-ವ್ಯಯ-ಧ್ರುವವೆಂದು ಭೇದ ಮಾಡುವುದು ಅದು ಅವಾಂತರಸತ್ತಾ ಇದೆ. ಒಬ್ಬೊಬ್ಬ ಆತ್ಮನಲ್ಲಿ ಉತ್ಪಾದ-ವ್ಯಯ-ಧ್ರುವವಾಗುತ್ತದೆ ಅದನ್ನು ಮಹಾಸತ್ತಾವೆಂದು ಕೂಡ ಹೇಳಲಾಗುವುದು ಮತ್ತು ಅವಾಂತರ ಸತ್ತಾವೆಂದು ಕೂಡ ಹೇಳಲಾಗುವುದು. ಯಾವ ರೀತಿಯಿಂದ ?

೧) ಸಂಪೂರ್ಣ ಲೋಕಾಲೋಕವು ಉತ್ಪಾದ-ವ್ಯಯ-ಧ್ರುವ ಸ್ವರೂಪವಿದೆ, ಅದರಲ್ಲಿ ಒಬ್ಬ ಆತ್ಮನ ಉತ್ಪಾದ-ವ್ಯಯ-ಧ್ರುವವನ್ನು ಬೇರೆ ಮಾಡಿ ಹೇಳುವುದು ಅದು ಅವಾಂತರಸತ್ತಾ ಆಯಿತು. ಲೋಕಾಲೋಕದ ಅಪೇಕ್ಷೆಯಿಂದ ಒಬ್ಬ ಆತ್ಮನು ಅವನು ಅವಾಂತರಸತ್ತಾ ಆದನು.

೨) ಒಬ್ಬ ಆತ್ಮನಿದ್ದಾನೆ ಅವನನ್ನು ಮಹಾಸತ್ತಾವೆಂದು ಹೇಳಿದರೆ ಅವನ ಉತ್ಪಾದ-ವ್ಯಯ-ಧ್ರುವ ಈ ಮೂರು ಅಂಶಗಳು ಅವು ಅವಾಂತರಸತ್ತಾ ಇದೆ.

ನೋಡಿರಿ ! ಜಗತ್ತಿನಲ್ಲಿ ಈ ಎಲ್ಲ ಪದಾರ್ಥಗಳ ಸತ್ತಾ ಇದೆ. ಯಾವುದರ ಕಾರಣದಿಂದ ಯಾವುದರ ಸತ್ತಾ ಇಲ್ಲ, ಆದರೆ ಸ್ವಯಂಸಿದ್ಧ ಸತ್ತಾ ಇದೆ, ಎಂದರೆ ಆತ್ಮನು ಅವುಗಳ ಜ್ಞಾತಾ-ದೃಷ್ಟಾನೇ ಇದ್ದಾನೆ ''ಸತ್ತಾ ಇದೆ'' ಅದರ ಅಭಾವ ಮನ್ನಿಸಿದರೆ ಅದು ಮಿಥ್ಯಾತ್ವವಿದೆ ಮತ್ತು ಸತ್ತಾ ಪರದ ಕಾರಣದಿಂದ ಇದೆಯೆಂದು ಮನ್ನಿಸಿದರೆ ಅದು ಕೂಡ ಮಿಥ್ಯಾತ್ವವಿದೆ. ಸತ್ತಾ ತನ್ನಿಂದ ಸತ್ ಇದೆ, ಎಂದರೆ ''ಇದರ ಕಾರಣದಿಂದ ಹೀಗಾಯಿತೆ''ಂಬ ಮಾತು ಉಳಿಯುವುದಿಲ್ಲ. ಗುರುವಿನ ಕಾರಣದಿಂದ ಜ್ಞಾನವಾಯಿತೆಂಬುದಂತೂ ಇಲ್ಲ. ಏಕೆಂದರೆ ಜ್ಞಾನದ ಸತ್ತಾ ತನ್ನಿಂದ ಇದೆ, ಆದರೆ ಧ್ರುವ ಜ್ಞಾನದ ಕಾರಣದಿಂದ ಜ್ಞಾನದ ಉತ್ಪಾದ ಅಂಶವಿದೆಯೆಂಬುದಾಗಿಯೂ ಇಲ್ಲ. ಸತ್ ಇದೆಯೆಂದು ಸಿದ್ಧ ಮಾಡುವುದಿದೆ, ಅದರ ಅಸ್ತಿ ಮನ್ನಿಸಿದರೆ ಆಸ್ತಿಕತೆಯಿದೆ, ಮತ್ತು ''ಇಲ್ಲ''ವೆಂದು ಮನ್ನಿಸಿದರೆ ನಾಸ್ತಿಕತೆಯಾಗುತ್ತದೆ. ಪದಾರ್ಥದ ಸ್ವರೂಪವು ಹೀಗೆ ಸತ್ತಾವುಳ್ಳದ್ದಿದೆ. ಸತ್ತಾದ ಸ್ವೀಕಾರವು ಅದು ಸಮ್ಯಗ್ಜ್ಞಾನವಿದೆ, ಸತ್ತಾ ಅದು ಅರ್ಥಸಮಯವಿದೆ ಮತ್ತು ಆ ಸತ್ತಾವನ್ನು ತಿಳಿಯುವುದು ಅದು ಜ್ಞಾನಸಮಯವಿದೆ. ಜ್ಞಾನವು ಜ್ಞೇಯದ ಸತ್ತಾವನ್ನು ಇದೆಯೆಂದು ತಿಳಿಯುತ್ತದೆ. ''ಹೀಗೆ ಹೇಗೆ''? ಎಂಬ ವಿಕಲ್ಪವು ಜ್ಞಾನದಲ್ಲಿ ಇಲ್ಲ. ಪರ್ಯಾಯವು ಸತ್ಇದೆ, ಅದು ಪರದ ಕಾರಣದಿಂದಂತೂ ಇಲ್ಲ, ಆದರೆ ಮೊದಲಿನ ಪರ್ಯಾಯದ ಕಾರಣದಿಂದ ಕೂಡ ಇಲ್ಲ, ಇದರಲ್ಲಿ ಜ್ಞಾಯಕ ಭಾವ ಮತ್ತು ವೀತರಾಗತೆಯೇ ಎದ್ದು ನಿಲ್ಲುತ್ತದೆ.

ಕೇವಲಜ್ಞಾನ ಪರ್ಯಾಯವುಳ್ಳ ಅನಂತ ಜೀವಗಳು ಸತ್ ಇವೆಯೆಂದು ಅನಂತ ಕೇವಲಜ್ಞಾನಿಗಳ ಸತ್ತಾವನ್ನು ಶ್ರುತಜ್ಞಾನಿಯು ತಿಳಿದುಕೊಳ್ಳುತ್ತಾನೆ. ಆ ಕೇವಲಜ್ಞಾನವು ಸತ್ ಇದೆ, ಯಾವುದೇ ಮೊದಲಿನ ಕಾರಣದ ಕಾರಣದಿಂದ ಅದರ ಸತ್ತಾ ಇದೆಯೆಂಬುದಾಗಿಲ್ಲ. ಹೇಗೆ ಸತ್ ಇದೆ ಹಾಗೆ ತಿಳಿದುಕೊಳ್ಳುವುದೇ ನಿನ್ನ ಸ್ವಭಾವವಿದೆ. ನೀನು ''ಜ್ಞ''

ಸ್ವಭಾವಿಯೇ ಇರುವೆ ರಾಗವನ್ನು ರಾಗರೂಪದಿಂದ ತಿಳಿದುಕೊಳ್ಳುವಂಥ ಸ್ವಭಾವವಿದೆ. ಶುಭದ ಸಮಯದಲ್ಲಿ ಶುಭ ಮತ್ತು ಅಶುಭದ ಸಮಯದಲ್ಲಿ ಅಶುಭವನ್ನು ತಿಳಿದುಕೊಳ್ಳುವಂತೆ ಜ್ಞಾನದ ಸ್ವಭಾವವಿದೆ. ಆದರೆ ಅದರಲ್ಲಿ ಅಶುಭವನ್ನು ಬದಲಿಸಿ ಶುಭ ಮಾಡುವಂತೆ ಜ್ಞಾನದ ಸ್ವಭಾವವಿಲ್ಲ. ಇಂಥ ಜ್ಞಾನದಲ್ಲಿ ರಾಗವು ಉಳಿಯುವುದಿಲ್ಲ. ಜ್ಞಾನ ಸ್ವಭಾವವು ತಿಳಿದುಕೊಳ್ಳುವುದೇ ಇದೆಯೆಂದು ನಿರ್ಣಯ ಮಾಡಿದರೆ ಅಲ್ಲಿ ಮೋಕ್ಷದ ಮಾರ್ಗವು ಆರಂಭವಾಗಿ ಹೋಗುವುದು.

ಯಾವುದು ಸ್ವರೂಪದಿಂದ ಉತ್ಪಾದವಿದೆ ಅದು ಸ್ವರೂಪದಿಂದ ಉತ್ಪಾದವಿದೆ. ವ್ಯಯದ ಕಾರಣದಿಂದ ಉತ್ಪಾದವಿಲ್ಲವೆಂದ ಮೇಲೆ ಪರದ ಕಾರಣದಿಂದಂತೂ ಉತ್ಪಾದವು ಎಲ್ಲಿ ಉಳಿಯಿತು ? ಸತ್ ಇದೆ ಅದರಲ್ಲಿ ಕಾರಣ -ಕಾರ್ಯ ಕೂಡ ಅನ್ವಯಿಸುವುದಿಲ್ಲ. ಏಕೆಂದರೆ ಸತ್‌ಗೆ ಮತ್ತೆ ಕಾರಣ ಯಾವುದು ? ನಿರಪೇಕ್ಷ ಸತ್‌ದಲ್ಲಿ ಕಾರಣ-ಕಾರ್ಯ ಹೇಳುವುದು ಅದಂತೂ ವ್ಯವಹಾರವಿದೆ. ಅಯ್ಯಾ ಸತ್ ! ಆಯಿತು. ಸತ್ ಹೇಗೆ ಇದೆ ಹಾಗೆ ಅದನ್ನು ತಿಳಿದು ಕೊಳ್ಳುವಂಥದು ನಿನ್ನ ಸ್ವಭಾವವಿದೆ ಅದರಲ್ಲಿಯೇ ಕೇವಲಜ್ಞಾನವಿದೆ.

''ಸತ್''ದಲ್ಲಿ ಲೋಕಾಲೋಕವು ಸಮಾವೇಶವಾಗಿ ಹೋಗುವುದು, ಸತ್ತಾ ಉತ್ಪಾದ-ವ್ಯಯ-ಧ್ರುವವುಳ್ಳದ್ದಿದೆ ಆ ಉತ್ಪಾದ-ವ್ಯಯ-ಧ್ರುವ ಲಕ್ಷಣದಲ್ಲಿ ಸಂಪೂರ್ಣ ಲೋಕಾಲೋಕವು ಸಮಾವೇಶವಾಗಿ ಹೋಗುವುದು ಯಾವುದೂ ಬಾಕಿ ಉಳಿಯುವುದಿಲ್ಲ. ಇಂಥ ಸತ್ತಾದ ಸ್ವೀಕಾರದಲ್ಲಿ ಸರ್ವಜ್ಞತೆಯ ಸ್ವೀಕಾರವಿದೆ. ಒಂದು ಸಮಯದಲ್ಲಿ ಉತ್ಪಾದ-ವ್ಯಯ-ಧ್ರುವವು ಅದು ಮಹಾಸತ್ತಾದ ಲಕ್ಷಣವಿದೆ. ಭವಿಷ್ಯದಲ್ಲಿ ನವೀನ ಪರ್ಯಾಯದ ಸಮಯದಲ್ಲಿ ಕೂಡ ಅದು ಉತ್ಪಾದ-ವ್ಯಯ-ಧ್ರುವವುಳ್ಳದ್ದೇ ಇರುವುದು. ಯಾವಾಗ ನೋಡಿದಾಗ ಒಂದು ಸಮಯದಲ್ಲಿ ಇಡೀ ದ್ರವ್ಯವು ಉತ್ಪಾದ-ವ್ಯಯ-ಧ್ರುವವುಳ್ಳ ಸತ್ ಇದೆ. ಒಂದು ಸಮಯದಲ್ಲಿ ದ್ರವ್ಯದ ಯಾವುದೇ ಅಂಶವು ಬಾಕಿ ಉಳಿಯುವುದಿಲ್ಲ. ಭವಿಷ್ಯದ ಅನಂತ ಪರ್ಯಾಯಗಳ ಸಾಮರ್ಥ್ಯವು ವರ್ತಮಾನ ಧ್ರುವದಲ್ಲಿ ಒಂದು ಸಮಯದಲ್ಲಿ ಸಮಾವೇಶವಾಗಿ ಹೋಗುತ್ತದೆ. ಒಂದು ಸಮಯದಲ್ಲಿ ತ್ರಿಕಾಲೀ ದ್ರವ್ಯದ ಸತ್ತಾ ಬಿದ್ದುಕೊಂಡಿದೆ, ಅದರಲ್ಲಿ ಯಾವುದೂ ಬಾಕಿ ಉಳಿಯುವುದಿಲ್ಲ. ಒಂದು ಸಮಯದಲ್ಲಿ ಉತ್ಪಾದ-ವ್ಯಯ-ಧ್ರುವವಿದ್ದರೂ ಅದರಲ್ಲಿ ಆ ಮೂರರ ಲಕ್ಷಣಗಳು ಬೇರೆ ಬೇರೆಯಿವೆ ಅದು ಅವಾಂತರಸತ್ತಾ ಇದೆ. ಅಯ್ಯಾ ಶ್ರುತಜ್ಞಾನದ ಸಮಯದಲ್ಲಿ ಅನಂತ ಕೇವಲಜ್ಞಾನವನ್ನು ಅರ್ಥ ಸಮಯದ ರೂಪದಲ್ಲಿ ಸಮಾವೇಶಗೊಳಿಸಿದೆ ಮಹಾಸತ್ತಾ ಮತ್ತು ಅವಾಂತರಸತ್ತಾವನ್ನು ಶ್ರುತಜ್ಞಾನವು ತಿಳಿಯುತ್ತದೆ. ಮಹಾಸತ್ತಾದಲ್ಲಿ ಅನಂತ ಕೇವಲಿಗಳು ಸಮಾವೇಶವಾಗಿ ಹೋಗುತ್ತಾರೆ ಮತ್ತು ಅವಾಂತರಸತ್ತಾದಲ್ಲಿ ಅನಂತ ಕೇವಲಿಗಳು ಭಿನ್ನ-ಭಿನ್ನ ಇದ್ದಾರೆಂದು ಶ್ರುತಜ್ಞಾನವು ತಿಳಿದುಕೊಳ್ಳುತ್ತದೆ. ಜಗತ್ತಿನಲ್ಲಿ ಪದಾರ್ಥಗಳ ಸ್ವರೂಪವು ಹೇಗೆ ಸತ್ ಇದೆ ಹಾಗೆ ನೀನು ತಿಳಿದುಕೊಂಡರೆ ನಿನ್ನ ಜ್ಞಾನವು ಸಮ್ಯಕ್ ಆಗುವುದು. ಅದರ ಹೊರತಾಗಿ ಏನಾದರೂ ಬದಲಾವಣೆ ಅಥವಾ ವಿಪರೀತ ಮನ್ನಿಸಿದರೆ ಪದಾರ್ಥಗಳ ಸ್ವರೂಪವಂತೂ ಬದಲಾಗುವುದಿಲ್ಲ ಆದರೆ ನಿನ್ನ ಜ್ಞಾನವು ಮಿಥ್ಯೆಯಾಗುವುದು.

ಈಗ ಪಂಚಾಸ್ತಿಕಾಯದ ಎಂಟನೇ ಗಾಥೆಯಲ್ಲಿ ಮಹಾಸತ್ತಾ ಮತ್ತು ಅವಾಂತರಸತ್ತಾದ ವರ್ಣನೆ ನಡೆಯುತ್ತಿದೆ.

ಸಮಯದಲ್ಲಿ ಜ್ಞಾನಸಮಯ, ಅರ್ಥಸಮಯ ಮತ್ತು ಶಬ್ದಸಮಯಗಳೆಂದು ಮೂರು ಪ್ರಕಾರಗಳಾಗುತ್ತವೆ ಯಾವ ಶ್ರುತಜ್ಞಾನದಲ್ಲಿ ಪದಾರ್ಥಗಳು ತಿಳಿದುಬರುತ್ತವೆ ಆ ಜ್ಞಾನವನ್ನು ಜ್ಞಾನಸಮಯವೆಂದು ಹೇಳುತ್ತಾರೆ, ಪದಾರ್ಥಗಳನ್ನು ಅರ್ಥಸಮಯವೆಂದು ಹೇಳುತ್ತಾರೆ, ಮತ್ತು ಅವುಗಳ ಸ್ವರೂಪ ಹೇಳುವಂಥ ವಾಣಿಯು ಅದು ಶಬ್ದಸಮಯವಿದೆ.

ಅರ್ಥ ಸಮಯದಲ್ಲಿ ಜಗತ್ತಿನ ಸಮಸ್ತ ಪದಾರ್ಥಗಳು ಬಂದು ಹೋಗುತ್ತವೆ. ಪದಾರ್ಥದ ಲಕ್ಷಣವು ಸತ್ತಾಇದೆ. ಸತ್ತಾದಲ್ಲಿ ಮಹಾಸತ್ತಾ ಮತ್ತು ಅವಾಂತರಸತ್ತಾಯೆಂದು ಎರಡು ಭೇದಗಳಿವೆ. ಲೋಕಾಲೋಕವು ಸತ್ ಇದ್ದು ಅದರ ಹೆಸರು ಮಹಾಸತ್ತಾ ಇದೆ, ಮತ್ತು ಒಂದು ಪದಾರ್ಥವನ್ನು ಬೇರೆ ಮಾಡುವುದು ಅದು ಅವಾಂತರಸತ್ತಾ ಇದೆ ಇಂಥ

ಸತ್ತಾವನ್ನು ರಾಗವಿಲ್ಲದೆ, ವಿಕಲ್ಪವಿಲ್ಲದೆ ತಿಳಿದುಕೊಳ್ಳುವಂತೆ ಜ್ಞಾನದ ಸ್ವಭಾವವಿದೆ.

ಮಹಾಸತ್ತಾದ ಅಪೇಕ್ಷೆಯಿಂದ ಸತ್ತಾ ಮೂರು ಲಕ್ಷಣವುಳ್ಳದ್ದಿದೆ ಮತ್ತು ಅವಾಂತರಸತ್ತಾದ ಅಪೇಕ್ಷೆಯಿಂದ ಸತ್ತಾ ಮೂರು ಲಕ್ಷಣವುಳ್ಳದ್ದಿಲ್ಲ, ಆದರೆ ಒಂದು ಲಕ್ಷಣವುಳ್ಳದ್ದಿದೆ. ಯಾವ ದ್ರವ್ಯದಲ್ಲಿ ಯಾವ ಪರ್ಯಾಯದ ಉತ್ಪಾದವಾಗುವುದು ಆ ಉತ್ಪಾದವು ಸತ್‌ಇದೆ. ಈ ಪರ್ಯಾಯವು ಹೀಗೇಕೆಯೆಂಬ ವಿಕಲ್ಪಕ್ಕೆ ಅವಕಾಶವಿಲ್ಲ, ಏಕೆಂದರೆ ಅದು ಸತ್ ಇದೆ. ಮತ್ತು ಅದನ್ನು ತಿಳಿದುಕೊಳ್ಳುವುದು ಜ್ಞಾನದ ಸ್ವಭಾವವಿದೆ. ಯಾವ ಸತ್ತಾ ಮೂರು ಲಕ್ಷಣವುಳ್ಳದ್ದಿದೆ ಆ ಸತ್ತಾ ಪ್ರತಿಪಕ್ಷದ ಅಪೇಕ್ಷೆಯಿಂದ ಮೂರು ಲಕ್ಷಣವುಳ್ಳದ್ದಿಲ್ಲ ಹೀಗೆ ಸತ್ತಾದ ಅನೇಕಾಂತ ಸ್ವಭಾವವಿದೆ. ಅನಂತಸಿದ್ಧ, ನಿಗೋದ, ಜೀವ, ಅಜೀವ ಇವೆಲ್ಲವೂ ಸತ್ ಇದೆ. ಅವನ್ನು ಜ್ಞಾತಾರೂಪದಿಂದ ತಿಳಿದುಕೊಳ್ಳುವಂಥದು ಜ್ಞಾನದ ಸ್ವಭಾವವಿದೆ. ಹೀಗೆ ಯಾವನು ತಿಳಿಯುವನು ಅವನಿಗೆ ಆಸಕ್ತಿಯು ಬಿಟ್ಟು ವೀತರಾಗತೆಯಾದಲ್ಲದೆ ಇರುವುದಿಲ್ಲ. ಏಕೆಂದರೆ ಪದಾರ್ಥದ ಕಾರಣದಿಂದ ರಾಗವಿಲ್ಲ ಮತ್ತು ಜ್ಞಾನದ ಕಾರಣದಿಂದ ಕೂಡ ರಾಗವಿಲ್ಲ. ಎಂದರೆ ಯಾವನು ಪದಾರ್ಥದ ಸತ್ತಾವನ್ನು ನಿಶ್ಚಿತ ಮಾಡುವನು ಅವನಿಗೆ ಆ ರಾಗವು ಬಿಟ್ಟು ಹೋದಲ್ಲದೆ ಇರುವುದಿಲ್ಲ. ಅರ್ಥ ಸಮಯದ ಸ್ವಭಾವವು ರಾಗ ಮಾಡುವಂಥದ್ದಿಲ್ಲ. ಆದರೆ ನನ್ನ ಜ್ಞಾನದಲ್ಲಿ ಜ್ಞೇಯವಾಗುವುದು ಅದರ ಸ್ವಭಾವವಿದೆ. ಅದರಂತೆ ನನ್ನ ಜ್ಞಾನದ ಸ್ವಭಾವವು ಕೂಡ ಜ್ಞೇಯವನ್ನು ತಿಳಿಯುವಂಥದ್ದಿದೆ, ರಾಗ ಮಾಡುವುದು ನನ್ನ ಸ್ವಭಾವವಿಲ್ಲ. ಹೀಗೆ ಯಾವನು ನಿರ್ಣಯ ಮಾಡುವನು ಅವನಿಗೆ ರಾಗವು ಬಿಟ್ಟುಹೋಗಿ ವೀತರಾಗತೆಯಾದಲ್ಲದೆ ಉಳಿಯುವುದಿಲ್ಲ.

ಮಹಾಸತ್ತಾತನದಿಂದ ಎಲ್ಲವೂ ಸತ್ ಇದ್ದರೂ ಕೂಡ ಅವಾಂತರಸತ್ತಾತನದಿಂದ ಎಲ್ಲವುಗಳ ಸ್ವರೂಪವು ಭಿನ್ನ-ಭಿನ್ನ ಸಿದ್ಧವಾಗುತ್ತದೆ. ಯಾವುದು ಭೇದವಿದೆ ಅದೇ ಅನೇಕವಿದೆ, ಸರ್ವಥಾ ಏಕತೆಯಿಲ್ಲ ಮತ್ತು ಸರ್ವಥಾ ಅನೇಕತೆಯಿಲ್ಲ. ಯಾವುದು ಏಕವಿದೆ ಅದೇ ಒಂದು ಅಪೇಕ್ಷೆಯಿಂದ ಅನೇಕ ಕೂಡ ಇದೆ. ಹೀಗೆ ಪದಾರ್ಥದ ಸ್ವಭಾವವಿದೆ, ಅದನ್ನು ತಿಳಿದುಕೊಳ್ಳುವುದೇ ಜ್ಞಾನದ ಸ್ವಭಾವವಿದೆ. ಹೀಗೆ ನಿರ್ಣಯ ಮಾಡುವುದರ ಹೆಸರು ಧರ್ಮವಿದೆ.

ಜ್ಞಾನದ ಧರ್ಮವು ತಿಳಿದುಕೊಳ್ಳುವುದಿದೆ. ಪದಾರ್ಥದ ಸ್ವಭಾವವು ಜ್ಞಾನದಲ್ಲಿ ತಿಳಿದುಬರುವುದಿದೆ. ಹೀಗೆ ಸ್ವಭಾವದ ನಿರ್ಣಯ ಮಾಡುವವನು ಜ್ಞಾತಾ-ದೃಷ್ಟಾರೂಪದಿಂದ ತಿಳಿಯುತ್ತಾನೆ.

ಯಾವ ಸತ್ತಾ ಮಹಾಸತ್ತಾರೂಪದಿಂದ ಸಕಲ ಸ್ವರೂಪವಿದೆ ಅದೇ ಅವಾಂತರಸತ್ತಾತನದಿಂದ ಏಕರೂಪವಿದೆ. ಸತ್ತಾ ತನ್ನ ತನ್ನ ಪದಾರ್ಥದ ಸತ್ತಾ ಸ್ವರೂಪದಿಂದ ಏಕರೂಪವಿದೆ. ಸಿದ್ಧರು ಸಿದ್ಧ ಸ್ವರೂಪರೇ ಇದ್ದಾರೆ, ನಿಗೋದಿಗಳು ನಿಗೋದ ಸ್ವರೂಪರೇ ಇದ್ದಾರೆ, ಜಡವು ಜಡ ಸ್ವರೂಪವೇ ಇದೆ ಮತ್ತು ಚೇತನವು ಚೇತನ ಸ್ವರೂಪವೇ ಇದೆ. ಹೀಗೆ ಪ್ರತಿಯೊಂದರ ಅವಾಂತರಸತ್ತಾ ಭಿನ್ನ ಭಿನ್ನವಿದೆ. ಅಚೇತನ ಮಹಾಸ್ಕಂಧವನ್ನು ಮಹಾಸತ್ತಾವೆಂದು ಹೇಳಿದಾಗ ಅವಾಂತರ ಸತ್ತಾತನದಿಂದ ಅದರ ಪ್ರತಿಯೊಂದು ರಜಕಣವು ಬೇರೆ ಬೇರೆಯಿದೆ.

ಹೀಗೆ ಯಾವ ಪದಾರ್ಥಗಳ ಸ್ವಭಾವವಿದೆ ಅದಂತೂ ಅರ್ಥ ಸಮಯವಿದೆ ಆದರೆ ಅದನ್ನು ತಿಳಿದುಕೊಳ್ಳುವ ಸಾಮರ್ಥ್ಯವಂತೂ ಜ್ಞಾನಸಮಯದ್ದಿದೆ. ಜ್ಞಾನಸಮಯದಿಂದ ತಿಳಿದುಕೊಂಡಾಗ ''ಇದು ಅರ್ಥಸಮಯವಿದೆ''ಯೆಂದು ನಿಶ್ಚಿತವಾಗುವುದು. ಪದಾರ್ಥಗಳಿವೆ ಆದರೆ ಅವುಗಳ ಸತ್ತಾ ಆತ್ಮನ ಜ್ಞಾನದಿಂದ ನಿರ್ಣಯ ಮಾಡುವುದು ಅದು ಜ್ಞಾನದ ಮಹಿಮೆಯಿದೆ.

ಅಯ್ಯಾ ಇದಂತೂ ನಿರ್ಗ್ರಂಥ ಸಂತರ ಮಾತು ಇದೆ. ಆಂತರ್ಯದಲ್ಲಿ ವೀತರಾಗತೆಯಿದೆ ವಿಕಲ್ಪವುತ್ಪನ್ನವಾದ ಮೇಲೆ ಶಾಸ್ತ್ರದ ರಚನೆಯಾಗುವುದು ಮತ್ತು ಒಂದು ಕ್ಷಣದಲ್ಲಿ ವಿಕಲ್ಪವು ಮುರಿದುಹೋಗಿ ಆಂತರ್ಯದಲ್ಲಿ ಸ್ಥಿರರಾಗಿ ಹೋಗುವರು.

ಇಲ್ಲಿ ಅರ್ಥಸಮಯದ ಹಾಗೆ ಪದಾರ್ಥದ ಸತ್ತಾ ವರ್ಣನೆ ಮಾಡಿದೆ ಮತ್ತು ಪ್ರವಚನಸಾರದ ನೂರ ಒಂದನೇ ಗಾಥೆಯಲ್ಲಿ ಜ್ಞೇಯದ ಹಾಗೆ ಪದಾರ್ಥದ ಸ್ವರೂಪ ವರ್ಣನೆ ಮಾಡಿದೆ ಆದರೆ ಎರಡರಲ್ಲಿ ಒಂದೇ ಆಶಯವಿದೆ. ಪದಾರ್ಥವನ್ನು ಜ್ಞೇಯ ಮಾಡುವುದು ಜ್ಞಾನದ ಸ್ವಭಾವವಿದೆ. ಇಂಥ ಸ್ವಭಾವದ ಆಶ್ರಯದಿಂದ ದಶಲಕ್ಷಣ ಧರ್ಮವಿದೆ.

ಸತ್ತಾದ ಸ್ವರೂಪ ವರ್ಣನೆ ಮಾಡಿಯಂತೂ ಕೂಡಲೇ ಜ್ಞಾತಾಸ್ವಭಾವ ಮತ್ತು ವೀತರಾಗತೆಯನ್ನೇ ತಿಳಿಸಿದೆ. ಪರದ ಜತೆಯಲ್ಲಿ ಜ್ಞೇಯ-ಜ್ಞಾಯಕಸಂಬಂಧದ ಹೊರತಾಗಿ ಬೇರೆ ಯಾವ ಸಂಬಂಧವಿಲ್ಲ ಮತ್ತು ಜ್ಞೇಯ-ಜ್ಞಾಯಕ ಸಂಬಂಧ ಹೇಳುವುದು ಅದು ಕೂಡ ವ್ಯವಹಾರವಿದೆ.

ಒಂದು ಸಮಯದಲ್ಲಿ ಅನಂತ ದ್ರವ್ಯಗಳು, ಅವುಗಳ ಅನಂತ ಗುಣಗಳು, ಅದರಲ್ಲಿ ಉತ್ಪಾದ-ವ್ಯಯ ಮತ್ತು ಧ್ರುವವಿದೆ. ಒಂದು ದ್ರವ್ಯವು ಅದು ಮಹಾಸತ್ತಾ ಮತ್ತು ಅದರ ಅನಂತಗುಣಗಳ ಅನಂತ ಉತ್ಪಾದ-ವ್ಯಯ-ಧ್ರುವಗಳು ಒಂದು ಸಮಯದಲ್ಲಿ ಭಿನ್ನ-ಭಿನ್ನವಿವೆ. ಮತ್ತು ಉತ್ಪಾದ-ವ್ಯಯ ಹಾಗೂ ಧ್ರುವ ಇವು ಮೂರು ತಮ್ಮ ತಮ್ಮ ಸ್ವರೂಪದಿಂದ ಇವೆ. ಅನಂತ ಪರ್ಯಾಯಗಳು ಮತ್ತು ಅನಂತ ದ್ರವ್ಯಗಳಿವೆ. ಆ ಒಂದೊಂದು ದ್ರವ್ಯವು ಸ್ವತಂತ್ರವಿದೆ. ಹೀಗೆ ಸತ್ತಾದ ಸ್ವರೂಪವಿದೆ. ಹೀಗೆ ಯಾವ ಸತ್ತಾದ ಸ್ವರೂಪ ಹೇಳಿದೆ ಅದು ನಿರ್ದೋಷವಿದೆ. ಅದರಲ್ಲಿ ಯಾವುದೇ ವಿಶೇಷವಿಲ್ಲ. ಮಹಾಸತ್ತಾ ಇದೆ ಅದು ಅವಾಂತರಸತ್ತಾ ಸಹಿತವಿದೆ. ಅದನ್ನು ಐದು ವಿಶೇಷಣದಿಂದ ವರ್ಣಿಸಿದೆ.

೧) ಮಹಾಸತ್ತಾ ಉತ್ಪಾದ-ವ್ಯಯ-ಧ್ರುವ ಮೂರು ಲಕ್ಷಣವುಳ್ಳದ್ದಿದೆ, ಅವಾಂತರಸತ್ತಾ ಒಂದು ಲಕ್ಷಣವುಳ್ಳದ್ದಿದೆ.

೨) ಮಹಾಸತ್ತಾ ಏಕವಿದೆ. ಅವಾಂತರಸತ್ತಾ ಅನೇಕವಿದೆ.

೩) ಮಹಾಸತ್ತಾ ಸಮಸ್ತ ಪದಾರ್ಥಗಳಲ್ಲಿ ಇರುತ್ತದೆ. ಅವಾಂತರಸತ್ತಾ ಒಂದೊಂದು ಪದಾರ್ಥದಲ್ಲಿ ಇರುತ್ತದೆ.

೪) ಮಹಾಸತ್ತಾ ಅನೇಕರೂಪವಿದೆ. ಅವಾಂತರಸತ್ತಾ ಏಕಸ್ವರೂಪವಿದೆ.

೫) ಮಹಾಸತ್ತಾ ಅನಂತ ಪರ್ಯಾಯಾತ್ಮಕವಿದೆ. ಅವಾಂತರಸತ್ತಾ ಏಕ ಪರ್ಯಾಯಾತ್ಮಕವಿದೆ.

ಇಂಥ ಸತ್ತಾದ ಅನೇಕಾಂತ ಸ್ವರೂಪವನ್ನು ತಿಳಿದುಕೊಳ್ಳದಿದ್ದರೆ ಸತ್ತಾವೇ ಸಿದ್ಧವಾಗುವುದಿಲ್ಲ. ಪರಸ್ಪರ ವಿರುದ್ಧತೆಯಿದ್ದರೂ ಕೂಡ ಸತ್ತಾ ಏಕವೇ ಇದೆ. ಸತ್ತಾದ ಯಾವ ಸ್ವರೂಪ ಹೇಳಿದೆ ಅದು ಸರ್ವಜ್ಞರಿಂದ ಹೇಳಲ್ಪಟ್ಟ ಅನವದ್ಯವಿದೆ, ದೋಷರಹಿತವಿದೆ. ಇಂಥ ಸ್ವರೂಪವನ್ನು ಯಾರು ಮನ್ನಿಸುವುದಿಲ್ಲ ಅವರಿಗೆ ಸಾವದ್ಯಭಾವವಿದೆ. ಅವರು ಪದಾರ್ಥಗಳ ಸ್ವರೂಪವನ್ನು ಹನನ ಮಾಡುತ್ತಾರೆ. ಮತ್ತು ಪದಾರ್ಥಗಳ ಇಂಥ ಸ್ವರೂಪವನ್ನು ಯಾರು ತಿಳಿದುಕೊಳ್ಳುತ್ತಾರೆ ಅವರ ಶ್ರದ್ಧೆ-ಜ್ಞಾನ ನಿರವದ್ಯವಾಗುತ್ತದೆ ಮತ್ತು ನಂತರ ಅಸ್ಥಿರತೆಯು ಬಿಟ್ಟು ಹೋಗಿ ಸ್ಥಿರತೆಯಿಂದ ಕೂಡ ನಿರವದ್ಯರಾಗುತ್ತಾರೆ. ಇದರ ಹೆಸರು ನಿಜವಾದ ಸಾಮಾಯಿಕವಿದೆ ಆತ್ಮನು ಸಮಸ್ತ ಪರವನ್ನು ತಿಳಿದುಕೊಳ್ಳುವವನಿದ್ದಾನೆಂಬುದನ್ನು ಮನ್ನಿಸದೆ ಪರದಿಂದ ಲಾಭ-ಹಾನಿ ಮನ್ನಿಸಿದರೆ ಅದರಲ್ಲಿ ಮಹಾನ್ ಸಾವದ್ಯಭಾವವಿದೆ. ಎಲ್ಲವೂ ಸತ್ ಇದೆ ಅದರಲ್ಲಿ ಬಾಕಿ ಏನು ಉಳಿಯುವುದು ? ಮಹಾಸತ್ತಾ ಮತ್ತು ಅದರ ಸಮಸ್ತ ಭೇದಗಳೆಲ್ಲವೂ ಒಂದು ಸಮಯದಲ್ಲಿಯೇ ಸತ್ ಇವೆ. ಸತ್‌ವನ್ನು ಹೇಗಿದೆ ಹಾಗೆ ತಿಳಿದುಕೊಳ್ಳುವುದು ಜ್ಞಾನದ ಸ್ವಭಾವವಿದೆ ಹೀಗೆ ಸಮ್ಯಗ್ಜ್ಞಾನ ಮಾಡಿಕೊಂಡರೆ ಆ ಜ್ಞಾನವು ಸಾವದ್ಯರಹಿತವಿದೆ ಮತ್ತು ಮಿಥ್ಯಾಜ್ಞಾನವು ಅದು ಸಾವದ್ಯಸಹಿತವಿದೆ.

ಆತ್ಮನಂತೂ ಸರ್ವಜ್ಞನಿದ್ದಾನೆ. ಸರ್ವಜ್ಞ ಎಂದರೆ ಎಲ್ಲವನ್ನು ತಿಳಿಯುವಂಥವನಿದ್ದಾನೆ. ಎಲ್ಲವನ್ನು ತಿಳಿದುಕೊಳ್ಳುವಂಥದು ಆತ್ಮನ ಜ್ಞಾನದ ಸಾಮರ್ಥ್ಯವಿದೆ. ಅದರ ನಿರ್ಣಯ ಮಾಡುವಂಥ ಶ್ರುತಜ್ಞಾನದಲ್ಲಿ ಕೂಡ ಪರೋಕ್ಷರೂಪದಿಂದ ಎಲ್ಲವೂ ತಿಳಿದುಹೋಗುವುದು. ಶ್ರುತಜ್ಞಾನದಲ್ಲಿ ಅನಂತ ಕೇವಲಜ್ಞಾನಿಗಳು ಕೂಡ ಅರ್ಥಸಮಯತನದಿಂದ ತಿಳಿದು ಬರುತ್ತಾರೆ. ಯಾವನು ಇಂಥ ಜ್ಞಾನಸಾಮರ್ಥ್ಯದ ನಿರ್ಣಯ ಮಾಡಿದ್ದಾನೆ ಅವನೇ

ಸರ್ವಜ್ಞರನ್ನು ಮನ್ನಿಸಿದ್ದಾನೆ, ಅವನೇ ಗುರುವಿನ ಆಜ್ಞೆಯನ್ನು ಮನ್ನಿಸಿದ್ದಾನೆ, ಅವನೇ ಶಾಸ್ತ್ರವನ್ನು ತಿಳಿದಿದ್ದಾನೆ, ಅವನೇ ಸಾವದ್ಯತೆಯರೂಪದ ಮಿಥ್ಯಾತ್ವವನ್ನು ಬಿಟ್ಟಿದ್ದಾನೆ. ಈ ಪ್ರಕಾರ ಪದಾರ್ಥದ ಸ್ವರೂಪವಿದೆ ಹೀಗೆ ಶಾಸ್ತ್ರದಲ್ಲಿ ಹೇಳಿದೆ ಮತ್ತು ಹೀಗೆಯೇ ಜ್ಞಾನದಲ್ಲಿ ತಿಳಿದುಕೊಂಡಾಗ ಪದಾರ್ಥ, ವಾಣಿ ಮತ್ತು ಜ್ಞಾನ ಇವು ಮೂರೂ ಸಮಾನವಾಗುತ್ತವೆ. ಐದುಸಾವಿರದಾ ಐದುರೂಪಾಯಿ ಶಿಲ್ಲಕು ಇದ್ದರೆ ವಹಿಯಲ್ಲಿ ಕೂಡ ಹಾಗಯೇ ಬರೆಯಬೇಕು ಮತ್ತು ಜ್ಞಾನದಲ್ಲಿ ಕೂಡ ಹಾಗೆಯೇ ತಿಳಿಯಬೇಕು ಎಂದರೆನೇ ಎಲ್ಲವೂ ಸರಿ ಹೊಂದುವುದು. ಈ ಪ್ರಕಾರ ಹದಿನಾಲ್ಕು ಬ್ರಹ್ಮಾಂಡದ ವಹಿಯಲ್ಲಿ ಆರು ದ್ರವ್ಯಗಳ ಸತ್ತಾ ಹೇಗೆ ಸ್ವಭಾವದಿಂದಿವೆ ಹಾಗೆಯೇ ದೇವ-ಗುರುಗಳ ವಾಣಿಯಲ್ಲಿ ಬಂದಿದೆ ಮತ್ತು ಹಾಗೆಯೇ ತನ್ನ ಜ್ಞಾನದಲ್ಲಿ ತಿಳಿದುಕೊಂಡರೆ ತನ್ನ ಜ್ಞಾನಸಮಯವು ನಿರ್ದೋಷವಾಗುವುದು ವಿರುದ್ಧ ಮನ್ನಿಸಿದರೆ ಪದಾರ್ಥಸಮಯ ಮತ್ತು ಶಬ್ದಸಮಯವಂತೂ ಹಾಗೆಯೇ ಉಳಿಯುವುದು ಆದರೆ ಅವನ ಜ್ಞಾನದಲ್ಲಿ ಮಿಥ್ಯಾತನವು ಬಂದು ಬಿಡುವುದು. ಪದಾರ್ಥಗಳ ಸ್ವಭಾವವನ್ನು ಹೇಗೆ ಇದೆ ಹಾಗೆ ತಿಳಿದುಕೊಂಡರೆ ಜ್ಞಾನದಲ್ಲಿ ಸಮಾಧಿಯಾಗುವುದು ಮತ್ತು ಗಾಬರಿತನವು ದೂರವಾಗುವುದು.

ಭಗವಂತರ ಉಪದೇಶವು ಸಾಮಾನ್ಯ ಮತ್ತು ವಿಶೇಷವೆಂದು ಎರಡು ನಯಗಳ ಆಧೀನವಿದೆ. ಮಹಾಸತ್ತಾ ಇದೆ ಮತ್ತು ಅವಾಂತರಸತ್ತಾ ಕೂಡ ಇದೆ. ಯಾವ ಅಪೇಕ್ಷೆಯಿಂದ ಮಹಾಸತ್ತಾ ಇದೆ. ಅದೇ ಅಪೇಕ್ಷೆಯಿಂದ ಅವಾಂತರ ಸತ್ತಾ ಇಲ್ಲ. ಆದರೆ ಬೇರೆ ಅಪೇಕ್ಷೆಯಿಂದ ಅವಾಂತರಸತ್ತಾ ಇದೆ. ಹೇಗೆ ಸತ್ತಾ ಇದೆ ಹಾಗೆ ಜ್ಞಾನ ಮಾಡಿಕೊಳ್ಳುವುದು ಅದು ಜ್ಞಾನದ ಸ್ವಭಾವವಿದೆಯೆಂದು ನಿರ್ಣಯ ಮಾಡಿ ತಿಳಿಯುತ್ತ ತಿಳಿಯುತ್ತ ಜ್ಞಾನವು ಸ್ಥಿರವಾಗುವುದು ಎಂದರೆ ವೀತರಾಗತೆ ಮತ್ತು ಸರ್ವಜ್ಞತೆಯಾಗುತ್ತದೆ. ಮೊದಲು ಪದಾರ್ಥಗಳ ಸತ್ತಾವನ್ನು ತಿಳಿದುಕೊಂಡರೆ ಜ್ಞಾನದ ಯಥಾರ್ಥತೆಯಾಗುತ್ತದೆ ಅದು ವರ್ತಮಾನದ ಫಲವಿದೆ ಮತ್ತು ಕ್ರಮ-ಕ್ರಮದಿಂದ ಸರ್ವಜ್ಞತೆಯಾಗುತ್ತದೆ ಅದು ಪೂರ್ಣ ಫಲವಿದೆ. ಈ ರೀತಿ ಮಂಗಲ ಮಾಡಲಾಗಿದೆ.

ಒಂಭತ್ತನೆಯ ಗಾಥೆಯಲ್ಲಿ ಸತ್ತಾ ಮತ್ತು ದ್ರವ್ಯದ ಏಕತೆಯ ವರ್ಣನೆ ಮಾಡುತ್ತಾರೆ,-

ದವಿಯದಿ ಗಚ್ಚದಿ ತಾಇಂ ತಾಇಂ ಸಬ್ಭಾವಪಜ್ಜಯಾಣಂ ಜಂ ।
ದವಿಯಂ ತಂ ಭಣ್ಣಂತೇ ಅಣಣ್ಣಭೂದಂ ತು ಸತ್ತಾದೋ ॥೯॥

**ಆವುದು ಆಯಾಯಸದ್ಭಾವ ಪರ್ಯಾಯಗಳಿಗೆ ದ್ರವಿತಮೇಣ್ಪ್ರಾಪ್ತವಾಗುವುದು ।**
**ದ್ರವ್ಯವೆಂದದಕೆ ಸರ್ವಜ್ಞ ಹೇಳಿಹರು ಸತ್ತಾದಿಂದನನ್ಯ ತಾನಾಗಿದೆ ॥೯॥**

**ಅರ್ಥ :-** ಆಯಾಯ ಸದ್ಭಾವ ಪರ್ಯಾಯಗಳಿಗೆ ಯಾವುದು ದ್ರವಿತವಾಗುತ್ತದೆ. ಪ್ರಾಪ್ತವಾಗುತ್ತದೆ ಅದಕ್ಕೆ (ಸರ್ವಜ್ಞರು) ದ್ರವ್ಯವೆಂದು ಹೇಳುತ್ತಾರೆ. ಏಕೆಂದರೆ ಅದು ಸತ್ತಾದಿಂದ ಅನನ್ಯಭೂತವಿದೆ ಅಭಿನ್ನವಿದೆ.

ಯಾವುದು ತನ್ನ ಸ್ವಭಾವ ಪರ್ಯಾಯಕ್ಕೆ ದ್ರವಿಸುತ್ತದೆ-ಪ್ರವಹಿಸುತ್ತದೆ ಅದು ದ್ರವ್ಯವಿದೆ. ಯಾವ ನಿಮಿತ್ತದ ಕಾರಣವಾಗಿ ಪರ್ಯಾಯವಾಗುವುದಿಲ್ಲ, ಆದರೆ ದ್ರವ್ಯವು ತಾನೇ ತನ್ನ ಪರ್ಯಾಯವನ್ನು ದ್ರವಿಸುತ್ತದೆ. ಸಮ್ಯಗ್ದರ್ಶನ-ಜ್ಞಾನ-ಚಾರಿತ್ರದ ಪರ್ಯಾಯಕ್ಕೆ ಯಾವುದು ದ್ರವಿಸುತ್ತದೆ ? ದ್ರವ್ಯವು ತಾನೇ ಪರ್ಯಾಯಕ್ಕೆ ದ್ರವಿಸುತ್ತದೆ, ದ್ರವ್ಯವೇ ತನ್ನ ಸ್ವಭಾವದಿಂದ ಆ ಪರ್ಯಾಯತನದಿಂದ ಪರಿಣಮಿಸುತ್ತದೆ ; ಯಾವುದೇ ರಾಗದ ಕಾರಣದಿಂದ ಅಥವಾ ಸಂಯೋಗದ ಕಾರಣದಿಂದ ಸಮ್ಯಗ್ದರ್ಶನ ಮೊದಲಾದ ಪರ್ಯಾಯಗಳಾಗುವುದಿಲ್ಲ. ಎಂದರೆ ಸಮ್ಯಗ್ದರ್ಶನ ಪರ್ಯಾಯವನ್ನು ಪ್ರಕಟಮಾಡಿಕೊಳ್ಳುವವನು ಏನನ್ನು ನೋಡಬೇಕೆಂದರೆ ಅವನು ದ್ರವ್ಯದ ಎದುರೇ ನೋಡಬೇಕಾಗುವುದು, ಅಲ್ಲಿ ಹೀಗೆ ಹೇಳುತ್ತಾರೆ,-

'ದ್ರವತಿ' ಎಂದರೆ ದ್ರವ್ಯವು ಸ್ವಭಾವ ಪರ್ಯಾಯಗಳಿಗೆ ದ್ರವಿಸುತ್ತದೆ ಮತ್ತು
''ಗಚ್ಛತಿ' ಎಂದರೆ ದ್ರವ್ಯವು ವಿಭಾವ ಪರ್ಯಾಯಗಳಿಗೆ ಪ್ರಾಪ್ತವಾಗುತ್ತದೆ.

ನಿಗೋದದ ಜೀವದ್ರವ್ಯವು ತಾನೇ ತನ್ನ ವಿಭಾವ ಪರ್ಯಾಯಗಳಿಗೆ ತಲುಪುತ್ತಿದೆ. ಯಾವ ಕರ್ಮವು ಅದರಲ್ಲಿ ತಲುಪಿಸುತ್ತಿಲ್ಲ. ಸಿದ್ಧರ ಪರ್ಯಾಯತನದಿಂದ ಅವರ ದ್ರವ್ಯವು ಪರಿಣಮಿಸುತ್ತದೆ, ಯಾವುದೇ ನಿಮಿತ್ತದಿಂದ ಆ ಪರ್ಯಾಯಗಳಿಗೆ ದ್ರವಿಸುತ್ತಿಲ್ಲ. ಸ್ವಭಾವಪರ್ಯಾಯದಿಂದ ಪರಿಣಮಿಸಲಿ ಅಥವಾ ವಿಭಾವಪರ್ಯಾಯದಿಂದ ಪರಿಣಮಿಸಲಿ ಆ ರೂಪದಿಂದ ದ್ರವ್ಯವೇ ಪರಿಣಮಿಸುತ್ತದೆ. ಯಾವುದೇ ಪರದ ಕಾರಣದಿಂದ ಪರ್ಯಾಯವಾಗುವುದಿಲ್ಲ.

ಆರೂ ದ್ರವ್ಯಗಳು ಅಸ್ತಿರೂಪ ಸ್ವಯಂಸಿದ್ಧವಿವೆ. ಅದರಲ್ಲಿ ಕಾಲವನ್ನು ಹೊರತುಪಡಿಸಿ ಐದೂ ದ್ರವ್ಯಗಳು ಬಹು ಪ್ರದೇಶಿಯಿರುವುದರಿಂದ ಅವು ಅಸ್ತಿಕಾಯವಿವೆ. ಕಾಲಕ್ಕೆ ಬಹು ಪ್ರದೇಶವಿಲ್ಲ, ಅದು ಏಕ ಪ್ರದೇಶಿಯಿದೆ ಅದರಿಂದ ಅದು ಅಸ್ತಿಯಿದೆ, ಆದರೆ 'ಅಸ್ತಿಕಾಯ'ವಿಲ್ಲ.

ದ್ರವ್ಯವು ತಾನು ಸತ್ತಾ ಸ್ವರೂಪವಿದೆ, ದ್ರವ್ಯ ಮತ್ತು ಸತ್ತಾ ಭಿನ್ನವಿಲ್ಲ, ಲಕ್ಷ್ಯ-ಲಕ್ಷಣಭೇದವಿದೆ, ಆದರೆ ಅದರಲ್ಲಿ ವಸ್ತುತನದಿಂದ ಭೇದವಿಲ್ಲ.

ಇಂಥ ದ್ರವ್ಯವು ತಾನೇ ತನ್ನ ಆಯಾಯ ಪರ್ಯಾಯಗಳಿಗೆ ಪ್ರಾಪ್ತವಾಗುತ್ತದೆ, ಯಾವುದೇ ನಿಮಿತ್ತದ ಕಾರಣದಿಂದ ಅಥವಾ ಸಂಯೋಗದ ಕಾರಣದಿಂದ ಅದರ ಪರ್ಯಾಯಗಳಾಗುತ್ತಿಲ್ಲ. ಸಂಯೋಗದ ಕಾರಣ ಜೀವದ ಅಶುದ್ಧ ಪರಿಣಾಮಗಳಾಗುತ್ತವೆಂದು ಯಾರು ಮನ್ನಿಸುತ್ತಾರೆ ಅವರು ಮಿಥ್ಯಾದೃಷ್ಟಿಯಿದ್ದಾರೆ. ಅನಂತ ಸಂಸಾರಿಯಿದ್ದಾರೆ. (ಸಮಯಸಾರ ಕಲಶ-ಟೀಕೆಯನ್ನು ನೋಡಿರಿ)

ನಿಮಿತ್ತದ ಕಾರಣವಾಗಿ ವಿಕಾರವಾಗುತ್ತಿದ್ದರೆ 'ವಿಕಾರವೆಂದರೆ ನಾನಲ್ಲ, ವಿಕಾರ ಮಾಡಲು ಯೋಗ್ಯವಿಲ್ಲ'ವೆಂದು ಅದರ ನಿಷೇಧ ಮಾಡುವುದು ಉಳಿಯುವುದಿಲ್ಲ ; ಏಕೆಂದರೆ ಯಾವುದು ತನ್ನ ಕೈಯೊಳಗಿನ ಮಾತಿದೆ ಅದರಲ್ಲಿ ನಿಷೇಧ ಮಾಡುವುದಿರುತ್ತದೆ. ದ್ರವ್ಯವೇ ತನ್ನ ಗುಣದ ಪರ್ಯಾಯಕ್ಕೆ ಪ್ರಾಪ್ತವಾಗುತ್ತಿರುವುದರಿಂದ ಪರ್ಯಾಯದಲ್ಲಿ ಅಶುದ್ಧತೆಯ ನಿಷೇಧ ಮಾಡಿ ಶುದ್ಧತೆಯಿಂದ ಪರಿಣಮನ ಮಾಡುವುದರಲ್ಲಿ ಜೀವವು ಸ್ವತಂತ್ರವಿದೆ.

ದ್ರವ್ಯ ಮತ್ತು ಗುಣಗಳು ಶುದ್ಧವಿವೆಯೆಂದಮೇಲೆ ಪರ್ಯಾಯದಲ್ಲಿ ಅಶುದ್ಧತೆಯು ಎಲ್ಲಿಂದ ಬಂತು ? ಯಾವುದರ ಸಂಯೋಗದಿಂದ ಬಂತು ? - ಇಲ್ಲ ; ಪರ್ಯಾಯದ ಸ್ವತಂತ್ರತೆಯಿದೆ. ಮತ್ತು ಪರ್ಯಾಯವು ದ್ರವ್ಯ ಗುಣಗಳನ್ನು ಶುದ್ಧವೆಂದು ತಿಳಿದುಕೊಂಡು ಅವುಗಳ ಆಶ್ರಯ ಮಾಡಿದರೆ ಆಗ ಅದರಲ್ಲಿ ಶುದ್ಧತೆಯು ಪ್ರಕಟವಾಗುವುದು. ಅಸ್ಥಿರತೆಯ ಅಲ್ಪ ವಿಕಾರವಾಗುವುದು ಕೂಡ ತನ್ನ ಪರಿಣಮನವಿದೆ. ದ್ರವ್ಯವು ಅದು ಸ್ವತಂತ್ರವಾಗಿ ತನ್ನ ಪರ್ಯಾಯಕ್ಕೆ ಪ್ರಾಪ್ತವಾಗುತ್ತದೆ. ಯಾವುದು ತನ್ನ ತನ್ಮಯತೆಯಿಂದ-ಪರ್ಯಾಯತನದಿಂದ ಪರಿಣಮಿಸುತ್ತದೆ ಅದಕ್ಕೆ ದ್ರವ್ಯವೆಂದು ಹೇಳಲಾಗುತ್ತದೆ.

ಗುಣ-ಪರ್ಯಾಯಮಯವಾದ ಸತ್ತಾದಿಂದ ದ್ರವ್ಯವು ನಿಜವಾಗಿ ಬೇರೆಯಿಲ್ಲ, ಆದರೆ ಅಭೇದವಿದೆ. ಇದು ಆರೂ ದ್ರವ್ಯಗಳ ಮಾತು ಇದೆ. ಆರೂ ದ್ರವ್ಯಗಳು ತಮ್ಮ-ತಮ್ಮ ಗುಣ-ಪರ್ಯಾಯಗಳ ಸತ್ತಾದಿಂದ ಏಕಮೇಕವಿವೆ ಒಂದಿವೆ.

ಸತ್ತಾ ಅದು ದ್ರವ್ಯದ ಲಕ್ಷಣವಿದೆ. ಸತ್ತಾ ಎಂದರೆ ಇರುವಿಕೆ, ಅದರ ಮುಖಾಂತರ ದ್ರವ್ಯವು ಪ್ರಸಿದ್ಧವಾಗುತ್ತದೆ. ದ್ರವ್ಯವು ತನ್ನ ಸತ್ತಾದಿಂದಲೇ ಲಕ್ಷಿತವಾಗುತ್ತದೆ ; ಪರದಿಂದ ಲಕ್ಷಿತವಾಗುವುದಿಲ್ಲ. ಪ್ರತಿಯೊಂದು ದ್ರವ್ಯದ ಸತ್ತಾ ಸ್ವತಂತ್ರವಿದೆ.

ಕರ್ಮದಿಂದ ಪುದ್ಗಲದ್ರವ್ಯದ ಅಸ್ತಿತ್ವವು ಪ್ರಸಿದ್ಧವಾಗುತ್ತದೆ. ಆತ್ಮನು ತನ್ನ ಸತ್ತಾದಿಂದ ಪ್ರಸಿದ್ಧನಾಗುತ್ತಾನೆ. ಬೇರೆ

ವಸ್ತುವು ಲಕ್ಷಣ ಮತ್ತು ದ್ರವ್ಯವು ಲಕ್ಷ್ಯವೆಂದಿಲ್ಲ, ಆದರೆ ದ್ರವ್ಯದ ಸತ್ತಾ ಅದು ಲಕ್ಷಣ ಮತ್ತು ದ್ರವ್ಯವು ಅದು ಲಕ್ಷ್ಯವಿದೆ; ಇಷ್ಟು ಗುಣ-ಗುಣಿಯ ಭೇದಮಾಡಿ ತಿಳಿದುಕೊಳ್ಳುವುದು. ಈಗ ಇದು ಕೂಡ ವ್ಯವಹಾರವಿದೆ, ನಿಶ್ಚಯದಿಂದ ಸತ್ತಾ ಮತ್ತು ದ್ರವ್ಯದ ಭೇದವಿಲ್ಲ, ದ್ರವ್ಯವು ತಾನೇ ಸತ್ತಾ ಸ್ವರೂಪವಿದೆ.

ಪುದ್ಗಲದ ಪರ್ಯಾಯದಲ್ಲಿ ಪುದ್ಗಲದ್ರವ್ಯವು ಪ್ರಾಪ್ತವಾಗುತ್ತದೆ. ಮತ್ತು ಜೀವದ ಪರ್ಯಾಯದಲ್ಲಿ ಜೀವದ್ರವ್ಯದ ಪ್ರಾಪ್ತಿಯಾಗುತ್ತದೆ. ಸೀತೆಯ ಶುದ್ಧ ಬ್ರಹ್ಮಚರ್ಯೆಯ ಕಾರಣದಿಂದ ಬೆಂಕಿಯಿದ್ದದ್ದು ನೀರಾಯಿತೆಂಬುದು ನಿಜವಾಗಿ ಇಲ್ಲ. ಸೀತೆಯ ಬ್ರಹ್ಮಚರ್ಯೆಯ ಮಹಿಮೆಯನ್ನು ತಿಳಿಸಿಕೊಟ್ಟು ಹಾಗೆ ಉಪದೇಶ ಕೊಡುವ ಸಲುವಾಗಿ ಈ ಕಥನವಿದೆ. ನಿಜವಾಗಿ ಬ್ರಹ್ಮಚರ್ಯೆಯ ಪರ್ಯಾಯವಂತೂ ಆತ್ಮನದಿದೆ ಮತ್ತು ಬೆಂಕಿಯಿಂದ ನೀರಾದ ಪರ್ಯಾಯವು ಅದು ಪುದ್ಗಲವಿದೆ. ಒಂದು ದ್ರವ್ಯದ ಪರ್ಯಾಯದಲ್ಲಿ ಇನ್ನೊಂದು ದ್ರವ್ಯದ ಪ್ರಾಪ್ತಿಯಾಗುವುದಿಲ್ಲ. ಪ್ರತಿಯೊಂದು ದ್ರವ್ಯದ ಪರ್ಯಾಯದಲ್ಲಿ ಆ ದ್ರವ್ಯವು ತಾನೇ ಪ್ರಾಪ್ತವಾಗುತ್ತದೆ.

ಣಮೋಕಾರ ಮಂತ್ರದ ಕಾರಣದಿಂದ ಅಥವಾ ಭಕ್ತಾಮರ ಸ್ತೋತ್ರದ ಕಾರಣದಿಂದ ರೋಗಾದಿಗಳು ಹೊರಟುಹೋಗುತ್ತವೆಯೆಂದು ಅಜ್ಞಾನಿಗೆ ಭ್ರಾಂತಿಯುಂಟಾಗಿದೆ. ಎಲೈ ಸೋದರನೇ ! ನಿನ್ನ ರೋಗವು ಹೊರಟು ಹೋಗದಿದ್ದರೆ ನೀನು ಣಮೋಕಾರಮಂತ್ರ ಮೊದಲಾದುವನ್ನು ಮನ್ನಿಸಬೇಡ ! ಣಮೋಕಾರ ಮಂತ್ರ ಜಪಿಸುವುದರಿಂದ ಅಥವಾ ಭಕ್ತಾಮರ ಸ್ತೋತ್ರ ಪಠಿಸುವುದರಿಂದ ರೋಗಾದಿಗಳು ಹೊರಟು ಹೋಗುತ್ತವೆಯೆಂಬುದು ನಿನ್ನ ಮನ್ನಣೆಯಿದ್ದರೆ ರೋಗಾದಿಗಳು ಹೊರಟುಹೋಗದಿರುವಾಗ ನಿನಗೆ ಪಂಚಪರಮೇಷ್ಠಿ ಮೊದಲಾದವರ ಶ್ರದ್ಧೆ ಎಲ್ಲಿಂದ ಉಳಿಯುತ್ತದೆ ? ಆದುದರಿಂದ ಒಂದು ದ್ರವ್ಯದ ಕಾರಣದಿಂದ ಪರದಲ್ಲಿ ಯಾವುದಾದರೂ ಅದಲು ಬದಲಾಗುತ್ತದೆಯೆಂಬ ನಿನ್ನ ಮನ್ನಣೆಯನ್ನು ಬಿಟ್ಟುಬಿಡು.

ಒಬ್ಬ ಮನುಷ್ಯನಿಂದ ಐವತ್ತು ಮಣದ ಭಾರವನ್ನು ಎತ್ತಲಾಗುವುದಿಲ್ಲ ಮತ್ತು ಹತ್ತು ಮನುಷ್ಯರು ಒಟ್ಟಿಗೆ ಸೇರಿದರೆ ಆ ಭಾರವನ್ನು ಎತ್ತಬಹುದು ! ಅಲ್ಲಿ ಹತ್ತು ಮನುಷ್ಯರ ಸತ್ತಾ ಬೇರೆ - ಬೇರೆಯಿದೆ, ಮತ್ತು ಮನುಷ್ಯರ ಶಕ್ತಿ ಏಕತ್ರಿತವಾಗಿಯೇ ಇಲ್ಲ. ಪ್ರತಿಯೊಬ್ಬ ಮನುಷ್ಯನ ಸತ್ತಾ ಬೇರೆಯಿದೆ, ಮತ್ತು ಮನುಷ್ಯನ ಶಕ್ತಿಯ ಕಾರಣದಿಂದ ಭಾರವನ್ನು ಎತ್ತಲಾಯಿತೆಂದೂ ಕೂಡ ಇಲ್ಲ, ಆ ವಸ್ತುವಿನ ಸತ್ತಾ ಕೂಡ ಬೇರೆಯಿದೆ. ಮನುಷ್ಯನ ಶರೀರದ ಪ್ರತಿಯೊಂದು ಪರಮಾಣುವಿನ ಸತ್ತಾ ಬೇರೆ ಬೇರೆಯಿದೆ ಪ್ರತಿಯೊಂದು ಪರಮಾಣು ತನ್ನ ಸತ್ತಾದಲ್ಲಿ ಬೇರೆ-ಬೇರೆಯಾಗಿಯೇ ಪರಿಣಮಿಸುತ್ತದೆ.

''ಒಂದು ಪರಮಾಣುವಿನ ಮೇಲೆ ಮನುಷ್ಯನು ಕುಳಿತುಕೊಳ್ಳುವ ಸಾಧ್ಯತೆಯಿಲ್ಲ, ಆದರೆ ಅನಂತ ಪರಮಾಣುಗಳ ಸ್ಕಂಧದಿಂದ ಮಣೆಯಾಗುವುದು, ಅದರ ಮೇಲೆ ಮನುಷ್ಯನು ಕುಳಿತುಕೊಳ್ಳುವ ಸಾಧ್ಯತೆಯಿದೆ''ಯೆಂದು ಸಂಯೋಗ ದೃಷ್ಟಿಯಿಂದಲೇ ಎನಿಸುತ್ತದೆ, ನಿಜವಾಗಿ ಅನಂತ ಪರಮಾಣುಗಳ ಸತ್ತಾ ಒಂದಾಗುವುದೇ ಇಲ್ಲ. ಪ್ರತಿಯೊಂದು ಪರಮಾಣುವು ಬೇರೆ - ಬೇರೆಯೇ ಇದೆ. ಇಂಥ ಪೃಥಕ್ ಸತ್ತಾವನ್ನು ಅಜ್ಞಾನಿಯು ಕಂಡುಕೊಳ್ಳುವುದಿಲ್ಲ.

ಪರಮಾಣುಗಳ ಸ್ಕಂಧವಾದರೆ ಅದನ್ನು ಅಸ್ತಿಕಾಯವೆಂದು ಹೇಳಲಾಗುತ್ತದೆ ಅದು ಉಪಚಾರದಿಂದಿದೆ ಎಂದರೆ ಪ್ರತಿಯೊಂದು ಪರಮಾಣುವಿನ ಸತ್ತಾವು ನಿಜವಾಗಿ ಭಿನ್ನ ಭಿನ್ನವಿದೆ.

ಯಾವುದರಿಂದ ವಸ್ತುವು ತಿಳಿದುಬರುತ್ತದೆ ಅದಕ್ಕೆ ಲಕ್ಷಣವೆಂದು ಹೇಳಲಾಗುವುದು ; ಮತ್ತು ಲಕ್ಷಣದಿಂದ ಯಾವ ವಸ್ತುವು ತಿಳಿದುಬರುತ್ತದೆ ಅದು ಲಕ್ಷ್ಯವಿದೆ. ಪ್ರತಿಯೊಂದು ದ್ರವ್ಯದ ಲಕ್ಷಣವು ಭಿನ್ನ ಭಿನ್ನವಿದೆ. ಹೇಗೆಂದರೆ ಉಷ್ಣತೆಯ ಲಕ್ಷಣದಿಂದ ಅಗ್ನಿಯು ಲಕ್ಷಿತವಾಗುತ್ತದೆ. ಯಾವ ರಾಗವಿದೆ ಆ ರಾಗದಿಂದ ಆತ್ಮದ್ರವ್ಯದ ಸತ್ತಾ ಸಿದ್ಧವಾಗುತ್ತದೆ, ರಾಗದಿಂದ ಪುದ್ಗಲದ್ರವ್ಯದ ಸತ್ತಾ ಲಕ್ಷಿತವಾಗುವುದಿಲ್ಲ. ಹಾಗೆ ಕರ್ಮದಿಂದ ಪುದ್ಗಲದ್ರವ್ಯದ ಸತ್ತಾ ಲಕ್ಷಿತವಾಗುತ್ತದೆ,

ಆದರೆ ಕರ್ಮದಿಂದ ಆತ್ಮನ ಸತ್ತಾ ಲಕ್ಷಿತವಾಗುವುದಿಲ್ಲ. ತನ್ನ ಪರ್ಯಾಯದಿಂದ ತನ್ನ ದ್ರವ್ಯವು ಲಕ್ಷಿತವಾಗುತ್ತದೆ, ಒಂದು ದ್ರವ್ಯದ ಪರ್ಯಾಯದಿಂದ ಇನ್ನೊಂದು ದ್ರವ್ಯದ ಸತ್ತಾ ಲಕ್ಷಿತವಾಗುವುದಿಲ್ಲ, ಈ ರೀತಿಯಾಗಿ ಸತ್ತಾ ಲಕ್ಷಣವಿದ್ದರೆ ದ್ರವ್ಯವು ಲಕ್ಷಿತವಿದೆ. ದ್ರವ್ಯ ಮತ್ತು ಸತ್ತಾದಲ್ಲಿ ಹೀಗೆ ಲಕ್ಷ್ಯ-ಲಕ್ಷಣಭೇದವಿದೆ, ಆದರೆ ವಸ್ತುಭೇದ ಅಥವಾ ಪ್ರದೇಶ ಭೇದವಿಲ್ಲ.

ರಾಗದಿಂದ ಆತ್ಮನು ಲಕ್ಷಿತನಾಗುತ್ತಾನೆ, ಆದರೆ ಅಲ್ಲಿ -ಆ ಎರಡನ್ನು ತಿಳಿಯುವಂಥದ್ದಂತೂ ಜ್ಞಾನವಿದೆ, ಅದೇನು ರಾಗದ ಮುಖಾಂತರ ತಿಳಿದುಬರುವುದಿಲ್ಲ.

ನಿಮಿತ್ತದ ರೀತಿಯಲ್ಲಿ ಕರ್ಮದ ಅಸ್ತಿತ್ವವನ್ನು ನಿಶ್ಚಯ ಮಾಡುವುದಿದ್ದಾಗ ಇಂಥ ಯುಕ್ತಿಯನ್ನು ಅವಲಂಬಿಸಬೇಕು.

ಸೋದರರನೇ ! ಕ್ರೋಧ ಮಾಡುವುದಿಲ್ಲವೆಂದು ನಿರ್ಣಯ ಮಾಡಿದ್ದರೂ ಕೂಡ ಎರಡನೆಯ ಕ್ಷಣದಲ್ಲೇ ಕ್ರೋಧವು ಬಂದುಬಿಡುತ್ತದೆಯೆಂದಮೇಲೆ ಎದುರಿಗೆ ಆತ್ಮನ ಪ್ರತಿಪಕ್ಷಿಯಾದಂಥ ಜಡಕರ್ಮವು ನಿಮಿತ್ತದ ರೀತಿಯಲ್ಲಿದೆ. ಇದಂತೂ ನಿಮಿತ್ತವನ್ನು ಸಿದ್ಧಮಾಡುವ ಕುರಿತಾಗಿರುವ ಮಾತಿದೆ. ಆದರೆ ಕರ್ಮದ ಸತ್ತಾ ಬೇರೆಯಿದೆ ಮತ್ತು ಆತ್ಮನ ಸತ್ತಾ ಬೇರೆಯಿದೆ.

ನೀರು ಉಷ್ಣವಾಯಿತೆನ್ನುವಲ್ಲಿ ಅಗ್ನಿಯು ಇತ್ತೆಂಬುದು ತಿಳಿದುಬರುತ್ತದೆ, ಆದರೆ ನೀರಿನ ಸತ್ತಾ ಬೇರೆಯಿದೆ ಮತ್ತು ಅಗ್ನಿಯ ಸತ್ತಾ ಬೇರೆಯಿದೆ. ನೀರಿನ ಪರ್ಯಾಯದಿಂದ ನೀರಿನ ಪರಮಾಣುಗಳ ಪ್ರಸಿದ್ಧಿಯಾಗುತ್ತದೆ ಮತ್ತು ಅಗ್ನಿಯಿಂದ ಅಗ್ನಿಯ ಪರಮಾಣುಗಳ ಪ್ರಸಿದ್ಧಿಯಾಗುತ್ತದೆ. ಎರಡರ ಸತ್ತಾ ಬೇರೆಯಿದೆ. ಇಲ್ಲಿ ವೀತರಾಗ ಭೇದಜ್ಞಾನವು ಬಂದುಬಿಡುತ್ತದೆ. ಇಂಥ ಭೇದಜ್ಞಾನವಿಲ್ಲದೆ ವೀತರಾಗತೆಯು ಎಂದೂ ಆಗುವುದೇ ಇಲ್ಲ.

ದ್ರವ್ಯದ ಎಷ್ಟು ಗುಣ-ಪರ್ಯಾಯಗಳಿವೆ ಅವೆಲ್ಲವುಗಳಿಂದ ಆ ದ್ರವ್ಯದ ಸತ್ತಾವೇ ತಿಳಿದುಬರುತ್ತದೆ, ಆದುದರಿಂದ ಗುಣ-ಪರ್ಯಾಯರೂಪವಾದ ಸತ್ತಾ ಲಕ್ಷಣವಿದೆ ಮತ್ತು ದ್ರವ್ಯವು ಲಕ್ಷ್ಯವಿದೆ. ಆದರೆ ಸತ್ತಾ ಮತ್ತು ದ್ರವ್ಯ ಬೇರೆಯಿಲ್ಲ; ಆದುದರಿಂದ ಮೊದಲು ಅಸ್ತಿತ್ವ-ನಾಸ್ತಿತ್ವ, ಉತ್ಪಾದ-ವ್ಯಯ-ಧ್ರುವ ಮೊದಲಾದ ಲಕ್ಷಣಗಳಿಂದ ಸತ್ತಾವನ್ನು ತಿಳಿದುಕೊಳ್ಳಲಾಗಿತ್ತು ಆ ಲಕ್ಷಣಗಳು ಕೂಡ ದ್ರವ್ಯದಿಂದ ಬೇರೆಯಿಲ್ಲ 'ದ್ರವ್ಯ'ವೆಂದು ಹೇಳುವಲ್ಲಿ ಇವೆಲ್ಲವೂ ಸಮಾವೇಶವಾಗಿ ಬಿಡುತ್ತವೆ.

ದ್ರವ್ಯದ ಸತ್ತಾವು ಸ್ವದಿಂದ ಅಸ್ತಿರೂಪವಿದೆ ಮತ್ತು ಪರದಿಂದ ನಾಸ್ತಿರೂಪವಿದೆ ; ಸಾಮಾನ್ಯವಾಗಿ ಎಲ್ಲವೂ 'ಸತ್' ಇದ್ದರೂ ಕೂಡ ಪ್ರತಿಯೊಂದರ ವಿಶೇಷ ಸತ್ತಾ ಭಿನ್ನ ಭಿನ್ನವಿದೆ. ಬಹಳಷ್ಟು ಜೀವರುಗಳು ಒಂದೇ ಜಾತಿಯ ವಿಚಾರ ಮಾಡಿದರೆ ಅವರ ಬಲವು ಏಕತ್ರವಾಗಿ ಎರಡನೆಯವರ ಮೇಲೆ ಆ ವಿಚಾರದ ಅಂದೋಲನದ ಪರಿಣಾಮವಾಗುತ್ತದೆಯೆಂದು ಮನ್ನಿಸುವವರಿಗೆ ಸ್ವತಂತ್ರ ಭಿನ್ನ ಭಿನ್ನ ಸತ್ತಾದ ಅರಿವಿಲ್ಲ.

ಎಲ್ಲ ದ್ರವ್ಯಗಳು ಸತ್ ಇದ್ದರೂ ಕೂಡ ಕೆಲವು ಪರಮಾನಂದಮಯವಿವೆ, ಕೆಲವು ದುಃಖಿಯಿವೆ, ಕೆಲವು ಜಡವಿವೆ-ಹೀಗೆ ಪ್ರತಿಯೊಂದರ ಸತ್ತಾ ಭಿನ್ನ ಭಿನ್ನವಿದೆ. ಒಬ್ಬನು ಅಲ್ಪಜ್ಞ, ಇನ್ನೊಬ್ಬನು ಸರ್ವಜ್ಞ, ಇವೆಲ್ಲವು 'ಮಹಾಸತ್ತಾ'ದಲ್ಲಿ ಸಮಾವೇಶವಾಗಿ ಬಿಡುತ್ತವೆ. ಒಬ್ಬನ ಅಲ್ಪಜ್ಞತೆಯು ನಾಶವಾಗಿ ಸರ್ವಜ್ಞನಾಗಿ ಹೊದರೆ ಅಲ್ಲಿ ಎಲ್ಲ ಜೀವರುಗಳು ಸರ್ವಜ್ಞರಾಗಿ ಹೋಗುವುದಿಲ್ಲ, ಏಕೆಂದರೆ ಅವಾಂತರಸತ್ತಾ ಭಿನ್ನ ಭಿನ್ನವಿದೆ ; ಮತ್ತು ಮಹಾಸತ್ತಾತನದಿಂದಂತೂ ಇದ್ದಕ್ಕಿದ್ದ ಹಾಗೆಯೇ ಇದೆ.

ಸತ್ತಾದ ಇಂಥ ಸ್ವರೂಪವನ್ನು ತಿಳಿಯುವವನಿಗೆ ಸಮ್ಯಗ್ಜ್ಞಾನವಾಗಿ ಕೇವಲಜ್ಞಾನವಾದಲ್ಲದೆ ಇರಲಾರದು.

ದ್ರವ್ಯದ ಲಕ್ಷಣವು ಸತ್ತಾ ಇದೆ ; 'ಸತ್' ಎಂದು ಹೇಳುವಲ್ಲಿ ಅದರೊಳಗೆ ಎಲ್ಲವೂ ಸಮಾವೇಶವಾಗಿ ಬಿಡುತ್ತದೆ. ದ್ರವ್ಯವಿದೆ, ಉತ್ಪಾದವಿದೆ, ವ್ಯಯವಿದೆ, ಧ್ರುವವಿದೆ, ಗುಣವಿದೆ, ಪರ್ಯಾಯವಿದೆ ಇವೆಲ್ಲವೂ ಸತ್ ಇವೆ. ಇದರಲ್ಲಿ ಕೇವಲ ವೀತರಾಗತೆಯು ಬಂದುಬಿಟ್ಟಿತು. ಎಲ್ಲವೂ ಸತ್ ಇವೆಯೆಂದು ತಿಳಿದುಕೊಳ್ಳುವ ಜೀವನ ಜ್ಞಾನದಲ್ಲಿ 'ಇದು

ಹೀಗೆ ಹೇಗೆ ?' ಎಂಬ ಪ್ರಶ್ನೆಯೇ ಇಲ್ಲ. ಜ್ಞಾನದಲ್ಲಿ 'ಇದು ಹೀಗೆ ಹೇಗೆ ?' ಎಂಬ ವಿಕಲ್ಪವಿಲ್ಲ. ಒಬ್ಬ ಜೀವನು ಸರ್ವಜ್ಞ ಸ್ವಭಾವದ ಪ್ರತೀತಿ ಮಾಡುತ್ತಾನೆ, ಇನ್ನೊಬ್ಬ ಜೀವನು ಸರ್ವಜ್ಞರನ್ನು ಒಪ್ಪುವುದಿಲ್ಲ. ಅಲ್ಲಿ ಅವರೀರ್ವರ ಅಂಥ ಪರ್ಯಾಯಗಳು ಸತ್ ಇವೆ ! ಎಂದರೆ ಸತ್‌ವನ್ನು ತಿರುಗಿಸುವ ವಿಕಲ್ಪಕ್ಕೆ ಜ್ಞಾನದಲ್ಲಿ ಅವಕಾಶವಿಲ್ಲ. ಒಬ್ಬ ಜೀವನು ಸ್ವಭಾವದ ಶ್ರದ್ಧೆಯಿಂದ ಪ್ರಥಮ ಸಮ್ಯಕ್ತ್ವ ಪಡೆಯುತ್ತಾನೆ, ಮತ್ತು ಇನ್ನೊಬ್ಬ ಜೀವನು ಆ ಸಮಯದಲ್ಲಿ ಸರ್ವಜ್ಞನನ್ನು ಮನ್ನಿಸುವುದು ಕೂಡ ಇಲ್ಲ ; ಮತ್ತು ನಂತರ ಸಮ್ಯಗ್ದರ್ಶನ ಪಡೆದು ಆ ಮೊದಲಿನ ಜೀವನಿಗಿಂತ ಮೊದಲು ಸರ್ವಜ್ಞನಾಗಿ ಬಿಡುತ್ತಾನೆ. ಆಗ ಜ್ಞಾನಿಗೆ 'ಇದು ಹೇಗೆ?' ಎಂದು ಆಶ್ಚರ್ಯವಾಗುವುದಿಲ್ಲ ; ಮಹಾಸತ್ತಾದಲ್ಲಿ ಇದೆಲ್ಲವು ಸತ್ ಇದೆ, ಮತ್ತು ಅದರ ಉಪಭೇದ ಕೂಡ ಸತ್ ಇದೆ. ಚೈತನ್ಯದ ಸ್ವಭಾವವಂತೂ ಜ್ಞಾನವಿದೆ. 'ನಾನು ಜ್ಞಾನನಿದ್ದೇನೆ' ಮತ್ತು ಜಗತ್ತಿನಲ್ಲಿ ಜ್ಞಾನಿ-ಅಜ್ಞಾನಿ ಮೊದಲಾದವರೆಲ್ಲರೂ ಹೇಗಿದ್ದಾರೆ ಹಾಗೆ ಅವರನ್ನು ನಾನಂತೂ ತಿಳಿದುಕೊಳ್ಳುವವನಿದ್ದೇನೆಂದು ಪ್ರತೀತಿ ಮಾಡುವ ಜೀವನು ಧರ್ಮಾತ್ಮನಿದ್ದಾನೆ. ಸ್ವಭಾವದಲ್ಲಿ ಏಕಾಗ್ರವಾದರೆ ಒಂದು ಕ್ಷಣದಲ್ಲಿ ಕೇವಲಜ್ಞಾನವಾಗಿ ಹೋಗುವುದು, ಅಲ್ಲಿ 'ಇದು ಹೇಗೆ?' ಎಂದು ಆಶ್ಚರ್ಯವಿಲ್ಲ ಆದರೆ ವೀತರಾಗತೆಯಿದೆ. ನಿನ್ನೆ ಧರ್ಮದ ವಿರೋಧಿಯಿದ್ದವನು ಇಂದು ಸರಳವಾಗಿ ಜ್ಞಾನ ಪಡೆಯುವನು ಮತ್ತು ಸರ್ವಜ್ಞನಾಗಿ ಹೋಗುವನು-ಅಲ್ಲಿ ಅದು ಕೂಡ ಸತ್ ಇದೆ ಸಾಮಾನ್ಯ ಕೂಡ ಸತ್ ಇದೆ ಮತ್ತು ವಿಶೇಷ ಕೂಡ ಸತ್ ಇದೆ.

ಮಿಥ್ಯಾತ್ವವಿದ್ದದ್ದು ಮಿಥ್ಯಾತ್ವವಾಗಿಯೇ ಉಳಿಯುತ್ತದೆ-ಎಂಬುದಾಗಿಲ್ಲ, ಮಿಥ್ಯಾತ್ವವು ಬದಲಾವಣೆ ಹೊಂದಿ ಸಮ್ಯಕ್ತ್ವವಾಗಿ ಹೋಗುವುದು. ಅಲ್ಲಿ ಮಿಥ್ಯಾತ್ವದ ವ್ಯಯ ಮತ್ತು ಸಮ್ಯಕ್ತ್ವದ ಉತ್ಪಾದ ಹಾಗೂ ವಸ್ತುವಿನ ಧ್ರುವತೆಯೆಂದು ಉತ್ಪಾದ-ವ್ಯಯ-ಧ್ರುವ ಕೂಡ ಸತ್ತಾದಲ್ಲಿ ಸಮಾವೇಶವಾಗಿ ಹೋಗುವುದು.

ಆತ್ಮಾ ಸತ್ ಇದೆಯೆಂದು ಹೇಳುವಲ್ಲಿ ಉತ್ಪಾದ-ವ್ಯಯ-ಧ್ರುವ ಈ ಮೂರು ಸಮಾವೇಶವಾಗಿ ಹೋಗುವವು.

ಆದರೆ ಯಾವ ಉತ್ಪಾದಸ್ವರೂಪ ಸತ್ತಾಯಿದೆ ಅದು ನಾಶಸ್ವರೂಪವಿಲ್ಲ, ಯಾವ ಉತ್ಪಾದ-ವ್ಯಯ ಸ್ವರೂಪಸತ್ತಾಯಿದೆ ಅದು ಧ್ರುವಸ್ವರೂಪವಿಲ್ಲ. ಸಮ್ಯಕ್ತ್ವದ ಉತ್ಪಾದವಾಗುತ್ತದೆ ಮತ್ತು ಮಿಥ್ಯಾತ್ವದ ವ್ಯಯವಾಗುತ್ತದೆ, ಮತ್ತು ಧ್ರುವತನದಿಂದ ಧ್ರುವತೆಯಿದೆ ಆದುದರಿಂದ ಒಂದೊಂದರಲ್ಲಿ ಮೂರು ಲಕ್ಷಣ ಬರುವುದಿಲ್ಲ. ಈ ರೀತಿಯಾಗಿ ಮಹಾಸತ್ತಾದಲ್ಲಿ ಉತ್ಪಾದ-ವ್ಯಯ-ಧ್ರುವ ಈ ಮೂರೂ ಲಕ್ಷಣಗಳು ಸಮಾವೇಶವಾಗಿಬಿಡುತ್ತವೆ ಮತ್ತು ಅವಾಂತರ ಸತ್ತಾದಲ್ಲಿ ಉತ್ಪಾದ-ವ್ಯಯ-ಧ್ರುವ ಈ ಮೂರೂ ಅಂಶಗಳು ಭಿನ್ನ ಭಿನ್ನವಿರುತ್ತವೆ.

ತ್ರಿಕಾಲವರ್ತೀ ತತ್ತ್ವಗಳು ಸತ್ ಇವೆ, ದ್ರವ್ಯವು ಸತ್ ಇದೆ ಮತ್ತು ಅದರ ಒಂದೊಂದು ಸಮಯದ ಮೂರೂ ಕಾಲದ ಪರ್ಯಾಯಗಳು ಕೂಡ ಸತ್ ಇವೆ. ಪರ್ಯಾಯದಲ್ಲಿ ಮೊದಲು ಉತ್ಪಾದವಿರುವುದಿಲ್ಲ ಮತ್ತು ನಂತರ ನವೀನ ಉತ್ಪಾದವಾಗುವುದು ಅದು ಕೂಡ ಸತ್ ಇದೆ. ನಾನಂತೂ ಜ್ಞಾನನಿದ್ದೇನೆ, ಸತ್‌ವನ್ನು ತಿಳಿಯುವವನಿದ್ದೇನೆಂದು ಯಾವನು ಜ್ಞಾನಸ್ವಭಾವವನ್ನು ತಿಳಿದುಕೊಂಡಿದ್ದಾನೆ ಅವನಿಗೆ ಇಂಥ ಜ್ಞಾನವಾಗುತ್ತದೆ. ಯಾವನು ಇಂಥ ಪ್ರತೀತಿ ಮಾಡಿಕೊಂಡಿದ್ದಾನೆ ಅವನಿಗೆ 'ಇದು ಹೀಗೆ ಹೇಗೆ ' ಎಂಬ ವಿಕಲ್ಪ ಉಳಿಯುವುದಿಲ್ಲ. ತನ್ನ ಸಾಮಾನ್ಯ ಸತ್ತಾದೊಳಗಿಂದ ವಿಶೇಷ ಪರ್ಯಾಯವು ಪ್ರಕಟವಾಗುತ್ತದೆ ಅದು ಕೂಡ ಸತ್ ಇದೆ ; ಎಂದರೆ ಪುಸ್ತಕ ಓದಿದ ನಂತರ ಜ್ಞಾನವಾಗುತ್ತದೆಯೆನ್ನುವುದು ಉಳಿಯುವುದಿಲ್ಲ.

ಸಾಮಾನ್ಯ ಸತ್ತಾ ಏಕರೂಪವಿದೆ, ವಿಶೇಷ ಸತ್ತಾ ಅನೇಕ ರೂಪವಿದೆ. ವಿಶೇಷ ಪರ್ಯಾಯಗಳ ನಾಶವಾದರೆ ಸಾಮಾನ್ಯ ಸತ್ತಾದ ನಾಶವಾಗಿ ಹೋಗುವುದಿಲ್ಲ. ಯಾವುದು ಸಾಮಾನ್ಯ ಸತ್ತಾಯಿದೆ ಅದು ವಿಶೇಷ ಸತ್ತಾತನದಿಂದ ಇಲ್ಲ. ವಿಶೇಷ ಸತ್ತಾ ಸ್ವಯಂ ಆ ಸಾಮಾನ್ಯ ರೂಪದಿಂದ ಇದೆಯೆಂದರೆ ಆ ವಿಶೇಷವೆಂದೂ ಬದಲಾಗುವ ಸಾಧ್ಯತೆಯಿಲ್ಲ. ಅದಕ್ಕಾಗಿ ಸತ್ತಾದಲ್ಲಿ ಸಾಮಾನ್ಯ ಮತ್ತು ವಿಶೇಷವೆಂದು ಎರಡು ಪ್ರಕಾರವಿವೆ. ಸಾಮಾನ್ಯ ಸತ್ತಾವು ಏಕರೂಪವಿದೆ ಮತ್ತು

ವಿಶೇಷಸತ್ತಾ ಅನೇಕರೂಪವಿದೆ. ಜೀವ-ಅಜೀವ, ಜ್ಞಾನಿ-ಅಜ್ಞಾನಿಗಳೆಲ್ಲವೂ ಸಾಮಾನ್ಯ ಸತ್ತಾದಲ್ಲಿ ಸಮಾವೇಶಗೊಳ್ಳುವವು; ಅವುಗಳಲ್ಲಿ ಕೆಲವು ಜೀವವಿವೆ, ಕೆಲವು ಅಜೀವವಿವೆ, ಕೆಲವು ಜ್ಞಾನಿಯಿವೆ, ಕೆಲವು ಅಜ್ಞಾನಿಯಿವೆ-ಇವೆಲ್ಲವುಗಳ ಅವಾಂತರಸತ್ತಾ ಭಿನ್ನ ಭಿನ್ನವಿವೆ.

ದ್ರವ್ಯವು ಮಹಾಸತ್ತಾರೂಪದಿಂದ ಸತ್ ಇದೆ, ಮತ್ತು ಪರ್ಯಾಯವು ಅದು ವಿಶೇಷ ಸತ್ತಾ ಇದೆ. ಮಿಥ್ಯಾತ್ವದ ನಾಶವಾಗಿ ಸಮ್ಯಕ್ತ್ವ ಪರ್ಯಾಯದ ಉತ್ಪತ್ತಿಯಾಗುತ್ತದೆ. ಅಲ್ಲಿ ಮಿಥ್ಯಾತ್ವದ ನಾಶವಾಗುವುದರಿಂದ ದ್ರವ್ಯದ ಸತ್ತಾದ ನಾಶವಾಗಿ ಹೋಗುವುದಿಲ್ಲ. ಅದರಂತೆ ಸಮ್ಯಕ್ತ್ವದ ಉತ್ಪತ್ತಿಯಾದರೆ ದ್ರವ್ಯದ ಸತ್ತಾದ್ದೇ ಉತ್ಪತ್ತಿಯಾಗುವುದಿಲ್ಲ. ಸಾಮಾನ್ಯ-ವಿಶೇಷ ಸತ್ತಾ ಅದು ದ್ರವ್ಯದ್ದೇ ಸ್ವಭಾವವಿದೆ. ಅದನ್ನು ನೋಡಿರದವನೇ ಸಂಯೋಗದಿಂದ ಪರ್ಯಾಯ ವಾಗುತ್ತದೆಯೆಂದು ಮನ್ನಿಸುತ್ತಾನೆ.

ನಿನ್ನೆ ಕಟ್ಟಿಗೆ ಮಾರುವವನಿದ್ದವನು ಇಂದು ಕೇವಲಜ್ಞಾನ ಪಡೆದನು. ಅಲ್ಲಿ'ಆಹಾ, ನಿನ್ನ ಜನ್ಮವು ಧನ್ಯವಿದೆ !' - ಎಂಬ ಪ್ರಮೋದಭಾವವು ಬರುತ್ತದೆ. ಆ ಪ್ರಮೋದಭಾವವು ಎದುರಿಗಿನ ಪದಾರ್ಥದ ನವೀನತೆಯ ಕಾರಣದಿಂದ ಆಗಿದೆಯೆಂದು ಮನ್ನಿಸುವವನು ಮಿಥ್ಯಾದೃಷ್ಟಿಯಿದ್ದಾನೆ. ಜ್ಞಾನಿಗೆ ಪ್ರಮೋದ ಬಂದರೆ ಅದನ್ನು ಅವನು ಪರದ ಕಾರಣದಿಂದೆಂದು ಮನ್ನಿಸುವುದಿಲ್ಲ ; ಜಗತ್ತಿನ ಪದಾರ್ಥಗಳಲ್ಲಿ ವಿಶೇಷ ಭಾವಗಳಂತೂ ಅನಾದಿ ಅನಂತ ಆಗುತ್ತಲೇ ಇರುತ್ತವೆ, ಅವುಗಳ ಕಾರಣದಿಂದ ಆ ರಾಗವಾಗುತ್ತದೆಯೆಂದು ಮನ್ನಿಸಿದರೆ ರಾಗವು ಅನಾದಿ ಅನಂತ ಆಗುತ್ತಲೇ ಇರಬಹುದು ! ಅದಕ್ಕಾಗಿ ಆ ಮನ್ನಣೆಯು ಮಿಥ್ಯಾದೃಷ್ಟಿಯದಿದೆ.

## ಶಬ್ದಸಮಯ ಸತ್, ಅರ್ಥಸಮಯ ಸತ್, ಜ್ಞಾನಸಮಯ ಸತ್.

ಇವು ಮೂರೂ ಸತ್ ಇವೆ ; ಅದರಲ್ಲಿ ಶಬ್ದಸಮಯದ ಕಾರಣದಿಂದ ಜ್ಞಾನಸಮಯವಿಲ್ಲ ; ಆ ಶಬ್ದದ ಕಾರಣದಿಂದ ಜ್ಞಾನವಾದರೆ ಜ್ಞಾನಸಮಯವೇನು ಸತ್ ಇಲ್ಲ ? ಜ್ಞಾನಸಮಯ ಕೂಡ ಸತ್ ಇದೆ, ಅದು ಶಬ್ದದಿಂದ ಅಥವಾ ಎದುರಿಗೆ ಇರುವ ಪದಾರ್ಥದಿಂದಿಲ್ಲ. ನೋಡಿರಿ, ಇಂಥ ಸತ್ತಾದ ಜ್ಞಾನದಲ್ಲಿ ಅಭೇದಜ್ಞಾನ ಮತ್ತು ವೀತರಾಗತೆಯಿದೆ.

ಅಸ್ತಿ-ನಾಸ್ತಿ, ಉತ್ಪಾದ-ವ್ಯಯ-ಧ್ರುವ, ಗುಣ-ಪರ್ಯಾಯಗಳೆಲ್ಲವೂ ಒಂದು 'ಸತ್ತಾ'ದಲ್ಲಿ ಸಮಾವೇಶವಾಗಿ ಹೋಗುತ್ತವೆ, ಸತ್ತಾದಿಂದ ಅದೇನು ಬೇರೆಯಿಲ್ಲ. ನೀನು ಎಲ್ಲವುಗಳನ್ನು ತಿಳಿದುಕೊಳ್ಳುವಂಥವನಾಗಿ ಇರಬೇಕು !

ಮೊದಲು ಒಂದು ಪುಸ್ತಕವನ್ನು ನೋಡಿ 'ಆಹಾ, ಅಪೂರ್ವ ವಸ್ತುವಿದೆ !' ಎಂಬ ಆದರ ಭಾವವಾಗುತ್ತದೆ. ನಂತರ ಅವನಿಗೆ ಆ ಪುಸ್ತಕ ನೋಡಿ ಒಮ್ಮೆಲೆ ಅನಾದರದ ಭಾವವಾಗುತ್ತದೆ. ಅಲ್ಲಿ ಹೀಗೇಕೆ ? ಎಂದರೆ ಅದು ಕೂಡ ಸತ್ ಇದೆಯೆಂದು ಹೇಳುತ್ತಾರೆ. ಆದರ ಭಾವದ ಪರ್ಯಾಯ ಕೂಡ ಸತ್ ಮತ್ತು ಅನಾದರದ ಭಾವದ ಪರ್ಯಾಯ ಕೂಡ ಸತ್ ; ಪುಸ್ತಕದ ಕಾರಣದಿಂದ ಆದರದ ರಾಗಭಾವ ಅಥವಾ ಅನಾದರದ ದ್ವೇಷಭಾವವಾಗಿಲ್ಲ. ಎಲ್ಲವೂ ಸತ್ ಇವೆಯೆಂದು ಯಾವನು ನಿಶ್ಚಯ ಮಾಡುತ್ತಾನೆ ಅಲ್ಲಿ ತನ್ನ ಜ್ಞಾನ ಸ್ವಭಾವದ ನಿಶ್ಚಯವಾಗಿ ಹೋಗುತ್ತದೆ, ಅವನಿಗೆ ಈಗ ರಾಗ ಹೇಗಾಗುವುದು ? ಅನಂತಾನುಬಂಧಿಯ ರಾಗಾದಿ ಭಾವಗಳಂತೂ ಅವನಿಗೆ ಆಗುವುದೇ ಇಲ್ಲ. ಅಸ್ಥಿರತೆಯ ಅತ್ಯಂತ ಅಲ್ಪರಾಗಾದಿಗಳಾಗುತ್ತವೆ. ಎಲ್ಲವೂ ಸತ್ ಇವೆ ಮತ್ತು ನಾನು ಜ್ಞಾನನಿದ್ದೇನೆಂದು ನಿಶ್ಚಿತ ಮಾಡುವವನಿಗೆ ರಾಗದ ಬಲವು ಕತ್ತರಿಸಿ ಹೋಗುತ್ತದೆ. ಈಗ ಅನಂತ ಸಂಸಾರದ ಉತ್ಪತ್ತಿ ಮಾಡುವ ರಾಗವಂತೂ ಅವನಿಗೆ ಆಗುವುದೇ ಇಲ್ಲ.

ಸತ್ತಾವನ್ನು ಅಸ್ತಿ-ನಾಸ್ತಿರೂಪವೆಂದು ಹೇಳಲಿ, ಉತ್ಪಾದ-ವ್ಯಯ-ಧ್ರುವರೂಪವೆಂದು ಹೇಳಲಿ ಅಥವಾ ಗುಣ-ಪರ್ಯಾಯ ಸ್ವರೂಪವೆಂದು ಹೇಳಲಿ ಅವೆಲ್ಲವೂ ಬೇರೆಯಿಲ್ಲ ಆದರೆ ಏಕಸ್ವರೂಪವಿವೆ. ಒಂದೇ ಸತ್ತಾದಲ್ಲಿ ಅವೆಲ್ಲವೂ ಸಮಾವೇಶವಾಗಿ ಬಿಡುತ್ತವೆ. ಇಂಥ ಸತ್ತಾ ಅದು ದ್ರವ್ಯದ ಲಕ್ಷಣವಿದೆ, ಹೇಗೆ ಉಷ್ಣತೆಯು ಅಗ್ನಿಯ ಲಕ್ಷಣವಿದೆ

ಹಾಗೆ. ಆದರೆ ಹೇಗೆ ಅಗ್ನಿ ಮತ್ತು ಉಷ್ಣತೆಯು ಬೇರೆ ಬೇರೆ ವಸ್ತುವಿಲ್ಲ ಹಾಗೆ ದ್ರವ್ಯ ಮತ್ತು ಸತ್ತಾ ಬೇರೆ ಬೇರೆಯಿಲ್ಲ. ದ್ರವ್ಯ ಮತ್ತು ಸತ್ತಾ ಏಕಸ್ವರೂಪವಿವೆ.

ಮೊದಲು ಸತ್ತಾತನವು ನಿಶ್ಚಿತವಾದ ನಂತರ ಅದರ ಸ್ವರೂಪದ ಜ್ಞಾನವಾಗುವುದು, ವಸ್ತುವಿದೆಯೆಂದು ಸತ್‌ತನದ ನಿಶ್ಚಿತಮಾಡಿದ ನಂತರ ಅದು ಜೀವವಿದೆ ಅಥವಾ ಅಜೀವವಿದೆಯೆಂಬುದರ ನಿರ್ಣಯವಾಗುವುದು. ಅನಂತರ ಅದರ ದ್ರವ್ಯ-ಗುಣ-ಪರ್ಯಾಯ ಹಾಗೂ ಉತ್ಪಾದ-ವ್ಯಯ-ಧ್ರುವದ ನಿರ್ಣಯವಾಗುವುದು. ನಿನ್ನ ಸತ್ತಾ ನಿನ್ನಲ್ಲಿದೆ. ನಿನ್ನ ಉತ್ಪಾದ-ವ್ಯಯ-ಧ್ರುವಗಳು ನಿನ್ನ ಸತ್ತಾದಲ್ಲಿವೆ. ನೀನು ಜ್ಞಾನಸ್ವಭಾವದಿಂದ ಸತ್ ಇರುವೆ ಮತ್ತು ಜಗತ್ತಿನ ಪದಾರ್ಥಗಳು ಅವುಗಳ ಸಾಮಾನ್ಯ-ವಿಶೇಷತನದಿಂದ ಸತ್ ಇವೆ, ನಿನ್ನ ಕಾರಣದಿಂದ ಪರದ ವಿಶೇಷವಿಲ್ಲ ಮತ್ತು ಪರದ ಕಾರಣದಿಂದ ನಿನ್ನ ವಿಶೇಷವಿಲ್ಲವೆಂದು ತಿಳಿದುಕೊಂಡವನಿಗೆ ಮೊದಲಂತೂ ಶ್ರದ್ಧೆಯಲ್ಲಿ ವೀತರಾಗತೆಯಾಗಿ ಹೋಗುವುದು, ಅನಂತರ ಕ್ರಮ ಕ್ರಮದಿಂದ ವೀತರಾಗತೆಯಾಗಿ ಕೇವಲಜ್ಞಾನವನ್ನು ಪಡೆಯುವನು. ಇದರ ಹೊರತಾಗಿ ಶಾಂತಿಯ ಬೇರಾವ ಉಪಾಯವು ಇಲ್ಲ.

ಹತ್ತನೆಯ ಗಾಥೆಯನ್ನು ಪ್ರಾರಂಭ ಮಾಡುವ ಮೊದಲು ಎಂಟು ಮತ್ತು ಒಂಭತ್ತನೆಯ ಗಾಥೆಯಲ್ಲಿ ಭೇದಜ್ಞಾನದ ಕಾರಣ ಹೇಳಿದೆ ಅದನ್ನು ಸಂಕ್ಷೇಪದಲ್ಲಿ ಹೇಳಿದೆ. ಸತ್ತಾ ಸಾಮಾನ್ಯರೂಪದಿಂದಿದೆ ಅದು ವಿಶೇಷ ರೂಪದಿಂದಿಲ್ಲ, ಆದರೂ ಅದು ಸತ್ತಾದಿಂದ ಸಾಮಾನ್ಯ ಮತ್ತು ವಿಶೇಷತನದ ಪ್ರಕಾರವು ಬೇರೆಯಿಲ್ಲ. ಅಸ್ತಿತ್ವ ಸ್ವರೂಪ, ನಾಸ್ತಿತ್ವ ಸ್ವರೂಪ, ಮೂರು ಲಕ್ಷಣ ಸ್ವರೂಪ, ಮೂರು ಲಕ್ಷಣ ಸ್ವರೂಪದಿಂದ ರಹಿತ, ಏಕಸ್ವರೂಪ, ಅನೇಕ ಸ್ವರೂಪ, ಸಕಲಪದಾರ್ಥವ್ಯಾಪಿ, ಏಕಪದಾರ್ಥವ್ಯಾಪಿ, ಸಕಲರೂಪ, ಏಕರೂಪ, ಅನಂತಪರ್ಯಾಯರೂಪ, ಏಕಪರ್ಯಾಯರೂಪ-ಈ ಎಲ್ಲ ಪ್ರಕಾರಗಳು ಸತ್ತಾದಿಂದ ಪೃಥಕ್ ಇಲ್ಲ. ಈ ಎಲ್ಲ ಪ್ರಕಾರಗಳು ಪೃಥಕ್ ಆಗಿದ್ದರೂ ಕೂಡ ಸತ್ತಾದಿಂದೇನು ಬೇರೆಯಿಲ್ಲ. ಎಲ್ಲ ಪದಾರ್ಥಗಳಿವೆ ಮತ್ತು ಪರ್ಯಾಯಗಳು ಕೂಡ ಇವೆ. 'ಇವೆ' ಎಂಬುದು ಸ್ವತಂತ್ರತೆಯನ್ನು ಹೇಳುತ್ತದೆ.

'ಇದೆ' ಎಂಬುದು ಯಾವುದರ ಕಾರಣದಿಂದಿದೆ ಮತ್ತು ಹೇಗಿದೆಯೆಂಬ ಪ್ರಶ್ನೆಗೆ ಅವಕಾಶವಿಲ್ಲ . 'ಇದೆ' ಎಂಬುದು ಯಾವುದರದೇ ಕಾರಣದಿಂದಿದ್ದರೆ 'ಇದೆ' ಎಂಬುದು ಉಳಿಯುವುದಿಲ್ಲ . ದ್ರವ್ಯವಿದೆ, ಗುಣವಿದೆ, ಪರ್ಯಾಯವಿದೆ, ಜೀವವಿದೆ, ಅಜೀವವಿದೆ, ಅಂಶವಿದೆ ಮತ್ತು ಅಂಶೀ ಕೂಡ ಇದೆ, ಅದು ಇದೆ, ಇದೆ ಮತ್ತು ಇದೆ. ಅದು ಯಾವುದರ ಕಾರಣದಿಂದಿದೆಯೆಂಬ ಪ್ರಶ್ನೆಯೇ ಉಳಿಯುವುದಿಲ್ಲ . 'ಇದೆ' ಇದರಲ್ಲಿ ಗುರುವಿನ ಕಾರಣ ಜ್ಞಾನವಾಯಿತು ಮತ್ತು ಧರ್ಮಾಸ್ತಿಕಾಯದ ಕಾರಣದಿಂದ ಗತಿಯಾಯಿತೆಂಬುದೇ ಇಲ್ಲ . ಅಸ್ತಿತನದ ಸ್ವತಂತ್ರತೆ ಮತ್ತು ವೀತರಾಗತೆಯೆಂಬ ಎರಡು ಮಾತನ್ನು ತಿಳಿಸಿಕೊಡಲಾಗಿದೆ.

ಸಾಮಾನ್ಯ-ವಿಶೇಷದ ಭೇದಗಳನ್ನು ಮಾಡಿದರೆ ಸಾಮಾನ್ಯ ಅಂಶದಲ್ಲಿ ವಿಶೇಷವಿಲ್ಲ ಮತ್ತು ವಿಶೇಷ ಅಂಶದಲ್ಲಿ ಸಾಮಾನ್ಯವಿಲ್ಲ . ಆದರೆ ಇದರಲ್ಲಿ ಭೇದ ಮಾಡದಿದ್ದರೆ 'ಇದೆ' ದಲ್ಲಿ ಯಾವ ಬಾಕಿ ಉಳಿಯುವುದಿಲ್ಲ . ಅಸ್ತಿ-ನಾಸ್ತಿ ಮೊದಲಾದ ಭೇದಗಳನ್ನು ಹೇಳಿದೆ ಅವೆಲ್ಲವು ಸತ್ತಾದಿಂದ ಬೇರೆಯಿಲ್ಲ . ಒಂದು ಸಮಯ ಸತ್ತಾ ನೋಡಿದರೆ ಲೋಕಾಲೋಕವು ಇದ್ದ ಹಾಗೆಯೇ ಇದೆ. ಎಲ್ಲವೂ ಇವೆ ಅವು ಯಾವುದರ ಕಾರಣದಿಂದಿಲ್ಲ . 'ಇದೆ' ಇದು ವಿಶೇಷತನದಿಂದಿರಲಿ ಅಥವಾ ನಾಸ್ತಿತನದಿಂದಿರಲಿ ಆದರೆ ಅದು ಯಾವುದರ ಕಾರಣದಿಂದಿಲ್ಲ . ಇದರಲ್ಲಿ ಹಿಂದೆ-ಮುಂದೆ ಮಾಡುವುದು ಉಳಿಯುವುದಿಲ್ಲ . ಇದೆ ಅದು ತಿಳಿದುಕೊಳ್ಳುವುದು ಉಳಿಯುತ್ತದೆಯೆಂದು ಸ್ವತಂತ್ರತೆಯಿಂದ ನೀನು ತಿಳಿದುಕೊಳ್ಳು. ಯಾವುದರದೋ ಕಾರಣದಿಂದ ಯಾವುದನ್ನೋ ಮನ್ನಿಸುವಲ್ಲಿ ಜ್ಞಾಯಕತೆಯು ಉಳಿಯುವುದಿಲ್ಲ . ಇಲ್ಲಿ ಪಂಚಾಸ್ತಿಕಾಯದಲ್ಲಿ ಜ್ಞಾನದ ಮುಖ್ಯತೆಯಿಂದ ಮಾತು ಹೇಳಲಾಗಿದೆ.

ಈಗ ದ್ರವ್ಯವನ್ನು ಮೂರು ಪ್ರಕಾರದ ಲಕ್ಷಣದಿಂದ ತಿಳಿಸಿಕೊಡುತ್ತಾರೆ,-

ದವ್ವಂ ಸಲ್ಲಕ್ಖಣಿಯಂ ಉಪ್ಪಾದವ್ವಯಧುವತ್ತುಸಂಜುತ್ತಂ ।
ಗುಣಪಜ್ಜಯಾಸಯಂ ವಾ ಜಂ ತಂ ಭಣ್ಣಂತಿ ಸವ್ವಣ್ಹೂ ॥೧೦॥

**ಯಾವುದು ಉತ್ಪಾದವ್ಯಯಧ್ರೌವ್ಯಸಂಯುಕ್ತ ಮೇಣ್ಸಲಕ್ಷಣವುಳ್ಳದಿಲ್ಲವೆ ।**
**ಈವುದು ಗುಣಪರ್ಯಾಯಗಳಿಗಾಸರೆಯದಕೆ ಸರ್ವಜ್ಞದ್ರವ್ಯವೆಂದಿಹರು ॥೧೦॥**

**ಅರ್ಥ :-** ಯಾವುದು 'ಸತ್' ಲಕ್ಷಣವುಳ್ಳದಿದೆ, ಯಾವುದು ಉತ್ಪಾದ-ವ್ಯಯ-ಧ್ರೌವ್ಯ ಸಂಯುಕ್ತವಿದೆ ಅಥವಾ ಯಾವುದು ಗುಣಪರ್ಯಾಯಗಳಿಗೆ ಆಶ್ರಯವಿದೆ ಅದನ್ನು ಸರ್ವಜ್ಞರು ದ್ರವ್ಯವೆಂದು ಹೇಳುತ್ತಾರೆ.

ಪ್ರತಿಯೊಂದು ವಸ್ತುವಿನಲ್ಲಿ ಸತ್ತಾ ಲಕ್ಷಣವಿದೆ. ಸತ್ತಾ ಲಕ್ಷಣವಿದೆ ಮತ್ತು ದ್ರವ್ಯವು ಲಕ್ಷ್ಯವಿದೆ. ಯಾವ ದ್ರವ್ಯವು ಕೂಡ ಪರದ ಲಕ್ಷಣದಿಂದ ತಿಳಿದುಬರುವುದಿಲ್ಲ . ಆತ್ಮ ಮತ್ತು ಪರಮಾಣು ಮೊದಲಾಗಿ ಆರು ದ್ರವ್ಯಗಳಿವೆ. ಅವುಗಳ ಲಕ್ಷಣವು ಸತ್ತಾ ಇದ್ದು ಅವೇನು ಪರದ ಕಾರಣದಿಂದಿಲ್ಲ . ಐವತ್ತು ಮಣದ ಭಾರವನ್ನು ಒಬ್ಬ ಮನುಷ್ಯನಿಂದ ಎತ್ತಾಲಾಗುವುದಿಲ್ಲ. ಆದರೆ ಹದಿನೈದು ಇಪ್ಪತ್ತು ಜನರಿಂದ ಎತ್ತಲಾಗುತ್ತದೆಯೆಂದು ಹೇಳುವದೂ ನಿಜವಿಲ್ಲ . ಒಬ್ಬ ಮನುಷ್ಯನಿಂದ ಎತ್ತಲಾಗುವುದಿಲ್ಲವೆಂದಮೇಲೆ, ಇಪ್ಪತ್ತು ಮನುಷ್ಯರಿಂದಲೂ ಕೂಡ ಎತ್ತಲಾಗುವುದಿಲ್ಲ . ಏಕೆಂದರೆ ಇಪ್ಪತ್ತು ಮನುಷ್ಯರು ಒಂದಾಗಿಲ್ಲ . ಎಲ್ಲರ ಸತ್ತಾ ಬೇರೆ ಬೇರೆಯಿದೆ, ಸತ್ತಾ ಒಂದಾಗಿ ಹೋಗಿಲ್ಲ . ಅದು ಒಂದಾಗಿ ಹೋದರೆ ಇಪ್ಪತ್ತು ಇಪ್ಪತ್ತಾಗಿ ಉಳಿಯಲಿಲ್ಲ ಭಾರವನ್ನು ಇಪ್ಪತ್ತು ಜನರಿಂದ ಎತ್ತಲಾಗುವುದೇ ಇಲ್ಲ . ಅಜ್ಞಾನಿಯು ಸಂಯೋಗದಿಂದ ನೋಡುತ್ತಾನೆ. ಭಾರ ತನ್ನ ಕಾರಣದಿಂದ ಎತ್ತಲ್ಪಟ್ಟಾಗ ಸಂಯೋಗ ದೃಷ್ಟಿಯುಳ್ಳವರು ಇಪ್ಪತ್ತು ಜನರು ಒಟ್ಟಿಗೆ ಸೇರಿ ಭಾರವನ್ನು ಎತ್ತಿದರೆಂದು ಅಜ್ಞಾನದಿಂದ ಮನ್ನಿಸುತ್ತಾನೆ. ಒಂದು ಪರಮಾಣುವು ಆತ್ಮನ ವಿಕಾರದಲ್ಲಿ ನಿಮಿತ್ತವಾಗುವುದಿಲ್ಲವೆಂದಮೇಲೆ ಅನಂತ ಪರಮಾಣುಗಳು ಏಕತ್ರಿತವಾಗಿ ಕರ್ಮವಾಗಿ ಆತ್ಮನಿಗೆ ವಿಕಾರವನ್ನುಂಟುಮಾಡುತ್ತವೆಂಬುದು ಸಂಭವಿಸುವುದೇ ಇಲ್ಲ . ಅನಂತ ಪರಮಾಣುಗಳು ಏಕತ್ರಿತವಾಗುವುದೇ ಇಲ್ಲ. ಒಂದು ಪರಮಾಣುವು ಕಾರಣವಾಗುವುದಿಲ್ಲವೆಂದಬಳಿಕ ಅನಂತ ಪರಮಾಣುಗಳು ಕೂಡ ಕಾರಣವಾಗುವುದಿಲ್ಲ . ಜೀವವು ತಾನೇ ವಿಕಾರ ಮಾಡಿದಾಗ ಕರ್ಮದ ಮೇಲೆ ಉಪಚಾರ ಮಾಡಲಾಗುತ್ತದೆ, ಆದರೆ ಅನಾದಿಯಿಂದ ಅಜ್ಞಾನೀ ಜೀವನಿಗೆ ಕರ್ಮದ ಕಾರಣದಿಂದ ಆತ್ಮನಲ್ಲಿ ವಿಕಾರವಾಗುತ್ತದೆಯೆಂದು ಭ್ರಾಂತಿಯಾಗಿದೆ, ಆದರೆ ಅದು ಮೂಢತೆಯಿದೆ.

ಸತ್ತಾ ಇದೆ ಅದು ತನ್ನ ದ್ರವ್ಯವನ್ನು ತಿಳಿಯುತ್ತದೆ, ಬೇರೆ ದ್ರವ್ಯವನ್ನು ತಿಳಿಯುವುದಿಲ್ಲ . ತನ್ನ ಜ್ಞಾನವು, ರಾಗ ಮತ್ತು ನಿಮಿತ್ತದಿಂದ ಪೃಥಕ್ ಇದೆಯೆಂದು ಸತ್ತಾ ತಿಳಿಯುತ್ತದೆ. ಸತ್ತಾ ಶುದ್ಧದ್ರವ್ಯವನ್ನು ತಿಳಿಯುತ್ತದೆ. ದ್ರವ್ಯದೃಷ್ಟಿಯಾದಮೇಲೆ ಸಂಯೋಗದೃಷ್ಟಿ ಉಳಿಯುವುದಿಲ್ಲ . ಸ್ವಭಾವದೃಷ್ಟಿಯಾದ ನಂತರ ಅನಂತಾನುಬಂಧಿಯ ರಾಗ ಕೂಡ ಉಳಿಯುವುದಿಲ್ಲ. ಭಾರವು ಕೈಯಿಂದ ಎತ್ತಲ್ಪಡುವುದಿಲ್ಲ . ಏಕೆಂದರೆ ಭಾರವು ಅದು ನಿಜವಾಗಿ ದ್ರವ್ಯವಲ್ಲ , ಅದು ಉಪಚಾರದಿಂದ ದ್ರವ್ಯವಿದೆ. ಜ್ಞಾನಿಗೆ ದ್ರವ್ಯದೃಷ್ಟಿಯಾಗಿರುವುದರಿಂದ ಅವನು ತನ್ನ ಪರ್ಯಾಯವು ಪರದ ಕಾರಣದಿಂದ ಆಗುತ್ತದೆಯೆಂದು ಮನ್ನಿಸುವುದಿಲ್ಲ. ಅವನಿಗೆ ತನ್ನ ಆಗುವಿಕೆಯಲ್ಲಿ ಪರದ ಆಗುವಿಕೆಯು ಭಾಸವಾಗುವುದಿಲ್ಲ . ಈ ಮಾತಿನಲ್ಲಿ ಅಜ್ಞಾನಿಗೆ ಧರ್ಮವು ಕಂಡುಬರುವುದಿಲ್ಲ . ಅವನು ದಯೆ, ದಾನ, ಭಕ್ತಿ , ಪೂಜೆ, ವ್ರತ-ಮೊದಲಾದವುಗಳ ಮಾತೇ ಬರಲಿಲ್ಲವೆಂದು ಹೇಳುತ್ತಾನೆ. ಮತ್ತು ಇದೆಂಥ ಧರ್ಮವೆಂದು ಹೇಳುತ್ತಾನೆ ಇದರಲ್ಲಿ ತನ್ನ ಅಸ್ತಿ ಮತ್ತು ತನ್ನಲ್ಲಿ ಪರದ ನಾಸ್ತಿಯಿದೆ. ಸತ್ತಾ ಲಕ್ಷಣದಲ್ಲಿ ಎಲ್ಲವೂ ಬಂದುಬಿಡುತ್ತವೆ.

ಉತ್ಪಾದ, ವ್ಯಯ, ಧ್ರುವವು ತನ್ನ ದ್ರವ್ಯವನ್ನು ತಿಳಿಯುತ್ತದೆ. ಬೇರೆ ದ್ರವ್ಯವನ್ನು ತಿಳಿಯುವುದಿಲ್ಲ . ಇದರಂತೆ

ಬೇರೆ ದ್ರವ್ಯದ ಉತ್ಪಾದ, ವ್ಯಯ, ಧ್ರುವವು ಈ ದ್ರವ್ಯವನ್ನು ತಿಳಿಯುವುದಿಲ್ಲ. ಅನಂತ ಜೀವ, ಅನಂತ ಪುದ್ಗಲ ಪರಮಾಣು ಮತ್ತು ಬೇರೆ ದ್ರವ್ಯಗಳಿವೆ ಅವುಗಳ ಲಕ್ಷಣವು ಸತ್ ಇದೆ ಆ ದ್ರವ್ಯಗಳಲ್ಲಿ ಉತ್ಪಾದ, ವ್ಯಯ, ಧ್ರುವಗಳಾಗುತ್ತವೆ. ಶಬ್ದದ ಕಾರಣದಿಂದ ಜ್ಞಾನವಾಗುತ್ತದೆಂದಿಲ್ಲ ಮೊದಲಿನ ಜ್ಞಾನಪರ್ಯಾಯದ ವ್ಯಯ, ನವೀನ ಪರ್ಯಾಯದ ಉತ್ಪಾದ ಮತ್ತು ಜ್ಞಾನದ ಸದೃಶ್ಯತೆಯು ಆ ಜೀವದ್ರವ್ಯವನ್ನು ತಿಳಿಯುತ್ತದೆ. ಶಬ್ದದಿಂದ ತಿಳಿಯುವುದಿಲ್ಲ ಶಬ್ದದ ಉತ್ಪಾದ, ವ್ಯಯ, ಧ್ರುವವು ಪುದ್ಗಲವನ್ನು ತಿಳಿಯುತ್ತದೆ ಜ್ಞಾನವನ್ನು ತಿಳಿಯುವುದಿಲ್ಲ. ಈ ಪಂಚಾಸ್ತಿಕಾಯದಲ್ಲಿ ಐದು ಅಸ್ತಿಕಾಯಗಳ ವರ್ಣನೆಯಿದೆ. ಕಾಲದ್ರವ್ಯಕ್ಕೆ ಕಾಯವಿಲ್ಲದುದರಿಂದ ಅದರ ವರ್ಣನೆಯನ್ನು ಗೌಣವಾಗಿ ಮಾಡಲಾಗಿದೆ ಮತ್ತು ಕಾಯದ ವ್ಯಾಖ್ಯೆಯು ಮುಖ್ಯವಿದೆ. ಸತ್ ಅದು ದ್ರವ್ಯವಿದೆ, ಉತ್ಪಾದ-ವ್ಯಯ-ಧ್ರುವವು ಅದು ದ್ರವ್ಯವಿದೆ, ಮತ್ತು ಗುಣ-ಪರ್ಯಾಯಗಳ ಆಧಾರವು ಅದು ದ್ರವ್ಯವಿದೆ-ಹೀಗೆ ಮೂರು ಪ್ರಕಾರಗಳ ಲಕ್ಷಣವುಳ್ಳದ್ದು ದ್ರವ್ಯವಿದೆ.

**ಭಾವಾರ್ಥಃ-** ೧) ದ್ರವ್ಯದ ಲಕ್ಷಣವು ಸತ್ತಾ ಇದೆ, ೨) ದ್ರವ್ಯದ ಲಕ್ಷಣವು ಉತ್ಪಾದ-ವ್ಯಯ-ಧ್ರುವವಿದೆ, ೩) ದ್ರವ್ಯದ ಲಕ್ಷಣವು ಗುಣಪರ್ಯಾಯಾಶ್ರಿತವಿದೆ-ಹೀಗೆ ದ್ರವ್ಯದ ಲಕ್ಷಣವು ಮೂರು ಪ್ರಕಾರದಿಂದಿದೆ. ಈ ಮೂರು ಲಕ್ಷಣಗಳಲ್ಲಿ ಮೊದಲನೆಯ ಲಕ್ಷಣವು ಸಾಮಾನ್ಯವಿದೆ ಮತ್ತು ಎರಡನೆಯ ಲಕ್ಷಣವು ವಿಶೇಷವಿದೆ ಎಂದರೆ ಸತ್ತಾ ಲಕ್ಷಣವು ಅದು ಸಾಮಾನ್ಯವಿದೆ ಮತ್ತು ಉತ್ಪಾದ-ವ್ಯಯ-ಧ್ರುವ ಲಕ್ಷಣವು ಮತ್ತು ಗುಣ-ಪರ್ಯಾಯಾಶ್ರಿತ ಲಕ್ಷಣವು ವಿಶೇಷವಿದೆಯೆಂಬುದನ್ನು ತಿಳಿಸಿದೆ.

ದ್ರವ್ಯದ ಲಕ್ಷಣವು ಸತ್ತಾ ಇದೆ. ಯಾರಾದರೂ ಆಜ್ಞೆ ಮಾಡುವಂಥ ಸತ್ತಾದ ಮಾತು ಇಲ್ಲಿ ಇಲ್ಲ, ಆದರೆ ಸತ್ತಾ ಎಂದರೆ ಇರುವಿಕೆಯ ಮಾತು ಇದೆ. ಅಸ್ತಿತ್ವನಾಮದ ಗುಣವಿದೆ ಅದು ಇರುವಿಕೆಯುಳ್ಳ ಪದಾರ್ಥವನ್ನು ತಿಳಿಯುತ್ತದೆ, ಮತ್ತು ಎರಡನೆಯ ಲಕ್ಷಣವು ಉತ್ಪಾದ-ವ್ಯಯ-ಧ್ರುವವಿದೆ. ಪ್ರತಿಯೊಂದು ಪದಾರ್ಥದಲ್ಲಿ ಉತ್ಪಾದ-ವ್ಯಯ-ಧ್ರುವಗಳು ಒಂದು ಸಮಯದಲ್ಲಿವೆಯೆಂಬ ಮಾತನ್ನು ಸರ್ವಜ್ಞರ ಹೊರತು ಬೇರೆ ಯಾರೂ ತಿಳಿಯುವ ಸಾಧ್ಯತೆಯಿಲ್ಲವೆಂದು ಸ್ವಾಮಿ ಸಮಂತಭದ್ರಾಚಾರ್ಯದೇವರು ಹೇಳಿದ್ದಾರೆ. ಸರ್ವಜ್ಞರು ತಿಳಿದುಕೊಂಡಿದ್ದಾರೆ ಅದಕ್ಕಾಗಿ ಉತ್ಪಾದ-ವ್ಯಯ-ಧ್ರುವಗಳಿವೆಯೆಂಬುದಾಗಿಲ್ಲ. ಬೇರೆ ದ್ರವ್ಯಗಳು ನಿಮಿತ್ತವಿವೆ ಅದಕ್ಕಾಗಿ ಉತ್ಪಾದವಾಗುತ್ತದೆಯೆಂದು ಇಲ್ಲ. ಅತ್ಯಂತ ಕಡಿಮೆ ಕಾಲದಲ್ಲಿ ಉತ್ಪಾದ-ವ್ಯಯಗಳಾಗದಿದ್ದರೆ ಅಸಂಖ್ಯ ಸಮಯಗಳು ಕೂಡ ಈ ಉತ್ಪಾದ-ವ್ಯಯಗಳನ್ನು ನೋಡಿವೆಯೆನ್ನುವಂತಾಗಲಿಕ್ಕಿಲ್ಲ. ಆ ಅಸಂಖ್ಯ ಸಮಯಗಳಲ್ಲಿ ಉತ್ಪಾದ-ವ್ಯಯಗಳಿವೆಯೆಂದಮೇಲೆ ಅತ್ಯಂತ ಚಿಕ್ಕ ಕಾಲದಲ್ಲಿ ಕೂಡ ಉತ್ಪಾದ-ವ್ಯಯಗಳಾಗಬೇಕು. ಹೀಗೆ ಒಂದು ಸಮಯದಲ್ಲಿ ಆಗುತ್ತದೆ ಅದನ್ನು ತಮ್ಮ ಸರ್ವಜ್ಞತೆಯಿಂದ ತಿಳಿಯುತ್ತಾರೆ.

ವಸ್ತುವಿನ ಸ್ವಭಾವವು ಬದಲಾವಣೆಯಾಗುವಂಥದ್ದು ಇಲ್ಲದಿದ್ದರೆ ಬದಲಾವಣೆಯ ಅಭಾವವಾಗುವುದು ; ಹೀಗಾಗುವುದರಿಂದ ಜಗತ್ತಿನಲ್ಲಿ ಯಾವ ಕಾರ್ಯವೂ ಆಗಲಾರದು. ಪ್ರತಿಯೊಂದು ದ್ರವ್ಯದಲ್ಲಿ ಬದಲಾಗುವಿಕೆಯಿದೆ ಮತ್ತು ಅದು ಒಂದು ಸಮಯದಲ್ಲಿದೆಯೆಂದು ಸಿದ್ಧವಾಗುತ್ತದೆ. ಆ ಉತ್ಪಾದ-ವ್ಯಯಗಳು ತಮ್ಮಿಂದ ಇವೆ, ಪರದಿಂದ ಇಲ್ಲವೆಂದು ಮನ್ನಿಸಿದರೆ ಪರದಿಂದ ಭಿನ್ನತೆಯಾದಲ್ಲದೆ ಇರಲಾರದು ಮತ್ತು ಪರದಿಂದ ಭಿನ್ನತೆಯಾಯಿತು ಎಂದರೆ ಸರ್ವಜ್ಞತೆಯಾದಲ್ಲದೆ ಇರಲಾರದು. ಓಹೋ ! ಕುಂದಕುಂದಾಚಾರ್ಯದೇವರು ಅದ್ಭುತತೆಯಿಂದ ವರ್ಣನೆ ಮಾಡಿ ಹೀಗೆ ಹೇಳಿದ್ದಾರೆ ಎಲೈ ಸೋದರನೇ ! ಅಸಂಖ್ಯಸಮಯದ ಉಪಯೋಗವಿದೆ ಅದರಿಂದಾಗಿ ಪರಿಣಮನವು ಅಸಂಖ್ಯ ಸಮಯದ್ದಿದೆ ಎನ್ನುವಂತಿಲ್ಲ, ಆದರೆ ಒಂದು ಸಮಯದ ಪರಿಣಮನವಿದೆ ಅದು ಪ್ರತಿಯೊಂದು ದ್ರವ್ಯದ ಸ್ವಭಾವವಿದೆಯೆಂದು ತಿಳಿದುಕೊಳ್ಳು .

ಸಮಯಸಾರದಲ್ಲಿ ದರ್ಶನದ ಪ್ರಧಾನತೆಯಿಂದ ಮಾತು ಇದೆ, ಪ್ರವಚನಸಾರದಲ್ಲಿ ಚಾರಿತ್ರದ ಪ್ರಧಾನತೆಯಿಂದ ಮಾತು ಇದೆ ಮತ್ತು ಇಲ್ಲಿ ಪಂಚಾಸ್ತಿಕಾಯದಲ್ಲಿ ಜ್ಞಾನದ ಪ್ರಧಾನತೆಯಿಂದ ಮಾತು ಮಾಡಿದ್ದಾರೆ. ಈ ಮೂರು ಶಾಸ್ತ್ರಗಳಲ್ಲಿನ

ಒಂದೊಂದು ಗಾಥೆ ನೋಡಿದರೆ ಅದರಲ್ಲಿ ಕೇವಲಜ್ಞಾನವು ತುಂಬಿಕೊಂಡಿದೆ. ದ್ರವ್ಯವು ಉತ್ಪಾದ-ವ್ಯಯ-ಧ್ರುವದ ಆಧಾರವಿದೆ, ಬೇರೆ ಯಾವ ಪರದ ಆಧಾರದಿಂದಿದೆಯೆನ್ನುವಂತಿಲ್ಲ . ಈ ಕಾರಣದಿಂದ ಕುಂಭಕಾರನಿದ್ದನು ಅದಕ್ಕಾಗಿ ಕೊಡವು ಆಗಿದೆಯೆಂಬ ಪ್ರಶ್ನೆಯೇ ಉಳಿಯುವುದಿಲ್ಲ . ಕುಂಭಕಾರ ಕೂಡ ಇದ್ದಾನೆ, ಕೊಡ ಕೂಡ ಇದೆ. 'ಇದೆ' ತನದಲ್ಲಿ ಸ್ವತಂತ್ರತೆಯಿದೆ.

ಈ ಮೂರು ಲಕ್ಷಣ ಹೇಳಿದೆ ಅದರಲ್ಲಿ ಸತ್ತಾ ಲಕ್ಷಣವಿದೆ, ಅದು ಸಾಮಾನ್ಯ ಲಕ್ಷಣವಿದೆ. ದ್ರವ್ಯವು ಅನೇಕಾಂತ ಸ್ವರೂಪವಿದೆ, ಎಲ್ಲ ಪ್ರಕಾರದಿಂದ ಸತ್ತಾವೇ ದ್ರವ್ಯದ ಲಕ್ಷಣವೆಂದು ಮನ್ನಿಸಹೋದರೆ ಲಕ್ಷ್ಯ-ಲಕ್ಷಣದಲ್ಲಿ ಭೇದವೇ ಉಳಿಯುವುದಿಲ್ಲ . ಸತ್ತಾ ಎಂದರೆ ದ್ರವ್ಯದ ಲಕ್ಷಣವೆಂದು ಹೇಳಹೋದರೆ ಸತ್ತಾ ಮತ್ತು ದ್ರವ್ಯವೆಂಬ ಭೇದವಾಗುವುದಿಲ್ಲ. ದ್ರವ್ಯವು ಅನೇಕಾಂತಸ್ವರೂಪವಿರುವುದರಿಂದ ಅದರಲ್ಲಿ ಉತ್ಪಾದ-ವ್ಯಯ-ಧ್ರುವ ಕೂಡ ಲಕ್ಷಣವಿದೆ, ಸತ್ತಾವೇ ದ್ರವ್ಯದ ಲಕ್ಷಣವೆಂದು ಒಂದೇರೂಪವಿದ್ದರೆ ಏಕಾಂತವಾಗುತ್ತದೆ. ಮತ್ತು ಏಕಾಂತವಂತೂ ವಸ್ತುವಿನ ಸ್ವರೂಪವಿಲ್ಲ . ದ್ರವ್ಯದಲ್ಲಿ ಸತ್ತಾವೆಂಬ ಒಂದೇ ಪ್ರಕಾರದ ಧರ್ಮವಿದೆಯೆನ್ನುವಲ್ಲಿಯಂತೂ ಏಕಾಂತವಾಗುತ್ತದೆ, ಆದರೆ ಸತ್ತಾದ ಜೊತೆಯಲ್ಲಿ ಉತ್ಪಾದ-ವ್ಯಯ-ಧ್ರುವದ ಲಕ್ಷಣ ಕೂಡ ದ್ರವ್ಯದಲ್ಲಿದೆ. ಸತ್ತಾದ ಸಿದ್ಧಿಮಾಡಹೋದರೆ ಉತ್ಪಾದ-ವ್ಯಯ-ಧ್ರುವ ಕೂಡ ಸಿದ್ಧವಾಗುವುದು ಏಕೆಂದರೆ ಮೊದಲು ಸತ್ತಾವನ್ನು ಮನ್ನಿಸುತ್ತಿರಲಿಲ್ಲ ಮತ್ತು ನಂತರ ಮನ್ನಿಸಲಾಗುತ್ತಿರುವುದರಿಂದ ಸತ್ತಾ ಸಿದ್ಧಮಾಡಹೋದರೆ ಅದರ ಜೊತೆ ಉತ್ಪಾದ-ವ್ಯಯ-ಧ್ರುವ ಕೂಡ ಸಿದ್ಧವಾಗುವುದು.

ಯಾವ ಪ್ರಕಾರ ದ್ರವ್ಯದ ಅನೇಕಾಂತತೆಯಿದೆ ಅದೇ ಪ್ರಕಾರ ಸತ್ತಾದ್ದೂ ಕೂಡ ಅನೇಕಾಂತತೆಯಿದೆಯೆಂಬ ಮಾತು ಮೊದಲು ಬಂದುಹೋಗಿದೆ. ಸತ್ತಾದಲ್ಲಿ ಕೂಡ ಉತ್ಪಾದ-ವ್ಯಯ-ಧ್ರುವತೆಯಿದೆ. ಸತ್ತಾಕ್ಕೆ ಆ ಮೂರು ಅಂಶಗಳಿವೆ, ಅದಕ್ಕಾಗಿ ಅವು ಸತ್ತಾದ ಕಾರಣ ಇವೆ, ಪರದ ಕಾರಣದಿಂದಿಲ್ಲ . ಇದು ಭೇದಜ್ಞಾನದ ವ್ಯಾಖ್ಯೆಯಿದೆ, ಪರದಿಂದ ಭಿನ್ನವಾಗುವ ಮಾತು ಇದೆ. ಸ್ವಭಾವವು ಹೀಗಿದೆಯೆಂದು ನಿಶ್ಚಯವಾದೊಡನೆ ಪರದಿಂದ ಭೇದವಾಗಿ ಹೋಗುವುದು. ಯಾವ ಪ್ರಕಾರ ಸತ್ತಾ ದ್ರವ್ಯದ ಲಕ್ಷಣವಿದೆ ಅದೇ ಪ್ರಕಾರ ಉತ್ಪಾದ-ವ್ಯಯ-ಧ್ರುವ ಕೂಡ ದ್ರವ್ಯದ ಲಕ್ಷಣವಿದೆ. ಒಂದು ವಸ್ತುವಿನಲ್ಲಿ ಅವಿರೋಧವಾದ ಕ್ರಮವರ್ತೀ ಪರ್ಯಾಯವಿದೆ ಅದರಲ್ಲಿ ಮೊದಲಿನ ಭಾವಗಳ ವಿನಾಶವಾಗುತ್ತದೆ ಮತ್ತು ಹೊಸ ಭಾವಗಳ ಉತ್ಪಾದವಾಗುತ್ತದೆ. ಈ ಪ್ರಕಾರದಿಂದ ಉತ್ಪಾದ-ವ್ಯಯಗಳಾಗುತ್ತವೆ, ಆದಾಗ್ಯೂ ದ್ರವ್ಯವು ತನ್ನ ನಿಜಸ್ವರೂಪವನ್ನು ಬಿಟ್ಟುಕೊಡುವುದಿಲ್ಲ ಅದು ಧ್ರುವತನದಿಂದಿದೆ. ಈ ಉತ್ಪಾದ-ವ್ಯಯ-ಧ್ರುವಗಳು ದ್ರವ್ಯದ ಲಕ್ಷಣವಿವೆ.

ಚೈತನ್ಯದ ಅವಿರುದ್ಧ ಪರ್ಯಾಯವು ಅದು ಚೈತನ್ಯವೇ ಇದೆ ಮತ್ತು ಪುದ್ಗಲದ ಅವಿರುದ್ಧ ಪರ್ಯಾಯವು ಅದು ಪುದ್ಗಲವೇ ಇದೆ ಜಡದಲ್ಲಿ ಜೀವದ ಮತ್ತು ಜೀವದಲ್ಲಿ ಜಡದ ಪರ್ಯಾಯವಾದರೆ ವಿರುದ್ಧಕಾರ್ಯವೆನಿಸುವುದು, ಆದರೆ ಹೀಗೆ ಆಗುವುದಿಲ್ಲ . ಪಂಚಭೂತಗಳು ಜಡವಿದ್ದು ಅವುಗಳೊಳಗಿಂದ ಚೈತನ್ಯವು ಉತ್ಪನ್ನವಾಗುತ್ತದೆಯೆಂಬುದು ಸಾಧ್ಯವೇ ಇಲ್ಲ . ತನಗೆ ಯೋಗ್ಯವಾಗಿ ತನ್ನ ಪರ್ಯಾಯವಿರುತ್ತದೆ. ಮೊದಲು ಜ್ಞಾನದ ಪರ್ಯಾಯವು ಅಲ್ಪವಿತ್ತು ಮತ್ತು ನಂತರ ವೃದ್ಧಿಸಿತು ಹೇಗೆಂದರೆ ಅದು ಅವಿರುದ್ಧ ಪರ್ಯಾಯವಾಯಿತು ಹೀಗೆ ಆತ್ಮನ ಧರ್ಮವಿದೆ. ಈ ಕಾರಣದಿಂದ ಆ ಪರ್ಯಾಯವು ಆತ್ಮನೊಳಗಿಂದ ಬರುತ್ತದೆ ಅದು ನಿಮಿತ್ತದೊಳಗಿಂದ ಬರುವುದಿಲ್ಲ. ಹೀಗೆ ಉತ್ಪಾದ-ವ್ಯಯ-ಧ್ರುವವು ಅದು ದ್ರವ್ಯದ ಲಕ್ಷಣವಿದೆ. ಆ ಲಕ್ಷಣವು ಲಕ್ಷ್ಯವನ್ನು ತಿಳಿಸಿಕೊಡುತ್ತದೆ ಆದರೆ ಪರವನ್ನು ತಿಳಿಸಿಕೊಡುವುದಿಲ್ಲ .

ಸತ್ತಾ , ಉತ್ಪಾದ-ವ್ಯಯ-ಧ್ರುವ ಮತ್ತು ಪರ್ಯಾಯಾಶ್ರಿತತನ ಇವು ಮೂರು ದ್ರವ್ಯದ ಲಕ್ಷಣವಿವೆ. ಅವು ಸಾಮಾನ್ಯ ಕಥನದ ಅಪೇಕ್ಷೆಯಿಂದ ದ್ರವ್ಯದಿಂದ ಬೇರೆಯಿಲ್ಲ-ಅಭೇದವಿವೆ. ಪ್ರತಿಯೊಂದು ದ್ರವ್ಯದ ಪರಿಣತಿಯ ಆಧಾರವು ಸ್ವಯಂ-ದ್ರವ್ಯವಿದೆ, ಆ ಪರಿಣತಿಯು ಪರದ ಕಾರಣದಿಂದಿಲ್ಲ . ಆತ್ಮನ ಪರಿಣತಿಯು ಆತ್ಮನಿಂದ ಕೂಡ ಆಗುತ್ತದೆ ಮತ್ತು

ನಿಮಿತ್ತದಿಂದ ಕೂಡ ಆಗುತ್ತದೆನ್ನುವುದು ಏಕಾಂತವಿದೆ. ಆತ್ಮನ ಗುಣ-ಪರ್ಯಾಯಗಳ ಆಧಾರವು ಸ್ವಯಂ ಆತ್ಮನಿದ್ದಾನೆ ಆದರೆ ಪರವಿಲ್ಲ . ಇದು ಅನೇಕಾಂತವಿದೆ ಮತ್ತು ಪರಮಾಣುವಿನ ಪರ್ಯಾಯಗಳ ಆಧಾರವು ಸ್ವಯಂ ಪರಮಾಣುವಿದೆ. ಆತ್ಮ , ಪುದ್ಗಲ ಮೊದಲಾದ ಎಲ್ಲ ದ್ರವ್ಯಗಳ ಸತ್ತಾ ವಗೈರೆ ಲಕ್ಷಣವು ಸಾಮಾನ್ಯ ಅಪೇಕ್ಷೆಯಿಂದ ಅಭೇದವಿದೆ ಮತ್ತು ವಿಶೇಷ ಅಪೇಕ್ಷೆಯಿಂದ ಈ ಮೂರು ಲಕ್ಷಣಗಳ ಭೇದದಿಂದ ತಿಳಿದುಕೊಳ್ಳುವಂತಿದೆ ಆದರೆ ನಿಜವಾಗಿ ಭೇದವಿಲ್ಲ .

ಲಕ್ಷ್ಯ-ಲಕ್ಷಣದ ಭೇದವನ್ನು ತಿಳಿಸಿದೆ. ಇದು ಸತ್‌ದ್ರವ್ಯದ ಲಕ್ಷಣವಿದೆಯೆಂದು ವಿಶೇಷತೆಯಿಂದ ಭೇದ ತಿಳಿಸಿದೆ, ಉತ್ಪಾದ-ವ್ಯಯ-ಧ್ರುವವನ್ನು ತಿಳಿಸಿಕೊಟ್ಟಿದೆ. ಮತ್ತು ಗುಣಪರ್ಯಾಯಗಳ ಆಧಾರವು ದ್ರವ್ಯವಿದೆಯೆಂಬ ಲಕ್ಷಣದಿಂದ ಕೂಡ ದ್ರವ್ಯವನ್ನು ತಿಳಿಸಿಕೊಟ್ಟಿದೆ. ಒಂದು ಸಮಯದಲ್ಲಿ ಈ ಮೂರೂ ಲಕ್ಷಣಗಳು ದ್ರವ್ಯದಲ್ಲಿವೆ. ಮೊದಲನೆಯ ಸಮಯದಲ್ಲಿ ಸತ್ ಇದೆ, ಎರಡನೆಯ ಸಮಯದಲ್ಲಿ ಉತ್ಪಾದ-ವ್ಯಯ-ಧ್ರುವವಿದೆ ಮತ್ತು ಮೂರನೆಯ ಸಮಯದಲ್ಲಿ ಗುಣ-ಪರ್ಯಾಯದ ಆಧಾರವಿದೆಯೆನ್ನುವಂತಿಲ್ಲ. ಶುದ್ಧ ಜೀವದ್ರವ್ಯವನ್ನು ತಿಳಿಸಿಕೊಡಲು ಈ ಲಕ್ಷಣಗಳನ್ನು ಹೇಳಿದೆ. ಇವೆಲ್ಲವು ದ್ರವ್ಯದ ಸ್ವಾಭಾವಿಕ ಲಕ್ಷಣವಿವೆ. ಸಾಮಾನ್ಯವಾಗಿ ದ್ರವ್ಯವು ಅಭೇದವಾಗಿದ್ದರೂ ಸತ್ತಾದಿ ಲಕ್ಷಣವುಳ್ಳದ್ದು ದ್ರವ್ಯವಿದೆಯೆಂದು ವಿಶೇಷತೆಯಿಂದ ತಿಳಿಸಿಕೊಟ್ಟಿದೆ.

ಜೈನ ಶಾಸ್ತ್ರಗಳನ್ನೋದಿ ಯಾವನೋ ಒಬ್ಬನು ಆ ಶಾಸ್ತ್ರಗಳ ಸಾರವು ಒಂದು ದ್ರವ್ಯದ ಮೇಲೆ ಇನ್ನೊಂದು ದ್ರವ್ಯದ ಪ್ರಭಾವ ಬಿದ್ದಿದೆಯೆಂದು ಹೇಳಿದನು. ಇಂಥ ಛಾಯಾವಾದವು ಶಾಸ್ತ್ರದಲ್ಲಿ ಅಲ್ಲಲ್ಲಿ ಇದೆಯೆಂದರೆ ಆ ಮಾತಿನ ನಿರಾಕರಣೆ ಮಾಡಬೇಕಾಗುವುದು. ಏಕೆಂದರೆ ಹೀಗೆ ಹೇಳುವವನು ಶಾಸ್ತ್ರಗಳ ಅರ್ಥವನ್ನು ತಿಳಿಯಲಾರನು. ಈ ಮೂರೂ ಭಾವಗಳು ಸ್ವಯಂ ದ್ರವ್ಯದ ಸ್ವಾಭಾವಿಕ ಭಾವಗಳಿವೆ. ಯಾರಾದರೂ ಹೊಡೆಯಲು ಬಂದಾಗ ತನ್ನ ಹತ್ತಿರ ಕೋವಿ ಮೊದಲಾದ ಸಾಧನವಿದ್ದರೆ ಭಯವೆನಿಸುವುದಿಲ್ಲವೆಂಬ ಮಾತೂ ಅಸತ್ಯವಿದೆ ಏಕೆಂದರೆ ಸಾಧನವಿದೆ ಅದಕ್ಕಾಗಿ ಭಯವು ಕಡಿಮೆಯೆನಿಸುತ್ತದೆ ಎಂಬಂತಿಲ್ಲ ಪ್ರತಿಯೊಂದು ದ್ರವ್ಯದ ಪರಿಣತಿಯು ಪೃಥಕ್ ಪೃಥಕ್ ಇದೆ ಅದಕ್ಕಾಗಿ ಸಾಧನದ ಪ್ರಭಾವ ಬೀಳುವುದಿಲ್ಲ. ಉತ್ಪಾದ-ವ್ಯಯ-ಧ್ರುವವು ಇದು ಪ್ರತಿಯೊಂದು ದ್ರವ್ಯದ ಸ್ವಭಾವವಿದೆ. ಅಜ್ಞಾನಿಯು ಅದನ್ನು ನೋಡದೆ ಸಂಯೋಗವನ್ನು ನೋಡುತ್ತಾನೆ ಅದಕ್ಕಾಗಿ ಅವನಿಗೆ ಸಂಯೋಗದೃಷ್ಟಿಯಿದೆ ಅದು ಮಿಥ್ಯಾದೃಷ್ಟಿಯಿದೆ.

ಉತ್ಪಾದ-ವ್ಯಯ-ಧ್ರುವವು ದ್ರವ್ಯದ ವಿಶೇಷ ಲಕ್ಷಣವಿದೆ, ಆದರೆ ಆ ಲಕ್ಷಣವು ಒಂದೇ ಎಂದು ಕೂಡ ಇಲ್ಲ. ಗುಣಪರ್ಯಾಯವು ಕೂಡ ದ್ರವ್ಯದ ಲಕ್ಷಣವಿದೆ, ಇದು ಮೂರನೆಯ ಲಕ್ಷಣವಿದೆ. ತ್ರಿಕಾಲ ಶಕ್ತಿಯು ಅದು ಗುಣವಿದೆ ಮತ್ತು ಸಮಯ ಸಮಯದಲ್ಲಿ ಪರಿಣಮನವಾಗುವುದು ಅದು ಪರ್ಯಾಯವಿದೆ. ಅದು ಪ್ರತಿಯೊಂದು ದ್ರವ್ಯದ ಲಕ್ಷಣವಿದೆ. ದ್ರವ್ಯವು ಅನೇಕಾಂತಸ್ವರೂಪವಿದೆ ದ್ರವ್ಯದಲ್ಲಿ ಅನಂತಗುಣಪರ್ಯಾಯಗಳಿದ್ದಾಗಲೇ ಅನೇಕಾಂತವಾಗುತ್ತದೆ. ಅಸ್ತಿ-ನಾಸ್ತಿ ರೂಪ ಧರ್ಮದ ಅಪೇಕ್ಷೆಯಿಂದ ಅನೇಕಾಂತವಿದೆಯೇನು ? ಎಂಬ ಪ್ರಶ್ನೆಗೆ ದ್ರವ್ಯವು ಒಂದಿದೆ ಮತ್ತು ಗುಣಪರ್ಯಾಯಗಳು ಅನೇಕವಿವೆ - ಈ ರೀತಿ ಪರಸ್ಪರ ವಿರುದ್ಧ ಶಕ್ತಿಗಳನ್ನು ಪ್ರಕಟಿಸುವುದಕ್ಕಾಗಿ ಇದರಲ್ಲಿ ಅನೇಕಾಂತತೆಯು ಬಂದುಹೋಗುತ್ತದೆಯೆಂಬ ಉತ್ತರ ಕೊಡಬಹುದಾಗಿದೆ.

ದ್ರವ್ಯದಲ್ಲಿ ಅನಂತಗುಣಪರ್ಯಾಯಗಳಿರುವುದೇ ಅನೇಕಾಂತತನವಾಗುತ್ತದೆ.

ವಸ್ತುವಿನಲ್ಲಿ ವಸ್ತುತ್ವವನ್ನುತ್ಪನ್ನ ಮಾಡುವಂಥ ಪರಸ್ಪರ ವಿರುದ್ಧ ಶಕ್ತಿಗಳ ಪ್ರಕಟತೆಯು ಅದು ಅನೇಕಾಂತವಿದೆ. ದ್ರವ್ಯವನ್ನು ವಸ್ತುವೆಂದು ಹೇಳಿದೆ. ಗುಣವನ್ನು ಕೂಡ ವಸ್ತುವೆಂದು ಹೇಳಲಾಗುವುದು ಮತ್ತು ಪರ್ಯಾಯವನ್ನು ಕೂಡ ವಸ್ತುವೆಂದು ಹೇಳಲಾಗುವುದು. ಚಿದ್‌ವಿಲಾಸದಲ್ಲಿ ದ್ರವ್ಯ, ಗುಣ, ಪರ್ಯಾಯ ಇವು ಮೂರೂ ವಸ್ತುವಿವೆಯೆಂದು ಹೇಳಿದೆ. ಒಂದು ದ್ರವ್ಯವು ತನ್ನತನದಿಂದ ಇದೆ ಮತ್ತು ಅನ್ಯತನದಿಂದ ಇಲ್ಲ, ಒಂದು ಗುಣವು ತನ್ನತನದಿಂದ ಇದೆ ಮತ್ತು

ಅನ್ಯಗುಣತನದಿಂದ ಇಲ್ಲ ಮತ್ತು ಒಂದು ಪರ್ಯಾಯವು ತನ್ನತನದಿಂದ ಇದೆ ಮತ್ತು ಬೇರೆ ಪರ್ಯಾಯತನದಿಂದ ಇಲ್ಲ. ಇನ್ನು ಒಂದು ಪರ್ಯಾಯದಲ್ಲಿ ಕೂಡ ಅನಂತ ಅವಿಭಾಗ ಪ್ರತಿಚ್ಛೇದಗಳಿವೆ ಅವುಗಳಲ್ಲಿ ಕೂಡ ಅನೇಕತೆಯಿದೆ. ಒಂದೊಂದು ಪರ್ಯಾಯದಲ್ಲಿ ಅನಂತ ಸಪ್ತಭಂಗಿಗಳು ಸಂಭವಿಸುತ್ತವೆ. ಈಗ ಸ್ಯಾದ್ವಾದಕ್ಕೆ ಪ್ರತಿಯಾಗಿ ನಾಲ್ಕೂ ಕಡೆಗೆ ವಾದವು ನಡೆಯುತ್ತಿದೆ. ತನ್ನ ಪರ್ಯಾಯವು ತನ್ನಿಂದ ಆಗುತ್ತದೆ ಮತ್ತು ಪರದಿಂದ ಕೂಡ ಆಗುತ್ತದೆಯೆಂದು ಅವರು ಹೇಳುತ್ತಾರೆ, ಆದರೆ ಅದು ಅನೇಕಾಂತವಲ್ಲ. ತನ್ನಿಂದ ಆಗುತ್ತದೆ ಮತ್ತು ಪರದಿಂದ ಆಗುವುದಿಲ್ಲವೆಂಬುದು ಅನೇಕಾಂತವಿದೆ ಪರದಿಂದ ಆಗುತ್ತದೆಯೆಂದು ವ್ಯವಹಾರದಿಂದ ಹೇಳಬಹುದು, ಆದರೆ ಪರದಿಂದ ಆಗುವುದಿಲ್ಲವೆಂದು ಮನ್ನಿಸುವುದು ಅದು ಅನೇಕಾಂತವಿದೆ.

ಪ್ರತಿಯೊಂದು ದ್ರವ್ಯದ ಸ್ವತಂತ್ರತೆಯಿದೆಯೆಂಬ ಮಾತನ್ನು ಒಪ್ಪುವುದಿಲ್ಲ ಮತ್ತು ಕರ್ಮದಿಂದ ವಿಕಾರವಾಗುವುದು, ನಿಮಿತ್ತದಿಂದ ಉಪಾದಾನದಲ್ಲಿ ಕಾರ್ಯವಾಗುವುದೆಂದು ಎರಡು ದ್ರವ್ಯಗಳ ಮಿಶ್ರಣ ಮಾಡುತ್ತಿರುವವರು ಮೂಢರಿದ್ದಾರೆ. ಕರ್ಮದ ಕಾರಣದಿಂದ ಆತ್ಮನು ಪರಿಣಮಿಸುವುದಿಲ್ಲ ಮತ್ತು ಒಂದು ಗುಣವು ಇನ್ನೊಂದು ಗುಣರೂಪವಾಗಿ ಆಗುವುದಿಲ್ಲ ಅದಕ್ಕಾಗಿ ಬೇರೆ ಗುಣದ ಕಾರಣದಿಂದ ಪರಿಣಮಿಸುವುದಿಲ್ಲ. ದ್ರವ್ಯವು ಸಾಮಾನ್ಯವಿದೆ ಮತ್ತು ಗುಣ-ಪರ್ಯಾಯಗಳು ವಿಶೇಷವಿವೆ. ದ್ರವ್ಯದ ವಿಶೇಷತೆಯು ಪರದಿಂದಿದೆಯೆನ್ನುವಂತಿಲ್ಲ, ನಿಮಿತ್ತದ ಕಾರಣ ಜೀವದ ವಿಶೇಷತೆಯಿಲ್ಲ. ಪರಮಾಣುವಿನ ಪರ್ಯಾಯವು ಬದಲಾಗುತ್ತದೆ ಅದು ಪರಮಾಣುವಿನ ವಿಶೇಷತೆಯನ್ನು ತಿಳಿಸುತ್ತದೆ. ಚಿನ್ನದ ಬಳೆ, ಕುಂಡಲ ಮೊದಲಾದ ಪರ್ಯಾಯಗಳು ಮತ್ತು ಅದರ ಸ್ನಿಗ್ಧತೆ, ಹಳದೀತನ ಮೊದಲಾದ ಗುಣಗಳು ಚಿನ್ನದ ವಿಶೇಷತೆಯನ್ನು ತಿಳಿಸುತ್ತವೆ. ಚಿನ್ನವಿದೆ ಅದಕ್ಕಾಗಿ ಆ ವಿಶೇಷತೆಗಳು ಇವೆಯೆನ್ನುವಂತಿಲ್ಲ. ಯಾವುದೇ ವಸ್ತುವು ಬದಲಾಗುವ ಸಮಯದಲ್ಲಿ ಅದು ಸಾಮಾನ್ಯತನದಿಂದಿದ್ದು ವಿಶೇಷತನವಾಗುತ್ತದೆಯೆಂದು ತಿಳಿಸಿಕೊಡಲಾಗಿದೆ. ನವಿಲುಗರಿಯ ಅವಸ್ಥೆಯು ಮೇಲೆ-ಕೆಳಗೆ ಆಗುತ್ತದೆ ಆ ವಿಶೇಷತೆಯು ಗರಿಯ ಸಾಮಾನ್ಯತೆಯನ್ನು ಕಾಯ್ದುಕೊಂಡು ಆಗುತ್ತದೆ, ಮತ್ತು ಆ ವಿಶೇಷತೆಯು ಸಾಮಾನ್ಯತೆಯನ್ನು ತಿಳಿಸಿಕೊಡುತ್ತದೆ ಆದರೆ ಕೈಯು ಇತ್ತೆಂದು ಅದನ್ನು ತಿಳಿಸುವುದಿಲ್ಲ ಅದಕ್ಕಾಗಿ ಕೈಯ ಕಾರಣದಿಂದ ಆ ನವಿಲುಗರಿಯ ಪಿಂಛಿ ಮೇಲಕ್ಕೇಳಲಿಲ್ಲ ಆದರೆ ಸಾಮಾನ್ಯವಿತ್ತೆಂದು ವಿಶೇಷತೆಯಿದೆ.

ದ್ರವ್ಯದ ಜೊತೆಗಿರುವಂಥ ತ್ರಿಕಾಲೀ ಅವಿನಾಶೀ ಶಕ್ತಿಯಿದೆ ಅದಂತೂ ಗುಣವಿದೆ ಮತ್ತು ಕ್ರಮದಿಂದ ಬದಲಾಗಿ ಯಾವ ವಿಶೇಷತೆಯಾಗುತ್ತದೆ ಅದು ಪರ್ಯಾಯವಿದೆ, ಅದರಿಂದ ದ್ರವ್ಯದ ವಿಶೇಷತೆಯ ಸಿದ್ಧಿಯಾಗುತ್ತದೆ, ಪರದಿಂದ ಆ ಪರ್ಯಾಯವಾಗುವುದಿಲ್ಲ. ಜೈನ ಸಿದ್ಧಾಂತ ಪ್ರವೇಶಿಕೆಯಲ್ಲಿ ಬಂಧದ ವ್ಯಾಖ್ಯೆಮಾಡುತ್ತ - ಅನೇಕ ವಸ್ತುಗಳಲ್ಲಿ ಅನೇಕತೆಯ ಜ್ಞಾನ ಮಾಡಿಸುವಂಥ ಸಂಬಂಧ ವಿಶೇಷವನ್ನು ಬಂಧವೆಂದು ಹೇಳುತ್ತಾರೆ. ಅಲ್ಲಿ ನಿಮಿತ್ತದ ಮತ್ತು ರಾಗದ ಜ್ಞಾನ ಮಾಡಿಸುವ ಮಾತಿದೆ. ರಾಗದ ಪರ್ಯಾಯವು ಅದು ಆತ್ಮದ್ರವ್ಯದ ವಿಶೇಷತೆಯಿದೆಯೆಂದು ತಿಳಿಸಿದ್ದಾರೆ. ಅದು ಜೀವದ್ರವ್ಯದ ಅನೇಕತೆಯನ್ನು ತಿಳಿಸಿಕೊಟ್ಟಿದೆ. ಜ್ಞಾನ-ದರ್ಶನ ಮೊದಲಾದ ಗುಣಗಳ ಭೇದಕೂಡ ಜೀವದ್ರವ್ಯದ ವಿಶೇಷತೆಯನ್ನು ಸಿದ್ಧ ಮಾಡುತ್ತದೆ. ಈ ಸ್ವತಂತ್ರತೆಯ ಒಂದು ಬೀಗದ ಕೈ ಉಪಯೋಗಿಸಿದರೆ ಇಡೀ ಹದಿನಾಲ್ಕು ಬ್ರಹ್ಮಾಂಡದ ಬೀಗಗಳು ಕಳಚಿಬೀಳುವಂತಿವೆ.

ದ್ರವ್ಯದಲ್ಲಿ ಗುಣ ಮತ್ತು ಪರ್ಯಾಯಗಳು ಕಥಂಚಿತ್ ಪ್ರಕಾರದಿಂದ ಅಭೇದರೂಪವಿವೆ ಮತ್ತು ಕಥಂಚಿತ್ ಪ್ರಕಾರದಿಂದ ಭೇದರೂಪ ಕೂಡ ಇವೆ. ಸಂಜ್ಞೆ, ಸಂಖ್ಯೆ, ಲಕ್ಷಣ ಮತ್ತು ಪ್ರಯೋಜನದಿಂದ ಭೇದರೂಪವಿವೆ, ಆದರೆ ಪ್ರದೇಶಭೇದದಿಂದ ಭೇದವಿಲ್ಲ ಏಕರೂಪವಿವೆ. ದ್ರವ್ಯದ ಹೆಸರು ಆತ್ಮವಿದೆ ಮತ್ತು ಗುಣದ ಹೆಸರು ಜ್ಞಾನಾದಿಯಿದೆ. ದ್ರವ್ಯವು ಒಂದಿದೆ ಮತ್ತು ಗುಣ - ಪರ್ಯಾಯಗಳು ಅನೇಕವಿವೆ. ಹೀಗೆ ಎರಡರ ಲಕ್ಷಣ ಹಾಗೂ ಪ್ರಯೋಜನ ಕೂಡ ಬೇರೆಯಿದೆ, ಅದಕ್ಕಾಗಿ ಅಪೇಕ್ಷೆಯಿಂದ ದ್ರವ್ಯ ಮತ್ತು ಗುಣ-ಪರ್ಯಾಯಗಳಲ್ಲಿ ಭೇದವಿದೆ. ಆದರೆ ವಸ್ತುವಂತೂ ವಸ್ತುತ್ವದಿಂದಿದೆ ಅದರಲ್ಲಿ

ಭೇದವಿಲ್ಲ. ದ್ರವ್ಯ ಮತ್ತು ಗುಣಪರ್ಯಾಯಗಳಲ್ಲಿ ಸರ್ವಥಾ ಭೇದವಿಲ್ಲ ಮತ್ತು ಸರ್ವಥಾ ಅಭೇದ ಕೂಡ ಇಲ್ಲ.

ಸರ್ವಥಾ ಭೇದವಿದ್ದರೆ ಗುಣ ಮತ್ತು ಪರ್ಯಾಯ ಎರಡನೆಯವಾಗಿ ಹೋಗುತ್ತವೆ ಮತ್ತು ಸರ್ವಥಾ ಅಭೇದವಿದ್ದರೆ ಗುಣವೇ ದ್ರವ್ಯವಾಗಿ ಹೋಗುವುದು ಅಥವಾ ಪರ್ಯಾಯವೇ ದ್ರವ್ಯವಾಗಿ ಹೋಗುವುದು ಆದರೆ ಹೀಗೆ ಇಲ್ಲ.

ವಸ್ತುವಂತೂ ತ್ರಿಕಾಲವಿದೆ ಮತ್ತು ಅದಂತೂ ಸ್ವತಂತ್ರವಿದೆ, ವಸ್ತುವು ಪರಾಧೀನವಿಲ್ಲ, ಆದರೆ ಅದರ ಪರ್ಯಾಯವು ಪರಾಧೀನವಿದೆ ಮತ್ತು ಅದು ಪರದ ಕಾರಣದಿಂದ ಆಗುತ್ತದೆಯೆಂದು ಯಾರಾದರೂ ಹೇಳಿದರೆ ಅದನ್ನು ಇಲ್ಲಿ ನಿರಾಕರಿಸಬೇಕಾಗುವುದು, ಏಕೆಂದರೆ ಶಾಸ್ತ್ರದಲ್ಲಿ ಹೇಳಿದ ಮಾತನ್ನು ಅವನು ತಿಳಿದುಕೊಂಡಿಲ್ಲ. ಒಂದು ಸತ್ ಲಕ್ಷಣದಲ್ಲಿ ಉತ್ಪಾದ-ವ್ಯಯ-ಧ್ರುವ ಮತ್ತು ಗುಣ-ಪರ್ಯಾಯ ಇವೆರಡೂ ಲಕ್ಷಣಗಳು ಗರ್ಭಿತವಿವೆ, ಒಂದರಲ್ಲಿ ಮೂರು ಸಮಾವೇಶವಾಗಿ ಹೋಗುತ್ತವೆ. ಏಕೆಂದರೆ ಯಾವ 'ಸತ್' ಇದೆ ಅದು ನಿತ್ಯ ಮತ್ತು ಅನಿತ್ಯ ಸ್ವರೂಪವಿದೆ. ನಿತ್ಯಸ್ವಭಾವದಲ್ಲಿ ಧ್ರುವತೆ ಬಂದರೆ ಅನಿತ್ಯ ಸ್ವಭಾವದಲ್ಲಿ ಉತ್ಪಾದ-ವ್ಯಯಗಳು ಬಂದುಬಿಡುತ್ತವೆ. ಮತ್ತು ಹೀಗೆ ಉತ್ಪಾದ-ವ್ಯಯ ಮತ್ತು ಧ್ರುವವನ್ನು ಸತ್‌ದ ಲಕ್ಷಣವೆಂದು ಹೇಳುವಲ್ಲಿ ಗುಣ-ಪರ್ಯಾಯ ಲಕ್ಷಣ ಕೂಡ ಅದರಲ್ಲಿ ಬಂದುಹೋಗುತ್ತದೆ. ಮತ್ತು ಹೀಗೆ ಉತ್ಪಾದ-ವ್ಯಯ-ಧ್ರುವಲಕ್ಷಣ ಹೇಳುವಲ್ಲಿ ಸತ್ ಲಕ್ಷಣ ಬರುತ್ತದೆ. ಮತ್ತು ಗುಣಪರ್ಯಾಯ ಲಕ್ಷಣ ಕೂಡ ಬರುತ್ತದೆ ಮತ್ತು ಗುಣ-ಪರ್ಯಾಯ ಲಕ್ಷಣ ಹೇಳುವುದರಿಂದ ಸತ್ ಲಕ್ಷಣ ಬರುತ್ತದೆ, ಮತ್ತು ಉತ್ಪಾದ-ವ್ಯಯ-ಧ್ರುವ ಲಕ್ಷಣ ಕೂಡ ಬರುತ್ತದೆ, ಏಕೆಂದರೆ ದ್ರವ್ಯವು ನಿತ್ಯಾನಿತ್ಯವಿದೆ. ಲಕ್ಷಣ ಕೂಡ ನಿತ್ಯ-ಅನಿತ್ಯ ಸ್ವರೂಪದ ಸೂಚನೆ ಮಾಡುತ್ತದೆ. ಈ ಕಾರಣದಿಂದ ಈ ಮೂರೂ ಲಕ್ಷಣಗಳಲ್ಲಿ ಸಾಮಾನ್ಯ-ವಿಶೇಷತೆಯಿಂದ ಭೇದವಿದೆ ಆದರೆ ನಿಜವಾಗಿ ವಸ್ತುವಿನಲ್ಲಿ ಭೇದವಿಲ್ಲ .

ಈಗ ದ್ರವ್ಯಾರ್ಥಿಕ, ಪರ್ಯಾಯಾರ್ಥಿಕನಯದ ಭೇದದಿಂದ ದ್ರವ್ಯ ಮತ್ತು ಲಕ್ಷಣದಲ್ಲಿ ಭೇದವನ್ನು ತಿಳಿಸಿದ್ದಾರೆ. ನೋಡುವ ದೃಷ್ಟಿಯಿಂದ ಮಾತು ಆಡಿದ್ದಾರೆ. ವಾಚ್ಯವನ್ನು ನೋಡುವುದು ಜ್ಞಾನವಿದೆ, ಅದನ್ನು ತಿಳಿಸಿಕೊಟ್ಟಿದ್ದಾರೆ,-

ಉಪ್ಪತ್ತೀ ವ ವಿಣಾಸೋ ದವ್ವಸ್ಸ ಯ ಣತ್ಥಿ ಅತ್ಥಿ ಸಬ್ಭಾವೋ ।
ವಿಗಮುಪ್ಪಾದಧುವತ್ತಂ ಕರೇಂತಿ ತಸ್ಸೇವ ಪಜ್ಜಾಯಾ ॥೧೧॥

**ದ್ರವ್ಯಕೆ ಉತ್ಪಾದವಿಲ್ಲವೆ ನಾಶತಾನಿಲ್ಲ ಅದಕೆ ಸದ್ಭಾವವಿರುವುದು ।**
**ದ್ರವ್ಯದ ಪರ್ಯಾಯಗಳುಮಾತ್ರ, ಉತ್ಪಾದವ್ಯಯಧ್ರೌವ್ಯಗಳನು ಮಾಡುವವು ॥೧೧॥**

**ಅರ್ಥ :-** ಅನಾದಿನಿಧನ ತ್ರಿಕಾಲ ಅವಿನಾಶೀ ಗುಣಪರ್ಯಾಯಸ್ವರೂಪವಾದ ದ್ರವ್ಯದ ಉತ್ಪತ್ತಿ ಅಥವಾ ನಾಶವಾಗುವುದಿಲ್ಲ ಮತ್ತು ದ್ರವ್ಯದ ಸ್ವರೂಪವು ಸತ್ತಾ ಮಾತ್ರವಿದೆ ಅದು ನಿತ್ಯ-ಅನಿತ್ಯ ಪರಿಣಾಮದಿಂದ ಉತ್ಪಾದ-ವ್ಯಯ-ಧ್ರುವವನ್ನು ಮಾಡುತ್ತದೆ. ಯಾವುದೇ ದ್ರವ್ಯದ-ಆತ್ಮನ ಅಥವಾ ಪರಮಾಣುವಿನ ನಾಶವಾಗುವುದಿಲ್ಲ. ದ್ರವ್ಯವು ಆದಿ ಮತ್ತು ಅಂತ್ಯರಹಿತವಿದೆ. ಮತ್ತು ಅದು ಅವಿನಾಶಿಯಿದೆ. ಆ ದ್ರವ್ಯದ ಸ್ವರೂಪವು ಅಸ್ತಿತ್ವಮಾತ್ರವಿದೆ, ನಿತ್ಯವು ಅದು ಧ್ರುವ ಮತ್ತು ಅನಿತ್ಯವು ಅದು ಉತ್ಪಾದ-ವ್ಯಯವಿದೆ, ಆ ಉತ್ಪಾದ-ವ್ಯಯಗಳು ಪರದ ಕಾರಣದಿಂದ ಆಗುವುದಿಲ್ಲ .

**ಭಾವಾರ್ಥ :-** ಅನಾದಿ, ಅನಂತ, ಅವಿನಾಶೀ, ಟಂಕೋತ್ಕೀರ್ಣ ಗುಣಪರ್ಯಾಯಸ್ವರೂಪ ಯಾವ ದ್ರವ್ಯವಿದೆ ಆ ದ್ರವ್ಯದ ಉತ್ಪತ್ತಿ ಅಥವಾ ವಿನಾಶವಾಗುವುದಿಲ್ಲ , ಆದರೆ ಆ ದ್ರವ್ಯವು ಕೆಲವು ಪರಿಣಾಮಗಳಿಂದ ಅವಿನಾಶಿಯಿದೆ ಮತ್ತು ಕೆಲವು ಪರಿಣಾಮಗಳಿಂದ ವಿನಾಶಿಯಿದೆ. ಈ ಕಾರಣಗಳಿಂದ ದ್ರವ್ಯಾರ್ಥಿಕನಯದಿಂದಂತೂ ದ್ರವ್ಯವು ಧ್ರುವಸ್ವರೂಪವಿದೆ

ಮತ್ತು ಪರ್ಯಾಯಾರ್ಥಿಕನಯದಿಂದ ಉತ್ಪನ್ನ-ವಿನಾಶಿಕವಿದೆಯೆಂದು ಎರಡು ಮಾತುಗಳು ಸಿದ್ಧವಾದವು. ಈ ಪ್ರಕಾರ ದ್ರವ್ಯಾರ್ಥಿಕ-ಪರ್ಯಾಯಾರ್ಥಿಕವೆಂಬೆರಡು ನಯಗಳ ಭೇದದಿಂದ ದ್ರವ್ಯದ ಸ್ವರೂಪವು ಬಾಧೆಯಿಂದ ರಹಿತವಿದೆಯೆಂಬುದು ಸಿದ್ಧವಾಗುತ್ತದೆ. ಹೀಗೆ ಅನೇಕಾಂತಸ್ವರೂಪದ ದ್ರವ್ಯವನ್ನು ಮನ್ನಿಸುವುದು ಅದು ಯೋಗ್ಯವಿದೆ.

ಆತ್ಮ ಮತ್ತು ಪುದ್ಗಲ ಮೊದಲಾದ ಆರು ದ್ರವ್ಯಗಳನ್ನು ಭಗವಂತರು ನೋಡಿದ್ದಾರೆ. ಆ ದ್ರವ್ಯಗಳಲ್ಲಿ ಗುಣ ಮತ್ತು ಪರ್ಯಾಯಗಳಿವೆ. ತ್ರಿಕಾಲ ಸಹವರ್ತಿ ಪರಿಣಾಮವನ್ನು ಇಲ್ಲಿ ಗುಣವೆಂದು ಹೇಳಿದೆ ಮತ್ತು ಸಮಯ ಸಮಯಕ್ಕೆ ಉತ್ಪಾದ-ವ್ಯಯವಾಗುತ್ತಿರುವುದು ಅದು ಪರ್ಯಾಯವಿದೆ. ಎಂದರೆ ಪ್ರತಿಯೊಂದು ದ್ರವ್ಯವು ಯಾವಾಗಲೂ ಇರುವ ಅಪೇಕ್ಷೆಯಿಂದ ನಿತ್ಯವಿದೆ ಮತ್ತು ಪರ್ಯಾಯದೃಷ್ಟಿಯಿಂದ ಅನಿತ್ಯ ಹಾಗೂ ನಾಶಶೀಲವಿದೆಯೆಂಬ ಮಾತು ಸಿದ್ಧವಾಯಿತು. ಈಗ ದ್ರವ್ಯದೃಷ್ಟಿಯಿಂದ ಆತ್ಮನು ಧ್ರುವನಿದ್ದಾನೆ ಎಂದರೆ ಇವನ ಪರ್ಯಾಯಗಳು ಬೇರೆ ಉಳಿದುಬಿಡುತ್ತವೆಯೆನ್ನುವಂತಿಲ್ಲ, ಆದರೆ ಪರ್ಯಾಯದೃಷ್ಟಿಯಿಂದ ಅದೇ ದ್ರವ್ಯವು ಧ್ರುವತನದಿಂದಿದ್ದು ಬದಲಾಗುತ್ತದೆ. ಬೀಸುವಕಲ್ಲಿನ ಕೆಳಗಿನ ಭಾಗವು ಸ್ಥಿರವಿರುತ್ತದೆ ಮತ್ತು ಮೇಲಿನ ಭಾಗವು ತಿರುಗುತ್ತದೆ ಅದರಂತೆ ಗುಣಗಳು ತ್ರಿಕಾಲವಿರುತ್ತವೆ ಮತ್ತು ಪರ್ಯಾಯಗಳು ಬದಲಾಗುತ್ತವೆನ್ನುವಂತಿಲ್ಲ . ನಿತ್ಯತೆಯ ಸಂಬಂಧವಿಟ್ಟುಕೊಳ್ಳದೆ ಅನಿತ್ಯತೆಯು ಬೇರೆಯೇ ಇರುತ್ತದೆಯೆಂದಿಲ್ಲ . ದ್ರವ್ಯಾರ್ಥಿಕನಯದಿಂದ ನಿತ್ಯವಾಗಿದ್ದರೂ ಕೂಡ ಪರ್ಯಾಯಾರ್ಥಿಕನಯದಿಂದ ಅದೇ ದ್ರವ್ಯವು ಅನಿತ್ಯ ಕೂಡ ಆಗುತ್ತದೆ. ಹಳೆಯ ಪರ್ಯಾಯದ ವ್ಯಯ ಮತ್ತು ಹೊಸ ಪರ್ಯಾಯದ ಉತ್ಪಾದ ಈ ಅಪೇಕ್ಷೆಯಿಂದ ವಿಸದೃಶತೆಯಿದೆ ಮತ್ತು ಧ್ರುವತ್ವದ ಅಪೇಕ್ಷೆಯಿಂದ ಸದೃಶತೆಯಿದೆ. ಕುಂಡಲ, ಬಳೆ ಮೊದಲಾದ ಅವಸ್ಥೆಯು ಚಿನ್ನದಿಂದ ಪೂರ್ಣ ಭಿನ್ನವಾಗಿದೆಯೆಂಬಂತಿಲ್ಲ , ಹಳದೀತನ, ಸ್ನಿಗ್ಧತೆ ಮೊದಲಾದವು ಧ್ರುವತನದಿಂದಿದ್ದು ಚಿನ್ನವು ಕುಂಡಲ, ಬಳೆ ಮೊದಲಾದ ಪರ್ಯಾಯರೂಪದಿಂದ ಆಗಿದೆ. ಅದರಂತೆ ಆತ್ಮದ್ರವ್ಯವು ಸದೃಶತನದಿಂದಿದ್ದು ಮಿಥ್ಯಾತ್ವ ! ಸಮ್ಯಕ್ತ್ವರೂಪದಿಂದ ಆಗುತ್ತದೆ, ಆದರೆ ಇದರ ಅರ್ಥವು ಒಂದು ಸಮಯದಲ್ಲಿ ಪೂರ್ಣದ್ರವ್ಯವು ಬಂದುಬಿಡುತ್ತದೆ ಎಂದಲ್ಲ . ಹೀಗೆ ತಿಳಿದುಕೊಂಡರೆ ಪರದಲ್ಲಿನ ಲಕ್ಷ್ಯವು ಹೊರಟುಹೋಗಿ ತನ್ನಡೆಗೆ ಪ್ರವೃತ್ತವಾದರೆ ಸ್ವಭಾವದೃಷ್ಟಿಯಾಗುವುದು.

ಯಾರಿಗೆ ಧರ್ಮಮಾಡುವುದಿದೆ ಅವರು ಮೊದಲು ಆತ್ಮನನ್ನು ತಿಳಿದುಕೊಳ್ಳಬೇಕು. ಇಲ್ಲಿ ಆತ್ಮನ ಮೂರು ಲಕ್ಷಣಗಳ ವರ್ಣನೆ ಮಾಡಿದೆ. ವಸ್ತು ಅದು ಸತ್ ಇದೆ. ಎಂದರೆ ಸತ್ ಗುಣವಿದೆ ಮತ್ತು ವಸ್ತು ಗುಣಿ ಇದೆ. ಇತರ ಉತ್ಪಾದ-ವ್ಯಯ-ಧ್ರುವಲಕ್ಷಣ ಕಲ್ಪಿಸಿಕೊಂಡಿತ್ತು ಸತ್ತಾ ಸಾಮಾನ್ಯ ಲಕ್ಷಣವಿದೆ ಮತ್ತು ಉತ್ಪಾದ-ವ್ಯಯ-ಧ್ರುವವು ವಿಶೇಷ ಲಕ್ಷಣವಿದೆ. ಮೂರನೆಯ ಗುಣ-ಪರ್ಯಾಯಲಕ್ಷಣವು ದ್ರವ್ಯದ್ದಿದೆ. ನಿತ್ಯದೃಷ್ಟಿಯ ಅಪೇಕ್ಷೆಯಿಂದ ದ್ರವ್ಯಾರ್ಥಿಕ ನಯದಿಂದ ದ್ರವ್ಯವು ನಿತ್ಯವಿದೆ ಮತ್ತು ಪರ್ಯಾಯಾರ್ಥಿಕನಯದಿಂದ ಬದಲಾಗುವ ಅಪೇಕ್ಷೆಯಿಂದ ಅನಿತ್ಯವಿದೆ ಈ ಎರಡು ನಯಗಳ ಪಕ್ಷದಿಂದ ವಸ್ತುವನ್ನು ನಿರ್ಬಾಧವಾಗಿ ಸಾಧಿಸಬಹುದಾಗಿದೆ.

ಶರೀರವು ನಿರೋಗಿಯಿದ್ದರೆ ಒಳಿತು ಮತ್ತು ಇದರೊಳಗೆ ರೋಗವೇಕಾಗುತ್ತದೆಯೆಂದರೆ ಪುದ್ಗಲವು ಸ್ಥಿರವಾಗಿದ್ದು ಅದರ ಅವಸ್ಥೆಯು ಬದಲಾಗುತ್ತದೆ ಅದು ಅದರ ಸ್ವಭಾವವಿದೆ. ಅಸಾತಾಕರ್ಮದ ನಿಮಿತ್ತವಿದೆ ಅದಕ್ಕಾಗಿ ರೋಗವಾಗಿದೆಯೆಂಬ ಮಾತನ್ನು ಸ್ವೀಕರಿಸಿಲ್ಲ ಆತ್ಮ ಮತ್ತು ಪುದ್ಗಲ ಮೊದಲಾದ ಎಲ್ಲ ದ್ರವ್ಯಗಳು ಎರಡು ದೃಷ್ಟಿಯಿಂದ ನಿಶ್ಚಿತವಾಗುತ್ತವೆ. ಒಂದು ಸ್ಥಿರವಿರುವ ಸ್ವಭಾವವನ್ನು ನೋಡುವ ದೃಷ್ಟಿ ಮತ್ತು ಎರಡನೆಯದು ಬದಲಾಗುವ ಸ್ವಭಾವವನ್ನು ನೋಡುವ ದೃಷ್ಟಿಯಿಂದ ವಸ್ತುವನ್ನು ಮನ್ನಿಸದಿದ್ದರೆ ವಸ್ತುವಿನ ಯಥಾರ್ಥ ಸ್ವರೂಪವು ಸಿದ್ಧವಾಗುವುದಿಲ್ಲ .

ಔಷಧ ಸ್ವೀಕರಿಸದಿದ್ದರೆ ಶರೀರದ ಅವಸ್ಥೆಯು ಸರಿಯಾಗಿ ಉಳಿಯುವುದಿಲ್ಲ ಮತ್ತು ಔಷಧ ಸ್ವೀಕರಿಸಿದರೆ ಹಣದ ಬಡ್ಡಿ ಸರಿಯಾಗಿದೊರಕಬಹುದೆಂದು ಮನ್ನಿಸುವವನು ಮೂಢಮಿಥ್ಯಾದೃಷ್ಟಿಯಿದ್ದಾನೆ ಏಕೆಂದರೆ ಅವನು ವಸ್ತುವಿನ ಸ್ವಭಾವವನ್ನು ತಿಳಿಯುವುದಿಲ್ಲ . ಸಮಯ ಸಮಯಕ್ಕೆ ಶರೀರದ ಬದಲಾಗುವ ಒಂದು ಪಕ್ಷ ಮತ್ತು ಶರೀರದ (ಪುದ್ಗಲದ)

ಸ್ಥಿರವಿರುವ ಇನ್ನೊಂದು ಪಕ್ಷವೆಂದು ಹೀಗೆ ಎರಡು ಪಕ್ಷಗಳಿವೆ. ಆ ಶರೀರವು ಪುದ್ಗಲ ಪರಮಾಣುವಿನಿಂದಿದೆ, ಆತ್ಮನ ಕಾರಣದಿಂದಲ್ಲ ಸ್ಥಿರವಾಗಿರುವ ಪಕ್ಷವು ತನ್ನಿಂದಿದೆ ಮತ್ತು ಬದಲಾಗುವ ಪಕ್ಷವು ಇತರದಿಂದಿದೆಯೆಂದಿಲ್ಲ . ಏಕೆಂದರೆ ಒಬ್ಬ ಮನುಷ್ಯನು ಪಥ್ಯದ ಪ್ರಕಾರ ಆಹಾರ ಸ್ವೀಕರಿಸಿದರೂ ಅವನಿಗೆ ರೋಗವಾಗುತ್ತದೆ ಮತ್ತು ಇನ್ನೊಬ್ಬ ಮನುಷ್ಯನು ಅಪಥ್ಯ ಆಹಾರ ಸ್ವೀಕರಿಸಿದರೂ ಅವನಿಗೆ ರೋಗವಾಗುವುದಿಲ್ಲ . ಅದಕ್ಕಾಗಿ ಶರೀರದ ಅವಸ್ಥೆಯು ಸ್ವತಂತ್ರವಿದೆಯೆಂಬುದು ನಿಶ್ಚಿತವಾಗುತ್ತದೆ. ನಿಜವಾದ ಜ್ಞಾನಮಾಡಿಕೊಳ್ಳಲಪೇಕ್ಷಿಸುವವನು ವಸ್ತುವನ್ನು ಅನೇಕಾಂತವೆಂದು ಮನ್ನಿಸುವುದು ಯಥಾರ್ಥವಿವೆ.

ಶರೀರವು ಜಗತ್ತಿನ ವಸ್ತುವಿದೆ. ಅದರ ಸಾಮಾನ್ಯ ಅಂಶವು ಸ್ಥಿರವಿರುತ್ತದೆ ಮತ್ತು ವಿಶೇಷ ಅಂಶವು ಬದಲಾಗುತ್ತಿರುತ್ತದೆ. ಆ ತ್ರಿಕಾಲೀ ಮತ್ತು ವರ್ತಮಾನ ಎರಡೂ ಅಂಶಗಳಿಂದ ವಸ್ತುವಿದೆಯೆಂಬುದನ್ನು ಮನ್ನಿಸದಿದ್ದರೆ ವಸ್ತುವು ಸಿದ್ಧವಾಗುವುದಿಲ್ಲ ಮತ್ತು ಜ್ಞಾನ ಕೂಡ ಸತ್ಯವಾಗುವುದಿಲ್ಲ , ಶಬ್ದಸಮಯದಿಂದ ಆತ್ಮನ ಜ್ಞಾನವಾಗುತ್ತದೆನ್ನುವಂತಿಲ್ಲ. ಭಾಷೆ ಜಡವಿದ್ದು ಅದು ಪರಮಾಣುವಿದೆ ಅದರಲ್ಲಿ ತ್ರಿಕಾಲ ಸಾಮಾನ್ಯ ಅಂಶ ಮತ್ತು ವರ್ತಮಾನ ಪರ್ಯಾಯ ಅಂಶವಿದೆ, ಆತ್ಮನಲ್ಲಿ ಕೂಡ ಸಾಮಾನ್ಯ ಅಂಶ ಮತ್ತು ವಿಶೇಷ ಅಂಶವಿದೆ. ಈಗ ಆತ್ಮನ ವಿಶೇಷ ಅಂಶವು ಪರಮಾಣುವಿನ ವಿಶೇಷ ಅಂಶದಿಂದ ಆಗಿದೆಯೆಂದು ಮನ್ನಿಸಹೋದರೆ ವಸ್ತುವಿನ ಯಾವ ಸಾಮಾನ್ಯ-ವಿಶೇಷ ಸ್ವರೂಪವಿದೆ ಆ ಮಾತು ಉಳಿಯುವುದಿಲ್ಲ .

ಮೃತ್ತಿಕೆಯಿಂದ ಕೊಡವಾಗಿದೆಯೆಂಬುದನ್ನು ಎರಡು ದೃಷ್ಟಿಯಿಂದ ನೋಡಬೇಕಾಗುವುದು ಕೊಡವಾದುದನ್ನು ಪರ್ಯಾಯದೃಷ್ಟಿಯಿಂದ ನೋಡಬೇಕು ಮತ್ತು ಮೃತ್ತಿಕೆಯು ಸ್ಥಿರವಿರುವುದನ್ನು ದ್ರವ್ಯದೃಷ್ಟಿಯಿಂದ ನೋಡಬೇಕು, ಹೀಗೆ ನೋಡುವುದರಿಂದ ದ್ರವ್ಯ ಮತ್ತು ಪರ್ಯಾಯಗಳು ಮೃತ್ತಿಕೆಯಿಂದ ಸಿದ್ಧವಾಗುವವು. ಕುಂಭಕಾರನಿಂದ ಕೊಡವಾಯಿತೆಂಬುದು ಸಿದ್ಧವಾಗುವುದಿಲ್ಲ . ಆತ್ಮನು ತ್ರಿಕಾಲ ಇರುವಂಥವನು. ಯಾವಾಗಲೂ ಇರುವಂಥ ಪದಾರ್ಥವಿದ್ದಾನೆ, ಅದು ದ್ರವ್ಯದೃಷ್ಟಿಯಿಂದಿದೆ ಮತ್ತು ಸಮಯ ಸಮಯಕ್ಕೆ ಬದಲಾಗುತ್ತಾನೆ ಅದು ಪರ್ಯಾಯದೃಷ್ಟಿಯಿಂದಿದೆ. ಈ ಅನೇಕಾಂತಸ್ವರೂಪದ ವಸ್ತುವನ್ನು ತಿಳಿದುಕೊಂಡು ತ್ರಿಕಾಲ ಧ್ರುವಸ್ವಭಾವದ ಲಕ್ಷ್ಯಮಾಡಿದರೆ ಪರ್ಯಾಯದ ಗೌಣತೆಯಾಗಿ ಹೋಗುವುದು ಮತ್ತು ಅಂತರ್ದೃಷ್ಟಿಯಾಗುವುದು. ಹೀಗೆ ವಸ್ತು ಸ್ವರೂಪವು ನಿರ್ದೋಷವಿದೆ, ಬೇರೆ ರೀತಿ ಮನ್ನಿಸುವುದು ಅದು ಸದೋಷವಿದೆ. ಸಾಮಾನ್ಯವು ತನ್ನ ಕಾರಣದಿಂದ ಮತ್ತು ವಿಶೇಷವು ಪರದ ಕಾರಣದಿಂದ ಆಗುತ್ತದೆಂದು ಮನ್ನಿಸಹೋದರೆ ನಿರ್ದೋಷತೆಯು ಉಳಿಯುವುದಿಲ್ಲ .

ದ್ರವ್ಯಾರ್ಥಿಕನಯದಿಂದ ಮತ್ತು ಪರ್ಯಾಯಾರ್ಥಿಕನಯದಿಂದ ವಸ್ತುವಿನಲ್ಲಿ ಭೇದವಾದರೂ ವಸ್ತುವು ಅಭೇದವಿದೆಯೆಂಬುದನ್ನು ತಿಳಿಸಿಕೊಟ್ಟಿದೆ ಕ್ಷಣ-ಕ್ಷಣಕ್ಕೆ ಪರ್ಯಾಯಗಳು ಬದಲಾಗುತ್ತವೆ ಮತ್ತು ವಸ್ತುವು ಸ್ಥಿರವಾಗಿ ಉಳಿಯುತ್ತದೆ. ಹೀಗೆ ಪ್ರತಿಯೊಂದು ವಸ್ತುವಿನ ಸ್ವತಂತ್ರ ಸ್ವರೂಪವಿದೆ. ಹೀಗೆ ಎರಡು ಭೇದವುಳ್ಳದ್ದು ವಸ್ತುವಿನ ಸ್ವರೂಪವಿದ್ದರೂ ಕೂಡ ವಸ್ತುವು ಅಭೇದವಿದೆಯೆಂಬುದನ್ನು ಈಗ ಹನ್ನೆರಡನೆಯ ಗಾಥೆಯಲ್ಲಿ ಹೇಳುತ್ತಾರೆ,-

ಪಜ್ಜಯವಿಜುದಂ ದವ್ವಂ ದವ್ವವಿಜುತ್ತಾ ಯ ಪಜ್ಜಯಾ ಣತ್ಥಿ ।
ದೋಣ್ಹಂ ಅಣಣ್ಣಭೂದಂ ಭಾವಂ ಸಮಣಾ ಪರೂವೇಂತಿ ॥೧೨॥

**ಪರ್ಯಾಯಗಳಿಲ್ಲದೆ ದ್ರವ್ಯವಿಲ್ಲ ದ್ರವ್ಯವಿಲ್ಲದೆ ಪರ್ಯಾಯಗಳು ತಾನಿಲ್ಲ ।**
**ಪರ್ಯಾಯ ದ್ರವ್ಯಗಳೆರಡಲಿ ಅನನ್ಯತೆಯ ಶ್ರಮಣ ಪೇಳಿಹರು ॥೧೨॥**

**ಅರ್ಥ ಃ-** ಪರ್ಯಾಯಗಳಿಲ್ಲದ ದ್ರವ್ಯವು ಮತ್ತು ದ್ರವ್ಯವಿಲ್ಲದ ಪರ್ಯಾಯಗಳು ಇರುವುದಿಲ್ಲ ; ಎರಡವುಗಳ

ಅನನ್ಯ ಭಾವವನ್ನು (ಅನನ್ಯತನವನ್ನು) ಶ್ರಮಣರು ಪ್ರರೂಪಣೆ ಮಾಡುತ್ತಾರೆ.

## ಪರ್ಯಾಯವಿಲ್ಲದೆ ದ್ರವ್ಯವಿರುವುದಿಲ್ಲ :

ಯಾವ ಆತ್ಮನಾಗಲಿ ಅಥವಾ ಪರಮಾಣುವಾಗಲಿ ಸೇಕಂದದ ಅಸಂಖ್ಯಾತದ ಒಂದು ಭಾಗದಲ್ಲಿ ಬದಲಾವಣೆ ಹೊಂದಿದಲ್ಲದೆ ಇರಲಾರದು. ಒಂದೊಂದು ಸಮಯದಲ್ಲಿ ಪರ್ಯಾಯವು ಮಾರ್ಪಡುತ್ತದೆ. ಅವಸ್ಥೆಯಿಲ್ಲದೆ ಪದಾರ್ಥವಿರುವುದಿಲ್ಲ . ಕುಂಭಕಾರನು ಕೊಡವನ್ನು ಮಾಡುತ್ತಾನೆಂದು ಮನ್ನಿಸಹೋದರೆ ಅವಸ್ಥೆಯಿಲ್ಲದೆ ದ್ರವ್ಯವಾಗುವುದೇನು ? ಏಕೆಂದರೆ ಕೊಡವು ಅದು ಮೃತ್ತಿಕೆಯ ಅವಸ್ಥೆಯಿದೆ ಅದನ್ನು ಕುಂಭಕಾರನು ಮಾಡುತ್ತಾನೆಂದು ಕೂಡ ಇಲ್ಲ ಮತ್ತು ರಾಗವು ಚಾರಿತ್ರಮೋಹಕರ್ಮದ ಉದಯದ ಕಾರಣದಿಂದೆಂದು ಮನ್ನಿಸಿದರೆ ಪರ್ಯಾಯವಿಲ್ಲದೆ ದ್ರವ್ಯವಾಗುವುದು ಅಂಶವಿಲ್ಲದೆ ಅಂಶಿಯಾಗುವುದು ಸ್ತ್ರಿ-ಪುತ್ರಾದಿಗಳ ಕಾರಣದಿಂದ ರಾಗವಾಗುತ್ತದೆಯೆಂದರೆ ರಾಗದ ಅವಸ್ಥೆಯು ಆತ್ಮನದಿದೆ ಅದನ್ನು ಪರದ ಕಾರಣದಿಂದೆಂದು ಮನ್ನಿಸಿದರೆ ಅವಸ್ಥೆಯಿಲ್ಲದೆ ಆತ್ಮನಾಗಿ ಬಿಡುವನು, ಗೋರಸವಿದೆ ಆದರೆ ಅದರದು ಹಾಲು ಮೊಸರಿನಂಥ ಯಾವ ಅವಸ್ಥೆಯೇ ಇಲ್ಲವೆಂದು ಯಾವನೋ ಹೇಳಿದರೆ ಅವಸ್ಥೆಯಿಲ್ಲದೆ ಪದಾರ್ಥವಿರುವುದಿಲ್ಲ . ಚಿನ್ನವಿದೆ ಆದರೆ ಅವಸ್ಥೆಯಿಲ್ಲವೆಂಬ ಮಾತು ಅಸತ್ಯವಿದೆ. ಪರ್ಯಾಯವಿಲ್ಲದೆ ಯಾವ ವಸ್ತುವೇ ಇರುವುದಿಲ್ಲ . ಜ್ಞಾನವಾಯಿತು ಅದು ವಾಣಿಯನ್ನು ಕೇಳುವುದರಿಂದ ಆಯಿತೆಂದರೆ ಅವಸ್ಥೆಯಿಲ್ಲದೆ ದ್ರವ್ಯವಾಗಿ ಬಿಡುವುದು ಮತ್ತು ಪರ್ಯಾಯವಿಲ್ಲದೆ ದ್ರವ್ಯವಿರುವುದಿಲ್ಲ ಅದಕ್ಕಾಗಿ ಪರ್ಯಾಯವನ್ನು ಮನ್ನಿಸದಿದ್ದರೆ ದ್ರವ್ಯದ ನಾಶವಾಗಿ ಬಿಡುವುದು.

ಯಾವ ಪದಾರ್ಥವು ಕೂಡ ವರ್ತಮಾನ ಅವಸ್ಥೆಯಿಲ್ಲದೆ ಇರುವುದಿಲ್ಲ . ಚುಚ್ಚುಮದ್ದು ಅಥವಾ ಔಷಧದ ಕಾರಣದಿಂದ ಶರೀರದ ನಿರೋಗ ಅವಸ್ಥೆಯಾಯಿತೆಂದಿಲ್ಲ. ಏಕೆಂದರೆ ಅವಸ್ಥೆಯಿಲ್ಲದೆ ದ್ರವ್ಯವಿರುವುದಿಲ್ಲ . ಒಂದು ದ್ರವ್ಯವು ಇನ್ನೊಂದು ದ್ರವ್ಯದ ಅವಸ್ಥೆಯನ್ನು ಮಾಡಿದರೆ ಅವಸ್ಥೆಯಿಲ್ಲದೆ ದ್ರವ್ಯವಾಗುತ್ತದೆ ಅದಕ್ಕಾಗಿ ಔಷಧದ ಕಾರಣದಿಂದ ರೋಗವು ನಾಶಹೊಂದುವುದಿಲ್ಲ . ಮನುಷ್ಯನಿದ್ದಾನೆ ಆದರೆ ಅವನಿಗೆ ಬಾಲ್ಯ, ಪ್ರಾಯ ಮತ್ತು ವೃದ್ಧಾವಸ್ಥೆಯಿಲ್ಲವೆಂದು ಯಾರಾದರೂ ಹೇಳಿದರೆ ಅವಸ್ಥೆಯಿಲ್ಲದೆ ವಸ್ತುವೇ ಇರುವುದಿಲ್ಲ ಅದಕ್ಕಾಗಿ ಆತ್ಮ ಮತ್ತು ಪುದ್ಗಲ ಮೊದಲಾದ ಆರು ದ್ರವ್ಯಗಳು ಅವಸ್ಥೆಯಿಲ್ಲದೆ ಇರುವುದಿಲ್ಲ . ದ್ರವ್ಯಕ್ಕೆ ಅವಸ್ಥೆಯಾಗುತ್ತದೆ ಆದರೆ ಅದು ನಿಮಿತ್ತದ ಕಾರಣ ಆಗುತ್ತದೆಯೆಂದರೆ ದ್ರವ್ಯದ ಅವಸ್ಥೆಯು ಸ್ವತಂತ್ರವಾಗಿ ಉಳಿಯುವುದಿಲ್ಲ . ಅವಸ್ಥೆಯಿಲ್ಲದೆ ದ್ರವ್ಯವಿರುತ್ತದೆಯೆಂದು ಮನ್ನಿಸಿದರೆ ದ್ರವ್ಯದ ನಾಶವಾಗುತ್ತದೆ ಎಂದರೆ ದ್ರವ್ಯವು ಪ್ರತೀತಿಯಲ್ಲಿ ಬರುವುದಿಲ್ಲ .

## ದ್ರವ್ಯವಿಲ್ಲದೆ ಪರ್ಯಾಯವಿರುವುದಿಲ್ಲ :

ಬಾಲ್ಯ, ಪ್ರಾಯ, ವೃದ್ಧಾವಸ್ಥೆಗಳಿವೆ ಆದರೆ ಮನುಷ್ಯನಿಲ್ಲವೆಂದರೆ ಅದು ಸಂಭವಿಸುವುದಿಲ್ಲ . ಹಾಲು, ಮೊಸರಿನ ಅವಸ್ಥೆಯಿದೆ ಆದರೆ ಗೋರಸವಿಲ್ಲವೆಂದರೆ ಗೋರಸವಿಲ್ಲದೆ ಹಾಲು ಮೊದಲಾದವುಗಳ ಅವಸ್ಥೆಯಿರುವುದಿಲ್ಲ . ವಸ್ತುವಿಲ್ಲದೆ ಪರ್ಯಾಯಗಳು ಅಂತರಾಳದಿಂದ ಆಗುತ್ತವೆಯೆನ್ನುವುದು ಸಂಭವಿಸುವುದಿಲ್ಲ. ಸರ್ವಜ್ಞ ಪರಮಾತ್ಮರಿಗೆ ಒಂದು ಸಮಯದಲ್ಲಿ ಮೂರು ಕಾಲ ಮೂರು ಲೋಕಗಳ ಜ್ಞಾನವು ವರ್ತಿಸುತ್ತದೆ. ಅಂಥ ತೀರ್ಥಂಕರ ಪರಮಾತ್ಮರಾದ ಮಹಾಮುನಿಗಳು ಹೀಗೆ ಹೇಳುತ್ತಾರೆ ಅವಸ್ಥೆಯಿಲ್ಲದೆ ವಸ್ತುವಿರುವುದಿಲ್ಲ ಮತ್ತು ವಸ್ತುವಿಲ್ಲದೆ ಅವಸ್ಥೆಯಿರುವುದಿಲ್ಲ ಅಲೆಗಳಿಲ್ಲದೆ ನೀರು ಇರುವುದಿಲ್ಲ ಮತ್ತು ನೀರು ಇಲ್ಲದೆ ಅಲೆಗಳಿರುವುದಿಲ್ಲವೆಂದು ತಿಳಿದುಕೊಂಡು ಶಾಂತನಾಗು ಪ್ರಭು! ನಿನ್ನ ಕ್ಷಣ ಕ್ಷಣದ ಪರ್ಯಾಯಗಳು ನಿನ್ನಿಂದಲೇ ಆಗುತ್ತವೆ ಮತ್ತು ಪರ್ಯಾಯವಿಲ್ಲದೆ ನಿನ್ನ ದ್ರವ್ಯವಿಲ್ಲವೆಂದು ನೀನು ಭಾವಿಸು.

**ಭಾವಾರ್ಥ :-** ಇಲ್ಲಿ ದೃಷ್ಟಾಂತ ಕೊಡುತ್ತಾರೆ- ಯಾವ ಪ್ರಕಾರ ಗೋರಸವು ತನ್ನ ಹಾಲು ಮೊದಲಾದ ಪರ್ಯಾಯಗಳಿಂದ ಬೇರೆ ಇರುವುದಿಲ್ಲ . ಅದೇ ಪ್ರಕಾರ ಯಾವುದೇ ದ್ರವ್ಯವು ತನ್ನ ಪರ್ಯಾಯಗಳಿಂದ ಬೇರೆ

ಇರುವುದಿಲ್ಲ ಮತ್ತು ಪರ್ಯಾಯಗಳು ದ್ರವ್ಯದಿಂದ ಬೇರೆ ಇರುವುದಿಲ್ಲ ಗೋರಸವಿದೆ ಆದರೆ ಹಾಲು, ತುಪ್ಪ ಮೊದಲಾದ ಅದರ ಅವಸ್ಥೆಗಳಿಲ್ಲವೆಂಬುದು ಸಂಭವಿಸುವುದಿಲ್ಲ ಅದರಂತೆ ತನ್ನ ಪರ್ಯಾಯಗಳಿಂದ ಅದು ಬೇರೆಯಿಲ್ಲ, ಪರ್ಯಾಯವು ಅದು ದ್ರವ್ಯದ ಅಂಶವಿದೆ ಉತ್ಪಾದ ವ್ಯಯ ಮತ್ತು ಧ್ರುವವು ವಸ್ತುವಿನ ಸ್ವಭಾವವಿದೆ ಅದು ಪರದ ಕಾರಣದಿಂದಿಲ್ಲ ಹಾಲಿನಿಂದ ಮೊಸರು ಆಗುತ್ತದೆ ಅದು ಮಜ್ಜಿಗೆಯಾಗುವುದಕ್ಕಾಗಿ ಆಗಿದೆಯೆಂದು ಮನ್ನಿಸಿದರೆ ಪರ್ಯಾಯವಿಲ್ಲದೆ ವಸ್ತುವನ್ನು ಮನ್ನಿಸಿತು. ಆದರೆ ಪರ್ಯಾಯವಿಲ್ಲದೆ ವಸ್ತುವಿರುವುದಿಲ್ಲ . ಆತ್ಮನಿಲ್ಲ ಮತ್ತು ಜ್ಞಾನದ ಪರ್ಯಾಯವಾಗಿದೆಯೆಂದರೆ ಆತ್ಮನಿಲ್ಲದೆ ಜ್ಞಾನದ ಪರ್ಯಾಯವಿರುವುದಿಲ್ಲ . ಎಂದರೆ ಯಾವುದರದೇ ಪರ್ಯಾಯವಾಗುತ್ತದೆಯೆಂಬ ಮಾತು ಉಳಿಯುವುದಿಲ್ಲ. ಗುರುವಿನ ಕಾರಣದಿಂದ ಜ್ಞಾನವಾಗುವುದಿಲ್ಲ. ಆತ್ಮನಿದ್ದಾನೆಂದ ಮೇಲೆ ಜ್ಞಾನವಾಗುತ್ತದೆ ಆ ಸಮಯದಲ್ಲಿ ಗುರು ನಿಮಿತ್ತರೂಪದಿಂದ ಇರುತ್ತಾನೆ, ಆದರೆ ನಿಮಿತ್ತದ ಕಾರಣದಿಂದ ಜ್ಞಾನವು (ಕಾರ್ಯವು) ಆಗುತ್ತದೆಯೆಂದು ಮನ್ನಿಸಿದರೆ ಪರ್ಯಾಯವಿಲ್ಲದೆ ದ್ರವ್ಯವಾಗಿ ಬಿಡುವುದು.

ಆತ್ಮನಲ್ಲಿ ರಾಗ-ದ್ವೇಷ ಮೊದಲಾದ ವಿಕಾರಗಳಾಗುತ್ತವೆ ಅವು ತನ್ನ ಕಾರಣದಿಂದ ಆಗುತ್ತವೆ, ಆದರೆ ನಿಮಿತ್ತದ ಅಥವಾ ಕರ್ಮದ ಕಾರಣದಿಂದ ಆಗುವುದಿಲ್ಲ. ರಾಗವಿದೆ ಆದರೆ ಅದು ಚಾರಿತ್ರಗುಣದ ವಿಪರೀತ ಪರ್ಯಾಯವಿದೆ ಆ ಪರ್ಯಾಯವನ್ನು ಮನ್ನಿಸದೆ ಗುಣವನ್ನು ಮನ್ನಿಸಲಿಲ್ಲ ಅದರಿಂದ ಅನಂತ ಗುಣಗಳ ಪಿಂಡನಾದಂಥ ಆತ್ಮನನ್ನು ಕೂಡ ಮನ್ನಿಸಲಿಲ್ಲ ಅದಕ್ಕಾಗಿ ಪರ್ಯಾಯದಿಂದ ದ್ರವ್ಯವು ಬೇರೆಯಿಲ್ಲ ಮತ್ತು ದ್ರವ್ಯದಿಂದ ಪರ್ಯಾಯವು ಬೇರೆಯಿಲ್ಲ. ಪೂರ್ಣ ಅಂಶವಿಲ್ಲದೆ ವಸ್ತುವಿಲ್ಲ, ಎರಡು ಅಂಶಗಳಿವೆ ಅದಕ್ಕಾಗಿ ವಸ್ತು ಎರಡಿವೆ ಎಂದಿಲ್ಲ. ಪರ್ಯಾಯವಿಲ್ಲದೆ ದ್ರವ್ಯವಿಲ್ಲವೆಂದು ಹೇಳಿದೆ, ಆದರೆ ನಿಮಿತ್ತವಿಲ್ಲದೆ ದ್ರವ್ಯವಿಲ್ಲವೆಂದು ಹೇಳಿಲ್ಲ ಸಮಯಸಮಯಕ್ಕೆ ದ್ರವ್ಯದಲ್ಲಿ ಅವಸ್ಥೆಯಾಗುತ್ತದೆ ಅದು ದ್ರವ್ಯವಿಲ್ಲದೆ ಇರುವುದಿಲ್ಲವೆಂದು ಭಗವಂತರು ನಿರೂಪಣೆ ಮಾಡಿದ್ದರೆ. ಭಗವಂತರ ದಿವ್ಯಧ್ವನಿಯಲ್ಲಿ ಹೀಗೆ ಬಂದಿದೆ. ಪದಾರ್ಥದ ಸ್ವರೂಪ ಕೂಡ ಹೀಗೆ ಇದೆ ಮತ್ತು ಜ್ಞಾನಕೂಡ ಹೀಗೆಯೇ ಆಗುತ್ತದೆ ಇದು ಯಥಾರ್ಥವಿದೆ.

ನೋಡಿರಿ, ಪಂಚಾಸ್ತಿಕಾಯದ ಅಧಿಕಾರವಿದೆ, ಇದರಲ್ಲಿ ಐದು ಅಸ್ತಿಕಾಯವಿವೆ ಪದಾರ್ಥವು ಪರದ ಕಾರಣದಿಂದಿದ್ದರೆ ಐದರ ಅಸ್ತಿತ್ವ ಉಳಿಯುವುದಿಲ್ಲ ಈಗ ಆ ಪದಾರ್ಥಗಳ ಅಸ್ತಿತ್ವವಿದೆಯೆಂದಮೇಲೆ ಅವಕ್ಕೆ ಎರಡು ಅಂಶಗಳಿವೆ ಒಂದು ತ್ರಿಕಾಲೀ ಅಂಶ ಮತ್ತು ಇನ್ನೊಂದು ವರ್ತಮಾನ ಅಂಶವಿದೆ ಅದು ದ್ರವ್ಯದಿಂದ ಎಂದರೆ ತನ್ನಿಂದ ಇದೆ ಹೀಗೆ ದ್ರವ್ಯ ಮತ್ತು ಪರ್ಯಾಯದ ಏಕತೆಯಿದೆ. ಹೀಗಿದ್ದರೂ ಕೂಡ ಯಾವುದೇ ಪ್ರಕಾರದಿಂದ ಕಥನದ ಅಪೇಕ್ಷೆಯಿಂದ ತಿಳಿಸಿಕೊಡುವುದಕ್ಕಾಗಿ ಭೇದ ಮಾಡಲಾಗಿದೆ, ಆದರೆ ವಸ್ತುವಿನ ಸ್ವರೂಪವನ್ನು ವಿಚಾರಿಸಿದರೆ ಭೇದವಿಲ್ಲ. ಸಂಜ್ಞೆ, ಸಂಖ್ಯೆ, ಲಕ್ಷಣ ಮೊದಲಾದ ಭೇದದಿಂದ ಭೇದವಾದರೂ ಕೂಡ ವಸ್ತುವಿನಲ್ಲಿ ಭೇದವಿಲ್ಲ . ಸಂಸಾರದಲ್ಲಿ ಅವಸ್ಥೆಯು ಬದಲಾಗುತ್ತದೆ ಆದರೆ ಸಿದ್ಧರಲ್ಲಿ ಅವಸ್ಥೆಯು ಬದಲಾಗುವುದಿಲ್ಲ , ಅಲ್ಲಿ ಪರ್ಯಾಯವಿರುವುದಿಲ್ಲವೆಂದು ಮನ್ನಿಸಿದರೆ ಪರ್ಯಾಯವಿಲ್ಲದೆ ದ್ರವ್ಯವಿರುವುದಿಲ್ಲ ಅದಕ್ಕಾಗಿ ಅಲ್ಲಿ ಕೂಡ ಪರ್ಯಾಯವಿಲ್ಲದೆ ದ್ರವ್ಯವಿರುವುದಿಲ್ಲ . ಏಕೆಂದರೆ ದ್ರವ್ಯ ಮತ್ತು ಪರ್ಯಾಯದಲ್ಲಿ ಪರಸ್ಪರ ಒಂದು ಅಸ್ತಿತ್ವವಿದೆ.

ಆತ್ಮ ಮತ್ತು ಪರಮಾಣು ಮೊದಲಾದ ಪ್ರತಿಯೊಂದು ದ್ರವ್ಯದ ಮಾತು ಮಾಡಿದೆ. ಒಂದು ಆತ್ಮ ಇನ್ನೊಂದು ಆತ್ಮನ ಕಾರಣದಿಂದ ಇಲ್ಲ, ಒಂದು ಪುದ್ಗಲವು ಇನ್ನೊಂದು ಪುದ್ಗಲದ ಕಾರಣದಿಂದಿಲ್ಲ, ಪುದ್ಗಲವು ಆತ್ಮನ ಕಾರಣದಿಂದಿಲ್ಲ ಮತ್ತು ಆತ್ಮವು ಪುದ್ಗಲದ ಕಾರಣದಿಂದಿಲ್ಲ , ಪ್ರತಿಯೊಂದರ ಅಸ್ತಿತ್ವವು ಭಿನ್ನವಿದೆ. ಒಂದೊಂದು ಅಸ್ತಿತ್ವದಲ್ಲಿ ಎರಡು ಅಂಶಗಳಿವೆ, ಒಂದು ದ್ರವ್ಯ ಮತ್ತು ಎರಡನೆಯದು ಪರ್ಯಾಯದ ಅಂಶವಿದೆ, ಅವೆರಡು ಅಂಶಗಳು ಅಭಿನ್ನವಿವೆ. ಚತುರ ಮನುಷ್ಯನಿದ್ದರೆ ವ್ಯಾಪಾರ, ಉದ್ಯೋಗ, ಕಾರಖಾನೆ ಮೊದಲಾದ ಕೆಲಸಗಳು ಸರಿಯಾಗಿ ವ್ಯವಸ್ಥಿತವಾಗಿ ನಡೆಯುತ್ತವೆಯೆಂಬ ಮನ್ನಣೆಯು ಭ್ರಾಂತಿಯುಕ್ತವಾದುದಾಗಿದೆ. ವ್ಯಾಪಾರ ಮೊದಲಾದವುಗಳ ಅವಸ್ಥೆಯ ಅಂಶವು

ಅದರ ದ್ರವ್ಯದಿಂದ ಅಭಿನ್ನವಿದೆ. ಮನುಷ್ಯನ ದ್ರವ್ಯದಿಂದ ಅದರದು ಭಿನ್ನ ಅಸ್ತಿತ್ವವಿದೆ ಅದಕ್ಕಾಗಿ ಮನುಷ್ಯನ ಕಾರಣದಿಂದ ಆ ಅವಸ್ಥೆಯಿಲ್ಲ , ಆದರೆ ಅದರ ಕಾರಣದಿಂದ ಆಗುತ್ತದೆ.

ದ್ರವ್ಯವಿಲ್ಲದಿದ್ದರೆ ಪರ್ಯಾಯದ ಅಭಾವವಾಗುವುದು ಮತ್ತು ಪರ್ಯಾಯವಿಲ್ಲದಿದ್ದರೆ ದ್ರವ್ಯದ ಅಭಾವ ವಾಗುವುದು, ಹೇಗೆಂದರೆ ಹಾಲು, ಮೊಸರು ಮೊದಲಾದವುಗಳ ಅಭಾವದಲ್ಲಿ ಗೋರಸದ ಅಭಾವ ಮತ್ತು ಗೋರಸದ ಅಭಾವದಲ್ಲಿ ಹಾಲು, ಮೊಸರು ಮೊದಲಾದವುಗಳ ಅಭಾವವಾಗುತ್ತದೆ. ಈ ಪ್ರಕಾರದಿಂದ ಅವೆರಡೂ ದ್ರವ್ಯ-ಪರ್ಯಾಯಗಳಲ್ಲಿ ಒಂದರ ಅಭಾವವಾಗುವುದರಿಂದ ಎರಡರ ಅಭಾವವಾಗುತ್ತದೆ. ಈ ಕಾರಣದಿಂದ ಅವೆರಡರ ಏಕತೆಯನ್ನು ಮನ್ನಿಸುವುದು ಯೋಗ್ಯವಿದೆ. ಆತ್ಮ ಮತ್ತು ಪುದ್ಗಲದಲ್ಲಿ ಪ್ರತಿಯೊಂದಕ್ಕೆ ತನ್ನ ಪರ್ಯಾಯದ ಜೊತೆ ಅಭೇದತೆಯಿದೆ ಮತ್ತು ಪರದ್ರವ್ಯದೊಡನೆ ಭೇದತೆಯಿದೆ. ಅದಕ್ಕಾಗಿ ಜ್ಞಾನ, ದರ್ಶನ ಮೊದಲಾದವುಗಳ ಪರ್ಯಾಯಗಳು ಆತ್ಮನಿಂದ ಆಗುತ್ತವೆ ಮತ್ತು ಶರೀರದ ಅವಸ್ಥೆಯು ಪರಮಾಣುಗಳಿಂದ ಆಗುತ್ತದೆ. ಆದರೆ ಆತ್ಮ ಪರಮಾಣುಗಳ ಸಂಯೋಗದಿಂದ ಶರೀರದ ಅವಸ್ಥೆಯಾಗಿದೆಯೆಂದು ಯಾರಾದರೂ ಹೇಳಿದರೆ ಅದು ನಿಮಿತ್ತದ ಕಥನವಿದೆ. ಆದರೆ ನಿಜವಾಗಿ ಅದು ಪುದ್ಗಲದಿಂದ ಅವಸ್ಥೆಯಾಗಿದೆ. ಜ್ಞಾನಿಯು ಆತ್ಮನ ಕಾರಣದಿಂದ ಶರೀರದ ಅವಸ್ಥೆಯಾಗುತ್ತದೆಯೆಂದು ಮನ್ನಿಸುವುದಿಲ್ಲ ಮತ್ತು ಅಜ್ಞಾನಿಯ ಸಂಯೋಗ ದೃಷ್ಟಿಯು ದೂರವಾಗುವುದಿಲ್ಲ ಅದಕ್ಕಾಗಿ ಆತ್ಮನ ಕಾರಣದಿಂದ ಮನ್ನಿಸಿದ್ದಾನೆ, ಆದರೆ ಹೀಗೆ ಮನ್ನಿಸುವುದರಿಂದ ಶರೀರದ ಅಭಾವವಾಗುವುದು ಮತ್ತು ಶರೀರದ ಕಾರಣದಿಂದ ಆತ್ಮನ ಅವಸ್ಥೆಯಾಗುವುದೆಂದು ಮನ್ನಿಸಿದರೆ ಆತ್ಮನ ಅಭಾವವಾಗುವುದು ಈ ಕಾರಣದಿಂದ ದ್ರವ್ಯ ಪರ್ಯಾಯಗಳ ಅಭೇದತೆಯನ್ನು ಮನ್ನಿಸುವುದು ಯೋಗ್ಯವಿದೆ. ಇದರ ಮೇಲಿಂದ ಆತ್ಮನಿಗೆ ಎಂದೂ ಕುಟುಂಬ ಮತ್ತು ಕರ್ಮದ ಜೊತೆ ಏಕತೆಯಿಲ್ಲ , ಆದರೆ ತಾನು ರಾಗ ಮಾಡುತ್ತಾನೆ ಅದರ ಜೊತೆ ಏಕತೆಯಿದೆ. ಆದರೆ ಅದು ನನ್ನ ಸ್ವಭಾವವಲ್ಲವೆಂದು ನಂಬಿ ಸ್ವಭಾವದ ದೃಷ್ಟಿಮಾಡಿದರೆ ರಾಗದ ಅಭಾವವಾಗುವುದು.

ಜಮಾಖರ್ಚಿನಲ್ಲಿ ಲೆಕ್ಕ ಸರಿ ಹೊಂದಿಸುವಾಗ ಕೊನೆಯ ಶಿಲ್ಲಕು ೫೫೫ ರೂಪಾಯಿಗಳಿದ್ದರೆ ಹಣದ ಪೆಟ್ಟಿಗೆಯಲ್ಲೂ ಅಷ್ಟೇ ರೂಪಾಯಿಗಳಿರಬೇಕು. ಮತ್ತು ಜ್ಞಾನ ಕೂಡ ಇದೇ ರೀತಿಯಾಗಿದ್ದರೆ ವಹಿಯಲ್ಲಿನ ಲೆಕ್ಕ ಮತ್ತು ಜ್ಞಾನವನ್ನು ಯಥಾರ್ಥವೆಂದು ಹೇಳಲಾಗುತ್ತದೆ. ಆದರೆ ಪೆಟ್ಟಿಗೆಯಲ್ಲಿನ ರೂಪಾಯಿಯಂತೆ ವಹಿಯಲ್ಲಿ ಇಲ್ಲದಿದ್ದರೆ ಮತ್ತು ಜ್ಞಾನ ಕೂಡ ರೂಪಾಯಿಯ ಪ್ರಕಾರ ಮಾಡದಿದ್ದರೆ ವಹಿ ಮತ್ತು ಜ್ಞಾನವು ಸರಿಯಾಗಿಲ್ಲವೆಂದು ಹೇಳಲಾಗುವುದು ಮತ್ತು ಲೆಕ್ಕವು ಸರಿ ಹೊಂದಲಿಲ್ಲ ಮತ್ತು ಗಡಿಬಿಡಿಯುಂಟಾದರೆ ಶಬ್ದ ಬ್ರಹ್ಮಾಂಡ ರೂಪದ ಹಣದ ಚೀಲದಲ್ಲಿ ಆರು ದ್ರವ್ಯಗಳಿವೆ ಆ ಪ್ರತಿಯೊಂದು ದ್ರವ್ಯ ಮತ್ತು ಅದರ ಪರ್ಯಾಯವು ಸ್ವತಂತ್ರವಿದೆ. ಹೀಗೆ ಪದಾರ್ಥದ ಸ್ವರೂಪವಿದೆ. ಭಗವಂತರ ವಾಣಿಯಲ್ಲಿ ಕೂಡ ಇದೇ ಪ್ರಕಾರ ಬಂದಿದೆ ಮತ್ತು ಜ್ಞಾನ ಕೂಡ ಇದೇ ರೀತಿ ಮಾಡಬೇಕು, ಇದರಲ್ಲಿ ವ್ಯತ್ಯಾಸ ಮಾಡಿದರೆ ಗಡಿಬಿಡಿಯಾದಲ್ಲದೆ ಇರಲಾರದು ಲೆಕ್ಕದಲ್ಲಿ ಸರಿಹೊಂದಲಿಲ್ಲ, ಜ್ಞಾನದಲ್ಲಿ ಹೇಗಿದೆ ಹಾಗೆ ಭಾಸವಾದರೆ ಜ್ಞಾನವು ನಿಜವೆಂದು ಕರೆಸಿಕೊಳ್ಳುವುದು.

ಅಜ್ಞಾನೀ ಮೂಢ ಜೀವನಿಗೆ ಪರ್ಯಾಯವು ಸ್ವತಂತ್ರವಾಗಿ ಆಗುತ್ತದೆಯೆಂಬುದರ ಅರಿವಿಲ್ಲ. ಹಿಟ್ಟಿನಿಂದ ರೊಟ್ಟಿ ಆಗುತ್ತದೆ ಅದು ಸ್ತ್ರೀಯ ಕಾರಣದಿಂದ ಆಗುವುದಿಲ್ಲ, ಹಿಟ್ಟಿನ ಕಾರಣದಿಂದ ಆಗುತ್ತದೆ. ಹೀಗೆ ಹಿಟ್ಟಿನ ಪರ್ಯಾಯದ ಸ್ವತಂತ್ರತೆಯಿದೆ. ಈಗ ಅಗ್ನಿಯಿಲ್ಲದೆ ರೊಟ್ಟಿ ಬೇಯುವುದಿಲ್ಲವೆಂಬ ಪ್ರಶ್ನೆಯೇ ಇಲ್ಲಿ ಉಳಿಯುವುದಿಲ್ಲ, ಆದರೆ ಹಿಟ್ಟು ಇಲ್ಲದೆ ರೊಟ್ಟಿ ಆಗುವುದಿಲ್ಲವೆಂಬುದು ವಸ್ತುವಿನ ಸ್ವಭಾವವಿದೆ. ಆತ್ಮನು ತ್ರಿಕಾಲವಿದ್ದಾನೆ ಮತ್ತು ಅವನದು ವರ್ತಮಾನವಾಗುತ್ತದೆ ಅದು ಅವನಿಂದ ಅಭೇದವಿದೆಯೆಂದು ತಿಳಿದುಕೊಂಡರೆ ಹದಿನಾಲ್ಕು ಬ್ರಹ್ಮಾಂಡದ ಭೇದವು ಸರಿಯಾಗಿ ತಿಳಿದುಬರುತ್ತದೆ. ದುಡ್ಡಿನ ವ್ಯವಸ್ಥೆಯನ್ನು ಸರಿಯಾಗಿ ಇಟ್ಟುಕೊಂಡಿದ್ದಕ್ಕಾಗಿ ದುಡ್ಡು ಉಳಿದುಕೊಂಡಿದೆ

ಎಂಬಂತಿಲ್ಲ ಇದಂತೂ ಜಗತ್ತಿನ ಸ್ವತಂತ್ರ ಅಸ್ತಿರೂಪ ಪದಾರ್ಥವಿದೆ. ಇದರ ಬದಲಾವಣೆಯಾದಲ್ಲದೆ ಇರಲಾರದು, ಈ ರೀತಿಯಾಗಿ ಆತ್ಮನ ಜೊತೆ ಪರ್ಯಾಯದ ಅಭೇದತೆಯನ್ನು ಈ ಗಾಥೆಯಲ್ಲಿ ತಿಳಿಸಿಕೊಟ್ಟಿದೆ.

ಮುಂದಿನ ಗಾಥೆಯಲ್ಲಿ ದ್ರವ್ಯ ಮತ್ತು ಗುಣದ ಅಭೇದತೆಯನ್ನು ಹೇಳುತ್ತಾರೆ.

ಐದು ದ್ರವ್ಯಗಳಲ್ಲಿ ಪ್ರದೇಶಗಳಿರುವುದರಿಂದ ಅವಕ್ಕೆ ಅಸ್ತಿಕಾಯವೆಂದು ಹೇಳಲಾಗಿದೆ. ಕಾಲ ದ್ರವ್ಯಕ್ಕೆ ಪ್ರದೇಶಗಳಿಲ್ಲ ಅದಕ್ಕಾಗಿ ಅದು ಅಸ್ತಿಕಾಯವಿಲ್ಲ ದ್ರವ್ಯಗಳು ಅಸ್ತಿರೂಪವಿವೆ. ಅವು ಹೇಗಿವೆಯೆಂಬುದನ್ನು ತಿಳಿಸಿಕೊಟ್ಟಿದ್ದಾರೆ. ಅವಸ್ಥೆಯಿಲ್ಲದೆ ಪದಾರ್ಥವಿಲ್ಲ ಮತ್ತು ಪದಾರ್ಥವಿಲ್ಲದೆ ಅವಸ್ಥೆಯಿರುವುದಿಲ್ಲ. ಈ ರೀತಿ ಪದಾರ್ಥ ಮತ್ತು ಅವಸ್ಥೆಯ ಸ್ವತಂತ್ರತೆಯನ್ನು ತಿಳಿಸಿಕೊಟ್ಟಿದ್ದಾರೆ. ಈಗ ಈ ಗಾಥೆಯಲ್ಲಿ ಗುಣ ಮತ್ತು ದ್ರವ್ಯದ ಅಭೇದತೆಯನ್ನು ಹೇಳಿ ಸ್ವತಂತ್ರತೆಯನ್ನು ತಿಳಿಸಿಕೊಡುತ್ತಾರೆ. ಆತ್ಮನಲ್ಲಿ ಅವಸ್ಥೆಯ ವೃದ್ಧಿಯಿದೆ. ಅದು ಹೊರಗಿನಿಂದ ಬರುತ್ತಿರಬೇಕೆಂದು ಒಬ್ಬನು ಕೇಳಿದರೆ ಅವನಿಗೆ ಆತ್ಮನಲ್ಲಿ ಗುಣಗಳಿವೆ ಅವುಗಳೊಳಗಿಂದ ಅವಸ್ಥೆಗಳು ಬರುತ್ತವೆಯೆಂದು ಹೇಳಲಾಗಿದೆ.

ದವ್ವೇಣ ವಿಣಾ ಣ ಗುಣಾ ಗುಣೇಹಿಂ ದವ್ವಂ ವಿಣಾ ಣ ಸಂಭವದಿ ।
ಅವ್ವದಿರಿತ್ತೋ ಭಾವೋ ದವ್ವ ಗುಣಾಣಂ ಹವದಿ ತಮ್ಹಾ ॥೧೩॥

**ದ್ರವ್ಯವಿಲ್ಲದೆ ಗುಣಗಳಿಲ್ಲ ಗುಣಗಳಿಲ್ಲದೆ ದ್ರವ್ಯ ತಾ ಸಂಭವಿಸದು ।**
**ದ್ರವ್ಯ-ಗುಣಗಳಿವೆರಡರಲಿ ಅವ್ಯತಿರಿಕ್ತಭಾವ ನಿರ್ದಿಷ್ಟವಾಗಿಹುದು ॥೧೩॥**

**ಅರ್ಥ :-** ಸತ್ತಾ ಮಾತ್ರ ವಸ್ತುವಿಲ್ಲದೆ ಸದ್ಭೂತ ಲಕ್ಷಣರೂಪದ ಗುಣಗಳಿರುವುದಿಲ್ಲ ಮತ್ತು ಗುಣಗಳಿಲ್ಲದೆ ದ್ರವ್ಯವಿರುವುದಿಲ್ಲ. ಈ ಕಾರಣದಿಂದ ದ್ರವ್ಯ ಮತ್ತು ಗುಣಗಳು ಬೇರೆಯಿಲ್ಲವೆಂಬುದು ವಸ್ತುವಿನ ಸ್ವರೂಪವಿದೆ. ಅಫೀಮು ಇಲ್ಲದೆ ಕಹಿತನವಿರುವುದಿಲ್ಲ ಮತ್ತು ಕಹಿತನವಿಲ್ಲದೆ ಅಫೀಮು ಇರುವುದಿಲ್ಲ. ಇದರಂತೆ ಆತ್ಮನಿಲ್ಲದೆ ಜ್ಞಾನವಿರುವುದಿಲ್ಲ ಮತ್ತು ಜ್ಞಾನವಿಲ್ಲದೆ ಆತ್ಮನಿರುವುದಿಲ್ಲ. ಹೀಗೆ ಪ್ರತಿಯೊಂದು ದ್ರವ್ಯದ ಸ್ವರೂಪವಿದೆ ಅದಕ್ಕಾಗಿ ವಸ್ತುವಿನಿಂದ ಗುಣಗಳು ಬೇರೆಯಿರುವುದಿಲ್ಲ.

**ಭಾವಾರ್ಥ :-** ದ್ರವ್ಯ ಮತ್ತು ಗುಣಗಳ ಏಕತೆಯಿದೆ. ಪುದ್ಗಲದ್ರವ್ಯದಿಂದ ಸ್ಪರ್ಶ, ರಸ, ಗಂಧ, ವರ್ಣ ಮೊದಲಾದ ಗುಣಗಳು ಬೇರೆಯಿಲ್ಲ. ದೃಷ್ಟಾಂತ ಹೀಗಿದೆ - ಯಾವ ಪ್ರಕಾರ ಮಾವಿನಹಣ್ಣು ಇದೆ ಅದರಲ್ಲಿ ವರ್ಣ, ಗಂಧ, ರಸ, ಸ್ಪರ್ಶ ಮೊದಲಾದ ಗುಣಗಳಿವೆ. ಆ ಮಾವಿನಹಣ್ಣು ಇಲ್ಲದಿದ್ದರೆ ಹಸಿರು, ಹಳದಿ ಮೊದಲಾದ ವರ್ಣ, ಹುಳಿ-ಸಿಹಿ ಮೊದಲಾದ ರಸ, ಸುಗಂಧ ಮೊದಲಾದ ಗುಣಗಳು ಇರುವುದಿಲ್ಲ. ಮಾವಿನ ಹಣ್ಣು ಇಲ್ಲದೆ ಅವುಗಳ ಅಭಾವವಾಗುವುದು ಏಕೆಂದರೆ ಆಶ್ರಯವಿಲ್ಲದೆ ಗುಣಗಳು ಎಲ್ಲಿ ಇರುತ್ತವೆ ? ಮತ್ತು ಆ ಸ್ಪರ್ಶ, ರಸ, ಗಂಧ ಮೊದಲಾದ ಗುಣಗಳಿಲ್ಲದಿದ್ದರೆ ಮಾವಿನಹಣ್ಣಿನ ಅಭಾವವಾಗುವುದು ಏಕೆಂದರೆ ಗುಣಗಳಿಲ್ಲದೆ ಮಾವಿನಹಣ್ಣಿನ ಅಸ್ತಿತ್ವವೆಲ್ಲಿಯದು? ತನ್ನ ಗುಣಗಳಿಂದಲೇ ಮಾವಿನಹಣ್ಣಿನ ಅಸ್ತಿತ್ವವಿದೆ. ಹೀಗೆ ಗುಣಗಳು ಮತ್ತು ದ್ರವ್ಯದ ಏಕತೆಯಿದೆ ಮೊದಲು ಮಾವಿನಹಣ್ಣು ಹುಳಿಯಿತ್ತು ನಂತರ ಅದು ಸಿಹಿಯಾಯಿತು. ಮೊದಲು ಹಸಿರು ಇತ್ತು ನಂತರ ಅದು ಹಳದಿಯಾಯಿತೆಂದರೆ ಎಲ್ಲಿಂದ ಬಂತು ? ರಸ, ವರ್ಣ ಮೊದಲಾದ ಗುಣಗಳಿಂದಲೇ ಆ ಅವಸ್ಥೆಯಾಗಿದೆ. ಆ ಗುಣಗಳಿಲ್ಲದೆ ಮಾವಿನಹಣ್ಣು ಇರುವುದಿಲ್ಲ.

'ದ್ರವ್ಯದಿಂದ ಗುಣಗಳು ಬೇರೆಯಿವೆಯೆಂದು ಯಾರು ಮನ್ನಿಸುವುದಿಲ್ಲ'ವೆಂದು ಕೆಲವರು ಹೇಳುತ್ತಾರೆ, ಅವರಿಗೆ ಹೀಗೆ ಹೇಳುತ್ತಾರೆ - ಬೌದ್ಧ ಮೊದಲಾದ ಅನ್ಯ ಮತದವರು ಪದಾರ್ಥವಿದೆ ಅದಕ್ಕಾಗಿ ಅದರೊಳಗಿಂದ ಜ್ಞಾನ ಬರುತ್ತದೆ ಏಕೆಂದರೆ ಎಂಥ ಜ್ಞೇಯಪದಾರ್ಥವಿದೆ ಅಂಥ ಜ್ಞಾನವಾಗುತ್ತದೆಯೆಂದು ಹೇಳುತ್ತಾರೆ. ಅದಕ್ಕಾಗಿ ಅವರು ಪದಾರ್ಥ

ಮತ್ತು ಗುಣಗಳ ಏಕತೆಯನ್ನು ಮನ್ನಿಸುವುದಿಲ್ಲ ಮತ್ತು ಜೈನನಾಮಧಾರಿಯಾದ ಕೆಲವರು ಹೀಗೆ ಹೇಳುತ್ತಾರೆ ಮೊದಲು ಜ್ಞಾನದ ಅವಸ್ಥೆ ಕಡಿಮೆಯಿತ್ತು ಮತ್ತು ಶಾಸ್ತ್ರ ಓದುವುದರಿಂದ ಅಥವಾ ಕೇಳುವುದರಿಂದ ಆ ಅವಸ್ಥೆಯು ವೃದ್ಧಿಸಿದರೆ ಅವನಾದರೂ ಆತ್ಮನನ್ನು ಮತ್ತು ಜ್ಞಾನ ಗುಣವನ್ನು ಅಭಿನ್ನವೆಂದು ಮನ್ನಿಸುವುದಿಲ್ಲ. ಎಲೈ ಸೋದರನೇ ! ನೀನು ಭಗವಂತನಿರುವೆ ! ನಿನ್ನ ಗುಣಗಳು ನಿನ್ನಿಂದ ಬೇರೆಯಿಲ್ಲವೆಂದು ಅವನಿಗೆ ಹೇಳುತ್ತಾರೆ. ಸಮ್ಯಗ್ದರ್ಶನ, ಜ್ಞಾನ, ಚಾರಿತ್ರ ಮೊದಲಾದವುಗಳ ಪರ್ಯಾಯಗಳಾಗುವುದಕ್ಕೆ ಆ ಗುಣಗಳೇ ಕಾರಣವಿವೆ. ಆ ಗುಣಗಳು ಆತ್ಮನಿಂದ ಭಿನ್ನವಿಲ್ಲ. ಅದಕ್ಕಾಗಿ ನಿನಗೆ ಆ ಪರ್ಯಾಯಗಳನ್ನು ಪ್ರಕಟಪಡಿಸುವುದಿದ್ದರೆ ಅಂತರಂಗದಲ್ಲಿ ನೋಡುವುದರಿಂದ ಪ್ರಕಟವಾಗುತ್ತವೆ. ಆ ಪರ್ಯಾಯಗಳು ಹೊರಗಿನಿಂದ ಬರುವುದಿಲ್ಲ.

ಪರಮಾಣುವಿನಿಂದ ಅದರ ಸ್ಪರ್ಶಾದಿ ಗುಣಗಳು ಭಿನ್ನವಿಲ್ಲ. ಆ ಗುಣಗಳು ತ್ರಿಕಾಲವಿವೆ. ಈ ಅಪೇಕ್ಷೆಯಿಂದ ಸಾಮಾನ್ಯವಿವೆ. ಸಾಮಾನ್ಯ ಅಂಶವಿಲ್ಲದೆ ದ್ರವ್ಯವಿರುವುದಿಲ್ಲ. ಪ್ರತಿಯೊಂದು ಆತ್ಮ ಮತ್ತು ಪರಮಾಣುಗಳು ಅವುಗಳ ಗುಣಗಳಿಂದ ಅಭೇದವಿವೆ. ಜ್ಞಾನ-ದರ್ಶನ-ಚಾರಿತ್ರ ಮೊದಲಾದ ಗುಣಗಳಿಲ್ಲದಿದ್ದರೆ ಆತ್ಮನಿರುವುದಿಲ್ಲ ಮತ್ತು ಆತ್ಮನಿಲ್ಲದಿದ್ದರೆ ಜ್ಞಾನ-ದರ್ಶನಾದಿ ಗುಣಗಳಿರುವುದಿಲ್ಲ. ಹೀಗೆ ಒಂದೊಂದು ಗಾಥೆಯಲ್ಲಿ ಸ್ವತಂತ್ರತೆಯ ಮಾತು ಸ್ಪಷ್ಟವಾಗಿದ್ದರೂ ಕೂಡ ಅಜ್ಞಾನಿಯು ನಿಜವಾದ ತಿಳಿವಳಿಕೆಯಿಲ್ಲದೆ ಗೊಂದಲಮಯನಾಗಿದ್ದಾನೆ. ನಿಮಿತ್ತವಿದ್ದರೆ ಆಗುತ್ತದೆ, ನಿಮಿತ್ತವಿಲ್ಲದಿದ್ದರೆ ಆಗುವುದಿಲ್ಲವೆನ್ನುತ್ತಾನೆ, ಆದರೆ ಹೀಗೆ ವಸ್ತುವಿನ ಸ್ವರೂಪವಿಲ್ಲ. ಆತ್ಮನ ಸತ್ತಾ ಇದೆ ಸತ್ತಾವಾನನಿಂದ ಭಿನ್ನವಿಲ್ಲ. ಇದು 'ಇದೆ'ಯೆಂದು ಹೇಳುವುದು ಮತ್ತು ಗುಣಗಳಿಲ್ಲದೆ ದ್ರವ್ಯವಿದೆಯೆಂದು ಹೇಳುವುದು ಅದು ಮಿಥ್ಯೆಯಿದೆ. ಈ ಗುಣಗಳಿವೆಯೆಂದು ಹೇಳುವುದು ಮತ್ತು ದ್ರವ್ಯವಿಲ್ಲದೆ ಆ ಗುಣಗಳಿವೆಯೆನ್ನುವುದು ಸಿದ್ಧಿಸಲಾರದು.

ಯಾವುದೇ ವಸ್ತುವು ಉತ್ಪಾದ-ವ್ಯಯ-ಧ್ರುವವಿಲ್ಲದೆ ಇರುವುದಿಲ್ಲ ಎಂದರೆ ತನ್ನ ಗುಣ ಪರ್ಯಾಯಗಳಿಂದ ದ್ರವ್ಯವು ಅಭಿನ್ನವಿದೆ. ಪರವಸ್ತುವಿನಿಂದ ಪರವಸ್ತುವು ಸರ್ವಥಾ ಭಿನ್ನವಿದೆ, ಆದರೆ ತನ್ನ ದ್ರವ್ಯ-ಗುಣ-ಪರ್ಯಾಯದಿಂದ ಸರ್ವಥಾ ಭಿನ್ನವಿಲ್ಲ. ಸಂಜ್ಞೆ ಸಂಖ್ಯಾದಿಗಳಿಂದ ಭಿನ್ನವೆಂದು ಹೇಳಲಾಗಿದೆ. ವರ್ಣ, ಗಂಧ, ರಸಾದಿಗಳಿಲ್ಲ ಮತ್ತು ಮಾವಿನಹಣ್ಣು ಇದೆ ? ಜ್ಞಾನ-ದರ್ಶನಾದಿಗಳಿಲ್ಲ ಮತ್ತು ಆತ್ಮನಿದ್ದಾನೆ ? ಹೀಗೆಂದೂ ಆಗುವುದಿಲ್ಲ. ಗುಣಗಳಿಲ್ಲದೆ ವಸ್ತುವಿರುವುದಿಲ್ಲ ಸಿಹಿತನದಿಂದ ಅಫೀಮು ಭಿನ್ನವಿದೆ, ಆದರೆ ಕಹಿತನದಿಂದ ಅಫೀಮು ಭಿನ್ನವಿಲ್ಲ ಮತ್ತು ಸಿಹಿತನದಿಂದ ಬೆಲ್ಲವು ಭಿನ್ನವಿಲ್ಲ. ಕಹಿತನ ಮತ್ತು ಅಫೀಮು ಏಕವಿದೆ, ಸಿಹಿತನ ಮತ್ತು ಬೆಲ್ಲ ಏಕವಿದೆ. ಅಫೀಮು ಮತ್ತು ಬೆಲ್ಲ ಏಕವಿಲ್ಲವೆಂಬುದನ್ನು ಆತ್ಮನಲ್ಲಿ ಶಾಂತಿ ಬಯಸುವವರು ತಿಳಿದುಕೊಳ್ಳಬೇಕು.

ಭಗವಂತರ ಭಕ್ತಿ ಮಾಡುವಾಗ ಜ್ಞಾನಿಯೂ ಕೂಡ ಓ ಭಗವಾನ್ ! ತಮ್ಮ ಭಂಡಾರಕ್ಕೆ ಕೊರತೆಯಿಲ್ಲ, ಕೆಲವು ಗುಣಗಳನ್ನು ನಮಗೆ ದಯಪಾಲಿಸಿರಿ, ಶಿವಪದವನ್ನು ಕೊಡಿರೆಂದು ಕೇಳುತ್ತಾನೆ, ಆದರೆ ಆತ್ಮನ ಗುಣಗಳು ಭಗವಂತರಹತ್ತಿರ ಇಲ್ಲ. ಯಾವ ಗುಣಗಳನ್ನು ಪ್ರಕಟಮಾಡುವುದಿದೆ ಅವು ಆತ್ಮನಲ್ಲಿವೆ, ಅವನೊಳಗಿಂದ ಪ್ರಕಟವಾಗುತ್ತವೆಯೆಂದು ಜ್ಞಾನಿಯು ತಿಳಿದುಕೊಂಡಿರುತ್ತಾನೆ. ಆದರೆ ಈಗ ಪೂರ್ಣದಶೆಯಾಗಿಲ್ಲ ಎಂದರೆ ವಿಕಲ್ಪಗಳಿರುವುದರಿಂದ ಪರದ ಕಡೆಗೆ ಲಕ್ಷ್ಯ ಹೋಗುತ್ತದೆ, ಅದಕ್ಕಾಗಿ ನಿಮಿತ್ತದಿಂದ ಕಥನ ಮಾಡಿದೆ ಈ ರೀತಿಯಾಗಿ ದ್ರವ್ಯ ಮತ್ತು ಗುಣಗಳ ಏಕತೆಯಿದೆ.

ಪರಮಾಣುವಿನದು ಹಸಿರು ಪರ್ಯಾಯವಿದೆ ಅವರದು ಹಳದೀ ಪರ್ಯಾಯವಾಗುವುದೇ ಇಲ್ಲವೆಂಬುದೊಂದು ಮತವಿದೆ ಮತ್ತು ಇನ್ನೊಂದು ಇಂಥ ಒಂದು ಗುಣವುಳ್ಳ ಹಳದೀ ಪರ್ಯಾಯವು ಅದು ಹಾಗೇ ಇರುತ್ತದೆ ಅನಂತಗುಣಿತ ಹಳದಿಯಾಗುವುದೇ ಇಲ್ಲವೆಂಬ ಮತವಿದೆ. ಇವೆರಡೂ ಮತಗಳು ಅಸತ್ಯವಿವೆ. ಇಲ್ಲಿಯಂತೂ ಹಸಿರು ಪರ್ಯಾಯವಿದ್ದರೆ ಅದರದು ಅನಂತಗುಣಿತ ಹಳದಿ ಪರ್ಯಾಯವಾಗುತ್ತದೆಯೆಂದು ಹೇಳಿದೆ. ಆ ಪುದ್ಗಲದಲ್ಲಿ ವರ್ಣವೆಂಬ ಹೆಸರಿನ ಗುಣವಿದೆ ಅದರೊಳಗಿಂದ ಆಗುತ್ತದೆ ಮತ್ತು ಆ ಗುಣವು ಪುದ್ಗಲದ್ರವ್ಯದಿಂದ ಅಭೇದವಿದೆ.

ಈ ರೀತಿಯಾಗಿ ದ್ರವ್ಯ ಮತ್ತು ಗುಣಗಳ ಏಕತೆಯನ್ನು ತಿಳಿಯಬೇಕು. ಹೀಗಿದ್ದರೂ ಕೂಡ ಯಾವುದೇ ಒಂದು ಆಕಾರದಿಂದ ಕಥನದ ಅಪೇಕ್ಷೆಯಿಂದ ದ್ರವ್ಯ ಮತ್ತು ಗುಣದಲ್ಲಿ ಭೇದ ಕೂಡ ಇದೆ ಆದರೂ ಕೂಡ ವಸ್ತು ಸ್ವರೂಪವಂತೂ ಅಭೇದವಿದೆ. ಸಂಜ್ಞೆ, ಸಂಖ್ಯೆ, ಲಕ್ಷಣ ಮತ್ತು ಪ್ರಯೋಜನ ಮೊದಲಾದವುಗಳಿಂದ ಗುಣ ಮತ್ತು ದ್ರವ್ಯದಲ್ಲಿ ಭೇದವಿದೆ, ಆದರೆ ಪ್ರದೇಶ ಭೇದವಿಲ್ಲ. ಹೀಗೆ ಪಂಚಾಸ್ತಿಕಾಯದ ಸ್ವರೂಪವಿದೆ. ಎಂದ ಮೇಲೆ ಈಗ ನಿನಗೆ ಧರ್ಮ ಮಾಡುವುದಿದ್ದರೆ ಸ್ವಭಾವೀ ವಸ್ತು ಆತ್ಮನಿದ್ದಾನೆ ಅವನ ಶ್ರದ್ಧೆ-ಜ್ಞಾನಮಾಡು ಅದರಿಂದ ಧರ್ಮವಾಗುವಂತಿದೆ. ನಿನ್ನನ್ನು ಬಿಟ್ಟು ಗುಣವಿಲ್ಲ ಮತ್ತು ಗುಣವನ್ನು ಬಿಟ್ಟು ನೀನಿಲ್ಲವೆಂದು ಶಬ್ದಬ್ರಹ್ಮ ಹೇಳುತ್ತದೆ ; ಮತ್ತು ನಾನಿಲ್ಲದೆ ಗುಣವಿಲ್ಲ ಮತ್ತು ಗುಣವಿಲ್ಲದೆ ನಾನಿಲ್ಲ. ಶಬ್ದವಿಲ್ಲದೆ ಜ್ಞಾನವಿಲ್ಲ ಮತ್ತು ಜ್ಞಾನವಿಲ್ಲದೆ ಶಬ್ದವಿಲ್ಲ - ಎಂಬುದಾಗಿ ಇಲ್ಲ. ವಸ್ತುವಿನ ಸ್ವರೂಪವೇ ಹೀಗಿದೆ.

ಈಗ ಹದಿನಾಲ್ಕನೆಯ ಗಾಥೆಯಲ್ಲಿ ಸಪ್ತಭಂಗಿಯ ಸ್ವರೂಪ ಹೇಳಿದೆ. ಅದು ವಸ್ತು ದರ್ಶನದ ಸಾರವಿದೆ. ಪ್ರತಿಯೊಂದು ಪದಾರ್ಥದ ಸ್ವರೂಪವನ್ನು ವಿಘ್ನವಿಲ್ಲದೆ ಮತ್ತು ಕುಯುಕ್ತಿಯಿಲ್ಲದೆ ಸುಯುಕ್ತಿಯಿಂದ ಸಿದ್ಧಮಾಡಿದೆ. ಇಂಥ ಸಪ್ತಭಂಗಿಯನ್ನು ವಾಣಿಯ ಸ್ವರೂಪವೆಂದು ಹೇಳಿದೆ. ಈ ಸಪ್ತಭಂಗಿಯು ಪ್ರತಿಯೊಂದು ದ್ರವ್ಯ-ಗುಣ-ಪರ್ಯಾಯದಲ್ಲಿ ಅನ್ವಯಿಸುತ್ತದೆ. ಇಲ್ಲಿಯಂತೂ ಪ್ರಮಾಣಸಪ್ತ ಭಂಗಿಯಿದೆ. ಪ್ರವಚನಸಾರದಲ್ಲಿ ನಯಸಪ್ತಭಂಗಿಯ ಮಾತು ಬರುತ್ತದೆ.

ಸಿಯ ಅತ್ಥಿ ಣತ್ಥಿ ಉಹಯಂ ಅವ್ವತ್ತವ್ವಂ ಪುಣೋ ಯ ತತ್ತಿದಯಂ ।
ದವ್ವಂ ಖು ಸತ್ತಭಂಗಂ ಅದೇಸವಸೇಣ ಸಂಭವದಿ ॥೧೪॥

**ಸ್ಯಾದಸ್ತಿ ನಾಸ್ತಿ ಉಭಯಮತ್ತದರಂತೆ ಅವಕ್ತವ್ಯ ಮೊದಲಾದ ಭಂಗಗಳು ।**
**ಆದೇಶವಶದಿಂದಿವು ಏಳು ಭಂಗಗಳಿಂದ ಯುಕ್ತವಿವೆ ಎಲ್ಲ ದ್ರವ್ಯಗಳು ॥೧೪॥**

**ಅರ್ಥ :-** ನಿಶ್ಚಯದಿಂದ ಅನೇಕಾಂತ ಸ್ವರೂಪವಾದ ಪದಾರ್ಥವು ವಿವಕ್ಷೆಯವಶದಿಂದ ಏಳು ಪ್ರಕಾರದಿಂದಿವೆ. ಆ ಏಳು ಪ್ರಕಾರಗಳು ಯಾವುವೆಂದರೆ - ೧) ಯಾವುದೇ ಒಂದು ಪ್ರಕಾರದಿಂದ ಅಸ್ತಿರೂಪವಿದೆ, ೨) ಯಾವುದೇ ಒಂದು ಪ್ರಕಾರದಿಂದ ನಾಸ್ತಿರೂಪವಿದೆ, ೩) ಯಾವುದೇ ಒಂದು ಪ್ರಕಾರದಿಂದ ಅಸ್ತಿ-ನಾಸ್ತಿ ರೂಪವಿದೆ, ೪) ಯಾವುದೇ ಒಂದು ಪ್ರಕಾರದಿಂದ ವಚನಗೋಚರವಿಲ್ಲದಂಥದು ವಸ್ತುಸ್ವರೂಪವಿದೆ, ೫) ಯಾವುದೇ ಒಂದು ಪ್ರಕಾರದಿಂದ ಅಸ್ತಿರೂಪ ಅವಕ್ತವ್ಯವಿದೆ, ೬) ಯಾವುದೇ ಒಂದು ಪ್ರಕಾರದಿಂದ ನಾಸ್ತಿರೂಪ ಅವಕ್ತವ್ಯವಿದೆ, ೭) ಯಾವುದೇ ಒಂದು ಪ್ರಕಾರದಿಂದ ಅಸ್ತಿ-ನಾಸ್ತಿರೂಪ ಅವಕ್ತವ್ಯವಿದೆ. ದ್ರವ್ಯವನ್ನು ತಿಳಿಸಿಕೊಡುವುದಕ್ಕಾಗಿ ಈ ಸಪ್ತಭಂಗಿಯ ಸ್ವರೂಪವನ್ನು ವೀತರಾಗದೇವರು ಹೇಳಿದ್ದಾರೆ. ಪ್ರತಿಯೊಂದು ದ್ರವ್ಯದಲ್ಲಿ ಬಹಳಷ್ಟು ಧರ್ಮಗಳಿವೆ. ಒಂದೇ ಧರ್ಮವಿದ್ದರೆ ಅದು ಪದಾರ್ಥವಲ್ಲ, ಆ ಧರ್ಮಗಳನ್ನು ತಿಳಿಸಿಕೊಡುವಲ್ಲಿ ವಿಶೇಷ ಪ್ರಕಾರದ ಕಥನದಿಂದ ಹೇಳಿದ್ದಾರೆ.

**ಆತ್ಮನು ಸ್ವಚತುಷ್ಟಯದಿಂದ ತನ್ನ ರೂಪನಿದ್ದಾನೆ.**

ಇಲ್ಲಿ ಪ್ರತಿಯೊಂದು ಆತ್ಮ ಮತ್ತು ಪರಮಾಣು ಮೊದಲಾದ ದ್ರವ್ಯಗಳು ತಮ್ಮ ದ್ರವ್ಯ-ಕ್ಷೇತ್ರ-ಕಾಲ-ಭಾವಾದಿಗಳ ರೂಪವಿವೆ. ಅನಂತಗುಣ ಪರ್ಯಾಯಗಳ ಪಿಂಡವು ಅದು ದ್ರವ್ಯವಿದೆ, ಅದರ ತನ್ನ ಪ್ರದೇಶಗಳು ಅದು ಸ್ವಕ್ಷೇತ್ರವಿದೆ. ಸಮಯ ಸಮಯಕ್ಕೆ ಅವಸ್ಥೆಯಾಗುವುದು ಅದು ಸ್ವಕಾಲವಿದೆ ಮತ್ತು ತ್ರಿಕಾಲಶಕ್ತಿಯು ಅದು ಸ್ವಭಾವವಿದೆ. ಈ ನಾಲ್ಕು ಪ್ರಕಾರದಿಂದ ಪ್ರತಿಯೊಂದು ಪದಾರ್ಥವು ಸ್ವತಂತ್ರವಿದೆ, ಯಾವುದರ ಕಾರಣದಿಂದ ಯಾವುದಿಲ್ಲ. ಆತ್ಮನು ಸ್ವತಂತ್ರವಿದ್ದಾನೆ, ಪರಮಾಣುಗಳು ಸ್ವತಂತ್ರವಿವೆ, ಧರ್ಮಾಸ್ತಿಕಾಯ, ಅಧರ್ಮಾಸ್ತಿಕಾಯ ಆಕಾಶ ಮತ್ತು ಕಾಲವೆಂದು ಆರು ದ್ರವ್ಯಗಳಿವೆ ಅವೆಲ್ಲವೂ ತಮ್ಮ ದ್ರವ್ಯ-ಕ್ಷೇತ್ರ-ಕಾಲ-ಭಾವಾದಿಗಳಿಂದ ಸ್ವತಂತ್ರವಿದೆ.

ಕರ್ಮದ ಪರಮಾಣುವು ತನ್ನ ದ್ರವ್ಯ-ಕ್ಷೇತ್ರಾದಿಗಳಿಂದಿದೆ ಅದು ರಾಗದ ಕಾರಣದಿಂದಿಲ್ಲ ಮತ್ತು ಆತ್ಮನು ತನ್ನ ದ್ರವ್ಯ-ಕ್ಷೇತ್ರಾದಿಗಳಿಂದ ಇದ್ದಾನೆ ಅವನು ಕರ್ಮದ ಪರಮಾಣುವಿನಿಂದಿಲ್ಲವೆಂಬ ಸಿದ್ಧಾಂತವನ್ನು ಒಪ್ಪಿಕೊಂಡರೆ ಎಲ್ಲ ಸಂದೇಹಗಳು ಹೊರಟುಹೋಗುವವು. ಹೀಗೆ ಮನ್ನಿಸುವುದರಿಂದ ನಿಮಿತ್ತವು ತಡೆಯುವುದಿಲ್ಲ ಆದರೆ ನಿಮಿತ್ತವು ಹೇಗಿದೆ ಹಾಗೆ ಅದರ ಸ್ವತಂತ್ರತೆಯ ಅರಿವಾಗುವುದು.

ಎಂಥ ವೀತರಾಗತೆ ! ಪ್ರತಿಯೊಂದು ಪರಮಾಣು ಮತ್ತು ಪ್ರತಿಯೊಂದು ಆತ್ಮ ತನ್ನಿಂದ ಇದೆ. ಪರವಸ್ತುವಾಗಿದ್ದರೆ ಅದರ ಭಾವವಾಗುವಂತಿಲ್ಲ. ಎದುರಿರುವ ಜೀವವು ತಿಳಿದುಕೊಂಡರೆ ಸರಿ ತಿಳಿದುಕೊಳ್ಳದಿದ್ದರೂ ಸರಿಯೆಂಬ ಮಾತೇ ಉಳಿಯುವುದಿಲ್ಲ. ಏಕೆಂದರೆ ಅದರ ದ್ರವ್ಯ-ಕ್ಷೇತ್ರ-ಕಾಲ-ಭಾವಗಳು ಅದರಿಂದಿದೆ, ಯಾವ ಪರದ ಕಾರಣದಿಂದಿಲ್ಲ. ಎಲ್ಲ ದ್ರವ್ಯಗಳು ತಮ್ಮ ದ್ರವ್ಯ-ಕ್ಷೇತ್ರಾದಿಗಳಿಂದ ಸ್ವತಂತ್ರವಿದ್ದರೆ ಈ ಜಿನಮಂದಿರ ಮೊದಲಾದವನ್ನು ಕಟ್ಟಿಸುವುದು ಏತಕ್ಕಾಗಿ? ಎಂಬ ಸಂದೇಹವು ಯಾರಿಗಾದರೂ ಬಂದರೆ ಅವರಿಗೆ ಹೀಗೆ ಹೇಳುತ್ತಾರೆ-ಎಲೈ ಸೋದರನೇ ! ಪ್ರತಿಯೊಂದು ಪರಮಾಣುವು ತನ್ನ ದ್ರವ್ಯ-ಕ್ಷೇತ್ರ-ಭಾವಗಳನ್ನು ತನ್ನ ವಶದಲ್ಲಿಟ್ಟುಕೊಂಡಿದೆ ಮತ್ತು ಅದರ ಸ್ವಕಾಲವು ಅದು ಸಮಯ ಸಮಯದ ಪರ್ಯಾಯವಿದೆ ಅದು ಕೂಡ ಅದರಿಂದ ಆಗುತ್ತದೆ, ಬೇರೆ ಯಾವುದು ಅದನ್ನು ಮಾಡುವ ಸಾಧ್ಯತೆಯಿಲ್ಲ. ಇದೇ ರೀತಿ ಪ್ರತಿಯೊಂದು ಆತ್ಮವು ತನ್ನ ದ್ರವ್ಯ-ಕ್ಷೇತ್ರ-ಕಾಲ ಮತ್ತು ಭಾವದಿಂದ ತ್ರಿಕಾಲ ಬಿದ್ದುಕೊಂಡಿದೆ ಮತ್ತು ಅದರ ಸಮಯ ಸಮಯದ ಅವಸ್ಥೆಯು ತನ್ನಿಂದ ಸ್ವತಂತ್ರವಾಗಿ ಆಗುತ್ತದೆ, ಅದು ಅದರ ಸ್ವಕಾಲವಿದೆ.

**ಆತ್ಮನು ಪರಚತುಷ್ಟಯದಿಂದ ನಾಸ್ತಿರೂಪನಿದ್ದಾನೆ.**

ಆತ್ಮವು ನಿಗೋದದಲ್ಲಿರಲಿ ಅಥವಾ ಸಿದ್ಧಾಲಯದಲ್ಲಿರಲಿ ಅಲ್ಲಿ ಎಲ್ಲ ಕರ್ಮ ಪರಮಾಣುಗಳು ದ್ರವ್ಯ-ಕ್ಷೇತ್ರ-ಕಾಲ-ಭಾವದಿಂದ ನಾಸ್ತಿರೂಪವಿವೆ. ಅದಕ್ಕಾಗಿ ಜೀವವು ಕರ್ಮದ ಕಾರಣದಿಂದ ನಿಗೋದದಲ್ಲಿ ಉಳಿದುಕೊಂಡಿಲ್ಲ ಮತ್ತು ಕೇವಲೀ ಭಗವಂತರಿಗೆ ನಾಲ್ಕು ಕರ್ಮಗಳು ಇನ್ನೂ ಉಳಿದುಕೊಂಡಿವೆಯೆಂದು ಅವರು ಸಂಸಾರದಲ್ಲಿ ಉಳಿದುಕೊಂಡಿದ್ದಾರೆಂದೂ ಇಲ್ಲ. ಏಕೆಂದರೆ ಆತ್ಮನಲ್ಲಿ ಮೂರು ಕಾಲವೂ ಪರದ್ರವ್ಯ, ಪರಕ್ಷೇತ್ರ, ಪರಕಾಲ ಮತ್ತು ಪರಭಾವಗಳದ್ದು ಅತ್ಯಂತ ಅಭಾವವಿದೆ ಕಾಲ ಪದಾರ್ಥದ ಕಾರಣದಿಂದ ಆತ್ಮನ ಸಿದ್ಧಿಯಾಗಿದೆಯೆಂದೂ ಇಲ್ಲ. ಲಕ್ಷಾಂತರ ರೂಪಾಯಿ ಖರ್ಚುಮಾಡಿ ದೊಡ್ಡ ಮಹೋತ್ಸವ, ಪ್ರತಿಷ್ಠೆ ಮೊದಲಾದುವನ್ನು ಮಾಡುವುದರಿಂದ ಬಹಳಷ್ಟು ಜನರು ಒಂದೆಡೆ ಸೇರಿದರೆಂಬ ಮಾತು ಅಸತ್ಯವಿದೆ. ಏಕೆಂದರೆ ಪ್ರತಿಯೊಂದು ಆತ್ಮ ಮತ್ತು ಪರಮಾಣುವು ಪರದ್ರವ್ಯ, ಪರಕ್ಷೇತ್ರ ಪರಕಾಲ ಮತ್ತು ಪರಭಾವದಿಂದ ನಾಸ್ತಿರೂಪವಿದೆ ಅದಕ್ಕಾಗಿ ಪರದ ಕಾರಣದಿಂದ ಯಾರೂ ಬರುವುದಿಲ್ಲ, ಪರದ ಕಾರಣದಿಂದೆಂದು ಮನ್ನಿಸಿದರೆ ಅವರು ಪ್ರತಿಯೊಂದು ಪದಾರ್ಥದ ಅಸ್ತಿ-ನಾಸ್ತಿಯ ಸ್ವರೂಪವನ್ನು ತಿಳಿಯುವುದಿಲ್ಲ. ಆತ್ಮನ ಅಪೇಕ್ಷೆಯಿಂದ ಪರವಸ್ತುವು ಶೂನ್ಯವಿದೆ. ಅದ್ರವ್ಯ, ಅಕ್ಷೇತ್ರ, ಅಕಾಲ ಮತ್ತು ಅಭಾವರೂಪವಿದೆ, ಈ ಅಸ್ತಿ-ನಾಸ್ತಿಯೆಂದು ಎರಡು ಭಂಗ ಹೇಳಿತು, ಅವು ಆರೂ ದ್ರವ್ಯಗಳಲ್ಲಿವೆ. ಆರೂ ದ್ರವ್ಯಗಳು ತಾವು ತಮ್ಮ ಸ್ವಕಾಲದಿಂದಿವೆ ಮತ್ತು ಪರಕಾಲದಿಂದ ಇಲ್ಲ ಎಂದರೆ ಆರು ದ್ರವ್ಯಗಳಲ್ಲಿ ತಮ್ಮೊಳಗೆ ತಮ್ಮ ಕಾರ್ಯವಾಗುವುದು ಅದು ಅವುಗಳ ಕಾಲಲಬ್ಧಿಯಿದೆ, ಅವು ಕಾಲದ್ರವ್ಯದ ಕಾರಣದಿಂದ ಇಲ್ಲ,

**ಆತ್ಮನು ಸ್ವಚತುಷ್ಟಯದಿಂದಿದ್ದಾನೆ ಮತ್ತು ಪರಚತುಷ್ಟಯದಿಂದಿಲ್ಲ. ಅದು ಸ್ಯಾತ್ ಅಸ್ತಿ-ನಾಸ್ತಿ ರೂಪವಿದೆ.**

ಆತ್ಮನು ಮೂರು ಕಾಲದಲ್ಲಿ ಅಸ್ತಿ-ನಾಸ್ತಿರೂಪದಿಂದ ಒಟ್ಟಿಗೆ ಇರುತ್ತಿದ್ದರೂ ಅದನ್ನು ಕ್ರಮದಿಂದ ಹೇಳುವ ಸಾಧ್ಯತೆಯಿದೆ ಒಟ್ಟಿಗೆ ಹೇಳುವ ಸಾಧ್ಯತೆಯಿಲ್ಲ. ಒಂದು ದ್ರವ್ಯದಲ್ಲಿ ಒಂದು ಧರ್ಮವಿದೆಯೆಂದಿಲ್ಲ, ಎಲ್ಲ ಧರ್ಮಗಳು ಒಟ್ಟಿಗೆ ಇವೆ. ಅವನ್ನು ಕ್ರಮದಿಂದ ಹೇಳಲಾಗುತ್ತದೆ ಅದಕ್ಕಾಗಿ ಧರ್ಮಗಳು ಕ್ರಮದಿಂದಿವೆಯೆಂದಲ್ಲ. ಹೇಳಹೋದರೆ

ಅಲ್ಲಿ ಕ್ರಮವಾದಲ್ಲದೆ ಇರಲಾರದಂಥದೂ ಕೂಡ ಒಂದು ಧರ್ಮವು ಆತ್ಮನಲ್ಲಿದೆ. ಕ್ರಮದಿಂದ ಹೇಳಲಾಗುವಂಥ ಸ್ಯಾತ್ ಅಸ್ತಿ-ನಾಸ್ತಿ ಸ್ವರೂಪವು ಆತ್ಮನ ಧರ್ಮವಿದೆ. ಆ ಧರ್ಮದಿಂದ ಇಡೀ ಆತ್ಮದ್ರವ್ಯವು ತಿಳಿದುಬರುತ್ತದೆ.

ಆತ್ಮ ಮತ್ತು ಪರಮಾಣು ಮೊದಲಾದ ಪದಾರ್ಥಗಳು ತಮ್ಮ ಪರ್ಯಾಯಗಳಿಂದ ಭಿನ್ನವಿಲ್ಲ ಮತ್ತು ಪರ್ಯಾಯಗಳು ಪದಾರ್ಥಗಳಿಂದ ಭಿನ್ನವಿಲ್ಲ, ಇನ್ನು ಗುಣಗಳಿಲ್ಲದೆ ದ್ರವ್ಯವಿಲ್ಲ ಮತ್ತು ದ್ರವ್ಯವಿಲ್ಲದೆ ಗುಣಗಳಿಲ್ಲವೆಂದು ಹನ್ನೆರಡು ಮತ್ತು ಹದಿಮೂರನೆಯ ಗಾಥೆಯಲ್ಲಿ ಹೇಳಿದೆ. ಈ ಗಾಥೆಯಲ್ಲಿ ಸಪ್ತಭಂಗಿಯನ್ನಿಳಿಸಿಕೊಂಡಿದೆ ಯಾವುದೇ ಅಪೇಕ್ಷೆಯಿಂದ ನೋಡಿದರೆ ದ್ರವ್ಯವು ಲಕ್ಷ್ಯದಲ್ಲಿ ಬರುವುದಕ್ಕೆ ಪ್ರಮಾಣಸಪ್ತಭಂಗಿಯೆಂದು ಹೇಳುತ್ತಾರೆ. ಇಲ್ಲಿ ದ್ರವ್ಯದಲ್ಲಿ ಲಕ್ಷ್ಯ ಮಾಡಿಸುವುದಿದೆ ಅದಕ್ಕಾಗಿ ಪ್ರಮಾಣಸಪ್ತಭಂಗಿಯಿದೆ.

ಆತ್ಮನು ಸ್ಯಾತ್ ಎಂದರೆ ಯಾವುದೇ ಪ್ರಕಾರ ಸ್ವಚತುಷ್ಟಯದಿಂದ ಅಸ್ತಿರೂಪನಿದ್ದಾನೆ. ಅದು ಅವನ ಸ್ವತಂತ್ರತೆಯನ್ನು ತಿಳಿಸುತ್ತದೆ. ಮತ್ತು ಸ್ಯಾತ್ ಪರಚತುಷ್ಟಯದಿಂದ ಆತ್ಮನಿಲ್ಲ - ಹೀಗೆ ಎರಡು ಧರ್ಮದಿಂದ ಇಡೀ ದ್ರವ್ಯವು ಲಕ್ಷ್ಯದಲ್ಲಿ ಬರುತ್ತದೆ. ದ್ರವ್ಯ-ಕ್ಷೇತ್ರ-ಕಾಲ-ಭಾವಗಳದ್ದು ದ್ರವ್ಯ-ಗುಣ-ಪರ್ಯಾಯಗಳಲ್ಲಿ ಸಮಾವೇಶವಾಗಿ ಹೋಗುತ್ತದೆ. ವಸ್ತುವು ತಾನು ತನ್ನ ದ್ರವ್ಯ-ಕ್ಷೇತ್ರ-ಕಾಲ-ಭಾವದಿಂದ ಅಸ್ತಿರೂಪವಿದೆ ಮತ್ತು ಸ್ಯಾತ್ ಪರದ್ರವ್ಯ-ಕ್ಷೇತ್ರ-ಕಾಲ-ಭಾವದಿಂದ ನಾಸ್ತಿರೂಪಿವಿದೆ, ಆತ್ಮನು ತಾನು ಪರದ್ರವ್ಯ-ಕ್ಷೇತ್ರಾದಿಗಳಿಂದ ಇಲ್ಲವೆಂದು ಹೇಳುವಲ್ಲಿ ಪರದ ಅಪೇಕ್ಷೆ ಬರುತ್ತದೆ. ಆದರೆ ಈ ನಾಸ್ತಿರೂಪ ಧರ್ಮವು ಪರದ್ದಲ್ಲ ಅದು ಆತ್ಮನದಿದೆ.

ಒಂದು ಧರ್ಮದಿಂದ ಒಂದು ಧರ್ಮವನ್ನು ನೋಡುವುದು ಅದು ನಯಸಪ್ತಭಂಗಿಯಿದೆ ಮತ್ತು ಒಂದು ಧರ್ಮದಿಂದ ಇಡೀ ದ್ರವ್ಯವನ್ನು ನೋಡುವುದು ಅದು ಪ್ರಮಾಣಸಪ್ತಭಂಗಿಯಿದೆ. ೧) ಆತ್ಮನು ತನ್ನ ದ್ರವ್ಯ ಕ್ಷೇತ್ರಾದಿಗಳಿಂದ ಅಸ್ತಿರೂಪನಿದ್ದಾನೆ, ೨)ಪರದ್ರವ್ಯ ಕ್ಷೇತ್ರಾದಿಗಳಿಂದ ನಾಸ್ತಿರೂಪನಿದ್ದಾನೆ, ೩) ಸ್ಯಾತ್ ಅಸ್ತಿ-ನಾಸ್ತಿ ರೂಪನಿದ್ದಾನೆ. ಅಸ್ತಿ-ನಾಸ್ತಿ ರೂಪದ ಎರಡೂ ಧರ್ಮಗಳು ಒಟ್ಟಿಗೆ ಇದ್ದರೂ ಅವೆರಡನ್ನೂ ಒಟ್ಟಿಗೆ ಹೇಳುವ ಸಾಧ್ಯತೆಯಿಲ್ಲ, ಅವನ್ನು ಕ್ರಮದಿಂದ ಹೇಳುವ ಸಾಧ್ಯತೆಯಿದೆ ಜ್ಞಾನವು ಎರಡೂ ಧರ್ಮಗಳನ್ನು ಒಟ್ಟಿಗೆ ತಿಳಿಯುತ್ತದೆಯೆನ್ನುವುದು ಕೂಡ ಪ್ರಮಾಣದ ಮಾತಿದೆ. ಅಸ್ತಿ-ನಾಸ್ತಿರೂಪ ಧರ್ಮವು ಮೂರು ಕಾಲದಲ್ಲೂ ಒಟ್ಟಿಗೆ ಇದೆ. ಸಂಸಾರದಿಂದ ಯಾವಾಗ ಮುಕ್ತವಾಗುತ್ತದೆ ಆಗ ಅದು ಸ್ವಚತುಷ್ಟಯದಿಂದ ಆಗುತ್ತದೆ ಮತ್ತು ಪರಚತುಷ್ಟಯದಿಂದ ಆಗುವುದಿಲ್ಲವೆಂಬ ಒಂದು ಭಂಗ ನೋಡಿದರೆ ಕೂಡ ಪೂರ್ಣ ದ್ರವ್ಯವು ಲಕ್ಷ್ಯದಲ್ಲಿ ಬರುತ್ತದೆ.

೪) ಆತ್ಮನು ಸ್ವಚತುಷ್ಟಯದಿಂದಿದ್ದಾನೆ ಮತ್ತು ಪರಚತುಷ್ಟಯದಿಂದಿಲ್ಲವೆಂಬುದನ್ನು ವಾಣಿಯಿಂದ ಒಟ್ಟಿಗೆ ಹೇಳುವ ಸಾಧ್ಯತೆಯಿಲ್ಲ ಅದಕ್ಕಾಗಿ ಸ್ಯಾತ್ ಅವಕ್ತವ್ಯವಿದೆ. ತನ್ನ ದ್ರವ್ಯ-ಕ್ಷೇತ್ರ-ಕಾಲ-ಭಾವದಿಂದ ಅಸ್ತಿರೂಪನಿದ್ದಾನೆ ಮತ್ತು ಪರದ್ರವ್ಯ ಕ್ಷೇತ್ರಾದಿಗಳಿಂದ ನಾಸ್ತಿರೂಪನಿದ್ದಾನೆಂಬ ಶಬ್ದಗಳ ಮುಖಾಂತರ ಆತ್ಮನು ತಿಳಿದುಬರುವಂತಿಲ್ಲ , ಆದರೆ ಜ್ಞಾನದಿಂದ ತಿಳಿದುಬರುವಂತಿದ್ದಾನೆ. ಅಸ್ತಿ-ನಾಸ್ತಿರೂಪ ಧರ್ಮವನ್ನು ಒಟ್ಟಿಗೆ ಹೇಳುವ ಸಾಧ್ಯತೆಯಿಲ್ಲ ಸರ್ವಜ್ಞ ಭಗವಂತರ ದಿವ್ಯಧ್ವನಿಯಲ್ಲಿ ಎಲ್ಲ ಧರ್ಮಗಳ ಸ್ವರೂಪವು ಒಟ್ಟಿಗೆ ಬರುತ್ತದೆ, ಆದರೆ ಛದ್ಮಸ್ಥನು ಕ್ರಮದಿಂದ ಹೇಳುವ ಸಾಧ್ಯತೆಯಿದೆ. ಅದಕ್ಕಾಗಿ ಒಂದು ಧರ್ಮದ ಮುಖ್ಯತೆ ಮತ್ತು ಇನ್ನೊಂದು ಧರ್ಮದ ಗೌಣತೆಯಿರುತ್ತದೆ. ಹೀಗೆ ಭಗವಂತರ ವಾಣಿಯಲ್ಲಿ ಒಟ್ಟಿಗೆ ಬರುತ್ತದೆ. ನಯಸಪ್ತಭಂಗಿಯಾಗಲಿ ಅಥವಾ ಪ್ರಮಾಣಸಪ್ತಭಂಗಿಯಾಗಲಿ ಇವು ಛದ್ಮಸ್ಥನ ಸಲುವಾಗಿ ಇವೆ. ದಿವ್ಯಧ್ವನಿಯಲ್ಲಿ ಜ್ಞಾನದ ಅಪೇಕ್ಷೆಯಿಂದಂತೂ ಅನಂತದ ಒಂದು ಭಾಗವು ಬರುತ್ತದೆ ಮತ್ತು ದರ್ಶನದಿಂದ ಇಡೀ ಸ್ವರೂಪವನ್ನು ತಿಳಿಯಬಹುದಾಗಿದೆ ಅದಕ್ಕಾಗಿ ದಿವ್ಯಧ್ವನಿಯಲ್ಲಿ ಪೂರ್ಣ ಕೂಡ ಬರುತ್ತದೆ. ಆತ್ಮ ಪದಾರ್ಥವು ಅಸ್ತಿ-ನಾಸ್ತಿರೂಪವಾಗಿದ್ದರೂ ಕೂಡ ಅದನ್ನು ಹೇಳುವ ಸಾಧ್ಯತೆಯಿಲ್ಲ ಎಂದರೆ ಇಷ್ಟು ಹೇಳಿದರೂ ಕೂಡ ಸ್ವಲ್ಪ ಮಾತ್ರ ಹೇಳಿದೆಯೆಂಬುದು ಅದರ ಅರ್ಥವಿದೆ. ಜ್ಞಾನದ ಮುಖಾಂತರ ಪದಾರ್ಥವು ಒಟ್ಟಿಗೆ ತಿಳಿದುಬರುವ ಸಾಧ್ಯತೆಯಿದೆ

ಮತ್ತು ವಾಣಿಯಲ್ಲಿ ಕ್ರಮದಿಂದ ಹೇಳುವ ಸಾಧ್ಯತೆಯಿದೆ.

೫) ಸ್ಯಾತ್ ಅಸ್ತಿ ಅವಕ್ತವ್ಯ ಆತ್ಮನು ಸ್ವಚತುಷ್ಟಯದ ಅಪೇಕ್ಷೆಯಿಂದ ಅಸ್ತಿರೂಪ ಮತ್ತು ಅದೇ ಸಮಯದಲ್ಲಿ ಸ್ವ-ಪರಚತುಷ್ಟಯದ ಅಪೇಕ್ಷೆಯಿಂದ ಅಸ್ತಿ-ನಾಸ್ತಿರೂಪನಾಗಿದ್ದರೂ ಎರಡೂ ಧರ್ಮಗಳನ್ನು ಒಟ್ಟಿಗೆ ಹೇಳುವ ಸಾಧ್ಯತೆಯಿಲ್ಲ ಅದಕ್ಕಾಗಿ ಸ್ಯಾತ್ ಅಸ್ತಿ ಅವಕ್ತವ್ಯವೆಂಬ ಧರ್ಮವಿದೆ. ಈ ಭಂಗದ ಮುಖಾಂತರ ಪೂರ್ಣ ಆತ್ಮನು ತಿಳಿದು ಬರುವ ಸಾಧ್ಯತೆಯಿದೆ,

೬) ಸ್ಯಾತ್ ನಾಸ್ತಿ ಅವಕ್ತವ್ಯ-ಆತ್ಮನು ಪರಚತುಷ್ಟಯದ ಅಪೇಕ್ಷೆಯಿಂದ ನಾಸ್ತಿ ಮತ್ತು ಸ್ವಪರ ಚತುಷ್ಟಯದ ಅಪೇಕ್ಷೆಯಿಂದ ಎರಡೂ ಧರ್ಮಗಳು ಒಟ್ಟಿಗೆ ಇದ್ದರೂ ಕೂಡ ಎರಡೂ ಧರ್ಮಗಳನ್ನು ಒಟ್ಟಿಗೆ ಹೇಳುವ ಸಾಧ್ಯತೆಯಿಲ್ಲ ಅದಕ್ಕಾಗಿ ಸ್ಯಾತ್ ನಾಸ್ತಿ ಅವಕ್ತವ್ಯವಿವೆ.

೭) ಸ್ಯಾತ್ ಅಸ್ತಿ-ನಾಸ್ತಿ ಅವಕ್ತವ್ಯ-ಮತ್ತೆ ಅದೇ ಆತ್ಮನು ಸ್ವಚತುಷ್ಟಯದ ಅಪೇಕ್ಷೆಯಿಂದ ಮತ್ತು ಪರಚತುಷ್ಟಯದ ಅಪೇಕ್ಷೆಯಿಂದ ಮತ್ತು ಒಂದೇ ಸಮಯದಲ್ಲಿ ಸ್ವ-ಪರಚತುಷ್ಟಯಗಳೆರಡರ ಅಪೇಕ್ಷೆಯಿಂದ ಅಸ್ತಿ-ನಾಸ್ತಿ ಸ್ವರೂಪನಿದ್ದಾನೆ, ಆದರೂ ಎರಡನ್ನೂ ಒಟ್ಟಿಗೆ ಹೇಳುವ ಸಾಧ್ಯತೆಯಿಲ್ಲ . ಅದಕ್ಕಾಗಿ ಸ್ಯಾತ್ ಅಸ್ತಿ-ನಾಸ್ತಿ ಅವಕ್ತವ್ಯ ಧರ್ಮವಿದೆ ಅದರಿಂದ ಕೂಡ ಇಡೀ ಆತ್ಮನನ್ನು ತಿಳಿಯುವ ಸಾಧ್ಯತೆಯಿದೆ.

ಈ ಸಪ್ತಭಂಗಿಯ ವಿಶೇಷ ಸ್ವರೂಪವನ್ನು ಜಿನಾಗಮದಿಂದ (ಅನ್ಯ ಜೈನ ಶಾಸ್ತ್ರಗಳಿಂದ) ತಿಳಿದುಕೊಳ್ಳಬೇಕು. ಅಲ್ಪ ಜ್ಞಾನನಾದ ನಾನು ವಿಶೇಷವಾಗಿ ಸ್ಪಷ್ಟಮಾಡಲು ಸಾಧ್ಯವಿಲ್ಲ. ಇಲ್ಲಿ ಹೇಳಿರುವುದನ್ನು ಕೇವಲ ಸಂಕ್ಷೇಪದಲ್ಲಿ ಹೇಳಿದೆ. ಒಬ್ಬನೇ ಪುರುಷನು ಪುತ್ರನ ಅಪೇಕ್ಷೆಯಿಂದ ತಂದೆಯೆಂದು ಕರೆಸಿಕೊಳ್ಳುತ್ತಾನೆ ಮತ್ತು ಅದೇ ಪುರುಷನು ತಂದೆಯ ಅಪೇಕ್ಷೆಯಿಂದ ಮಗನೆಂದು ಕರೆಸಿಕೊಳ್ಳುತ್ತಾನೆ ಮತ್ತು ಅದೇ ಪುರುಷನು ಮಾವನ ಅಪೇಕ್ಷೆಯಿಂದ ಸೋದರಳಿಯನೆಂದು ಕರೆಸಿಕೊಳ್ಳುತ್ತಾನೆ ಮತ್ತು ಅದೇ ಪುರುಷನು ಸೋದರಳಿಯನ ಅಪೇಕ್ಷೆಯಿಂದ ಮಾಮಾನೆಂದು ಕರೆಸಿಕೊಳ್ಳುತ್ತಾನೆ; ಮತ್ತು ಸ್ತ್ರೀಯ ಅಪೇಕ್ಷೆಯಿಂದ ಪತಿಯೆಂದು ಕರೆಸಿಕೊಳ್ಳುತ್ತಾನೆ, ಸೋದರಿಯ ಅಪೇಕ್ಷೆಯಿಂದ ಸೋದರನೆಂದು ಕರೆಸಿಕೊಳ್ಳುತ್ತಾನೆ ಮತ್ತು ಅದೇ ಪುರುಷನು ವೈರಿಯ ಅಪೇಕ್ಷೆಯಿಂದ ಶತ್ರುವೆನಿಸಿಕೊಳ್ಳುತ್ತನೆ ಮತ್ತು ಇಷ್ಟನ ಅಪೇಕ್ಷೆಯಿಂದ ಮಿತ್ರನೆನಿಸಿಕೊಳ್ಳುತ್ತಾನೆ. ಇವೇ ಮೊದಲಾದ ಅನೇಕ ಪ್ರಕಾರದಿಂದ ಒಬ್ಬನೇ ಪುರುಷನನ್ನು ಕರೆಯುವ ಸಾಧ್ಯತೆಯಿದೆ ಇದೇ ಪ್ರಕಾರ ಒಬ್ಬ ಆತ್ಮ ಮತ್ತು ಪರಮಾಣು ಮೊದಲಾದ ದ್ರವ್ಯಗಳನ್ನು ಸಪ್ತಭಂಗಿಯ ಮುಖಾಂತರ ತಿಳಿದುಕೊಳ್ಳಬಹುದಾಗಿದೆ.

ಆತ್ಮನನ್ನು ಒಂದೇ ಪ್ರಕಾರದಿಂದ ಹೇಳಿರೆಂದು ಯಾರಾದರೂ ಕೇಳಿದರೆ ವಸ್ತುವಿನ ಸ್ವರೂಪವೇ ಅನೇಕ ಪ್ರಕಾರವುಳ್ಳದ್ದಿದೆಯೆಂದ ಬಳಿಕ ಯಾವ ರೀತಿಯಿದೆ ಆ ರೀತಿಯಿಂದ ತಿಳಿದುಕೊಳ್ಳಬೇಕಾಗುತ್ತದೆಯೆಂದು ಅವರಿಗೆ ಹೇಳಲಾಗುತ್ತದೆ. ಎಲ್ಲ ಧರ್ಮಗಳು ಒಟ್ಟಿಗೆ ಇದ್ದರೂ ಕೂಡ ಅವನ್ನು ಒಟ್ಟಿಗೆ ಹೇಳುವ ಸಾಧ್ಯತೆಯಿಲ್ಲ . ಈ ರೀತಿ ಸಪ್ತಭಂಗಿಯ ಸ್ವರೂಪವನ್ನು ಯಥಾರ್ಥವಾಗಿ ತಿಳಿದುಕೊಳ್ಳಬೇಕು.

ಈಗ ಮುಂದಿನ ೧೫ನೆಯ ಗಾಥೆಯಲ್ಲಿ ಯಾವ ಪದಾರ್ಥವಿಲ್ಲ ಅದು ಹೊಸದಾಗಿ ಉತ್ಪನ್ನವಾಗುವುದಿಲ್ಲ ಮತ್ತು ಇದ್ದದ್ದು ನಾಶವಾಗುವುದಿಲ್ಲ ; ಪದಾರ್ಥವು ಸ್ಥಿರವಾಗಿದ್ದು ಬದಲಾಗುತ್ತದೆ ಅದು ಪರದ ಕಾರಣದಿಂದಿಲ್ಲವೆಂಬ ಸಿದ್ಧಾಂತವನ್ನು ಹೇಳುತ್ತಾರೆ,-

**ಭಾವಸ್ಸ ಣತ್ಥಿ ಣಾಸೋ ಣತ್ಥಿ ಅಭಾವಸ್ಸ ಚೇವ ಉಪ್ಪಾದೋ ।**
**ಗುಣಪಜ್ಜ ಏಸು ಭಾವಾ ಉಪ್ಪಾದವಏ ಪಕುವ್ವಂತಿ ॥೧೫॥**

**ಭಾವದ ನಾಶವಿಲ್ಲ ಮತ್ತದರಂತೆ ಅಭಾವದ ಉತ್ಪಾದ ಕೂಡ ತಾನಿಲ್ಲ ।**
**ಭಾವಗಳು ಗುಣಪರ್ಯಾಯಗಳಲಿ ಮಾಡುವವು ಉತ್ಪಾದ-ನಾಶಗಳ ॥೧೫॥**

**ಅರ್ಥ :-** ಯಾವುದು ವಸ್ತುವಿದೆ ಅದರ ನಾಶವೆಂದೂ ಆಗುವುದಿಲ್ಲ ಮತ್ತು ಯಾವುದು ವಸ್ತುವಿಲ್ಲ ಅದರ ಉತ್ಪತ್ತಿಯೂ ಆಗುವುದಿಲ್ಲ , ಅದಕ್ಕಾಗಿ ದ್ರವ್ಯಾರ್ಥಿಕನಯದಿಂದ ದ್ರವ್ಯದ ನಾಶ ಹಾಗೂ ಉತ್ಪಾದವಾಗುವುದಿಲ್ಲ . ಸಿದ್ಧನಾದನೆಂದರೆ ನಾಶವಾದನೆಂದಲ್ಲ ಜಗತ್ತಿನಲ್ಲಿ ಎಷ್ಟು ಜೀವದ್ರವ್ಯಗಳಿವೆ ಅವುಗಳೊಂದಿಗೆ ಸಿದ್ಧವಾದಷ್ಟು ಜೀವಗಳ ನಾಶವಾಗಿಹೋಯಿತೆಂದಲ್ಲ ಸೌದೆಯು ಸುಟ್ಟುಹೋಗಿ ಭಸ್ಮವಾಗಿ ಬಿಟ್ಟರೆ ಪರಮಾಣುವಿನ ನಾಶವಾಗುವುದಿಲ್ಲ ಪರಮಾಣುವಿನ ರೂಪಾಂತರವಾಗುತ್ತದೆ. ಮನುಷ್ಯನು ಸತ್ತು ಹೋದನೆಂದರೆ ಶರೀರದ ಸಂಯೋಗವು ಹೊರಟುಹೋಗಿ ಬೇರೆ ಕಡೆ ಹೋಗುತ್ತಾನೆ. ಜೀವದ ಅವಸ್ಥೆ ಬದಲಾಗಿದೆ, ಆದರೆ ಜೀವದ ನಾಶವಾಗಿಲ್ಲ .

ನಿಶ್ಚಯದಿಂದ ಜಗತ್ತಿನಲ್ಲಿ ಯಾವ ವಸ್ತು ಇಲ್ಲ ಅದು ಹೊಸದಾಗಿ ಆಗುವುದಿಲ್ಲ . ಮೊಲಕ್ಕೆ ಕೋಡುಗಳಿರುವುದಿಲ್ಲ ಗದ್ದೆಯಲ್ಲಿ ಹೊಸ ಫಸಲು ಬರುತ್ತದೆ ಅದು ಜಗತ್ತಿನ ಪರಮಾಣು ಸೂಕ್ಷ್ಮರೂಪದಿಂದಿದ್ದು ಸ್ಥೂಲರೂಪದಿಂದ ಪರಿಣಮನವಾಗಿದೆ, ಆದರೆ ಪರಮಾಣು ನವೀನವಾಗಿಲ್ಲ . ಯಾವ ಪ್ರಕಾರ ಆಮೆಗೆ ಕೂದಲು ಬರುವುದಿಲ್ಲ ಅದೇ ಪ್ರಕಾರ ವಸ್ತು ಹೊಸದಾಗಿ ಉತ್ಪನ್ನವಾಗುವುದಿಲ್ಲ . ವಿಷ್ಣು ಜಗತ್ತಿನ ರಚನೆ ಮಾಡುತ್ತಾನೆ ಬ್ರಹ್ಮನು ರಕ್ಷಣೆ ಮಾಡುತ್ತಾನೆ ಮತ್ತು ಮಹೇಶನು ನಾಶಮಾಡುತ್ತಾನೆಂಬುದಾಗಿಲ್ಲ , ಆದರೆ ನಿಜವಾಗಿ ಪ್ರತಿಯೊಂದು ಪದಾರ್ಥದಲ್ಲಿ ಉತ್ಪಾದ, ವ್ಯಯ ಮತ್ತು ಧ್ರುವತನವಿದೆ. ಅವು ಬ್ರಹ್ಮ , ವಿಷ್ಣು ಮತ್ತು ಮಹೇಶವಿವೆ. ಇವನ್ನು ಹೊರತುಪಡಿಸಿ ಬೇರೆ ಯಾರೂ ರಚಿಸುವವರು, ರಕ್ಷಿಸುವವರು ಮತ್ತು ನಾಶಮಾಡುವವರಿಲ್ಲ . ದ್ರವ್ಯವು ತನ್ನ ಗುಣ ಪರ್ಯಾಯದಿಂದ ತಾನೇ ಉತ್ಪತ್ತಿ-ವಿನಾಶಮಾಡುತ್ತದೆ. ಪದಾರ್ಥವು ತಾನು ಅಸ್ತಿತ್ವದಿಂದಿದ್ದು ಗುಣ-ಪರ್ಯಾಯದಲ್ಲಿ ಉತ್ಪಾದ-ವ್ಯಯವಾಗುತ್ತದೆ. ವಸ್ತುವಿನ ನಾಶ ಅಥವಾ ವಸ್ತುವಿನ ಉತ್ಪಾದವಾಗುವುದಿಲ್ಲ . ತ್ರಿಕಾಲ ಅವಿನಾಶಿಯಾದ ವಸ್ತುವಿನಲ್ಲಿ ಉತ್ಪಾದ-ವ್ಯಯಗಳಾಗುತ್ತವೆ. ಅದನ್ನು ಪರ್ಯಾಯಾರ್ಥಿಕನಯದ ಅಪೇಕ್ಷೆಯಿಂದ ತಿಳಿಯಬೇಕು.

ಇಲ್ಲಿ ಗುಣಪರ್ಯಾಯದಲ್ಲಿ ಬದಲಾವಣೆಯಾಗುತ್ತದೆಯೆಂಬುದರ ಅರ್ಥವು ಗುಣ ಎಂದರೆ ತ್ರಿಕಾಲಿಗುಣದ ಮಾತಿಲ್ಲ , ಆದರೆ ಗುಣದ್ದು ಪರ್ಯಾಯದಲ್ಲಿ ಬದಲಾವಣೆಯಾಗುತ್ತದೆಯೆಂದು ತಿಳಿಯಬೇಕು. ನಿಮಿತ್ತದ ಕಾರಣ ಬದಲಾವಣೆಯಾಗುತ್ತದೆಯೆಂದು ಹೇಳಿಲ್ಲ ಇದಕ್ಕೂಮೊದಲು ಪರ್ಯಾಯವಿಲ್ಲದೆ ದ್ರವ್ಯವಿರುವುದಿಲ್ಲ ಮತ್ತು ದ್ರವ್ಯವಿಲ್ಲದೆ ಪರ್ಯಾಯವಿರುವುದಿಲ್ಲವೆಂದು ಹೇಳಿತ್ತು . ಇಲ್ಲಿ ಪರ್ಯಾಯದಲ್ಲಿ ಯಾವ ಮಾರ್ಪಾಡು ಕಂಡುಬರುತ್ತದೆ ಅದು ಗುಣದ ಕಾರಣ ಆಗುತ್ತದೆ, ಪರದ ಕಾರಣದಿಂದ ಆಗುವುದಿಲ್ಲ . ಪದಾರ್ಥದ ಉತ್ಪಾದ-ವ್ಯಯಗಳು ಪರದ ಕಾರಣದಿಂದಾಗುತ್ತವೆಯೆಂದು ಅಜ್ಞಾನಿಗೆ ಭ್ರಾಂತಿಯಾಗಿ ಬಿಟ್ಟಿದೆ. ಹಾಲಿನಿಂದ ಮೊಸರು ಅಥವಾ ಬೆಣ್ಣೆಯಾದರೂ ಕೂಡ ಗೋರಸವಂತೂ ಗೋರಸವೇ ಉಳಿದಿದೆ. ಗೋರಸವು ಪರಿಣಮಿಸಿ ಗೋಮಯವಾಗಿ ಹೋಗುವುದಿಲ್ಲ ಮತ್ತು ಹಾಲಿನಿಂದ ಮೊಸರು ಆಗುತ್ತದೆ ಅದು ಗೋರಸದಲ್ಲಿ ಸ್ಪರ್ಶ-ರಸಾದಿಗುಣಗಳಿವೆ ಆ ಕಾರಣದಿಂದ ಆಗುತ್ತದೆ ಮಜ್ಜಿಗೆ ಆಗುವುದಕ್ಕಾಗಿ ಆಗಿದೆಯೆಂದಿಲ್ಲ . ವಜ್ರಕಾಯದ ಕಾರಣದಿಂದ ಕೇವಲಜ್ಞಾನವಾಗುವುದಿಲ್ಲ . ವಾಣಿ ಬರುವುದಕ್ಕಾಗಿ ಜ್ಞಾನವಾಗುವುದಿಲ್ಲ , ಆದರೆ ಆತ್ಮನಲ್ಲಿ ಜ್ಞಾನ-ದರ್ಶನಾದಿ ಗುಣಗಳಿವೆ ಆ ಕಾರಣದಿಂದ ಆಗುತ್ತದೆ ನಿಮಿತ್ತವಿದ್ದರೆ ಉಪಾದಾನದಲ್ಲಿ ಕಾರ್ಯವಾಗುತ್ತದೆಯೆಂಬುದು ಮಾತ್ರ ವ್ಯವಹಾರದ ಕಥನವಿದೆ. ಆದರೆ ಯಾವ ಪರ್ಯಾಯಗಳಾಗುತ್ತವೆ ಅವು ದ್ರವ್ಯದಲ್ಲಿ ಗುಣಗಳಿವೆ ಅವುಗಳ ಪರ್ಯಾಯಗಳಾಗುತ್ತವೆ. ದ್ರವ್ಯ ಮತ್ತು ಪರ್ಯಾಯಗಳು ಎರಡೇ ಇವೆಯೆಂದು ಯಾರಾದರೂ ಹೇಳಿದರೆ ಅವರಿಗೆ ದ್ರವ್ಯದಲ್ಲಿ ಗುಣಗಳಿವೆ ಅವುಗಳ ಪರ್ಯಾಯಗಳಾಗುತ್ತವೆಯೆಂದು ಹೇಳಲಾಗಿದೆ. ಹೀಗೆ ಅಸ್ತಿಕಾಯವನ್ನು ಸ್ವತಂತ್ರವೆಂದು ಸಿದ್ಧಮಾಡಲಾಗಿದೆ.

ಈ ಪ್ರಕಾರ ಆತ್ಮನು ಬೇರೆ ದ್ರವ್ಯರೂಪನಾಗುವುದಿಲ್ಲ ಮತ್ತು ಪರಮಾಣು ಕೂಡ ಬೇರೆ ಪರಮಾಣುರೂಪವಾಗುವುದಿಲ್ಲ . ಮೂರುಕಾಲ ತನ್ನ ರೂಪವಾಗಿದ್ದುಕೊಂಡು ಬದಲಾಗುತ್ತದೆ. ಈ ರೀತಿ ಉಪಾದಾನವು ತನ್ನಲ್ಲಿ ನೂರಕ್ಕೆ ನೂರರಷ್ಟು ಸ್ವತಂತ್ರವಿದೆ ಮತ್ತು ನಿಮಿತ್ತವು ನಿಮಿತ್ತದಲ್ಲಿ ನೂರಕ್ಕೆ ನೂರರಷ್ಟು ಸ್ವತಂತ್ರವಿದೆ. ಎರಡರಲ್ಲಿ ಐವತ್ತು ಐವತ್ತು ಭಾಗದಷ್ಟು ಕಾರ್ಯವಾಗುತ್ತದೆಯೆನ್ನುವಂತಿಲ್ಲ . ತನ್ನ ಕಾರ್ಯವು ತನ್ನಿಂದ ಮತ್ತು ಪರದ ಕಾರ್ಯವು ಪರದಿಂದ ಆಗುತ್ತದೆ, ವಸ್ತುವು ಸ್ಥಿರವಾಗಿದ್ದು ಅದರ ಗುಣದ ಪರಿಣಾಮದಿಂದ ಹಳೆಯ ಅವಸ್ಥೆಯದು ನಾಶರೂಪದಿಂದ ಮತ್ತು ಹೊಸ ಅವಸ್ಥೆಯದು ಉತ್ಪಾದರೂಪದಿಂದ ಆಗುತ್ತದೆ.

ಪಂಚಾಸ್ತಿಕಾಯವಿರಲಿ ಅಥವಾ ಯಾವುದೇ ಶಾಸ್ತ್ರವಿರಲಿ, ಆದರೆ ಸಿದ್ಧಾಂತವು ಒಂದೇ ಇರುತ್ತದೆ. ಸಿದ್ಧಾಂತಗಳು ಎರಡು ಇರುವುದಿಲ್ಲ . ಕಥನದ ಶೈಲಿಯಲ್ಲಿ ವ್ಯತ್ಯಾಸವಿರುತ್ತದೆ.

ಈಗ ಆರೂ ದ್ರವ್ಯಗಳ ಗುಣ ಪರ್ಯಾಯಗಳ ವರ್ಣನೆ ಮಾಡುತ್ತಾರೆ.

ಭಾವಾ ಜೀವಾದೀಯಾ ಜೀವಗುಣಾ ಚೇದಣಾ ಯ ಉವಓಗೋ ।
ಸುರಣರಣಾರಯತಿರಿಯಾ ಜೀವಸ್ಸ ಯ ಪಜ್ಜಯಾ ಬಹುಗಾ ॥೧೬॥

**ಜೀವಾದಿಗಳು ಭಾವವಿದ್ದು ಜೀವದಗುಣ ಚೇತನ ಮೇಣ್ ಉಪಯೋಗವಿದೆ।**
**ಜೀವದ ಪರ್ಯಾಯ ದೇವ-ಮನುಜ-ನಾರಕ-ತಿರ್ಯಂಚರೂಪದಿಂದನೇಕವಿವೆ ॥೧೬॥**

**ಅರ್ಥ :-** ಜೀವ, ಪುದ್ಗಲ, ಧರ್ಮ, ಅಧರ್ಮ, ಆಕಾಶ ಮತ್ತು ಕಾಲ ಇವು ಆರು ಪದಾರ್ಥಗಳಿವೆ, ಈ ಎಲ್ಲ ದ್ರವ್ಯಗಳಿಗೆ ಗುಣ-ಪರ್ಯಾಯಗಳು ಪ್ರಸಿದ್ಧವಿವೆ. ದ್ರವ್ಯ-ಗುಣ-ಪರ್ಯಾಯ ಈ ಮೂರನ್ನು ಭಾವವೆಂದು ಹೇಳುತ್ತಾರೆ. ಆದರೆ ಇಲ್ಲಿ ಆ ದ್ರವ್ಯವನ್ನು ಭಾವವೆಂಬ ಶಬ್ದದಿಂದ ಸಂಬೋಧನೆ ಮಾಡಿದ್ದಾರೆ. ಈ ಪದಾರ್ಥಗಳಲ್ಲಿ ಜೀವನಾಮದ ಪದಾರ್ಥವು ಮುಖ್ಯವಿದೆ ಎಂದರೆ ಉತ್ತಮವಾದ ಪದಾರ್ಥವು ಆತ್ಮವಿದೆ. ಅದರ ಸ್ವರೂಪವನ್ನು ತಿಳಿದುಕೊಳ್ಳುವುದಕ್ಕಾಗಿ ಇಲ್ಲಿ ಜೀವದ ಅಸಾಧಾರಣ ಲಕ್ಷಣವನ್ನು ಹೇಳುತ್ತಾರೆ.

ಜೀವದ್ರವ್ಯದ ಒಂದು ನಿಜ ಲಕ್ಷಣವಂತೂ ಶುದ್ಧಾಶುದ್ಧ ಅನುಭೂತಿರೂಪ ಚೇತನವಿದೆ. ಲಕ್ಷಣಗಳು ಅನೇಕ ಪ್ರಕಾರವಾಗುತ್ತವೆ ಆದರೆ ಒಂದು ಲಕ್ಷಣವನ್ನು ಸರಿಯಾಗಿ ತಿಳಿದುಕೊಂಡರೆ ಅನೇಕ ಲಕ್ಷಣಗಳು ಇದರಲ್ಲಿ ಬಂದುಬಿಡುತ್ತವೆ ಮತ್ತು ಶುದ್ಧಾಶುದ್ಧ ಚೈತನ್ಯ ಪರಿಣಾಮರೂಪ ಉಪಯೋಗವು ಅದು ಜೀವದ ಎರಡನೆಯ ಲಕ್ಷಣವಿದೆ ಇವೆರಡೂ ಲಕ್ಷಣಗಳು ಜೀವದ್ರವ್ಯದ ಗುಣಗಳಿವೆ. ಈಗ ಜೀವದ ಬೇರೆ ಬೇರೆ ಪ್ರಕಾರದ ದೇವ, ಮನುಷ್ಯ, ನಾರಕಿ, ತಿರ್ಯಂಚ ಮೊದಲಾದ ಅಶುದ್ಧ ವ್ಯಂಜನಪರ್ಯಾಯನನ್ನು ತಿಳಿಯಬೇಕು. ಇದು ಕೂಡ ಜೀವದ ಲಕ್ಷಣವಿದೆ.

**ಭಾವಾರ್ಥ :-** ಒಂದು ಚೇತನ ಮತ್ತು ಇನ್ನೊಂದು ಉಪಯೋಗವೆಂದು ಹೀಗೆ ಆತ್ಮನ ಎರಡು ಲಕ್ಷಣಗಳನ್ನು ಹೇಳಿದೆ. ಈ ಜೀವದ ಸಾಮಾನ್ಯ ಲಕ್ಷಣವನ್ನು ಜ್ಞಾನದ ಮುಖ್ಯತೆಯಿಂದ ಹೇಳಿದೆ. ಅನುಭೂತಿಯ ಹೆಸರು ಚೇತನವಿದೆ. ಆ ಅನುಭೂತಿಯು ಜ್ಞಾನಚೇತನ, ಕರ್ಮಚೇತನ ಮತ್ತು ಕರ್ಮಫಲಚೇತನವೆಂದು ಮೂರು ಪ್ರಕಾರದಿಂದಿದೆ. ಜ್ಞಾನಭಾವದಿಂದ ಸ್ವರೂಪದ ವೇದನವು ಅದು ಜ್ಞಾನಚೇತನವಿದೆ. ಈ ಲಕ್ಷಣ ಹೇಳಿ ದ್ರವ್ಯದಲ್ಲಿ ಪರ್ಯಾಯದ ಅಸ್ತಿತ್ವವಿದೆಯೆಂಬುದನ್ನು ಜೊತೆಯಲ್ಲೇ ತಿಳಿಸಿದ್ದಾರೆ. ಆತ್ಮನು ಜ್ಞಾನಚೇತನದಿಂದ ತಿಳಿದುಬರುವ ಸಾಧ್ಯತೆಯಿದೆ. ಜ್ಞಾನದ ಪರ್ಯಾಯವಾಗುತ್ತದೆ ಅದು ಆತ್ಮವಿದೆಯೆಂಬ ಲಕ್ಷಣ ಹೇಳಿ ಆತ್ಮನನ್ನು ತಿಳಿಸಿಕೊಟ್ಟಿದ್ದಾರೆ. ಶುದ್ಧ-ಅಶುದ್ಧದ ಭೇದ ಮಾಡದೆ ಸಾಮಾನ್ಯ ದ್ರವ್ಯವನ್ನು ತಿಳಿಸಿಕೊಟ್ಟಿದ್ದಾರೆ.

ಕರ್ಮದ ವೇದನವು ಅದು ಕರ್ಮಚೇತನವಿದೆ. ರಾಗ-ದ್ವೇಷಗಳು ಕರ್ಮವಿವೆ. ಅದು ತನ್ನ ಕಾರ್ಯವಿದೆಯೆಂದು ವೇದನದಿಂದ ಆತ್ಮನು ತಿಳಿಯುವ ಸಾಧ್ಯತೆಯಿದೆ. ವಿಕಾರವು ಅದು ಕೂಡ ಆತ್ಮನ ಲಕ್ಷಣವಿದೆ ಏಕೆಂದರೆ ಆ ರಾಗದಿಂದ ಇದು ಜೀವವಿದೆಯೆಂದು ನಿಶ್ಚಿತವಾಗುತ್ತದೆ ಏಕೆಂದರೆ ಜೀವವು ರಾಗ-ದ್ವೇಷದಲ್ಲಿ ಏಕಾಗ್ರವಾಗುತ್ತದೆ. ಜಡವು ಏಕಾಗ್ರವಾಗುವುದಿಲ್ಲ . ರಾಗ-ದ್ವೇಷಗಳು ಜೀವವನ್ನು ತಿಳಿಯುತ್ತವೆ ಅವು ಕರ್ಮವನ್ನು ತಿಳಿಯುವುದಿಲ್ಲ . ಏಕೆಂದರೆ ರಾಗ-ದ್ವೇಷಗಳು ಆ ಜೀವದಲ್ಲಿ ಚಾರಿತ್ರನಾಮದ ಗುಣವಿದ್ದು ಅದರ ಪರ್ಯಾಯಗಳಿವೆ. ಜೀವವು ತಾನೇ ಸಿಕ್ಕಿಕೊಂಡಿದೆ, ಅದಕ್ಕಾಗಿ ರಾಗವಾಗಿದೆಯೆಂದು ತಿಳಿದಿರುತ್ತದೆ. ಶುದ್ಧ ಮತ್ತು ಅಶುದ್ಧತೆಯೆರಡೂ ಸೇರಿ ಪೂರ್ಣದ್ರವ್ಯವಾಗಿದೆ. ರಾಗ-ದ್ವೇಷಗಳನ್ನು ಅನಾತ್ಮಭೂತ ಲಕ್ಷಣವೆಂದು ಬೇರೆ ಹೇಳಿದೆ ಏಕೆಂದರೆ ಅದು ಹೊರಟುಹೋಗುತ್ತದೆ, ಆದರೆ ಇಲ್ಲಿಯಂತೂ ಆತ್ಮಭೂತಲಕ್ಷಣವಿದೆಯೆಂದು ಹೇಳಿದೆ ಏಕೆಂದರೆ ಈ ಪರ್ಯಾಯದಿಂದ ಜೀವವು ತಿಳಿಯುತ್ತದೆ.

ಯಾವುದರಿಂದ ಲಕ್ಷಿತವಾಗುತ್ತದೆ ಅದನ್ನು ಲಕ್ಷಣವೆಂದು ಹೇಳುತ್ತಾರೆ. ಇಲ್ಲಿ ರಾಗದಿಂದ ಚೈತನ್ಯಾತ್ಮನು ಲಕ್ಷಿತನಾಗುತ್ತಾನೆ ಅದಕ್ಕಾಗಿ ರಾಗವು ಜೀವದ ಲಕ್ಷಣವೆಂದು ಹೇಳಿದೆ. ದ್ರವ್ಯದೃಷ್ಟಿಯಿಂದ ರಾಗದ ಪ್ರಭು ಪುದ್ಗಲವಿದೆಯೆಂದು ಹೇಳಿದೆ. ಅದು ರಾಗವನ್ನು ಬಿಡುವ ಅಪೇಕ್ಷೆಯಿಂದ ಹೇಳಿದೆ. ಆದರೆ ಇಲ್ಲಿಯಂತೂ ರಾಗ-ದ್ವೇಷದ ಪರ್ಯಾಯ ನೀನು ಮಾಡುವುದರಿಂದ ಆಗಿದೆ ಅದು ಜೀವವನ್ನು ತಿಳಿಯುತ್ತದೆ ಅದಕ್ಕಾಗಿ ಲಕ್ಷಣವಿದೆ.

ಯಾವುದಕ್ಕೆ ಜೀವಪದಾರ್ಥವೆನ್ನುವುದು ? ಮತ್ತು ಅದರ ಗುಣ-ಪರ್ಯಾಯಗಳು ಹೇಗಾಗುತ್ತವೆ ? ಅದರ ಸ್ವರೂಪ ತಿಳಿಸಿದ್ದಾರೆ. ಇಲ್ಲಿ ಚೇತನ ಮತ್ತು ಉಪಯೋಗವನ್ನು ಗುಣವೆಂದು ಹೇಳಿದೆ, ಅವು ಪರ್ಯಾಯಗಳಿದ್ದರೂ ಅವೆಲ್ಲ ಗುಣಗಳು ಪರ್ಯಾಯದ ಜೊತೆ ಇರುತ್ತವೆ. ಆ ಅಪೇಕ್ಷೆಯಿಂದ ಅವನ್ನು ಗುಣವೆಂದು ಹೇಳಿದೆ. ಮತ್ತು ನಾರಕಿ, ದೇವ, ಮನುಷ್ಯ, ತಿರ್ಯಂಚದ ವ್ಯಂಜನಪರ್ಯಾಯವನ್ನು ಇಲ್ಲಿ ಪರ್ಯಾಯದ ಹಾಗೆ ವರ್ಣಿಸಿದೆ. ಇಲ್ಲಿ ಕಥನದಲ್ಲಿ ವ್ಯತ್ಯಾಸವಿದೆ. ಸಮಯಸಾರದಲ್ಲಿ ದೃಷ್ಟಿಪ್ರಧಾನವಾದ ಕಥನವಿದೆ ಮತ್ತು ಇಲ್ಲಿ ಜ್ಞಾನಪ್ರಧಾನವಾದ ಕಥನವಿದೆ.

ಚೇತನವು ಮೂರುಪ್ರಕಾರದಿಂದಿದೆ-ಜ್ಞಾನಭಾವದಿಂದಿರುವುದು ಅದು ಜ್ಞಾನಚೇತನವಿದೆ. ಅದನ್ನು ಇಲ್ಲಿ ಆತ್ಮನ ಗುಣವೆಂದು ಹೇಳಿದೆ. ಶರೀರ, ಮನಸ್ಸು, ವಾಣಿರೂಪದಿಂದಾಗುವುದು ಅದು ಆತ್ಮನ ಕಾರ್ಯವಲ್ಲ . ಆದರೆ ತಿಳಿಯುತ್ತದೆ ಅದು ಆತ್ಮವಿದೆ. ಇದರ ಪ್ರಕಾರ ಮುಂದೆ ಹೇಳಲಾಗುವುದು. ಎರಡನೆಯದು ಕರ್ಮಚೇತನವಿದೆ. ಕರ್ಮದ ವೇದನವು ಅದು ಕರ್ಮಚೇತನವಿದೆ. ದಯೆ, ದಾನ, ಕಾಮ, ಕ್ರೋಧಾದಿ ಭಾವಗಳಾಗುತ್ತವೆ ಅವು ಆತ್ಮನಲ್ಲಿ ಆಗುತ್ತವೆ ಅವನ್ನು ಜೀವವು ಅನುಭವಿಸುತ್ತದೆ, ಜಡವು ಅನುಭವಿಸುವುದಿಲ್ಲ . ಸುಖ-ದುಃಖದ ವೇದನವು ಅದು ಶರೀರದ ಧರ್ಮವಿದೆಯೆಂದು ಕೆಲವರು ಹೇಳುತ್ತಾರೆ, ಆದರೆ ಹಾಗೆ ಇಲ್ಲ ಸುಖ-ದುಃಖದ ವೇದನವು ಅದು ಜೀವದ ಲಕ್ಷಣವಿದೆಯೆಂದು ಇಲ್ಲಿ ಹೇಳಿದ್ದಾರೆ. ಜಗತ್ತಿನ ಯಾವುದೇ ಪದಾರ್ಥವು ಆತ್ಮನಿಗೆ ರಾಗ ಮಾಡಿಸುವುದಿಲ್ಲ , ರಾಗ ಮಾಡುವುದು ಜೀವದ ತನ್ನ ಯೋಗ್ಯತೆಯಿದೆ ಏಕೆಂದರೆ ಆ ಲಕ್ಷಣದ ಮುಖಾಂತರ ಜೀವನು ತಿಳಿಯುತ್ತಾನೆ.

ಕರ್ಮಫಲದ ವೇದನವು ಅದು ಕರ್ಮಫಲಚೇತನವಿದೆ. ಹರ್ಷ-ವಿಷಾದಗಳಾಗುತ್ತವೆ ಅವು ಆತ್ಮನ ಗುಣದಿಂದಾಗುತ್ತವೆ, ಅವು ಚೈತನ್ಯದ ಅಸ್ತಿತ್ವವನ್ನು ತಿಳಿಸುತ್ತವೆ. ಹರ್ಷ-ವಿಷಾದಗಳು ಆತ್ಮನ ಗುಣಗಳಿವೆ ಮತ್ತು ಅವು ಆತ್ಮನ ಲಕ್ಷಣಗಳಿವೆ, ಏಕೆಂದರೆ ಅವನ್ನು ಆತ್ಮನು ತಾನು ಮಾಡುತ್ತಾನೆ. ಅವನ್ನು ಕರ್ಮಮಾಡಿಸುವುದಿಲ್ಲ ಏಕೆಂದರೆ ಅವು ಕರ್ಮದ ಗುಣಗಳಲ್ಲ . ಅವು ಆತ್ಮನ ಕ್ಷಣಿಕ ಪರ್ಯಾಯದಲ್ಲಿ ಆಗುತ್ತವೆ, ಆದರೆ ಅವು ತನ್ನ ತ್ರಿಕಾಲೀ ಸ್ವಭಾವದಲ್ಲಿಲ್ಲ. ಆತ್ಮನಲ್ಲಿ ಹರ್ಷ-ವಿಷಾದಗಳಾಗುವಲ್ಲಿ ಕರ್ಮದ ಕಾರಣವಿಲ್ಲ ಆದರೆ ಜೀವವು ಪರಿಣಮಿಸಿದರೆ ಆಗುತ್ತವೆ. ಅದಕ್ಕಾಗಿ ಹರ್ಷ-ವಿಷಾದಗಳು ಆತ್ಮನನ್ನು ತಿಳಿಸುತ್ತವೆ. ಈ ರೀತಿ ಜ್ಞಾನಚೇತನ, ಕರ್ಮಚೇತನ ಮತ್ತು ಕರ್ಮಫಲಚೇತನವೆಂದು ಚೇತನದ ಮೂರು ಪ್ರಕಾರ ಹೇಳಿದೆ.

ಪ್ರವಚನಸಾರದಲ್ಲಿ ರಾಗ-ದ್ವೇಷಾದಿಗಳ ಪರಿಣಾಮವನ್ನು ಜೀವದ್ದೆಂದು ಹೇಳಿದೆ ಅದು ಸ್ವಜ್ಞೇಯವು ಹೇಗಿದೆಯೆಂಬುದನ್ನು ತಿಳಿದುಕೊಳ್ಳುವುದಕ್ಕಾಗಿ ಹೇಳಿದೆ ಇಲ್ಲಿ ಪಂಚಾಸ್ತಿಕಾಯದಲ್ಲಿ ಜೀವವು ತಾನು ಹೇಗಿದೆಯೆಂಬುದನ್ನು ತಿಳಿಸಿದೆ. ಚೈತನ್ಯದ ಅಸ್ತಿಯಲ್ಲಿ ರಾಗ-ದ್ವೇಷ, ಹರ್ಷ-ವಿಷಾದದ ಪರಿಣಾಮಗಳಾಗುತ್ತವೆ ಅದಕ್ಕಾಗಿ ಅವು ಜೀವಾಸ್ತಿಕಾಯವನ್ನು ತಿಳಿಸಿಕೊಡುತ್ತವೆ. ಕರ್ಮವು ರಾಗಾದಿಗಳನ್ನು ಮಾಡಿಸುತ್ತದೆ ಅಥವಾ ಅವು ನಿಮಿತ್ತದ ಕಾರಣದಿಂದ ಆಗುತ್ತವೆಯೆಂದು ಮನ್ನಿಸುವವನಿಗೆ ಪರ್ಯಾಯದೃಷ್ಟಿ ಬಿಡಿಸಿ ಸ್ವಭಾವದೃಷ್ಟಿ ಮಾಡಿಸುವ ಅವಕಾಶ ಉಳಿಯುವುದಿಲ್ಲ. ಇಂಥ ಜೀವಾಸ್ತಿಕಾಯವನ್ನು ತಿಳಿದುಕೊಂಡಲ್ಲದೆ ಪೂರ್ಣ ಜೀವನ ಕಳೆದರೂ ಕೂಡ ಸತ್ಯವಸ್ತುವನ್ನು ತಿಳಿದುಕೊಳ್ಳದಿದ್ದರೆ ವ್ಯರ್ಥವಿದೆ ವೃದ್ಧಾವಸ್ಥೆಯಾಗಿ ಮೊಮ್ಮಕ್ಕಳ ಮಕ್ಕಳ ಜೋಗುಳ ಹಾಡಿದರೂ ಕೂಡ ಆತ್ಮನ ಮಾತು ಕೇಳಲು ಅವಕಾಶವಾಗುವುದಿಲ್ಲ . ಆ ಮೋಹದ ಪರಿಣಾಮವನ್ನು ಆತ್ಮ ಮಾಡಿದರೆ ಆಗುತ್ತದೆ ಅದಕ್ಕಾಗಿ ಅದು ಜೀವಾಸ್ತಿಕಾಯವನ್ನು ತಿಳಿಸಿಕೊಡುತ್ತದೆ.

ಇದು ಶುದ್ಧ-ಅಶುದ್ಧ ಜೀವದ ಸಾಮಾನ್ಯ ಲಕ್ಷಣವಾಯಿತು. ಕರ್ಮಚೇತನ ಮತ್ತು ಕರ್ಮಫಲಚೇತನವು ಅಶುದ್ಧ ಜೀವದ ಲಕ್ಷಣವಿವೆ ಮತ್ತು ಜ್ಞಾನಚೇತನವು ಶುದ್ಧ ಜೀವದ ಲಕ್ಷಣವಿದೆ. ಇಲ್ಲಿ ಅಸ್ತಿಕಾಯದ ವರ್ಣನೆಯಿದೆ. ಅದರಲ್ಲಿ ಪುದ್ಗಲಾಸ್ತಿಕಾಯದ ಕಾರಣದಿಂದ ಜೀವಾಸ್ತಿಕಾಯದಲ್ಲಿ ಶುದ್ಧ ಅಥವಾ ಅಶುದ್ಧ ಪರಿಣಾಮಗಳಾಗುತ್ತವೆಯೆಂದು ಮನ್ನಿಸಹೋದರೆ ಜೀವಾಸ್ತಿಕಾಯವು ಉಳಿಯುವುದಿಲ್ಲ . ಅದಕ್ಕಾಗಿ ಹೀಗೆ ಮನ್ನಿಸುವವನು ಜೀವಾಸ್ತಿಕಾಯವನ್ನು ತಿಳಿದುಕೊಳ್ಳುವುದಿಲ್ಲ . ಜ್ಞಾನದಲ್ಲಿ ಏಕಾಗ್ರವಾಗುವುದು, ರಾಗದಲ್ಲಿ ಏಕಾಗ್ರವಾಗುವುದು ಅಥವಾ ಹರ್ಷ-ಶೋಕಗಳಲ್ಲಿ ಏಕಾಗ್ರವಾಗುವುದು ಅದು ಜೀವಾಸ್ತಿಕಾಯದಲ್ಲಿ ಆಗುತ್ತದೆ. ಅದು ಚಾರಿತ್ರಮೋಹದ ಕಾರಣದಿಂದ ಆಗುತ್ತದೆಯೆಂದು ಮನ್ನಿಸುವವನಿಗೆ ಜೀವಾಸ್ತಿಕಾಯದ ಶ್ರದ್ಧೆಯಿಲ್ಲ . ಜ್ಞಾನಾವರಣೀಯಕರ್ಮದ ಕಾರಣದಿಂದ ಜೀವದಲ್ಲಿ ಜ್ಞಾನವು ಹೀನವಾಗುತ್ತದೆಯೆನ್ನುವಂತೆ ಇಲ್ಲವೇ ಇಲ್ಲ . ತನ್ನ ಕಾರಣದಿಂದ ಆಗುತ್ತದೆಯೆಂದು ತಿಳಿದುಕೊಂಡರೆ ಆತ್ಮನು ಪರದಿಂದ ಭಿನ್ನನಿದ್ದಾನೆಂಬುದು ನಿಶ್ಚಿತವಾಗುತ್ತದೆ ಮತ್ತು ಪರ್ಯಾಯದಲ್ಲಿ ರಾಗಾದಿಗಳು ಆಗುತ್ತವೆ ಅದು ಆತ್ಮನ ಸ್ವಭಾವವಲ್ಲವೆಂಬ ದ್ರವ್ಯದೃಷ್ಟಿಯಾಗುತ್ತದೆ.

ಸವಿಕಲ್ಪಉಪಯೋಗ ಮತ್ತು ನಿರ್ವಿಕಲ್ಪಉಪಯೋಗವೆಂದು ಉಪಯೋಗವು ಎರಡು ಪ್ರಕಾರವಾಗಿದೆ. ಸವಿಕಲ್ಪಉಪಯೋಗವು ಅದು ಜ್ಞಾನದ ಲಕ್ಷಣವಿದೆ, ವಿಶೇಷ ತಿಳಿಯುವುದು ಅದು ಅದರ ಕಾರ್ಯವಿದೆ. ಮತ್ತು ನಿರ್ವಿಕಲ್ಪಉಪಯೋಗವು ಅದು ದರ್ಶನದ ಲಕ್ಷಣವಿದೆ. ಅದರಲ್ಲಿ ಜ್ಞಾನೋಪಯೋಗದ ಎಂಟು ಪ್ರಕಾರಗಳಿವೆ.

**೧) ಕುಮತಿಜ್ಞಾನ ಉಪಯೋಗ :-** ಐದು ಇಂದ್ರಿಯ ಮತ್ತು ಮನಸ್ಸು ಇದೆ ಅದಕ್ಕಾಗಿ ಈ ಉಪಯೋಗವಿದೆಯೆಂಬುದಾಗಿಲ್ಲ ಅಥವಾ ಮೋಹನೀಯ ಕರ್ಮದ ಉದಯದ ಕಾರಣದಿಂದ ಮತಿಜ್ಞಾನವಿದೆಯೆಂಬುದಾಗಿಯೂ ಇಲ್ಲ. ಸ್ವಜ್ಞೇಯವನ್ನು ತಿಳಿಯುವುದಿಲ್ಲ ಪರಜ್ಞೇಯವನ್ನು ತಿಳಿಯುವುದಕ್ಕೆ ತಡೆಯೊಡ್ಡುವ ಆ ಕುಮತಿಜ್ಞಾನದ ಪ್ರವೃತ್ತಿಯು ಜೀವದ ಕಾರಣದಿಂದಾಗುತ್ತದೆ. ಅದು ಕರ್ಮದ ಕಾರಣದಿಂದಿಲ್ಲ . ಆತ್ಮವು ತಾನು ಜೀವಾಸ್ತಿಕಾಯವಿದೆಯೆಂದ ಮೇಲೆ ಕುಮತಿಜ್ಞಾನದ ಪ್ರವೃತ್ತಿ ಕೂಡ ತಾನು ಮಾಡಿದರೇನೇ ಆಗುತ್ತದೆ. ಸಂಸಾರದ ಕಲೆ ಅದು ಕುಮತಿಜ್ಞಾನವಿದೆ. ಅದು ಜೀವದ ಲಕ್ಷಣವಿದೆಯೆಂದು ಇಲ್ಲಿ ಹೇಳಿದೆ ಏಕೆಂದರೆ ಆ ಪ್ರವೃತ್ತಿಯೂ ಪುದ್ಗಲಾಸ್ತಿಕಾಯದಲ್ಲಿ ಆಗುವುದಿಲ್ಲ . ಆತ್ಮನ ಉಪಯೋಗರೂಪದ ಗುಣವು ಅದು ಅವನ ಲಕ್ಷಣವಿದೆ. ಕುಮತಿಜ್ಞಾನವಾಗುತ್ತದೆ ಆಗ ನಿಮಿತ್ತವೇನಿರುತ್ತದೆಂಬುದನ್ನು ತಿಳಿಸಿಕೊಡುವುದಕ್ಕಾಗಿ ವ್ಯವಹಾರದ ಶಾಸ್ತ್ರಗಳಲ್ಲಿ ಮನಸ್ಸು ಮತ್ತು ಇಂದ್ರಿಯಗಳ ಮುಖಾಂತರ ಅದು ಆಗುತ್ತದೆಯೆಂದು ಹೇಳಲಾಗಿದೆ ಆದರೆ ನಿಜವಾಗಿ ಆ ಕುಮತಿಜ್ಞಾನರೂಪದ ದೋಷವು ಜೀವಾಸ್ತಿಕಾಯದ್ದಿದೆ.

**೨) ಕುಶ್ರುತಜ್ಞಾನ ಉಪಯೋಗ :-** ಕುಶ್ರುತಜ್ಞಾನ ಉಪಯೋಗವು ಜೀವಾಸ್ತಿಕಾಯದ ಲಕ್ಷಣವಿದೆ ಏಕೆಂದರೆ ಕುಶ್ರುತಜ್ಞಾನವು ಪರದ ಕಾರಣದಿಂದ ಆಗುವುದಿಲ್ಲ . ಕುಶ್ರುತಜ್ಞಾನೋಪಯೋಗದ ಪ್ರವೃತ್ತಿಯು ಜೀವದ ಯೋಗ್ಯತೆಯಿಂದ

ಆಗುತ್ತದೆ. ಅದಕ್ಕಾಗಿ ಅದು ಚೈತನ್ಯದ ಪ್ರವೃತ್ತಿಯಿದೆ, ಜಡದ ಪ್ರವೃತ್ತಿಯಲ್ಲ . ಹೀಗೆ ತನ್ನ ಪರ್ಯಾಯದ ದೋಷವಿದೆಯೆಂಬುದನ್ನು ನಿಶ್ಚಿತ ಮಾಡಿದರೆ ಅದು ನನ್ನ ಸ್ವಭಾವವಲ್ಲವೆಂದು ತಿಳಿಯುವುದು, ಆದರೆ ಪರ್ಯಾಯದ ದೋಷವು ಪರದಿಂದಿದೆಯೆಂದು ಮನ್ನಿಸಿದರೆ ಅವನಿಗೆ ದೋಷ ನಿವಾರಿಸುವುದು ಉಳಿಯುವುದಿಲ್ಲ . ಪರದ ಲಕ್ಷ್ಯದಿಂದ ಶಾಸ್ತ್ರದ ಅಭ್ಯಾಸ ಮಾಡಿದರೆ ಅದು ಕುಶ್ರುತಜ್ಞಾನವಿದೆ. ಅದನ್ನು ಜೀವನು ತಾನೇ ಮಾಡುತ್ತಾನೆ, ಶಾಸ್ತ್ರದ ಕಾರಣದಿಂದ ಆಗುವುದಿಲ್ಲ .

**೩) ಕುಅವಧಿಜ್ಞಾನ ಉಪಯೋಗ :-** ಕುಅವಧಿಜ್ಞಾನೋಪಯೋಗವು ಅದು ಜೀವಾಸ್ತಿಕಾಯದ ಲಕ್ಷಣವಿದೆ, ಅದು ಆತ್ಮನ ಅಸ್ತಿಕಾಯದಲ್ಲಿ ಆಗುತ್ತದೆ. ವಿಭಂಗಜ್ಞಾನವು ಆತ್ಮನ ಜ್ಞಾನಗುಣದ ವಿರುದ್ಧ ಪರ್ಯಾಯವಿದೆ. ಅದು ಪರದ ಕಾರಣದಿಂದಿಲ್ಲ ಮತ್ತು ಕಾರ್ಯವಲ್ಲ . ಇವು ಮೂರು ಕುಜ್ಞಾನದ ಪ್ರಕಾರವಾದವು. ಈಗ ಸಮ್ಯಗ್ಜ್ಞಾನದ ವಿಷಯವಾಗಿ ಹೇಳುತ್ತಾರೆ.

**೪) ಸಮ್ಯಗ್ಮತಿಜ್ಞಾನ ಉಪಯೋಗ :-** ಸಮ್ಯಗ್ಮತಿಜ್ಞಾನಉಪಯೋಗವು ಜೀವದ ಲಕ್ಷಣವಿದೆ. ಅದರಿಂದ ಜೀವನು ತಿಳಿದುಬರುತ್ತಾನೆ. ನಾನು ಚಿದಾನಂದನಿದ್ದೇನೆಂದು ಆತ್ಮನು ತಿಳಿಯುತ್ತಾನೆ. ನನಗೆ ಪರದಿಂದ ಲಾಭ-ಹಾನಿಗಳಿಲ್ಲವೆಂಬ ಜ್ಞಾನವು ಆತ್ಮನಿಗಿದೆ, ಜಡದ್ದೂ ಇಲ್ಲ ಮತ್ತು ಆ ಬೇರೆ ಆತ್ಮರುಗಳದ್ದೂ ಇಲ್ಲ . ಗುರುವಿನ ಕಾರಣದಿಂದ ಸಮ್ಯಗ್ಮತಿಜ್ಞಾನವಾಗುವುದಿಲ್ಲ , ಗುರುವಿನಕಾರಣದಿಂದೆಂದು ಮನ್ನಿಸಲಾದರೆ ಎರಡು ಜೀವಾಸ್ತಿಕಾಯಗಳು ಒಂದಾಗುವವು, ಭಿನ್ನವಾಗಿ ಉಳಿಯಲಾರವು. ಇನ್ನು ಸಮ್ಯಗ್ಮತಿಜ್ಞಾನವು ಮನಸ್ಸು ಮತ್ತು ಇಂದ್ರಿಯಗಳ ಕಾರಣದಿಂದ ಆಗುತ್ತದೆನ್ನುವಂತೆಯೂ ಇಲ್ಲ , ಜ್ಞಾನಾವರಣೀಯ ಕರ್ಮದ ಕ್ಷಯೋಪಶಮದ ಕಾರಣದಿಂದಾಗುತ್ತದೆಯೆನ್ನುವಂತೆಯೂ ಇಲ್ಲ ಮತ್ತು ದರ್ಶನಮೋಹನೀಯಕರ್ಮದ ಅಭಾವವಾಗುವುದರಿಂದ ಸಮ್ಯಗ್ಮತಿಜ್ಞಾನವಾಗುವುದಿಲ್ಲ . ಅವೆಲ್ಲವೂ ಪುದ್ಗಲಾಸ್ತಿಕಾಯವಿವೆ. ಅವುಗಳ ಕಾರಣದಿಂದಾದರೆ ಜೀವಾಸ್ತಿಕಾಯ ಮತ್ತು ಪುದ್ಗಲಾಸ್ತಿಕಾಯಗಳೆರಡೂ ಭಿನ್ನವಾಗಿ ಉಳಿಯುವುದಿಲ್ಲ . ಮತಿಜ್ಞಾನವು ಅದು ಜೀವದ ಲಕ್ಷಣವಿದೆ.

**೫) ಸಮ್ಯಕ್‌ಶ್ರುತಜ್ಞಾನ ಉಪಯೋಗ :-** ಸಮ್ಯಕ್‌ಶ್ರುತಜ್ಞಾನ ಉಪಯೋಗವು ಜೀವಾಸ್ತಿಕಾಯದ ಲಕ್ಷಣವಿದೆ. ಶಬ್ದವನ್ನು ಕೇಳುವುದರಿಂದ ಅದು ಆಗುವುದಿಲ್ಲ ಏಕೆಂದರೆ ಅದು ಆತ್ಮನ ಪ್ರವೃತ್ತಿರೂಪ ಉಪಯೋಗವಿದೆ. ಅದನ್ನು ಇಲ್ಲಿ ಗುಣವೆಂದು ಹೇಳಿದೆ ಮತ್ತು ಆ ಗುಣವು ಜೀವದ ಲಕ್ಷಣವಿದೆ, ಈ ಶ್ರುತಜ್ಞಾನದ ಪರಿಣತಿಯು ಆತ್ಮನಿಂದ ಆಗುತ್ತದೆ, ಆದರೆ ದೇವ-ಗುರು-ಶಾಸ್ತ್ರದಿಂದಾಗುವುದಿಲ್ಲವೆಂದು ನಿಶ್ಚಿತ ಮಾಡಿದ ನಂತರ ನಿಜವಾದ ಜ್ಞಾನವಾಗುತ್ತದೆ ಆಗ ನಿಮಿತ್ತವು ಯಾವುದಿತ್ತೆಂಬುದನ್ನು ತಿಳಿಸಿಕೊಡುವುದಕ್ಕಾಗಿ ಸಮ್ಯಗ್ಜ್ಞಾನದಲ್ಲಿ ದೇವ-ಗುರುಗಳು ನಿಮಿತ್ತವಿರುತ್ತಾರೆಂದು ಕಥನ ಮಾಡುವುದರಲ್ಲಿ ಬಂದಿದೆ, ಆದರೆ ಇಲ್ಲಿ ಆ ಮಾತು ಇಲ್ಲ . ಇಲ್ಲಿಯಂತೂ ಸಮ್ಯಕ್‌ಶ್ರುತಜ್ಞಾನವು ಆತ್ಮನ ಸಾಮರ್ಥ್ಯದಿಂದಾಗುತ್ತದೆಯೆಂದು ಹೇಳಿದೆ. ಅದಕ್ಕಾಗಿ ಅದು ಆತ್ಮನ ಲಕ್ಷಣವಿದೆ-ಅದು ಆತ್ಮನನ್ನು ತಿಳಿಯುತ್ತದೆ.

ಒಂದು ಸಮಯದ ಪರ್ಯಾಯವು ಪರದಿಂದ ಆಗುತ್ತದೆಯೆಂದು ಮನ್ನಿಸಹೋದರೆ ಜೀವಾಸ್ತಿಕಾಯದ ಅಸ್ತಿತ್ವವು ಉಳಿಯುವುದಿಲ್ಲ . ಜೀವದ ಪ್ರದೇಶಗಳು ಅಸಂಖ್ಯವಿದ್ದು ಅದರಲ್ಲಿ ತ್ರಿಕಾಲಗುಣ ಮತ್ತು ಪರ್ಯಾಯಗಳು ಜೊತೆಯಲ್ಲಿವೆ, ಅವೆಲ್ಲವುಗಳಿಂದ ಜೀವಾಸ್ತಿಕಾಯವಿದೆ. ಅದರೊಳಗಿಂದ ಯಾವುದೇ ಅಂಶವನ್ನು ಪರದ ಕಾರಣದಿಂದೆಂದು ಮನ್ನಿಸಹೋದರೆ ಜೀವಾಸ್ತಿಕಾಯವು ಸಿದ್ಧವಾಗುವುದಿಲ್ಲ . ಸರ್ವಜ್ಞ ಭಗವಂತರು ಮತ್ತು ಕುಂದಕುಂದಾಚಾರ್ಯದೇವರು ಒಂದೊಂದು ಜೀವದ ವರ್ಣನೆಮಾಡುತ್ತ ಮತಿಶ್ರುತಜ್ಞಾನ ಮೊದಲಾದ ಯಾವ ಪರ್ಯಾಯಗಳಾಗುತ್ತವೆ ಅವು ನಿನ್ನ ಕಾರಣದಿಂದ ಆಗುತ್ತವೆಯೆಂದು ಹೇಳಿದ್ದಾರೆ. ಹೆಚ್ಚು ಶಾಸ್ತ್ರಗಳನ್ನು ಅಭ್ಯಾಸಿಸುವುದರಿಂದ ಆಗುತ್ತವೆ ಎಂಬುದಾಗಿಲ್ಲ , ಅಥವಾ ದೇವ-ಗುರುಗಳ ಸಂಗತಿ ಮಾಡುವುದರಿಂದ ಆಗುತ್ತವೆಯೆಂದು ಕೂಡ ಇಲ್ಲ . ಹೀಗೆ ಮನ್ನಿಸಿದರೆ ಪರದ

ಮೇಲಿನ ದೃಷ್ಟಿಯು ಹೊರಟು ಹೋಗಿ ತನ್ನೆಡೆಗೆ ಒಲಿಯುತ್ತದೆ ಆಗ ಧರ್ಮವಾಗುತ್ತದೆ. ಧರ್ಮವೇನು ಹೊರಗಿನ ಪ್ರವೃತ್ತಿಯಿಂದ ಆಗುವುದಿಲ್ಲ .

**೬) ಅವಧಿಜ್ಞಾನ ಉಪಯೋಗ :-** ಅವಧಿಜ್ಞಾನ ಉಪಯೋಗವು ಕೂಡ ಆತ್ಮನ ಗುಣವಿದೆ, ಆತ್ಮನಲ್ಲಿ ಆಗುತ್ತದೆ. ಅದಕ್ಕಾಗಿ ಆ ಲಕ್ಷಣವು ಆತ್ಮನನ್ನು ತಿಳಿಯುತ್ತದೆ. ಅವಧಿಜ್ಞಾನಾವರಣೀಯ ಕರ್ಮದ ಪರದೆಯು ಹೊರಟುಹೋಗುವುದರಿಂದ ಆ ಉಪಯೋಗವಿದೆಯೆಂದಿಲ್ಲ .

**೭) ಮನಃಪರ್ಯಾಯಜ್ಞಾನ ಉಪಯೋಗ :-** ಮನಃಪರ್ಯಾಯ ಜ್ಞಾನೋಪಯೋಗವು ಇದು ಆತ್ಮನ ಪರಿಣತಿಯಿದೆ. ಮನಃಪರ್ಯಯಜ್ಞಾನಾವರಣೀಯ ಕರ್ಮವು ದೂರವಾಗುವುದರಿಂದ ಆ ಜ್ಞಾನೋಪಯೋಗವು ಆಗುತ್ತದೆ ಎಂಬುದಾಗಿಲ್ಲ ಏಕೆಂದರೆ ಆ ಉಪಯೋಗವು ಪರದಿಂದಿಲ್ಲ ಆದರೆ ಆತ್ಮನ ಸಾಮರ್ಥ್ಯದಿಂದಿದೆ, ಅದು ಜೀವಾಸ್ತಿಕಾಯವನ್ನು ತಿಳಿಯುತ್ತದೆ.

**೮) ಕೇವಲಜ್ಞಾನ ಉಪಯೋಗ :-** ಈ ಉಪಯೋಗವು ಆತ್ಮನದಿದೆ. ಅದರಿಂದ ಅದು ಕರ್ಮದ ಶಕ್ತಿಯ ಕಾರಣದಿಂದ ತಡೆದಿದೆಯೆಂಬುದಾಗಿಲ್ಲ . ಆದರೆ ತನ್ನ ಕಾರಣದಿಂದ ತಡೆಯಲ್ಪಟ್ಟು ಅದು ತನ್ನ ಕಾರಣದಿಂದ ಕೇವಲಜ್ಞಾನರೂಪದಿಂದಾಗಿದೆ. ಅದು ಆತ್ಮನ ಸಾಮಾರ್ಥ್ಯವಿದೆ. ಪುದ್ಗಲದ ಶಕ್ತಿಯ ವರ್ಣನೆಮಾಡುತ್ತ ಪುದ್ಗಲದ್ರವ್ಯದಲ್ಲೂ ಕೂಡ ಯಾವುದೇ ಒಂದು ಅಪೂರ್ವ ಶಕ್ತಿಯು ಕಂಡುಬರುತ್ತದೆ ಅದರಿಂದ ಜೀವನಲ್ಲಿ ಕೇವಲಜ್ಞಾನಸ್ವಭಾವವಿದೆ ಅದು ಕೂಡ ಅದರ ಶಕ್ತಿಯಿಂದ ವಿಕಸಿಸಿ ಬಿಡುತ್ತದೆಯೆಂದು ಕಾರ್ತಿಕೇಯಾನುಪ್ರೇಕ್ಷೆಯ ೨೧೧ ನೆಯ ಗಾಥೆಯಲ್ಲಿ ಹೇಳಿದೆ. ಈ ಕಥನವು ನಿಮಿತ್ತದ್ದಿದೆ. ಪುದ್ಗಲವೂ ನಿಮಿತ್ತವಾಗುವ ಉತ್ಕೃಷ್ಟ ಸಾಮಾರ್ಥ್ಯವೆಷ್ಟಿದೆಯೆಂಬುದನ್ನು ತಿಳಿಸಿಕೊಟ್ಟಿದೆ. ಆದರೆ ಇಲ್ಲಿಯಂತೂ ತಾನು ಸ್ವತಃ ಕೇವಲಜ್ಞಾನರೂಪದಷ್ಟು ಜೀವದ ಸಾಮರ್ಥ್ಯವಿದೆಯೆಂದು ಹೇಳಿದೆ ಈ ರೀತಿಯಾಗಿ ಜ್ಞಾನದ ಶುದ್ಧಾಶುದ್ಧುಪಯೋಗದ ಎಂಟು ಪ್ರಕಾರಗಳನ್ನು ಹೇಳಲಾಯಿತು. ಈಗ ದರ್ಶನ ಉಪಯೋಗದ ವಿಚಾರ ಹೇಳುತ್ತಾರೆ.

**೧) ಚಕ್ಷುದರ್ಶನ ಉಪಯೋಗ :-** ಚಕ್ಷುದರ್ಶನ ಉಪಯೋಗವು ಆತ್ಮನ ಗುಣವಿದೆ. ಕಣ್ಣುಗಳಿಂದ ನೋಡುವುದು ಅದು ದರ್ಶನ ಉಪಯೋಗವಲ್ಲ ಆದರೆ ದರ್ಶನ ಗುಣದ ಚೇತನ ಪರಿಣತಿಯು ಅದು ಚಕ್ಷುದರ್ಶನ ಉಪಯೋಗವಿದೆ. ಅದು ಪುದ್ಗಲದ ಕಾರಣದಿಂದ ಇಲ್ಲ. ಚಕ್ಷುದರ್ಶನಾವರಣೀಯ ಕರ್ಮದ ಕಾರಣದಿಂದ ತಡೆಯಲ್ಪಟ್ಟಿಲ್ಲ, ಏಕೆಂದರೆ ಚಕ್ಷುದರ್ಶನವು ಚೈತನ್ಯದ ಪ್ರವೃತ್ತಿಯಿದೆ. ಪುದ್ಗಲಾಸ್ತಿಕಾಯವಿದೆ ಅಥವಾ ಜೀವಾಸ್ತಿಕಾಯವಿದೆ ಎಂಬುದಾಗಿಲ್ಲ ಆದರೆ ಜೀವವಿದೆ ಅಥವಾ ಜೀವಾಸ್ತಿಕಾಯವಿದೆಯೆಂದು ಪರದಿಂದ ಭೇದಜ್ಞಾನ ಮಾಡಿದಲ್ಲದೆ ತನ್ನ ಕಡೆಗೆ ಪ್ರವೃತ್ತಿಯಾಗುವುದಿಲ್ಲ.

**೨) ಅಚಕ್ಷುದರ್ಶನ ಉಪಯೋಗ :-** ಕಣ್ಣುಗಳನ್ನು ಹೊರತುಪಡಿಸಿ ನಾಲ್ಕು ಇಂದ್ರಿಯಗಳ ಪ್ರವೃತ್ತಿಯುಳ್ಳ ದರ್ಶನ ಗುಣದ ಉಪಯೋಗವು ಅದು ಜೀವವಿದ್ದರೆ ಇದೆ, ಕಿವಿ ಮೂಗು ಮೊದಲಾದವುಗಳಿರುವುದರಿಂದ ಇವೆ-ಎಂಬುದಾಗಿಲ್ಲ. ಹೀಗೆ ಸ್ವತಂತ್ರ ದೃಷ್ಟಿಯಾಗದಿದ್ದರೆ ಜೀವದ ನಿಜವಾದ ಶ್ರದ್ಧೆಯಾಗುವುದಿಲ್ಲ. ಈ ರೀತಿ ಭೇದಜ್ಞಾನ ಮಾಡುವುದು ಅದು ಧರ್ಮವಿದೆ. ವೀತರಾಗದ ಯಾವ ಶಾಸ್ತ್ರವು ಕೂಡ ಸ್ವತಂತ್ರತೆಯದೇ ಮಾತು ಹೇಳುತ್ತದೆ.

**೩) ಅವಧಿದರ್ಶನ ಉಪಯೋಗ :-** ಇದು ಕೂಡ ಆತ್ಮನ ಗುಣವಿದೆ. ಇದರಿಂದ ಆತ್ಮನು ತಿಳಿದು ಬರುತ್ತಾನೆ.

**೪) ಕೇವಲದರ್ಶನ ಉಪಯೋಗ :-** ಇದು ಆತ್ಮನಲ್ಲಿ ಆಗುತ್ತದೆ, ಇದು ಆತ್ಮನ ಸಾಮರ್ಥ್ಯವಿದೆ. ಕರ್ಮದ ಅಭಾವವಾಗುವುದರಿಂದ ಆಗುತ್ತದೆಯೆಂಬುದಾಗಿಲ್ಲ. ಈ ರೀತಿ ಜ್ಞಾನೋಪಯೋಗದ ಎಂಟು ಭೇದಗಳು ಮತ್ತು ದರ್ಶನೋಪಯೋಗದ ನಾಲ್ಕು ಭೇದಗಳು ಹೀಗೆ ಉಪಯೋಗದ ಒಟ್ಟು ಹನ್ನೆರಡು ಪ್ರಕಾರಗಳನ್ನು ಹೇಳಿತು.

ಕೇವಲಜ್ಞಾನ ಮತ್ತು ಕೇವಲದರ್ಶನ ಇವೆರಡೂ ಉಪಯೋಗಗಳು ಜೀವದ ಶುದ್ಧ ಲಕ್ಷಣವಿವೆ. ಮತ್ತು ಉಳಿದ ಹತ್ತು ಪ್ರಕಾರದ ಉಪಯೋಗಗಳು ಅಶುದ್ಧ ಜೀವದ ಲಕ್ಷಣವಿವೆ. ಇವೆಲ್ಲವು ಜೀವದ ಗುಣಗಳೆಂದು ತಿಳಿಯಬೇಕು. ಮೂಲ ಶ್ಲೋಕದಲ್ಲಿ ಭ. ಕುಂದಕುಂದಾಚಾರ್ಯದೇವರು ಅಶುದ್ಧಪರ್ಯಾಯದ ಮಾತು ಹೇಳಿದ್ದಾರೆ. ಮತ್ತು ಅಮೃತಚಂದ್ರಾಚಾರ್ಯದೇವರು ಶುದ್ಧಪರ್ಯಾಯದ ಮಾತು ಕೂಡ ಜೊತೆಯಲ್ಲಿ ಹೇಳಿದ್ದಾರೆ.

ಆತ್ಮನಲ್ಲಿ ಚೇತನ ಮತ್ತು ಉಪಯೋಗ ಗುಣಗಳು ಶುದ್ಧ ಮತ್ತು ಅಶುದ್ಧವಿವೆ. ಇದೇ ರೀತಿ ಪರ್ಯಾಯಗಳು ಕೂಡ ಶುದ್ಧ-ಅಶುದ್ಧ ಪ್ರಕಾರದಿಂದಿವೆ. ಯಾವ ಅಗುರುಲಘು ಷಟ್‌ಗುಣಹಾನಿವೃದ್ಧಿರೂಪದ ಪರ್ಯಾಯಗಳನ್ನು ಆಗಮ ಪ್ರಮಾಣದಿಂದ ತಿಳಿದುಕೊಳ್ಳಲಾಗುತ್ತದೆ ಅವನ್ನಂತೂ ಶುದ್ಧಪರ್ಯಾಯಗಳೆಂದು ಹೇಳಲಾಗುತ್ತದೆ ಮತ್ತು ಪರದ್ರವ್ಯದ ಸಂಬಂಧದಿಂದ ಯಾವ ಚತುರ್ಗತಿರೂಪದ ನರ-ನಾರಕ ಮೊದಲಾದ ವ್ಯಂಜನಪರ್ಯಾಯಗಳಿವೆ ಅವಂತೂ ಆತ್ಮನ ಅಶುದ್ಧ ಪರ್ಯಾಯಗಳಿವೆ. ದೇವ, ಮನುಷ್ಯ, ನಾರಕಿ ಮತ್ತು ತಿರ್ಯಂಚದ ಪರ್ಯಾಯಗಳು ಆತ್ಮನಲ್ಲಿ ಬರುತ್ತವೆ ಅದು ಆತ್ಮನ ಸ್ವಭಾವವಿದೆ. ಅದು ಕರ್ಮದ ಭಾವವಲ್ಲ, ಅದಕ್ಕಾಗಿ ಕರ್ಮದ ಕಾರಣದಿಂದ ಆಗುವುದಿಲ್ಲ. ನರ, ನಾರಕಿಯ ಶರೀರದ ಕಾರಣದಿಂದ ಆ ಪರ್ಯಾಯಗಳಿಲ್ಲ. ಆತ್ಮನ ವಿಶುದ್ಧ ವ್ಯಂಜನಪರ್ಯಾಯಗಳಿವೆ ಅವು ಜೀವಾಸ್ತಿಕಾಯವನ್ನು ತಿಳಿಯುತ್ತವೆ. ಇರುವೆ, ಆನೆ, ಸಿಂಹ ಮೊದಲಾದವುಗಳ ಶರೀರದಲ್ಲಿ ತನ್ನ ಯೋಗ್ಯತೆಯಿಂದ ಇದೆ. ಆ ಆಕಾರದಿಂದ ಜೀವವು ಸ್ವಯಂ ಆಗುತ್ತದೆ. ನರಕದಲ್ಲಿ ಹೊದರೆ ಅಲ್ಲಿಯ ದೇಹ ಪ್ರಮಾಣದ ಆಕಾರವಾಗುತ್ತದೆ ಅದು ಜೀವದ ಆಕಾರವಿದೆ.

ಇಲ್ಲಿ ಸ್ಥೂಲ ಋಜುಸೂತ್ರನಯದ ಅಪೇಕ್ಷೆಯಿಂದ ನಾರಕೀ ಮೊದಲಾದ ಪರ್ಯಾಯಗಳು ಲಕ್ಷಾಂತರ ಕಾಲದವರೆಗೆ ಇರುತ್ತವೆ ಅವನ್ನು ಪರ್ಯಾಯವೆನ್ನುತ್ತಾರೆ. ನಾರಕಿಯಿಂದ ಮನುಷ್ಯವಾಗುತ್ತದೆ, ಮನುಷ್ಯನಿಂದ ದೇವವಾಗುತ್ತದೆ, ಮನುಷ್ಯನಿಂದ ತಿರ್ಯಂಚವಾಗುತ್ತದೆ ಹೀಗೆ ಪರ್ಯಾಯಗಳು ಬದಲಾಗುತ್ತವೆ ಅವನ್ನು ಇಲ್ಲಿ ಪರ್ಯಾಯವೆಂದು ಗಣಿಸಲಾಗಿದೆ. ಅವು ಜೀವದ ಪರ್ಯಾಯಗಳಿವೆ ಏಕೆಂದರೆ ಅವುಗಳ ಆಕಾರರೂಪವಾಗಿ ಜೀವವು ಆಗುತ್ತದೆ. ಕರ್ಮ ಅಥವಾ ಶರೀರಗಳು ಆಗುವುದಿಲ್ಲ. ಈಗ ಹದಿನೇಳನೆಯ ಗಾಥೆಯಲ್ಲಿ ವಸ್ತುವಿನ ನಾಶ ಅಥವಾ ವಸ್ತುವಿನ ಉತ್ಪತ್ತಿಯಾಗುವುದಿಲ್ಲವೆಂಬುದನ್ನು ಹೇಳುತ್ತಾರೆ, -

ಮಣುಸತ್ತಣೇಣ ಣಟ್ಠೋ ದೇಹೀ ದೇವೋ ಹವೇದಿ ಇದರೋ ವಾ ।
ಉಭಯತ್ಥ ಜೀವಭಾವೋ ಣ ಣಸ್ಸದಿ ಣ ಜಾಯದೇ ಅಣ್ಣೋ ॥೧೭॥

**ಜೀವ ಮನುಷ್ಯತನದಿಂದ ನಷ್ಟವಾಗಿ ದೇವವಿಲ್ಲವೆ ಇತರವಾಗುವುದು ।**
**ಅವೆರಡರಲಿ ಜೀವಭಾವ ನಷ್ಟಮೇಣೆತರ ಉತ್ಪನ್ನ ತಾನಾಗಲಿಲ್ಲ ॥೧೭॥**

**ಅರ್ಥ :-** ಮನುಷ್ಯ ಪರ್ಯಾಯದ ವ್ಯಯವಾಗಿ ದೇವ ಪರ್ಯಾಯವಾಗುತ್ತದೆ. ಇಲ್ಲದಿದ್ದರೆ ನಾರಕಿ, ತಿರ್ಯಂಚ ಮತ್ತು ಮನುಷ್ಯ ಕೂಡ ಆಗುತ್ತದೆ. ನೋಡಿರಿ, ಇಲ್ಲಿ ಮನುಷ್ಯ ಪರ್ಯಾಯದಲ್ಲಿ ಆಚಾರ್ಯ ಭಗವಂತರಿದ್ದರು ಅದರ ನಾಶ ಮಾಡಿ ದೇವಪರ್ಯಾಯರೂಪವಾಗಿದ್ದಾದರೆ ಅದರ ಸಂಧಿ ಮಾಡಿದ್ದಾರೆ. ಆ ಮಾತನ್ನು ಮುಖ್ಯ ಸ್ವೀಕರಿಸಿದೆ. ದೇವ ಪರ್ಯಾಯವಾಗಿದ್ದು ಅದು ದೇವನಾಮಕರ್ಮದ ಉದಯದಿಂದಾಗಿದೆಯೆಂದಲ್ಲ. ಆದರೆ ನಿಜವಾಗಿ ಜೀವದ ಯೋಗ್ಯತೆಯ ಕಾರಣದಿಂದ ಆಗಿದೆ. ಜೀವಾಸ್ತಿಕಾಯದ ಸಾಮರ್ಥ್ಯದಿಂದ ಆಗಿದೆ. ದೇವದ ಆಯುಷ್ಯವು ಕಟ್ಟುವುದರಿಂದ ದೇವದಲ್ಲಿ ಹೋಗಿ ಉತ್ಪನ್ನವಾಯಿತೆಂದಿಲ್ಲ ಮತ್ತು ಮನುಷ್ಯದ ಆಯುಷ್ಯವು ಪೂರ್ಣವಾಗುವುದರಿಂದ ಇಲ್ಲಿಂದ

ಹೋಗಬೇಕಾಯಿತೆಂದೂ ಕೂಡ ಇಲ್ಲ. ಏಕೆಂದರೆ ಮನುಷ್ಯದಲ್ಲಿರಲಿ ಅಥವಾ ದೇವದಲ್ಲಿ ಹೋಗಲಿ ಅದು ತನ್ನ ಅಸ್ತಿಕಾಯದ ಸಾಮರ್ಥ್ಯದ ಕಾರಣದಿಂದಿದೆ. ನಾಮಕರ್ಮವಂತೂ ಪುದ್ಗಲಾಸ್ತಿಕಾಯವಿದೆ. ಪುದ್ಗಲಾಸ್ತಿಕಾಯವಂತೂ ನಿಮಿತ್ತ ಮಾತ್ರವಿದೆ. ಅದರ ಕಾರಣದಿಂದ ಜೀವದ ಪರ್ಯಾಯವಾದರೆ ಜೀವಾಸ್ತಿಕಾಯ ಮತ್ತು ಪುದ್ಗಲಾಸ್ತಿಕಾಯಗಳು ಒಂದಾಗಿ ಹೋಗುವವು, ಎರಡು ಭಿನ್ನವಾಗಿ ಉಳಿಯಲಾರವು. ಆದರೆ ಹೀಗಾಗುವುದಿಲ್ಲ.

ಜೀವಾಸ್ತಿಕಾಯವು ಅಸಂಖ್ಯ ಪ್ರದೇಶಿಯಿದೆ, ಅದು ತನ್ನ ಯೋಗ್ಯತೆಯಿಂದ ಮನುಷ್ಯ ಪರ್ಯಾಯವನ್ನು ಬಿಡುತ್ತದೆ. ಆಯುಷ್ಯವು ಪೂರ್ಣವಾಯಿತು ಮತ್ತು ಬಿಡಬೇಕಾಯಿತು ಎಂಬುದಂತೂ ನಿಮಿತ್ತದ ಕಥನವಿದೆ. ಯಾವನ ಆಯುಷ್ಯವು ಪೂರ್ಣವಾಗಿ ಹೋಗಿದೆ ಅವನು ಯಾವ ಔಷಧೋಪಚಾರದಿಂದ ಬದುಕುವುದಿಲ್ಲವೆಂಬುದು ಕೂಡ ನಿಮಿತ್ತದ ಮಾತಿದೆ. ನಿಜವಾಗಿಯಂತೂ ಜೀವನು ತನ್ನ ಯೋಗ್ಯತೆಯಿಂದ ಮನುಷ್ಯ ಪರ್ಯಾಯವನ್ನು ಬಿಟ್ಟು ದೇವ ಮೊದಲಾದ ಪರ್ಯಾಯರೂಪವಾಗಿದ್ದಾನೆ. ಇದರಲ್ಲಿ ಸಮಯಮಾತ್ರ ಹಿಂದೆ ಮುಂದೆ ಆಗುವಂತಿಲ್ಲ. ಜೀವನು ಮನುಷ್ಯ ಪರ್ಯಾಯದಲ್ಲಿ ಉಳಿದಿರುವುದು ಅದು ಅವನ ಸ್ವಕಾಲದ ಸಾಮರ್ಥ್ಯದ ಕಾರಣದಿಂದ ಉಳಿದಿದ್ದಾನೆ. ಮತ್ತು ಒಂದು ವೇಳೆ ನರಕ ಪರ್ಯಾಯದಲ್ಲಿ ಹೋದರೆ ಅಲ್ಲಿ ಕೂಡ ತನ್ನ ಕಾರಣದಿಂದ ಆ ಆಕಾರವಾಗಿದ್ದಾನೆ. ಮನುಷ್ಯನು ಸತ್ತು ತಿರ್ಯಂಚವಾಗುವುದು ಕೂಡ ತನ್ನ ಯೋಗ್ಯತೆಯ ಕಾರಣದಿಂದಿದೆ. ಮನುಷ್ಯಪರ್ಯಾಯವು ಬದಲಾಗಿ ನಿಗೋದದ ಪರ್ಯಾಯದ ಯೋಗ್ಯತೆಯು ತನ್ನ ಕಾರಣದಿಂದಿದೆ. ಕರ್ಮದ ಕಾರಣದಿಂದಂತೂ ಇಲ್ಲ ಆದರೆ ಯಾವ ಪ್ರಕಾರದ ದೇಹದ ಸಂಯೋಗವಾಗಿದೆ ಆ ಪ್ರಕಾರದಿಂದ ಜೀವನು ಸ್ವಯಂ ಆಗಿದ್ದರೂ ಆ ದೇಹದ ಕಾರಣದಿಂದ ಆಗುವುದಿಲ್ಲ. ಮನುಷ್ಯನು ಮರಣ ಹೊಂದಿ ಪುನಃ ಮನುಷ್ಯನಾದರೂ ಅಲ್ಲಿ ಕೂಡ ತನ್ನ ಕಾರಣದಿಂದಿದೆ ಆ ಪರ್ಯಾಯವು ಜೀವಾಸ್ತಿಕಾಯವಿದೆಯೆಂದು ತಿಳಿಸಿದೆ.

**ಭಾವಾರ್ಥ :-** ಅನಾದಿಕಾಲದಿಂದ ಸಂಸಾರೀ ಜೀವನು ಮೋಹದ ವಶವರ್ತಿಯಾಗಿ ಅಜ್ಞಾನಭಾವ ರೂಪದಿಂದ ಪರಿಣಮಿಸಿದ್ದಾನೆ. ಜೀವನು ತನ್ನ ಮೋಹಭಾವದಿಂದ ಭ್ರಮಣಮಾಡುತ್ತಾನೆ. ಕರ್ಮದಿಂದಲ್ಲ ಕರ್ಮವಂತೂ ನಿಮಿತ್ತಮಾತ್ರವಿದೆ. ಆತ್ಮನು ತಾನು ತನ್ನನ್ನು ಮರೆತು ಕರ್ಮದ ವಶವರ್ತಿಯಾಗುತ್ತಾನೆ. ಇದು ಜೀವಾಸ್ತಿಕಾಯದ ವರ್ಣನೆಯು ನಡೆಯುತ್ತಿದೆ. ಅದರಲ್ಲಿ ಜೀವನು ತಾನು ತನ್ನ ಅಪರಾಧದಿಂದ ಕರ್ಮದ ವಶವರ್ತಿಯಾಗಿ ಸಂಸಾರದಲ್ಲಿ ಭ್ರಮಿಸುತ್ತಿದ್ದಾನೆ. ಆದರೆ ಅವನನ್ನು ಕರ್ಮವು ತನ್ನ ವಶದಲ್ಲಿ ತೆಗೆದುಕೊಳ್ಳುವುದಿಲ್ಲ. ಕರ್ಮವಂತೂ ಪುದ್ಗಲಾಸ್ತಿಕಾಯವಿದೆ, ಜೀವಾಸ್ತಿಕಾಯವು ಅದರ ವಶವರ್ತಿಯಾಗುವಂತೆ ಜೀವದ ಸ್ವಭಾವವೇ ಇಲ್ಲ, ಆದರೆ ಅಜ್ಞಾನದಶೆಯರೂಪವಾಗುವಂಥ ಯೋಗ್ಯತೆಯು ಸ್ವಯಂ ಜೀವದ್ದಿದೆ. ಅದು ಪರದ ಕಾರಣದಿಂದಿದೆಯೆಂದು ಮನ್ನಿಸುವವನು ಜೀವಾಸ್ತಿಕಾಯವನ್ನು ತಿಳಿಯುವುದಿಲ್ಲ. ನಿಗೋದದಲ್ಲಿ ಕೂಡ ಜೀವವು ಕರ್ಮದ ಬಲದ ಕಾರಣದಿಂದ ಉಳಿದಿದೆಯೆಂಬುದಾಗಿಲ್ಲ. ತನ್ನ ಸ್ವರೂಪವನ್ನು ಮರೆತು ಬಿಡುವುದು ಅಥವಾ ಸ್ವರೂಪದ ಆರಾಧನೆ ಮಾಡುವುದು ಅದನ್ನು ಜೀವವು ಸ್ವಯಂ ಮಾಡುತ್ತದೆ. ಏಕೆಂದರೆ ದೋಷವಾಗುವುದು ಅಥವಾ ಆಗದಿರುವುದು ಅದು ತನ್ನ ಅಸಂಖ್ಯ ಪ್ರದೇಶದಲ್ಲಿ ಆಗುತ್ತದೆ, ಪರದಲ್ಲಿ ಆಗುವುದಿಲ್ಲ.

ದೋಷ ಮಾಡುವುದು ಅದು ಜೀವಾಸ್ತಿಕಾಯದ ಸ್ವಭಾವವಿದೆ, ಜಡದ ಸ್ವಭಾವವಿಲ್ಲ. ಜಡದ ಕಾರಣದಿಂದ ದೋಷವಾಗುತ್ತದೆಯೆಂದು ಮನ್ನಿಸಿದರೆ ಎರಡು ದ್ರವ್ಯಗಳು ಒಂದಾಗಿ ಹೋಗುವವು. ಹೀಗೆ ಆಗುವುದು ವೀತರಾಗ ದೇವರ ಕಥನದ ವಿರೋಧವಾಗುವುದು. ದೋಷವನ್ನು ತಾನು ತನ್ನ ಕಾರಣದಿಂದ ಮಾಡುವುದು ಮತ್ತು ಪರದಿಂದ ಆಗುತ್ತದೆಯೆಂದು ಮನ್ನಿಸುವುದು ಅದು ದೊಡ್ಡ ವಿರೋಧವಿದೆ, ಹೀಗೆ ಮನ್ನಿಸುವವನು ಮಿಥ್ಯಾದೃಷ್ಟಿಯಾದ

ಮೂಢನಿದ್ದಾನೆ. ಜೀವ-ಅಜೀವದ ಭಿನ್ನತೆಯದು ಕೂಡ ಅವನಿಗೆ ಶ್ರದ್ಧೆಯಿಲ್ಲ ಕರ್ಮದ ಇರುವಿಕೆ ಅಥವಾ ಕರ್ಮದ ಹೋಗುವಿಕೆ ಅದು ಆತ್ಮನಲ್ಲಿ ಇಲ್ಲವೇ ಇಲ್ಲ. ಗೊಮ್ಮಟಸಾರದಲ್ಲಿ ನಿಮಿತ್ತದ ಕಥನವು ವಿಪುಲವಾಗಿ ಬರುತ್ತದೆ. ಅದಂತೂ ಜೀವವು ಅದು ತನ್ನ ಯೋಗ್ಯತೆಯಿಂದ ದೋಷರೂಪವಾಗಿ ಪರಿಣಮಿಸುತ್ತದೆ ಆಗ ಕರ್ಮವನ್ನು ನಿಮಿತ್ತವೆಂದು ಹೇಳಲಾಗುತ್ತದೆ. ಈ ಅಪೇಕ್ಷೆಯಿಂದ ಕಥನವಿದೆ. ಈರೀತಿಯಾಗಿ ಜೀವವು ತಾನೆ ಮೋಹರೂಪವಾಗುತ್ತದೆ.

ಈ ಆತ್ಮನ ವೈಭಾವಿಕ ಅಶುದ್ಧ ಪರ್ಯಾಯವು ಅನಾದಿಯಿಂದ ಇದೆ. ಇದರ ಮಾತು ಹೇಳಿದೆ. ಆ ಅಶುದ್ಧ ಪರ್ಯಾಯದಿಂದ ಜೀವಾಸ್ತಿಕಾಯವು ತಿಳಿದುಬರುತ್ತದೆ. ಈಗ ಆತ್ಮನಲ್ಲಿ ಅನಾದಿ ಅನಂತ ಶುದ್ಧ ಪರ್ಯಾಯವಿದೆ ಅದರ ಮಾತು ಹೇಳುತ್ತಾರೆ. ಸ್ವಾಭಾವಿಕ ಷಟ್‌ಗುಣಹಾನಿವೃದ್ಧಿರೂಪದ ಯಾವ ಅಗುರುಲಘು ಪರ್ಯಾಯವು ಧಾರಾವಾಹಿಯಾಗಿ ಅಖಂಡಿತ ತ್ರಿಕಾಲ ಸಮಯವರ್ತಿಯಿದೆ ಅದು ಶುದ್ಧಪರ್ಯಾಯವಿದೆ ಈ ಪರ್ಯಾಯವು ಜೀವದಲ್ಲಿ ಆಗುತ್ತದೆಯೆಂಬ ಮಾತನ್ನು ಇಲ್ಲಿ ಹೇಳುವುದಿದೆ. ಈ ಶುದ್ಧಪರ್ಯಾಯರೂಪದಿಂದ ಪರಿಣಮಿಸದೆ ಜೀವವು ಅಶುದ್ಧರೂಪದಿಂದ ಪರಿಣಮಿಸುತ್ತದೆಯೆಂಬ ಮಾತನ್ನಿಲ್ಲಿ ಹೇಳುವುದಿಲ್ಲ ಆದರೆ ಇಲ್ಲಿಯಂತೂ ಜೀವಾಸ್ತಿಕಾಯದಲ್ಲಿ ಶುದ್ಧ ಮತ್ತು ಅಶುದ್ಧವೆಂಬೆರಡು ಪ್ರಕಾರದ ಪರ್ಯಾಯಗಳಿವೆಯೆಂದು ಹೇಳುವುದಿದೆ.

ಆತ್ಮನು ವಿಭಾವಭಾವದಿಂದ ಪರಿಣಮಿಸುತ್ತ ಮನುಷ್ಯಪರ್ಯಾಯ ಅಥವಾ ದೇವಪರ್ಯಾಯತನವಾಗುತ್ತಾನೆ ಅಥವಾ ನರಕಪರ್ಯಾಯ ಇಲ್ಲವೆ ತಿರ್ಯಂಚಪರ್ಯಾಯವನ್ನು ಧಾರಣ ಮಾಡುತ್ತಾನೆ. ಹೀಗೆ ಪರ್ಯಾಯದಿಂದ ಪರ್ಯಾಯಾಂತರರೂಪನಾಗಿ ಉತ್ಪನ್ನವಿನಾಶವಾಗುತ್ತಾನೆ. ಆದರೆ ಕರ್ಮದ ಕಾರಣದಿಂದ ಜನ್ಮ ಅಥವಾ ಮರಣವಾಗುವುದಿಲ್ಲ. ಶ್ರೇಣಿಕ ರಾಜನಿಗೆ ನರಕದ ಆಯುಷ್ಯ ಕಟ್ಟಿತ್ತೆಂದು ನರಕದಲ್ಲಿ ಹೋಗಬೇಕಾಯಿತೆಂಬುದೇನಿಲ್ಲ, ಶ್ರೇಣಿಕರಾಜನು ತನ್ನ ಯೋಗ್ಯತೆಯ ಕಾರಣದಿಂದ ನರಕಕ್ಕೆ ಹೋಗಿದ್ದಾನೆ. ಅದು ತನ್ನ ಅಶುದ್ಧವ್ಯಂಜನಪರ್ಯಾಯ, ಕ್ರಿಯಾವತೀ ಮೊದಲಾದವುಗಳ ಯೋಗ್ಯತೆಯ ಕಾರಣದಿಂದಿದೆ.

ಈ ಮಾತನ್ನು ಕೇಳಿ ಬಹಳಷ್ಟು ಜನರಿಗೆ ನೀವು ನಿಮಿತ್ತವನ್ನು ಹಾರಿಸಿಬಿಡುತ್ತಿರುವಿರೆಂದೆನಿಸುತ್ತದೆ. ಆದರೆ ಇಲ್ಲ ನಿಮಿತ್ತದ ಪರ್ಯಾಯವು ನಿಮಿತ್ತದಲ್ಲಿ ತನ್ನ ಯೋಗ್ಯತೆಯ ಕಾರಣದಿಂದಿದೆಯೆಂಬುದನ್ನು ಹೇಳುವುದಿದೆ. ಅದು ಪುದ್ಗಲದ ಪರ್ಯಾಯವಿದೆ, ಅದರ ಮಾತು ಪುದ್ಗಲಾಸ್ತಿಕಾಯದಲ್ಲಿ ಬರುತ್ತದೆ. ಇಲ್ಲಿಯಂತೂ ಜೀವಾಸ್ತಿಕಾಯದ ಮಾತು ನಡೆಯುತ್ತಿದೆ ಕ್ಷಾಯಿಕ ಸಮ್ಯಗ್ದೃಷ್ಟಿಯಿರಲಿ ಅಥವಾ ಕ್ಷಾಯೋಪಶಮಿಕ ಸಮ್ಯಗ್ದೃಷ್ಟಿಯಿರಲಿ ಆದರೆ ತನ್ನ ಯೋಗ್ಯತೆಯ ಕಾರಣದಿಂದ ಆ ಪರ್ಯಾಯವನ್ನು ಧಾರಣ ಮಾಡುತ್ತಾನೆ. ಭಗವಾನ ಕುಂದಕುಂದಾಚಾರ್ಯದೇವರು ಜೀವಾಸ್ತಿಕಾಯವನ್ನು ಸಿದ್ಧ ಮಾಡುತ್ತ ಜೀವವು ತನ್ನ ಕಾರಣದಿಂದ ಗಮನಾಗಮನ ಮಾಡಿದರೆ ಅದೇ ಜೀವಾಸ್ತಿಕಾಯವು ಸಿದ್ಧವಾಗುತ್ತದೆಯೆಂದು ಹೇಳಿದ್ದಾರೆ ಪರದ ಕಾರಣದಿಂದ ಮನ್ನಿಸುವುದರಿಂದ ಸಿದ್ಧವಾಗುವುದಿಲ್ಲ. ಏಕೇಂದ್ರಿಯದಿಂದ ಹಿಡಿದು ಪಂಚೇದ್ರಿಯದವರೆಗಿನ ಎಲ್ಲ ಸಂಸಾರೀ ಜೀವಗಳು ತಮ್ಮ ಯೋಗ್ಯತೆಯಿಂದ ಇವೆ. ಯಾವ ಸಮಯದಲ್ಲಿ ಇರುವಿಕೆಯ ಯೋಗ್ಯತೆಯು ಬದಲಾದನಂತರ ಅದನ್ನು ಯಾರೂ ತಡೆಯುವುದಿಲ್ಲ. ಮನುಷ್ಯ ಪರ್ಯಾಯದಲ್ಲಿರುವ ಯೋಗ್ಯತೆಯು ತಿಳಿಯದಿದ್ದರೆ ಬೇರೆ ಯಾರೂ ಅವನನ್ನು ತಡೆಯುವ ಸಾಧ್ಯತೆಯಿಲ್ಲ. ಇಲ್ಲಿ ಅಜೀವದಿಂದ ಜೀವದ ಭಿನ್ನತೆಯ ಜ್ಞಾನ ಮಾಡಿಸಿದೆ ಅದು ಸಮ್ಯಗ್ಜ್ಞಾನವಿದೆ.

ಸಂಸಾರೀ ಪರ್ಯಾಯದ ಅಪೇಕ್ಷೆಯಿಂದ ಉತ್ಪಾದ-ವ್ಯಯಗಳಾಗುತ್ತಿದ್ದರೂ ಕೂಡ ಜೀವಾಭಾವವೆಂದು ಹೇಳಲಾಗಿರುವುದು. ಜೀವದ ಹೊರತು ಬೇರೆ ಯಾವುದೂ ನಾಶ ಹೊಂದುವುದಿಲ್ಲ ಅದರಂತೆ ಉತ್ಪನ್ನ ಕೂಡ ಆಗುವುದಿಲ್ಲ ದ್ರವ್ಯಾರ್ಥಿಕನಯದ ಅಪೇಕ್ಷೆಯಿಂದ ಜೀವವು ಯಾವಾಗಲೂ ಟಂಕೋತ್ಕೀರ್ಣ ಅವಿನಾಶಿಯಿದೆ ಯಾವಾಗಲೂ ನಿಷ್ಕಲಂಕ ಶುದ್ಧಸ್ವರೂಪಿಯಿದೆ. ಮನುಷ್ಯ ಪರ್ಯಾಯದ ವ್ಯಯ ಮತ್ತು ನರಕಪರ್ಯಾಯದ ಉತ್ಪಾದವಾಗುತ್ತಿದ್ದರೂ

ಕೂಡ ಜೀವವಂತೂ ಇದ್ದ ಹಾಗೆಯೇ ಇರುತ್ತದೆ ಎಂದರೆ ಜೀವಭಾವವು ಮಾರ್ಪಡಿಸಿ ಜಡಭಾವವಾಗುವುದಿಲ್ಲ. ನರಕಪರ್ಯಾಯದ ವ್ಯಯ ಮತ್ತು ಮನುಷ್ಯಪರ್ಯಾಯದ ಉತ್ಪಾದ ಇವೆರಡರಲ್ಲಿ ಜೀವವಂತೂ ಇದ್ದ ಹಾಗೆಯೇ ಇರುತ್ತದೆ ಏಕೆಂದರೆ ಜೀವದ ಉತ್ಪಾದ-ವ್ಯಯ ಮತ್ತು ಧ್ರುವತನವು ತನ್ನಿಂದ ಇದೆ, ಪರದಿಂದ ಇಲ್ಲ. ಪರ್ಯಾಯವು ಬದಲಾದರೆ ಜೀವವು ಬದಲಾವಣೆ ಹೊಂದುವುದಿಲ್ಲ. ಉತ್ಪಾದ-ವ್ಯಯ ಮತ್ತು ಧ್ರುವ ಈ ಮೂರು ಅಂಶಗಳೊಳಗಿಂದ ಒಂದು ಅಂಶವು ಕೂಡ ಪರದಿಂದ ಇದೆಯೆಂದು ಮನ್ನಿಸಿದರೆ ಜೀವಾಸ್ತಿಕಾಯದ ಸಿದ್ಧಿಯಾಗುವುದಿಲ್ಲ. ಸಂಸಾರ ಅವಸ್ಥೆಯ ಅಪೇಕ್ಷೆಯಿಂದ ಮಾತು ಇದೆ. ಆ ಅವಸ್ಥೆಯು ಆತ್ಮನದಿದೆ, ಜಡದ್ದಿಲ್ಲ. ಮನುಷ್ಯ ಮೊದಲಾದ ದೇಹವನ್ನು ಬಿಟ್ಟುಕೊಟ್ಟು ಹೊಸ ದೇಹವನ್ನು ಪಡೆಯುವುದು ಇದಂತೂ ಜಡದ ಮಾತಿದೆ, ಅದರ ಮಾತು ಇಲ್ಲಿ ಇಲ್ಲ. ಇಲ್ಲಿ ಆತ್ಮನ ಪರ್ಯಾಯವು ಬದಲಾದರೆ ಆತ್ಮನ ನಾಶವಾಗುವುದಿಲ್ಲ, ಆತ್ಮನು ತಾನು ಉತ್ಪಾದ-ವ್ಯಯ ಮತ್ತು ಧ್ರುವರೂಪದಿಂದ ಇರುತ್ತಾನೆ. ಬೇರೆ ಯಾರೂ ಬದಲಿಸುವುದಿಲ್ಲ ಮತ್ತು ವಸ್ತು ದೃಷ್ಟಿಯಿಂದ ನೋಡಿದರೆ ಯಾವಾಗಲೂ ಟಂಕೋತ್ಕೀರ್ಣ ಇದ್ದ ಹಾಗೆಯೇ ಇದ್ದಾನೆ. ಜೀವದ ಸ್ವಭಾವವಂತೂ ನಿಷ್ಕಲಂಕ ತ್ರಿಕಾಲ ಶುದ್ಧವಿದೆ ಮತ್ತು ಪರ್ಯಾಯ ನೋಡಿದರೆ ಸಂಸಾರ ಅವಸ್ಥೆಯಲ್ಲಿ ಕಲುಷಿತವಿದೆ. ಆ ನಿಷ್ಕಲಂಕ ಮತ್ತು ಕಲಂಕಗಳೆರಡೂ ಜೀವಾಸ್ತಿಕಾಯದಿಂದ ತನ್ನಿಂದಲೇ ಇವೆ.

ಈಗ ಪರ್ಯಾಯಾರ್ಥಿಕ ನಯದ ಅಪೇಕ್ಷೆಯಿಂದ ಜೀವವು ಉತ್ಪನ್ನವಾಗುತ್ತದೆ ಮತ್ತು ನಾಶ ಹೊಂದುತ್ತದೆ ಆದಾಗ್ಯೂ ಕೂಡ ನಿಜವಾಗಿ ಜೀವವು ಉತ್ಪನ್ನವಾಗುವುದಿಲ್ಲ ಮತ್ತು ನಾಶ ಕೂಡ ಹೊಂದುವುದಿಲ್ಲವೆಂಬುದನ್ನು ಮುಂದಿನ ಗಾಥೆಯಲ್ಲಿ ಹೇಳುತ್ತಾರೆ, -

ಸೋ ಚೇವ ಜಾದಿ ಮರಣಂ ಜಾದಿ ಣ ಣಟ್ಠೋ ಣ ಚೇವ ಉಪ್ಪಣ್ಣೋ ।
ಉಪ್ಪಣ್ಣೋ ಯ ವಿಣಟ್ಠೋ ದೇವೋ ಮಣುಸೋ ತ್ತಿ ಪಜ್ಜಾಓ ॥೧೮॥

**ಅದುವೆ ಹುಟ್ಟುವುದು ಸಾಯುವುದಾದರೂ ಅದು ಉತ್ಪನ್ನನಾಶವಾಗದು ।**
**ಅದರ ದೇವ-ಮನುಜದಂಥ ಪರ್ಯಾಯಗಳು ಉತ್ಪನ್ನ -ವಿನಷ್ಟವಾಗುವವು ॥೧೮॥**

**ಅರ್ಥ :-** ಆ ಜೀವವು ಉತ್ಪನ್ನವಾಗುತ್ತದೆ ಅಥವಾ ಆ ಜೀವವು ಮರಣ ಭಾವಕ್ಕೆ ಪ್ರಾಪ್ತವಾಗುತ್ತದೆ. ಆದರೆ ಸ್ವಭಾವದಿಂದ ಆ ಜೀವದ ನಾಶವಾಗುವುದಿಲ್ಲ. ಮತ್ತು ನಿಜವಾಗಿ ಆ ಜೀವವು ಹೊಸದಾಗಿ ಉತ್ಪನ್ನವಾಗುವುದಿಲ್ಲ. ಯಾವಾಗಲೂ ಏಕರೂಪವಿದೆ. ಪರ್ಯಾಯಸ್ವಭಾವದಿಂದ ಉತ್ಪತ್ತಿ-ವಿನಾಶತೆಯಿದೆ ಆದರೆ ಸ್ವಭಾವವು ಯಾವ ಚೈತನ್ಯ ಏಕರೂಪವಿದೆ ಅದು ವಿನಾಶವಾಗುವುದಿಲ್ಲ ಮತ್ತು ಉತ್ಪನ್ನವಾಗುವುದಿಲ್ಲ ಇದು ಜೀವಾಸ್ತಿಕಾಯದ ವರ್ಣನೆಯಿದೆ. ಜೀವವು ಏಕರೂಪದಿಂದಿದ್ದರೂ ಕೂಡ ಮತ್ತೆ ಉತ್ಪನ್ನ-ವಿನಾಶ ಹೊಂದಿದರೂ ಕೂಡ ಜೀವವಿದೆ. ಪರ್ಯಾಯದ ಉತ್ಪನ್ನ-ವಿನಾಶವು ಅದು ಪರದ ಕಾರಣದಿಂದಿದ್ದರೆ ಪರ್ಯಾಯನಯದ ವಿಷಯವು ಉಳಿಯುವುದಿಲ್ಲ. ಜೀವವು ತನ್ನ ಅಸ್ತಿಯಲ್ಲಿದ್ದರೆ ಪರ್ಯಾಯನಯದ ವಿಷಯವು ಉಳಿಯುತ್ತದೆ. ದ್ರವ್ಯಾರ್ಥಿಕನಯದಿಂದ ಉತ್ಪಾದ-ವ್ಯಯಗಳಿಲ್ಲ ಮತ್ತು ಪರ್ಯಾಯಾರ್ಥಿಕನಯದಿಂದ ಉತ್ಪಾದ-ವ್ಯಯಗಳಿವೆ. ಇವೆರಡೂ ತನ್ನಲ್ಲಿ ತನ್ನಿಂದ ಇದ್ದರೇನೇ ಎರಡೂ ನಯಗಳ ಅಸ್ತಿತ್ವ ಉಳಿಯುತ್ತದೆ.

ಸಮಯಸಾರ, ಪ್ರವಚನಸಾರ ಮತ್ತು ಪಂಚಾಸ್ತಿಕಾಯ ಈ ಮೂರು ಗ್ರಂಥಗಳನ್ನು ಪ್ರಾಭೃತವೆಂದು ಕರೆಯುತ್ತಾರೆ. ಮೂರರಲ್ಲಿ ಶುದ್ಧ ದ್ರವ್ಯದ ವರ್ಣನೆಯಿದೆ. ಎಂದರೆ ಅವು ಪರದಿಂದ ಭಿನ್ನವಾದ ತತ್ತ್ವವನ್ನು ಯಥಾರ್ಥವಾಗಿ ತಿಳಿಸಿಕೊಡುತ್ತವೆ. ಅದು ದ್ರವ್ಯದ ಸ್ವತಂತ್ರತೆಯ ಕಥನವಿದೆ. ಧರ್ಮಾಸ್ತಿಕಾಯದ ಕಾರಣದಿಂದ ಗತಿ, ಅಧರ್ಮಾಸ್ತಿಕಾಯದ ಕಾರಣದಿಂದ ಸ್ಥಿತಿ, ಕಾಲದ ಕಾರಣದಿಂದ ಪರಿಣಮನ, ಆಕಾಶದ ಕಾರಣದಿಂದ ಅವಗಾಹನ ಮತ್ತು ಪುದ್ಗಲದ

ಕಾರಣದಿಂದ ವಿಕಾರವಾಗುತ್ತದೆ. ಹೀಗೆ ಜೀವದ ಪರಾಧೀನತೆಯನ್ನು ಈ ಪ್ರಾಭೃತದಲ್ಲಿ ಹೇಳಲಾಗಿಲ್ಲ. ಆದರೆ ಸ್ವಾಧೀನ ಸ್ವತಂತ್ರ ಶುದ್ಧದ್ರವ್ಯದ ವರ್ಣನೆಯಿದೆ.

**ಪ್ರಶ್ನೆ :-** ವಸ್ತುವಂತೂ ಇದ್ದ ಹಾಗೆಯೇ ಇರುತ್ತದೆಯೆಂದ ಮೇಲೆ ಯಾವುದು ಉತ್ಪನ್ನ-ವಿನಾಶ ವಾಗುತ್ತದೆ ?

**ಉತ್ತರ :-** ಪರ್ಯಾಯವು ಉತ್ಪನ್ನ-ವಿನಾಶ ಹೊಂದುತ್ತದೆ. ಹೇಗೆಂದರೆ ದೇವಪರ್ಯಾಯದ ಉತ್ಪನ್ನವಾಯಿತು ಮತ್ತು ಮನುಷ್ಯ ಪರ್ಯಾಯದ ವ್ಯಯವಾಯಿತು, ಮತ್ತು ಜೀವವು ಧ್ರುವವಾಗಿ ಉಳಿಯಿತು. ಹಳೆಯ ಪರ್ಯಾಯದ ವ್ಯಯ ಹಾಗೂ ಹೊಸ ಪರ್ಯಾಯದ ಉತ್ಪತ್ತಿ ಮತ್ತು ಜೀವದ್ರವ್ಯದ ಧ್ರುವತನವಿದೆ.

**ಭಾವಾರ್ಥ :-** ಜೀವವು ಪರ್ಯಾಯನಯದ ಅಪೇಕ್ಷೆಯಿಂದ ಮೊದಲಿನ ಪರ್ಯಾಯದಿಂದ ವಿನಾಶ ಹೊಂದುತ್ತದೆ ಮತ್ತು ಹೊಸ ಪರ್ಯಾಯದಿಂದ ಉತ್ಪನ್ನವಾಗುತ್ತಿರುವುದು ಕಂಡು ಬರುತ್ತದೆ. ಅದೇ ಜೀವವು ಉತ್ಪಾದ-ವ್ಯಯ ಅವಸ್ಥೆಯರೂಪದಿಂದಾಗುತ್ತಿದ್ದರೂ ಕೂಡ ತನ್ನ ಅವಿನಾಶಿಯಾದ ಒಂದು ಸ್ವಾಭಾವಿಕ ಸ್ವಭಾವದಿಂದ ಉತ್ಪನ್ನವಾಗುವುದಿಲ್ಲ ಅಥವಾ ವಿನಾಶ ಹೊಂದುವುದಿಲ್ಲ. ಯಾವ ಮೊದಲಿನ ಪರ್ಯಾಯವಿದೆ ಅದು ನಾಶವಾಗುತ್ತದೆ ಮತ್ತು ಉತ್ತರ ಪರ್ಯಾಯದ ಉತ್ಪಾದವಾಗುತ್ತದೆ. ಮೊದಲಿನ ಪರ್ಯಾಯದ ನಾಶವಾಗುವುದು, ನವೀನ ಪರ್ಯಾಯದ ಉತ್ಪಾದವಾಗುವುದು ಮತ್ತು ದ್ರವ್ಯವಂತೂ ಸ್ಥಿರವಾಗಿ ಉಳಿಯುವುದು. 'ತತ್ತ್ವಾರ್ಥಸೂತ್ರ'ದಲ್ಲಿ ಭ. ಉಮಾಸ್ವಾಮಿಗಳು ಹೀಗೆ ಹೇಳುತ್ತಾರೆ - ಉದಯಭಾವಾದಿಗಳು ಸ್ವತಂತ್ರ್ಯವಿವೆ. ಅವು ಆತ್ಮನ ಪರ್ಯಾಯದ ಭಾವಗಳಿವೆ. ಅದಕ್ಕಾಗಿ ಶುದ್ಧ ಅಥವಾ ಅಶುದ್ಧ ಪರ್ಯಾಯದ ಕಾರಣವು ಆತ್ಮವಿದೆ, ಪರವಿಲ್ಲ. ಅದಕ್ಕಾಗಿ ಪರ್ಯಾಯದ ಅಪೇಕ್ಷೆಯಿಂದ ಉತ್ಪಾದ-ವ್ಯಯಗಳು ಕಂಡು ಬರುತ್ತವೆ, ಆದರೆ ತ್ರಿಕಾಲಸ್ವಭಾವದ ಅಪೇಕ್ಷೆಯಿಂದ ಜೀವವು ಉತ್ಪನ್ನವಾಗುವುದಿಲ್ಲ ಅಥವಾ ನಾಶವಾಗುವುದಿಲ್ಲ.

ನೋಡಿರಿ, ಆತ್ಮನು ತನ್ನ ಪರ್ಯಾಯದ ಕಾರಣದಿಂದ ಉತ್ಪನ್ನ-ವಿನಾಶ ಸ್ವಭಾವವನ್ನು ಧಾರಣಮಾಡಿದ್ದಾನೆಂದು ಇಲ್ಲಿ ಹೇಳುತ್ತಾರೆ. ಕರ್ಮದ ಕಾರಣದಿಂದ ಉತ್ಪತ್ತಿ-ವಿನಾಶವಿದೆಯೆಂದು ಹೇಳುವುದು ಅದು ನಿಮಿತ್ತದ ಕಥನವಿದೆ.

ಮೊದಲಿನ ಪರ್ಯಾಯದ ನಾಶವಾಗುತ್ತದೆ ಮತ್ತು ನವೀನ ಪರ್ಯಾಯದ ಉತ್ಪತ್ತಿಯಾಗುತ್ತದೆ. ಯಾವ ದ್ರವ್ಯವು ಮೊದಲಿನ ಪರ್ಯಾಯದಲ್ಲಿತ್ತು ಅದೇ ದ್ರವ್ಯವು ನವೀನ ಪರ್ಯಾಯದಲ್ಲಿ ಉಳಿದಿದೆ. ಪರ್ಯಾಯದ ಭೇದವನ್ನು ಹೇಳಲಾಗುತ್ತದೆ. ಮನುಷ್ಯಪರ್ಯಾಯದ ನಾಶ ಮತ್ತು ದೇವಪರ್ಯಾಯದ ಉತ್ಪಾದವಾದಾಗ ಅಲ್ಲಿ ಜೀವವಂತೂ ಇದ್ದ ಹಾಗೆಯೇ ಉಳಿದಿದೆ. ಆದರೆ ಪರ್ಯಾಯವು ಬದಲಾಗುವ ಅಪೇಕ್ಷೆಯಿಂದ ದ್ರವ್ಯವು ಬದಲಾಯಿತೆಂದು ಹೇಳಲಾಗುತ್ತದೆ. ಆತ್ಮನು ಮನುಷ್ಯನಾದನು, ಮನುಷ್ಯತನದ ನಾಶವಾಗಿ ಆತ್ಮನು ದೇವನಾದನೆಂದು ಹೇಳಲಾಗುತ್ತದೆ, ಆದರೆ ವಸ್ತುದೃಷ್ಟಿಯಿಂದ ಭೇದವಿಲ್ಲ. ಆದುದರಿಂದ ಆತ್ಮನು ಸ್ವಭಾವದಿಂದ ಇದ್ದ ಹಾಗೆಯೇ ಉಳಿದಿದ್ದಾನೆ.

ಪ್ರತಿಯೊಂದು ಪದಾರ್ಥವು ತನ್ನ ಹಳೆಯ ಪರ್ಯಾಯದಿಂದ ನಾಶವಾಗುತ್ತದೆ, ಹೊಸ ಪರ್ಯಾಯದಿಂದ ಉತ್ಪನ್ನವಾಗುತ್ತದೆಮತ್ತು ದ್ರವ್ಯತನದಿಂದ ಧ್ರುವ ಉಳಿಯುತ್ತದೆ. ಅದರಂತೆ ಪುದ್ಗಲದ್ರವ್ಯವು ತನ್ನ ಕಾರಣದಿಂದ ಉತ್ಪತ್ತಿ-ವಿನಾಶ ಹೊಂದುತ್ತದೆ ಮತ್ತು ಧ್ರುವತನದಿಂದ ಉಳಿಯುತ್ತದೆ. ಮೊದಲಿನ ತೈಜಸ-ಕಾರ್ಮಾಣ ಪರ್ಯಾಯದ ವ್ಯಯವಾಗುತ್ತದೆ ಹಾಗೂ ನವೀನ ಪರ್ಯಾಯದ ಉತ್ಪಾದವಾಗುತ್ತದೆ, ಮತ್ತು ಪುದ್ಗಲದ್ರವ್ಯವು ಇದ್ದ ಹಾಗೆಯೇ ಉಳಿಯುತ್ತದೆ.

ದ್ರವ್ಯವು ಯಾವ ಸಮಯದಲ್ಲಿ ಯಾವ ಪರ್ಯಾಯದಿಂದ ಪರಿಣಮಿಸುತ್ತದೆ ಆ ಸಮಯದಲ್ಲಿ ಆ ಪರಿಣಾಮದಿಂದ ತನ್ಮಯವಿರುತ್ತದೆ. ಪರಿಣಾಮಗಳಲ್ಲಿ ಏಕತೆ ಹೊಂದುವುದೇ ದ್ರವ್ಯದ ಸ್ವಭಾವವಿದೆ. ಏಕೆಂದರೆ ಕಥಂಚಿತ್ ಪ್ರಕಾರದಿಂದ ಪರಿಣಾಮ-ಪರಿಣಾಮಿಯ ಏಕತೆಯಿದೆ. ಆತ್ಮನು ಯಾವ ಸಮಯದಲ್ಲಿ ನಾರಕ ಪರ್ಯಾಯ ರೂಪದಿಂದ

ಪರಿಣಮಿಸುತ್ತಾನೆ ಆಗ ಆ ಪರ್ಯಾಯರೂಪದಿಂದ ತನ್ಮಯನಿರುತ್ತಾನೆ ಮತ್ತು ಜಡದ ಪರ್ಯಾಯದಲ್ಲಿ ಜಡವು ತನ್ಮಯವಿರುತ್ತದೆ; ಯಾವುದರಿಂದ ಯಾವುದಿಲ್ಲ, ಬಿಟ್ಟುಹೋದ ನರಕಾಯುವಿನ ಪರ್ಯಾಯವು ಜಡದ್ದಿತ್ತು ಅದು ಆ ಕಾರಣದಿಂದ ಅದರಲ್ಲಿ ತನ್ಮಯವಿತ್ತು ಮತ್ತು ಜೀವದ ಪರ್ಯಾಯವು ಜೀವದ ಕಾರಣದಿಂದಿತ್ತು ಅದು ಜೀವದಲ್ಲಿ ತನ್ಮಯವಿತ್ತು. ಜಡ ಮತ್ತು ಚೇತನದ ಮಧ್ಯದಲ್ಲಿ ಅತ್ಯಂತ ಅಭಾವವಿದೆ. ಚೈತನ್ಯದ ಪರ್ಯಾಯವು ಚೈತನ್ಯದಲ್ಲಾಗುತ್ತದೆ ಮತ್ತು ಜಡದ ಪರ್ಯಾಯವು ಜಡದಲ್ಲಾಗುತ್ತದೆ. ಎರಡರಲ್ಲಿ ಪರಸ್ಪರ ನಿಮಿತ್ತ-ನೈಮಿತ್ತಿಕ ಸಂಬಂಧವಿದೆ ಆದರೆ ಕರ್ತಾ-ಕರ್ಮ ಸಂಬಂಧವಿಲ್ಲ.

ಜೀವವು ಯಾವಾಗ ತಾನು ತನ್ನ ಪರ್ಯಾಯರೂಪದಿಂದ ಪರಿಣಮಿಸುತ್ತದೆ ಆಗ ಅದು ಆ ಪರ್ಯಾಯಮಯವಾಗಿ ಹೋಗುತ್ತದೆ ಪರ್ಯಾಯವು ಬೇರೆ ಇರುತ್ತದೆ ಮತ್ತು ದ್ರವ್ಯ ಬೇರೆ ಇರುತ್ತದೆ ಹೀಗೆ ಆಗುವುದಿಲ್ಲ. ಜೀವವು ಯಾವ ಪರಿಣಾಮಗಳನ್ನು ಮಾಡುತ್ತದೆ ಆ ಪರಿಣಾಮಗಳಲ್ಲಿ ಏಕತೆಯನ್ನು ಧಾರಣ ಮಾಡುವುದೇ ಅದರ ಸ್ವಭಾವವಿದೆ. ಇಲ್ಲಿಯಂತೂ ರಾಗ ಮಾಡಿ ನರಕದಲ್ಲಿ ಅಥವಾ ಸ್ವರ್ಗದಲ್ಲಿ ಹೋದರೆ ಆ ಪ್ರತಿಯೊಂದು ಪರ್ಯಾಯದಲ್ಲಿ ಜೀವವು ತಾನು ಏಕತೆಯನ್ನು ಧಾರಣ ಮಾಡುತ್ತದೆಯೆಂದು ಹೇಳಿದೆ. ಹೀಗೆ ಜೀವದ್ರವ್ಯದ ಸ್ವಭಾವವಿದೆ. ಯಾವ ಪ್ರಕಾರ ಗೋರಸದಿಂದ ಹಾಲು-ಮೊಸರು ಮೊದಲಾದ ಪರ್ಯಾಯಗಳು ಭಿನ್ನವಿಲ್ಲ, ಆದರೆ ತನ್ಮಯವಿವೆ ಅದೇ ಪ್ರಕಾರ ಆತ್ಮನ ಪರ್ಯಾಯಗಳನ್ನು ಆತ್ಮನು ಧಾರಣ ಮಾಡುತ್ತಾನೆ. ಜಡದ ಪರ್ಯಾಯಗಳನ್ನು ಜಡವು ಧಾರಣ ಮಾಡುತ್ತದೆ. ಯಾವುದೇ ದ್ರವ್ಯವು ಬೇರೆ ಯಾವುದೇ ದ್ರವ್ಯದ ಪರ್ಯಾಯವನ್ನು ಧಾರಣ ಮಾಡುವುದಿಲ್ಲ. ಶರೀರದ ಪರ್ಯಾಯವನ್ನು ಪುದ್ಗಲ ಪರಮಾಣುಗಳು ಧಾರಣಮಾಡಿರುತ್ತವೆ. ಏಕೆಂದರೆ ಯಾವುದೇ ಅಪೇಕ್ಷೆಯಿಂದ ಪರ್ಯಾಯದ ಜೊತೆ ದ್ರವ್ಯದ ಅನಿತ್ಯತಾದಾತ್ಮ್ಯಸಂಬಂಧವಿದೆ. ಈ ರೀತಿಯಾಗಿ ಪರಿಣಾಮ ಮತ್ತು ಪರಿಣಾಮಿಯ ಏಕತೆಯಿದೆ. ರಾಗದ ಪರ್ಯಾಯದ ಜೊತೆ ಜೀವದ ಅನಿತ್ಯತಾದಾತ್ಮ್ಯಸಂಬಂಧವಿದೆ ಮತ್ತು ಶುದ್ಧಪರ್ಯಾಯವಿದ್ದರೂ ಕೂಡ ಅದರ ಜೊತೆ ಜೀವದ ಅನಿತ್ಯತಾದಾತ್ಮ್ಯಸಂಬಂಧವಿದೆ ಏಕೆಂದರೆ ಆ ಪರ್ಯಾಯವು ಕೂಡ ಸಮಯ ಸಮಯಕ್ಕೆ ಬದಲಾಗುತ್ತಿದ್ದರೂ ಕೂಡ ಕಥಂಚಿತ್ ದ್ರವ್ಯದಿಂದ ಅಭಿನ್ನವಿದೆ. ಸರ್ವಥಾ ಅಭಿನ್ನವಿದ್ದರೆ ದ್ರವ್ಯವು ಪರ್ಯಾಯದಷ್ಟಾಗಿ ಹೋಗುವುದು ಆದರೆ ಪೂರ್ಣ ದ್ರವ್ಯವು ಪರ್ಯಾಯದಲ್ಲಿ ಬಂದು ಬಿಡುವುದಿಲ್ಲ ಅದಕ್ಕಾಗಿ ದ್ರವ್ಯವು ಪರ್ಯಾಯದ ಜೊತೆ ಕಥಂಚಿತ್ ತನ್ಮಯವಿದೆ. ಈ ರೀತಿಯಾಗಿ ದ್ರವ್ಯದಲ್ಲಿ ಉತ್ಪಾದ-ವ್ಯಯಗಳಾಗುತ್ತಿದ್ದರೂ ಕೂಡ ದ್ರವ್ಯದ ಅಪೇಕ್ಷೆಯಿಂದ ಧ್ರುವತ್ವವಿದೆಯೆಂದು ತಿಳಿದುಕೊಳ್ಳಬೇಕು.

ದ್ರವ್ಯದ ಧ್ರುವಭಾವವು ಸ್ವಾಭಾವಿಕವಾಗಿರುವುದರಿಂದ ಅದು ಸತ್‌ಭಾವವಿದೆ, ಆ ಸತ್‌ಭಾವದ ನಾಶವಾಗುವುದಿಲ್ಲ ಮತ್ತು ಜಗತ್ತಿನಲ್ಲಿ ಯಾವ ಅಸತ್‌ಭಾವವಿಲ್ಲ ಅದರ ಉತ್ಪಾದವಾಗುವುದಿಲ್ಲದೆಂಬುದನ್ನು ಈಗ ಮುಂದಿನ ಗಾಥೆಯಲ್ಲಿ ಹೇಳುತ್ತಾರೆ, --

ಏವಂ ಸದೋ ವಿಣಾಸೋ ಅಸದೋ ಜೀವಸ್ಸ ಣತ್ಥಿ ಉಪ್ಪಾದೋ ।
ತಾವದಿಓ ಜೀವಾಣಂ ದೇವೋ ಮಣುಸೋ ತ್ತಿ ಗದಿಣಾಮೋ ॥೧೯॥

**ಜೀವನಿಗೆ ಈ ತೆರದಿ ಸತ್‌ದ ವಿನಾಶ ಮೇಣ್ ಅಸತ್‌ದ ಉತ್ಪಾದವಿಲ್ಲ ।**
**ಜೀವಗಳಿಗೆ ದೇವ-ಮನುಷ್ಯದಂಥ ಗತಿನಾಮಗಳಷ್ಟು ಕಾಲದವಿರುವವು ॥೧೯॥**

**ಅರ್ಥ :-** ಮೇಲೆ ಹೇಳಿದ ಪ್ರಕಾರ ಸ್ವಾಭಾವಿಕವಾದ ಅವಿನಾಶಿ ಸ್ವಭಾವದ ನಾಶವಾಗುವುದಿಲ್ಲ ಮತ್ತು ಯಾವುದು ಸ್ವಾಭಾವಿಕವಾಗಿ ಜೀವಭಾವವಿಲ್ಲ ಅದರ ಉತ್ಪತ್ತಿಯಾಗುವುದಿಲ್ಲ. ಹೀಗೆ ಜೀವದ ಸ್ವರೂಪವಿದೆಯೆಂಬುದನ್ನು ಮೊದಲು ತಿಳಿದುಕೊಳ್ಳಬೇಕು. ಆತ್ಮನು ಸ್ವರ್ಗ-ನರಕಗಳಲ್ಲಿ ಹೋದರೂ ಕೂಡ ಜೀವ ಸ್ವಭಾವದ ನಾಶವಾಗುವುದಿಲ್ಲ,

ಅದಂತೂ ಹೇಗಿದೆಯೋ ಹಾಗೆ ಶುದ್ಧವಾಗಿಯೇ ಉಳಿಯುತ್ತದೆ. ಮತ್ತು ಜೀವವನ್ನು ಮನುಷ್ಯ-ದೇವ ಮೊದಲಾದ ಹೆಸರುಗಳಿಂದ ಕರೆಯಲಾಗುತ್ತದೆ ಅದು ಗತಿನಾಮಕರ್ಮದ ವಿಪಾಕ ಅವಸ್ಥೆಯಿಂದ ಉತ್ಪನ್ನವಾದ ಕರ್ಮದ ಅಪೇಕ್ಷೆಯಿಂದ ಕರೆಯಲಾಗುತ್ತದೆ ಎಂದರೆ ಜೀವದ ಪರ್ಯಾಯದಲ್ಲಿ ವಿಕಾರಭಾವವಿದೆ ಅದರಲ್ಲಿ ಕರ್ಮದ ನಿಮಿತ್ತವಿದೆ, ಆದರೆ ಕರ್ಮದಿಂದ ವಿಕಾರವಾಗುತ್ತದೆ-ಎಂಬುದಾಗಿಲ್ಲ.

**ಭಾವಾರ್ಥ :-** ಜೀವದ್ರವ್ಯದ ಕಥನವನ್ನು ಎರಡು ಪ್ರಕಾರದಿಂದ ಮಾಡಲಾಗುತ್ತದೆ. ಅದರಲ್ಲಿ ಒಂದು ಉತ್ಪಾದ-ವ್ಯಯದ ಮುಖ್ಯತೆಯಿಂದಿದ್ದರೆ ಇನ್ನೊಂದು ಧ್ರುವಸ್ವಭಾವದ ಮುಖ್ಯತೆಯಿಂದಿದೆ. ಇವೆರಡೂ ಕಥನಗಳಲ್ಲಿ ಧ್ರುವಸ್ವಭಾವದ ಮುಖ್ಯತೆಯಿಂದ ಕಥನಮಾಡಹೋದರೆ ಯಾವ ಜೀವದ್ರವ್ಯವು ಮರಣ ಹೊಂದುತ್ತದೆ ಅದೇ ಜೀವದ್ರವ್ಯವು ಉತ್ಪನ್ನವಾಗುತ್ತದೆ ಮತ್ತು ಯಾವುದು ಉತ್ಪನ್ನವಾಗುತ್ತದೆ ಅದೇ ಮರಣ ಹೊಂದುತ್ತದೆ. ಬೇರೆ ಯಾವುದೂ ಉತ್ಪನ್ನವಾಗುವುದಿಲ್ಲ ಮತ್ತು ಬೇರೆ ಯಾವುದೂ ಮರಣ ಹೊಂದುವುದಿಲ್ಲವೆಂದು ಹೇಳಲಾಗುತ್ತದೆ. ಇದು ದ್ರವ್ಯಾರ್ಥಿಕನಯದ ವಿಷಯವಿದೆ. ಧ್ರುವದ ಅಪೇಕ್ಷೆಯಿಂದ ಉತ್ಪನ್ನವಾಗುತ್ತದೆ ಮತ್ತು ವಿನಾಶ ಹೊಂದುತ್ತದೆಯೆಂದು ಹೇಳುವ ಸಾಧ್ಯತೆಯಿಲ್ಲ, ಆದರೆ ಇಲ್ಲಿ ಪರ್ಯಾಯನಯದ ಅಪೇಕ್ಷೆಯಿಂದ ಮಾತು ಮಾಡಿ, ಇದ್ದ ಇದೇ ಜೀವವು ಮರಣ ಹೊಂದುತ್ತದೆ ಮತ್ತು ಇರುವ ಇದೇ ಜೀವವು ಉತ್ಪನ್ನವಾಗುತ್ತದೆಯೆಂದು ವ್ಯವಹಾರನಯದಿಂದ ಕಥನ ಮಾಡಿ ಧ್ರುವತನವನ್ನು ತಿಳಿಸಿಕೊಡಲಾಗಿದೆ.

ಆ ಉತ್ಪಾದ-ವ್ಯಯದ ಅಪೇಕ್ಷೆಯಿಂದ ಜೀವದ್ರವ್ಯದ ಕಥನ ಮಾಡಹೋದರೆ ಎರಡನೆಯದು ಉತ್ಪನ್ನವಾಗುತ್ತದೆ ಮತ್ತು ಎರಡನೆಯದು ವಿನಾಶ ಹೊಂದುತ್ತದೆ. ಈ ಕಥನವು ಗತಿನಾಮಕರ್ಮದ ನಿಮಿತ್ತದಿಂದಿದೆ. ಏಕೆಂದರೆ ಮನುಷ್ಯ ಪರ್ಯಾಯದ ವ್ಯಯವಾಗುತ್ತದೆ ಮತ್ತು ದೇವಪರ್ಯಾಯದ ಉತ್ಪತ್ತಿಯಾಗುತ್ತದೆ. ಈ ಕಥನವು ಕರ್ಮದ ನಿಮಿತ್ತದಿಂದ ಆತ್ಮನಲ್ಲಾಗುವ ವಿಭಾವಪರ್ಯಾಯದ ಅಪೇಕ್ಷೆಯಿಂದ ಸರಿಯಾಗಿದೆ. ಇದರಲ್ಲಿ ವಿರೋಧ ಬರುವುದಿಲ್ಲ . ಇದರ ಮೇಲಿಂದ ಧ್ರುವತನದ ಅಪೇಕ್ಷೆಯಿಂದ ಯಾವ ಜೀವವು ಸಾಯುತ್ತದೆ ಅದೇ ಜೀವವು ಉತ್ಪನ್ನವಾಗುತ್ತದೆಯೆಂಬುದು ಸಿದ್ಧವಾಗುತ್ತದೆ, ಮತ್ತು ಉತ್ಪಾದ-ವ್ಯಯದ ಅಪೇಕ್ಷೆಯಿಂದ ಬೇರೆ ಜೀವವು ಸಾಯುತ್ತದೆ ಮತ್ತು ಬೇರೆ ಜೀವವು ಉತ್ಪನ್ನವಾಗುತ್ತದೆ. ಪರ್ಯಾಯದೃಷ್ಟಿಯಿಂದ ಭವವು ಬದಲಾದರೆ ಎಲ್ಲವು ಬದಲಾಗಿ ಹೋಗುತ್ತದೆ. ಅದಕ್ಕಾಗಿ ಹೊಸ ಜೀವವು ಉತ್ಪನ್ನವಾಗಿದೆಯೆಂದು ಹೇಳಲಾಗುತ್ತದೆ. ಈ ಮಾತನ್ನು ದೃಷ್ಟಾಂತದಿಂದ ತಿಳಿಸಿಕೊಡಲಾಗಿದೆ.

ಒಂದು ದೊಡ್ಡ ಬಿದಿರು ಇದೆ. ಅದರಲ್ಲಿ ಕ್ರಮದಿಂದ ಬಹಳಷ್ಟು ಗಂಟುಗಳಿವೆ. ಈಗ ಈ ಬಿದಿರನ್ನು ಎರಡು ಪ್ರಕಾರದಿಂದ ವಿಚಾರ ಮಾಡಿದರೆ ಈ ಬಿದಿರಿನ ಸಿದ್ಧಿಯಾಗುತ್ತದೆ. ೧) ಮೊದಲನೆಯದು ಸಾಮಾನ್ಯ ಪ್ರಕಾರದಿಂದ ಬಿದಿರಿನ ಕಥನವಿದೆ. ೨) ಎರಡನೆಯದು ವಿಶೇಷರೂಪದ ಗ್ರಂಥಿಯ ಕಥನವಿದೆ. ಯಾವಾಗ ಗ್ರಂಥಿಯ ಕಥನ ಮಾಡಲಾಗುತ್ತದೆ ಆಗ ಎಷ್ಟು ಗ್ರಂಥಿಗಳಿವೆ ಅವೆಲ್ಲವೂ ತಮ್ಮ ತಮ್ಮ ಸ್ವರೂಪದಿಂದಿವೆ. ಒಂದು ಗ್ರಂಥಿಯಿಂದ ಇನ್ನೊಂದು ಗ್ರಂಥಿಯು ಬೇರೆಯಿದೆ, ಬೇರೆ ಗ್ರಂಥಿಯಿಂದ ಹೊಂದಿಕೆಯಾಗುವುದಿಲ್ಲ ಎಲ್ಲವೂ ಬೇರೆ ಬೇರೆಯಿವೆ, ಆದರೆ ಬಿದಿರಂತೂ ಇವೆಲ್ಲವುಗಳಲ್ಲಿ ಒಂದೇ ಇದೆ.

ಆ ಗ್ರಂಥಿಗಳಿಂದ ಭಿನ್ನವಾದ ಬಿದಿರಿನ ವಿಚಾರ ಮಾಡಹೋದರೆ ಒಂದು ಗ್ರಂಥಿಯಲ್ಲಿ ಇಡೀ ಬಿದಿರು ಬರುವುದಿಲ್ಲ . ಯಾವ ಯಾವ ಗ್ರಂಥಿಯ ಬಿದಿರೆಂದು ಹೇಳಲಾಗುತ್ತದೆ ಆ ಗ್ರಂಥಿಯ ಬಿದಿರೆಂದು ಹೇಳಬಹುದು. ಪರ್ಯಾಯದೃಷ್ಟಿಯಿಂದ ಬಿದಿರಿನ ವಿಚಾರ ಮಾಡಿದರೆ ಬಿದಿರು ಅನೇಕವಿವೆ. ಮತ್ತು ಸಾಮಾನ್ಯದ ಅಪೇಕ್ಷೆಯಿಂದ ಬಿದಿರು ಒಂದಿದೆ. ಎಂದರೆ ಬಿದಿರು ಗ್ರಂಥಿಗಳ ಅಪೇಕ್ಷೆಯಿಂದ ಅನೇಕವಿವೆ ಮತ್ತು ಸಾಮಾನ್ಯ ಅಪೇಕ್ಷೆಯಿಂದ ಬಿದಿರು ಒಂದಿದೆ ಇದು ದೃಷ್ಟಾಂತವಾಯಿತು.

ಇದೇ ರೀತಿ ಜೀವದ್ರವ್ಯವು ತ್ರಿಕಾಲ ಅವಿನಾಶಿ ಏಕವಿದೆ. ಅದರಲ್ಲಿ ಕ್ರಮವರ್ತಿ ಗ್ರಂಥಿಯ ಹಾಗೆ ದೇವ, ಮನುಷ್ಯ ಮೊದಲಾದ ಅನೇಕ ಪರ್ಯಾಯಗಳಿವೆ, ಎಲ್ಲ ಭವಗಳು ಒಟ್ಟಿಗೆ ಇರುವುದಿಲ್ಲ , ಆದರೆ ಕ್ರಮವರ್ತಿಯಾಗಿವೆ, ಆ ಭವಗಳು ತಮ್ಮ ತಮ್ಮ ಕಾಲದಲ್ಲಿ ಇರುತ್ತವೆ. ಯಾವ ಒಂದು ಪರ್ಯಾಯವು ಬೇರೆ ಯಾವುದೇ ಪರ್ಯಾಯದ ಜೊತೆ ಕೂಡಿಕೊಳ್ಳುವುದಿಲ್ಲ . ಯಾವುದೇ ಭವವು ತ್ರಿಕಾಲವಿರುವ ಸಾಧ್ಯತೆಯಿಲ್ಲ . ಪರ್ವತದ ಗುಹೆಯಲ್ಲಿ ಯೋಗಿವರ್ಯರು ಸಮಾಧಿ ಹಚ್ಚಿ ಅಮರರಾದರು, ಲಕ್ಷಾಂತರ ವರುಷಗಳಿಂದ ಮನುಷ್ಯದೇಹಗಳಿವೆಯೆಂದು ಕೆಲವರು ಹೇಳುತ್ತಾರೆ ಆದರೆ ಆ ಮಾತು ಅಸತ್ಯವಿದೆ ಏಕೆಂದರೆ ಪರ್ಯಾಯದೃಷ್ಟಿಯಿಂದ ಆತ್ಮನು ಬೇರೆ ಬೇರೆಯಿದ್ದಾನೆ, ಏಕರೂಪದಿಂದಿಲ್ಲ . ಪರ್ಯಾಯ ದೃಷ್ಟಿಯಿಂದ ಕಥನ ಮಾಡಹೋದರೆ ಏಕರೂಪ ಜೀವಭಾವದ ಕಥನವಾಗುವುದಿಲ್ಲ. ಪರ್ಯಾಯದೃಷ್ಟಿಯಿಂದ ಆತ್ಮನು ಉತ್ಪನ್ನನಾದನು-ನಾಶಹೊಂದಿದನೆಂದು ಹೇಳಲಾಗುತ್ತದೆ ಮತ್ತು ದ್ರವ್ಯದೃಷ್ಟಿಯಿಂದ ಆತ್ಮನು ಇದ್ದಹಾಗೆಯೇ ಇದ್ದಾನೆ. ಪರ್ಯಾಯದ ಅಪೇಕ್ಷೆಯನ್ನು ಸ್ವೀಕರಿಸದೆ ಹೋದರೆ ಜೀವದ್ರವ್ಯವು ತ್ರಿಕಾಲ ಅಭೇದಸ್ವರೂಪ ಏಕವಿದೆಯೆಂದು ಹೇಳಲಾಗುತ್ತದೆ. ಇದರಿಂದ ಆತ್ಮನು ತಾನು ತನ್ನ ನಿಜಭಾವದಿಂದ ಯಾವಾಗಲೂ ಟಂಕೋತ್ಕೀರ್ಣ ಏಕಸ್ವರೂಪ ನಿತ್ಯನಿದ್ದಾನೆಂದು ಸಿದ್ಧವಾಗುತ್ತದೆ. ಮತ್ತು ಪರ್ಯಾಯದ ಅಪೇಕ್ಷೆಯಿಂದ ನಿತ್ಯನಿಲ್ಲ , ಭವವು ಬದಲಾಗಿ ಹೋಗುತ್ತದೆ. ಈ ರೀತಿ ಅನೇಕ ಭವದ ಅಪೇಕ್ಷೆಯಿಂದ ಆತ್ಮನನ್ನು ಅನೇಕ ಕೂಡ ಹೇಳಲಾಗುತ್ತದೆ ಮತ್ತು ಅನ್ಯ ಪರ್ಯಾಯದ ಅಪೇಕ್ಷೆಯಿಂದ ಅನ್ಯ ಕೂಡ ಹೇಳಲಾಗುತ್ತದೆ. ದ್ರವ್ಯದ ಅಪೇಕ್ಷೆಯಿಂದ ಸತ್‌ದ ನಾಶವಾಗುವುದಿಲ್ಲ ಮತ್ತು ಅಸತ್‌ದ ಉತ್ಪಾದವಾಗುವುದಿಲ್ಲ .

ಆತ್ಮನು ಒಂದು ವಸ್ತುವಿದ್ದಾನೆ ವಸ್ತುದೃಷ್ಟಿಯಿಂದ ಆತ್ಮನದೆಂದೂ ನಾಶವಾಗುವುದಿಲ್ಲ ಮತ್ತು ಆತ್ಮನು ಇಲ್ಲದಿದ್ದರೆ ಹೊಸದಾಗಿ ಉತ್ಪನ್ನವಾಗುವುದಿಲ್ಲ ಏಕೆಂದರೆ ಯಾವುದು ಇಲ್ಲ ಅದರ ಉತ್ಪಾದವಾಗುವುದಿಲ್ಲ , ಪರ್ಯಾಯದ ಅಪೇಕ್ಷೆಯಿಂದ ಆತ್ಮನು ಹಳೆಯ ಹಳೆಯ ಭವದಿಂದ ನಾಶವಾಗುತ್ತಾನೆ ಮತ್ತು ಹೊಸ ಹೊಸ ಭವದಿಂದ ಉತ್ಪನ್ನವಾಗುತ್ತಾನೆ. ತ್ರಿಕಾಲ ಏಕರೂಪವಿರುವುದು ಮತ್ತು ಭವಗಳಲ್ಲಿ ಅನೇಕ ರೂಪವಾಗುವುದು ಅವೆರಡು ತನ್ನಿಂದ ಇವೆ, ಪರದಿಂದ ಇಲ್ಲ . ಭವದಲ್ಲಿ ಅನೇಕ ರೂಪದಿಂದಾಗುತ್ತದೆ ಅದರಲ್ಲಿ ನಾಮಕರ್ಮದ ನಿಮಿತ್ತವಿದೆ. ಅದಕ್ಕಾಗಿ ಅದರ ಮಾತು ಹೇಳಿದೆ, ಆದರೆ ಆ ನಾಮಕರ್ಮದ ಕಾರಣದಿಂದ ಭವದಲ್ಲಿ ಅನೇಕ ರೂಪತೆಯನ್ನು ಧಾರಣ ಮಾಡುತ್ತಾನೆಂದಿಲ್ಲ . ಈ ರೀತಿ ಜಡದಿಂದ ಭೇದಜ್ಞಾನ ಮಾಡಿದರೆ ಮತ್ತು ದ್ರವ್ಯದೃಷ್ಟಿ ಮಾಡಿ ಪರ್ಯಾಯದೃಷ್ಟಿ ಬಿಟ್ಟುಕೊಟ್ಟರೆ ಅದನ್ನು ಸಮ್ಯಗ್ಜ್ಞಾನವೆಂದು ಹೇಳಲಾಗುತ್ತದೆ ಮತ್ತು ಅದೇ ಧರ್ಮವಿದೆ.

ಹೀಗೆ ದ್ರವ್ಯ ಪರ್ಯಾಯದ ಯಥಾರ್ಥ ನಿರ್ಣಯವಾದವನಿಗೆ ಭವದ ಕ್ರಮ ಉಳಿಯುವುದಿಲ್ಲ ಭವದ ಪರ್ಯಾಯ ನನ್ನಿಂದ ಇದೆ ಕರ್ಮದಿಂದ ಇಲ್ಲವೆಂದು ಅನೇಕಾಂತದ ಯಥಾರ್ಥ ಜ್ಞಾನ ಮಾಡಿಕೊಳ್ಳುವ ಆತ್ಮನು ಏಕರೂಪನಿದ್ದಾನೆಂದು ನಿರ್ಣಯವಾದರೆ ಸಮ್ಯಗ್ದರ್ಶನ-ಜ್ಞಾನ-ಚಾರಿತ್ರವಾಗಿ ಅವನಿಗೆ ಭವದ ಭ್ರಮಣ ಉಳಿಯುವುದಿಲ್ಲ ಅವನಿಗೆ ಅಭೂತಪೂರ್ವವಾದ ಸಿದ್ಧಪರ್ಯಾಯವು ಪ್ರಾಪ್ತವಾಗುತ್ತದೆಯೆಂಬ ಮಾತನ್ನು ಈಗ ಇಪ್ಪತ್ತನೆಯ ಗಾಥೆಯಲ್ಲಿ ಹೇಳುತ್ತಾರೆ,-

**ಣಾಣಾವರಣಾದೀಯಾ ಭಾವಾ ಜೀವೇಣ ಸುಟ್ಠು ಅಣುಬದ್ಧಾ ।**
**ತೇಸಿಮಭಾವಂ ಕಿಚ್ಚಾ ಅಭೂದಪುವ್ವೋ ಹವದಿ ಸಿದ್ಧೋ ॥೨೦॥**

**ಜೀವದೊಡನೆ ಜ್ಞಾನಾವರಣಾದಿಭಾವಗಳು ಚನ್ನಾಗಿ ಅನುಬದ್ಧವಿವೆ ।**
**ಅವುಗಳ ಅಭಾವಮಾಡಿ ಆ ಜೀವ ಅಭೂತಪೂರ್ವ ಸಿದ್ಧನಾಗುವುದು ॥೨೦॥**

**ಅರ್ಥ :-** ಯಾವ ಜ್ಞಾನಾವರಣೀಯ ಮೊದಲಾದ ಎಂಟು ಪ್ರಕಾರದ ಕರ್ಮ ಪರ್ಯಾಯಗಳಿವೆ ಅದನ್ನು ಸಂಸಾರೀ ಜೀವನು ಅನಾದಿಕಾಲದಿಂದ ರಾಗ-ದ್ವೇಷ-ಮೋಹದ ವಶವರ್ತಿಯಾಗಿ ಚನ್ನಾಗಿ ಅತ್ಯಂತ ಗಾಢತರವಾದ ಬಂಧನದಿಂದ ಬಂಧಿಸಲ್ಪಟ್ಟಿದ್ದಾನೆ. ಆತ್ಮ ವಸ್ತುವು ಅನಾದಿಯಿಂದ ದ್ರವ್ಯದೃಷ್ಟಿಯಿಂದ ಶುದ್ಧವೇ ಇದೆ, ಆದರೆ ಪರ್ಯಾಯದಲ್ಲಿ ಅಶುದ್ಧತೆಯಿದೆ. ಅನಾದಿಯಿಂದ ಜ್ಞಾನಾವರಣೀಯ ಮೊದಲಾದ ಎಂಟು ಕರ್ಮಗಳ ನಿಮಿತ್ತದಿಂದ ತಾನು ರಾಗ-ದ್ವೇಷ-ಮೋಹದ ವಶವಾಗಿದ್ದಾನೆ. ಅದಕ್ಕಾಗಿ ವ್ಯವಹಾರದಿಂದ ಜಡಕರ್ಮಗಳಿಂದ ಬಂಧಿಸಲ್ಪಟ್ಟಿದ್ದಾನೆಂದು ಹೇಳಲಾಗುತ್ತದೆ. ಮತ್ತು ತನ್ನ ಪರ್ಯಾಯದಿಂದ ಬಂಧಿಸಲ್ಪಟ್ಟಿದ್ದಾನೆಂಬುದು ಅದು ಅಶುದ್ಧನಿಶ್ಚಯನಯದ ಕಥನವಿದೆ. ನಿಮಿತ್ತದ ಜ್ಞಾನ ಮಾಡಿಸುವುದಕ್ಕಾಗಿ ಜಡಕರ್ಮದಿಂದ ಗಾಢವಾಗಿ ಬಂಧಿಸಲ್ಪಟ್ಟಿದ್ದಾನೆಂದು ಹೇಳಲಾಗಿದೆ. ನಿಜವಾಗಿ ಜಡದ ಪರ್ಯಾಯವು ಆತ್ಮನನ್ನು ಬಂಧಿಸುವುದಿಲ್ಲ . ತಾನು ಅಜ್ಞಾನಭಾವ ಮಾಡಿದ್ದಾನೆ ಅದಕ್ಕಾಗಿ ವ್ಯವಹಾರದಿಂದ ಜಡಕರ್ಮದಿಂದ ಬಂಧಿಸಲ್ಪಟ್ಟಿದ್ದಾನೆಂದು ಹೇಳಲಾಗುತ್ತದೆ.

ಮೂಲ ಸತ್ತಾದಿಂದ ಈ ಎಂಟೂ ಕರ್ಮಗಳ ನಾಶಮಾಡಿದರೆ ಅನಾದಿಕಾಲದಿಂದ ಯಾವ ಕಾಲದಲ್ಲೂ ಕೂಡ ಪ್ರಾಪ್ತವಾಗಿರದಂಥ ಸಿದ್ಧಪದದ ಪ್ರಾಪ್ತಿಯಾಗುತ್ತದೆ. ಜಡಕರ್ಮಗಳನ್ನು ನಾಶಪಡಿಸುವುದು ಅದು ಆತ್ಮನ ಕೈಯೊಳಗಿನ ಮಾತಲ್ಲ . ಆದರೆ ಆತ್ಮನು ತನ್ನ ಚೈತನ್ಯಸ್ವಭಾವದ ದೃಷ್ಟಿ ಮಾಡಿದರೆ ರಾಗ-ದ್ವೇಷ-ಮೋಹಗಳ ನಾಶವಾಗುತ್ತದೆ. ಎಂದರೆ ಕರ್ಮದ ನಾಶಮಾಡಿದನೆಂದು ಹೇಳಲಾಗುತ್ತದೆ. ಕರ್ಮಗಳ ನಾಶವಾಗುವಲ್ಲಿ ರಾಗ-ದ್ವೇಷಗಳ ಅಭಾವವು ನಿಮಿತ್ತವಿದೆ. ರಾಗ-ದ್ವೇಷಗಳು ನಿಮಿತ್ತವಿದ್ದರೆ ಕರ್ಮವು ನೈಮಿತ್ತಿಕವಿದೆ. ಆತ್ಮನು ರಾಗ ಮಾಡಿದರೆ ಜಡಕರ್ಮವನ್ನು ನಿಮಿತ್ತವೆಂದು ಹೇಳಲಾಗುತ್ತದೆ ಎಂದರೆ ವಿಕಾರೀ ಪರ್ಯಾಯವು ಅದು ನೈಮಿತ್ತಿಕವಿದೆ ಮತ್ತು ಜಡಕರ್ಮವು ಅದು ನಿಮಿತ್ತವಿದೆ. ನಿಮಿತ್ತವೇ ಇಲ್ಲವೆಂದು ಯಾರಾದರೂ ಮನ್ನಿಸುತ್ತಿದ್ದರೆ ಆ ಮಾತು ಅಸತ್ಯವಿದೆ. ವಾಣಿಯು ನಿಮಿತ್ತವಿದೆ ಅದಕ್ಕಾಗಿ ರಾಗ-ದ್ವೇಷಗಳಾಗುತ್ತವೆ ಎಂದು ಕೂಡ ಇಲ್ಲ ಮತ್ತು ರಾಗ-ದ್ವೇಷಗಳಾಗುತ್ತವೆ ಅದಕ್ಕಾಗಿ ಹೊಸ ಕರ್ಮವನ್ನು ಬಂಧಿಸಿಕೊಳ್ಳಬೇಕಾಗುತ್ತದೆ ಎಂದು ಕೂಡ ಇಲ್ಲ . ಕರ್ಮದ ಪರ್ಯಾಯವು ಕರ್ಮದ ಕಾರಣದಿಂದಾಗುತ್ತದೆ, ರಾಗದ ಪರ್ಯಾಯವು ರಾಗದ ಕಾರಣದಿಂದ ಆಗುತ್ತದೆ.

ಆತ್ಮನು ತ್ರಿಕಾಲ ಶುದ್ಧ ಚಿದಾನಂದನಿದ್ದಾನೆ, ನಿಮಿತ್ತವು ಪರವಿದೆ ಮತ್ತು ರಾಗವಾಗುತ್ತದೆ ಅದು ನಾನಲ್ಲ , ನಾನು ಅನಾದಿಯಿಂದ ಶುದ್ಧನಿದ್ದೇನೆಂಬ ದೃಷ್ಟಿಯಾಗಿ ಮತ್ತು ಅದರಲ್ಲಿ ಲೀನತೆಯಾದರೆ ಮಿಥ್ಯಾತ್ವ-ರಾಗಾದಿಗಳ ಅಭಾವವಾಗುತ್ತದೆ. ಮತ್ತು ರಾಗದ ನಾಶವಾದ ಮೇಲೆ ಕರ್ಮದ್ದೂ ಕೂಡ ನಾಶವಾಗುತ್ತದೆ. ಇದರಿಂದ ಹೊಸ ಕರ್ಮ ಕಟ್ಟುವುದಿಲ್ಲ . ರಾಗ-ದ್ವೇಷಗಳ ಅಭಾವವಾದರೆ ಅನಾದಿಯಿಂದ ಯಾವುದು ಇರಲಿಲ್ಲ ಅಂಥ ಸಿದ್ಧಪದದ ಪ್ರಾಪ್ತಿಯಾಗುತ್ತದೆ. ಪರ್ಯಾಯದೃಷ್ಟಿಯಿಂದ ಸಿದ್ಧಪದವು ಹೊಸದಾಗಿ ಆಗಿದೆ. ಈ ಗಾಥೆಯಲ್ಲಿ ನಾಲ್ಕು ಮಾತು ಹೇಳಿದ್ದಾರೆ.

೧) ದ್ರವ್ಯದೃಷ್ಟಿಯಿಂದ ಸಿದ್ಧಪದವು ಆತ್ಮನಲ್ಲಿ ಅನಾದಿ ಅನಂತವಿದೆ.

೨) ಪರ್ಯಾಯದೃಷ್ಟಿಯಿಂದ ಆತ್ಮನಲ್ಲಿ ಎಂದೂ ಆಗಿರದಂಥ ನವೀನ ಸಿದ್ಧಪರ್ಯಾಯವಾಗುತ್ತದೆ.

೩) ದ್ರವ್ಯದೃಷ್ಟಿಯಿಂದ ಆತ್ಮನಲ್ಲಿ ಸಂಸಾರವು ಇಲ್ಲವೇ ಇಲ್ಲ .

೪) ಪರ್ಯಾಯದೃಷ್ಟಿಯಿಂದ ಆತ್ಮನಲ್ಲಿ ಸಂಸಾರವು ಅನಾದಿಯಿಂದಿದೆ, ನವೀನವಿಲ್ಲ .

**ಭಾವಾರ್ಥ :-** ದ್ರವ್ಯಾರ್ಥಿಕ ಮತ್ತು ಪರ್ಯಾಯಾರ್ಥಿಕದ ಭೇದದಿಂದ ನಯಗಳು ಎರಡು ಪ್ರಕಾರದಿಂದಿವೆ. ಅವೆರಡು ನಯಗಳಿಂದ ವಸ್ತುವಿನ ಸ್ವರೂಪವನ್ನು ತಿಳಿಸಿಕೊಡುತ್ತಾರೆ

ದ್ರವ್ಯಾರ್ಥಿಕನಯದ ಅಪೇಕ್ಷೆಯಿಂದ ಹೇಳಬೇಕಾದರೆ ಜೀವದ್ರವ್ಯವು ಯಾವಾಗಲೂ ಅವಿನಾಶಿ, ಟಂಕೋತ್ಕೀರ್ಣ, ಸಂಸಾರ ಪರ್ಯಾಯವಿದ್ದರೂ ಕೂಡ ಉತ್ಪಾದ-ವ್ಯಯದಿಂದ ರಹಿತವಾಗಿ ಸಿದ್ಧಸಮಾನವಿದೆ. ವಸ್ತು ದೃಷ್ಟಿಯಿಂದ ಆತ್ಮನು ಸಂಸಾರದ ವ್ಯಯ ಮತ್ತು ಸಿದ್ಧಪರ್ಯಾಯದ ಉತ್ಪಾದವಿಲ್ಲದೆ ಏಕರೂಪ ಸಿದ್ಧಸಮಾನನಿದ್ದಾನೆ. ಆತ್ಮನು ಜ್ಞಾಯಕ, ತ್ರಿಕಾಲ ತಿಳಿಯುವಂಥವನು-ನೋಡುವಂಥವನು ಇದ್ದಾನೆ. ಅವನಲ್ಲಿ ಸಂಸಾರದ ನಾಶ ಮತ್ತು ಸಿದ್ಧದ ಉತ್ಪಾದದಂಥ ಭೇದಗಳು ಪರ್ಯಾಯದೃಷ್ಟಿಯಿಂದ ಇವೆ. ದ್ರವ್ಯದೃಷ್ಟಿಯಿಂದ ಆ ಭೇದಗಳು ಇಲ್ಲ . ನಾಟಕ ಸಮಯಸಾರದಲ್ಲಿ ಹೀಗೆ ಹೇಳುತ್ತಾರೆ,-

ಚೇತನರೂಪ ಅನೂಪ ಅಮೂರತ, ಸಿದ್ಧಸಮಾನ ಸದಾ ಪದ ಮೇರೋ

ಸಿದ್ಧಪದವು ಅನಾದಿಯಿಂದ ಆತ್ಮನಲ್ಲಿದೆಯೆಂದು ಶ್ರದ್ಧೆ ಮಾಡಿದರೆ ಆಗ ನಿಮಿತ್ತವಿರುತ್ತದೆ, ಆದರೆ ತನ್ನ ಪರ್ಯಾಯವು ತನ್ನೊಳಗಿಂದ ಆಗುತ್ತದೆ. ವಸ್ತುವಂತೂ ಇದ್ದಕ್ಕಿದ್ದಹಾಗೆಯೇ ಇದೆಯೆಂದು ದೃಷ್ಟಿ ಮಾಡದರೆ ಮತ್ತು ಅದರಲ್ಲಿ ಲೀನತೆ ಹೊಂದಿದರೆ ಸಿದ್ಧಪರ್ಯಾಯವು ಪ್ರಕಟವಾಗುತ್ತದೆ, ಕ್ರಿಯಾಕಾಂಡದಿಂದ ಅದು ಪ್ರಕಟವಾಗುವುದಿಲ್ಲ.

ಪರ್ಯಾಯಾರ್ಥಿಕನಯದ ಅಪೇಕ್ಷೆಯಿಂದ ಜೀವದ್ರವ್ಯವು ಯಾವಾಗ ದೇವ-ಮನುಷ್ಯ ಮೊದಲಾದ ಪರ್ಯಾಯಗಳನ್ನು ಧಾರಣ ಮಾಡುತ್ತದೆ ಆಗ ಜೀವದ್ರವ್ಯವು ಆ ಅವಸ್ಥೆಯರೂಪದಿಂದ ಪರಿಣಮಿಸುತ್ತ ಉತ್ಪಾದ-ನಾಶದ ಅವಸ್ಥೆಯನ್ನು ಧಾರಣ ಮಾಡುತ್ತದೆ. ಆ ಅವಸ್ಥೆಯರೂಪದಿಂದ ಆತ್ಮನು ತಾನೇ ಆಗುತ್ತಾನೆ, ಪರದ ಕಾರಣದಿಂದ ಅಥವಾ ಪರದಿಂದ ಆಗುವುದಿಲ್ಲ . ಯಾವ ಪ್ರಕಾರ ಚಿನ್ನದಲ್ಲಿ ಬಳೆ, ಕುಂಡಲ ಮೊದಲಾದ ಅವಸ್ಥೆಗಳಾಗುತ್ತವೆ ಆ ರೂಪದಿಂದ ಚಿನ್ನವಾಗುವುದಿಲ್ಲ , ಚಿನ್ನದಿಂದ ಆ ಅವಸ್ಥೆಗಳಾಗಿಲ್ಲ . ಚಿನ್ನದಿಂದ ಆಗಿವೆಯೆಂದು ಮನ್ನಿಸಿದರೆ ಅವನು ಅವಸ್ಥೆಯ ದೃಷ್ಟಿಯನ್ನು ಮನ್ನಿಸುವುದಿಲ್ಲ . ಅದೇಪ್ರಕಾರ ಆತ್ಮನ ಅವಸ್ಥೆಯು ನಿಮಿತ್ತದಿಂದ ಅಥವಾ ಕರ್ಮದಿಂದ ಆಗಿದೆಯೆಂದು ಮನ್ನಿಸಹೋದರೆ ಪರ್ಯಾಯ ದೃಷ್ಟಿಯಿಂದ ಆತ್ಮನು ಆ ಪರ್ಯಾಯರೂಪನಾಗಿದ್ದಾನೆಂಬ ಮಾತು ಉಳಿಯುವುದಿಲ್ಲ . ಆದರೆ ಕರ್ಮವಂತೂ ನಿಮಿತ್ತಮಾತ್ರವಿದೆ, ಆತ್ಮನು ತಾನೇ ಆ ಪರ್ಯಾಯರೂಪವಾಗಿದ್ದಾನೆಂದು ಮನ್ನಿಸಿದರೆ ಪರ್ಯಾಯದೃಷ್ಟಿಯಿಂದ ಜೀವಾಸ್ತಿಕಾಯದ ಜ್ಞಾನವನ್ನು ಸರಿಯಾಗಿ ಮಾಡಿಕೊಂಡಿದ್ದಾನೆಂದು ಹೇಳಲಾಗುವುದು. ಹೀಗೆ ದ್ರವ್ಯದೃಷ್ಟಿ ಮತ್ತು ಪರ್ಯಾಯದೃಷ್ಟಿಯ ವಿಲಾಸವಿದೆ.

ನೋಡಿರಿ, ಇಲ್ಲಿ ಸಂಸಾರೀ ಪರ್ಯಾಯವು ನವೀನವಿಲ್ಲವೆಂದು ಸಿದ್ಧಮಾಡುತ್ತಾರೆ. ಪರ್ಯಾಯದೃಷ್ಟಿಯಿಂದ ಸಂಸಾರವು ಅನಾದಿಯದಿದೆ. ವಸ್ತುದೃಷ್ಟಿಯಿಂದ ಆತ್ಮನಲ್ಲಿ ಸಂಸಾರವು ತ್ರಿಕಾಲವಿಲ್ಲ . ಆತ್ಮನು ತನ್ನ ಜ್ಞಾನಸ್ವಭಾವವನ್ನು ಮರೆತು ದಯೆ, ದಾನ, ಕಾಮ,ಕ್ರೋಧ ಮೊದಲಾದವುಗಳ ಪರಿಣಾಮಗಳನ್ನು ನಾನಿದ್ದೇನೆಂಬ ಪರ್ಯಾಯಬುದ್ಧಿಮಾಡಿ ಜ್ಞಾನಾವರಣೀಯ ಮೊದಲಾದ ಎಂಟು ಕರ್ಮಗಳ ಸಂಬಂಧ ಮಾಡುತ್ತಾನೆ ಆಗ ವ್ಯವಹಾರದಿಂದ ಜ್ಞಾನಾವರಣೀಯ ಮೊದಲಾದ ಕರ್ಮಗಳ ಸಂಬಂಧದಿಂದ ಸಂಸಾರವಿದೆಯೆಂದು ಹೇಳಲಾಗುತ್ತದೆ. ನಿಶ್ಚಯದಿಂದ ತಾನು ಯಾವ ಪ್ರಕಾರದ ಪರ್ಯಾಯ ಮಾಡುತ್ತಾನೆ ಅದು ನೈಮಿತ್ತಿಕವಿದೆ ಮತ್ತು ಅದರಲ್ಲಿ ಜಡಕರ್ಮವು ನಿಮಿತ್ತವಿದೆ. ನವೀನ ಕರ್ಮದ ಬಂಧವಾಗುವುದು ಅದು ನೈಮಿತ್ತಿಕವಿದೆ ಮತ್ತು ಆತ್ಮನ ರಾಗಾದಿಗಳ ಪರಿಣಾಮವು ಅದು ಅದರಲ್ಲಿ ನಿಮಿತ್ತವಿದೆ. ಇಂಥ ನಿಮಿತ್ತ-ನೈಮಿತ್ತಿಕಭಾವವು ಅನಾದಿಯಿಂದಿದೆ, ಆದರೆ ಕರ್ಮದ ಕಾರಣದಿಂದ ಸಂಸಾರವಿದೆಯೆಂಬುದು ಅದರ ಅರ್ಥವಲ್ಲ. ವಿಕಾರದಲ್ಲಿ ಕರ್ಮವು ನಿಮಿತ್ತವಿದೆ ಅದು ನವೀನವಿಲ್ಲ . ಆ ಸಂಬಂಧವು ಒಂದು ಸಲ ಕಡಿದುಹೋದರೆ ಪುನಃ ಆಗುವುದಿಲ್ಲವೆಂಬುದನ್ನಿಲ್ಲಿ ಸಿದ್ಧಮಾಡಿದ್ದಾರೆ. ಪರ್ಯಾಯದೃಷ್ಟಿಯಿಂದ ವಿಕಾರಿಭಾವವು ಅನಾದಿಯದಿದೆ, ದ್ರವ್ಯಸ್ವಭಾವದಲ್ಲಿ ವಿಕಾರವು ತ್ರಿಕಾಲವಿಲ್ಲ .

ಭವ್ಯ ಜೀವನು ಕಾಲಲಬ್ಧಿ ಪಡೆದು ಸಮ್ಯಗ್ದರ್ಶನ ಮೊದಲಾದ ಮೋಕ್ಷದ ಸಾಮಗ್ರಿಗಳನ್ನು ಪ್ರಾಪ್ತಮಾಡಿಕೊಂಡು ಸಿದ್ಧಪರ್ಯಾಯವನ್ನು ಹೊಸದಾಗಿ ಪಡೆದುಕೊಂಡರೂ ಕೂಡ ದ್ರವ್ಯಾರ್ಥಿಕನಯದ ಅಪೇಕ್ಷೆಯಿಂದ ಆ ಸಿದ್ಧಪದವು ನವೀನವಿಲ್ಲ . ಅನಾದಿ ಅನಂತ ಆತ್ಮನದು ಸಿದ್ಧಸ್ವಭಾವವೇ ಇದೆ. ತನ್ನ ಪರ್ಯಾಯದ ಯೋಗ್ಯತೆಯು ಅದು ಕಾಲಲಬ್ಧಿಯಿದೆ. ಆತ್ಮನಲ್ಲಿ ಅಂತರ್ದೃಷ್ಟಿಯಾಗುವುದು ಮತ್ತು ಪರ್ಯಾಯದಲ್ಲಿ ಕಾರ್ಯವಾಗುವುದು ಆ ಸಮ್ಯಗ್ದರ್ಶನ ಮೊದಲಾದ ಅಂತರಸಾಮಗ್ರಿಯು ಮೋಕ್ಷಮಾರ್ಗವಿದೆ. ಅದರಿಂದ ಮೋಕ್ಷವಾಗುತ್ತದೆ.ಭವ್ಯ ಜೀವನಿಗೇ ಮೋಕ್ಷದ ಪ್ರಾಪ್ತಿಯಾಗುತ್ತದೆ. ಅಭವ್ಯನಿಗೆ ಆಗುವುದಿಲ್ಲ , ಅಂತರ್ದೃಷ್ಟಿಯಿಂದ ಜ್ಞಾನ ಮತ್ತು ಕ್ರೀಡೆ ಮಾಡಿದರೆ ಸಿದ್ಧಾವಸ್ಥೆಯು ಪ್ರಕಟವಾಗುವುದು. ಪರ್ಯಾಯದೃಷ್ಟಿಯಿಂದ ಸಿದ್ಧಾವಸ್ಥೆಯು ಹೊಸದಾಗಿ ಆಗಿದೆ, ಆದರೆ ದ್ರವ್ಯದೃಷ್ಟಿಯಿಂದ ಸಿದ್ಧಪದವು ನವೀನವಿಲ್ಲ ಏಕೆಂದರೆ ಆತ್ಮನು ದ್ರವ್ಯದೃಷ್ಟಿಯಿಂದ ಯಾವಾಗಲೂ ಸಿದ್ಧಸಮಾನನಿದ್ದಾನೆ. ಆತ್ಮನು ಜ್ಞಾನಸ್ವರೂಪನಿದ್ದಾನೆ. ಯಾವ ಪ್ರಕಾರ ಲವಣವು ಕ್ಷಾರದಿಂದ ತುಂಬಿಕೊಂಡಿದೆ ಅದೇ ಪ್ರಕಾರ ಆತ್ಮನು ಜ್ಞಾನದಿಂದ ತುಂಬಿಕೊಂಡಿದ್ದಾನೆ. ಪರದ ಕ್ರಿಯೆಯನ್ನಂತೂ ಆತ್ಮನು ಮಾಡುವ ಸಾಧ್ಯತೆಯಿಲ್ಲ ಆದರೆ ಪರ್ಯಾಯದಲ್ಲಿ ರಾಗಾದಿಗಳನ್ನು ಮಾಡುವ ಕಾರ್ಯ ಕೂಡ ಆತ್ಮನದಲ್ಲ . ಆತ್ಮನ ಕರ್ತವ್ಯವಂತೂ ಜ್ಞಾನ ಮಾಡುವುದಿದೆ.

ಚಿನ್ನದ ಪರ್ಯಾಯವು ಕುಂಡಲವಿದ್ದದ್ದು ಬಳೆಯರೂಪದಿಂದಾಗಿದೆ, ಅದು ಪರ್ಯಾಯದೃಷ್ಟಿಯಿಂದ ಬಳೆಯ ಪರ್ಯಾಯವು ನವೀನವಿದೆ, ಆದರೆ ಚಿನ್ನದ ಅಪೇಕ್ಷೆಯಿಂದ ಅದು ನವೀನವಿಲ್ಲ . ಆತ್ಮನಲ್ಲಿ ಅನಾದಿ ಕಾಲದಿಂದ ಕರ್ಮದ ನಿಮಿತ್ತವಾಗಿ ವಿಕಾರೀಭಾವಗಳಿವೆ, ಅವು ನವೀನವಿಲ್ಲ . ಈ ರೀತಿ ಪರ್ಯಾಯದೃಷ್ಟಿಯಿಂದ ಅನಾದಿಯಿಂದ ಅನಂತ ಭವಗಳನ್ನು ಮಾಡಿದೆ, ಯಾವುದೇ ಭವವು ನವೀನವಿಲ್ಲ .ಆಹಾ ! ಈ ಜೀವನಿಗೆ ಶಾಂತಿಯೆಲ್ಲಿಂದ ಆಯಿತು ? ಯಾರು ಆಶ್ರಯ ಭೂತರಿದ್ದಾರೆ ? ಆಹಾ ! ಶಾಂತಿಯಂತೂ ಚಿದಾನಂದದಲ್ಲಿದೆ. ಅದರದಂತೂ ಅರಿವೇ ಇಲ್ಲ . ಶರೀರದಲ್ಲಿ ಮತ್ತು ಪರದಲ್ಲಿ ಏಕತ್ವ ಬುದ್ಧಿಯು ವರ್ತಿಸುತ್ತಿದೆ ಅವನಿಗೆ ಸಂಸಾರವು ಪರ್ಯಾಯದೃಷ್ಟಿಯಿಂದ ಅನಾದಿಯದಿದೆ. ದೇವಗತಿಯಲ್ಲಿ ಹೋದರೆ ಅಲ್ಲಿ ಕೂಡ ಏಕತ್ವಬುದ್ಧಿ ಮಾಡುತ್ತಾನೆ. ಮನುಷ್ಯನಾದಾಗ ಜ್ಞಾನದ ಪ್ರಕಟತೆಯಿದ್ದರೂ ಕೂಡ ಸಂಸಾರದ ರುಚಿಯಲ್ಲಿ ಈ ಸತ್ಯತತ್ತ್ವದ ಮಾತನ್ನು ಕೇಳಲಿಕ್ಕೆ ಕೂಡ ವೇಳೆ ತೆಗೆಯದಿದ್ದರೆ ಎಂಭತ್ತಾನ್ಲುಕ್ಕು ಯೋನಿಗಳಲ್ಲಿ ಭ್ರಮಣಮಾಡಲು ಪಾತ್ರನಾಗುತ್ತಾನೆ. ದೃಷ್ಟಿಯು ಪರಾಧೀನವಾಗಿರುವುದರಿಂದ ಪರ್ಯಾಯದ ಸ್ವತಂತ್ರತೆಯನ್ನು ಒಪ್ಪಿಕೊಳ್ಳುವುದಿಲ್ಲ . ಶರೀರದಲ್ಲಿ ವ್ಯಾಧಿಯುಂಟಾದಾಗ ಹೊರಗಿನ ಸಾಮಗ್ರಿಗಳಿದ್ದರೂ ಕೂಡ ಆ ಸಾಮಗ್ರಿಗಳು ಶಾಂತಿಯನ್ನುಂಟುಮಾಡುವ ಸಾಧ್ಯತೆಯಿಲ್ಲ . ಏಕೆಂದರೆ ಶಾಂತಿಯು ಪರದಲ್ಲಿ ಇಲ್ಲ . ಆದರೆ ಆತ್ಮನಲ್ಲಿದೆಯೆಂದು ಒಪ್ಪಿಕೊಳ್ಳುವುದಿಲ್ಲ . ಅವನಿಗೆ ಪರ್ಯಾಯದೃಷ್ಟಿಯಿಂದ ಸಂಸಾರವು ಅನಾದಿಯದಿದೆ. ದ್ರವ್ಯದೃಷ್ಟಿಯಿಂದ ಸಂಸಾರವು ಇಲ್ಲವೇ ಇಲ್ಲ .

ಅಲ್ಪಸ್ಥಿತಿಯುಳ್ಳ ದೇವಾದಿಕರ ಪರ್ಯಾಯವು ನಾಮಕರ್ಮದ ಉದಯದಿಂದ ಪ್ರಾಪ್ತವಾಗುತ್ತದೆ. ಅದರಲ್ಲಿ ಯಾವುದೇ ಒಂದು ಪರ್ಯಾಯವು ಜೀವದ ಅಶುದ್ಧತೆಯ ಕಾರಣದಿಂದ ಉತ್ಪನ್ನವಾಗಿದ್ದರೂ ಕೂಡ ಅದನ್ನು ನವೀನ ಪರ್ಯಾಯವೆಂದು ಹೇಳಲಾಗುವುದಿಲ್ಲ . ಏಕೆಂದರೆ ಸಂಸಾರಿ ಜೀವನಿಗೆ ಅಶುದ್ಧ ಪರ್ಯಾಯದ ಪರಂಪರೆಯು ನಡೆಯುತ್ತ ಬಂದಿದೆ. ಅದು ಮೊದಲು ಇರದಿದ್ದರೆ ಮತ್ತು ನವೀನವಾಗಿದ್ದರೆ ನವೀನವೆಂದು ಹೇಳಬಹುದು, ಆದರೆ ಹಾಗಂತೂ ಇಲ್ಲ .

ಮನುಷ್ಯದಿಂದ ದೇವಪರ್ಯಾಯವು ಅಶುದ್ಧತೆಯ ಕಾರಣದಿಂದ ನವೀನವಾಗಿದೆ, ಆದರೆ ಅನಾದಿ , ಸಂಸಾರೀ ಜೀವದ ಪರ್ಯಾಯದ ಅಪೇಕ್ಷೆಯಿಂದ ಅದು ನವೀನವಿಲ್ಲ ಇಲ್ಲಿ ಸಮಯ ಸಮಯಕ್ಕೆ ಹಳೆಯ ಪರ್ಯಾಯದ ವ್ಯಯ ಮತ್ತು ಹೊಸ ಪರ್ಯಾಯದ ಉತ್ಪಾದವಾಗುತ್ತದೆಯೆಂಬ ಮಾತಿಲ್ಲ . ಇಲ್ಲಿಯಂತೂ ಹೊಸ ವಿಕಾರ ಮಾಡಿದರೂ ಕೂಡ ಅನಾದಿಯ ಅಪೇಕ್ಷೆಯಿಂದ ಅದು ನವೀನವಲ್ಲವೆಂದು ಹೇಳುವುದಿದೆ.

ದೇವ, ಮನುಷ್ಯ, ನಾರಕ, ತಿರ್ಯಂಚ ಮೊದಲಾದ ಭವಗಳು ವಿಕಾರೀ ಭಾವದ ಕಾರಣದಿಂದ

ಹೊಸ-ಹೊಸವು ಆಗುತ್ತಿದ್ದರೂ ಅನಾದಿ ಪ್ರವಾಹದಲ್ಲಿ ಈ ವಿಕಾರಿಭಾವಗಳು ಪರ್ಯಾಯದೃಷ್ಟಿಯಿಂದ ಮೊದಲು ಇರಲಿಲ್ಲ ಮತ್ತು ಹೊಸದಾಗಿ ಆಗಿವೆ ಎಂಬುದಾಗಿಲ್ಲ . ಅದಕ್ಕಾಗಿ ಪರ್ಯಾಯಬುದ್ಧಿ ಬಿಟ್ಟು ದ್ರವ್ಯಬುದ್ಧಿಮಾಡು. ದ್ರವ್ಯದೃಷ್ಟಿಯಿಂದ ಆತ್ಮನು ತ್ರಿಕಾಲ ಏಕರೂಪನಿದ್ದಾನೆ ಮತ್ತು ಪರ್ಯಾಯದಲ್ಲಿ ವಿಕಾರಗಳಾಗುತ್ತವೆ ಅವು ಪರ್ಯಾಯದೃಷ್ಟಿಯಿಂದ ನವೀನವಿಲ್ಲ ಮತ್ತು ಆತ್ಮನಲ್ಲಿ ಯಾವ ಸಿದ್ಧಾವಸ್ಥೆಯು ಪ್ರಕಟವಾಗುತ್ತದೆ ಅದು ದ್ರವ್ಯದೃಷ್ಟಿಯಿಂದ ನವೀನವಿಲ್ಲ. ಆತ್ಮನು ಚಿದಾನಂದ ಏಕರೂಪನಿದ್ದಾನೆ, ಪುಣ್ಯ-ಪಾಪವಿಲ್ಲದ ಟಂಕೋತ್ಕಿರ್ಣ ಜ್ಞಾನಾನಂದ ಮೂರ್ತಿಯಿದ್ದಾನೆ. ಅಂತರ್ದೃಷ್ಟಿಮಾಡಿ ಜ್ಞಾನದಲ್ಲಿ ಲೀನತೆ ಹೊಂದಿದರೆ ಸಿದ್ಧಪದವು ಹೊಸದಾಗಿ ಪ್ರಕಟವಾಗುತ್ತದೆ. ಆದಾಗ್ಯೂ ದ್ರವ್ಯದೃಷ್ಟಿಯಿಂದ ಆ ಪದವು ತ್ರಿಕಾಲವಿದೆ, ಹೊಸದಲ್ಲ .

ಅನಾದಿ ಅನಂತ ಪಂಚಾಸ್ತಿಕಾಯ ಪದಾರ್ಥಗಳಿವೆ. ಯಾರಿಗೆ ತಮ್ಮ ಕಲ್ಯಾಣ ಮಾಡಿಕೊಳ್ಳುವುದಿದೆ ಅವರಿಗೆ ಜೀವ ಪದಾರ್ಥವನ್ನು ತಿಳಿದುಕೊಳ್ಳಬೇಕಾವುದು. ಜೀವದ ಜ್ಞಾನಸ್ವಭಾವವು ತ್ರಿಕಾಲ ನಿತ್ಯವಿದೆ ಮತ್ತು ವಿಕಾರಗಳು ಅನಿತ್ಯವಿವೆ. ಆ ವಿಕಾರಗಳು ಹೊರಟುಹೋದರೆ ಮೋಕ್ಷಮಾರ್ಗವಾಗುತ್ತದೆ ಮತ್ತು ಆತ್ಮನಲ್ಲಿ ಶಾಂತಿ ಹಾಗೂ ಸುಖವು ಆಗುತ್ತದೆ. ಈ ಕಾರಣದಿಂದ ಅದರ ವರ್ಣನೆ ಮಾಡಲಾಗುತ್ತಿದೆ.

ಜೀವವು ವಸ್ತುವಿದೆ. ಅದಕ್ಕೆ ಅವಸ್ಥೆಯ ದೃಷ್ಟಿಯಿಂದ ಅಶುದ್ಧತೆಯ ಕಾರಣವಾಗಿ ಹೊಸ ಹೊಸ ದೇಹಗಳು ದೊರಕುತ್ತವೆ. ಅವಸ್ಥೆಯ ದೃಷ್ಟಿಮಾಡದಿದ್ದರೆ ಮತ್ತು ತ್ರಿಕಾಲ ಸ್ವಭಾವದ ದೃಷ್ಟಿ ಮಾಡಿದರೆ ಸಿದ್ಧ ಸ್ವರೂಪಿಯಾದ ಆತ್ಮನು ತ್ರಿಕಾಲನಿದ್ದಾನೆ. ಮತ್ತು ಪರ್ಯಾಯ ದೃಷ್ಟಿಯಿಂದ ಸಿದ್ಧದಶೆಯು ನವೀನವಿದೆ. ಈ ಆತ್ಮನ ಸುಖದ ಮಾತನ್ನು ರುಚಿಪೂರ್ವಕವಾಗಿ ಕೇಳಲಿಲ್ಲ ಎಂದರೆ ಸ್ಮರಣೆ ಉಳಿಯಲಿಲ್ಲ. ಆದರೆ ಸಂಸಾರದ ಮಾತು ಇದ್ದರೆ ಎಲ್ಲವೂ ಸ್ಮರಣೆಯಲ್ಲಿ ಉಳಿಯುತ್ತವೆ. ಇದರ ಕಾರಣವೇನೆಂದರೆ ಅವನಿಗೆ ಸಂಸಾರದ ಅಭಿರುಚಿಯಿದೆ ಆದರೆ ಆತ್ಮನ ಅಭಿರುಚಿಯಿಲ್ಲ.

ಆತ್ಮನನ್ನು ಎರಡು ದೃಷ್ಟಿಯಿಂದ ನೋಡಬೇಕಾಗುವುದು. ಶರೀರ, ವಾಣಿ, ಮನಸ್ಸು ಮೊದಲಾದ ಪರಪದಾರ್ಥಗಳಂತೂ ಆತ್ಮನಲ್ಲಿ ಇಲ್ಲವೇ ಇಲ್ಲ ಎಂದಮೇಲೆ ಅದರ ಮಾತೇನು ಮಾಡುವುದು ? ಮತ್ತು ಜಡ ಕರ್ಮದ ಕಾರಣದಿಂದ ಕೂಡ ಚತುರ್ಗತಿಗಳಲ್ಲಿ ಪರಿಭ್ರಮಣವಿಲ್ಲ ಅದಕ್ಕಾಗಿ ಅದರ ಮಾತು ಕೂಡ ಇಲ್ಲ. ಆದರೆ ಪರ್ಯಾಯ ಅಪೇಕ್ಷೆಯಿಂದ ಆತ್ಮನ ಅಶುದ್ಧತೆಯ ಕಾರಣವಾಗಿ ಹೊಸ ಹೊಸ ಭವಗಳು ಆಗುತ್ತಿದ್ದರೂ ಕೂಡ ಪ್ರವಾಹರೂಪದಿಂದ ಅವು ಅನಾದಿಯವಿವೆ, ನವೀನವಿಲ್ಲ. ಸರಪಣಿಯಲ್ಲಿ ಒಂದರ ನಂತರ ಒಂದು ಅಗಳಿಗಳು ಪಂಕ್ತಿಬದ್ಧವಾಗಿ ನಡೆದುಬಂದಿರುತ್ತವೆ ಅದರಲ್ಲಿ ಯಾವುದೇ ಅಗಳಿಯು ನವೀನವಿರುವುದಿಲ್ಲ. ಈ ಪಂಕ್ತಿಬದ್ಧವಾದ ಅಗಳಿಗಳೊಳಗಿಂದ ಒಂದು ಅಗಳಿಯು ಮುರಿದುಹೋದರೆ ಅಖಂಡ ಸರಪಣಿ ಉಳಿಯುವುದಿಲ್ಲ. ಅದೇ ಪ್ರಕಾರ ಆತ್ಮನಲ್ಲಿ ಅನಾದಿಯಿಂದ ಪ್ರವಾಹರೂಪವಾಗಿ ಪಂಕ್ತಿಬದ್ಧ ಅಶುದ್ಧತೆಯು ನಡೆಯುತ್ತ ಬರುತ್ತಿದೆ. ಆ ಅಶುದ್ಧತೆಯು ನವೀನವಿಲ್ಲ ದೇವವಾದ ನಂತರ ಮನುಷ್ಯ ಮತ್ತು ತಿರ್ಯಂಚ ಮೊದಲಾದ ಭವಗಳು ಅಸ್ಖಲಿತ ಪ್ರವಾಹರೂಪದಿಂದ ನಡೆಯುತ್ತಲೇ ಬರುತ್ತಿವೆ. ಆ ಅಶುದ್ಧ ಭಾವವು ಪ್ರವಾಹರೂಪದಿಂದಿದೆ ಅದರೊಳಗಿಂದ ಪ್ರವಾಹವು ತುಂಡಾದರೆ ಸಂಸಾರವು ಉಳಿಯುವುದಿಲ್ಲ. ಯಾವ ಪ್ರಕಾರ ಒಂದು ಅರಳೆಯ ಹಂಜಿಯಲ್ಲಿ ಇನ್ನೊಂದು ಹಂಜಿಯು ಸಂಬಂಧ ಕೂಡಿಸುತ್ತದೆ ಅದೇ ಪ್ರಕಾರ ಸಂಸಾರದ ಹಂಜಿಗಳು ಹೊಸ ಹೊಸದಾಗಿ ಅನಾದಿಯಿಂದ ಸಂಬಂಧ ಕೂಡಿಸುತ್ತಿವೆ. ಅದಕ್ಕಾಗಿ ಅಶುದ್ಧತೆಯು ಅನಾದಿಯಿದೆ.

ಈ ಪ್ರಕಾರ ದ್ರವ್ಯಾರ್ಥಿಕನಯದ ಅಪೇಕ್ಷೆಯಿಂದ ಸಿದ್ಧಪರ್ಯಾಯವು ಹೊಸದಾಗಿ ಆಗಿದೆಯೆಂದಿಲ್ಲ, ಆದರೆ ಶಾಶ್ವತವಾದ ಜೀವದ್ರವ್ಯದಲ್ಲಿ ಆತ್ಮಿಕಭಾವರೂಪದ ಸಿದ್ಧಪರ್ಯಾಯವು ಯಾವಾಗಲೂ ಸ್ಥಿರವಾಗಿದೆ. ಯಾವ ಪ್ರಕಾರ ಸಂಸಾರವು ಪರ್ಯಾಯಾರ್ಥಿಕನಯದಿಂದ ಅನಾದಿಯದಿದೆ, ನವೀನವಿಲ್ಲ ; ಅದೇ ಪ್ರಕಾರ ದ್ರವ್ಯಾರ್ಥಿಕ ನಯದಿಂದ ಕೂಡ ಸಿದ್ಧಪರ್ಯಾಯವು ನವೀನವಿಲ್ಲ, ಶಾಶ್ವತವಿದೆ, ಸಂಸಾರದ ನಾಶಮಾಡಿದರೆ ಸಿದ್ಧಪರ್ಯಾಯವು ನವೀನವಾಗಿ

ಉತ್ಪನ್ನವಾಗುತ್ತದೆಯೆಂಬ ಕಥನವಂತೂ ಪರ್ಯಾಯಾರ್ಥಿಕನಯದ ಅಪೇಕ್ಷೆಯಿಂದ ಇದೆ. ಈ ಮಾತನ್ನು ಬಿಸಿ ನೀರಿನ ದೃಷ್ಟಾಂತದಿಂದ ತಿಳಿಸಿಕೊಡಲಾಗಿದೆ. ಯಾವುದೇ ಒಂದು ಬುಗ್ಗೆಯೊಳಗಿಂದ ಬಿಸಿನೀರು ಹೊರಡುತ್ತದೆ ಅಥವಾ ಪರ್ವತದೊಳಗಿಂದ ಯಾವುದೇ ಒಂದು ಬಿಸಿನೀರಿನ ಝರಿಯು ಪ್ರವಹಿಸುತ್ತದೆ ಅದರ ಮಾತಿದೆ.

೧) ಪರ್ಯಾಯದೃಷ್ಟಿಯಿಂದ ಆ ನೀರು ಹೊಸದಾಗಿ ಬಿಸಿಯಾಗಿಲ್ಲ, ಆದರೆ ಅನಾದಿಯದಿದೆ.

೨) ದ್ರವ್ಯದೃಷ್ಟಿಯಿಂದ ಆ ನೀರು ಸ್ವಭಾವದಿಂದ ತ್ರಿಕಾಲ ಬಿಸಿಯಾಗಿಲ್ಲ.

೩) ಪರ್ಯಾಯದೃಷ್ಟಿಯಿಂದ ಆ ಬಿಸಿ ಅವಸ್ಥೆಯ ಅಭಾವವಾಗಿ ತಂಪಾದ ಅವಸ್ಥೆಯಾಗಿದೆ.

೪) ದ್ರವ್ಯದೃಷ್ಟಿಯಿಂದ ನೀರಿನ ಸ್ವಭಾವವು ತ್ರಿಕಾಲ ತಂಪು ಇದೆ.

ಈ ಪ್ರಕಾರ ಆತ್ಮನಲ್ಲಿ ಅಶುದ್ಧತೆಯು ಪರ್ಯಾಯದೃಷ್ಟಿಯಿಂದ ಅನಾದಿಯಿಂದಿದೆ. ದ್ರವ್ಯದೃಷ್ಟಿಯಿಂದ ಆತ್ಮನು ಅಶುದ್ಧನಾಗಿಯೇ ಇಲ್ಲ. ಮತ್ತು ಪರ್ಯಾಯದೃಷ್ಟಿಯಿಂದ ಸಿದ್ಧಪದವು ಹೊಸದಾಗಿ ಆಗಿದೆ ; ದ್ರವ್ಯದೃಷ್ಟಿಯಿಂದ ಸಿದ್ಧಪದವು ನವೀನವಾಗಿಲ್ಲವೆಂದು ತಿಳಿದುಕೊಳ್ಳಬೇಕು, ಮತ್ತು ಇಲ್ಲಿ ಬಿದಿರಿನ ದೃಷ್ಟಾಂತ ಕೊಡುತ್ತಾರೆ.

ಒಂದು ನೀಳವಾದ ಬಿದಿರು ಇದೆ. ಅದರ ಅರ್ಧಭಾಗದಲ್ಲಿ ಬಣ್ಣ ಬಣ್ಣದ ಚಿತ್ರ ಬಿಡಿಸಿದೆ ಮತ್ತು ಉಳಿದ ಅರ್ಧ ಭಾಗವು ಚಿತ್ರ ಬಿಡಿಸದೆ ಹಾಗೇ ಸ್ವಾಭಾವಿಕ ಶುದ್ಧವಾಗಿದೆ. ಯಾವ ಅರ್ಧ ಭಾಗದಲ್ಲಿ ಚಿತ್ರ ಬಿಡಿಸಿಲ್ಲ ಆ ಭಾಗವನ್ನು ಮುಚ್ಚಿಬಿಡಲಾಗಿದೆ. ಮತ್ತು ಯಾವ ಚಿತ್ರ ಬಿಡಿಸಿದ ಭಾಗವಿದೆ ಅದನ್ನು ತೆರೆದಿಡಲಾಗಿದೆ. ಈಗ ಯಾರಿಗೆ ಈ ಬಿದಿರಿನ ಭೇದದ ಅರಿವಿಲ್ಲ ಅವರು ಚಿತ್ರ ಬಿಡಿಸಿದ ಅರ್ಧ ಭಾಗವನ್ನು ನೋಡಿ ಇಡೀ ಬಿದಿರು ಚಿತ್ರ ಬಿಡಿಸಿದ್ದು ಇದೆಯೆಂದು ಮನ್ನಿಸುತ್ತಾರೆ. ಏಕೆಂದರೆ ಅರ್ಧ ಚಿತ್ರ ಬಿಡಿಸದ ಬಿದಿರಿನ ಅರಿವು ಅವರಿಗೆ ಇಲ್ಲ . ಅದೇ ಪ್ರಕಾರ ಈ ಜೀವ ಪದಾರ್ಥವು ಒಂದು ಭಾಗದಲ್ಲಂತೂ ಅನೇಕ ಸಂಸಾರಪರ್ಯಾಯಗಳಿಂದ ಚಿತ್ರಿತವಾಗಿ ವಿವಿಧರೂಪವಿದೆ ಮತ್ತು ಒಂದು ಭಾಗದಲ್ಲಿ ಶುದ್ಧವಾದ ಪರ್ಯಾಯವಿದೆ. ಯಾವುದು ಶುದ್ಧ ಪರ್ಯಾಯವಿದೆ ಅದಂತೂ ಪ್ರತ್ಯಕ್ಷವಿಲ್ಲ , ಅಂಥ ಜೀವದ್ರವ್ಯವನ್ನು ಅಜ್ಞಾನೀ ಜೀವನು ತಿಳಿಯುವುದಿಲ್ಲ . ಅವನು ಅಶುದ್ಧವಾದ ಸಂಸಾರೀ ಪರ್ಯಾಯವನ್ನು ನೋಡಿ ಜೀವದ್ರವ್ಯವನ್ನು ಸರ್ವಥಾ ಅಶುದ್ಧವೆಂದು ಮನ್ನಿಸಿದ್ದಾನೆ. ಇಲ್ಲಿ ಬಿದಿರಿನ ದೃಷ್ಟಾಂತ ಕೊಟ್ಟಿದ್ದಾರೆ. ಅದರಲ್ಲಿ ಅರ್ಧ ಬಿದಿರು ಚಿತ್ರ ಬಿಡಿಸಿದ್ದು ಮತ್ತು ಅರ್ಧ ಬಿದಿರು ಚಿತ್ರ ಬಿಡಿಸದ್ದನ್ನು ಸ್ವೀಕರಿಸಿದ್ದಾರೆ. ಸಿದ್ಧಾಂತದಲ್ಲಿ ಈ ಪ್ರಕಾರವಾಗಿಲ್ಲ . ಸಂಸಾರೀ ಪರ್ಯಾಯದ ಭಾಗವಂತೂ ಸಿದ್ಧ ಪರ್ಯಾಯದಿಂದ ಅನಂತದ ಭಾಗವಿದೆ. ದೃಷ್ಟಾಂತದಲ್ಲಂತೂ ಕೇವಲ ಎರಡು ಭಾಗವನ್ನೇ ತಿಳಿಸಿಕೊಡುವ ಪ್ರಯೋಜನವಿದೆ. ಯಾವನೋ ಓರ್ವ ಬಹುರೂಪಗಾರನು ನಾಯಿಯ ವೇಷ ಹಾಕಿಕೊಂಡು ಬಂದರೆ ಬಹುರೂಪಗಾರನ ಜ್ಞಾನವಿಲ್ಲದವನು ಅವನನ್ನು ನಾಯಿಯೆಂದೇ ಮನ್ನಿಸುತ್ತಾನೆ. ಅದೇ ಪ್ರಕಾರ ಜೀವನು ಚತುರ್ಗತಿರೂಪವಾದ ಸಂಸಾರದಲ್ಲಿ ಕಾಗೆ, ನಾಯಿ, ಮನುಷ್ಯ ಮೊದಲಾದ ಭವಗಳನ್ನು ಧಾರಣ ಮಾಡಿದ್ದಾನೆ ಅವು ಕೇವಲ ಒಂದು ಭಾಗದಲ್ಲಿವೆ, ಅವು ವೇಷಗಳಿವೆ. ತ್ರಿಕಾಲ ಸ್ವರೂಪವಲ್ಲ . ಅಜ್ಞಾನಿಯು ತನ್ನನ್ನು ಸಂಸಾರ ಪರ್ಯಾಯ ದಷ್ಟೆಂದೇ ಮನ್ನಿಸಿದ್ದಾನೆ. ಆದರೆ ಅವಸ್ಥೆಯ ದೃಷ್ಟಿಯಿಂದ ಮುಕ್ತನಾಗಿದ್ದೇನೆಂದು ತಿಳಿದುಕೊಳ್ಳುವುದಿಲ್ಲ .

ಸಂಸಾರ ಪರ್ಯಾಯವು ಕ್ಷಣಿಕವಿದೆ, ಆತ್ಮನು ತ್ರಿಕಾಲ ಶುದ್ಧ ಜ್ಞಾತಾನಿದ್ದಾನೆಂಬ ದೃಷ್ಟಿಯಾದ ನಂತರ ಅದರಲ್ಲಿ ವಿಹಾರ ಮಾಡಿದರೆ ಸಿದ್ಧಪರ್ಯಾಯವು ಪ್ರಕಟವಾಗುವುದು. ಯಾರಿಗೆ ಇದರ ಅರಿವಿಲ್ಲ ಅವರು ಯಾವ ಯಾವ ಭವದಲ್ಲಿ ಜನ್ಮವೆತ್ತಿದ್ದಾರೆ ಅಲ್ಲಿ ಆ ರೂಪದಿಂದ ಆತ್ಮನನ್ನು ಮನ್ನಿಸಿಕೊಂಡಿದ್ದಾರೆ. ದರಿದ್ರ ಅವಸ್ಥೆಯುಳ್ಳವನು ಭವಿಷ್ಯದಲ್ಲಿ ಶ್ರೀಮಂತ ಅವಸ್ಥೆಯಲ್ಲಿ ಬಹಳಷ್ಟು ಕಾಲ ಇರುವವನಿದ್ದೇನೆಂಬುದರ ಅರಿವಿಲ್ಲ ಎಂದರೆ ಅವನು ತನ್ನನ್ನು ದರಿದ್ರನೆಂದೇ ಮನ್ನಿಸಿದ್ದಾನೆ. ಅದೇ ಪ್ರಕಾರ ಅಜ್ಞಾನಿಯು ಅನಾದಿಯಿಂದ ತನ್ನನ್ನು ದರಿದ್ರ ಪರಾಧೀನನೆಂದು ನಂಬಿ ಕುಳಿತುಕೊಂಡಿದ್ದಾನೆ.

ಸಿದ್ಧಪರ್ಯಾಯವು ಪ್ರಕಟವಿಲ್ಲ ಆದರೆ ಆ ಪರ್ಯಾಯವು ಸಮ್ಯಗ್ದೃಷ್ಟಿಗೆ ಆಚರಣೆ ಮಾಡಿದಮೇಲೆ ಪ್ರಕಟವಾಗುತ್ತದೆಯೆಂಬುದರ ಅರಿವಿಲ್ಲದಿರುವುದರಿಂದ ಅವನು ಮಿಥ್ಯಾದೃಷ್ಟಿಯಿದ್ದಾನೆ.

ಆತ್ಮನ ಪದವಂತೂ ಯಾವಾಗಲೂ ಸಿದ್ಧಸ್ವರೂಪವಾಗಿಯೇ ಇದೆ; ಅವನ ಒಂದು ಭಾಗದಲ್ಲಿ ಎಂದರೆ ಪರ್ಯಾಯದಲ್ಲಿ ಸಂಸಾರವಿದೆ. ಅದನ್ನು ಅಜ್ಞಾನಿಯು ನೋಡಿದ್ದಾನೆ, ಆದರೆ ಅಪ್ರಕಟವಾದ ಸಿದ್ಧಪರ್ಯಾಯವನ್ನು ನೋಡುವುದಿಲ್ಲ . ಸಿದ್ಧಪರ್ಯಾಯವನ್ನು ಪ್ರಕಟಪಡಿಸಿಕೊಳ್ಳುವಂಥ ಸಾಮರ್ಥ್ಯವುಳ್ಳವನು ಆತ್ಮನಿದ್ದಾನೆ ಆತ್ಮನು ಸಂಸಾರಪರ್ಯಾಯವನ್ನು ಪ್ರಕಟಮಾಡಿಕೊಳ್ಳುವಂಥ ಸ್ವಭಾವದವನಿಲ್ಲ . ಆತ್ಮನಲ್ಲಿ ಕೇವಲಜ್ಞಾನದ ಶಕ್ತಿಯು ತ್ರಿಕಾಲವಿದೆ. ಅವನ ದೃಷ್ಟಿ ಮಾಡುವುದರಿಂದ ಕೇವಲಜ್ಞಾನವು ಪ್ರಕಟವಾಗುತ್ತದೆ. ಇವನನ್ನು ಅಜ್ಞಾನಿಯು ನೋಡುವುದಿಲ್ಲ , ಆದರೆ ಆತ್ಮನು ಚತುರ್ಗತಿಗಳಲ್ಲಿ ಭ್ರಮಣಮಾಡುವವನಿದ್ದಾನೆಂದು ಅವನು ನಂಬಿಕೊಂಡಿದ್ದಾನೆ ಅದರಿಂದ ಅವನ ಅಜ್ಞಾನವು ದೂರವಾಗುವುದಿಲ್ಲ . ಜೀವದ್ರವ್ಯದ ಸಂಪೂರ್ಣ ಸ್ವರೂಪವನ್ನು ತಿಳಿದುಕೊಳ್ಳುವುದಿಲ್ಲ .

ಅವನು ಅಶುದ್ಧಪರ್ಯಾಯವನ್ನು ನೋಡಿ ನಾನು ಸರ್ವಥಾ ಅಶುದ್ಧನಿದ್ದೇನೆಂದು ಮನ್ನಿಸಿ ಕುಳಿತುಕೊಂಡಿದ್ದಾನೆ ಅವನು ಮಿಥ್ಯಾದೃಷ್ಟಿಯಿದ್ದಾನೆ. ಆದರೆ ನಾನು ವಿಕಾಸದಷ್ಟು ಇಲ್ಲ , ನನ್ನ ಸ್ವರೂಪವಂತೂ ತ್ರಿಕಾಲ ಶುದ್ಧವೇ ಇದೆಯೆಂದು ಭೇದಜ್ಞಾನ ಮಾಡುವುದು ಅದು ಸಮ್ಯಗ್ಜ್ಞಾನವಿದೆ.

ಯಾವ ಪ್ರಕಾರ ಒಂದು ನಾಟಕ ಕಂಪನಿಯ ಮ್ಯಾನೇಜರನು ತಾನು ಸ್ವಯಂ ಸ್ತ್ರೀಯ ವೇಷ ಧಾರಣಮಾಡಿದರೆ ಅವನನ್ನು ನೋಡಿ ಅವನನ್ನು ಗುರುತಿಸಲಾರದ ಒಬ್ಬ ಮನುಷ್ಯನು ಅವನನ್ನು ಸ್ತ್ರೀಯೆಂದು ನಂಬಿ ಕುಳಿತುಕೊಳ್ಳುತ್ತಾನೆ. ಅದೇ ಪ್ರಕಾರ ನಾನು ಆತ್ಮನಿದ್ದೇನೆ, ನನ್ನ ಸ್ವಭಾವವು ತ್ರಿಕಾಲಶುದ್ಧವಿದೆ. ನಾನು ನನ್ನ ಪರ್ಯಾಯದಲ್ಲಿ ವಿಕಾರಮಾಡಿದ್ದೆನು ಈಗ ಅದರ ನಾಶಮಾಡಿ ಸಿದ್ಧಪರ್ಯಾಯವನ್ನು ಪ್ರಕಟಮಾಡಿಕೊಳ್ಳಬಹುದಾಗಿದೆ ಎಂಬುದನ್ನು ಮನ್ನಿಸದೆ ಆತ್ಮನನ್ನು ವರ್ತಮಾನ ಪರ್ಯಾಯದಷ್ಟೆಂದೇ ನಂಬಿ ಕುಳಿತುಕೊಂಡಿದ್ದಾನೆ ಅವನು ಮಿಥ್ಯಾದೃಷ್ಟಿಯಿದ್ದಾನೆ. ಅರಮನೆಯಲ್ಲಿರುವಂಥ ಮತ್ತು ಉತ್ಕೃಷ್ಟ ಭೋಜನ ಮಾಡುವಂಥ ದೊರೆಯು ಯಾವುದೇ ಕಾರಣದಿಂದ ಅರಣ್ಯ ಪ್ರದೇಶದಲ್ಲಿ ಹೋದಾಗ ಅಲ್ಲಿ ಅವನಿಗೆ ವಿಪರೀತವಾಗಿ ಹಸಿವೆಯಾದರೆ ಆ ಸಮಯದಲ್ಲಿ ಯಾವನೋ ಓರ್ವ ದನ ಕಾಯುವವನು ದೊರೆಗೆ ಒಣ ಜೋಳದ ರೊಟ್ಟಿ ಕೊಟ್ಟರೆ ಅದು ಅವನಿಗೆ ಸಿಹಿಯೆನಿಸುತ್ತದೆ ಮತ್ತು ಅದನ್ನು ತುಂಬ ಸಂತೋಷದಿಂದ ತಿಂದುಬಿಡುತ್ತಾನೆ ಆದರೆ ನಿಜವಾಗಿ ಅದು ದೊರೆಯ ಭೋಜನವಲ್ಲ ; ಅದೇ ಪ್ರಕಾರ ಆತ್ಮನು ತ್ರಿಕಾಲಶುದ್ಧ ದೊರೆಯಿದ್ದಾನೆ ಅವನು ಅನಾದಿಯಿಂದ ವಿಕಾರೀ ಪರ್ಯಾಯದಲ್ಲಿ ಪ್ರಸನ್ನನಾಗಿ ಹೋಗಿದ್ದಾನೆ, ಆದರೆ ಅವನು ಸಮ್ಯಗ್ಜ್ಞಾನ ಮಾಡಿಕೊಂಡರೆ ಆತ್ಮನು ಸಂಸಾರದ ವೇಷದಷ್ಟಿಲ್ಲ , ಆದರೆ ಕೊರೆಸಿದ ಪ್ರತಿಮೆಯಂತೆ ಏಕರೂಪ ಶುದ್ಧನಿದ್ದಾನೆಂಬುದರ ಅರಿವಾಗುತ್ತದೆಯೆಂಬ ಮಾತನ್ನು ಈಗ ಹೇಳುತ್ತಾರೆ.

ಯಾವಾಗ ಸಮ್ಯಗ್ಜ್ಞಾನವಾಗುತ್ತದೆ ಆಗ ಸರ್ವಜ್ಞ ಪ್ರಣೀತ ಯಥಾರ್ಥ ಆಗಮಜ್ಞಾನ, ಅನುಮಾನ, ಸ್ವಸಂವೇದನ ಜ್ಞಾನದ ಬಲದಿಂದ ಯಥಾರ್ಥ ಶುದ್ಧ ಆತ್ಮನ ಸ್ವರೂಪವನ್ನು ತಿಳಿದುಕೊಂಡು, ನೋಡಿ, ಆಚರಣೆಮಾಡಿ ಸಮಸ್ತ ಕರ್ಮಪರ್ಯಾಯದ ನಾಶಮಾಡಿದರೆ ಸಿದ್ಧಪರ್ಯಾಯದ ಪ್ರಾಪ್ತಿಯಾಗುತ್ತದೆ. ಯಾವ ಪ್ರಕಾರ ಚಿತ್ರ ಬಿಡಿಸಿದ ಬಿದಿರು ನೀರಿನಿಂದ ತೊಳೆದುಹಾಕಿದರೆ ಸ್ವಚ್ಛವಾಗಿ ಬಿಡುತ್ತದೆ ಅದೇ ಪ್ರಕಾರ ಸಮ್ಯಗ್ಜ್ಞಾನದಿಂದ ಮಿಥ್ಯಾತ್ವ ಮೊದಲಾದ ಭಾವಗಳ ನಾಶಮಾಡಿದರೆ ಆತ್ಮನು ಶುದ್ಧನಾಗುತ್ತಾನೆ.

ಮೊದಲು ಸರ್ವಜ್ಞ ಭಗವಂತರು ಹೇಳಿದ ಆಗಮದ ಯಥಾರ್ಥ ಜ್ಞಾನ ಮಾಡಿಕೊಳ್ಳಬೇಕು, ಯಾವ ಪ್ರಕಾರ ಸಂಸಾರದಲ್ಲಿ ಎಲ್ಲವನ್ನು ಸರಿಯಾಗಿ ಹೊಂದಿಸಿಕೊಂಡಿರುತ್ತದೆ ಅದೇ ಪ್ರಕಾರ ಆತ್ಮನ ಸ್ವರೂಪವು ಹೇಗಿದೆ ಹಾಗೆ ಸರ್ವಜ್ಞ ಭಗವಂತರ ಆಗಮದಿಂದ ತಿಳಿದುಕೊಳ್ಳಬೇಕು ಎಂದರೆ ವರ್ತಮಾನ ಪರ್ಯಾಯದಲ್ಲಿ ಅಪರಾಧವಿದೆ ಅದು ತ್ರಿಕಾಲಿಯಲ್ಲಿಲ್ಲ , ನನ್ನ ಸ್ವಭಾವವಂತೂ ಶುದ್ಧವಿದೆ. ಪರದ ಕಾರಣದಿಂದ ದೋಷವಿಲ್ಲ , ಸ್ವಭಾವದ ದೃಷ್ಟಿ ಮಾಡುವುದರಿಂದ

ಮಿಥ್ಯಾತ್ವದ ನಾಶವಾಗುತ್ತದೆಯೆಂದು ಮೊದಲು ಆಗಮದಿಂದ ನಿಶ್ಚಿತ ಮಾಡಬೇಕು. ಸರ್ವಜ್ಞ ಭಗವಂತರೆಂದರೆ ಯಾರು? ಅವರು ಆಗಮವನ್ನು ಹೇಗೆ ಹೇಳಿದ್ದಾರೆ ? ಎಂಬುದರ ನಿರ್ಣಯವನ್ನು ಮೊದಲು ಮಾಡಿಕೊಳ್ಳಬೇಕು.

ಅನಂತರ ಆ ಜ್ಞಾನವೇ ಆತ್ಮನಿದ್ದಾನೆಂಬ ಅನುಮಾನ ಮಾಡಬೇಕು. ಎಲ್ಲಿ ಎಲ್ಲಿ ಜ್ಞಾನವಿದೆ ಅಲ್ಲಿ ಅಲ್ಲಿ ಆತ್ಮನಿದ್ದಾನೆ. ರಾಗವು ಅದು ಆತ್ಮವಲ್ಲ . ಪರಪದಾರ್ಥಗಳಂತೂ ಪ್ರತ್ಯಕ್ಷ ಭಿನ್ನವಿವೆಯೆಂದು ಅನುಮಾನಮಾಡಬೇಕು. ಸ್ವಸಂವೇದನ ಜ್ಞಾನದಿಂದ ಜ್ಞಾನದ ವೇದನವಾಗುತ್ತದೆ. ರಾಗದಿಂದ ಅಥವಾ ಪುಣ್ಯದಿಂದ ಜ್ಞಾನದ ಅನುಭವವಾಗುವುದಿಲ್ಲ . ಜಯಸೇನ ಆಚಾರ್ಯದೇವರು ಹೀಗೆ ಹೇಳುತ್ತಾರೆ. ''ಏಕೋಹಂ ನಿರ್ಮಮಃ ಶುದ್ಧೋ ಜ್ಞಾನೀ ಯೋಗೀಂದ್ರಗೋಚರಃ । ಬಾಹ್ಯಃ ಸಂಯೋಗಜಾ ಭಾವಾ ಮತ್ತಃ ಸರ್ವೇಪಿ ಸರ್ವದಾ'' ಇತ್ಯಾದಿಯಾಗಿ ಆತ್ಮನ ಸ್ವರೂಪವನ್ನು ತಿಳಿದುಕೊಂಡು, ಅದರ ಶ್ರದ್ಧೆಮಾಡಿ ಅದರಲ್ಲಿಯೇ ವಿಹರಿಸುವುದರಿಂದ ವಿಕಾರದ ಸರ್ವಥಾ ನಾಶವಾಗಿ ಸಿದ್ಧಪದದ ಪ್ರಾಪ್ತಿಯಾಗುವುದು. ಕಂಭದ ಮೇಲೆ ಯಾವನೋ ಒರ್ವನು ಇದ್ದಲಿಯಿಂದ ಚಿತ್ರ ಬಿಡಿಸಿದ್ದರೆ ಅದು ನೀರಿನಿಂದ ತೊಳೆಯುವುದರಿಂದ ಸ್ವಚ್ಛವಾಗುತ್ತದೆ. ಅದೇ ಪ್ರಕಾರ ಸಮ್ಯಗ್ಜ್ಞಾನರೂಪದ ನಿರ್ಮಲ ಜಲದಿಂದ ಅನಾದಿಭ್ರಾಂತಿಯ ನಾಶವಾಗಿ ಬಿಡುತ್ತದೆ, ಹೀಗೆ ಸಿದ್ಧ ಪದವನ್ನು ಪ್ರಾಪ್ತಮಾಡಿಕೊಳ್ಳುವ ಉಪಾಯ ತಿಳಿಸಿಕೊಡಲಾಗಿದೆ. ಅದರ ಹೊರತಾಗಿ ಯಾವುದೇ ಕ್ರಿಯಾಕಾಂಡವು ಅದು ಅದರ ಉಪಾಯವಲ್ಲ .

ಈಗ ಇಪ್ಪತ್ತೊಂದನೆಯ ಗಾಥೆಯಲ್ಲಿ ಜೀವದ ಉತ್ಪಾದ-ವ್ಯಯ ಅವಸ್ಥೆಯಿಂದ ಸತ್‌ದ ಉಚ್ಛೇದವನ್ನು ಮತ್ತು ಅಸತ್‌ದ ಉತ್ಪಾದವನ್ನು ಸಂಕ್ಷೇಪದಿಂದ ಸಿದ್ಧಮಾಡುತ್ತಾರೆ. ಆತ್ಮನ ವಿಕಾರೀ ಪರ್ಯಾಯವನ್ನು ನಾಲ್ಕು ಪ್ರಕಾರದಿಂದ ಅದ್ಭುತ ರೀತಿಯಿಂದ ಸಿದ್ಧಮಾಡಿದ್ದಾರೆ. ಜೀವದ್ರವ್ಯವಂತೂ ತ್ರಿಕಾಲಿಶುದ್ಧ ಏಕರೂಪವಿದೆ. ಆದರೆ ಅದರ ಪರ್ಯಾಯದಲ್ಲಿ ನಾಲ್ಕು ಪ್ರಕಾರದಿಂದ ಕರ್ತೃತ್ವವಿದೆ.

ಆತ್ಮನಲ್ಲಿ ಹೊಸ ಹೊಸ ಪರ್ಯಾಯಗಳಾಗುತ್ತವೆ. ಸತ್‌ದ ನಾಶ ಮತ್ತು ಅಸತ್‌ದ ಉತ್ಪಾದವನ್ನು ಸಂಕ್ಷೇಪದಲ್ಲಿ ಹೇಳಿ ಜೀವದ್ರವ್ಯದ ಕರ್ತಾತನ ಪೂರ್ಣ ಮಾಡಲಾಗಿದೆ. ಜೀವವು ದ್ರವ್ಯದಿಂದ ಶುದ್ಧ ಮತ್ತು ಪರ್ಯಾಯದಿಂದ ಅಶುದ್ಧವಿದೆ. ಆ ಅಶುದ್ಧ ಪರ್ಯಾಯದಲ್ಲಿ ೧) ಭಾವ ೨) ಅಭಾವ, ೩) ಭಾವಾಭಾವ ಮತ್ತು ೪) ಅಭಾವಭಾವವೆಂಬ ಈ ನಾಲ್ಕು ಭಾವಗಳು ಕ್ಷಣಕ್ಷಣಕ್ಕೆ ಪರ್ಯಾಯದಲ್ಲಿವೆಯೆಂದು ಸಿದ್ಧಮಾಡಿ ಅನಾದಿಯಿಂದ ಹೇಗಿದೆಯೆಂದರೆ ಅದು ಕ್ರಮಬದ್ಧವಿದೆಯೆಂಬುದನ್ನು ಈಗ ಇಪ್ಪತ್ತೊಂದನೆಯ ಗಾಥೆಯಲ್ಲಿ ಸಿದ್ಧಮಾಡುವರು.

ಯಾವ ಪ್ರಕಾರ ಬಿದಿರಿನ ಅರ್ಧಭಾಗದಲ್ಲಿ ಚಿತ್ರ ಬಿಡಿಸಿರುವುದನ್ನು ನೋಡಿ ಉಳಿದ ಭಾಗವು ಚಿತ್ರ ಬಿಡಿಸದೆ ಇರುವುದರ ಅರಿವು ಯಾವನಿಗೆ ಇಲ್ಲ ಅವನು ಇಡೀ ಬಿದಿರು ಚಿತ್ರ ಬಿಡಿಸಿದ್ದು ಇದೆಯೆಂದು ಮನ್ನಿಸುತ್ತಾನೆ. ಅದೇ ರೀತಿಯಾಗಿ ಅಜ್ಞಾನೀ ಜೀವನು ಆತ್ಮನ ಪರ್ಯಾಯದಲ್ಲಿ ವಿಕಾರವಿದೆ ಅದು ಪ್ರಕಟವಿರುವುದನ್ನು ನೋಡಿ ಮತ್ತು ತ್ರಿಕಾಲಸ್ವಭಾವದ ದೃಷ್ಟಿ ಮಾಡುವುದರಿಂದ ಸಿದ್ಧಪರ್ಯಾಯವು ಪ್ರಕಟವಾಗುತ್ತದೆ ಅದು ಅಪ್ರಕಟವಿದೆಯೆಂಬುದರ ಅರಿವಿಲ್ಲದವನು ಪೂರ್ಣ ಆತ್ಮನನ್ನು ಅಶುದ್ಧವೆಂದು ಮನ್ನಿಸುತ್ತಾನೆಂದು ಇಪ್ಪತ್ತನೆಯ ಗಾಥೆಯಲ್ಲಿ ಹೇಳಿಯಾಯಿತು.

ಇಲ್ಲಿ ದೃಷ್ಟಾಂತದಲ್ಲಿ ಬಿದಿರಿನ ಅರ್ಧ ಭಾಗವು ಚಿತ್ರ ಬಿಡಿಸಿದ್ದು ಇದೆ ಆದರೆ ಆತ್ಮನಲ್ಲಿ ಹಾಗೆ ಇಲ್ಲ . ಆತ್ಮನ ಅಶುದ್ಧ ಪರ್ಯಾಯಕ್ಕಿಂತ ಶುದ್ಧ ಪರ್ಯಾಯದ ಕಾಲವು ಅನಂತ ಗುಣಿತವಿದೆ. ಇಷ್ಟು ಅಂತರವಿದೆ ಆದರೆ ಇಲ್ಲಿಯಂತೂ ಎರಡು ಭಾಗಗಳನ್ನು ತಿಳಿಸಿಕೊಡುವ ಪ್ರಯೋಜನವಿದೆ. ಒಂದು ಭಾಗವು ಅಶುದ್ಧವಿದೆ ಮತ್ತು ಒಂದು ಭಾಗವು ಶುದ್ಧ ವಿದೆಯೆಂಬುದನ್ನು ತಿಳಿಸುವುದಿದೆ. ಸಂಸಾರದ ಸುಖವಂತೂ ಕಲ್ಪನಾಮಾತ್ರವಿದೆ. ಅದಕ್ಕಿಂತ ಸಿದ್ಧ ಸುಖದ ಪರ್ಯಾಯವು ಅನಂತ ಗುಣಿತವಿದೆ. ಸಂಸಾರ ಪರ್ಯಾಯದ ಕಾಲವು ಅಲ್ಪವಿದೆ, ಸಿದ್ಧಪರ್ಯಾಯದ ಕಾಲವು ಅನಂತವಿದೆ ಮತ್ತು ಆತ್ಮನ ಶುದ್ಧಸ್ವಭಾವದ ಕಾಲವು ಅನಾದಿ ಅನಂತವಿದೆ. ಸಂಸಾರದ ಆದಿಯಿಲ್ಲ ಆದರೆ ಅಂತವಿದೆ ಮತ್ತು ಸಿದ್ಧದ ಆದಿಯಿದೆ

ಆದರೆ ಅಂತವಿಲ್ಲ . ಅನಾದಿಯಿಂದ ಸಂಸಾರ ಪರ್ಯಾಯವು ಪ್ರಕಟವಿದೆ ಮತ್ತು ಸಿದ್ಧಪರ್ಯಾಯವು ಪ್ರಕಟವಿಲ್ಲ . ಜ್ಞಾಯಕ ಶುದ್ಧಸ್ವಭಾವದ ಆತ್ಮನು ತ್ರಿಕಾಲವಿದ್ದರೆ ವಿಕಾರವು ಅಲ್ಪವಿದೆ.

ಸರ್ವಜ್ಞಪ್ರಣೀತ ಆಗಮ ಜ್ಞಾನವನ್ನು ಮೊದಲು ಮಾಡಿಕೊಳ್ಳಬೇಕೆಂದರೆ ಕೆಲವರು 'ಮೊದಲು ಆಗಮ ಮತ್ತು ನಂತರ ಜ್ಞಾನವಾಗುತ್ತದೆ. ಅದಕ್ಕಾಗಿ ನಿಮಿತ್ತವಿಲ್ಲದೆ ಜ್ಞಾನವಾಗುವುದಿಲ್ಲ'ವೆಂದು ಹೇಳುತ್ತಾರೆ. ಆದರೆ ಇದರ ಅರ್ಥವು ಹಾಗೆ ಇಲ್ಲ . ಆಗಮವು ಹೀಗೆ ಹೇಳುತ್ತದೆ-ಜ್ಞಾಯಕಮೂರ್ತಿಯಾದ ಆತ್ಮನು ಸ್ವತಂತ್ರನಿದ್ದಾನೆ. ಜಗತ್ತಿನಲ್ಲಿ ಆರೂ ದ್ರವ್ಯಗಳು ಸ್ವತಂತ್ರವಿವೆ. ಪ್ರತಿಯೊಂದು ಪದಾರ್ಥದ ಪರಿಣಮನವು ಸ್ವತಂತ್ರ ತನ್ನಿಂದ ಆಗುತ್ತದೆ. ಮತ್ತು ನವತತ್ತ್ವ ಮೊದಲಾದವುಗಳಿವೆಯೆಂದು ಆಗಮವು ಹೇಳುತ್ತದೆ, ಆದರೆ ಅದರ ಜ್ಞಾನಮಾಡಿಕೊಳ್ಳುವ ಯೋಗ್ಯತೆಯಂತೂ ಜೀವದ್ದು ಇದೆ. ಅದೇನು ಆಗಮದ ಕಾರಣದಿಂದ ಆಗುವುದಿಲ್ಲ , ಮತ್ತು ಆಗಮವಿದೆ ಅದಕ್ಕಾಗಿ ಆ ಯೋಗ್ಯತೆಯಿದೆ ಎಂದು ಕೂಡ ಇಲ್ಲ . ಅಲ್ಲದೆ ವಾಣಿಯಿದೆ ಅದಕ್ಕಾಗಿ ಜ್ಞಾನದ ಯೋಗ್ಯತೆಯಿದೆ ಎಂದು ಕೂಡ ಇಲ್ಲ . ಆತ್ಮನ ಯೋಗ್ಯತೆಯಂತೂ ತನ್ನಿಂದಲೇ ಇದೆ. ಆ ಸಮಯದಲ್ಲಿ ಜ್ಞಾನದ ಭಾವವಿರಲಿ ಅಥವಾ ಜ್ಞಾನದ ಅಭಾವವಿರಲಿ ಆದರೆ ಅದು ಆತ್ಮನಿಂದ ಇದೆ. ಆಗಮವನ್ನು ಶ್ರವಣ ಮಾಡುವ ಮತ್ತು ತಿಳಿದುಕೊಳ್ಳುವ ಕೆಲಸವಿದೆ ಆ ಕ್ಷಯೋಪಶಮ ಭಾವವಂತೂ ಆತ್ಮನದಿದೆ.

ಯಾವ ಪ್ರಕಾರ ಯಾವನೋ ಓರ್ವನು ಏಳನೆಯ ತರಗತಿಯ ಪುಸ್ತಕ ಓದುತ್ತಿದ್ದರೆ ಆ ಓದುವ ಯೋಗ್ಯತೆಯು ಆತ್ಮನದಿದೆ, ಅದು ಏಳನೇ ತರಗತಿಯ ಪುಸ್ತಕದ ಕಾರಣದಿಂದಿಲ್ಲ . ತಿಳಿದುಕೊಳ್ಳುವವನ ವಿಕಾಸಕ್ಕೆ ಅನುಸರಿಸಿ ಜ್ಞಾನವು ಪರಿಣಮಿಸುತ್ತದೆ. ಧ್ರುವ ಸಾಮಾನ್ಯ ಜ್ಞಾನವಿದೆ ಅದರೊಳಗಿಂದ ಜ್ಞಾನದ ವಿಶೇಷತೆಯಿಂದ ಆತ್ಮನು ಪರಿಣಮಿಸುತ್ತಾನೆ. ತಾನು ತಿಳಿದುಕೊಂಡರೆ ಆಗಮ ಮೊದಲಾದುವನ್ನು ನಿಮಿತ್ತವೆಂದು ಹೇಳಲಾಗುತ್ತದೆ. ಆಗಮಜ್ಞಾನದ ನಂತರ ಅನುಮಾನ ಜ್ಞಾನ ಕೂಡ ಆತ್ಮನ ಯೋಗ್ಯತೆಯಿಂದಿದೆ. ಆತ್ಮನ ಸ್ವಭಾವವು ಪೂರ್ಣ ಜ್ಞಾನಘನವಿದೆ. ಮತ್ತು ಪರ್ಯಾಯದಲ್ಲಿ ಅಪೂರ್ಣತೆಯಿದೆ, ಆದರೆ ಪರ್ಯಾಯದಷ್ಟು ಆತ್ಮನಿಲ್ಲ ಅದು ಕ್ಷಣಿಕಭಾವವಿದೆಯೆಂದು ಅನುಮಾನ ಜ್ಞಾನ ಮಾಡುವುದು ಮತ್ತು ಸ್ವಸಂವೇದನ ಎಂದರೆ ಜ್ಞಾನವು ಜ್ಞಾನದಿಂದ ತಿಳಿಯುತ್ತದೆಯೆಂದು ಶ್ರದ್ಧೆ , ಜ್ಞಾನ ಮತ್ತು ಆಚರಣೆ ಮಾಡಿ ಮಿಥ್ಯಾತ್ವ ಮೊದಲಾದವುಗಳ ನಾಶ ಮಾಡುತ್ತಾನೆ ಅವನಿಗೆ ಸಿದ್ಧಪದದ ಪ್ರಾಪ್ತಿಯಾಗುತ್ತದೆ. ಸಂಸಾರಕ್ಕಿಂತ ಸಿದ್ಧದ ಕಾಲವು ಅನಂತ ಗುಣಿತವಿದೆ ಮತ್ತು ಆಗಮಜ್ಞಾನದ ಯೋಗ್ಯತೆ ಕೂಡ ಆತ್ಮನದಿದೆಯೆಂದು ಎರಡು ಮಾತುಗಳ ಸ್ಪಷ್ಟೀಕರಣ ಮಾಡಿಯಾಯಿತು. ಈಗ ಇಪ್ಪತ್ತೊಂದನೆಯ ಗಾಥೆಯ ಮಾತು ಹೇಳುತ್ತಾರೆ.

ಆತ್ಮನ ಉತ್ಪಾದ-ವ್ಯಯದ ಮುಖಾಂತರ ಸತ್‌ದ ನಾಶ ಮತ್ತು ಅಸತ್‌ದ ಉತ್ಪಾದವಾಗುತ್ತದೆ ಎಂದರೆ ಯಾವುದು ಭಾವವಿದೆ ಅದರ ನಾಶವಾಗುತ್ತದೆ ಮತ್ತು ಯಾವುದು ಭಾವವಿಲ್ಲ ಅದರ ಉತ್ಪಾದವಾಗುತ್ತದೆ. ಧ್ರುವ ಭಾವವು ಯಾವಾಗಲೂ ಸ್ಥಿರ ಉಳಿಯುತ್ತದೆ.

ಏವಂ ಭಾವಮಭಾವಂ ಭಾವಾಭಾವಂ ಅಭಾವಭಾವಂ ಚ ।
ಗುಣಪಜ್ಜಏಹಿಂ ಸಹಿದೋ ಸಂಸರಮಾಣೋ ಕುಣದಿ ಜೀವೋ ॥೨೧॥

**ಜೀವನೀತೆರದಿಂದ ಗುಣಪರ್ಯಾಯಗಳಸಹಿತ ಸಂಸರಣ ಮಾಡುತ್ತ**
**ಭಾವ, ಅಭಾವ, ಭಾವಾಭಾವ ಮತ್ತದರಂತೆ ಅಭಾವಭಾವವನು ಮಾಡುವನು ॥೨೧॥**

**ಅರ್ಥ :-** ಮೊದಲು ಹೇಳಿದ ಪ್ರಕಾರ ಪರ್ಯಾಯಾರ್ಥಿಕನಯದ ವಿವಕ್ಷೆಯಿಂದ ಪಂಚಪರಾವರ್ತನರೂಪ ಅವಸ್ಥೆಗಳಿಂದ ಸಂಸಾರದಲ್ಲಿ ಪರಿಭ್ರಮಣ ಮಾಡುತ್ತಿರುವ ಜೀವನು ದೇವ ಮೊದಲಾದ ಪರ್ಯಾಯಗಳನ್ನು ಧಾರಣ

ಮಾಡುತ್ತಾನೆ. ಆತ್ಮನು ಅನಾದಿಯಿಂದ ಪರ್ಯಾಯದೃಷ್ಟಿಯಿಂದ ಸಂಸಾರದಲ್ಲಿ ಪರಿಭ್ರಮಣ ಮಾಡುತ್ತಾನೆಂದು ಈ ಮೊದಲು ಹೇಳಿದೆ. ದ್ರವ್ಯ, ಕ್ಷೇತ್ರ, ಕಾಲ, ಭವ ಮತ್ತು ಭಾವವೆಂದು ಈ ಐದರಲ್ಲಿ ಬದಲಾವಣೆ ಹೊಂದುವುದು ಅದು ಪಂಚಪರಾವರ್ತನವಿದೆ ಅದು ಪರ್ಯಾಯದೃಷ್ಟಿಯಿಂದ ಇದೆ. ದ್ರವ್ಯದೃಷ್ಟಿಯಿಂದ ಆತ್ಮನಲ್ಲಿ ಭವಗಳಿಲ್ಲ . ಚಿನ್ನವಂತೂ ಹೇಗಿದೆ ಹಾಗೆ ಇದೆ ಅದರ ಅವಸ್ಥೆಯಲ್ಲಿ ಬಳೆ-ಕುಂಡಲ ಮೊದಲಾದ ಪ್ರಕಾರಗಳಿವೆ. ಅದರಂತೆ ಆತ್ಮನ ತ್ರಿಕಾಲಸ್ವಭಾವವಂತೂ ಏಕರೂಪವಿದೆ. ಆದರೆ ಅವನ ಪರ್ಯಾಯದಲ್ಲಿ ಅನಂತಭವದ ಪರಿವರ್ತನವಿದೆ. ಆ ಭವದಲ್ಲಿ ದೇವಮೊದಲಾದ ಪರ್ಯಾಯಗಳನ್ನು ಧಾರಣ ಮಾಡುತ್ತಾನೆ, ಇಲ್ಲಿ ಮುನಿಯ ಮಾತಿದೆ, ಅವನು ಮನುಷ್ಯನಿಂದ ದೇವನಾಗುತ್ತಾನೆ ಅದಕ್ಕಾಗಿ ಮನುಷ್ಯ ಪರ್ಯಾಯದ ನಾಶಮಾಡಿ ದೇವಪರ್ಯಾಯದ ಉತ್ಪಾದ ಮಾಡಿದ್ದಾನೆಂದು ದೃಷ್ಟಾಂತದ ಮುಖಾಂತರ ಹೇಳಲಾಗಿದೆ.

ಸಮ್ಯಗ್ದೃಷ್ಟಿಯು ಮನುಷ್ಯನಿಂದ ದೇವನಾಗುತ್ತಾನೆ. ಯಾವನೋ ಓರ್ವ ಸಮ್ಯಗ್ದೃಷ್ಟಿಯು ನರಕದಲ್ಲಿ ಹೋಗುತ್ತಾನೆ ಅದು ಸಮ್ಯಗ್ದರ್ಶನವಾಗುವ ಮೊದಲು ನರಕಾಯುಷ್ಯದ ಬಂಧವಾಗಿತ್ತು ಅದಕ್ಕಾಗಿ ಹೋಗುತ್ತಾನೆ ಎಂಬುದಾಗಿಲ್ಲ , ಆದರೆ ಮನುಷ್ಯ ಪರ್ಯಾಯದ ನಾಶ ಮತ್ತು ನರಕ ಭಾವದ ಉತ್ಪಾದವನ್ನು ಆ ಜೀವನು ಸ್ವಯಂ ಮಾಡಿದ್ದನು, ಆ ಆತ್ಮನು ನರಕಭಾವದಿಂದ ಪರಿಣಮಿಸಿದ್ದನು.

ಈ ಗಾಥೆಯಲ್ಲಿ ನಾಲ್ಕು ವಚನಗಳಿವೆ.

೧) ದೇವ ಪರ್ಯಾಯವನ್ನು ಮಾಡಿದ್ದಾನೆ ಅದು ಭಾವವಿದೆ.

೨) ಮನುಷ್ಯ ಪರ್ಯಾಯದ ನಾಶ ಮಾಡಿದ್ದಾನೆ ಅದು ಅಭಾವವಿದೆ.

೩) ವಿದ್ಯಮಾನ ದೇವಾದಿ ಪರ್ಯಾಯಗಳ ನಾಶದ ಆರಂಭ ಮಾಡಿದ್ದಾನೆ ಅದು ಭಾವಾಭಾವವಿದೆ.

೪) ವಿದ್ಯಮಾನವಿರದಂಥ ಮನುಷ್ಯಾದಿಪರ್ಯಾಯಗಳ ಉತ್ಪಾದದ ಆರಂಭ ಮಾಡಿದ್ದಾನೆ ಅದು ಅಭಾವಭಾವವಿದೆ.

ಆತ್ಮನು ದೇವ ಪರ್ಯಾಯದ ಭಾವ ಮಾಡುತ್ತಾನೆ, ಮನುಷ್ಯ ಪರ್ಯಾಯದ ಅಭಾವ ಮಾಡುತ್ತಾನೆ. ಆದರೆ ಆತ್ಮನ ನಾಶವಾಗುವುದಿಲ್ಲ ದೇವದಿಂದ ಮನುಷ್ಯನ ಸನ್ಮುಖತೆ ಮಾಡಿದ್ದಾನೆ ಆ ಸಮಯದಲ್ಲಿ ದೇವದ ಭಾವವಿತ್ತು ಅದರ ಅಭಾವ ಮಾಡುತ್ತಾನೆ ಅದು ಭಾವಾಭಾವವಿದೆ, ಮತ್ತು ದೇವದಲ್ಲಿ ಮನುಷ್ಯ ಭಾವವಿಲ್ಲ . ಮನುಷ್ಯಭಾವದ ಅಭಾವವಿದೆ ಇದರ ಸನ್ಮುಖತೆ ಮಾಡುತ್ತಾನೆ ಎಂದರೆ ಯಾವ ಭಾವವಿಲ್ಲ ಅದರ ಭಾವ ಮಾಡುತ್ತಾನೆ ಅದು ಅಭಾವಭಾವವಿದೆ.

ಈ ನಾಲ್ಕು ಪ್ರಕಾರಗಳು ಪರ್ಯಾಯದೃಷ್ಟಿಯಿಂದ ಇವೆ. ದ್ರವ್ಯ ದೃಷ್ಟಿಯಿಂದ ಆ ನಾಲ್ಕೂ ಭಾವಗಳಿಲ್ಲ .

ಈ ಜೀವನು ಯಾವ ಅವಸ್ಥೆಯರೂಪದಿಂದ ಪರಿಣಮಿಸುತ್ತಾನೆ ಅಲ್ಲಿ ತನ್ನ ಶುದ್ಧ ಅಶುದ್ಧ ಗುಣ ಪರ್ಯಾಯಗಳಿಂದ ಸಂಯುಕ್ತನಿದ್ದಾನೆ. ಇಲ್ಲಿ ಯಾವನಿಗೆ ಸಂಸಾರದ ಕ್ರಮವಿದೆ ಅದು ತನ್ನ ಅಶುದ್ಧ ಗುಣ ಪರ್ಯಾಯಗಳ ಸಹಿತವಾಗಿ ಪರಿಣಮಿಸಿದೆ. ಆದರೆ ಸಂಸಾರದ ಕ್ರಮವನ್ನು ತಿಳಿದುಕೊಂಡು, ಅದು ದ್ರವ್ಯಸ್ವಭಾವದಲ್ಲಿ ಇಲ್ಲವೆಂದು ಯಾವನು ನಿರ್ಣಯ ಮಾಡುತ್ತಾನೆ ಅವನ ಸಂಸಾರದ ಕ್ರಮವು ಮುರಿದುಹೋಗುತ್ತದೆ. ಇಲ್ಲಿ ಆತ್ಮನ ಪರ್ಯಾಯಗಳ ನಾಲ್ಕು ಪ್ರಕಾರಗಳಿರುವುದರ ಮಾತು ಮಾಡಿದ್ದಾರೆ. ಆ ಪ್ರಕಾರಗಳು ಪರದ ಕಾರಣದಿಂದಿಲ್ಲವೆಂಬುದನ್ನು ಮೊದಲು ನಿರ್ಣಯ ಮಾಡಿಕೊಳ್ಳಬೇಕು ಮತ್ತು ಅದರಿಂದ ಜೀವದ್ರವ್ಯದ ಸ್ವತಂತ್ರತೆಯು ಸಿದ್ಧವಾಗುತ್ತದೆ. ದೇವಭಾವವನ್ನು ಉತ್ಪನ್ನ ಮಾಡಿರುವುದು ಕೂಡ ಕರ್ಮದ ಕಾರಣದಿಂದಿಲ್ಲ ಮತ್ತು ದೇವ ಭಾವವಿದೆ ಅದರ ಅಭಾವದ ಆರಂಭದ ಭಾವವು ಅದು ಮನುಷ್ಯನ ಸನ್ಮುಖತೆಯ ಭಾವವಿದೆ ಅದು ಕೂಡ ತನ್ನಿಂದಲೇ ಇದೆ.

**ಭಾವಾರ್ಥ :-** ದ್ರವ್ಯಸ್ವಭಾವದಿಂದ ನೋಡಿದರೆ ಜಗತ್ತಿನ ದ್ರವ್ಯಗಳು ಉತ್ಪನ್ನವಾಗುವುದಿಲ್ಲ ಮತ್ತು ವಿನಾಶ

ಕೂಡ ಹೊಂದುವುದಿಲ್ಲ , ಆದರೆ ನಿತ್ಯವಿವೆ. ಅದರಂತೆ ಜೀವದ್ರವ್ಯ ಕೂಡ ತನ್ನ ಸ್ವಭಾವದಿಂದ ನಿತ್ಯವಿದೆ. ಆದರೆ ಜೀವದ್ರವ್ಯದಲ್ಲಿ ಅಶುದ್ಧ ಪರ್ಯಾಯದ ಅಪೇಕ್ಷೆಯಿಂದ ಭಾವ, ಅಭಾವ, ಭಾವಾಭಾವ ಮತ್ತು ಅಭಾವಭಾವವೆಂದು ನಾಲ್ಕು ಪ್ರಕಾರದ ಪರ್ಯಾಯಗಳ ಅಸ್ತಿತ್ವವಿದೆ, ಪರ್ಯಾಯದೃಷ್ಟಿಯಿಂದ ಈ ನಾಲ್ಕು ಪ್ರಕಾರದ ಅಸ್ತಿತ್ವವು ಆತ್ಮನದಿದೆ, ಅದು ಪರದ ಕಾರಣದಿಂದಲ್ಲ.

ಯಾವಾಗ ದೇವಪರ್ಯಾಯದ ಉತ್ಪತ್ತಿರೂಪವಾಗಿ ಆತ್ಮನು ಪರಿಣಮಿಸುತ್ತಾನೆ ಆಗ ಆ ಭಾವದ ಕರ್ತೃತ್ವವನ್ನು ಹೇಳುವುದರಲ್ಲಿ ಬರುತ್ತದೆ ಮತ್ತು ಯಾವಾಗ ಮನುಷ್ಯಾದಿ ಪರ್ಯಾಯದ ನಾಶರೂಪವಾಗಿ ಪರಿಣಮಿಸುತ್ತಾನೆ ಆಗ ಅಭಾವದ ಕರ್ತೃತ್ವವನ್ನು ಹೇಳುವುದರಲ್ಲಿ ಬರುತ್ತದೆ. ಯಾವ ಯಾವ ಭಾವದಲ್ಲಿ ಹೊಸ ಹೊಸ ಪರ್ಯಾಯದ ಉತ್ಪಾದವಾಗುತ್ತದೆ ಆ ಭಾವದ ಕರ್ತೃವೆಂದು ಹೇಳಲಾಗುತ್ತದೆ. ಆ ಪರ್ಯಾಯಗಳು ನಾಮಕರ್ಮದ ಕಾರಣದಿಂದಿಲ್ಲ, ನಾಮಕರ್ಮವಂತೂ ನಿಮಿತ್ತಮಾತ್ರವಿದೆ. ಆದರೆ ಆತ್ಮನು ಸ್ವಯಂ ಅದರ ಉತ್ಪಾದ ಮಾಡುತ್ತಾನೆ. ಅದರಂತೆ ಮನುಷ್ಯ ಪರ್ಯಾಯದ ನಾಶವನ್ನು ಕೂಡ ಆತ್ಮನು ಮಾಡುತ್ತಾನೆ. ಇವೆರಡೂ ಭಾವಗಳು ಆತ್ಮನವಿವೆ. ತನ್ನ ಪರ್ಯಾಯದ ಕರ್ತೃ ತಾನು ಆಗುತ್ತಾನೆ ಎಂಬ ಮಾತನ್ನು ಇಲ್ಲಿ ಸಿದ್ಧ ಮಾಡಿದ್ದಾರೆ.

ಆತ್ಮವಸ್ತುವಂತೂ ತ್ರಿಕಾಲವಿದೆ. ಪರ್ಯಾಯದಲ್ಲಿ ದೇವಪರ್ಯಾಯದ ಭಾವವಾದೊಡನೆ ಮನುಷ್ಯ ಪರ್ಯಾಯದ ನಾಶವಾದಲ್ಲದೆ ಇರಲಾರದು. ತಕ್ಷಣ ಬದಲಾಗಿ ಬಿಡುತ್ತದೆ. ಮನುಷ್ಯನು ಸತ್ತು ನಿಗೋದದಲ್ಲಿ ಹೋಗುತ್ತಾನೆ. ಇಲ್ಲಿ ರಾಜವೈಭವವಿರುತ್ತದೆ, ಜ್ಞಾನದ ಉದಯವಿರುತ್ತದೆ, ಜನರು ಗೌರವಿಸುತ್ತಿರುತ್ತಾರೆ, ಆದರೆ ಒಂದು ಸಮಯದಲ್ಲಿ ಆ ಪರ್ಯಾಯದ ಅಭಾವವಾಗಿ ಹೊಸ ನಾರಕಿಯಪರ್ಯಾಯದ ಉತ್ಪಾದವಾಗುತ್ತದೆ ಅದು ಆತ್ಮನಿಂದ ಸ್ವತಂತ್ರವಾಗಿ ಆಗುತ್ತದೆ ; ಕರ್ಮದ ಕಾರಣದಿಂದ ಆಗುವುದಿಲ್ಲ . ಮನುಷ್ಯ ಭಾವದ ಅಭಾವವಾಗಿ ಕೂಡಲೆ ದೇವ ಮೊದಲಾದ ರೂಪದ ಭಾವವಾಗುತ್ತದೆ. ಮನುಷ್ಯ ಪರ್ಯಾಯವಿದ್ದು ಹೆಚ್ಚಾಗಿ ತತ್ತ್ವದ ವಿರೋಧ ಮಾಡಿದ್ದರೆ ಮನುಷ್ಯಪರ್ಯಾಯದ ಅಭಾವವಾಗಿ ನಿಗೋದ ಪರ್ಯಾಯವನ್ನು ಧಾರಣ ಮಾಡುತ್ತದೆ, ತಕ್ಷಣವೇ ಬದಲಾಗಿ ಹೋಗುತ್ತದೆ. ವರ್ತಮಾನ ಉದಯದ ಹಾಗೂ ಸಂಯೋಗಗಳ ಅಭಾವವಾಗಿ ಹೋಗುತ್ತದೆ.

ವರ್ತಮಾನದಲ್ಲಿ ದೇವಾದಿ ಪರ್ಯಾಯವಿದೆ ಅದರ ನಾಶದ ಪ್ರಾರಂಭರೂಪವು ಪರಿಣಮಿಸಿರುವುದು ಅದು ಭಾವಅಭಾವ ಕರ್ತೃತ್ವವಿದೆ. ಯಾವ ಗತಿಯಲ್ಲಿ ಹೋಗುವುದಿದೆ ಆ ಗತಿಯಭಾವದ ಕರ್ತೃತ್ವವಿದೆ. ಯಾವ ಭಾವದ ನಾಶವಾಗುತ್ತದೆ ಅದರ ಅಭಾವದ ಕರ್ತೃತ್ವವಿದೆ. ಒಬ್ಬ ವಕೀಲನಿದ್ದನು, ಒಮ್ಮೆ ಅವನ ಮೋಟಾರವು ದುರ್ಘಟನೆಗೆ ಒಳಗಾಯಿತು ಅದರಿಂದ ಅವನ ಬುದ್ಧಿಯಲ್ಲಿ ಕೂಡಲೆ ಎಷ್ಟು ಅದಲು ಬದಲಾಯಿತೆಂದರೆ ಅವನು ಎಷ್ಟು ಅಭ್ಯಾಸ ಮಾಡಿದ್ದನು ಅದೆಲ್ಲದರ ಅಭಾವವಾಗಿ ಹೋಯಿತು. ಯಾವ ಭಾವವಿತ್ತು ಅದರ ಅಭಾವವಾಯಿತು. ಆ ಅಭಾವದ ಪ್ರಾರಂಭದಶೆಯಿತ್ತು ಅದನ್ನು ಭಾವಾಭಾವ ಕರ್ತೃತ್ವವೆಂದು ಹೇಳುತ್ತಾರೆ. ಆ ಭಾವಾಭಾವತೆಯು ಯಾವುದೇ ಪರದ ಕಾರಣದಿಂದಿಲ್ಲ . ಮೋಟಾರದ ದುರ್ಘಟನೆಯಾಯಿತು ಅದಕ್ಕಾಗಿ ಜ್ಞಾನದ ಅಭಾವವಾಯಿತೆಂದಿಲ್ಲ ಆದರೆ ತನ್ನ ಯೋಗ್ಯತೆಯಿಂದ ಬದಲಾವಣೆಯಾಗಿದೆ.

ಮತ್ತೆ ವರ್ತಮಾನದಲ್ಲಿ ಮನುಷ್ಯಪರ್ಯಾಯವಿಲ್ಲ ಅದರ ಪ್ರಾರಂಭದಶೆರೂಪದಿಂದ ಪರಿಣಮಿಸಿದೆ ಅಲ್ಲಿ ಅಭಾವಭಾವದ ಕರ್ತೃತ್ವ ಹೇಳಿದೆ, ದೇವಪರ್ಯಾಯದ ನಾಶವಾಗಿ ಕೂಡಲೆ ತಿರ್ಯಂಚ ಪರ್ಯಾಯದಲ್ಲಿ ಹೋಗುತ್ತದೆ. ಆ ದೇವಪರ್ಯಾಯದ ಸಮಯದಲ್ಲಿ ತಿರ್ಯಂಚ ಪರ್ಯಾಯವಿಲ್ಲ ಅದರ ಸನ್ಮುಖವಾಗಿದೆ. ಆತ್ಮನ ಅರಿವು ಇಲ್ಲದಿದ್ದರೆ ಅವನು ದೇವನಿಂದ ಮೇಕೆಯಲ್ಲಿ ಕೂಡ ಹೋಗುತ್ತಾನೆ. ದೇವಭಾವದ ಅಭಾವಮಾಡಿ ತಿರ್ಯಂಚ ಭಾವದ ಭಾವ ಮಾಡಿದ್ದಾನೆ. ದೊಡ್ಡ ರಾಜನಾಗಿದ್ದು ಪಕ್ಕದಲ್ಲಿ ಪತ್ನಿ ಪುತ್ರಾದಿಗಳೆಲ್ಲರೂ ಉಪಸ್ಥಿತವಿದ್ದು , ಕೊನೆಯ ಗಳಿಗೆಯಲ್ಲಿ ವೈದ್ಯರು

ಕೈಯ ನಾಡಿ ಹಿಡಿದುಕೊಂಡು ಕುಳಿತುಕೊಂಡಿರುವ ಸಮಯದಲ್ಲಿ ಮನುಷ್ಯಭಾವದ ಅಭಾವ ಮಾಡಿ ನಾರಕಭಾವದ ಸನ್ಮುಖನಾಗುತ್ತಾನೆ. ಅವನಿಗೆ ವರ್ತಮಾನದಲ್ಲಿ ನರಕಭಾವದ ಅಭಾವವಿದೆ, ಅದರ ಭಾವ ಮಾಡಿದ್ದಾನೆ ಅದಕ್ಕಾಗಿ ಅಭಾವಭಾವದ ಕರ್ತೃತ್ವವಿದೆ. ಈ ರೀತಿಯಾಗಿ ಇಲ್ಲಿ ಪರ್ಯಾಯದ ಮಾತಿದೆ.

ಹೀಗೆ ನಾಲ್ಕು ಪ್ರಕಾರದ ಕಥನವಾಯಿತು. ನವೀನಪರ್ಯಾಯದ ಉತ್ಪನ್ನವಾಗುವುದು ಅದು ಭಾವ ಕರ್ತೃತ್ವವಿದೆ, ಹಳೆಯ ಪರ್ಯಾಯದ ನಾಶವು ಅದು ಅಭಾವ ಕರ್ತೃತ್ವವಿದೆ, ಯಾವ ಭಾವವಿದೆ ಅದರ ಅಭಾವ ಮಾಡುವ ಪ್ರಾರಂಭತೆಯು ಅದು ಅಭಾವಭಾವ ಕರ್ತೃತ್ವವಿದೆ ಮತ್ತು ಯಾವುದು ಭಾವವಿಲ್ಲ ಆ ಭಾವದ ಪ್ರಾರಂಭತೆಯು ಅದರ ಅಭಾವಭಾವ ಕರ್ತೃತ್ವವಿದೆ.

ಈ ಗಾಥೆಯಲ್ಲಿ ನಾಲ್ಕು ಪ್ರಕಾರದ ಕರ್ತೃತ್ವದ ಮಾತು ಮಾಡಿದೆ. ಅವು ಸಂಸಾರ ಪರ್ಯಾಯದಲ್ಲಿ ಯಾವ ಪ್ರಕಾರದಿಂದಿವೆ ಅದನ್ನು ಹೇಳಿದೆ, ಸಮ್ಯಗ್ದರ್ಶನ ಪ್ರಕಟ ಮಾಡಿಕೊಂಡವನಿಗೆ ಸಂಸಾರದ ಕ್ರಮವು ಅನ್ವಯಿಸುವುದಿಲ್ಲ. ಆದರೆ ಯಾರಿಗೆ ದ್ರವ್ಯಸ್ವಭಾವದ ಮತ್ತು ಪರ್ಯಾಯದ ಕ್ರಮದ ಅರಿವಿಲ್ಲ ಅವರಿಗೆ ಅನಾದಿಯಿಂದ ಕ್ರಮವು ನಡೆಯುತ್ತ ಬಂದಿದೆ. ಸಂಸಾರದ ಪರ್ಯಾಯದ ಕರ್ತೃತ್ವವು ಆತ್ಮನದಿದೆ. ದೇವ ಪರ್ಯಾಯದ ಉತ್ಪಾದವಾಗುತ್ತದೆ ಅದು ಭಾವದ ಕರ್ತೃತ್ವವಿದೆ ಮತ್ತು ಮನುಷ್ಯ ಪರ್ಯಾಯದ ನಾಶಮಾಡುತ್ತದೆ ಅದು ಅಭಾವದ ಕರ್ತೃತ್ವವಿದೆ. ಇವೆರಡೂ ಪರ್ಯಾಯಗಳು ಸ್ವಯಂ ಆತ್ಮನ ಕಾರಣದಿಂದಿವೆ, ಭಾವ ಮತ್ತು ಅಭಾವವೆಂದು ಎರಡು ಭೇದಗಳಾದವು. ಈಗ ಮೂರನೆಯ ಭೇದ ಹೇಳುತ್ತಾರೆ.

ವರ್ತಮಾನ ದೇವಪರ್ಯಾಯವು ಅದು ಭಾವರೂಪವಿದೆ ಅದರ ಅಭಾವ ಮಾಡಿ ಮನುಷ್ಯ ಪರ್ಯಾಯದಲ್ಲಿ ಹೋಗುತ್ತದೆ ಅದು ಭಾವಾಭಾವವಿದೆ. ದೇವಪರ್ಯಾಯವು ಭಾವರೂಪವಿದೆ ಅದು ಅಭಾವದ ಸನ್ಮುಖವಾಗಿದೆ. ಯಾವುದು ಭಾವವಿದೆ ಅದು ಪರ್ಯಾಯವಿದೆ ಅದಕ್ಕಾಗಿ ಸ್ಥಿರವಿರುವುದಿಲ್ಲ . ಈ ಮೂರನೆಯ ಮಾತಿನಲ್ಲಿ ವರ್ತಮಾನಭಾವದ ಅಭಾವದ ಕರ್ತೃತ್ವವನ್ನು ವರ್ಣಿಸಲಾಗಿದೆ. ಮತ್ತು ನಾಲ್ಕನೆಯ ವಚನ ಅಭಾವಭಾವವಿದೆ. ವರ್ತಮಾನದಲ್ಲಿ ಯಾವುದರ ಅಭಾವವಿದೆ ಅದರ ಭಾವರೂಪದಿಂದ ಪರಿಣಮಿಸುತ್ತಲಿದೆ.

ಮೊದಲಂತೂ ಸಮಯ ಸಮಯದ ಪರ್ಯಾಯವಿದೆಯೆಂಬ ಮಾತು ಹೇಳಿತು, ನಂತರ ೧) ಹೊಸ ಪರ್ಯಾಯದ ಉತ್ಪಾದ, ೨) ಹಳೆಯ ಪರ್ಯಾಯದ ನಾಶ, ೩) ಯಾವ ಸಮಯ ಸಮಯದ ಭಾವವಿದೆ ಅದರ ಅಭಾವ ಮತ್ತು ೪) ಯಾವುದು ಭಾವವಿಲ್ಲ ಅದರ ಸನ್ಮುಖವಾಗುತ್ತ ಹೋಗುತ್ತದೆ. ಸಮ್ಯಗ್ದೃಷ್ಟಿಯು ಸಿದ್ಧ ಪರ್ಯಾಯದ ಸನ್ಮುಖನಾಗುತ್ತಿರುತ್ತಾನೆ ಮತ್ತು ಅಜ್ಞಾನಿಯು ಹೊಸ ಭಾವದ ಸನ್ಮುಖನಾಗುತ್ತಾನೆ. ಅಜ್ಞಾನಿಗೆ ಸಂಸಾರದ ಕ್ರಮವಾಗುತ್ತದೆ ಮತ್ತು ಜ್ಞಾನಿಗೆ ಕ್ರಮವು ಸಿದ್ಧದಶೆಯ ಸನ್ಮುಖತೆಯದು ಆಗುತ್ತದೆ.

ಶ್ರೇಣಿಕರಾಜನು ಈಗ ನರಕದಲ್ಲಿದ್ದಾನೆ, ಆದರೆ ಅವನಿಗೆ ಸಮ್ಯಗ್ದರ್ಶನವಿರುವ ಕಾರಣದಿಂದ ಅಲ್ಲಿಂದ ಅವನು ಮನುಷ್ಯನಾಗಿ ಸಿದ್ಧದಶೆ ಪ್ರಾಪ್ತಮಾಡಿಕೊಳ್ಳುತ್ತಾನೆ ಎಂದರೆ ಈಗ ಭವ ಮಾಡುತ್ತಿಲ್ಲ ಮತ್ತು ಮಿಥ್ಯಾ ದೃಷ್ಟಿಯಿದ್ದರೆ ಅವನು ಮನುಷ್ಯಭವದ ಅಭಾವ ಮಾಡಿ ದೇವ ಅಥವಾ ನರಕಭವದಲ್ಲಿ ಎಲ್ಲಿ ಹೋಗುವುದಿದೆ ಆ ಭವದ ಪ್ರಾರಂಭ ಮಾಡಿದ್ದಾನೆ. ದೇವದಲ್ಲಿ ಮನುಷ್ಯಭವವಿಲ್ಲ ಅವನು ಮನುಷ್ಯಪರ್ಯಾಯದ ಭಾವ ಮಾಡುತ್ತಾನೆ, ಮತ್ತು ದೇವಪರ್ಯಾಯದ ಅಭಾವಮಾಡುತ್ತಾನೆ ಅದಕ್ಕಾಗಿ ಅಭಾವಭಾವದ ಕರ್ತೃತ್ವವಿದೆ. ಹೀಗೆ ಅಜ್ಞಾನಿಗೆ ಪೂರ್ವ ಗತಿಯ ಅಭಾವವಾಗುತ್ತದೆ, ಆದರೆ ಹೊಸ ಗತಿಯ ಭಾವವಾಗುತ್ತದೆ ಭಾವ ಅಭಾವದ ಕ್ರಮವು ನಡೆಯುತ್ತಲಿದೆ. ಇದು ತನ್ನ ಪರ್ಯಾಯದ ಕ್ರಮವಿದೆಯೆಂದು ನಿಶ್ಚಿತ ಮಾಡಿ ಸ್ವಭಾವದಲ್ಲಿ ಆ ಕ್ರಮವಿಲ್ಲವೆಂದು ಸ್ವಭಾವದ ಆಶ್ರಯ ಮಾಡಿದರೆ ಸಂಸಾರದ ಕ್ರಮವು ಮುರಿದುಬಿದ್ದಲ್ಲದೆ ಇರಲಾರದು.

ಯಾರಿಗೆ ಭವದ ಕ್ರಮದ ಅರಿವಿಲ್ಲ ಅವನು ಪರದಿಂದ ತನ್ನ ಪರ್ಯಾಯದ ಕ್ರಮಮನ್ನಿಸಿದ್ದಾನೆ ಹೀಗೆ ಪರ್ಯಾಯ ಬುದ್ಧಿಯಲ್ಲಿ ಸಿಲುಕಿಕೊಂಡಿದ್ದಾನೆ. ಅವನಿಗೆ ತನ್ನ ಪರ್ಯಾಯದ ಕ್ರಮ ಹೇಗಿದೆಯೆಂಬುದರ ಅರಿವಿಲ್ಲ. ಅಲ್ಲಿ ಆತ್ಮನ ತನ್ನ ಪರ್ಯಾಯದ ಕ್ರಮವಿದೆಯೆಂಬ ಮಾತು ಹೇಳಿದೆ ಪರ ನಿಮಿತ್ತದ್ದಂತೂ ಮಾತೇ ಇಲ್ಲ. ಪರದ ಕ್ರಮದ ಮಾತಂತೂ ನಿಮಿತ್ತ-ನೈಮಿತ್ತಿಕ ಸಂಬಂಧ ತಿಳಿಸುವುದಿದ್ದರೆ ಹೇಳಲಾಗುತ್ತದೆ. ಆದರೆ ಇಲ್ಲಿಯಂತೂ ತ್ರಿಕಾಲ ವಸ್ತುವಿನಲ್ಲಿ ಈ ಕ್ರಮವಿಲ್ಲ ಮತ್ತು ಪರ್ಯಾಯದಲ್ಲಿ ಕ್ರಮವಿದೆ ಅದು ಪರದ ಕಾರಣದಿಂದಿಲ್ಲವೆಂದು ನಿಶ್ಚಿತ ಮಾಡಿದರೆ ಸಂಸಾರದ ಕ್ರಮವು ಉಳಿಯುವುದಿಲ್ಲವೆಂದು ಹೇಳಿದೆ. ಅದು ನಾಲ್ಕು ಭಾವಗಳ ಸಾರವಿದೆ.

ಚಿನ್ನವು ವಸ್ತುದೃಷ್ಟಿಯಿಂದ ತ್ರಿಕಾಲ ಏಕರೂಪವಿದೆ, ಆದರೆ ಪರ್ಯಾಯದಲ್ಲಿ ಕುಂಡಲ, ಬಳೆ, ಸರ ಮೊದಲಾದವುಗಳಾಗುತ್ತವೆ. ಅಲ್ಲಿ ಬಳೆಯ ಉತ್ಪಾದವು ಅದು ಭಾವವಿದೆ, ಕುಂಡಲದ ನಾಶವು ಅದು ಅಭಾವವಿದೆ. ಬಳೆಯ ಅವಸ್ಥೆಯಿದೆ ಅದರ ಅಭಾವದಿಂದ ಸರದ ಸನ್ಮುಖತೆ ಮಾಡಿದೆ ಅದು ಭಾವಾಭಾವವಿದೆ ಮತ್ತು ಬಳೆಯಲ್ಲಿ ಸರದ ಅವಸ್ಥೆಯಿಲ್ಲ ಅದರ ಭಾವದ ಆರಂಭ ಮಾಡುವುದು ಅದು ಅಭಾವಭಾವ ಕರ್ತೃತ್ವವಿದೆ. ಹೀಗೆ ಚಿನ್ನವು ಹೊಸದಾಗಿ ಆಗುವುದಿಲ್ಲ ಮತ್ತು ಚಿನ್ನದಲ್ಲಿ ಕ್ರಮ ಕೂಡ ಇಲ್ಲ, ಪರ್ಯಾಯದಲ್ಲಿ ಕ್ರಮವಿದೆ ; ಅದರಂತೆ ಭಗವಾನ ಆತ್ಮನಂತೂ ತ್ರಿಕಾಲನಿದ್ದಾನೆ, ಸ್ವಭಾವದಲ್ಲಿ ಬದಲಾವಣೆ ಸಂಭವಿಸುವುದಿಲ್ಲ. ಆತ್ಮನಿರಲಿಲ್ಲ ಮತ್ತು ಹೊಸ ಭಾವವಾಗುತ್ತದೆ, ಇದೆ ಅದರ ಅಭಾವವಾಗುತ್ತದೆ - ಹೀಗೆ ತ್ರಿಕಾಲದಲ್ಲಿ ಆಗುವುದಿಲ್ಲ. ಇರದಂಥ ಭಾವದೊಳಗಿಂದ ಭಾವವಾಗುವುದಿಲ್ಲ, ಮತ್ತು ಭಾವವಿದೆ ಅದರ ಅಭಾವವಾಗುವುದಿಲ್ಲ. ಹೀಗಾದರೆ ಆತ್ಮನು ಜಡನಾಗಿ ಹೋಗಬಹುದು, ಆದರೆ ಹೀಗೆ ಆಗುವುದಿಲ್ಲ. ಒಂದು ಸಮಯದ ಪರ್ಯಾಯದಲ್ಲಿ ಈ ನಾಲ್ಕು ಭಾವದ ಪ್ರಕಾರಗಳಾಗುತ್ತವೆ ಏಕ-ಅನೇಕ, ನಿತ್ಯ-ಅನಿತ್ಯ ಪದಾರ್ಥವಿದೆ ಅದರ ಜ್ಞಾನ ಮಾಡಿಸಿದೆ.

ನೀರಿನ ಪೂರ ಬಂದು ಬಿಟ್ಟಿದೆ, ಆ ಪ್ರವಾಹ ಬಂದು ಬಿಟ್ಟಿದೆ, ಆದರೆ ನೀರಂತೂ ನೀರಾಗಿಯೇ ಉಳಿದಿದೆ, ಅದರಲ್ಲಿ ಹೊಸ ತರಂಗವೇಳುವುದು ಅದು ಭಾವವಿದೆ, ಹಳೆಯ ತರಂಗಗಳ ನಾಶವಾಗುವುದು ಅದು ಅಭಾವವಿದೆ. ಯಾವ ತರಂಗವಿದೆ ಅದರ ಅಭಾವ ಮಾಡುತ್ತ ಹೊಸ ತರಂಗದ ಆರಂಭ ಮಾಡುತ್ತದೆ ಮತ್ತು ಹೊಸ ತರಂಗವಿರಲಿಲ್ಲ ಅದರ ಭಾವ ಮಾಡುತ್ತ ಹಳೆಯ ತರಂಗದ ಅಭಾವ ಮಾಡುತ್ತ ಹೋಗುತ್ತದೆ. ಹೀಗೆ ನಾಲ್ಕು ಭಾವಗಳಿವೆ. ಬಾಲಕ, ಯುವ, ವೃದ್ಧವೆಂದು ಮನುಷ್ಯನ ಮೂರು ಅವಸ್ಥೆಗಳಿವೆ. ಅದರಲ್ಲಿ ಯುವಾವಸ್ಥೆಯಾಗುವುದು ಅದು ಭಾವವಿದೆ, ಬಾಲಕ ಅವಸ್ಥೆಯ ನಾಶವು ಅದು ಅಭಾವ ಕರ್ತೃತ್ವವಿದೆ. ಮತ್ತು ಯುವಾವಸ್ಥೆಯ ಅಭಾವ ಮಾಡುತ್ತ ವೃದ್ಧಾವಸ್ಥೆಯ ಸನ್ಮುಖವಾಗುತ್ತದೆ ಅದು ಭಾವಾಭಾವವಿದೆ ಇನ್ನು ಯುವಾವಸ್ಥೆಯಲ್ಲಿ ವೃದ್ಧಾವಸ್ಥೆಯಿಲ್ಲ ಅದರ ಭಾವ ಮಾಡುತ್ತದೆ ಅದು ಅಭಾವಭಾವವಿದೆ. ಹೀಗೆ ನಾಲ್ಕು ಪ್ರಕಾರಗಳಿವೆ. ಈ ನಾಲ್ಕು ಭಂಗಗಳು ತ್ರಿಕಾಲೀ ಆತ್ಮನಲ್ಲಿ ಇಲ್ಲ.

ಯಾವ ಪ್ರಕಾರ ಒಬ್ಬ ಮನುಷ್ಯನು ಎರಡು ತಿಂಗಳ ಸಲುವಾಗಿ ನೌಕರಿಯ ಮೇಲೆ ಬಂದಿದ್ದರೆ ಆ ಪರ್ಯಾಯವು ಏಕರೂಪವಿರುವುದಿಲ್ಲ. ಮೊದಲು ನೌಕರಿಯ ಮೇಲಿ ಇರಲಿಲ್ಲ ಮತ್ತು ನಂತರ ನೌಕರಿಯ ಮೇಲೆ ಬಂದನು ಅದು ಭಾವ, ಮತ್ತು ಇರಲಿಲ್ಲ ಅದರ ನಾಶವು ಅದು ಅಭಾವವಿದೆ ಮತ್ತು ನೌಕರಿಯು ಎರಡು ತಿಂಗಳದಿದೆ ಅದು ಪೂರ್ಣವಾಗುವ ಸನ್ಮುಖತೆಯು ಅದು ಭಾವದ ಅಭಾವ ಮಾಡುತ್ತ ಹೋಗುತ್ತದೆ ; ಯಾವ ನೌಕರಿಯಲ್ಲಿ ಉಳಿಯುವ ಭಾವವಿರಲಿಲ್ಲ ಇದರ ಸನ್ಮುಖತೆ ಮಾಡುತ್ತ ಹೋಗುತ್ತದೆ ಅದು ಅಭಾವ ಭಾವವಿದೆ. ಹೀಗೆ ಪರ್ಯಾಯದ ಕ್ರಮವು ನಡೆಯುತ್ತಲಿದೆ. ಅನಾದಿಯಿಂದ ಚತುರ್ಗತಿಗಳಲ್ಲಿ ತಿರುಗುತ್ತಿರುವ ಜೀವನಿಗೆ ನಾಲ್ಕು ಪ್ರಕಾರದ ಅಶುದ್ಧತೆಯ ಕ್ರಮ ತಿಳಿಸಿದೆ. ಈಗ ಆ ಸಂಸಾರದ ಪ್ರವಾಹವು ತ್ರಿಕಾಲೀ ಸ್ವಭಾವದಲ್ಲಿಲ್ಲವೆಂದು ನಿರ್ಣಯ ಮಾಡಿದರೆ ಪ್ರವಾಹದ ಜ್ಞಾನ ಮಾಡುತ್ತ ವರ್ತಮಾನ ಅಶುದ್ಧ ಪರ್ಯಾಯದ ಅಭಾವ ಮಾಡುತ್ತ ಸಿದ್ಧ ಪರ್ಯಾಯದ ಸನ್ಮುಖತೆಯಾಗುತ್ತದೆ. ವರ್ತಮಾನ ಪರ್ಯಾಯ ಮತ್ತು ತ್ರಿಕಾಲ ಸ್ವಭಾವ ಎರಡೂ ಆತ್ಮನಲ್ಲಿವೆ, ಪರದ ಜೊತೆ ಸಂಬಂಧವಿಲ್ಲ.

ಯಾರಿಗೆ ಸ್ವರ್ಗದಲ್ಲಿ ಹೋಗುವುದಿದೆ ಅವನಿಗೆ ವರ್ತಮಾನ ಮನುಷ್ಯತನದಲ್ಲಿ ಸ್ವರ್ಗದ ಭಾವವಿಲ್ಲ ಅದರ ಸನ್ಮುಖತೆಯಾಗಿದೆ. ಅದು ಅಭಾವಭಾವ ಕರ್ತೃತ್ವವಿದೆ. ಹೀಗೆ ನಾಲ್ಕು ಪ್ರಕಾರದ ಭಾವಗಳ ಜ್ಞಾನ ಮಾಡಿಕೊಂಡು ಸ್ವಭಾವದ ಆಶ್ರಯ ಮಾಡಿದರೆ ಸಮ್ಯಗ್ದರ್ಶನವಾಗುವುದು, ಆದರೆ ಗತಿಯ ಕ್ರಮವಂತೂ ಯಾವುದು ಇದೆ ಅದೇ ಇದೆ. ಕ್ರಮ ಬದಲಾಗಿಲ್ಲ. ಎಂದರೆ ಯಾವ ಗತಿಯಲ್ಲಿ ಹೋಗುವುದಿದೆ ಅಲ್ಲಿ ಹೋಗುವುದು. ಗತಿಯು ಬದಲಾಗಿಲ್ಲ ಆದರೆ ಭವ ಅಲ್ಪವಾಗುವವು. ಶ್ರೇಣಿಕರಾಜನು ಸಮ್ಯಗ್ದೃಷ್ಟಿಯಿದ್ದನು, ಅವನಿಗೆ ನರಕದ ಕ್ರಮವು ಬದಲಾಗುವುದಿಲ್ಲ, ಆದರೆ ಸಮ್ಯಗ್ದರ್ಶನವಿದೆ ಅದಕ್ಕಾಗಿ ಅವನು ಸಿದ್ಧ ಪರ್ಯಾಯದ ಸನ್ಮುಖನಾಗುತ್ತ ಹೋಗುತ್ತಾನೆ. ಈ ನಾಲ್ಕು ಪ್ರಕಾರಗಳು ಪರ್ಯಾಯದ ಅಪೇಕ್ಷೆಯಿಂದ ಅಖಂಡಿತವೆಂದು ತಿಳಿಯುವುದು, ಎಂದರೆ ನಿರ್ದೋಷವಿದೆಯೆಂದು ತಿಳಿಯುವುದು.

ನಾಲ್ಕು ಭಾವಗಳಲ್ಲಿ ತುಂಬ ರಹಸ್ಯವಿದೆ ಆಚಾರ್ಯದೇವರು ಅದ್ಭುತವಾಗಿ ವರ್ಣನೆ ಮಾಡಿದ್ದಾರೆ. ಪರ್ಯಾಯಗಳ ಕ್ರಮವೇ ಹೀಗಿದೆ. ಆತ್ಮದ್ರವ್ಯವಂತೂ ತ್ರಿಕಾಲವಿದೆಯೆಂದು ತಿಳಿದರೆ ಪರ್ಯಾಯದ ಕ್ರಮವು ಬದಲಾಗುವುದಿಲ್ಲ, ಆದರೆ ಹೀಗೆ ನಿರ್ಣಯವಾದರೆ ಇವನ ಕ್ರಮದಲ್ಲಿ ಸಂಸಾರದ ಅಭಾವವಾಗಿ ಸಿದ್ಧದಶೆಯ ಕ್ರಮವು ಆರಂಭವಾಗುವುದು. ವರ್ತಮಾನದಲ್ಲಿ ರಾಜನಿದ್ದು ಮದ್ಯ, ಮಾಂಸ ಮೊದಲಾದವುಗಳ ಸೇವನೆ ಮಾಡುತ್ತಿದ್ದರೆ, ಬೇಟೆಯಾಡುತ್ತಿದ್ದರೆ, ಅವನು ವರ್ತಮಾನದಲ್ಲೇ ನಾರಕಿಯಿದ್ದಾನೆ, ಹತ್ತಿಪ್ಪತ್ತು ವರ್ಷ ಮನುಷ್ಯದ ಆಯುಷ್ಯವಿದೆ ಅದರ ಮುಖ್ಯತೆ ಮಾಡದೆ ಅವನು ನರಕದ ಸನ್ಮುಖನಾಗಿದ್ದಾನೆ. ಅದಕ್ಕಾಗಿ ವರ್ತಮಾನದಲ್ಲಿ ನಾರಕಿಯಿದ್ದಾನೆ. ಯಾವ ಪ್ರಾಣಿಯು ಕಪಟ, ಮಾಯಾಚಾರ ಮಾಡುತ್ತಿದೆ ಅದು ಸತ್ತು ತಿರ್ಯಂಚದಲ್ಲಿ ಕತ್ತೆ ಅಥವಾ ಕುರಿಯಾಗುತ್ತದೆ, ವರ್ತಮಾನದಲ್ಲಿ ಮನುಷ್ಯತನವಿದ್ದರೂ ಅದರ ಮುಖ್ಯತೆ ಮಾಡದಿದ್ದರೆ ವರ್ತಮಾನದಲ್ಲೇ ಕತ್ತೆಯಿದ್ದಾನೆ. ವರ್ತಮಾನದಲ್ಲಿ ಪಾಪದ ಕಾರ್ಯ ಮಾಡುತ್ತಿದ್ದರೆ ಅವನು ದುರ್ಗತಿಯ ಸಿದ್ಧತೆಯಲ್ಲಿದ್ದಾನೆಂದು ಹೇಳಲಾಗುತ್ತದೆ. ಈ ಕಥನವು ನಿರ್ದೋಷವಿದೆ ಎಂದರೆ ಇದರಲ್ಲಿ ಯಾವ ಈಶ್ವರನ ಅವಶ್ಯಕತೆಯಿಲ್ಲ. ಅದಕ್ಕಾಗಿ ಯಾರಿಗೆ ಕಲ್ಯಾಣ ಮಾಡಿಕೊಳ್ಳುವುದಿದೆ ಅವರು ಬೇರೆ ಭಾವಗಳನ್ನು ಬಿಟ್ಟು ಸ್ವಭಾವದೃಷ್ಟಿ ಮಾಡಬೇಕು ಹೀಗೆ ಮಾಡಿದರೆ ಭವದ ಕ್ರಮ ಉಳಿಯುವುದಿಲ್ಲ.

ದ್ರವ್ಯ-ಪರ್ಯಾಯದ ಮುಖ್ಯತೆ ಮತ್ತು ಗೌಣತೆಯಿಂದ ದ್ರವ್ಯದಲ್ಲಿ ಭೇದವಾಗುತ್ತದೆ ಅದು ಹೇಗಿದೆಯೆಂಬುದನ್ನು ಹೇಳಿದ್ದಾರೆ. ಜೀವದ ಕಥನವನ್ನು ಪರ್ಯಾಯದ ಗೌಣತೆ ಮತ್ತು ದ್ರವ್ಯದ ಮುಖ್ಯತೆಯಿಂದ ಮಾಡಲಾದರೆ ಮೇಲೆ ಹೇಳಿದ ಭಾವ, ಅಭಾವ, ಭಾವಾಭಾವ ಮತ್ತು ಅಭಾವಭಾವ ಈ ಪ್ರಕಾರದ ಕರ್ತೃತ್ವವು ಸಂಭವಿಸುವುದಿಲ್ಲ. ಆತ್ಮನು ತ್ರಿಕಾಲೀನಿತ್ಯ ಪದಾರ್ಥವಿದ್ದು ಅವನಲ್ಲಿ ಈ ಪರ್ಯಾಯದ ಅನಿತ್ಯತೆಯ ನಾಲ್ಕು ಭಂಗಗಳು ಸಂಭವಿಸುವುದಿಲ್ಲ ಏಕೆಂದರೆ ಕರ್ತೃತ್ವವು ಅನಿತ್ಯವಿದ್ದು ಆತ್ಮನು ನಿತ್ಯನಿದ್ದಾನೆ. ಮತ್ತು ಯಾವಾಗ ದ್ರವ್ಯದ ಗೌಣತೆ ಮತ್ತು ಪರ್ಯಾಯದ ಮುಖ್ಯತೆಯಿಂದ ಜೀವದ ಕಥನ ಮಾಡಲಾಗುತ್ತದೆ ಆಗ ಮೇಲೆ ಹೇಳಿದ ನಾಲ್ಕು ಪ್ರಕಾರದ ಪರ್ಯಾಯಗಳ ಕರ್ತೃತ್ವವು ಅವಿರುದ್ಧವಾಗಿ ಸಂಭವಿಸುತ್ತದೆ. ಪರ್ಯಾಯದ ಅಪೇಕ್ಷೆಯಿಂದ ನಾಲ್ಕು ಭಂಗಗಳಾಗುತ್ತವೆ. ಮತ್ತು ದ್ರವ್ಯದ ಅಪೇಕ್ಷೆಯಿಂದ ಈ ಭಂಗಗಳಾಗುವುದಿಲ್ಲ. ಈ ಮಾತಿನಲ್ಲಿ ವಿರೋಧವು ಬರುವುದಿಲ್ಲ.

ಈ ರೀತಿ ಮುಖ್ಯ ಗೌಣದ ಭೇದದಿಂದ ವ್ಯಾಖ್ಯಾನ ಮಾಡಿದರೆ ಸರ್ವಜ್ಞ ಭಗವಂತ ಪ್ರಣೀತ ಅನೇಕಾಂತ ವಾದದಲ್ಲಿ ವಿರೋಧ ಭಾವ ಬರುವುದಿಲ್ಲ. ಸ್ಯಾತ್ ಪದದಿಂದ ಅವಿರುದ್ಧತೆ ಸಾಧಿಸಿದೆ. ಆತ್ಮನು ದ್ರವ್ಯತ್ವದಿಂದ ನಿತ್ಯನಿದ್ದರೆ ಪರ್ಯಾಯತನದಿಂದ ಅನಿತ್ಯನಿದ್ದಾನೆ. ಒಂದು ಪದಾರ್ಥದಲ್ಲಿ ನಿತ್ಯ-ಅನಿತ್ಯರೂಪದ ಎರಡು ಭಾವಗಳಲ್ಲಿ ವಿರೋಧ ಬರುವುದಿಲ್ಲ. ಆದರೆ ಕೇವಲ ನಿತ್ಯ ಅಥವಾ ಕೇವಲ ಅನಿತ್ಯ ಮನ್ನಿಸಿದರೆ ವಿರೋಧ ಬರುತ್ತದೆ.

ಯಾವ ರೀತಿ ದ್ರವ್ಯದ ಅಶುದ್ಧ ಪರ್ಯಾಯದ ಸಿದ್ಧಿ ಮಾಡಿದೆ ಅದೇ ರೀತಿ ಆಗಮ ಪ್ರಮಾಣದಿಂದ ಶುದ್ಧ ಪರ್ಯಾಯದ ವಿವಕ್ಷೆ ತಿಳಿಯುವುದು ಅಶುದ್ಧ ಪರ್ಯಾಯದಲ್ಲಿ ನಾಲ್ಕು ಪ್ರಕಾರದ ಭಾವ ಹೇಳಿದೆ ಅದೇ ಪ್ರಕಾರ ಶುದ್ಧ ಪರ್ಯಾಯದಲ್ಲಿ ಇಳಿಸಬೇಕು. ಮೋಕ್ಷಮಾರ್ಗದ ಪರ್ಯಾಯವು ಶುದ್ಧವಿದೆ, ಅದು ಪ್ರಕಟವಾಗುವುದು ಅದು

ಭಾವಕರ್ತೃತ್ವವಿದೆ, ಪ್ರಥಮ ಪರ್ಯಾಯದ ನಾಶ ಮಾಡುವುದು ಅದು ಅಭಾವಕರ್ತೃತ್ವವಿದೆ. ಮೋಕ್ಷಮಾರ್ಗದ ಪರ್ಯಾಯವಿದೆ ಅದರ ಅಭಾವ ಮಾಡುತ್ತ ಹೋಗುತ್ತದೆ ಮತ್ತು ಸಿದ್ಧಪರ್ಯಾಯದ ಸನ್ಮುಖವಾಗುತ್ತ ಹೋಗುತ್ತದೆ ಅದು ಭಾವಾಭಾವಕರ್ತೃತ್ವವಿದೆ ಮತ್ತು ವರ್ತಮಾನ ಮೋಕ್ಷಮಾರ್ಗದ ಪರ್ಯಾಯದಲ್ಲಿ ಸಿದ್ಧಪರ್ಯಾಯವಿಲ್ಲ ಅದರ ಪ್ರಾರಂಭ ಮಾಡುತ್ತದೆ ಅದು ಅಭಾವಭಾವಕರ್ತೃತ್ವವಿದೆ. ಸಿದ್ಧಪರ್ಯಾಯದಲ್ಲಿ ಕೂಡ ಹೀಗೆ ನಾಲ್ಕು ಪ್ರಕಾರದ ಭಂಗಗಳಾಗುತ್ತವೆ.

ಇದು ಜೀವದ್ರವ್ಯದ ಶುದ್ಧ ಮತ್ತು ಅಶುದ್ಧ ಪರ್ಯಾಯದ ವಿವಕ್ಷೆಯಾಯಿತು. ಇದೇ ಪ್ರಕಾರ ಪುದ್ಗಲ ಮತ್ತು ಇತರ ಎಲ್ಲ ದ್ರವ್ಯದಲ್ಲಿ ಸಿದ್ಧಾಂತಕ್ಕನುಸರಿಸಿ ಗುಣ-ಪರ್ಯಾಯದ ಕಥನವನ್ನು ತಿಳಿಯಬೇಕು. ಈ ರೀತಿ ಆರು ದ್ರವ್ಯಗಳ ಸಾಮಾನ್ಯ ಸ್ವರೂಪ ಕಥನವನ್ನು ತಿಳಿಯಬೇಕು. ಈಗ ಮುಂದಿನ ಗಾಥೆಯಲ್ಲಿ ಸಾಮಾನ್ಯ ಆರು ದ್ರವ್ಯಗಳನ್ನು ಹೇಳಿ ಅದರಲ್ಲಿ ಐದು ದ್ರವ್ಯಗಳನ್ನು ಪಂಚಾಸ್ತಿಕಾಯದ ರೀತಿಯಲ್ಲಿ ವರ್ಣನೆ ಮಾಡಲಾಗುವುದು.

ಸರ್ವಜ್ಞ ಪರಮಾತ್ಮರು ಆರು ದ್ರವ್ಯಗಳನ್ನು ನೋಡಿದ್ದಾರೆ, ಅವುಗಳಲ್ಲಿ ಐದು ದ್ರವ್ಯಗಳು ಅಸ್ತಿಕಾಯವಿವೆ ಮತ್ತು ಒಂದು ಕಾಲವು ಅದು ದ್ರವ್ಯವಿದೆ ಆದರೆ ಅಸ್ತಿಕಾಯವಿಲ್ಲ. ಈಗ ಅದರ ಕುರಿತು ಹೇಳುತ್ತಾರೆ, -

**ಜೀವಾ ಪುಗ್ಗಲಕಾಯಾ ಆಯಾಸಂ ಅತ್ಥಿಕಾಇಯಾ ಸೇಸಾ ।**
**ಅಮಯಾ ಅತ್ಥಿತ್ತಮಯಾ ಕಾರಣಭೂದಾ ಹಿ ಲೋಗಸ್ಸ ॥೨೨॥**

**ಜೀವದ್ರವ್ಯ, ಪುದ್ಗಲಕಾಯ, ಆಕಾಶ, ಮತ್ತುಳಿದೆರಡು ಅಸ್ತಿಕಾಯಗಳು ।**
**ಅವು ಅಕೃತವಿವೆ ಅಸ್ತಿತ್ವಮಯವಿವೆ ಮೇಣ್ ಲೋಕಕೆ ಕಾರಣಭೂತವಿವೆ ॥೨೨॥**

**ಅರ್ಥ :-** ೧) ಜೀವದ್ರವ್ಯವು ಕಾಯವುಳ್ಳದ್ದಿದೆ. ಆತ್ಮನು ಅಸಂಖ್ಯ ಪ್ರದೇಶಿಯಿದ್ದಾನೆ. ಆ ಅಸಂಖ್ಯ ಪ್ರದೇಶಗಳು ಅಂಶಗಳಿವೆ - ಅವಯವಗಳಿವೆ ಮತ್ತು ಆತ್ಮನು ಅವಯವಿಯಿದ್ದಾನೆ. ೨) ಪುದ್ಗಲದ್ರವ್ಯವು ಕಾಯವುಳ್ಳದ್ದಿದೆ. ಒಂದು ಪರಮಾಣುವಂತೂ ಏಕಪ್ರದೇಶಿಯಿದೆ, ಆದರೆ ಎರಡರಿಂದ ಹಿಡಿದು ಅನಂತ ಪರಮಾಣುಗಳ ಸ್ಕಂಧವಾಗುವ ಸಾಧ್ಯತೆಯಿದೆ ಅದರಿಂದ ಅದು ಕಾಯವುಳ್ಳದ್ದಿದೆ. ಪುದ್ಗಲವು ಸ್ವಯಂ ಕಾಯವುಳ್ಳದ್ದಿದೆ. ಬೇರೆ ಜೀವದ ಕಾರಣದಿಂದಿಲ್ಲ. ಮನೆ, ಶರೀರ ಮೊದಲಾದವು ತಾವು ತಮ್ಮಿಂದ ಕಾಯವುಳ್ಳವುಗಳಿವೆ. ಪರಮಾಣು ತಾನು ತನ್ನಿಂದ ಏಕತ್ರಿತವಾಗಿ ಕಾಯವಂತವಾಗುತ್ತದೆ. ಪುರುಷಾರ್ಥ ಮಾಡುವುದರಿಂದ ಹಣ ಮೊದಲಾದವು ಏಕತ್ರಿತವಾಗುತ್ತವೆ ಅಥವಾ ಬೇರೆಯಾಗಿ ಹೋಗುತ್ತವೆ - ಎಂಬುದಾಗಿಲ್ಲ. ಆತ್ಮನ ಕಾರಣದಿಂದ ಪುದ್ಗಲದ ಕಾಯವಂತತೆಯಿಲ್ಲ. ೩) ಆಕಾಶದ್ರವ್ಯವು ಕಾಯವುಳ್ಳದ್ದಿದೆ. ಅದು ಅನಂತಪ್ರದೇಶಿಯಾದ ಏಕದ್ರವ್ಯವಿದೆ. ಅದು ತಾನು ತನ್ನಿಂದ ಕಾಯವುಳ್ಳದ್ದಿದೆ. ೪) ಧರ್ಮಾಸ್ತಿಕಾಯವು ಕಾಯವುಳ್ಳದ್ದಿದೆ. ಅದು ಲೋಕಪ್ರಮಾಣ ಅಸಂಖ್ಯಪ್ರದೇಶಿಯಿದೆ. ೫) ಅಧರ್ಮಾಸ್ತಿಕಾಯವು ಕಾಯವುಳ್ಳದ್ದಿದೆ. ಅದು ಲೋಕ ಪ್ರಮಾಣ ಅಸಂಖ್ಯಪ್ರದೇಶಿಯಾದ ಅಖಂಡದ್ರವ್ಯವಿದೆ. ಅದು ಕೂಡ ಅಸ್ತಿಕಾಯವುಳ್ಳದ್ದಿದೆ. ಈ ರೀತಿ ಜೀವ, ಪುದ್ಗಲ, ಧರ್ಮ, ಅಧರ್ಮ ಮತ್ತು ಆಕಾಶ ಈ ಐದು ದ್ರವ್ಯಗಳು ಕಾಯವುಳ್ಳವುಗಳಿವೆ.

ಈ ಐದೂ ದ್ರವ್ಯಗಳು ಕಾಯವುಳ್ಳವುಗಳಿವೆ. ಅವು ೧) ಅಮಯಾ ಎಂದರೆ ಯಾವುದರಿಂದ ರಚಿಸಲ್ಪಟ್ಟಿಲ್ಲ. ಈಶ್ವರನಿಂದ ಮಾಡಿದವುಗಳಲ್ಲ. ಈ ದ್ರವ್ಯಗಳನ್ನು ಭೂತಕಾಲದಲ್ಲಿ ಯಾರೂ ಮಾಡಿಲ್ಲ, ವರ್ತಮಾನ ಕಾಲದಲ್ಲಿ ಯಾರೂ ಮಾಡುವುದಿಲ್ಲ ಮತ್ತು ಭವಿಷ್ಯದಲ್ಲಿ ಯಾರೂ ಮಾಡುವಂತಿಲ್ಲ. ಏಕೆಂದರೆ ಅವು ಅಸ್ತಿಕಾಯವಿವೆ. ಅವು ತಮ್ಮಿಂದ ತಾವು ಇವೆ. ಅವು ಸ್ವಭಾವದಿಂದ ಸ್ವಯಂಸಿದ್ಧವಿವೆ. ಎರಡು ಪರಮಾಣುಗಳಿಂದ ಹಿಡಿದು ಅನಂತ ಪರಮಾಣುಗಳ ಸ್ಕಂಧವು ಅದು ಕಾಯವುಳ್ಳದಿದೆ. ಅದು ಕೂಡ ಸ್ವಯಂಸಿದ್ಧವಿದೆ.

ಮತ್ತೆ ಆ ಪದಾರ್ಥಗಳು ೨) ಅತ್ಥಿತ್ತಮಯಾ ಎಂದರೆ ಉತ್ಪಾದ-ವ್ಯಯ-ಧ್ರುವರೂಪವಾದ ಯಾವ ಸದ್ಭಾವವಿದೆ

ಅದರಿಂದ ತನ್ನ ಸ್ವರೂಪದ ಅಸ್ತಿತ್ವದಿಂದ ಪರಿಣಾಮಿಯಿದೆ. ಕಾಯವಂತ ಪದಾರ್ಥಗಳು ತಮ್ಮ ಉತ್ಪಾದ-ವ್ಯಯ ಮತ್ತು ಧ್ರುವದಿಂದ ಪರಿಣಾಮಿಯಿವೆ. ಶರೀರವು ಆತ್ಮನ ಕಾರಣದಿಂದ ಮತ್ತು ಆತ್ಮನು ಶರೀರದ ಕಾರಣದಿಂದ ಪರಿವರ್ತಿಸುವುದಿಲ್ಲ, ಆದರೆ ತನ್ನ ಆಗುವಿಕೆತನದ ಕಾರಣದಿಂದ ಪರಿವರ್ತಿಸುತ್ತವೆ. ಕಾಲದ್ರವ್ಯವಿಲ್ಲದಿದ್ದರೆ ಸಿದ್ಧರ ದ್ರವ್ಯವು ಪರಿಣಮಿಸುವುದಿಲ್ಲವೆನ್ನುವುದಂತೂ ನಿಮಿತ್ತದ ಕಥನವಿದೆ. ನಿಜವಾಗಿ ಸಿದ್ಧರ ದ್ರವ್ಯವು ತನ್ನ ಉತ್ಪಾದ-ವ್ಯಯ ಮತ್ತು ಧ್ರುವದ ಕಾರಣದಿಂದ ಪರಿವರ್ತಿಸುತ್ತಿದೆ. ಅದರಲ್ಲಿ ಕಾಲದ್ರವ್ಯವು ನಿಮಿತ್ತಮಾತ್ರವಿದೆ. ಉತ್ಪಾದ-ವ್ಯಯ ಮತ್ತು ಧ್ರುವ ಈ ತ್ರಿತ್ವದ ಅಸ್ತಿತ್ವದಿಂದ ಪದಾರ್ಥಗಳು ಸ್ಥಿರವಾಗಿ ಇವೆ, ಸಂಸಾರದಲ್ಲಿ ಅನೇಕ ಪ್ರಕಾರದ ಸಂಯೋಗ-ವಿಯೋಗಗಳು ಕಂಡುಬರುತ್ತವೆ ಅವು ಪುದ್ಗಲಕಾಯದ ತನ್ನ ಉತ್ಪಾದ-ವ್ಯಯ-ಧ್ರುವದ ಕಾರಣದಿಂದಿವೆ. ಯಾವುದರ ಕಾರಣದಿಂದ ಯಾವುದೂ ಇಲ್ಲವೇ ಇಲ್ಲವೆಂಬ ಯಥಾರ್ಥ ಜ್ಞಾನ ಮಾಡಿಕೊಳ್ಳಬೇಕು.

ಮತ್ತೆ ಆ ದ್ರವ್ಯಗಳು ೩) ಲೋಗಸ್ಸ ಕಾರಣಭೂದಾ ಎಂದರೆ ನಿಶ್ಚಯದಿಂದ ನಾನಾಪ್ರಕಾರದ ಪರಿಣತಿ ರೂಪವಾದ ಲೋಕಕ್ಕೆ ನಿಮಿತ್ತ ಭೂತವಿವೆ ಎಂದರೆ ಲೋಕವು ಇವುಗಳಿಂದ ರಚಿತವಾಗಿದೆ. ಸಮಸ್ತ ದ್ರವ್ಯಗಳಿವೆ ಅದೇ ಲೋಕವಿದೆ. ಲೋಕವೆಂದರೇನು ಬೇರೆ ವಸ್ತುವಿಲ್ಲ.

**ಭಾವಾರ್ಥ :-** ಜೀವ, ಪುದ್ಗಲ, ಧರ್ಮ, ಅಧರ್ಮ, ಆಕಾಶ ಮತ್ತು ಕಾಲವೆಂದು ಇವು ಆರು ದ್ರವ್ಯಗಳಿವೆ. ಅವುಗಳಲ್ಲಿ ಕಾಲದ್ರವ್ಯವೊಂದನ್ನು ಹೊರತುಪಡಿಸಿ ಐದೂ ದ್ರವ್ಯಗಳು ಪಂಚಾಸ್ತಿಕಾಯವಿವೆ. ಏಕೆಂದರೆ ಈ ಐದೂ ದ್ರವ್ಯಗಳಿಗೆ ಪ್ರದೇಶಗಳ ಸಮೂಹರೂಪ ಕಾಯವಿದೆ. ಪ್ರದೇಶಗಳ ಸಮೂಹವನ್ನು ಕಾಯವೆಂದು ಹೇಳುತ್ತಾರೆ. ಈ ಐದೂ ದ್ರವ್ಯಗಳು ಕಾಯವುಳ್ಳವುಗಳಿವೆ. ಕಾಲದ್ರವ್ಯವು ಬಹುಪ್ರದೇಶಿಯಿಲ್ಲ ಈ ಕಾರಣದಿಂದಾಗಿ ಅದು ಅಕಾಯವಿದೆ. ಈ ಕಥನವನ್ನು ವಿಶೇಷ ಮಾಡಿ ಆಗಮ ಪ್ರಮಾಣದಿಂದ ತಿಳಿದುಕೊಳ್ಳಬೇಕು.

ಕಾಲದ್ರವ್ಯಕ್ಕೆ ಕಾಯ ಸಂಜ್ಞೆಯನ್ನು ಹೇಳಲಾಗುವುದಿಲ್ಲ, ಆದರೆ ಅದು ದ್ರವ್ಯವಂತೂ ಇದೆ. ಆ ಕಾಲದ್ರವ್ಯವಿಲ್ಲದೆ ಲೋಕದ ಸಿದ್ಧಿಯಾಗುವುದಿಲ್ಲ ಏಕೆಂದರೆ ಕಾಲದ್ರವ್ಯವು ಅಸ್ತಿತ್ವರೂಪ ವಸ್ತುವಿದೆ, ಇದರ ಕಥನ ಮಾಡಲಾಗಿದೆ ೨೨ನೆಯ ಗಾಥೆಯಲ್ಲಿ ಐದುಅಸ್ತಿಕಾಯಗಳಿವೆಯೆಂದು ಸಿದ್ಧಿಮಾಡಿತು. ಈಗ ೨೩ನೆಯ ಗಾಥೆಯಲ್ಲಿ ಕಾಲದ್ರವ್ಯವನ್ನು ಸಿದ್ಧಮಾಡುತ್ತಾರೆ.-

ಸಬ್ಭಾವಸಭಾವಾಣಂ ಜೀವಾಣಂ ತಹ ಯ ಪೋಗ್ಗಲಾಣಂ ಚ ।
ಪರಿಯಟ್ಟಣಸಂಭೂದೋ ಕಾಲೋ ಣಿಯಮೇಣ ಪಣ್ಣತ್ತೋ ॥೨೩॥

**ಸದ್ಭಾವಸ್ವಭಾವವುಳ್ಳ ಜೀವಗಳ ಮೇಣ್ ಪುದ್ಗಲಗಳ ಪರಿವರ್ತನದಿಂದ ।**
**ಉದ್ಭವಿಸುವಂಥ ಕಾಲದ ನಿಯಮದಿಂದ ಉಪದೇಶವನು ಕೊಡಲಾಗಿದೆ ॥೨೩॥**

**ಅರ್ಥ :-** ಉತ್ಪಾದ-ವ್ಯಯ ಧ್ರುವದಿಂದ ಅಸ್ತಿತ್ವ ಗ್ರಹಣಮಾಡುವ ಯಾವ ಪದಾರ್ಥಗಳಿವೆ ಅವುಗಳಲ್ಲಿ ಜೀವಗಳು ಮತ್ತು ಪುದ್ಗಲಗಳು ನವೀನ ಮತ್ತು ಹಳೆಯ ಅವಸ್ಥೆಯರೂಪದಿಂದ ಪರಿಣಮನ ಮಾಡುತ್ತಿರುವುದು ಸ್ಪಷ್ಟ ಕಂಡುಬರುತ್ತದೆ. ಅದಕ್ಕಾಗಿ ನಿಶ್ಚಯದಿಂದ ಆ ಪರಿಣಮನದಲ್ಲಿ ನಿಮಿತ್ತಭೂತವಾದಂಥ ಕಾಲದ್ರವ್ಯವಿದೆಯೆಂದು ದೇವಾಧಿ ದೇವರಾದ ಭಗವಂತರು ಹೇಳಿದ್ದಾರೆ. ನವೀನ ವಸ್ತುವು ಹಳೆಯದಾಗುತ್ತದೆ ಇದರ ಮೇಲಿಂದ ಕಾಲದ್ರವ್ಯವಿದೆಯೆಂಬುದು ಸಿದ್ಧವಾಗುತ್ತದೆ. ಜ್ಞಾನದ ಒಂದು ಸಮಯದ ಪರ್ಯಾಯದಲ್ಲಿ ಸ್ವ ಮತ್ತು ಪರಗಳು ಹೇಗಿವೆ ಹಾಗೆ ತಿಳಿದುಕೊಳ್ಳುವ ಸಾಮರ್ಥ್ಯವಿದೆ. ಜ್ಞಾನದಲ್ಲಿ ಯಾವ ಜ್ಞೇಯಗಳು ಹೊಳೆಯುತ್ತವೆ ಅವನ್ನು ಹೇಗಿವೆ ಹಾಗೆ ತಿಳಿದುಕೊಳ್ಳದಿದ್ದರೆ ಜ್ಞಾನ ಅಸತ್ಯವಾಗುವುದು ಮತ್ತು ಜ್ಞಾನವು ಅಸತ್ಯವಾದರೆ ಆತ್ಮನದೂ ಕೂಡ ಯಥಾರ್ಥ ಶ್ರದ್ಧೆಯಾಗುವುದಿಲ್ಲ. ಆದುದರಿಂದ ಐದುಅಸ್ತಿಕಾಯಗಳಿವೆ ಅದರಂತೆ ಕಾಲದ್ರವ್ಯಕೂಡ ಇದೆಯೆಂಬುದನ್ನು ತಿಳಿದುಕೊಳ್ಳಬೇಕು.

**ಭಾವಾರ್ಥ ೩-** ಈ ಲೋಕದಲ್ಲಿ ಸಮಯ ಸಮಯಕ್ಕೆ ಜೀವ ಮತ್ತು ಪುದ್ಗಲದ ಯಾವ ನವೀನ ಮತ್ತು ಹಳೆಯ ಅವಸ್ಥೆಗಳಾಗುತ್ತವೆ ಅದು ಸ್ವಭಾವದ್ದೇ ಪರಿಣಮನವಿದೆ. ಅನಂತ ಆತ್ಮಗಳು ಮತ್ತು ಅನಂತಾನಂತ ಪುದ್ಗಲ ಪರಮಾಣುಗಳ ಯಾವ ಅವಸ್ಥೆಯಾಗುತ್ತಿದೆ ಅದು ತನ್ನ ಸ್ವಭಾವದಿಂದ ಆಗುತ್ತದೆ. ಕಾಲದ ಕಾರಣದಿಂದ ಆಗುವುದಿಲ್ಲ, ಆ ಅವಸ್ಥೆಯು ಸಹಕಾರೀ ಕಾರಣದ ಉಪಸ್ಥಿತಿಯಿಂದ ಕಂಡುಬರುತ್ತದೆ. ಎಂದರೆ ಈ ಅವಸ್ಥೆಯಾಗುವ ಸಮಯದಲ್ಲಿ ಯಾವ ನಿಮಿತ್ತವೇ ಇರುವುದಿಲ್ಲ ಎಂಬುದಾಗಿಲ್ಲ. ಜೀವ ಪುದ್ಗಲಗಳ ಅವಸ್ಥೆಯು ಕಂಡು ಬರುತ್ತದೆ ಅದರಲ್ಲಿ ಕಾಲದ್ರವ್ಯವು ನಿಮಿತ್ತರೂಪದಿಂದ ಕಂಡುಬರುತ್ತದೆ.

ಪುದ್ಗಲಪರಮಾಣುಗಳು ಏಕತ್ರಿತವಾಗಿ ಸ್ಕಂಧವಾಗುವಂತೆ ಕಾಲಾಣುಗಳು ಏಕತ್ರಿತವಾಗುವುದಿಲ್ಲ ಏಕೆಂದರೆ ಇವುಗಳಲ್ಲಿ ಸ್ನಿಗ್ಧರೂಕ್ಷಗಳ ಗುಣವಿಲ್ಲ. ಆದರೆ ರತ್ನದ ರಾಶಿ ಬಿದ್ದುಕೊಂಡಿರುವಂತೆ ಸಂಪೂರ್ಣ ಲೋಕದಲ್ಲಿ ಅಸಂಖ್ಯ ಕಾಲಾಣುಗಳಿವೆ. ಕಾಲದ್ರವ್ಯವು ಯಾವ ರೀತಿ ನಿಮಿತ್ತವಿದೆಯೆಂಬುದನ್ನು ಹೇಳುತ್ತಾರೆ. ಯಾವ ಪ್ರಕಾರ ಗತಿಯಲ್ಲಿ ಧರ್ಮಾಸ್ತಿಕಾಯ, ಸ್ಥಿತಿಯಲ್ಲಿ ಅಧರ್ಮಾಸ್ತಿಕಾಯ ಮತ್ತು ಅವಗಾಹನದಲ್ಲಿ ಆಕಾಶವು ನಿಮಿತ್ತವಿದೆ ಅದೇ ಪ್ರಕಾರ ಜೀವ-ಪುದ್ಗಲಗಳ ಪರಿಣಮನದಲ್ಲಿ ಕಾಲದ್ರವ್ಯವು ಅವಶ್ಯವಾಗಿ ನಿಮಿತ್ತವಿದೆಯೆಂದು ಊಹಿಸಲಾಗುತ್ತದೆ. ಆಗಮ ಪ್ರಮಾಣದಿಂದ ಕೂಡ ಅದು ನಿಶ್ಚಿತವಾಗುತ್ತದೆ. ಆದಾಗ್ಯೂ ಆ ಕಾಲದ್ರವ್ಯದ ಕಾರಣದಿಂದ ಜೀವ ಅಥವಾ ಪುದ್ಗಲದ ಪರಿಣಮನವಿದೆಯೆಂಬುದಾಗಿಲ್ಲ ನಿಮಿತ್ತವಿಲ್ಲದೆ ಪರಿಣಮನವಾಗುವುದಿಲ್ಲ ಅದಕ್ಕಾಗಿ ನಿಮಿತ್ತದ ಕಾರಣವಿದೆಯೆಂಬುದಾಗಿಲ್ಲ.

ಮೀನು ನೀರಿನಲ್ಲಿ ಚಲಿಸುತ್ತದೆ ಅದಕ್ಕೆ ನೀರು ನಿಮಿತ್ತವಿದೆಯೆಂದು ಹೇಳಲಾಗುತ್ತದೆ, ಆದರೆ ನೀರು ಅದನ್ನು ನಡೆಯಿಸುವುದಿಲ್ಲ. ಮತ್ತು ಯಾವನೋ ಓರ್ವ ಮನುಷ್ಯನು ನಡೆಯುತ್ತಿರುವಾಗ ದಾರಿಯಲ್ಲಿ ಒಂದು ಮರದ ನೆರಳು ಸಿಕ್ಕು ಅಲ್ಲಿ ಅವನು ನಿಂತುಕೊಂಡರೆ ಆ ಮರದ ನೆರಳು ನಿಮಿತ್ತವೆಂದು ಹೇಳಲಾಗುತ್ತದೆ, ಆದರೆ ನಡೆಯುತ್ತಿರುವ ಮನುಷ್ಯನನ್ನು ಮರದ ನೆರಳು ತಡೆದು ನಿಲ್ಲಿಸುವುದಿಲ್ಲ. ಅದರಂತೆ ಆತ್ಮ ಮತ್ತು ಪುದ್ಗಲಗಳು ತಮ್ಮ ಕಾರಣದಿಂದ ಪರಿಣಮನಮಾಡುತ್ತಿರುವಾಗ ಅವಕ್ಕೆ ಕಾಲದ್ರವ್ಯವು ನಿಮಿತ್ತವಿದೆ. ಕಾಲದ್ರವ್ಯ ಎಂದರೆ ಕಾಲಾಣುಗಳ ಪರಿಣಮನ ಅದು ಜೀವಾದಿಗಳು ತಮ್ಮ ಕಾರಣದಿಂದ ಪರಿಣಮನ ಮಾಡುತ್ತವೆ ಅವಕ್ಕೆ ನಿಮಿತ್ತವಾಗುತ್ತವೆ, ಆದರೆ ಕಾಲದ್ರವ್ಯವನ್ನು ಹುಡುಕಿಕೊಂಡು ಹೋಗಬೇಕಾಗುವುದಿಲ್ಲ.

ನೋಡಿರಿ, ಈ ಕಾಲದ್ರವ್ಯ ಸಂಬಂಧದ ಮನ್ನಣೆಯಲ್ಲಿ ದಿಗಂಬರ ಮತ್ತು ಶ್ವೇತಾಂಬರ ಸಂಪ್ರದಾಯದಲ್ಲಿ ದೊಡ್ಡ ಅಂತರವಿದೆ. ಶ್ವೇತಾಂಬರ ಸಂಪ್ರದಾಯದವರು ಐದು ದ್ರವ್ಯಗಳನ್ನೇ ಮನ್ನಿಸಿದ್ದಾರೆ, ಅವರು ಕಾಲದ್ರವ್ಯವನ್ನು ಮನ್ನಿಸುವುದಿಲ್ಲ. ಕಾಲದ್ರವ್ಯವನ್ನು ಔಪಚಾರಿಕವಾಗಿ ಮನ್ನಿಸಿದ್ದಾರೆ. ಆದರೆ ವಸ್ತುವಿನ ಸ್ವರೂಪವು ಹೀಗಿಲ್ಲ. ಕಾಲದ್ರವ್ಯವು ಅನಾದಿ ಅನಂತ ಅಸಂಖ್ಯವಿವೆ. ಅವುಗಳ ನಿಮಿತ್ತವಿಲ್ಲದೆ ಯಾವುದೇ ದ್ರವ್ಯದ ಪರಿಣಮನವಾಗುವ ಸಾಧ್ಯತೆಯಿಲ್ಲ. ಎಂದರೆ ಜೀವಾದಿಗಳ ಪರಿಣಮನವು ಅದು ನಿಶ್ಚಿತವಿದೆ ಅಲ್ಲಿ ಕಾಲದ್ರವ್ಯದ ಪರಿಣಮನವು ನಿಮಿತ್ತವಿದೆ, ಅದು ವ್ಯವಹಾರವಿದೆ. ನಿಶ್ಚಯ-ವ್ಯವಹಾರಗಳೆರಡೂ ಇರಬೇಕಾಗುವುದು ಅದಕ್ಕಾಗಿ ಕಾಲದ್ರವ್ಯವು ಇದೆಯೆಂಬುದನ್ನು ಅವಶ್ಯವಾಗಿ ಮನ್ನಿಸಬೇಕಾಗುವುದು.

ಕಾಲದ್ರವ್ಯವು ನಿಶ್ಚಯದಿಂದ ಇದೆ ಮತ್ತು ಅದರ ಪರ್ಯಾಯವು ಅದು ವ್ಯವಹಾರವಿದೆ. ಹೆಚ್ಚು ಪರ್ಯಾಯಗಳ ಸಮೂಹವು ಅದು ವ್ಯವಹಾರಕಾಲವಿದೆ, ಅಲ್ಲಿ ಮುಖ್ಯವಾಗಿ ಪಂಚಾಸ್ತಿಕಾಯಗಳನ್ನು ಸಿದ್ಧಮಾಡಿದೆ, ಕಾಲದ್ರವ್ಯವನ್ನು ಅಸ್ತಿಕಾಯ ಎಂದರೆ ಜೀವ-ಪುದ್ಗಲದ ಮುಖಾಂತರ ಸಿದ್ಧಮಾಡಿದೆ. ಜೀರ್ಣ ಮತ್ತು ನವೀನ ಮೊದಲಾದ ಪರ್ಯಾಯಗಳಿವೆ. ಅವುಗಳ ಮೇಲಿಂದ ಕಾಲಾಣುವಿನ ಅಳತೆ ಹೊರಡುತ್ತದೆ. ಯಾವ ವಸ್ತುವು ನವೀನವಿರುತ್ತದೆ ಅದು ಹಳೆಯದಾಗುತ್ತದೆ. ಇದರ ಮೇಲಿಂದ ವ್ಯವಹಾರ ಕಾಲವು ಸಿದ್ಧವಾಗುತ್ತದೆ, ಮತ್ತು ವ್ಯವಹಾರಕಾಲದ ಆಧಾರವು ನಿಶ್ಚಯಕಾಲದ್ರವ್ಯವಿದೆಯೆಂಬುದು ಸಿದ್ಧವಾಯಿತು.

ಸತ್ ಪದ ಪ್ರರೂಪಣೆ ಶಾಸ್ತ್ರದಲ್ಲಿ ಹೀಗೆ ಬಂದಿದೆ-ಶಬ್ದವಿದೆ ಅದು ಸತ್ ಇದೆಯೆಂದಮೇಲೆ ಅದರ ವಾಚ್ಯವಿಲ್ಲ-ಎಂಬುದಾಗಿಲ್ಲ. ವಾಚ್ಯವಿಲ್ಲದಿದ್ದರೆ ಪದವಿರುವ ಸಾಧ್ಯತೆಯಿಲ್ಲ. ಯಾರಾದರೂ ಕತ್ತೆಯ ಕೋಡೆಂದು ಹೇಳಬಹುದು. ಆದರೆ ಅಂಥ ಪದಾರ್ಥವಂತೂ ಇಲ್ಲ. ಅದಕ್ಕಾಗಿ 'ಕತ್ತೆಯ ಕೋಡು' ಅದು ಒಂದು ಪದವಲ್ಲ, ಆದರೆ ಒಂದು ವಾಕ್ಯವಿದೆಯೆಂದು ಅವನಿಗೆ ಹೇಳಲಾಗುವುದು. ಅದರಿಂದ ಅದು ಇರಲಿಕ್ಕಿಲ್ಲ, ಆದರೆ 'ಕತ್ತೆ, ಕೋಡು' ಇವು ಪದಗಳಿವೆ ಅದಕ್ಕಾಗಿ ಎದುರಿಗೆ ಅದರ ವಾಚ್ಯ ಕೂಡ ಇರಬೇಕು. ಸಿಂಹ ಶಬ್ದವಿದೆಯೆಂದಮೇಲೆ ಸಿಂಹದ ಪದಾರ್ಥವಿಲ್ಲ-ಎಂಬುದಾಗುವುದಿಲ್ಲ. ಅದರಂತೆ ಕಾಲಶಬ್ದವಿದೆಯೆಂದ ಬಳಿಕ ಕಾಲದ್ರವ್ಯವಿಲ್ಲವೆಂಬುದಾಗುವುದಿಲ್ಲ. ಶಬ್ದವಿದೆಯೆಂದಮೇಲೆ ಅದರ ವಾಚ್ಯ ಕೂಡ ಇದೆ. ಶಬ್ದ ಭಿನ್ನವಿದೆ ಮತ್ತು ಅದರ ವಾಚ್ಯವಾದಂಥ ಪದಾರ್ಥವು ಭಿನ್ನವಿದೆ, ಹೀಗೆ ಎರಡನ್ನು ಸ್ವೀಕರಿಸದಿದ್ದರೆ ಶಬ್ದ ಮತ್ತು ವಸ್ತುವನ್ನು ಅವನು ತಿಳಿದುಕೊಳ್ಳುವುದಿಲ್ಲ.

ಈ ರೀತಿಯಾಗಿ ವ್ಯವಹಾರಕಾಲವು ಜೀವ-ಪುದ್ಗಲದ ಪರಿಣತಿಯ ಮುಖಾಂತರ ಸಿದ್ಧವಾಗುತ್ತದೆ. ಈ ಜೀವ-ಪುದ್ಗಲದ ಪರಿಣಾಮಗಳಲ್ಲಿ ಮತ್ತು ಕಾಲದಲ್ಲಿ ಪರಸ್ಪರ ನಿಮಿತ್ತ-ನೈಮಿತ್ತಿಕ ಭಾವವಿದೆ. ಅನಂತ ಜೀವಗಳು ಮತ್ತು ಪುದ್ಗಲಗಳ ಪರಿಣಾಮಗಳು ನೈಮಿತ್ತಿಕವಿವೆ ಮತ್ತು ಕಾಲದ್ರವ್ಯದ ಪರಿಣತಿಯು ನಿಮಿತ್ತವಿದೆ. ಅದು ಮೊದಲು ನಂತರ ಇಲ್ಲ, ಒಂದು ಸಮಯವಿದೆ. ನಿಮಿತ್ತ-ನೈಮಿತ್ತಿಕ ಸಂಬಂಧವು ಅಶುದ್ಧತೆಯಲ್ಲೇ ಇರುತ್ತದೆಯೆಂದು ಕೆಲವರು ಹೇಳುತ್ತಾರೆ, ಆದರೆ ಶುದ್ಧದಲ್ಲಿ ಇರುವುದಿಲ್ಲವೆಂಬ ಮಾತು ಅಸತ್ಯವಿದೆ. ಕೇವಲಜ್ಞಾನವು ನೈಮಿತ್ತಿಕವಿದ್ದರೆ ಕಾಲದ್ರವ್ಯವು ನಿಮಿತ್ತವಿದೆ. ಸಿದ್ಧಪರ್ಯಾಯವು ನೈಮಿತ್ತಿಕ ಮತ್ತು ಕಾಲವು ನಿಮಿತ್ತವಿದೆ. ಆತ್ಮ ಮತ್ತು ಶರೀರಗಳು ಸಮಯ ಸಮಯಕ್ಕೆ ಪರ್ಯಾಯ ಧಾರಣ ಮಾಡುತ್ತವೆ ಅವಕ್ಕೆ ಕಾಲವು ನಿಮಿತ್ತ ಮಾತ್ರವಿದೆ, ನೈಮಿತ್ತಿಕದ ಸಮಯದಲ್ಲಿರುವುದನ್ನು ನಿಮಿತ್ತವೆಂದು ಹೇಳಲಾಗುವುದು. ನಿಗೋದದ ಪರ್ಯಾಯಕ್ಕೆ ಕಾಲವು ನಿಮಿತ್ತಮಾತ್ರವಿದೆ. ಶುಭಭಾವವು ನೈಮಿತ್ತಿಕವಿದ್ದರೆ ಕಾಲವು ನಿಮಿತ್ತವಿದೆ. ಶರೀರದಲ್ಲಿ ಅನ್ನವು ಹೋದ ನಂತರ ಅದನ್ನು ಕಾಲವು ರಕ್ತರೂಪವಾಗಿ ಪರಿಣಮಿಸುವುದಿಲ್ಲ, ಆದರೆ ಯಾವ ಯಾವ ಪರ್ಯಾಯಗಳಾಗುತ್ತವೆ ಅವಕ್ಕೆ ಕಾಲವು ನಿಮಿತ್ತವಿದೆ. ಅದು ಸ್ವತಂತ್ರತೆಯ ಪ್ರಸಿದ್ಧಿಯಿದೆ.

ಕಾಲದ ಅಸ್ತಿತ್ವದಿಂದ ಜೀವ-ಪುದ್ಗಲಗಳ ಪರಿಣಮನದ ಅಸ್ತಿತ್ವವಿದೆ ಎಂದರೆ ಕಾಲದ್ರವ್ಯದ ಪರಿಣಾಮವು ನಿಮಿತ್ತವಿದೆ, ಮತ್ತು ಜೀವ-ಪುದ್ಗಲಗಳ ಪರ್ಯಾಯಗಳು ನೈಮಿತ್ತಿಕವಿವೆಯೆಂದು ಸಿದ್ಧವಾಗುತ್ತದೆ ಮತ್ತು ಜೀವ-ಪುದ್ಗಲಗಳ ಪರಿಣಾಮಗಳಿಂದ ಕಾಲದ್ರವ್ಯದ ಪರ್ಯಾಯವು ತಿಳಿದುಬರುವ ಸಾಧ್ಯತೆಯಿದೆ. ಕಾಲದ್ರವ್ಯ ಎಂಬ ಹೆಸರಿನ ಪದಾರ್ಥವಿದೆ, ಅದಕ್ಕೆ ಒಂದು ಸಮಯದ ಪರ್ಯಾಯವಿದೆ. ಅದನ್ನು ಸಿದ್ಧ ಮಾಡುವುದಕ್ಕಾಗಿ ಜೀವ-ಪುದ್ಗಲಗಳ ಪರಿಣಾಮಗಳು ನಿಮಿತ್ತವಿವೆ ಮತ್ತು ಕಾಲದ ಪರ್ಯಾಯವು ನೈಮಿತ್ತಿಕವಿದೆ. ಇತರ ದ್ರವ್ಯಗಳ ನಿಮಿತ್ತದಿಂದ ಕಾಲದ್ರವ್ಯದ ಪರ್ಯಾಯವನ್ನು ಸಿದ್ಧಮಾಡುವುದು ಅದು ವ್ಯವಹಾರವಿದೆ. ಈ ರೀತಿಯಾಗಿ ಸಮಸ್ತ ದ್ರವ್ಯಗಳು ಸ್ವತಂತ್ರವಿವೆ. ಸರ್ವಜ್ಞರ ಹೊರತಾಗಿ ಇಂಥ ಸ್ವತಂತ್ರತೆಯು ಸಿದ್ಧವಾಗುವುದಿಲ್ಲ. ಹೀಗೆ ನಿಜವಾದ ಜ್ಞಾನಮಾಡಿಕೊಂಡು ಅಜ್ಞಾನವನ್ನು ಬಿಟ್ಟುಕೊಡುವುದೇ ಧರ್ಮವಿದೆ.

ಆತ್ಮನು ಇರುವಂತೆ ಕಾಲಾಣುಗಳು ಕೂಡ ಇವೆ. ಆತ್ಮನಲ್ಲಿ ಜ್ಞಾನ, ಆನಂದ ಮೊದಲಾದ ಭಾವಗಳಿರುವಂತೆ ಕಾಲಾಣುಗಳಲ್ಲಿ ಈ ಭಾವಗಳಿಲ್ಲ, ಆದರೆ ಕಾಲಾಣುವು ಪದಾರ್ಥವಿದೆಯೆಂಬುದರ ಪರಿಚಯವನ್ನೀಗ ಮಾಡಿಸುತ್ತಾರೆ,-

**ವವಗದಪಣವಣ್ಣರಸೋ ವವಗದದೋಗಂಧ ಅಟ್ಠಫಾಸೋ ಯ ।**
**ಅಗುರುಲಹುಗೋ ಅಮುತ್ತೋ ವಟ್ಟಣಲಕ್ಖೋ ಯ ಕಾಲೋ ತ್ತಿ ॥೨೪॥**

**ಐದುರಸವೈದುವರ್ಣವೆರಡುಗಂಧ ಮೇಣೆಂಟು ಸ್ಪರ್ಶಗಳಿಲ್ಲದಾ ಕಾಲ ।**
**ಇದೆ, ಅಮೂರ್ತ ಅಗುರುಲಘುಮೇಣ್ ವರ್ತನಾಲಕ್ಷಣ ಸ್ವರೂಪದಿಂದ ॥೨೪॥**

**ಅರ್ಥ :-** ನಿಶ್ಚಯಕಾಲದ ಸ್ವರೂಪ ಹೇಳುತ್ತಾರೆ. ಯಾವುದಕ್ಕೆ ಐದು ವರ್ಣ, ಐದು ರಸಗಳಿಲ್ಲ ಮತ್ತು ಯಾವುದಕ್ಕೆ ಎರಡು ಗಂಧ ಹಾಗೂ ಎಂಟು ಸ್ಪರ್ಶಗುಣಗಳು ಕೂಡ ಇಲ್ಲ ಮತ್ತು ಷಡ್‌ಗುಣಹಾನಿವೃದ್ಧಿರೂಪ ಅಗುರುಲಘುಗುಣ ಸಂಯುಕ್ತವಿದೆ ಅಲ್ಲದೆ ಅದು ಅಮೂರ್ತವಿದ್ದು ಪರದ್ರವ್ಯದ ಪರಿಣಮನದಲ್ಲಿ ನಿಮಿತ್ತವಿರುತ್ತದೆ ಅದು ನಿಶ್ಚಯಕಾಲದ ಲಕ್ಷಣವಿದೆ.

ಕಾಲಾಣು ಪದಾರ್ಥವು ಅರೂಪಿಯಿದೆ, ಅದರಲ್ಲಿ ವರ್ಣಾದಿ ಗುಣಗಳಿಲ್ಲ. ಹೇಗೆ ಜೀವ-ಪುದ್ಗಲ ಮೊದಲಾದವು ಅಸ್ತಿಕಾಯವಿವೆ ಹಾಗೆ ಕಾಲಾಣು ಅಸ್ತಿಕಾಯವಿಲ್ಲ. ಆದರೆ ಅದು ವಸ್ತುವಂತೂ ಇದೆ. ಹೇಗೆ ಪುದ್ಗಲದ ಸ್ವಭಾವವಿದೆ ಹಾಗೆ ಕಾಲದ ಸ್ವಭಾವವಿಲ್ಲ ಅದಕ್ಕಾಗಿ ಕಾಲಾಣುಗಳು ಏಕತ್ರವಾಗುವುದಿಲ್ಲ. ಕಾಲದ್ರವ್ಯವಿದೆಯೆಂಬುದರ ನಿರ್ಣಯವನ್ನು ಸೂಕ್ಷ್ಮದೃಷ್ಟಿಯಿಂದ ಮಾಡಬೇಕಾಗುವುದೆಂದು ಆಚಾರ್ಯದೇವರು ಮುಂದೆ ಹೇಳುವವರಿದ್ದಾರೆ. ದ್ರವ್ಯಗಳು ತಮ್ಮ ಕಾರಣದಿಂದ ಪರಿಣಮಿಸುತ್ತವೆ ಅದರಲ್ಲಿ ಕಾಲದ್ರವ್ಯವು ನಿಮಿತ್ತವಿದೆ.

**ಭಾವಾರ್ಥ :-** ಕಾಲದ್ರವ್ಯವು ಇತರ ದ್ರವ್ಯದ ಪರಿಣತಿಗೆ ಸಹಾಯವಿದೆ ಎಂದರೆ ನಿಮಿತ್ತವಿದೆ. ಅದು ಯಾವ ರೀತಿಯಿದೆಯೆಂಬುದನ್ನು ದೃಷ್ಟಾಂತದಿಂದ ತಿಳಿಸಿಕೊಡುತ್ತಾರೆ. ಓರ್ವ ಶಿಷ್ಯನು ಶೀತಕಾಲದ ಚಳಿಯಲ್ಲಿ ತನ್ನ ಕಾರಣದಿಂದ ಅಧ್ಯಯನ ಮಾಡುತ್ತಿದ್ದರೆ ಅವನಿಗೆ ಬಾಹ್ಯದಲ್ಲಿ ಅಗ್ನಿಯು ನಿಮಿತ್ತವಿದೆ. ಅಧ್ಯಯನದ ಕ್ರಿಯೆಯನ್ನಂತೂ ತಾನು ಮಾಡುತ್ತಾನೆ. ಅದರಲ್ಲಿ ಅಗ್ನಿಯು ನಿಮಿತ್ತ ಮಾತ್ರವಿದೆ. ಅಗ್ನಿಯು ಅಧ್ಯಯನ ಮಾಡುವುದಕ್ಕೆ ಪ್ರೇರಣೆ ಕೊಡುವುದಿಲ್ಲ, ಅಗ್ನಿಯು ನೀನು ಅಧ್ಯಯನ ಮಾಡೆಂದು ಬಲವಂತದಿಂದ ಹೇಳುವುದಿಲ್ಲ, ಆದರೆ ಅದು ಕೇವಲ ನಿಮಿತ್ತವಿದೆ.

ಮತ್ತು ಕುಂಭಕಾರನ ಚಕ್ರವು ತನ್ನ ಇಚ್ಛೆಯಿಂದ ತಿರುಗುತ್ತದೆ ಅದರಲ್ಲಿ ಕೆಳಗಿನ ಕೀಲು ನಿಮಿತ್ತವಿದೆ. ಕೀಲು ಚಕ್ರವನ್ನು ತಿರುಗಿಸುವುದಿಲ್ಲ. ಇದೇ ಪ್ರಕಾರ ಸಮಸ್ತ ದ್ರವ್ಯಗಳ ಪರಿಣತಿಗೆ ಕಾಲದ್ರವ್ಯವು ನಿಮಿತ್ತ ರೂಪವಿದೆ. ಕಾಲದ್ರವ್ಯವು ಬಲವಂತದಿಂದ ಯಾವುದನ್ನು ಪರಿಣಮನ ಮಾಡಿಸುವುದಿಲ್ಲ. ಆತ್ಮನು ತಾನು ತಿಳಿದುಕೊಳ್ಳದಿದ್ದರೆ ಮತ್ತು ಆಯುಷ್ಯವು ಪೂರ್ಣವಾಗುವ ಸಮಯವು ಬಂದುಬಿಟ್ಟಿದ್ದರೆ ಕಾಲದ್ರವ್ಯವೇನು ಆತ್ಮನ ಹಿತದ ಸಲುವಾಗಿ ತಿಳಿದುಕೊಳ್ಳೆಂದು ಹೇಳುವುದಿಲ್ಲ, ಆದರೆ ಆತ್ಮನು ತಾನು ತಿಳಿದುಕೊಂಡರೆ ಅವನ ಪರಿಣಮನದಲ್ಲಿ ಕಾಲದ್ರವ್ಯವನ್ನು ನಿಮಿತ್ತವೆಂದು ಹೇಳಲಾಗುವುದು.

**ಪ್ರಶ್ನೆ :-** ಲೋಕಾಕಾಶದ ಹೊರಗೆ ಕಾಲದ್ರವ್ಯವಿಲ್ಲವೆಂದ ಮೇಲೆ ಅಲ್ಲಿ ಆಕಾಶವು ಯಾವುದರ ನಿಮಿತ್ತದಿಂದ ಪರಿಣಮಿಸುವುದು ?

**ಉತ್ತರ :-** ಯಾವ ಪ್ರಕಾರ ಕುಂಭಕಾರನ ಚಕ್ರವು ತಿರುಗುತ್ತದೆ ಆ ಸಮಯದಲ್ಲಿ ಅದರ ಒಂದು ಕೋಣದಲ್ಲಿ ಕೋಲಿನಿಂದ ತಳ್ಳಿದ ಕೂಡಲೆ ಇಡೀ ಚಕ್ರವು ತಿರುಗುತ್ತದೆ, ಮತ್ತು ಯಾವ ಪ್ರಕಾರ ಸ್ಪರ್ಶನೇಂದ್ರಿಯದ ವಿಷಯವು ಒಂದು ಸ್ಥಾನದಲ್ಲಾಗುತ್ತದೆ ಮತ್ತು ವೇದನವು ಇಡೀ ಆತ್ಮನಲ್ಲಾಗುತ್ತದೆ, ಚಂದನವನ್ನು ಶರೀರದ ಒಂದು ಭಾಗದಲ್ಲಿ ಲೇಪಿಸಿದರೆ ಅದರ ವೇದನವು ಇಡೀ ಆತ್ಮನಲ್ಲಾಗುತ್ತದೆ, ಚೇಳು ಒಂದು ಸ್ಥಾನದಲ್ಲಿ ಕಚ್ಚಿದರೆ ಅದರ ವೇದನವು ಇಡೀ ಆತ್ಮನಲ್ಲಾಗುತ್ತದೆ, ಮತ್ತು ಕುರು ಮೊದಲಾದವು ಒಂದು ಸ್ಥಾನದಲ್ಲಾಗುತ್ತವೆ ಹಾಗೂ ಅವುಗಳ ವೇದನವು ಇಡೀ ಆತ್ಮನಲ್ಲಿ ಆಗುತ್ತದೆ ಅದೇ ಪ್ರಕಾರ ಕಾಲದ್ರವ್ಯವು ಲೋಕಾಕಾಶದಲ್ಲಿದ್ದರೂ ಕೂಡ ಅಲೋಕಾಕಾಶದ ಪರಿಣತಿಯಲ್ಲಿ ಅದು ನಿಮಿತ್ತವಾಗುತ್ತದೆ.

**ಪ್ರಶ್ನೆ :-** ಕಾಲದ್ರವ್ಯವು ಅನ್ಯದ್ರವ್ಯಗಳ ಪರಿಣತಿಯಲ್ಲಿ ನಿಮಿತ್ತವಾಗುತ್ತದೆ ಆದರೆ ಕಾಲದ್ರವ್ಯದ ಪರಿಣತಿಗೆ ನಿಮಿತ್ತವು ಯಾವುದಾಗುತ್ತದೆ. ?

**ಉತ್ತರ :-** ಕಾಲಕ್ಕೆ ನಿಮಿತ್ತವು ಕಾಲವಿದೆ. ಯಾವ ಪ್ರಕಾರ ಆಕಾಶದ ಆಧಾರವು ಆಕಾಶವಿದೆ ಅದೇ ಪ್ರಕಾರ ಕಾಲದ್ರವ್ಯದ ಪರಿಣಮನದಲ್ಲಿ ಕಾಲದ್ರವ್ಯವು ಸ್ವಯಂ ನಿಮಿತ್ತವಿದೆ. ಹೀಗೆ ನಿಶ್ಚಿತವಾದರೆ ದ್ರವ್ಯದ ಸ್ವತಂತ್ರತೆಯು ಸಿದ್ಧವಾಗುತ್ತದೆ. ಯಾವ ಪ್ರಕಾರ ಆತ್ಮನ ಜ್ಞಾನಸ್ವಭಾವವು ಸ್ವ-ಪರ ಪ್ರಕಾಶಕವಿದೆ ಅದು ಅಕಾರಣೀಯವಿದೆ, ಇದರ

ಕಾರಣವು ಯಾವುದೇ ಪರದ್ರವ್ಯವಾಗುವ ಸಾಧ್ಯತೆಯಿಲ್ಲ, ಸ್ವಭಾವಕ್ಕೆ ಕಾರಣ ಇರುವುದಿಲ್ಲ. ಅದೇ ಪ್ರಕಾರ ಕಾಲಕ್ಕೆ ಕಾಲವು ಕಾರಣವಿದೆ-ಎಂದರೆ ಕಾಲದ ಪರಿಣಮನದಲ್ಲಿ ಯಾವುದೇ ಪರವು ಕಾರಣವಿಲ್ಲ. ಹೀಗೆ ಪದಾರ್ಥಗಳು ಸ್ವತಂತ್ರವಿವೆಯೆಂಬುದನ್ನು ನಿಶ್ಚಿತ ಮಾಡಿ ಜ್ಞಾನದ ಸ್ವಭಾವವು ಸ್ವ-ಪರ ಪ್ರಕಾಶಕವಿದೆ ಅದಕ್ಕೆ ಯಾವುದೇ ಇಂದ್ರಿಯ ಅಥವಾ ಮನಸ್ಸಿನ ಅವಶ್ಯಕತೆಯಿಲ್ಲವೆಂದು ಹೇಳಿದ್ದಾರೆ.

ಯಾವ ಪ್ರಕಾರ ಆಕಾಶವು ಇರುವ ಸಲುವಾಗಿ ಬೇರೆ ಸ್ಥಾನದ ಅವಶ್ಯಕತೆಯಿಲ್ಲ ಅದೇ ಪ್ರಕಾರ ಆತ್ಮನಿಗೆ ಜ್ಞಾನಮಾಡಿಕೊಳ್ಳುವುದಕ್ಕಾಗಿ ಪರದ ಅವಶ್ಯಕತೆಯಿಲ್ಲ. ಯಾವ ಪ್ರಕಾರ ತನ್ನ ಕ್ಷೇತ್ರದಲ್ಲಿರುವುದು ಆತ್ಮನ ಸ್ವಯಂಸಿದ್ಧ ಸ್ವಭಾವವಿದೆ ಅದೇ ಪ್ರಕಾರ ಆತ್ಮನದು ಸ್ವಯಂಸಿದ್ಧ ಸ್ವ-ಪರ ಪ್ರಕಾಶಕ ಸ್ವಭಾವವಿದೆ.

ಯಾವ ಪ್ರಕಾರ ಜ್ಞಾನ, ಸೂರ್ಯ, ರತ್ನ, ದೀವಿಗೆ ಮೊದಲಾದ ಪದಾರ್ಥಗಳು ಸ್ವ-ಪರ ಪ್ರಕಾಶವಿವೆ, ಅವುಗಳ ಪ್ರಕಾಶದ ಸಲುವಾಗಿ ಬೇರೆ ಯಾವ ವಸ್ತುವಿನ ಸಹಾಯದ ಅವಶ್ಯಕತೆಯಿಲ್ಲ ಅದೇ ಪ್ರಕಾರ ಕಾಲದ್ರವ್ಯಕ್ಕೆ ತನ್ನ ಪರಿಣತಿಯ ಸಲುವಾಗಿ ಅನ್ಯ ನಿಮಿತ್ತದ ಅವಶ್ಯಕತೆಯಿಲ್ಲ. ಸ್ವಯಂ ಕಾಲದ್ರವ್ಯವು ತನಗೆ ತಾನು ನಿಮಿತ್ತವಿದೆ. ಸೂರ್ಯನು ಪ್ರಕಾಶಿಸುವಲ್ಲಿ ಯಾವ ಅನ್ಯ ಕಾರಣವಿಲ್ಲ. ತನ್ನದೆ ಉಜ್ವಲತೆಯ ಸ್ವಭಾವವಿದೆ ಅದು ಸ್ವ-ಪರಗಳನ್ನು ಬೆಳಗುತ್ತದೆ-ರತ್ನದ ಪ್ರಕಾಶವು ಸ್ವಯಂ ಇದೆ, ಅದು ಯಾವುದೆ ಪರದ ಕಾರಣದಿಂದಿಲ್ಲ ಮತ್ತು ದೀವಿಗೆ ಕೂಡ ಸ್ವ-ಪರ ಪ್ರಕಾಶವಿದೆ. ದೀವಿಗೆಯಲ್ಲಿ ಇತರ ವಸ್ತುಗಳು ಕಂಡು ಬರುತ್ತವೆ ಅದಕ್ಕಾಗಿ ಆ ಇತರ ವಸ್ತುಗಳ ಕಾರಣದಿಂದ ದೀವಿಗೆಯಿಲ್ಲ-ಯಾವುದು ಯಾವುದರ ಸ್ವಭಾವವಿದೆ ಅದರಲ್ಲಿ ನಿಮಿತ್ತದ ಅವಶ್ಯಕತೆಯಿಲ್ಲ. ಕಾಲವು ಹೇಗೆ ತನ್ನಿಂದ ಪರಿಣಮಿಸುತ್ತದೆ ಹಾಗೆ ಆತ್ಮನಿಗೆ ಸ್ವ-ಪರ ಪ್ರಕಾಶಕಸ್ವಭಾವವಿದೆ ಅದು ತನ್ನಿಂದ ಇದೆ, ಸ್ವಭಾವದಲ್ಲಿ ನಿಮಿತ್ತವಿರುವ ಸಾಧ್ಯತೆಯಿಲ್ಲ. ಆತ್ಮನ ಪರ್ಯಾಯವು ಪರಿವರ್ತಿಸುವಲ್ಲಿ ಕಾಲವು ನಿಮಿತ್ತವಿದೆ, ಆದರೆ ಸ್ವ-ಪರ ಪ್ರಕಾಶಕದಲ್ಲಿ ಯಾವ ನಿಮಿತ್ತವಿಲ್ಲ, ಸ್ವತಂತ್ರವಿದೆ. ಸೂರ್ಯನನ್ನು ಪ್ರಕಾಶಪಡಿಸುವಲ್ಲಿ ಬೇರೆ ಸೂರ್ಯನ ಅವಶ್ಯಕತೆ ಬೀಳುವುದಿಲ್ಲ ಹಾಗೆಯೇ ಕಾಲದ್ರವ್ಯ ಪರಿಣಮಿಸುವಲ್ಲಿ ಯಾವುದೇ ನಿಮಿತ್ತವಿಲ್ಲ.

**ಪ್ರಶ್ನೆ :-** ಯಾವ ಪ್ರಕಾರ ಕಾಲದ್ರವ್ಯದಲ್ಲಿ ಪರಿಣತಿಯಾಗುತ್ತದೆ ಅದರಲ್ಲಿ ಕಾಲವು ಸ್ವಯಂ ನಿಮಿತ್ತವಿದೆ ಅದೇ ರೀತಿಯಾಗಿ ಜೀವ-ಪುದ್ಗಲ ಮೊದಲಾದ ದ್ರವ್ಯಗಳಿಗೆ ಕೂಡ ತಮ್ಮ ಪರಿಣತಿಯಲ್ಲಿ ತಾವು ನಿಮಿತ್ತ ವೇಕಿರುವುದಿಲ್ಲ ? ಅದರಲ್ಲಿ ಕಾಲದ ನಿಮಿತ್ತವಿದೆಯೆಂದೇಕೆ ಹೇಳಿದೆ ? ಇತರ ದ್ರವ್ಯಗಳ ಪರಿಣತಿಯಲ್ಲಿ ಕಾಲದ ಅವಶ್ಯಕತೆಯಿಲ್ಲವೆಂದು ಹೇಳುವಲ್ಲಿ ತಪ್ಪೇನು ಇದೆ !

**ಉತ್ತರ :-** ಕಾಲದ್ರವ್ಯದ ವಿಶೇಷ ಗುಣವು ವರ್ತನಾ ಲಕ್ಷಣವಿದೆ. ಅದು ಅನ್ಯ ಪದಾರ್ಥಗಳ ಪರಿಣತಿಗೆ ನಿಮಿತ್ತಭೂತವಿದೆ. ಯಾವ ರೀತಿ ಆಕಾಶವು ಇತರ ಪದಾರ್ಥಗಳಿಗೆ ಅವಗಾಹ ಕೊಡುವಂಥದು ಅದರ ಗುಣವಿದೆ, ಧರ್ಮಾಸ್ತಿಕಾಯದಲ್ಲಿ ಜೀವ-ಪುದ್ಗಲಗಳಿಗೆ ಗಮನದಲ್ಲಿ ಗತಿ ಹೇತುತ್ವವಾಗುವ ಗುಣವಿದೆ ಮತ್ತು ಅಧರ್ಮಾಸ್ತಿಕಾಯದಲ್ಲಿ ಜೀವ-ಪುದ್ಗಲಗಳಿಗೆ ಸ್ಥಿತಿ ಹೇತುತ್ವವಾಗುವ ಗುಣವಿದೆ. ಅದೇ ರೀತಿ ಕಾಲದ್ರವ್ಯವು ಇತರ ಪದಾರ್ಥಗಳ ಪರಿಣಮನದಲ್ಲಿ ನಿಮಿತ್ತವಿದೆ.

ಜಡಕರ್ಮವು ಸ್ವಯಂ ಪರಿಣಮಿಸುತ್ತದೆ ಅದು ಅದರ ಉಪಾದಾನವಿದೆ ಮತ್ತು ಕಾಲವು ಅದಕ್ಕೆ ನಿಮಿತ್ತವಿದೆ. ಆತ್ಮನು ರಾಗ-ದ್ವೇಷಗಳ ರೂಪವಾಗಿ ಪರಿಣಮಿಸುತ್ತಾನೆ ಅದು ಅವನ ಉಪಾದಾನವಿದೆ ಮತ್ತು ಕಾಲದ ಪರಿಣಮನವು ಅದರಲ್ಲಿ ನಿಮಿತ್ತವಿದೆ. ಪ್ರತಿಯೊಂದು ದ್ರವ್ಯದ ಉಪಾದಾನವು ಸ್ವಯಂ ಆಯಾದ್ರವ್ಯವೇ ಇದೆ. ಒಂದು ದ್ರವ್ಯದ ಉಪಾದಾನವು ಇನ್ನೊಂದು ದ್ರವ್ಯವಾಗುವ ಸಾಧ್ಯತೆಯಿಲ್ಲ. ಆದರೆ ಕಥಂಚಿತ್ ಪ್ರಕಾರದಿಂದ ಅನ್ಯಪದಾರ್ಥವು ಅನ್ಯಪದಾರ್ಥಕ್ಕೆ ನಿಮಿತ್ತ ಕಾರಣವಾಗುತ್ತದೆ. ಒಂದು ದ್ರವ್ಯದಲ್ಲಿ ಎರಡು ಉಪಾದಾನಗಳಿರುವುದಿಲ್ಲ, ಆದರೆ ನಿಮಿತ್ತವು ಇತರ ದ್ರವ್ಯಾಗಳಾಗುತ್ತವೆ. ಲೆಕ್ಕಣಿಕೆ ಸಾಗುವುದು ಅದು ಉಪಾದಾನವಿದೆ, ಅದರಲ್ಲಿ ಕೈ ನಿಮಿತ್ತವಿದೆ ; ಕೈ ಉಪಾದಾನವಿದೆ

ಮತ್ತು ಅದರಲ್ಲಿ ಆತ್ಮನ ನಿಮಿತ್ತವಿದೆ, ರಾಗವು ನೈಮಿತ್ತಿಕವಿದೆ, ಮತ್ತು ಕರ್ಮ ನಿಮಿತ್ತವಿದೆ. ಈ ರೀತಿಯಾಗಿ ಪರದ್ರವ್ಯವು ನಿಮಿತ್ತ ಕಾರಣವಾಗುತ್ತದೆ. ಆದರೆ ಯಾವುದೂ ಯಾವುದನ್ನು ಮಾಡುವುದಿಲ್ಲ. ನವಿಲುಗರಿ ಕೆದರುವುದು ಅದು ತನ್ನ ಕಾರಣದಿಂದ ಅದರಲ್ಲಿ ಅಂಗುಲಿ ನಿಮಿತ್ತ ಇದೆ. ಅಂಗುಲಿಯಿಂದ ಅದೇನು ಮೇಲಕ್ಕೇಳಲಿಲ್ಲ. ಅಂಗಡಿಯು ಸರಿಯಾಗಿ ನಡೆದಿದೆ ಅದು ಉಪಾದಾನವಿದೆ ಅದರಲ್ಲಿ ಆತ್ಮನ ಮಮತೆ ನಿಮಿತ್ತ ಮಾತ್ರವಿದೆ. ಮಮತೆ ಮಾಡಿದೆಯೆಂದು ಅಂಗಡಿಯು ಸರಿಯಾಗಿ ನಡೆದಿದೆ ಎಂಬುದಾಗಿಲ್ಲ. ಈ ರೀತಿಯಾಗಿ ಇಲ್ಲಿ ಉಪಾದಾನ-ನಿಮಿತ್ತದ ಸ್ಪಷ್ಟತೆಯನ್ನು ಹೆಚ್ಚಾಗಿ ಮಾಡಿದೆ, ಆದಾಗ್ಯೂ ಅಜ್ಞಾನಿಯು ತನ್ನ ಅಜ್ಞಾನದ ಕಾರಣದಿಂದ ಸರಿಯಾಗಿ ತಿಳಿದುಕೊಳ್ಳುವುದಿಲ್ಲ.

ಆಕಾಶದ್ರವ್ಯವು ಅವಕಾಶದಲ್ಲಿ ನಿಮಿತ್ತವಿದೆ, ಧರ್ಮಾಸ್ತಿಕಾಯವು ಗತಿಹೇತುತ್ವ, ಅಧರ್ಮಾಸ್ತಿಕಾಯವು ಸ್ಥಿತಿಹೇತುತ್ವವೆಂದು ಒಂದು ದ್ರವ್ಯದಲ್ಲಿ ಇತರ ದ್ರವ್ಯಗಳು ನಿಮಿತ್ತ ಬೀಳುತ್ತವೆ. ಒಂದು ವೇಳೆ ಒಂದು ದ್ರವ್ಯದಲ್ಲಿ ಇತರ ದ್ರವ್ಯಗಳು ನಿಮಿತ್ತವಿವೆಯೆಂದು ಮನ್ನಿಸದೆ ಹೋದರೆ ಜೀವ-ಪುದ್ಗಲಗಳೆಂಬ ಎರಡೇ ದ್ರವ್ಯಗಳು ಉಳಿದುಬಿಡುತ್ತವೆ ಅದಕ್ಕಾಗಿ ನಿಮಿತ್ತದ ರೀತಿಯಲ್ಲಿ ಇತರ ದ್ರವ್ಯಗಳಿವೆ. ನಿಮಿತ್ತದಿಂದ ಉಪಾದಾನದಲ್ಲಿ ಸ್ವಲ್ಪ ಕಾರ್ಯವಾಗುತ್ತದೆಯೆಂದು ಮನ್ನಿಸಿದರೇನೇ ನಿಮಿತ್ತವನ್ನು ಮನ್ನಿಸಲಾಯಿತೆಂದು ಹೇಳಬಹುದಾಗಿದೆಯೆಂದು ಕೆಲವರು ಹೇಳುತ್ತಾರೆ, ಆದರೆ ಹಾಗೆ ಇಲ್ಲ. ಯಾವಾಗ ನಿಮಿತ್ತದಲ್ಲಿ ಕಾರ್ಯವಾಗುತ್ತದೆ ಆಗ ನಿಮಿತ್ತವು ಬೇರೆ ದ್ರವ್ಯವಿದೆಯೆಂದು ಮನ್ನಿಸುವುದು ಯಥಾರ್ಥವಿದೆ. ಜೀವ ಪುದ್ಗಲಾದಿಗಳು ತಮ್ಮ ಕಾರಣದಿಂದ ಪರಿಣಮಿಸುತ್ತವೆ ಅದರಲ್ಲಿ ಕಾಲವು ನಿಮಿತ್ತವಿದೆಯೆಂದು ಮನ್ನಿಸದಿದ್ದರೆ ಕಾಲದ್ರವ್ಯವು ಉಳಿಯುವುದಿಲ್ಲ . ನಿಮಿತ್ತವು ನಿಮಿತ್ತತನದ ಕಾರ್ಯ ಮಾಡುವುದು, ಆದರೆ ಪರದಲ್ಲೇನು ಮಾಡುವುದಿಲ್ಲ. ನಿಮಿತ್ತವಂತೂ ಅನಾದಿ ಅನಂತವಿದೆ, ಆದರೆ ನಿಮಿತ್ತದಿಂದ ಉಪಾದಾನದಲ್ಲಿ ಸ್ವಲ್ಪ ಕಾರ್ಯವಾಗುತ್ತದೆಯೆಂದು ಮನ್ನಿಸಹೋದರೆ ದ್ರವ್ಯವು ಸ್ವತಂತ್ರ ಉಳಿಯುವುದಿಲ್ಲ, ಆಗಮ ವಿರುದ್ಧವಾಗುವುದು, ಲೋಕದ ಮರ್ಯಾದೆ ಉಳಿಯುವುದಿಲ್ಲ .

ಕಾಲದ್ರವ್ಯಕ್ಕೆ ಅನ್ಯದ್ರವ್ಯವು ನಿಮಿತ್ತವಿಲ್ಲವೆಂಬ ಮಾತು ಸರಿಯಿದೆ, ಆದರೆ ಕಾಲದ್ರವ್ಯವೇ ಇಲ್ಲವೆಂಬುದಾಗಿಲ್ಲ. ಕಾಲದ್ರವ್ಯವು ಅನ್ಯದ್ರವ್ಯದ ಪರಿಣಮನದಲ್ಲಿ ನಿಮಿತ್ತವಿದೆಯೆಂದು ಮನ್ನಿಸದಿದ್ದರೆ ಎರಡೇ ದ್ರವ್ಯಗಳು ಉಳಿಯುತ್ತವೆ, ಹೀಗೆ ಲೋಕದ ಮರ್ಯಾದೆ ಉಳಿಯುವುದಿಲ್ಲ . ಅದಕ್ಕಾಗಿ ನಿಶ್ಚಯಕಾಲವು ಅನಾದಿ ಅನಂತ ಪದಾರ್ಥವಿದೆ, ಅಸಂಖ್ಯ ಕಾಲಾಣುಗಳಿವೆ. ಆತ್ಮನ ಸ್ವಭಾವವು ಸ್ವ-ಪರ ಪ್ರಕಾಶವಿದೆ. ಕಾಲದ್ರವ್ಯವಿದೆಯೆಂಬುದನ್ನು ಮನ್ನಿಸದಿದ್ದರೆ ಆತ್ಮನ ಸ್ವ-ಪರ ಪ್ರಕಾಶಕ ಸ್ವಭಾವವನ್ನು ಮನ್ನಿಸಲಿಲ್ಲ ಏಕೆಂದರೆ ಕಾಲದ್ರವ್ಯವು ಜ್ಞಾನದ ಜ್ಞೇಯವಿವೆ ಅದು ಪರ ಪ್ರಕಾಶಕದಲ್ಲಿ ಹೋಗುತ್ತದೆ. ಅದನ್ನು ಮನ್ನಿಸದವನು ಪರಪ್ರಕಾಶಕ ಸ್ವಭಾವವನ್ನು ಮನ್ನಿಸಲಿಲ್ಲ .

ಆತ್ಮನಿಗೆ ತನ್ನ ಸ್ವ-ಕಾಲವು ಅರಳಿದೆ, ಎಂದರೆ ಆತ್ಮನ ಅರಿವುಂಟಾದಾಗ ನಿಮಿತ್ತರೂಪದಿಂದ ಕಾಲದ್ರವ್ಯವಿದೆಯೆಂದು ಶ್ರದ್ಧೆಯಲ್ಲಿ ಬಂದುಬಿಟ್ಟಿತು. ಪುರುಷಾರ್ಥದ ಗತಿಯು ಸಂಸಾರದ ಕಡೆಗಿತ್ತು ಅದು ಈಗ ತಿರುಗಿ ಸ್ವಭಾವದ ಕಡೆಗೆ ಗತಿಯಾದಾಗ ಕಾಲದ್ರವ್ಯವಿದೆಯೆಂದು ಕೂಡ ಜೊತೆಯಲ್ಲೇ ಅರಿವಾಗುವುದು. ಕೆಲವರಿಗೆ ಸೂಕ್ಷ್ಮತೆಯಿಂದ ಲಕ್ಷ್ಯದಲ್ಲಿ ಬಾರದಿದ್ದರೆ ಅದು ಅಪವಾದವಿದೆ. ಆತ್ಮನ ಪರ್ಯಾಯವು ತಿರುಗಿದೆಯೆಂದ ಮೇಲೆ ಅದರಲ್ಲಿ ನಿಮಿತ್ತವು ಯಾವುದೇ ದ್ರವ್ಯ ಇರಬೇಕಾಗುವುದು-ಎಂಬ ಪ್ರತೀತಿ ಬಂದುಬಿಡುವುದು ಸುತರಾಂ ನಿಷೇಧವಿಲ್ಲ. ಗುರುಗಮ ದೊರಕದಿದ್ದರೆ ಬಹುಶಃ ಲಕ್ಷ್ಯದಲ್ಲಿ ಬರಲಿಕ್ಕಿಲ್ಲ , ಆದರೆ ಏನಾದರೂ ಹೇಳಿದರೆ ವಿರೋಧ ಮಾಡಲಿಕ್ಕಿಲ್ಲ,ಕಾಲದ್ರವ್ಯವಿಲ್ಲವೆಂದು ಮನ್ನಿಸಿದರೆ ಇತರ ಧರ್ಮಾದಿ ದ್ರವ್ಯಗಳು ನಿಮಿತ್ತರೂಪವಿವೆಯೆಂಬುದರದು ಕೂಡ ನಿಷೇಧವಾಗುವುದು. ಹೀಗೆ ನಾಲ್ಕೂ ದ್ರವ್ಯಗಳ ನಿಷೇಧವಾದರೆ ಜೀವ-ಪುದ್ಗಲಗಳು ಕೂಡ ಮನ್ನಣೆಯಲ್ಲಿ ಉಳಿಯುವುದಿಲ್ಲ . ಪರ ಇದೆಯೆಂದು ತಿಳಿದುಕೊಳ್ಳುವ ಸಾಮರ್ಥ್ಯವುಳ್ಳವನು ಸ್ವಯಂ ಇದ್ದಾನೆ ಇವನದು ಕೂಡ ನಿಷೇಧವಾಗುವುದು. ಯಾವ ಪ್ರಕಾರ ಮನೆಯ ಮಧ್ಯದಲ್ಲಿ ಗಾಜಿನ ದೊಡ್ಡ ಲಾಂದ್ರ ಕಟ್ಟಿರುತ್ತದೆ ಅದರಲ್ಲಿ ಎಲ್ಲವೂ ಕಂಡುಬರುತ್ತವೆ. ಅವುಗಳ ನಿಷೇಧ ಮಾಡಿದರೆ ಲಾಂದ್ರದ ನಿಷೇಧ ಆಗುತ್ತದೆ ಅದೇ ಪ್ರಕಾರ ಆತ್ಮನ ಜ್ಞಾನದಲ್ಲಿ ಜ್ಞೇಯ ಪದಾರ್ಥಗಳು ತಿಳಿದುಬರುತ್ತವೆ, ಆ ಜ್ಞೇಯಗಳ ನಿಷೇಧ ಮಾಡಿದರೆ ಜ್ಞಾನದ ನಿಷೇಧವಾಗುತ್ತದೆ.

ಹೀಗೆ ನಿಶ್ಚಯಕಾಲದ ವರ್ಣನೆ ಮಾಡಲಾಯಿತು, ಈಗ ವ್ಯವಹಾರ ಕಾಲದ ವರ್ಣನೆ ಮಾಡುತ್ತಾರೆ,-

**ಸಮಓ ಣಿಮಿಸೋ ಕಟ್ಠಾ ಕಲಾ ಯ ಣಾಲೀ ತದೋ ದಿವಾರತ್ತೀ ।**
**ಮಾಸೋದುಅಯಣಸಂವಚ್ಛರೋ ತ್ತಿ ಕಾಲೋ ಪರಾಯತ್ತೋ ॥೨೫॥**

**ಯಾವ ಸಮಯ, ನಿಮಿಷ,ಕಾಷ್ಟ,ಕಲಾ, ಘಡಿ, ಅಹೋರಾತ್ರ, ಮಾಸವದರಂತೆ ।**
**ಭಾವಿಸೆ ಋತು, ಅಯನ, ವರ್ಷಾದಿಯಂಥ ಕಾಲವಿದೆಯದು ಪರಾಶ್ರಿತವಿದೆ ॥೨೫॥**

**ಅರ್ಥ :-** ಕಾಲದ್ರವ್ಯದ ಒಂದು ಸಮಯದ ಪರ್ಯಾಯವು ಅದು ವ್ಯವಹಾರಕಾಲವಿದೆ. ಆದಾಗ್ಯೂ ಕೂಡ ಜೀವ-ಪುದ್ಗಲದ ಹೊಸ ಹಳೆಯರೂಪ ಪರಿಣಾಮದಿಂದ ಅದು ಉತ್ಪನ್ನವಾಗುತ್ತದೆಯೆಂದು ಹೇಳಲಾಗಿದೆ.

ಬೇರೆ ದ್ರವ್ಯದಿಂದ ಕಾಲದ್ರವ್ಯದ ಪರ್ಯಾಯವಾಗುತ್ತದೆಯೆಂದು ಹೇಳುವುದು ಅದು ಪರಾಧೀನವಿದೆ ಎಂದರೆ ಅದರಲ್ಲಿ ಪರದ ಅಪೇಕ್ಷೆಯಿದೆ ಅದಕ್ಕಾಗಿ ವ್ಯವಹಾರವಿದೆ ಅದನ್ನೀಗ ಹೇಳಲಾಗುತ್ತಿದೆ. ಒಂದು ಪರಮಾಣುವು ಮಂದಗತಿಯಿಂದ ಅತ್ಯಂತ ಚಿಕ್ಕಕಾಲದಲ್ಲಿ ಬೇರೆ ಪ್ರದೇಶಕ್ಕೆ ಹೋಗುವುದನ್ನು ಸಮಯವೆಂದು ಹೇಳಲಾಗುತ್ತದೆ. ಇದು ವ್ಯವಹಾರಪರ್ಯಾಯದ ಅಳತೆಯಿದೆ. ಮತ್ತು ನಿಶ್ಚಯಕಾಲದ್ರವ್ಯದ ಪರ್ಯಾಯವಿದೆ

ಕಾಲದ ಅಧಿಕಾರ ನಡೆಯುತ್ತಿದೆ. ಐದು ಪದಾರ್ಥಗಳು ಅಸ್ತಿಕಾಯವಿವೆ. ಮತ್ತು ಆರನೆಯದು ಕಾಲನಾಮದ ಪದಾರ್ಥವಿದೆ, ಆ ಕಾಲವು ಕೂಡ ಒಂದು ಸ್ವತಂತ್ರ ಪದಾರ್ಥವಿದೆ. ಯಾವಪ್ರಕಾರ ಜೀವವು ವಸ್ತುವಿದೆ ಅದೇ ಪ್ರಕಾರ ಕಾಲವು ಕೂಡ ಮೂಲವಸ್ತುವಿದೆ. ಆಚಾರ್ಯದೇವರು ಕಾಲದ ವರ್ಣನೆ ಮಾಡಿ ಕೊನೆಗೆ ಖರತರ ದೃಷ್ಟಿಯಿಂದ ಎಂದರೆ ಸೂಕ್ಷ್ಮದೃಷ್ಟಿಯಿಂದ ಈ ಕಾಲವನ್ನು ತಿಳಿದುಕೊಳ್ಳಬೇಕೆಂದು ಹೇಳಿದ್ದಾರೆ.

ಆತ್ಮನು ಅನಂತಜ್ಞಾನಾದಿ ಸ್ವಭಾವದಿಂದ ತ್ರಿಕಾಲವಿದ್ದಾನೆ. ಚಿದಾನಂದಮೂರ್ತಿಯಾದ ಆತ್ಮನು ಏಕಕಾಲಸ್ವರೂಪ ಅಭೇದನಿದ್ದಾನೆ. ಏಕಕಾಲದಲ್ಲಿ ಅಭೇದ ಪರಿಪೂರ್ಣದ್ರವ್ಯವನ್ನು ತಿಳಿದುಕೊಳ್ಳುವಲ್ಲಿ ಸ್ವಕಾಲ ಪ್ರಕಟವಾಗುವುದು ಮತ್ತು ಅದರಲ್ಲಿ ನಿಮಿತ್ತರೂಪ ಪರಕಾಲದ ಅಸ್ತಿತ್ವವಿದೆಯೆಂದು ಕೂಡ ಅಲ್ಲಿ ಪ್ರತೀತಿಯಾಗಿ ಹೋಗುವುದು. ಯಾವನಿಗೆ ಚಿದಾನಂದಾತ್ಮನ ಅರಿವಿಲ್ಲ ಅವನಿಗಂತೂ ಸ್ವಭಾವದ ಅರಿವಿಲ್ಲ ಮತ್ತು ಅಂಥ ನಿಮಿತ್ತರೂಪ ಕಾಲದ್ರವ್ಯದ್ದೂ ಕೂಡ ಅವನಿಗೆ ಯಥಾರ್ಥ ಅರಿವಿಲ್ಲ , ಆತ್ಮನು ಚಿದಾನಂದ ಏಕಕಾಲಸ್ವಭಾವಿಯಿದ್ದಾನೆ ಎಂದರೆ ಅಭೇದವಾಗಿ ಯಾವಾಗಲೂ ಏಕರೂಪನಿದ್ದಾನೆ. ಇಂಥ ಸ್ವಕಾಲಸಹಿತ ದ್ರವ್ಯದ ಅರಿವಾದರೆ ನಿಮಿತ್ತರೂಪದಿಂದ ಪರಕಾಲ ಎಂದರೆ ಕಾಲದ್ರವ್ಯದ್ದೂ ಕೂಡ ಜ್ಞಾನದಲ್ಲಿ ಸ್ವೀಕಾರವಾಗಿ ಹೋಗುವುದು ಜ್ಞಾನವು ಸ್ವಪರಗಳೆರಡನ್ನು ತಿಳಿಯುತ್ತದೆ ತನ್ನ ಸ್ವಕಾಲ ಮತ್ತು ಅದರಲ್ಲಿ ನಿಮಿತ್ತ ರೂಪವಾದ ಪರಕಾಲ ಅವೆರಡನ್ನು ಜ್ಞಾನವು ತಿಳಿಯುತ್ತದೆ. ನಾನು ಅಖಂಡಜ್ಞಾಯಕ ಚಿದಾನಂದನಿದ್ದೇನೆಂಬ ಉಪಾದೇಯ ಬುದ್ಧಿಯಾದರೆ ಜ್ಞಾನದ ಜ್ಞೇಯರೂಪವಾದ ಆರು ದ್ರವ್ಯಗಳ ಸ್ವೀಕೃತಿಯಾಗಿ ಹೋಗುವುದು. ಎಲ್ಲಿ ನಿಶ್ಚಯ ಸ್ವಕಾಲ ತಿಳಿಯಲಾಗುತ್ತದೆ ಅಲ್ಲಿ ಉಳಿದ ಕಾಲ ಪದಾರ್ಥಗಳದ್ದೂ ಕೂಡ ಅರಿವುಂಟಾಗಲೇಬೇಕಾಗುವುದು.ಕಾಲವನ್ನು ಮನ್ನಿಸದಿದ್ದರೆ ನಿಜವಾಗಿ ತನ್ನ ಜ್ಞಾನದ ಪೂರ್ಣತೆಯೇ ಸಿದ್ಧವಾಗುವುದಿಲ್ಲ. ಸ್ವಕಾಲವನ್ನು ತಿಳಿದರೆ ಪರಕಾಲದ ಅರಿವು ಕೂಡ ಜೊತೆಯಲ್ಲೇ ಬಂದುಬಿಡುತ್ತದೆ. ಈ ಪ್ರಕಾರವಾಗಿ ಜ್ಞಾನದ್ದು ಸ್ವ-ಪರ ಪ್ರಕಾಶಕ ಸ್ವಭಾವವಿದೆ.

ಕಾಲದ್ರವ್ಯವು ಏಕಪ್ರದೇಶಿಯೇ ಇದೆ ಒಂದು 'ಸಮಯ'ವುಅದು ಕಾಲದ್ರವ್ಯದಪರ್ಯಾಯವಿದೆ. ಒಂದು ಪರಮಾಣುವು ಒಂದು ಪ್ರದೇಶದಿಂದ ಇನ್ನೊಂದು ಪ್ರದೇಶಕ್ಕೆ ಮಂದಗತಿಯಿಂದ ಹೋಗುವಷ್ಟು ವೇಳೆಯಲ್ಲಿ ಆ ಪ್ರದೇಶದಲ್ಲಿ ಕಾಲದ ಪರ್ಯಾಯವಾಗಿ ಹೋಗುತ್ತದೆ. ಮತ್ತು ಪರ್ಯಾಯವನ್ನು ಧಾರಣ ಮಾಡುವ ದ್ರವ್ಯಕೂಡ

ಅಷ್ಟೇ ಕ್ಷೇತ್ರದಲ್ಲಿದೆ. ಎಷ್ಟು ಕ್ಷೇತ್ರದಲ್ಲಿ ಪರ್ಯಾಯದ ಸಿದ್ಧಿಯಾಗಿ ಬಿಡುತ್ತದೆ ಅಷ್ಟೇ ಕ್ಷೇತ್ರದಲ್ಲಿ ದ್ರವ್ಯವಿರುತ್ತದೆ, ಎಂದರೆ ಕಾಲದ್ರವ್ಯವು ಒಂದು ಪ್ರದೇಶದಲ್ಲಿ ಇರುತ್ತದೆ. ಪರ್ಯಾಯ ಮತ್ತು ಪರ್ಯಾಯವುಳ್ಳ ದ್ರವ್ಯದ ಕ್ಷೇತ್ರವು ಬೇರೆಯಿಲ್ಲ.

ಆರು ದ್ರವ್ಯಗಳನ್ನು ತಿಳಿದುಕೊಳ್ಳುವಂಥದು ಜ್ಞಾನಪರ್ಯಾಯದ ಸಾಮರ್ಥ್ಯವಿದೆ. ಆರು ದ್ರವ್ಯಗಳನ್ನೇ ಮನ್ನಿಸದವನು ಆರು ದ್ರವ್ಯಗಳನ್ನು ತಿಳಿದುಕೊಳ್ಳುವಂಥ ಜ್ಞಾನವನ್ನು ಕೂಡ ಮನ್ನಿಸುವ ಸಾಧ್ಯತೆಯಿಲ್ಲ . ಜ್ಞಾನದ ಒಂದು ಸಮಯದ ಪರ್ಯಾಯವು ದ್ರವ್ಯವನ್ನು ನಿರ್ವಿಕಲ್ಪವಾಗಿ ತಿಳಿದುಕೊಳ್ಳುವಂಥದು ಅದರ ಸಾಮರ್ಥ್ಯವಿದೆ. ಎದುರಿಗೆ ಆರು ದ್ರವ್ಯಗಳು ಜ್ಞೇಯರೂಪದಿಂದ ನಿಮಿತ್ತವಿವೆ, ಆದರೆ ಆ ಜ್ಞೇಯಗಳ ಕಾರಣದಿಂದ ಜ್ಞಾನವಾಗುವುದಿಲ್ಲ .

ಸಮಯ, ನಿಮಿಷ, ಗಳಿಗೆ, ದಿವಸ ಮೊದಲಾದವು ಕಾಲದ ಅಳತೆಯಿವೆ. ಅವು ಕಾಲದ್ರವ್ಯದ ವ್ಯವಹಾರ ಪರ್ಯಾಯವಿವೆ. ಮತ್ತು ಆ ವ್ಯವಹಾರ ಪರ್ಯಾಯದ ಅಳತೆ ಪರದ್ರವ್ಯದ ಅಪೇಕ್ಷೆಯಿಂದ ಆಗುತ್ತಿರುವುದರಿಂದ ಆ ವ್ಯವಹಾರಕಾಲವನ್ನು ಪರಾಧೀನವೆಂದು ಹೇಳಲಾಗಿದೆ ವ್ಯವಹಾರಕಾಲದ ಅಳತೆಯು ಈ ಕೆಳಗಿನಂತಿದೆ.

ಮಂದಗತಿಯಿಂದ ಪರಿಣಮಿಸಿದ ಪರಮಾಣುವು ಒಂದು ಪ್ರದೇಶದಿಂದ ಇನ್ನೊಂದು ಪ್ರದೇಶಕ್ಕೆ ಹೋಗುವಷ್ಟು ವೇಳೆಯನ್ನು ಸಮಯವೆಂದು ಹೇಳುತ್ತಾರೆ. ಅಸಂಖ್ಯಾತ ಸಮಯಗಳು ಕಳೆದು ಹೋದ ನಂತರ ಒಂದು ನಿಮೇಷವಾಗುತ್ತದೆ, ಹದಿನೈದು ನಿಮೇಷಕ್ಕೆ ಒಂದು ಕಾಷ್ಟವಾಗುತ್ತದೆ, ಮತ್ತು ಇಪ್ಪತ್ತು ಕಾಷ್ಟಗಳಾದಮೇಲೆ ಒಂದು ಕಲಾ ಆಗುತ್ತದೆ, ಮತ್ತು ಇಪ್ಪತ್ತು ಕಲಾಗಿಂತ ಸ್ವಲ್ಪ ಹೆಚ್ಚಾದಾಗ ಒಂದು ನಾಲೀ ಅಥವಾ ಗಳಿಗೆಯಾಗುತ್ತದೆ ಅದನ್ನು ಗಳಿಗೆ ಬಟ್ಟಲು ಅಥವಾ ಗಡಿಯಾರದಿಂದ ತಿಳಿಯಬಹುದಾಗಿದೆ. ಇಂಥ ಎರಡು ಗಳಿಗೆಯಾದಾಗ ಒಂದು ಮುಹೂರ್ತವಾಗುತ್ತವೆ ಯಾವಾಗ ಮೂವತ್ತು ಮುಹೂರ್ತಗಳಾಗುತ್ತವೆ ಆಗ ಒಂದು ದಿವಸ ಮತ್ತು ರಾತ್ರಿಯಾಗುತ್ತದೆ, ಇದನ್ನು ಸೂರ್ಯನ ಗತಿಯಿಂದ ತಿಳಿಯಬಹುದಾಗಿದೆ ಇನ್ನು ಮೂವತ್ತು ದಿವಸಕ್ಕೆ ಒಂದು ತಿಂಗಳು ಎರಡು ತಿಂಗಳಿಗೊಂದು ಋತು. ಮೂರು ಋತುವಿಗೊಂದು ಅಯನ, ಎರಡು ಅಯನಕ್ಕೊಂದು ವರುಷವಾಗುತ್ತದೆ. ಮತ್ತು ಎಲ್ಲಿಯವರೆಗೆ ವರ್ಷದ ಎಣಿಕೆ ಮಾಡುವ ಸಾಧ್ಯತೆಯಿದೆ ಅಲ್ಲಿಯವರೆಗೆ ಸಂಖ್ಯಾತ ಕಾಲವೆಂದು ಹೇಳಲಾಗುತ್ತದೆ, ಅನಂತರ ಪಲ್ಯ, ಸಾಗರ ಮೊದಲಾದ ಅಸಂಖ್ಯಾತ ಅಥವಾ ಅನಂತಕಾಲವೆಂದು ತಿಳಿದುಕೊಳ್ಳಬೇಕು.

ಈ ಪ್ರಕಾರ ವ್ಯವಹಾರ ಕಾಲವನ್ನು ದ್ರವ್ಯದ ಪರಿಣಮನದ ಮರ್ಯಾದೆಯಿಂದ ಎಣಿಕೆ ಮಾಡಲಾಗುತ್ತದೆ' ಮೂಲದ್ರವ್ಯವು ನಿಶ್ಚಯ ಕಾಲವಿದೆ. ನಿಶ್ಚಯ ಕಾಲದ್ರವ್ಯವು ತ್ರಿಕಾಲವಿದೆ, ಅದರಲ್ಲಿ ಪರದ ಅಪೇಕ್ಷೆಯಿಲ್ಲ, ಅದು ಸ್ವಾಧೀನವಿದೆ ಅದು ಮೂಲ ಪದಾರ್ಥವಿದೆ.

ಣತ್ಥಿ ಚಿರಂ ವಾ ಖಿಪ್ಪ ಮತ್ತಾರಹಿದಂ ತು ಸಾ ವಿ ಖಲು ಮತ್ತಾ ।
ಪೋಗ್ಗಲದವ್ವೇಣ ವಿಣಾ ತಮ್ಹಾ ಕಾಲೋ ಪಡುಚ್ಚಭವೋ ॥೨೬॥

**'ಚಿರ'ವಿಲ್ಲವೆ 'ಕ್ಷಿಪ್ರ'ದಂಥ ಜ್ಞಾನವು ಪರಿಮಾಣವಿಲ್ಲದೆಯಾಗದು ಮತ್ತೆ ।**
**ಪರಿಮಾಣ ಪುದ್ಗಲವಿಲ್ಲದಾಗದದರಿಂ ಕಾಲ ಆಶ್ರಯದಿಂದ ಪುಟ್ಟುವುದು ॥೨೬॥**

**ಅರ್ಥ :-** ಕಾಲದ ಮರ್ಯಾದೆಯಿಲ್ಲದೆ ಸ್ವಲ್ಪಕಾಲ-ಹೆಚ್ಚುಕಾಲವೆಂದು ಹೇಳುವ ಸಾಧ್ಯತೆಯಿಲ್ಲ . ಅದಕ್ಕಾಗಿ ಕಾಲಮರ್ಯಾದೆಯ ಕಥನ ಮಾಡುವುದು ಆವಶ್ಯಕವಿದೆ, ಅದರಂತೆ ಆ ಕಾಲದ ಮರ್ಯಾದೆಯು ಪುದ್ಗಲದ್ರವ್ಯವಿಲ್ಲದೆ ನಿಶ್ಚಿತವಾಗುವುದಿಲ್ಲ ಎಂದರೆ ಪುದ್ಗಲದ ಮಂದಗತಿ, ಸೂರ್ಯನ ನಡೆ ಮೊದಲಾದ ಪ್ರಕಾರದ ಯಾವ ಪುದ್ಗಲ ಪರಿಣಾಮವಿದೆ ಅದರಿಂದ ಕಾಲದ ಮರ್ಯಾದೆಯಾಗುವ ಸಾಧ್ಯತೆಯಿದೆ. ಆ ಕಾರಣದಿಂದ ವ್ಯವಹಾರಕಾಲದ

ಉತ್ಪತ್ತಿಯು ಪುದ್ಗಲದ್ರವ್ಯದ ನಿಮಿತ್ತದಿಂದ ಆಗುತ್ತದೆಯೆಂದು ಹೇಳಲಾಗುತ್ತದೆ.

ಜಿನಮತದಲ್ಲಿ ಸರ್ವಜ್ಞರು ಆರು ದ್ರವ್ಯಗಳನ್ನು ಹೇಳಿದ್ದಾರೆ. ಈ ದ್ರವ್ಯಗಳಿಲ್ಲದೆ ಲೋಕದ ಸಿದ್ಧಿಯಾಗುವುದಿಲ್ಲ. ಜಗತ್ತಿನಲ್ಲಿ ನಿಶ್ಚಯಕಾಲದ್ರವ್ಯವಿಲ್ಲದೆ ಜೀವ-ಪುದ್ಗಲದ ಪರಿಣಮನವು ಸಿದ್ಧವಾಗುವ ಸಾಧ್ಯತೆಯಿಲ್ಲ. ಮತ್ತು ಜೀವ-ಪುದ್ಗಲಗಳಲ್ಲಿ ಹೊಸ-ಹಳೆಯ ಪರ್ಯಾಯರೂಪ ಪರಿಣಮನವಿಲ್ಲದೆ ವ್ಯವಹಾರ ಕಾಲದ ಸಿದ್ಧಿಯಾಗುವುದಿಲ್ಲ. ಅದಕ್ಕಾಗಿ ಆಚಾರ್ಯದೇವರು ತಮ್ಮ ಜ್ಞಾನದಲ್ಲಿ ಸೂಕ್ಷ್ಮದೃಷ್ಟಿಯ ಮುಖಾಂತರ ಯುಕ್ತಿ ಮೊದಲಾದವುಗಳಿಂದ ನಿಶ್ಚಿತ ಮಾಡಿ ಈ ಕಾಲದ್ರವ್ಯವನ್ನು ತಿಳಿದುಕೊಳ್ಳಬೇಕೆಂದು ಹೇಳಿದ್ದಾರೆ. ಕಾಲದ್ರವ್ಯವನ್ನು ತಿಳಿದುಕೊಳ್ಳಲು ಹೇಳಿದ್ದಾರೆ, ಆದರೆ ಉಪಾದೇಯರೂಪವಂತೂ ತನ್ನ ಚಿದಾನಂದ ಒಂದು ಜ್ಞಾನಸ್ವಭಾವವೇ ಇದೆ.

ಕ್ಷಣಿಕಗಳಾದ ರಾಗ-ದ್ವೇಷ, ಪುಣ್ಯ-ಪಾಪಗಳಷ್ಟೇ ತನ್ನನ್ನು ಮನ್ನಿಸುತ್ತಾನೆ ಆಗಂತೂ ಅವನಿಗೆ ಸ್ವಕಾಲದ್ದೂ ಕೂಡ ಅರಿವು ಆಗುವುದಿಲ್ಲ, ಮತ್ತು ಪರಕಾಲದ ಜ್ಞಾನ ಕೂಡ ಆಗುವುದಿಲ್ಲ. ಯಾವಾಗ ಅಂತರ್ಮುಖನಾಗಿ ಚಿದಾನಂದ ಸ್ವಭಾವದ ಅರಿವಾದೊಡನೆ ಸ್ವಕಾಲದ ಪುರುಷಾರ್ಥ ಪ್ರಕಟವಾಗುವುದು, ಅಲ್ಲಿ ಆ ಸ್ವಕಾಲದಲ್ಲಿ ನಿಮಿತ್ತರೂಪವಾದಂಥ ಪರಕಾಲವನ್ನು ಕೂಡ ತಿಳಿಯುತ್ತಾನೆ. ಅದಕ್ಕಾಗಿ ಯಾರಿಗೆ ವೀತರಾಗದ ಆಜ್ಞೆಯನ್ನು ಮನ್ನಿಸುವುದಿದೆ ಅವನು ಸೂಕ್ಷ್ಮದೃಷ್ಟಿಯಿಂದ ಜಗತ್ತಿನಲ್ಲಿ ಅಸಂಖ್ಯ ಕಾಲಾಣುದ್ರವ್ಯಗಳಿವೆಯೆಂಬುದನ್ನು ನಿಶ್ಚಿತ ಮಾಡಬೇಕಾಗುವುದು.

ಈ ಪ್ರಕಾರ ಆರು ದ್ರವ್ಯಗಳ ಸಾಮಾನ್ಯ ವರ್ಣನೆಯನ್ನು ಮಾಡಲಾಯಿತು.

ಈಗ ಜೀವದ್ರವ್ಯದ ವಿಶೇಷ ವರ್ಣನೆ ಮಾಡುತ್ತಾರೆ-ಸಂಸಾರೀ ಜೀವದಸ್ವರೂಪವು ಉಪಾಧಿರಹಿತ ಅದರಂತೆ ಉಪಾಧಿಸಹಿತವಾಗಿ ಯಾವ ರೀತಿಯಾಗಿರುತ್ತದೆಂಬುದನ್ನು ನಯವಿಲಾಸದಿಂದ ವರ್ಣಿಸುತ್ತಾರೆ,-

ಜೀವೋ ತ್ತಿ ಹವದಿ ಚೇದಾ ಉವಓಗವಿಸೇಸಿದೋ ಪಹೂ ಕತ್ತಾ ।
ಭೋತ್ತಾ ಯ ದೇಹಮೇತ್ತೋ ಣ ಹಿ ಮುತ್ತೋ ಕಮ್ಮಸಂಜುತ್ತೋ ॥೨೭॥

**ಆತ್ಮಜೀವವಿದೆ, ಚೇತಯಿತವಿದೆ, ಉಪಯೋಗಲಕ್ಷಿತವಿದೆ, ಪ್ರಭುವಿದೆ ।**
**ಕರ್ತೃ-ಭೋಕ್ತೃವಿದೆ ಶರೀರ ಪ್ರಮಾಣವಿದೆ ಅಮೂರ್ತಮೇಣ್ಕರ್ಮಯುಕ್ತವಿದೆ ॥೨೭॥**

ನಿಶ್ಚಯದಿಂದ ಆತ್ಮನು ತ್ರಿಕಾಲ ಚೈತನ್ಯಪ್ರಾಣದಿಂದ ಅಭೇದ ವಸ್ತುವಿದ್ದಾನೆ, ಯಾವಾಗಲೂ ಚೈತನ್ಯಮಯನಿದ್ದಾನೆ. ಆತ್ಮನಂತೂ ತ್ರಿಕಾಲ ಚೈತನ್ಯಪ್ರಾಣದಿಂದ ಜೀವಿಸುತ್ತಿದ್ದಾನೆ. ಇಂದ್ರಿಯಗಳು ಅಥವಾ ಮನಸ್ಸು ಅವು ಆತ್ಮನ ಸ್ವರೂಪವಲ್ಲ. ಅನ್ನವು ಆತ್ಮನ ಪ್ರಾಣವಲ್ಲ, ಆತ್ಮನಿಗಂತೂ ಚೈತನ್ಯಪ್ರಾಣವಿದೆ. ಅದರಿಂದ ಆತ್ಮನೆಂದೂ ಭಿನ್ನನಿಲ್ಲ.

ಶುದ್ಧನಿಶ್ಚಯದಿಂದಂತೂ ತನ್ನ ಅಖಂಡ ಚೈತನ್ಯ ಪ್ರಾಣದಿಂದ ಜೀವಿಸುತ್ತಾನೆ.

ಅಶುದ್ಧ ನಿಶ್ಚಯದಿಂದ ಕ್ಷಯೋಪಶಮಭಾವರೂಪ ಪ್ರಾಣದಿಂದ ಜೀವಿಸುತ್ತಾನೆ.

ಅಸದ್ಭೂತ ಉಪಚರಿತ ವ್ಯವಹಾರದಿಂದ ಹತ್ತು ಪ್ರಾಣಗಳಿಂದ ಜೀವಿಸುತ್ತಾನೆ.

ಹೀಗೆ ಜೀವನಾಮದ ಪದಾರ್ಥವಿದೆ.

ಜೀವಪದಾರ್ಥವು ನಿಶ್ಚಯವಾದ ಚೇತನಾಸ್ವಭಾವದಿಂದ ಅಭೇದವಿದೆ ; ಗುಣ ಮತ್ತು ಗುಣೀ ಇವೆರಡೂ ಅಭೇದವಿದೆ ; ಚೇತನಾಗುಣವಿಲ್ಲದೆ ಆತ್ಮನೆಂದೂ ಉಳಿದೇ ಇಲ್ಲ. ಅಜ್ಞಾನಿಗೆ ನನಗೆ ರಾಗಾದಿಯಿಲ್ಲದೆ

ಶರೀರಾದಿಯಿಲ್ಲದೆ-ಹಣವಿಲ್ಲದೆ ನಡೆಯುವುದಿಲ್ಲವೆನಿಸುತ್ತದೆ, ಆದರೆ ಅನಂತಕಾಲದಿಂದ ಚೇತನಾದ ಮುಖಾಂತರವೇ ಆತ್ಮನು ಬದುಕಿ ಉಳಿದಿದ್ದಾನೆಂಬುದನ್ನು ಅವನು ತಿಳಿಯುವುದಿಲ್ಲ. ಚೇತನಾಗುಣದ ಭೇದ ಮಾಡುವುದು ಅದು ವ್ಯವಹಾರವಿದೆ, ಮತ್ತು ಅಭೇದದಲ್ಲಂತೂ ಚೇತನಾ ಮತ್ತು ಆತ್ಮನಲ್ಲಿ ಗುಣ-ಗುಣಿಯ ಭೇದವಿಲ್ಲ ; ಗುಣ-ಗುಣಿಯ ಭೇದ ಕೂಡ ವ್ಯವಹಾರವಿದೆ. ಚೇತನಾಗುಣದಿಂದ ಅಭೇದ ಆತ್ಮನ ಜ್ಞಾನಮಾಡಿಕೊಳ್ಳುವುದರ ಹೆಸರು ಸಮ್ಯಗ್ದರ್ಶನವಿದೆ ಮತ್ತು ಸಮ್ಯಗ್ಜ್ಞಾನವಿದೆ ರಾಗಾದಿ ಭಾವಗಳಂತೂ ಉಪಾಧಿಯಿವೆ. ಅವು ಆತ್ಮನ ನಿಜವಾದ ಸ್ವರೂಪವಲ್ಲ. ಉಪಯೋಗರೂಪಪರಿಣಾಮದಿಂದ ಆ ಆತ್ಮನು ತಿಳಿದುಬರುತ್ತಾನೆ. ಇದರ ಹೊರತು ಬಾಹ್ಯ ಕಾರಣಗಳಿಂದ ಅವನು ತಿಳಿದುಬರುವುದಿಲ್ಲ. ಇಲ್ಲಿ ಚೇತನಾವನ್ನು ಗುಣವೆಂದು ಹೇಳಿದೆ ಮತ್ತು ಉಪಯೋಗವನ್ನು ಪರ್ಯಾಯವೆಂದು ಹೇಳಲಾಗಿದೆ.

**ಪ್ರಶ್ನೆ :-** ಚೇತನಾ ಮತ್ತು ಉಪಯೋಗದಲ್ಲಿ ಏನು ಅಂತರವಿದೆ ?

**ಉತ್ತರ :-** ಆತ್ಮವು ತ್ರಿಕಾಲಿದ್ರವ್ಯವಿದ್ದರೆ ಚೇತನಾವು ಅವನ ತ್ರಿಕಾಲಿ ಗುಣವಿದೆ ಮತ್ತು ಉಪಯೋಗವು ಅವನ ಪರ್ಯಾಯವಿದೆ. ಚೇತನಾದ ಪರಿಣಾಮವನ್ನು ಉಪಯೋಗವೆಂದು ಹೇಳಿದೆ. ಉಪಯೋಗವು ಅದು ಪರಿಣತಿರೂಪವಿದೆ. ಚೇತನಾ ಎಂದರೆ ಇಲ್ಲಿ ಕರ್ಮ-ಕರ್ಮಫಲ ಮೊದಲಾದ ಚೇತನಾದ ಮಾತು ಇಲ್ಲ. ಆ ಮೂರು ಪ್ರಕಾರಗಳಂತೂ ಪರ್ಯಾಯವಿದೆ. ಮತ್ತು ಈ ಚೇತನಾವಂತೂ ತ್ರಿಕಾಲಿಯಿದೆ, ಇನ್ನು ಚೇತನಾದ ಪರ್ಯಾಯವು ಅದು ಉಪಯೋಗವಿದೆ.

ಇನ್ನು ಆತ್ಮನು ಪ್ರಭು ಹೇಗಿದ್ದಾನೆಂದರೆ-ಆಸ್ರವ-ನಿರ್ಜರೆ-ಬಂಧ ಅದರಂತೆ ಮೋಕ್ಷ ಈ ಪರ್ಯಾಯಗಳನ್ನು ಮಾಡುವಲ್ಲಿ ತಾನೇ ಪ್ರಭುವಿದ್ದಾನೆ. ಕರ್ಮದ ಕಾರಣದಿಂದ ಆ ಆಸ್ರವ, ಬಂಧ ಮೊದಲಾದವು ಆಗುತ್ತವೆಂದಿಲ್ಲ, ಆ ಪರ್ಯಾಯಗಳ ಪರಿಣಮನದಲ್ಲಿ ತಾನೇ ಪ್ರಭುವಿದ್ದಾನೆ. ಯಾವ ಪ್ರಕಾರ ಕುದುರೆಯ ಮೇಲೆ ಕುಳಿತುಕೊಂಡ ಮನುಷ್ಯನಿಗೆ ಕುದುರೆಯು ನಡೆದಂತೆ ಗತಿ ಮಾಡಬೇಕಾಗುತ್ತದೆ ಅದೇ ಪ್ರಕಾರ ಕರ್ಮದ ಉದಯವಿದ್ದಂತೆ ಆತ್ಮನು ಪರಿಣಮಿಸುತ್ತಾನೆಂದು ಅಜ್ಞಾನಿಯು ಹೇಳುತ್ತಾನೆ. ಈತನ ಮಾತು ಅಸತ್ಯವಿದೆ. ಮನುಷ್ಯನು ಮನುಷ್ಯನ ಯೋಗ್ಯತೆಯಿಂದ ನಡೆಯುತ್ತಾನೆ, ಮತ್ತು ಕುದುರೆ ಕುದುರೆಯಿಂದ ನಡೆಯುತ್ತದೆ. ಯಾರೂ ಯಾರ ಕಾರಣದಿಂದ ನಡೆಯುವುದಿಲ್ಲ, ಆದರೆ ತನ್ನ ಪ್ರಭುತೆಯಿಂದಲೇ ತನ್ನ ಪರ್ಯಾಯದಲ್ಲಿ ಪರಿಣಮಿಸುತ್ತಾನೆ. ತಾನೇ ತನ್ನ ಬಂಧ-ಮೋಕ್ಷ ಪರ್ಯಾಯದಲ್ಲಿ ಸ್ವತಂತ್ರವಾಗಿ ಪರಿಣಮಿಸುತ್ತಾನೆ ಅದಕ್ಕಾಗಿ ಅವನು ಪ್ರಭುವಿದ್ದಾನೆ. ಸಮಯಸಾರದ ೪೭ ಶಕ್ತಿಗಳಲ್ಲಿ ಯಾವ ಪ್ರಭುತ್ವ ಶಕ್ತಿಯ ವರ್ಣನೆಯಿದೆ ಅದಂತೂ ತ್ರಿಕಾಲೀ ಸ್ವಭಾವದ ಮಾತು ಇದೆ, ಮತ್ತು ಇಲ್ಲಿ ಪರ್ಯಾಯದ ಮಾತು ಇದೆ. ಪರ್ಯಾಯದಲ್ಲಿ ಬಂಧ ಅಥವಾ ಮೋಕ್ಷರೂಪದಿಂದ ಪರಿಣಮಿಸುವಲ್ಲಿ ಆತ್ಮನದೇ ಅಸ್ತಿತ್ವವಿದೆ. ಅದರಿಂದ ಆತ್ಮನೇ ಪ್ರಭುವಿದ್ದಾನೆ. ಅಶುದ್ಧತೆಯ ಕಾರಣ ಯಾರು ? ಆತ್ಮನೇ ತಾನು ತನ್ನ ಪರ್ಯಾಯಗಳ ಪ್ರಭುವಿದ್ದಾನೆ, ಬೇರೆ ಯಾರೂ ತನ್ನ ಪ್ರಭುವಿಲ್ಲ. ಅನಂತ ತೀರ್ಥಂಕರರು ಒಟ್ಟಾಗಿ ಬಂದರೂ ಕೂಡ ಅವನನ್ನು ಆಸ್ರವ-ಬಂಧಗಳಿಂದ ತಡೆಯುವ ಸಾಧ್ಯತೆಯಿಲ್ಲ ಮತ್ತು ಯಾರೂ ದಡ ತಲುಪಿಸುವ-ಕಡೆ ಹಾಯಿಸುವ ಸಾಧ್ಯತೆಯಿಲ್ಲ. ತಾನೇ ಪರ್ಯಾಯದಲ್ಲಿ ವಿಪರೀತ ಅಥವಾ ಸರಳ ಪ್ರಭುವಿದ್ದಾನೆ.

ಶ್ರೀಮಜ್ಜೀ ಹೇಳುತ್ತಾರೆ - 'ಭಗವಂತನು ಪರಿಪೂರ್ಣ ಸರ್ವಗುಣಸಂಪನ್ನನಿದ್ದಾನೆಂದು ಹೇಳಲಾಗುತ್ತದೆ, ಆದಾಗ್ಯೂ ಇವನಲ್ಲೇನು ಅಪಲಕ್ಷಣಗಳು ಕಡಿಮೆಯಿಲ್ಲ.'

ಇಲ್ಲಿ ಬೇರೆ ಪ್ರಭುವಿನ ಮಾತಿಲ್ಲ, ಆದರೆ ಆತ್ಮನದೇ ಮಾತಿದೆ. ಆ ಆತ್ಮನು ತಾನು ಸ್ವಭಾವದಿಂದ ಅನಂತಗುಣಗಳುಳ್ಳ ಪರಮೇಶ್ವರನಿದ್ದರೂ ಕೂಡ ಪರ್ಯಾಯದಲ್ಲಿ ಅವನ ಅಪಲಕ್ಷಣಗಳಿಗೆ ಕೂಡ ಪಾರವಿಲ್ಲ. ಎಂದರೆ ಪರ್ಯಾಯದಲ್ಲಿ ಅಪರಾಧಗಳು ಕೂಡ ಇವೆಯೆಂದು ದ್ರವ್ಯ-ಪರ್ಯಾಯದ ಪ್ರಮಾಣಜ್ಞಾನ ಮಾಡಿಸಿದ್ದಾರೆ. ಅದು ಅಧ್ಯಾತ್ಮ ಗ್ರಂಥವಿದೆ, ಆದಾಗ್ಯೂ ಜ್ಞಾನಪ್ರಧಾನಕಥನವಿರುವುದರಿಂದ ದ್ರವ್ಯ-ಪರ್ಯಾಯಗಳೆರಡರ ಜ್ಞಾನ ಮಾಡಿಸಿದ್ದಾರೆ. ಸಮಯಸಾರದಲ್ಲಂತೂ ದ್ರವ್ಯಸ್ವಭಾವದ ಆಶ್ರಯ ಮಾಡಿಸುವ ಸಲುವಾಗಿ ವಿಕಾರವು ಅದು ಪುದ್ಗಲದ

ಪರಿಣಾಮವಿದೆಯೆಂದು ಹೇಳಲಾಗಿದೆ ಅಲ್ಲಿ ದೃಷ್ಟಿಪ್ರಧಾನವಾದ ಕಥನವಿದೆ. ಮತ್ತು ಇಲ್ಲಿ ಜ್ಞಾನಪ್ರಧಾನವಾದ ಕಥನವಿದೆ. ಎರಡೂ ಕಥನಗಳು ಒಬ್ಬರೇ ಆಚಾರ್ಯದೇವರವಿವೆ ; ಎರಡೂ ಯಥಾರ್ಥವಿವೆ. ಹೇಗಿದೆ ಹಾಗೆ ತಿಳಿದುಕೊಳ್ಳಬೇಕಾಗುವುದು.

ಸಮ್ಯಗ್ದರ್ಶನ ಮಾಡಿಕೊಳ್ಳುವ ಆತ್ಮನು ತಾನು ಪ್ರಭುವಿದ್ದಾನೆ. ಯಾವುದೇ ಕರ್ಮವನ್ನು ಅವನು ಮಾಡುವವನಿಲ್ಲ. ಸಮ್ಯಗ್ದರ್ಶನ-ಸಮ್ಯಕ್ ಚಾರಿತ್ರ-ಅಕಷಾಯಭಾವ ಇವೆಲ್ಲವುಗಳನ್ನು ಮಾಡುವವನು ಪ್ರಭು ತಾನಿದ್ದಾನೆ, ಬೇರಾರು ಇಲ್ಲ. ಸಂವರದಲ್ಲಿ ಕೂಡ ಕರ್ತೃ ತಾನಿದ್ದಾನೆ. ಸಂವರಪರ್ಯಾಯವು ಅದು ಭಾವಕರ್ಮವಿದೆ. ವಿಭಾವವು ಕೂಡ ಭಾವಕರ್ಮವಿದೆ, ಮತ್ತು ಸ್ವಭಾವವು ಕೂಡ ಭಾವಕರ್ಮವಿದೆ. ಸಮ್ಯಗ್ದರ್ಶನ-ಜ್ಞಾನ-ಚಾರಿತ್ರಗಳೆಲ್ಲವೂ ಭಾವಕರ್ಮವಿದೆ, ಅವುಗಳ ಕರ್ತೃ ತಾನಿದ್ದಾನೆ, ತನ್ನ ಶಕ್ತಿಯಿಂದ ಆಗುತ್ತವೆ. ಆದರೆ ಇತರರ ಶಕ್ತಿಯಿಂದ ಆಗುವುದಿಲ್ಲ.

ಸಮ್ಯಗ್ದರ್ಶನವು ದೈವವಶದಿಂದಾಗುತ್ತದೆ, ಮತ್ತು ಈ ಬಾಹ್ಯದ ಚಾರಿತ್ರವು ಪುರುಷಾರ್ಥದಿಂದ ಆಗುತ್ತದೆ, ಈ ಚಾರಿತ್ರದಿಂದ ದೇವಗತಿಯಲ್ಲಿ ಹೋಗಿ ನಂತರ ಭಗವಂತರ ಹತ್ತಿರ ಹೋಗುವುದು, ಅಲ್ಲಿ ಸಮ್ಯಗ್ದರ್ಶನ ಪಡೆಯುವುದೆಂದು ಕೆಲವರು ಹೇಳುತ್ತಾರೆ. ಓಹೋ ! ಎಲ್ಲವೂ ಎಷ್ಟು ವ್ಯತ್ಯಾಸವಾಗಿ ಹೋಗಿದೆ ! ಇಲ್ಲಿಯಂತೂ ನಿನ್ನ ಸಮ್ಯಗ್ದರ್ಶನದ ಕಾರ್ಯವನ್ನು ಮಾಡುವವನು ಪ್ರಭು ನೀನು ಸ್ವಯಂ ಇರುವೆ, ಇತರರದು ಅದರಲ್ಲೇನೂ ಇಲ್ಲವೆಂದು ಹೇಳುತ್ತಾರೆ.

ಒಂದು ಅಂಶದಿಂದ ಹಿಡಿದು ಪೂರ್ಣ ಶುದ್ಧತೆಯವರೆಗಿನ ಸಮಸ್ತ ಕಾರ್ಯದ ಕರ್ತೃವು ಸ್ವಯಂ ಇದ್ದಾನೆ. ತನ್ನ ಪ್ರಭುತೆಯಿಂದ ಅದು ಆಗುತ್ತದೆ. ಅದರಲ್ಲಿ ಬೇರೆ ಯಾರೂ ಮಾಡುವವರಿಲ್ಲ.

ಅಜೀವವು ಪರವಸ್ತುವಿದೆ, ಅದರ ಕರ್ತೃ-ಹರ್ತೃ ಆತ್ಮನಿಲ್ಲ. ಜೀವದಲ್ಲಿ ಯಾವ ಆಸ್ರವ, ಸಂವರ ಮೊದಲಾದ ಪರ್ಯಾಯಗಳಾಗುತ್ತವೆ ಅವುಗಳ ಕರ್ತೃ ಸ್ವಯಂ ಇದ್ದಾನೆ, ತನ್ನ ಪ್ರಭುತೆಯಿಂದ ಅವು ಆಗುತ್ತವೆ, ನಿಶ್ಚಯದಿಂದ ತನ್ನ ಪರ್ಯಾಯದ ಕರ್ತೃ ಸ್ವಯಂ ಪ್ರಭು ಇದ್ದಾನೆ.

ತನ್ನ ಪರ್ಯಾಯದ ಕರ್ತೃ ತಾನು ಆದಾಗ ವ್ಯವಹಾರದಿಂದ ಕರ್ಮದ-ನಿಮಿತ್ತದ ಕರ್ತೃ ತಾನಿದ್ದಾನೆಂದು ಹೇಳಲಾಗುತ್ತದೆ. ಆತ್ಮನು ತನ್ನ ಪುರುಷಾರ್ಥದ ವಿಪರೀತತೆಯಿಂದ ವಿಕಾರೀಭಾವ ಮಾಡುತ್ತಾನೆ, ಆಗ ಜಡಕರ್ಮವು ಅವನ ಕಾರಣದಿಂದ ಬರುತ್ತದೆ ಅದರ ಕರ್ತೃ ಆತ್ಮನೆಂದು ವ್ಯವಹಾರದಿಂದ ಹೇಳಲಾಗುತ್ತದೆ.

ಸಂವರ-ಆತ್ಮನು ಸ್ವಯಂ ಪುಣ್ಯ-ಪಾಪರಹಿತ ತನ್ನಿಂದ ಶುದ್ಧ ಸಮ್ಯಗ್ದರ್ಶನ-ಜ್ಞಾನ-ಚಾರಿತ್ರ ಪರ್ಯಾಯಗಳ ಪ್ರಭು ಆದಾಗ ನಿಮಿತ್ತವು ತಡೆಯುವುದರಿಂದ ಅವನ್ನು ತಡೆದಿದೆಯೆಂದು ಹೇಳಲಾಗುವ ವ್ಯವಹಾರವಿದೆ.

ಆತ್ಮನು ಪುಣ್ಯ-ಪಾಪಗಳಲ್ಲಿ ತಡೆಯುವುದು, ಅವನು ಸ್ವಯಂಭಾವಬಂಧದ ಪ್ರಭುವಿದ್ದಾನೆ. ಆಗ ಜಡಕರ್ಮವು ಕಟ್ಟಿದರೆ ಅವನನ್ನು ಬಂಧನದ ಪ್ರಭುವೆಂದು ನಿಮಿತ್ತದಿಂದ ಹೇಳಲಾಗುತ್ತದೆ.

ನೈಮಿತ್ತಿಕದಲ್ಲಿ ನಿರ್ಜರೆಯಾದಾಗ ನಿಮಿತ್ತಕರ್ಮವು ಹೊರಟುಹೋಯಿತು. ಅಲ್ಲಿ ನಿಮಿತ್ತವನ್ನು ದೂರ ಮಾಡುವ ಪ್ರಭುವೆಂದು ವ್ಯವಹಾರದಿಂದ ಹೇಳುವುದರಲ್ಲಿ ಬರುತ್ತದೆ.

ತಾನು ಆಂತರ್ಯದಲ್ಲಿ ಪುಣ್ಯ-ಪಾಪ ಮೊದಲಾದ ಎಲ್ಲ ಅಶುದ್ಧತೆಯ ನಾಶಮಾಡಿ ಮೋಕ್ಷ ಪಡೆದಾಗ ನಿಮಿತ್ತ ಕರ್ಮವೆಲ್ಲವೂ ಹೊರಟುಹೋಗುವುದರಿಂದ ಅವನನ್ನು ವ್ಯವಹಾರದಿಂದ ಕರ್ಮವನ್ನು ನಾಶಮಾಡಿದನೆಂದು ಹೇಳಲಾಗುತ್ತದೆ. ಒಳಗೆ ತನ್ನ ಭಾವದಲ್ಲಿ ಮೋಕ್ಷ ಪಡೆಯುವ ಪ್ರಭುವಾದನು ಎಂದರೆ ವ್ಯವಹಾರದಿಂದ ನಿಮಿತ್ತ ದೂರಮಾಡುವ ಪ್ರಭುವೆಂದು ಕರೆಯಿಸಿಕೊಳ್ಳುತ್ತಾನೆ.

ಈ ಪ್ರಕಾರ ಒಳಗೆ ತನ್ನ ಭಾವವನ್ನು ಮಾಡುವ ಪ್ರಭುವಾದಾಗ ನಿಮಿತ್ತವನ್ನು-ಕರ್ಮವನ್ನು ದೂರಮಾಡುವ

ಪ್ರಭುವೆಂದು ವ್ಯವಹಾರದಿಂದ ಕರೆಯಿಸಿಕೊಳ್ಳುತ್ತಾನೆ, ಹೀಗೆ ನಿಶ್ಚಯ ವ್ಯವಹಾರದ ಸಂಧಿಯಿದೆ.

ಈ ಗಾಥೆಯಲ್ಲಿ ಆತ್ಮನ ವರ್ಣನೆ ಮಾಡುತ್ತ ಅವನ ಪರ್ಯಾಯ ಹಾಗೂ ನಿಮಿತ್ತ ಹೇಗಿರುತ್ತವೆಂಬುದನ್ನು ಕೂಡ ಹೇಳಿದ್ದಾರೆ. ದ್ರವ್ಯ, ಪರ್ಯಾಯ ಮತ್ತು ನಿಮಿತ್ತದ ಯಥಾರ್ಥಜ್ಞಾನ ಮಾಡಿಕೊಂಡರೆ ನಿಮಿತ್ತ ರಹಿತ ಹಾಗೂ ವಿಕಾರೀಭಾವದಿಂದ ರಹಿತವಾದ ಶುದ್ಧ ಚೈತನ್ಯ ಆತ್ಮನ ಕಡೆಗೆ ಒಲವಾಗುವುದು. ಆತ್ಮನು ಚೇತನ ಗುಣವುಳ್ಳವನಿದ್ದಾನೆ ಉಪಯೋಗವುಳ್ಳವನಿದ್ದಾನೆ ಮತ್ತು ಪ್ರಭುವಿದ್ದಾನೆ. ಹೀಗೆ ಮೂರು ಮಾತು ಆಗಿವೆ. ಈಗ ಕರ್ತೃವಿನ ಮಾತು ಹೇಳುತ್ತಾರೆ.

೪) ಕರ್ತೃ-ಪುದ್ಗಲ ಕರ್ಮಗಳ ನಿಮಿತ್ತ ಪಡೆದು ಯಾವ ಪರಿಣಾಮವಾಗುತ್ತದೆ ಅದರದು ಆತ್ಮನು ನಿಶ್ಚಯದಿಂದ ಕರ್ತೃವಿದ್ದಾನೆ.

ಇಲ್ಲಿ ಶುದ್ಧನಯವನ್ನು ಗೌಣಮಾಡಿ ಮಾತು ಹೇಳಿದೆ. ಪುದ್ಗಲಕರ್ಮಗಳ ನಿಮಿತ್ತದಿಂದ ಆತ್ಮನಲ್ಲಿ ವಿಕಾರಿಪರ್ಯಾಯವಾಗುತ್ತದೆಯೆಂದು ಹೇಳಿದೆ. ಪುದ್ಗಲಕರ್ಮವು ನಿಮಿತ್ತವಿದೆಯೆಂದು ಹೇಳಿದರೆ ನೈಮಿತ್ತಿಕ ಪರ್ಯಾಯವಿದೆಯೆಂಬುದು ಸಿದ್ಧವಾಗುತ್ತದೆ ನಿಮಿತ್ತ ನೈಮಿತ್ತಿಕಭಾವದಲ್ಲಿ ಕಾಲಭೇದವಿಲ್ಲ. ನಿಜವಾಗಿ ತನ್ನ ಪುಣ್ಯ-ಪಾಪದ ಕರ್ತೃವು ಆತ್ಮನಿದ್ದಾನೆಂದು ಹೇಳಿದೆ. ಅದು ಶುದ್ಧನಯವನ್ನು ಗೌಣಮಾಡಿ, ಅಶುದ್ಧ ನಿಶ್ಚಯನಯದ ಮುಖ್ಯತೆಯಿಂದ ಹೇಳಿದೆ. ನಿಮಿತ್ತದ ಕಾರಣದಿಂದ ವಿಕಾರವಾಗುವುದಿಲ್ಲ. ರಾಗ-ದ್ವೇಷಾದಿಗಳ ಪರಿಣಾಮವನ್ನು ಆತ್ಮನು ಸ್ವಯಂ ಮಾಡುತ್ತಾನೆ, ಅದರಲ್ಲಿ ಕರ್ಮವು ನಿಮಿತ್ತಮಾತ್ರವಿದೆ. ಆತ್ಮನು ಸ್ವಭಾವವನ್ನು ಮರೆತು ವಿಕಾರರೂಪದಿಂದಾಗುತ್ತಾನೆ ಆಗ ನಿಮಿತ್ತ ಯಾರಿದ್ದರೆಂಬುದನ್ನು ತಿಳಿಸಿಕೊಟ್ಟಿದ್ದಾರೆ. ಮತ್ತು ವಿಕಾರವು ನಿಮಿತ್ತದ ಲಕ್ಷ್ಯದಿಂದ ಆಯಿತೆಂಬ ಮಾತನ್ನು ಕೂಡ ಜೊತೆಯಲ್ಲೇ ಹೇಳಿದೆ. ಜೀವವು ಯಾವಾಗ ದಯೆ, ದಾನ, ಭಕ್ತಿ ಮೊದಲಾದವುಗಳ ಭಾವ ಮಾಡುತ್ತದೆ ಆಗ ಕರ್ಮದ ಉಪಸ್ಥಿತಿಯಿರುತ್ತದೆ, ಆದರೆ ಆ ಕರ್ಮದ ಕಾರಣದಿಂದ ವಿಕಾರವಾಗುವುದಿಲ್ಲ. ನಿಮಿತ್ತದ ಮೇಲೆ ದೋಷ ಹಾಕುವುದರಿಂದ ದೋಷವು ದೂರವಾಗುವುದಿಲ್ಲ. ತಾನು ತನ್ನ ಅಪರಾಧದಿಂದ ಶುಭಾಶುಭಭಾವದ ಕರ್ತೃವಿದ್ದಾನೆ ಆತ್ಮನ ಅಶುದ್ಧ ಪರಿಣಾಮದ ನಿಮಿತ್ತ ಪಡೆದು ಪುದ್ಗಲಕರ್ಮಗಳಾಗುತ್ತವೆ, ಆತ್ಮನು ವ್ಯವಹಾರದಿಂದ ಅವುಗಳ ಕರ್ತೃವಿದ್ದಾನೆ.

ಆತ್ಮನು ವ್ಯವಹಾರದಿಂದ ಪುದ್ಗಲಕರ್ಮಗಳ ಕರ್ತೃವಿದ್ದಾನೆಂದು ಇಲ್ಲಿ ಹೇಳಿದೆ. ಮತ್ತು ಪಂಚಾಧ್ಯಾಯಿಯಲ್ಲಿ ಆತ್ಮನನ್ನು ಶರೀರ, ಕರ್ಮ ಮೊದಲಾದವುಗಳ ಕರ್ತೃವೆಂದು ಹೇಳುವುದು ನಯಾಭಾಸವಿದೆಯೆಂದು ಹೇಳಿದೆ. ಇಲ್ಲಿಯಂತೂ ಆತ್ಮನು ವಿಕಾರೀಪರ್ಯಾಯಗಳ ಕರ್ತೃವಾಗುತ್ತಾನೆ, ಅದರ ನಿಮಿತ್ತ ಪಡೆದು ಕರ್ಮದ ಪರ್ಯಾಯವಾಗುತ್ತದೆ. ವ್ಯವಹಾರದಿಂದ ಆತ್ಮನು ಇದರ ಕರ್ತೃವಿದ್ದಾನೆಂದು ಹೇಳಿದೆ. ಇಲ್ಲಿಯಂತೂ ನಿಮಿತ್ತ ನೈಮಿತ್ತಿಕ ಸಂಬಂಧವನ್ನು ತಿಳಿಸಿಕೊಡುವುದಿದೆ. ಆತ್ಮನು ರಾಗ ಮಾಡಿದರೆ ಕರ್ಮವನ್ನು ನಿಮಿತ್ತವೆಂದು ಹೇಳಲಾಗಿದೆ. ಮತ್ತು ಹೊಸ ಕರ್ಮಗಳು ಬದ್ಧವಾಗುತ್ತವೆ. ಇದರಲ್ಲಿ ಆ ರಾಗವು ನಿಮಿತ್ತವಿದೆ, ಆದರೆ ನಿಮಿತ್ತದಿಂದ ನೈಮಿತ್ತಿಕಭಾವವಿದೆಯೆಂಬುದಾಗಿಲ್ಲ. ಆತ್ಮನು ವಿಕಾರ ಮಾಡಿದರೆ ಅದರ ನಿಮಿತ್ತ ಪಡೆದು ಜಡಕರ್ಮಗಳಾಗುತ್ತವೆ ವ್ಯವಹಾರದಿಂದ ಆತ್ಮನು ಅವುಗಳ ಕರ್ತೃವಿದ್ದಾನೆಂದು ಇಲ್ಲಿ ಹೇಳಲಾಗಿದೆ.

೫) ಭೋಕ್ತೃ-ಶುಭಾಶುಭಕರ್ಮಗಳ ನಿಮಿತ್ತವಾಗಿ ಆತ್ಮನು ನಿಶ್ಚಯದಿಂದ ಸುಖದುಃಖದ ಪರಿಣಾಮದ ಭೋಕ್ತೃವಿದ್ದಾನೆ.

ಆತ್ಮನು ಹರ್ಷ-ಶೋಕದ ಭಾವ ಮಾಡುತ್ತಾನೆ ಅವನಿಗೆ ಶುಭ-ಅಶುಭ ಜಡಕರ್ಮಗಳ ಉದಯವು ನಿಮಿತ್ತವಿದೆ. ಆದರೆ ಆ ಕರ್ಮದ ಕಾರಣದಿಂದ ಸುಖ-ದುಃಖದ ಪರಿಣಾಮಗಳಾಗಿಲ್ಲ ತಾನು ಸುಖ-ದುಃಖದ ಪರಿಣಾಮ ಮಾಡಿದ್ದಾನೆ ಅದಕ್ಕಾಗಿ ಆತ್ಮನು ನಿಜವಾಗಿ ಆ ಪರಿಣಾಮಗಳ ಭೋಕ್ತೃವಿದ್ದಾನೆ. ಶರೀರ ಲಡ್ಡು, ಬಟ್ಟೆ, ಮನೆ ಮೊದಲಾದ ವಸ್ತುಗಳನ್ನು ಆತ್ಮನು ಭೋಗಿಸುವ ಸಾಧ್ಯತೆಯಿಲ್ಲ ಮತ್ತು ಕರ್ಮ ಮೊದಲಾದ ಪರವಸ್ತುಗಳು ಆತ್ಮನನ್ನು ಬಲವಂತದಿಂದ ಹರ್ಷ-ಶೋಕದ ಪರಿಣಾಮ ಮಾಡಿಸುವುದಿಲ್ಲ. ಆದರೆ ಆತ್ಮನು ಸ್ವಯಂ ಸ್ವಭಾವವನ್ನು ಮರೆತು ಸುಖ ದುಃಖದ ಪರಿಣಾಮ

ಮಾಡುತ್ತಾನೆ ಮತ್ತು ಅವುಗಳ ಭೋಕ್ತೃವಾಗುತ್ತಾನೆ.

ಶುಭಾಶುಭಕರ್ಮದ ಉದಯದಿಂದ ದೃಷ್ಟಿಯು ಇಷ್ಟ-ಅನಿಷ್ಟ ವಿಷಯದ ಮೇಲೆ ಬಿದ್ದರೆ ಆತ್ಮನು ವ್ಯವಹಾರದಿಂದ ಅದರ ಭೋಕ್ತೃವಿದ್ದಾನೆ.

ಸಾತಾವೇದನೀಯ ಕರ್ಮದ ನಿಮಿತ್ತದಿಂದ ಇಷ್ಟಸಾಮಗ್ರಿಗಳು ದೊರಕಿದರೆ ಅಸಾತಾದ ಉದಯದಿಂದ ಅನಿಷ್ಟ ಸಾಮಗ್ರಿಗಳು ದೊರಕುತ್ತವೆ. ಆತ್ಮನು ಸರಿಯಾದ ವ್ಯವಸ್ಥೆ ಇಡಲಿಲ್ಲ ಅದಕ್ಕಾಗಿ ಹಣವು ದೊರಕಲಿಲ್ಲ ಅಥವಾ ಹಣವು ಉಳಿಯಲಿಲ್ಲವೆಂದು ಹೇಳುವ ಮಾತು ಅಸತ್ಯವಿದೆ. ಆದರೆ ಸಾತಾದ ಉದಯದ ಕಾರಣದಿಂದ ಹಣ ದೊರಕುವುದಿಲ್ಲ. ಹಣ ದೊರಕುವಲ್ಲಿ ವರ್ತಮಾನ ಪುರುಷಾರ್ಥದ ಕಾರಣವಿಲ್ಲ. ಹೆಚ್ಚು ಹಣದ ಸಲವಾಗಿ ಹೆಚ್ಚು ಪ್ರಯತ್ನ ಮಾಡಿದರೂ ಕೂಡ ದೊರಕುವುದಿಲ್ಲ ಮತ್ತು ಕಡಿಮೆ ಪ್ರಯತ್ನ ಮಾಡಿದರೂ ಕೂಡ ಲಕ್ಷಾಂತರ ಹಣ ಗಳಿಸಿದ್ದಾರೆ ಅದಕ್ಕಾಗಿ ಅದು ಪುರುಷಾರ್ಥದ ಕಾರಣದಿಂದ ಇಲ್ಲ ಆದರೆ ಕರ್ಮದ ಕಾರಣದಿಂದ ಇದೆ.

ನಿಜವಾಗಿ ಪರಪದಾರ್ಥಗಳು ಇಷ್ಟ ಅಥವಾ ಅನಿಷ್ಟವಿಲ್ಲ, ಆದರೆ ಆತ್ಮನು ಸ್ವಯಂ ಸುಖದುಃಖದ ಕಲ್ಪನೆ ಮಾಡುತ್ತಾನೆ, ಅದರಿಂದ ಪರಪದಾರ್ಥಗಳನ್ನು ಆರೋಪದಿಂದ ಇಷ್ಟಾನಿಷ್ಟವೆಂದು ಹೇಳಲಾಗುತ್ತದೆ. ರೋಗ ಅಥವಾ ನಿರೋಗತೆ, ಸಧನತೆ ಅಥವಾ ನಿರ್ಧನತೆಗಳೆಲ್ಲವು ಪೂರ್ವಕರ್ಮದ ಕಾರಣದಿಂದ ದೊರಕುತ್ತವೆ. ಅವುಗಳಲ್ಲಿ ಆತ್ಮನು ಸುಖ-ದುಃಖದ ಕಲ್ಪನೆ ಮಾಡಿದರೆ ವ್ಯವಹಾರದಿಂದ ಅವುಗಳ ಭೋಕ್ತೃವೆಂದು ಹೇಳಲಾಗುತ್ತದೆ. ನಿಶ್ಚಯದಿಂದ ತನ್ನ ಮತ್ತು ವ್ಯವಹಾರದಿಂದ ಪರದ ಭೋಕ್ತೃವಿದ್ದಾನೆ ಹೀಗೆ ಒಂದು ಸಮಯದಲ್ಲಿ ಆತ್ಮನು ಎರಡು ಪದಾರ್ಥಗಳನ್ನು ಭೋಗಿಸುವುದಿಲ್ಲ, ಆದರೆ ತನ್ನ ಸುಖ-ದುಃಖದ ಕಲ್ಪನೆಯ ಭೋಕ್ತೃವಾಗುತ್ತಾನೆ, ಇದರಲ್ಲಿ ಪರವಸ್ತುಗಳು ನಿಮಿತ್ತವಿವೆ. ಅದಕ್ಕಾಗಿ ವ್ಯವಹಾರದಿಂದ ಪರದ ಭೋಕ್ತೃವೆಂದು ಹೇಳಿದೆ. ಆದರೆ ಪರವನ್ನು ಭೋಗಿಸುವುದಿಲ್ಲ. ಒಂದು ದ್ರವ್ಯವು ಇನ್ನೊಂದು ದ್ರವ್ಯವನ್ನು ಸ್ಪರ್ಶಮಾಡುವುದಿಲ್ಲ ಅದಕ್ಕಾಗಿ ಭೋಗಿಸುವ ಸಾಧ್ಯತೆಯಿಲ್ಲ. 'ಕರ್ಮದಲ್ಲಿ ನಿಮ್ಮ ಅಧಿಕಾರವಿದೆ, ಆದರೆ ಅದರ ಫಲದಲ್ಲಿ ಎಂದೂ ಇಲ್ಲ'ವೆಂದು ಅಜ್ಞಾನೀ ಹೇಳುತ್ತಾನೆ. ಆದರೆ ಕರ್ತಾ ತಾನು ಮತ್ತು ಭೋಕ್ತಾ ಬೇರೆ ಹೀಗೆ ಇಲ್ಲ, ಆದರೆ ಆತ್ಮನು ಸ್ವಯಂ ಕರ್ತಾ ಮತ್ತು ಭೋಕ್ತಾ ಕೂಡ ಇದ್ದಾನೆ.

೬) ಕೇವಲ ದೇಹಮಾತ್ರ ನಿಶ್ಚಯನಯದಿಂದ ಆತ್ಮನು ಲೋಕಮಾತ್ರ ಅಸಂಖ್ಯ ಪ್ರದೇಶಿಯಿದ್ದಾನೆ.

ಲೋಕದಷ್ಟು ಆತ್ಮನ ಅಸಂಖ್ಯ ಪ್ರದೇಶಗಳಿವೆಯೆಂಬುದು ನಿಶ್ಚಿತವಿದೆ. ಆದರೆ ಕೇವಲಿ ಸಮುದ್ಘಾತದ ಸಮಯದಲ್ಲಿ ಲೋಕಪ್ರಮಾಣನಾಗುತ್ತಾನೆಂಬುದು ನಿಶ್ಚಯವಿದೆಯೆಂದಿಲ್ಲ. ಇದಂತೂ ವಿಸ್ತಾರವಾಗುವುದರಿಂದ ವ್ಯವಹಾರದಲ್ಲಿ ಹೋಗುತ್ತದೆ. ಇಲ್ಲಿಯಂತೂ ನಿಶ್ಚಯ ಲೋಕಪ್ರಮಾಣ ಪ್ರದೇಶಗಳ ಸಂಖ್ಯೆಯಿದೆ. ಅಸಂಖ್ಯಾತ ಪ್ರದೇಶಿ ಆತ್ಮನಿದ್ದಾನೆಂಬುದು ಕಲ್ಪನೆಯಿಲ್ಲ, ಆದರೆ ಯಥಾರ್ಥವಿದೆಯೆಂಬುದನ್ನು ತಿಳಿಸುವ ಸಲುವಾಗಿ ನಿಶ್ಚಯದಿಂದ ಹೇಳಿದೆ. ಆತ್ಮನು ಅವಯವಿಯಿದ್ದರೆ ಅಸಂಖ್ಯ ಪ್ರದೇಶಗಳು ಅವಯವವಿದೆ. ಅದು ತ್ರಿಕಾಲ ಅನಾದಿ ಅನಂತವಿದೆ ಅದು ನಿಶ್ಚಯವಿದೆ. ಈ ಮಾತನ್ನು ಸರ್ವಜ್ಞರ ಹೊರತಾಗಿ ಬೇರೆ ಯಾರೂ ಹೇಳುವ ಸಾಧ್ಯತೆಯಿಲ್ಲ. ಈಗ ವ್ಯವಹಾರದಿಂದ ಮಾತು ಹೇಳುತ್ತಾರೆ.

ವ್ಯವಹಾರನಯದಿಂದ ಆತ್ಮನು ಸಂಕೋಚ ವಿಸ್ತಾರ ಶಕ್ತಿಯಿಂದ ನಾಮಕರ್ಮದ ನಿಮಿತ್ತದಿಂದ ಹಿರಿ-ಕಿರಿಯ ಶರೀರವಾಗುವುದು ಪ್ರಮಾಣದಿಂದಿದೆ.

ಇಲಿ, ಬೆಕ್ಕು, ಶ್ವಾನ ಮೊದಲಾದ ಶರೀರಗಳಲ್ಲಿ ಜೀವವಿರುತ್ತದೆ ಅದು ತನ್ನ ಶಕ್ತಿಯಿಂದ ಇರುತ್ತದೆ. ಮತ್ತು ಶರೀರವಂತೂ ನಾಮಕರ್ಮದ ನಿಮಿತ್ತದಿಂದ ಹಿರಿ-ಕಿರಿಯದು ದೊರಕುತ್ತದೆ. ಆತ್ಮನು ಆ ಶರೀರ ಪ್ರಮಾಣ ಇರುತ್ತಾನೆ. ಅದು ತನ್ನ ಶಕ್ತಿಯಿಂದ ವ್ಯವಹಾರದಿಂದಿರುತ್ತಾನೆ. ಎಲ್ಲಿಯವರೆಗೆ ಸಂಸಾರದಲ್ಲಿರುತ್ತಾನೆ ಅಲ್ಲಿಯವರೆಗೆ ಶರೀರ ಪ್ರಮಾಣ-ಸಂಕೋಚ-ವಿಸ್ತಾರ ಮಾಡಿ ಇರುತ್ತಾನೆ ಅದು ವ್ಯವಹಾರವಿದೆ. ಅದರಿಂದ ಆತ್ಮನು ವ್ಯವಹಾರನಯದಿಂದ

ಸ್ವದೇಹ ಪ್ರಮಾಣನಿರುತ್ತಾನೆಂದು ಹೇಳಿದೆ.

೭) ವ್ಯವಹಾರದಿಂದ ಆತ್ಮನು ಮೂರ್ತದ ಸಂಯೋಗದಿಂದ ಮೂರ್ತನೆನಿಸಿಕೊಳ್ಳುತ್ತಾನೆ ಆದರೆ ಮೂರ್ತನಾಗುವುದಿಲ್ಲ.

ಆತ್ಮನು ವ್ಯವಹಾರದಿಂದ ಕರ್ಮದ ಸಂಯೋಗದ ಕಾರಣದಿಂದ ಮೂರ್ತಿಕ ವಿಭಾವ ಪರಿಣಾಮರೂಪದಿಂದ ಪರಿಣಮಿಸಿದ್ದಾನೆ ಆದಾಗ್ಯೂ ಕೂಡ ನಿಶ್ಚಯದಿಂದ ಸ್ವಾಭಾವಿಕ ಭಾವದಿಂದ ಆತ್ಮನು ಅಮೂರ್ತನಿದ್ದಾನೆ. ವ್ಯವಹಾರದಿಂದ ಜೀವ ಮತ್ತು ಶರೀರವನ್ನು ಒಂದೆಂದು ಹೇಳಲಾಗುತ್ತದೆ ಎಂದರೆ ನಿಜವಾಗಿ ಒಂದಿಲ್ಲ ಎಂದಾಯಿತು ಮೂರ್ತದ ಸಂಯೋಗದಿಂದ ಮೂರ್ತನೆಂದು ಕರೆಯಲಾಗುವುದು. ಹೇಗೆ ನೀರಿನ ಸಂಯೋಗದಿಂದ ನೀರಿನ ಲೋಟವೆಂದು ಹೇಳಲಾಗುತ್ತದೆ ಆದರೆ ನಿಜವಾಗಿ ನೀರಿನ ಲೋಟ ಚಂಬು ಆಗುವುದಿಲ್ಲ ; ಹಾಗೆ ಶರೀರದ ಸಂಯೋಗದಿಂದ ಆತ್ಮನನ್ನು ಮೂರ್ತ ಶರೀರವುಳ್ಳವನೆಂದು ಹೇಳಲಾಗುತ್ತದೆ ಆದರೆ ನಿಜವಾಗಿ ಆತ್ಮನು ಮೂರ್ತ ಶರೀರವುಳ್ಳವನಿಲ್ಲ. ವಿಕಾರದ ಯೋಗ್ಯತೆಯಿದ್ದರೆ ಶರೀರದ ಸಂಬಂಧವಿದೆ ಮತ್ತು ಶರೀರದ ಸಂಬಂಧದ ಕಾರಣವಾಗಿ-ವ್ಯವಹಾರದಿಂದ ಮೂರ್ತನೆಂದು ಕರೆಯಲಾಗುತ್ತದೆ, ಅದು ಆತ್ಮನ ಪರ್ಯಾಯದ ಯೋಗ್ಯತೆ ಮತ್ತು ನಿಮಿತ್ತದ ಜ್ಞಾನ ಮಾಡಿಕೊಡಲಾಗಿದೆ.

೮) ಕರ್ಮಸಂಯುಕ್ತ-ನಿಶ್ಚಯದಿಂದಪುದ್ಗಲಕರ್ಮದ ನಿಮಿತ್ತವಾಗಿ ಆತ್ಮನು ಅಶುದ್ಧ ಭಾವಕರ್ಮ ಸಂಯುಕ್ತನಾಗುತ್ತಾನೆ.

ಪುದ್ಗಲ ಕರ್ಮಗಳ ನಿಮಿತ್ತ ಪಡೆದು ಆತ್ಮನಲ್ಲಿ ಅಶುದ್ಧ ಚೈತನ್ಯ ವಿಭಾವಪರಿಣಾಮಗಳಾಗುತ್ತವೆ ಆಗ ಆತ್ಮನು ಭಾವಕರ್ಮ ಸಹಿತನಿದ್ದಾನೆ. ನಿಶ್ಚಯನಯದಿಂದ ಆತ್ಮನು ಮಲಿನಪರಿಣಾಮ ಸಹಿತನಿದ್ದಾನೆ ಪುಣ್ಯ-ಪಾಪಾದಿ ಪರಿಣಾಮಗಳು ಆತ್ಮವಿವೆ. ಸಮಯಸಾರದೊಳಗೆ ನಿಶ್ಚಯದಿಂದ ಪುಣ್ಯ-ಪಾಪದ ಪರಿಣಾಮಗಳು ಆತ್ಮನವಲ್ಲ, ಆದರೆ ಪುದ್ಗಲದಿವೆಯೆಂದು ಹೇಳಿದೆ. ಅದಂತೂ ಸ್ವಭಾವದೃಷ್ಟಿಯಲ್ಲಿ ಪರ್ಯಾಯದ ಗೌಣತೆ ಮಾಡಿ ವಿಕಾರಿಪರಿಣಾಮಗಳು ಹೊರಡುತ್ತವೆಯೆಂಬ ಅಪೇಕ್ಷೆಯಿಂದ ಹೇಳಿದೆ ಇಲ್ಲಿಯಂತೂ ವಿಕಾರವು ಆತ್ಮನು ಸ್ವಯಂ ಮಾಡಿದರೆ ಆಗುತ್ತದೆಯೆಂದು ಹೇಳಿ ಪರ್ಯಾಯದ ಜ್ಞಾನ ಮಾಡಿಸಿದ್ದಾರೆ. ಕರ್ಮವು ಮಾಡಿಸುವುದಿಲ್ಲವೆಂಬುದನ್ನು ಹೇಳಿದ್ದಾರೆ.

ವ್ಯವಹಾರನಯದಿಂದ ಆತ್ಮನು ಅಶುದ್ಧ ಪರಿಣಾಮದ ನಿಮಿತ್ತವಾದರೆ ದ್ರವ್ಯಕರ್ಮಸಹಿತನಿದ್ದಾನೆ.

ಆತ್ಮನು ವ್ಯವಹಾರದಿಂದ ಕರ್ಮಸಹಿತನಿದ್ದಾನೆ ಏಕೆಂದರೆ ಜಡಕರ್ಮದ ಪರಿಣಾಮವಾದರೆ ಅದರಲ್ಲಿ ಆತ್ಮನ ಅಶುದ್ಧ ಪರ್ಯಾಯವು ನಿಮಿತ್ತವಿದೆ, ಅದಕ್ಕಾಗಿ ಆತ್ಮನು ಕರ್ಮಸಂಯುಕ್ತನಿದ್ದಾನೆ ಸಂಸಾರವಿದೆ ಮತ್ತು ವಿಕಾರವಿಲ್ಲ ಹೀಗೆ ಆಗುವುದಿಲ್ಲ ಅದಕ್ಕಾಗಿ ನಿಶ್ಚಯದಿಂದ ಆತ್ಮನು ಸಂಸಾರದಲ್ಲಿ ವಿಕಾರಸಹಿತನಿದ್ದಾನೆ ಮತ್ತು ವ್ಯವಹಾರದಿಂದ ಜಡಕರ್ಮಸಹಿತನಿದ್ದಾನೆ. ಸಂಸಾರದಲ್ಲಿ ವ್ಯವಹಾರದಿಂದ ಕರ್ಮಸಹಿತನಿಲ್ಲವೇ ಇಲ್ಲ ಎನ್ನುವಂತಿಲ್ಲವೆಂದು ನಿಮಿತ್ತ ನೈಮಿತ್ತಿಕ ಸಂಬಂಧವನ್ನು ತಿಳಿಸಿಕೊಡಲಾಗಿದೆ.

ಆತ್ಮನು ಹೇಗಿದ್ದಾನೆಂದರೆ - ೧) ಚೇತನಾಗುಣವುಳ್ಳವನಿದ್ದಾನೆ, ೨) ಉಪಯೋಗವಿಶಿಷ್ಟ ಎಂದರೆ ನೋಡುವ ತಿಳಿದುಕೊಳ್ಳುವ ಪರಿಣಾಮವುಳ್ಳವನಿದ್ದಾನೆ, ೩) ಆಸ್ರವ, ಸಂವರ, ನಿರ್ಜರೆ, ಬಂಧ ಮತ್ತು ಮೋಕ್ಷ ಈ ಪದಾರ್ಥಗಳಲ್ಲಿ ನಿಶ್ಚಯದಿಂದ ಸ್ವಯಂಭಾವಕರ್ಮಗಳ ಸಾಮರ್ಥ್ಯವುಳ್ಳವನಿರುವುದರಿಂದ ಪ್ರಭು ಇದ್ದಾನೆ, ವ್ಯವಹಾರದಿಂದ ದ್ರವ್ಯಕರ್ಮದ ಐಶ್ವರ್ಯ ಸಹಿತನಿದ್ದಾನೆ ಅದಕ್ಕಾಗಿ ಪ್ರಭು ಇದ್ದಾನೆ, ೪) ನಿಜವಾಗಿ ತನ್ನ ವಿಭಾವಭಾವಗಳ ಕರ್ತೃ ಇದ್ದಾನೆ ಮತ್ತು ವ್ಯವಹಾರದಿಂದ ಪೌದ್ಗಲಿಕ ಕರ್ಮಗಳ ಕರ್ತೃವಿದ್ದಾನೆ, ೫) ಸುಖ-ದುಃಖ ಮೊದಲಾದ ಪರಿಣಾಮಗಳ ಭೋಕ್ತೃ ಇದ್ದಾನೆ ಮತ್ತು ವ್ಯವಹಾರದಿಂದ ಶುಭಾಶುಭ ಕರ್ಮಗಳ ನಿಮಿತ್ತದಿಂದ ದೊರೆತ ಇಷ್ಟಾನಿಷ್ಟ ಸಾಮಗ್ರಿಗಳ ಭೋಕ್ತೃ ಇದ್ದಾನೆ, ೬) ನಿಜವಾಗಿ ಆತ್ಮನು ಲೋಕಪ್ರಮಾಣ ಅಸಂಖ್ಯಾತ ಪ್ರದೇಶಿಯಿದ್ದಾನೆ ಮತ್ತು ವ್ಯವಹಾರನಯದಿಂದ ನಾಮಕರ್ಮದ

ನಿಮಿತ್ತದಿಂದ ದೊರೆತ ಹಿರಿ-ಕಿರಿಯ ಶರೀರ ಪ್ರಮಾಣನಿದ್ದಾನೆ. ಅದಕ್ಕಾಗಿಯೇ ಸ್ವದೇಹ ಪರಿಮಾಣನಿದ್ದಾನೆ, ೭) ಆತ್ಮನು ವ್ಯವಹಾರನಯದಿಂದ ಪುದ್ಗಲದ ಸಂಯೋಗದಿಂದ ಮೂರ್ತಿಕನೆಂದು ಕರೆಸಿಕೊಂಡರೂ ನಿಜವಾಗಿ ಅವನು ಅಮೂರ್ತಿಕನಿದ್ದಾನೆ, ೮) ನಿಜವಾಗಿ ಆತ್ಮನು ತನ್ನ ಅಶುದ್ಧ ಭಾವದಿಂದಲೇ ಕೂಡಿದ್ದಾನೆ, ವ್ಯವಹಾರ ನಯದಿಂದ ಅಶುದ್ಧಭಾವದ ನಿಮಿತ್ತ ಪಡೆದು ನವೀನಕರ್ಮಗಳ ಬಂಧಸಹಿತನಿದ್ದಾನೆ. ಹೀಗೆ ಶುದ್ಧ-ಅಶುದ್ಧ ನಯದ ಕಥನದಿಂದ ಸಿದ್ಧಾಂತದ ಅನುಸಾರವಾಗಿ ಸಂಸಾರೀ ಜೀವದ ವಿವಕ್ಷೆ ತಿಳಿಯಬೇಕು.

ಮೋಕ್ಷದಲ್ಲಿರುವಂಥ ಯಾವ ಸಿದ್ಧ ಆತ್ಮರಿದ್ದಾರೆ ಅವರ ಉಪಾಧಿರಹಿತ ಶುದ್ಧಸ್ವರೂಪವು ಹೇಗಿರುತ್ತದೆಂಬುದನ್ನು ಈಗ ಹೇಳುತ್ತಾರೆ, -

**ಕಮ್ಮಮಲವಿಪ್ಪಮುಕ್ಕೋ ಉಡ್ಢಂ ಲೋಗಸ್ಸ ಅಂತಮಧಿಗಂತಾ ।**
**ಸೋ ಸವ್ವಣಾಣದರಿಸೀ ಲಹದಿ ಸುಹಮಣಿಂದಿಯಮಣಂತಂ ॥೨೮॥**

**ಸರ್ವಕರ್ಮಮಲದಿಂದ ಮುಕ್ತನಾದಾತ್ಮ ಲೋಕಾಗ್ರದನೆಲೆಯ ಪಡೆದವನು ।**
**ಸರ್ವಜ್ಞ-ಸರ್ವದರ್ಶಿ ಅನಂತ ಅತೀಂದ್ರಿಯ ಸುಖವನನುಭವಿಸುವನು ॥೨೮॥**

**ಅರ್ಥ :-** ೨೭ ನೆಯ ಗಾಥೆಯಲ್ಲಿ ಸಂಸಾರೀ ಜೀವದ ವರ್ಣನೆ ಮಾಡಲಾಗಿದ್ದು ಈಗ ಸಿದ್ಧರ ವರ್ಣನೆ ಮಾಡುತ್ತಾರೆ. ಯಾವ ಜೀವನು ಜ್ಞಾನಾವರಣೀಯರೂಪ ದ್ರವ್ಯಕರ್ಮ ಮತ್ತು ವಿಕಾರ ಮೊದಲಾದ ಭಾವಕರ್ಮದಿಂದ ಎಲ್ಲ ಪ್ರಕಾರದಿಂದ ಮುಕ್ತನಿದ್ದಾನೆ ಅವನು ಎಲ್ಲವನ್ನು ನೋಡುವ ಹಾಗೂ ತಿಳಿದುಕೊಳ್ಳುವಂಥ ಶುದ್ಧ ಜೀವನು ಊರ್ಧ್ವಗಮನಸ್ವಭಾವದ ಕಾರಣದಿಂದ ಮೂರು ಲೋಕದ ಮೇಲೆ ಸಿದ್ಧಕ್ಷೇತ್ರದಲ್ಲಿ ಪ್ರಾಪ್ತನಾಗುತ್ತಾನೆ. ಸಿದ್ಧಪರಮಾತ್ಮನು ಮುಕ್ತದಶೆಯನ್ನು ಪಡೆದಿದ್ದಾನೆ ಅವನು ಮೊದಲಿನಿಂದಲೇ ಜಡಕರ್ಮದಿಂದ ಮತ್ತು ವಿಕಲ್ಪದಿಂದ ಬೇರೆಯಿದ್ದನೆಂಬ ದೃಷ್ಟಿ, ಜ್ಞಾನ ಮತ್ತು ಏಕಾಗ್ರತೆ ಮಾಡಿ ಮುಕ್ತದಶೆಯಲ್ಲಿ ಪರಮಾನಂದವನ್ನು ಪಡೆದಿದ್ದಾನೆ. ಆ ಪರಮಾನಂದದ ಕಾರಣ ಕೂಡ ಪರಮಾನಂದದಂಥ ತ್ರಿಕಾಲೀ ನಿರ್ವಿಕಾರ ಶುದ್ಧಸ್ವಭಾವವೇ ಇದೆ, ಯಾವ ಪೂರ್ಣ ನೋಡುವ ತಿಳಿದುಕೊಳ್ಳುವ ಸ್ವಭಾವವು ಪ್ರಕಟವಾಗಿದೆ ಅದು ಅಲ್ಪಜ್ಞಾನ ಮತ್ತು ಅಲ್ಪದರ್ಶನದ ಆಶ್ರಯದಿಂದ ಪ್ರಕಟವಾಗಿಲ್ಲ, ಆದರೆ ಸರ್ವಜ್ಞ ಮತ್ತು ಸರ್ವದರ್ಶಿ ಸ್ವಭಾವದ ದೃಷ್ಟಿ ಮಾಡುವುದರಿಂದ ಪ್ರಕಟವಾಗಿದೆ. ಸಂಸಾರೀ ಜೀವವು ಒಂದು ಅವಸ್ಥೆಯಲ್ಲಿ ಮತ್ತು ಒಂದು ಸ್ಥಾನದಲ್ಲಿ ಇರುವುದಿಲ್ಲ, ಆದರೆ ಸಿದ್ಧರಂತೂ ಊರ್ಧ್ವಗತಿಸ್ವಭಾವದ ಕಾರಣದಿಂದ ತಮ್ಮ ಪರ್ಯಾಯದ ಯೋಗ್ಯತೆಯಿಂದ ಲೋಕದ ಅಗ್ರಭಾಗದಲ್ಲಿ ನೆಲೆಗೊಂಡಿದ್ದಾರೆ. ಆ ಸಿದ್ಧಪರಮಾತ್ಮರು ಅವಿಕಾರರಿದ್ದಾರೆ, ಪರಾಧೀನ ಇಂದ್ರಿಯಸುಖದಿಂದ ರಹಿತರಿದ್ದಾರೆ, ಮತ್ತು ಅಮರ್ಯಾದಿತ ಆತ್ಮನ ಸ್ವಾಭಾವಿಕ ಅತೀಂದ್ರಿಯ ಸುಖಕ್ಕೆಪ್ರಾಪ್ತರಾಗಿದ್ದಾರೆ. ಇಂದ್ರಿಯ ಸುಖದಿಂದ ರಹಿತವಾದ ಆನಂದದಶೆಯು ಅದು ಪರಾಧಿ ೀನವಿಲ್ಲ, ಆದರೆ ಸ್ವಾಧೀನವಿದೆ. ಸಂಸಾರದ ಸುಖವಂತೂ ಕಲ್ಪನಾಮಾತ್ರ ಮತ್ತು ದುಃಖರೂಪವಿದೆ. ಇನ್ನು ಸಿದ್ಧದಶೆಯ ಸುಖವಂತೂ ಅತೀಂದ್ರಿಯ ಹಾಗೂ ಸ್ವಾಭಾವಿಕವಿದೆ.

**ಭಾವಾರ್ಥ :-** ಸಂಸಾರೀ ಜೀವವು ಯಾವಾಗ ಪರದ್ರವ್ಯದ ಸಂಬಂಧದಿಂದ ಬಿಡುಗಡೆ ಹೊಂದುತ್ತದೆ. ಅದೇ ಸಮಯದಲ್ಲಿ ಸಿದ್ಧಕ್ಷೇತ್ರದೊಳಗೆ ಹೋಗಿ ನೆಲೆಸುತ್ತದೆ. ಸಂಸಾರೀ ಜೀವವು ತನ್ನ ಸ್ವಭಾವದ ಸಂಗತಿ ಮಾಡಿದರೆ ಪರದ್ರವ್ಯದ ಕಡೆಯ ಲಕ್ಷ್ಯವನ್ನು ಬಿಟ್ಟುಕೊಡುತ್ತದೆ ಆಗ ಪರದ್ರವ್ಯದ ಸಂಗತಿ ಉಳಿಯುವುದಿಲ್ಲ ಮತ್ತು ಸಂಗತಿ ಬಿಟ್ಟನೆಂದು ಹೇಳಲಾಗುತ್ತದೆ, ಶುದ್ಧ ಆತ್ಮನು ಸಿದ್ಧಲೋಕದಲ್ಲಿ ಸ್ಥಿರನಾಗುತ್ತಾನೆ. ಅಲ್ಲಿ ಪರಮಾನಂದದಲ್ಲಿ ಇರುವುದು ಅದು ಮುಕ್ತಿಯಿದೆ. ಜೀವದ ಊರ್ಧ್ವಗಮನ ಸ್ವಭಾವವಿದ್ದರೂ ಕೂಡ ಮುಂದೆ ಧರ್ಮಾಸ್ತಿಕಾಯವಿಲ್ಲದಿರುವ ಕಾರಣದಿಂದ ಲೋಕಾಗ್ರದ ಅಗ್ರಭಾಗದಲ್ಲಿ ನೆಲೆಸುತ್ತದೆಯೆಂಬುದು ಅದು ನಿಮಿತ್ತದ ಕಥನವಿದೆ. ನಿಜವಾಗಿ ಶುದ್ಧ ಆತ್ಮನದು ಲೋಕದಲ್ಲಿರುವ

ಯೋಗ್ಯತೆಯ ಕಾರಣದಿಂದಲೇ ಅಲ್ಲಿ ಸ್ಥಿರವಾಗುತ್ತದೆ.

ಸಿದ್ಧಾತ್ಮನು ಅನಂತಜ್ಞಾನ, ಅನಂತದರ್ಶನ ಸಂಯುಕ್ತ ಅನಂತ ಅತೀಂದ್ರಿಯ ಸುಖವನ್ನು ಭೋಗಿಸುತ್ತಾನೆ. ಮೋಕ್ಷಾವಸ್ಥೆಯಲ್ಲಿ ಕೂಡ ಆತ್ಮನಿಗೆ ಅವಿನಾಶಿಯಾದ ಭಾವಪ್ರಾಣವಿದೆ ಅದರಿಂದ ಅವನು ಯಾವಾಗಲೂ ಜೀವಿಸುತ್ತಿರುವುದರಿಂದ ಸಿದ್ಧಪರಮಾತ್ಮನಿಗೆ ಜೀವತ್ವಶಕ್ತಿಯಿದೆ. ಶುದ್ಧಸ್ವರೂಪದ ಅನುಭವ ವಾಗುವ ಕಾರಣದಿಂದ ಸಿದ್ಧರಿಗೆ ಚೇತಯಿತನೆಂದು ಕೂಡ ಹೇಳಲಾಗುತ್ತದೆ. ನೋಡುವ-ತಿಳಿದುಕೊಳ್ಳುವ ಸ್ವಭಾವವಿರುವುದರಿಂದ ಅವರಿಗೆ ರಾಗದ್ವೇಷಗಳಿಲ್ಲದ ಜ್ಞಾನವಿದೆ. ಭಗವಂತರಿಗೂ ಶುದ್ಧ ಪರಿಣಾಮರೂಪ ಉಪಯೋಗಿಯೆಂದು ಕೂಡ ಹೇಳಲಾಗುವುದು. ಅದರಿಂದ ಭಗವಂತರಿಗೆ ಕೂಡ ಉಪಯೋಗವಿದೆಯೆಂಬುದು ನಿಶ್ಚಿತವಾಯಿತು, ಇದು ಪರ್ಯಾಯದ ಮಾತು ಇದೆ. ಭಗವಂತನಿಗೆ ತನ್ನ ಚೈತನ್ಯದ ನಿರ್ಮಲ ಅವಸ್ಥೆಯ ರೂಪದ ಉಪಯೋಗವಿದೆ.

ಮತ್ತು ಶುದ್ಧಾತ್ಮನಿಗೆ ಸಮಸ್ತ ಆತ್ಮಿಕ ಶಕ್ತಿಗಳ ಸಾಮರ್ಥ್ಯವು ಪ್ರಕಟವಾಗಿರುವುದರಿಂದ ಪ್ರಭುತ್ವ ಶಕ್ತಿ ಕೂಡ ಇದೆ. ಸ್ತ್ರೀ-ಕುಟುಂಬದ ಪ್ರಭುವಂತೂ ಪುಕ್ಕಟೆಯಾದ ಉಕ್ತಿಯಿದೆ ಮತ್ತು ಆಂತರ್ಯದಲ್ಲಿ ರಾಗ-ದ್ವೇಷದ ಅಶುದ್ಧ ದೃಷ್ಟಿಯಿಂದ ಪ್ರಭು ಉಕ್ತಿಯಿದೆ, ಆದರೆ ನಿಜವಾಗಿ ಆತ್ಮನ ಸಮಸ್ತ ಶಕ್ತಿಗಳು ಪ್ರಕಟವಾಗಿವೆಯೆಂದು ಪ್ರಭುವೆಂದು ಹೇಳುವುದಿದೆ. ಅಶುದ್ಧ ದೃಷ್ಟಿಯಿಂದ ನಿಗೋದದ ಅಶುದ್ಧತೆಯ ಪ್ರಭು ಇದ್ದಾನೆ ಮತ್ತು ಶುದ್ಧ ದೃಷ್ಟಿಯಿಂದ ಭಗವಾನ ಪ್ರಭು ಇದ್ದಾನೆ. ಒಂದು ಪುಣ್ಯ-ಪಾಪದ ಪ್ರಭು ಇದ್ದಾನೆ ಮತ್ತು ಒಂದು ಪೂರ್ಣತೆಯ ಪ್ರಭು ಇದ್ದಾನೆ, ಇಷ್ಟು ಅಂತರವಿದೆ. ತಾನು ತನ್ನ ಪ್ರಭು ಇದ್ದಾನೆ, ಇತರರ ಪ್ರಭು ಇಲ್ಲ ಮತ್ತು ಬೇರೆ ಯಾರೂ ಅವನ ಪ್ರಭು ಇಲ್ಲ. ಸಿದ್ಧರ ಸ್ವರೂಪವನ್ನು ಇದಕ್ಕೆ ವಿಪರೀತವಾಗಿ ಯಾರಾದರೂ ಹೇಳುತ್ತಿದ್ದರೆ ಅದರ ನಿಷೇಧ ಮಾಡುವುದಕ್ಕಾಗಿ ಇಲ್ಲಿ ಯಥಾರ್ಥ ವ್ಯಾಖ್ಯಾನ ಮಾಡಲಾಗಿದೆ. ಸಿದ್ಧರಿಗೆ ಸಮಸ್ತ ಶಕ್ತಿಗಳು ಪ್ರಕಟವಾಗುವುದರಿಂದ ಅವರು ಅನಂತಗುಣಗಳ ಆಗರವಿದ್ದಾರೆ, ಇದ್ದ ಶಕ್ತಿಯು ಅದು ಪರ್ಯಾಯದಲ್ಲಿ ಪೂರ್ಣ ಪ್ರಕಟವಾಗಿದೆ. ತಾನು ತನ್ನ ಪ್ರಭು ಇದ್ದಾನೆ, ಅವನು ಜಗತ್ತಿನ ಪ್ರಭು ಇಲ್ಲ. ಶಾಸ್ತ್ರಗಳಲ್ಲಿ ಮೂರು ಲೋಕದ ಪ್ರಭುವೆಂದು ಹೇಳಿದೆ ಅದು ಮೂರು ಲೋಕಗಳನ್ನು ತಿಳಿದುಕೊಂಡಿರುವ ಅಪೇಕ್ಷೆಯಿಂದ ಹೇಳಲಾಗಿದೆ. ಎಂದರೆ ಉಳಿದ ಅನಂತ ಸಿದ್ಧರಿದ್ದಾರೆ ಅವರನ್ನು ಕೂಡ ಜ್ಞಾನವು ತಿಳಿದುಕೊಂಡಿದೆ. ಕೆಳಗಿನ ಅವಸ್ಥೆಯಲ್ಲಿ ಜ್ಞಾನವು ತಡೆದು ನಿಂತಿತ್ತು ಆಗ ಪರದ ಮೇಲೆ ಲಕ್ಷ್ಯವು ಹೋಗುತ್ತಿತ್ತು ಆದರೆ ಪೂರ್ಣದಶೆಯು ಪ್ರಕಟವಾಯಿತು ಎಂದರೆ ಪರದ ಮೇಲೆ ಲಕ್ಷ್ಯವು ಉಳಿಯುವುದಿಲ್ಲ.

ತನ್ನ ಸ್ವರೂಪವು ಅನ್ಯಪದಾರ್ಥಗಳಲ್ಲಿ ಇಲ್ಲದಿರುವುದರಿಂದ ಆತ್ಮನು ತನ್ನ ಸ್ವಭಾವದಿಂದ ಯಾವಾಗಲೂ ಪರಿಣಮಿಸುತ್ತಿರುವುದರಿಂದ ಆತ್ಮನು ತಾನೇ ಕರ್ತೃ ಇದ್ದಾನೆ. ಸಂಸಾರದಲ್ಲಿ ಪುಣ್ಯ-ಪಾಪದ ಕರ್ತೃತ್ವವಿತ್ತು ಮತ್ತು ವ್ಯವಹಾರದಿಂದಲೇ ಕರ್ಮದ ಕರ್ತೃತ್ವವನ್ನು ಹೇಳಲಾಗಿತ್ತು ಆದರೆ ಸಿದ್ಧಭಗವಂತರು ತಮ್ಮ ಪರ್ಯಾಯದ ಕರ್ತೃ ಇದ್ದಾರೆ, ಪರದ ಕರ್ತೃ ಇಲ್ಲ. ಅದರಂತೆ ಸಂಸಾರೀ ಆತ್ಮನು ಕೂಡ ಪರದ ಕರ್ತೃವಿಲ್ಲ. ಆದರೆ ಅಜ್ಞಾನಿಯು ರಾಗ-ದ್ವೇಷ ಮೊದಲಾದವುಗಳ ಕರ್ತೃವಾಗುತ್ತಾನೆ ಆಗ ಕರ್ಮದ ಕರ್ತೃವೆಂದು ಹೇಳಲಾಗುತ್ತಿತ್ತು, ಆದರೆ ಸಿದ್ಧರಿಗೆ ವ್ಯವಹಾರದಿಂದ ಕೂಡ ಪರದ ಕರ್ತೃತ್ವದ ಆರೋಪವು ಬರುವುದಿಲ್ಲ. ಜೀವದ ಅಸ್ತಿತ್ವವು ಅನ್ಯದಲ್ಲಿ ಇಲ್ಲ ಅದಕ್ಕಾಗಿ ತನ್ನ ಪರಿಣಾಮದ ಕರ್ತೃವಿದ್ದಾನೆ. ಸಂವರ ಮೊದಲಾದವುಗಳಲ್ಲಿ ಕರ್ಮದ ಅಭಾವರೂಪ ಕರ್ತೃತ್ವವನ್ನು ಹೇಳಿತ್ತು ಮತ್ತು ಆಸ್ರವದಲ್ಲಿ ಕರ್ಮದ ಕರ್ತೃತ್ವ ಹೇಳಿದೆ ಅಲ್ಲಿ ನಿಮಿತ್ತ ನೈಮಿತ್ತಿಕ ಸಂಬಂಧವನ್ನು ತಿಳಿಸಿಕೊಡುವುದಿತ್ತು. ಆದರೆ ಇಲ್ಲಿ ಸಿದ್ಧಾವಸ್ಥೆಯಲ್ಲಿ ಇಂಥ ವ್ಯವಹಾರವು ಅನ್ವಯಿಸುವುದಿಲ್ಲ. ಏಕೆಂದರೆ ಇಷ್ಟು ಜ್ಞಾನಾನಂದದ ಪರಿಣಮನವಾಗಿದೆಯೆಂದು ಹೇಳಿದೆ.

ಸಿದ್ಧ ಆತ್ಮನಿಗೆ ಸ್ವಾಧೀನ ಸುಖದ ಪ್ರಾಪ್ತಿಯಾಗಿದೆ. ಅದರ ಅನುಭವವು ಅವರಿಗೆ ಆಗುತ್ತಿರುವುದರಿಂದ ಅವರು ಭೋಕ್ತಾ ಕೂಡ ಇದ್ದಾರೆ. ಸಂಸಾರದಶೆಯಲ್ಲಿ ಸುಖ-ದುಃಖದ ಭೋಕ್ತೃವೆಂದು ಅಶುದ್ಧ ನಿಶ್ಚಯ ನಯದಿಂದ ಹೇಳಲಾಗಿತ್ತು

ಮತ್ತು ವ್ಯವಹಾರದಿಂದ ಇಷ್ಟ-ಅನಿಷ್ಟ ಸಾಮಗ್ರಿಗಳ ಭೋಕ್ತೃವೆಂದು ಹೇಳಲಾಗಿತ್ತು, ಆದರೆ ಇಲ್ಲಿಯಂತೂ ಸ್ವಭಾವದ ಲೀನತೆಯಿಂದ ಪರ್ಯಾಯದಲ್ಲಿ ಪ್ರಕಟವಾದ ಪೂರ್ಣ ಸುಖದಿಂದ ವಿಕಸಿಸಿರುವಂಥ ಅನುಭವದ ಭೋಕ್ತೃವಿದ್ದಾನೆ.

ಸಿದ್ಧಭಗವಂತರು ಅಂತಿಮ ಶರೀರದ ಅವಗಾಹನದಿಂದ ಕಿಂಚಿತ್ ನ್ಯೂನ ಪುರುಷಾಕಾರದಿಂದ ಆತ್ಮ ಪ್ರದೇಶದ ಅವಗಾಹನದಿಂದ ನೆಲೆಸಿದ್ದಾರೆ. ಈ ಕಾರಣದಿಂದ ದೇಹ ಮಾತ್ರವೆಂದು ಹೇಳಲಾಗಿದೆ. ಕಟ್ಟಿಗೆಯ ಪಡಿಯಚ್ಚಿನ ಆಕಾರದಿಂದ ಸಕ್ಕರೆಯ ಪಾಕದಿಂದ ಆಟಿಗೆ ಮಾಡಿದೆ ಆ ಕಟ್ಟಿಗೆಯ ಪಡಿಯಚ್ಚು ಬೇರೆ ಮಾಡಿದರೆ ಸಕ್ಕರೆಯ ಪಾಕದ ಆಟಿಗೆ ಉಳಿದುಬಿಡುತ್ತದೆ. ಅದರಂತೆ ಆತ್ಮನು ಅಮೃತದ ಮೂರ್ತಿಯಿದ್ದಾನೆ ಅವನು ಶರೀರವು ಬಿಟ್ಟು ಹೋದೊಡನೆ ಶರೀರದಿಂದ ಕಿಂಚಿತ್ ನ್ಯೂನಾಕಾರದಿಂದ ಉಳಿದುಬಿಡುತ್ತಾನೆ. ಕೇವಲ ಆನಂದದ ಮೂರ್ತಿ ಉಳಿದುಬಿಡುತ್ತಾನೆ, ಇದರಿಂದ ವಿರುದ್ಧವಾಗಿ ಯಾರಾದರೂ ಹೇಳುವವರಿದ್ದರೆ ಅವರು ಸರ್ವಜ್ಞರ ಆತ್ಮನನ್ನು ತಿಳಿದುಕೊಳ್ಳುವುದಿಲ್ಲ.

ಯಾವಾಗ ಸಂಸಾರೀ ಆತ್ಮನು ಸಮಸ್ತ ಪರದ್ರವ್ಯಗಳ ಸಂಬಂಧದಿಂದ ಬಿಡುಗಡೆ ಹೊಂದುತ್ತಾನೆ ಆಗ ಪೌದ್ಗಲಿಕ ಉಪಾಧಿಯಿಂದ ಸರ್ವಥಾ ರಹಿತನಾಗುತ್ತಾನೆ, ಅದಕ್ಕಾಗಿಯೇ ಅವನನ್ನು ಅಮೂರ್ತಿಕನೆಂದು ಹೇಳಲಾಗಿದೆ, ದ್ರವ್ಯಕರ್ಮ ಹಾಗೂ ಭಾವಕರ್ಮಗಳಿಂದ ರಹಿತನಾಗಿ ಹೋಗಿರುವುದರಿಂದ ಅವನು ಕರ್ಮ ಸಹಿತನಿಲ್ಲ. ಮೊದಲು ವ್ಯವಹಾರದಿಂದ ಕರ್ಮಸಹಿತನೆಂದು ಹೇಳಿ ಆತ್ಮನನ್ನು ಮೂರ್ತಿಕನೆಂದು ಹೇಳಿತ್ತು. ಆದರೆ ಇಲ್ಲಿಯಂತೂ ಆತ್ಮನ ಅಮೂರ್ತಿಕತೆಯನ್ನು ತಿಳಿಸಿಕೊಡಲಾಗಿದೆ. ಮೊದಲಿನ ಗಾಥೆಯಲ್ಲಿ ಸಂಸಾರೀ ಜೀವದ ವಿಶೇಷ ವರ್ಣನೆ ಮಾಡಿ ಯಾವ ವಿಶೇಷಣಗಳನ್ನು ಹೇಳಲಾಗಿತ್ತು ಅವು ಮುಕ್ತ ಜೀವನಿಗೆ ಕೂಡ ಇರುವ ಸಂಭವವಿದೆ. ಆದರೆ ಆ ವಿಶೇಷ ಗುಣಗಳಲ್ಲಿ ಕರ್ಮಸಂಯುಕ್ತತೆಯೆಂಬ ಒಂದು ವಿಶೇಷಣವು ಅನ್ವಯಿಸುವುದಿಲ್ಲ. ಉಳಿದ ಎಲ್ಲ ವಿಶೇಷಣಗಳು ಅನ್ವಯಿಸುತ್ತವೆ. ಕರ್ಮವು ದ್ರವ್ಯಕರ್ಮ ಮತ್ತು ಭಾವಕರ್ಮವೆಂದು ಎರಡು ಪ್ರಕಾರವಿದೆ. ಜೀವದ ಸಂಬಂಧದಿಂದ ಯಾವ ಪುದ್ಗಲ ವರ್ಗಣೆಗಳ ಸ್ಕಂಧವಿದೆ ಅದು ದ್ರವ್ಯಕರ್ಮ ಮತ್ತು ಚೇತನದ-ವಿಭಾವಪರ್ಯಾಯವು ಅದು ಭಾವಕರ್ಮವಿದೆ. ಆತ್ಮನಿಗೆ ವಿಕಾರವಾಗುವ ಯೋಗ್ಯತೆಯಿದೆ ಅದು ನೈಮಿತ್ತಿಕವಿದೆ ಮತ್ತು ಅದರಲ್ಲಿ ಕರ್ಮವು ನಿಮಿತ್ತವಿದೆ. ಆ ನಿಮಿತ್ತ ನೈಮಿತ್ತಿಕ ಸಂಬಂಧದಿಂದ ಸಂಸಾರೀ ಜೀವವನ್ನು ಕರ್ಮಸಂಯುಕ್ತವೆಂದು ಹೇಳಲಾಗಿದೆ. ಸಿದ್ಧರಿಗೆ ಪೂರ್ಣಶುದ್ಧದಶೆಯಿರುವ ಕಾರಣದಿಂದ ಆ ವಿಶೇಷಣವು ಅನ್ವಯಿಸುವುದಿಲ್ಲ.

**ಪ್ರಶ್ನೆ :-** ಆತ್ಮನ ಲಕ್ಷಣವಂತೂ ಚೇತನಾ ಇದ್ದು ಅದು ವಿಭಾವದರೂಪ ಹೇಗಾಗುವುದು ? ಆತ್ಮನು ಅನಂತ ಶಕ್ತಿಯುಳ್ಳ ಚೇತನ ಪದಾರ್ಥವಾಗಿದ್ದು ಅವನು ವಿಭಾವರೂಪದಿಂದ ಹೇಗೆ ಪರಿಣಮಿಸುವನು ?

**ಉತ್ತರ :-** ಸಂಸಾರೀ ಜೀವನಿಗೆ ಅನಾದಿಕಾಲದಿಂದ ಜ್ಞಾನಾವರಣೀಯ ಮೊದಲಾದ ಕರ್ಮಗಳ ಸಂಯೋಗವಿದೆ ಆ ಸಂಯೋಗದಿಂದ ಆತ್ಮನ ಚೈತನ್ಯಶಕ್ತಿ ಕೂಡ ತನ್ನ ನಿಜಸ್ವಭಾವದಿಂದ ದೂರವಾಗಿದೆ ಎಂದರೆ ಕರ್ಮದ ಉಪಸ್ಥಿತಿಯಿದೆ ಅದರ ಆಶ್ರಯ ಮಾಡುವುದರಿಂದ ತನ್ನ ಪರ್ಯಾಯವು ತನ್ನ ಸ್ವಭಾವದಿಂದ ಚ್ಯುತವಾಗಿಬಿಟ್ಟಿದೆ ಅದಕ್ಕಾಗಿ ಅನಾದಿಯಿಂದ ಸಂಸಾರದಲ್ಲಿ ಅಜ್ಞಾನರೂಪದಿಂದ ಪರಿಣಮಿಸುತ್ತಲಿದೆ. ಕರ್ಮದ ಸಂಯೋಗದಿಂದ ವಿಭಾವಗಳಾಗುತ್ತವೆಂದು ಹೇಳಿದೆ. ಸಂಯೋಗವೆಂದು ಹೇಳುವಲ್ಲಿ ಎರಡು ಪದಾರ್ಥಗಳ ಪೃಥಕತೆಯಿದೆ ಅವೆರಡರ ಏಕತೆಯನ್ನು ತಿಳಿಸುವುದಿಲ್ಲ.ಸಂಯೋಗ ಮತ್ತು ಸ್ವಭಾವವೆಂದು ಎರಡು ಇವೆ. ಸ್ವಭಾವವನ್ನು ಮರೆತಿರುವುದೇ ಸಂಯೋಗ ದೃಷ್ಟಿ ಮಾಡಿದೆ. ಅಜ್ಞಾನಿಗೆ ಈ ಮಾತು ನೆಡುವುದಿಲ್ಲ ಎಂದರೆ ಅವನು ನಿಮಿತ್ತ-ಉಪಾದಾನದಲ್ಲಿ ದೊಡ್ಡ ವಿರೋಧವೆಬ್ಬಿಸಿದ್ದಾನೆ, ಕರ್ಮದ ಕಾರಣದಿಂದ ಆತ್ಮನ ಶಕ್ತಿಯು ತಡೆಯಲ್ಪಟ್ಟಿದೆಯೆಂಬುದು ನಿಜವಲ್ಲ . ತನ್ನ ಸ್ವರೂಪದಿಂದ ದೂರ ಸರಿಯುತ್ತಾನೆ. ಅದಕ್ಕಾಗಿ ಇತರ ಸ್ಥಳದಲ್ಲಿ ಹೋಗುತ್ತಾನೆ ಪರ್ಯಾಯದೃಷ್ಟಿಯಿಂದ ಸಂಸಾರವು ಅನಾದಿಯಿಂದಿದೆ. ಮೊದಲು ಶುದ್ಧತೆಯಿರುತ್ತದೆ ನಂತರ ಅಶುದ್ಧತೆಯಾಗಿದೆ ಎನ್ನುವಂತಿಲ್ಲದಿದ್ದರೂ ಕೂಡ ಸಮಯ, ಸಮಯಕ್ಕೆ ಹೊಸ

ಅಶುದ್ಧತೆ ಮಾಡುತ್ತಾನೆ. ಮೊದಲು ತಪ್ಪು ಮಾಡಿದ್ದನು ಅದು ನಿಂತಿದೆಯೆಂದಿಲ್ಲ . ಆದರೆ ವರ್ತಮಾನದಲ್ಲಿ ಎಷ್ಟು ವಿಭಾವದ ಬಲ ಹೆಚ್ಚುತ್ತದೆ ಅಷ್ಟು ಆತ್ಮನಿಂದ ದೂರ ಸರಿಯುತ್ತದೆ.

ದೃಷ್ಟಾಂತ-ಯಾವ ಪ್ರಕಾರ ಕೊಳೆಯ ಸಂಬಂಧದಿಂದ ನೀರು ತನ್ನ ಸ್ವಚ್ಛಸ್ವಭಾವವನ್ನು ಬಿಟ್ಟು ಕೊಡುತ್ತದೆ ಅದೇ ಪ್ರಕಾರ ಕರ್ಮದ ಸಂಬಂಧದಿಂದ ಚೇತನವು ವಿಭಾವರೂಪವಾಗುತ್ತದೆ, ಎಂದರೆ ಆತ್ಮನು ತಾನು ಕರ್ಮದ ಸಂಬಂಧ ಮಾಡಿದರೆ ವಿಭಾವರೂಪದಿಂದ ಪರಿಣಮಿಸುತ್ತಾನೆ, ಯಾವ ಪ್ರಕಾರ ನೀರಿನ ಸ್ವಚ್ಛತಾರೂಪದಿಂದ ನೀರು ಸ್ವಯಂಪರಿಣಮಿಸದೆ ಕೊಳೆಯ ಸಂಬಂಧದಿಂದ ಮಲಿನವಾಯಿತೆಂದು ಹೇಳಲಾಗುತ್ತದೆ. ನಿಮಿತ್ತ-ಉಪಾದಾನದ ಊಹಾಪೋಹ ಬಹಳಷ್ಟು ನಡೆದಿದೆ-ಈ ಮಾತನ್ನು ತಿಳಿದುಕೊಳ್ಳಲಾರದವನು 'ಉಪಾದಾನದವನು ಉಪಾದಾನದತ್ತ ಎಳೆಯುತ್ತಾನೆ ಮತ್ತು ನಿಮಿತ್ತದವನು ನಿಮಿತ್ತದತ್ತ ಎಳೆಯುತ್ತಾನೆ, ಆದರೆ ಅನೇಕಾಂತದ ಅಪೇಕ್ಷೆಯಿಲ್ಲ . ಹೇಗೆ ಕೆಲವರು ಪಕ್ಷಪಾತವುಳ್ಳವರು ಮಾತಾಡುತ್ತಿದ್ದರೆ ಅವರಲ್ಲಿ ಪ್ರತಿಯೊಬ್ಬರು ತಮ್ಮ ತಮ್ಮ ಪಕ್ಷದಂತೆ ಅರ್ಥಮಾಡುತ್ತಾರೆ ಹಾಗೆ ಶಾಸ್ತ್ರ ಓದಿ ಉಪಾದಾನದವನು ಉಪಾದಾನದತ್ತ ಎಳೆಯುತ್ತಾನೆ ಮತ್ತು ನಿಮಿತ್ತದವನು ನಿಮಿತ್ತದತ್ತ ಎಳೆಯುತ್ತಾನೆ'ಂದು ಅವನು ಮನ್ನಿಸಿದ್ದಾನೆ ಆದರೆ ನಿಜವಾಗಿ ವಸ್ತುವಿನ ಸ್ಥರೂಪವು ಹೀಗೆ ಇಲ್ಲ . ನಿಮಿತ್ತವು ವಸ್ತುವಿದೆ ನಿಜ, ಆದರೆ ಹೇಗೆ ಉಪಾದಾನದಿಂದ ಕೆಲಸವಾಗುತ್ತದೆ ಹಾಗೆ ನಿಮಿತ್ತದಿಂದ ಕೂಡ ಕೆಲಸವಾದರೆ ಏಕಾಂತಾವಾಗಿಹೋಗುವುದು ಮತ್ತು ವಸ್ತುವಿನ ಸ್ವತಂತ್ರತೆಯು ಉಳಿಯುವುದಿಲ್ಲ .

ಅನಾದಿಯಿಂದ ಅಜ್ಞಾನದ ಕಾರಣವಾಗಿ ಚೇತನಾವು ವಿಭಾವದಿಂದ ಪರಿಣಮಿಸುತ್ತಿರುವುದರಿಂದ ಸಮಸ್ತ ಪದಾರ್ಥಗಳನ್ನು ಏಕಕಾಲಕ್ಕೆ ತಿಳಿದುಕೊಳ್ಳಲು ಅದು ಅಸಮರ್ಥವಿದೆ. ಆಂಶಿಕ ಕೆಲವು ಪದಾರ್ಥಗಳನ್ನು ಕ್ಷಯೋಪಶಮದ ಯಥಾಯೋಗ್ಯತೆಯ ಪ್ರಕಾರ ತಿಳಿಯುತ್ತದೆ. ಇಲ್ಲಿ ಚೇತನಾವು ಸ್ವಲ್ಪ ಕೆಲಸ ಮಾಡುತ್ತದೆ ?ಎಂಬ ಪ್ರಶ್ನೆ ಉತ್ಪನ್ನವಾದರೆ ಅದರ ಉತ್ತರ ಹೀಗಿದೆ-ಚೇತನವು ತನ್ನ ಸ್ವಭಾವವನ್ನು ಮರೆತು ಪರದಲ್ಲಿ ನಿಂತುಕೊಂಡಿದೆ ಅದಕ್ಕಾಗಿ ಕ್ರಮಕ್ರಮವಾಗಿ ಏಕದೇಶ ತಿಳಿಯುತ್ತದೆ. ಪರದ ರಕ್ಷಣೆ ಮಾಡಹೋಗಿ ತನ್ನ ರಕ್ಷಣೆ ನಿಂತುಬಿಡುತ್ತದೆ. ಹೇಗೆ ಓರ್ವ ವ್ಯಾಪಾರಸ್ಥನದು ತರಕಾರಿ, ವಜ್ರ ಮೊದಲಾದವುಗಳ ಅಂಗಡಿಯಿದ್ದು ಅದರಲ್ಲಿ ಅವನು ತರಕಾರಿಯ ಅಂಗಡಿಯ ಮೇಲ್ವಿಚಾರಣೆ ಮಾಡುತ್ತ ಹೋದರೆ ವಜ್ರದಂಗಡಿಯದು ಹಾಗೇ ಉಳಿದುಬಿಡುತ್ತದೆ ಅದೇ ಪ್ರಕಾರ ಆತ್ಮನು ರಾಗ-ದ್ವೇಷ, ಶುಭ-ಅಶುಭ ಭಾವದ ರಕ್ಷಣೆ ಮಾಡುತ್ತ ಹೋದರೆ ಪುಣ್ಯ-ಪಾಪದ ಬಂಧವಾಗುತ್ತದೆ, ಆದರೆ ಚೈತನ್ಯದ ರಕ್ಷಣೆ ಉಳಿದುಬಿಡುವುದರಿಂದ ಅವನಿಗೆ ಧರ್ಮವು ಆಗುವುದಿಲ್ಲ .

ಯಾವಾಗ ಆ ಸಂಸಾರೀ ಆತ್ಮನು ಸ್ವಭಾವದ ಲಕ್ಷ್ಯ ಮಾಡುತ್ತಾನೆ ಮತ್ತು ಪುರುಷಾರ್ಥಪೂರ್ವಕ ಆತ್ಮನ ರಕ್ಷಣೆ ಮಾಡುತ್ತಾನೆ ಆಗ ಅವನಿಗೆ ಸಮ್ಯಗ್ದರ್ಶನಾದಿ ಸಾಮಗ್ರಿಗಳು ದೊರಕುತ್ತವೆ. ತನ್ನ ಪುರುಷಾರ್ಥದಿಂದ ಸ್ವಭಾವದ ಲಕ್ಷ್ಯದಿಂದ ಶುದ್ಧಪರ್ಯಾಯವು ಪ್ರಕಟವಾಗುವುದು ಅದು ಕಾಲಲಬ್ಧಿಯಿದೆ. ಸಮ್ಯಗ್ದರ್ಶನದೊಡನೆ ಸ್ವಭಾವದಲ್ಲಿ ಲೀನತೆ ಹೊಂದಿದರೆ ಜ್ಞಾನಾವರಣಾದಿ ಕರ್ಮಗಳ ಸಂಬಂಧವು ಬಿಡುತ್ತದೆ ಮತ್ತು ಶುದ್ಧಚೇತನಾವು ಪ್ರಕಟವಾಗುತ್ತದೆ. ಪೂರ್ಣಶುದ್ಧ ಚೇತನಾ ಆಗುವುದರಿಂದ ಆತ್ಮನು ತ್ರಿಕಾಲವರ್ತಿ ಸಮಸ್ತ ಪದಾರ್ಥಗಳನ್ನು ಒಂದು ಸಮಯದಲ್ಲಿ ಪ್ರತ್ಯಕ್ಷ ತಿಳಿದುಕೊಳ್ಳುತ್ತಾನೆ. ಕರ್ಮದ ನಿಮಿತ್ತದ ಒಲವಿನಲ್ಲಿ ಯಾವಾಗ ಜ್ಞಾನ ಚೇತನಾವು ಪ್ರವರ್ತಿಸುತ್ತಿತ್ತು ಆಗ ಅಲ್ಪಜ್ಞಾನದ ಕಾರ್ಯವಾಗುತ್ತಿತ್ತು ಆ ಚೇತನಾವು ಸ್ವಭಾವರೂಪದಿಂದ ಪರಿಣಮಿಸಿದೊಡನೆ ಪೂರ್ಣ ಪ್ರತ್ಯಕ್ಷ ಜ್ಞಾನವಾಗುತ್ತದೆ. ಅಲ್ಪಜ್ಞತೆ ಮತ್ತು ಪೂರ್ಣತೆಯೆಂಬ ಎರಡೂ ದಶೆಗಳು ಆತ್ಮನಿಂದಲೇ ಆಗುತ್ತವೆ. ಕರ್ಮದ ಅಭಾವದ ಅಥವಾ ಕರ್ಮದ ಉದಯದ ಕಾರಣದಿಂದ ಅದು ಪ್ರವರ್ತಿಸುವುದಿಲ್ಲ .

ಅನಾದಿಯಿಂದ ವಿಭಾವದ ಕಾರಣವಾಗಿ ಆತ್ಮನು ಸಂಸಾರದಲ್ಲಿ ಭ್ರಮಿಸುತ್ತಿದ್ದಾನೆ. ಆ ವಿಕಾರರಹಿತ ಆತ್ಮನ

ಶುದ್ಧ ಸ್ವಭಾವದ ಜ್ಞಾನಮಾಡಿಕೊಳ್ಳುವುದು ಅದು ಮೋಕ್ಷದ ಕಾರಣವಿದೆ. ಆ ಆತ್ಮನ ಸ್ವಭಾವದ ವರ್ಣನೆಯನ್ನಿಲ್ಲಿ ಮಾಡಲಾಗಿದೆ. ಆತ್ಮನು ಜ್ಞಾನಾನಂದಸ್ವಭಾವಿಯಿದ್ದಾನೆ, ಅವನಲ್ಲಿ ಏಕಾಗ್ರವಾದರೆ ಶುದ್ಧ ಚೇತನಾವು ಪ್ರಕಟವಾಗುವುದು. ಆ ಶುದ್ಧ ಚೇತನಾ ಪ್ರಕಟವಾದರೆ ಸಿದ್ಧಭಗವಂತರು ಕೇವಲಜ್ಞಾನದಿಂದ ಮೂರು ಕಾಲ ಮೂರು ಲೋಕಗಳನ್ನು ಒಂದು ಸಮಯದಲ್ಲಿ ತಿಳಿದುಕೊಳ್ಳುತ್ತಾರೆ. ಅದೇ ಅವರ ದೊಡ್ಡಸ್ಥಿಕೆಯಿದೆ. ಮೂರು ಕಾಲ, ಮೂರುಲೋಕಗಳನ್ನು ತಿಳಿದುಕೊಳ್ಳುವಂಥ ಆತ್ಮಶಕ್ತಿಯು ಪ್ರಕಟವಾಗುವುದೇ ಆತ್ಮನ ನಿಜವಾದ ದೊಡ್ಡಸ್ಥಿಕೆಯಿದೆ.

ಆತ್ಮನ ಯಾವ ಕೇವಲಜ್ಞಾನಮಯವಾದ ಪರಮಾತ್ಮದಶೆಯು ಪ್ರಕಟವಾಗಿದೆ ಅದು ಪರಿಣಮಿಸುತ್ತಿದ್ದರೂ ಕೂಡ ಯಾವಾಗಲೂ ಏಕರೂಪ ಇದ್ದಹಾಗೆಯೇ ಇರುತ್ತದೆ. ಆದುದರಿಂದ ಅದು ಕೂಟಸ್ಥದಂತಿದೆ ; ಅದರಲ್ಲಿ ಹೀನಾಧಿಕತೆರೂಪದ ಪರಿಣಮನವಿಲ್ಲ , ಅದಕ್ಕಾಗಿ ಅದು ಕಥಂಚಿತ್ ಕೂಟಸ್ಥವಿದೆ. ಸಿದ್ಧತ್ವಕೂಡ ಪರ್ಯಾಯವಿದೆ ಅದರಲ್ಲಿ ಕೂಡ ಉತ್ಪಾದ ವ್ಯಯರೂಪದ ಪರಿಣಮನವಂತೂ ಇದೆ, ಆದರೆ ಅದು ಬೇರೆ ಪ್ರಕಾರದಿಂದ ಆಗುವುದಿಲ್ಲ , ಇದ್ದ ಹಾಗೆಯೇ ಇರುತ್ತದೆ ಆ ಅಪೇಕ್ಷೆಯಿಂದ ಅದನ್ನು ಕೂಟಸ್ಥವೆಂದು ಕೂಡ ಹೇಳಲಾಗಿದೆ. ಛದ್ಮಸ್ಥಜೀವನ ಜ್ಞಾನದಲ್ಲಿ ಹೀನಾಧಿಕತೆಯಾಗುತ್ತದೆ ಹಾಗೆ ಸಿದ್ಧರಿಗೆ ಆಗುವುದಿಲ್ಲ . ಸಿದ್ಧ ಭಗವಂತರು ಒಂದು ಸಮಯದಲ್ಲಿ ಎಲ್ಲವನ್ನೂ ತಿಳಿದುಕೊಂಡು ಬಿಟ್ಟಿರುತ್ತಾರೆ. ಈಗ ಹೊಸದೇನೂ ತಿಳಿದುಕೊಳ್ಳುವುದು ಬಾಕಿ ಉಳಿಯದಿರುವುದರಿಂದ ಜ್ಞಾನವು ಯಾವಾಗಲೂ ಧಾರಾವಾಹಿಯಾಗಿರುತ್ತದೆ. ಅದರಿಂದ ಎಂದೂ ನಿವೃತ್ತಿಯಾಗುವುದಿಲ್ಲ . ರಾಗಾದಿ ಪರಭಾವಗಳ ಕರ್ತೃ-ಭೋಕ್ತೃತೆಯಿಂದ ಬಿಡುಗಡೆ ಹೊಂದಿ ಶುದ್ಧ ಚೇತನಾದಿಂದ ನಿಶ್ಚಲವಾಗುತ್ತ ಆತ್ಮನು ಸರ್ವಜ್ಞ ಮತ್ತು ಸರ್ವದರ್ಶಿ ಭಾವಕ್ಕೆ ಪ್ರಾಪ್ತವಾಗಿದ್ದಾನೆ ಅವನಿಗೆ ಇಷ್ಟು ಶುದ್ಧ ಚೇತನಾವೇ ಇದೆ, ರಾಗಾದಿಗಳನ್ನು ಮಾಡುವ ರೂಪದ ಕರ್ಮಚೇತನಾ ಅಥವಾ ಹರ್ಷ-ವಿಷಾದ ರೂಪದ ಕರ್ಮಫಲ ಚೇತನಾ ಅವನಿಗಿಲ್ಲ ; ರಾಗಾದಿಗಳ ವಿಭಾವಭಾವವು ಅದು ದ್ರವ್ಯಕರ್ಮದ ಕಾರಣವಿದೆ, ಆ ವಿಭಾವಭಾವದ ಕರ್ತೃತ್ವವು ಸಿದ್ಧರಿಗೆ ನಾಶವಾಗಿ ಹೋಗಿದೆ ಅದು ಹೇಗೆ ನಾಶವಾಗಿದೆಯೆಂದರೆ ಚೇತನಾವು ಚೈತನ್ಯ ಸ್ವಭಾವದಲ್ಲಿ ಲೀನವಾಗಿರುವುದರಿಂದ ಶುದ್ಧಚೇತನಾ ಉಳಿದು ಬಿಟ್ಟಿತು ಮತ್ತು ರಾಗಾದಿ ವಿಭಾವದ ಕರ್ತೃತ್ವವು ಅಳಿಸಿಹೋಯಿತು. ಅಜ್ಞಾನೀ ಜೀವ ಕೂಡ ಪರವನ್ನಂತೂ ಭೋಗಿಸುವುದಿಲ್ಲ ಅವನು ಹರ್ಷ-ಶೋಕವನ್ನು ಮತ್ತು ರಾಗಾದಿಗಳನ್ನು ಭೋಗಿಸುತ್ತಿದ್ದನು, ಶುದ್ಧ ಚೈತನ್ಯಸ್ವಭಾವದ ಜ್ಞಾನ ಮಾಡಿಕೊಂಡು ಅದರಲ್ಲಿ ಸ್ಥಿರವಾಗುವುದರಿಂದ ಆ ಹರ್ಷ-ಶೋಕ ಹಾಗೂ ರಾಗಾದಿಗಳ ಭೋಗಿಸುವಿಕೆಯು ದೂರವಾಗಿ ಒಂದು ಪರಮಾನಂದಮಯವಾದ ಶುದ್ಧ ಚೇತನಾದ್ದೇ ಅನುಭವವು ಉಳಿದುಬಿಡುತ್ತದೆ. ಹೀಗೆ ಸಿದ್ಧದಶೆಯಿದೆ.

ಅನಾದಿಕಾಲದಿಂದ ವಿಭಾವಪರ್ಯಾಯದ ಕಾರಣದಿಂದ ಆಕುಲತೆ ಹೊಂದಿ ಅದನ್ನು ಭೋಗಿಸುತ್ತಿದ್ದನು, ಅದು ದುಃಖವಿತ್ತು . ಚೈತನ್ಯಸ್ವಭಾವದ ಅನಂತ ಆನಂದದ ಅವಲಂಬನದಲ್ಲಿ ಭಗವಂತನಿಗೆ ಆ ದುಃಖದ ನಾಶವಾಗಿ ಹೋಗಿದೆ. ಮತ್ತು ಯಾವ ಸಹಜ ಸ್ವಾಧೀನ ಚೈತನ್ಯಸ್ವರೂಪ ಸುಖವು ಪ್ರಕಟವಾಗಿದೆ ಅದು ಅನಂತಕಾಲದವರೆಗೆ ಇದ್ದ ಹಾಗೆಯೇ ಇರುತ್ತದೆ. ಈ ಮಾತಂತೂ ಸಿದ್ಧರದಿದೆ. ಆದರೆ ಹಾಗೆ ಪ್ರತಿಯೊಬ್ಬ ಆತ್ಮನ ಸ್ವಭಾವವಿದೆಯೆಂಬುದನ್ನು ತಿಳಿದುಕೊಳ್ಳಬೇಕು.

ಈಗ ಆ ಸಿದ್ಧಭಗವಂತರ ಜ್ಞಾನ, ಸುಖ ಮೊದಲಾದವುಗಳ ವಿಶೇಷ ವರ್ಣನೆ ಮಾಡುತ್ತಾರೆ,-

**ಜಾದೋ ಸಯಂ ಸ ಚೇದಾ ಸವ್ವಣ್ಹೂ ಸವ್ವ ಲೋಗದರಸೀ ಯ ।**
**ಪಪ್ಪೋದಿ ಸುಹಮಣಂತಂ ಅವ್ವಾಬಾಧಂ ಸಗಮಮುತ್ತು ॥೨೯॥**

**ತನ್ನಿಂದ ತಾನೆ ಸರ್ವಜ್ಞ -ಸರ್ವಲೋಕದರ್ಶಿಯಾಗುತ್ತಿರುವ ಚೇತಯಿತನು ।**
**ತನ್ನ ಅಮೂರ್ತ, ಅವ್ಯಾಬಾಧ, ಅನಂತಸುಖವನ್ನವನು ಪಡೆಯುವನು ॥೨೯॥**

ಆ ಶುದ್ಧ ಚಿದಾತ್ಮರು ತಮ್ಮ ತಮ್ಮ ಸ್ವಾಭಾವಿಕಭಾವಗಳಿಂದಲೇ ಎಲ್ಲವನ್ನು ತಿಳಿಯುತ್ತಾರೆ. ನೋಡುತ್ತಾರೆ, ಯಾವ ನಿಮಿತ್ತದ ಕಾರಣದಿಂದ ಅಥವಾ ವ್ಯವಹಾರದ ಕಾರಣದಿಂದ ಸರ್ವಜ್ಞತೆ ಅಥವಾ ಸರ್ವದರ್ಶಿತ್ವವಾಗುವುದಿಲ್ಲ . ನನ್ನ ಆತ್ಮನೇ ಸರ್ವಜ್ಞ ಸ್ವಭಾವಿಯಿದ್ದಾನೆ, ಅಲ್ಪಜ್ಞತೆಯಾಗಲಿ ಅಥವಾ ರಾಗ-ದ್ವೇಷಗಳಾಗಲಿ ಅವು ನನ್ನ ವಸ್ತುಗಳಲ್ಲ , ಮತ್ತು ಸಂಯೋಗವಂತೂ ನನ್ನಿಂದ ಭಿನ್ನವೇ ಇದೆಯೆಂಬ ಜ್ಞಾನ ಮಾಡಿಕೊಂಡು ಅದರಲ್ಲಿ ಸ್ಥಿರಗೊಂಡರೆ ಸ್ವಭಾವದ ಅವಲಂಬನದಿಂದಲೇ ಸರ್ವಜ್ಞತೆ ಮತ್ತು ಸರ್ವದರ್ಶಿತ್ವವು ಪ್ರಕಟವಾಗುತ್ತದೆ ಮತ್ತು ಆ ಭಗವಂತರು ಕೊನೆಯಿಲ್ಲದಂಥ ಅತೀಂದ್ರಿಯ ಸ್ವಭಾವಸುಖವನ್ನು ಪಡೆದಿದ್ದಾರೆ. ಜ್ಞಾನ, ದರ್ಶನ, ಆನಂದಗಳು ಆತ್ಮನ ತ್ರಿಕಾಲಸ್ವಭಾವವಿದ್ದು ಅವು ಸಿದ್ಧರಿಗೆ ಪೂರ್ಣ ಪ್ರಕಟವಾಗಿ ಹೋಗಿವೆ, ಜ್ಞಾನ, ದರ್ಶನ ಮತ್ತು ಆನಂದ ಇವು ಮೂರೂ ತನ್ನ ಸ್ವಕೀಯ ಸ್ವಭಾವದಿಂದಲೇ ಪ್ರಕಟವಾಗುತ್ತವೆ. ಇದಲ್ಲದೆ ಮನುಷ್ಯದೇಹ ಅಥವಾ ದೇವ-ಗುರು ಮೊದಲಾದ ನಿಮಿತ್ತಗಳ ಸಾಧನದಿಂದ ಆ ಜ್ಞಾನ ಮೊದಲಾದವು ಪ್ರಕಟವಾಗುವುದಿಲ್ಲ ಅನಾದಿ ಅನಂತ ಸ್ವಭಾವವು ಜ್ಞಾನ-ದರ್ಶನ-ಆನಂದಮಯವಿದೆ. ಅವುಗಳ ಅವಲಂಬನೆಯಿಂದಲೇ ಅವನ ಪೂರ್ಣತೆಯಾಗುತ್ತದೆ.

ಆತ್ಮನು ತ್ರಿಕಾಲ ಜ್ಞಾನ-ದರ್ಶನ ಸ್ವಭಾವಿಯಿದ್ದಾನೆ ; ನೋಡುವುದು-ತಿಳಿಯುವುದು ಅವನ ತ್ರಿಕಾಲ ಸ್ವರೂಪವಿದೆ, ನೋಡುವ ತಿಳಿಯುವ ಸ್ವಭಾವದಲ್ಲಿ ಆನಂದವೇ ಇದೆ, ನೋಡುವಲ್ಲಿ-ತಿಳಿಯುವಲ್ಲಿ ಭೇದವಿಲ್ಲ . ಇಂಥ ನೋಡುವ-ತಿಳಿಯುವ ಸ್ವಭಾವವಂತೂ ತ್ರಿಕಾಲವಿದೆ. ಆದರೆ ಅನಾದಿಯಿಂದ ಆ ಸ್ವಭಾವವನ್ನು ಮರೆತು ಕರ್ಮಬಂಧದ ನಿಮಿತ್ತದಲ್ಲಿ ಏಕಾಗ್ರತೆಯ ಮುಖಾಂತರ ಅವನು ದುಃಖಿಯಾಗಿದ್ದಾನೆ, ಮತ್ತು ಅದು ತನ್ನ ಭಾವದ ಆವರಣವಿದೆ, ಅದರಲ್ಲಿ ದ್ರವ್ಯಕರ್ಮದ ಆವರಣವು ನಿಮಿತ್ತಮಾತ್ರವಿದೆ.

ನಿಜವಾಗಿ ಜೀವನು ತಾನು ತನ್ನ ಭಾವಮಿಥ್ಯಾತ್ವರೂಪವಾದ ಭಾವ ಆವರಣದಿಂದಲೇ ಸಂಸಾರದಲ್ಲಿ ಸಿಕ್ಕಿಕೊಂಡಿದ್ದಾನೆ. ಅದರಲ್ಲಿ ದ್ರವ್ಯಕರ್ಮದ ಆವರಣವಂತೂ ನಿಮಿತ್ತಮಾತ್ರವಿದೆ ಸಮಸ್ತ ಜೀವಗಳು ಪರಿಪೂರ್ಣ ಪರಮಾತ್ಮ ಸ್ವಭಾವಿಯಾಗಿದ್ದರೂ ಕೂಡ ಎಲ್ಲರಿಗೆ ಅಂಥ ಪರಮಾತ್ಮದಶೆಯೇಕೆ ಪ್ರಕಟವಾಗುವುದಿಲ್ಲ ? ಎಷ್ಟು ಸಿದ್ಧಪರಮಾತ್ಮರಿದ್ದಾರೆ ಅವರು ಯಾವ ರೀತಿ ಆಗಿದ್ದಾರೆ ? ಮತ್ತು ಯಾರು ಸಿದ್ಧರಾಗಿಲ್ಲ ಅವರು ಯಾವ ಕಾರಣದಿಂದ ಆಗಲಿಲ್ಲ ? ಅದನ್ನು ತಿಳಿಸಿಕೊಡಲಾಗಿದೆ. ಅನಾದಿಯಿಂದ ತನ್ನ ಮಿಥ್ಯಾತ್ವಾದಿ ಸಂಕ್ಲೇಶಭಾವದ ಕಾರಣದಿಂದಲೇ ಜೀವನು ಸರ್ವಜ್ಞ ಸ್ವಭಾವದ ಪ್ರತೀತಿ ಮಾಡಿಕೊಂಡು ಅದರ ಅವಲಂಬನೆ ಪಡೆದರೆ ಸರ್ವಜ್ಞತೆ ಪ್ರಕಟವಾಗುವುದು.

ವಸ್ತುವಿನ ಸ್ವಭಾವವು ಯಾವುದೇ ಪರಾವಲಂಬನದಿಂದ ಆಗುವ ಸಾಧ್ಯತೆಯಿಲ್ಲ . ತನ್ನ ಸಂಕ್ಲೇಶಭಾವದ ಕಾರಣದಿಂದ ಸರ್ವಜ್ಞಶಕ್ತಿಯು ಸಂಕೋಚವಾಗಿ ಹೋಗಿದೆ. ಪೂರ್ಣಜ್ಞಾನಸ್ವಭಾವಿಯಿದ್ದೇನೆಂಬುದನ್ನು ಮನ್ನಿಸದೆ ನಾನಂತೂ ಅಲ್ಪಜ್ಞ-ರಾಗೀ-ಪಾಮರನಿದ್ದೇನೆಂದು ಮನ್ನಿಸಿದ್ದಾನೆ. ಆ ಭಾವವೇ ಸರ್ವಜ್ಞದಶೆಯಘಾತ ಮಾಡುವಂಥದ್ದಿದೆ. ನಾನಂತೂ ಅನಾದಿಯಿಂದ ಅಲ್ಪ ಜ್ಞ, ನನ್ನಲ್ಲೇನು ಸರ್ವಜ್ಞತೆಯು ಪ್ರಕಟವಾಗುವುದು !-ಎಂದು ಮನ್ನಿಸುವ ಅಜ್ಞಾನಿಗೆ ತನ್ನ ಸರ್ವಜ್ಞಶಕ್ತಿಯ ವಿಶ್ವಾಸವುಂಟಾಗುವುದಿಲ್ಲ . ಆದರೆ ಇಲ್ಲಿ ಎಲೈ ಸೋದರನೇ ! ನಿನ್ನ ಸ್ವಭಾವವಂತೂ ತ್ರಿಕಾಲಪರಿಪೂರ್ಣ ಜ್ಞಾನಸಾಮಾರ್ಥ್ಯದಿಂದ ತುಂಬಿಕೊಂಡಿದೆ, ಅದರ ವಿಶ್ವಾಸ ಮಾಡಿದರೆ ಅದರೊಳಗಿಂದ ಸರ್ವಜ್ಞತೆಯು ಪ್ರಕಟವಾಗುವುದೆಂದು ಹೇಳಲಾಗಿದೆ.

೧) ಆತ್ಮನ ಜ್ಞಾನಶಕ್ತಿಯ ಸರ್ವಥಾ ವಿಕಾಸವಾಗಿ ಹೋದರೆ ಅವನು ಸರ್ವಜ್ಞನಾಗಿ ಬಿಡುವನು.

೨) ಮತ್ತು ಒಂದುವೇಳೆ ಜ್ಞಾನದ ಅಲ್ಪ ವಿಕಾಸ ಕೂಡ ಇರದಿದ್ದರೆ ಅದು ಜಡವಾಗಿ ಹೋಗುವುದು.

೩) ಸ್ವಲ್ಪ ವಿಕಾಸ ಮತ್ತು ಸ್ವಲ್ಪ ಆವರಣದಂಥ ಜ್ಞಾನದಶೆಯನ್ನು ಕ್ಷಯೋಪಶಮವೆಂದು ಹೇಳಲಾಗಿದೆ.ಜ್ಞಾನಶಕ್ತಿಯ

ವಿಕಾಸದಲ್ಲಿ ಅನಾದಿಯಿಂದ ಆವರಣವಿರುವುದರಿಂದ ಕ್ರಮಕ್ರಮದಿಂದ ಅದು ಸ್ವಲ್ಪ ತಿಳಿಯುತ್ತದೆ. ಜ್ಞಾನದಸ್ವಭಾವವು ತಿಳಿದುಕೊಳ್ಳುವುದಿದೆ. ಆದಾಗ್ಯೂ ಬರುವ ಕಾಲದ್ದನ್ನೇಕೆ ತಿಳಿದುಕೊಳ್ಳುವ ಸಾಧ್ಯತೆಯಿಲ್ಲವೆಂದರೆ ಪರ್ಯಾಯದಲ್ಲಿ ಆವರಣವಿದೆ.

ಮತ್ತು 'ಬರುವ ಕಾಲದ್ದನ್ನು ತಿಳಿಯುವುದಿಲ್ಲ' ಇಷ್ಟಂತೂ ಸ್ಮರಣೆಯಾಯಿತಲ್ಲ ! ಅದು ಜ್ಞಾನದ ಉದಯವಿದೆ. ಚೈತನ್ಯಸ್ವಭಾವವನ್ನು ಮರೆತುಬಿಟ್ಟಿರುವುದರಿಂದ ಪರ್ಯಾಯದಲ್ಲಿ ಜ್ಞಾನವು ಅಲ್ಪವಾಗಿ ಬಿಟ್ಟಿದೆ. ಹೀಗೆ ಆ ಜ್ಞಾನವು ಪರಾಧೀನವಿದೆ, ಬಾಧೆಯುಳ್ಳದ್ದಿದೆ, ಮೂರ್ತಿಕ ಇಂದ್ರಿಯಗಳ ಅವಲಂಬನದಿಂದ ತಿಳಿದುಕೊಂಡಿದೆ.

ಪರ್ಯಾಯದಲ್ಲಿ ಅಲ್ಪ ವಿಕಾಸವಿದ್ದರೂ ಕೂಡ ಆ ಪರ್ಯಾಯವನ್ನು ಅಂತರ್ಮುಖಿಗೊಳಿಸಿ 'ನಾನು ಎಲ್ಲ ವಿಕಾಸಶಕ್ತಿಯುಳ್ಳವನಿದ್ದೇನೆ'ಂದು ಪ್ರತೀತಿಯಲ್ಲಿ ತಂದುಕೊಂಡರೆ ಪರ್ಯಾಯದ ವಿಕಾಸವಾಗಿ ಸರ್ವಜ್ಞತೆಯು ಅರಳಿ ನಿಲ್ಲುವುದು, ಆದರೆ ಜ್ಞಾನವನ್ನು ಸರ್ವವಿಕಾಸವಾದ ಚೈತನ್ಯಶಕ್ತಿಯಲ್ಲಿ ಒಂದುಗೂಡಿಸದೆ ಪರದಲ್ಲಿ ಒಂದುಗೂಡಿಸುತ್ತಿರುವುದರಿಂದ ಜ್ಞಾನದ ವಿಕಾಸವು ನಿಂತುಕೊಂಡಿದೆ ಮತ್ತು ಅದು ಪರಾಧೀನವಾಗಿ ಹೋಗಿದೆ. ಮತ್ತು ಅಂಥ ಜೀವರು ತಮ್ಮ ಸಹಜ ಅತೀಂದ್ರಿಯ ಸುಖವನ್ನು ಮರೆತು ಪರಾಧೀನ, ವಿನಾಶಶೀಲ, ಮೂರ್ತಿಕ ಮತ್ತು ಬಾಧೆಯುಕ್ತಸುಖವನ್ನು ಭೋಗಿಸುತ್ತಿದ್ದಾರೆ.

ಯಾವುದೇ ಕರ್ಮ, ಕಾಲ ಮೊದಲಾದವುಗಳ ಕಾರಣದಿಂದ ಅಲ್ಪಜ್ಞತೆ ಮತ್ತು ದುಃಖವಿದೆಯೆಂದಿಲ್ಲ . ಅಜ್ಞಾನಿಯು ವರ್ತಮಾನ ಇಂದ್ರಿಯಗಮ್ಯ ಸ್ಥೂಲ ಸಂಯೋಗಗಳನ್ನು ನೋಡಿ, ಸಂಯೋಗ ಮತ್ತು ವಿಕಾರೀ ವಾಸನೆಯಲ್ಲಿ ಸುಖವಿದೆಯೆಂದು ಮನ್ನಿಸಿ ದುಃಖ ಭೋಗಿಸುತ್ತಾನೆ. ಆ ದುಃಖವು ಬಾಹ್ಯವ್ರತ, ತಪಸ್ಸು ಮೊದಲಾದ ಕ್ರಿಯೆಗಳಿಂದ ದೂರವಾಗುವುದಿಲ್ಲ . ಆದರೆ ಅತೀಂದ್ರಿಯ ಆತ್ಮನಶ್ರದ್ಧೆ-ಜ್ಞಾನ ರಮಣತೆಯಿಂದ ದೂರವಾಗುತ್ತದೆ.

ಆತ್ಮನ ಜ್ಞಾನವು ಸಮಸ್ತ ಬಾಧೆಗಳಿಂದ ರಹಿತ, ಪರದ ಸಹಾಯ ರಹಿತ, ಒಂದು ಸಮಯದಲ್ಲಿ ಸಮಸ್ತ ಪದಾರ್ಥಗಳನ್ನು ತಿಳಿಯುವಂಥ ನೋಡುವಂಥದ್ದಿದೆ. ಒಂದುವೇಳೆ ಪರದಿಂದ ಮತ್ತು ಪರವನ್ನು ತಿಳಿದುಕೊಳ್ಳುತ್ತಿದ್ದರೆ ಪರದ್ರವ್ಯಗಳಂತೂ ಒಂದು ಸಮಯದಲ್ಲಿ ವರ್ತಿಸುತ್ತಲಿವೆ, ಆದಾಗ್ಯೂ ತಿಳಿದುಕೊಳ್ಳುವುದಿಲ್ಲವೇಕೆ ? ತಾನು ತನ್ನ ಪೂರ್ಣಸ್ವರೂಪವನ್ನು ತಿಳಿದುಕೊಂಡು ಅದರಲ್ಲಿ ಚನ್ನಾಗಿ ಏಕಾಗ್ರವಾದರೆ ಹೇಗೆ ದ್ರವ್ಯಸ್ವಭಾವವು ಶಕ್ತಿರೂಪದಿಂದಿದೆ ಹಾಗೆ ಪೂರ್ಣ ಪರ್ಯಾಯದಲ್ಲಿ ಪ್ರಕಟವಾಗುವುದು.

ಆತ್ಮನು ಪರದಿಂದ ಬೇರೆಯಿದ್ದಾನೆ ಅವನನ್ನು ಮರೆತು ಅನಾದಿಯಿಂದ ಬಾಧೆಯುಕ್ತ ವಿರುದ್ಧಭಾವದಲ್ಲಿ ನಿಂತುಕೊಂಡಿದೆ. ಆ ಪರಾವಲಂಬನದಿಂದ ಬಿಡುಗಡೆ ಹೊಂದಿ ನಿತ್ಯಾನಂದ, ಸ್ವಾಧೀನ, ಅತೀಂದ್ರಿಯ, ಅಮೂರ್ತಿಕ, ಪರಸಂಯೋಗರಹಿತ ಅವಿನಾಶಿಯಾದ ಸುಖವನ್ನು ನಿರಂತರ ಭೋಗಿಸಬೇಕು. ಈ ಕಾರಣದಿಂದ ಸಿದ್ಧ ಪರಮೇಷ್ಠಿಗಳು ಸ್ವಯಂ ತಿಳಿದುಕೊಳ್ಳುವ-ನೋಡುವ ಸುಖವನ್ನು ಅನುಭವ ಮಾಡುವವರಿದ್ದಾರೆ, ಅವರಿಗೆ ಪರದಿಂದೇನೂ ಪ್ರಯೋಜನವಿಲ್ಲ .

ಆತ್ಮನು 'ಜ್ಞ' ಸ್ವಭಾವಿಯಿದ್ದಾನೆ. ಅದರ ಪ್ರತೀತಿ ಮತ್ತು ಏಕಾಗ್ರತೆಯ ಮುಖಾಂತರ ಪೂರ್ಣಜ್ಞಾನ ಸ್ವಭಾವದ ವಿಕಾಸವಾಗಿ ಪ್ರಕಟ ಸರ್ವಜ್ಞನಾಗಬಹುದಾಗಿದೆ.

'ಸರ್ವಜ್ಞನಿಲ್ಲ ಏಕೆಂದರೆ ಎಲ್ಲವನ್ನು ತಿಳಿಯುವ-ನೋಡುವಂಥವನು ಪ್ರತ್ಯಕ್ಷದಲ್ಲಿ ನಮಗೇನು ಕಂಡುಬರುವುದಿಲ್ಲ'ವೆಂದು ಓರ್ವ ನಾಸ್ತಿಕ ಮತಾವಲಂಬಿಯು ತರ್ಕ ಮಾಡುತ್ತಾನೆ. ಈಗಂತೂ ಸರ್ವಜ್ಞನ ಸ್ವರೂಪದಲ್ಲಿ ವಿರೋಧ ಒಡ್ಡುವವರು ಸಾಕಷ್ಟಿದ್ದಾರೆ. ಅವರಿಗೆ ಕರ್ತೃತ್ವದ ಅಭಿಮಾನ ಬಿಡುವುದಿಲ್ಲ . ಒಂದುವೇಳೆ ಸರ್ವಜ್ಞನ ಶ್ರದ್ಧೆ

ಮಾಡಿದರೆ ಅವರು ಮನ್ನಿಸಿದುದೆಲ್ಲವನ್ನು ಬದಲಿಸಬೇಕಾಗುವುದು. ಅದನ್ನು ಪೋಷಿಸುವುದಿಲ್ಲ . ಅದಕ್ಕಾಗಿ ಸರ್ವಜ್ಞರ ಅರ್ಥ ವಿಪರೀತ ಮಾಡುತ್ತಾರೆ.

**ಪ್ರಶ್ನೆ :-** ಸರ್ವಜ್ಞನನ್ನು ಮನ್ನಿಸಿದಲ್ಲಿ ಪುರುಷಾರ್ಥವೇನು ಉಳಿಯಿತು ?

**ಉತ್ತರ :-** ಸರ್ವಜ್ಞನಿದ್ದಾನೆ ಮತ್ತು ಸರ್ವಜ್ಞನು ದೃಷ್ಟಾ ಇದ್ದಾನೆ ಅವನು ಕರ್ತೃವಿಲ್ಲವೆಂದು ಅಂತರ್ಯದಲ್ಲಿ ನಿಶ್ಚಿತವಾದರೆ ಸಂಸಾರದ ಕಡೆಗಿರುವ ಅಭಿರುಚಿ ಮತ್ತು ಕರ್ತೃತ್ವಬುದ್ಧಿಯು ಹೊರಟು ಹೋಗುವುದು ಹಾಗೂ ಸರ್ವಜ್ಞನ ಪ್ರತೀತಿಯಲ್ಲಿ ಜ್ಞಾನಸ್ವಭಾವವೇ ಶರಣೆದೆಯೆಂದು ಸತ್ಯಪುರುಷಾರ್ಥ ಮಾಡಬೇಕು. ಸ್ವಭಾವವು ಪರಿಪೂರ್ಣವಿದೆಯೆಂದು ಪ್ರತೀತಿ ಮಾಡದವನಿಗೆ ಈ ಮೂಲಮಾತು ನೆಲೆಗೊಳ್ಳುವುದಿಲ್ಲ ,

ಸರ್ವಜ್ಞರು ಆಗುವುದೆಲ್ಲವನ್ನು ತಿಳಿದುಕೊಂಡಿರುವರೆಂಬ ನಿಶ್ಯಂಕಪ್ರತೀತಿಯಿದ್ದರೆ ಸರ್ವಜ್ಞಶಕ್ತಿಯು ಯಾವ ಕಾರಣದಿಂದ ಪ್ರಕಟವಾಯಿತು ಮತ್ತು ಯಾವುದರ ಲಕ್ಷ್ಯದಿಂದ ಪ್ರಕಟವಾಯಿತೆಂಬುದರ ಸರಿಯಾದ ನಿರ್ಣಯ ಮಾಡಿದರೆ ಅನಂತ ಪುರುಷಾರ್ಥದೊಡನೆ ಸರ್ವಸಮಾಧಾನವಾಗುವ ಸಾಧ್ಯತೆಯಿದೆ. ಒಂದು ಸಮಯದಲ್ಲಿ ಮೂರು ಕಾಲ-ಮೂರು ಲೋಕಗಳನ್ನು ತಿಳಿದುಕೊಳ್ಳುವಂಥ ಪೂರ್ಣ ಸಾಮರ್ಥ್ಯದ ಪತ್ತೆಯಾದವನಿಗೆ ಅಲ್ಪಜ್ಞಾನದಿಂದ, ನಿಮಿತ್ತದಿಂದ, ರಾಗದಿಂದ ಅಥವಾ ಪರದಲ್ಲಿನ ಕರ್ತೃತ್ವಬುದ್ಧಿಯಿಂದ ಸರ್ವಜ್ಞರಾಗುವುದಿಲ್ಲ , ಆದರೆ ಅಂತರ್ಯದಲ್ಲಿ ಶಕ್ತಿರೂಪದಿಂದ ಪೂರ್ಣಜ್ಞಾನ ಸ್ವಭಾವವಿದೆ ಅದರಲ್ಲಿ ಏಕಾಗ್ರವಾದರೆ ಪ್ರತ್ಯಕ್ಷ ಕೇವಲಜ್ಞಾನವಾಗುವ ಸಾಧ್ಯತೆಯಿದೆಯೆಂಬ ನಿರ್ಣಯವಾಗುವುದು. ಇಂಥ ದೃಷ್ಟಿ-ರುಚಿಯಾದವನಿಗೆ ಸಂಸಾರದ ರುಚಿಹೋಗಿ ಪರದಲ್ಲಿ ಉದಾಸೀನವಾಗಿ ಕರ್ತೃತ್ವಬುದ್ಧಿಯು ಹೋಗುವುದು. ಇಂಥ ಅಪೂರ್ವ ಪುರುಷಾರ್ಥವು ಜ್ಞಾನದಲ್ಲಿ ಏಕಾಗ್ರವಾಗುವುದರಿಂದ ಬರುವುದು.

**ಪ್ರಶ್ನೆ :-** ಪರಲೋಕವಿದೆಯೆಂಬುದರ ಪ್ರಮಾಣವೇನು ?

**ಉತ್ತರ :-** ಈ ಅನೇಕ ಜೀವರುಗಳಿದ್ದಾರೆ ಅವರ ಬುದ್ಧಿಯಲ್ಲಿ , ಆಕಾರದಲ್ಲಿ ರೂಪದಲ್ಲಿ ಸಧನತೆ-ನಿರ್ಧನತೆ, ರೋಗ-ನಿರೋಗ ಮೊದಲಾದುವಲ್ಲಿ ಯಾವ ವಿಚಿತ್ರತೆಯು ಕಂಡುಬರುತ್ತದೆ ಅದರ ಮೇಲಿಂದ ಮೊದಲಿನ ಕಾರಣದಲ್ಲಿ ಅಂತರವಿದೆಯೆಂಬುದು ಸಿದ್ಧವಾಗುತ್ತದೆ. ಮತ್ತು ಆ ಪೂರ್ವಭವದ ಫಲವು ವರ್ತಮಾನಭವವಿದೆ.

ಆಂಶಿಕರಾಗದ ಅಭಾವ ಮತ್ತು ನಿರ್ಮಲ ವಿಕಾಸದ ಪ್ರಕಟತೆಯಾಗುವ ಸಾಧ್ಯತೆಯಿದೆಯೆಂದರೆ ಯಾರಿಗಾದರೂ ಸರ್ವಾಂಶವು ಆಗುವ ಸಾಧ್ಯತೆಯಿದೆ. ಮತ್ತು ಇಲ್ಲಿ ಕ್ರಮದಿಂದ ತಿಳಿದುಕೊಳ್ಳುವುದು ಪ್ರತ್ಯಕ್ಷವಿದೆಯೆಂದಮೇಲೆ ಯಾರ ರಾಗ-ದ್ವೇಷ-ಅಜ್ಞಾನಗಳು ಸರ್ವಥಾ ಹೋಗಿವೆ, ಮತ್ತು ಜ್ಞಾನಸ್ವಭಾವದ ಪೂರ್ಣ ವಿಕಾಸವಾಗಿದೆ ಅವರು ಅಕ್ರಮದಿಂದ ಹಾಗೂ ಪ್ರತ್ಯಕ್ಷ ತಿಳಿದುಕೊಳ್ಳುವವರಾಗುವ ಸಾಧ್ಯತೆಯಿದೆ ಮತ್ತು ಅವರು ಸರ್ವಜ್ಞರಿದ್ದಾರೆ.

ಈ ಪಂಚಾಸ್ತಿಕಾಯದಲ್ಲಿ ಜೀವದ್ರವ್ಯದ ವಿಶೇಷ ವರ್ಣನೆ ನಡೆಯುತ್ತಿದೆ. ಜೀವದ ಸ್ವಭಾವವು ತಾನು ಸ್ವಯಂ ಸರ್ವಜ್ಞ ಮತ್ತು ಸರ್ವದರ್ಶಿಯಾಗುವುದಿದೆ. ದೇಹದಿಂದ ಭಿನ್ನವಾಗಿ ಆತ್ಮತತ್ತ್ವವಿದೆ, ಅದರಲ್ಲಿ ತನ್ನ ಸ್ವಭಾವದಿಂದ ಎಲ್ಲವನ್ನು ತಿಳಿದುಕೊಳ್ಳುವ-ನೋಡುವ ಸಾಮಾರ್ಥ್ಯವಿದೆ. ಎಲ್ಲಿ ಜ್ಞಾನ-ದರ್ಶನದ ಪೂರ್ಣತೆಯಾಗಿದೆ ಅಲ್ಲಿ ಆನಂದದ ಪೂರ್ಣತೆ ಕೂಡ ಇದೆ. ಯಾರಿಗೆ ಆತ್ಮನ ಹಿತ ಮಾಡಿಕೊಳ್ಳುವುದಿದೆ ಅವರು ಏನು ಮಾಡಬೇಕೆಂಬುದನ್ನು ಇಲ್ಲಿ ಹೇಳಿದೆ.

ಶರೀರವು ಜಡವಿದೆ, ಅಜೀವವಿದೆ ; ಭಗವಾನಾತ್ಮನು ಚೈತನ್ಯಮೂರ್ತಿಯಿದ್ದಾನೆ. ನನ್ನಲ್ಲಿಯೇ ಸರ್ವಜ್ಞ-ಸರ್ವದರ್ಶಿ ಮತ್ತು ಪೂರ್ಣ ಆನಂದವಾಗುವ ಸಾಮರ್ಥ್ಯವಿದೆ. ಪರ್ಯಾಯದಲ್ಲಿ ಅಲ್ಪಜ್ಞತೆಯಿದ್ದರೂ ಕೂಡ ನಾನು ಸ್ವಯಂ ನನ್ನ ಸ್ವಭಾವದಿಂದ ಪೂರ್ಣ ಜ್ಞಾನ-ದರ್ಶನ-ಆನಂದಮಯವಾಗಬಹುದಾಗಿದೆ. ಹೀಗೆ ಪ್ರಥಮ ಪ್ರತೀತಿ ಮಾಡಿಕೊಳ್ಳಬೇಕು. ಅದರ ಸಲುವಾಗಿ ಮೊದಲು ಸರ್ವಜ್ಞನ ಸಿದ್ಧಿ ಮಾಡಲಾಗಿದೆ.

ಈ ಜಗತ್ತಿನಲ್ಲಿ ಸರ್ವಜ್ಞನಿಲ್ಲವೆ ಇಲ್ಲ, ಎಂದರೆ ಯಾವ ಆತ್ಮನು ಮೂರು ಕಾಲ-ಮೂರು ಲೋಕಗಳನ್ನು ತಿಳಿದುಕೊಳ್ಳುವಂಥ ಜ್ಞಾನವುಳ್ಳವನಿದ್ದಾನೆಂದು ನಮಗಂತೂ ಭಾಸವಾಗುವುದಿಲ್ಲ ಏಕೆಂದರೆ ಸರ್ವಜ್ಞನು ಪ್ರತ್ಯಕ್ಷ ಕಂಡುಬರುವುದಿಲ್ಲ ಹೇಗೆ ಕತ್ತೆಯ ಕೋಡು ಕಂಡುಬರುವುದಿಲ್ಲ ಹಾಗೆ ಸರ್ವಜ್ಞನು ಕಂಡುಬರುವುದಿಲ್ಲ . ಅದಕ್ಕಾಗಿ ಸರ್ವಜ್ಞನಿಲ್ಲವೆಂದು ನಾಸ್ತಿಕನು ಕುತರ್ಕ ಮಾಡುತ್ತಾನೆ. ನಿಮಗಂತೂ ಅನಂತ ಸರ್ವಜ್ಞರಿದ್ದಾರೆಂದು ಹೇಳಿದೆ, ಪ್ರತಿಯೊಂದು ಜೀವದಲ್ಲಿ ಸರ್ವಜ್ಞರಾಗುವ ಸಾಮರ್ಥ್ಯವಿದೆ, ಈಗಲೂ ಮಹಾವಿದೇಹದಲ್ಲಿ ಸೀಮಂಧರ ಭಗವಾನ ಮೊದಲಾದ ಸರ್ವಜ್ಞ ಭಗವಂತರು ವಿರಾಜಿಸುತ್ತಿದ್ದಾರೆ. ಆದರೆ ನಮಗಂತೂ ಸರ್ವಜ್ಞರು ಕಂಡುಬರುವುದಿಲ್ಲ .

ಎಲೈ ಸೋದರನೇ ! ಸರ್ವಜ್ಞರಿಲ್ಲವೆಂದು ನೀನು ಹೇಗೆ ಹೇಳುತ್ತಿರುವೆ ? ಈ ಕಾಲದಲ್ಲಿ ಮತ್ತು ಈ ಕ್ಷೇತ್ರದಲ್ಲಿಯೇ ಸರ್ವಜ್ಞರಿಲ್ಲವೊ ? ಅಥವಾ ಎಲ್ಲ ಕಾಲದಲ್ಲಿ ಮತ್ತು ಎಲ್ಲ ಕ್ಷೇತ್ರದಲ್ಲಿ ಸರ್ವಜ್ಞರಿಲ್ಲ ? ಈ ಕಾಲ ಮತ್ತು ಈ ಕ್ಷೇತ್ರದಲ್ಲಿ ಸರ್ವಜ್ಞರಿಲ್ಲವೆಂಬುದಂತೂ ಸರಿಯಿದೆ, ಆದರೆ ಜಗತ್ತಿನಲ್ಲಿ ಎಲ್ಲಿಯೂ ಸರ್ವಜ್ಞರಿಲ್ಲವೆಂದು ಹೇಳುತ್ತಿರುವೆಯಾದರೆ ನೀನೇನು ಮೂರು ಕಾಲ ಮತ್ತು ಮೂರು ಲೋಕಗಳನ್ನು ನೋಡಿರುವೆಯೇನು ? ಸಮಸ್ತ ಕ್ಷೇತ್ರಗಳನ್ನು ನೋಡಿದಲ್ಲದೆ 'ಇಲ್ಲಿ ಸರ್ವಜ್ಞರಿಲ್ಲ'ವೆಂದು ಹೇಳುವ ಸಾಧ್ಯತೆಯಿಲ್ಲ , ಎಂದರೆ ಎಲ್ಲ ಕ್ಷೇತ್ರಗಳಲ್ಲಿ ಮತ್ತು ಎಲ್ಲ ಕಾಲದಲ್ಲಿ ಸರ್ವಜ್ಞರಿಲ್ಲವೆಂದು ಹೇಳುವ ನೀನೇ ಮೂರುಕಾಲ ಮತ್ತು ಮೂರು ಲೋಕಗಳನ್ನು ತಿಳಿದುಕೊಳ್ಳುವವನಾಗಿ ಬಿಟ್ಟಿರುವೆ ಎಂದರೆ ಇದರಿಂದಲೇ ಸರ್ವಜ್ಞರ ಸಿದ್ಧಿಯಾಗಿ ಬಿಟ್ಟಿತು.

ಇನ್ನು ಕತ್ತೆಗೆ ಕೋಡು ಇಲ್ಲ , ಆದರೆ ಎಮ್ಮೆ ಮೊದಲಾದುವಕ್ಕಂತೂ ಕೋಡುಗಳಿವೆಯಲ್ಲವೇ ? ಹಾಗೆ ಈ ಕ್ಷೇತ್ರದಲ್ಲಿ ಸರ್ವಜ್ಞರಿಲ್ಲ , ಆದರೆ ಪಂಚವಿದೇಹ ಕ್ಷೇತ್ರದಲ್ಲಂತೂ ಸರ್ವಜ್ಞರಿದ್ದಾರೆ, ಅದಕ್ಕಾಗಿ ಸರ್ವಥಾ ಸರ್ವಜ್ಞರ ಅಭಾವವಿಲ್ಲ ಯಾವ ಪ್ರಕಾರ ಇಂಥ ಸ್ಥಳದಲ್ಲಿ ಕೊಡವಿಲ್ಲ'ವೆಂದು ನೀನು ಯಾವಾಗ ಹೇಳುವ ಸಾಧ್ಯತೆಯಿದೆ ? ಯಾವಾಗ ಆ ಕ್ಷೇತ್ರವನ್ನು ನೋಡಿರುವೆ ಆಗ ! ಅದೇ ಪ್ರಕಾರ ನೀನು ಎಲ್ಲ ಕ್ಷೇತ್ರಗಳನ್ನು ನೋಡಿದ್ದರೆ ಮಾತ್ರ 'ಸರ್ವಜ್ಞನಿಲ್ಲ'ವೆಂದು ಹೇಳುವ ಸಾಧ್ಯತೆಯಿದೆ. ಎಂದರೆ ಅದರಲ್ಲಿ ಸರ್ವಜ್ಞನ ಸಿದ್ಧಿಯಾಗಿಬಿಡುತ್ತದೆ. ತಾನು ಯಾವ ಕ್ಷೇತ್ರವನ್ನು ನೋಡಿಲ್ಲ ಆ ಕ್ಷೇತ್ರದಲ್ಲಿ 'ಇಲ್ಲಿ ಕೊಡವಿಲ್ಲ' ಅಥವಾ 'ಇಲ್ಲಿ ಸರ್ವಜ್ಞನಿಲ್ಲ'ವೆಂದು ನಿಷೇಧ ಮಾಡಲು ಬರುವುದಿಲ್ಲ .

ಯಾವನು ಸರ್ವಜ್ಞನಿದ್ದಾನೆ ಅವನು ಸರ್ವಜ್ಞನ ನಿಷೇಧ ಮಾಡುವ ಸಾಧ್ಯತೆಯಿಲ್ಲ ಮತ್ತು ಯಾವನು ಸರ್ವಕಾಲ ಮತ್ತು ಸರ್ವಲೋಕವನ್ನು ನೋಡಿಲ್ಲ ಅವನು ಕೂಡ ಸರ್ವಜ್ಞನ ನೀಷೇಧ ಮಾಡುವ ಸಾಧ್ಯತೆಯಿಲ್ಲ , ನೋಡುವವನು ನಿಷೇಧ ಮಾಡುವುದಿಲ್ಲ ಮತ್ತು ಕುರುಡನು ವಿಶ್ವಾಸ ಮಾಡುವುದಿಲ್ಲ .

'ನಮಗೆ ಸರ್ವಜ್ಞ ಕಂಡುಬರುವುದಿಲ್ಲ'ವೆಂದು ನೀನು ಹೇಳುತ್ತಿರುವೆ, ಆದರೆ ಸೋದರನೇ ! ನೀನಂತೂ ಬರುವ ಕಾಲದ ಮಾತು ಕೂಡ ತಿಳಿಯುವ ಸಾಧ್ಯತೆಯಿಲ್ಲ , ಎಂದರೆ ಅದರಿಂದೇನು ಬರುವ ಕಾಲದ ಅಭಾವವಿದೆ ? ಇಲ್ಲ , ಅದರಂತೆ ನಮ್ಮ ಚಿತ್ತದ ಭಾವವನ್ನು ಅಥವಾ ಒಂದು ಸೂಕ್ಷ್ಮ ಪರಮಾಣುವನ್ನು ಕೂಡ ನೀನು ತಿಳಿಯುವ ಸಾಧ್ಯತೆಯಿಲ್ಲ, ಎಂದಮೇಲೆ ನಮ್ಮ ಚಿತ್ತದ ಅಥವಾ ಪರಮಾಣುವಿನ ಅಭಾವವಿದೆಯೇನು ? ಇಲ್ಲ . ಅದರಂತೆ ಸರ್ವಜ್ಞನು ನಿನಗೆ ನಿನ್ನ ಸ್ಥೂಲಜ್ಞಾನದಲ್ಲಿ ತಿಳಿದುಬಾರದಿದ್ದರೆ ಅದರಿಂದೇನು ಸರ್ವಜ್ಞನ ಅಭಾವವು ಸಿದ್ಧವಾಗುವುದಿಲ್ಲ.

**ಪ್ರಶ್ನೆ :-** ನೀವು ಸರ್ವಜ್ಞನ ಅಸ್ತಿತ್ವವನ್ನು ಯಾವ ರೀತಿ ಸಿದ್ಧಮಾಡುವಿರಿ ?

**ಉತ್ತರ :-** ನಾವು ನಮ್ಮ ಜ್ಞಾನದ ಅಂಶದ ಮೇಲಿಂದ ಸರ್ವಜ್ಞನ ಅನುಮಾನ ಮಾಡುತ್ತೇವೆ.ವಿಕಲ್ಪವು ಹೊರಟುಹೋಗಿ ಜ್ಞಾನವು ಸ್ಥಿರವಾಗಿ ಉಳಿಯುತ್ತದೆ. ಮತ್ತು ಆ ಜ್ಞಾನವನ್ನು ಧಾರಣ ಮಾಡುವ ಜ್ಞಾನಸ್ವಭಾವಿಯಾದ ಆತ್ಮನಲ್ಲಿ ಏಕಾಗ್ರವಾಗಿದ್ದರೆ ರಾಗ-ದ್ವೇಷಗಳು ಬಿಟ್ಟು ಪೂರ್ಣಜ್ಞಾನ ಕೂಡ ಪ್ರಕಟವಾಗುವ ಸಾಧ್ಯತೆಯಿದೆಯೆಂದು ನಮ್ಮ ಅನುಮಾನವಿದೆ. ಮತ್ತು ಯಾವ ಊಹೆಯಿದೆ ಅದು ಬೇರೆ ಯಾರಿಗಾದರೂ ಪ್ರತ್ಯಕ್ಷ ಕೂಡ ಅವಶ್ಯವಾಗಿ ವರ್ತಿಸುತ್ತದೆ.

ಇದರಿಂದ ಸರ್ವಜ್ಞನ ಬಾಧಕತೆಯ ಅಭಾವವಿದೆ.

ಜ್ಞಾನದ ಅಲ್ಪ ಪ್ರಕಟತೆಯೊಳಗಿಂದ ವಿಶೇಷ ಪ್ರಕಟತೆಯಾಗುವುದು ಕಂಡು ಬರುತ್ತದೆಯೆಂದಮೇಲೆ ಅದು ಎಲ್ಲಿಂದ ಬಂತು ? ಜ್ಞಾನದ ಪೂರ್ಣ ಸ್ವಭಾವವು ತುಂಬಿಕೊಂಡಿದೆ ಅದರೊಳಗಿಂದಲೇ ಆ ವಿಶೇಷ ಜ್ಞಾನವು ಬಂದಿದೆ ಮತ್ತು ಅದರ ಅವಲಂಬನದಿಂದ ಪೂರ್ಣ ಜ್ಞಾನವು ಪ್ರಕಟವಾಗಿ ಸರ್ವಜ್ಞತೆಯು ಪ್ರಕಟವಾಗುತ್ತದೆಯೆಂಬ ಸ್ವಭಾವದ ಪ್ರತೀತಿಯೊಡನೆ ಸರ್ವಜ್ಞನ ಊಹೆಯಾಗುತ್ತದೆ.

ಯಾವ ಪ್ರಕಾರ ಕಪ್ಪು ಮೆಣಸಿನಕಾಳಿನ ಸ್ವಭಾವದಲ್ಲಿ ತುಂಬಿಕೊಂಡಿರುವಂಥ ಕಾರತನವೇ ಪ್ರಕಟವಾಗುತ್ತದೆ ಅದೇ ಪ್ರಕಾರ ಆತ್ಮನಲ್ಲಿ ಜ್ಞಾನಸ್ವಭಾವವು ತ್ರಿಕಾಲ ಬಿದ್ದುಕೊಂಡಿದೆ. ಅದರ ವೀತರಾಗ ವಿಜ್ಞಾನವಾದರೆ ಅದರೊಳಗಿಂದಲೇ ಪೂರ್ಣಾನಂದಮಯವಾದ ಸರ್ವಜ್ಞದಶೆಯು ಪ್ರಕಟವಾಗುವುದು. ಜ್ಞಾನದ ಕಡೆಗೆ ಏಕಾಗ್ರವಾದರೆ ಜ್ಞಾನವು ಅರಳುತ್ತದೆ ಮತ್ತು ಪೂರ್ಣ ಏಕಾಗ್ರವಾದರೆ ಪೂರ್ಣಜ್ಞಾನ ಕೂಡ ಅರಳುತ್ತದೆ, ನೋಡಿರಿ ! ಇಲ್ಲಿ ಸರ್ವಜ್ಞನ ಸಿದ್ಧಿಯ ಅಪೇಕ್ಷೆಯಿಂದ ಮೋಕ್ಷಮಾರ್ಗ ಕೂಡ ಏಕತ್ರವಾಗಿ ಬಂದುಬಿಡುತ್ತದೆ.

ಆತ್ಮನದು ಜ್ಞಾನಸ್ವಭಾವವಿದೆ. ಜ್ಞಾನಸ್ವಭಾವವನ್ನು ಸ್ವೀಕರಿಸಿ ಅದರಲ್ಲಿ ಮಗ್ನನಾಗಿ ಸರ್ವಜ್ಞರಾದ ಆತ್ಮರು ಈ ಜಗತ್ತಿನಲ್ಲಿದ್ದಾರೆ. ಯಾರಿಗೆ ಆತ್ಮನ ಸ್ವೀಕಾರವಿದೆ ಅವರಿಗೆ ಇಂಥ ಸರ್ವಜ್ಞ ಸ್ವಭಾವವನ್ನು ಸ್ವೀಕರಿಸಬೇಕಾಗುವುದು. ಸರ್ವಜ್ಞತೆಯೇನು ಹೊರಗಿನಿಂದ ಬರುವುದಿಲ್ಲ. ಪರ್ಯಾಯವನ್ನು ಅಂತರ್ಯದಲ್ಲಿ ಏಕಾಗ್ರ ಮಾಡಿದರೆ ಅಲ್ಪಜ್ಞತೆಯೊಳಗಿಂದ ಸರ್ವಜ್ಞತೆಯಾಗಿ ಹೋಗುವುದು. ನಿನ್ನ ಆತ್ಮಕಲ್ಯಾಣದ ಮಾರ್ಗವು ನಿಮಿತ್ತ ಮತ್ತು ರಾಗರಹಿತವಾದ ನಿನ್ನ ಏಕಾಕಿ ಧ್ರುವಸ್ವಭಾವದಲ್ಲಿ ಪರಿಣತಿಯನ್ನು ಏಕಾಗ್ರ ಮಾಡುವುದೇ ಇದೆಯೆಂದು ಹೇಳುವಂಥ ಸರ್ವಜ್ಞದೇವನು ಅವನೇ ದೇವನಿದ್ದಾನೆ, ಹೀಗೆ ಹೇಳುವಂಥ ಗುರು ಅವನೇ ನಿಜವಾದ ಗುರು ಇದ್ದಾನೆ ಮತ್ತು ಹೀಗೆ ತಿಳಿಸಿಕೊಡುವಂಥ ವಾಣಿಯೇ ಶಾಸ್ತ್ರವಿದೆ. ಇವರುಗಳನ್ನು ಹೊರತುಪಡಿಸಿ ಇತರರನ್ನು ಮನ್ನಿಸಿದರೆ ವ್ಯವಹಾರ ಕೂಡ ಅಸತ್ಯವಿದೆ, ಮತ್ತು ಬಾಹ್ಯದ ಅವಲಂಬನದಲ್ಲಿ ಧರ್ಮವನ್ನು ಮನ್ನಿಸುವವನು ಮೂರ್ಖನಿದ್ದಾನೆ.

ಸರ್ವಜ್ಞನಿದ್ದಾನೆ, ಅವನಿಗೆ ಬಾಧಕವಾದ ಯಾವ ಪ್ರಮಾಣಗಳಿಲ್ಲ. ಆತ್ಮನ ಸ್ವಭಾವವೇ ಜ್ಞಾನವಿದೆ. ಅದರಲ್ಲಿ ಶರೀರ ಮೊದಲಾದುವಂತೂ ಎಲ್ಲಿ ಉಳಿದವು ? ಮತ್ತು ರಾಗಾದಿಗಳು ಕೂಡ ಅವನ ಸ್ವಭಾವದಲ್ಲಿ ಇಲ್ಲ. ಆತ್ಮನಲ್ಲಿ ಜ್ಞಾನಾದಿಗುಣಗಳು ತ್ರಿಕಾಲ ಧ್ರುವವಿವೆ. ಅವು ಕ್ಷಣಕ್ಷಣಕ್ಕೆ ಬದಲಾಗುತ್ತ . ಹೋಗುತ್ತವೆ ಅವು ಬದಲಾಗುವ ಸ್ವಭಾವದ ಆಶ್ರಯದಿಂದ ಆಗುವಂಥ ಜ್ಞಾನ-ಆನಂದ ಮೊದಲಾದವು ಅರಳುತ್ತವೆ, ಆದರೆ ಯಾವ ನಿಮಿತ್ತ ಮೊದಲಾದವುಗಳ ಆಶ್ರಯದಿಂದ ಜ್ಞಾನಾದಿಗಳು ಅರಳುವುದಿಲ್ಲ ಪರ್ಯಾಯದಲ್ಲಿ ರಾಗಾದಿಗಳು ಮತ್ತು ಅಲ್ಪಜ್ಞತೆಯಿದೆ, ಅದಂತೂ ಮೇಲಿನ ಕ್ಷಣಿಕ ಭಾಗವಿದೆ, ಮತ್ತು ಧ್ರುವ ಸ್ವಭಾವವು ಪೂರ್ಣ ತ್ರಿಕಾಲವಿದೆ. ಆತ್ಮನು ಚೈತನ್ಯ ರತ್ನನಿದ್ದಾನೆ, ಅವನ ಪರ್ಯಾಯದ ಒಂದು ಪಾರ್ಶ್ವದಲ್ಲಿ ಸ್ವಲ್ಪ ಕಲೆಯಿದೆ, ಆದರೆ ಜ್ಞಾನ-ದರ್ಶನ-ಆನಂದದ ಪಿಂಡನಾದ ಪೂರ್ಣ ಚೈತನ್ಯ ರತ್ನನು ಕಲಂಕವುಳ್ಳವನಿಲ್ಲವೆಂದು ಪರ್ಯಾಯವನ್ನು ಗೌಣಮಾಡಿ, ಧ್ರುವ ಆನಂದಕಂದನಾದ ಚಿದಾನಂದ ಸ್ವಭಾವವನ್ನು ಪ್ರತೀತಿಯಲ್ಲಿ ತಂದುಕೊಂಡು ಅದರಲ್ಲಿ ಏಕಾಗ್ರತೆ ಮಾಡಿದರೆ ಆತ್ಮನೊಳಗಿನ ರಾಗಾದಿಗಳು ಹೊರಟುಹೋಗಿ ಪೂರ್ಣ ಜ್ಞಾನಾನಂದವು ಪ್ರಕಟವಾಗುವುದು. ಸರ್ವಜ್ಞತೆಯಾದರೆ ಅಲ್ಲಿ ಪೂರ್ಣ ಆನಂದವು ಇದ್ದೇ ಇರುತ್ತದೆ.

ಮೊದಲು ಸಾಧಕದಶೆಯಲ್ಲಿ ಅಪೂರ್ಣ ಆನಂದವಿತ್ತು ; ಅಜ್ಞಾನಿಯು ಪರದಲ್ಲಿ ಸುಖ ಮತ್ತು ಆನಂದವನ್ನು ಮನ್ನಿಸುತ್ತಿದ್ದನು, ಅದಕ್ಕೆ ಪ್ರತಿಯಾಗಿ ನಾನಂತೂ ಪರದಿಂದ ಭಿನ್ನ ಚಿದಾನಂದ ಸ್ವಭಾವಿಯಿದ್ದೇನೆಂದು ಅಂತರ್ದೃಷ್ಟಿಯ ವಿಷಯ ಮಾಡಿದರೆ ಸ್ವಭಾವದೊಳಗಿಂದ ಆನಂದವು ಪ್ರಕಟವಾಗುವುದು ಮತ್ತು ಪೂರ್ಣಾನಂದದ ಪ್ರತೀತಿಯಾಗಿ ಹೋಗುವುದು. ನೋಡಿರಿ ! ಇದು ಸರ್ವಜ್ಞನ ಪ್ರತೀತಿಯಿದೆ !

ತಾನು ತನ್ನ ಆತ್ಮನಲ್ಲಿ ಪೂರ್ಣ ಜ್ಞಾನ ಮತ್ತು ಆನಂದವನ್ನು ಪ್ರಕಟಮಾಡಿಕೊಳ್ಳುವುದರ ಬೆನ್ನು ಹತ್ತಿದ್ದರೆ ತಮಗಿಂತ ಮೊದಲು ಪೂರ್ಣ ಜ್ಞಾನಾನಂದವನ್ನು ಪ್ರಕಟಮಾಡಿಕೊಂಡ ಜೀವರುಗಳಾಗಿ ಹೋಗಿದ್ದಾರೆ ಅವರು ಹೇಗಿದ್ದರೆಂಬುದನ್ನು ನಿಶ್ಚಿತ ಮಾಡಿಕೊಳ್ಳಬೇಕಾಗುವುದು.

ಅನಾದಿಕಾಲದಿಂದ ಕ್ರಮಕ್ರಮದಿಂದ ಸರ್ವಜ್ಞರು ಆಗುತ್ತಲೇ ಬಂದಿದ್ದಾರೆ,

ಸಿದ್ಧ ಲೋಕದಲ್ಲಿ ಇಂಥ ಅನಂತ ಸಿದ್ಧರು ಸರ್ವಜ್ಞತೆಯಿಂದ ವಿರಾಜಿಸುತ್ತಿದ್ದಾರೆ,

ಮಹಾವಿದೇಹ ಕ್ಷೇತ್ರದಲ್ಲಿ ಸೀಮಂಧರಾದಿ ತೀರ್ಥಂಕರರು ಮತ್ತು ಲಕ್ಷಾಂತರ ಕೇವಲೀ ಭಗವಂತರುಗಳು ಈಗ ದೇಹ ಸಹಿತ ಸರ್ವಜ್ಞತೆಯಿಂದ ವಿರಾಜಿಸುತ್ತಿದ್ದಾರೆ.

ಈ ರೀತಿಯಾಗಿ ಅನಾದಿಕಾಲ, ಸಿದ್ಧಲೋಕ, ಮಹಾವಿದೇಹಕ್ಷೇತ್ರ ಇವೆಲ್ಲವುಗಳನ್ನು ಒಪ್ಪಿಕೊಂಡಲ್ಲದೆ ಸರ್ವಜ್ಞನನ್ನು ಮನ್ನಿಸುವ ಸಾಧ್ಯತೆಯಿಲ್ಲ. ಸರ್ವಜ್ಞರಾದವರೆಲ್ಲರೂ ತಮ್ಮ ಆತ್ಮನೊಳಗಿಂದಲೇ ಆಗಿದ್ದಾರೆಂಬುದನ್ನು ನಿಶ್ಚಿತಮಾಡಿ ತಾವು ತಮ್ಮ ಆತ್ಮನ ಸರ್ವಜ್ಞಸ್ವಭಾವದ ಪ್ರತೀತಿ ಮಾಡಿಕೊಳ್ಳುವುದೇ ಪ್ರಥಮ ಧರ್ಮವಿದೆ.

ಕೇವಲೀ ಸರ್ವಜ್ಞರು ಹೇಗಾಗುತ್ತಾರೆ, ಆ ಸರ್ವಜ್ಞತೆಯು ಎಲ್ಲಿಂದ ಪ್ರಕಟವಾಗುತ್ತದೆ, ಆ ಸರ್ವಜ್ಞತೆಯ ಸಾಧಕ-ಸಂತರ ಅವಸ್ಥೆ ಹೇಗಿರುವುದು ಮತ್ತು ಸರ್ವಜ್ಞರು ಹೇಳಿರುವ ಶಾಸ್ತ್ರಗಳು ಹೇಗಿರುತ್ತವೆ ? - ಈ ಎಲ್ಲವುಗಳನ್ನು ನಿಶ್ಚಿತ ಮಾಡಿಕೊಂಡಲ್ಲದೆ ಧರ್ಮವಾಗುವುದಿಲ್ಲ.

ಯಾವ ಪ್ರಕಾರ ಒಂದು ಮತ್ತು ಒಂದು ಸೇರಿದರೆ ಎರಡು ಆಗುತ್ತದೆಂಬುದನ್ನು ಯಾರೂ ನಿಷೇಧಿಸುವ ಸಾಧ್ಯತೆಯಿಲ್ಲ ಅದೇ ಪ್ರಕಾರ ಸರ್ವಜ್ಞತೆಯು ಜಗತ್ತಿನಲ್ಲಿ ಸಿದ್ಧವಿದೆ ಅದನ್ನು ಯಾರೂ ತೆಗೆದುಹಾಕುವ ಸಾಧ್ಯತೆಯಿಲ್ಲ.

ಭಗವಾನ ಕುಂದಕುಂದಾಚಾರ್ಯದೇವರು ಹೇಳುತ್ತಾರೆ - ಎಲೈ ! 'ಜಾದೋ ಸಯಂ ಸ ಚೇದಾ ಸವ್ವಣ್ಹೂ' ಆತ್ಮನು ಸ್ವಯಂ ತನ್ನ ಸ್ವಭಾವದಿಂದ ಸರ್ವಜ್ಞನಾಗುತ್ತಾನೆ-ಇಂಥ ಆತ್ಮಸ್ವಭಾವದ ಪ್ರತೀತಿ ಮಾಡಿಕೊಳ್ಳುವುದೇ ಪರಮಾತ್ಮನಾಗುವ ಉಪಾಯವಿದೆ. ಯಾರಿಗೆ ಇನ್ನು ಅವತಾರವೆತ್ತುವುದಿಲ್ಲ, ಯಾರಿಗೆ ಭವದುಃಖದ ಭಯವೆನಿಸಿದೆ, ಮತ್ತು ಆತ್ಮನ ಪೂರ್ಣಾನಂದ ಪರಮಾತ್ಮದಶೆಯನ್ನು ಪ್ರಕಟಪಡಿಸಿಕೊಳ್ಳುವ ತೀವ್ರ ಅಪೇಕ್ಷೆಯಿದೆ ಅವರು ಸರ್ವಜ್ಞನ ನಿರ್ಣಯ ಮಾಡಿ ಯುಕ್ತಿ, ಆಗಮ, ಅನುಭವ ಪ್ರಮಾಣದಿಂದ ತಮ್ಮ ಆತ್ಮನ ಸರ್ವಜ್ಞ ಸ್ವಭಾವದ ನಿರ್ಣಯ ಮಾಡಿಕೊಳ್ಳಬೇಕು ಅವನ ಪ್ರತೀತಿ ಮಾಡಿಕೊಳ್ಳಬೇಕು ಮತ್ತು ಅವನಲ್ಲಿ ಅಂತರ್ಮುಖವಾಗಿ ಪರಿಣತಿಯ ಏಕಾಗ್ರತೆ ಮಾಡುವುದೇ ಸರ್ವಜ್ಞರಾಗುವ ಉಪಾಯವಿದೆ ನೋಡಿರಿ !' ಅಲ್ಪಜ್ಞತೆಯಿದೆ, ನಿಮಿತ್ತವಿದೆ, ರಾಗವಿದೆ, ಆದರೆ ಅವುಗಳ ಆಶ್ರಯದಿಂದ ಸರ್ವಜ್ಞತೆಯಾಗುವುದಿಲ್ಲ. ಸರ್ವಜ್ಞತೆಯಂತೂ ತಮ್ಮ ಧ್ರುವ ಸ್ವಭಾವದೊಳಗಿಂದಲೇ ಪ್ರಕಟವಾಗುತ್ತದೆ. ಎಲ್ಲವನ್ನು ತಿಳಿದುಕೊಳ್ಳುವವರು ಸರ್ವಜ್ಞರ ನಿಷೇಧ ಮಾಡುವ ಸಾಧ್ಯತೆಯಿಲ್ಲ, ಎಂದರೆ ಸರ್ವಜ್ಞರ ನಿಷೇಧವು ಯಾವ ರೀತಿಯಿಂದಲೂ ಸಿದ್ಧವಾಗುವ ಸಾಧ್ಯತೆಯಿಲ್ಲ.

ಧೈರ್ಯದಿಂದ ಚೈತನ್ಯದ ಸ್ವಭಾವವನ್ನು ವಿಚಾರ ಮಾಡು, ಎಲ್ಲಿ ಒಲಿಯುವುದರಿಂದ ಸರ್ವಜ್ಞತೆ ಅರಳುವುದು? ಸರ್ವಜ್ಞತೆ ಇದೆ ಅದರ ಉಪಾಯ ಮಾಡುವವರು ಮತ್ತು ಹೇಳುವವರು ಕೂಡ ಇದ್ದಾರೆ, ಅದಕ್ಕೆ ವಿಪರೀತವಾಗಿ ಹೇಳುವವರೂ ಕೂಡ ಇದ್ದಾರೆ ಅದಕ್ಕಾಗಿ ಪರೀಕ್ಷೆ ಮಾಡಿ ಸರ್ವಜ್ಞನನ್ನು, ಸರ್ವಜ್ಞತೆ ಸಾಧಿಸುವ ಸಂತನನ್ನು ಮತ್ತು ಅವರು ಹೇಳಿರುವ ಸರ್ವಜ್ಞತೆಯ ಉಪಾಯವನ್ನು ತಿಳಿದುಕೊಳ್ಳಬೇಕು. ಒಂದು ಪುಟ್ಟ ವಸ್ತು ಕೊಳ್ಳುವುದಿದ್ದರೂ ಪರೀಕ್ಷೆ ಮಾಡುತ್ತದೆಯೆಂದಮೇಲೆ ಯಾರಿಗೆ ಸರ್ವಜ್ಞರಾಗುವುದಿದೆ- ಪೂರ್ಣಾನಂದ ಪ್ರಕಟಪಡಿಸಿಕೊಳ್ಳುವುದಿದೆ ಅವರು ಜ್ಞಾನದಲ್ಲಿ ಪರೀಕ್ಷೆ ಮಾಡಿ ಸರ್ವಜ್ಞನನ್ನು ನಿಶ್ಚಿತ ಮಾಡಿಕೊಳ್ಳಬೇಕು. ಮತ್ತು ಅವರಂತೆ ತಮ್ಮ ಆತ್ಮನು ಕೂಡ ಸರ್ವಜ್ಞ ಸ್ವಭಾವಿಯಿದ್ದಾನೆಂಬುದನ್ನು ಪರೀಕ್ಷೆ ಮಾಡಿಕೊಳ್ಳಬೇಕಾಗುವುದು.

**ಪರೀಕ್ಷಿಸಿದೆ ಮುತ್ತುರತ್ನಗಳಂ, ಪರೀಕ್ಷಿಸಿದೆ ಚಿನ್ನಬೆಳ್ಳಿಗಳಂ**
**ಆದರೇನೊಂದು ಆತ್ಮನನು ಪರೀಕ್ಷಿಸಲಿಲ್ಲ ದಿಙ್ಮೂಢವದರಲುಳಿದೆ**

ಅದಕ್ಕಾಗಿ ಇಲ್ಲಿ ಆಚಾರ್ಯ ಭಗವಂತರು ಆತ್ಮನ ಸರ್ವಜ್ಞ ಸ್ವಭಾವವನ್ನು ತಿಳಿದುಕೊಂಡಿದ್ದಾರೆ. ಆಹಾ ! ಸ್ವಯಂ ಆತ್ಮನೇ ಸರ್ವಜ್ಞತನದಿಂದ ಪರಿಣಮಿಸುತ್ತಾನೆಂಬ ನಿರ್ಣಯ ಮಾಡಿದವನಿಗೆ ಅಂತರಂಗದಲ್ಲಿ ಮುಕ್ತಿಯ ಮಾರ್ಗವು ತೆರೆದಲ್ಲದೆ ಇರಲಾರದು. ಅವನಿಗೆ ಯಾವುದೇ ತರದ ಸಂಶಯ ಉಳಿಯುವುದಿಲ್ಲ. ಸ್ವಭಾವವೆಂದರೇನು, ಪರ್ಯಾಯವೆಂದರೇನು, ವಿಕಾರವೆಂದರೇನು, ನಿಮಿತ್ತವೆಂದರೇನು ? ಇವೆಲ್ಲವುಗಳ ಪರಿಚಯ ಮಾಡಿಕೊಂಡು ಸ್ವಭಾವದ ಕಡೆಗೆ ಒಲಿದರೆ ಮುಕ್ತಿಮಾರ್ಗವು ಪ್ರಕಟವಾಗುವುದು. ಇದರ ಹೊರತು ಬೇರಾವ ಉಪಾಯದಿಂದ ಮುಕ್ತಿಮಾರ್ಗವು ಪ್ರಕಟವಾಗುವುದಿಲ್ಲ, ಮತ್ತು ಸಂಶಯವು ದೂರವಾಗುವುದಿಲ್ಲ.

ಎಲ್ಲಿ ಜ್ಞಾನವು ಪೂರ್ಣವಾಗುವುದು ಅಲ್ಲಿ ದರ್ಶನವು ಪೂರ್ಣವಾಗುವುದು, ಆನಂದ ಪೂರ್ಣವಾಗುವುದು, ವೀರ್ಯ ಪೂರ್ಣವಾಗುವುದು, ಅನಂತ ಗುಣಗಳ ದಶೆ ಪೂರ್ಣವಾಗುವುದು - ಇಂಥ ಅನಂತ ಗುಣವುಳ್ಳ ಆತ್ಮನ ಪ್ರತೀತಿ ಮಾಡಿಕೊಳ್ಳು.

ಸರ್ವಜ್ಞರು ಪ್ರತ್ಯಕ್ಷ ಕಂಡುಬರುವುದಿಲ್ಲೆಂದೇನು ಅವರ ನಿಷೇಧವಾಗುವ ಸಾಧ್ಯತೆಯಿಲ್ಲ, ಆದರೆ ಊಹೆಯಿಂದ ನಿರ್ಣಯ ಮಾಡಿಕೊಳ್ಳಬೇಕು. ಹೇಗೆ ಬರುವ ಕಾಲದ ದಿವಸ ಪ್ರತ್ಯಕ್ಷ ತಿಳಿಯುವುದಿಲ್ಲ, ಆದರೆ ಬರುವ ಕಾಲ ಬರುತ್ತದೆ ಆಗ ಆ ಸಮಯದ ಮನುಷ್ಯನಂತೂ ಅದನ್ನು ಪ್ರತ್ಯಕ್ಷ ನೋಡುತ್ತಾನೆ ಹಾಗೆ ಈ ಕ್ಷೇತ್ರದಲ್ಲಿ ಸರ್ವಜ್ಞರಿಲ್ಲ, ಆದರೆ ಮಹಾವಿದೇಹ ಮೊದಲಾದ ಕ್ಷೇತ್ರದಲ್ಲಿ ಸರ್ವಜ್ಞರಿದ್ದಾರೆಂಬುದು ಊಹೆಯಿಂದ ನಿರ್ಣಯವಾಗುವ ಸಾಧ್ಯತೆಯಿದೆ. ಮತ್ತು ಇಲ್ಲಿ ಯಾವುದನ್ನು ಊಹೆಯಿಂದ ನಿರ್ಣಯ ಮಾಡುತ್ತದೆ ಅದು ಅಲ್ಲಿಯ ಜನರಿಗಂತೂ ಪ್ರತ್ಯಕ್ಷವಿದೆ. ಈ ರೀತಿ ಸರ್ವಜ್ಞರ ಸಿದ್ಧಿಯಿದೆ. ಸರ್ವಜ್ಞರನ್ನು ನಿಶ್ಚಯ ಮಾಡುವಲ್ಲಿ ನಿಶ್ಚಯದಿಂದಂತೂ ತನ್ನ ಸ್ವಭಾವವು ಹೀಗೆ ಪೂರ್ಣವಿದೆಯೆಂದು ನಿರ್ಣಯ ಮಾಡಬೇಕಾಗುವುದು. ಹೀಗೆ ನಿರ್ಣಯ ಮಾಡಿ ಸ್ವಭಾವದ ಸನ್ಮುಖವಾದರೆ ಪರ್ಯಾಯವು ಪೂರ್ಣ ಬದಲಾವಣೆಯಾಗಿ ಬಿಡುವುದು;

ಅಮೂರ್ತವನ್ನು ಅಲ್ಪಜ್ಞತೆಯಿಂದ ತಿಳಿಯುವ ಸಾಧ್ಯತೆಯಿಲ್ಲದುದರಿಂದ ಅಭಾವ ಮನ್ನಿಸಲಿಕ್ಕಾಗದು, ಜ್ಞಾನಗುಣದ ಅನಂತಶಕ್ತಿಯು ಪೂರ್ಣ ಪ್ರಕಟವಾದರೆ ಮೂರುಕಾಲ ಮೂರು ಲೋಕಗಳನ್ನು ಒಂದು ಸಮಯದಲ್ಲಿ ತಿಳಿಯುವುದು ಮತ್ತು ಅದರೊಡನೆ ಅನಂತವೀರ್ಯ, ಕರ್ತಾ-ಭೋಕ್ತಾ, ಪ್ರಭುತ್ವ, ಸ್ವಚ್ಛತ್ವ ಮೊದಲಾದ ಶಕ್ತಿಗಳು ಕೂಡ ಪ್ರಕಟವಾಗುವವು. ಹೀಗೆ ಪರಿಪೂರ್ಣಸ್ವಭಾವವಿದೆ. ಅದರ ಪ್ರತೀತಿ ಮಾಡಿದರೆ ಅದರಲ್ಲಿ ರುಚಿ ಮತ್ತು ಏಕಾಗ್ರತೆಯಿಂದ ಆ ದಶೆಯನ್ನು ಪ್ರಕಟಪಡಿಸಿಕೊಳ್ಳುವಂಥ ಪುರುಷಾರ್ಥ ಮಾಡಿದಲ್ಲದೆ ಇರಲಾರದು. ಮಧ್ಯದಲ್ಲಿ ಅಶುಭದಿಂದ ತಪ್ಪಿಸಿಕೊಳ್ಳುವುದಕ್ಕಾಗಿ ದಯೆ, ದಾನ, ಭಕ್ತಿ ಮೊದಲಾದವುಗಳ ಪರಿಣಾಮವಾಗುವುದು. ಆದರೆ ಅದರ ಆದರ ಮತ್ತು ರುಚಿಯಿರುವುದಿಲ್ಲ.

ಶ್ರದ್ಧೆಯಲ್ಲಿ ಪರದ ಸ್ವಾಮಿತ್ವ ಬಿಡು ಮತ್ತು ತ್ರಿಕಾಲ ಚೈತನ್ಯಸ್ವಭಾವದ ಸ್ವಾಮಿಯಾಗು. ಮತ್ತು ವರ್ತಮಾನ ಪರ್ಯಾಯದಲ್ಲಿ ಅಪರಾಧದಿಂದ ಆಗುತ್ತಿರುವ ಪುಣ್ಯ-ಪಾಪದ ಸ್ವಾಮಿತ್ವವನ್ನು ಬಿಟ್ಟುಕೊಟ್ಟರೆ ಸ್ವಸನ್ಮುಖತೆಯ ಉಗ್ರತೆಯ ಮುಖಾಂತರ ಸರ್ವಜ್ಞತೆಯು ಪ್ರಕಟವಾದಲ್ಲದೆ ಇರಲಾರದು.

ರಾಗದಿಂದ ಚಂಚಲವಾಗದಿದ್ದರೆ ಪರದ ಕರ್ತೃತ್ವ-ಹರ್ತೃತ್ವ ಕೂಡ ಇಲ್ಲ, ಆದರೆ ಎಲ್ಲವುಗಳಿಂದ ಭಿನ್ನ ಜ್ಞಾತಾನಾಗಿದ್ದು ತಿಳಿದುಕೊಳ್ಳುವವನನ್ನು ತಿಳಿದುಕೊಳ್ಳು, ಸುಖಿಯಾಗಬೇಕಿದ್ದರೆ ಅನಂತ ಸುಖಸ್ವರೂಪವು ಹೇಗಿದೆಯೆಂಬುದನ್ನು ತಿಳಿದುಕೊಳ್ಳು !

ಇದು ಎಲ್ಲವೂ ಸಂಯೋಗರೂಪವಿದೆಯೆಂಬುದನ್ನು ನಂಬು ಮತ್ತು ಆ ಎಲ್ಲವನ್ನು ತಿಳಿದುಕೊಳ್ಳುವವನನ್ನು

ಮನ್ನಿಸದಿದ್ದರೆ ಹೇಗೆ ? ನೀನು ಸ್ವಯಂ ತಿಳಿದುಕೊಳ್ಳುವಂಥ ಶಕ್ತಿಯಿಂದ ಪರಿಪೂರ್ಣನಿರುವೆಯೆಂಬುದನ್ನು ನಿಶ್ಚಿತ ಮಾಡಿದೆಯೆಂದರೆ ಪರಾಧೀನತೆಯ ಮಾತೇ ಬರುವುದಿಲ್ಲ, ಬಂದರೂ ನೀನು ನಂಬುವುದಿಲ್ಲ.

ಈಗ ಜೀವತ್ವಗುಣದ ವ್ಯಾಖ್ಯಾನ ಮಾಡುತ್ತಾರೆ, -

**ಪಾಣೇಹಿಂ ಚದುಹಿಂ ಜೀವದಿ ಜೀವಿಸ್ಸದಿ ಜೋ ಹು ಜೀವಿದೋ ಪುವ್ವಂ ।**
**ಸೋ ಜೀವೋ ಪಾಣಾ ಪುಣ ಬಲಮಿಂದಿಯಮಾಉ ಉಸ್ಸಾಸೋ ॥೩೦॥**

**ಯಾವನು ನಾಲ್ಕು ಪ್ರಾಣಗಳಿಂದ ಜೀವಿಪನು, ಜೀವಿಸಿದ ಮುಂದೆ ಜೀವಿಸುವನು ।**
**ಅವನು ಜೀವನಿದ್ದು, ಇಂದ್ರಿಯ-ಬಲ-ಆಯು-ಉಚ್ಛ್ವಾಸ ಇವು ನಾಲ್ಕು ಪ್ರಾಣಗಳು ॥೩೦॥**

**ಅರ್ಥ :-** ಯಾವನು ನಾಲ್ಕು ಪ್ರಾಣಗಳಿಂದ ಜೀವಿಸುತ್ತಿದ್ದನು, ವರ್ತಮಾನದಲ್ಲಿ ಜೀವಿಸುತ್ತಿದ್ದಾನೆ ಭವಿಷ್ಯದಲ್ಲಿ ಜೀವಿಸುವವನಿದ್ದಾನೆ ಅವನು ಜೀವನಿದ್ದಾನೆ. ಮತ್ತು ಜೀವನಿಗೆ ಇಂದ್ರಿಯ, ಬಲ, ಆಯು ಹಾಗೂ ಶ್ವಾಸೋಚ್ಛ್ವಾಸಗಳು ದ್ರವ್ಯಪ್ರಾಣಗಳಿವೆ. ಸುಖ, ಸತ್ತಾ, ಚೈತನ್ಯ, ಬೋಧ ಈ ನಾಲ್ಕು ಭಾವಪ್ರಾಣಗಳಿಂದ ತ್ರಿಕಾಲ ಜೀವಿಸುವವನು ಜೀವನಿದ್ದಾನೆ.

೧) ಮನ, ವಚನ, ಕಾಯ ಸಂಬಂಧವಾಗಿ ಬಲ-ಪ್ರಾಣ-ಮನ-ವಚನ-ಕಾಯಗಳಂತೂ ಜಡವಿವೆ, ಆದರೆ ಜೀವದಲ್ಲಿ ವೀರ್ಯ ಗುಣವಿದೆ ಅದು ತ್ರಿಕಾಲ ಶುದ್ಧ ವೀರ್ಯಬಲಪ್ರಾಣವಿದೆ ಮತ್ತು ವರ್ತಮಾನ ಕ್ಷಾಯೋಪಶಮಿಕ ಭಾವವು ಅದು ವೀರ್ಯದ ಯೋಗ್ಯತೆಯಿದೆ ಅದು ಅಶುದ್ಧ ನಿಶ್ಚಯನಯದಿಂದ ವೀರ್ಯಪ್ರಾಣದಿಂದ ಜೀವವು ಜೀವಿಸುತ್ತದೆ, ಆದರೆ ಜಡದಿಂದ ಜೀವದ ಅಸ್ತಿತ್ವವಿಲ್ಲ.

೨) ಐದು ಇಂದ್ರಿಯಗಳು ಜಡ-ಅಚೇತನವಿವೆ ಅವು ದ್ರವ್ಯೇಂದ್ರಿಯಗಳಿವೆ. ಮತ್ತು ಭಾವೇಂದ್ರಿಯವಂತೂ ಪ್ರಕಟರೂಪ ಜ್ಞಾನವಿದೆ.

೩) ಆಯು ಜಡವಿದೆ ಮತ್ತು ಶರೀರದಲ್ಲಿ ಇರುವ ಜೀವದ ಯೋಗ್ಯತೆಯಿದೆ.

೪) ಶ್ವಾಸೋಚ್ಛ್ವಾಸವು ಜಡವಿದೆ ಮತ್ತು ಆ ಪ್ರಕಾರ ಜೀವದ ಎದುರು ಯೋಗ್ಯತೆಯಿದೆ.

ಅಲ್ಪಜ್ಞಾನಿಯು ಕ್ಷಣಿಕ ಅಪೂರ್ಣ ಪರ್ಯಾಯವನ್ನು ಪೂರ್ಣ ಜೀವತ್ವವೆಂದು ಮನ್ನಿಸಿದ್ದಾನೆ. ಆ ಜೀವನು ಪರ್ಯಾಯಬುದ್ಧಿರೂಪವಾದ ಅಜ್ಞಾನದ ಕಾರಣದಿಂದ ಸಂಸಾರದಲ್ಲಿ ಸಿಕ್ಕಿಕೊಂಡಿದ್ದಾನೆ. ಮತ್ತು ತ್ರಿಕಾಲೀ ಪೂರ್ಣ ಸ್ವಭಾವವನ್ನು ಮನ್ನಿಸಿದವನು ಸ್ವಸನ್ಮುಖನಾಗುತ್ತಾನೆ ಅವನು ಅಶರೀರಿ ಸಿದ್ಧಪರಮಾತ್ಮನಾಗಿ ಅವಿನಾಶಿಯೂ, ಸುಖಮಯವೂ ಆದ ಮುಕ್ತಾನಂದ ಸಿದ್ಧನಾಗುತ್ತಾನೆಂಬ ಮಾತನ್ನು ಮುಂದೆ ಹೇಳುತ್ತಾರೆ.

ಯಾರಿಗೆ ಧರ್ಮ ಮಾಡುವುದಿದೆ ಅವರು ಮೊದಲು ವಸ್ತುಸ್ವರೂಪದ ಯಥಾರ್ಥ ಜ್ಞಾನ ಮಾಡಿಕೊಳ್ಳಬೇಕಾಗುವುದು, ಸಮಯವು ೧) ಶಬ್ದಸಮಯ, ೨) ಜ್ಞಾನಸಮಯ, ಮತ್ತು ೩) ಅರ್ಥಸಮಯವೆಂದು ಮೂರು ಪ್ರಕಾರವಾಗಿದೆ ದೃಷ್ಟಾಂತ-'ರತ್ನ' ಎಂಬ ಶಬ್ದವನ್ನು ಆಡುವುದು ಅದು ಶಬ್ದಸಮಯವಿದೆ. ರತ್ನದ ಸಂಬಂಧವಾಗಿರುವ ಜ್ಞಾನವು ಅದು ಜ್ಞಾನಸಮಯವಿದೆ ಮತ್ತು ರತ್ನ ಪದಾರ್ಥವು ಅದು ಅರ್ಥಸಮಯವಿದೆ. ಹೀಗೆ ಎಲ್ಲ ಪದಾರ್ಥಗಳಲ್ಲಿ ಮೂರು ಪ್ರಕಾರದಿಂದ ಸಮಯಗಳು ಒದಗಿಬರುತ್ತವೆ.

**ಶಬ್ದ ಸಮಯ :-** 'ಪಂಚಾಸ್ತಿಕಾಯದ ರಾಗ-ದ್ವೇಷಗಳಿಲ್ಲದ ಯಥಾರ್ಥ ಅಕ್ಷರ-ಪದ-ವಾಕ್ಯದ ರಚನೆಯನ್ನು ದ್ರವ್ಯಶ್ರುತರೂಪ ಶಬ್ದಸಮಯವೆಂದು ಹೇಳಿದೆ'. ಇದರಲ್ಲಿ ನಿಜವಾದ ಶಾಸ್ತ್ರ ಯಾವುದಕ್ಕೆನ್ನಬೇಕೆಂಬುದರ ವ್ಯಾಖ್ಯೆಯಿದೆ. ಈ ಜಗತ್ತಿನಲ್ಲಿ ಅನಂತ ಆತ್ಮಗಳು, ಅನಂತಾನಂತ ಪುದ್ಗಲಗಳು, ಧರ್ಮ, ಅಧರ್ಮ, ಆಕಾಶ ಮತ್ತು ಕಾಲವೆಂದು ಆರು

ದ್ರವ್ಯಗಳಿವೆ, ಪ್ರತಿಯೊಂದು ಸ್ವತಂತ್ರವಿದೆ, ಯಾವುದೂ ಯಾವುದರ ಕರ್ತೃ-ಹರ್ತೃ ಇಲ್ಲ, ಜೀವ ಸ್ವತಂತ್ರವಿದೆ ಮತ್ತು ಜಡ ಕೂಡ ಸ್ವತಂತ್ರವಿದೆಯೆಂದು ನಿಜವಾದ ಶಾಸ್ತ್ರವು ತಿಳಿಸಿಕೊಡುತ್ತದೆ. ಅದರಂತೆ ವಾಣಿಯ ಪರಿಣಮನವು ಸ್ವತಂತ್ರವಿದೆ. ಆತ್ಮನು ಅದರ ಕರ್ತೃವಿಲ್ಲ ಮತ್ತು ವಾಣಿ ಹಾಗೂ ವಾಣಿಯ ಕಡೆಗಿರುವ ರಾಗದ ಅವಲಂಬನವಿಲ್ಲದೆ ನಿನಗೆ ನಿನ್ನ ಅವಲಂಬನದಿಂದ ಜ್ಞಾನವಾಗುವಂತಿದೆಯೆಂದು ಶಾಸ್ತ್ರಕಾರ ಹಾಗೂ ಅವರ ವಾಣಿಯು ತಿಳಿಸಿಕೊಡುತ್ತದೆ. ಈ ಕೇವಲೀ ಭಗವಂತರಂತೂ ಪರಿಪೂರ್ಣರಿದ್ದಾರೆ. ಅವರಿಗೇನು ಉಪದೇಶ ಮಾಡುವ ರಾಗವಿರುವುದಿಲ್ಲ. ಅಲ್ಪಜ್ಞ ಜೀವನಿಗೆ ವಾಣಿ ಅಥವಾ ಶಾಸ್ತ್ರೋಪದೇಶದ ರಾಗ ಉತ್ಪನ್ನವಾಗುತ್ತದೆ ಮತ್ತು ಉಪದೇಶದ ಸಮಯದಲ್ಲಿ ಶಾಸ್ತ್ರ ಅದರಂತೆ ಶಾಸ್ತ್ರಕಾರನ ಅಭಿಪ್ರಾಯವು ಹೇಗಿರುತ್ತದೆಯೆಂದರೆ ವಾಣಿಯು ವಾಣಿಯ ಕಾರಣದಿಂದ ಹೊರಡುತ್ತದೆ, ಶುಭರಾಗವು ಅಶಕ್ತತೆಯ ಕಾರಣದಿಂದ ಉತ್ಪನ್ನವಾಗುತ್ತದೆ. ಶಾಸ್ತ್ರದ ಮೇಲಿನ ಲಕ್ಷ್ಯದಿಂದ ಕೇಳುವವನಿಗೆ ಲಾಭವಾಗುವುದಿಲ್ಲ, ಆದರೆ ಕೇಳುವವನು ತಾನು ತನ್ನ ಸ್ವಭಾವದ ಲಕ್ಷ್ಯ ಮಾಡಿದರೆ ಮತ್ತು ಸ್ಥಿರಗೊಂಡರೆ ಧರ್ಮವಾಗುವುದು. ಎಂದರೆ ಶಾಸ್ತ್ರವಿದೆ, ಶಾಸ್ತ್ರಕಾರನಿದ್ದಾನೆ, ಶುಭರಾಗವಿದೆಯೆಂಬುದರ ಜ್ಞಾನ ಮಾಡಿಸುತ್ತದೆ, ಆದರೆ ಧರ್ಮವಂತೂ ತನ್ನ ಸ್ವಾವಲಂಬನದಿಂದ ಪ್ರಕಟವಾಗುವುದು.

ಯಾವ ಶಾಸ್ತ್ರವು ನಿಶ್ಚಯದಿಂದ ಧರ್ಮವಾಗುತ್ತದೆ ಅದರಂತೆ ವ್ಯವಹಾರವಿಲ್ಲದೆ ನಡೆಯುವುದಿಲ್ಲವೆಂದು ಹೇಳುತ್ತದೆ ಅದು ನಿಜವಾಗಿ ಶಾಸ್ತ್ರವಲ್ಲ. 'ಅ,ಕ' ಮೊದಲಾದ ಅಕ್ಷರಗಳಿವೆ, 'ಜೀವ' ಇದು ಪದವೆಂದು ಕರೆಸಿಕೊಳ್ಳುವುದು. ಹೀಗೆ ಅಕ್ಷರ-ಪದದ ರಾಗ-ದ್ವೇಷಗಳಿಲ್ಲದ ರಚನೆಯನ್ನು ಶಬ್ದಸಮಯವೆಂದು ಹೇಳಿದೆ. ಯಾವ ಶಾಸ್ತ್ರವು ಆರು ದ್ರವ್ಯಗಳನ್ನು ಮನ್ನಿಸುವುದಿಲ್ಲ , ಯಾವ ಶಾಸ್ತ್ರವು ದ್ರವ್ಯಗಳನ್ನು ಪರಾಧೀನವೆಂದು ಮನ್ನಿಸುತ್ತದೆ, ನಿಮಿತ್ತವಿದ್ದರೆ ಉಪಾದಾನದಲ್ಲಿ ಕಾರ್ಯವಾಗುತ್ತದೆಯೆಂದು ಹೇಳುತ್ತದೆ, ಪುಣ್ಯದಿಂದ ಧರ್ಮವಾಗುತ್ತದೆಯೆಂದು ಹೇಳುತ್ತದೆ, ಆತ್ಮನು ವಾಣಿ ಆಡುತ್ತಾನೆಂದು ಹೇಳುತ್ತದೆ ಅದು ಶಾಸ್ತ್ರವಲ್ಲ, ಆದರೆ ಸುಳ್ಳು ಶಾಸ್ತ್ರವಿದೆ. ಅದಕ್ಕೆ ಶಬ್ದಸಮಯವೆಂದು ಹೇಳಲಾಗುವುದಿಲ್ಲ. ಯಾವ ಶಾಸ್ತ್ರವು ಆರು ದ್ರವ್ಯಗಳನ್ನು ಸಂಪೂರ್ಣ ಸ್ವತಂತ್ರವೆಂದು ತಿಳಿಸಿಕೊಡುತ್ತದೆ, ಪುಣ್ಯ-ಪಾಪದ ಭಾವನೆಗಳನ್ನು ಹೇಯವೆಂದು ತಿಳಿಸುತ್ತದೆ, ಸ್ವಭಾವದ ರುಚಿ ಮಾಡಿಸುತ್ತದೆ ಅದು ಸತ್ಯಶಾಸ್ತ್ರವಿದೆ, ಮತ್ತು ಅದು ಶಬ್ದಸಮಯವಿದೆ.

**ಜ್ಞಾನಸಮಯ :-** ಅದೇ ಶಬ್ದ ಶ್ರುತದ, ಮಿಥ್ಯಾತ್ವಭಾವದ ನಾಶವಾಗುವುದರಿಂದ ಯಾವ ಯಥಾರ್ಥ ಜ್ಞಾನವು ಪ್ರಕಟವಾಗುವುದು ಅದು ಭಾವಶ್ರುತರೂಪವಾದ 'ಜ್ಞಾನಸಮಯ'ವಿದೆ. ಶಬ್ದ ಹೇಳುವವನ ಜ್ಞಾನಕೂಡ ಪರದ ಕಡೆಗಿರುವ ರುಚಿ, ಶಾಸ್ತ್ರ ಮತ್ತು ವಾಣಿಯ ಕಡೆಗಿರುವ ರುಚಿ ಬಿಟ್ಟು ತ್ರಿಕಾಲ ಜ್ಞಾನಸ್ವಭಾವದ ರುಚಿಯಾಗುವುದೇ ಭಾವಶ್ರುತಜ್ಞಾನವಿದೆಯೆಂದು ತಿಳಿದುಕೊಳ್ಳುವುದು, ಹೀಗೆ ಸ್ವಜ್ಞೇಯದ ನಿಜವಾದ ಜ್ಞಾನಮಾಡಿಕೊಂಡರೆ ನಿಜವಾದ ಜ್ಞಾನಮಾಡಿಕೊಂಡನೆಂದು ಹೇಳಲಾಗುವುದು.

**ಪದಾರ್ಥಸಮಯ :-** ''ಮತ್ತು ಯಾವ ಸಮ್ಯಗ್ಜ್ಞಾನದ ಮುಖಾಂತರ ಪದಾರ್ಥವು ತಿಳಿದುಬರುತ್ತದೆ ಅದರ ಹೆಸರು 'ಅರ್ಥಸಮಯವೆಂದು' ಹೇಳಲಾಗುತ್ತದೆ.'' ಸಮ್ಯಗ್ಜ್ಞಾನದಿಂದ ಯಾವ ಪದಾರ್ಥವು ತಿಳಿದುಬರುತ್ತದೆ ಅದನ್ನು ಪದಾರ್ಥಸಮಯ ಅಥವಾ ಅರ್ಥಸಮಯವೆಂದು ಹೇಳಿದೆ. 'ಆತ್ಮ' ಎಂಬ ಶಬ್ದವನ್ನು ಆಡಿದೊಡನೆ ಆತ್ಮಪದಾರ್ಥದ ದ್ರವ್ಯ-ಗುಣ-ಪರ್ಯಾಯಗಳು ಹೇಗಿವೆ ಮತ್ತು ಆತ್ಮನನ್ನುಳಿದು ಶೇಷ ಪರಪದಾರ್ಥಗಳು ಅವು ಆತ್ಮನಲ್ಲವೆಂಬುದು ಲಕ್ಷ್ಯದಲ್ಲಿ ಬಂದುಬಿಟ್ಟರೆ ಆತ್ಮ ಪದಾರ್ಥದ ಮತ್ತು ಆತ್ಮ ಶಬ್ದದ ಯಥಾರ್ಥ ಜ್ಞಾನವಾಯಿತೆಂದು ಹೇಳಲಾಗುವುದು.

ಯಾವ ಪ್ರಕಾರ ಜಮಾ-ಖರ್ಚು ಸರಿಹೊಂದಿಸಿ ನೋಡುವ ಸಮಯದಲ್ಲಿ ಪೆಟ್ಟಿಗೆಯೊಳಗೆ ೭೩೫ ರೂ. ಶಿಲ್ಕು ಇದ್ದರೆ ಶಿಲ್ಲಕು ಅದು ಪದಾರ್ಥವಿದೆ. ಅದೇ ಪ್ರಕಾರ ಶಬ್ದ ಆಡಿದಂತೆ ಜ್ಞಾನ ಕೂಡ ಆಗಬೇಕಾಗುವುದು ಮತ್ತು ಜಮಾಖರ್ಚಿನ ವಹಿಯಲ್ಲೂ ಕೂಡ ಅದೇ ಪ್ರಕಾರ ೭೩೫ ರೂ. ಶಿಲ್ಲಕು ಜಮಾ ಇರಬೇಕಾಗುವುದು. ಅದರಲ್ಲಿ ಹೆಚ್ಚು-ಕಡಿಮೆಯಿದ್ದರೆ ಆ ಶಿಲ್ಲಕು, ಜಮಾಖರ್ಚಿನ ವಹಿ ಅಥವಾ ಜ್ಞಾನ ಯಥಾರ್ಥವಲ್ಲ . ಅದೇ ಪ್ರಕಾರ ಆರು

ದ್ರವ್ಯಗಳು ಹದಿನಾಲ್ಕು ಬ್ರಹ್ಮಾಂಡದ ಶಿಲ್ಲಕು ಇವೆ ಅದರಂತೆ ಆರು ದ್ರವ್ಯಗಳನ್ನು ಹೇಳುವುದು ಮತ್ತು ಅದೇ ಪ್ರಕಾರ ಜ್ಞಾನ ಮಾಡಿಕೊಂಡರೆ ಆ ಜ್ಞಾನವು ಸರಿಯಾದ ಜ್ಞಾನವಿದೆ.

ಶಾಸ್ತ್ರಗಳು ಹೇಗಿರಬೇಕು ಮತ್ತು ಶಾಸ್ತ್ರ ಹೇಳುವವರು ಹೇಗಿರಬೇಕೆಂಬುದರ ಯಥಾರ್ಥ ಜ್ಞಾನಮಾಡಿಕೊಳ್ಳಬೇಕಾಗುವುದು. ವ್ಯವಹಾರದ ಮುಖ್ಯತೆ ಮಾಡಿ ಪರಾಧೀನತೆಯನ್ನು ತಿಳಿಸುವಂಥವು ವೀತರಾಗ ಶಾಸ್ತ್ರಗಳಲ್ಲ , ಅದೇ ಪ್ರಕಾರ ಅವರು ನಿಜವಾದ ವಕ್ತಾರರಲ್ಲ . ಶಾಸ್ತ್ರಗಳು ವೀತರಾಗತೆಯನ್ನು ತಿಳಿಸಿಕೊಡುತ್ತವೆ.

ಶಾಸ್ತ್ರಗಳು ರಾಗದ ಕಾರಣವಿಲ್ಲ , ಎದುರಿನ ಪದಾರ್ಥಗಳು ರಾಗದ ಕಾರಣವಿಲ್ಲ , ಅದೇ ಪ್ರಕಾರ ಜ್ಞಾನವು ರಾಗದ ಕಾರಣವಿಲ್ಲ . ಮೂರನ್ನು ಸ್ವತಂತ್ರವೆಂದು ತಿಳಿದುಕೊಂಡರೆ ವೀತರಾಗತೆಯ ಕಾರಣವಾಗುವುದು ಮತ್ತು ಧರ್ಮದೆಶೆಯು ಪ್ರಕಟವಾಗುವುದು.

ಇಲ್ಲಿ ಮೂವತ್ತನೆಯ ಗಾಥೆಯಲ್ಲಿ ಕೂಡ ಇದೇ ಹೇಳಿದೆ. ಶಾಸ್ತ್ರಗಳ ಶಬ್ದ ಶಬ್ದದಲ್ಲಿ ವೀತರಾಗತೆಯಿದೆ, ಇಲ್ಲಿ ಸಂಸಾರಿಜೀವದ ಪರಿಚಯ ಪ್ರಾಣಗಳಿಂದ ಮಾಡಿದೆ ಆದರೆ ಕೊನೆಗೆ ಸಾರವಂತೂ ವೀತರಾಗತೆಯನ್ನೇ ತಿಳಿಸಿಕೊಡುವುದಿದೆ.

ಇಂದ್ರಿಯ, ಬಲ, ಆಯು, ಶ್ವಾಸೋಚ್ಛ್ವಾಸ ಈ ನಾಲ್ಕೂ ಪ್ರಾಣಗಳಲ್ಲಿ ಚೈತನ್ಯರೂಪ ಪರಿಣತಿಯಂತೂ ಭಾವ ಪ್ರಾಣಗಳಿದ್ದು ಇವುಗಳ ಪುದ್ಗಲಸ್ವರೂಪ ಪರಿಣತಿಯು ದ್ರವ್ಯಪ್ರಾಣಗಳೆಂದು ಕರೆಯಿಸಿಕೊಳ್ಳುತ್ತವೆ.

ಇಲ್ಲಿ ಸಂಸಾರೀ ಪ್ರಾಣಿಯ ಪರಿಚಯವನ್ನು ಪರ್ಯಾಯದಿಂದ ಹಾಗೂ ನಿಮಿತ್ತರೂಪ ಜಡಪ್ರಾಣಗಳಿಂದ ಮಾಡಿಸಿದೆ. ಆದಾಗ್ಯೂ ತಾತ್ಪರ್ಯವಂತೂ ಜೀವದ ಮೂಲಸ್ವರೂಪವನ್ನು ತಿಳಿಸಿಕೊಡುವುದಿದೆ.

ಜೀವ ಯಾವುದಕ್ಕೆನ್ನಬೇಕೆಂಬ ಮಾತು ಮೊದಲು ಬಂದುಹೋಗಿದೆ. ಜೀವವಿದೆಯೆಂದು ಹೇಳಿದೊಡನೆ ಜೀವದ ಸತ್ತಾ ಸಿದ್ಧವಾಗುತ್ತದೆ. ತ್ರಿಕಾಲೀ ಸತ್ತಾ ದುಃಖರೂಪವಿದೆಯೋ ಅಥವಾ ಸುಖರೂಪವಿದೆಯೋ ? ದುಃಖರೂಪವಿದೆ ಅದು ಪರ್ಯಾಯದಲ್ಲಿದೆ, ತ್ರಿಕಾಲೀ ಸತ್ತಾದಲ್ಲಿ ದುಃಖವಿಲ್ಲ , ಅದಕ್ಕಾಗಿ ಸುಖರೂಪವೇ ಯಾವ ಸತ್ತಾ ಇದೆ ಅದು ಚೈತನ್ಯರೂಪವಿದೆ. ತಿಳಿಯುವ-ನೋಡುವ ಸಾಮಾನ್ಯಸ್ವರೂಪವು ಅದು ಚೈತನ್ಯವಿದೆ. ಮತ್ತು ವಿಶೇಷ ತಿಳಿಯುವ ರೂಪವು ಅದು ಜ್ಞಾನವಿದೆ. ಹೀಗೆ ಸತ್ತಾ , ಸುಖ, ಚೈತನ್ಯ ಮತ್ತು ಜ್ಞಾನ ಈ ನಾಲ್ಕು ಪ್ರಕಾರದ ತ್ರಿಕಾಲೀ ಪ್ರಾಣಗಳಿಂದ ಜೀವವು ಜೀವಿಸುತ್ತಿದೆ. ಅದು ತ್ರಿಕಾಲಿಯ ಮಾತಾಯಿತು, ಅದು ನಿಶ್ಚಯನಯದಿಂದಿದೆ.

ಈಗ ಇಂಥ ತ್ರಿಕಾಲೀ ಪ್ರಾಣಗಳುಳ್ಳ ಜೀವದ ಅರಿವಿಲ್ಲದ ಜೀವವು ಸಂಸಾರ ಅವಸ್ಥೆಯಲ್ಲಿ ನಾಲ್ಕು ಪ್ರಾಣಗಳಿಂದ ಜೀವಿಸುತ್ತದೆ ಅದಕ್ಕೆ ಎಷ್ಟು ಪ್ರಾಣಗಳಿವೆ ಅಷ್ಟನ್ನು ತಿಳಿದುಕೊಳ್ಳಬೇಕು. ಕಡಿಮೆ ಕಡಿಮೆಯೆಂದರೆ ನಾಲ್ಕು ಪ್ರಾಣಗಳಂತೂ ಇರುತ್ತವೆ. ಮತ್ತು ಹೆಚ್ಚು-ಹೆಚ್ಚೆಂದರೆ ಹತ್ತು ಪ್ರಾಣಗಳು ಸಂಜ್ಞೀ ಪಂಚೇಂದ್ರಿಯ ಜೀವಕ್ಕೆ ಇರುತ್ತವೆ. ಐದು ಇಂದ್ರಿಯಗಳು, ಮೂರು ಬಲ, ಆಯು ಮತ್ತು ಶ್ವಾಸೋಚ್ಛ್ವಾಸ ಇವು ದಶಪ್ರಾಣಗಳಿವೆ.

ಐದು ಇಂದ್ರಿಯಗಳ ನಿಮಿತ್ತದಿಂದ ಕ್ಷಯೋಪಶಮರೂಪ ಜ್ಞಾನವಾಗುವ ಯೋಗ್ಯತೆಯು ಪರ್ಯಾಯದಲ್ಲಿದೆ. ಮನ, ವಚನ ಮತ್ತು ಕಾಯದ ನಿಮಿತ್ತದಲ್ಲಿ ತನ್ನ ವೀರ್ಯವು ಹೀನವಾಗುವ ಯೋಗ್ಯತೆ ಪರ್ಯಾಯದಲ್ಲಿದೆ. ಆಯುವಿನ ನಿಮಿತ್ತದಿಂದ ತನ್ನ ಆ ಪರ್ಯಾಯದಲ್ಲಿ ಅಷ್ಟು ಸಮಯ ಇರುವುದು ತನ್ನ ಯೋಗ್ಯತೆಯಿದೆ, ಶ್ವಾಸೋಚ್ಛ್ವಾಸದ ನಿಮಿತ್ತದಿಂದ ಸಕ್ರಿಯವಿರುವುದು ತನ್ನ ಪರ್ಯಾಯದ ಯೋಗ್ಯತೆಯಿದೆ. ಹೀಗೆ ನಾಲ್ಕು ಪ್ರಕಾರದಿಂದ ತನ್ನ ಪರ್ಯಾಯದ ಯೋಗ್ಯತೆಯ ಕಾರಣದಿಂದ ಜೀವಿಸುವುದು ಅದು ಭಾವಪ್ರಾಣವಿದೆ ಮತ್ತು ಅದು ಅಶುದ್ಧನಿಶ್ಚಯ ನಯದಿಂದಿದೆ.

ಹೀಗೆ ಸಂಸಾರೀ ಜೀವಕ್ಕೆ ನಿಮಿತ್ತರೂಪದಿಂದ ಜಡಪ್ರಾಣಗಳು ಕೂಡ ಇರುತ್ತವೆ. ಐದು ಇಂದ್ರಿಯಗಳು, ಮನ-ವಚನ-ಕಾಯರೂಪ ಮೂರು ಬಲಪ್ರಾಣಗಳು, ಶ್ವಾಸೋಚ್ಛ್ವಾಸ ಮತ್ತು ಆಯುವಿನ ನಿಮಿತ್ತರೂಪದಿಂದಿದೆ ಅಥವಾ

ಯಾವುದಕ್ಕೆ ಎಷ್ಟು ಪ್ರಾಣಗಳಿವೆ ಆ ಪ್ರಕಾರ ನಿಮಿತ್ತರೂಪದಿಂದ ತಿಳಿಯಬೇಕು. ಅವನ್ನು ದ್ರವ್ಯಪ್ರಾಣವೆಂದು ಹೇಳುತ್ತಾರೆ.

ತಾನು ನಿಜವಾಗಿ ಸುಖ, ಸತ್ತಾ, ಚೈತನ್ಯ, ಬೋಧ ಈ ನಾಲ್ಕು ತ್ರಿಕಾಲೀ ಪ್ರಾಣಗಳಿಂದ ಜೀವಿಸುತ್ತಾನೆ ಮತ್ತು ಪರ್ಯಾಯದಲ್ಲಿ ಭಾವಪ್ರಾಣದಿಂದ ಹಾಗೂ ನಿಮಿತ್ತರೂಪವಾಗಿ ದ್ರವ್ಯಪ್ರಾಣಗಳಿಂದ ಜೀವಿಸುತ್ತಾನೆಂದು ಎಲ್ಲ ಜ್ಞಾನಮಾಡಿಕೊಂಡರೆ ಅವನು ಯಥಾರ್ಥ ಜ್ಞಾನಮಾಡಿಕೊಂಡನೆಂದು ಹೇಳಲಾಗುತ್ತದೆ.

ಈ ಗಾಥೆಯಲ್ಲಿ ವರ್ತಮಾನ ಪರ್ಯಾಯದೊಳಗೆ ಭಾವಪ್ರಾಣ ಹಾಗೂ ನಿಮಿತ್ತರೂಪದಿಂದ ದ್ರವ್ಯಪ್ರಾಣಗಳಿಂದ ಜೀವಿಸುತ್ತಾನೆಂದು ಹೇಳಿದೆ. ಯಾವ ಜೀವನು ವರ್ತಮಾನ ಪರ್ಯಾಯದ ಭಾವಪ್ರಾಣವನ್ನು ಹಾಗೂ ನಿಮಿತ್ತರೂಪದಿಂದ ದ್ರವ್ಯಪ್ರಾಣವನ್ನು ಮನ್ನಿಸುವುದಿಲ್ಲ ಆ ಜೀವನು ಪರ್ಯಾಯವನ್ನು ಕೂಡ ತಿಳಿಯುವುದಿಲ್ಲ. ಪರ್ಯಾಯದ ಪ್ರಾಣಗಳ ಹಾಗೂ ನಿಮಿತ್ತರೂಪದಿಂದ ದ್ರವ್ಯಪ್ರಾಣಗಳದ್ದು ಕೂಡ ಯಥಾರ್ಥ ಜ್ಞಾನ ಮಾಡಿಕೊಂಡನೆಂದು ಯಾವಾಗ ಹೇಳಲಾಗುವುದು ? ಇಂದ್ರಿಯ, ಬಲ, ಆಯು, ಶ್ವಾಸೋಚ್ಛ್ವಾಸ ಈ ನಾಲ್ಕು ಪರ್ಯಾಯ ಪ್ರಾಣಗಳನ್ನು ತಿಳಿದುಕೊಳ್ಳುವುದರ ಸಾರವೇನು ? ಪರ್ಯಾಯದಲ್ಲಿ ಇಂಥ ಹೀನತೆ ಮತ್ತು ನಿಮಿತ್ತರೂಪದಿಂದ ಜಡಪ್ರಾಣಗಳಿದ್ದರೂ ಕೂಡ ನಾನು ಅನಾದಿ ಅನಂತ ಶುದ್ಧದ್ರವ್ಯನಿದ್ದೇನೆ ಮತ್ತು ಸತ್ತಾ , ಸುಖ, ಚೈತನ್ಯ, ಜ್ಞಾನದಂಥ ನಾಲ್ಕು ಪ್ರಾಣಗಳಿಂದ ಜೀವಿಸುತ್ತಿದ್ದೇನೆಂದು ಆಂಶಿಕವಾಗಿ ದ್ರವ್ಯದ ಕಡೆಗೆ ಒಲವಾದರೆ ಪರ್ಯಾಯದ ಹಾಗೂ ನಿಮಿತ್ತದ ಯಥಾರ್ಥಜ್ಞಾನವಾಯಿತೆಂದು ಹೇಳಲಾಗುವುದು. ಇಲ್ಲಿ ಸಂಪೂರ್ಣ ಪ್ರಮಾಣಜ್ಞಾನ, ದ್ರವ್ಯ ಹಾಗೂ ಪರ್ಯಾಯವನ್ನು ತಿಳಿಸಿಕೊಡಲಾಗಿದೆ, ಆದಾಗ್ಯೂ-ತ್ರಿಕಾಲೀ ಸತ್ತಾ ಆಂಶಿಕಸ್ವಭಾವದ ಕಡೆಗೆ ಬಲವು ತಿರುಗಿದೆ.

ಆಂಶಿಕ ಬಲದೆಡೆಗೆ ಒಲಿದಾಗಲೇ ಪರ್ಯಾಯದ ಹಾಗೂ ನಿಮಿತ್ತದ ಯಥಾರ್ಥ ಜ್ಞಾನವಾಗುವುದು. ನನ್ನ ಜ್ಞಾನದ ಹೀನತೆ ಮತ್ತು ಬಲಹೀನತೆ ಇದ್ದರೂ ಅದರಂತೆ ನಿಮಿತ್ತರೂಪದಿಂದ ಜಡಪ್ರಾಣವಿದ್ದರೂ ಕೂಡ ನಾನಂತೂ ತ್ರಿಕಾಲಿಶುದ್ಧನಿದ್ದೇನೆ. ಸತ್ತಾ , ಸುಖ, ಚೈತನ್ಯ ಮತ್ತು ಜ್ಞಾನದಂಥ ತ್ರಿಕಾಲೀ ಪ್ರಾಣಗಳಿಂದ ಬೇರೆಯಿದ್ದೇನೆಂದು ಯಾರ ಒಲವು ತ್ರಿಕಾಲೀ ದ್ರವ್ಯದ ಕಡೆಗೆ ಒಲಿದಿದೆ ಅವನೇ ಪ್ರಮಾಣ ಜ್ಞಾನಮಾಡಿಕೊಂಡಿದ್ದಾನೆಂದು ಹೇಳಲಾಗುವುದು. ಅದರಂತೆ ಪರ್ಯಾಯ ಹಾಗೂ ನಿಮಿತ್ತದ್ದೂ ಕೂಡ ಯಥಾರ್ಥ ಜ್ಞಾನಮಾಡಿಕೊಂಡಿದ್ದಾನೆಂದು ಹೇಳಲಾಗುವುದು.

ಪ್ರತಿಯೊಂದು ಗಾಥೆಗೆ ಶಬ್ದಸಮಯ, ಜ್ಞಾನಸಮಯ ಮತ್ತು ಪದಾರ್ಥಸಮಯವೆಂದು ಮೂರು ಸಮಯ ಅನ್ವಯಿಸುತ್ತದೆ. ಗಾಥೆಯ ಶಬ್ದಗಳು, ಆ ಶಬ್ದಗಳ ನಿಮಿತ್ತದಿಂದಾಗುವಂಥ ಜ್ಞಾನ ಮತ್ತು ಆ ಪದಾರ್ಥಗಳು ವೀತರಾಗತೆಯನ್ನು ತಿಳಿಸುತ್ತವೆ.

ಈ ಮೂರೂ ಜಾತಿಯ ಪ್ರಾಣಗಳು ಸಂಸಾರೀ ಜೀವಕ್ಕೆ ಅಖಂಡ ಸಂತಾನರೂಪದಿಂದ ಪ್ರವರ್ತಿಸುತ್ತವೆ. ಈ ಪ್ರಾಣಗಳಿಂದ ಸಂಸಾರದಲ್ಲಿ ಜೀವಿತವೆಂದು ಹೇಳಲಾಗುತ್ತದೆ. ಇಲ್ಲಿ ಸಂಸಾರೀ ಪ್ರಾಣಿಯು ಯಾವಾಗಲೂ ನಾಲ್ಕು ಪ್ರಾಣಗಳಿಂದಮತ್ತು ನಿಮಿತ್ತರೂಪವಾಗಿ ದ್ರವ್ಯಪ್ರಾಣಗಳಿಂದ ಜೀವಿಸಿತ್ತು , ಜೀವಿಸುತ್ತದೆ ಮತ್ತು ಜೀವಿಸುವುದೆಂದು ಹೇಳಿದೆ. 'ಯಾವಾಗಲೂ ಮತ್ತು ಅಖಂಡ' ಶಬ್ದಗಳನ್ನು ಉಪಯೋಗಿಸಿದೆ. ಇದರ ಉದ್ದೇಶವೇನೆಂದರೆ-ಯಾವುದೇ ಶಬ್ದಸಮಯದ ಹೇತುವು ರಾಗ ಅಥವಾ ಸಂಸಾರವಾಗುವ ಸಾಧ್ಯತೆಯಿಲ್ಲ . ಈ ಶಬ್ದಗಳನ್ನು ಕೇಳಿ ಯಾವ ಜೀವನು ನಾನು ಯಾವಾಗಲೂ ಸಂಸಾರಿಯಾಗಿರುವೆನೆಂದು ನಿರ್ಣಯ ಮಾಡಿದರೆ ಅವನು ಯಥಾರ್ಥ ಜ್ಞಾನ ಮಾಡಿಕೊಳ್ಳಲಿಲ್ಲ ಮತ್ತು ಆ ಶಬ್ದಸಮಯವನ್ನು ತಿಳಿಯಲಿಲ್ಲ. ಯಾವ ಪ್ರಕಾರ ಶಾಸ್ತ್ರದಲ್ಲಿ ಜ್ಞಾನ ಮಾಡಿಸುವ ಸಲುವಾಗಿ ಈ ಲೋಕದಲ್ಲಿ ಅಭವ್ಯ ಜೀವಗಳಿವೆಯೆಂದು ಹೇಳಿದೆ, ಆದರೆ ಅಭವ್ಯ ಶಬ್ದಕೇಳಿ ಕೇಳುವಂಥ ಪಾತ್ರ ಜೀವನು ನಾನಂತೂ ಅಭವ್ಯನಿಲ್ಲ, ಆದರೆ ದೂರ ಭವ್ಯ ಕೂಡ ಇಲ್ಲ, ನಾನಂತೂ ಆಸನ್ನಭವ್ಯನಿದ್ದೇನೆಂದು ನಿರ್ಣಯ ಮಾಡುವವನಿಗೆ ಶಬ್ದಸಮಯವು ನಿಮಿತ್ತವಾಯಿತೆಂದು ಹೇಳಲಾಗುವುದು. ಅದೇ ಪ್ರಕಾರ ಇಲ್ಲಿ 'ಯಾವಾಗಲೂ ಅಖಂಡ ಸಂತಾನರೂಪದಿಂದ ಪ್ರವರ್ತಿಸಿದೆ'ಯೆಂದು ಯಾವ ಶಬ್ದ ಹೇಳಿದೆ ಅದನ್ನು ಪಾತ್ರಜೀವನು

ಪರ್ಯಾಯದ ಜ್ಞಾನ ಮಾಡಿಸುವುದಕ್ಕಾಗಿ ಇದೆಯೆಂದು ವಿಚಾರಮಾಡುತ್ತಾನೆ. ಇನ್ನು ವಿಗ್ರಹಗತಿಯಲ್ಲಿ ಹತ್ತು ಪ್ರಾಣಗಳಿರುವುದಿಲ್ಲ ಒಂದು ಆಯು ಪ್ರಾಣವಿದ್ದರೂ ಕೂಡ 'ಅಖಂಡ ಸಂತಾನರೂಪ'ವೆಂದೇಕೆ ಹೇಳಿದೆ ? ವಿಗ್ರಹಗತಿಯಲ್ಲಂತೂ ಖಂಡಿತವಾಗುತ್ತದೆಯಲ್ಲವೇ ? ಸೋದರನೇ! ಅಖಂಡ ತ್ರಿಕಾಲೀ ಪ್ರಾಣದಿಂದನೀನು ಜೀವಿಸುತ್ತಿರುವೆಯೆಂದು ದ್ರವ್ಯದ ಜ್ಞಾನ ಮತ್ತು ವರ್ತಮಾನಪರ್ಯಾಯದ ಜ್ಞಾನ-ಹೀಗೆ ಪ್ರಮಾಣಜ್ಞಾನ ಮಾಡಿಕೊಂಡು ರಾಗ-ದ್ವೇಷ ರಹಿತವಾಗಿ ದ್ರವ್ಯಸ್ವಭಾವದೆಡೆಗೆ ಒಲಿದರೆ ನೀನು ಮೋಕ್ಷಮಾರ್ಗದಲ್ಲಿರುವೆ ಮತ್ತು ನಿನ್ನ ಸಲುವಾಗಿ ಸಂಸಾರದ ಅಖಂಡತೆ ಇಲ್ಲವೇ ಇಲ್ಲ . ನಿನಗಂತೂ ಸಂಸಾರವು ಖಂಡಿತವಾಗಿ ಹೋಯಿತು. ಹೀಗೆ ರಾಗ-ದ್ವೇಷ ರಹಿತತೆಯಿಂದ ಯಥಾರ್ಥವಾಗಿ ತಿಳಿದುಕೊಂಡದ್ದು ಅದು ಮೋಕ್ಷಮಾರ್ಗವಿದೆ.

ಚರಣಾನುಯೋಗದ ಕಥನವಿರಲಿ ಅಥವಾ ಕರಣಾನುಯೋಗದ್ದಿರಲಿ ಯಾವುದೇ ಸತ್ ಶಾಸ್ತ್ರದ ಶಬ್ದಗಳಿದ್ದರೂ ಕೂಡ ಅವು ಪ್ರತಿಯೊಂದು ವೀತರಾಗತೆಯ ಪೋಷಕವಿವೆ.

೧) ಜಡ ಇಂದ್ರಿಯಗಳು, ಶ್ವಾಸೋಚ್ಛ್ವಾಸ, ಮನ, ವಚನ, ಕಾಯ ಇವು ಜಡಪ್ರಾಣಗಳಿದ್ದು ಅದು ಪದಾರ್ಥಸಮಯವಿದೆ.

೨) ಕ್ಷಯೋಪಶಮರೂಪ ಅಪೂರ್ಣ ಜ್ಞಾನ, ಅಪೂರ್ಣವೀರ್ಯ ಮೊದಲಾದ ಪರ್ಯಾಯಗಳು ಅದು ಪದಾರ್ಥಸಮಯವಿದೆ.

೩) ತ್ರಿಕಾಲ ಚೈತನ್ಯ, ಬೋಧ, ಸುಖ, ಸತ್ತಾರೂಪ ಶುದ್ಧ ಪ್ರಾಣಗಳಿಂದ ತುಂಬಿದ ದ್ರವ್ಯವಿದೆ ಅದು ಕೂಡ ಪದಾರ್ಥಸಮಯವಿದೆ

ಹೀಗೆ ಮೂರು ಪ್ರಕಾರದಿಂದ ಪದಾರ್ಥಸಮಯವಿದೆ. ಅದರಲ್ಲಿ ತನ್ನ ದ್ರವ್ಯ-ಗುಣ-ಪರ್ಯಾಯ ಮೂರೂ ಬಂದುಬಿಟ್ಟವು ಮತ್ತು ನಿಮಿತ್ತರೂಪದಿಂದ ಜಡ ಪ್ರಾಣ ಕೂಡ ಬಂದುಬಿಟ್ಟಿತು. ಈಗ ಇಂಥ ಮೂರು ಪದಾರ್ಥಗಳನ್ನು ಯಥಾರ್ಥವಾಗಿ ತಿಳಿದುಕೊಂಡಿರುವುದು ಅದು ಜ್ಞಾನಸಮಯವಿದೆ. ಮತ್ತು ಆ ಪದಾರ್ಥಗಳನ್ನು ತಿಳಿಸಿಕೊಡುವಂಥದು ಶಬ್ದಸಮಯವಿದೆ ವಾಣಿಯನ್ನು ಹೇಳುವಂಥ ಛದ್ಮಸ್ಥಗುರು ಶಿಷ್ಯನಿಗೆ ಹೀಗೆ ಹೇಳುತ್ತಾನೆ-ನೀನು ಮತ್ತು ನಾನು ಇಬ್ಬರೂ ಕಲ್ಯಾಣ ಸಾಧಕರಿದ್ದೇವೆ, ಶಬ್ದ ಅಥವಾ ವಾಣಿ ಕೂಡ ವೀತರಾಗತೆಯನ್ನು ಹೇಳುತ್ತದೆ. ಪದಾರ್ಥ ಕೂಡ ಸ್ವತಂತ್ರ ಪದಾರ್ಥವಿದ್ದೇನೆಂದು ತಿಳಿಸುತ್ತದೆ, ಮತ್ತು ಜ್ಞಾನ ಕೂಡ ನಿನ್ನ ಸ್ವಭಾವವು ರಾಗರಹಿತವಿದೆಯೆಂದು ತಿಳಿದುಕೊಂಡಿದೆ, ಈ ಪ್ರಕಾರ ಯಥಾರ್ಥ ಜ್ಞಾನಮಾಡಿಕೊಂಡು ತನ್ನ ತ್ರಿಕಾಲೀ ಪ್ರಾಣದೆಡೆಗೆ ಒಲಿದವನಿಗೆ ಭೇದಜ್ಞಾನವಾಗುವುದು.

ಯಾವ ಜೀವನು ಶಬ್ದಗಳ ಭಾವವನ್ನು ತಿಳಿದುಕೊಳ್ಳುವುದಿಲ್ಲ ಮತ್ತು ಅಹಹಾ ! ಈ ಪ್ರಾಣವೆಂದುಬಿಡುವುದು? ಆಂಶಿಕ ಬುದ್ಧಿಯೆಂದು ದೂರವಾಗುವುದೆನ್ನುವ ಜೀವನು ಶಬ್ದಸಮಯವನ್ನು ತಿಳಿಯುವುದಿಲ್ಲ , ಶಾಸ್ತ್ರವನ್ನು ತಿಳಿಯುವುದಿಲ್ಲ. ಇನ್ನು ಕೆಲವರು ನಮಗೆ ಸಮಸ್ತ ಪದಾರ್ಥಗಳ ಜ್ಞಾನವಂತೂ ಆಗಿದೆ, ಆದರೆ ಮಿಥ್ಯಾದರ್ಶನ ಮೊದಲಾದ ಅಶುದ್ಧತೆಯು ಬಿಟ್ಟಿಲ್ಲವೆಂದು ಹೇಳುತ್ತಾರೆ ಆದರೆ ಅದು ಅಸತ್ಯವಿದೆ, ಅವರು ಜ್ಞಾನಸಮಯವನ್ನು ತಿಳಿದುಕೊಂಡಿಲ್ಲ . ಆ ಎರಡೂ ಪ್ರಕಾರದ ಜೀವರು ಒಂದೂ ಸಮಯವನ್ನು ತಿಳಿಯುವುದಿಲ್ಲ . ಬೇಕಾದ ಶಾಸ್ತ್ರದ ಶಬ್ದಗಳಿರಲಿ ಅಂಶಿಯ-ಅಂಶದ ಹಾಗೂ ನಿಮಿತ್ತದ-ಪ್ರಮಾಣ ಜ್ಞಾನವು ಒಟ್ಟಿಗೆ ಆದರೆ ಭೇದಜ್ಞಾನ ಮತ್ತು ವೀತರಾಗತೆಯಾದಲ್ಲದೆ ಇರಲಾರದೆಂದು ಹೇಳುತ್ತಾರೆ ಇಲ್ಲಿ ಪಂಚಾಸ್ತಿಕಾಯದ ಜ್ಞಾನ ಮಾಡಿಕೊಳ್ಳುವುದಿದೆ. ಸಂಸಾರದಶೆಯಲ್ಲಿ ರಾಗವನ್ನು ರಾಗರೂಪದಿಂದ ತಿಳಿ ಪೂರ್ಣ ಮತ್ತು ಅಪೂರ್ಣವನ್ನು ಆ ರೂಪದಿಂದ ತಿಳಿ, ಸಂಯೋಗ ಜಡವನ್ನು ಜಡರೂಪದಿಂದ ತಿಳಿ, ಮತ್ತು ತ್ರಿಕಾಲೀ ಸ್ವಭಾವವನ್ನು ತ್ರಿಕಾಲರೂಪದಿಂದಿದೆಯೆಂಬುದನ್ನು ತಿಳಿ. ಹೀಗೆ ಯಾವ ರೀತಿಯಿದೆ ಹಾಗೆ ತಿಳಿದುಕೊಂಡರೆ ತನ್ನ ಒಲವು ತ್ರಿಕಾಲೀ ಸ್ವಭಾವದ ಕಡೆಗೆ ಆಗಿ ಆಂಶಿಕ ಪ್ರತ್ಯಕ್ಷಜ್ಞಾನವು ಪ್ರಕಟವಾದೊಡನೆ ಜ್ಞಾನವು ಪ್ರಮಾಣವಾಗುವುದು. ಆ ಪ್ರಮಾಣ

ಜ್ಞಾನವು ಕೇವಲಜ್ಞಾನಕ್ಕೆ ಕಾರಣವಾಗುವುದು.

ವಿಗ್ರಹಗತಿಯಲ್ಲಿ ಜೀವಕ್ಕೆ ಇಂದ್ರಿಯಗಳಿಲ್ಲ . ಮನ-ವಚನ-ಕಾಯಗಳಿಲ್ಲ . ಶ್ವಾಸವಿಲ್ಲ ಮಾತ್ರ ಆಯುವಿದೆ, ಅಲ್ಲಿ ಬೇಕಾದರೆ ಖಂಡಿತವಾಗಿದ್ದರೂ ಕೂಡ ಜೀವವು ತನ್ನ ತ್ರಿಕಾಲೀ ಪ್ರಾಣದಿಂದ ಅಚ್ಚಿನ್ನಧಾರೆಯಾಗಿ ಜೀವಿಸುತ್ತಿದೆ, ಎಂದರೆ ಈ ಗಾಥೆಯಲ್ಲಿ ಜಡಪ್ರಾಣದ ನಿಮಿತ್ತತೆ, ಪರ್ಯಾಯದ ಖಂಡತೆ ಮತ್ತು ದ್ರವ್ಯದ ಅಖಂಡತೆಯನ್ನು ತಿಳಿಸುವುದಿದೆ ಗಾಥೆಯಲ್ಲಿ ಅಖಂಡಿತ ಶಬ್ದಗಳನ್ನು ಹೇಳಿದ್ದರೂ ಕೂಡ ಆ ಶಬ್ದಗಳನ್ನು ಯಥಾರ್ಥ ಅಭಿರುಚಿಯೊಡನೆ ಕೇಳುವವನಿಗೆ ಮತ್ತು ಅವುಗಳ ಸಮ್ಯಕ್‌ಜ್ಞಾನ ಮಾಡಿಕೊಳ್ಳುವವನಿಗೆ ಅಖಂಡವಾದ ಸಂಸಾರವು ಉಳಿಯಲಾರದು.

ಇಲ್ಲಿ ದ್ರವ್ಯಪ್ರಾಣವು ನಿಮಿತ್ತವಿದೆಯೆಂದು ಹೇಳಿದ್ದರೂ ಕೂಡ ನಿಮಿತ್ತದ ಕಾರಣದಿಂದ ಜ್ಞಾನವಿಲ್ಲ . ನಿಮಿತ್ತದಿಂದ ಜ್ಞಾನವನ್ನು ಮನ್ನಿಸಿದರೆ ಪಂಚಾಸ್ತಿಕಾಯ ಉಳಿಯುವುದಿಲ್ಲ ಮತ್ತು ನಿಮಿತ್ತವಿಲ್ಲವೆಂದು ಮನ್ನಿಸಿದರೂ ಕೂಡ ಪಂಚಾಸ್ತಿಕಾಯ ಉಳಿಯುವುದಿಲ್ಲ . ಸಂಸಾರದಲ್ಲಿ ನಿಮಿತ್ತರೂಪದಿಂದ ಪ್ರಾಣವಿದ್ದರೂ ಕೂಡ ನಿಜವಾಗಿ ದ್ರವ್ಯವಾದ ನಾನು ತ್ರಿಕಾಲ ಶುದ್ಧನಿರ್ದೇನೆಂದು ಜ್ಞಾನ ಮಾಡಿಕೊಂಡು ಸ್ವಭಾವದೆಡೆಗೆ ಒಲಿದ ಜ್ಞಾನವು ಪ್ರತ್ಯಕ್ಷ ಪ್ರಮಾಣಜ್ಞಾನವಾಗುವುದು, ಅದು ವೃದ್ಧಿಸಿ ಪೂರ್ಣಜ್ಞಾನವಾಗುವುದು ಮತ್ತು ಅಲ್ಪಜ್ಞತೆಯ ಯೋಗ್ಯತೆಯಿತ್ತು ಅದು ಬಿಟ್ಟುಹೋಯಿತು ಮತ್ತು ನಿಮಿತ್ತ ಕೂಡ ಬಿಟ್ಟುಹೋಯಿತು ಅಲ್ಪಜ್ಞ ಜೀವನಿಗೆ ಪಂಚಾಸ್ತಿಕಾಯದ ಜ್ಞಾನವಿದೆ ಮತ್ತು ಸಿದ್ಧರಲ್ಲೂ ಕೂಡ ಅದೇ ಜ್ಞಾನವಿದೆ. ಅಲ್ಪಜ್ಞತೆಯಿದ್ದದ್ದು ಬಿಟ್ಟುಹೋಗಿ ಸಿದ್ಧದಶೆಯಾಯಿತು, ಸಾಧಕದಶೆಯಲ್ಲಿ ಕ್ರಮಕ್ರಮದಿಂದ ಮುಂದುವರೆದು ಪರಮಾತ್ಮದಶೆ ಪ್ರಕಟವಾಯಿತು ಮತ್ತು ಏಕಾಕಿ ಸತ್ತಾ , ಸುಖ, ಚೈತನ್ಯ, ಜ್ಞಾನ, ಪ್ರಾಣರೂಪವಾಗಿ ಜೀವವು ಉಳಿಯಿತು.

ಮೋಕ್ಷದಶೆಯಲ್ಲಿ ಕೇವಲ ಶುದ್ಧ ಚೈತನ್ಯ ಮೊದಲಾದ ಪ್ರಾಣಗಳಿಂದ ಜೀವವು ಜೀವಿಸುವುದರಿಂದ ಸಿದ್ಧ ಜೀವವನ್ನು ಶುದ್ಧ ಜೀವವೆಂದು ಹೇಳಿದೆ, ಸಂಸಾರೀ ಜೀವವನ್ನು ಅಶುದ್ಧ ಜೀವವೆಂದು ಹೇಳಿದೆ. ಹೀಗೆ ತಿಳಿದುಕೊಳ್ಳುವ ಜೀವನ ಸಂಸಾರವು ಕೊನೆಗೊಂಡು ಶುದ್ಧ ಸಿದ್ಧವಾಗುವುದು.

ಶಾಸ್ತ್ರಗಳನ್ನು ಯಥಾರ್ಥವಾಗಿ ತಿಳಿದುಕೊಳ್ಳಬೇಕಾಗುವುದು. ಶಾಸ್ತ್ರಗಳು ಭೇದಜ್ಞಾನದ ಮಾತು ಹೇಳುತ್ತವೆ. ನಿಮಿತ್ತವನ್ನು ಮತ್ತು ಆತ್ಮನನ್ನು ಒಂದೆಂದು ಮನ್ನಿಸಿದರೆ, ರಾಗವನ್ನು ಮತ್ತು ಆತ್ಮನನ್ನು ಒಂದೆಂದು ಮನ್ನಿಸಿದರೆ, ಕರ್ಮದ ಕಾರಣದಿಂದ ವಿಕಾರವಾಗುವುದೆಂದು ಮನ್ನಿಸಿದರೆ, ಕಾಲದ ಕಾರಣದಿಂದ ಮುಕ್ತಿ ಮನ್ನಿಸಿದರೆ ಪಂಚಾಸ್ತಿಕಾಯ ಉಳಿಯುವುದಿಲ್ಲ , ಮತ್ತು ಅದು ನಿಜವಾದ ಶಾಸ್ತ್ರವಲ್ಲ ಈ ಮಾತು ಸರ್ವಜ್ಞರು, ಅವರ ಶಾಸ್ತ್ರಗಳು ಮತ್ತು ಅದನ್ನು ಹೇಳುವಂಥ ಯಥಾರ್ಥ ಗುರುವಿಲ್ಲದೆ ಮತ್ತು ತನ್ನ ಪಾತ್ರತೆಯಿಲ್ಲದೆ ತಿಳಿದು ಬರುವಂತಿಲ್ಲ . ನೀರಿನ ಮೇಲ್ಮೈ ಸಮಾನ ಕಂಡುಬಂದರೂ ಕೂಡ ಕೋಲಿನಿಂದ ಅಳೆದರೆ ತೀರಕ್ಕಿಂತ ಮಧ್ಯದಲ್ಲಿ ನೀರು ಹೆಚ್ಚು ಆಳವಿರುತ್ತವೆಯೆಂದು ಇತರರು ಹಾಗೂ ಸರ್ವಜ್ಞರು ಹೇಳಿದರೂ ಮೇಲೆ ಮೇಲಿನಿಂದ ಅಜ್ಞಾನಿಗೆ ಒಂದೇ ತೆರ ಕಂಡುಬಂದರೂ ಕೂಡ ಆಂತರ್ಯದ ಜ್ಞಾನದ ಅಳತೆಯಿಂದ ಅಳೆದರೆ ತುಂಬ ವ್ಯತ್ಯಾಸವಿದೆ. ಮೇಲ್ಮೈ ಅಳತೆಯಿಂದ ಆಂತರ್ಯದ ಆಳವನ್ನು ಅಳೆಯಹೋದರೆ ಆಂತರ್ಯದ ಅಳತೆಯಲ್ಲಿ ತಪ್ಪು ಉಂಟಾಗುವುದು. ಅದರಂತೆ ಅಜ್ಞಾನಿಯ ಶಬ್ದದ ಕಥನದ ತತ್ತ್ವಜ್ಞಾನ ಅಳೆಯಹೋದರೆ ಅವನು ತತ್ತ್ವವನ್ನು ತಿಳಿಯುವುದಿಲ್ಲ . ಅದಕ್ಕಾಗಿ ವೀತರಾಗ ಸರ್ವಜ್ಞದೇವರು ಹೇಳಿದ ಪಂಚಾಸ್ತಿಕಾಯಗಳನ್ನು ಹೇಗಿವೆ ಹಾಗೆ ಯಥಾರ್ಥ ಜ್ಞಾನ ಮಾಡಿಕೊಳ್ಳಬೇಕಾಗುವುದು

ಜೀವದ ಸ್ವಾಭಾವಿಕ ಪ್ರದೇಶಗಳ ಅಪೇಕ್ಷೆಗೆ ಪ್ರಮಾಣವೆಂದು ಹೇಳಿದೆ ಮತ್ತು ಮುಕ್ತ ಹಾಗೂ ಸಂಸಾರೀ ಜೀವಗಳ ಭೇದ ಹೇಳಿದೆ.

ಜೀವದ ಮತ್ತು ಜಡಪದಾರ್ಥಗಳ ಇರುವಿಕೆಯನ್ನು ಪೃಥಕ್ಕಾಗಿ ಯಾವ ರೀತಿಯಿದೆ ಆ ರೀತಿಯಾಗಿ ತಿಳಿದುಕೊಳ್ಳಬೇಕು. ಪ್ರತಿಯೊಂದು ಪದಾರ್ಥವು ತನ್ನ ಮರ್ಯಾದೆಯಲ್ಲಿ ಕೆಲಸ ಮಾಡುತ್ತದೆ, ಪದಾರ್ಥಗಳ

ಮರ್ಯಾದೆಯನ್ನು ತಿಳಿದುಕೊಳ್ಳದವರಿಗೆ ಧರ್ಮ ಎಲ್ಲಿ ಮಾಡಬೇಕೆಂಬುದರ ನಿರ್ಣಯವಾಗುವುದಿಲ್ಲ . ಆರೂ ದ್ರವ್ಯಗಳು ತಮ್ಮ ತಮ್ಮ ಮರ್ಯಾದೆಯಲ್ಲಿ ಕೆಲಸ ಮಾಡುತ್ತವೆ ಎಂದರೆ ತಮ್ಮ ದ್ರವ್ಯ-ಕ್ಷೇತ್ರ-ಕಾಲ-ಭಾವದಲ್ಲಿ ಕೆಲಸ ಮಾಡುತ್ತಿವೆಯೆಂದು ನಿರ್ಣಯ ಮಾಡಿದರೆ ತನ್ನ ಮರ್ಯಾದೆಯಲ್ಲಿ ಅಂತರ್ಮುಖವಾಗಿ ನೋಡುವುದು ಉಳಿಯುತ್ತದೆ.

**ಅಗುರುಲಹುಗಾ ಅಣಂತಾ ತೇಹಿಂ ಅಣಂತೇಹಿಂ ಪರಿಣದಾ ಸವ್ವೇ ।**
**ದೇಸೇಹಿಂ ಅಸಂಖಾದಾ ಸಿಯ ಲೋಗಂ ಸವ್ವಮಾವಣ್ಣಾ ॥೩೧॥**
**ಕೇಚಿತ್ತು ಅಣಾವಣ್ಣಾ ಮಿಚ್ಛಾದಂಸಣಕಸಾಯಜೋಗಜುದಾ ।**
**ವಿಜುದಾ ಯ ತೇಹಿಂ ಬಹುಗಾ ಸಿದ್ಧಾ ಸಂಸಾರಿಣೋ ಜೀವಾ ॥೩೨॥**

**ಯಾವ ಅಗುರುಲಘು ಅನಂತ ಆ-ರೂಪದಿಂದೆಲ್ಲ ಜೀವ ಪರಿಣಮಿಸುವವು ।**
**ಅವು ಅಸಂಖ್ಯಾತಪ್ರದೇಶಿಯಾಗಿದ್ದು ಕೆಲವು ಸರ್ವಲೋಕವ್ಯಾಪಿ ತಾನಾಗಿವೆ ॥೩೧॥**

**ಮತ್ತೆ ಕೆಲವು ಅವ್ಯಾಪಿಯಾಗಿದ್ದು ಹಲವು ನಿರ್ದೋಷ ಸಿದ್ಧ ಜೀವಗಳಿವೆ ।**
**ಮತ್ತನೇಕ ಜೀವ ಮಿಥ್ಯಾತ್ವ-ಯೋಗ-ಕಷಾಯಸಹಿತ ಸಂಸಾರಿ ತಾನಾಗಿವೆ ॥೩೨॥**

ಇಲ್ಲಿ ಜೀವದ ವ್ಯಾಖ್ಯೆಯಿದೆ. ಪ್ರತಿಯೊಂದು ಜೀವವು ಷಟ್‌ಗುಣಹಾನಿವೃದ್ಧಿರೂಪವಾದ ಅಗುರುಲಘು ಗುಣದಲ್ಲಿ ಪರಿಣತವಾಗುತ್ತಲಿದೆ ತನ್ನ ಮರ್ಯಾದೆಯ ಹೊರಗೆ ಹೋಗುವುದಿಲ್ಲ ಆತ್ಮನು ಅಸಂಖ್ಯ ಪ್ರದೇಶಿಯಿದ್ದಾನೆ ಶರೀರವು ಅದು ಆತ್ಮನ ಕ್ಷೇತ್ರವಲ್ಲ ಒಂದು ಪರಮಾಣುವಿನ ಅಳತೆಯಷ್ಟು ಗಜದಿಂದ ಆತ್ಮನ ಕ್ಷೇತ್ರವನ್ನು ಅಳೆಯಹೋದರೆ ಆತ್ಮನು ಅಸಂಖ್ಯ ಪರಮಾಣುವಿನಷ್ಟು ಪ್ರದೇಶವುಳ್ಳವನಿದ್ದಾನೆ. ಆ ಅಸಂಖ್ಯ ಪ್ರದೇಶಗಳೆಂದೂ ಕಡಿಮೆಯಾಗುವುದಿಲ್ಲ ಅಥವಾ ವೃದ್ಧಿಸುವುದಿಲ್ಲ ಅವನಲ್ಲಿ ಅನಂತ ಗುಣಗಳಿವೆ, ಒಂದು ಗುಣವು ವೃದ್ಧಿಸುವುದಿಲ್ಲ ಅದರಂತೆ ಒಂದು ಗುಣವು ಕಡಿಮೆಯಾಗುವುದಿಲ್ಲ . ಒಂದು ಸಮಯದಲ್ಲಿ ಸಮಸ್ತ ಗುಣಗಳ ಪರ್ಯಾಯಗಳಿವೆ, ಆ ಪರ್ಯಾಯಗಳ ಕಾಲವು ಒಂದು ಸಮಯದಿಂದ ವೃದ್ಧಿಸುವುದಿಲ್ಲ . ಅದರಂತೆ ಬೇರೆ ಕ್ಷೇತ್ರದಲ್ಲಿ ಹೋಗುವುದಿಲ್ಲ ಅದೇ ಪ್ರಕಾರ, ಶರೀರ, ಕರ್ಮ ಮೊದಲಾದ ಇತರ ಪದಾರ್ಥಗಳು ಆತ್ಮನ ಕ್ಷೇತ್ರದಲ್ಲಿ ಬರುವುದಿಲ್ಲ . ಈ ಪ್ರಕಾರ ಅನಂತ ಜೀವಗಳು ತಮ್ಮ ಕ್ಷೇತ್ರದಲ್ಲಿ ಮತ್ತು ಕಾಲ ಎಂದರೆ ಪರ್ಯಾಯದಲ್ಲಿ ಪರಿಣಮಿಸುತ್ತವೆ, ಮತ್ತು ತಮ್ಮ ಭಾವ ಎಂದರೆ ಗುಣಗಳಲ್ಲಿ ಸ್ಥಿರವಾಗಿ ಉಳಿಯುತ್ತವೆ, ಜೀವವು ಸಮುದ್ಘಾತ ಮಾಡಲಿ ಅಥವಾ ನಿಗೋದದಲ್ಲಿ ಹೋದರೂ ಕೂಡ ತನ್ನ ಮರ್ಯಾದೆಯಲ್ಲಿ ಇರುತ್ತದೆ.

ಆತ್ಮನಲ್ಲಿ ಅಗುರುಲಘುಗುಣವಿದೆ. ಅದರ ಕಾರಣದಿಂದ ಷಟ್‌ಗುಣಹಾನಿವೃದ್ಧಿಯ ಪರಿಣಾಮವು ಪ್ರತಿಯೊಂದು ಜೀವದಲ್ಲಿ ಆಗುತ್ತಲಿದೆ. ಸಂಖ್ಯಾತ, ಅಸಂಖ್ಯಾತ ಮತ್ತು ಅನಂತಗುಣವೃದ್ಧಿ , ಸಂಖ್ಯಾತ, ಅಸಂಖ್ಯಾತ ಮತ್ತು ಅನಂತಭಾಗವೃದ್ಧಿ, ಸಂಖ್ಯಾತ, ಅಸಂಖ್ಯಾತ ಮತ್ತು ಅನಂತಗುಣಹಾನಿ, ಸಂಖ್ಯಾತ, ಅಸಂಖ್ಯಾತ ಮತ್ತು ಅನಂತಭಾಗಹಾನಿಯೆಂದು ಹನ್ನೆರಡು ಪ್ರಕಾರಗಳಾಗುತ್ತವೆ.

ಅಗುರುಲಘುಗುಣವು ಆತ್ಮನ ಮರ್ಯಾದೆ ರಕ್ಷಿಸುವ ಕಾರಣವಿದೆ ಅದರ ಅವಿಭಾಗೀ ಅಂಶವು ಅತ್ಯಂತ ಸೂಕ್ಷ್ಮವಿದೆ ಅದನ್ನು ಆಗಮ ಕಥಿತ ಪ್ರಮಾಣದಿಂದ ತಿಳಿದುಕೊಳ್ಳಬೇಕು. ಪ್ರತಿಯೊಂದು ಜೀವವು ತನ್ನ ಮರ್ಯಾದೆಯಲ್ಲಿ ಇರುತ್ತಲಿದೆ.

೧) ಎಷ್ಟು ಸಿದ್ಧರ ಗುಣಗಳಿವೆ ಅಷ್ಟೇ ಪ್ರತಿಯೊಂದು ಜೀವದ ಗುಣಗಳಿವೆ. ಒಂದೂ ಗುಣವು ಹೆಚ್ಚು - ಕಡಿಮೆಯಾಗಿಲ್ಲ. ಇದು ತ್ರಿಕಾಲೀ ಗುಣಗಳ ಮರ್ಯಾದೆಯ ಮಾತಾಯಿತು. ಸಿದ್ಧರಾದಾಗ ಗುಣಗಳು ವೃದ್ಧಿಸುವುದಿಲ್ಲ

ಮತ್ತು ನಿಗೋದವಾದಾಗ ಕಡಿಮೆಯಾಗುವುದಿಲ್ಲ .

೨) ಆತ್ಮನ ಪ್ರದೇಶಗಳು ಅಸಂಖ್ಯವಿವೆ, ಅವುಗಳಲ್ಲಿ ಒಂದು ಪ್ರದೇಶವು ವೃದ್ಧಿಸುವುದಿಲ್ಲ ಅದರಂತೆ ಕಡಿಮೆ ಯಾಗುವುದಿಲ್ಲ. ನಿಗೋದದಲ್ಲಿ ಹೋಗಲಿ, ಕ್ರಿಮಿಯಲ್ಲಿ ಹೋಗಲಿ, ಆನೆಯಾಗಲಿ ಅಥವಾ ಕೇವಲೀಸಮುದ್ಘಾತ ಮಾಡಿದರೂ ಕೂಡ ಒಂದು ಪ್ರದೇಶ ಕ್ಷೇತ್ರದಲ್ಲಿ ದೊಡ್ಡದು ಅಥವಾ ಚಿಕ್ಕದು ಆಗುವುದಿಲ್ಲ. ಇದು ಕ್ಷೇತ್ರದ ಮರ್ಯಾದೆಯ ಮಾತಾಯಿತು.

೩) ಜೀವದ ಪರ್ಯಾಯವು ಸಾಧಕವಿರಲಿ ಅಥವಾ ಬಾಧಕವಿರಲಿ, ನಿಗೋದದ್ದಿರಲಿ, ತೀವ್ರ ಅಜ್ಞಾನದ ಪರ್ಯಾಯವಿರಲಿ ಅಥವಾ ಜ್ಞಾನದ ಪರ್ಯಾಯವಿರಲಿ ಅದು ತನ್ನ ಮರ್ಯಾದೆಯಲ್ಲಿ ಇರುತ್ತದೆ, ಅದು ಇನ್ನೊಂದರ ಪರ್ಯಾಯದಲ್ಲಿ ಹೋಗುವುದಿಲ್ಲ .

ಹೀಗೆ ಪ್ರತಿಯೊಂದು ಜೀವವು ದ್ರವ್ಯ-ಕ್ಷೇತ್ರ-ಕಾಲ-ಭಾವದಿಂದ ಮರ್ಯಾದೆಗೊಳಗಾಗಿ ಅಥವಾ ದ್ರವ್ಯ-ಗುಣ-ಪರ್ಯಾಯದಿಂದ ತನ್ನ ಮರ್ಯಾದೆಯಲ್ಲಿರುತ್ತದೆ. ಅವಸ್ಥೆ ಒಂದು ಸಮಯದ ಮರ್ಯಾದೆಯಿದೆ ಮತ್ತು ದ್ರವ್ಯ-ಗುಣದ ಮರ್ಯಾದೆಯು ತ್ರಿಕಾಲವಿದೆ ಹೀಗೆ ಎರಡರ ಮರ್ಯಾದೆ ತಿಳಿದರೆ ಪ್ರಮಾಣಜ್ಞಾನವು ಪೂರ್ಣವಾಗುವುದು. ತನ್ನ ಜ್ಞಾನದಲ್ಲಿ ಪೂರ್ಣ ಆತ್ಮದ್ರವ್ಯವು ಜ್ಞೇಯದಂತೆ ಲಕ್ಷ್ಯದಲ್ಲಿ ಬಂದುಬಿಡುತ್ತದೆ. ಹೀಗೆ ಪ್ರತಿಯೊಬ್ಬ ಆತ್ಮನು ಅಭವ್ಯಿಯುಕೂಡ ತನ್ನ ಮರ್ಯಾದೆಯಲ್ಲಿರುತ್ತಾನೆ. ಜ್ಞಾನ, ದರ್ಶನ, ಚಾರಿತ್ರ ಮೊದಲಾದ ಅನಂತ ಗುಣಗಳು ಮತ್ತು ಅವನ ಸಮಯ ಸಮಯದ ಪರ್ಯಾಯಗಳು ಹೀಗೆ ಗುಣ-ಪರ್ಯಾಯದಿಂದಾದ ದ್ರವ್ಯವು ತನ್ನ ಮರ್ಯಾದೆಯಲ್ಲಿ ರಮಿಸುತ್ತಲಿದೆ.

ಲವಣಸಮುದ್ರದಲ್ಲಿ ನೀರು ಹದಿನಾರು ಸಾವಿರ ಯೋಜನ ಎತ್ತರಕ್ಕೇರಿವೆ, ಅಡ್ಡಲಾಗಿ ಗೋಡೆಯಿಲ್ಲ . ಆ ನೀರಿನಲ್ಲಿ ಏಕೇಂದ್ರಿಯ ಜೀವ ಮತ್ತು ಜಡ ಪರಮಾಣುಗಳಿವೆ. ಜೀವ ಮತ್ತು ಪರಮಾಣುಗಳು ಇದ್ದ ಹಾಗೆ ಇರುವುದಿಲ್ಲ, ಅವು ಬದಲಾವಣೆ ಮಾಡುತ್ತಿದ್ದರೂ ಕೂಡ ನೀರಿನ ಅಲ್ಲಾಟವು ಇದ್ದ ಹಾಗೆಯೇ ಇರುತ್ತದೆ. ನೀರಿನಲ್ಲಿ ಜೀವ ಮತ್ತು ಪರಮಾಣು ಕ್ಷೇತ್ರ ಮತ್ತು ತಮ್ಮ ಕಾಲದಿಂದ ತನ್ನ ಮರ್ಯಾದೆಯನ್ನು ಬಿಡುವುದಿಲ್ಲ ಅದೇ ರೀತಿ ಅನಂತ ಆತ್ಮಗಳು ತಮ್ಮ ಸ್ವಕ್ಷೇತ್ರದ ಮತ್ತು ಜ್ಞಾನ-ದರ್ಶನಾದಿ ಭಾವಗಳ ಹಾಗೂ ಸಮಯ ಸಮಯದ ಪರ್ಯಾಯಗಳ ಮರ್ಯಾದೆಯ ಹೊರಗೆ ಇಣಿಕಿ ನೋಡುವುದಿಲ್ಲ . ಕ್ಷೇತ್ರದ ಹೊರಗೆ, ಗುಣದ ಹೊರಗೆ ಅಥವಾ ಪರ್ಯಾಯದ ಹೊರಗೆ ಅವು ಹೋಗುವುದಿಲ್ಲ ಮತ್ತು ಪರದ ಕಾರ್ಯ ಮಾಡುವುದಿಲ್ಲ ಅಗುರುಲಘುಗುಣದ ಕಾರಣ ಅವು ತಮ್ಮ ಮರ್ಯಾದೆಯನ್ನು ಉಲ್ಲಂಘಿಸುವುದಿಲ್ಲ.

ಎಷ್ಟು ಜೀವಗಳಿವೆ ಅವೆಲ್ಲವುಗಳಲ್ಲಿ ಅಗುರುಲಘು ಗುಣವಿದ್ದೇ ಇದೆ ಎಂದರೆ ಯಾವ ಜೀವವೂ ಅಗುರುಲಘು ಗುಣದಿಂದ ರಹಿತವಾಗಿಲ್ಲ . ಮತ್ತು ಆ ಪ್ರತಿಯೊಂದು ಜೀವದ ಕ್ಷೇತ್ರವು ಲೋಕಪ್ರಮಾಣ ಅಸಂಖ್ಯಾತ ಪ್ರದೇಶವಿದೆ, ಎಂದರೆ ಪ್ರತಿಯೊಂದು ಜೀವವು ಅಸಂಖ್ಯಾತ ಪ್ರದೇಶಿಯಿದೆ.

ಈಗ ಅವುಗಳ ಎರಡು ಪ್ರಕಾರ ಹೇಳುತ್ತಾರೆ,-

೧) ಆ ಜೀವಗಳಲ್ಲಿ ಅದೆಷ್ಟೋ ಕೇವಲಜ್ಞಾನೀ ಜೀವಗಳು ಕೇವಲೀಸಮುದ್ಘಾತದ ಸಮಯದಲ್ಲಿ ದಂಡ, ಕಪಾಟಾದಿ ಅವಸ್ಥೆಗಳ ಸಮಯದಲ್ಲಿ ಸಮಸ್ತ ಲೋಕಪ್ರಮಾಣವಾಗುತ್ತವೆ. ದಂಡ, ಕಪಾಟಾದಿಗಳ ಸಮಯದಲ್ಲಿ ಕರ್ಮಗಳ ನಿಮಿತ್ತದಿಂದ ಪ್ರದೇಶಗಳ ವಿಸ್ತಾರವು ಲೋಕಪ್ರಮಾಣವಾಗುತ್ತದೆ. ಆ ಕಾರಣವಾಗಿ ಸಮುದ್ಘಾತದ ಅಪೇಕ್ಷೆಯಿಂದ ಅದೆಷ್ಟೋ ಜೀವಗಳನ್ನು ಲೋಕಪ್ರಮಾಣವೆಂದು ಹೇಳುವುದರಲ್ಲಿ ಬರುತ್ತದೆ. ಲೋಕಪ್ರಮಾಣವಾದರೂ ಕೂಡ ತಮ್ಮ ಮರ್ಯಾದೆಯನ್ನೆಂದೂ ಉಲ್ಲಂಘಿಸುವುದೇ ಇಲ್ಲ .

೨) ಇನ್ನು ಅದೆಷ್ಟೋ ಜೀವಗಳು ಸಮುದ್ಘಾತದ ಹೊರತು ಲೋಕಪ್ರಮಾಣವಿಲ್ಲದಿದ್ದರೂ ಕೂಡ ತಮ್ಮ ತಮ್ಮ

ಶರೀರ ಪ್ರಮಾಣವಿವೆ. ಆಲೂಗಡ್ಡೆ ಜೀವವು ಆಲೂಗಡ್ಡೆ ಶರೀರ ಪ್ರಮಾಣವಿದ್ದರೆ ಮನುಷ್ಯನ ಜೀವವು ಮನುಷ್ಯಶರೀರ ಪ್ರಮಾಣವಿದೆ. ಅದು ಕೂಡ ತನ್ನ ಮರ್ಯಾದೆಯಲ್ಲಿರುತ್ತದೆ. ಲೋಕಪ್ರಮಾಣವಾದರೆ ಜೀವವು ತನ್ನ ಮರ್ಯಾದೆಯಿಂದ ವೃದ್ಧಿಯಾಗುತ್ತದೆ ಮತ್ತು ನಿಗೋದದ ಶರೀರ ಪ್ರಮಾಣವಾದರೆ ತನ್ನ ಮರ್ಯಾದೆಯಿಂದ ಕಡಿಮೆಯಾಗುತ್ತದೆಯೆಂಬುದಾಗಿ ಎಂದೂ ಆಗುವುದಿಲ್ಲ, ಪ್ರತಿಯೊಂದು ಸಮಯದಲ್ಲಿ ತನ್ನ ಮರ್ಯಾದೆಯಲ್ಲಿಯೇ ಇರುತ್ತದೆ.

ಅಸಂಖ್ಯ ಪ್ರದೇಶಿಯಾದ ಅಖಂಡ ವಸ್ತುವಿರುವಾಗ ಲೋಕಪ್ರಮಾಣವ್ಯಾಪಕ ಮತ್ತು ಶರೀರಪ್ರಮಾಣ-ವ್ಯಾಪಕವೆಂದು ಎರಡು ಭಾಗ ಮಾಡಿ ಜ್ಞಾನಮಾಡಿಸಿದ್ದರೂ ಕೂಡ ಅದು ತನ್ನ ದ್ರವ್ಯ-ಕ್ಷೇತ್ರ-ಕಾಲ-ಭಾವದ ಮರ್ಯಾದೆಯಲ್ಲಿ ಇರುತ್ತದೆಯೆಂದು ಹೇಳಿದೆ. ಈ ಪ್ರಕಾರ ನಿಶ್ಚಿತ ಮಾಡುವಂಥ ಜೀವನು ತನ್ನ ಅಸಂಖ್ಯ ಪ್ರದೇಶಿಯಾದ ಕ್ಷೇತ್ರದಲ್ಲಿ ನೋಡುವುದು ಇರುತ್ತದೆ. ಪರ ಕ್ಷೇತ್ರದಲ್ಲಿ ಗೊಂದಲವನ್ನುಂಟುಮಾಡುವ ಪರ್ಯಾಯಬುದ್ಧಿಯು ಅವನಿಗೆ ಆಗುವುದಿಲ್ಲ.

ಈಗ ವರ್ತಮಾನ ಪರ್ಯಾಯದಲ್ಲಿ ಭಾವದ ಅಪೇಕ್ಷೆಯಿಂದ ಎರಡು ಭೇದಗಳಾಗುತ್ತವೆ.

ಆ ಅನಂತ ಜೀವರಾಶಿಯಲ್ಲಿ ಅನಂತಾನಂತ ಜೀವಗಳು ಅನಾದಿ ಕಾಲದಿಂದ ಮಿಥ್ಯಾತ್ವ-ಕಷಾಯ- ಯೋಗದಿಂದ ಸಂಯುಕ್ತ ಸಂಸಾರಿಯಿವೆ ಎಂದರೆ ಎಷ್ಟು ಜೀವಗಳು ಮಿಥ್ಯಾದರ್ಶನ, ಕಷಾಯ, ಯೋಗ ಸಂಯುಕ್ತವಿವೆ ಅವೆಲ್ಲವು ಸಂಸಾರಿಯೆಂದು ಕರೆಸಿಕೊಳ್ಳುತ್ತವೆ. ಮತ್ತು ಯಾವವು ಆ ಮಿಥ್ಯಾಕಷಾಯಯೋಗಗಳಿಂದ ರಹಿತವಾದ ಶುದ್ಧ ಜೀವಗಳಿವೆ ಅವು ಸಿದ್ಧವಿವೆ. ಆ ಸಿದ್ಧ ಜೀವಗಳೂ (ಮುಕ್ತ ಜೀವಗಳೂ) ಅನಂತವಿವೆ. ಇದು ಶುದ್ಧಾಶುದ್ಧ ಜೀವಗಳ ಸಾಮಾನ್ಯ ಸ್ವರೂಪವೆಂದು ತಿಳಿಯಬೇಕು.

ಜೀವರಾಶಿಯಲ್ಲಿ ಅನಂತ ಜೀವಗಳು ಅನಂತಕಾಲದಿಂದ ಭ್ರಾಂತಿಯುಳ್ಳವುಗಳಿವೆ. ಶರೀರ, ಕರ್ಮ ಮೊದಲಾದ ಪರಪದಾರ್ಥಗಳನ್ನು ತನ್ನವೆಂದು ಮನ್ನಿಸಿ ಭ್ರಾಂತಿಯಲ್ಲಿ ಬಿದ್ದುಕೊಂಡಿವೆ. ಮತ್ತು ಆತ್ಮವು ಶರೀರ, ಕರ್ಮದಿಂದ ರಹಿತವಿದೆಯೆಂಬ ಜ್ಞಾನ ಮಾಡಿಕೊಂಡು ತನ್ನಲ್ಲಿ ಶ್ರದ್ಧೆ ಮತ್ತು ಲೀನತೆ ಮಾಡಿ ಮುಕ್ತವಾಗಿವೆ ಅವು ಸಿದ್ಧವಿವೆ. ನಿಗೋದದ ಜೀವವಿರಲಿ ಅಥವಾ ಸಿದ್ಧವಿರಲಿ, ಆದಾಗ್ಯೂ ಅವು ತಮ್ಮ ಮರ್ಯಾದೆಯಲ್ಲಿರುತ್ತವೆ. ಹೀಗೆ ಮರ್ಯಾದೆಯ ನಿರ್ಣಯ ಮಾಡುವವನಿಗೆ ಶರೀರ, ಕರ್ಮ, ವಾಣಿ ಹಾಗೂ ಇತರ ಜೀವಗಳ ಮರ್ಯಾದೆಯಿಂದ ನನ್ನ ಮರ್ಯಾದೆಯು ಬೇರೆಯಿದೆ, ನಾನಂತೂ ನನ್ನ ಮರ್ಯಾದೆಯಲ್ಲಿದ್ದೇನೆಂಬ ಅರಿವಾಗುವುದು. ಸಂಸಾರದ ಮರ್ಯಾದೆಯು ನನ್ನ ಕಾರಣದಿಂದ ನನ್ನ ಕ್ಷೇತ್ರದಲ್ಲಿದೆ. ಸಂಸಾರದ ಮರ್ಯಾದೆಯು ಕರ್ಮದಲ್ಲಿ ಅಥವಾ ಇತರ ಕ್ಷೇತ್ರದಲ್ಲಿಲ್ಲ. ಸಂಸಾರದ ಪರ್ಯಾಯವು ತನ್ನಲ್ಲಿದೆಯೆಂಬ ಅರಿವುಂಟಾದರೆ ಪರಪದಾರ್ಥಗಳ ಜೊತೆಗಿರುವ ಏಕತ್ವಬುದ್ಧಿಯು ಮುರಿದುಬೀಳುತ್ತದೆ ಮತ್ತು ತನ್ನೆಡೆಗೆ ಒಲಿದು ನೋಡಿದರೆ ಸಂಸಾರ ಪರ್ಯಾಯವು ಒಂದು ಸಮಯದ ಮರ್ಯಾದೆಯುಳ್ಳದ್ದಿದೆ, ಮತ್ತು ದ್ರವ್ಯವಂತೂ ಶುದ್ಧ ಗುಣಗಳಿಂದ ತುಂಬಿಕೊಂಡು ಅದು ತ್ರಿಕಾಲೀ ಮರ್ಯಾದೆಯುಳ್ಳದ್ದಿದೆಯೆಂಬ ಜ್ಞಾನ ಮಾಡಿಕೊಂಡರೆ ದ್ರವ್ಯದಲ್ಲಿ ಸಂಸಾರವಿಲ್ಲವೆಂಬ ಶುದ್ಧ ದ್ರವ್ಯದ ದೃಷ್ಟಿಯಾದೊಡನೆ ತನ್ನ ಸಂಸಾರವು ಮುರಿದು ಬೀಳುವುದು. ಬೇರೆ ಯಾವ ಜೀವನು ತನಗೆ ಲಾಭ-ಹಾನಿ ಮಾಡುವಂತಿಲ್ಲ, ನಿಮಿತ್ತವು ಉಪಾದಾನದ ಮರ್ಯಾದೆಯಲ್ಲಿ ಕೆಲಸ ಮಾಡುವಂತಿಲ್ಲದಿದ್ದರೂ ಕೂಡ ಅಜ್ಞಾನೀ ಜೀವವು ಒಂದರಿಂದ ಇನ್ನೊಂದರಲ್ಲಿ ಕಾರ್ಯವಾಗುತ್ತದೆಯೆಂದು ನಂಬಿ ಭ್ರಾಂತಿಗೊಳಗಾಗಿದೆ. ನೀನೊಂದು ಜೀವಪದಾರ್ಥವಿರುವೆಯೋ ಅಥವಾ ಇಲ್ಲ ಮತ್ತು ಬೇರೆ ಪದಾರ್ಥವಿರುವುದೋ ಅಥವಾ ಇಲ್ಲ? ಯಾವುದು ಇದೆ ಅದು ಎಷ್ಟಿದೆ? ಎರಡು ಇದ್ದರೂ ಒಂದು ಇನ್ನೊಂದರಲ್ಲಿ ಹೋದರೆ ಎರಡು ಉಳಿಯುವುದಿಲ್ಲ. ಮತ್ತು ಒಂದರ ವರ್ತಮಾನವು ಇನ್ನೊಂದು ವಸ್ತುವಿನ ವರ್ತಮಾನದ ಕಾರಣದಿಂದಿದ್ದರೂ ಕೂಡ ಎರಡೂ ವಸ್ತುಗಳ ನಾಶವಾಗುವುದು. ಒಂದು ಪರಮಾಣು ಅಸ್ತಿರೂಪದಿಂದಿದ್ದು. ಆದರ ಕ್ಷೇತ್ರ ಏಕಪ್ರದೇಶವಿದ್ದು ಅದು ಅದರ ವರ್ತಮಾನ ಅವಸ್ಥೆಯನ್ನುಲ್ಲಂಘಿಸಿ ನಿನಗೆ ಲಾಭ ಮಾಡುವಂತಿಲ್ಲ ಮತ್ತು ನೀನು ನಿನ್ನ ಅಸಂಖ್ಯ ಪ್ರದೇಶಗಳ ಮರ್ಯಾದೆಯನ್ನುಲ್ಲಂಘಿಸಿ ಆ ಪರಮಾಣುವಿನಲ್ಲಿ

ಅದಲು ಬದಲು ಮಾಡುವಂತೆ ನಿನ್ನ ಮರ್ಯಾದೆಯಿಲ್ಲ .

ಸುಂದರವಾದ ಚಂಬುವಿನಲ್ಲಿ ನೀರು ತುಂಬಿದ ಸಮಯದಲ್ಲಿ ನೀರಿನ ಆಕಾರವು ನೀರನಲ್ಲಿದೆ ಮತ್ತು ಚಂಬುವಿನ ಆಕಾರವು ಚಂಬುವಿನಲ್ಲಿದೆ, ಎರಡೂ ಭಿನ್ನ ಭಿನ್ನವಿವೆ ಅದರಂತೆ ಈ ಶರೀರವು ಸುಂದರವಾದ ಚಂಬುವಿನ ಸಮಾನವಿದೆ ನೀರು ಚಂಬುವಿನ ಆಕಾರ ಕಂಡುಬಂದರೂ ಎರಡರ ಆಕಾರ ಏಕರೂಪವಾಗಿಲ್ಲ , ಭಿನ್ನ ಭಿನ್ನವಿವೆ ಅದರಂತೆ ಆತ್ಮನ ಆಕಾರವು ಶರೀರ ಪ್ರಮಾಣವಿದ್ದರೂ ಕೂಡ ಅವೆರಡೂ ಏಕರೂಪವಿಲ್ಲ ಆತ್ಮನ ಆಕಾರವು ಶರೀರ ಪ್ರಮಾಣವಿದ್ದರೂ ಕೂಡ ತನ್ನ ಮರ್ಯಾದೆಯಲ್ಲಿದೆ. ವಿಗ್ರಹಗತಿಯಲ್ಲಿದ್ದರೂ ಕೂಡ ತನ್ನ ಮರ್ಯಾದೆಯಲ್ಲಿ ಮತ್ತು ಕೇವಲೀಸಮುದ್ಘಾತ ಮಾಡಿದಾಗ ಲೋಕಪ್ರಮಾಣವಾದಾಗ ಕೂಡ ತನ್ನ ಮರ್ಯಾದೆಯಲ್ಲಿದೆ. ಹೀಗೆ ನಿರ್ಣಯ ಮಾಡಿದರೆ ಅಸಂಖ್ಯಪ್ರದೇಶಿಯಾದ ತನ್ನ ಜೀವದ ಎದುರು ನೋಡುವುದು ಇರುತ್ತದೆ.

ಕಾಲಿಗೆ ಚೇಳು ಕಚ್ಚಿದರೆ ಎಲ್ಲ ಲಕ್ಷ್ಯದಲ್ಲಿ ಬಂದುಬಿಡುವುದರಿಂದ ಆತ್ಮನು ಅಖಂಡ ಪೂರ್ಣನಿದ್ದರೂ ಕೂಡ ಕಾಲಿನ ಯಾವ ಅಂಶಗಳಿವೆ ಆ ಅಂಶಗಳು ತಲೆಯವಲ್ಲ. ಅದಕ್ಕಾಗಿ ಅಂಶಗಳು ಬೇರೆ ಬೇರೆಯಿವೆ ಎಂದರೆ ಅಂಶಗಳು ಅಧಿಕವಿವೆ ಮತ್ತು ಆತ್ಮನು ಅಖಂಡ ಏಕನಿದ್ದಾನೆ, ಹೀಗೆ ಅಸಂಖ್ಯಪ್ರದೇಶೀ ಅಖಂಡವಿದ್ದು ಲೋಕಪ್ರಮಾಣ ವ್ಯಾಪಕ ಮತ್ತು ಶರೀರ ಪ್ರಮಾಣದಿಂದ ವ್ಯಾಪಕವೆಂದು ಎರಡು ಭಾಗ ಮಾಡಿತು ಮತ್ತು ಭಾವದಿಂದ ಎರಡು ಭಾಗ ಮಾಡಿತು-ಓರ್ವ ಭ್ರಾಂತಿಯುಳ್ಳ ಸಂಸಾರೀ, ಓರ್ವ ಭ್ರಾಂತಿರಹಿತ ಸಿದ್ಧ. ಸಂಸಾರಿಯುಳಿದರೂ ಕೂಡ ಮರ್ಯಾದೆಯಲ್ಲಿದ್ದಾನೆ ಮತ್ತು ಸಿದ್ಧವಾದರೂ ಕೂಡ ಮರ್ಯಾದೆಯಲ್ಲಿದ್ದು ಆಗುತ್ತಾನೆ. ಚತುರ್ಥಕಾಲದಲ್ಲಿ ಕೇವಲಜ್ಞಾನವಾದರೂ ಕೂಡ ತನ್ನ ಮರ್ಯಾದೆಯಲ್ಲಿದೆ ಮತ್ತು ಪಂಚಮಕಾಲದಲ್ಲಿ ಕೇವಲಜ್ಞಾನವಾಗದಿದ್ದರೂ ಕೂಡ ತನ್ನ ಮರ್ಯಾದೆಯಲ್ಲಿದ್ದುಕೊಂಡು ಆಗುವುದಿಲ್ಲ.

ಹೀಗೆ ಮರ್ಯಾದೆಯು ನಿರ್ಣಯವಾದೊಡನೆ ಪರಪದಾರ್ಥದಲ್ಲಿನ ಕರ್ತೃತ್ವದ ಅಭಿಮಾನವು ಬಿಟ್ಟುಹೋಗುವುದು. ಹಣ ದೊರಕಿದೆಯೆಂದು ಜನರು ಹೇಳುತ್ತಾರೆ, ಆದರೆ ಹಣವು ತನ್ನ ಮರ್ಯಾದೆಯಲ್ಲಿ ನಿಂತುಕೊಂಡಿದೆ. ಅದು ಜೀವದ ಕ್ಷೇತ್ರದಲ್ಲಿ ಪ್ರವೇಶ ಮಾಡಿಲ್ಲ . ಪುಣ್ಯಕರ್ಮದ ಪರಮಾಣುಗಳು ಕರ್ಮದ ಮರ್ಯಾದೆಯಲ್ಲಿ ನಿಂತುಕೊಂಡಿವೆ.

ಪ್ರತಿಯೊಂದು ವಸ್ತು ಮರ್ಯಾದೆಯಲ್ಲಿ ನಿಂತುಕೊಂಡಿದೆ. ಹೀಗೆ ಪ್ರತಿಯೊಂದು ವಸ್ತುವಿನ ಧರ್ಮವಿದೆ. ಆತ್ಮನ ಅಸಂಖ್ಯ ಪ್ರದೇಶಗಳಲ್ಲಿ ಗುಣಗಳನ್ನು ಮತ್ತು ಪರ್ಯಾಯಗಳನ್ನು ಹೇಗಿವೆ ಹಾಗೆ ಶ್ರದ್ಧೆಯಲ್ಲಿ ಧಾರಣ ಮಾಡುವುದೇ ಧರ್ಮವಿದೆ. ಒಂದು ಸಮಯದ ಪರ್ಯಾಯವನ್ನು ತಾನು ಧಾರಣಮಾಡಿದ್ದೇನೆಂದು ನಿರ್ಣಯ ಮಾಡಿದರೆ ಪ್ರತಿಯೊಂದು ಪದಾರ್ಥವು ಸ್ವತಂತ್ರವಿದೆಯೆಂಬ ನಿರ್ಣಯವಾಗುತ್ತದೆ. ಇತರರು ನನಗೆ ಸಹಾಯ ಮಾಡುವವರು ನಾನು ಇತರರಿಗೆ ಸಹಾಯ ಮಾಡುವೆನು ಧರ್ಮ ಪಡೆಯುವೆನೆಂಬ ಅಸತ್ ಕಲ್ಪನೆಯ ನಾಶವಾಗುವುದು. ಮತ್ತು ನಿಮಿತ್ತದ ಮರ್ಯಾದೆಯು ನಿಮಿತ್ತದಲ್ಲಿ ಹಾಗೂ ನನ್ನ ಮರ್ಯಾದೆಯು ನನ್ನಲ್ಲಿದೆಯೆಂದು ನಿರ್ಣಯ ಮಾಡಿದ ಮೇಲೆ ಪರದೆಡೆಗೆ ನೋಡುವುದು ಉಳಿಯುವುದಿಲ್ಲ ತನ್ನಡೆಗೆ ಒಲಿದರೆ ಪರ್ಯಾಯವಂತೂ ಒಂದು ಸಮಯದ ಮರ್ಯಾದೆಯುಳ್ಳದ್ದಿದೆ. ಅದು ಒಂದು ಅಂಶವಿದೆ ದ್ರವ್ಯದ ಗುಣದ ಮರ್ಯಾದೆಯು ತ್ರಿಕಾಲವಿದೆ. ಒಂದು ಅಂಶದಲ್ಲಿ ಇಡೀ ಅಂಶಿಯು ಬಂದೇ ಇಲ್ಲ ಮತ್ತು ಒಂದು ಸಮಯದ ಪರ್ಯಾಯದಷ್ಟು ನಾನಲ್ಲ , ನಾನಂತೂ ತ್ರಿಕಾಲೀ ದ್ರವ್ಯನಿದ್ದೇನೆಂದು ಶುದ್ಧ ದ್ರವ್ಯದ ಕಡೆಗೆ ಬಂದರೆ ಜ್ಞಾನವು ಸಮ್ಯಕ್ ಆಗುವುದು ಆ ಜ್ಞಾನವು ಸುಖದ ಕಾರಣವಿದೆ ಮತ್ತು ದುಃಖದ ಕಾರಣವಾದ ಯಾವ ಮಿಥ್ಯಾ ಜ್ಞಾನವಿದೆ ಅದರ ಅಭಾವವಾಗುವುದು. ಇಂಥ ಜ್ಞಾನದ ನಂತರ ಹೇಗೆ ಹೇಗೆ ಸ್ಥಿರತೆ ವೃದ್ಧಿಸುವುದು ಹಾಗೆ ಹಾಗೆ ಚಾರಿತ್ರದಶೆಯಾಗುವುದು ಮತ್ತು ಅದು ವೃದ್ಧಿಸಿ ಎಂದರೆ ಪೂರ್ಣವಾಗಿ ಸಿದ್ಧದಶೆಯಾಗುವುದು, ಯಾವ ಜೀವನು ತನ್ನ ಮರ್ಯಾದೆಯನ್ನು

ತಿಳಿಯುವುದಿಲ್ಲ ಮತ್ತು ಪರದಲ್ಲಿ ಅದಲು ಬದಲು ಮಾಡುವ ಅಭಿಮಾನ ಪಡುತ್ತಾನೆ ಹಾಗೂ ತನ್ನ ಮರ್ಯಾದೆ ಮೀರುತ್ತಾನೆ ಅವನು ಸಂಸಾರಿಯಿದ್ದಾನೆ ಮತ್ತು ಯಾವನು ತನ್ನ ಮರ್ಯಾದೆ ತಿಳಿದುಕೊಂಡು ಶ್ರದ್ಧೆ-ಜ್ಞಾನ ಮಾಡುತ್ತಾನೆ ಅವನು ಕ್ರಮದಿಂದ ಸಿದ್ಧನಾಗುತ್ತಾನೆ.

ಈ ಪ್ರಕಾರ ಶುದ್ಧ-ಅಶುದ್ಧ ಜೀವದ ಸ್ವರೂಪವನ್ನು ತಿಳಿದುಕೊಳ್ಳಬೇಕು.

ಆತ್ಮನು ಕೇವಲ ದೇಹಮಾತ್ರ ಹೇಗಿದ್ದಾನೆಂಬುದನ್ನು ತಿಳಿಸುತ್ತಾರೆ. ಕೆಲವರು ಆತ್ಮನನ್ನು ಸರ್ವವ್ಯಾಪಕನೆಂದು ಮನ್ನಿಸಿದ್ದಾರೆ, ಕೆಲವರು ಬೆರಳು ಪ್ರಮಾಣವೆಂದು ಮನ್ನಿಸಿದ್ದಾರೆ, ಕೆಲವರು ಅಕ್ಷತದ ಕಾಳಿನಷ್ಟೆಂದು ಮನ್ನಿಸಿದ್ದಾರೆ, ಆದರೆ ಇದೆಲ್ಲವು ವಿಪರೀತಮನ್ನಣೆಯಿದೆ. ಆತ್ಮನು ಶರೀರ ಪ್ರಮಾಣನಿದ್ದಾನೆಂಬುದನ್ನು ತಿಳಿಸಿಕೊಡುತ್ತಾರೆ,-

ಜಹ ಪಉಮರಾಯರಯಣಂ ಖಿತ್ತಂ ಖೀರೇ ಪಭಾಸಯದಿ ಖೀರಂ ।
ತಹ ದೇಹೀ ದೇಹತ್ಥೋ ಸದೇಹಮೇತ್ತಂ ಪಭಾಸಯದಿ ॥೩೩॥

**ಹೇಗೆ ಪದ್ಮರಾಗಮಣಿ ಹಾಲಿನೊಳಗಿದ್ದು ಹಾಲನು ಪ್ರಕಾಶಿತ ಮಾಡುವುದು ।**
**ಹಾಗೆ ದೇಹಿ ದೇಹದೊಳಗಿದ್ದು ದೇಹ ಪ್ರಮಾಣವಾಗಿ ಪ್ರಕಾಶಿತವಾಗುವನು ॥೩೩॥**

ಯಾವ ಪ್ರಕಾರ ಪದ್ಮರಾಗ ಮಣಿಯನ್ನು ಹಾಲಿನಲ್ಲಿ ಹಾಕುವುದರಿಂದ ಅದರ ಪ್ರಭೆಯು ಹಾಲಿನ ಕ್ಷೇತ್ರದಷ್ಟು ಪ್ರದೇಶದಲ್ಲಿ ಪಸರಿಸುತ್ತದೆ. ಅದೇ ಪ್ರಕಾರ ಸಂಸಾರೀ ಜೀವನು ತನ್ನ ದೇಹದಲ್ಲಿದ್ದು ದೇಹದ ಬರಾಬರಿಯಾಗಿ ಪ್ರಕಾಶಿಸುತ್ತಾನೆ. ಇಲ್ಲಿ ದೃಷ್ಟಾಂತವು ಸರ್ವಥಾ ಸರಿಯೆಂದು ತಿಳಿಯಬಾರದು, ದೃಷ್ಟಾಂತದಲ್ಲಿ ಮಣಿರತ್ನವು ಚಿಕ್ಕದಿದೆ ಮತ್ತು ಅದರ ಪ್ರಭೆಯು ಹಾಲಿನಲ್ಲಿ ವ್ಯಾಪಿಸಿದ್ದು ಕಂಡುಬರುತ್ತದೆ ಹೀಗೆ ಆತ್ಮನು ಚಿಕ್ಕವನಿದ್ದಾನೆ ಮತ್ತು ಶರೀರವು ದೊಡ್ಡದಿದೆಯೆಂದು ತಿಳಿಯಬಾರದು. ಆತ್ಮನು ಶರೀರ ಪ್ರಮಾಣನಿದ್ದಾನೆ. ಮಣಿರತ್ನದ ಪ್ರಭೆಯು ಇಡೀ ಹಾಲಿನಲ್ಲಿ ವ್ಯಾಪಿಸಿದೆ, ಹಾಗೆ ಆತ್ಮನ ಕಾಂತಿಯು ಇಡೀ ಶರೀರ ಪ್ರಮಾಣಪಸರಿಸಿದೆ, ಆತ್ಮನ ಕ್ಷೇತ್ರವು ಶರೀರ ಪ್ರಮಾಣವಿದೆ. ಆದರೆ ಶರೀರ ಮತ್ತು ಆತ್ಮನು ಏಕಮೇಕವಿಲ್ಲ ಶರೀರವಂತೂ ಭಿನ್ನವಸ್ತುವಿದೆ, ಅದರಲ್ಲಿ ಏನಾದರೂ ನೋವಾದರೆ ಅದು ಶರೀರದ ಅವಸ್ಥೆಯಲ್ಲಿ ಆಗುತ್ತದೆ. ಉಗುರಿನ ಭಾಗ ಕತ್ತರಿಸಲು ಯಾವ ದುಃಖವಾಗುತ್ತದೆ ಅದು ಜಡದ ಪರ್ಯಾಯವಿದೆ, ಅದು ಆತ್ಮನ ಅವಸ್ಥೆಯಲ್ಲ , ಆದಾಗ್ಯೂ ಆ ನೋವು ತನಗಾಗುವುದೆಂದು ಅಜ್ಞಾನಿಯ ಕಲ್ಪನೆಯಿದೆ. ರೋಗವು ದುಃಖದ ಕಾರಣವಿಲ್ಲ , ಆದರೆ ಶರೀರದ ಅವಸ್ಥೆಯನ್ನು ತನ್ನದೆಂದು ಮನ್ನಿಸುವ ಆ ಮನ್ನಣೆಯೇ ದುಃಖದ ಕಾರಣವಿದೆ ಜ್ಞಾನಿಯಂತೂ ಅದು ಶರೀರದ ಅವಸ್ಥೆಯಿದೆ, ನನಗೆ ರೋಗವಾಗುವುದಿಲ್ಲ , ನಾನಂತೂ ಜ್ಞಾತಾ ಇದ್ದೇನೆಂದು ತಿಳಿಯುತ್ತಾನೆ. ಹೀಗೆ ಸ್ವಪರಪ್ರಕಾಶಕ ಜ್ಞಾನಸ್ವಭಾವದ ಅರಿವಿಲ್ಲದವನಿಗೆ ಶರೀರದ ಜತೆಯಲ್ಲಿ ಏಕತ್ವಬುದ್ಧಿಯಿರುತ್ತದೆ ಮತ್ತು ಅವನಿಗೆ ಶರೀರದ ಸಂಬಂಧವು ಅಖಂಡವಾಗಿ ಇರುತ್ತದೆ.

**ಭಾವಾರ್ಥಃ-** ಪದ್ಮರಾಗ ನಾಮದ ರತ್ನವನ್ನು ಹಾಲಿನಿಂದ ತುಂಬಿದ ಪಾತ್ರೆಯಲ್ಲಿ ಹಾಕಿಬಿಡುವುದರಿಂದ ಅದು ತನ್ನ ಪ್ರಭೆಯಿಂದ ಸಂಪೂರ್ಣ ಹಾಲನ್ನು ತನ್ನ ಪ್ರಭೆಯ ಸಮಾನವಾಗಿ ಪ್ರಕಾಶಮಾನ ಮಾಡುವಂಥ ಗುಣವು ಆ ರತ್ನದಲ್ಲಿ ಇದೆ. ರತ್ನದ ಪರ್ಯಾಯ ಮತ್ತು ಹಾಲಿನ ಪರ್ಯಾಯವು ಭಿನ್ನವಿದ್ದು ಯಾವುದೇ ಒಂದು ಪರ್ಯಾಯವು ಬೇರೊಂದು ಪರ್ಯಾಯದಲ್ಲಿ ಏನನ್ನೂ ಕೂಡ ಮಾಡುವ ಸಾಧ್ಯತೆಯಿಲ್ಲ , ಅದೇ ಪ್ರಕಾರ ಸಂಸಾರೀ ಜೀವನು ಅನಾದಿ ಕಾಲದಿಂದ ವಿಕಾರದಿಂದ ಮಲಿನನಾಗಿದ್ದಾನೆ ಮತ್ತು ಶರೀರಪ್ರಮಾಣವಾಗಿ ಉಳಿದಿರುವುದಕ್ಕೆ ಮಿಥ್ಯಾತ್ವವೊಂದೇ ಮೂಲ ಕಷಾಯವಿದೆ. ಚೈತನ್ಯಸ್ವಭಾವದ ದೃಷ್ಟಿಯು ಹೊರಟುಹೋಗಿ ಪರದಲ್ಲೇನಾದರೂ ಮಾಡುವ ಸಾಧ್ಯತೆಯಿದೆ, ಪುಣ್ಯ, ರಾಗ, ನಿಮಿತ್ತಗಳನ್ನು

ತನ್ನವುಗಳೆಂದು ಮನ್ನಿಸುವುದೆಲ್ಲವೂ ಮಿಥ್ಯಾರೂಪದ ಸಂಸಾರವಿದೆ. ವಿಷಯಗಳಲ್ಲಿ ಸಂತೋಷದ ಕಲ್ಪನೆ ಮಾಡುವುದು ಇದು ಭ್ರಾಂತಿಯಿದೆ. ಜೀವನು ಪರ್ಯಾಯದಲ್ಲಿ ಮಲಿನನಾಗಿದ್ದಾನೆ, ಆದರೆ ಅದು ಒಂದು ಸಮಯಮಾತ್ರದ ಪರ್ಯಾಯದಲ್ಲಿ ಆಗಿದ್ದಾನೆ, ಮತ್ತು ಆ ಪ್ರವಾಹರೂಪವಾಗಿ ಅನಾದಿಯಿಂದ ಮಲಿನನಿದ್ದಾನೆ ಮೊದಲು ಶುದ್ಧನಿದ್ದನು ಮತ್ತು ನಂತರ ಮಲಿನನಾದನೆಂದೇನು ಇಲ್ಲ. ಅನಾದಿ ಕಾಲದಿಂದ ಬೇರೆ ಬೇರೆ ಶರೀರಗಳನ್ನು ಧಾರಣಮಾಡಿ ಸಂಸಾರದಲ್ಲಿ ಸುತ್ತುತ್ತಲಿದ್ದಾನೆ. ಆಯಾ ಶರೀರಗಳಲ್ಲಿ ಆತ್ಮನು ತನ್ನ ಪ್ರದೇಶಗಳನ್ನು ವಿಸ್ತರಿಸಿಕೊಂಡಿರುತ್ತಾನೆ ಅದರಿಂದ ಆತ್ಮನು ಶರೀರ ಪ್ರಮಾಣವಾಗಿ ಇರುತ್ತಾನೆ;

ಮತ್ತು ಯಾವ ಪ್ರಕಾರ ರತ್ನಸಹಿತವಾದ ಹಾಲು ಅಗ್ನಿಯ ಸಂಯೋಗದಿಂದ ಉಕ್ಕು ಬಂದರೆ ವೃದ್ಧಿಸುತ್ತದೆ, ಮತ್ತು ರತ್ನದ ಪ್ರಭೆಯು ವೃದ್ಧಿಸುತ್ತದೆ. ಇನ್ನು ಅಗ್ನಿಯ ಸಂಯೋಗವು ಕಡಿಮೆಯಾಗುವುದರಿಂದ ಉಕ್ಕುಬರುವುದು ನಿಂತುಕೊಂಡಾಗ ರತ್ನದ ಪ್ರಭೆಯು ಕಡಿಮೆಯಾಗುವುದು. ಅದೇ ಪ್ರಕಾರ ಪುಷ್ಟಿಕಾರಕವಾದ ಆಹಾರದಿಂದ ಶರೀರವು ವೃದ್ಧಿಸುತ್ತ ಹೋಗುವುದು ಹಾಗೆ ಹಾಗೆ ಶರೀರದಲ್ಲಿರುವ ಆತ್ಮನ ಪ್ರದೇಶಗಳು ವಿಸ್ತರಿಸುತ್ತ ಹೋಗುವವು ಮತ್ತು ಆಹಾರವು ಕಡಿಮೆಯಾಗಿ ಹೋಗುವುದರಿಂದ ಶರೀರವು ಕ್ಷೀಣವಾದರೆ ಆತ್ಮನ ಪ್ರದೇಶಗಳು ಸಂಕುಚಿತವಾಗುತ್ತವೆ. ಇಲ್ಲಿ ದೃಷ್ಟಾಂತದಲ್ಲಿ ಕೂಡ ಹಾಲು ಉಕ್ಕುವುದು ಅಥವಾ ಉಕ್ಕು ನಿಂತುಕೊಳ್ಳುವುದು ಅದು ತನ್ನ ಕಾರಣದಿಂದಿದೆ. ಅಗ್ನಿಯಂತೂ ನಿಮಿತ್ತಮಾತ್ರವಿದೆ, ಅದೇ ಪ್ರಕಾರ ಶರೀರದ ಹಿರಿ-ಕಿರಿಯ, ಪುಷ್ಟ-ಕೃಶವಾಗುವುದು ಅದು ಶರೀರದ ಕಾರಣದಿಂದಿದೆ, ಆಹಾರವು ನಿಮಿತ್ತಮಾತ್ರವಿದೆ ಶರೀರವು ಪುಷ್ಟವಾದರೆ ಆಹಾರವನ್ನು ನಿಮಿತ್ತವೆಂದು ಹೇಳಲಾಗುವುದು, ಇಲ್ಲಿ ಶರೀರದ ಕ್ಷೇತ್ರದೊಡನೆ ಆತ್ಮನ ಕ್ಷೇತ್ರದ ಮೇಳ ಹೇಗಿರುವುದು, ಅಷ್ಟು ನಿಮಿತ್ತ-ನೈಮಿತ್ತಿಕ ಸಂಬಂಧವನ್ನು ತಿಳಿಸುವುದಿದೆ ಆತ್ಮನ ಪ್ರದೇಶಗಳು ವಿಸ್ತಾರ ಪಡೆಯುವುದು ಅಥವಾ ಸಂಕೋಚ ಹೊಂದುವುದು ಅದು ತನ್ನ ಕಾರಣದಿಂದ ಆಗುತ್ತದೆ ಶರೀರದ ಕಾರಣದಿಂದ ಇಲ್ಲ . ಜಡದ ಕಾರ್ಯವು ಜಡದಲ್ಲಿ ಮತ್ತು ಚೇತನದ ಕಾರ್ಯವು ಚೇತನದಲ್ಲಿ ಆಗುವುದಿರುತ್ತದೆ, ಯಾವುದರ ಕಾರಣದಿಂದ ಯಾವುದೂ ಇರುವುದಿಲ್ಲ .

ಶರೀರದ ಕಾರಣದಿಂದ ಆತ್ಮನ ವಿಸ್ತಾರ ಮನ್ನಿಸುವುದೇ ಅಪರಾಧವಿದೆ. ಆತ್ಮನ ಕರ್ತೃವು ಈಶ್ವರನಂತೂ ಇಲ್ಲ, ಆದರೆ ಕರ್ಮದ ಕಾರಣದಿಂದ ಅಥವಾ ಶರೀರದ ಕಾರಣದಿಂದ ಆತ್ಮನಲ್ಲಿ ಸಂಕೋಚ-ವಿಸ್ತಾರಗಳಾಗುವುದಿಲ್ಲ ಆದರೆ ತನ್ನಲ್ಲಿರುವ ಸಂಕೋಚ ವಿಸ್ತಾರಗುಣದ ಕಾರಣದಿಂದ ಅದು ಹಿರಿ-ಕಿರಿದು ಆಗುತ್ತಿರುತ್ತದೆ. ಸ್ವಯಂಭೂರಮಣಸಮುದ್ರದಲ್ಲಿ ಮೀನು ಒಂದು ಸಾವಿರ ಯೋಜನ ಉದ್ದವಿರುತ್ತದೆ. ಏಳನೆಯ ನರಕದಲ್ಲಿ ಐನೂರು ಧನುಷ್ಯದ ಶರೀರವಿರುತ್ತದೆ ಅಂದಮೇಲೆ ಆತ್ಮನು ಆ ಪ್ರಮಾಣನಿರುತ್ತಾನೆ. ಚಿಕ್ಕ ಶರೀರ ಧಾರಣ ಮಾಡಿದಾಗ ಚಿಕ್ಕವನಾಗುತ್ತಾನೆ. ಇದೇರೀತಿ ಚಿಕ್ಕ-ದೊಡ್ಡ ಶರೀರಗಳನ್ನು ಈ ಜೀವನು ಅನಂತ ಬಾರಿ ಧಾರಣ ಮಾಡಿದ್ದಾನೆ. ಅಲ್ಲಿ ತನ್ನ ಅಸಂಖ್ಯ ಪ್ರದೇಶಗಳಷ್ಟು ಇದ್ದು ಶರೀರ ಪ್ರಮಾಣದಷ್ಟು ಸಂಕೋಚ-ವಿಸ್ತಾರಗಳು ತನ್ನ ಕಾರಣದಿಂದ ಆಗುತ್ತವೆ.

ಆತ್ಮನ ಪ್ರದೇಶಗಳು ಅಸಂಖ್ಯ ಎಷ್ಟಿವೆ ಅಷ್ಟೇ ಇರುವುದು ಮತ್ತೆ ಪುನಃ ಸಂಕೋಚ ವಿಸ್ತಾರಗಳಾಗುವುದು ಇದು ಹೇಗೆಂದು ಅದೆಷ್ಟೋ ಜೀವರುಗಳಿಗೆ ನವೀನವೆನಿಸುತ್ತದೆ. ರೂಪಿವಸ್ತುವಾದ ಚರ್ಮದ ಸಂಕೋಚ-ವಿಸ್ತಾರಗಳಾಗುತ್ತವೆ, ಆದರೆ ಅರೂಪಿಯಾದ ಆತ್ಮನಲ್ಲಿ ಸಂಕೋಚ-ವಿಸ್ತಾರಗಳಾಗುವುದಿಲ್ಲವೆಂದು ಅಜ್ಞಾನೀ ಜೀವರುಗಳು ಹೇಳುತ್ತಾರೆ ಆದರೆ ಆ ಮಾತು ಅಸತ್ಯವಿದೆ. ಆತ್ಮನು ಅಸಂಖ್ಯ ಪ್ರದೇಶಿಯಾಗಿದ್ದುಕೊಂಡು ಸಂಸಾರದಶೆಯಲ್ಲಿ ಸಂಕೋಚ-ವಿಸ್ತಾರಗಳಾಗುವುದು ಅದು ಅವನ ಸ್ವಭಾವವಿದೆ-ಹೀಗೆ ಮನ್ನಿಸದವನು ಮಿಥ್ಯಾದೃಷ್ಟಿಯಿದ್ದಾನೆ.

ಯಾವ ಪ್ರಕಾರ ಆ ಮಣಿಯನ್ನು ಬಹಳಷ್ಟು ಹಾಲಿನಲ್ಲಿ ಹಾಕಿದರೆ ಅದರ ಪ್ರತಿಭೆಯು ವೃದ್ಧಿಸಿ ಸಂಪೂರ್ಣ ಹಾಲಿನಲ್ಲಿ ವ್ಯಾಪಿಸಿಹೋಗುವುದು ಅದೇ ಪ್ರಕಾರ ಜೀವನು ದೊಡ್ಡದಾದ ಶರೀರವನ್ನು ಧಾರಣ ಮಾಡಿದರೆ ತನ್ನ ಆತ್ಮನ ಪ್ರದೇಶಗಳ

ವಿಸ್ತಾರವು ಆ ಪ್ರಮಾಣವಾಗುತ್ತದೆ ; ಮತ್ತು ಯಾವ ಪ್ರಕಾರ ಆ ರತ್ನವನ್ನು ಸ್ವಲ್ಪಹಾಲಿನಲ್ಲಿ ಹಾಕಿದರೆ ಅದರ ಪ್ರಭೆಯು ಸಂಕುಚಿತವಾಗಿ ಕಡಿಮೆ ಹಾಲಿನ ಕ್ಷೇತ್ರದಷ್ಟು ಆಗಿಹೋಗುತ್ತದೆ. ಅದೇ ಪ್ರಕಾರ ಆತ್ಮನು ದೊಡ್ಡ ಶರೀರದಿಂದ ಹೊರಟು ಚಿಕ್ಕ ಶರೀರ ಧಾರಣ ಮಾಡಿದರೆ ಅವನ ಪ್ರದೇಶಗಳು ಸಂಕೋಚಿಸಲ್ಪಟ್ಟು ಚಿಕ್ಕ ಶರೀರದ ಪ್ರಮಾಣವಾಗುತ್ತವೆ. ಆದುದರಿಂದ ಕರ್ಮದ ನಿಮಿತ್ತದಿಂದ ಆತ್ಮನ ಸಂಕೋಚ-ವಿಸ್ತಾರ ಶಕ್ತಿಯ ಪ್ರಭಾವದಿಂದ ಎಂಥ ಶರೀರ ಧಾರಣ ಮಾಡುತ್ತಾನೆ ಹಾಗೆ ಅವನು ಸಂಕೋಚ-ವಿಸ್ತಾರ ಪಡೆದು ಇರುತ್ತಾನೆ. ಸ್ವಯಂಭೂರಮಣ ಸಮುದ್ರದಲ್ಲಿ ಮಹಾಮತ್ಸ್ಯದ ಉತ್ಕೃಷ್ಟ ಅವಗಾಹನವು ಒಂದು ಸಾವಿರ ಯೋಜನವಿರುತ್ತದೆ, ಮತ್ತು ಜಘನ್ಯ ಅವಗಾಹನವು ಅಲಬ್ಧಪರ್ಯಾಪ್ತಕ ಸೂಕ್ಷ್ಮನಿಗೋದ ಜೀವದ್ದಿದೆ, ಅದು ಒಂದು ಶ್ವಾಸದಲ್ಲಿ ಹದಿನೆಂಟು ಭವಧಾರಣ ಮಾಡುತ್ತದೆ ಯಾವ ಜೀವನು ಯಥಾರ್ಥ ವಸ್ತುಸ್ವರೂಪವನ್ನು ಮನ್ನಿಸುವುದಿಲ್ಲ ಮತ್ತು ತತ್ತ್ವಜ್ಞಾನದ ಬಲದಿಂದ ವಿರೋಧ ಮಾಡುತ್ತಾನೆ ಅವನು ಕ್ರಮದಿಂದ ನಿಗೋದ ಅವಸ್ಥೆಯನ್ನು ಪ್ರಾಪ್ತಮಾಡಿಕೊಳ್ಳುತ್ತಾನೆ. ಆಲೂಗಡ್ಡೆಯ ಒಂದು ಸಾಸಿವೆಯ ಕಾಳಿನಷ್ಟು ತುಂಡಿನಲ್ಲಿ ಅಸಂಖ್ಯ ಔದಾರಿಕ ಶರೀರಗಳಿರುತ್ತವೆ ಮತ್ತು ಒಂದು ಶರೀರದಲ್ಲಿ ಅನಂತ ನಿಗೋದದ ಜೀವಗಳಿರುತ್ತವೆ. ಇಂದಿನವರೆಗೆ ಎಷ್ಟು ಸಿದ್ಧರಾಗಿದ್ದಾರೆ ಅವರಿಗಿಂತ ಅನಂತ ಗುಣಿತವಾದ ಜೀವಗಳು ನಿಗೋದದ ಆ ಒಂದು ಶರೀರದಲ್ಲಿವೆ. ಹೀಗೆ ಜೀವಗಳು ಬೇರೆ ಬೇರೆ ಅನಂತ ಭವಗಳನ್ನು ಧಾರಣ ಮಾಡಿವೆ ಒಂದು ಭವದಲ್ಲಿ ಅದೆಷ್ಟೋ ವಿಚಿತ್ರತೆಯನ್ನು ನೋಡಿದೆಯೆಂದಮೇಲೆ ಪುನಃ ಅನಂತ ವಿಚಿತ್ರ ಭವಗಳಲ್ಲಿ ಅನಂತ ವಿಚಿತ್ರತೆಯು ಕಳೆದುಹೋಗಿದೆ, ಆದರೆ ಆತ್ಮನು ಅಖಂಡ ಚಿದಾನಂದನಿದ್ದಾನೆ. ಆದರೂ ಅವನ ಶ್ರದ್ಧೆ ಮಾಡುವುದಿಲ್ಲ ಶರೀರ ಮತ್ತು ಕರ್ಮದ ವಿಕಾರದಿಂದ ರಹಿತನಾದ ಆತ್ಮನು ಶುದ್ಧ ಚಿದಾನಂದನಿದ್ದಾನೆ, ಯಾವನು ಅವನ ತೀವ್ರ ವಿರಾಧನೆ ಮಾಡುತ್ತಾನೆ ಆ ಜೀವನ ಜ್ಞಾನವು ವಿಕೃತವಾಗಿ ಹೋಗುತ್ತದೆ ಮತ್ತು ಅದರ ಫಲದಲ್ಲಿ ನಿಗೋದದಶೆಯನ್ನು ಪ್ರಾಪ್ತ ಮಾಡಿಕೊಳ್ಳುತ್ತಾನೆ. ಮತ್ತು ನಾನು ಪೂರ್ಣಜ್ಞಾನಾನಂದಮಯನಿದ್ದೇನೆಂದು ಆತ್ಮನ ಅರಿವಿನೊಡನೆ ಜ್ಞಾನಸ್ವಭಾವದ ಉಗ್ರ ಆರಾಧನೆ ಮಾಡಿದವನಿಗೆ ಜ್ಞಾನದ ವಿಕಾಸದಶೆಯಾಗಿ ಕೇವಲಜ್ಞಾನವಾಗುವುದು ನಿಶ್ಚಯದಿಂದ ಜೀವದ ಆಶುದ್ಧಭಾವವು ಅದು ಜ್ಞಾನದ ವಿರೋಧವಿದೆ ಮತ್ತು ನಿಶ್ಚಯದಿಂದ ಶುದ್ಧ ಭಾವವು ಅದು ಜ್ಞಾನದ ಆರಾಧನೆಯಿದೆ. ಉಳಿದ ಯಾವ ನಾಲ್ಕು ಗತಿಗಳಿವೆ ಅವು ಪುಣ್ಯ-ಪಾಪದ ಆರಾಧನೆಯ ಫಲವಿವೆ, ಉತ್ಕೃಷ್ಟ ಶುಭದಲ್ಲಿ ದೇವಗತಿ, ಮಧ್ಯಮಶುಭದಲ್ಲಿ ಮನುಷ್ಯಗತಿ, ಮಾಯೆಯ ಫಲದಲ್ಲಿ ತಿರ್ಯಂಚಗತಿ ಮತ್ತು ತೀವ್ರ ಅಶುಭದ ಫಲದಲ್ಲಿ ನರಕಗತಿಯು ದೊರಕುತ್ತದೆ. ನಿಶ್ಚಯಗತಿಗಳು ಎರಡಿದ್ದು ಅದರಲ್ಲಿ ಜ್ಞಾನಸ್ವಭಾವದ ಉತ್ಕೃಷ್ಟ ಆರಾಧನೆಯು ಅದು ಸಿದ್ಧಗತಿಯಿದ್ದರೆ ಜ್ಞಾನಸ್ವಭಾವದ ತೀವ್ರ ವಿರಾಧನೆಯು ಅದು ನಿಗೋದವಿದೆ.

**ಪ್ರಶ್ನೆ :-** ನಿಗೋದದಲ್ಲಿನ ದುಃಖವು ಕಂಡುಬರುವುದಿಲ್ಲವಲ್ಲವೆ ?

**ಉತ್ತರ :-** ಅಲ್ಲಿ ಅನಂತದುಃಖವಿದೆ. ಯಾವನೋ ಮನುಷ್ಯನು ಅಸಾಧ್ಯವಾಗಿ ಹೋಗಿದ್ದರೆ ಅವನನ್ನು ಎಂಥ ಕೋಲಿನಿಂದ ಹೊಡೆದರೂ ಕೂಡ ಅವನಿಗೆ ಅದರ ಎಚ್ಚರ ಬರುವುದಿಲ್ಲ . ಆದರೆ ಅವನಿಗೆ ದುಃಖವಂತೂ ಅಧಿಕವಿದೆ ಅದೇ ಪ್ರಕಾರ ನಿಗೋದದಲ್ಲಿ ಚೈತನ್ಯಸ್ವಭಾವದ ಪ್ರಜ್ಞೆಯನ್ನು ಮರೆತುಬಿಡುವುದರಿಂದ ಅಧಿಕ ಮೂಢತೆಯು ವೃದ್ಧಿಸಿ ಹೋಗುತ್ತದೆ ಮತ್ತು ರಾಗ ಹಾಗೂ ಶರೀರದ ಜತೆ ಏಕತ್ವಬುದ್ಧಿಯು ಅಧಿಕವಾಗಿ ವೃದ್ಧಿಸಿ ಹೋಗಿರುವುದರಿಂದ ಅಲ್ಲಿ ಅನಂತ ದುಃಖವಿದೆ ಚಕ್ರವರ್ತಿಯ ಸುಕೋಮಲ ಕುಮಾರನನ್ನು ಜಮಶೇಟಪುರದ ಜ್ವಲಿಸುತ್ತಿರುವ ಅಗ್ನಿಯ ಕುಂಡದಲ್ಲಿ ಎಸೆದರೆ ಎಂಥ ದುಃಖವಾಗುವುದು ಅದಕ್ಕಿಂತ ಅನಂತಗುಣಿತವಾದ ದುಃಖವು ನಿಗೋದದಲ್ಲಿನ ಜೀವಕ್ಕಿದೆ ಅದಕ್ಕೆ ಮಿಥ್ಯಾತ್ವರೂಪದ ಲೇಪವು ಬಳೆದುಕೊಂಡಿದೆ. ಯಾವ ಪ್ರಕಾರ ಓರ್ವ ಪ್ರಜ್ಞೆಯಿಲ್ಲದ ರೋಗಿಗೆ ಯಾವುದರ ಅರಿವಿರುವುದಿಲ್ಲ ಆದರೆ ದುಃಖವಂತೂ ವಿಪರೀತವಿರುತ್ತದೆ ಅದೇ ಪ್ರಕಾರ ನಿಗೋದದಲ್ಲಿನ ಜೀವಕ್ಕೆ ಅಧಿಕವಾದ ದುಃಖವಿರುತ್ತದೆ. ಜ್ಞಾನದ ಪ್ರಕಟತೆಯು ತೀರ ಕುಂದಿಹೋಗಿ ಅಕ್ಷರದ ಅನಂತದ ಒಂದು ಭಾಗದಷ್ಟು ಉಳಿದುಕೊಂಡಿದೆ. ಮಿಥ್ಯಾತ್ವದ ಸೇವನೆ ಮಾಡುವವರಿಗೆ ಇಂಥ ಭವವು ದೊರಕುತ್ತದೆ, ಅನಂತ ಬಾರಿ ಕರ್ಮ ಕಟ್ಟಿ ಶರೀರ ಲಭಿಸಿತು ಈಗ ಅವೆಲ್ಲವುಗಳ ಎಣಿಕೆ

ಮಾಡುವುದು ಸಾಧ್ಯವಿಲ್ಲ . ಅದಕ್ಕಾಗಿ ನಿಜವಾದ ತಿಳಿವಳಿಕೆ ಮಾಡಿಕೊಂಡು ತಮ್ಮ ಆತ್ಮನ ಮಹಿಮೆ ತಂದುಕೊಳ್ಳುವುದರಲ್ಲಿಯೇ ಮನುಷ್ಯ ಜನ್ಮದ ಸಾರ್ಥಕತೆಯಿದೆ.

ಈಗ ಜೀವವು ಒಂದು ಶರೀರದಿಂದ ಇನ್ನೊಂದು ಶರೀರದಲ್ಲಿ ಹೋಗುವ ಸಮಯದಲ್ಲಿ ಜೀವದ ಅಸ್ತಿತ್ವವನ್ನು ದೇಹದಿಂದ ಅದರ ಭಿನ್ನತೆಯನ್ನು ತಿಳಿಸಿ, ಇನ್ನೊಂದು ದೇಹ ಧಾರಣ ಮಾಡುವುದರ ಕಾರಣವನ್ನು ಹೇಳುತ್ತಾರೆ,-

**ಸವ್ವತ್ಥ ಅತ್ಥಿ ಜೀವೋ ಣ ಯ ಏಕ್ಕೋ ಏಕ್ಕಕಾಯ ಏಕ್ಕಟ್ಠೋ ।**
**ಅಜ್ಝವಸಾಣವಿಸಿಟ್ಠೋ ಚಿಟ್ಠದಿ ಮಲಿಣೋ ರಜಮಲೇಹಿಂ ।।೩೪।।**

**ಜೀವವೆಲ್ಲೆಡೆಯಿದ್ದು ಪ್ರಾಪ್ತಶರೀರದಲ್ಲೈಕ್ಯರೂಪವಿದ್ದರೂ ಏಕವಾಗಿಲ್ಲ ।**
**ಜೀವ ವಿವಿಧ ಅಧ್ಯವಸಾಯಯುತ ರಜಮಲಮಲಿನದಿಂ ಭ್ರಮಿಸುವುದು ।।೩೪।।**

ಆತ್ಮನು ಸಂಸಾರ ಅವಸ್ಥೆಯಲ್ಲಿ ಕ್ರಮವರ್ತಿಯಾದ ಅನೇಕ ಪರ್ಯಾಯಗಳಲ್ಲಿ ಇದ್ದಾನೆ. ಭವಗಳು ಒಂದು ಸಮಯದಲ್ಲಿ ಎರಡು ಇರುವುದಿಲ್ಲ .

ಒಂದು ಭವದ ನಂತರ ಇನ್ನೊಂದು ಭವವಾಗುತ್ತದೆ. ಮೊದಲನೆಯ ಶರೀರದ ನಂತರ ಎರಡನೆಯ ಶರೀರ ಅನಂತರ ಮೂರನೆಯ ಶರೀರ ಹೀಗೆ ಒಂದಾದ ನಂತರ ಒಂದು ಶರೀರವನ್ನು ಧಾರಣ ಮಾಡುತ್ತಾನೆ, ಆದಾಗ್ಯೂ ಅವೆಲ್ಲವುಗಳಲ್ಲಿ ಆತ್ಮನು ಒಬ್ಬನಿರುತ್ತಾನೆ. ಶರೀರವು ಬದಲಾಗಿ ಹೋದರೆ ಆತ್ಮನು ಬದಲಾಗಿ ಹೋಗುವುದಿಲ್ಲ ಯಾವ ಪ್ರಕಾರ ಒಂದು ಶರೀರದಲ್ಲಿ ಆತ್ಮನು ಪ್ರವರ್ತಿಸುತ್ತಾನೆ ಅದೇ ಪ್ರಕಾರ ಬೇರೆ ಶರೀರವನ್ನು ಧಾರಣ ಮಾಡಿದಾಗ ಬೇರೆ ಶರೀರದಲ್ಲಿ ಪ್ರವರ್ತಿಸುತ್ತಾನೆ ಎಂದರೆ ಇರುತ್ತಾನೆ. ಹೀಗೆ ಸಮಸ್ತ ಶರೀರಗಳ ಪರಂಪರೆಯಲ್ಲಿ ಅದೇ ಇದ್ದ ಜೀವನೇ ಇರುತ್ತಾನೆ, ನವೀನ ಜೀವನು ಉತ್ಪನ್ನವಾಗುವುದಿಲ್ಲ ಒಂದು ಚಿನ್ನದ ಇಟ್ಟಿಗೆಯಿದ್ದು ಅದನ್ನು ಬೇರೆ ಬೇರೆ ಬಟ್ಟೆ ಕಪ್ಪು , ಬೆಳ್ಳಗಿನ, ಹಳೆಯ, ಹೊಸದು ಮೊದಲಾದವುಗಳಲ್ಲಿ ಸುತ್ತುವುದು ಮತ್ತು ಆ ಬಟ್ಟೆಯ ಮೇಲೆ ಸ್ತ್ರೀ-ಪುರುಷ, ಹುಲ್ಲೆ ಹುಲಿಯೆಂಬ ಬೇರೆ ಬೇರೆ ಚಿತ್ರಗಳಿದ್ದರೂ ಕೂಡ ಆ ಚಿನ್ನದ ಇಟ್ಟಿಗೆಯು ಆ ಚಿತ್ರಗಳ ರೂಪ ಅಥವಾ ಆ ಬಟ್ಟೆಯ ರೂಪವಾಗುವುದಿಲ್ಲ , ಚಿನ್ನವಂತೂ ಚಿನ್ನವಿದೆ ಮತ್ತು ಬಟ್ಟೆಯಂತೂ ಅದು ಬಟ್ಟೆಯಿದೆ ಅದೇ ಪ್ರಕಾರ ಆತ್ಮನು ಜ್ಞಾನದ ಇಟ್ಟಿಗೆಯಿದ್ದಾನೆ. ಅದರ ಮೇಲೆ ಕಪ್ಪು ಶರೀರ, ಬೆಳ್ಳಗಿನ ಶರೀರ, ಜೀರ್ಣ ಶರೀರ, ತಿರ್ಯಂಚದ ಶರೀರ, ನರಕದ ಶರೀರ, ನಿಗೋದದ ಶರೀರಗಳು ಆವರಿಸಿಕೊಂಡಿವೆ, ಆದರೆ ಅವುಗಳಿಂದ ಆತ್ಮನು ಶರೀರರೂಪನಾಗಿ ಹೋಗಿಲ್ಲ . ಪ್ರತಿಯೊಂದು ಜೀವವು ತನ್ನ ಅಸಂಖ್ಯ ಪ್ರದೇಶಗಳಲ್ಲಿ ತನ್ನ ಗುಣಗಳಿಂದ ತುಂಬಿಕೊಂಡಿದೆ ಮತ್ತು ಒಂದು ಸಮಯದ ಅಪರಾಧವುಳ್ಳದ್ದಿದೆ ಸ್ತ್ರೀ, ಪುರುಷ ಮೊದಲಾದ ಆಕಾರಗಳಿಂದ ಆವರಿಸಿಕೊಂಡಿದ್ದರೂ ಕೂಡ ಆ ಚಿನ್ನದ ಇಟ್ಟಿಗೆಯಂತೆ ಆತ್ಮನು ಇವುಗಳಿಂದ ಭಿನ್ನನಿದ್ದಾನೆ. ಬೇರೆ ಬೇರೆ ಆಕಾರದ ಅನಂತ ದೇಹಗಳು ದೊರಕಿದರೂ ಕೂಡ ಆತ್ಮನು ತನ್ನ ಅಸಂಖ್ಯಪ್ರದೇಶೀ ಗುಣಗಳಿಂದ ಇದ್ದಕ್ಕಿದ್ದಂತೆ ಇದ್ದಾನೆ ಮತ್ತು ಪ್ರತಿಯೊಂದು ಶರೀರದಲ್ಲಿ ಅದೇ ರೀತಿ ಪ್ರವರ್ತಿಸುತ್ತಾನೆ, ನವೀನವಾಗಿ ಉತ್ಪನ್ನವಾಗುವುದಿಲ್ಲ ಹೀಗೆ ಈ ಭಗವಾನ ಆತ್ಮನಿದ್ದಾನೆ. ಅಜ್ಞಾನ ಭಾವದಿಂದ ಅವನಿಗೆ ಅರಿವಿಲ್ಲದಾಗಿದೆ. ಮತ್ತು ದೇವರೂಪದಿಂದ ಉತ್ಪನ್ನನಾದರೆ ನಾನು ದೇವನಾಗಿ ಹೋದೆನು, ಮನುಷ್ಯನಾದಾಗ ನಾನು ಮನುಷ್ಯನಾಗಿ ಹೋದೆನೆಂದು ಶರೀರದ ಜತೆಯಲ್ಲಿ ಏಕತ್ವಬುದ್ಧಿ ಮಾಡುವುದರಿಂದ ಹೊಸ ಹೊಸ ಶರೀರಗಳು ದೊರಕಿಕೊಳ್ಳುತ್ತಿವೆ. ಆದರೆ ಪರ್ಯಾಯಬುದ್ಧಿಯನ್ನು ಬಿಟ್ಟುಕೊಟ್ಟು ನಿಜವಾದ ಜ್ಞಾನ ಮಾಡಿಕೊಂಡು ತನ್ನೆಡೆಗೆ ನೋಡಿದರೆ ದ್ರವ್ಯಬುದ್ಧಿಯಾಗಿ ಸಂಸಾರದ ನಾಶವಾಗುವುದು.

ಈ ಪಂಚಾಸ್ತಿಕಾಯ ಶಾಸ್ತ್ರದಲ್ಲಿ ಜೀವ, ಪುದ್ಗಲ, ಧರ್ಮ, ಅಧರ್ಮ, ಆಕಾಶ ಮತ್ತು ಕಾಲವೆಂಬ ಆರು ದ್ರವ್ಯಗಳ ಸ್ವರೂಪವನ್ನು ತಿಳಿಸಿಕೊಟ್ಟಿದ್ದಾರೆ, ಆರೂ ದ್ರವ್ಯಗಳು ಸ್ವತಂತ್ರವಿವೆಯೆಂದು ಸಿದ್ಧಮಾಡಿದ್ದಾರೆ. ಅದರಲ್ಲಿ ಈ ಜೀವದ್ರವ್ಯದ ವರ್ಣನೆಯು ನಡೆಯುತ್ತಿದೆ. ಜೀವನು ತನ್ನ ಅಸ್ತಿಕಾಯದ ಕಾರಣ ಪ್ರವರ್ತಿಸುತ್ತಾನೆ, ಶರೀರದ ಕಾರಣದಿಂದ ಪವರ್ತಿಸುವುದಿಲ್ಲ. ಜೀವನು ಒಂದಾದ ನಂತರ ಒಂದು ಶರೀರವನ್ನು ಧಾರಣ ಮಾಡುತ್ತಾನೆ ಅದರಲ್ಲಿ ಅದೇ ಜೀವನಿದ್ದಾನೆ. ಅವನು ನವೀನವಾಗಿ ಉತ್ಪನ್ನವಾಗುವುದಿಲ್ಲ.

ವ್ಯವಹಾರನಯದ ಅಪೇಕ್ಷೆಯಿಂದ ಶರೀರದಲ್ಲಿ ಕ್ಷೀರ ನೀರಿನ ಹಾಗೆ ಏಕತ್ವ ಸ್ವರೂಪವನ್ನು ಧಾರಣ ಮಾಡುತ್ತಲಿದ್ದಾನೆ ಎಂದರೆ ಏಕಕ್ಷೇತ್ರದಲ್ಲಿ ಕಂಡುಬರುತ್ತಾನೆ. ಹಾಲು ನೀರಿನ ರೂಪವಾಗುವುದಿಲ್ಲ, ನೀರು ಹಾಲಿನ ರೂಪವಾಗುವುದಿಲ್ಲ, ಹಾಲು ಮತ್ತು ನೀರು ಬೇರೆ ಬೇರೆಯಿದೆ. ಅದೇ ಪ್ರಕಾರ ಶರೀರ ಮತ್ತು ಆತ್ಮನು ಏಕಕ್ಷೇತ್ರದಲ್ಲಿದ್ದರೂ ಕೂಡ ಶರೀರವು ಆತ್ಮನ ರೂಪವಾಗುವುದಿಲ್ಲ ಮತ್ತು ಆತ್ಮನು ಶರೀರದ ರೂಪವಾಗುವುದಿಲ್ಲ. ಅಥವಾ ಆತ್ಮನಿಂದ ಶರೀರವು ಪ್ರವರ್ತಿಸುವುದು ಇಲ್ಲವೆ ಶರೀರದಿಂದ ಆತ್ಮನು ಪ್ರವರ್ತಿಸುವುದು-ಹೀಗೆಂದೂ ಆಗುವುದಿಲ್ಲ, ಆದರೆ ವ್ಯವಹಾರನಯದಿಂದ ಏಕಕ್ಷೇತ್ರದಲ್ಲಿವೆಯೆಂದು ಹೇಳಲಾಗುತ್ತದೆ. ಆದಾಗ್ಯೂ ನಿಶ್ಚಯನಯದ ಅಪೇಕ್ಷೆಯಿಂದ ಆತ್ಮನು ದೇಹದೊಡನೆ ಎಂದೂ ಏಕಮೇಕನಾಗುವುದಿಲ್ಲ. ಆತ್ಮ ಮತ್ತು ಶರೀರಗಳು ತಮ್ಮ ತಮ್ಮ ಸ್ವರೂಪದಿಂದ ಭಿನ್ನವಿರುತ್ತಿವೆಯೆಂದು ಜ್ಞಾನ ಮಾಡಿಕೊಂಡರೆ ತನ್ನೆಡೆಗೆ ನೋಡುವುದಾಗುತ್ತದೆ. ವಿಕಾರೀ ಪರ್ಯಾಯಗಳು ತಮ್ಮ ತಮ್ಮ ಕಾರಣದಿಂದಿವೆ ಮತ್ತು ದ್ರವ್ಯಗುಣಗಳಂತೂ ಶುದ್ಧವಿವೆಯೆಂದು ಪರ್ಯಾಯ ಮತ್ತು ದ್ರವ್ಯದ ಜ್ಞಾನವಾದರೆ ಪ್ರಮಾಣಜ್ಞಾನವಾಗುವುದು ಮತ್ತು ಆಗ ತನ್ನ ದ್ರವ್ಯದ ಕಡೆಗೆ ತಿರುಗಿದರೆ ಸಮ್ಯಗ್ದರ್ಶನವಾಗುವುದು.

ಆತ್ಮನು ದೇಹದಿಂದ ಭಿನ್ನವಾಗಿದ್ದರೂ ಕೂಡ ಬೇರೆ ಬೇರೆ ಶರೀರಗಳಲ್ಲಿ ಹೋಗುವ ಚೇಷ್ಟೆಯನ್ನು ಏತಕ್ಕಾಗಿ ಮಾಡುತ್ತಾನೆ ? ಶರೀರದ ಜತೆಯಲ್ಲಿರುವ ಏಕತ್ವ ಬುದ್ಧಿಯೇ ಸಂಸಾರದ ಕಾರಣವಿದೆ, ಶರೀರವಿದ್ದರೆ ಧರ್ಮವಾಗುವುದು, ಈ ಶರೀರವು ಶರೀರಯುಕ್ತವಿದೆಯೆಂದು ನಾನು ಇದ್ದರೆ ಶರೀರವು ಚಲಿಸುವುದು. ಶರೀರ, ಕರ್ಮ, ಸ್ತ್ರೀ, ಕುಟುಂಬಗಳೆಲ್ಲವು ನನ್ನವುಗಳೆಂದು ಇತರ ಪುದ್ಗಲಗಳಲ್ಲಿ ಮತ್ತು ಜೀವನಲ್ಲಿ ತನ್ನತನವನ್ನು ಮನ್ನಿಸಿ ಮೋಹ-ರಾಗ-ದ್ವೇಷಗಳರೂಪದ ಪರಿಣಾಮಗಳನ್ನು ಮಾಡಿ ಜ್ಞಾನಾವರಣ ಮೊದಲಾದ ಕರ್ಮಗಳಿಂದ ಕಟ್ಟಲ್ಪಟ್ಟು ಈ ಸಂಸಾರದಲ್ಲಿ ಪರಿಭ್ರಮಿಸುತ್ತಿದ್ದಾನೆ.

**ಭಾವಾರ್ಥ :-** ಈ ಆತ್ಮನು ಶರೀರ ಮೊದಲಾದ ಪರದ್ರವ್ಯಗಳಿಂದ ಭಿನ್ನವಾಗಿದ್ದರೂ ಕೂಡ ಸಂಸಾರದ ಅವಸ್ಥೆಯಲ್ಲಿ ಅನಾದಿ-ಕರ್ಮಬಂಧನದಿಂದ ಅನೇಕ ಪ್ರಕಾರದ ವಿಭಾವಭಾವಗಳನ್ನು ಮಾಡುತ್ತಿದ್ದಾನೆ, ಸಂಸಾರದಲ್ಲಿ ಅದೇಕೆ ಸುತ್ತುತ್ತಿದ್ದಾನೆಂದರೆ ಚೈತನ್ಯ ಸ್ವಭಾವವು ಅಸಂಗವಿದೆ ಅದರ ಅಸಂಗಬುದ್ಧಿಯನ್ನು ಬಿಟ್ಟುಕೊಟ್ಟು ಜೀವವು ಪರದ ಜತೆಯಲ್ಲಿ ಸಂಗಬುದ್ಧಿ ಮಾಡುತ್ತಿದೆ ಮತ್ತು ವಿಭಾವಭಾವ ಮಾಡುತ್ತದೆ. ಪುಣ್ಯ-ಪಾಪಗಳೆರಡೂ ವಿಭಾವಭಾವಗಳಿವೆ. ಆ ವಿಭಾವಗಳಿಂದ ನವೀನ ಕರ್ಮಗಳು ಬಂಧಿಸುತ್ತವೆ, ಆ ನವೀನ ಕರ್ಮಗಳ ಉದಯದಿಂದ ಜೀವನು ಒಂದು ದೇಹದಿಂದ ಬೇರೊಂದು ದೇಹವನ್ನು ಧಾರಣ ಮಾಡುತ್ತಾನೆ. ಇದೇ ರೀತಿಯಾಗಿ ಸಂಸಾರದಲ್ಲಿ ಸುತ್ತುತ್ತಲಿದ್ದಾನೆ. ಜೀವನು ಸುತ್ತುತ್ತಿದ್ದರೆ ಅದರಲ್ಲಿ ಕರ್ಮದ ನಿಮಿತ್ತವೆಂದು ಹೇಳಲಾಗುತ್ತದೆ.

ನಾನು ನನ್ನ ವಿಭಾವಗಳಿಂದ ಸಂಸಾರದಲ್ಲಿ ಸುತ್ತುತ್ತಿದ್ದೇನೆ ಮತ್ತು ಆ ವಿಭಾವಗಳು ನನ್ನ ಜೀವಾಸ್ತಿಕಾಯದ್ದಿದ್ದು, ಆ ವಿಭಾವಗಳು ಕರ್ಮದ್ದು ಅಥವಾ ಬೇರೆ ಜೀವದ್ದಿಲ್ಲ ಅದರಂತೆ ಇನ್ನೊಂದರ ಕಾರಣದಿಂದಿಲ್ಲವೆಂದು ಮೊದಲು ಜೀವನು ನಿಶ್ಚಿತ ಮಾಡಬೇಕಾಗುವುದು. ಕರ್ಮದ ಕಾರಣದಿಂದ ವಿಕಾರಗಳಾಗುತ್ತವೆಂದು ಮನ್ನಿಸಿದರೆ ಪುದ್ಗಲಾಸ್ತಿಕಾಯದ ಕಾರಣದಿಂದ ಜೀವಾಸ್ತಿಕಾಯವನ್ನು ಮನ್ನಿಸಿತೆಂದು ಹೇಳಲಾಗುವುದು. ಇಲ್ಲಿ ಈ ಶಾಸ್ತ್ರದಲ್ಲಿ ಜೀವಾಸ್ತಿಕಾಯದ ಸ್ವರೂಪವನ್ನು ಸ್ವತಂತ್ರವೆಂದು ತಿಳಿಸಲಾಗಿದೆ. ಜೀವಾಸ್ತಿಕಾಯದ ದ್ರವ್ಯ-ಗುಣ-ಪರ್ಯಾಯಗಳು (ವಿಕಾರಿಪರ್ಯಾಯ ಅಥವಾ ಅವಿಕಾರೀ

ಪರ್ಯಾಯಗಳು) ಜೀವಾಸ್ತಿಕಾಯದ ಕಾರಣದಿಂದಿದೆ ಮತ್ತು ಪುದ್ಗಲಾಸ್ತಿಕಾಯದ ದ್ರವ್ಯ-ಗುಣ-ಪರ್ಯಾಯಗಳು ಪುದ್ಗಲಾಸ್ತಿಕಾಯದ ಕಾರಣದಿಂದಿವೆಯೆಂದು ಜೀವನು ನಿರ್ಣಯ ಮಾಡಿದರೆ ಜೀವನಿಗೆ ತನ್ನ ಅಸ್ತಿಕಾಯದ ಕಡೆಗೆ ನೋಡುವ ಪ್ರಸಂಗವು ಬರುತ್ತದೆ ಮತ್ತು ಪರದ ಕಡೆಗಿರುವ ದೃಷ್ಟಿಯು ಹೊರಟುಹೋಗುತ್ತದೆ.

ವಿಕಾರಗಳು ನನ್ನ ಪರ್ಯಾಯದಲ್ಲಿ ಆಗುತ್ತಿದ್ದು ಅವು ಒಂದು ಸಮಯ ಮಾತ್ರವೇ ಇವೆ. ದ್ರವ್ಯ ಮತ್ತು ಗುಣಗಳು ತ್ರಿಕಾಲ ಶುದ್ಧವಿವೆ, ಅವುಗಳಲ್ಲಿ ವಿಕಾರವಿಲ್ಲ. ವಿಕಾರವು ಅದು ಪರ್ಯಾಯಧರ್ಮವಿದ್ದು ಅದು ತ್ರಿಕಾಲೀ ದ್ರವ್ಯದ ಧರ್ಮವಲ್ಲವೆಂದು ತ್ರಿಕಾಲೀ ಶುದ್ಧ ಸ್ವಭಾವದ ಅಸ್ತಿಯ ಸ್ವೀಕಾರ ಮಾಡಿದರೆ-ಗುಣಗುಣಿಯ ಏಕತ್ವಬುದ್ಧಿ ಮಾಡಿದರೆ ಭೇದಜ್ಞಾನವಾಗುತ್ತದೆ. ಮತ್ತು ಕ್ರಮದಿಂದ ಸಂಸಾರದ ಅಭಾವವಾಗುತ್ತದೆ, ಭಗವಂತರಿಗೆ ಹದಿಮೂರನೆಯ ಗುಣಸ್ಥಾನದಲ್ಲಿ ವಿಭಾವಗಳಿವೆ ಅವು ಭಗವಂತನ ಜೀವಾಸ್ತಿಕಾಯದ್ದಿವೆ, ಆದರೆ ಅಘಾತಿಕರ್ಮದ ಕಾರಣದಿಂದಿಲ್ಲ. ಪುಣ್ಯ-ಪಾಪಗಳು ಅಥವಾ ವಿಭಾವಭಾವಗಳು ನಿಮಿತ್ತದಿಂದ ಅಥವಾ ಕರ್ಮದಿಂದಿಲ್ಲವೆಂದು ಮೊದಲು ನಿಮಿತ್ತದಿಂದ ಹಾಗೂ ಪರವಸ್ತುವಿನಿಂದ ಭೇದಜ್ಞಾನವಾಗುತ್ತದೆ ಮತ್ತು ವಿಕಾರವು ಒಂದು ಸಮಯದ್ದಿದೆ. ತ್ರಿಕಾಲೀ ದ್ರವ್ಯಗುಣಗಳಲ್ಲಿಲ್ಲವೆಂದು ನಿಶ್ಚಿತವಾದರೆ ಶುದ್ಧ ಜೀವನಾದ ನಾನು ವಿಕಾರದಿಂದ ಭಿನ್ನನಿದ್ದೇನೆಂದು ಭೇದಜ್ಞಾನವಾದರೆ ಸಮ್ಯಗ್ಜ್ಞಾನವಾಗಿ ವೀತರಾಗತೆಯಾಗುತ್ತದೆ.

ಅಜ್ಞಾನೀ ಜೀವನು ತಾನು ಹೆಂಡಿರು-ಮಕ್ಕಳ ಪೋಷಣೆ ಮಾಡುತ್ತೇನೆಂದು ಮನ್ನಿಸಿದ್ದಾನೆ ಆದರೆ ಅದು ಮೂರ್ಖತೆಯಿದೆ. ಹೆಂಡಿರು-ಮಕ್ಕಳು ಜೀವಾಸ್ತಿಕಾಯವಿದ್ದು ಅವರು ತಮ್ಮ ಕಾರಣದಿಂದ ಬದುಕುತ್ತಾರೆ, ಅವರಿಗೆ ಆಧಾರವು ಅವರ ಜೀವಗಳಿವೆ. ಒಂದು ಜೀವಾಸ್ತಿಕಾಯದ ಕಾರಣದಿಂದ ಇನ್ನೊಂದು ಜೀವಾಸ್ತಿಕಾಯವು ಬದುಕುತ್ತದೆಂದು ಮನ್ನಿಸುವವನು ಭಿನ್ನದ್ರವ್ಯವನ್ನು ಒಂದೆಂದು ಮನ್ನಿಸಿದ್ದಾನೆ. ಅದೇ ಪ್ರಕಾರ ಅಜ್ಞಾನೀ ಜೀವನು ಶರೀರವನ್ನು ನಾನು ಪೋಷಿಸುತ್ತೇನೆ, ಈ ಕೋಲನ್ನು ನಾನು ಅಲ್ಲಾಡಿಸುತ್ತೇನೆಂದು ಮನ್ನಿಸಿದ್ದಾನೆ. ಶರೀರವು ಪುದ್ಗಲ ಅಸ್ತಿಕಾಯವಿದ್ದು ಅದು ಅದರ ದ್ರವ್ಯ-ಗುಣ-ಪರ್ಯಾಯದಿಂದ ಬದುಕಿರುತ್ತದೆ, ಈ ಕೋಲಿನ ಪರಮಾಣುಗಳು ತನ್ನ ದ್ರವ್ಯ-ಗುಣ-ಪರ್ಯಾಯಗಳಿಂದ ಸ್ಥಿರವಾಗಿದ್ದರೂ ಕೂಡ ಪುದ್ಗಲಾಸ್ತಿಕಾಯವು ಜೀವಾಸ್ತಿಕಾಯದ ಕಾರಣದಿಂದ ಬದುಕುತ್ತಿದೆ ಅಥವಾ ಅದಲು-ಬದಲಾಗುತ್ತಿದೆಯೆಂದು ಮನ್ನಸುವುದು ಅದು ಮೂರ್ಖತನವಿದೆ. ನಿಗೋದದ ಜೀವವು ಸಂಸಾರದಲ್ಲಿ ಸಿಕ್ಕಿಕೊಂಡಿರುವುದು ಅದು ತನ್ನ ಕಾರಣದಿಂದ ಸಿಕ್ಕಿಕೊಂಡಿದೆ ಕರ್ಮದ ಕಾರಣದಿಂದ ಸಿಕ್ಕಿಕೊಂಡಿಲ್ಲ. ಕರ್ಮಪುದ್ಗಲಗಳು ತಮ್ಮ ಕಾರಣದಿಂದ ಏಕತ್ರವಾಗುತ್ತವೆ, ಅವು ಜೀವದ ಕಾರಣದಿಂದ ಏಕತ್ರವಾಗುವುದಿಲ್ಲ. ಜೀವವು ತನ್ನ ಅಸಂಖ್ಯ ಪ್ರದೇಶಗಳಲ್ಲಿ ತನ್ನ ವೀರ್ಯದ ಸ್ಫುರಣ ಮಾಡುತ್ತದೆ ಆದರೆ ಆ ವೀರ್ಯದಿಂದ ಅದು ಪರವಸ್ತುವನ್ನು ಸ್ವೀಕರಿಸುತ್ತದೆ ಅಥವಾ ತ್ಯಜಿಸುತ್ತದೆಂಬ ಮನ್ನಣೆಯು ಅಜ್ಞಾನವಿದೆ.

ಇಲ್ಲಿ ಪಂಚಾಸ್ತಿಕಾಯ ಸಿದ್ಧ ಮಾಡುವುದಿದೆ, ಈ ಕೋಲು ಅಥವಾ ಲಡ್ಡು ಅವು ಅನಂತ ಪರಮಾಣುಗಳ ಆ ಸಮಯದ ಅಸ್ತಿಕಾಯವಿದೆ. ಆ ಅಸ್ತಿಕಾಯವನ್ನು ಜೀವದ ಕಾರಣದಿಂದ ಮನ್ನಿಸುವುದು ಅದು ಮೂಢತೆಯಿದೆ. ಜೀವದ ಅಸಂಖ್ಯ ಪ್ರದೇಶಗಳು, ಅವನ ಭಾವಗಳು ಮತ್ತು ಅವನ ಸಮಯ ಸಮಯದ ಪರಿಣಮನವೆಂದು ಜೀವದ ದ್ರವ್ಯ-ಕ್ಷೇತ್ರ-ಕಾಲ-ಭಾವಗಳು ಜೀವಾಸ್ತಿಕಾಯದ ಕಾರಣದಿಂದಿವೆ, ಅದರಂತೆ ಪರಮಾಣವು ಒಂದಿರಲಿ ಅಥವಾ ಸ್ಕಂಧರೂಪವಾಗಲಿ ಆ ದ್ರವ್ಯ, ಅದರ ಕ್ಷೇತ್ರ, ಅದರ ಸ್ಪರ್ಶಾದಿಗುಣಗಳು ಮತ್ತು ಅದರ ಸಮಯ ಸಮಯದ ಅವಸ್ಥೆಯೆಂದು ಪುದ್ಗಲದ ನಾಲ್ಕೂದಶೆಗಳು ಪುದ್ಗಲಾಸ್ತಿಕಾಯದ ಕಾರಣದಿಂದಿದೆ.

ಒಂದು ಮನೆ ಕಟ್ಟಿಸಿದರೆ ಅದರಲ್ಲಿ ಅದೆಷ್ಟೋ ಪರಮಾಣುಗಳು ಏಕತ್ರವಾಗುತ್ತವೆ. ಅವು ತಮ್ಮ ಅಸ್ತಿಕಾಯದ ಧರ್ಮದ ಕಾರಣದಿಂದ ಬರುತ್ತವೆ ಮತ್ತು ಹೋಗುತ್ತವೆ, ಯಾರ ಕಾರಣದಿಂದ ಏಕತ್ರವಾಗುವುದಿಲ್ಲ. ಜೀವದ ಕಾರಣದಿಂದ ಶರೀರವು ಚಲಿಸುತ್ತದೆಂದು ಮನ್ನಿಸಹೋದರೆ ಶರೀರದ ಪರ್ಯಾಯ ಧರ್ಮವು ಹಾರಿ ಹೋಗುವುದು. ಪಾರ್ಶ್ವವಾಯುವಿನ

ಸಮಯದಲ್ಲಿ ನಡೆಯುವ ಇಚ್ಛೆಯಿದ್ದರೆ ಕೂಡ ಶರೀರವು ಚಲಿಸುವುದಿಲ್ಲ. ಆ ರೂಪವಾಗಿ ಅದರ ಆ ಸಮಯದ ಪರಿಣಮನವಿದೆ. ಒಂದು ಸಮಯ ಕೂಡ ಜೀವದ ಕಾರಣದಿಂದ ಚಲಿಸುವುದಿಲ್ಲವೆಂದು ನಿಶ್ಚಯ ಮಾಡಿದರೆ ತ್ರಿಕಾಲದಲ್ಲಿ ಅದಿಲ್ಲದೆ ನಡೆಯುತ್ತಿದೆಯೆಂದು ನಿಶ್ಚಿತವಾಗುವುದು, ಜೀವದ ವಿಕಲ್ಪದ ಕಾರಣದಿಂದಾಗಿ ಪುದ್ಗಲಾಸ್ತಿಕಾಯಗಳು ಏಕತ್ರವಾಗುತ್ತವೇನು ? ಮೇಲೆ ಕೆಳಗೆ ಆಗುತ್ತವೆಯೇನು ? ಇಲ್ಲ. ಆಗುವುದಿಲ್ಲವೆಂದು ನಿಶ್ಚಯ ಮಾಡಿದರೆ ಜೀವನಿಗೆ ಪರದೆದುರು ನೋಡುವುದು ಉಳಿಯುವುದಿಲ್ಲ, ಆದರೆ ತನ್ನೆದುರು ನೋಡುವುದು ಉಳಿಯುವುದು, ತಾನು ಜ್ಞಾನ ಮಾಡಲಿ ಅಥವಾ ಇಚ್ಛೆಮಾಡಲಿ ಅವನು ತನ್ನಲ್ಲಿ ಮಾಡುತ್ತಾನೆ. ಇಚ್ಛೆಯು ಒಂದು ಸಮಯದ್ದಿದ್ದು ಜ್ಞಾನಸ್ವಭಾವವು ತ್ರಿಕಾಲವಿದೆ ಮತ್ತು ತ್ರಿಕಾಲದಲ್ಲಿ ಇಚ್ಛೆಯಿಲ್ಲವೆಂದು ಒಂದು ಸಮಯದ ಪರ್ಯಾಯದ ಜ್ಞಾನ ಮತ್ತು ತ್ರಿಕಾಲದ ಜ್ಞಾನ ಮಾಡಿದರೆ ಪರದಿಂದ ಭೇದಜ್ಞಾನನಾಗುವುದು, ವಿಕಾರದಿಂದ ಬೇರೆಯಾಗುವುದು, ತ್ರಿಕಾಲೀ ದ್ರವ್ಯದಲ್ಲಿ ಸ್ಥಿರಗೊಳ್ಳುವುದು ಅದು ಧರ್ಮವಿದೆ.

ಪ್ರತಿಯೊಬ್ಬ ಆತ್ಮನು ತನ್ನ ದ್ರವ್ಯ-ಗುಣ-ಪರ್ಯಾಯದಲ್ಲಿ ಪರಿಣಮಿಸುತ್ತಲಿದ್ದಾನೆ, ಆದಾಗ್ಯೂ ಈ ಮಾತನ್ನು ಅಜ್ಞಾನಿಯು ತಿಳಿಯುವುದಿಲ್ಲ. ಮತ್ತು ತಾನು ರಾಗ ಮಾಡದಿದ್ದರೆ ಆ ವಸ್ತುಗಳಾಗುವುದಿಲ್ಲವೆಂದು ಕೂಡ ಕೆಲವರು ಹೇಳುತ್ತಾರೆ. ಅದು ಕೂಡ ಮೂಢತೆಯಿದೆ. ಪರದ ಕಾರ್ಯವನ್ನು ನೀನು ತಡೆಯುವ ಸಾಧ್ಯತೆಯಿದೆಯೇನು ? ಮಂದಿರದ ಹಾಗೂ ಬೇರೆ ಅದೆಷ್ಟೋ ಪ್ರವೃತ್ತಿಗಳಾಗುತ್ತವೆ ಮತ್ತು ಅವುಗಳಿಂದ ಹಿಂಸೆಯಾಗುತ್ತದೆ. ಅದಕ್ಕಾಗಿ ತಾವು ಆ ಪ್ರಕಾರದ ಶುಭಭಾವಗಳನ್ನು ಮಾಡದಿರುವುದು ಮತ್ತು ಬೇರೆ ರಾಗಮಾಡುವ ಪ್ರವೃತ್ತಿಯಿಂದ ತಪ್ಪಿಸಬೇಕೆಂದು ಮನ್ನಿಸುವವನು ಮೂಢನಿದ್ದಾನೆ. ರಾಗ ಮಾಡುವುದರಿಂದ ಪರವಸ್ತುವಿನ ಪರ್ಯಾಯ ಮಾಡುವ ಸಾಧ್ಯತೆಯಿದೆಯೇನು ಮತ್ತು ಇಂಥ ರಾಗ ಮಾಡುವುದರಿಂದ ಪರವಸ್ತುವಿನ ಪರ್ಯಾಯವನ್ನು ತಡೆಯುವ ಸಾಧ್ಯತೆಯಿದೆಯೇನು ? ಜಗತ್ತಿನ ಪರಮಾಣುಗಳು ಅಸ್ತಿರೂಪದಿಂದ ಆಗುತ್ತಲಿವೆ ಅವುಗಳ ಕಾರ್ಯರೂಪವಾಗುವುದು ಅಥವಾ ಆಗದಿರುವುದೇನು ಆತ್ಮನ ಅಸ್ತಿಕಾಯದ ಅಧಿಕಾರದ ಮಾತಲ್ಲ ಅದಕ್ಕಾಗಿ ಧೈರ್ಯತಾಳು ! ಪ್ರವೃತ್ತಿ ಅಥವಾ ನಿವೃತ್ತಿಯು ಬಾಹ್ಯದ ಜಡದ ಕ್ರಿಯೆಯ ಅಧೀನವಿಲ್ಲ. ನೀನು ನಿನ್ನಲ್ಲಿ ಗೊಂದಲ ಮತ್ತು ಅಜ್ಞಾನದ ಪ್ರವೃತ್ತಿಮಾಡುತ್ತಿರುವೆ, ಅದಕ್ಕಾಗಿ ಪರದ ಅಭಿಮಾನವನ್ನು ಬಿಟ್ಟುಕೊಡು. ನೀನು ನಿನ್ನಿಂದ ಇರುವೆ ಪರವು ಪರದಿಂದ ಇದೆ. ನಿನ್ನ ಕಾರಣ ಪರವಿಲ್ಲ ಮತ್ತು ಪರದ ಕಾರಣ ನೀನಿಲ್ಲ. ಹೀಗೆ ಪರದ ಜತೆಯಿರುವ ಏಕತ್ವ ಬುದ್ಧಿಯನ್ನು ಕಡಿದುಹಾಕಿದರೆ ಸಂಸಾರವು ಬಿಡುವುದು ಮತ್ತು ಪರದ ಜತೆ ಏಕತ್ವಬುದ್ಧಿ ಮಾಡಿದರೆ ಸಂಸಾರವು ಅಖಂಡ ಉಳಿಯುವುದು.

ಈಗ ಸಿದ್ಧಜೀವರುಗಳ ಸ್ವಭಾವ ತಿಳಿಸುತ್ತಾರೆ ಮತ್ತು ಸಿದ್ಧರು ಅಂತಿಮದೇಹದಿಂದ ಕಿಂಚಿತ್ ನ್ಯೂನ ಶುದ್ಧ ಪ್ರದೇಶಸ್ವರೂಪಿದೇಹವುಳ್ಳವರೆಂದು ಹೇಳುತ್ತಾರೆ,-

**ಜೇಸಿಂ ಜೀವಸಹಾವೋ ಣತ್ಥಿ ಅಭಾವೋ ಯ ಸವ್ವಹಾ ತಸ್ಸ ।**
**ತೇ ಹೋಂತಿ ಭಿಣ್ಣದೇಹಾ ಸಿದ್ಧಾ ವಚಿಗೋಯರಮದೀದಾ ॥೩೫॥**

**ಯಾರಿಗೆ ಜೀವತ್ವವಿಲ್ಲ ಮೇಣ್ಸರ್ವಥಾ ಅದರ ಅಭಾವ ಕೂಡ ತಾನಿಲ್ಲ ।**
**ಅವರು ದೇಹರಹಿತ ವಚನಗೋಚರಾತೀತ ಸಿದ್ಧರಾಗಿರುವರು ॥೩೫॥**

ಸಿದ್ಧಭಗವಂತರಿಗೆ ಪರಮಾನಂದದಶೆಯ ಅನುಭವವಿದೆ. ಅವರಿಗೆ ಐದು ಇಂದ್ರಿಯ, ಮನ, ವಚನ, ಕಾಯ, ಶ್ವಾಸ ಮತ್ತು ಆಯುವೆಂಬ ಹತ್ತು ಪ್ರಾಣಗಳಿರುವುದಿಲ್ಲ. ಸಂಸಾರದಶೆಯಲ್ಲಿ ಜೀವಿಸಲು ಕಾರಣರೂಪವಾದ ಪ್ರಾಣಗಳು ಸಿದ್ಧರಿಗೆ ಇರುವುದಿಲ್ಲ. ಮತ್ತು ಎಲ್ಲ ಪ್ರಕಾರದಿಂದ ಪ್ರಾಣಗಳ ಅಭಾವವಿರುತ್ತದೆಂದು ಕೂಡ ಇಲ್ಲ. ಸತ್ತಾ, ಸುಖ, ಚೈತನ್ಯ

ಮತ್ತು ಜ್ಞಾನರೂಪದ ಪ್ರಾಣಗಳು ಅವರಿಗಿರುತ್ತವೆ. ಅವುಗಳ ಕಾರಣದಿಂದ ಅವರು ಯಾವಾಗಲೂ ಜೀವಿಸುತ್ತಿದ್ದಾರೆ. ಆ ಸಿದ್ಧ ಭಗವಂತರು ಶರೀರವಿಲ್ಲದೆ ಅಮೂರ್ತಿಕರಿದ್ದಾರೆ. ವಚನಾತೀತರಿದ್ದಾರೆ. ವಚನದಿಂದ ಅವರ ಮಹಿಮೆ ಆಗುವ ಸಾಧ್ಯತೆಯಿದೆ ಎನ್ನುವಂತಿಲ್ಲ, ಹೇಗೆ ನಿಗೋದದ ಜೀವಗಳ ಜೀವಾಸ್ತಿಕಾಯವಿವೆ ಹಾಗೆ ಸಿದ್ಧರು ಕೂಡ ಜೀವಾಸ್ತಿಕಾಯರಿದ್ದಾರೆ. ಪರ್ಯಾಯದಲ್ಲಿ ಅಂತರವಿದೆ, ಆದರೆ ಪರ್ಯಾಯದಲ್ಲಿ ಅಂತರವಾಗುವುದರಿಂದ ಬೇರೆ ಪ್ರಕಾರದ ಜೀವಾಸ್ತಿಕಾಯರಾಗುತ್ತಾರೆನ್ನುವಂತಿಲ್ಲ.

**ಭಾವಾರ್ಥ :-** ಸಿದ್ಧಾಂತದಲ್ಲಿ ಒಂದು ನಿಶ್ಚಯ ಇನ್ನೊಂದು ವ್ಯವಹಾರವೆಂದು ಎರಡು ಪ್ರಕಾರದ ಪ್ರಾಣ ಹೇಳಿದ್ದಾರೆ. ಅವುಗಳಲ್ಲಿ ಶುದ್ಧಸತ್ತಾ, ಶುದ್ಧಸುಖ, ಚೈತನ್ಯ ಮತ್ತು ಜ್ಞಾನವೆಂದು ನಾಲ್ಕು ನಿಶ್ಚಯ ಪ್ರಾಣ ಹೇಳಿದ್ದಾರೆ. ಮತ್ತು ಅಶುದ್ಧ ಇಂದ್ರಿಯಾದಿ, ಬಲ ಮೊದಲಾದ ಆರು ಪ್ರಾಣಗಳು ವ್ಯವಹಾರ ಪ್ರಾಣಗಳಿವೆ. ಯಾವುದರಿಂದ ಜೀವದ ಅಸ್ತಿತ್ವವು ಸ್ಥಿರವಿರುತ್ತದೆ ಅದನ್ನು ಪ್ರಾಣವೆಂದು ಹೇಳಿದೆ. ಜೀವರುಗಳಲ್ಲಿ ಸಂಸಾರೀ ಮತ್ತು ಸಿದ್ಧವೆಂದು ಎರಡು ಭೇದವಿದೆ. ಯಾರು ಐದು ಇಂದ್ರಿಯಗಳು, ಮೂರು ಬಲ, ಶ್ವಾಸೋಚ್ಛ್ವಾಸ ಮತ್ತು ಆಯುವಿನ ಯೋಗ್ಯತೆಯಿಂದ ಜೀವಿಸುತ್ತಾರೆ ಅವರು ಸಂಸಾರೀ ಜೀವರುಗಳಿದ್ದಾರೆ ಮತ್ತು ಸತ್ತಾ, ಸುಖ, ಚೈತನ್ಯ ಮತ್ತು ಜ್ಞಾನಾದಿ ಶುದ್ಧ ಪ್ರಾಣಗಳಿಂದ ಜೀವಿಸುತ್ತಾರೆ ಅವರು ಸಿದ್ಧರಿದ್ದಾರೆ. ಆ ಕಾರಣದಿಂದ ಸಿದ್ಧರಿಗೆ ಕಥಂಚಿತ್ ಪ್ರಕಾರದಿಂದ ಪ್ರಾಣಗಳಿವೆ ಮತ್ತು ಕಥಂಚಿತ್ ಇಲ್ಲ. ಅವರಲ್ಲಿ ನಿಶ್ಚಯ ಪ್ರಾಣವಿದೆ ಮತ್ತು ಅವರಲ್ಲಿ ವ್ಯವಹಾರ ಪ್ರಾಣವಿಲ್ಲ. ಅವರಲ್ಲಿ ಸ್ವಲ್ಪ ಕೂಡ ಅಶುದ್ಧತೆಯಿಲ್ಲ. ಸಿದ್ಧರಿಗೆ ಕ್ಷೀರ ನೀರ ಸಮಾನವಾದ ದೇಹದ ಸಂಬಂಧವಿಲ್ಲ. ಅವರಿಗೆ ಪ್ರದೇಶಗಳ ಅವಗಾಹನವು ಅಂತಿಮ ದೇಹದಿಂದ ಸ್ವಲ್ಪ ಕಡಿಮೆಯಿರುತ್ತದೆ. ಜ್ಞಾನ-ದರ್ಶನ-ಚಾರಿತ್ರ, ಅಸ್ತಿತ್ವ, ಮೊದಲಾದ ಅನಂತಗುಣಗಳಿಂದ ಅವರು ವಿರಾಜಮಾನರಿದ್ದಾರೆ ಮತ್ತು ಅವರದು ಅಪಾರ ಮಹಿಮೆಯಿದೆ, ಅವರು ಆತ್ಮನ ಅವಿನಾಶೀ ಪದದಲ್ಲಿ ಅನಂತಕಾಲದವರೆಗೆ ಇರುತ್ತಾರೆ. ಸಂಸಾರಿಗಳಿಗಿಂತ ಸಿದ್ಧರ ಕಾಲವು ಅನಂತ ಅನಂತಗುಣಿತವಿದೆ, ಅವರ ಆನಂದ ಹಾಗೂ ಪರಿಪೂರ್ಣತೆಯ ಮಾತನ್ನೇನು ಹೇಳುವುದು ? ತಮ್ಮ ಸ್ವರೂಪದ ಅಸಂಖ್ಯ ಪ್ರದೇಶಗಳ ಅರಳಿದ ಪ್ರವಾಹದಲ್ಲಿ ಅವರು ಈಜುತ್ತಲಿದ್ದಾರೆ. ಇದು ಜೀವಾಸ್ತಿಕಾಯದ ಸ್ವರೂಪ ಹೇಳಲಾಯಿತು.

ಮುಂದೆ ಧರ್ಮಾಸ್ತಿಕಾಯದ ಅಭಾವವಿದೆ, ಅದಕ್ಕಾಗಿ ಸಿದ್ಧರು ಲೋಕಾಗ್ರದಲ್ಲಿ ವಿರಾಜಿಸುತ್ತಾರೆಂದು ಇಲ್ಲಿ ಹೇಳಿಲ್ಲ, ಆ ಪದಾರ್ಥಗಳು ನಿಮಿತ್ತವಿವೆ, ಆದರೆ ನಿಮಿತ್ತ ಕಾರಣದಿಂದ ಉಪಾದನವಿಲ್ಲ. ಈ ಜಗತ್ತಿನಲ್ಲಿ ಅದೆಷ್ಟೋ ಜೀವರುಗಳು ಕೇವಲ ಜೀವವನ್ನು ಮನ್ನಿಸುತ್ತಾರೆ ಮತ್ತು ಉಳಿದ ಐದು ದ್ರವ್ಯಗಳನ್ನು ಮನ್ನಿಸುವುದಿಲ್ಲ, ಕೆಲವರು ಕಾಲವನ್ನು ಮನ್ನಿಸುವುದಿಲ್ಲ, ಕೆಲವರು ಆರು ದ್ರವ್ಯಗಳನ್ನು ಮನ್ನಿಸುತ್ತಾರೆ ಆದರೆ ಒಂದು ಇನ್ನೊಂದರ ಪರಾಧೀನವೆಂದು ಮನ್ನಿಸುವುದು ಭ್ರಾಂತಿಯಿದೆ. ಬೇರೆ ದ್ರವ್ಯದಿಂದ ಕಾರ್ಯ ಮನ್ನಿಸಿದರೆ ಎಲ್ಲವೂ ಒಂದಾಗಿ ಹೋಗುತ್ತವೆ ಮತ್ತು ಬೇರೆ ದ್ರವ್ಯಗಳನ್ನು ಮನ್ನಿಸದಿದ್ದರೆ ಎಲ್ಲವೂ ಒಂದಾಗಿ ಹೋಗುತ್ತವೆ. ಅದಕ್ಕಾಗಿ ಆರು ದ್ರವ್ಯಗಳು ಹೇಗಿವೆ ಹಾಗೆ ಸ್ವತಂತ್ರವಾಗಿ ಮನ್ನಿಸಬೇಕಾಗುವುದು.

ಸ್ವತಂತ್ರತೆಯ ಜ್ಞಾನಮಾಡಿಸಿ ಬೇರೆ ವಸ್ತುವಿನ ಜ್ಞಾನ ಮಾಡಿಸಲಾಗಿದೆ. ಜೀವನು ವಿಕಾರ ಮಾಡುವಲ್ಲಿ ಅಥವಾ ಅವಿಕಾರಿಯಾದ ಸಿದ್ಧನಾಗುವಲ್ಲಿ ಸ್ವತಂತ್ರನಿದ್ದಾನೆಂದು ಸಿದ್ಧಮಾಡಿದೆ.

ಈಗ ಕಾರಣಕಾರ್ಯಗಳು ಸಂಸಾರೀ ಜೀವನಿಗಿದ್ದು ಅಂಥ ಕಾರ್ಯಕಾರಣ ಭಾವಗಳು ಸಿದ್ಧರಿಗಿಲ್ಲವೆಂದು ತಿಳಿಸುತ್ತಾರೆ,-

**ಣ ಕುದೋಚಿ ವಿ ಉಪ್ಪಣ್ಣೋ ಜಮ್ಹಾ ಕಜ್ಜಂ ಣ ತೇಣ ಸೋ ಸಿದ್ಧೋ ।**
**ಉಪ್ಪಾದೇದಿ ಣ ಕಿಂಚಿ ವಿ ಕಾರಣಮವಿ ತೇಣ ಣ ಸ ಹೋದಿ ॥೩೬॥**

**ಯಾವ ಕಾರಣದಿಂದ ಉತ್ಪನ್ನರಾಗದುದರಿಂದಾ ಸಿದ್ಧರು ಕಾರ್ಯವಾಗಿಲ್ಲ।**
**ಯಾವುದನ್ನುತ್ಪನ್ನ ಮಾಡದುದರಿಂದವರು ಕಾರಣರು ಕೂಡ ತಾವಿಲ್ಲ ॥೩೬॥**

ಯಾವುದೇ ಒಂದು ಪರವಸ್ತುವಿನಿಂದ ಸಿದ್ಧ ಜೀವರು ಉತ್ಪನ್ನವಾಗುವುದಿಲ್ಲ , ಕರ್ಮವನ್ನು ಜಾರಿಸುವುದರಿಂದ ಸಿದ್ಧದಶೆಯಾಗುವುದಿಲ್ಲ . ಆದರೆ ತಮ್ಮ ಪುರುಷಾರ್ಥದಿಂದ ಸಿದ್ಧದಶೆಯಾಗುತ್ತದೆ. ಕರ್ಮದ ಅಥವಾ ನೋಕರ್ಮದ ಕಾರ್ಯವು ಸಿದ್ಧದಶೆಯಿಲ್ಲ ಅದರಂತೆ ಸಿದ್ಧರಿಗೆ ಕರ್ಮ ಅಥವಾ ನೋಕರ್ಮಗಳು ನಿಮಿತ್ತರೂಪದಿಂದ ಕೂಡ ಇಲ್ಲ . ಕರ್ಮದ ಅಭಾವದ ಕಾರಣದಿಂದ ಸಿದ್ಧರಾದರೆಂದು ಮನ್ನಿಸಹೋದರೆ ಸಿದ್ಧರು ಸಾದಿ ಅನಂತಕಾಲದವರೆಗೆ ಸ್ಥಿರವಿರುತ್ತಾರೆ; ಅಲ್ಲಿ ಅನಂತ ಕಾಲದವರೆಗೆ ಅದರ ಕಾರಣವು ಯಾರು ? ಈ ಕೋಲು ಬಿದಿರಿನಿಂದ ಆಗಿದೆಯೆಂದು ಮನ್ನಿಸಹೋದರೆ ಈ ಕೋಲು ಹತ್ತು ವರುಷದವರೆಗೆ ಉಳಿಯುವುದು ಅದರ ಕಾರಣ ಯಾರು ? ವರ್ತಮಾನದಲ್ಲಿ ಕೂಡ ಅದಕ್ಕೆ ಬಿದಿರಿನ ನಿಮಿತ್ತವಿಲ್ಲ . ಕೋಲಿಗೆ ಪರ್ವತದ ನಿಮಿತ್ತವಂತೂ ಒಂದು ಸಮಯದ್ದಿತ್ತು . ಐದು, ಹತ್ತು ವರ್ಷದವರೆಗೆ ಪರ್ವತವಿಲ್ಲದೆ ಅದು ಬದುಕಿರುತ್ತದೆಂದು ಪ್ರತ್ಯಕ್ಷ ಕಾಣುತ್ತೇವೆ. ಎಂದಮೇಲೆ ಮೊದಲಿನ ಸಮಯದಲ್ಲಿ ಕೂಡ ಕೋಲು ಪರ್ವತವಿಲ್ಲದೆ ಆಗಿದೆ ಅದೇ ಪ್ರಕಾರ ಸಿದ್ಧದಶೆಯು ಸಾದಿ ಅನಂತ ಕಾಲದವರೆಗೆ ತನ್ನ ಕಾರಣದಿಂದ ಕರ್ಮದ ಅಭಾವರೂಪ ಕಾರಣವಿಲ್ಲದೆ ಬದುಕಿದೆಯೆಂದಮೇಲೆ ಮೊದಲಿನ ಸಮಯದಲ್ಲಿ ಕೂಡ ಸಿದ್ಧದಶೆಯು ಕರ್ಮದ ಅಭಾವರೂಪಕಾರಣವಿಲ್ಲದೆ ಆಗಿದೆ. ಅದಕ್ಕಾಗಿ ಸಿದ್ಧರಿಗೆ ಯಾವ ಕಾರಣವಿಲ್ಲವೆಂಬುದು ಸಿದ್ಧವಾಗುತ್ತದೆ.

ನೋಡಿರಿ, ಇಲ್ಲಿ ಸಿದ್ಧದಶೆಯ ವರ್ಣನೆ ನಡೆಯುತ್ತಿದೆ. ಸಂಸಾರಭಾವ ಕೂಡ ತನ್ನಿಂದ ಉತ್ಪನ್ನವಾಗುತ್ತದೆ ಮತ್ತು ಸಿದ್ಧದಶೆ ಕೂಡ ತನ್ನಿಂದ ಉತ್ಪನ್ನವಾಗುತ್ತದೆ. ಯಾವುದೇ ಶರೀರ, ಕರ್ಮ, ಕ್ಷೇತ್ರ ಮತ್ತು ಕಾಲದ ಅಪೇಕ್ಷೆಯಿಂದ ಸಿದ್ಧದಶೆಯು ಉತ್ಪನ್ನವಾಗುತ್ತದೆಯೆನ್ನುವಂತಿಲ್ಲ . ಅದೆಲ್ಲವು ಬಾಹ್ಯ ಕಾರಣದ ಕಾರ್ಯವಲ್ಲ , ಆದರೆ ದ್ರವ್ಯಸ್ವಭಾವವು ತ್ರಿಕಾಲ ಚಿದಾನಂದ ಕಾರಣ ಪರಮಾತ್ಮವಿದ್ದು ಅದರ ಕಾರ್ಯವು ಸಿದ್ಧಪದವಿದೆ.

ಸಂಸಾರೀ ಜೀವನು ತನ್ನ ಅಪರಾಧದಿಂದ ಅಜ್ಞಾನ, ರಾಗ,ದ್ವೇಷಗಳನ್ನು ಮಾಡುತ್ತಾನೆ ಮತ್ತು ಅದರ ಕಾರ್ಯವು ಚತುರ್ಗತಿಗಳಿವೆ, ಆದರೆ ಸಿದ್ಧ ಭಗವಂತರಿಗೆ ಯಾವುದೇ ಪ್ರಕಾರದ ಸಂಸಾರ ಸಂಬಂಧದ ಕಾರಣ-ಕಾರ್ಯಗಳು ಸಂಭವಿಸುವ ಸಾಧ್ಯತೆಯಿಲ್ಲ . ಸಿದ್ಧಭಗವಂತರು ಮಹಾನರಾದರು ಆದರೆ ಅವರು ಜಗತ್ತಿನ ಯಾವುದೇ ಕಾರ್ಯದ ಕಾರಣರಾಗದಿದ್ದರೆ ಅವರು ಯಾವ ಕೆಲಸಕ್ಕೆ ಬರುತ್ತಾರೆಂದು ಕೆಲವರು ಕೇಳುತ್ತಾರೆ, ಆದರೆ ಹಾಗೆನ್ನುವವರು ಸಿದ್ಧದಶೆಯನ್ನು ತಿಳಿಯುವುದಿಲ್ಲ ಅವರು ರಾಗಾದಿಗಳನ್ನು ಕರ್ಮ ಹಾಗೂ ಶರೀರವನ್ನು ಯಾವ ಕಾಲದಲ್ಲಿ ಕೂಡ ಉತ್ಪನ್ನಮಾಡುವುದಿಲ್ಲ.

ಸಂಸಾರೀ ಜೀವನು ರಾಗ-ದ್ವೇಷ, ಪುಣ್ಯ-ಪಾಪಗಳನ್ನು ಮಾಡಿ ಚತುರ್ಗತಿಗಳಲ್ಲಿ ಪರಿಭ್ರಮಣ ಮಾಡುತ್ತಾನೆ ನವೀನ ಕರ್ಮದ ಕಾರಣನು ಕೂಡ ಆಗುತ್ತಾನೆ ಮತ್ತು ಅದರ ಕಾರ್ಯವು ಸಂಸಾರ ಪರಿಭ್ರಮಣವಿದೆ. ಆ ಯೋಗ್ಯತೆಯ ರೂಪವಾಗಿ ಆಯಾ ಜೀವರುಗಳದ್ದು ತಮ್ಮ ಸ್ವಭಾವವಿದೆ. ಸಿದ್ಧರಿಗೆ ಇಂಥ ಸ್ವಭಾವವಿಲ್ಲ.

ಸಂಸಾರೀ ಜೀವನು ಅನಾದಿ ಕಾಲದಿಂದ ಪುದ್ಗಲ ಕರ್ಮದ ಸಂಯೋಗರೂಪವಾದ ಕಾರಣಗಳನ್ನು ಪಡೆದು ಮಿಥ್ಯಾತ್ವ ರಾಗಾದಿರೂಪದಿಂದ ಪರಿಣಮಿಸುತ್ತಾನೆ. ಅದು ತನ್ನ ಪುರುಷಾರ್ಥದಿಂದಿದೆ. ಕರ್ಮವಂತೂ ಅದರಲ್ಲಿ ನಿಮಿತ್ತಮಾತ್ರವಿದೆ. ಇಂಥ ನಿಮಿತ್ತ ನೈಮಿತ್ತಿಕ ಸಂಬಂಧವು ಸಂಸಾರದಶೆಯಲ್ಲಿ ಇದೆ, ಆದರೆ ಸಿದ್ಧದಶೆಯಲ್ಲಿ ಇಲ್ಲ.

ಸಂಸಾರದಲ್ಲಿ ಪ್ರಥಮ ನಿಮಿತ್ತ ಕರ್ಮ ಮತ್ತು ನಂತರ ರಾಗಾದಿಗಳಂಥ ಕಾರಣ-ಕಾರ್ಯಗಳಲ್ಲಿ ಹಿಂದೆ-ಮುಂದೆ ಕಾಲವಿಲ್ಲ , ಸ್ವತಂತ್ರ ಒಂದು ಸಮಯದ ಸ್ವಯಂ ಸಿದ್ಧ ಮೇಳವಿದೆ ಪರ್ಯಾಯದಲ್ಲಿ ಕೂಡ ತಾನು ಪ್ರಸಿದ್ಧ ಸ್ವಯಂಸಿದ್ಧ ಸ್ವತಂತ್ರ ಕರ್ತೃವಿದೆ. ಆ ಸಮಯದಲ್ಲಿ ಎಂಥ ನಿಮಿತ್ತವಿದೆ ಅದರ ಜ್ಞಾನ ಮಾಡುವುದಕ್ಕಾಗಿ ಇದೆ. ಜೀವನು ವಿಕಾರೀ ಪರಿಣಾಮ

ಮಾಡುತ್ತಾನೆ ಆ ಕಾರ್ಯದ ಸಮಯದಲ್ಲಿ ಜಡಕರ್ಮದ ಪರಿಣತಿಯು ನಿಮಿತ್ತಕಾರಣವಿದೆ. ಸ್ವತಂತ್ರ ಪರಿಣಮನದ ಅರಿವಿಲ್ಲದಂಥ ಅಜ್ಞಾನೀ ಜೀವನಿಗೆ ಇಂಥ ನಿಮಿತ್ತ-ನೈಮಿತ್ತಿಕ ಸಂಬಂಧವು ಅನಾದಿಯಿಂದ ನಡೆಯುತ್ತ ಬರುತ್ತಿದೆ ಆದುದರಿಂದ ಜಡಕರ್ಮವು ಸಂಸಾರ ಪರಿಭ್ರಮಣ ಮಾಡುವವನಿಗೆ (ರಾಗಾದಿ) ಭಾವಕರ್ಮವು ಕಾರಣವಿದೆ ಮತ್ತು ಜೀವದ ಅಶುದ್ಧ ಪರಿಣತಿಯು ಅದು ಕಾರ್ಯವಿದೆ. ಜೀವಕ್ಕೆ ವಿಭಾವ ಪರರಿಣತಿಯಿದೆ ಅದು ನವೀನ ಕರ್ಮದ ಕಾರಣವಿದೆ. ಮತ್ತು ಜ್ಞಾನಾವರಣಾದಿ ಎಂಟು ಕರ್ಮಗಳೂ ಹಾಗೂ ಚತುರ್ಗತಿಗಳ ಶರೀರದ ಸಂಯೋಗವು ಅದು ಕಾರ್ಯವಿದೆ. ಇಂಥವುಗಳು ಸಿದ್ಧ ಭಗವಂತರಿಗೆ ಇಲ್ಲ .

ಅಶುದ್ಧ ನಿಶ್ಚಯನಯದಿಂದ ಜೀವನು ರಾಗಾದಿಗಳ ಉತ್ಪಾದಕನಿದ್ದಾನೆ. ಸಮಯ ಸಮಯದ ಅಶುದ್ಧತೆಯು ನವೀನ ಕರ್ಮಕ್ಕೆ ನಿಮಿತ್ತವಾಗುತ್ತದೆ. ಮತ್ತು ಬದ್ಧವಾದ ಹಳೆಯ ಕರ್ಮವು ಅಜ್ಞಾನೀ ಜೀವನಿಗೆ ನವೀನ ರಾಗಾದಿಗಳಿಗೆ ಕಾರಣವಾಗುತ್ತದೆ ಒಂದು ಸಮಯ ಮಾತ್ರದ ನಿಮಿತ್ತವುಳ್ಳ ಸ್ವತಂತ್ರ ನಿಮಿತ್ತ-ನೈಮಿತ್ತಿಕ ಸಂಬಂಧವಿದೆ. ಈ ಮಾತು ವೀತರಾಗ ದರ್ಶನವನ್ನು ಹೊರತು ಪಡಿಸಿ ಹೊರಗೆಲ್ಲಿಯೂ ಇಲ್ಲ. ಆತ್ಮನು ತ್ರಿಕಾಲ ಚಿದಾನಂದ ಶುದ್ಧನಿದ್ದಾನೆ ಆದರೆ ಸಂಸಾರ ಪರ್ಯಾಯದಲ್ಲಿ ಕೂಡ ಶಕ್ತಿರೂಪದಿಂದ ತ್ರಿಕಾಲ ಪೂರ್ಣಶುದ್ಧನಿದ್ದಾನೆ. ಆದರೆ ಸಂಸಾರದಶೆಯಲ್ಲಿ ಕೂಡ ತಾನೇ ಉತ್ಪಾದರೂಪದಿಂದ ವಿಕಾಸವು ಸ್ವತಂತ್ರ ಕರ್ತೃತ್ವವಿದೆ. ಜೀವನು ಹೊಸ ಹೊಸ ವಿಕಾರ ಮಾಡುತ್ತಿದ್ದರೆ ಹಳೆಯ ಕರ್ಮದ ಉದಯವನ್ನು ನಿಮಿತ್ತಕಾರಣವೆಂದು ಹೇಳಲಾಗುತ್ತದೆ. ನಿಮಿತ್ತದ ಮೇಲಿನ ದೃಷ್ಟಿಯನ್ನು ಬಿಟ್ಟು ತ್ರಿಕಾಲ ಶುದ್ಧ ದ್ರವ್ಯದೃಷ್ಟಿಮಾಡಿ ಅಂತರ್ಮುಖವಾದರೆ ಸಂಸಾರದೃಷ್ಟಿಯಾಗುವುದಿಲ್ಲ ಮತ್ತು ಚಾರಿತ್ರದಲ್ಲಿ ಎಷ್ಟು ಅಂಶದಿಂದ ಸ್ವಸನ್ಮುಖ ವೀತರಾಗತೆಯಾಗುತ್ತದೆ ಅಷ್ಟು ಮೋಕ್ಷವು ಹತ್ತಿರವಾಗುತ್ತದೆ.

ಸಂಸಾರದಲ್ಲಿ ಮತ್ತು ಮೋಕ್ಷದಲ್ಲಿ ಜೀವನು ಸ್ವತಂತ್ರನಿದ್ದರೂ ಕೂಡ ಸಂಸಾರೀ ಪ್ರಾಣಿಗೆ ವಿಕಾರೀ ಅವಸ್ಥೆಯಿರುವುದರಿಂದ ವ್ಯವಹಾರ ಕಾರಣ-ಕಾರ್ಯ ಸಂಬಂಧವನ್ನು ತಿಳಿಸಿಕೊಡಲಾಗಿದೆ. ನಿಶ್ಚಯದಿಂದಂತೂ ಜೀವನು ತನ್ನ ಯೋಗ್ಯತೆಯಿಂದ ವಿಕಾರೀ ಅವಸ್ಥೆಯ ರೂಪವಾಗಿ ಪರಿಣಮಿಸುತ್ತಾನೆ. ಆಗ ಎದುರಿನ ವಸ್ತುವನ್ನು ನಿಮಿತ್ತವೆಂದು ಹೇಳಲಾಗುತ್ತದೆ. ನಿಮಿತ್ತವಂತೂ ನೈಮಿತ್ತಿಕವನ್ನು ಪ್ರಸಿದ್ಧಪಡಿಸುತ್ತದೆ.

ಸಂಸಾರೀ ಜೀವನಿಗೆ ವಿಕಾರೀ ಪರಿಣಾಮದ ಉತ್ಪತ್ತಿ ಕೂಡ ನಿಶ್ಚಯದಿಂದ ಜೀವದ ಪರ್ಯಾಯಧರ್ಮವಿದೆ. ಅದರ ಉತ್ಪತ್ತಿಯು ಕರ್ಮದಿಂದಾಗುವುದಿಲ್ಲ , ಆದರೆ ಜೀವನು ರಾಗಾದಿಗಳನ್ನು ಮಾಡಿದರೆ ಕರ್ಮವನ್ನು ನಿಮಿತ್ತ ಕಾರಣವೆಂದು ಹೇಳುವರು.

ಸಮಯಸಾರದಲ್ಲಿ ರಾಗಾದಿಗಳನ್ನು ಅಭೂತಾರ್ಥವೆಂದು ಹೇಳಿದೆ ಮತ್ತು ದ್ರವ್ಯದೃಷ್ಟಿಯ ವಿಷಯವು ಚಿದಾನಂದ ಅಖಂಡ ಧ್ರುವದ್ರವ್ಯವಿದ್ದು ಅದನ್ನು ಭೂತಾರ್ಥವೆಂದು ಹೇಳಿದೆ ಮೋಕ್ಷಮಾರ್ಗ ಮತ್ತು ಮೋಕ್ಷಪರ್ಯಾಯ ಕೂಡ ಒಂದು ಸಮಯದ ಪರ್ಯಾಯವಿದೆ. ಅದು ದ್ರವ್ಯದೃಷ್ಟಿಯ ವಿಷಯವಿಲ್ಲದುದರಿಂದ ಅದನ್ನು ಗೌಣಮಾಡಿ ವ್ಯವಹಾರವೆಂದು ಹೇಳಿ ಅಭೂತಾರ್ಥವೆಂದು ಹೇಳಿದೆ ಮತ್ತು ತ್ರಿಕಾಲ ಅಭೇದ ಸ್ವಭಾವವನ್ನು ಮುಖ್ಯ ಮಾಡಿ ಅದನ್ನು ಭೂತಾರ್ಥವೆಂದು ಹೇಳಲಾಗಿದೆ.

ಆಗ ಇಲ್ಲಿ ಜೀವದ ಒಂದು ಸಮಯದ ವಿಕಾರೀ ಪರ್ಯಾಯವನ್ನು ಕೂಡ ಭೂತಾರ್ಥವೆಂದು ಹೇಳಿದೆ ಏಕೆಂದರೆ ಇಲ್ಲಿ ಪ್ರಮಾಣಜ್ಞಾನದ ವಿಷಯ ತಿಳಿಸಿದೆ. ಜೀವನು ವರ್ತಮಾನದಲ್ಲಿ ವಿಭಾವರೂಪನಾಗಿ ಸ್ವಯಂ ಪರಿಣಮಿಸಿದ್ದಾನೆ. ಅದು ವಿದ್ಯಮಾನ ಭಾವವಿದೆ ಮತ್ತು ವಿಕಾರೀ ಪರ್ಯಾಯದಲ್ಲಿ ಎದುರಿಗೆ ನಿಮಿತ್ತವಿದೆ ಅದು ಕೂಡ ವಿದ್ಯಮಾನ ಸತ್ಯಾರ್ಥವಿದೆ.

ಯಾವನಿಗೆ ನಿಶ್ಚಯ ಶುದ್ಧದ್ರವ್ಯಸ್ವಭಾವದ ದೃಷ್ಟಿಯಾಗಿದೆ ಮತ್ತು ಸ್ವ-ಪರಪ್ರಕಾಶಕ ಸಮ್ಯಗ್ಜ್ಞಾನವಾಗಿದೆ. ಅವನು

ಪರ್ಯಾಯದಲ್ಲಿ ವಿಕಾರ ಮತ್ತು ಅದರಲ್ಲಿ ಕರ್ಮನಿಮಿತ್ತವಿದೆಯೆಂದು ಹೇಳುತ್ತಾನೆ, ಹೀಗೆ ನಿಮಿತ್ತ-ನೈಮಿತ್ತಿದ ಸಂಬಂಧವಿದೆಯೆಂದು ನಿಶ್ಚಯ ಮಾಡಿದಲ್ಲದೆ ವಿಕಾರವು ಅಭೂತಾರ್ಥವಿದೆಯೆಂದು ತಿಳಿಯುವ ಸಾಧ್ಯತೆಯಿಲ್ಲ. ಎಂದರೆ ಅದು ಕ್ಷಣಿಕ ವಿಕಾರವಿದ್ದು ಅದು ತ್ರಿಕಾಲ ಸ್ವಭಾವದಲ್ಲಿ ಇಲ್ಲ . ಎಂದರೆ ಅಭೂತಾರ್ಥವಿದೆಯೆಂದು ತಿಳಿಯುವ ನಿಶ್ಚಯ ಮಾಡುವ ಸಾಧ್ಯತೆಯಿಲ್ಲ .

ನಿಮಿತ್ತ ಮತ್ತು ವಿಕಾರವು ಪರ್ಯಾಯ ಅಪೇಕ್ಷೆಯಿಂದ ವಿದ್ಯಮಾನವಿವೆ. ಇದ್ದುವನ್ನು ಹಾರಿಸಿದರೆ ದೃಷ್ಟಿಯು ಸರಿಯಾಗುವುದಿಲ್ಲ , ವ್ಯವಹಾರ ಕಾರಣ-ಕಾರ್ಯದ ಯಥಾರ್ಥ ಜ್ಞಾನಮಾಡಿಕೊಳ್ಳದೆ ಪರ್ಯಾಯವು ಸ್ವತಂತ್ರವಾಗಿ ಸಿದ್ಧವಾಗುವುದಿಲ್ಲ ಮತ್ತು ಪರ್ಯಾಯದಲ್ಲಿ ವಿಕಾರ-ಅವಿಕಾರದ ಸ್ವತಂತ್ರತೆಯನ್ನು ಸ್ವೀಕರಿಸಿದಲ್ಲದೆ ಕ್ಷಣಿಕ ವಿಕಾರದ ನಿಷೇಧ ಮಾಡಿ ತ್ರಿಕಾಲ ಅವಿಕಾರದ ದೃಷ್ಟಿಯಾಗುವ ಸಾಧ್ಯತೆಯಿಲ್ಲ .

ಕರ್ಮದಿಂದ ವಿಕಾರವಾಗುತ್ತದೆಂದು ಮನ್ನಿಸುವವನು ಮಿಥ್ಯಾದೃಷ್ಟಿಯಿದ್ದಾನೆ, ಆದರೆ ಮಿಥ್ಯಾತ್ವ, ಅವಿರತಿ, ಪ್ರಮಾದ ಕಷಾಯ, ಯೋಗದ ಕಂಪನವು ಸ್ವಯಂಸಿದ್ಧ ತನ್ನಿಂದ-ಜೀವದಿಂದ ಆಗುತ್ತದೆ ಅದು ನಿಶ್ಚಯದಿಂದ ಜೀವದಲ್ಲಿ ಆಗುತ್ತದೆಯೆಂದು ತಿಳಿದುಕೊಂಡರೆ ವ್ಯವಹಾರದಿಂದ ಕರ್ಮವು ಕಾರಣವೆಂದು ಹೇಳಲಾಗುವುದು.

ಶರೀರದ ರಚನೆಯು ನಿಶ್ಚಯದಿಂದ ಶರೀರದ ರಜಕಣದ ಕಾರಣದಿಂದ ಆಗಿದೆ ಮತ್ತು ರಾಗೀ ಜೀವನ ರಾಗವು ವ್ಯವಹಾರದಿಂದ ಸತ್ಯಾರ್ಥವಿದೆ ಅದರಿಂದ ಯಾವನಾದರೂ ಪರಸ್ಪರ ಪರಾಧೀನತೆಯನ್ನು ಮನ್ನಿಸಿದರೆ ಅವನು ಮಿಥ್ಯಾದೃಷ್ಟಿಯಿದ್ದಾನೆ.

ನಿಮಿತ್ತವಿಲ್ಲದೆ ವಿಕಾರವಾದರೆ ಅದು ಸ್ವಭಾವವಾಗಿ ಬಿಡುವುದು, ಆದರೆ ಜೀವದಲ್ಲಿ ವಿಕಾರಭಾವದ ಯೋಗ್ಯತೆಯಿರುವುದರಿಂದ ವಿಕಾರವಾಗುತ್ತದೆ ಮತ್ತು ಆ ಸಮಯದಲ್ಲಿ ಎದುರಿಗೆ ಕರ್ಮವು ನಿಮಿತ್ತರೂಪದಿಂದ ಇರುತ್ತದೆ.

ಪರಮಾನಂದ ಭೂತಾರ್ಥತ್ವಭಾವದ ಪೂರ್ಣ ಆಶ್ರಯವಿರುವಂಥ ಸಿದ್ಧ ಭಗವಂತರು ತಮ್ಮ ಪರಿಪೂರ್ಣ ಪರಮಾನಂದವನ್ನು ಉತ್ಪನ್ನ ಮಾಡುತ್ತಾರೆ, ಅವರು ಯಾವ ಕಾಲದಲ್ಲೂ ಸಂಸಾರಭಾವವನ್ನು ಉತ್ಪನ್ನ ಮಾಡುವುದಿಲ್ಲ, ಯಾವಾಗಲೂ ತಮ್ಮ ಶುದ್ಧಸ್ವರೂಪವನ್ನೇ ಉತ್ಪನ್ನ ಮಾಡುತ್ತಾರೆ ಬೇರೆ ಯಾವುದನ್ನೂ ಉತ್ಪನ್ನಮಾಡುವುದಿಲ್ಲ .

ಬೌದ್ಧಮತಿಗಳು ಸರ್ವಥಾ ಜೀವದ ಅಭಾವವಾಗುವುದಕ್ಕೇ ಮೋಕ್ಷವೆಂದು ಮನ್ನಿಸುತ್ತಾರೆ, ಅದರ ನಿಷೇಧ ಮಾಡಲಾಗಿದೆ. ಜೈನನಾಮಧಾರಕನೂ ಕೂಡ ಜೀವವು ಸತ್ತು ಅನಂತದಲ್ಲಿ ಸೇರಿಹೋಯಿತೆಂದು ಬೌದ್ಧಮನ್ನಣೆ ಹೊಂದಿದ್ದಾನೆ, ಆದರೆ ಹೀಗೆ ಇಲ್ಲ . ಇಲ್ಲಿ ಸಂಸಾರದಲ್ಲಿ ದುಃಖ ಭೋಗಿಸುವಲ್ಲಿ ಸ್ವತಂತ್ರವಿದ್ದು ಅಲ್ಲಿ ಉತ್ಕೃಷ್ಟ ಪುರುಷಾರ್ಥ ಮಾಡಿ ಮೋಕ್ಷದಶೆ ಪ್ರಕಟ ಮಾಡಿ ಅನಂತದಲ್ಲಿ ಸೇರಿಹೋಗುವುದು ಮತ್ತು ತನ್ನ ಹಳೆಯ ಸತ್ತಾದ ನಾಶವಾಗುವುದು ಹೀಗೆಂದೂ ಆಗುವುದಿಲ್ಲ .

**ಸಸ್ಸದಮಧ ಉಚ್ಛೇದಂ ಭವ್ವಮಭವ್ವಂ ಚ ಸುಣ್ಣಮಿದರಂ ಚ ।**
**ವಿಣ್ಣಾಣಮವಿಣ್ಣಾಣಂ ಣ ವಿ ಜುಜ್ಜದಿ ಅಸದಿ ಸಬ್ಭಾವೇ ।।೩೭।।**

**ಯಾವ ಸಬ್ಭಾವವಿಲ್ಲದಿದ್ದರೆ ಶಾಶ್ವತ, ಅಶಾಶ್ವತ, ಭವ್ಯ, ಅಭವ್ಯಮೇಣ್ ।**
**ಈ ವಿಜ್ಞಾನ, ಅವಿಜ್ಞಾನ, ಶೂನ್ಯ, ಅಶೂನ್ಯವೆಂಬಿವು ಹೇಗೆ ಸಂಭವಿಸುವವು ।।೩೭।।**

೧) **ಅವಿನಾಶೀ ಸ್ವಭಾವ :-** ಸಂಸಾರದಲ್ಲಿ ಆತ್ಮನ ಪರ್ಯಾಯವು ಅಶುದ್ಧತೆಯಿಂದ ಬದಲಾಗುತ್ತದೆ ಮತ್ತು ಮೋಕ್ಷವಾದರೆ ಶುದ್ಧತೆಯಿಂದ ಬದಲಾಗುತ್ತದೆ, ಆದರೆ ದ್ರವ್ಯದ ನಾಶವಾಗುವುದಿಲ್ಲ . ಹೇಗೆ ಸುವರ್ಣವು ಶುದ್ಧವಾಗುತ್ತದೆ

ಹಾಗೆ ಜೀವವು ದ್ರವ್ಯತ್ವದಿಂದ ಸ್ಥಿರವಿದ್ದು ಅಶುದ್ಧ ಅವಸ್ಥೆಯಿಂದ ಮುಕ್ತವಾಗುತ್ತದೆ ಮತ್ತು ಪರಮಾನಂದ ಯುಕ್ತವಾಗುತ್ತದೆ.

ಅನ್ಯಮತಿಗಳು ಹೇಳುತ್ತಾರೆ ಯಾವ ಪ್ರಕಾರ ದೀವಿಗೆಯೊಳಗಿಂದ ಹೊಗೆಯನ್ನು ನಾಶಮಾಡುವುದಿದ್ದರೆ ದೀವಿಗೆಯನ್ನು ಆರಿಸಿಬಿಡಬೇಕಾಗುವುದು. ಅದೇ ಪ್ರಕಾರ ಜೀವದೊಳಗಿನ ರಾಗ-ದ್ವೇಷಗಳ ರೂಪದ ಹೊಗೆಯನ್ನು ನಾಶಮಾಡುವುದಿದ್ದರೆ ಜ್ಞಾನದ ನಾಶಮಾಡಿಬಿಟ್ಟರೆ ತಿಳಿಯುವರೂಪದ ಉಪಾಧಿಯ ನಾಶವಾಗುವುದರ ಹೆಸರು ಅದು ಮೋಕ್ಷವೆಂದು ಮನ್ನಿಸಿದರೆ ಅದು ಹಾಗೆ ಇಲ್ಲ .

ಪರ್ಯಾಯದೊಳಗಿಂದ ಅಶುದ್ಧತೆಯು ನಾಶವಾಗುವುದರಿಂದ ತ್ರಿಕಾಲ ಜೀವದ ಸತ್ತಾರೂಪವಾದ ಯಾವ ಅನಂತ ಗುಣಗಳ ಪಿಂಡವಿದೆ ಅದರ ನಾಶವಾಗುವುದಿಲ್ಲ . ಮೋಕ್ಷದಲ್ಲಿ ಜೀವವು ಅವಿನಾಶೀ ಸುಖರೂಪವಾದ ಶಾಶ್ವತ ಸತ್ತಾರೂಪದಿಂದ ಇರುತ್ತದೆ-ಸಿದ್ಧವಾಗುವುದರಿಂದ ಚೈತನ್ಯ ಸತ್ತಾದ ವಿಕಾಸವಾಗುವುದು, ಅಭಾವವಾಗುವುದಿಲ್ಲ . ಜೀವದ ನಾಶವಾಗುವುದಿಲ್ಲ , ಪರ್ಯಾಯದ ನಾಶ ಎಂದರೆ ಬದಲಾವಣೆಯಾಗುತ್ತದೆ. ಅದು ಜೀವದ ಸತ್ತಾ ಇಲ್ಲದೆ ಆಗುವ ಸಾಧ್ಯತೆಯಿಲ್ಲ.

**೨) ವಿನಾಶೀ ವ್ಯಯಭಾವ :-** ಮೋಕ್ಷದಲ್ಲಿ ಶುದ್ಧ ದ್ರವ್ಯದ್ದೇ ಅಭಾವವಿದ್ದರೆ ಸಂಸಾರದಲ್ಲಿ ಸಮಯ ಸಮಯಕ್ಕೆ ಪರ್ಯಾಯದ ನಾಶವಾಗುತ್ತಿದ್ದರೂ ಜೀವದ ನಾಶವಾಗುವುದಿಲ್ಲ ಮತ್ತು ಸಿದ್ಧ ಭಗವಂತರಲ್ಲಿ ಸರ್ವಥಾ ನಾಶವು ಹೇಗಾಗುವುದು ? ಆಗುವುದೇ ಇಲ್ಲ . ಕೇವಲ ಸಮಯ ಸಮಯಕ್ಕೆ ಪರ್ಯಾಯ ಬದಲಾಗುತ್ತದೆ ದ್ರವ್ಯವಂತೂ ತ್ರಿಕಾಲವಿರುತ್ತದೆ, ಮೋಕ್ಷದಲ್ಲಿ ಜೀವವು ನಿತ್ಯವಿಲ್ಲದಿದ್ದರೆ ಅನಿತ್ಯವಾದ ಪರ್ಯಾಯ ಧರ್ಮವು ಯಾರಿಗೆ? ಮೋಕ್ಷಾವಸ್ಥೆಯಲ್ಲಿ ಕೇವಲಜ್ಞಾನವು ಕೂಡ ಅನಿತ್ಯ ಎಂದರೆ ಒಂದು ಸಮಯದ್ದಿದೆ. ಎಂದರೆ ಸಮಯ ಸಮಯಕ್ಕೆ ಅದರ ಬದಲಾವಣೆಯಾಗುತ್ತದೆ, ಸ್ವಭಾವವೇ ಹೀಗಿದೆ, ಶಾಶ್ವತ ಮತ್ತು ಅಶಾಶ್ವತಗಳೆರಡೂ ಸೇರಿ ಪೂರ್ಣವಸ್ತುವಿದೆ, ಹೀಗೆ ಸಿದ್ಧರಲ್ಲಿ ಕೂಡ ದ್ರವ್ಯ ಅಪೇಕ್ಷೆಯಿಂದ ಅವಿನಾಶತೆ ಮತ್ತು ಪರ್ಯಾಯ ಅಪೇಕ್ಷೆಯಿಂದ ವಿನಾಶತೆಯಿದೆ. ಹೀಗೆ ಎರಡು ವಚನಗಳಾದವು.

ಸಿದ್ಧಪರಮಾತ್ಮರು ಶರೀರರಹಿತವಾದದ್ದು ಅದು ಜೀವದ್ರವ್ಯರೂಪದಿಂದಿದ್ದು ಆಗಿದೆ. ಜೀವದ ನಾಶವಾಗುವುದಿಲ್ಲ; ಅಸಂಖ್ಯಪ್ರದೇಶಿಯಾದ ಆತ್ಮನು ಅನಂತಗುಣಗಳ ಪಿಂಡ ಮತ್ತು ಸಮಯ ಸಮಯಕ್ಕೆ ಅವಸ್ಥೆಯಾಗುವಂಥ ಜೀವಾಸ್ತಿಕಾಯನಿದ್ದಾನೆಂಬ ಅರಿವಾದರೆ ಸಿದ್ಧದಶೆಯಾಗುವುದು. ಸಿದ್ಧದಲ್ಲಿ ಆತ್ಮನಿದ್ದಾನೆ ಆತ್ಮನಿಲ್ಲದಿದ್ದರೆ ಅವಿನಾಶಿತನ ಸಂಭವಿಸುವುದಿಲ್ಲ ಮತ್ತು ದ್ರವ್ಯದ ನಾಸ್ತಿಯಿದ್ದರೆ ಸಮಯ ಸಮಯದ ವಿನಾಶೀತನ ಕೂಡ ಸಂಭವಿಸುವುದಿಲ್ಲ ಎಂದರೆ ಸಿದ್ಧರಲ್ಲಿ ದ್ರವ್ಯ ಅಪೇಕ್ಷೆಯಿಂದ ಅವಿನಾಶೀತನ ಮತ್ತು ಸಮಯ ಸಮಯದ ಅವಸ್ಥೆಯ ಅಪೇಕ್ಷೆಯಿಂದ ವಿನಾಶೀತನವಿದೆ. ಹೀಗೆ ಎರಡು ವಚನಗಳಾಗಿ ಹೋಗಿವೆ. ಈಗ ಸಿದ್ಧರಲ್ಲಿ ಭವ್ಯಭಾವವನ್ನು ಹೇಳುತ್ತಾರೆ.

**೩) ಭವ್ಯಭಾವ :-** ಆತ್ಮನು ಶುದ್ಧ ಚಿದಾನಂದ ಸ್ವರೂಪನಿದ್ದಾನೆಂಬ ಅರಿವಿನೊಡನೆ ಅಂತರ್ಯದಲ್ಲಿ ಸಂಪೂರ್ಣತೆಯಿಂದ ಸ್ಥಿರಗೊಂಡರೆ ಶುದ್ಧಭಾವವು ಪ್ರಕಟವಾಗುವುದು, ಸಮಯ-ಸಮಯಕ್ಕೆ ಆ ಭಾವಗಳ ಹೊಸ ಹೊಸ ಪರಿಣಮನವಾಗುವುದು. ಭವ್ಯ ಜೀವಗಳಿಗೆ ಭವ್ಯಭಾವಗಳಿರುವುದರ ಮಾತು ಇಲ್ಲಿ ಇಲ್ಲ . ಹೊಸ ಹೊಸ ಅವಸ್ಥೆಯ ರೂಪದಿಂದ ಪರಮಾನಂದದಶೆಯಾಗುವುದು ಅದು ಭವ್ಯಭಾವವಿದೆ. ಕೇವಲಜ್ಞಾನ, ಕೇವಲದರ್ಶನ, ಅನಂತಸುಖ, ಅನಂತವೀರ್ಯರೂಪದಿಂದ ಹೊಸ ಹೊಸ ಅವಸ್ಥೆಯಾಗುತ್ತದೆ ಅದು ಭವ್ಯಭಾವವಿದೆ. ಸಿದ್ಧ ದಶೆಯಲ್ಲಿ ಆತ್ಮನಿಲ್ಲದಿದ್ದರೆ ಭವ್ಯಭಾವವಾಗುವ ಸಾಧ್ಯತೆಯಿಲ್ಲ ಮತ್ತು ಭವ್ಯಭಾವವಿಲ್ಲದಿದ್ದರೆ ಸಿದ್ಧಾತ್ಮನಾಗುವ ಸಾಧ್ಯತೆಯಿಲ್ಲ . ಆದುದರಿಂದ ಭವ್ಯಭಾವವುಳ್ಳ ಸಿದ್ಧ ಆತ್ಮನು ಉಪಾದೇಯನಿದ್ದಾನೆಂದು ನೀನು ಶ್ರದ್ಧೆ ಮಾಡು.

**೪) ಅಭವ್ಯಭಾವ :-** ಅಭವ್ಯ ಜೀವರು ಮೋಕ್ಷಕ್ಕೆ ಯೋಗ್ಯರಿಲ್ಲ , ಆ ಅಭವ್ಯತನದ ಮಾತು ಇಲ್ಲಿ ಇಲ್ಲ. ಆತ್ಮನ

ಶುದ್ಧ ಪ್ರತೀತಿ ಮಾಡಿ, ಪರಮಾನಂದದಶೆ ಪ್ರಕಟಪಡಿಸಿ, ವಿಕಾರದ ಮತ್ತು ಮಲಿನತೆಯ ಭಾಗವನ್ನು ಅಭವ್ಯಭಾವವೆಂದು ಹೇಳಿದೆ. ಸಿದ್ಧರೆಂದೂ ಕೂಡ ಅಶುದ್ಧರಾಗುವುದಿಲ್ಲ ಅದರ ಕಾರಣವೇನು ? ಕರ್ಮದ ಅಭಾವವಾಗಿದೆಯೆಂದೇನು ? ಇಲ್ಲ. ಅಶುದ್ಧರೂಪದಿಂದ ಆಗದಿರುವುದು ಕೂಡ ಅದರ ಅಭವ್ಯಭಾವರೂಪ ಧರ್ಮವಿದೆ. ಧರ್ಮವು ಜಡವಿದೆ ಕರ್ಮದಿಂದ ಸಂಸಾರವಿಲ್ಲ ಮತ್ತು ಕರ್ಮದ ಅಭಾವದಿಂದ ಮೋಕ್ಷವಿಲ್ಲ . ಕರ್ಮದ ಅಭಾವದಿಂದ ಮೋಕ್ಷವಾಗುತ್ತದೆ ಮತ್ತು ಜೀವನು ಸಂಸಾರದಲ್ಲಿ ಬರುವುದಿಲ್ಲವೆಂಬುದು ನಿಮಿತ್ತದ ಕಥನವಿದೆ. ನಿಜವಾಗಿ ಅಶುದ್ಧರೂಪದಿಂದ ಆಗದಿರುವುದು ಅದು ಸಿದ್ಧರ ತಮ್ಮ ಉಪಾದಾನಭಾವವಿದೆ. ಯಾವ ಜೀವರು ಸಿದ್ಧರಾಗಿದ್ದಾರೆ ಅವರಲ್ಲಿ ಆತ್ಮನು ಅಖಂಡವಾಗಿ ಇರದಿದ್ದರೆ ಭವ್ಯ-ಅಭವ್ಯ ಭಾವಗಳು ಯಾರಲ್ಲಿ ಇರುವವು? ಮುಕ್ತಿ ಯಾರಿಗಾಗುವುದು? ಅದಕ್ಕಾಗಿ ಅಲ್ಲಿ ಆತ್ಮನು ಯಾವಾಗಲೂ ಇರುತ್ತಾನೆ ಮತ್ತು ಇವೆರಡು ಭಾವಗಳು ಸಿದ್ಧರಿಗಿರುತ್ತವೆಂಬುದು ನಿಶ್ಚಿತವಾಯಿತು.

**೫) ಶೂನ್ಯಭಾವ :-** ಸಿದ್ಧರಲ್ಲಿ ಪರದ್ರವ್ಯದಿಂದ ರಿಕ್ತತೆಯಿದೆ ಮತ್ತು ಸಂಸಾರೀ ಜೀವ ಕೂಡ ಪರದಿಂದ ರಿಕ್ತವಿದೆ. ಶರೀರ, ಕರ್ಮ ಮೊದಲಾದ ಪರಪದಾರ್ಥಗಳು ಸಿದ್ಧರಲ್ಲಿ ಇಲ್ಲ ಸಿದ್ಧ ಭಗವಂತರಂತೂ ತಮ್ಮ ಪರಮಾನಂದದಶೆಯಲ್ಲಿ ವಿರಾಜಿಸುತ್ತಾರೆ ಅವರಿಗೆ ಪರಪದಾರ್ಥದ ಆನಂದವಿಲ್ಲ ಅದರಂತೆ ಪರಪದಾರ್ಥಗಳು ಜಗತ್ತಿನಲ್ಲಿ ಇವೆಯೆಂದು ಆನಂದವಿದೆ ಹೀಗೆ ಕೂಡ ಇಲ್ಲ .

ಇಲ್ಲಿ ಪಂಚಾಸ್ತಿಕಾಯದ ವರ್ಣನೆಯಿದೆ ಜೀವನು ಅಸ್ತಿಯಿದ್ದಾನೆ ಮತ್ತು ಅಸಂಖ್ಯ ಪ್ರದೇಶಿಯಾದ ಕಾಯ ಕೂಡ ಇದೆ. ಆತ್ಮನಲ್ಲಿ ಕರ್ಮದ ಶೂನ್ಯತೆಯಿದೆ. ಅವನಲ್ಲಿ ಯಾವ ಪದಾರ್ಥಗಳ ಅಭಾವವಿದೆ ಆ ಪದಾರ್ಥಗಳು ಆತ್ಮನಿಗೇನು ಮಾಡಿದವು ? ಯಾವ ಪ್ರಕಾರ ಕುದುರೆ ಮೇಲೆ ಕುಳಿತ ಮನುಷ್ಯನಿಗೆ ಕುದುರೆಯು ಎಲ್ಲಿಗೆ ಒಯ್ಯುತ್ತದೆ ಅಲ್ಲಿಗೆ ಹೋಗಬೇಕಾಗುತ್ತದೆ ಅದೇ ಪ್ರಕಾರ ಕರ್ಮಗಳು ಜೀವನಿಗೆ ಪ್ರೇರಕವಾಗಿ ಎಲ್ಲಿ ಎಳೆದೊಯ್ಯುತ್ತವೆ ಅಲ್ಲಿಗೆ ಹೋಗಬೇಕಾಗುತ್ತದೆ ಮತ್ತು ರಾಗ-ದ್ವೇಷಗಳನ್ನು ಮಾಡಲೇಬೇಕಾಗುತ್ತದೆಂದು ಅಜ್ಞಾನಿಗಳು ತರ್ಕಮಾಡುತ್ತಾರೆ. ಆದರೆ ಆ ತರ್ಕವು ಅಸತ್ಯವಿದೆ. ಕುದುರೆಯ ಕಾರಣದಿಂದ ಮನುಷ್ಯನು ಚಲಿಸುತ್ತಿದ್ದರೆ ಕುದುರೆಯ ಒಂದು ಕ್ಷೇತ್ರದಲ್ಲಿ ಧರ್ಮ, ಅಧರ್ಮ, ಆಕಾಶ ಮತ್ತು ಕಾಲ ಕೂಡ ಇವೆ ಅವು ಕೂಡ ಕುದುರೆಯ ಜತೆ ಕ್ಷೇತ್ರಾಂತರ ಪಡೆಯಬೇಕಾಗುವುದು, ಆದರೆ ಹೀಗೆಂದೂ ಆಗುವುದಿಲ್ಲ . ಮನುಷ್ಯನಲ್ಲಿ ಕುದುರೆಯ ಶೂನ್ಯತೆಯಿದೆ ಮತ್ತು ಕುದುರೆಯಲ್ಲಿ ಮನುಷ್ಯನ ಶೂನ್ಯತೆಯಿದೆ-ಕುದುರೆಯು ತನ್ನ ಯೋಗ್ಯತೆಯಿಂದ ಚಲಿಸುತ್ತದೆ ಮತ್ತು ಮನುಷ್ಯನು ತನ್ನ ಯೋಗ್ಯತೆಯಿಂದ ಚಲಿಸುತ್ತಾನೆ. ಅದೇ ರೀತಿ ಕರ್ಮದಲ್ಲಿ ಆತ್ಮನ ಶೂನ್ಯತೆಯಿದೆ ಮತ್ತು ಆತ್ಮನಲ್ಲಿ ಕರ್ಮದ ಶೂನ್ಯತೆಯಿದೆ. ಕರ್ಮವು ಕರ್ಮದ ಕಾರಣದಿಂದ ಅದರ ಅಸ್ತಿಕಾಯದಲ್ಲಿದೆ ಮತ್ತು ಜೀವನು ತನ್ನ ಅಸ್ತಿಕಾಯದಲ್ಲಿದ್ದಾನೆ. ಕರ್ಮದ ಕಾರಣದಿಂದ ಜೀವನು ರಾಗ-ದ್ವೇಷ ಮಾಡುವುದಿಲ್ಲ , ಆದರೆ ತನ್ನ ಕಾರಣದಿಂದ ಮಾಡುತ್ತಾನೆ. ಪಾಪ ಸಿದ್ಧರು ಕಾಲದ ಕಾರಣದಿಂದ ಬಲವಂತವಾಗಿ ಪರಿಣಮಿಸಬೇಕಾಗುತ್ತದೆಂದು ಕೆಲವರು ಹೇಳುತ್ತಾರೆ, ಆದರೆ ಅದು ಅಜ್ಞಾನ ಭಾವವಿದೆ. ಏಕೆಂದರೆ ಸಿದ್ಧರಲ್ಲಿ ಕಾಲದ ಶೂನ್ಯತೆಯಿದೆ ಮತ್ತು ಓರ್ವ ಸಿದ್ಧರು ಬೇರೆ ಸಿದ್ಧರಲ್ಲಿ ಒಂದಾಗಿ ಹೋಗುವುದಿಲ್ಲ . ಓರ್ವ ಸಿದ್ಧರಲ್ಲಿ ಬೇರೆ ಸಿದ್ಧರ ಶೂನ್ಯತೆಯಿದೆ, ಹೀಗೆ ಸ್ವತಂತ್ರ ನಿರ್ಣಯ ಮಾಡಬೇಕಾಗುವುದು.

**೬) ಅಶೂನ್ಯಭಾವ :-** ಸಿದ್ಧ ಭಗವಂತರು ತಮ್ಮ ಸ್ವಭಾವದಿಂದ ಪರಿಪೂರ್ಣರಿದ್ದಾರೆ. ಜೀವನು ಮರಣಹೊಂದಿ ಅನಂತದಲ್ಲಿ ಸೇರಿಹೋಗುತ್ತಾನೆಂದು ಅಜ್ಞಾನಿಗಳು ಹೇಳುತ್ತಾರೆ, ಆದರೆ ಇದು ಅಸತ್ಯವಿದೆ. ತನ್ನ ಜ್ಞಾನ, ದರ್ಶನ ಮೊದಲಾದುವನ್ನು ವ್ಯಕ್ತಮಾಡಿ ಪರಮಾನಂದದಶೆ ಪ್ರಕಟಪಡಿಸಿ ಅದರಿಂದ ಅವರು ಪರಿಪೂರ್ಣರಿದ್ದಾರೆ. ಆ ಸಿದ್ಧದಶೆಯಲ್ಲಿ ಆತ್ಮನಿಲ್ಲದಿದ್ದರೆ ಶೂನ್ಯಭಾವ ಮತ್ತು ಅಶೂನ್ಯ ಭಾವವನ್ನು ಯಾರಿಗೆ ಹೇಳುವುದು ? ಆ ಭಾವಗಳಿರುತ್ತವೆ ಮತ್ತು ಆತ್ಮನು ಕೂಡ ಅಲ್ಲಿ ನಿರಂತರ ಇದ್ದಾನೆ. ಸಂಸಾರದಶೆಯು ಅನಾದಿ ಸಾಂತವಿದೆ ಮತ್ತು ಸಿದ್ಧದಶೆಯು ಸಾದಿ ಅನಂತವಿದೆ, ಆದರೆ ಜೀವದ ಅಸ್ತಿತ್ವವಂತೂ ತ್ರಿಕಾಲವಿದೆ, ಈ ಪ್ರಕಾರ ಜೀವಾಸ್ತಿಕಾಯದ ಸ್ವರೂಪ ತಿಳಿದು, ಅಲ್ಪತೆಯನ್ನು ಹಾಗೂ ಸ್ವರೂಪವನ್ನು

ತಿಳಿದು ಅದನ್ನು ಹೇಯರೂಪವಾಗಿ ತಿಳಿದು ಉಪಾದೇಯವಂತೂ ಶುದ್ಧ ಆತ್ಮನೆಂದೇ ತಿಳಿಯಬೇಕು.

**೭) ವಿಜ್ಞಾನ :-** ಯಥಾರ್ಥ ಪದಾರ್ಥ ತಿಳಿಯುವುದು ಅದು ವಿಜ್ಞಾನವಿದೆ. ಸಿದ್ಧ ಭಗವಂತರಲ್ಲಿ ಕೇವಲಜ್ಞಾನವಿದೆ. ಹೊಗೆಯನ್ನು ನಾಶಮಾಡುವುದಿದ್ದರೆ ದೀವಿಗೆಯನ್ನು ನಾಶಮಾಡಬೇಕು, ಅದರಂತೆ ರಾಗ-ದ್ವೇಷರೂಪದ ವಿಕಾರಗಳನ್ನು ನಾಶಮಾಡುವುದಿದ್ದರೆ ಆತ್ಮಜ್ಞಾನ ಸ್ವಭಾವರೂಪದ ದೀವಿಗೆಯನ್ನು ನಾಶಮಾಡಬೇಕಾಗುವುದೆಂದು ಕೆಲವರು ಹೇಳುತ್ತಾರೆ. ಆ ತರ್ಕವು ಸುಳ್ಳಿದೆ. ಆತ್ಮನಲ್ಲಿ ಶರೀರ, ಕರ್ಮ ಮೊದಲಾದ ಪರಪದಾರ್ಥಗಳ ಅಭಾವವಿದೆ. ಮತ್ತು ವಿಕಾರವು ಕ್ಷಣಿಕವಿದ್ದು ಆತ್ಮನು ತ್ರಿಕಾಲೀ ಶುದ್ಧ ಸ್ವಭಾವಿಯಿದ್ದಾನೆಂದು ಶ್ರದ್ಧೆ-ಜ್ಞಾನ ಮಾಡಿ ಸ್ಥಿರತೆ ಮಾಡಿದರೆ ಕೇವಲಜ್ಞಾನದ ವಿಕಾಸವಾಗುವುದು ಮತ್ತು ರಾಗದ ಹಾಗೂ ಅಲ್ಪಜ್ಞತೆಯ ನಾಶವಾಗುತ್ತದೆ. ಸಿದ್ಧರು ಅಸ್ತಿಕಾಯರಿದ್ದು ಜ್ಞಾನದಿಂದ ತುಂಬಿಕೊಂಡಿದ್ದಾರೆ ಒಂದು ಸಮಯದ ಜ್ಞಾನಪರ್ಯಾಯದಲ್ಲಿ ಮೂರು ಕಾಲ ಮೂರು ಲೋಕದ ಪದಾರ್ಥಗಳನ್ನು ತಿಳಿಯುತ್ತಾರೆ.

**೮) ಅವಿಜ್ಞಾನ :-** ಇಂದ್ರಿಯ ಮತ್ತು ಮನಸ್ಸಿನ ನಿಮಿತ್ತದಿಂದಾಗುವ ಕ್ಷಾಯೋಪಶಮಿಕ ಜ್ಞಾನ, ಮಿಥ್ಯಾಜ್ಞಾನ, ಹಾಗೂ ಅಪೂರ್ಣಜ್ಞಾನದ ಅಭಾವವು ಸಿದ್ಧರಲ್ಲಿವೆ ಅದಕ್ಕಾಗಿ ಅವಿಜ್ಞಾನ ಹೇಳಿದೆ.

ಸಿದ್ಧದಶೆಯಲ್ಲಿ ಜೀವವಿಲ್ಲದಿದ್ದರೆ ವಿಜ್ಞಾನ ಮತ್ತು ಅವಿಜ್ಞಾನಗಳಿವೆಯೆಂದು ಯಾವ ರೀತಿ ಹೇಳಲಾಗುವುದು? ಅದಕ್ಕಾಗಿ ಸಿದ್ಧರಲ್ಲಿ ಜೀವವು ನಿರಂತರವಿದೆ.

೧) ಸಿದ್ಧಜೀವರುಗಳಲ್ಲಿ ಜ್ಞಾನವು ಅನಂತವಿದೆ. ತನ್ನ ಆತ್ಮನ ಜ್ಞಾನ ಮಾಡಿಕೊಂಡು ನಿರ್ವಿಕಾರ ಧ್ಯಾನಮಾಡಿದರೆ ಯಾವ ಜ್ಞಾನವು ಸಿದ್ಧದಶೆಯಲ್ಲಿ ಪ್ರಕಟವಾಗುವುದು ಅದು ಅನಂತ ಕಾಲದವರೆಗೆ ಇರುವುದಿದೆ. ಇಲ್ಲಿ ಕಾಲಅಪೇಕ್ಷೆಯಿಂದ ಅನಂತವೆಂದು ತಿಳಿಯುವುದು. ಈ ಸಿದ್ಧರಿಗೆ ಜೀವಾಸ್ತಿಕಾಯದ ಸ್ವಭಾವವಿದೆ. ಕೇವಲಜ್ಞಾನ ಪ್ರಕಟವಾಯಿತು ಅತ್ಮನ ಧ್ಯಾನ ಮಾಡಿ ಅನಂತ ಚಕ್ಷು ಅರಳಿದವು ಮತ್ತು ಜ್ಞಾನದ ವಿಕಾಸವು ಸಂಪೂರ್ಣವಾಯಿತು, ಅದು ಅನಂತ ಕಾಲದವರೆಗೆ ಸ್ಥಿರವಿರುವಂಥ ಸಿದ್ಧರಿಗೆ ಜೀವಾಸ್ತಿಕಾಯದ ಸ್ವಭಾವವಿದೆ, ಅದು ಆದರಣೀಯವಿದೆ.

೨) ಸಾಧಕ ಜೀವರುಗಳ ಜ್ಞಾನವು ಸಾಂತವಿದೆ. ಜೀವನು ಆತ್ಮನ ಜ್ಞಾನ ಮಾಡಿಕೊಂಡು ವಿಕಾರವು ನನ್ನ ಸ್ವರೂಪವಿಲ್ಲ , ನಾನು ಚಿದಾನಂದಸ್ವಭಾವಿಯಿದ್ದೇನೆಂಬ ಜ್ಞಾನವಾದೊಡನೆ ಕ್ಷಾಯೋಪಶಮಿಕ ಜ್ಞಾನವು ಸಮ್ಯಕ್ ರೂಪದಿಂದ ಪರಿಣಮಿಸುವುದು ಆ ಸಮ್ಯಗ್ಜ್ಞಾನದ ಪ್ರಾರಂಭವಾಗಿ ಕೇವಲಜ್ಞಾನವಾದೊಡನೆ ಕ್ಷಾಯೋಪಶಮಿಕ ಜ್ಞಾನದ ಅಭಾವವಾಗಿ ಹೋಗುವುದು. ಅದಕ್ಕಾಗಿ ಅದನ್ನು ಸಾಂತವೆಂದು ಹೇಳಲಾಗಿದೆ. ಒಂದು ಸಮಯದ ಪರ್ಯಾಯದ ಮಾತನ್ನು ತೆಗೆದುಕೊಳ್ಳಬಾರದು. ಪ್ರವಾಹರೂಪದಿಂದ ಹೆಚ್ಚು ಹೆಚ್ಚಾಗಿ ಉಳಿದರೆ ಉತ್ಕೃಷ್ಟ ೬೬ ಸಾಗರದವರೆಗೆ ಇದ್ದ ಹಾಗೆ ಇರುವುದು ನಂತರ ಕೇವಲಜ್ಞಾನವಾದೊಡನೆ ಕೊನೆ ಬರುವಂಥದು ಆ ಜೀವಾಸ್ತಿಕಾಯದ ಸ್ವಭಾವವಿದೆ. ಶ್ರೇಣಿಕರಾಜನು ವರ್ತಮಾನದಲ್ಲಿ ನರಕದಲ್ಲಿದ್ದಾನೆ. ಕ್ಷಾಯೋಪಶಮಿಕ ಸಮ್ಯಗ್ಜ್ಞಾನವಿದೆ ಅಲ್ಲಿಂದ ಹೊರಬಂದು ಭಾವೀತೀರ್ಥಂಕರನಾಗುವನು. ಆ ಜ್ಞಾನದ ಕೊನೆ ಬರುವುದು ಮತ್ತು ಕೇವಲಜ್ಞಾನವನ್ನು ಪ್ರಕಟಮಾಡಿಕೊಳ್ಳುವನು, ಅದು ಸಾದಿ ಅನಂತಕಾಲದವರೆಗಿರುವುದು. ಅದೆಲ್ಲವು ಜೀವಾಸ್ತಿಕಾಯದ ಸ್ವಭಾವವಿದೆ. ಜ್ಞಾನಾವರಣೀಯಕರ್ಮದ ಕ್ಷಯೋಪಶಮವಿದೆಯೆಂದು ಕ್ಷಾಯೋಪಶಮಿಕ ಜ್ಞಾನವಿದೆಯೆಂಬುದಾಗಿಲ್ಲ , ಅದು ತನ್ನ ಪರ್ಯಾಯ ಸ್ವಭಾವವಿದೆ, ಜ್ಞಾನಗುಣವು ಅದು ಅನಾದಿ ಅನಂತವಿದೆ, ನಾನು ಯಾವುದರ ಕರ್ತೃ-ಹರ್ತೃವಿಲ್ಲ, ಪುಣ್ಯದ ಕರ್ತೃವಿಲ್ಲ ಅದರಂತೆ ಜ್ಞಾನವು ಪರದ ಕಾರಣದಿಂದಾಗುವುದಿಲ್ಲವೆಂದು ಜ್ಞಾನ ಮಾಡಿಕೊಂಡಮೇಲೆ ಯಾವ ಜ್ಞಾನವು ಪ್ರಕಟವಾಗುವುದು ಅದು ಸಮ್ಯಗ್ಜ್ಞಾನದ ಪ್ರಾರಂಭವಾಗಿ ಅದರ ಕೊನೆಯು ಅವಶ್ಯವಾಗಿ ಬರುವುದು ಮತ್ತು ನೀನು ಕೇವಲಜ್ಞಾನವನ್ನು ಪ್ರಕಟಮಾಡಿಸಿಕೊಳ್ಳುವೆ. ಆದುದರಿಂದ ನೀನು ಜೀವಾಸ್ತಿಕಾಯದ ಯಥಾರ್ಥ ಜ್ಞಾನ ಮಾಡಿಕೊಳ್ಳು.

೩) ಅಭವ್ಯ ಮಿಥ್ಯಾದೃಷ್ಟಿ ಜೀವರುಗಳು ಅಪಕ್ವ ಕಾಳಿನಂತಿದ್ದಾರೆ. ಅದರಲ್ಲಿ ಕೆಲವು ಜೀವರುಗಳು ಕ್ರಿಯಾಕಾಂಡ ಮಾಡುವರು, ಶರೀರವು ತುಂಡುತುಂಡಾಗಿ ಹೋದರೂ ಕೂಡ ಕ್ರೋಧ ಮಾಡುವುದಿಲ್ಲ , ದಯೆ ಪಾಲಿಸುವರು, ಮುನಿಯಾಗುವರು ಆದರೆ ಆತ್ಮ ಹೇಗಿದ್ದಾನೆಂಬುದರ ಜ್ಞಾನ ಮಾಡಿಕೊಳ್ಳದಂಥ ಅಭವ್ಯ ಮಿಥ್ಯಾದೃಷ್ಟಿಯ ಅಜ್ಞಾನವು ಅನಾದಿ ಅನಂತ ಕಾಲದವರೆಗೆ ಇರುವುದಿದೆ. ಇಂಥ ಜೀವರುಗಳು ಕೂಡ ಇದ್ದಾರೆ. ಅವರಿಗೆ ಅಂಥ ಜೀವಾಸ್ತಿಕಾಯದ ಯೋಗ್ಯತೆಯಿದೆ.

೪) ಭವ್ಯ ಮಿಥ್ಯಾದೃಷ್ಟಿ ಜೀವರುಗಳ ಅಜ್ಞಾನವು ಅನಾದಿ ಸಾಂತವಿದೆ. ಅಜ್ಞಾನವು ಅನಾದಿಯಿಂದ ಇದೆ, ಆದರೆ ಯೋಗ್ಯತೆಯುಳ್ಳ ಜೀವನು ಆತ್ಮನ ಜ್ಞಾನ ಮಾಡಿಕೊಂಡು ಅಜ್ಞಾನದ ನಾಶ ಮಾಡುವನು, ಅದಕ್ಕಾಗಿ ಅನಾದಿ ಸಾಂತವೆಂದು ಹೇಳಿದೆ. ಪರದ ಕಾರಣ ಅಥವಾ ಕರ್ಮದ ಕಾರಣದಿಂದಿಲ್ಲ , ಆದರೆ ಅದು ಜೀವಾಸ್ತಿಕಾಯದ ಜ್ಞಾನಗುಣದ ಪರ್ಯಾಯದ ಸ್ವಭಾವವಿದೆ.

ಶುದ್ಧ ಜೀವದ್ರವ್ಯದಲ್ಲಿ ಕೇವಲಜ್ಞಾನದ ಅಪೇಕ್ಷೆಯಿಂದ ಅನಂತ ಜ್ಞಾನವಿದೆ. ಸಮ್ಯಗ್ದೃಷ್ಟಿ ಜೀವದಲ್ಲಿ ಕ್ಷಾಯೋಪಶಮಿಕ ಜ್ಞಾನದ ಅಪೇಕ್ಷೆಯಿಂದ ಸಾಂತ ಜ್ಞಾನವಿದೆ. ಅಭವ್ಯ ಮಿಥ್ಯಾದೃಷ್ಟಿ ಜೀವದ ಅಪೇಕ್ಷೆಯಿಂದ ಅನಂತ ಅಜ್ಞಾನವಿದೆ. ಭವ್ಯ ಮಿಥ್ಯಾದೃಷ್ಟಿ ಜೀವದ ಅಪೇಕ್ಷೆಯಿಂದ ಸಾಂತ ಅಜ್ಞಾನವಿದೆ.

ಸಿದ್ಧ ಜೀವರುಗಳಲ್ಲಿ ಮೂರು ಕಾಲದ ಸಮಸ್ತ ಪದಾರ್ಥಗಳನ್ನು ತಿಳಿಯುವ ರೂಪದ ಜ್ಞಾನವಿರುವುದರಿಂದ ಅಲ್ಲಿ ಜ್ಞಾನಭಾವವೆಂದು ಹೇಳಲಾಗುವುದು. ಮತ್ತು ಇಂದ್ರಿಯಗಳ ಹಾಗೂ ಮನಸ್ಸಿನ ಅವಲಂಬನದಿಂದ ಪ್ರಕಟವಾಗುವ ಕ್ಷಾಯೋಪಶಮಿಕ ಜ್ಞಾನದ್ದು ಸಿದ್ಧರಲ್ಲಿ ಅಭಾವವಿದೆ. ವಿನಾಶೀ ಜ್ಞಾನದ ಅಪೇಕ್ಷೆಯಿಂದ ಅಜ್ಞಾನ ಭಾವವೆಂದು ತಿಳಿಯುವುದು. ಇವೆರಡು ಪ್ರಕಾರ ಎಂದರೆ ಜ್ಞಾನ ಮತ್ತು ಅಜ್ಞಾನಭಾವಗಳು ಸಿದ್ಧದಶೆಯಲ್ಲಿ ಜೀವವು ಅಖಂಡವಿರದಿದ್ದರೆ ಹೇಗೆ ಸಾಧ್ಯವಿದೆ ?

**ಭಾವಾರ್ಥ :-** ಅಜ್ಞಾನೀ ಜೀವರುಗಳು ಮೋಕ್ಷಾವಸ್ಥೆಯಲ್ಲಿ ಜೀವದ ನಾಶವನ್ನು ಮನ್ನಿಸುತ್ತಾರೆ ಅವರಿಗೆ ತಿಳಿಸಿಕೊಡುವುದಕ್ಕಾಗಿ ಎಂಟು ಭಾವಗಳನ್ನು ಹೇಳಿದ್ದಾರೆ ಈ ಎಂಟು ಭಾವಗಳಿಂದ ಮೋಕ್ಷದಲ್ಲಿ ಜೀವದ ಅಸ್ತಿತ್ವವು ಸಿದ್ಧವಾಗುತ್ತದೆ, ಈ ಎಂಟು ಭಾವಗಳಿಲ್ಲದಿದ್ದರೆ ಜೀವದ್ರವ್ಯದ ಅಭಾವವಾಗುವುದು ಮತ್ತು ಜೀವದ್ರವ್ಯದ ಅಭಾವವಾದರೆ ಸಂಸಾರ ಮತ್ತು ಮೋಕ್ಷ ಎರಡೂ ಅವಸ್ಥೆಗಳ ಅಭಾವ ಮನ್ನಿಸುವ ಪ್ರಸಂಗ ಬರುವುದು ಅದಕ್ಕಾಗಿ ಎಂಟೂ ಭಾವಗಳ ಜ್ಞಾನ ಮಾಡಿಕೊಳ್ಳಬೇಕಾಗುವುದು.

೧) ಅವಿನಾಶೀ ಸ್ವಭಾವ, ೨) ವಿನಾಶೀ ವ್ಯಯಭಾವ, ೩) ಶುದ್ಧರೂಪದಿಂದ ಪರಿಣಮಿಸುವ ಭವ್ಯಭಾವ, ೪) ಶುದ್ಧತೆಯ ಅಭಾವರೂಪದ ಅಭವ್ಯಭಾವ, ೫) ಪರದಿಂದ ರಿಕ್ತರೂಪದ ಶೂನ್ಯಭಾವ, ೬) ತನ್ನ ಜ್ಞಾನ-ದರ್ಶನಾದಿಗಳಿಂದ ಪರಿಪೂರ್ಣವಾದಂಥ ಅಶೂನ್ಯಭಾವ, ೭) ಸಮಸ್ತ ಪದಾರ್ಥಗಳನ್ನು ಪರಿಪೂರ್ಣ ತಿಳಿಯುವರೂಪವಾದಂಥ ಜ್ಞಾನಭಾವ ಮತ್ತು ೮) ಅಪೂರ್ಣಜ್ಞಾನರೂಪವಾಗಿ ಆಗದಿರುವಂಥ ಅಜ್ಞಾನಭಾವ. ಈ ಎಂಟು ಭಾವಗಳಿಂದ ಜೀವನ ಅಸ್ತಿತ್ವವು ಸಿದ್ಧವಾಗುತ್ತದೆ ಮತ್ತು ಸಿದ್ಧರಲ್ಲಿ ಜೀವದ ಅಸ್ತಿತ್ವವನ್ನು ಮನ್ನಿಸುವುದರಿಂದ ಈ ಎಂಟರ ಅಸ್ತಿತ್ವವು ಉಳಿದುಕೊಳ್ಳುತ್ತದೆ.

ಈ ಪ್ರಕಾರ ಸಿದ್ಧ ಜೀವರುಗಳ ಸ್ವಭಾವವಿದ್ದು ಅದು ಅವರ ಅಸ್ತಿಕಾಯದ ಸ್ವರೂಪವಿದೆಯೆಂದು ಯಥಾರ್ಥವಾಗಿ ಜ್ಞಾನ ಮಾಡಿಕೊಳ್ಳಬೇಕಾಗುವುದು.

ಜೀವನು ಅಸಂಖ್ಯ ಪ್ರದೇಶಿಯಾಗಿದ್ದರೂ ಕೂಡ ಪರ್ಯಾಯದಲ್ಲಿ ಅಂತರವಾಗುತ್ತದೆ ಅದು ಕೂಡ ತನ್ನ ಅಸ್ತಿಕಾಯದ ಸ್ವರೂಪವಿದೆ. ಅದೇನು ಪರದ ಕಾರಣದಿಂದಿಲ್ಲವೆಂಬುದನ್ನು ತಿಳಿಸಿಕೊಡುತ್ತಾರೆ,-

**ಕಮ್ಮಾಣಂ ಫಲಮೇಕ್ಕೋ ಏಕ್ಕೋ ಕಜ್ಜಂ ತು ಣಾಣಮಧ ಏಕ್ಕೋ ।**
**ಚೇದಯದಿ ಜೀವರಾಸೀ ಚೇದಗಭಾವೇಣ ತಿವಿಹೇಣ ॥೩೮॥**

**ತ್ರಿವಿಧ ಚೇತಕಭಾವದಿಂದೊಂದು ಜೀವರಾಸಿಕರ್ಮಗಳಫಲವ ಮೇಣೊಂದು ।**
**ಜೀವರಾಸಿ ಕಾರ್ಯವನು ಮತ್ತೊಂದು ಜೀವರಾಸಿ ಜ್ಞಾನವನು ಚೇತಿಸುವುದು ॥೩೮॥**

೧) ಒಂದು ಜೀವರಾಶಿಯು ಕರ್ಮಗಳ ನಿಮಿತ್ತದಿಂದ ಸುಖ-ದುಃಖರೂಪದ ಫಲವನ್ನು ಭೋಗಿಸುತ್ತದೆ. ಇಂಥ ಜೀವಗಳು ಅನಂತವಿವೆ. ಪೃಥ್ವಿ, ಆಪ, ತೇಜ, ವಾಯು, ವನಸ್ಪತಿ ಮೊದಲಾದ ಜೀವಗಳು, ಆಲೂಗಡ್ಡೆ, ಗೆಣಸು ಮೊದಲಾದ ಕಂದಮೂಲದ ಜೀವಗಳು ಹರ್ಷವಿಷಾದಗಳನ್ನನುಭವಿಸುತ್ತವೆ. ಆಲೂಗಡ್ಡೆಯ ಒಂದು ಚಿಕ್ಕ ತುಂಡಿನಲ್ಲಿ ಅಸಂಖ್ಯ ಶರೀರಗಳಿದ್ದು ಒಂದು ಶರೀರದಲ್ಲಿ ಅನಂತ ಆತ್ಮಗಳಿವೆ. ಸ್ಥಾವರ ಜೀವಗಳು ಸುಖ-ದುಃಖವನ್ನು ಅನುಭವಿಸುತ್ತವೆ ತಮ್ಮ ಜ್ಞಾನಸ್ವಭಾವವನ್ನು ಮರೆತುಬಿಟ್ಟು ಹರ್ಷಶೋಕವನ್ನನುಭವಿಸುತ್ತವೆ. ಅಲ್ಲಿ ರಾಗ-ದ್ವೇಷದ ಕರ್ತೃತ್ವರೂಪದ ಕರ್ಮಚೇತನಾದ ಮುಖ್ಯತೆಯಿಲ್ಲ, ಆದರೆ ಗೌಣತೆಯಿರುವುದರಿಂದ ಹರ್ಷಶೋಕವನ್ನು ಮುಖ್ಯರೂಪದಿಂದ ಭೋಗಿಸುತ್ತವೆಯೆಂದು ಹೇಳಿದೆ. ಆ ನಿತ್ಯನಿಗೋದದ ಜೀವಗಳು ಇದುವರೆಗೆ ವ್ಯವಹಾರ ರಾಶಿಯಲ್ಲಿ ಬಂದೇ ಇಲ್ಲ, ಆದರೆ ಅನಾದಿಕಾಲದಿಂದ ಎಲ್ಲಿವೆ ಅವು ಯಾವುದೇ ಕರ್ಮದ ಕಾರಣದಿಂದ ಅಲ್ಲಿವೆಯೆಂದಿಲ್ಲ. ಆ ಜೀವರಾಶಿಯ ಪರ್ಯಾಯಸ್ವಭಾವವೇ ಹಾಗಿದೆ. ಇಲ್ಲಿ ಕರ್ಮಫಲಚೇತನಾದ ಮುಖ್ಯತೆಯಿದೆ

೨) ಒಂದು ಜೀವರಾಶಿಯು ಸ್ವಲ್ಪ ವೀರ್ಯವನ್ನು ತಿರುಗಿಸಿ, ರಾಗ-ದ್ವೇಷಾದಿ ಮಾಡುವೆನೆಂಬ ಕರ್ತೃತ್ವದ ಮುಖ್ಯತೆಯಿಂದ ಸುಖ-ದುಃಖಗಳನ್ನು ಭೋಗಿಸುತ್ತವೆ. ಇಲ್ಲಿ ಕರ್ಮಚೇತನಾವು ಮುಖ್ಯವಿದೆ. ಇರುವೆ, ಮನುಷ್ಯ, ದೇವ, ನಾರಕಿ ಮೊದಲಾದ ಜೀವಗಳಲ್ಲಿ ಸ್ವಲ್ಪ ಮಾಡುವೆನು, ರಾಗ-ದ್ವೇಷ ಮಾಡುವೆನು, ಪರದಲ್ಲಿ ಮಾಡುವೆನೆಂಬ ಕರ್ತೃತ್ವದ ಮುಖ್ಯತೆಯಿದೆ. ಹೀಗಂತೂ ಆ ಜೀವಾಸ್ತಿಕಾಯದ ಸ್ವಭಾವವಿದೆ. ಯಾವ ಈಶ್ವರನಂತೂ ಜೀವಗಳನ್ನು ರಚಿಸಿಲ್ಲ, ಆದರೆ ಕರ್ಮದ ಕಾರಣದಿಂದ ಹೀಗೆ ಪರ್ಯಾಯದ ಸ್ವಭಾವವಿದೆಯೆಂದು ಕೂಡ ಇಲ್ಲ. ಯಾವ ಜೀವನು ಪರದಲ್ಲಿ ಮಾಡುವ ಸಾಧ್ಯತೆಯಿಲ್ಲ ಆದರೆ ಅಜ್ಞಾನಿಯು ಮಿಥ್ಯಾಭ್ರಾಂತಿ ಮಾಡುತ್ತಾನೆ.

ಹರ್ಷವಿಷಾದಗಳನ್ನು ಅನುಭವಿಸುವುದು ಅದು ಶರೀರದ ಧರ್ಮವಿದೆಯೆಂದು ಕೆಲವರು ಹೇಳುತ್ತಾರೆ. ಹೇಗೆಂದರೆ ದೇಹದ ದಂಡವನ್ನು ದೇಹ ಭೋಗಿಸುತ್ತದೆ ಮತ್ತೆ ಕೆಲವರು ಹರ್ಷ-ವಿಷಾದ, ರಾಗ-ದ್ವೇಷಗಳನ್ನು ಮಾಯೆಯೆಂದು ಹೇಳುತ್ತಾರೆ ಅದೆಲ್ಲವು ಅಜ್ಞಾನ ಭಾವವಿದೆ. ಶರೀರವು ಜಡವಿದ್ದು ಅದನ್ನು ಭೋಗಿಸುವುದಾಗುವುದಿಲ್ಲ. ಮತ್ತು ಹರ್ಷ-ಶೋಕ, ರಾಗ-ದ್ವೇಷಗಳು ನಿನ್ನ ಪರ್ಯಾಯದಲ್ಲಿ ಸ್ವಲ್ಪ ಕೂಡ ಇಲ್ಲವೆಂದು ಮನ್ನಿಸಹೋದರೆ ನಿನ್ನ ಅಸ್ತಿಕಾಯವು ಹಾರಿಹೋಗುವುದು. ರಾಗ-ದ್ವೇಷ, ಮಾಡಿದರೂ ಕೂಡ ತಮ್ಮಲ್ಲಿ ಮತ್ತು ಹರ್ಷ-ವಿಷಾದಗಳನ್ನು ಭೋಗಿಸಿದರೂ ಕೂಡ ತಮ್ಮಲ್ಲಿ ತಮ್ಮ ಕಾರಣದಿಂದ ಇದೆ. ಹೀಗೆ ಜೀವಾಸ್ತಿಕಾಯದ ಪರ್ಯಾಯಭಾವವಿದೆಯೆಂದು ಜ್ಞಾನ ಮಾಡಿಕೊಂಡು ಆ ಪರ್ಯಾಯವು ಆದರಣೀಯವಿಲ್ಲವೆಂದು ಅದರ ಮೇಲಿಂದ ದೃಷ್ಟಿ ತೆಗೆದು ತನ್ನ ಶುದ್ಧ ಚೇತನದ ಮೇಲೆ ದೃಷ್ಟಿಹಾಕುವುದು ಅದು ಧರ್ಮವಿದೆ.

ಆತ್ಮನು ಏನನ್ನು ಅನುಭವಿಸುತ್ತಾನೆಂಬುದರ ವರ್ಣನೆ ನಡೆಯುತ್ತಿದೆ-

ಸ್ಥಾವರ ಜೀವಗಳ ಒಂದು ಜೀವರಾಶಿಯು ಅದು ಸುಖ-ದುಃಖರೂಪದ ಕರ್ಮಫಲವನ್ನು ಭೋಗಿಸುತ್ತದೆ. ಎಂದರೆ ಹರ್ಷ-ವಿಷಾದವನ್ನು ಅನುಭವಿಸುತ್ತದೆ. ಪೃಥ್ವೀ ಮೊದಲಾದ ಸ್ಥಾವರ ಜೀವಗಳು ತಮ್ಮ ಶರೀರವನ್ನು ಶಸ್ತ್ರವನ್ನು

ಅಥವಾ ಸಂಯೋಗವನ್ನು ಅನುಭವಿಸುವುದಿಲ್ಲ . ಪರವಸ್ತುವನ್ನು ಆ ಜೀವಗಳು ಸ್ಪರ್ಶಿಸುವುದೇ ಇಲ್ಲ , ಸ್ಥಾವರ ಜೀವಗಳಿಗೆ ಛೇದನ-ಭೇದನದ ದುಃಖವು ಅಧಿಕವಿದೆಯೆಂದು ಶಾಸ್ತ್ರದಲ್ಲಿ ಕಥನವು ಬಂದಿದೆ, ಆದರೆ ಆ ಕಥನವು ನಿಮಿತ್ತದಿಂದಿದೆ ಛೇದನ-ಭೇದನದ ದುಃಖವಿಲ್ಲ . ಶಸ್ತ್ರವು ಅದನ್ನು ಸ್ಪರ್ಶಿಸುವುದೇ ಇಲ್ಲ ಆ ಜೀವಗಳು ತಮ್ಮ ಜ್ಞಾನಸ್ವಭಾವವನ್ನು ಮರೆತು ಪರದಲ್ಲಿ ಸುಖವಿದೆಯೆಂಬ ವಿಪರೀತ ಮನ್ನಣೆಯ ಕಾರಣದಿಂದ ಹರ್ಷ-ವಿಷಾದವನ್ನು ಅನುಭವಿಸುತ್ತಿವೆ. ಆದರೆ ಯಾವುದೇ ಬಾಹ್ಯ ಸಂಯೋಗವನ್ನು ಅಥವಾ ಶರೀರವನ್ನು ಭೋಗಿಸುವಂತೆ ಅವುಗಳ ಸ್ವಭಾವವಿಲ್ಲ. ಅಲ್ಲಿ ಕರ್ಮಫಲಚೇತನದ ಮುಖ್ಯತೆಯಿದೆ. ಏಕೇಂದ್ರಿಯ ಜೀವಗಳು ಮುಖ್ಯವಾಗಿ ಹರ್ಷ-ವಿಷಾದಗಳನ್ನು ಭೋಗಿಸುತ್ತಲಿವೆ.

ತ್ರಸ ಜೀವಗಳ ಒಂದು ಜೀವರಾಶಿಯಿದೆ ಅದು ಪರದ ಹಾಗೂ ರಾಗದ ಕರ್ತೃತ್ವರೂಪದ ಅಭಿಮಾನದೊಡನೆ ರಾಗ-ದ್ವೇಷಗಳನ್ನು ಭೋಗಿಸುತ್ತದೆ. ಅಲ್ಲಿ ರಾಗ-ದ್ವೇಷಗಳ ಕರ್ತೃತ್ವದ ಮುಖ್ಯತೆಯಿದೆ ಎಂದರೆ ಕರ್ಮಚೇತನಾದ ಮುಖ್ಯತೆಯಿದೆ. ಇರುವೆ, ಆನೆ, ಮನುಷ್ಯ, ದೇವ, ನಾರಕಿ ಮೊದಲಾದ ಜೀವಗಳು ರಾಗ ಮಾಡುವರೂಪ ಭಾವವನ್ನು ತಮ್ಮಲ್ಲಿ ಮಾಡುತ್ತವೆ, ಎಂದರೆ ಶುಭಾಶುಭ ಭಾವಗಳನ್ನು ಅಥವಾ ನಾನು ಪರದಲ್ಲಿ ಮಾಡುವ ಸಾಧ್ಯತೆಯಿದೆಯೆಂಬ ಅಭಿಮಾನದ ಭಾವಗಳನ್ನು ಮಾಡಬಹುದು, ಆದರೆ ಅದರ ಕಾರಣ ಶರೀರಾದಿ ಜಡಪದಾರ್ಥಗಳನ್ನು ಅಥವಾ ಬೇರೆ ಚೇತನದ್ರವ್ಯದ ಅವಸ್ಥೆಯನ್ನು ಮಾಡುವ ಸಾಧ್ಯತೆ ಎಂದರೆ ಇತರದ ಕಾರ್ಯ ಮಾಡುವ ಸಾಧ್ಯತೆಯು ಅದು ಅವುಗಳ ಅಧಿಕಾರದ ಮಾತಲ್ಲ ಪುದ್ಗಲದ್ರವ್ಯವು ಅದು ಅಸ್ತಿಯಿದೆ ಮತ್ತು ಆ ಪರಮಾಣುಗಳ ಸ್ಕಂಧವು ಅದು ಕಾರಣವಿದೆ. ಅದು ತನ್ನಿಂದ ಅಸ್ತಿಕಾಯರೂಪದಿಂದ ಆದದ್ದಿದೆ. ಅಜ್ಞಾನೀ ಜೀವನು ಭ್ರಾಂತಿಯಿಂದ ಈ ಪುದ್ಗಲದ ಅವಸ್ಥೆಯು ನನ್ನಿಂದಾಗಿದೆಯೆನ್ನುತ್ತಾನೆ ಸಿಂಹವು ಹುಲ್ಲೆಯನ್ನು ತಿನ್ನುತ್ತಿದ್ದರೆ ಹುಲ್ಲೆಯ ಶರೀರದ ಅವಸ್ಥೆಯನ್ನು ಸಿಂಹದ ಜೀವವು ಮಾಡುವ ಸಾಧ್ಯತೆಯಿಲ್ಲ . ಭಗವಂತರ ದರ್ಶನ ಮಾಡುವ ಸಮಯದಲ್ಲಿ ಕೈ ಮುಗಿಯುವ ಕ್ರಿಯೆಯಾಗುವುದನ್ನು ಜೀವನು ಮಾಡುವ ಸಾಧ್ಯತೆಯಿಲ್ಲ . ಕೈಗಳು ಪುದ್ಗಲಾಸ್ತಿಕಾಯವಿದ್ದು ಆ ಕಾರ್ಯವು ಜೀವದ ಕಾರಣದಿಂದಿಲ್ಲ . ಒಂದು ಸಾವಿರ ಯೋಜನದ ಮತ್ಸ್ಯವು ಮುಖ ತೆರೆಯುವ ಕಾರ್ಯವಾಗುವುದು ಆ ಮುಖ ಅಗಲವಾಗುವ ಕಾರ್ಯವು ಜೀವದ ಆಧೀನವಿಲ್ಲ ಜೀವವು ಪರವನ್ನು ಮಾಡುವ ರೂಪದ ಭಾವ ಅಥವಾ ಶುಭಾಶುಭ ಭಾವ -ರಾಗ - ದ್ವೇಷ ಮಾಡಿ ನಾಲ್ಕೂ ಗತಿಯಲ್ಲಿ ಸುತ್ತುತ್ತಿದೆ, ಆದರೆ ಪರದಲ್ಲಿ ಮಾಡುತ್ತೇನೆಂಬುದು ಮೂರು ಕಾಲದಲ್ಲೂ ಸಾಧ್ಯವಿಲ್ಲ ಜೀವದಲ್ಲಿ ಚೇತನಾನಾಮದ ತ್ರಿಕಾಲಗುಣವಿದೆ, ಅದರ ಪರ್ಯಾಯದಲ್ಲಿ ಜಾಗೃತ ಅಥವಾ ಅಜಾಗೃತವಿರುವುದು. ಆದರೆ ಪರದಲ್ಲಿ ಮಾಡುವುದು ಎಂದೂ ಸಾಧ್ಯವಿಲ್ಲ . ಒಂದು ಜೀವರಾಸಿಯು ಹರ್ಷ-ವಿಷಾದದ ಮುಖ್ಯತೆಯಿಂದ ಅಜಾಗೃತವಿರುವುದು ಮತ್ತು ಒಂದು ಜೀವರಾಸಿಯು ರಾಗ-ದ್ವೇಷಗಳನ್ನು ಮಾಡುವುದರ ಮುಖ್ಯತೆಯಿಂದ ಅಜಾಗೃತವಿರುವುದು. ಈಗ ಒಂದು ಜೀವರಾಸಿಯು ಕೇವಲೀ ಮತ್ತು ಸಿದ್ಧರದಿದೆ ಅದನ್ನು ಹೇಳುತ್ತಾರೆ.

೩) ಶುದ್ಧ ಜ್ಞಾನವನ್ನೇ ಅನುಭವಿಸುವಂಥದು ಒಂದು ಜೀವರಾಶಿಯಿದೆ. ಅವರು ಕೇವಲೀ ಹಾಗೂ ಸಿದ್ಧರಿದ್ದಾರೆ. ನಾಲ್ಕನೆಯ ಗುಣಸ್ಥಾನದಲ್ಲಿರುವ ಧರ್ಮೀ ಜೀವನಿಗೆ ಆತ್ಮನ ಅರಿವಿದೆ, ನಾನು ಶುದ್ಧ ಚಿದಾನಂದಸ್ವರೂಪನಿದ್ದೇನೆ. ಶರೀರಾದಿಗಳದ್ದು ಮಾಡುವುದು ಅದು ನನ್ನ ಕೆಲಸವಿಲ್ಲ , ರಾಗ-ದ್ವೇಷಗಳು ಅವು ನನ್ನ ಸ್ವರೂಪವಿಲ್ಲವೆಂಬ ಅರಿವಾದೊಡನೆ ಜ್ಞಾನಚೇತನಾದ ಆರಂಭವಾಗಿ ಹೋಗುವುದು, ಆದರೆ ಅಲ್ಲಿ ಸಾಧಕನಿಗೆ ಅಸ್ಥಿರತೆಯಿಂದ ರಾಗ-ದ್ವೇಷಗಳಿರುವುದರಿಂದ ಅವನ ಜ್ಞಾನಚೇತನವನ್ನು ಗೌಣಮಾಡಿ ಪೂರ್ಣ ಜ್ಞಾನಚೇತನವು ಪ್ರಕಟವಾಗಿರುವಂಥ ಸಿದ್ಧ ಹಾಗೂ ಕೇವಲಿಗಳನ್ನು ಇಲ್ಲಿ ಸ್ವೀಕರಿಸಲಾಗಿದೆ. ಈ ಪ್ರಕಾರ ಕೇವಲೀ ಭಗವಂತರು ಮತ್ತು ಸಿದ್ಧ ಭಗವಂತರು ತಮ್ಮ ಜ್ಞಾನದ ಅನುಭವ ಮಾಡುತ್ತಾರೆ. ಸ್ವರ್ಗ-ನರಕಾದಿಗಳನ್ನು ನೋಡುತ್ತಾರೆ ಆದಾಗ್ಯೂ ಅವರಿಗೆ ರಾಗ-ದ್ವೇಷಗಳಾಗಲಿ ಅಥವಾ ಹರ್ಷ-ಶೋಕಗಳಾಗಲಿ ಆಗುವುದಿಲ್ಲ.

ಈ ಪ್ರಕಾರ ಕರ್ಮಚೇತನಾ, ಕರ್ಮಫಲಚೇತನಾ ಮತ್ತು ಜ್ಞಾನಚೇತನಾವೆಂದು ಮೂರು ಪ್ರಕಾರ ಹೇಳಲಾಯಿತು, ಎಷ್ಟು ಜೀವಗಳಿವೆ ಅವೆಲ್ಲವು ಈ ಮೂರರೊಳಗಿಂದ ಒಂದಿಲ್ಲೊಂದು ಚೇತನಾಸಹಿತವಾಗಿವೆ. ಜೀವನು ಬೇಕಾದರೆ ಜ್ಞಾನ ಮಾಡುವನು, ಬೇಕಾದರೆ ರಾಗ-ದ್ವೇಷ ಮಾಡುವನು ಅಥವಾ ಹರ್ಷ-ವಿಷಾದಗಳನ್ನು ಅನುಭವಿಸುವನು. ಈ ಮೂರನ್ನು ಹೊರತುಪಡಿಸಿ ಬೇರೆ ಕಾರ್ಯ ಮಾಡಲು ಜೀವನಿಗೆ ಸಾಮರ್ಥ್ಯವಿಲ್ಲ.

ಈ ಪ್ರಕಾರ ಆತ್ಮನಲ್ಲಿ ಚೈತನ್ಯಗುಣವಿದೆಯೆಂಬುದನ್ನು ತಿಳಿದುಕೊಳ್ಳಬೇಕು.

ಇದು ಪಂಚಾಸ್ತಿಕಾಯಗಳ ವರ್ಣನೆಯಿದೆ, ಪ್ರತಿಯೊಂದು ಅಸ್ತಿಕಾಯವು ಸ್ವತಂತ್ರವಿದೆಯೆಂದು ತಿಳಿಸಲಾಗಿದೆ, ನೀನು ಜೀವಾಸ್ತಿಕಾಯನಿರುವೆ. ಪುದ್ಗಲಾಸ್ತಿಕಾಯವು ಅದು ನಿನ್ನಿಂದ ಭಿನ್ನವಿದೆ, ಅದರಲ್ಲಿ ನೀನು ಏನನ್ನೂ ಮಾಡುವ ಸಾಧ್ಯತೆಯಿಲ್ಲ. ನೀನು ನಿನ್ನಲ್ಲಿ ರಾಗ-ದ್ವೇಷದ ಪರಿಣಾಮ ಮಾಡುವೆ ಅದು ನಿನ್ನಲ್ಲಿದೆ, ಪರದಲ್ಲಿಲ್ಲ. ಪರದ ಕಾರಣ ಕೂಡ ಇಲ್ಲವೆಂದು ಇಲ್ಲಿ ಜೀವಾಸ್ತಿಕಾಯದ ಪರ್ಯಾಯದ ಯಥಾರ್ಥ ಜ್ಞಾನ ಮಾಡಿಸಿ ಪೂರ್ಣ ಜೀವಾಸ್ತಿಕಾಯದ ಪ್ರಮಾಣಜ್ಞಾನ ಮಾಡಿಸಿದೆ. ಹರ್ಷ-ವಿಷಾದ ಮತ್ತು ರಾಗ-ದ್ವೇಷಗಳು ಚೇತನಾದ ಸತ್ತಾದಲ್ಲಿ ಆಗುತ್ತವೆ. ಜಡದ ಸತ್ತಾದಲ್ಲಿ ಅಥವಾ ಜಡದ ಕಾರಣದಿಂದ ಆಗುವುದಿಲ್ಲ ಪರ್ಯಾಯದಲ್ಲಿ ದೋಷವಾಗುತ್ತದೆ ಅದು ನಿನ್ನದಿದೆ. ಆದರೆ ಅದು ಒಂದು ಸಮಯದ್ದಿದೆಯೆಂದು ಪರ್ಯಾಯದ ಜ್ಞಾನ ಮಾಡಿಸಿದೆ. ಜತೆ ಜತೆಯಲ್ಲೇ ಜ್ಞಾನ ಮೊದಲಾದ ಗುಣಗಳು ಶುದ್ಧವಿವೆಯೆಂದು, ದ್ರವ್ಯ-ಗುಣಗಳು ಶುದ್ಧವಿವೆಯೆಂದು ದ್ರವ್ಯ-ಗುಣಗಳ ಜ್ಞಾನ ಕೂಡ ಮಾಡಿಸಿದೆ. ಅಲ್ಲಿ ಜ್ಞಾನಪ್ರಧಾನವಾದ ಕಥನವಿದೆ. ಪರದಿಂದ ಭಿನ್ನವಾಗುವುದಿದೆ, ರಾಗವು ನಿನ್ನ ಶುದ್ಧದ್ರವ್ಯದಲ್ಲಿ ಇಲ್ಲವೆಂದು ಜ್ಞಾನ ಮಾಡಿಸಿ ತ್ರಿಕಾಲೀ ದ್ರವ್ಯದ ಕಡೆಗೆ ಪ್ರವೃತ್ತಿ ಮಾಡಿಸುವ ಉದ್ದೇಶವಿದೆ.

ಸಮಯಸಾರದಲ್ಲಿ ದೃಷ್ಟಿ ಪ್ರಧಾನ ಕಥನವಿದೆ. ಸಮಯಸಾರದಲ್ಲಿ ನಾಲ್ಕನೆಯ ಗುಣಸ್ಥಾನದ ಧರ್ಮಾತ್ಮ ಜೀವನಿಗೆ ನಾನು ಶುದ್ಧ ಆತ್ಮನಿದ್ದೇನೆಂಬ ಅರಿವಾಗಿದೆ ವಿಕಾರವು ನನ್ನ ಸ್ವರೂಪವಲ್ಲವೆಂಬ ಅರಿವಾದೊಡನೆ ಜ್ಞಾನಚೇತನವೆಂದು ಹೇಳಿದೆ ಮತ್ತು ಅಲ್ಪರಾಗ-ದ್ವೇಷಗಳಾಗುತ್ತವೆ ಅವುಗಳ ಕರ್ತೃವು ಧರ್ಮಾತ್ಮ ಜೀವವಿಲ್ಲವೆಂದು ಹೇಳಿದೆ. ಮತ್ತು ಆ ರಾಗ-ದ್ವೇಷಗಳಾಗುತ್ತವೆ ಅವನ್ನು ಪುದ್ಗಲದ ಕಾರ್ಯವೆಂದು ಗಣಿಸಲಾಗಿದೆ. ಯಾವ ಪ್ರಕಾರ ಮಣ್ಣಿನ ಮುದ್ದೆ ವಿಸ್ತಾರವಾಗಿ ಕೊಡದ ರೂಪವಾಗಿದೆ ಅದೇ ಪ್ರಕಾರ ಜಡಕರ್ಮವು ವಿಸ್ತಾರವಾಗಿ-ವ್ಯಾಪಕವಾಗಿ ರಾಗ-ದ್ವೇಷರೂಪದ ಕಾರ್ಯ ಮಾಡುತ್ತದೆ. ಆತ್ಮನು ವಿಸ್ತಾರಗೊಂಡು ರಾಗ-ದ್ವೇಷ ಅಥವಾ ಹರ್ಷ-ವಿಷಾದರೂಪದ ಕಾರ್ಯ ಮಾಡುವುದಿಲ್ಲ. ಇದು ಅಪೇಕ್ಷಾದ ಕಥನವಿದ್ದು ಇದನ್ನು ತಿಳಿದುಕೊಳ್ಳಬೇಕಾಗುವುದು. ಸಮಯಸಾರದಲ್ಲಿ ದೃಷ್ಟಿ ಪ್ರಧಾನವಾದ ಕಥನವಿದ್ದು ದೃಷ್ಟಿಯು ಪರಪದಾರ್ಥಗಳನ್ನಂತೂ ಸ್ವೀಕಾರ ಮಾಡುವುದಿಲ್ಲ. ಆದರೆ ರಾಗ-ದ್ವೇಷಗಳನ್ನು ಕೂಡ ಸ್ವೀಕಾರ ಮಾಡುವುದಿಲ್ಲ. ನಾನು ಪರಿಪೂರ್ಣ ಶುದ್ಧದ್ರವ್ಯನಿದ್ದೇನೆಂದು ಅದು ಕೇವಲ ಜ್ಞಾತಾ-ದೃಷ್ಟಾ ಸ್ವಭಾವವನ್ನೇ ಸ್ವೀಕಾರ ಮಾಡುತ್ತದೆ, ಹೀಗೆ ಶುದ್ಧ ಚೈತನ್ಯ ಸ್ವಭಾವದ ಅಧಿಕತೆಯಲ್ಲಿ-ಮುಖ್ಯತೆಯಲ್ಲಿ ರಾಗ-ದ್ವೇಷಗಳನ್ನು ಗೌಣ ಮಾಡಲಾಗಿದೆ, ರಾಗ-ದ್ವೇಷಗಳನ್ನು ಅಭೂತಾರ್ಥವೆಂದು ಹೇಳಿದೆ. ಕರ್ಮದ ಕಾರ್ಯವೆಂದು ಹೇಳಿದೆ ಅದು ಆತ್ಮನ ಕಾರ್ಯವಿಲ್ಲವೇ ಇಲ್ಲವೆಂದು ದೃಷ್ಟಿಯ ಬಲದಿಂದ ಹೇಳಲಾಗಿದೆ. ಆತ್ಮನ ವಿಸ್ತಾರವು ಜ್ಞಾತಾ-ದೃಷ್ಟಾತನ ಮತ್ತು ವೀತರಾಗತೆಯಿದೆ ಆದರೆ ಆತ್ಮನ ವಿಸ್ತಾರವು ರಾಗ-ದ್ವೇಷಗಳಿಲ್ಲ-ಅಲ್ಲಿ ದೃಷ್ಟಿಯ ಮುಖ್ಯತೆಯಿದೆ. ನಿಮಿತ್ತ ಮತ್ತು ರಾಗ-ದ್ವೇಷಗಳ ಪರ್ಯಾಯಗಳನ್ನು ಗೌಣ ಮಾಡಿ, ಜ್ಞಾನಿಯ ಹರ್ಷ-ವಿಷಾದಗಳನ್ನು ಅಥವಾ ಆರ್ತ-ರೌದ್ರ ಧ್ಯಾನಗಳನ್ನು ಕೂಡ ಪುದ್ಗಲದ ಕಾರ್ಯಗಳೆಂದು ಹೇಳಿವೆ. ಹೀಗೆ ಸಮಯಸಾರದಲ್ಲಿ ದೃಷ್ಟಿಪ್ರಧಾನವಾದ ಕಥನವಿದೆ.

ಆದರೆ ಆ ದರ್ಶನ ಪ್ರಧಾನವಾದ ಕಥನವು ಯಾರ ಸಲುವಾಗಿ ಸತ್ಯವಿದೆಯೆಂದರೆ ಯಾರು ದ್ರವ್ಯ ಮತ್ತು ಪರ್ಯಾಯದ ಯಥಾರ್ಥ ಜ್ಞಾನ ಮಾಡಿಕೊಂಡಿದ್ದಾರೆ ಅವರ ಸಲುವಾಗಿ ಸತ್ಯವಿದೆ. ಮತ್ತು ಯಾವ ಜೀವರುಗಳು

ರಾಗ-ದ್ವೇಷಗಳನ್ನು ಕರ್ಮದ ಕಾರಣದಿಂದೆಂದು ಮನ್ನಿಸಿದ್ದಾರೆ ಅಥವಾ ಪರ್ಯಾಯವನ್ನು ಪರಾಧೀನವೆಂದು ಮನ್ನಿಸಿದ್ದಾರೆ ಅವರದಂತೂ ಮಾತೇ ಇಲ್ಲ ದ್ರವ್ಯ ಮತ್ತು ಪರ್ಯಾಯದ ಯಥಾರ್ಥ ಜ್ಞಾನಮಾಡಿಕೊಂಡ ನಂತರ ತನ್ನ ಕಡೆಗೆ ಪ್ರವೃತ್ತವಾಗುವ ಪ್ರಯೋಜನದ ವಶದಿಂದ ರಾಗ-ದ್ವೇಷಗಳನ್ನು ಗೌಣ ಮಾಡಿ ಸ್ವಭಾವವನ್ನು ಮುಖ್ಯ ಮಾಡುವುದು ಅದು ಸಮ್ಯಗ್ದರ್ಶನದ ವಿಷಯವಿದೆ.

ಇಲ್ಲಿ ಪಂಚಾಸ್ತಿಕಾಯದಲ್ಲಿ ಪೂರ್ಣ ಜೀವಾಸ್ತಿಕಾಯದ ಸ್ವಭಾವದ ದ್ರವ್ಯ ಮತ್ತು ಪರ್ಯಾಯದ ಯಥಾರ್ಥ ಜ್ಞಾನ ಮಾಡಿಸಲಾಗಿದೆ. ಇಲ್ಲಿ ಏಕೇಂದ್ರಿಯ ಜೀವಗಳು ಹರ್ಷ-ವಿಷಾದವನ್ನು ಅನುಭವಿಸುತ್ತವೆ ಮತ್ತು ತ್ರಸ ಜೀವಗಳು ರಾಗ-ದ್ವೇಷಗಳರೂಪದ ಪರಿಣಾಮ ಮಾಡುತ್ತವೆ ಅದಂತೂ ತಮ್ಮಲ್ಲಿ ತಮ್ಮ ಕಾರಣದಿಂದ ಮಾಡುತ್ತವೆ ಪರದ ಕಾರಣದಿಂದ ಮಾಡುವುದಿಲ್ಲ . ರಾಗ-ದ್ವೇಷಗಳಾಗುತ್ತವೆ ಅವು ಚೈತನ್ಯದ ಸತ್ತಾದಲ್ಲಿ ಆಗುತ್ತವೆಂದು ಹೇಳುವುದರ ಉದ್ದೇಶವು ಪರದಿಂದ ಬೇರೆ ಮಾಡುವುದಿದೆ ಮತ್ತು ರಾಗ-ದ್ವೇಷಗಳ ರೂಪದ ಪರ್ಯಾಯಸ್ವಭಾವವು ಒಂದು ಸಮಯ ಮಾತ್ರದಷ್ಟಿದೆ, ಆದರೆ ತ್ರಿಕಾಲೀ ಸ್ವಭಾವವಂತೂ ಶುದ್ಧವೇ ಇದೆಯೆಂದು ಪರ್ಯಾಯ ಮತ್ತು ದ್ರವ್ಯ ಇವೆರಡರ ಯಥಾರ್ಥ ಜ್ಞಾನ ಮಾಡಿಸಿ, ಪ್ರಮಾಣಜ್ಞಾನ ಮಾಡಿಸಿದೆ.

ಈ ಪ್ರಕಾರ ಎರಡರ ಕಥನ ಪದ್ಧತಿಯು ಹೇಗಿದೆ ಹಾಗೆ ತಿಳಿದುಕೊಳ್ಳಬೇಕಾಗುವುದು.

**ಭಾವಾರ್ಥ :-** ವಿಶೇಷವಾಗಿ ಜ್ಞಾನಾವರಣೀಯ ಮೊದಲಾದ ಕರ್ಮಗಳ ಉದಯವಿರುವಂಥ ಜೀವರುಗಳು ಅನೇಕರಿದ್ದಾರೆ. ತಮ್ಮ ಜ್ಞಾನ ಸ್ವಭಾವವು ಪರಿಪೂರ್ಣ ಪ್ರಕಟವಾಗಬೇಕು ಅದು ತಮ್ಮ ಕಾರಣದಿಂದ ಪ್ರಕಟವಾಗುವುದಿಲ್ಲ ಅದರಲ್ಲಿ ಜ್ಞಾನಾವರಣೀಯ ಕರ್ಮವು ನಿಮಿತ್ತವಿದೆ, ತಮ್ಮ ದೃಷ್ಟಾಸ್ವಭಾವವು ಪರಿಪೂರ್ಣ ಪ್ರಕಟವಾಗದಿರುವಲ್ಲಿ ದರ್ಶನಾವರಣೀಯ ಕರ್ಮವು ನಿಮಿತ್ತವಿದೆ, ತನ್ನ ವೀರ್ಯವನ್ನು ತನ್ನಲ್ಲಿ ತಿರುಗಿಸಬೇಕಾಗುವುದು ಅದು ತನ್ನಲ್ಲಿ ತಿರುಗದಿರುವಲ್ಲಿ ಅಂತರಾಯ ಕರ್ಮವು ನಿಮಿತ್ತವಿದೆ. ತನ್ನ ಸ್ವರೂಪದ ಸಾವಧಾನತೆಯಲ್ಲಿ ಮೋಹನೀಯ ಕರ್ಮವು ನಿಮಿತ್ತವಿದೆ ಈ ಕರ್ಮೋದಯದ ನಿಮಿತ್ತದಿಂದ ತಮ್ಮ ಜ್ಞಾನ, ದರ್ಶನ, ವೀರ್ಯ, ಸುಖ ಮೊದಲಾದವು ಹೀನ ಅಥವಾ ವಿಪರೀತರೂಪದಿಂದ ಪರಿಣಮಿಸಿವೆ. ಇಲ್ಲಿ ಕರ್ಮದ ನಿಮಿತ್ತದ ಜ್ಞಾನ, ಹೀನ ಅಥವಾ ವಿಪರೀತ ಪರ್ಯಾಯದ ಜ್ಞಾನ ಮತ್ತು ಪೂರ್ಣ ದ್ರವ್ಯದ ಸ್ವಭಾವದ ಜ್ಞಾನವೆಂದು ಮೂರರ ಜ್ಞಾನ ಮಾಡಿಸಿದೆ. ಮೂರರ ಜ್ಞಾನವು ನಿಜವಾಗಿ ಆದರೆ ಪ್ರಮಾಣಜ್ಞಾನವಾಗುತ್ತದೆ.

ಏಕೇಂದ್ರಿಯ ಜೀವಗಳಿಗೆ ಕರ್ಮದ ಪ್ರಾಬಲ್ಯವಿರುವುದರಿಂದ ಅವಕ್ಕೆ ಹೀನದಶೆಯಿದೆಯೆಂದು ಅಜ್ಞಾನೀ ಜೀವರುಗಳು ಹೇಳುತ್ತಾರೆ, ಆದರೆ ಆ ಮಾತು ಅಸತ್ಯವಿದೆ. ಆ ಜೀವಗಳು ತಮ್ಮ ಕಾರಣದಿಂದ ಹೀನದಶೆಗೆ ಪ್ರಾಪ್ತವಾಗಿವೆ, ಕರ್ಮವಂತೂ ಜಡವಿದೆ, ಆತ್ಮನಲ್ಲಿ ಅದರದು ಅತ್ಯಂತ ಅಭಾವವಿದೆ. ಆಲೂಗಡ್ಡೆಯ ಒಂದು ತುಂಡಿನಲ್ಲಿ ಅಸಂಖ್ಯ ಶರೀರಗಳಿದ್ದು ಒಂದು ಶರೀರದಲ್ಲಿ ಅನಂತ ಜೀವಗಳಿವೆ. ಆ ಜೀವಗಳು ಜ್ಞಾನ-ದರ್ಶನ ಶಕ್ತಿಯಿಂದ ತುಂಬಿಕೊಂಡಿವೆ, ಆದರೆ ಪರ್ಯಾಯದಲ್ಲಿ ಅತ್ಯಂತ ಹೀನ ದಶೆಗೆ ಪ್ರಾಪ್ತವಾಗಿವೆ ಮತ್ತು ಮುಖ್ಯವಾಗಿ ಹರ್ಷ-ವಿಷಾದವನ್ನು ಭೋಗಿಸುತ್ತವೆ. ಪರದ ಅದರಂತೆ ಕರ್ಮದ ಕಾರಣದಿಂದಿಲ್ಲ . ತವೆಯಲ್ಲಿ ಹುರಿಯುವುದರಿಂದ ಅಥವಾ ಎಣ್ಣೆಯಲ್ಲಿ ತಾಳಿಸುವುದರಿಂದ ಆ ಜೀವಗಳಿಗೆ ಅತ್ಯಂತ ದುಃಖವಾಗುತ್ತದೆಯೆಂದು ಅಜ್ಞಾನಿಯು ಮನ್ನಿಸಿದ್ದಾನೆ. ಪರಪದಾರ್ಥಗಳನ್ನಂತೂ ಜೀವನು ಸ್ಪರ್ಶಿಸುವುದೇ ಇಲ್ಲ ; ಆದರೆ ಅಜ್ಞಾನೀ ಜೀವನು ಸಂಯೋಗವನ್ನೇ ನೋಡುತ್ತಾನೆ, ಆದರೆ ಅವುಗಳ ಪರ್ಯಾಯ ಧರ್ಮವು ರಾಗ-ದ್ವೇಷಗಳನ್ನು ಭೋಗಿಸುವುದಿವೆ ಅದನ್ನು ಅವನು ನೋಡುವುದಿಲ್ಲ. ಪ್ರತಿಯೊಂದು ಜೀವದ ಪರ್ಯಾಯವು ತಾನು ತನ್ನಿಂದ ಆಗುತ್ತಿರುತ್ತದೆ. ಮತ್ತು ನನ್ನ ಪರ್ಯಾಯಗಳು ನನ್ನಿಂದಲೇ ಆಗುತ್ತವೆ. ಈ ಅಂಶವನ್ನು ಸ್ವೀಕಾರ ಮಾಡಿದ ನಂತರ ಆ ಅಂಶವು ಯಾವುದು ? ಆ ಅಂಶವು-ಪರ್ಯಾಯವು ದ್ರವ್ಯದ್ದೇ ಇದ್ದು ಆ ದ್ರವ್ಯವು ಶುದ್ಧವಿದೆ. ಈ ಪ್ರಕಾರ ಅಂಶದ

ಜ್ಞಾನ ಮಾಡಿಕೊಂಡು, ಅಂಶದ ಮೇಲಿನ ದೃಷ್ಟಿಯನ್ನು ಬಿಟ್ಟುಕೊಟ್ಟು ಅಂಶಿಯ ಮೇಲೆ ದೃಷ್ಟಿ ಹಾಕಿದರೆ ಸಮ್ಯಗ್ದರ್ಶನ ಮತ್ತು ವೀತರಾಗತೆಯಾಗುತ್ತದೆ.

ಏಕೇಂದ್ರಿಯ ಜೀವಕ್ಕೆ ತ್ರಸ ಜೀವದಂತೆ ಪುರುಷಾರ್ಥವಿಲ್ಲ ಅದನ್ನು ಮಾಡುವೆ ಇದನ್ನು ಮಾಡುವೆನೆಂಬ ರಾಗ-ದ್ವೇಷದ ಕರ್ತೃತ್ವರೂಪದ ಮುಖ್ಯತೆಯಿಂದ ಪುರುಷಾರ್ಥವಿಲ್ಲದಿರುವುದರಿಂದ ಆ ಜೀವಗಳನ್ನು ಮುಖ್ಯರೂಪದಿಂದ ಕರ್ಮಚೇತನಾಯುಕ್ತವೆಂದು ತಿಳಿಯುವುದು.

ಈಗ ತ್ರಸ ಜೀವದ ಮಾತು ಹೇಳುತ್ತಾರೆ. ಆ ಜೀವಗಳಿಗೆ ಜ್ಞಾನಾವರಣ, ದರ್ಶನಾವರಣ ಮತ್ತು ಮೋಹಕರ್ಮಧ ವಿಶೇಷ ಉದಯದಿಂದ ಚೈತನ್ಯಶಕ್ತಿಯ ಪರಿಮಮನವು ತೀರ ಹೀನ ಹಾಗೂ ವಿಪರೀತವಿರುತ್ತದೆ. ಆದರೆ ಅವಕ್ಕೆ ಏಕೇಂದ್ರಿಯಕ್ಕಿಂತ ಅಂತರಾಯ ಕರ್ಮದ ಕ್ಷಯೋಪಶಮದ ನಿಮಿತ್ತದಿಂದ ವೀರ್ಯವು ವಿಶೇಷವಿರುವುದರಿಂದ ಸುಖ-ದುಃಖ ರೂಪದ ಫಲವನ್ನು ಭೋಗಿಸುವ ಸಲುವಾಗಿ ಇಷ್ಟ-ಅನಿಷ್ಟ ಪದಾರ್ಥಗಳಲ್ಲಿ ರಾಗ-ದ್ವೇಷರೂಪದ ಮೋಹ ಮಾಡುವಲ್ಲಿ ಉದ್ಯಮಿ ಇರುತ್ತವೆ. ಈ ಮನೆಯು ಒಳ್ಳೆಯದಿದೆ ಈ ಮನೆಯು ಒಳ್ಳೆಯದಿಲ್ಲ, ನಿರೋಗಿ ಶರೀರವು ಒಳ್ಳೆಯದಿದೆ, ಗೌರವವಿದ್ದರೆ ಒಳ್ಳೆಯದೆನಿಸುವುದು, ಪರದ ಮೇಲೆ ದಯೆ ಮಾಡುವುದು, ಅವನ್ನು ಬದುಕಿಸುವುದು ಇವೇ ಮೊದಲಾದ ಪ್ರಕಾರದಿಂದ ಶುಭಾಶುಭ ರಾಗ-ದ್ವೇಷಗಳು ಉತ್ಪನ್ನವಾಗುತ್ತಿರುತ್ತವೆ. ಅಜ್ಞಾನಿಯು ಪರ ಪದಾರ್ಥವನ್ನು ಮಾಡುವ ಶಕ್ತಿಯಿಲ್ಲದಿದ್ದರೂ ರಾಗ-ದ್ವೇಷಗಳ ಕರ್ತೃವಾಗುತ್ತಾನೆ. ದೇಶದ ಕಲ್ಯಾಣ ಮಾಡುವದು ಮತ್ತು ಅದರ ಹಿತ ಮಾಡುವೆನೆಂಬ ವಿಕಲ್ಪ ಮಾಡುತ್ತಿರುತ್ತಾನೆ. ದೇಶವು ಪರ ಪದಾರ್ಥವಿದೆ ಅದನ್ನು ಯಾರು ಬದಲಿಸುವರು ಮತ್ತು ಸುಧಾರಿಸುವರು ? ಈ ವಸ್ತುವು ಸುಂದರವಿದೆ, ಇದು ಅಸುಂದರವಿದೆ ಇತ್ಯಾದಿ ಪ್ರಕಾರದಿಂದ ಇಷ್ಟಾನಿಷ್ಟ ಕಲ್ಪನೆ ಮಾಡುತ್ತಾನೆ. ನಮ್ಮ ತಂದೆಯ ಹತ್ತಿರ ದುಡ್ಡು ಇರಲಿಲ್ಲ. ಆದರೆ ನಾನು ಬಾಹುಬಲದಿಂದ ಸಂಪಾದಿಸಿದ್ದೇನೆಂದು ಅಭಿಮಾನ ಪಡುತ್ತಾನೆ ದುಡ್ಡು ಜಡವಿದೆ, ಅದು ಪುದ್ಗಲ ಪರಾವರ್ತನದ ನಿಯಮದ ಅನುಸಾರ ಬರುತ್ತದೆ ಮತ್ತು ಹೋಗುತ್ತದೆ, ಅದೇನು ನಿನ್ನ ಆತ್ಮನ ಕೈಯೊಳಗಿನ ಮಾತು ಇಲ್ಲ. ನಾನು ಇಷ್ಟು ಜೀವಗಳಿಗೆ ತಿಳಿಸಿ ಹೇಳಿದ್ದೇನೆ, ಎಷ್ಟೊಂದು ಶಾಸ್ತ್ರಗಳನ್ನು ರಚಿಸಿದ್ದೇನೆ, ಎಷ್ಟೊಂದು ಊರುಗಳನ್ನು ಸುಧಾರಿಸಿದ್ದೇನೆ - ಎಂದು ಅನೇಕ ಪ್ರಕಾರದಿಂದ ಪರದಲ್ಲಿ ಪರಿವರ್ತನದ ಭಾವ ಮಾಡುತ್ತಾನೆ. ಆದರೆ ಪರದಲ್ಲೇನನ್ನೂ ಮಾಡುವ ಸಾಧ್ಯತೆಯಿಲ್ಲ. ಆಚಾರ್ಯ ಭಗವಂತರು ಹೇಳುವುದೇನೆಂದರೆ ಇಂಥ ಅಭಿಮಾನವನ್ನು ಬಿಟ್ಟುಕೊಡು ಮತ್ತು ಪರ್ಯಾಯದಲ್ಲಿ ರಾಗಾದಿಗಳಾಗುತ್ತವೆ ಅವು ನಿನ್ನ ಕಾರಣದಿಂದ ಆಗುತ್ತವೆ, ಪರದ ಕಾರಣದಿಂದ ಆಗುವುದಿಲ್ಲ ಮತ್ತು ತ್ರಿಕಾಲೀ ನಿರಪರಾಧಿ ಸ್ವಭಾವದ ದೃಷ್ಟಿಯಲ್ಲಿ ಆ ರಾಗರೂಪದ ಅಪರಾಧವನ್ನು ಗೌಣಮಾಡು ಹಾಗೂ ಪ್ರಮಾಣ ಜ್ಞಾನಪೂರ್ವಕ ಸ್ವಭಾವದ ದೃಷ್ಟಿ ಮಾಡು.

**ಪ್ರಶ್ನೆ :-** ಯಾವ ಪ್ರಕಾರ ಅಫೀಮದ ಕಹಿ ಮತ್ತು ನಿಂಬೆ ಹಣ್ಣಿನ ಹುಳಿ ಸ್ವಭಾವವಿದೆ ಅದೇ ಪ್ರಕಾರ ಆತ್ಮನ ಸ್ವಭಾವ ಮತ್ತು ಸಾಮರ್ಥ್ಯ ಹೇಗಿದೆ ?

**ಉತ್ತರ :-** ಜೀವವು ಹರ್ಷ-ಶೋಕಾದಿಗಳನ್ನು ಅನುಭವಿಸುವುದು ಅಥವಾ ರಾಗ-ದ್ವೇಷಾದಿಗಳ ಪರಿಣಾಮವನ್ನು ಮಾಡುವುದು ಅಥವಾ ತನ್ನ ಜ್ಞಾನಸ್ವಭಾವವನ್ನು ತಿಳಿಯುವುದು - ಈ ಮೂರನ್ನು ಹೊರತುಪಡಿಸಿ ನಾಲ್ಕನೆಯದು ಈ ಜೀವದ ಸ್ವಭಾವವಿಲ್ಲ. ತ್ರಸ ಜೀವವು ವಿಶೇಷ ಬಲದ ಕಾರಣದಿಂದ ತನ್ನ ವೀರ್ಯ ರಾಗ-ದ್ವೇಷದ ಮಾರ್ಗದಿಂದ ಹೋಗುವಂಥ ಕರ್ತೃತ್ವ ಬುದ್ಧಿಯು ಆ ಅಜ್ಞಾನಿಯ ಕಾರ್ಯವಿದೆ ಆದರೆ ಅವನು ಬಾಹ್ಯ ಕ್ರಿಯೆ ಮಾಡುತ್ತಾನೆಂಬುದು ಸಂಭವಿಸುವುದಿಲ್ಲ. ಅಜ್ಞಾನಿ ಜೀವನು ಭಕ್ತಿಯ ಶುಭ ಭಾವ ಮಾಡುವುದರಿಂದ ಶರೀರವು ನಿರೋಗವಿದೆಯೆಂದು ಮನ್ನಿಸುತ್ತಾನೆ ಆದರೆ ಶರೀರವು ಪುದ್ಗಲಾಸ್ತಿಕಾಯವಿದ್ದು ಅದರ ಕಾರಣದಿಂದ ಅದು ಇದೆ.

ಇಲ್ಲಿ ಮಿಥ್ಯಾದೃಷ್ಟಿಯ ಮುಖ್ಯತೆಯಿಂದ ಮಾತು ಹೇಳಿದೆ. ತ್ರಸ ಜೀವಗಳ ಮುಖ್ಯತೆಯಿಂದ ಕರ್ಮಚೇತನಾಸಹಿತ

ತಿಳಿಯಬೇಕು. ಹರ್ಷ-ವಿಷಾದ ಅಥವಾ ರಾಗ-ದ್ವೇಷರೂಪದಿಂದಾಗುವುದು ಅದು ಪರ್ಯಾಯ ಧರ್ಮವಿದೆಯೆಂದು ಪರದಿಂದ ಭಿನ್ನವಾಗುವುದಿದೆ ಹರ್ಷ-ವಿಷಾದ ಅಥವಾ ರಾಗ-ದ್ವೇಷ ಮಾಡುವುದು ಇಲ್ಲವೆ ಜ್ಞಾತಾರೂಪದಿಂದ ಇರುವುದು ಅದು ನಿನ್ನ ಕೈಯಲ್ಲಿಯ ಮಾತಿದೆ. ಹೀಗೆ ಪರದಿಂದ ಭಿನ್ನವಾಗುವುದು ಮತ್ತು ನಿಜವಾದ ಪ್ರಮಾಣಜ್ಞಾನವಾದರೆ ಅಂತರ್ಯದಲ್ಲಿ ಪ್ರವೃತ್ತವಾಗುವ ಸಾಧ್ಯತೆಯಿದೆ.

ಸುಖ ಹೇಗಾಗುವುದು ? ಆತ್ಮವು ಒಂದು ದ್ರವ್ಯವಿದೆ ಅದರಲ್ಲಿ ಚೇತನಗುಣವಿದ್ದು ಅದು ಚೇತಿಸುತ್ತದೆ. ಅದರಲ್ಲಿ ರಾಗ-ದ್ವೇಷದ ಮುಖ್ಯತೆಯಿಂದ ರಾಗ-ದ್ವೇಷಗಳನ್ನು ಮಾಡುವುದು, ಬೇಕಾದರೆ ಹರ್ಷ-ವಿಷಾದದ ಮುಖ್ಯತೆಯಿಂದ ಅನುಭವಿಸುವುದು. ಬೇಕಾದರೆ ಜ್ಞಾನ ಮಾಡುವುದು, ಪರ್ಯಾಯದಲ್ಲಿ ಆಗುವ ರಾಗ-ದ್ವೇಷ ಮತ್ತು ಹರ್ಷ-ವಿಷಾದಗಳು ನನ್ನ ಮೂಲ ಸ್ವಭಾವದಲ್ಲಿ ಇಲ್ಲವೆಂದು ತಿಳಿದುಕೊಂಡರೆ ಮತ್ತು ಶುದ್ಧಚೈತನ್ಯವನ್ನು ಉಪಾದೇಯವೆಂದು ಶ್ರದ್ಧೆ ಮಾಡಿದರೆ ಸಮ್ಯಗ್ದರ್ಶನ-ಜ್ಞಾನ-ಚಾರಿತ್ರಗಳು ಪ್ರಕಟವಾಗುವಂತಿದೆ.

ಆತ್ಮನು ಈಶ್ವರನಿದ್ದಾನೆ ಶಕ್ತಿಯುಳ್ಳವನಿದ್ದಾನೆ. ಹರ್ಷ-ವಿಷಾದವನ್ನು ಅನುಭವಿಸುವ, ಕಾಮ-ಕ್ರೋಧವನ್ನು ಮಾಡುವ, ಶುಭ-ಅಶುಭಭಾವ, ಮಾಡುವಂಥನಿದ್ದಾನೆ, ಆದರೆ ಲಕ್ಷ್ಮಿಯನ್ನು ಅಥವಾ ಸ್ತ್ರೀಯನ್ನು ಅನುಭವಿಸುವ ಅಥವಾ ದೇಶದ ರಕ್ಷಣೆ ಮಾಡುವ ಅಥವಾ ಶರೀರ ಮೊದಲಾದವುಗಳದ್ದು ಮಾಡುವಂಥ ಶಕ್ತಿಯುಳ್ಳವನಿಲ್ಲ. ಅನಂತ ಏಕೇಂದ್ರಿಯ ಜೀವಗಳು ಮುಖ್ಯವಾಗಿ ಹರ್ಷ-ವಿಷಾದವನ್ನೂ ಅನುಭವಿಸುತ್ತವೆ ಮತ್ತು ತ್ರಸಜೀವಗಳು ಅಸಂಖ್ಯವಿವೆ, ಅವುಗಳಲ್ಲಿ ರಾಗ-ದ್ವೇಷ ಮಾಡುವ ಮುಖ್ಯತೆಯಿದೆ ಮತ್ತು ಅದರಿಂದ ಅವು ಸಂಸಾರದಲ್ಲಿ ಸುತ್ತುತ್ತಲಿವೆ.

ಜ್ಞಾನ ಚೇತನವುಳ್ಳವು ಅನಂತವಿವೆ, ಈಗ ಅವುಗಳ ಕುರಿತು ಹೇಳುತ್ತಾರೆ. ಅದರಲ್ಲಿ ಕೇವಲಿಗಳು ಮತ್ತು ಸಿದ್ಧರುಗಳೀರ್ವರು ಬರುತ್ತಾರೆ. ಸಮ್ಯಗ್ದೃಷ್ಟಿ ಮೊದಲಾದ ಸಾಧಕ ಜೀವರುಗಳನ್ನು ಇಲ್ಲಿ ಗೌಣವಾಗಿ ತಿಳಿಯುವುದು. ಆ ಜೀವರುಗಳಿಗೆ ಜ್ಞಾನಾವರಣೀಯ, ದರ್ಶನಾವರಣೀಯ, ಮೋಹನೀಯ ಮತ್ತು ಅಂತರಾಯ ಕರ್ಮಗಳು ಸರ್ವಥಾ ಹೊರಟುಹೋಗಿವೆ,ಮತ್ತು ಅನಂತಜ್ಞಾನ, ಅನಂತದರ್ಶನ, ಅನಂತಸುಖ, ಅನಂತವೀರ್ಯವು ಪರ್ಯಾಯದಲ್ಲಿ ಪ್ರಕಟವಾಗಿ ಬಿಟ್ಟಿದೆ, ತಮ್ಮ ಶುದ್ಧ ಚೈತನ್ಯಸ್ವಭಾವದ ಆಶ್ರಯದಿಂದ ಜ್ಞಾನ, ದರ್ಶನ, ವೀರ್ಯದ ಹೀನತೆ ಹಾಗೂ ಚಾರಿತ್ರದ ಸಾವಧಾನತೆ ಮತ್ತು ವಿಪರೀತತೆಯನ್ನು ತೊಲಗಿಸಿ ರಾಗ-ದ್ವೇಷಗಳನ್ನು ನಾಶ ಮಾಡಿದ್ದಾರೆ ಅದರಿಂದ ಕರ್ಮಗಳು ಬೇರೆ ಪರಮಾಣುರೂಪವಾಗಿ ಮಾರ್ಪಡಿಸಿಹೋಗಿವೆ ಎಂದರೆ ಅವರು ನಾಲ್ಕು ಕರ್ಮಗಳನ್ನು ನಾಶ ಮಾಡಿದ್ದಾರೆಂದು ಹೇಳಲಾಗುವುದು. ಅವರು ಅನಾಕುಲ ಸ್ವತಂತ್ರದಶೆಯಲ್ಲಿ ಮಗ್ನರಿದ್ದಾರೆ.

ಆ ಭಗವಂತರು ಅನಂತಶಕ್ತಿಯುಕ್ತರಿದ್ದಾರೆ ದೊಡ್ಡ-ದೊಡ್ಡ ಪರ್ವತವನ್ನು ಒಡೆದುಹಾಕುವ ಸಾಧ್ಯತೆಯಿದೆ ಯೇನು? ಮತ್ತು ಏನಾದರೂ ಪರದ ಕಾರ್ಯ ಮಾಡುತ್ತಾರಲ್ಲವೇ?-ಎಂದು ಅಜ್ಞಾನಿಗಳು ಪ್ರಶ್ನೆ ಮಾಡುತ್ತಾರೆ. ಸೋದರನೇ ! ಆತ್ಮನ ಈಶ್ವರತೆಯು ತನ್ನಲ್ಲಿದೆ. ಬೇಕಾದರೆ ರಾಗ-ದ್ವೇಷ ಮಾಡುವನು ಅಥವಾ ಹರ್ಷ-ವಿಷಾದಗಳನ್ನು ಅನುಭವಿಸುವನು ಅಥವಾ ಜ್ಞಾನ ಮಾಡುವನು, ಪರದಲ್ಲಿ ಮಾಡುವೆನೆಂಬ ಮನ್ನಣೆಯೇ ಮೂರ್ಖತೆಯಿದೆ, ಈ ಪರ್ವತ ಒಡೆಯುವನು, ಸಮುದ್ರ ಒಣಗಿಸುವನು, ಇಂಥ ಕಾರ್ಯ ಮಾಡುವನೆಂದು ಅಜ್ಞಾನಿಗಳು ಹೇಳುತ್ತಾರೆ, ಆದರೆ ಇವೆಲ್ಲವು ಅಜ್ಞಾನ ಭಾವಗಳಿವೆ. ಆತ್ಮನು ಪರದ ಕ್ರಿಯೆಯನ್ನು ಮಾಡುವ ಸಾಧ್ಯತೆಯಿಲ್ಲ, ರಾಗ-ದ್ವೇಷಗಳು ನನ್ನಿಂದ ನನ್ನಲ್ಲಿ ಆಗುತ್ತವೆ, ಆದರೆ ಇದು ಅಪರಾಧವಿದೆ ಮತ್ತು ಒಂದು ಸಮಯದ್ದಿದೆ. ತ್ರಿಕಾಲೀ ಸ್ವರೂಪವಂತೂ ನಿರಪರಾಧವಿದೆಯೆಂದು ಜ್ಞಾನ ಮಾಡಿಕೊಂಡರೆ ಧರ್ಮವಾಗುವುದು. ಇಂಥ ಜ್ಞಾನಚೇತನವುಳ್ಳ ಸಮ್ಯಗ್ದೃಷ್ಟಿ ಜೀವರುಗಳಿಗೆ ಎಷ್ಟು ಶುದ್ಧತೆಯು ವರ್ತಿಸುತ್ತದೆ ಅಷ್ಟು ಅಂಶದಲ್ಲಿ ಅವರು ಸುಖಿಯಿದ್ದಾರೆ, ಸ್ವರೂಪದಲ್ಲಿ ಜೀವಿಸುತ್ತಿರುವ ಮುನಿಗಳು ಇವರಿಗಿಂತ ವಿಶೇಷ ಸುಖಿಗಳಿದ್ದಾರೆ ಮತ್ತು ಸಂಪೂರ್ಣ ಜ್ಞಾನಚೇತನವುಳ್ಳ ಕೇವಲಿಗಳು ಹಾಗೂ ಸಿದ್ಧ ಭಗವಂತರುಗಳು ಸಂಪೂರ್ಣ ಸ್ವಾಭಾವಿಕ ಸುಖದಲ್ಲಿ

ಲೀನರಿದ್ದಾರೆ ಇಲ್ಲಿ ಜ್ಞಾನಪ್ರಧಾನವಾದ ಕಥನವಿರುವುದರಿಂದ ಜ್ಞಾನಚೇತನವು ಪೂರ್ಣ ಪ್ರಕಟವಾಗಿರುವಂಥ ಕೇವಲೀ ಮತ್ತು ಸಿದ್ಧರನ್ನು ಸ್ವೀಕರಿಸಲಾಗಿದೆ.

ಅಪೇಕ್ಷೆಯಿಂದ ಸಾಧಕನ ಮಾತನ್ನು ತಿಳಿದುಕೊಳ್ಳುವುದು ಸಮಯಸಾರದಲ್ಲಿ ದೃಷ್ಟಿ ಪ್ರಧಾನವಾದ ಕಥನದಲ್ಲಿ ಜ್ಞಾನಚೇತನವನ್ನು ನಾಲ್ಕನೆಯ ಗುಣಸ್ಥಾನದಲ್ಲಿ ಹೇಳಿದೆ. ಪುಣ್ಯ-ಪಾಪಗಳು ಅವು ವಿಕಾರವಿದ್ದು ಆತ್ಮನು ಜ್ಞಾನಾನಂದ ಸ್ವರೂಪನಿದ್ದಾನೆಂಬ ದೃಷ್ಟಿಯಿದ್ದರೆ ಜ್ಞಾನಚೇತನವೆಂದು ಹೇಳಿದೆ. ನಾಲ್ಕನೆಯ ಗುಣಸ್ಥಾನದಲ್ಲಿ ಯುದ್ಧದ ಪರಿಣಾಮ ಮತ್ತು ಹರ್ಷದ ಪರಿಣಾಮವಿದ್ದರೂ ಕೂಡ ಜ್ಞಾತಾ-ದೃಷ್ಟಾದ ಅಧಿಕತೆಯಲ್ಲಿ ದ್ವೇಷಗಳನ್ನು ಗೌಣಮಾಡಿ ಜ್ಞಾನ ಚೇತನವೆಂದು ಹೇಳಿದೆ. ಇನ್ನು ಅದರಿಂದ ಮುಂದುವರೆದರೆ ಮುನಿದಶೆಯಾದರೆ ಮುನಿಗಳು ಆನಂದದ ಅನುಭವದಲ್ಲಿರುತ್ತಾರೆ. ಮುನಿಗೆ ಸಿಂಹವು ಹರಿದು ತಿನ್ನಲಿ, ಅಗ್ನಿಯ ಸಂಯೋಗವಾದರೂ ಕೂಡ ಅವರು ಆನಂದದಲ್ಲಿ ನಿಮಗ್ನರಿರುತ್ತಾರೆ ಅಲ್ಲಿ ವಿಶೇಷ ಶಾಂತಿಯಿದೆ ಮತ್ತು ಕೇವಲಿಗಳು ಹಾಗೂ ಸಿದ್ದರು ಸಂಪೂರ್ಣ ಸುಖಿಗಳಿದ್ದಾರೆ. ಹೇಗೆ ಕಮಲವು ಸಂಪೂರ್ಣ ಅರಳಿ ಹೋಗಿರುತ್ತದೆ ಹಾಗೆ ಕೇವಲಜ್ಞಾನಿಗಳು ಸಂಪೂರ್ಣದಶಾರೂಪದಿಂದ ಅರಳಿ ಹೋಗಿರುವುದರಿಂದ ಪರಿಪೂರ್ಣ ಸುಖಿಗಳಿದ್ದಾರೆ ಅವರು ಜ್ಞಾನಚೇತನ ಸಂಯುಕ್ತರೆಂದು ತಿಳಿಯಬೇಕು.

ಆ ಮೂರು ಪ್ರಕಾರದ ಜ್ಞಾನಚೇತನವನ್ನು ಧಾರಣ ಮಾಡುವವರು ಯಾವ-ಯಾವ ಜೀವರುಗಳಿ ದ್ದಾರೆಂಬುದನ್ನು ಈಗ ತಿಳಿಸಿಕೊಡುತ್ತಾರೆ,-

**ಸವ್ವೇ ಖಲು ಕಮ್ಮಫಲಂ ಥಾವರಕಾಯಾ ತಸಾ ಹಿ ಕಜ್ಜ ಜುದಂ ।**
**ಪಾಣಿತ್ತಮದಿಕ್ಕಂತಾ ಣಾಣಂ ವಿಂದಂತಿ ತೇ ಜೀವಾ ॥೩೯॥**

**ಸ್ಥಾವರ ಕರ್ಮಫಲವ ತ್ರಸಕಾರ್ಯಯುತಕರ್ಮಫಲವನನುಭವಿಸಿದರೆ ।**
**ಯಾವ ಪ್ರಾಣಿತ್ವವನತಿಕ್ರಮಿಸಿದ ಜೀವಗಳು ಜ್ಞಾನವನನುಭವಿಪವು ॥೩೯॥**

ಪೃಥ್ವೀಕಾಯಿಕ ಜೀವಗಳು ಮಣ್ಣಿನ ಒಂದು ತುಂಡಿನಲ್ಲಿ ಅಸಂಖ್ಯಾತ ಜೀವಗಳಿವೆ ಅದೇ ಪ್ರಕಾರ ಒಂದು ಜಲಬಿಂದುವಿನಲ್ಲಿ ಅಸಂಖ್ಯಾತ ಜೀವಗಳಿವೆ, ಅಗ್ನಿಯಲ್ಲಿ ಹಾಗೂ ವಾಯುವಿನಲ್ಲಿ ಅಸಂಖ್ಯ ಜೀವಗಳಿವೆ ಮತ್ತು ವನಸ್ಪತಿಯಲ್ಲಿ ಅಸಂಖ್ಯ ಹಾಗೂ ಅನಂತ ಜೀವಗಳಿವೆ. ಹೀಗೆ ಐದು ಪ್ರಕಾರದ ಸ್ಥಾವರ ಜೀವಗಳಿವೆ ಆ ಜೀವಗಳಿಗೆ ರಾಗ-ದ್ವೇಷಗಳನ್ನು ಮಾಡುವಂಥ ವ್ಯಕ್ತತೆಯಿರುವುದಿಲ್ಲ , ಆದರೆ ಹರ್ಷ-ವಿಷಾದದ ವೇದನದಲ್ಲಿ ಅವುಗಳ ಚೇತನವು ನಿಂತುಹೋಗಿದೆ. ನಾನು-ಆತ್ಮನು ಹೇಗಿದ್ದೇನೆಂಬುದರ ಅರಿವು ಅವುಗಳಿಗಿಲ್ಲ . ಕರ್ಮದ ಮುಖ್ಯತೆಯ ಕಾರಣದಿಂದ ಹರ್ಷ-ವಿಷಾದಗಳನ್ನು ಅನುಭವಿಸುತ್ತವೆ. ಎಂದರೆ ಅವಕ್ಕೆ ಕರ್ಮಫಲಚೇತನದ ಮುಖ್ಯತೆಯಿದೆ.

ದ್ವೀಂದ್ರಿಯದಿಂದ ಹಿಡಿದು ಸಂಜ್ಞೀ ಪಂಚೇಂದ್ರಿಯವರೆಗಿನ ತ್ರಸ ಜೀವಗಳು ರಾಗ-ದ್ವೇಷಗಳನ್ನು ಮಾಡುವ ಮುಖ್ಯತೆಯಿಂದ ಸುಖ-ದುಃಖಗಳನ್ನು ಭೋಗಿಸುತ್ತವೆ. ಇಷ್ಟ-ಅನಿಷ್ಟ ಪದಾರ್ಥಗಳಲ್ಲಿ ರಾಗ-ದ್ವೇಷಗಳನ್ನು ಮಾಡುತ್ತಿರುತ್ತವೆ. ನೊಣ, ಇರುವೆ ಮೊದಲಾದವುಗಳಿಗೆ ಮನಸ್ಸಿಲ್ಲದಿದ್ದರೂ ಕೂಡ ರಾಗ-ದ್ವೇಷಗಳನ್ನು ಮಾಡುವೆವೆಂಬ ಪ್ರೇರಣೆಯಿರುತ್ತದೆ. ತಮ್ಮ ಜ್ಞಾನ ಸ್ವಭಾವದಲ್ಲಿ ಚೇತನಾವು ನಿಂತುಕೊಳ್ಳಬೇಕು ಅದಕ್ಕೆ ಪ್ರತಿಯಾಗಿ ರಾಗ-ದ್ವೇಷಗಳು ಅವು ನನ್ನ ಕರ್ತವ್ಯವಿವೆ ಮತ್ತು ದೇಹದ ಕ್ರಿಯೆಯನ್ನು ನಾನು,ಮಾಡುವ ಸಾಧ್ಯತೆಯಿದೆಯೆಂಬ ವಿಕಾರೀ ಪರಿಣಮನದಲ್ಲಿ ಚೇತನಾ ಹಾಗೂ ವೀರ್ಯವನ್ನು ಅವರು ತಡೆದು ನಿಲ್ಲಿಸಿದ್ದಾರೆ. ಮುತ್ತು-ಮಾಣಿಕ್ಯ, ಬಟ್ಟೆ ಮೊದಲಾದ ಪರ ಪದಾರ್ಥಗಳಲ್ಲಿ ಆತ್ಮನು ಏನನ್ನೂ ಕೂಡ ಮಾಡುವ ಸಾಧ್ಯತೆಯಿಲ್ಲ , ಆದರೆ ಅಂಗಡಿಯನ್ನು ಹಾಗೆ ಮಾಡುವೆ-ಹೀಗೆ ಮಾಡುವೆನೆಂಬ ರಾಗ-ದ್ವೇಷಗಳಲ್ಲಿ

ತಲೆ ಕೆಡಿಸಿಕೊಳ್ಳುತ್ತಿದ್ದಾನೆ. ಪುದ್ಗಲ ಪದಾರ್ಥಗಳು ಪುದ್ಗಲದಲ್ಲಿವೆ, ಜೀವನು ಜೀವದಲ್ಲಿದ್ದಾನೆಂಬ ಅರಿವು ಅವನಿಗಿಲ್ಲ . ಅನುಕೂಲ ಪದಾರ್ಥಗಳು ಒಳ್ಳೆಯವಿವೆ ಮತ್ತು ಪ್ರತಿಕೂಲ ಪದಾರ್ಥಗಳು ಒಳ್ಳೆಯವಿಲ್ಲವೆಂದು ಒಳಿತು-ಕೆಡಕುಗಳ ಭಾವ ಮಾಡಿ ಪುಣ್ಯ-ಪಾಪಗಳ ಮಿಥ್ಯಾ ಪ್ರಯತ್ನದಲ್ಲಿ ಸ್ವಯಂ ಇಳಿದುಹೋಗಿದ್ದಾನೆ ಇಂಥ ಜೀವರುಗಳನ್ನು ಕರ್ಮಚೇತನಾದ ಮುಖ್ಯತೆ ಸಹಿತವೆಂದು ತಿಳಿದುಕೊಳ್ಳಬೇಕು.

ಹತ್ತು ಪ್ರಾಣಗಳಿಂದ ರಹಿತವಾಗಿರುವಂಥ ಜೀವರುಗಳು ಅವರು ಅತೀಂದ್ರಿಯ ಜ್ಞಾನಿಗಳಿದ್ದಾರೆ ಆ ಶುದ್ಧ ಪ್ರತ್ಯಕ್ಷ ಜ್ಞಾನೀ ಜೀವರುಗಳು ಕೇವಲಜ್ಞಾನಿಗಳಿದ್ದಾರೆ. ಅವರು ಪ್ರತ್ಯಕ್ಷವಾಗಿ ಪರಮಾನಂದವನ್ನು ಅನುಭವಿಸುತ್ತಾರೆ. ಕೇವಲೀ ಭಗವಂತರಿಗೆ ಶರೀರ ಮತ್ತು ಆಯುಷ್ಯವಿದ್ದರೂ ಕೂಡ ಅತೀಂದ್ರಿಯ ಹಾಗೂ ಹತ್ತು ಪ್ರಾಣಗಳಿಂದ ರಹಿತರೆಂದು ಗಣಿಸಲಾಗಿದೆ. ಕಾರಣವೇನೆಂದರೆ ಅವರು ಏಕಾಕಿ ಜ್ಞಾನವನ್ನೇ ಅನುಭವಿಸುತ್ತಾರೆ ಇಂಥ ಜೀವರುಗಳನ್ನು ಜ್ಞಾನಚೇತನಾ ಸಂಯುಕ್ತರೆಂದು ತಿಳಿಯಬೇಕು.

ಮೂರು ಪ್ರಕಾರದ ಜೀವರುಗಳು ಮೂರು ಪ್ರಕಾರದ ಚೇತನದ ಕಾರಣರಿದ್ದಾರೆ.

ಅನಂತ ಏಕೇಂದ್ರಿಯ ಜೀವರುಗಳು ಹರ್ಷ-ವಿಷಾದದ ಎಂದರೆ ಮುಖ್ಯತೆಯಿಂದ ಕರ್ಮಫಲಚೇತನಾದ ಧಾರಕವಿವೆ,

ಅಸಂಖ್ಯಾತ ತ್ರಸ ಜೀವಗಳು ರಾಗ-ದ್ವೇಷಗಳನ್ನು ಮಾಡುತ್ತವೆ ಎಂದರೆ ಮುಖ್ಯತೆಯಿಂದ ಕರ್ಮಚೇತನಾದ ಧಾರಕವಿವೆ.

ಅನಂತ ಸಿದ್ಧರು ಮತ್ತು ಕೇವಲಿಗಳು ಜ್ಞಾನ ಮಾಡುತ್ತಾರೆ ಎಂದರೆ ಜ್ಞಾನಚೇತನಾದ ಧಾರಕರಿದ್ದಾರೆ

ಮಾನಸ್ತಂಭದ ಅವಸ್ಥೆಯನ್ನು ಜೀವನು ಮಾಡುವ ಸಾಧ್ಯತೆಯಿಲ್ಲ . ರಾಗದ ಕಾರಣದಿಂದ ಜೀವದ ಅವಸ್ಥೆಯಾಗುತ್ತದೆಯೆಂಬುದು ಸಂಭವಿಸುವುದಿಲ್ಲ. ಜಡದ ಆಗುವಿಕೆ ಜಡದಲ್ಲಿ ಮತ್ತು ರಾಗದ ಆಗುವಿಕೆ ಆತ್ಮನಲ್ಲಿದೆ ಪುದ್ಗಲವು ಅಸ್ತಿಯಿದೆ ಮತ್ತು ಸ್ಕಂಧರೂಪವಾಗುವುದು ಅದು ಅದರ ಕಾರ್ಯವಿದೆ. ದಾನ ಕೊಡುವವನು ಶುಭಭಾವ ಮಾಡುವನು ಆದರೆ ಪುದ್ಗಲದಲ್ಲಿ ಅದಲು-ಬದಲು ಮಾಡುವುದು ಜ್ಞಾನಿಯ ಅಥವಾ ಅಜ್ಞಾನಿಯ ಕೈಯೊಳಗಿನ ಮಾತಲ್ಲ.

ಅಜ್ಞಾನೀ ಜೀವನು ಹೇಳುತ್ತಾನೆ-ತಾನು ಇಷ್ಟು ಅಧಿಕ ಪ್ರವೃತ್ತಿ ಮಾಡಬಾರದು ಮತ್ತು ಈ ಪ್ರಕಾರದ ಶುಭಭಾವ ಮಾಡಬಾರದು ಏಕೆಂದರೆ ಅದರಿಂದ ಪ್ರವೃತ್ತಿಯು ವೃದ್ಧಿಸಿ ಹೋಗುವುದು. ಆದರೆ ನೀನು ಬಾಹ್ಯದ ಪರ್ಯಾಯದಲ್ಲಿ ಪ್ರವೇಶಿಸುವ ಸಾಧ್ಯತೆಯಿಲ್ಲ, ಆದುದರಿಂದ ಅಲ್ಲಿಂದ ಹಿಂದೆ ತಿರುಗಿ ನಿವೃತ್ತಿ ತೆಗೆದುಕೊಳ್ಳೆಂದು ಅವನಿಗೆ ಹೇಳಲಾಗುತ್ತದೆ. ಪುದ್ಗಲ ಪರಮಾಣುಗಳು ಅಸ್ತಿಕಾಯರೂಪದಿಂದ ಆಗುವುದು ಅಥವಾ ಆಗದಿರುವುದೇನು ನಿನ್ನ ಆಧೀನವಿಲ್ಲ-ಯಾವುದರ ಕಾರಣದಿಂದ ಯಾವುದರ ಅಸ್ತಿತ್ವವು ಸ್ಥಿರವಾಗುವುದು ಅಥವಾ ಮಾರ್ಪಡಿಸುವ ಸಾಧ್ಯತೆಯಿದೆಯೆಂಬುದು ಸಂಭವಿಸುವುದಿಲ್ಲ . ಯಾವ ಸಮಯದಲ್ಲಿ ಯಾವ ಸಂಯೋಗಗಳು ಆಗುವವಿವೆ ಆ ಸಮಯದಲ್ಲಿ ಆ ಸಂಯೋಗಗಳು ಆಗುವವು ಅವನ್ನು ತರುವುದು ಅಥವಾ ತಡೆಯುವುದು ಯಾರ ಕೈಯೊಳಗಿನ ಮಾತಲ್ಲ . ಮತ್ತು ಯಾವ ರಾಗವು ಯಾವ ಸಮಯದಲ್ಲಿ ಆಗುವುದಿದೆ ಆ ರಾಗವು ಆ ಸಮಯದಲ್ಲಿ ಆಗಿಯೇ ಆಗುವುದು. ದೃಷ್ಟಿಯು ಸಂಯೋಗ ಮತ್ತು ರಾಗದ ಮೇಲಿದೆ ಅಥವಾ ಜ್ಞಾನ ಸ್ವಭಾವದ ಮೇಲಿದೆಯೆಂಬುದರ ಮೇಲೆ ಧರ್ಮ ಅಥವಾ ಅಧರ್ಮದ ಅಳತೆಯಿದೆ. ಆ ಸ್ವಭಾವದ ಮೇಲೆ ದೃಷ್ಟಿಮಾಡಿ ಜ್ಞಾನ ಮಾಡಿಕೊಂಡರೆ ಧರ್ಮವಿದೆ-ಧರ್ಮಿಯಿದ್ದಾನೆ ಮತ್ತು ಸಂಯೋಗಗಳ ಹಾಗೂ ರಾಗದ ಮೇಲೆ ದೃಷ್ಟಿಯಿರುವವನು ಅಧರ್ಮಿಯಿದ್ದಾನೆ.

ಪರದಲ್ಲಿ ಅದಲು-ಬದಲು ಮಾಡುವುದರ ಬೆನ್ನು ಹತ್ತಿರುವುದೇ ಭ್ರಾಂತಿಯಿದೆ ಪರವು ಪರದ ಕಾರಣದಿಂದ

ಆಗುತ್ತದೆಯೆಂದು ಜ್ಞಾನ ಮಾಡಿಕೊಂಡರೆ, ರಾಗವು ತನ್ನ ಕಾರಣದಿಂದ ಒಂದು ಸಮಯ ಮಾತ್ರ ಆಗುತ್ತದೆಯೆಂದು ಜ್ಞಾನ ಮಾಡಿಕೊಂಡರೆ ಅದನ್ನು ಹೇಯವೆಂದು ತಿಳಿದುಕೊಳ್ಳುವುದು, ತ್ರಿಕಾಲೀ ಶುದ್ಧ ಸ್ವಭಾವವನ್ನು ಉಪಾದೇಯವೆಂದು ಮನ್ನಿಸುವುದು ಅದು ಜೀವದ ಕೈಯೊಳಗಿನ ಮಾತಲ್ಲ . ಹೀಗೆ ನಿಮಿತ್ತ ಮತ್ತು ಪರ್ಯಾಯದ ಅಭಿರುಚಿಯನ್ನು ಬದಲಿಸಿ ತ್ರಿಕಾಲೀ ಸ್ವಭಾವದ ಅಭಿರುಚಿ ಮಾಡುವುದು ಅದು ಧರ್ಮವಿದೆ.

ಈಗ ಉಪಯೋಗಗುಣದ ವ್ಯಾಖ್ಯೆ ಮಾಡುತ್ತಾರೆ. ಉಪಯೋಗವು ಅದು ಜ್ಞಾನಗುಣದ ಪರ್ಯಾಯವಿದೆ. ಆದಾಗ್ಯೂ ಚೇತನದ ಸ್ವಭಾವವನ್ನು ತಿಳಿಸಿಕೊಡುವುದಕ್ಕಾಗಿ ಅದನ್ನು ಗುಣವೆಂದು ಹೇಳಿದೆ. ಚೇತನದ ಹನ್ನೆರಡು ಭೇದಗಳು ಹಾಗೂ ಅದರ ಸಾಮರ್ಥ್ಯವೆಷ್ಟಿದೆಯೆಂಬುದನ್ನು ತಿಳಿಸುತ್ತಾರೆ,-

**ಉವಓಗೋ ಖಲು ದುವಿಹೋ ಣಾಣೇಣ ಯ ದಂಸಣೇಣ ಸಂಜುತ್ತೋ ।**
**ಜೀವಸ್ಸ ಸವ್ವಕಾಲಂ ಅಣಣ್ಣಭೂದಂ ವಿಯಾಣೇಹಿ ॥೪೦॥**

**ಜ್ಞಾನದರ್ಶನಸಹಿತವಾದುಪಯೋಗವೆರಡುಪ್ರಕಾರವಾಗಿರುವುದು ।**
**ಅನನ್ಯರೂಪದಿಂದದು ಸರ್ವಕಾಲದಲಿ ಜೀವನಿಗಿರುವುದೆಂದರಿವುದು ॥೪೦॥**

ನಿಜವಾಗಿ ಚೇತನದಲ್ಲಿ ಎರಡು ಪ್ರಕಾರದ ಪರಿಣಾಮಗಳಿವೆ. ಮೊದಲು ಜ್ಞಾನವನ್ನು ಅನುಭವಿಸುವ ಮಾತು ಬಂದಿದೆ. ಇಲ್ಲಿ ಜ್ಞಾನದ ಪರಿಣಮನದ ಮಾತು ಹೇಳುತ್ತಾರೆ. ದರ್ಶನಉಪಯೋಗ ಮತ್ತು ಜ್ಞಾನಉಪಯೋಗವೆಂದು ಎರಡು ಪ್ರಕಾರದ ಉಪಯೋಗವಿದ್ದು ಆತ್ಮನಲ್ಲಿ ಚೇತನರೂಪದ ಪರಿಣಾಮವು ಆತ್ಮನಿಂದ ಆಗುತ್ತದೆ, ಇಂದ್ರಿಯ, ಮನಸ್ಸಿನ ಕಾರಣದಿಂದ ಅಥವಾ ವಾಣಿ ಹಾಗೂ ಪುಸ್ತಕದಿಂದ ಆಗುವುದಿಲ್ಲ ಶಾಸ್ತ್ರ , ವಾಣಿ ಮೊದಲಾದವು ಪುದ್ಗಲಾಸ್ತಿಕಾಯವಿದೆ. ಉಪಯೋಗರೂಪದ ಪರಿಣಾಮವು ಜೀವಾಸ್ತಿಕಾಯದಲ್ಲಿ ಆಗುತ್ತದೆ, ತನ್ನ ಜ್ಞಾನದ ವ್ಯಾಪಾರವು ಅಸಂಖ್ಯ ಪ್ರದೇಶಗಳಲ್ಲಿ ತನ್ನ ಕಾರಣದಿಂದ ತನ್ನ ಸತ್ತಾದಿಂದ ಆಗುತ್ತದೆ. ಆದಾಗ್ಯೂ ವಾಣಿ ಮತ್ತು ಶಾಸ್ತ್ರದಿಂದ ಜ್ಞಾನವಾಗುವುದನ್ನು ಮನ್ನಿಸುವುದು ಆ ಮನ್ನಣೆಯು ಎರಡು ಪದಾರ್ಥಗಳ ಏಕತ್ವ ಬುದ್ಧಿಯನ್ನು ತಿಳಿಸಿಕೊಡುತ್ತದೆ.

ನಾನು ಆತ್ಮನಿದ್ದೇನೆ. ಇವನು ಬೇರೆ ಆತ್ಮನಿದ್ದಾನೆ, ಇದು ಪುದ್ಗಲದ ಸ್ಕಂಧವಿದೆಯೆಂದು ಪರ ಪದಾರ್ಥಗಳನ್ನು ಪೃಥಕ್ ಪೃಥಕ್ ಮತ್ತು ತನ್ನ ತ್ರಿಕಾಲೀ ಶಕ್ತಿ ಹಾಗೂ ವರ್ತಮಾನ ಪರ್ಯಾಯವನ್ನು ಪೃಥಕ್ ಪೃಥಕ್ ತಿಳಿದುಕೊಂಡರೆ ಅದನ್ನು ಜ್ಞಾನೋಪಯೋಗವೆಂದು ಹೇಳಿದೆ ಮತ್ತು ಯಾವ ಉಪಯೋಗವು ಸಾಮಾನ್ಯವಾಗಿ ಎಂದರೆ ಯಾವುದೇ ಜಾತಿಯ ಭೇದ ಮಾಡಿದಲ್ಲದೆ ಸಾಮಾನ್ಯ ಸತ್ತಾವನ್ನು ನೋಡುತ್ತದೆ ಅದನ್ನು ದರ್ಶನೋಪಯೋಗವೆಂದು ಹೇಳಿದೆ. ಹೀಗೆ ಎರಡು ಪ್ರಕಾರದ ವ್ಯಾಪಾರವು ಅನಾದಿ ಅನಂತ ಕಾಲದವರೆಗೆ ಅಸಂಖ್ಯ ಪ್ರದೇಶಿಯಾದ ಜೀವದಲ್ಲಿ ಜತೆಯಲ್ಲಿದೆ. ಯಾವ ಪ್ರಾಣಿಯು ಕೂಡ ಜ್ಞಾನ-ದರ್ಶನವಿಲ್ಲದೆ ಇದೆಯೆಂಬುದು ಸಂಭವಿಸುವುದಿಲ್ಲವೆಂಬುದನ್ನು ಎಲೈ ಶಿಷ್ಯನೇ ! ನೀನು ತಿಳಿದುಕೊಳ್ಳು. ಎಲ್ಲಿ ಆತ್ಮನಿದ್ದಾನೆ ಅಲ್ಲಿ ತಿಳಿಯುವ-ನೋಡುವ ವ್ಯಾಪಾರವಿದೆ. ಮತ್ತು ಎಲ್ಲಿ ತಿಳಿಯುವ-ನೋಡುವ ವ್ಯಾಪಾರವಿದೆ ಅಲ್ಲಿ ಆತ್ಮನಿದ್ದಾನೆಂದು ನೀನು ತಿಳಿದುಕೊಳ್ಳು.

ವ್ಯವಹಾರನಯದಿಂದ ಆತ್ಮ ಮತ್ತು ಉಪಯೋಗದಲ್ಲಿ ಭೇದವಿದೆ. ಕೇವಲಜ್ಞಾನ ಮತ್ತು ಕೇವಲೀ ಪ್ರಭುವೆಂಬ ಸಂಜ್ಞಾಭೇದದಿಂದ ಭೇದವಿದೆ. ಆದಾಗ್ಯೂ ಕೂಡ ಪ್ರದೇಶಭೇದದಿಂದ ಭೇದವಿಲ್ಲ . ಯಾವ ಪ್ರಕಾರ ಶರೀರ, ಮನಸ್ಸು, ವಾಣಿ, ಕರ್ಮಗಳು ಆತ್ಮನ ಪ್ರದೇಶದಿಂದ ಸರ್ವಥಾ ಬೇರೆಯಿವೆ ಅದೇ ಪ್ರಕಾರ ಉಪಯೋಗ ಮತ್ತು ಆತ್ಮನು ನಿಜವಾಗಿ ಬೇರೆಯಿಲ್ಲ . ಬೆಲ್ಲ ಮತ್ತು ಸಿಹಿತನದಲ್ಲಿ ವ್ಯವಹಾರದಿಂದ ಭೇದವಿದ್ದರೂ ಕೂಡ ಪರಮಾರ್ಥದಿಂದ ಭೇದವಿಲ್ಲ.

ಕಾರಣವೇನೆಂದರೆ ಗುಣದ ನಾಶವಾಗುವುದರಿಂದ ಗುಣಿಯ ನಾಶವಾಗುತ್ತದೆ ಮತ್ತು ಗುಣಿಯ ನಾಶದಿಂದ ಗುಣದ ನಾಶವಾಗುತ್ತದೆ ಆದುದರಿಂದ ಗುಣ-ಗುಣಿ ಏಕವಿದೆ. ಯಾವ ಪ್ರಕಾರ ಸಿಹಿತನದ ನಾಶವಾಗುವುದರಿಂದ ಬೆಲ್ಲದ ನಾಶವಾಗುತ್ತದೆ ಮತ್ತು ಉಷ್ಣತೆಯ ನಾಶವಾಗುವುದರಿಂದ ಅಗ್ನಿಯ ನಾಶವಾಗುತ್ತದೆ. ಅದೇ ಪ್ರಕಾರ ಉಪಯೋಗದ ನಾಶವಾಗುವುದರಿಂದ ಆತ್ಮನ ನಾಶವಾಗುತ್ತದೆ. ಮಕ್ಕಳು, ಕರ್ಮ, ಹಣ ಮೊದಲಾದವುಗಳ ನಾಶವಾಗುವುದರಿಂದ ಆತ್ಮನು ನಾಶಹೊಂದುವುದಿಲ್ಲ. ಆದರೆ ಜ್ಞಾನದ ನಾಶವಾಗುವುದರಿಂದ ಆತ್ಮನ ನಾಶವಾಗಿ ಹೋಗುತ್ತದೆ, ಆದುದರಿಂದ ಎರಡರ ಏಕತೆಯಿದೆ, ಎಂದರೆ ಉಪಯೋಗದಲ್ಲಿ ಮತ್ತು ಆತ್ಮನಲ್ಲಿ ಏಕತೆಯಿದೆಯೆಂದು ಹೇಳಲಾಗಿದೆ.

ಈಗ ಜ್ಞಾನೋಪಯೋಗದ ಭೇದ ತಿಳಿಸಿಕೊಡುತ್ತಾರೆ,-

**ಅಭಿಣಿಸುದೋಧಿಮಣಕೇವಲಾಣಿ ಣಾಣಾಣಿ ಪಂಚಭೇಯಾಣಿ ।**
**ಕುಮದಿಸುದವಿಭಂಗಾಣಿ ಯ ತಿಣ್ಣಿ ವಿ ಣಾಣೇಹಿಂ ಸಂಜುತ್ತೋ ॥೪೧॥**

**ಮತಿ, ಶ್ರುತ, ಅವಧಿ, ಮನಃಪರ್ಯಾಯ, ಕೇವಲವೆಂಬೈದು ಜ್ಞಾನಭೇದವಿವೆ ।**
**ಮತ್ತೆ ಕುಮತಿ, ಕುಶ್ರುತ, ವಿಭಂಗವೆಂಬೀ ಮೂರು ಜ್ಞಾನದೊಡನೆ ಸೇರಿಸಿದೆ ॥೪೧॥**

ಮತಿ, ಶ್ರುತ, ಅವಧಿ, ಮನಃಪರ್ಯಾಯ ಮತ್ತು ಕೇವಲವೆಂದು ಐದು ಪ್ರಕಾರದ ಸಮ್ಯಕ್ ಜ್ಞಾನಗಳಿವೆಯೆಂದು ತಿಳಿಯಬೇಕು. ಮತ್ತು ಕುಮತಿ, ಕುಶ್ರುತ, ವಿಭಂಗವೆಂದು ಅಜ್ಞಾನಗಳು ಮೂರು ಇವೆ. ಹೀಗೆ ಒಟ್ಟು ಎಂಟು ಭೇದಗಳಿವೆಯೆಂದು ತಿಳಿಯಬೇಕು.

**ಮತಿಜ್ಞಾನ :-** ಇಂದ್ರಿಯ ಮತ್ತು ಮನಸ್ಸಿನ ಅವಲಂಬನದಿಂದ ಮತಿಜ್ಞಾನವಾಗುತ್ತದೆಯೆಂದು ತತ್ತ್ವಾರ್ಥಸೂತ್ರದಲ್ಲಿ ಹೇಳಿದೆ ಅದು ನಿಮಿತ್ತದ ಉಪಸ್ಥಿತಿ ತಿಳಿಸುವುದಕ್ಕಾಗಿ ಹೇಳಿದೆ. ಜ್ಞಾನವು ಇಂದ್ರಿಯಗಳಿಂದ ಆಗುತ್ತಿದ್ದರೆ ಪುದ್ಗಲ ಮತ್ತು ಜೀವವು ಒಂದಾಗಿ ಹೋಗುವವು. ಆತ್ಮನಲ್ಲಿ ಇಂದ್ರಿಯ ಮತ್ತು ಮನಸ್ಸಿನ ಅಭಾವವಿದೆ. ನಿನ್ನ ಮತಿಜ್ಞಾನದ ಉಪಯೋಗವು ನಿನ್ನಿಂದ ಆಗುತ್ತದೆ, ಇಂದ್ರಿಯಗಳಿಂದ ಆಗುವುದಿಲ್ಲ.

**ಶ್ರುತಜ್ಞಾನ :-** ಶಾಸ್ತ್ರದಿಂದ ಶ್ರುತಜ್ಞಾನವಾಗುವುದಿಲ್ಲ. ಸ್ವಭಾವದ ಆಶ್ರಯದಿಂದ ಚೈತನ್ಯದ ಉಪಯೋಗದ ಪರಿಣಾಮವು ಅದು ಶ್ರುತಜ್ಞಾನವಿದೆ. ಅದು ಪರದ ಕಾರಣದಿಂದ ಇಲ್ಲ. ಹೇಗೆ ಶಬ್ದಗಳಿವೆ ಹಾಗೆ ಜ್ಞಾನವಾಗುತ್ತದೆಯಲ್ಲವೇ? ಶಬ್ದ ಮತ್ತು ಶಾಸ್ತ್ರಗಳು ಪುದ್ಗಲಾಸ್ತಿಕಾಯವಿವೆ, ಇದು ಜೀವಾಸ್ತಿಕಾಯದ ಜ್ಞಾನಗುಣದ ಉಪಯೋಗದ ವರ್ಣನೆ ನಡೆಯುತ್ತಿದೆ. ಉಪಯೋಗವು ಸ್ವದ ಅಸ್ತಿಯಲ್ಲಿ ಆಗುತ್ತದೆ, ಪರದ ಅಸ್ತಿಯಲ್ಲಿ ಆಗುವುದಿಲ್ಲ. ಅದಕ್ಕಾಗಿ ಶಬ್ದ, ಶಾಸ್ತ್ರ ಮೊದಲಾದವುಗಳ ಸಂಯೋಗದ ಅಭಿರುಚಿಯನ್ನು ಬಿಟ್ಟು ಪರ್ಯಾಯದಷ್ಟೇ ಮನ್ನಿಸುವುದನ್ನು ಬಿಡು, ನಿನ್ನ ತ್ರಿಕಾಲೀ ಜ್ಞಾನಗುಣದಿಂದ ತುಂಬಿಹೋದ ಸ್ವಭಾವದ ಅಭಿರುಚಿ ಮಾಡಿದರೆ ಧರ್ಮವಾಗುವಂತಿದೆ.

**ಅವಧಿಜ್ಞಾನ :-** ಇಂದ್ರಿಯ ಮತ್ತು ಮನಸ್ಸಿನ ಅವಲಂಬನೆಯಿಲ್ಲದೆ ಸ್ವರ್ಗ, ನರಕ ಮೊದಲಾದ ರೂಪೀ ಪದಾರ್ಥಗಳನ್ನು ಮರ್ಯಾದೆಗೆ ಒಳಪಟ್ಟು ತಿಳಿಯುವುದನ್ನು ಅವಧಿಜ್ಞಾನವೆಂದು ಹೇಳುತ್ತಾರೆ. ರೂಪೀ ಪದಾರ್ಥಗಳಿರುವುದರಿಂದ ಅವಧಿಜ್ಞಾನವಾಗುತ್ತದೆಯೆಂಬುದಾಗಿಲ್ಲ. ಆದರೆ ತ್ರಿಕಾಲೀ ಚೇತನಾಗುಣವಿದೆ ಅದರ ಉಪಯೋಗರೂಪದ ಅವಸ್ಥೆಯಲ್ಲಿ ಅವಧಿಜ್ಞಾನವಾಗುತ್ತದೆ. ಅದೇನು-ಪರ ಪದಾರ್ಥದ ಕಾರಣದಿಂದ ಆಗುವುದಿಲ್ಲ.

**ಮನಃಪರ್ಯಯಜ್ಞಾನ :-** ಎದುರಿನ ಜೀವದ ರೂಪೀ ಪದಾರ್ಥ ಸಂಬಂಧದ ಚಿಂತನೆಯನ್ನು ತಿಳಿದುಕೊಳ್ಳುವುದು ಅದು ಮನಃಪರ್ಯಯಜ್ಞಾನವಿದೆ. ಅದು ತನ್ನ ಆಂತರ್ಯದ ವ್ಯಾಪಾರವಿವೆ.

**ಕೇವಲಜ್ಞಾನ :-** ಅಸಂಖ್ಯ ಪ್ರದೇಶಗಳಲ್ಲಿನ ಸಮಸ್ತ ರೂಪೀ ಮತ್ತು ಅರೂಪೀ ಪದಾರ್ಥಗಳನ್ನು ಒಟ್ಟಿಗೆ, ಮೂರು ಕಾಲದ ಪರ್ಯಾಯಸಹಿತವಾಗಿ ತಿಳಿಯುವುದನ್ನು ಕೇವಲಜ್ಞಾನವೆಂದು ಹೇಳುತ್ತಾರೆ. ಅದು ಆಂತರ್ಯದ ವ್ಯಾಪಾರವಿದೆ. ಪಂಚೇಂದ್ರಿಯ, ಮನುಷ್ಯತ್ವ , ಗಟ್ಟಿಮುಟ್ಟಾದ ಸಂಹನನ ಅಥವಾ ಬಾಹ್ಯ ಕಾಲದ ಕಾರಣದಿಂದ ಕೇವಲ ಜ್ಞಾನವಾಗುವುದಿಲ್ಲ .

ದೇಶ-ದೇಶಾಂತರಗಳಲ್ಲಿ ಸಂಚಾರ ಮಾಡುವುದರಿಂದ, ಅಧಿಕ ಮನುಷ್ಯರೊಡನೆ ಸಂಪರ್ಕ ಮಾಡುವುದರಿಂದ, ಅಧಿಕ ಪುಸ್ತಕಗಳನ್ನು ಅಥವಾ ಶಾಸ್ತ್ರಗಳನ್ನು ಓದುವುದರಿಂದ ಜ್ಞಾನವು ಪ್ರಕಟವಾಗುತ್ತದೆಯೆಂದು ಅಜ್ಞಾನಿಗಳು ಮನ್ನಿಸಿದ್ದಾರೆ, ಆದರೆ ಅದೆಲ್ಲವೂ ಅಜ್ಞಾನ ಭಾವವಿದೆ ತನ್ನ ಜ್ಞಾನದ ವ್ಯಾಪಾರವು ತನ್ನಿಂದ ಆಗುತ್ತದೆ.

**ಕುಮತಿಜ್ಞಾನ :-** ಆತ್ಮನ ಜ್ಞಾನಸ್ವಭಾವದಿಂದ ಜ್ಞಾನವಾಗುತ್ತದೆಯೆಂಬುದನ್ನು ಮನ್ನಿಸದೆ ರಾಗ ಮತ್ತು ನಿಮಿತ್ತದಿಂದ ಜ್ಞಾನವಾಗುತ್ತದೆಂದು ಮನ್ನಿಸುವುದು ಅದು ಕುಮತಿಜ್ಞಾನವಿದೆ. ಅಜ್ಞಾನೀ ಗುರುಗಳು ದೊರಕುವುದರಿಂದ ನಮಗೆ ಅಜ್ಞಾನವಾಯಿತೆಂದು ಕೆಲವರು ಹೇಳುತ್ತಾರೆ, ಆದರೆ ಆ ಮಾತು ಅಸತ್ಯವಿದೆ. ಕುದೇವ, ಕುಗುರುಗಳ ಕಾರಣದಿಂದ ಅಜ್ಞಾನವಾಗುವುದಿಲ್ಲ , ಆದರೆ ಸ್ವಯಂ ವಿಪರೀತ ಜ್ಞಾನ ಮಾಡಿದರೆ ಆಗುತ್ತದೆ. ಅದು ತನ್ನ ಅಸ್ತಿಕಾಯದ ಜ್ಞಾನದ ವಿಪರೀತ ವ್ಯಾಪಾರವಿದೆ.

**ಕುಶ್ರುತಜ್ಞಾನ :-** ವೇದಾಂತದ ಅಧ್ಯಯನ, ಕಾಮಶಾಸ್ತ್ರದ ಅಧ್ಯಯನದಿಂದ ವಿಪರೀತ ಶ್ರುತಜ್ಞಾನ ವಾಗಿದೆಯೆಂಬ ಮಾತು ಅಸತ್ಯವಿದೆ. ಸ್ವಯಂ ಕುಶ್ರುತಜ್ಞಾನ ಮಾಡಿದ್ದಾನೆ ಅದು ತನ್ನ ಅಸ್ತಿಯಲ್ಲಿ ತನ್ನಿಂದ ಆಗಿದೆ.

**ವಿಭಂಗಜ್ಞಾನ :-** ರೂಪೀ ಪದಾರ್ಥಗಳನ್ನು ಎಂದರೆ ಸ್ವರ್ಗ, ನರಕಾದಿಗಳನ್ನು ತಿಳಿದುಕೊಳ್ಳುವ ಜ್ಞಾನಕೂಡ ಆತ್ಮನ ಜ್ಞಾನವಿಲ್ಲದೆ ಆಗುತ್ತದೆ ಅದನ್ನು ವಿಭಂಗಜ್ಞಾನವೆಂದು ಹೇಳುತ್ತಾರೆ. ಸ್ವರ್ಗ, ನರಕಾದಿಗಳ ಕರ್ತೃವೆಂದು ಮನ್ನಿಸುವುದು ಗುರುಗಳ ಕೃಪೆಯಿಂದ ಜ್ಞಾನವಾಯಿತೆಂದು ಮನ್ನಿಸುವುದು. ಇಂಥ ವಿಪರೀತ ಮನ್ನಣೆಯುಳ್ಳ ಜೀವನಿಗೆ ಕೆಲವೊಂದು ರೂಪೀ ಪದಾರ್ಥಗಳ ಸಂಬಂಧವಾಗಿ ತಿಳಿದುಕೊಳ್ಳುವ ಜ್ಞಾನವಿರುತ್ತದೆ ಅದನ್ನು ವಿಭಂಗಜ್ಞಾನವೆಂದು ಹೇಳುತ್ತಾರೆ. ಇದು ಕೂಡ ತನ್ನ ಕಾರಣದಿಂದ ಇದೆ ಪರದ ಕಾರಣದಿಂದ ಇಲ್ಲ .

ಹೀಗೆ ಜ್ಞಾನದ ಪರ್ಯಾಯಗಳು ತಮ್ಮ ಅಸ್ತಿಕಾಯದಲ್ಲಿ ತಮ್ಮಿಂದ ಆಗುತ್ತವೆಂಬ ಜ್ಞಾನ ಮಾಡಿಕೊಂಡರೆ ಪರದಿಂದ ಬೇರ್ಪಟ್ಟು ಜ್ಞಾನ ಪರ್ಯಾಯವು ಯಾವುದರೊಳಗಿಂದ ಬರುತ್ತದೆ ಇಂಥ ತ್ರಿಕಾಲೀ ಚೇತನಾದ ಧಾರಕವಾದಂಥ ಆತ್ಮಸ್ವಭಾವದ ಕಡೆಗೆ ದೃಷ್ಟಿಯಾಗುವುದು ಅದು ಧರ್ಮವಿದೆ.

**ಭಾವಾರ್ಥ :-** ಸ್ವಾಭಾವಿಕ ಭಾವದಿಂದ ಆತ್ಮನು ತನ್ನ ಸಮಸ್ತ ಪ್ರದೇಶವ್ಯಾಪಿಯಾದ ಅನಂತ ನಿರಾವರಣ ಶುದ್ಧಜ್ಞಾನ ಸಂಯುಕ್ತನಿದ್ದಾನೆ. ಆತ್ಮವಸ್ತುವು ಜ್ಞಾನದಿಂದ ತುಂಬಿಹೋಗಿದೆ ಅದು ರಾಗ-ದ್ವೇಷಗಳಿಂದ ತುಂಬಿಲ್ಲ . ಹಣ, ಕರ್ಮ ಅಥವಾ ಶರೀರರೂಪದಿಂದ ಆಗುವುದು ಅದು ಆತ್ಮನ ಸ್ವಭಾವವಲ್ಲ , ದಯೆ-ದಾನಾದಿಗಳ ವಿಕಲ್ಪಗಳು ಆತ್ಮನ ಸ್ವಭಾವವಲ್ಲ . ಆತ್ಮನು ಅಖಂಡ ಜ್ಞಾನಸ್ವಭಾವದಿಂದ ತುಂಬಿಕೊಂಡಿದ್ದಾನೆ.ಪರ್ಯಾಯದಲ್ಲಿ ಭೇದಗಳಾಗುತ್ತವೆ ಅವು ತಿಳಿದುಕೊಳ್ಳುವಂತಿವೆ, ಆದರೆ ಭೇದಗಳು ಅಂಗೀಕಾರ ಮಾಡುವಂತವುಗಳಿಲ್ಲ . ಕೇವಲ ಅಖಂಡ ಶುದ್ಧ ಚೈತನ್ಯಸ್ವಭಾವವು ಅಂಗೀಕಾರ ಮಾಡುವಂತಿವೆ.

ಆದರೆ ಸಂಸಾರೀ ಆತ್ಮನು ಅನಾದಿಕಾಲದಿಂದ ಕರ್ಮದ ವಶವರ್ತಿಯಾಗಿ ಹೀನ ಮತ್ತು ಅಲ್ಪಜ್ಞನಾಗಿ ವರ್ತಿಸುತ್ತಿದ್ದಾನೆ. ತನ್ನ ಸ್ವಭಾವವನ್ನು ಮರೆತು ಕರ್ಮದ ಜತೆಯಲ್ಲಿ ಸೇರುವುದರಿಂದ ತನ್ನ ಹೀನ ಅವಸ್ಥೆಯ ರೂಪದಿಂದ ಪರಿಣಮಿಸುತ್ತಿದ್ದಾನೆ, ಅದರಿಂದ ಸರ್ವಾಂಗ-ಅಸಂಖ್ಯ ಪ್ರದೇಶಗಳಲ್ಲಿ ಜ್ಞಾನಾವರಣೀಯ ಕರ್ಮದಿಂದ ಆಚ್ಛಾದಿತನಾಗಿದ್ದಾನೆಂದು ನಿಮಿತ್ತದಿಂದ ಕಥನ ಮಾಡಲಾಗಿದೆ.

ಆ ಜ್ಞಾನಾವರಣೀಯ ಕರ್ಮದ ಕ್ಷಯೋಪಶಮದ ನಿಮಿತ್ತದಿಂದ ಮತಿಜ್ಞಾನವು ಪ್ರಕಟವಾಗುತ್ತದೆ. ಈ ಕಥನವು ನಿಮಿತ್ತದಿಂದಿದೆ ನಾನು ನಿರ್ಮಲ ಚೈತನ್ಯಸ್ವಭಾವಿಯಿದ್ದೇನೆ, ಪರಪದಾರ್ಥಗಳನ್ನು ಮತ್ತು ರಾಗ-ದ್ವೇಷಗಳನ್ನು ತಿಳಿದುಕೊಳ್ಳುವವನಿದ್ದೇನೆ. ತಿಳಿದುಕೊಳ್ಳುವ ಕಾರ್ಯವು ನನ್ನಲ್ಲಿ ನನ್ನಿಂದ ಇದೆಯೆಂದು ಚೈತನ್ಯದ ಕಡೆಗೆ ದೃಷ್ಟಿಯಾದರೆ ಮತಿಜ್ಞಾನವು ಪ್ರಕಟವಾಗುತ್ತದೆ. ಅದರಲ್ಲಿ ಜ್ಞಾನಾವರಣೀಯ ಕರ್ಮದ ಕ್ಷಯೋಪಶಮವು ನಿಮಿತ್ತ ಮಾತ್ರವಿದೆ.

ಮನಸ್ಸು ಮತ್ತು ಪಂಚೇಂದ್ರಿಯಗಳ ಅವಲಂಬನದಿಂದ ಮೂರ್ತಿಕ ಹಾಗೂ ಅಮೂರ್ತಿಕ ದ್ರವ್ಯಗಳನ್ನು ವಿಶೇಷತೆಯಿಂದ ಯಾವ ಜ್ಞಾನದ ಮುಖಾಂತರ ಪರೋಕ್ಷವಾಗಿ ತಿಳಿದುಕೊಳ್ಳುವುದರಲ್ಲಿ ಬರುತ್ತದೆ ಅದನ್ನು ಮತಿಜ್ಞಾನವೆಂದು ಹೇಳಿದ್ದಾರೆ. ಇಲ್ಲಿ ನಿಮಿತ್ತ-ನೈಮಿತ್ತಿಕ ಸಂಬಂಧವನ್ನು ತಿಳಿಸಿಕೊಡಲಾಗಿದೆ. ತನ್ನ ಜ್ಞಾನ ಪರ್ಯಾಯವು ಕೀಳಾಗಿ ಪರಿಣಮಿಸಿರುವುದದಿಂದ ನಿಮಿತ್ತದ ಅವಲಂಬನೆ ಉಪಸ್ಥಿತವಾಗುತ್ತದೆ. ಆದಾಗ್ಯೂ ಜಡಇಂದ್ರಿಯ ಅಥವಾ ಕರ್ಮದ ಕಾರಣದಿಂದ ಜ್ಞಾನವಾಗುತ್ತದೆಯೆಂಬುದಾಗಿ ಇಲ್ಲವೇ ಇಲ್ಲ. ಭೇದರೂಪಜ್ಞಾನದ ಅವಸ್ಥೆಯಾಗುವುದೇ ಇಲ್ಲವೆಂದು ಯಾರಾದರೂ ಹೇಳಿದರೆ ಅದು ಅಸತ್ಯವಿದೆ, ಭೇದರೂಪಜ್ಞಾನದ ಅವಸ್ಥೆಯು ಕರ್ಮದ ಕ್ಷಯೋಪಶಮದ ಕಾರಣದಿಂದ ಅಥವಾ ಇಂದ್ರಿಯಗಳ ಕಾರಣದಿಂದ ಆಗುತ್ತದೆಯೆಂದು ಯಾರಾದರೂ ಮನ್ನಿಸಿದರೆ ಅದು ಕೂಡ ಅಸತ್ಯವಿದೆ, ಮತ್ತು ಮತಿಜ್ಞಾನದ ಅವಸ್ಥೆಯ ಸಮಯದಲ್ಲಿ ಕರ್ಮದ ಕ್ಷಯೋಪಶಮದ ಮತ್ತು ಇಂದ್ರಿಯ ಮೊದಲಾದವುಗಳ ನಿಮಿತ್ತತನವಿಲ್ಲವೇ ಇಲ್ಲವೆಂದು ಯಾರಾದರೂ ಹೇಳಿದರೆ ಅದು ಕೂಡ ಅಸತ್ಯವಿದೆ. ಆದಾಗ್ಯೂ ಇಂದ್ರಿಯಗಳ ಕಾರಣದಿಂದ ಜ್ಞಾನವಾಗುವುದಿಲ್ಲ, ಕಾರಣವೇನೆಂದರೆ ಆತ್ಮನಲ್ಲಿ ಜಡ ಇಂದ್ರಿಯಗಳ ಅಭಾವವಿದೆ. ಈ ಜಡ ಇಂದ್ರಿಯಗಳಿವೆ, ಶರೀರವಿದೆ, ಧರ್ಮ, ಅಧರ್ಮ, ಆಕಾಶ ಮೊದಲಾದ ಅಮೂರ್ತಿಕ ದ್ರವ್ಯಗಳಿವೆ, ಈ ಅಶುಭಭಾವವಿದೆ ಇತ್ಯಾದಿ ಮೂರ್ತ-ಅಮೂರ್ತ ಪದಾರ್ಥಗಳನ್ನು ತನ್ನ ಜ್ಞಾನ ಪರ್ಯಾಯದಲ್ಲಿ ಸ್ವಲಕ್ಷ್ಯದಿಂದ ತಿಳಿಯುತ್ತದೆ ಅದನ್ನು ಮತಿಜ್ಞಾನವೆಂದು ಹೇಳುತ್ತಾರೆ, ಅದರಲ್ಲಿ ಸ್ವಲ್ಪ ವಿಕಾಸವಿದೆ ಮತ್ತು ಸ್ವಲ್ಪ ಅವಿಕಾಸವಿದೆ ಎದುರಿಗೆ ಕರ್ಮದ ಕ್ಷಯೋಪಶಮವು ನಿಮಿತ್ತವಿದೆ ಮತ್ತು ಇಂದ್ರಿಯ, ಮನಸ್ಸುಗಳು ಬಾಹ್ಯ ನಿಮಿತ್ತವಿವೆ, ಅವಲಂಬನ ಎಂದರೆ ನಿಮಿತ್ತದ ಉಪಸ್ಥಿತಿ ಮಾತ್ರ, ಆದರೆ ನಿಮಿತ್ತದ ಕಾರಣದಿಂದಿಲ್ಲ . ಇಂದ್ರಿಯ ಮತ್ತು ಮನಸ್ಸುಗಳು ನಿಮಿತ್ತವಿವೆ ಅದಕ್ಕಾಗಿ ಪರೋಕ್ಷ ಜ್ಞಾನವೆಂದು ಹೇಳಿದೆ. ಆದರೆ ಸ್ವಪರ್ಯಾಯದ ಉಪಸ್ಥಿತಿಯಲ್ಲಿ ಮತ್ತು ಪರವಸ್ತುವಿನ ಸಹಾಯವಿಲ್ಲದೆ ತಿಳಿಯುತ್ತದೆ. ಎದುರಿಗೆ ಪದಾರ್ಥಗಳಿವೆ ಅದಕ್ಕಾಗಿ ಜ್ಞಾನವು ಅವನ್ನು ತಿಳಿಯುತ್ತದೆ ಎಂಬುದಾಗಿಲ್ಲ.

ಅಜ್ಞಾನೀ ಜೀವನು ಹೀಗೆ ಮನ್ನಿಸುತ್ತಾನೆ-ಈ ವಸ್ತುವು ಹುಳಿಯಿದೆ ಅದಕ್ಕಾಗಿ ಹುಳಿಯ ಜ್ಞಾನವಾಯಿತು, ಗಾಳಿಯ ಸ್ಪರ್ಶವಾದೊಡನೆ ಗಾಳಿಯ ಜ್ಞಾನ, ರೋಗವು ಬಂದರೆ ರೋಗದ ಜ್ಞಾನವಾಯಿತೆಂದು ಜ್ಞೇಯದ ಕಾರಣದಿಂದ ಅಥವಾ ಇಂದ್ರಿಯಗಳ ಕಾರಣದಿಂದ ಜ್ಞಾನವಾಯಿತೆಂದು ಮನ್ನಿಸಿದ್ದಾನೆ, ಅದೆಲ್ಲವು ಅಜ್ಞಾನಭಾವವಿದೆ. ಶರೀರ, ಇಂದ್ರಿಯಗಳು, ಚಿನ್ನ ಮೊದಲಾದ ಪುದ್ಗಲ ಪದಾರ್ಥಗಳು ಅಸ್ತಿಯಿವೆ, ಅವುಗಳ ಸ್ಕಂಧರೂಪವಾದ ಅವಸ್ಥೆಯು ಅದು ಕಾರಣವಿದೆ ಹೀಗೆ ಪುದ್ಗಲಾಸ್ತಿಕಾಯದ ಮತ್ತು ಜೀವಾಸ್ತಿಕಾಯದ ಪರ್ಯಾಯಗಳನ್ನು ಮನ್ನಿಸುವುದು ಅದು ಎರಡು ದ್ರವ್ಯಗಳ ಏಕತ್ವಬುದ್ಧಿಯಿದೆ-ಯಾವ ಪ್ರಕಾರ ನಿಮಿತ್ತಗಳಿರುತ್ತವೆ ಅದೇ ಪ್ರಕಾರ ಜ್ಞಾನವಾಗುತ್ತದೆ. ಸಮವಸರಣವನ್ನು ನೋಡಿದರೆ ಸಮವಸರಣದ ಜ್ಞಾನವಾಗುತ್ತದೆ. ಎದುರಿನ ವಸ್ತುವಿನ ಕಾರಣ ಜ್ಞಾನವಾಗುತ್ತದೆಯೆಂದು ಅಜ್ಞಾನಿಗೆ ಭ್ರಾಂತಿಯಾಗಿದೆ ! ಅವೆಲ್ಲವು ಪುದ್ಗಲ ಸ್ಕಂಧಗಳಿವೆ. ಆತ್ಮನಿಂದ ಭಿನ್ನವಿವೆ ಜೀವವು ದ್ರವ್ಯವಿದ್ದರೆ ಜ್ಞಾನವು ಅದರ ತ್ರಿಕಾಲೀ ಗುಣವಿದೆ. ಮತ್ತು ಅದರ ಮತಿಜ್ಞಾನರೂಪದ ಅವಸ್ಥೆಯಾಗುವುದು ಅದು ಜೀವದ ಪರ್ಯಾಯ ಧರ್ಮವಿದೆ. ಹೀಗೆ ದ್ರವ್ಯ-ಗುಣ-ಪರ್ಯಾಯ ಮೂರೂ ಸೇರಿ ಜೀವಾಸ್ತಿಕಾಯದ ಸ್ವರೂಪವು ಪೂರ್ಣವಾಗುತ್ತದೆ. ಹೀಗೆ ಪರದಿಂದ ಬೇರೆಯಾಗಿ ಮೂರರ ಯಥಾರ್ಥ ಜ್ಞಾನಮಾಡಿಕೊಳ್ಳುವುದು ಅದು ಭೇದಜ್ಞಾನವಿದೆ ಸಿಹಿಯ ಪ್ರವಾಹವು ಸಿಹಿಯ ಭಾಗದ

ಅಸ್ತಿತ್ವದಲ್ಲಿ ಪ್ರವಹಿಸುತ್ತದೆ ಅದರಂತೆ ಜ್ಞಾನದ ಪ್ರವಾಹವು ಅಖಂಡ ಜ್ಞಾನದ ಭಾಗದ ಅಸ್ತಿತ್ವದಲ್ಲಿ ಪ್ರವಹಿಸುತ್ತದೆ. ಇಂದ್ರಿಯಗಳಿಂದ, ಕರ್ಮದಿಂದ ಅಥವಾ ಪರಪದಾರ್ಥಗಳಿಂದ ಆ ಜ್ಞಾನವು ಪ್ರವಹಿಸುವುದಿಲ್ಲವೆಂದು ತನ್ನ ಶುದ್ಧ ಚೈತನ್ಯದ ಅವಲಂಬನದಿಂದ ಯಾವ ಜ್ಞಾನವು ಪ್ರಕಟವಾಗುತ್ತದೆ ಅದು ಸಮ್ಯಕ್ ಮತಿಜ್ಞಾನವಿದೆ ಮತ್ತು ಅದು ನಾಲ್ಕನೆಯ ಗುಣಸ್ಥಾನದಿಂದ ಹನ್ನೆರಡನೆಯ ಗುಣಸ್ಥಾನದವರೆಗೆ ಇರುತ್ತದೆ.

ತನ್ನ ಪುರುಷಾರ್ಥದಿಂದ ಶ್ರುತಜ್ಞಾನವಾಗುತ್ತದೆ ಅದರಲ್ಲಿ ಜ್ಞಾನಾವರಣೀಯ ಕರ್ಮದ ಕ್ಷಯೋಪಶಮ ಮತ್ತು ಮನಸ್ಸು ನಿಮಿತ್ತವಿದೆ. ಮನಸ್ಸು ನಿಮಿತ್ತವಿದೆ ಅಥವಾ ಬೇರೆ ಪದಾರ್ಥಗಳಿವೆ ಅದಕ್ಕಾಗಿ ಶ್ರುತಜ್ಞಾನವಾಗುತ್ತದೆ ಎಂಬುದಾಗಿಲ್ಲ; ಅದರಂತೆ ಕೇವಲ ಶಾಸ್ತ್ರದ ಲಕ್ಷ್ಯದಿಂದ ಮಾಡಿಕೊಂಡ ಜ್ಞಾನವು ಅದು ಕೂಡ ಶ್ರುತಜ್ಞಾನವಲ್ಲ , ಈ ಜಗತ್ತಿನಲ್ಲಿ ಆರು ದ್ರವ್ಯಗಳಿವೆ, ಅದರಲ್ಲಿ ಆತ್ಮನು ದ್ರವ್ಯನಿದ್ದಾನೆ, ಅವನಿಗೆ ತ್ರಿಕಾಲೀ ಜ್ಞಾನಗುಣವಿದೆ. ಅದರಲ್ಲಿ ಐದು ಸಮ್ಯಕ್ ಪರ್ಯಾಯಗಳಿವೆ.

ಅವು ತಮ್ಮಿಂದ ಆಗುತ್ತವೆ ಮತ್ತು ಹೀಗೆ ಪರ್ಯಾಯ ಭೇದಗಳಾಗುತ್ತವೆ ಅದು ಯಥಾರ್ಥವಿದೆ, ಭ್ರಮೆಯಲ್ಲ ಶ್ರುತಜ್ಞಾನದಲ್ಲಿ ಕರ್ಮದ ಕ್ಷಯೋಪಶಮ ಹಾಗೂ ಬಾಹ್ಯ ಮನವು ನಿಮಿತ್ತವಿದೆ, ಆದಾಗ್ಯೂ ಆ ಬಾಹ್ಯಮನದಿಂದ ಜ್ಞಾನವಾಗುವುದಿಲ್ಲ . ಹೀಗೆ ಭೇದವನ್ನು ಅಥವಾ ಜ್ಞಾನದ ಅಂಶವನ್ನು ಸ್ವತಂತ್ರ ಸ್ವೀಕರಿಸಿದ ಆ ಅಂಶವಷ್ಟು ಕೂಡ ಆತ್ಮನಿಲ್ಲ . ಆತ್ಮನಂತೂ ತ್ರಿಕಾಲೀ ಅಖಂಡ ಜ್ಞಾನಸ್ವರೂಪನಿದ್ದಾನೆಂದು ತ್ರಿಕಾಲದ ಅವಲಂಬನೆ ತೆಗೆದುಕೊಂಡು ಯಾವ ಜ್ಞಾನವು ಪ್ರಕಟವಾಗಿದೆ ಮತ್ತು ವಿಶೇಷತೆಯಿಂದ ಎಂದರೆ ಭೇದ ಮಾಡಿ ತಿಳಿಯುತ್ತದೆ ಅದು ಶ್ರುತಜ್ಞಾನವಿದೆ

ಭ. ಕುಂದಕುಂದಾಚಾರ್ಯ ದೇವರಂತೂ ಮೂಲ ಗಾಥೆಯಲ್ಲಿ ಜ್ಞಾನದ ಎಂಟು ಭೇದಗಳನ್ನು ಹೇಳಿದ್ದಾರೆ ಅದರಲ್ಲಿ ಅಮೃತಚಂದ್ರಾಚಾರ್ಯದೇವರು ಸ್ಪಷ್ಟ ಮಾಡುತ್ತ ಕರ್ಮ ಮತ್ತು ಬಾಹ್ಯ ಇಂದ್ರಿಯ ಅಥವಾ ಮನಸ್ಸು ನಿಮಿತ್ತವಿದೆಯೆಂದು ಸ್ಪಷ್ಟಪಡಿಸುತ್ತ ತಿಳಿಸಿದ್ದಾರೆ. ಇಲ್ಲಿ ಜೀವದ ಪುರುಷಾರ್ಥದ ಕಾರಣದಿಂದ ಜ್ಞಾನದ ವಿಕಾಸವಾದಾಗ ಕರ್ಮದ ಕ್ಷಯೋಪಶಮವು ಕರ್ಮದ ಕಾರಣದಿಂದ ಇರುತ್ತದೆಯೆಂದು ನಿಮಿತ್ತ ನೈಮಿತ್ತಿಕದ ಸಂಬಂಧ ತಿಳಿಸಿ ನಿಮಿತ್ತದಿಂದ ಭೇದ ತಿಳಿಸಿ ಜ್ಞಾನದ ಭೇದದಷ್ಟು ಕೂಡ ಆತ್ಮನಿಲ್ಲ , ಆತ್ಮನಂತೂ ಅಖಂಡ ಪರಿಪೂರ್ಣನಿದ್ದಾನೆಂದು ಭೇದಜ್ಞಾನ ಮಾಡುವುದು ಅದು ಧರ್ಮವಿದೆ.

ಹೀಗೆ ಸ್ವಭಾವದ ಆಶ್ರಯದಿಂದ ಪ್ರಕಟವಾಗುವ ಜ್ಞಾನವು ಸ್ವ ಹಾಗೂ ಪರಗಳೆರಡನ್ನು ತಿಳಿದುಕೊಳ್ಳುತ್ತದೆ, ಸಾಧಕ ದಶೆಯಲ್ಲಿ ಶುಭಾಶುಭ ಭಾವಗಳಾಗುತ್ತವೆ ಮತ್ತು ಯಾವ ಪ್ರಕಾರದ ರಾಗವಾಗುವುದು ಅದೇ ಪ್ರಕಾರದ ಜ್ಞಾನ ಮಾಡುತ್ತದೆ, ಆದರೆ ರಾಗವಾಗುತ್ತದೆ ಅದಕ್ಕಾಗಿ ಜ್ಞಾನವಾಗಿದೆಯೆಂಬುದಾಗಿಲ್ಲ . ಅಜ್ಞಾನಿಗೆ ಎಂಥ ರಾಗ ಅಂಥ ಜ್ಞಾನವಾಗಿದೆ ಅದಕ್ಕಾಗಿ ರಾಗದಿಂದ ಜ್ಞಾನವಾಗುತ್ತಿರಬೇಕೆಂದು ಭ್ರಾಂತಿಯಾಗಿದೆ, ಆದರೆ ಅದು ಭ್ರಮೆಯಿದೆ. ರಾಗವು ಚಾರಿತ್ರಗುಣದ ವಿಪರೀತ ಪರ್ಯಾಯವಿದೆ. ಶ್ರುತಜ್ಞಾನವು ಜ್ಞಾನಗುಣದ ನಿರ್ಮಲ ಪರ್ಯಾಯವಿದೆ. ಜ್ಞಾನಗುಣವು ಚಾರಿತ್ರಗುಣದ ಪರಾಧೀನವಿಲ್ಲ, ಆದರೆ ಸ್ವತಂತ್ರವಿದೆ. ಆತ್ಮನು ತ್ರಿಕಾಲೀ ಧ್ರುವ ವಸ್ತುವಿದ್ದಾನೆ. ಆತ್ಮನ ಅಸಂಖ್ಯ ಪ್ರದೇಶಗಳಲ್ಲಿ ತ್ರಿಕಾಲೀ ಜ್ಞಾನಗುಣವು ವ್ಯಾಪಕವಿದೆ. ಇಂಥ ಆತ್ಮನ ಆಶ್ರಯ ತೆಗೆದುಕೊಂಡು ಯಾವ ಶ್ರುತಜ್ಞಾನದ ಪರ್ಯಾಯವು ಅರಳಿದೆ ಆ ಜ್ಞಾನಪರ್ಯಾಯದಲ್ಲಿ ಯಾವ ಯಾವ ಪ್ರಕಾರದ ರಾಗವಾಗುವುದು ಆಯಾಯ ಪ್ರಕಾರದ ಚಾರಿತ್ರಗುಣದ ಸಹಾಯ ಪಡೆಯದೆ ಕರ್ಮದ ಅಥವಾ ಮನಸ್ಸಿನ ಸಹಾಯ ಪಡೆಯದೆ ತನ್ನ ಸಾಮರ್ಥ್ಯದಿಂದ ತಿಳಿದುಕೊಳ್ಳುತ್ತದೆ.

ಮತ್ತು ಜ್ಞಾನದಲ್ಲಿ ಬೇರೆ ಬೇರೆ ಪದಾರ್ಥಗಳ ಆಕಾರದ ಜ್ಞಾನವಾಗಿ ಹೋಗುತ್ತದೆ ಆದರೆ ಜ್ಞಾನವು ಅಷ್ಟು ಆಕಾರವುಳ್ಳದ್ದಾಗುವುದಿಲ್ಲ ಕೈಯಲ್ಲಿ ಗ್ಲಾಸು ಇರುವುದರಿಂದ ಜ್ಞಾನವು ಕೈಯ ರೂಪವಾಗುವುದಿಲ್ಲ . ಕೈಯಲ್ಲಿ ಗ್ಲಾಸು ಇದೆಯೆಂದು ಜ್ಞಾನವು ತನ್ನನ್ನು ತಿಳಿದೊಡನೆ ಪರವನ್ನು ತಿಳಿದುಕೊಳ್ಳುತ್ತದೆ. ಹೀಗೆ ತನ್ನನ್ನು ಹಾಗೂ ಪರವನ್ನು ತಿಳಿದುಕೊಳ್ಳುವ

ಸ್ವಭಾವವಿದೆ ಅದಕ್ಕಾಗಿ ಜ್ಞಾನವನ್ನು ಸಾಕಾರವೆಂದು ಹೇಳಲಾಗಿದೆ. ಆದರೆ ಅದರಿಂದ ಪರವಸ್ತುಗಳು ಜ್ಞಾನದಲ್ಲಿ ಬಂದು ಬಿಡುವುದಿಲ್ಲ . ಈ ರಾಗವಾಗಿದೆ, ಈ ದ್ವೇಷವಾಗಿದೆ, ಇದು ಶರೀರವಿದೆಯೆಂದು ಪರಪದಾರ್ಥಗಳನ್ನು ಹಾಗೂ ತನ್ನ ದ್ರವ್ಯ-ಗುಣ-ಪರ್ಯಾಯಗಳನ್ನು ಭೇದ ಮಾಡಿ ತಿಳಿದುಕೊಳ್ಳುವುದು ಅದು ಜ್ಞಾನದ ಸಾಮರ್ಥ್ಯವಿದೆ ಅದಕ್ಕಾಗಿ ಅದನ್ನು ಸಾಕಾರವೆಂದು ಹೇಳಲಾಗಿದೆ. ದರ್ಶನವು ಭೇದ ಮಾಡಿದಲ್ಲದೆ ಕೇವಲ ಸಾಮಾನ್ಯವಾಗುವಿಕೆಯನ್ನು ಗ್ರಹಣ ಮಾಡುವುದು ಅದಕ್ಕಾಗಿ ದರ್ಶನವನ್ನು ನಿರಾಕಾರವೆಂದು ಹೇಳಿದೆ.

ಆತ್ಮನ ಅಸಂಖ್ಯ ಪ್ರದೇಶಗಳಲ್ಲಿ ಜ್ಞಾನವು ವ್ಯಾಪಿಸಿಕೊಂಡಿದೆ ಇಂಥದರಲ್ಲಿ ವ್ಯಾಪಿಸಿದೆ ಮತ್ತು ಇಂಥದರಲ್ಲಿ ವ್ಯಾಪಿಸಿಲ್ಲವೆಂಬುದು ಸಂಭವಿಸುವುದಿಲ್ಲ . ಅಖಂಡ ಜ್ಞಾನಸ್ವಭಾವಿಯಾದ ಆತ್ಮನ ಆಶ್ರಯದಿಂದ ಯಾವ ವಿಶೇಷ ಜ್ಞಾನವು ಪ್ರಕಟವಾಗುತ್ತದೆ ಅದು ಶ್ರುತಜ್ಞಾನದ ಪರ್ಯಾಯವಿದೆ. ಅದು ಅದರ ಭೇದಧರ್ಮವಿದೆ. ಅಭೇದದಲ್ಲಿ ಭೇದಧರ್ಮವಿದೆ, ಏಕದೊಳಗಿಂದ ಅನೇಕವಾಗುವುದು ಅದು ಅದರ ಅಸ್ತಿಧರ್ಮವಿದೆ, ಪರದ ಕಾರಣದಿಂದಿಲ್ಲ . ಧರ್ಮಾತ್ಮ ಜೀವನಿಗೆ ಪೂರ್ಣವೀತರಾಗತೆಯಾಗುವುದಿಲ್ಲ ಅಲ್ಲಿಯವರೆಗೆ ಶುಭ ಅಥವಾ ಅಶುಭ ಭಾವಗಳಿರುತ್ತವೆ, ಆದರೆ ಆ ರಾಗದಿಂದ ಅಥವಾ ನಿಮಿತ್ತದಿಂದ ಜ್ಞಾನವು ಪ್ರಕಟವಾಗುವುದಿಲ್ಲ . ತ್ರಿಕಾಲಚೈತನ್ಯಸ್ವಭಾವವು ಏಕರೂಪದ ದೃಷ್ಟಿಮಾಡಿದರೆ ಅನೇಕ ಭೇದರೂಪ ಜ್ಞಾನದ ಅವಸ್ಥೆಯಾಗುತ್ತದೆ ಅದು ನಿನ್ನಲ್ಲಿ ಆಗುತ್ತದೆ, ನಿನ್ನ ಜ್ಞಾನಗುಣದ ಕಾರಣದಿಂದ ಆಗುತ್ತದೆ, ಇಂದ್ರಿಯಗಳ ಕಾರಣದಿಂದ ಪರಜ್ಞೇಯಗಳ ಕಾರಣದಿಂದ, ರಾಗದ ಕಾರಣದಿಂದ ಅಥವಾ ಕರ್ಮದ ಕ್ಷಯೋಪಶಮದ ಕಾರಣದಿಂದ ಆ ಅವಸ್ಥೆಯಾಗುವುದಿಲ್ಲ . ಈ ಪ್ರಕಾರ ಯಾವ ಸಮ್ಯಕ್ ಶ್ರುತಜ್ಞಾನವು ಪ್ರಕಟವಾಗಿದೆ ಅದು ಮೂರ್ತ ಹಾಗೂ ಅಮೂರ್ತ ಪದಾರ್ಥಗಳನ್ನು ತಿಳಿಯುತ್ತದೆ ಆದರೆ ಅದನ್ನು ಹಿಂದೆ ಮುಂದೆ ಮಾಡುವ ಸಾಧ್ಯತೆಯಿಲ್ಲ . ವಾಣಿ, ಪುಸ್ತಕ ಅಥವಾ ಮುಖವು ಜಡವಿದೆ. ಮಾತನಾಡುವ ರಾಗವಾಗುವುದು ಅದು ಚಾರಿತ್ರಗುಣದ ವಿಪರೀತ ಪರ್ಯಾಯವಿದೆ ಅವೆಲ್ಲವೂ ತಮ್ಮ ತಮ್ಮಲ್ಲಿ ಇವೆ, ಜ್ಞಾನವು ಜ್ಞಾನದಲ್ಲಿದೆ. ಪರದಿಂದ ಅಥವಾ ರಾಗದಿಂದ ಜ್ಞಾನವಾಗುವುದಿಲ್ಲವೆಂಬುದನ್ನು ಜ್ಞಾನವು ತಿಳಿಯುತ್ತದೆ.

ಶ್ರುತಜ್ಞಾನವಂತೂ ಏಕೇಂದ್ರಿಯ ಜೀವದಿಂದ ಹಿಡಿದು ಅಸಂಜ್ಞೀ ಪಂಚೇಂದ್ರಿಯವರೆಗಿನ ಜೀವಗಳಿಗೆ ಇರುತ್ತದೆಯೆಂದು ಹೇಳಿದೆ. ಆದರೆ ಅದು ಮಿಥ್ಯಾಜ್ಞಾನವಿದೆ. ತನ್ನ ಆತ್ಮದ್ರವ್ಯದೊಳಗಿಂದ ಜ್ಞಾನವು ಪ್ರವಹಿಸುತ್ತದೆಯೆಂಬುದರ ಅರಿವು ಅವನಿಗಿಲ್ಲ . ನಿಮಿತ್ತದಿಂದ ಹಾಗೂ ಪರದಿಂದ ಜ್ಞಾನವಾಗುತ್ತದೆಯೆಂದು ಮನ್ನಿಸುವುದರಿಂದ ಅದು ಮಿಥ್ಯಾಜ್ಞಾನವಿದೆ ಅಕ್ಷರ ಹೇಳುವುದರಿಂದ ಶುದ್ಧಚೈತನ್ಯದ ಅವಲಂಬನದಿಂದ ಯಾವ ಭಾವ ಶ್ರುತಜ್ಞಾನವಾಗುತ್ತದೆ ಅದನ್ನು ಇಲ್ಲಿ ಸ್ವೀಕರಿಸಬೇಕು ಮನಸ್ಸಿನ ನಿಮಿತ್ತದಿಂದ ಯಾವ ಪರೋಕ್ಷ ಭಾವಶ್ರುತಜ್ಞಾನವಾಗುತ್ತದೆ ಅದನ್ನು ಇಲ್ಲಿ ಸ್ವೀಕರಿಸಬೇಕು.

ಪುಸ್ತಕದ ಕಾರಣದಿಂದ ಜ್ಞಾನವಾಗುತ್ತದೆ, ದೇಶಾಂತರಕ್ಕೆ ಹೋಗುವುದರಿಂದ ಜ್ಞಾನವಾಗುತ್ತದೆಯೆಂದು ಯಾವ ಜೀವರುಗಳು ಮನ್ನಿಸುತ್ತಾರೆ ಆ ಜೀವರುಗಳು ತಮ್ಮ ಜ್ಞಾನಸ್ವಭಾವದ ಅಭಾವವನ್ನು ಮನ್ನಿಸಿದ್ದಾರೆ ಮತ್ತು ನಿಮಿತ್ತದೊಳಗಿಂದ ಜ್ಞಾನವು ಬರುತ್ತದೆಯೆಂದು ಮನ್ನಿಸಿದ್ದಾರೆ. ಯಾವ ಪ್ರಕಾರ ಪರ್ವತ ಪ್ರದೇಶದಲ್ಲಿ ನೀರು ತುಂಬಿಕೊಂಡಿರುತ್ತದೆ ಅದರೊಳಗಿಂದ ನೀರು ಪ್ರವಹಿಸುತ್ತದೆ ಅದೇ ಪ್ರಕಾರ ಆತ್ಮನು ಜ್ಞಾನಾನಂದ ಸ್ವಭಾವದಿಂದ ತುಂಬಿಕೊಂಡಿದ್ದಾನೆ ಅವನೊಳಗಿಂದ ಜ್ಞಾನಜಲವು ಪ್ರವಹಿಸುತ್ತದೆಯೆಂದು ಮಿಥ್ಯಾದೃಷ್ಟಿಗೆ ಅರಿವಿಲ್ಲದಿರುವುದರಿಂದ ಅವನ ಜ್ಞಾನವು ಮಿಥ್ಯೆಯಿದೆ. ನನ್ನ ಜ್ಞಾನಸ್ವಭಾವವು ಆಂತರ್ಯದಲ್ಲಿದೆ ಮತ್ತು ನಾನು ಆಂತರ್ಯದಲ್ಲಿ ತಿರುಗಿದರೆ ನನ್ನ ವಿಕಾಸವಾಗುವುದೆಂದು ಅಜ್ಞಾನಿಗೆ ಅರಿವಿರುವುದಿಲ್ಲ ಆಂತರ್ಯದಲ್ಲಿ ಶುದ್ಧಚೈತನ್ಯ ಜ್ಞಾನಸ್ವಭಾವದಲ್ಲಿ ಏಕಾಗ್ರವಾದರೆ ಭಾವಶ್ರುತಜ್ಞಾನವು ಪ್ರಕಟವಾಗುವಂತಿದೆ ಮತ್ತು ಅದು ವೃದ್ಧಿಹೊಂದಿ ಕೇವಲಜ್ಞಾನವು ಪ್ರಕಟವಾಗುತ್ತದೆ. ಅದರ ಮುಖಾಂತರ ಸಂಪೂರ್ಣ ಜಗತ್ತಿನ ಜ್ಞಾನವಾಗಿ ಹೋಗುವುದು.

ಅದೆಷ್ಟೋ ಜೀವರುಗಳು ಎಲ್ಲವೂ ಸೇರಿ ಒಬ್ಬ ಆತ್ಮನಿದ್ದಾನೆಂದು ಮನ್ನಿಸಿದ್ದಾರೆ, ಆತ್ಮನನ್ನು ಏಕಾಂತ ಕೂಟಸ್ಥನೆಂದು

ಮನ್ನಿಸಿದ್ದಾರೆ. ಹೀಗೆ ಏಕಾಂತ ಮನ್ನಿಸುವವರ ಸಲುವಾಗಿ ಅಮೃತಚಂದ್ರಾಚಾರ್ಯದೇವರು ಎಲ್ಲವನ್ನೂ ಸ್ಪಷ್ಟ ಮಾಡಿದ್ದಾರೆ. ಆತ್ಮ ಮತ್ತು ಬೇರೆ ದ್ರವ್ಯಗಳಿವೆ, ಆತ್ಮನು ಅಭೇದ ಮತ್ತು ಅಸಂಖ್ಯ ಪ್ರದೇಶಿಯಿದ್ದಾನೆ. ಇವನಲ್ಲಿ ತ್ರಿಕಾಲ ಜ್ಞಾನಗುಣವಿದೆ. ಅದರಲ್ಲಿ ಎಂಟು ಪ್ರಕಾರದ ಅವಸ್ಥೆಗಳಾಗುತ್ತವೆ. ಸಂಸಾರಾವಸ್ಥೆಯ ಸಮಯದಲ್ಲಿ ಪರೋಕ್ಷತೆ ಮತ್ತು ಅಲ್ಪಜ್ಞತೆ ಕೂಡ ಇದೆ, ಅದು ತನ್ನ ಕಾರಣದಿಂದ ಇದೆ. ಕರ್ಮದ ಕ್ಷಯೋಪಶಮ ಹಾಗೂ ಇಂದ್ರಿಯ ಮೊದಲಾದವುಗಳ ನಿಮಿತ್ತವಿದ್ದರೂ ಕೂಡ ನಿಮಿತ್ತದಿಂದ ಜ್ಞಾನದ ಪರಿಣಮನವಿಲ್ಲ. ಎದುರಿಗೆ ಇತರ ಪದಾರ್ಥಗಳು ಕೂಡ ಇವೆಯೆಂದು ವ್ಯವಹಾರ, ನಿಮಿತ್ತ-ನೈಮಿತ್ತಿಕ ಸಂಬಂಧ, ಕರ್ಮ, ಬೇರೆ ಪದಾರ್ಥಗಳು, ಭೇದರೂಪ ಪರ್ಯಾಯ ಹಾಗೂ ಅಭೇದ ಆತ್ಮನೆಂದು ಎಲ್ಲವುಗಳ ಯಥಾರ್ಥ ಜ್ಞಾನ ಮಾಡಿಸಿದೆ. ಹೀಗೆ ಸ್ವತಂತ್ರಜ್ಞಾನ ಮಾಡಿಕೊಂಡು ಆತ್ಮನ ಕಡೆಗೆ ಪ್ರವೃತ್ತಿ ಮಾಡಿದರೆ ಸಮ್ಯಜ್ಞಾನವಾಗುತ್ತದೆ ಮತ್ತು ಅದೇ ಧರ್ಮವಿದೆ.

**ಅವಧಿಜ್ಞಾನ :-** ಜ್ಞಾನಾವರಣೀಯ ಕರ್ಮದ ಕ್ಷಯೋಪಶಮದ ನಿಮಿತ್ತದಿಂದ ರೂಪೀ ಪದಾರ್ಥಗಳನ್ನು ಏಕದೇಶ ತಿಳಿಯುವ ಸಾಧ್ಯತೆಯಿರುವುದನ್ನು ಅವಧಿಜ್ಞಾನವೆಂದು ಹೇಳಿದೆ. ಯಾವನೋ ಓರ್ವ ಸಮ್ಯಜ್ಞಾನಿ ಜೀವನು ಆಂತರ್ಯದಲ್ಲಿ ಉಪಯೋಗ ತೊಡಗಿಸಿದರೆ ಸ್ವರ್ಗ-ನರಕಾದಿಗಳ ಜ್ಞಾನವಾಗುತ್ತದೆ. ಆದರೆ ಆ ಸ್ವರ್ಗ-ನರಕಾದಿಗಳು ಇವೆಯೆಂದು ಅವಧಿಜ್ಞಾನವಾಗುತ್ತದೆಯೆಂಬುದಾಗಿಲ್ಲ . ಜ್ಞೇಯಗಳಂತೂ ಯಾವಾಗಲೂ ಇವೆ, ಜ್ಞೇಯದ ಕಾರಣದಿಂದ ಜ್ಞಾನವಾಗುವುದಾದರೆ ಎಲ್ಲರಿಗೂ ಆಗಬೇಕಾಗುವುದು, ಆದರೆ ಹೀಗೆ ಇಲ್ಲ ತ್ರಿಕಾಲಸ್ವಭಾವದ ಅವಲಂಬನೆಯಿಂದ ಸಮ್ಯಗ್ದೃಷ್ಟಿ ಜೀವದಲ್ಲಿ ಯಾವನೋ ಓರ್ವ ಜೀವನಿಗೆ ರೂಪೀ ಪದಾರ್ಥಗಳನ್ನು ಮರ್ಯಾದೆಗೆ ಒಳಪಟ್ಟು ತಿಳಿದುಕೊಳ್ಳುವ ಜ್ಞಾನವಾಗುತ್ತದೆ ಅದು ನಾಲ್ಕೂ ಗತಿಗಳಲ್ಲಿ ಇರುತ್ತದೆ.

**ಮನಃಪರ್ಯಯಜ್ಞಾನ :-** ಜ್ಞಾನಾವರಣೀಯ ಕರ್ಮದ ಕ್ಷಯೋಪಶಮದ ನಿಮಿತ್ತದಿಂದ ಬೇರೆ ಜೀವರುಗಳ ಮನಸ್ಸಿನಲ್ಲಿರುವ ರೂಪೀ ಪದಾರ್ಥಗಳನ್ನು ಮರ್ಯಾದೆಗೆ ಒಳಪಟ್ಟು ತಿಳಿಯುವುದನ್ನು ಮನಃಪರ್ಯಾಯ ಜ್ಞಾನವೆಂದು ಹೇಳುತ್ತಾರೆ. ಭಾವಲಿಂಗೀ ಮುನಿಗಳಲ್ಲಿ ಯಾವನೋ ಓರ್ವ ಮುನಿಗೆ ಈ ಜ್ಞಾನವಾಗುತ್ತದೆ. ತೀರ್ಥಂಕರರುಗಳು ದೀಕ್ಷೆ ಸ್ವೀಕರಿಸುತ್ತಿದ್ದಂತೆಯೇ ಮನಃಪರ್ಯಾಯ ಜ್ಞಾನವು ಪ್ರಕಟವಾಗುತ್ತದೆ. ಮುನಿತನವನ್ನು ಸ್ವೀಕರಿಸುವ ಮಾತ್ರದಿಂದ ಇದು ಪ್ರಕಟವಾಗುತ್ತದೆ ಎಂಬುದಾಗಿಲ್ಲ , ಆದರೆ ಆಂತರ್ಯದ ಸಾಮರ್ಥ್ಯದ ಆಧಾರದಿಂದ ಪ್ರಕಟವಾಗುತ್ತದೆ.

**ಕೇವಲಜ್ಞಾನ :-** ಸರ್ವಥಾ ಪ್ರಕಾರದಿಂದ ಜ್ಞಾನಾವರಣೀಯ ಕರ್ಮದ ಕ್ಷಯವಾಗುವುದರಿಂದ ಯಾವ ಜ್ಞಾನದ ಮುಖಾಂತರ ಜಗತ್ತಿನ ಸಮಸ್ತ ಮೂರ್ತಿಕ ಮತ್ತು ಅಮೂರ್ತಿಕ ಪದಾರ್ಥಗಳನ್ನು ದ್ರವ್ಯ-ಗುಣ-ಪರ್ಯಾಯ ಸಹಿತವಾಗಿ ಪ್ರತ್ಯಕ್ಷ ತಿಳಿಯುತ್ತದೆ ಅದನ್ನು ಕೇವಲಜ್ಞಾನವೆಂದು ಹೇಳುತ್ತಾರೆ. ಆತ್ಮನು ಜ್ಞಾನ ಸ್ವಭಾವಿಯಿದ್ದಾನೆ, ಜ್ಞಾನದಿಂದ ಪ್ರಭು ಇದ್ದಾನೆ, ಅವನಲ್ಲಿ ಲೀನತೆ ಮಾಡುವುದರಿಂದ ಕೇವಲಜ್ಞಾನವು ಪ್ರಕಟವಾಗುತ್ತದೆ. ದೀಪದ ಕಡ್ಡಿಯನ್ನು ಘರ್ಷಿಸುವುದರಿಂದ ಅಗ್ನಿಯುಂಟಾಗುತ್ತದೆ ಆ ಅಗ್ನಿಯು ಕಡ್ಡೀಪೆಟ್ಟಿಗೆಯ ಮಗ್ಗಲಿಗೆ ಘರ್ಷಿಸುವುದರಿಂದ ಆಗುವುದಿಲ್ಲ, ಅದೇ ಪ್ರಕಾರ ಗಟ್ಟಿಮುಟ್ಟಾದ ಸಂಹನನ, ಮನಸ್ಸು, ವಾಣಿ ಅಥವಾ ಪುಣ್ಯ-ಪಾಪದ ವಿಕಲ್ಪಗಳೆಲ್ಲವು ಕಡ್ಡಿಪೆಟ್ಟಿಗೆಯ ಸಮಾನವಿವೆ ಅವನ್ನು ಘರ್ಷಿಸುವುದರಿಂದ ಕೇವಲಜ್ಞಾನವಾಗುವುದಿಲ್ಲ , ಆದರೆ ಚೈತನ್ಯ ಸ್ವಭಾವದಲ್ಲಿ ಏಕಾಗ್ರವಾಗುವುದರಿಂದ ಕೇವಲಜ್ಞಾನರೂಪದ ಅಗ್ನಿಯು ಉತ್ಪನ್ನವಾಗುತ್ತದೆ. ವಜ್ರಋಷಭನಾರಾಚ ಸಂಹನನವಿದೆ, ಮನುಷ್ಯದೇಹವಿದೆ, ಕರ್ಮದ ಅಭಾವವಿದೆ ಅದಕ್ಕಾಗಿ ಕೇವಲಜ್ಞಾನವಾಗಿದೆಯೆಂಬ ಕಥನವು ನಿಮಿತ್ತದ ಜ್ಞಾನ ಮಾಡಿಸುವ ಸಲುವಾಗಿ ಇದೆ. ಮತ್ತು 'ಆ ಸದ್ಗುರು ಉಪದೇಶದಿಂದ ಪಡೆದೆನು ಕೇವಲಜ್ಞಾನ'ವೆಂಬ ವಾಕ್ಯವು ಸದ್ಗುರುವಿನ ಉಪದೇಶದಿಂದ ಕೇವಲಜ್ಞಾನವಾಗುವುದಿಲ್ಲ .

ಮತ್ತು 'ಕೇವಲಜ್ಞಾನಿಗಳು ಎಲ್ಲವನ್ನೂ ತಿಳಿದುಕೊಂಡಿರುವುದರಿಂದ ನಂತರ ಪುರುಷಾರ್ಥವೇನೂ ಉಳಿದಿರುವುದಿಲ್ಲ , ಕೇವಲಿಗಳು ಎಷ್ಟು ಭವಗಳನ್ನು ನೋಡಿದ್ದಾರೆ ಅಷ್ಟು ಆಗುವವು ನೀವು ಅದರಲ್ಲಿ ಅದಲು ಬದಲು

ಮಾಡುವ ಸಾಧ್ಯತೆಯಿಲ್ಲ'ವೆಂದು ಅಜ್ಞಾನೀ ಜೀವರುಗಳು ತರ್ಕ ಮಾಡುತ್ತಾರೆ. ಇವರು ಕೇವಲಜ್ಞಾನಿ ಭಗವಂತರಿದ್ದಾರೆಂಬುದನ್ನು ಯಾರು ಜ್ಞಾನದಲ್ಲಿ ನಿರ್ಣಯ ಮಾಡಿದ್ದಾರೆ ? ಅವರ ಜ್ಞಾನದಲ್ಲಿ ಹೀಗೆ ನಿರ್ಣಯವಾಗುತ್ತದೆ ಯಾವ ಪ್ರಕಾರ ಕೇವಲೀ ಭಗವಂತರು ಪರಿಪೂರ್ಣ ದಶೆಯನ್ನು ಪ್ರಾಪ್ತಮಾಡಿಕೊಂಡಿದ್ದಾರೆ ಅದೇ ಪ್ರಕಾರ ನಾನು ಕೂಡ ಸರ್ವಜ್ಞ ಶಕ್ತಿಯುಕ್ತನಿದ್ದೇನೆ, ನನ್ನಲ್ಲಿ ಕೇವಲಿಯಾಗುವ ಸಾಮರ್ಥ್ಯವಿದೆ ನನ್ನ ಕೇವಲಜ್ಞಾನದ ಪರ್ಯಾಯವು ನನ್ನ ಆಶ್ರಯದಿಂದ ಪ್ರಕಟವಾಗುತ್ತದೆ. ಆದರೆ ಸಂಹನನದಿಂದ, ರಾಗದಿಂದ ಅಥವಾ ಕ್ಷೇತ್ರದಿಂದ ಕೇವಲಜ್ಞಾನವು ಪ್ರಕಟವಾಗುವುದಿಲ್ಲವೆಂದು ಯಾರು ತಮ್ಮ ದ್ರವ್ಯದ ಆಶ್ರಯದಿಂದ ರುಚಿಪೂರ್ವಕವಾಗಿ ನಿರ್ಣಯ ಮಾಡಿದ್ದಾರೆ ಅವರಿಗೆ ಶ್ರುತಜ್ಞಾನವು ಪ್ರಕಟವಾಗಿ ಕೇವಲಜ್ಞಾನವಾಗುತ್ತದೆ. ಪ್ರಭುಗಳು ಹೇಳಿದ್ದಾರೆ ಅದಕ್ಕಾಗಿ ಇಲ್ಲ, ಆದರೆ ತಮ್ಮ ಆಶ್ರಯದಿಂದ ನಿರ್ಣಯ ಮಾಡಿದ್ದಾರೆ ಹೀಗೆ ತಮ್ಮ ತ್ರಿಕಾಲಜ್ಞಾನ ಸ್ವಭಾವದ ಆಶ್ರಯದಿಂದ ಸರ್ವಜ್ಞತೆಯನ್ನು ಸ್ವೀಕರಿಸಿದ ಜೀವನಿಗೆ ಭವಗಳಿರುವ ಸಾಧ್ಯತೆಯಿಲ್ಲ ಎಂದರೆ ಒಂದೆರಡು ಭವಗಳಲ್ಲಿ ಅವನು ಕೇವಲಜ್ಞಾನವನ್ನು ಪಡೆದುಕೊಳ್ಳುವವನಿದ್ದಾನೆ, ಇದೇ ಪುರುಷಾರ್ಥವಿದೆ. ಯಾರು ಕೇವಲಜ್ಞಾನದ ನಿರ್ಣಯ ಮಾಡಿದ್ದಾರೆ ಅವರಿಗೆ ಭವಗಳಿರುವುದಿಲ್ಲ.

ಇದು ಜೀವ ದ್ರವ್ಯವಿದ್ದು ಅದರದು ತ್ರಿಕಾಲ ಶುದ್ಧಸ್ವರೂಪವಿದೆ. ಜೀವದ್ರವ್ಯವು ಒಂದಿದ್ದು ಅದರ ಗುಣಗಳು ಅನಂತವಿವೆ. ಪ್ರತಿಯೊಂದು ಗುಣದ ಪರಿಣಮನವು ಸ್ವತಂತ್ರವಾಗುತ್ತಿರುತ್ತದೆ **ದ್ರವ್ಯ, ಗುಣ ಮತ್ತು ಪರ್ಯಾಯದ ಯಾವ ಮರ್ಯಾದೆಯಿದೆ ಅದರ ಜ್ಞಾನವಾದರೆ ಪರ್ಯಾಯ ಬುದ್ಧಿಯು ಹೊರಟು ಹೋಗಿ ಸ್ವಭಾವವನ್ನು ಉಪಾದೇಯವೆಂದು ಮನ್ನಿಸುವ ರೂಪದ ಬುದ್ಧಿ ಮಾಡುವನು.** ಆದರೆ ಯಾವುದನ್ನು ಹೇಯವೆಂದು ಮನ್ನಿಸಿದೆ ಅದರ ಜ್ಞಾನವಂತೂ ಮಾಡಿಕೊಳ್ಳಬೇಕಲ್ಲವೇ ? ಪುಣ್ಯ-ಪಾಪದ ವಿಕಾರಿಭಾವಗಳು ಬಿಟ್ಟುಕೊಡುವಂತಿವೆ, ಕ್ಷಣ-ಕ್ಷಣಕ್ಕೆ ಯಾವ ಪರ್ಯಾಯವಾಗುತ್ತದೆ ಅದು ಒಂದು ಸಮಯ ಮಾತ್ರದ್ದಿದೆ ಅದಕ್ಕಾಗಿ ಅದರ ರುಚಿಕೂಡ ಬಿಟ್ಟುಕೊಡುವಂತಿದೆ. ಆದರೆ ಬಿಟ್ಟುಕೊಡುವುದು ಯಾವಾಗ ? ಯಥಾರ್ಥ ಜ್ಞಾನಮಾಡಿಕೊಂಡರೆ ತಾನೇ ಬಿಟ್ಟು ಹೋಗುವುದು.

ಆತ್ಮನು ಅಖಂಡ ಜ್ಞಾನಮೂರ್ತಿಯಿದ್ದಾನೆ, ಅವನಲ್ಲಿ ಜ್ಞಾನಗುಣವು ತ್ರಿಕಾಲವಿದೆ ಮತ್ತು ಅದರ ಪರಿಣಮನವು (ಸಮ್ಯಕ್) ಐದು ಪ್ರಕಾರದಿಂದ ಇರುತ್ತದೆ ಮತ್ತು ಅಲ್ಲಿ ಕರ್ಮದ ಕ್ಷಯೋಪಶಮವು ನಿಮಿತ್ತವಿದೆ, ನಿಮಿತ್ತವಿಲ್ಲವೆಂಬುದು ಸಂಭವಿಸುವುದಿಲ್ಲ. ಆದಾಗ್ಯೂ ನಿಮಿತ್ತದ ಮುಖಾಂತರ ಜ್ಞಾನವಾಗುವುದಿಲ್ಲವೆಂಬುದನ್ನು ಇಲ್ಲಿ ತಿಳಿಸಿಕೊಡಲಾಗಿದೆ.

ಈಗ ಮೂರು ಅಜ್ಞಾನಗಳ ಮಾತು ಹೇಳುತ್ತಾರೆ,-

ಆತ್ಮನು ತ್ರಿಕಾಲಶುದ್ಧ ಹೇಗಿದ್ದಾನೆಂಬುದರ ಜ್ಞಾನವು ಇವನಿಗೆ ಇಲ್ಲ ಮತ್ತು ಯಾವನು ರಾಗ ಹಾಗೂ ವಿಕಾರದ ಜತೆಯಲ್ಲಿ ಏಕತ್ವಬುದ್ಧಿ ಮಾಡುತ್ತಾನೆ ಅವನ ಸಮಸ್ತ ಜ್ಞಾನವು ಅಜ್ಞಾನವಿದೆ. ಆ ಜೀವದ ಮತಿಜ್ಞಾನವು ಅಜ್ಞಾನವಿದೆ. ಆ ಜ್ಞಾನದ ವಿಪರೀತತೆಯು ಕರ್ಮದ ಕಾರಣದಿಂದ ಅಥವಾ ಪರದ ಕಾರಣದಿಂದ ಇಲ್ಲ, ಆದರೆ ತನ್ನ ಕಾರಣದಿಂದ ತನ್ನ ಸತ್ತಾದಲ್ಲಿ ಇದೆ. ಆತ್ಮನ ಜ್ಞಾನವಿಲ್ಲದೆ ಹನ್ನೊಂದು ಅಂಗಗಳನ್ನು ಕಂಠಸ್ಥ ಮಾಡಿದರೂ ಕೂಡ ಅವನ ಎಲ್ಲ ಜ್ಞಾನವು ಕುಮತಿ ಮತ್ತು ಕುಶ್ರುತವಿದೆ. ಅದು ಆತ್ಮನಿಗೆ ಲಾಭದಾಯಕವಿಲ್ಲ. ಮತ್ತು ಯಾವನೋ ಓರ್ವ ಮಿಥ್ಯಾದೃಷ್ಟಿ ಜೀವನಿಗೆ ಸ್ವರ್ಗ ಹಾಗೂ ನರಕದ ರೂಪೀ ಪದಾರ್ಥಗಳನ್ನು ತಿಳಿದುಕೊಳ್ಳುವ ಪ್ರಕಟತೆಯಿದ್ದರೂ ಕೂಡ ವಿಪರೀತಬುದ್ಧಿಯಿಂದ ಆಗಿರುವ ಭಾವವಿರುವುದರಿಂದ ಆ ಜ್ಞಾನವು ವಿಭಂಗಜ್ಞಾನವಿದೆ.

ಈ ಪ್ರಕಾರ ಜ್ಞಾನದ ವಿಶೇಷ ಭೇದಗಳನ್ನು ಎಂದರೆ ಅವಗ್ರಹ, ಈಹಾ, ಅವಾಯ, ಧಾರಣಾ ಮೊದಲಾದ ಮತಿಜ್ಞಾನದ ಭೇದಗಳನ್ನು ತತ್ತ್ವಾರ್ಥಸೂತ್ರದಿಂದ ತಿಳಿದುಕೊಳ್ಳಬೇಕು. ನಿಮಿತ್ತ, ವಿಕಾರ ಮತ್ತು ಜ್ಞಾನದ ಪರ್ಯಾಯದ ಭೇದಗಳನ್ನು ತಿಳಿದುಕೊಂಡು ಅವೆಲ್ಲವುಗಳ ಕಡೆಗಿರುವ ಲಕ್ಷ್ಯವನ್ನು ಬಿಟ್ಟುಕೊಡುವಂತಿದೆ ಮತ್ತು ಶುದ್ಧಸ್ವರೂಪನಾದ ಆತ್ಮನೊಬ್ಬನೇ ಉಪಾದೇಯನಿದ್ದಾನೆಂದು ಯಥಾರ್ಥ ಜ್ಞಾನ ಮಾಡಿಕೊಳ್ಳಬೇಕು.

**ದಂಸಣಮವಿ ಚಕ್ಖುಜುದಂ ಅಚಕ್ಖುಜುದಮವಿ ಯ ಓಹಿಣಾ ಸಹಿಯಂ ।**
**ಅಣಿಧಣಮಣಂತವಿಸಯಂ ಕೇವಲಿಯಂ ಚಾವಿ ಪಣ್ಣತ್ತಂ ॥೪೨॥**

**ಯಾವ ದರ್ಶನವು ಚಕ್ಷುದರ್ಶನ, ಅಚಕ್ಷುದರ್ಶನ, ಅವಧಿದರ್ಶನಮೇಣ್ ।**
**ಅವಿನಾಶಿ ಅನಂತವಿಷಯಗತ ಕೇವಲರೂಪವೆಂದು ಭೇದ ನಾಲ್ಕಾಗಿವೆ ॥೪೨॥**

ಆತ್ಮವಸ್ತುವು ತ್ರಿಕಾಲವಿದೆ, ಅದರಲ್ಲಿ ದರ್ಶನಗುಣವು ತ್ರಿಕಾಲವಿದೆ. ಅದು ಅಸಂಖ್ಯ ಪ್ರದೇಶದಲ್ಲಿ ಅಖಂಡ ವ್ಯಾಪಿಸಿಕೊಂಡಿದೆ. ದರ್ಶನದ ವಿಷಯವು ಸಾಮಾನ್ಯವಿದೆ. ಅದು ಭೇದ ಮಾಡಿ ತಿಳಿಯುವುದಿಲ್ಲ. ಆ ದರ್ಶನದಲ್ಲಿ ನಾಲ್ಕು ಪರ್ಯಾಯಗಳಿವೆ. ಅದರಲ್ಲಿ ಚಕ್ಷುದರ್ಶನದ ಮಾತು ಹೇಳಲಾಗುತ್ತಿದೆ. ತನ್ನ ಸತ್ತಾದಿಂದ ತನ್ನಲ್ಲಿ ಚಕ್ಷುದರ್ಶನದ ಉಪಯೋಗವಾಗುತ್ತದೆ, ಆದರೆ ಹೀನ ಪರಿಣಮನವಿರುವುದರಿಂದ ಚಕ್ಷು ನಿಮಿತ್ತವಿದೆ. ಚಕ್ಷುವಿನಿಂದ ನೋಡಲಾಗುತ್ತದೆ ಎಂಬುದಾಗಿಲ್ಲ, ಆದರೆ ಚಕ್ಷುದರ್ಶನದ ವ್ಯಾಪಾರವನ್ನು ಜೀವವು ಸ್ವತಂತ್ರತೆಯಿಂದ ತನ್ನ ಅಸ್ತಿಕಾಯದಲ್ಲಿ ಮಾಡುತ್ತದೆ. ಜೀವವು ದ್ರವ್ಯವಿದೆ, ದರ್ಶನವು ಗುಣವಿದೆ ಮತ್ತು ಚಕ್ಷುದರ್ಶನವು ಅದು ಪರ್ಯಾಯವಿದೆ. ಹೀಗೆ ದ್ರವ್ಯ-ಗುಣ-ಪರ್ಯಾಯಗಳಿಂದ ಜೀವಾಸ್ತಿಕಾಯದ ಸ್ವರೂಪವು ಪೂರ್ಣವಾಗುತ್ತದೆ.

ದರ್ಶನದ ಅರ್ಥವು ಸಾಮಾನ್ಯ ಎಂದರೆ ಭೇದ ಮಾಡಿದಲ್ಲದೆ ನೋಡುವುದು ಅದು ಇದೆ ಒಂದು ಜ್ಞಾನದ ವ್ಯಾಪಾರವಾದ ನಂತರ ಮತ್ತು ಎರಡನೆಯ ಜ್ಞಾನದ ವ್ಯಾಪಾರವಾಗುವ ಮೊದಲು ಚೇತನದ ಸಾಮಾನ್ಯ ವ್ಯಾಪಾರದಲ್ಲಿ ಚಕ್ಷು ನಿಮಿತ್ತವಿದೆ. ಆ ವ್ಯಾಪಾರವನ್ನು ಚಕ್ಷುದರ್ಶನದ ವ್ಯಾಪಾರವೆಂದು ಹೇಳಿದೆ. ಛದ್ಮಸ್ಥ ಜೀವನಿಗೆ ದರ್ಶನೋಪಯೋಗದ ಸಮಯದಲ್ಲಿ ಜ್ಞಾನೋಪಯೋಗವಿರುವುದಿಲ್ಲ ಮತ್ತು ಜ್ಞಾನೋಪಯೋಗದ ಸಮಯದಲ್ಲಿ ದರ್ಶನೋಪಯೋಗವಿರುವುದಿಲ್ಲ. ಒಂದರ ನಂತರ ಒಂದು ಇರುತ್ತದೆ. ಕೇವಲೀ ಭಗವಂತರಿಗೆ ಎರಡೂ ಉಪಯೋಗಗಳು ಒಟ್ಟಿಗೆ ಇರುತ್ತವೆ,

ಕರ್ಮದ ಉದಯದ ಕಾರಣದಿಂದ ವಿಕಾರವಾಗುತ್ತದೆ ಮತ್ತು ಜೀವದ ಇಚ್ಛೆಯ ಕಾರಣದಿಂದ ಶರೀರವು ಚಲಿಸುತ್ತದೆಂದು ಮನ್ನಿಸುವುದು ಅಜ್ಞಾನಭಾವವಿದೆ. ಒಂದು ಇನ್ನೊಂದರ ಕಾರಣದಿಂದ ಅವಸ್ಥೆಯು ಎಂದು ಕೂಡ ಆಗುವುದಿಲ್ಲ. ನಿಮಿತ್ತದಿಂದ ಕಾರ್ಯವಾಗುವುದಿಲ್ಲ, ಆದರೆ ನಿಮಿತ್ತದ ಉಪಸ್ಥಿತಿಯಿರುತ್ತದೆ. ಸ್ವಯಂ ವಿಕಾರ ಮಾಡಿದರೆ ಕರ್ಮವು ನಿಮಿತ್ತವಿದೆ. ಹೀಗೆ ನಿಮಿತ್ತದ, ವಿಕಾರದ, ಭೇದದ ಯಥಾರ್ಥ ಜ್ಞಾನ ಮಾಡಿಕೊಂಡು ಅದನ್ನು ಹೇಯವೆಂದು ತಿಳಿದುಕೊಂಡು ಆ ಕಡೆಯ ಲಕ್ಷ್ಯ ಬಿಟ್ಟುಕೊಡಬೇಕಾಗುವುದು. ಅದೇ ರೀತಿಯಿಂದ ಇಲ್ಲಿ ಭೇದಜ್ಞಾನ ಮಾಡಿಸಿದೆ ಆತ್ಮನು ಅಖಂಡ ದರ್ಶನಗುಣದಿಂದ ವ್ಯಾಪಿಸಿದ್ದಾನೆ. ಆತ್ಮನ ಪರ್ಯಾಯದಲ್ಲಿ ಭೇದಗಳಾಗುತ್ತವೆ ಅದರಲ್ಲಿ ಚಕ್ಷುದರ್ಶನರೂಪೀ ಪರ್ಯಾಯದ ಸಮಯದಲ್ಲಿ ಚಕ್ಷುದರ್ಶನಾವರಣೀಯ ಕರ್ಮದ ಕ್ಷಯೋಪಶಮವು ನಿಮಿತ್ತವಿದೆ ಮತ್ತು ಬಾಹ್ಯದಲ್ಲಿ ಚಕ್ಷು ನಿಮಿತ್ತವಿದೆ. ಆದರೆ ನಿಮಿತ್ತದ ಕಾರಣದಿಂದ ನೋಡುವ ವ್ಯಾಪಾರವಾಗುವುದಿಲ್ಲ.

ಕಣ್ಣುಗಳಂತೂ ಜಡವಿವೆ. ಕಣ್ಣುಗಳಿಂದ ಆತ್ಮನು ನೋಡಬಹುದೆನ್ನುವಂತೆ ಕಣ್ಣುಗಳಲ್ಲೇನು ರಂಧ್ರಗಳಿಲ್ಲ. ಯಾವ ಪ್ರಕಾರ ದ್ವಾರದ ಮುಖಾಂತರ ಪದಾರ್ಥಗಳನ್ನು ನೋಡಲಾಗುತ್ತದೆ ಅದೇ ಪ್ರಕಾರ ಶರೀರದಲ್ಲಿ ಅಥವಾ ಕಣ್ಣುಗಳಲ್ಲಿ ದ್ವಾರ ಅಥವಾ ಸಂದುಗಳಿಲ್ಲ ಅವುಗಳಿಂದ ಆತ್ಮನು ನೋಡಬಹುದು. ಸಂಘಾತ ನಾಮಕರ್ಮದ ಪ್ರಕೃತಿಯ ಕಾರಣದಿಂದ ಔದಾರಿಕ ಶರೀರವು ಛಿದ್ರರಹಿತತೆಯಿಂದ ಪ್ರಾಪ್ತವಾಗಿದೆ. ಔದಾರಿಕ, ಕಾರ್ಮಣ, ತೈಜಸ ಈ ಮೂರು ಶರೀರಗಳ ದೊಡ್ಡ ವಜ್ರದಂಥ ಗೋಡೆಯು ಆತ್ಮನ ಮಧ್ಯದಲ್ಲಿ ಬಿದ್ದುಕೊಂಡಿದೆ. ಅಖಂಡ ಮೂರು ಪರದೆಗಳು ಅಡ್ಡಲಾಗಿದ್ದರೂ ಕೂಡ ಜೀವನು ತನ್ನ ದರ್ಶನೋಪಯೋಗದಿಂದ ನೋಡುತ್ತಲಿದ್ದಾನೆ. ಅದರಲ್ಲಿ ಕರ್ಮ ಮತ್ತು ಚಕ್ಷುಗಳು ನಿಮಿತ್ತಮಾತ್ರವಿವೆ.

ಚಕ್ಷುಗಳನ್ನು ಹೊರತುಪಡಿಸಿ ನಾಲ್ಕು ಇಂದ್ರಿಯಗಳು ಮತ್ತು ಮನಸ್ಸಿನ ಮುಖಾಂತರ ಪದಾರ್ಥಗಳು ಸಾಮಾನ್ಯವಾಗಿರುವ ವಿಚಾರ ಬರುವುದು ಅದು ಅಚಕ್ಷುದರ್ಶನವಿದೆ. ಕಿವಿ, ಮೂಗುಗಳಲ್ಲೇನು ಛಿದ್ರಗಳಿಲ್ಲ , ಅಖಂಡತೆಯಿದೆ. ಆಂತರ್ಯದಲ್ಲಿ ಆತ್ಮನು ತನ್ನ ಶಕ್ತಿಯಿಂದ ನೋಡುತ್ತಲಿದ್ದಾನೆ. ಈ ಐದರ ಉಪಸ್ಥಿತಿಯಲ್ಲಿ ಪರ್ಯಾಯದ ಮುಖಾಂತರ ಭೇದಮಾಡಿದಲ್ಲದೆ ಛದ್ಮಸ್ಥ ಜೀವನಿಗೆ ಯಾವ ಜಾತಿಯ ಜ್ಞಾನವಾಗುವುದಿದೆ, ಆ ಮೊದಲಿನ ಚೇತನದ ಸಾಮಾನ್ಯ ವ್ಯಾಪಾರವನ್ನು ದರ್ಶನೋಪಯೋಗವೆಂದು ಹೇಳಿದೆ. ಒಂದು ವಸ್ತುವಿನ ವಿಚಾರ ಬಿಟ್ಟು ಇನ್ನೊಂದು ವಸ್ತುವಿನ ವಿಚಾರ ಮಾಡುವ ಮೊದಲು ಸ್ವಭಾವದ ಕಡೆಗೆ ಉನ್ಮುಖತೆಯ ವ್ಯಾಪಾರವಾಗುವುದು ಅದನ್ನು ದರ್ಶನವೆಂದು ಹೇಳಿದೆ.

ಅವಧಿಜ್ಞಾನವಾಗುವ ಮೊದಲು ಸ್ವರ್ಗ-ನರಕಾದಿಗಳನ್ನು ಭೇದ ಮಾಡಿದಲ್ಲದೆ ಆತ್ಮನಿಂದ ನೇರವಾಗಿ ನೋಡುವುದಾಗುತ್ತದೆ ಅದು ಅವಧಿದರ್ಶನವಿದೆ.

ಅನಂತಪದಾರ್ಥಗಳನ್ನು ಭೇದ ಮಾಡಿದಲ್ಲದೆ ಸಾಮಾನ್ಯ ಪ್ರಕಾರದಿಂದ ನೋಡುವುದು ಅದು ಕೇವಲ ದರ್ಶನವಿದೆ. ಸರ್ವಜ್ಞ ಭಗವಂತರು ತಮ್ಮ ಅತೀಂದ್ರಿಯ ಸ್ವಭಾವದಲ್ಲಿ ಸ್ಥಿರರಾದರು ಮತ್ತು ಯಾವ ದರ್ಶನವು ಪ್ರಕಟವಾಯಿತು ಅದು ಕೇವಲದರ್ಶನವಿದೆ. ಕೇವಲೀ ಭಗವಂತರಿಗೆ ಕೇವಲದರ್ಶನ ಮತ್ತು ಕೇವಲಜ್ಞಾನವು ಏಕಕಾಲದಲ್ಲಿರುತ್ತದೆ. ಎರಡನ್ನು ಬೇರೆ ಬೇರೆ ಸಮಯದಲ್ಲೆಂದು ಮನ್ನಿಸುವಂಥ ಜೀವನು ಮಿಥ್ಯಾದೃಷ್ಟಿಯಿದ್ದಾನೆ. ಅವನು ವಸ್ತುಸ್ವಭಾವವನ್ನು ತಿಳಿಯುವುದಿಲ್ಲ

ಆತ್ಮ ವಸ್ತುವು ತ್ರಿಕಾಲವಿದೆ. ಆತನ ದರ್ಶನಗುಣವು ತ್ರಿಕಾಲವಿದೆ ಮತ್ತು ಪರ್ಯಾಯವು ಒಂದು ಸಮಯದ್ದಿದೆ. ಕೇವಲದರ್ಶನವು ಪರ್ಯಾಯವಿದೆ. ಮೊದಲನೆಯ ಸಮಯದಲ್ಲಿ ಮೊದಲನೆಯದು ಎರಡನೆಯ ಸಮಯದಲ್ಲಿ ಎರಡನೆಯದು. ಇದೇ ರೀತಿ ಸಮಯ-ಸಮಯಕ್ಕೆ ಪ್ರಕಟವಾಗುತ್ತದೆ. ಅದು ಸ್ವತಂತ್ರ ಜೀವದ ಅಸ್ತಿಕಾಯದಲ್ಲಿ ಅಸಂಖ್ಯ ಪ್ರದೇಶಗಳ ಸಮೂಹದಲ್ಲಿ ಆಗುತ್ತದೆ.

ಈ ಪ್ರಕಾರ ದರ್ಶನಗುಣದ ಪರ್ಯಾಯಗಳ ಭೇದದ ಜ್ಞಾನ ಮಾಡಿಕೊಂಡು ಅದರ ಲಕ್ಷ್ಯ ಬಿಟ್ಟು ಶುದ್ಧ ಆತ್ಮನನ್ನು ಉಪಾದೇಯವೆಂದು ಮನ್ನಿಸಬೇಕಾಗುವುದು.

**ಭಾವಾರ್ಥ :-** ಚಕ್ಷುದರ್ಶನ, ಅಚಕ್ಷುದರ್ಶನ, ಅವಧಿದರ್ಶನ ಮತ್ತು ಕೇವಲದರ್ಶನವೆಂದು ನಾಲ್ಕು ಭೇದಗಳ ಮುಖಾಂತರ ದರ್ಶನೋಪಯೋಗವನ್ನು ತಿಳಿಯಬೇಕು, ದರ್ಶನವು ಸಾಮಾನ್ಯ ರೀತಿಯಿಂದ ನೋಡುತ್ತದೆ ಜ್ಞಾನವು ಭೇದಮಾಡಿ ತಿಳಿಯುತ್ತದೆ. ಇದು ವಿಕಾರವಿದೆ, ಇದು ನಿಮಿತ್ತವಿದೆ, ಇದು ಪರವಿದೆಯೆಂದು ವಿಶೇಷವಾಗಿ ತಿಳಿಯುವುದು ಅದು ಜ್ಞಾನವಿದೆ ಮತ್ತು ದರ್ಶನದ ಲಕ್ಷಣವು ಭೇದ ಮಾಡಿದಲ್ಲದೆ ಸಾಮಾನ್ಯ ಅವಲೋಕನವು ಅದು ಇದೆ. ಭಗವಾನ ಆತ್ಮನು ಸ್ವಾಭಾವಿಕ ಭಾವದಿಂದ ಅಸಂಖ್ಯ ಪ್ರದೇಶಗಳಲ್ಲಿ ನಿರ್ಮಲ ದರ್ಶನಗುಣದಿಂದ ವ್ಯಾಪಿಸಿದ್ದಾನೆ ಹೀಗಿದ್ದರೂ ಕೂಡ ದರ್ಶನಾವರಣೀಯ ಕರ್ಮದ ಉದಯದಿಂದ ಆತ್ಮನು ಮುಚ್ಚಿಹೋಗಿದ್ದಾನೆಂಬುದು ನಿಮಿತ್ತದ ಕಥನವಿದೆ. ಜಡಕರ್ಮದಿಂದ ಮುಚ್ಚಿ ಹೋಗುವುದಿಲ್ಲ, ತಾನು ತನ್ನ ಕಾರಣದಿಂದ ಮುಚ್ಚಿಹೋಗಿದ್ದಾನೆ. ಅದರಲ್ಲಿ ದರ್ಶನಾವರಣೀಯ ಕರ್ಮವು ನಿಮಿತ್ತವಿರುವುದರಿಂದ ದರ್ಶನ ಶಕ್ತಿಯು ಹೀನವಾಗಿದೆ. ನಿಮಿತ್ತದಿಂದ ಹೀನ ದಶೆಯಾಗುವುದಿಲ್ಲ ತನ್ನ ಕಾರಣದಿಂದ ಹೀನವಾಗುತ್ತದೆ, ಅದರಲ್ಲಿ ಕರ್ಮವು ನಿಮಿತ್ತವಿದೆ. ಅದು ಇದ್ದಲ್ಲದೆ ಇರುವುದಿಲ್ಲ.

ಅಂತರಂಗ ಚಕ್ಷುದರ್ಶನಾವರಣೀಯ ಕರ್ಮದ ಕ್ಷಯೋಪಶಮದ ನಿಮಿತ್ತದಿಂದ ಹಾಗೂ ನೇತ್ರದ ನಿಮಿತ್ತದಿಂದ ಮೂರ್ತಿಕ ದ್ರವ್ಯಗಳನ್ನು ಸಾಮಾನ್ಯ ನೋಡುವುದಾಗುತ್ತದೆ ಅದನ್ನು ಚಕ್ಷುದರ್ಶನವೆಂದು ಹೇಳಿದೆ. ಕರ್ಮದ ಕ್ಷಯೋಪಶಮವಾಗುವುದರಿಂದ ನೋಡುವುದಾಯಿತೆಂಬುದಾಗಿಲ್ಲ ಮತ್ತು ನೋಡುವುದಾಯಿತು ಅದಕ್ಕಾಗಿ ಕರ್ಮದ ಕ್ಷಯೋಪಶಮವಾಗಬೇಕಾಯಿತೆಂಬುದಾಗಿ ಕೂಡ ಇಲ್ಲ . ತನ್ನ ಕಾರಣದಿಂದ ಪ್ರಕಟವಾಗಿದೆ ಆಗ ಕರ್ಮದ

ಕ್ಷಯೋಪಶಮವು ಅವಶ್ಯವಾಗಿ ಇರುತ್ತದೆ ಹೀಗೆ ಮೇಳವಿದೆ.

ಕುದುರೆಯು ನಡೆಯುತ್ತಿರುವಾಗ ಅದರ ಮೇಲಿರುವ ಮನುಷ್ಯನು ಗಮಿಸಲೇಬೇಕಾಗುತ್ತದೆ ಅದೇ ಪ್ರಕಾರ ಕರ್ಮದ ಉದಯವು ಬಂದಾಗ ಜೀವನು ರಾಗಮಾಡಲೇಬೇಕಾಗುತ್ತದೆಯೆಂದು ಅದೆಷ್ಟೋ ಅಜ್ಞಾನೀ ಜೀವರುಗಳು ತರ್ಕಮಾಡುತ್ತಾರೆ. ಆದರೆ ಈ ತರ್ಕವು ಅಜ್ಞಾನಭಾವವನ್ನು ತಿಳಿಸಿಕೊಡುತ್ತದೆ. ಕರ್ಮದ ಉದಯದಿಂದ ವಿಕಾರವಾಗುತ್ತಿದ್ದರೆ ಕರ್ಮದ ಉದಯವು ಯಾವಾಗಲೂ ಇದೆ ಎಂದಮೇಲೆ ವಿಕಾರವು ಹೊರಟು ಹೋಗಿ ಅವಿಕಾರಿಯಾಗುವ ಪ್ರಸಂಗವು ಎಂದೂ ಬರುವುದಿಲ್ಲ . ದೃಷ್ಟಾಂತದಲ್ಲಿ ಕೂಡ ಕುದುರೆಯ ಕಾರಣದಿಂದ ಮನುಷ್ಯನು ಗಮಿಸುವುದಿಲ್ಲ ಮನುಷ್ಯನಲ್ಲಿ ಕುದುರೆಯ ಅಭಾವವಿದೆ. ಹಾಗೆ ಆತ್ಮನಲ್ಲಿ ಕರ್ಮದ ಅಭಾವವಿದೆ. ಸ್ವಯಂ ರಾಗ ಮಾಡಿದರೆ ಕರ್ಮವನ್ನು ನಿಮಿತ್ತವೆಂದು ಹೇಳಲಾಗುವುದು. ಹೀಗೆ ತನ್ನ ದೃಷ್ಟಾ ಎಂದರೆ ಸಂಪೂರ್ಣವಾಗಿ ನೋಡುವ ಸ್ವಭಾವವನ್ನು ಮರೆತಿದ್ದಾನೆ ಮತ್ತು ಸ್ವಯಂ ಹೀನದಶೆ ಮಾಡಿದರೆ ಕರ್ಮದ ಕ್ಷಯೋಪಶಮವನ್ನು ಮತ್ತು ಚಕ್ಷುಗಳನ್ನು ನಿಮಿತ್ತವೆಂದು ಹೇಳಲಾಗುವುದು. ಚಕ್ಷುದರ್ಶನ ಪರ್ಯಾಯವು ಆತ್ಮನ ದರ್ಶನಗುಣದ್ದಿದೆ ಅದು ಪುದ್ಗಲದ ಪರ್ಯಾಯವಲ್ಲ, ಪುದ್ಗಲದ ಕಾರಣದಿಂದಿಲ್ಲ ಆತ್ಮನಲ್ಲಿ ಪುದ್ಗಲಕರ್ಮ ಹಾಗೂ ಚಕ್ಷುಗಳ ಅಭಾವವಿದೆ ಇಲ್ಲಿ ಪಂಚಾಸ್ತಿಕಾಯದಲ್ಲಿ ಆತ್ಮನು ತ್ರಿಕಾಲ ವಸ್ತುವಿದ್ದಾನೆ, ದರ್ಶನಗುಣವಿದೆ, ಅದರ ಚಕ್ಷುದರ್ಶನವು ಹೀನಪರ್ಯಾಯವಿದೆ. ಅದರಲ್ಲಿ ಚಕ್ಷುದರ್ಶನಾವರಣೀಯ ಕರ್ಮದ ಕ್ಷಯೋಪಶಮ ಮತ್ತು ಚಕ್ಷುಗಳು ನಿಮಿತ್ತವಿವೆ ಆ ನಿಮಿತ್ತವಿಲ್ಲವೆಂಬುದು ಸಂಭವಿಸುವುದಿಲ್ಲ ಮತ್ತು ಆ ನಿಮಿತ್ತವಿದೆ ಅದಕ್ಕಾಗಿ ದರ್ಶನವಿದೆಯೆಂದು ಕೂಡ ಇಲ್ಲ . ಹೀಗೆ ನಿಮಿತ್ತ, ಪರ್ಯಾಯ ಮತ್ತು ದ್ರವ್ಯವೆಂದು ಎಲ್ಲವುಗಳ ಜ್ಞಾನ ಮಾಡಿಸುವುದು ಅದು ಪ್ರಮಾಣಜ್ಞಾನವಿದೆ. ನಿಮಿತ್ತವು ಪರವಸ್ತುವಿದೆ, ಪರ್ಯಾಯವು ಭೇದರೂಪವಿದೆ ಅದಕ್ಕಾಗಿ ಅದರ ಮೇಲಿನ ಲಕ್ಷ್ಯವನ್ನು ಬಿಟ್ಟುಕೊಟ್ಟು ತ್ರಿಕಾಲೀ ಸ್ವಭಾವದ ಶ್ರದ್ಧೆ-ಜ್ಞಾನ ಮಾಡಿಕೊಳ್ಳುವುದು ಕರ್ತವ್ಯವಿದೆ.

**ಅಚಕ್ಷುದರ್ಶನ :-** ಅಂತರಂಗ ಅಚಕ್ಷುದರ್ಶನಾವರಣೀಯ ಕರ್ಮದ ನಿಮಿತ್ತದಿಂದ ಮತ್ತು ಚಕ್ಷುಗಳನ್ನು ಹೊರತುಪಡಿಸಿ ನಾಲ್ಕು ಇಂದ್ರಿಯಗಳು ಹಾಗೂ ಮನಸ್ಸಿನ ನಿಮಿತ್ತದಿಂದ ಮೂರ್ತಿಕ ಮತ್ತು ಅಮೂರ್ತಿಕ ದ್ರವ್ಯವನ್ನು ಸಾಮಾನ್ಯ ನೋಡುವ ಸಂಬಂಧದ ವ್ಯಾಪಾರವನ್ನು ಅಚಕ್ಷುದರ್ಶನವೆಂದು ಹೇಳಲಾಗಿದೆ. ಕಿವಿ ಮೊದಲಾದ ಇಂದ್ರಿಯಗಳು ನಿಮಿತ್ತವಿವೆ, ಆದರೆ ಅವುಗಳ ಕಾರಣದಿಂದ ನೋಡುವುದಾಗುತ್ತದೆ ಎಂಬುದಾಗಿಲ್ಲ . ಅಚಕ್ಷುದರ್ಶನವನ್ನು ಕರ್ಮದ ಕಾರಣದಿಂದ ಅಥವಾ ಇಂದ್ರಿಯಗಳ ಕಾರಣದಿಂದ ಮನ್ನಿಸುವುದರಲ್ಲಿ ಬಂದರೆ ಜೀವಾಸ್ತಿಕಾಯವು ಉಳಿಯುವುದಿಲ್ಲ . ಏಕೆಂದರೆ ಜೀವದ್ರವ್ಯ, ಅದರ ದರ್ಶನ ಮೊದಲಾದ ಗುಣಗಳು ಮತ್ತು ಅದರ ಒಂದು ಸಮಯದ ಪರ್ಯಾಯವೆಂದು ಹೀಗೆ ಮೂರು ಸೇರಿ ಜೀವಾಸ್ತಿಕಾಯದ ಸ್ವರೂಪವು ಪೂರ್ಣವಾಗುತ್ತದೆ. ಜ್ಞಾನವಾಗುವ ಮೊದಲು ಅಚಕ್ಷುದರ್ಶನದ ಅಭೇದವ್ಯಾಪಾರವು ಜೀವಾಸ್ತಿಕಾಯದ ಪರ್ಯಾಯದಲ್ಲಿ ತನ್ನ ಕಾರಣದಿಂದ ಆಗುತ್ತದೆ ನಿಮಿತ್ತದ ಕಾರಣ ಆಗುವುದಿಲ್ಲ; ಆದರೆ ಅದರಲ್ಲಿ ಅಂತರಂಗ ನಿಮಿತ್ತವು ಅಚಕ್ಷುದರ್ಶನಾವರಣೀಯ ಕರ್ಮದ ಕ್ಷಯೋಪಶಮವಿದೆ ಮತ್ತು ಬಾಹ್ಯ ನಿಮಿತ್ತವು ನಾಲ್ಕು ಇಂದ್ರಿಯಗಳು ಮತ್ತು ಮನಸ್ಸು ಇದೆ. ಆ ನಿಮಿತ್ತಗಳು ಇರುವುದಿಲ್ಲವೆಂಬುದು ಕೂಡ ಸಂಭವವಿಲ್ಲ .

**ಅವಧಿದರ್ಶನ :-** ಅವಧಿದರ್ಶನಾವರಣೀಯ ಕರ್ಮದ ಕ್ಷಯೋಪಶಮದಿಂದ ಕಿಂಚಿತ್ ಮೂರ್ತಿಕ ಪದಾರ್ಥಗಳನ್ನು ಸಾಮಾನ್ಯ ಪ್ರಮಾಣದಿಂದ ಪ್ರತ್ಯಕ್ಷ ನೋಡುವರೂಪದ ವ್ಯಾಪಾರವನ್ನು ಅವಧಿದರ್ಶನವೆಂದು ಹೇಳಿದೆ.

**ಕೇವಲದರ್ಶನ :-** ಸಂಪೂರ್ಣ ಪ್ರಕಾರದಿಂದ ದರ್ಶನಾವರಣೀಯ ಕರ್ಮದ ಕ್ಷಯವಾಗುವುದರಿಂದ ಸಮಸ್ತ ಮೂರ್ತಿಕ ಮತ್ತು ಅಮೂರ್ತಿಕ ಪದಾರ್ಥಗಳನ್ನು ಸಾಮಾನ್ಯರೂಪದಿಂದ ಭೇದಮಾಡಿದಲ್ಲದೆ ಪ್ರತ್ಯಕ್ಷ ನೋಡುವ ರೂಪದ ವ್ಯಾಪಾರವನ್ನು ಕೇವಲದರ್ಶನವೆಂದು ಹೇಳಿದೆ.

ಆತ್ಮವಸ್ತುವು ಧ್ರುವವಿದ್ದು , ಅವನ ದರ್ಶನಗುಣವು ತ್ರಿಕಾಲವಿದೆ. ಅದರಂತೆ ಸ್ವರೂಪಪ್ರತ್ಯಕ್ಷನಾಮದ

ಉಪಯೋಗ-ಕಾರಣದರ್ಶನಉಪಯೋಗ ಕೂಡ ತ್ರಿಕಾಲವಿದೆ. ಅದು ಏಕರೂಪದಿಂದ ಯಾವಾಗಲೂ ಇರುತ್ತದೆ. ಅಂಥ ಆತ್ಮನಲ್ಲಿ ಸಂಪೂರ್ಣ ಲೀನತೆಯಾಗುವುದರಿಂದ ಕೇವಲದರ್ಶನರೂಪದ ಉಪಯೋಗವು ಉತ್ಪಾದವಾಗುತ್ತದೆ. ಆ ಉಪಯೋಗವು ತನ್ನ ಕಾರಣದಿಂದ ಪ್ರಕಟವಾಗುವುದು. ದರ್ಶನಾವರಣೀಯ ಕರ್ಮದ ಅಭಾವವಾಗುವುದರಿಂದ ಕಂಡುಬರುತ್ತದೆಯೆಂಬ ಕಥನವು ನಿಮಿತ್ತದ ಜ್ಞಾನ ಮಾಡಿಸುವ ಸಲುವಾಗಿ ಇದೆ. ಆದರೆ ಅಲ್ಲಿ ಕರ್ಮದ ಅಭಾವವಾಗುವುದರಿಂದ ಕೇವಲದರ್ಶನವಾಯಿತೆಂಬುದಾಗಿಲ್ಲ ಅದರಂತೆ ಸಂಹನನ ಗಟ್ಟಿಮುಟ್ಟಾದ ಶರೀರವಿರುವುದರಿಂದ ಕೇವಲದರ್ಶನವಾಯಿತೆಂಬುದಾಗಿ ಕೂಡ ಇಲ್ಲ . ತನ್ನ ಕಾರಣದಿಂದ ಆಗಿದೆ ಆಗ ಸಂಹನನ ಹಾಗೂ ಕರ್ಮದ ಅಭಾವವಿರುತ್ತದೆ. ತನ್ನ ಉಗ್ರತೆಯಿಲ್ಲದಿದ್ದರೆ ಕೇವಲದರ್ಶನವಾಗುವುದಿಲ್ಲ . ತನ್ನಲ್ಲಿ ಏಕಾಗ್ರವಾಗಿ ಪರಿಪೂರ್ಣ ಪರ್ಯಾಯವನ್ನು ಪ್ರಕಟಪಡಿಸಿಕೊಳ್ಳದಿರುವುದು ಅದು ತನ್ನ ದೋಷವಿದೆ. ನಿಮಿತ್ತದ ನ್ಯೂನತೆಯ ಕಾರಣದಿಂದ ತಡೆದು ನಿಂತಿದೆಯೆಂಬುದಾಗಿ ಇಲ್ಲವೇ ಇಲ್ಲ .

ಈ ಜಗತ್ತಿನಲ್ಲಿ ಬೇರೆ ಬೇರೆ ದ್ರವ್ಯಗಳಿವೆ, ಪ್ರತಿಯೊಂದು ಸ್ವತಂತ್ರವಿದೆ. ಅದರಲ್ಲಿ ಜೀವದ್ರವ್ಯವಿದ್ದು ಅದರಲ್ಲಿ ಪ್ರತಿಯೊಬ್ಬ ಆತ್ಮನು ಸ್ವತಂತ್ರನಿದ್ದಾನೆ. ಪ್ರತಿಯೊಬ್ಬ ಆತ್ಮನು ಸ್ವಯಂ ದ್ರವ್ಯವಿದ್ದು, ಅವನಲ್ಲಿ ದರ್ಶನ ಮೊದಲಾದ ತ್ರಿಕಾಲ ಗುಣಗಳಿವೆ. ಸಮಯ-ಸಮಯಕ್ಕೆ ಅವುಗಳ ಪರಿಣಮನವಾಗುತ್ತದೆ. ಹೀನ ಪರಿಣಮನದಲ್ಲಿ ಕರ್ಮ ಮತ್ತು ಇಂದ್ರಿಯಗಳು ನಿಮಿತ್ತವಿವೆ. ಕರ್ಮ ಮತ್ತು ಇಂದ್ರಿಯಗಳು ಈ ಜಗತ್ತಿನಲ್ಲಿ ವಸ್ತುಗಳಿದ್ದು ಅವು ನಿಮಿತ್ತವಾಗಿದ್ದರೂ ಕೂಡ ಅವು ದರ್ಶನ ಪರ್ಯಾಯವನ್ನು ಪರಿಣಮಿಸಲ್ಪಡುವುದಿಲ್ಲ . ಕಾರಣವೇನೆಂದರೆ ಗುಣಗಳ ಪರಿಣಮನವು ಅದು ಪರ್ಯಾಯವಿದೆ, ನಿಮಿತ್ತದ ಪರಿಣಮನವು ಅದು ಇಲ್ಲ . ನಿಮಿತ್ತದ ಪರಿಣಮನವು ನಿಮಿತ್ತದಲ್ಲಿದೆ, ಹೀಗೆ ಸ್ವತಂತ್ರ ಪರ್ಯಾಯ ಮನ್ನಿಸಿ ಆ ಪರ್ಯಾಯದಷ್ಟು ಆತ್ಮನಿಲ್ಲ , ಪರ್ಯಾಯವು ಒಂದು ಸಮಯದ್ದಿದೆ, ದ್ರವ್ಯ-ಗುಣಗಳು ತ್ರಿಕಾಲವಿವೆ. ಇಷ್ಟೆಲ್ಲ ಜ್ಞಾನ ಮಾಡಿಕೊಂಡಲ್ಲದೆ ದ್ರವ್ಯದೃಷ್ಟಿಯಾಗುವುದಿಲ್ಲ . ಈ ಪ್ರಕಾರ ಜ್ಞಾನ ಮಾಡಿಕೊಂಡು ನಿಮಿತ್ತದ, ವಿಕಾರದ ಅದರಂತೆ ಪರ್ಯಾಯದ ಅಭಿರುಚಿಯನ್ನು ಬಿಟ್ಟುಕೊಟ್ಟು ತ್ರಿಕಾಲ ಸ್ವಭಾವದ ಕಡೆಗೆ ತಿರುಗಿದರೆ ಸಮ್ಯಗ್ದರ್ಶನ ಮತ್ತು ಧರ್ಮವಾಗುವಂತಿದೆ.

**ಪ್ರಶ್ನೆ :-** ತಿರ್ಯಂಚ ಮೊದಲಾದವುಗಳಿಗೆ ಸಮ್ಯಗ್ದರ್ಶನವಾಗುತ್ತದೆ ಅವುಗಳಿಗೆ ಇಷ್ಟೆಲ್ಲ ಪ್ರಕಾರದ ಜ್ಞಾನವಾಗುತ್ತದೆಯೇನು ?

**ಉತ್ತರ :-** ತಿರ್ಯಂಚ ಸಮ್ಯಗ್ದೃಷ್ಟಿಗೆ ಪ್ರಯೋಜನಭೂತವಾದ ಜ್ಞಾನವು ಅಧಿಕವಾಗುತ್ತದೆ. ಬೇಕಾದರೆ ಪೂರ್ವದಲ್ಲಿ ದೇಶನಾಲಬ್ಧಿ ಪಡೆದುಕೊಂಡದ್ದಿರುತ್ತದೆ. ಅಥವಾ ವರ್ತಮಾನದಲ್ಲಿ ಭಗವಂತರ ಹತ್ತಿರ ಸಮವಸರಣದಲ್ಲಿ ದೇಶನಾ ಕೇಳಿರುತ್ತದೆ ಮತ್ತು ಚೈತನ್ಯಸತ್ತಾದ ಜ್ಞಾನ ಮಾಡಿಕೊಂಡಿರುತ್ತದೆ, ಇದು ನಿಮಿತ್ತವಿದೆ, ಇದು ರಾಗವಿದೆ, ಇದು ಪರ್ಯಾಯವಿದೆ, ನಾನು ಅವುಗಳಿಂದ ರಹಿತನಾದ ತ್ರಿಕಾಲೀ ಜ್ಞಾನಸ್ವಭಾವಿಯಿದ್ದೇನೆಂದು ಜ್ಞಾನ ಮಾಡಿಕೊಂಡು ಧರ್ಮಪ್ರಾಪ್ತಮಾಡಿಕೊಂಡಿರುತ್ತದೆ, ಮತ್ತು ಸ್ವದ ಜ್ಞಾನವಾದ ಮೇಲೆ ನಿಮಿತ್ತದ, ಪರ್ಯಾಯದ ಮೊದಲಾದವುಗಳ ಜ್ಞಾನವಾಗಿ ಹೋಗುತ್ತದೆ. ತಿರ್ಯಂಚಗಳಿಗೆ ಬೇರೆ ಬೇರೆ ಹೆಸರುಗಳು ಇಷ್ಟು ಎಂದರೆ ವಿಶೇಷ ಪ್ರಕಟತೆಯಿರುವುದಿಲ್ಲ, ಆದರೆ ಅವುಗಳ ಭಾವಭಾಸನವಾಗಿ ಪ್ರಯೋಜನಭೂತವಾದ ಮಾತುಗಳ ಜ್ಞಾನವಾಗಿ ಹೋಗುತ್ತದೆ.

ಅಜ್ಞಾನೀ ಮನುಷ್ಯನು ಮನುಷ್ಯಪರ್ಯಾಯದಲ್ಲಿ ಕುದೇವಾದಿಗಳ ಮನ್ನಣೆ ಮಾಡಿ ತತ್ತ್ವದಿಂದ ವಿಪರೀತವಾದ ದೊಡ್ಡ ಅಡ್ಡಿಯನ್ನು ತನ್ನ ಮನ್ನಣೆಯಲ್ಲಿ ತುಂಬಿಕೊಂಡಿರುವುದರಿಂದ ಆ ವಿರುದ್ಧ ಮನ್ನಣೆಯನ್ನು ತೆಗೆಯುವ ಸಲುವಾಗಿ ಜ್ಞಾನಕ್ಕೆ ಅತಿಶಯ ಕಷ್ಟ ಕೊಡಬೇಕಾಗುವುದು. ಕೇಶರವನ್ನು ಕೊಂಡುಕೊಳ್ಳುವ ಸಮಯದಲ್ಲಿ ಡಬ್ಬ ಅಥವಾ ಭರಣಿ ಇರಬೇಕಾಗುವುದು ಹಾಗೆ ಆತ್ಮನಲ್ಲಿ ಧರ್ಮದಶೆಯನ್ನು ಪ್ರಕಟಪಡಿಸಿಕೊಳ್ಳುವಾಗ ನಿಮಿತ್ತರೂಪದಿಂದ ಕುದೇವಾದಿಗಳು

ಇರಕೂಡದು, ಆದರೆ ನಿಜವಾದ ದೇವ-ಗುರು-ಶಾಸ್ತ್ರದ ಶ್ರದ್ಧೆಯ ಪ್ರೀತಿಯಿರಬೇಕು. ಜಗತ್ತಿನಲ್ಲಿ ಅಸ್ತಿಕಾಯವಿದೆ, ಪರ್ಯಾಯದಲ್ಲಿ ನಿಮಿತ್ತ , ಕರ್ಮ ಮತ್ತು ಬಾಹ್ಯ ಇಂದ್ರಿಯಗಳಿವೆ. ವಸ್ತು ಸ್ವರೂಪವನ್ನು ತಿಳಿಸಿಕೊಡುವಂಥ ನಿಜವಾದ ದೇವಾದಿಗಳ ನಿಮಿತ್ತವಿದ್ದರೂ ಕೂಡ ಆತ್ಮನು ನಿಮಿತ್ತದಿಂದ ಭಿನ್ನನಿದ್ದಾನೆ ಮತ್ತು ಪರ್ಯಾಯದಷ್ಟಿಲ್ಲ . ಆತ್ಮನು ತ್ರಿಕಾಲಶುದ್ಧ ಅಖಂಡನಿದ್ದಾನೆ. ಇದೇ ಮೊದಲಾದ ಪ್ರಕಾರದಿಂದ ಹೇಗಿದ್ದಾನೆ ಹಾಗೆ ಯಥಾರ್ಥ ಜ್ಞಾನ ಮಾಡಿಕೊಳ್ಳಬೇಕಾಗುವುದು.

**ಪ್ರಶ್ನೆ :-** ಜಾತಿಸ್ಮರಣವಾಗುತ್ತದೆ ಅದು ಮೊದಲಿನ ಸಂಸ್ಕಾರದ ಕಾರಣದಿಂದ ಆಗುತ್ತದೆಯಲ್ಲವೇನು ?

**ಉತ್ತರ :-** ಪೂರ್ವದ ಸಂಸ್ಕಾರದ ಕಾರಣದಿಂದ ಆಗುತ್ತದೆಯೆಂದು ಹೇಳುವುದು ಅದು ಉಪಚಾರ ಕಥನವಿದೆ. ವರ್ತಮಾನ ಪರ್ಯಾಯದಲ್ಲಿ ಪೂರ್ವಪರ್ಯಾಯದ ಅಭಾವವಿದೆ. ಪೂರ್ವಪರ್ಯಾಯವಂತೂ ವ್ಯಯವಾಗಿ ಹೋಗಿದೆ. ಯಾವುದು ವ್ಯಯವಾಗಿದೆ ಅದು ವರ್ತಮಾನಕ್ಕೇನು ಸಹಾಯ ಮಾಡುವುದು ? ವರ್ತಮಾನದಲ್ಲಿ ಪೂರ್ವದ ಸ್ಮರಣೆ ಬರುವುದು ಅದು ವರ್ತಮಾನ ಪರ್ಯಾಯದ ಸಾಮರ್ಥ್ಯತೆಯನ್ನು ತಿಳಿಸುವುದು. ಪೂರ್ವದ ಕಾರಣದಿಂದ ವರ್ತಮಾನದಲ್ಲಿ ಕಾರ್ಯವಾಗುವುದಿಲ್ಲ . ಪ್ರತಿಯೊಂದು ಪರ್ಯಾಯವು ಸ್ವತಂತ್ರವಿದೆ. ಕೇವಲಜ್ಞಾನದ ಒಂದು ಪರ್ಯಾಯದ ಕಾರಣದಿಂದ ಇನ್ನೊಂದು ಕೇವಲಜ್ಞಾನದ ಪರ್ಯಾಯವಿಲ್ಲ . ಪ್ರತಿಯೊಂದು ಸ್ವತಂತ್ರವಾಗಿ ಪ್ರಕಟವಾಗುತ್ತವೆ. ಮೊದಲಿನ ಸ್ಮರಣೆ ಬರುವುದು ಅದು ವರ್ತಮಾನದ ಸಾಮರ್ಥ್ಯವನ್ನು ತಿಳಿಸುತ್ತದೆ.

**ಪ್ರಶ್ನೆ :-** ಪ್ರಾಥಮಿಕ ಜೀವರುಗಳಿಗಾಗಿ ಪ್ರಾರಂಭದ ಸಲುವಾಗಿ ಮೊದಲು ವ್ಯವಹಾರ ಬೇಕಲ್ಲವೇ ?

**ಉತ್ತರ :-** ಸೋದರರನೇ ! ವ್ಯವಹಾರವೆಂದರೆ ನಿಜವಾಗಿ ದೇವ-ಗುರು-ಶಾಸ್ತ್ರದ ಶ್ರದ್ಧೆಯ ರಾಗ ಮೊದಲಾದ ಪ್ರಕಾರದ ಶುಭರಾಗವನ್ನು ವ್ಯವಹಾರವೆಂದು ಹೇಳಿದೆ. ಆದರೆ ನಿಶ್ಚಯದ ಅರಿವಿಲ್ಲದೆ ಅದು ವ್ಯವಹಾರವೆಂಬ ಹೆಸರು ಪಡೆಯುವುದಿಲ್ಲ. ಸ್ವಭಾವ ದೃಷ್ಟಿಯಿಲ್ಲದೆ ಯಾವುದರ ಮೇಲೆ ಆರೋಪ ಮಾಡುವ ಸಾಧ್ಯತೆಯಿದೆ ? ನಿಶ್ಚಯವಿಲ್ಲದೆ ವ್ಯವಹಾರವಾಗುವುದಿಲ್ಲ, ಅದಕ್ಕಾಗಿ ಮೊದಲು ವ್ಯವಹಾರ ಅನಂತರ ನಿಶ್ಚಯವೆಂಬ ಮನ್ನಣೆಯು ಅಜ್ಞಾನಿಯದಿದೆ. ಆತ್ಮನು ಅಖಂಡ ಶುದ್ಧನಿದ್ದಾನೆ, ಪರಿಪೂರ್ಣನಿದ್ದಾನೆ. ಅವನ ಅಭಿರುಚಿ ಮಾಡಿಕೊಳ್ಳುವುದೇ ಪ್ರಥಮ ಮೆಟ್ಟಲವಿದೆ. ವ್ಯವಹಾರ ಅಥವಾ ರಾಗವು ಇದು ಮೆಟ್ಟಲೇ ಇಲ್ಲ. ಆತ್ಮದ್ರವ್ಯ, ಆತನ ಗುಣಗಳು, ಅವನ ಪರ್ಯಾಯ, ಅದರಲ್ಲಿ ನಿಮಿತ್ತವೆಂದು ನಾಲ್ಕರ ಜ್ಞಾನ ಮಾಡಿ, ಭೇದದ ಜ್ಞಾನ ಮಾಡಿ, ಭೇದದ ರುಚಿ ಬಿಡುವುದು ಮತ್ತು ತ್ರಿಕಾಲೀ ಅಭೇದ ದ್ರವ್ಯದ ಅಭಿರುಚಿ ಮಾಡುವುದೇ ಪ್ರಥಮ ಮೆಟ್ಟಲಿದೆ. ಹೀಗೆ ಸತ್ಯಜ್ಞಾನದ ಬಲದಿಂದ ಮತ್ತು ಸತ್ಯಪುರುಷಾರ್ಥದ ಬಲದಿಂದ ಧರ್ಮವಾಗುವಂತಿದೆ. ರಾಗದ ಕಾರಣದಿಂದ ರಾಗದ ಪುರುಷಾರ್ಥದಿಂದ ಧರ್ಮವಾಗುವಂತಿಲ್ಲ ಆದುದರಿಂದ ದ್ರವ್ಯ-ಗುಣ-ಪರ್ಯಾಯ, ನಿಮಿತ್ತ, ಕರ್ಮ, ನಿಜವಾದ ದೇವ-ಗುರು-ಶಾಸ್ತ್ರಗಳ ಸ್ವರೂಪದ ಜ್ಞಾನವನ್ನು ಮೊದಲು ಮಾಡಿಕೊಳ್ಳಬೇಕಾಗುವುದು.

ಇದು ಜೀವಾಸ್ತಿಕಾಯದ ವರ್ಣನೆಯಿದೆ. ಜೀವನು ಒಬ್ಬನಿದ್ದಾನೆ, ಆದಾಗ್ಯೂ ಜ್ಞಾನದ ಪರ್ಯಾಯದಿಂದ ಅನೇಕನಿದ್ದಾನೆ. ಅನೇಕ ಭೇದರೂಪಗಳಾಗಿ ಆಗುವುದು ಅದು ಸ್ವತಃಸಿದ್ಧ ಸ್ವಭಾವವಿದೆ. ಕರ್ಮ ಮತ್ತು ಇತರ ಪದಾರ್ಥಗಳ ನಿಮಿತ್ತತೆಯಿದೆ ಅದಕ್ಕಾಗಿ ಭೇದಗಳಾಗುತ್ತವೆಯೆಂಬುದಾಗಿಲ್ಲ. ಕರ್ಮವು ಪುದ್ಗಲಾಸ್ತಿಕಾಯವಿದೆ, ಅದರ ಕಾರಣದಿಂದ ಜ್ಞಾನದಲ್ಲಿ ಅನೇಕತೆಯು ಬರುವುದಿಲ್ಲ. ಆತ್ಮನು ಅಭೇದನಾಗಿದ್ದರೂ ಕೂಡ ಭೇದವು ಕೂಡ ಅವನ ಸ್ವಭಾವವಿದೆ. ಆ ನಿಮಿತ್ತದಿಂದ ಭೇದಗಳಾಗುತ್ತವೆಯೆಂದು ಮನ್ನಿಸಹೋದರೆ ಅಸ್ತಿಕಾಯವು ಸಿದ್ಧವಾಗುವುದಿಲ್ಲ. ಈ ಪ್ರಕಾರವಾಗಿ ಆತ್ಮನು ಏಕಾಕಿಯಾಗಿದ್ದರೂ ಕೂಡ ಅನೇಕ ಜ್ಞಾನಪರ್ಯಾಯವಾಗುವುದರಲ್ಲಿ ಯಾವುದೇ ದೋಷ ಕೂಡ ಇಲ್ಲ.

ಈಗ ಮುಂದಿನ ಗಾಥೆಯನ್ನು ಹೇಳುತ್ತಾರೆ,-

**ಣ ವಿಯಪ್ಪದಿ ಣಾಣಾದೋ ಣಾಣೀ ಣಾಣಾಣಿ ಹೋಂತಿ ಣೇಗಾಣಿ ।**
**ತಮ್ಹಾ ದು ವಿಸ್ಸರೂವಂ ಭಣಿಯಂ ದವಿಯಂ ತ್ತಿ ಣಾಣೇಹಿಂ ॥೪೩॥**

**ಜ್ಞಾನದಿಂದ ಜ್ಞಾನಿಯ ಭೇದವನು ಮಾಡಲಿಕ್ಕಾಗದಿದ್ದರೂ ಜ್ಞಾನಗಳು ।**
**ಅನೇಕವಿರುವುದರಿಂದ ಜ್ಞಾನಿಗಳು ದ್ರವ್ಯವನು ವಿಶ್ವರೂಪವೆಂದಿಹರು ॥೪೩॥**

ಆತ್ಮವಸ್ತುವು ಜ್ಞಾನಗುಣದಿಂದ ಪೃಥಕ್ ಇಲ್ಲ. ಆತ್ಮನ ಅಸಂಖ್ಯ ಪ್ರದೇಶಗಳಲ್ಲಿ ಜ್ಞಾನಗುಣವು ವ್ಯಾಪಿಸಿಕೊಂಡಿರುವುದು. ನಿಮಿತ್ತವು ಬೇರೆ ವಸ್ತುವಿರುವುದು, ಆದರೆ ನಿಮಿತ್ತದಿಂದ ಆತ್ಮನಲ್ಲಿ ಹೆಚ್ಚು ಕಡಿಮೆಯಾಗುವುದಿಲ್ಲ ಏಕೆಂದರೆ ಗುಣ-ಗುಣಿಯ ಅಭೇದತೆಯಿದೆ. ಪರಮಾರ್ಥದಿಂದ ಗುಣ-ಗುಣಿಯಲ್ಲಿ ಭೇದವಿಲ್ಲ ಏಕೆಂದರೆ ದ್ರವ್ಯ, ಕ್ಷೇತ್ರ, ಕಾಲ, ಭಾವದಿಂದ ಗುಣ-ಗುಣಿ ಏಕವಿದೆ. ಕರ್ಮದ ಕ್ಷಯೋಪಶಮವಾಗುವುದರಿಂದ ಜ್ಞಾನದ ವಿಕಾರವಾಗುತ್ತದೆಯೆಂಬುದಾಗಿಲ್ಲ. ಮತ್ತು ಕರ್ಮದ ನಾಶವಾಯಿತು ಅದರಿಂದಾಗಿ ಕೇವಲಜ್ಞಾನವು ಪ್ರಕಟವಾಯಿತೆಂಬುದಾಗಿಲ್ಲ ಜ್ಞಾನವು ತನ್ನ ಸ್ವಭಾವದಿಂದ ಆಗಿದೆ, ತನ್ನಲ್ಲಿ ನಿಮಿತ್ತದ ಅಭಾವವಿದೆ. ನಿಮಿತ್ತದ ಜ್ಞಾನ. ಸ್ವತಂತ್ರ ಪರ್ಯಾಯದ ಜ್ಞಾನ, ಅಭೇದ ಸ್ವಭಾವದ ಜ್ಞಾನವೆಂದು ಹೀಗೆ ಮೂರರ ಜ್ಞಾನವಾದರೆ ದ್ರವ್ಯವು ಉಪಾದೇಯವಿದೆಯೆಂದು ಬುದ್ಧಿಯಾಗುವುದು ಅದು ಜ್ಞಾನದ ಫಲವಿದೆ.

೧) ಕರ್ಮ ಮೊದಲಾದ ಪರಪದಾರ್ಥಗಳು ನಿಮಿತ್ತವಿಲ್ಲವೆಂದೇ ಮನ್ನಿಸಿದರೆ ಅದು ಅಸತ್ಯವಿದೆ ಏಕೆಂದರೆ ನಿಮಿತ್ತವು ಇದೆ.

೨) ಕರ್ಮ ಮೊದಲಾದ ನಿಮಿತ್ತಗಳಿವೆ. ಅದಕ್ಕಾಗಿ ಜ್ಞಾನದ ಪರ್ಯಾಯವು ಹೀನವಾಗಿ ಪರಿಣಮಿಸಿದೆಯೆಂದು ಮನ್ನಿಸಿದರೆ ಅದು ಅಸತ್ಯವಿದೆ.

೩) ಗುಣದ ಪರಿಣಮನವು ಸ್ವತಂತ್ರವಿದೆ. ಗುಣ ಮತ್ತು ಗುಣಿಯನ್ನು ಸರ್ವಥಾ ಭೇದಸ್ವರೂಪವಾಗಿಯೇ ಮನ್ನಿಸಿದರೆ ಅದು ಅಸತ್ಯವಿದೆ. ಗುಣ ಮತ್ತು ಗುಣಿ ಅಭೇದವಿವೆಯೆಂಬ ಯಥಾರ್ಥ ಜ್ಞಾನ ಮಾಡಿಕೊಳ್ಳಬೇಕಾಗುವುದು.

ಈಗ ಈ ಗಾಥೆಯಲ್ಲಿ ಗುಣ-ಗುಣಿಯಲ್ಲಿ ಅಭೇದವಿದೆಯೆಂದು ತಿಳಿಸಿದೆ. ಶರೀರ, ಕರ್ಮ, ಆಹಾರ, ನೀರುಗಳು, ದ್ರವ್ಯ, ಕ್ಷೇತ್ರ, ಕಾಲ, ಭಾವದಿಂದ ಆತ್ಮನಿಂದ ತೀರ ಭಿನ್ನವಿವೆ. ಪರದ ಚತುಷ್ಟಯಗಳು ಪರದಲ್ಲಿ ಮತ್ತು ಆತ್ಮನ ಚತುಷ್ಟಯಗಳು ಆತ್ಮನಲ್ಲಿವೆ. ಆತ್ಮನ ತತ್ತ್ವ ವಿಷಯದಿಂದ ಅನಂತ ವಸ್ತುಗಳ ಅನಂತ ಚತುಷ್ಟಯಗಳು ಅಭಾವರೂಪದಿಂದ ಇವೆ. ಆದುದರಿಂದ ಪರವಸ್ತುವಿನ ಕಾರಣದಿಂದ ಆತ್ಮನ ಪರ್ಯಾಯದಲ್ಲಿ ಯಾವುದೇ ವ್ಯತ್ಯಾಸವು ಕೂಡ ಆಗುವಂತೆ ಪರ್ಯಾಯದ ಧರ್ಮವಿಲ್ಲ. ಈಗ ಯಾವ ಪ್ರಕಾರ ಪರದ ಚತುಷ್ಟಯಗಳು ಆತ್ಮನಿಂದ ಅಭಾವರೂಪವಿದೆ. ಅದೇ ಪ್ರಕಾರ ಗುಣದ ಚತುಷ್ಟಯಗಳು ಗುಣೀ ಆತ್ಮನಿಂದ ಅಭಾವರೂಪವಾಗಿಲ್ಲ, ಆದರೆ ಏಕವಿವೆಯೆಂದು ತಿಳಿಸಿಕೊಡಲಾಗಿದೆ. ಯಾವ ದ್ರವ್ಯ-ಕ್ಷೇತ್ರ-ಕಾಲ-ಭಾವಗಳು ಗುಣಿಯಲ್ಲಿ ಇವೆ ಅವೇ ಗುಣದ್ದಿವೆ ಮತ್ತು ಯಾವ ದ್ರವ್ಯ-ಕ್ಷೇತ್ರ-ಕಾಲ-ಭಾವಗಳು ಗುಣದ್ದಿವೆ ಅವೇ ಗುಣಿಯವುಗಳಿವೆ.

ಗುಣಿಯಾದಂಥ ಆತ್ಮನದು ಯಾವ ದ್ರವ್ಯವಿದೆ ಅದೇ ಜ್ಞಾನ-ದರ್ಶನ ಮೊದಲಾದ ಗುಣಗಳದ್ದಿದೆ.

ಆತ್ಮನದು ಯಾವ ಅಸಂಖ್ಯಾತಪ್ರದೇಶಿಯಾದ ಕ್ಷೇತ್ರವಿದೆ ಅದೇ ಜ್ಞಾನ-ದರ್ಶನ ಮೊದಲಾದ ಗುಣಗಳದ್ದಿದೆ.

ಆತ್ಮನದು ಯಾವ ಕಾಲವಿದೆ ಅದೇ ಜ್ಞಾನ-ದರ್ಶನ ಮೊದಲಾದ ಗುಣಗಳದ್ದಿದೆ.

ಆತ್ಮನದು ಯಾವ ಶಕ್ತಿಯಿದೆ ಅದೇ ಜ್ಞಾನ-ದರ್ಶನ ಮೊದಲಾದ ಗುಣಗಳದ್ದಿದೆ.

ಆತ್ಮನಲ್ಲಿ ಜ್ಞಾನ, ದರ್ಶನ, ಚಾರಿತ್ರ, ವೀರ್ಯ, ಸ್ವಚ್ಛತ್ವ, ಕರ್ತೃ, ಕರ್ಮ, ಕರಣ, ಸಂಪ್ರದಾನ ಮೊದಲಾದ ಗುಣಗಳು ಆತ್ಮನಿಂದ ಭಿನ್ನವಿಲ್ಲ ಜ್ಞಾನವು ಬಾಹ್ಯದಿಂದ ಪ್ರಕಟವಾಗುತ್ತದೆಯೆಂದು ಮನ್ನಿಸುವವರು ಗುಣ-ಗುಣಿಯ ಅಭೇದದೊಳಗಿಂದ ಭೇದರೂಪದ ಪರ್ಯಾಯವು ಬರುತ್ತದೆಯೆಂದು ತಿಳಿಯುವುದಿಲ್ಲ. ಅವರು ಗುಣ-ಗುಣಿಯನ್ನು ಸರ್ವಥಾ ಭೇದರೂಪವಾಗಿ ಮನ್ನಿಸಿದ್ದಾರೆ. ಆ ಮನ್ನಣೆಯು ಅಸತ್ಯವಿದೆ ಆದುದರಿಂದ ಗುಣ-ಗುಣಿಯ ಅಭೇದವಿದೆಯೆಂದು ಇಲ್ಲಿ ತಿಳಿಸಿಕೊಡಲಾಗಿದೆ. ಈ ಪ್ರಕಾರ ಅಭೇದನಯದ ಅಪೇಕ್ಷೆಯಿಂದ ಏಕತೆಯಿದೆಯೆಂದು ತಿಳಿಯಬೇಕು.

ಈಗ ಭೇದನಯದಿಂದ ನೋಡಹೋದರೆ ಆತ್ಮನಲ್ಲಿ ಅನೇಕತೆ ಕೂಡ ಇದೆ. ಮತಿ, ಶ್ರುತ, ಅವಧಿ, ಮನಃ ಪರ್ಯಯ ಮತ್ತು ಕೇವಲಜ್ಞಾನವೆಂದು ಐದು ಪ್ರಕಾರದ ಜ್ಞಾನದ ಅವಸ್ಥೆಯಿದೆ. ಅದರಲ್ಲಿ ಕೇವಲಜ್ಞಾನಿಗೆ ಒಂದು ಕೇವಲಜ್ಞಾನವಿರುತ್ತದೆ ಕೆಲವು ಜೀವರುಗಳಿಗೆ ಮತಿ, ಶ್ರುತವೆಂದು ಎರಡು ಜ್ಞಾನಗಳಿರುತ್ತವೆ, ಕೆಲವು ಜೀವರುಗಳಿಗೆ ಮತಿ, ಶ್ರುತ, ಅವಧಿಯೆಂದು ಮೂರು ಅಥವಾ ಮತಿ, ಶ್ರುತ ಮತ್ತು ಮನಃಪರ್ಯಯವೆಂದು ಮೂರು ಜ್ಞಾನಗಳಿರುತ್ತವೆ, ಇನ್ನು ಕೆಲವು ಜೀವರುಗಳಿಗೆ ಮತಿ, ಶ್ರುತ, ಅವಧಿ, ಮನಃಪರ್ಯಯವೆಂದು ನಾಲ್ಕು ಜ್ಞಾನಗಳಿರುತ್ತವೆ ಗುಣ ಮತ್ತು ಗುಣಿಯಲ್ಲಿ ಯಾವ ಪ್ರಕಾರ ದ್ರವ್ಯ-ಕ್ಷೇತ್ರ-ಕಾಲ ಮತ್ತು ಭಾವಗಳು ಸಮಾನವಾಗಿರುತ್ತವೆ. ಅದೇ ಪ್ರಕಾರ ಪರ್ಯಾಯದಲ್ಲಿ ಇರುವುದಿಲ್ಲ , ಸ್ವಲ್ಪ ವ್ಯತ್ಯಾಸವಿರುತ್ತದೆ. ಗುಣ-ಗುಣಿಯ ದ್ರವ್ಯವು ಇದೇ ಪರ್ಯಾಯದ ದ್ರವ್ಯವಿದೆ. ಗುಣ-ಗುಣಿಯ ಕ್ಷೇತ್ರವು ಇದೇ ಪರ್ಯಾಯದ ಕ್ಷೇತ್ರವಿದೆ. ಗುಣ-ಗುಣಿಯ ಕಾಲವು ತ್ರಿಕಾಲವಿದೆ. ಆದರೆ ಪರ್ಯಾಯದ ಕಾಲವು ಒಂದು ಸಮಯದ್ದಿದೆ. ಇಷ್ಟು ವ್ಯತ್ಯಾಸವಿದೆ.

ಹೀಗೆ ವಸ್ತುವು ಏಕವಿದೆ ಆದಾಗ್ಯೂ ಅನೇಕ ರೂಪದಿಂದ ಪರಿಣಮಿಸುವುದು ಅದು ಅದರ ಸ್ವಭಾವವಿದೆ. ಒಂದಕ್ಕೆ ಅನೇಕತೆಯು ಅದು ಜೀವಾಸ್ತಿಕಾಯದ ಸ್ವಭಾವವಿದೆ, ಅದು ಪರದ ಕಾರಣದಿಂದ ಇಲ್ಲವೆಂದು ಸಿದ್ಧ ಮಾಡುವುದಿದೆ, ಕರ್ಮದ ಕ್ಷಯೋಪಶಮವಾಯಿತೆಂದು ಜ್ಞಾನದ ವಿಕಾಸವಾಯಿತೇನು ? ಇಲ್ಲ. ಬೇರೆ ಬೇರೆ ಪ್ರಕಟತೆಯರೂಪದ ಅನೇಕ ಅವಸ್ಥೆಯಾದುದು ಅದು ಜೀವಾಸ್ತಿಕಾಯದ ಭೇದಧರ್ಮವಿದೆ, ಕರ್ಮದ್ದಿಲ್ಲ.

ಸ್ವಾಮಿ ಕಾರ್ತಿಕೇಯಾನುಪ್ರೇಕ್ಷೆಯಲ್ಲಿ ಹೀಗೆ ಬರುತ್ತದೆ. ಕೇವಲಜ್ಞಾನಾವರಣೀಯ ಪುದ್ಗಲಕರ್ಮವು ಕೇವಲಜ್ಞಾನದ ಅಪೂರ್ವ ಶಕ್ತಿಯನ್ನು ತಡೆದಿದೆ. ಅಲ್ಲಿ ಕರ್ಮದಿಂದ ಕೇವಲಜ್ಞಾನವು ತಡೆದಿದೆಯೆಂದು ಹೇಳಿಯೇ ಇಲ್ಲ. ಅಲ್ಲಿ ಪುದ್ಗಲದ ಶಕ್ತಿಯ ವರ್ಣನೆಯಿದೆ. ಕೇವಲಜ್ಞಾನಾವರಣೀಯ ಕರ್ಮವು ಅದು ಪುದ್ಗಲವಿದೆ ಅದರಲ್ಲಿ ಉತ್ಕೃಷ್ಟ ನಿಮಿತ್ತತೆಯಷ್ಟಿದೆಯೆಂಬುದನ್ನು ತಿಳಿಸುವುದಕ್ಕಾಗಿ ಆ ವರ್ಣನೆಯಿದೆ. ಆದರೆ ಪುದ್ಗಲಕರ್ಮವು ಕೇವಲಜ್ಞಾನವನ್ನು ತಡೆದಿದೆಯೆಂಬುದು ಅದರ ಅರ್ಥವಲ್ಲ. ಜೀವನು ಕೇವಲಜ್ಞಾನದ ಪರ್ಯಾಯರೂಪದಿಂದ ಪರಿಣಮಿಸುವುದು ಅದು ಜೀವಾಸ್ತಿಕಾಯದ ಸಾಮರ್ಥ್ಯವಿದೆ ಮತ್ತು ತಡೆದುಹೋದರೆ ಅಂಥದು ಅದರ ಸಾಮರ್ಥ್ಯವಿದೆ. ಅದು ತನ್ನ ಸತ್ತಾದಲ್ಲಿ ತನ್ನ ಕಾರಣದಿಂದ ಆಗುತ್ತದೆ. ಜ್ಞಾನದ ಪರ್ಯಾಯವು ಸ್ವತಃ ಸಿದ್ಧವಾಗುತ್ತದೆ. ನಿಮಿತ್ತ, ಪರವಸ್ತುಗಳು ಈ ಜಗತ್ತಿನಲ್ಲಿವೆ, ಆದರೆ ತನ್ನ ಆತ್ಮನನ್ನು ತಡೆಯುವಂಥ ಸಾಮರ್ಥ್ಯವು ಅವಕ್ಕಿಲ್ಲ. ಅದರಂತೆ ಪರನಿಮಿತ್ತದಿಂದ ತಡೆದುಹೋಗುವಂತೆ ಆತ್ಮನ ಸ್ವಪದಾರ್ಥದ ಸಾಮರ್ಥ್ಯವಿಲ್ಲ.

ಈ ಗಾಥೆಯಲ್ಲಿ ಭಗವಾನ್ ಕುಂದಕುಂದಾಚಾರ್ಯದೇವರು ''ಭವತಿ ಅನೇಕಾನಿ'' ಎಂದು ಹೇಳಿದ್ದಾರೆ ಆತ್ಮನು ಸ್ವಯಂ ಏಕತೆಯ ಸ್ವಭಾವವನ್ನು ಕಾಯ್ದುಕೊಂಡು ಅನೇಕ ರೂಪದಿಂದ ಪರಿಣಮಿಸುತ್ತಾನೆ. ಅಭೇದ ಸ್ವಭಾವ ಕಾಯ್ದುಕೊಂಡು ತಾನೇ ಭೇದರೂಪನಾಗುತ್ತಾನೆ. ವಿಶ್ವವೆಂಬ ಶಬ್ದವಿದೆ ಅದರ ಅರ್ಥವು ಕೂಡ ಅನೇಕ ರೂಪದಿಂದಾಗುತ್ತದೆ ಎಂದರೆ ಆತ್ಮದ್ರವ್ಯದ ಅಥವಾ ಗುಣದ ಕರ್ತೃವು ಯಾರೂ ಇಲ್ಲ, ಆದರೆ ಭೇದರೂಪದ ಅವಸ್ಥೆಯಾಗುತ್ತದೆ ಅದು ಕೂಡ ಅವನ ಸ್ವಭಾವವಿದೆ. ಅದರ ಕರ್ತೃ ಯಾವ ನಿಮಿತ್ತ ಅಥವಾ ಪರಪದಾರ್ಥವಿಲ್ಲ. ಹೀಗೆ ಏಕ-ಅನೇಕ ಸ್ವಭಾವ ತಿಳಿದರೆ ಅಸ್ತಿಕಾಯದ ಸ್ವರೂಪವು ಪೂರ್ಣವಾಗುತ್ತದೆ.

**ಭಾವಾರ್ಥ :-** ಭಗವಾನ ಆತ್ಮನಲ್ಲಿ ಗುಣ-ಗುಣಿಯ ಏಕತೆಯಿದೆ, ಭಿನ್ನತೆಯಿಲ್ಲ, ಅದಕ್ಕಾಗಿ ತನ್ನ ಜ್ಞಾನವನ್ನು ಶೋಧಿಸುವುದಿದ್ದರೆ ಪುಸ್ತಕದೊಳಗಿಂದ ಅಥವಾ ಪರದೊಳಗಿಂದ ಜ್ಞಾನವು ದೊರಕುವುದಿಲ್ಲ. ಆದರೆ ಗುಣ-ಗುಣಿಯ ಅಭೇದವಿದೆಯೆಂದು ಅಂತರ್ಯದಲ್ಲಿ ಏಕತೆ ಮಾಡಿದರೆ ಜ್ಞಾನವು ಪ್ರಕಟವಾಗುವಂತಿದೆ ಹೀಗೆ ಏಕವಿದ್ದರೂ ಕೂಡ ಅನೇಕತೆಯೇಕೆ ? ಸೋದರನೇ ! ಅನೇಕತೆ ಕೂಡ ಅವನ ಸ್ವಭಾವವಿದೆ ಅನೇಕರೂಪದಿಂದಾಗುವಲ್ಲಿ ವಿರೋಧವಿಲ್ಲ. ಏಕೆಂದರೆ ದ್ರವ್ಯವು ಕಥಂಚಿತ್ ಪ್ರಕಾರದಿಂದ ಭೇದ-ಅಭೇದ ಸ್ವಭಾವವುಳ್ಳದ್ದಿದೆ. ಗುಣ-ಗುಣಿ ಪ್ರದೇಶ ಅಪೇಕ್ಷೆಯಿಂದ ಅಭೇದವಿದೆ. ಆದಾಗ್ಯೂ ಪರ್ಯಾಯ ಭೇದದಿಂದ ಅನೇಕವಿದೆ. ಪರ್ಯಾಯ ಅಪೇಕ್ಷೆಯಿಂದ ಅನೇಕವಿದೆ ಅದೇ ವಸ್ತು-ಅಪೇಕ್ಷಯಿಂದ ಏಕವಿದೆ ಆದರೆ ಪರ್ಯಾಯ-ಅಪೇಕ್ಷೆಯಿಂದ ಅನೇಕವಿದೆ ಅದೇ ವಸ್ತು-ಅಪೇಕ್ಷೆಯಿಂದ ಅನೇಕವಿದೆಯೆಂಬುದಾಗಿಲ್ಲ. ಅಪೇಕ್ಷೆಯನ್ನು ತಿಳಿದುಕೊಳ್ಳಬೇಕಾಗುವುದು.

ಸಿದ್ಧರು ಕಾಲದ ಕಾರಣದಿಂದ ಪರಿಣಮಿಸಬೇಕಾಗುತ್ತದೆಯೆಂದು ಕೆಲವರು ಹೇಳುತ್ತಾರೆ. ಆದರೆ ಇಲ್ಲಿ ಅದನ್ನು ನಿರಾಕರಿಸಲಾಗಿದೆ ಏಕೆಂದರೆ ಸಿದ್ಧರು ಪರ್ಯಾಯರೂಪದಿಂದ ಪರಿಣಮಿಸುವುದು ಅದು ಸಿದ್ಧರ ಭೇದಧರ್ಮವಿದೆ, ಅದು ಕಾಲದ ಕಾರಣದಿಂದ ಇಲ್ಲ ವಸ್ತುವು ಭೇದಾಭೇದ ಸ್ವರೂಪವಿದೆ. ಭೇದವಿಲ್ಲದೆ ಅಭೇದವು ಸಾಧಿಸುವುದಿಲ್ಲ ಮತ್ತು ಅಭೇದವಿಲ್ಲದೆ ಭೇದವು ಸಾಧಿಸುವುದಿಲ್ಲ ಒಂದು ಇನ್ನೊಂದಕ್ಕೆ ಸಾಧಕವಿದೆ, ಆದರೆ ಬಾಧಕವಿಲ್ಲ. ಮತಿ, ಶ್ರುತ, ಅವಧಿ, ಮನಃಪರ್ಯಯ ಅಥವಾ ಕೇವಲಜ್ಞಾನರೂಪದಿಂದ ಪರಿಣಮಿಸುವುದು ಅದು ಜೀವಾಸ್ತಿಕಾಯದ ಪರ್ಯಾಯಸ್ವಭಾವವಿದೆ. ಅದು ಪರದ ಕಾರಣದಿಂದ ಇಲ್ಲ. ಗುಣ-ಗುಣಿಯದು ಪ್ರದೇಶದಿಂದ ಅಭೇದತೆ ಎಂದರೆ ದ್ರವ್ಯ-ಅಪೇಕ್ಷೆಯಿಂದ ಅಭೇದತೆ ಮತ್ತು ಪರ್ಯಾಯ-ಅಪೇಕ್ಷೆಯಿಂದ ಭೇದತೆಯಿದೆ ಹೀಗೆ ಭೇದ-ಅಭೇದಗಳೆರಡೂ ವಸ್ತುವಿನ ಧರ್ಮವಿದೆ ಹೀಗೆ ಅನೇಕಾಂತತೆಯಿಲ್ಲದೆ ದ್ರವ್ಯದ ಸಿದ್ಧಿಯಾಗುವುದಿಲ್ಲ.

ಆ ಕಾರಣದಿಂದ ಅನೇಕಾಂತ ವಿದ್ಯೆಯನ್ನು ತಿಳಿಯುವಂಥ ಜೀವರುಗಳು ಪದಾರ್ಥಗಳ ಸ್ವರೂಪವನ್ನು ಅನೇಕ ಪ್ರಕಾರವಾಗಿ ಹೇಳಿದ್ದಾರೆ. ಆತ್ಮವಸ್ತುವು ಅಭೇದವಿದೆ ಮತ್ತು ಪರ್ಯಾಯದಲ್ಲಿ ಭೇದವಿದೆಯೆಂಬುದರ ಹೆಸರು ಅನೇಕಾಂತವಿದೆ. ತನ್ನ ಕಾರಣದಿಂದ ಇದೆ ಮತ್ತು ಪರದ ಕಾರಣದಿಂದ ಇಲ್ಲ. ತನ್ನ ಜ್ಞಾನದ ಪ್ರಕಟತೆಯಾಗಿದೆ ಅದಕ್ಕಾಗಿ ಕೇವಲಜ್ಞಾನಾವರಣೀಯ ಕರ್ಮವು ಕ್ಷಯೋಪಶಮರೂಪವಾಗಬೇಕಾಯಿತೆಂಬುದಾಗಿಲ್ಲ ಮತ್ತು ಕೇವಲಜ್ಞಾನವಾಯಿತೆಂದು ಕೇವಲಜ್ಞಾನಾವರಣೀಯಕರ್ಮವು ಹೊರಟುಹೋಗಬೇಕಾಯಿತೆಂಬುದಾಗಿಲ್ಲ. ಅದು ಹೀಗೆ ಇದ್ದರೆ ಜ್ಞಾನವು ಕರ್ತೃ ಮತ್ತು ಕರ್ಮದ ಹೊರಟುಹೋಗುವಿಕೆಯು ಇದರ ಕಾರ್ಯವಾಯಿತು, ಆದರೆ ಹೀಗೆ ಇಲ್ಲವೇ ಇಲ್ಲ. ಪುದ್ಗಲದಲ್ಲಿ ಭೇದ-ಅಭೇದರೂಪವಾಗುವುದು ಅದು ಅದರ ಸ್ವಭಾವವಿದೆ, ಅದು ಆತ್ಮನ ಕಾರಣದಿಂದ ಇಲ್ಲ ಪರ್ಯಾಯದ ಭೇದವು ನನ್ನ ಕಾರಣದಿಂದಿಲ್ಲವೆಂದು ಅನೇಕಾಂತವನ್ನು ತಿಳಿಯುವವನು ತಿಳಿದುಕೊಳ್ಳುತ್ತಾನೆ. ಶರೀರ, ಕಾಲ ಅಥವಾ ಕರ್ಮದ ಕಾರಣದಿಂದ ಭೇದವಿದೆಯೆಂಬುದಾಗಿಲ್ಲ.

ದ್ರವ್ಯ-ಗುಣಗಳಂತೂ ಶುದ್ಧವಿವೆ, ಆದರೆ ಪರ್ಯಾಯದಲ್ಲಿ ಹೀನತೆ ಮತ್ತು ವಿಕಾರವೇಕೆ ? ಕರ್ಮದ ನಿಮಿತ್ತದಿಂದ ಅದು ಆಗುತ್ತದೆಯೆಂದು ಅಜ್ಞಾನಿಯು ಮನ್ನಿಸುತ್ತಾನೆ. ಅನೇಕರೂಪದಿಂದಾಗುವುದು ಅದು ಅದರ ಧರ್ಮವಿದೆ. ಛದ್ಮಸ್ಥನಿಗೆ ಮತಿಜ್ಞಾನ ಹೇಗೆ ? ಕೇವಲಜ್ಞಾನಾವರಣೀಯ ಇದೆಯೆಂದೇನು ? ಇಲ್ಲ. ತನ್ನದು ಇಂಥದೇ ಭೇದಧರ್ಮವಿದೆ.

ಕೇವಲಜ್ಞಾನದ ಒಂದು ಭೇದ ಉಳಿದು ಮತಿ, ಶ್ರುತ, ಅವಧಿ ಮತ್ತು ಮನಃಪರ್ಯಯದಲ್ಲಿ ಪ್ರತಿಯೊಂದು ಪರ್ಯಾಯದಲ್ಲಿ ಕೂಡ ಅನೇಕ ತಾರತಮ್ಯತೆ ಕಂಡುಬರುತ್ತದೆ. ಒಬ್ಬನಿಗೆ ಮತಿಜ್ಞಾನವು ಅಲ್ಪ, ಒಬ್ಬನಿಗೆ ಅಧಿಕ, ಒಬ್ಬನಿಗೆ ಶ್ರುತಜ್ಞಾನವು ಅಲ್ಪ ಒಬ್ಬನಿಗೆ ಅಧಿಕ ಹೀಗೆ ಮತಿ, ಶ್ರುತಾದಿಗಳಲ್ಲಿ ಕೂಡ ಅನೇಕ ಭೇದಗಳಾಗುತ್ತವೆ. ಇಷ್ಟೆಲ್ಲವು ಅನೇಕತೆಯ ಕಾರಣ ? ಕರ್ಮದ ಕಾರಣದಿಂದ ಆ ಅನೇಕತೆಯಿದೆಯೆಂಬುದಾಗಿಲ್ಲ. ಗುಣ-ಗುಣಿಯು ಒಂದಾಗಿದ್ದರೂ ಕೂಡ

ಪರ್ಯಾಯದಲ್ಲಿ ಅನೇಕತೆಯಾಗುವ ಧರ್ಮವಿದೆ ಅದಕ್ಕಾಗಿ ಆಗುತ್ತದೆ. ಪರದ ಕಾರಣದಿಂದ ಅನೇಕತೆಯನ್ನು ಮನ್ನಿಸಿದರೆ ಎರಡು ಅಸ್ತಿಕಾಯಗಳು ಒಂದಾಗಿ ಹೋಗುತ್ತವೆ.

ಶಬ್ದಗಳು ಕಿವಿಗೆ ಬೀಳುವುದರಿಂದ ಜ್ಞಾನವಾಗುವುದಿಲ್ಲ ಶಬ್ದವು ಪುದ್ಗಲಾಸ್ತಿಕಾಯವಿದೆ ಜ್ಞಾನದಲ್ಲಿ ಶಬ್ದದ ಅಭಾವವಿದೆ. ಅದೇ ಪ್ರಕಾರ ಪಂಚಮಕಾಲದ ಕಾರಣದಿಂದ ಕೇವಲಜ್ಞಾನವು ತಡೆದಿಲ್ಲ, ಆದರೆ ತನ್ನ ಪರ್ಯಾಯದ ಯೋಗ್ಯತೆಯ ಕಾರಣದಿಂದ ಕೇವಲಜ್ಞಾನವಾಗುವುದಿಲ್ಲ .

ಹೀಗೆ ಸ್ವತಂತ್ರ ಜ್ಞಾನಮಾಡಿಕೊಳ್ಳಬೇಕು. ಆದಾಗ್ಯೂ ಅದೆಷ್ಟೋ ಜೀವರುಗಳು ಮನ್ನಿಸುವುದೇನೆಂದರೆ ಕರ್ಮವು ಪ್ರೇರಕವಾಗಿ ವಿಕಾರ ಮಾಡಿಸುತ್ತದೆ ಮತ್ತು ಎಷ್ಟು ಪ್ರಮಾಣದಲ್ಲಿ ಕರ್ಮದ ಉದಯವಿದೆ ಅಷ್ಟು ಪ್ರಮಾಣದಲ್ಲಿ ವಿಕಾರ ಮಾಡಬೇಕಾಗುವುದೆಂಬ ಸಿದ್ಧಾಂತವಿದ್ದರೆ ನಿಗೋದದಲ್ಲಿ ಕರ್ಮದ ತೀವ್ರ ಉದಯವಿದೆಯೆಂದಮೇಲೆ ಅಲ್ಲಿಂದ ಹೊರಟು ತ್ರಸವಾಗುವ ಪ್ರಸಂಗ ಕೂಡ ಉಳಿಯುವುದಿಲ್ಲ ವಿಕಾರ ಮಾಡಲಿ ಅಥವಾ ಮಾಡದಿರಲಿ, ಜ್ಞಾನ ವೃದ್ಧಿಸಲಿ, ಅಥವಾ ಕುಂದಲಿ ಇದೆಲ್ಲವು ಪರ್ಯಾಯದ ಅನೇಕತೆಯಾಯಿತು ಅದು ಜೀವಾಸ್ತಿಕಾಯದ ಭೇದಸ್ವಭಾವವಿದೆ, ಅದು ಕರ್ಮದ ಕಾರಣದಿಂದಿಲ್ಲ, ಹೀಗೆ ತಿಳಿದುಕೊಳ್ಳದವನು ಜೀವಾಸ್ತಿಕಾಯದ ಭೇದಾಭೇದ ಧರ್ಮವನ್ನು ತಿಳಿಯುವುದಿಲ್ಲ.

ಶಬ್ದಸಮಯ, ಜ್ಞಾನಸಮಯ, ಅರ್ಥಸಮಯವೆಂದು ಮೂರು ಪ್ರಕಾರದ ಸಮಯದ ವಿಷಯದಲ್ಲಿ ಮುಂದೆ ಹೇಳುವುದಿದೆ. ಸಕ್ಕರೆ ಶಬ್ದ ಆಡುವುದು, ಸಕ್ಕರೆಯ ಜ್ಞಾನವಾಗುವುದು, ಸಕ್ಕರೆಯ ಪದಾರ್ಥವಿದೆ. ಅದರಲ್ಲಿ ಶಬ್ದ ಭಿನ್ನವಿದೆ, ಜ್ಞಾನಭಿನ್ನವಿದೆ, ಪದಾರ್ಥ ಭಿನ್ನವಿದೆ ಆದಾಗ್ಯೂ ಹೇಗೆ ಶಬ್ದ ಹಾಗೆ ಜ್ಞಾನ ಮತ್ತು ಹಾಗೆ ಪದಾರ್ಥವಿದೆ. ಜ್ಞಾನದ ಹಾಗೂ ಅರ್ಥಸಮಯದ ಸ್ವಭಾವವು ಏಕ ಮತ್ತು ಅನೇಕವೆಂದು ಎರಡೂ ರೂಪವಿದೆ ಆ ಪ್ರಕಾರ ಯಥಾರ್ಥಜ್ಞಾನ ಮಾಡಿದರೆ ಮತ್ತು ಭೇದಸ್ವಭಾವ ಪರದಿಂದ ತಿಳಿಯದಿದ್ದರೆ ಜ್ಞಾನವು ಸತ್ಯವಿದೆ. ಮತ್ತು ಆ ಜ್ಞಾನದಲ್ಲಿ ಯಾವ ಪದಾರ್ಥಗಳು ಜ್ಞೇಯರೂಪದಿಂದ ಕಂಡುಬರುತ್ತವೆ ಆ ಅರ್ಥಸಮಯವು ಸತ್ಯವಿದೆ. ಆದರೆ ಯಾವ ಶಾಸ್ತ್ರವು ಪರದ ಕಾರಣದಿಂದ ಅನೇಕತೆಯನ್ನು ತಿಳಿಸುತ್ತದೆ ಆ ಶಬ್ದಸಮಯವು ಸತ್ಯವಿಲ್ಲ. ಅದರ ಜ್ಞಾನ ಕೂಡ ಅಸತ್ಯವಿದೆ ಮತ್ತು ಆ ಜ್ಞಾನದ ಜ್ಞೇಯವಾದ ಅರ್ಥಸಮಯ ಕೂಡ ಅಸತ್ಯವಿದೆ. ಕರ್ಮವು ಮಂದವಾದರೆ ವೀತರಾಗತೆಯಾಗುವುದು ಮತ್ತು ಕರ್ಮದ ಬಲಿಷ್ಠತೆಯಿದ್ದರೆ ರಾಗವಾಗುವುದೆಂದು ಹೇಳುವ ಶಾಸ್ತ್ರವೇ ಸತ್ಯವಿಲ್ಲ. ಆದರೆ ಆತ್ಮನ ಅಭೇದ ಸ್ವಭಾವ ಕಾಯ್ದುಕೊಂಡು ಅನೇಕತೆಯಾಗುತ್ತದೆಯೆಂದು ಜ್ಞಾನ ಮಾಡಿದರೆ ಪರದಿಂದ ಭಿನ್ನವಾಗಿ, ಪರ್ಯಾಯದ ರುಚಿ ಬಿಟ್ಟುಕೊಟ್ಟು ಅಭೇದ ಸ್ವಭಾವದಲ್ಲಿ ಶ್ರದ್ಧೆ-ಜ್ಞಾನ ಮಾಡುವ ಅವಸರವು ಬರುವುದು.

**ಭಾವಾರ್ಥ :-** ದ್ರವ್ಯವು ಅನಂತಗುಣ ಮತ್ತು ಅನಂತಗುಣಗಳ ಅನಂತಪರ್ಯಾಯಗಳ ಆಧಾರ ರೂಪವಾದ ಒಂದು ವಸ್ತುವಿದೆ. ತಮ್ಮಲ್ಲಿ ವಿಕಾರವಿರಲಿ ಅಥವಾ ಅವಿಕಾರವಿರಲಿ, ಅಪೂರ್ಣ ದಶೆಯಿರಲಿ ಅಥವಾ ಪೂರ್ಣ ವಿಕಾಸರೂಪ ದಶೆಯಿರಲಿ, ಬೇಕಾದ ದಶೆಯಿರಲಿ ಆದರೆ ಅವುಗಳ ಆಧಾರವು ಸ್ವಯಂ ಇದ್ದಾನೆ. ಆದರೆ ಇತರದ ಆಧಾರದಿಂದ ತನ್ನಲ್ಲಿ ಏನೂ ಆಗುವುದಿಲ್ಲ. ಪರದ, ಪರ್ಯಾಯದ ಆಧಾರದಿಂದ ತಾನಿಲ್ಲ. ಹೀಗೆ ವಸ್ತುವು ಏಕ ಅಭೇದವಿದ್ದರೂ ಕೂಡ ಪರ್ಯಾಯಗಳು ಅನೇಕವಿವೆ. ನಿಗೋದದಿಂದ ಹಿಡಿದು ಸಿದ್ಧರವರೆಗೆ ಎಲ್ಲರ ಸ್ವಭಾವವು ಹೀಗೆ ಇದೆ.

ಅಸಂಜ್ಞೀ ಜೀವಗಳು ಕರ್ಮದ ಕಾರಣದಿಂದ ಸಿಕ್ಕಿಹಾಕಿಕೊಂಡಿವೆಯೆಂದು ಅಜ್ಞಾನೀ ಜೀವರುಗಳು ಹೇಳುತ್ತಾರೆ ಅಲ್ಲಿ ಬುದ್ಧಿಪೂರ್ವಕವಾಗಿ ಪುರುಷಾರ್ಥವಿಲ್ಲದಿರುವುದರಿಂದ ಕರ್ಮದ ಜೋರು ಇದೆಯೆಂದು ಹೇಳುತ್ತಾರೆ, ಆದರೆ ಆ ಮಾತು ಅಸತ್ಯವಿದೆ. ಕುಮತಿ, ಕುಶ್ರುತಜ್ಞಾನದ ಪರಿಣಮನವು ತನ್ನ ಕಾರಣದಿಂದ ಇದೆ, ಅದು ಕರ್ಮದ ಕಾರಣದಿಂದ ಇಲ್ಲ. ನಿಗೋದ ಮತ್ತು ಸಿದ್ಧ, ಭವ್ಯ ಅದರಂತೆ ಅಭವ್ಯವೆಂಬ ಎಲ್ಲ ಜೀವರುಗಳ ಸ್ವಭಾವವು ದ್ರವ್ಯದಿಂದ ಏಕರೂಪವಿದೆ

ಮತ್ತು ಪರ್ಯಾಯದಿಂದ ಅನೇಕ ರೂಪವಾಗುವುದಿದೆ.

ಕ್ಷಾಯಿಕ ಸಮ್ಯಕ್ತ್ವವಾಗುವುದಿದ್ದರೆ ಆಗ ಕೇವಲಿಗಳ ಅಥವಾ ಶ್ರುತಕೇವಲಿಗಳ ಉಪಸ್ಥಿತಿಯಿರುತ್ತದೆ, ಆದರೆ ಕೇವಲಿಗಳ ಕಾರಣದಿಂದ ಸಮ್ಯಕ್ತ್ವವಾಗುವುದಿಲ್ಲ. ಆ ಪರ್ಯಾಯವನ್ನು ಪರಾಧೀನವೆಂದು ಮನ್ನಿಸಿದರೆ ಪರ್ಯಾಯದಲ್ಲಿ ಸುಧಾರಣೆ ಮಾಡುವುದು ಉಳಿಯುವುದಿಲ್ಲ. ಆದುದರಿಂದ ಪರ್ಯಾಯದ ಸ್ವತಂತ್ರತೆಯು ಮತ್ತು ಅನೇಕತೆಯಾಗುವುದು ಅದು ಜೀವಾಸ್ತಿಕಾಯದ ಧರ್ಮವಿದೆಯೆಂದು ಜ್ಞಾನ ಮಾಡಿಕೊಂಡು ಪರ್ಯಾಯದ ಅಭಿರುಚಿಯನ್ನು ಬಿಟ್ಟುಕೊಟ್ಟು, ಅಭೇದ ಸ್ವಭಾವದ ಶ್ರದ್ಧೆ-ಜ್ಞಾನ ಮಾಡುವುದು ಅದು ಧರ್ಮವಿದೆ.

ಆ ಗುಣಗಳು ದ್ರವ್ಯದಿಂದ ಸಂಪೂರ್ಣ ಪ್ರಕಾರದಿಂದ ಭಿನ್ನವಾಗಿದ್ದರೆ ಅಥವಾ ಗುಣಗಳಿಂದ ದ್ರವ್ಯವು ಭಿನ್ನವಾಗಿದ್ದರೆ ಮಹಾನದೋಷ ತಗಲುತ್ತದೆ. ಉಷ್ಣತೆಯು ಯಾವುದೇ ಒಂದು ಸ್ಥಳದಲ್ಲಿ ಮತ್ತು ಅಗ್ನಿಯು ಯಾವುದೇ ಒಂದು ಸ್ಥಳದಲ್ಲೆಂದು ಮನ್ನಿಸುವುದರಲ್ಲಿ ಬಂದರೆ ದೋಷವಿದೆ ; ಅದೇ ಪ್ರಕಾರ ಜ್ಞಾನವು ಒಂದು ಕಡೆಯಲ್ಲಿ ಮತ್ತು ಆತ್ಮನು ಒಂದು ಕಡೆಯಲ್ಲೆಂದು ಮನ್ನಿಸುವುದರಿಂದ ಎಂದರೆ ಸರ್ವಥಾ ಭಿನ್ನ ಮನ್ನಿಸುವುದರಿಂದ ದೋಷವಿದೆಯೆಂದು ಈಗ ಹೇಳಲಾಗುವುದು.

ಆ ಗುಣಗಳು ದ್ರವ್ಯದಿಂದ ಸರ್ವಥಾ ಭಿನ್ನವಾಗಿದ್ದರೆ ಅಥವಾ ಗುಣಗಳಿಂದ ದ್ರವ್ಯವು ಬೇರೆಯಾಗಿದ್ದರೆ ಮಹಾನ ದೋಷವು ಬರುತ್ತದೆಯೆಂಬುದನ್ನು ಈಗ ಗಾಥೆಯ ಮುಖಾಂತರ ಹೇಳುತ್ತಾರೆ,-

**ಜದಿ ಹವದಿ ದವ್ವಮಣ್ಣಂ ಗುಣದೋ ಯ ಗುಣಾ ಯ ದವ್ವದೋ ಅಣ್ಣೇ ।**
**ದವ್ವಾಣಂತಿಯಮಥವಾ ದವ್ವಾಭಾವಂ ಪಕುವ್ವಂತಿ ।।೪೪।।**

**ದ್ರವ್ಯವು ಗುಣಗಳಿಂದ ಭಿನ್ನ ಮೇಣ್ಗುಣಗಳು ದ್ರವ್ಯದಿಂದನ್ಯವಾದರೆ ।**
**ದ್ರವ್ಯದ ಅನಂತತೆಯಿಲ್ಲದಿದ್ದರೆ ದ್ರವ್ಯದ ಅಭಾವ ತಾನಾಗಬಹುದು ।।೪೪।।**

ಯಾರಿಗೆ ಧರ್ಮಮಾಡುವುದಿದೆ ಅವರು ಮೊದಲು ಆತ್ಮನನ್ನು ಇತರ ಪದಾರ್ಥಗಳಿಂದ ಭಿನ್ನವೆಂದು ನಿಶ್ಚಯ ಮಾಡಬೇಕಾಗುವುದು. ಆದರೆ ಯಾವ ಪ್ರಕಾರ ಆತ್ಮನು ಪರವಸ್ತುಗಳಿಂದ ಸರ್ವಥಾ ಭಿನ್ನನಿದ್ದಾನೆ. ಅದೇ ಪ್ರಕಾರ ಅವನು ತನ್ನ ಗುಣಗಳಿಂದ ಸರ್ವಥಾ ಭಿನ್ನನಿಲ್ಲ. ಗುಣ-ಗುಣಿಯಲ್ಲಿ ಅಭೇದವಿದೆಯೆಂದು ತಿಳಿದು ಅಭೇದ ದೃಷ್ಟಿ ಮಾಡುವುದರಿಂದ ಧರ್ಮದಶೆಯು ಪ್ರಕಟವಾಗುವಂತಿದೆ.

**ಭಾವಾರ್ಥ :-** ಆತ್ಮನು ಶರೀರ ಮತ್ತು ಕರ್ಮದಿಂದ ಭಿನ್ನನಿರುವಂತೆ ಆತ್ಮ ಮತ್ತು ಅವನ ಗುಣಗಳು ಭಿನ್ನವಿಲ್ಲ, ಕಥಂಚಿತ್ ಪ್ರಕಾರದಿಂದ ಸಂಜ್ಞಾಭೇದ ಹಾಗೂ ಲಕ್ಷಣಭೇದದಿಂದ ಭೇದವಿದೆ. ಆದರೆ ಗುಣ-ಗುಣಿಯಲ್ಲಿ ಸಂಪೂರ್ಣ ಪ್ರಕಾರದಿಂದ ಭೇದ ಮನ್ನಿಸಹೋದರೆ ಒಂದು ದ್ರವ್ಯದಲ್ಲಿ ಅನಂತ ಭೇದಗಳಾಗಿ ಬಿಡುವವು ಅಥವಾ ಗುಣಗಳನ್ನು ಬೇರೆ ಮಾಡುವುದರಿಂದ ದ್ರವ್ಯದ ಅಭಾವವಾಗುವುದೆಂಬುದನ್ನು ತಿಳಿಸಿಕೊಡಲಾಗಿದೆ.

ಆತ್ಮನಲ್ಲಿ ಗುಣದ ಅವಸ್ಥೆಯಾಗುತ್ತದೆ ಮತ್ತು ದ್ರವ್ಯವು ಬೇರೆ ಇದ್ದುಬಿಡುತ್ತದೆ ಅಥವಾ ದ್ರವ್ಯದ ಅವಸ್ಥೆಯಾಗುತ್ತದೆ ಮತ್ತು ಗುಣವು ಭಿನ್ನವಾಗಿ ಇರುತ್ತದೆಯೆಂಬುದು ಸಾಧ್ಯವಿಲ್ಲ. ಆತ್ಮನು ತ್ರಿಕಾಲೀ ವಸ್ತುವಿದ್ದು ಅವನಲ್ಲಿ ಜ್ಞಾನ-ದರ್ಶನ ಮೊದಲಾದ ಗುಣಗಳಿವೆ. ಅವುಗಳಲ್ಲಿ ನಾಮ ಮತ್ತು ಲಕ್ಷಣಭೇದದಿಂದ ಭೇದಗಳಾದರೂ ಕೂಡ ಪ್ರದೇಶಭೇದದಿಂದ ಭೇದವಿಲ್ಲ. ಸಕ್ಕರೆ ಮತ್ತು ಅದರ ಸಿಹಿತನದಂತೆ ದ್ರವ್ಯ ಮತ್ತು ಅದರ ಗುಣಗಳು ಹೆಸರಿನಿಂದ ಬೇರೆಯಾಗಿದ್ದರೂ ಕೂಡ ಯಾವ ಪ್ರಕಾರ ಸಕ್ಕರೆಯು ತನ್ನ ಡಬ್ಬದಿಂದ ಬೇರೆಯಿದೆ ಅದೇ ಪ್ರಕಾರ ಸಕ್ಕರೆ ಮತ್ತು ಅದರ ಗುಣತನವು ಬೇರೆಯಿಲ್ಲ. ಆದರೆ ಪ್ರದೇಶದಿಂದ ಅಭೇದವಿದೆ ಸಕ್ಕರೆ ಮತ್ತು ಅದರ ಗುಣತನವು ಭಿನ್ನವಿರುವುದಿಲ್ಲ. ಹಾಗೆ ಶರೀರರೂಪದ ಡಬ್ಬವಿದ್ದು

ಅದರಿಂದ ಹಾಗೂ ಇತರ ಜೀವಗಳಿಂದ ಈ ಆತ್ಮನು ಸರ್ವಥಾ ಭಿನ್ನನಿದ್ದಾನೆ, ಹಾಗೆ ಆತ್ಮನು ಗುಣಗಳಿಂದ ಭಿನ್ನನಿದ್ದಾನೆಂಬುದು ಸಾಧ್ಯವಿಲ್ಲ ಆದರೆ ಗುಣ-ಗುಣಿಯ ಅಭೇದತೆಯಿದೆ.

ಆತ್ಮನು ಒಂದು ಪದಾರ್ಥವಿದ್ದು ಅವನಲ್ಲಿ ಜ್ಞಾನ, ದರ್ಶನ, ಚಾರಿತ್ರ ಮೊದಲಾದ ಗುಣಗಳು ಅಂಶರೂಪದಿಂದಿವೆ ಮತ್ತು ಗುಣೀ ಆತ್ಮನು ಅಂಶಿಯಿದ್ದಾನೆ ಎಂದರೆ ಜ್ಞಾನ, ದರ್ಶನ ಮೊದಲಾದ ಅಂಶಗಳನ್ನು ಧಾರಣ ಮಾಡುವವನಿದ್ದಾನೆ. ಆತ್ಮನು ಶರೀರವನ್ನು , ಕರ್ಮವನ್ನು ಹಾಗೂ ಇತರ ವಸ್ತುಗಳನ್ನು ಧರಿಸುವುದಿಲ್ಲ. ಅದೇ ಪ್ರಕಾರ ತನ್ನ ಗುಣಗಳನ್ನು ಕೂಡ ಧರಿಸುವುದಿಲ್ಲ ಎಂಬುದಾಗಿಲ್ಲ. ಯಾವ ಪ್ರಕಾರ ಆತ್ಮನು ಪರವಸ್ತುಗಳಿಂದ ಭಿನ್ನನಿದ್ದಾನೆ ಅದೇ ಪ್ರಕಾರ ತನ್ನ ಗುಣಗಳನ್ನು ತನ್ನ ಆತ್ಮನಿಂದ ಭಿನ್ನವೆಂದು ಮನ್ನಿಸಿದರೆ ನಿನಗೆ ಗುಣ-ಗುಣಿಯ ಅಭೇದದೃಷ್ಟಿಯಾಗಿಲ್ಲ.

ಸಕ್ಕರೆಯು ಪದಾರ್ಥವಿದೆ ಮತ್ತು ಸಿಹಿತನ, ಶುಭ್ರತೆ ಮೊದಲಾದ ಗುಣಗಳು ಅದರ ಅಂಶವಿವೆ ಆ ಗುಣಗಳು ಡಬ್ಬದ ಆಧಾರದಿಂದಿಲ್ಲ, ಅದೇ ಪ್ರಕಾರ ಆತ್ಮನಲ್ಲಿ ಜ್ಞಾನ, ದರ್ಶನ, ಸ್ವಚ್ಛತ್ವ, ವಿಭುತ್ವ, ಕರ್ತಾ, ಕರಣ ಮೊದಲಾದ ಅನಂತ ಶಕ್ತಿಗಳಿವೆ ಅವು ಅಂಶಗಳಿವೆ-ಭೇದಗಳಿವೆ-ಅನೇಕವಿವೆ ಮತ್ತು ಗುಣೀ-ಅಂಶೀ ಆತ್ಮನು ಒಬ್ಬನಿದ್ದಾನೆ ಮತ್ತು ಅವನು ಆಧಾರ ಕೊಡುವವನಿದ್ದಾನೆ. ತನ್ನ ಗುಣಗಳ ಆಧಾರವು ಶರೀರ, ಕರ್ಮ, ಪರವಸ್ತುಗಳಿಲ್ಲ, ಆದರೆ ತ್ರಿಕಾಲೀ ಆತ್ಮನು ತನ್ನ ಆಧಾರನಿದ್ದಾನೆಂದು ಅಭೇದ ಶ್ರದ್ಧೆಮಾಡಿದರೆ ಧರ್ಮವಾಗುವಂತಿದೆ.

ದೇವ-ಶಾಸ್ತ್ರ-ಗುರುಗಳ ಉಪಸ್ಥಿತಿಯಿದ್ದರೆ, ಶರೀರವು ಸರಿಯಾಗಿದ್ದರೆ, ಏಕಾಂತಮಯ ಸ್ಥಾನವಿದ್ದರೆ, ಇತರ ಜೀವರುಗಳ ಭಾವವು ಅನುಕೂಲವಾಗಿದ್ದರೆ ಮತ್ತು ಬಾಹ್ಯದಲ್ಲಿ ಅನುಕೂಲವಾದ ಕಾಲವಿದ್ದರೆ ಧರ್ಮವಾಗುವುದೆಂಬ ಬಾಹ್ಯದ ದ್ರವ್ಯ-ಕ್ಷೇತ್ರ-ಕಾಲ ಮತ್ತು ಭಾವದಿಂದ ತನ್ನಲ್ಲಿ ಧರ್ಮವು ಪ್ರಕಟವಾಗುವುದೆಂದು ಮನ್ನಿಸುವವನು ಪರವಸ್ತುವನ್ನು ಗುಣಗಳ ಆಧಾರವೆಂದು ಮನ್ನಿಸಿದ್ದಾನೆ, ಆದರೆ ಗುಣಗಳ ಆಧಾರನು ಆತ್ಮನಿದ್ದಾನೆಂದು ಮನ್ನಿಸುವುದಿಲ್ಲ. ಮನೆಯಲ್ಲಿ ಅಧಿಕ ಜನರಿದ್ದಾರೆ ಮತ್ತು ಸದ್ದು-ಗದ್ದಲ ಮಾಡುತ್ತಿದ್ದರೆ ನಾನು ಧ್ಯಾನ ಹೇಗೆ ಮಾಡುವುದೆನ್ನುವ ಜೀವನು ಧ್ಯಾನರೂಪ ಶಾಂತಿಯ ಆಧಾರವು ಪರದ ಕಾರಣದಿಂದೆಂದು ಮನ್ನಿಸಿದ್ದಾನೆ ಆ ಮನ್ನಣೆಯು ಅಸತ್ಯವಿದೆ. ಸಕ್ಕರೆಯನ್ನು ಅಫೀಮುದ ಜತೆ ಬೆರೆಸುವುದರಿಂದ ಅಫೀಮುದ ಗುಣ ಬರುವುದಿಲ್ಲ. ಏಕೆಂದರೆ ಎರಡರಲ್ಲಿ ಅನ್ಯೋನ್ಯ ಅಭಾವವಿದೆ ಅದೇ ಪ್ರಕಾರ ಆತ್ಮ ಮತ್ತು ಇತರ ಆತ್ಮ ಹಾಗೂ ಜಡ ಪದಾರ್ಥಗಳ ಮಧ್ಯದಲ್ಲಿ ಅತ್ಯಂತ ಅಭಾವವಿದೆ, ಆದಾಗ್ಯೂ ಪರದ ಕಾರಣದಿಂದ ಲಾಭ ಅಥವಾ ಕಲುಷಿತತೆಯಾಗುತ್ತದೆನ್ನುವಂತಿಲ್ಲ. ಆದರೂ ಅದೆಷ್ಟೋ ಜೀವರುಗಳು ದೇಹವನ್ನು ಧರ್ಮದ ಸಾಧನವೆಂದು ಮನ್ನಿಸಿದ್ದಾರೆ. ಜ್ವರ ಹಿಡಿದುಕೊಂಡಾಗ ಧರ್ಮವಾಗುತ್ತದೆಯೇನು? ಎಂದು ತರ್ಕ ಮಾಡುತ್ತಾರೆ. ಸೋದರನೇ ! ಧೈರ್ಯ ತಾಳು, ನೀನು ಜಡಪರ್ಯಾಯಗಳಿಂದ ಭಿನ್ನನಿರುವೆ, ನಿನ್ನ ಗುಣಗಳು ಪ್ರಕಟವಾಗಲು ಆತ್ಮನು ಆಧಾರನಿದ್ದಾನೆ. ಶರೀರವು ಬದಲಾಗುವುದರಿಂದ ನಿನ್ನ ಅವಸ್ಥೆಯು ಬದಲಾಗುತ್ತದೆಯೆಂಬುದು ಸಾಧ್ಯವಿಲ್ಲ.

ಅಂಶಿಯಿಂದ ಅಂಶವು ಬೇರೆಯಾಗುವ ಸಾಧ್ಯತೆಯಿಲ್ಲ ಮತ್ತು ಅಂಶಿಯ ಆಶ್ರಯದಿಂದ ಅಂಶವಿರುತ್ತದೆ. ಭಾವ ಮತ್ತು ಭಾವವಂತವು ಬೇರೆಯಿರುವ ಸಾಧ್ಯತೆಯಿಲ್ಲ. ಆತ್ಮನು ದ್ರವ್ಯನಿದ್ದಾನೆ. ಜ್ಞಾನ-ದರ್ಶನಾದಿಗಳು ಅವನ ಗುಣಗಳಿವೆ. ಅವೇನು ಕಾಲದ ಆಶ್ರಯದಿಂದಿಲ್ಲ. ಚತುರ್ಥ ಕಾಲದಲ್ಲಿ ಗುಣಗಳು ವೃದ್ಧಿಸುತ್ತವೆ ಮತ್ತು ಪಂಚಮಕಾಲದಲ್ಲಿ ಕಡಿಮೆಯಾಗುತ್ತವೆ ಎನ್ನುವಂತಿಲ್ಲ. ಅಖಂಡ ದ್ರವ್ಯದ ಆಶ್ರಯದಿಂದ ಯಾವ ಪರಿಣಮನವಾಗುತ್ತದೆ ಅದೇ ಗುಣದ ಪರಿಣಮನವಿದೆ ಮತ್ತು ಅದೇ ದ್ರವ್ಯದ ಪರಿಣಮನವಿದೆ.

ಮೇರುಪರ್ವತದ ಮಧ್ಯದಲ್ಲಿ ಕೂಡ್ರಲು ಕೂಡ ಸ್ಥಳವಿಲ್ಲದಿದ್ದರೂ ಮೇರುಪರ್ವತದ ಪ್ರತಿಯೊಂದು ಅಣುವಿನಿಂದ ಅನಂತ ಜೀವರುಗಳು ಮುಕ್ತಿ ಪಡೆದಿದ್ದಾರೆ ಒಂದು ಅಂಗುಲಿಯ ಅಸಂಖ್ಯಾತದ ಭಾಗ ಕೂಡ ಅಲ್ಲಿಂದ ಮುಕ್ತಿ ಪಡೆದಿಲ್ಲವೆಂಬುದಾಗಿ ಉಳಿದಿಲ್ಲ. ಆರನೆಯ ಗುಣಸ್ಥಾನವರ್ತಿಯಾದ ಓರ್ವ ಮುನಿಗೆ ಉಪಸರ್ಗವಾಗುವುದು ಮತ್ತು

ಯಾವನೋ ಓರ್ವ ದೇವನು ಆ ಮುನಿಯನ್ನು ಮಡಿವಾಳನು ಬಟ್ಟೆಯನ್ನು ಬಂಡೆಗಲ್ಲಿನ ಮೇಲೆ ಹೊಡೆಯುವಂತೆ ಎತ್ತಿ ಅಪ್ಪಳಿಸುವನು ಆ ದೇವನಿಗೆ ಅಂಥ ಕಲುಷಿತ ಪರಿಣಾಮವಾದರೂ ಕೂಡ ಆ ಮುನಿಯು ವಿಕಲ್ಪ ತೊರೆದು ತನ್ನ ಧ್ಯಾನದಲ್ಲಿ ಲೀನನಾಗಿ ಹೋಗುತ್ತಾನೆ. ಆಂತರ್ಯದಲ್ಲಿ ಅಖಂಡ ಜ್ಞಾತಾನ ದೃಷ್ಟಿಯಂತೂ ಇತ್ತು ನನ್ನ ಕೇವಲಜ್ಞಾನವು ನನ್ನ ಆಂತರ್ಯದೊಳಗಿಂದ ಪ್ರಕಟವಾಗುತ್ತದೆಂಬ ಗುಣ-ಗುಣಿಯ ಏಕತೆಯನ್ನು ವಿಶೇಷ ದೃಢಮಾಡಿ ಕೇವಲಜ್ಞಾನ ಪಡೆದು ಮುಕ್ತನಾಗುತ್ತಾನೆ ಬಾಹ್ಯದಲ್ಲಂತೂ ದೇವನ ಉಪಸರ್ಗವಿದೆ ಮತ್ತು ಧ್ಯಾನದಲ್ಲಂತೂ ಬಾಹ್ಯ ಅರಿವಿಲ್ಲ, ಶರೀರವನ್ನು ತಲೆಕೆಳಗೆ ಮಾಡಿ ಆ ದೇವನು ಬಂಡೆಗಲ್ಲಿನ ಮೇಲೆ ಅಪ್ಪಳಿಸುತ್ತಿದ್ದಾನೆ, ಆದರೂ ಆ ಮುನಿಯು ಮುಕ್ತಿ ಪಡೆಯುತ್ತಾನೆ. ಹೀಗೆ ಅನಂತ ಮುನಿಗಳು ಆ ಅಣು-ಅಣುವಿನಿಂದ ಮುಕ್ತರಾಗಿದ್ದಾರೆ ಮುಕ್ತವಾಗುವ ಸಮಯದಲ್ಲಿ ಶರೀರವು ಸರಳವಾಗಿ ಜೀವವು ಸಮಶ್ರೇಣಿಯಿಂದ ಮೇಲೆ ಹೋಗುವುದು. ಅದಕ್ಕಾಗಿ ಗುಣ-ಗುಣಿಯ ದೃಷ್ಟಿಯೇ ಧರ್ಮದ ಮತ್ತು ಮೋಕ್ಷದ ಕಾರಣವಿದೆ.

ಆದುದರಿಂದ ಅಂಶಿಯು ಅಂಶದಿಂದಬೇರೆಯಿದ್ದರೆ ಅಂಶವೇನು ಅಂಶಿಯ-ಆಶ್ರಯದಿಂದ ಇರುತ್ತವೆಯೇನು? ಯಾವ ಪ್ರಕಾರ ಶರೀರ, ಕರ್ಮ ಮೊದಲಾದುವು ಆತ್ಮನಿಂದ ಭಿನ್ನವಿದೆ ಅದೇ ಪ್ರಕಾರ ಜ್ಞಾನ-ದರ್ಶನಾದಿ ಗುಣಗಳು ಆತ್ಮನಿಂದ ಭಿನ್ನವೆಂದು ಹೇಳಿದರೆ ಜ್ಞಾನದರ್ಶನಾದಿಗಳು ಯಾವುದರ ಆಧಾರದಿಂದಿರುತ್ತವೆ ? ಎಂದರೆ ಆತ್ಮನ ಆಧಾರವಿಲ್ಲದೆ ಗುಣಗಳು ಇರುವ ಸಾಧ್ಯತೆಯಿಲ್ಲ ನೋಡಿರಿ !. ಇದು ಜೀವಾಸ್ತಿಕಾಯದ ವರ್ಣನೆಯಿದೆ. ನೀನು ಜೀವನಿರುವೆ ಮತ್ತು ಕಾಯವುಳ್ಳವನಿರುವೆ ಎಂದರೆ ಅಸಂಖ್ಯ ಪ್ರದೇಶಗಳು ಅದು ನಿನ್ನ ಕಾಯವಿದೆ. ಪರದ ಕಾಯವಂತೂ ನಿನ್ನದಿಲ್ಲ, ಆದರೆ ಔದಾರಿಕ, ಕಾರ್ಮಣ ಮತ್ತು ತೈಜಸಗಳೂ ಕೂಡ ನಿನ್ನ ಕಾಯಗಳಿಲ್ಲ ಒಂದು ಪರಮಾಣುವಿನ ಒಂದು ಪ್ರದೇಶದ ಗಜದಿಂದ ಅಳೆಯಹೋದರೆ ಪ್ರತಿಯೊಬ್ಬ ಆತ್ಮನು ಅಸಂಖ್ಯ ಪ್ರದೇಶಿಯಿದ್ದಾನೆ, ಅದು ನಿನ್ನ ಕ್ಷೇತ್ರವಿದೆ, ಅದು ನಿನ್ನ ಕಾಯವಿದೆ. ಅರೂಪೀ ಜ್ಞಾನ-ದರ್ಶನ ಮೊದಲಾದ ಅನಂತ ಗುಣಗಳಿಂದ ತುಂಬಿದ ನಿನ್ನ ಕಾಯವಿದೆ. ಆ ಗುಣಗಳು ನಿನ್ನಿಂದ ಎಂದೂ ಬೇರೆಯಾಗುವುದಿಲ್ಲವೆಂದು ತಿಳಿದುಕೊಳ್ಳು.

ಚಿನ್ನವು ಪದಾರ್ಥವಿದ್ದು ಅದರಲ್ಲಿ ಹಳದೀತನ, ಸ್ನಿಗ್ಧತೆ ಮೊದಲಾದ ಗುಣಗಳಿವೆ. ಗುಣಗಳು ಆಧೇಯವಿವೆ ಮತ್ತು ಚಿನ್ನವು ಆಧಾರವಿದೆ ಅದರಂತೆ ಜ್ಞಾನ-ದರ್ಶನ ಮೊದಲಾದ ಗುಣಗಳು ಆಧೇಯವಿವೆ ಮತ್ತು ಆತ್ಮನು ಆಧಾರನಿದ್ದಾನೆ ದೇವ-ಗುರುಗಳ ಕಾರಣದಿಂದ ಸಮ್ಯಕ್ತ್ವವಾಯಿತು, ಪುದ್ಗಲದ ಕಾರಣದಿಂದ ಜೀವದಲ್ಲಿ ಮಾರ್ಪಾಡಾಯಿತೆಂದರೆ ಜೀವಾಸ್ತಿಕಾಯವು ಉಳಿಯುವುದಿಲ್ಲ ಏಕೆಂದರೆ ಗುಣಗಳ ಆಧಾರವು ಪರವಸ್ತುವೆಂದು ಮನ್ನಿಸುವುದೇ ಭ್ರಾಂತಿಯಿದೆ. ದುಡ್ಡು ತನ್ನ ಪರಮಾಣುವಿನ ಆಧಾರದಿಂದ ಇದೆ. ಅದರ ಆಧಾರನು ಆತ್ಮನಿಲ್ಲ ಒಂದು ಸ್ಕಂಧದಲ್ಲಿ ಅನಂತ ಪರಮಾಣುಗಳು ಏಕತ್ರವಾದುದು ಕಂಡುಬರುತ್ತದೆ. ಆದರೂ ಅಲ್ಲಿ ಕೂಡ ಒಂದು ಪರಮಾಣುವಿನ ಗುಣಗಳು ಇನ್ನೊಂದು ಪರಮಾಣುವಿನ ಆಧಾರದಿಂದಿಲ್ಲ ಆದರೆ ತನ್ನ ದ್ರವ್ಯದ ಆಧಾರದಿಂದಿವೆ. ಒಳ್ಳೆಯ ಅನ್ನ-ನೀರುಗಳು ದೊರೆತರೆ ಲಾಭವಾಗುವುದು ಕೀಳು ಅನ್ನ-ನೀರುಗಳು ದೊರೆತರೆ ಹಾನಿಯಾಗುವುದೆಂಬ ಮನ್ನಣೆಯು ಅಜ್ಞಾನಭಾವವಿದೆ. ಜಗತ್ತಿನಲ್ಲಿ ಪದಾರ್ಥ ಸಮಯದೊಳಗೆ ಗುಣ-ಗುಣಿಯು ಬೇರೆಯಾಗುವುದೇ ಇಲ್ಲವೆಂದು ಜ್ಞಾನ ಮಾಡಿದರೆ ಜ್ಞಾನವು ಸತ್ಯ ಮತ್ತು ಈ ಪ್ರಕಾರ ಶಬ್ದ ಆಡಿದರೆ ಶಬ್ದವು ಸತ್ಯವಿದೆ. ಆದರೆ ಪರದಿಂದ ಲಾಭವಾಗುವುದು ಅಥವಾ ಧರ್ಮದ ದಶೆಯಾಗುವುದೆಂದು ಹೇಳುವ ಶಾಸ್ತ್ರವು ಸತ್ಯವಿಲ್ಲ ಆ ಜ್ಞಾನವು ಮಿಥ್ಯಾಜ್ಞಾನವಿದೆ ಮತ್ತು ಗುಣಗಳು ಗುಣಿಯ ಆಧಾರವೆಂದು ಸ್ವೀಕರಿಸದಿದ್ದರೆ ಪದಾರ್ಥದ ಸ್ವರೂಪ ಕೂಡ ಸತ್ಯವೆಂದು ಮನ್ನಿಸಲಿಲ್ಲ ಗುಣಗಳ ಆಧಾರವು ಗುಣಿಯೆಂಬುದೇ ಅರ್ಥಸಮಯದ ಸ್ವರೂಪವಿದೆ ನಿನಗೆ ಧರ್ಮದ ದಶೆಯನ್ನು ಪ್ರಕಟಮಾಡಿಕೊಳ್ಳುವುದಿದೆಯಲ್ಲವೇ? ಆದರೆ ಯಾರ ಎದುರು ನೋಡಿ ? ನಿನ್ನ ಗುಣಗಳು ಪರದೊಳಗಿಂದ ಬರುವುದಿಲ್ಲ ಅದಕ್ಕಾಗಿ ಪರದ ಎದುರು ನೋಡುವುದಿಲ್ಲ. ಆದರೆ ನಿನ್ನ ಗುಣಗಳ ಆಧಾರನು ಗುಣೀ ಆತ್ಮನಿದ್ದಾನೆಂದು ಗುಣ-ಗುಣಿಯ ಏಕತೆ ಮಾಡಿದರೆ ಧರ್ಮದಶೆಯು ಪ್ರಕಟವಾಗುವಂತಿದೆ.

ಮತ್ತು ಅಂಶಗಳಲ್ಲಿ ಅಂಶಿಯು ಭಿನ್ನನಿರುತ್ತಾನೆಂದರೆ ಆ ಅಂಶಗಳು ಆಧಾರವಿಲ್ಲದೆ ಯಾವ ಅಂಶಿಯ

ಆಶ್ರಯದಿಂದಿರುತ್ತವೆ ? ಆದುದರಿಂದ ಯಾವುದರ ಆಧಾರದಿಂದ ಅಂಶಗಳಿವೆ ಅಂಥ ಬೇರೊಂದು ಅಂಶಿ ಬೇಕು. ಮತ್ತು ಅನ್ಯ ಅಂಶಿಯಿದ್ದಾನೆ ಅವನ ಆಧಾರದಿಂದ ಇರುತ್ತವೆಂದು ಹೇಳಿದರೆ ಅಂಶಿಯಿಂದಲೂ ಅಂಶಗಳು ಬೇರೆಯೆಂದು ಹೇಳಬೇಕಾಗುವುದು, ಮತ್ತು ಅದರಿಂದಲೂ ಅಂಶಗಳು ಬೇರೆಯೆಂದು ಹೇಳಿದರೆ ಪುನಃ ಅನ್ಯಅಂಶಿಯ ಕಲ್ಪನೆ ಮಾಡಬೇಕಾಗುವುದು. ಹೀಗೆ ಕಲ್ಪನೆ ಮಾಡುವುದರಿಂದ ಗುಣ-ಗುಣಿಯ ಸ್ಥಿತಿಯಿರಲಾರದು.

ಜ್ಞಾನ-ದರ್ಶನ ಗುಣಗಳು ಆತ್ಮನಿಂದ ಬೇರೆಯಿದ್ದರೆ ಆಧಾರವಿಲ್ಲದೆ ಆ ಗುಣಗಳು ಹೇಗೆ ಇರುವವು ? ಅದಕ್ಕಾಗಿ ಅವುಗಳ ಆಧಾರವು ಇರಲೇಬೇಕು. ಇವುಗಳ ಆಧಾರವು ಇನ್ನೊಂದೆಂದು ಮನ್ನಿಸಿದರೆ ಇನ್ನೊಂದು ಪದಾರ್ಥದಲ್ಲಿ ಅಂಶಗಳು ಬೇರೆಯಿರುತ್ತವೆ ಅದರಿಂದ ಇನ್ನೊಂದರ ಆಧಾರದ ಕಲ್ಪನೆ ಮಾಡಬೇಕಾಗುವುದು. ಎಂದರೆ ನಿನ್ನ ಜ್ಞಾನ-ದರ್ಶನ ಗುಣಗಳನ್ನು ಪ್ರಕಟಿಸುವ ಸಲುವಾಗಿ ಬಾಹ್ಯದಲ್ಲಿ ಬೇರೆ ಬೇರೆ ಪದಾರ್ಥಗಳ ಅವಲಂಬನೆ ಪಡೆಯಹೋದರೆ ಗುಣ-ಗುಣಿಯ ಏಕತೆಯನ್ನೆಂದೂ ಪಡೆಯುವುದಿಲ್ಲ ಮತ್ತು ನಿನಗೆ ಪ್ರಮಾಣ ಜ್ಞಾನವಾಗುವುದಿಲ್ಲ. ನಿನ್ನ ಗುಣಗಳ ದಶೆಯನ್ನು ಪ್ರಕಟ ಮಾಡುವ ಸಲುವಾಗಿ ನಿನ್ನ ಆಧಾರವಿದೆಯೆಂಬುದನ್ನು ಮನ್ನಿಸಿದಲ್ಲದೆ ನಿನ್ನ ಸಂಸಾರದ ಕೊನೆ ಬರಲಾರದು.

ಈ ಜಗತ್ತಿನಲ್ಲಿ ಅನಂತಜೀವಗಳು, ಅನಂತಪುದ್ಗಲಗಳು ಮೊದಲಾಗಿ ಅನಂತದ್ರವ್ಯಗಳಿವೆ. ಆ ಪ್ರತಿಯೊಂದರಿಂದ ನಿನ್ನ ಆತ್ಮನು ಭಿನ್ನನಿದ್ದಾನೆ. ಪ್ರತಿಯೊಂದರಿಂದ ಅನ್ಯತ್ವವಿದೆಯೆಂದು ಅನಂತ ಅನ್ಯತ್ವ ಧರ್ಮಗಳು ನಿನ್ನಲ್ಲಿ ಇವೆ, ಅವುಗಳ ಕಾರಣದಿಂದ ನೀನೆಂದೂ ಪರರೂಪನಾಗಿಲ್ಲ ಅಲ್ಲದೆ ಪ್ರಭುತ್ವ, ಸ್ವಚ್ಛತ್ವ, ಜ್ಞಾನ, ದರ್ಶನ ಮೊದಲಾಗಿ ಅನಂತಗುಣಗಳಿವೆ. ಆತ್ಮವಸ್ತುವು ಒಂದಿದ್ದರೆ ಗುಣಗಳು ಅನಂತವಿವೆ. ಈಗ ಗುಣಗಳನ್ನು ದ್ರವ್ಯದಿಂದ ಬೇರೆಯೆಂದು ಮನ್ನಿಸಿದರೆ ಗುಣಗಳು ಅನಂತವಿರುವುದರಿಂದ ದ್ರವ್ಯಗಳು ಅನಂತವಾಗಿ ಬಿಡುವವು. ದ್ರವ್ಯವು ಒಂದಿದ್ದರೂ ಕೂಡ ದ್ರವ್ಯವು ಅನಂತವಾಗುವ ದೋಷವು ಬರುವುದು. ದ್ರವ್ಯವಂತೂ ಅನಂತವಾಗುವುದಿಲ್ಲ, ಆದರೆ ಏಕರೂಪವಾದ ಅಭೇದದ್ರವ್ಯದ ಮೇಲೆ ದೃಷ್ಟಿಯು ಉಳಿಯದೆ ಭೇದದೃಷ್ಟಿ ಉಳಿಯುವುದು ಮತ್ತು ನಿನ್ನ ದೃಷ್ಟಿಯು ತುಂಡು-ತುಂಡು ಆಗುವುದರಿಂದ ನಿನಗೆ ಧರ್ಮದಶೆಯು ಉಂಟಾಗಲಾರದು.

ಈ ಕೋಲು ಇದೆ ಇದು ಕೈಯಮೇಲೆ ನಿಂತುಕೊಂಡದ್ದು ಕಂಡು ಬರುತ್ತದೆ ಆದರೆ ಆಧಾರವು ಕೈಯು ಇಲ್ಲ. ಆದರೆ ಅದಕ್ಕೆ ಕೋಲಿನ ಪರಮಾಣುಗಳ ಆಧಾರವಿದೆ. ಸಂಯೋಗವನ್ನು ನೋಡುವವನು ಕೈಯನ್ನು ನೋಡುತ್ತಾನೆ. ಆದರೆ ಕೋಲಿನ ಸ್ವಭಾವವನ್ನು ನೋಡುವುದಿಲ್ಲ. ಕೋಲಿನಲ್ಲಿ ಸ್ಪರ್ಶ ಮೊದಲಾದ ಅನಂತಗುಣಗಳಿವೆ ಅದರ ದ್ರವ್ಯವದು ಪರಮಾಣುವಿದೆ ಹೀಗೆ ಗುಣ-ಗುಣಿಯ ಅಭೇದವಿದೆ ಅದನ್ನು ನೋಡುವುದಿಲ್ಲ.

ಮತ್ತು ಅಜ್ಞಾನೀ ಜೀವನಿಗೆ ಪರದ ಮಹಿಮೆ ಬರುತ್ತದೆ ಸಕ್ಕರೆಯಲ್ಲಿ ಸಿಹಿತನದ ಶಕ್ತಿ, ನಿಂಬೆಯಲ್ಲಿ ಹುಳಿತನದ ಶಕ್ತಿ, ವಚನದಲ್ಲಿ ಪೃಥ್ವಿಯನ್ನು ತುಂಡುಮಾಡುವಂಥ ಶಕ್ತಿ, ಔಷಧದಲ್ಲಿ ಕಫವನ್ನು ಕತ್ತರಿಸುವಂಥ ಶಕ್ತಿ ಹೀಗೆ ಪರದ ಶಕ್ತಿಯ ಮಹಿಮೆ ಬರುತ್ತದೆ, ಆದರೆ ನಿನ್ನಲ್ಲಿ ಯಾವ ಸಾಮರ್ಥ್ಯ ಅಥವಾ ಸತ್ವವಿದೆಯೋ ಇಲ್ಲವೋ ? ಅಜ್ಞಾನೀ ಪ್ರಾಣಿಯು ನಾನು ಪಾಮರನಿದ್ದೇನೆಂದು ಹೇಳುತ್ತಾನೆ, ನನ್ನಲ್ಲಿ ಎಲ್ಲಿಯ ಸಾಮರ್ಥ್ಯವಿರುತ್ತದೆ ? - ಎಂದು ತನ್ನ ಸಮಾರ್ಥ್ಯದ ಅರಿವಿಲ್ಲ. ಅಧರ್ಮದ ನಾಶಮಾಡಿ ಧರ್ಮದ ಉತ್ಪಾದ ಮಾಡುವುದಿದೆ ಮತ್ತು ಎರಡರಲ್ಲಿ ಸ್ಥಿರವಿರುವುದಿದೆಯೆಂದು ಪರ್ಯಾಯದ ಸಾಮರ್ಥ್ಯ ಮತ್ತು ಗುಣ-ಗುಣಿಯ ಸಾಮರ್ಥ್ಯವನ್ನು ತಿಳಿಯದಿದ್ದರೆ ಧರ್ಮದ ಪರಿಣಮನವಾಗುವುದಿಲ್ಲ. ಯಾವ ಪ್ರಕಾರ ಚಿನ್ನದಲ್ಲಿ ಹಳದೀತನ, ಸ್ನಿಗ್ಧತೆ ಮೊದಲಾದ ಅನಂತಗುಣಗಳಿವೆ ಮತ್ತು ಚಿನ್ನವು ಅವುಗಳಿಂದ ಅಭೇದವಿದೆ ಅದೇ ಪ್ರಕಾರ ಆತ್ಮನಲ್ಲಿ ಜ್ಞಾನ, ದರ್ಶನ, ಚಾರಿತ್ರ, ಪ್ರಭುತ್ವ, ಸ್ವಚ್ಛತ್ವ ಮೊದಲಾದ ಅನಂತ ಶಕ್ತಿಗಳಿವೆ ಆ ಸಾಮರ್ಥ್ಯ ಮತ್ತು ಸಾಮರ್ಥ್ಯವಂತನಲ್ಲಿ ಅಭೇದವಿದೆ ನಿನ್ನ ಜ್ಞಾನ ಮತ್ತು ಸುಖದ ಸುಲವಾಗಿ ಬಾಹ್ಯದಲ್ಲಿ ನೋಡಬೇಡ, ಆದರೆ ಅಂತರ್ಯದಲ್ಲಿ ನೋಡಿದರೆ ಅಭೇದದೃಷ್ಟಿಯಾಗಿ ಸಮ್ಯಗ್ದರ್ಶನವು ಪ್ರಕಟವಾಗಿ ಸುಖದಶೆಯು-ಧರ್ಮದಶೆಯು ಪ್ರಕಟವಾಗುವುದು ಮತ್ತು

ಅಧರ್ಮದ ನಾಶವಾಗಿ ಹೋಗುವುದು ಅಲ್ಲದೆ ನೀನು ಸ್ಥಿರವಾಗಿ ಉಳಿಯುವೆ.

ಆ ಆತ್ಮ ಮತ್ತು ಅವನ ಗುಣಗಳನ್ನು ಬೇರೆಯಾಗಿ ಮನ್ನಿಸಹೋದರೆ ಒಬ್ಬ ಆತ್ಮನು ಅನಂತ ವಸ್ತುರೂಪವಾಗಿ ಹೋಗುವನು. ವಸ್ತುವಂತೂ ಅನಂತವಾಗುವುದಿಲ್ಲ, ಆದರೆ ನಿನ್ನ ಮನ್ನಣೆಯು ಭೇದ ಭಾಗದಲ್ಲಿ ನಿಂತುಕೊಳ್ಳುವುದು, ತುಂಡು-ತುಂಡಾಗುವುದು. ಅಭೇದತೆಯನ್ನು ಪಡೆಯುವುದಿಲ್ಲ.

ಈ ಒಂದು ದೋಷ ತಿಳಿಸಲಾಯಿತು. ಈಗ ಎರಡನೆಯ ದೋಷ ತಿಳಿಸಲಾಗುತ್ತದೆ.

ಆ ಆತ್ಮ ಮತ್ತು ಅವನ ಗುಣಗಳನ್ನು ಬೇರೆಯಾಗಿ ಮನ್ನಿಸಹೋದರೆ ಎರಡನೆಯ ದೋಷ ತಿಳಿಸ ತೊಡಗುತ್ತಾರೆ. ಹಾಗೆ ಮನ್ನಿಸುವುದರಿಂದ ದ್ರವ್ಯದ ಅಭಾವದ ಪ್ರಸಂಗ ಬರುವುದು, ಏಕೆಂದರೆ ಗುಣಗಳ ಸಮೂಹವನ್ನು ದ್ರವ್ಯವೆಂದು ಹೇಳಿದೆ ಮತ್ತು ಆ ಗುಣಗಳು ದ್ರವ್ಯದಿಂದ ಭಿನ್ನವಾದರೆ ದ್ರವ್ಯದ ಅಭಾವದ ಪ್ರಸಂಗ ಬರುವುದು.

ಸಂಹನನವು ಗಟ್ಟಿಮುಟ್ಟಾಗಿದ್ದರೆ ಆಹಾರವು ಸರಿಯಾಗಿದ್ದರೆ ಧರ್ಮವಾಗುವುದೆಂದು ಮನ್ನಿಸುವವರು ಮೂಢರಿದ್ದಾರೆ. ಅವರು ಧರ್ಮವನ್ನು ಬಾಹ್ಯದಿಂದ ಮನ್ನಿಸಿದ್ದಾರೆ ಎಂದರೆ ಗುಣ ಮತ್ತು ದ್ರವ್ಯಗಳನ್ನು ಭಿನ್ನವಾಗಿ ಮನ್ನಿಸಿದ್ದಾರೆ, ಆದರೆ ದ್ರವ್ಯವು ಗುಣಗಳಿಲ್ಲದೆ ಇರುವುದಿಲ್ಲ. ಆದುದರಿಂದ ಆ ಮನ್ನಣೆಯು ಅಸತ್ಯವಿದೆ. ಶರೀರ, ಮನಸ್ಸು, ವಾಣಿಯಿಂದ ಅಥವಾ ಶತ್ರುಂಜಯ-ಸಮ್ಮೇದಶಿಖರಕ್ಕೆ ಹೋಗುವುದರಿಂದ ಧರ್ಮವಾಗುತ್ತದೆಯೆಂದು ಮನ್ನಿಸುವವನು ಗುಣ ಮತ್ತು ಗುಣಿಯನ್ನು ಭಿನ್ನವಾಗಿ ಮನ್ನಿಸಿದ್ದಾನೆ, ಗುಣಗಳನ್ನು ಭಿನ್ನವಾಗಿ ಮನ್ನಿಸುವುದರಿಂದ ದ್ರವ್ಯದ ನಾಶವಾಗುವುದು, ದ್ರವ್ಯದ ನಾಶವಾಗುವುದಿಲ್ಲ ಆದರೆ ತನ್ನ ನಿಜವಾದ ಶ್ರದ್ಧೆಯ ನಾಶವಾಗುತ್ತದೆ. ನಿನಗೆ ಧರ್ಮಮಾಡುವುದಿದ್ದರೆ ಯಥಾರ್ಥ ಸ್ವರೂಪವನ್ನು ತಿಳಿದುಕೊಳ್ಳು. ಸಂಪೂರ್ಣ ಪದಾರ್ಥಗಳು ಅಸಂಖ್ಯ ಪ್ರದೇಶಿಯಿದ್ದು ಅನಂತ ಗುಣಗಳಿಂದ ತುಂಬಿಕೊಂಡಿವೆ. ಗುಣಗಳನ್ನು ಭಿನ್ನವಾಗಿ ಮನ್ನಿಸುವುದರಿಂದ ಆತ್ಮನ ನಾಶವಾಗುವುದು ಎಂದರೆ ನಿನ್ನಲ್ಲಿರುವ ಶ್ರದ್ಧೆಯು ನಾಶವಾಗುವುದು.

ಯಾವ ಜೀವನು ಮದ್ಯ, ಮಾಂಸ, ಮಧು ಮತ್ತು ಉದುಂಬರ ಫಲಗಳನ್ನು ತಿನ್ನುವ ತೀವ್ರ ಅಶುಭ ಪರಿಣಾಮ ಮಾಡುತ್ತಾನೆ ಆ ಜೀವನು ದೇಶನಾಕ್ಕೆಕೂಡ ಪಾತ್ರನಿಲ್ಲವೆಂದು ಪುರುಷಾರ್ಥ ಸಿದ್ಧ್ಯುಪಾಯದಲ್ಲಿ ಹೇಳಿದೆ. ಎಂದರೆ ಆ ವಸ್ತುಗಳ ಕಾರಣದಿಂದ ಅವನಿಗೆ ಅಶುಭ ಪರಿಣಾಮಗಳಾಗುತ್ತವೆಂದು ಅರ್ಥವಲ್ಲ ಮತ್ತು ಆ ವಸ್ತುಗಳಿವೆಯೆಂದು ತೀವ್ರ ಕಷಾಯವಿದೆಯೆಂದೂ ಇಲ್ಲ ಅದರಂತೆ ಆ ವಸ್ತುಗಳನ್ನು ಬಿಡುವುದರಿಂದ ಧರ್ಮವಾಗುತ್ತದೆಯೆಂದೂ ಇಲ್ಲ. ಆ ವಸ್ತುಗಳಂತೂ ಪರವಿದ್ದು ಅವುಗಳ ಗ್ರಹಣ-ತ್ಯಾಗವು ಆತ್ಮನಲ್ಲಿಲ್ಲ. ಆದರೆ ಯಾರಿಗೆ ಗುಣ-ಗುಣಿಯ ಏಕತೆಯ ಅರಿವಿಲ್ಲ ಮತ್ತು ತೀವ್ರಲೋಲುಪತೆಯು ವರ್ತಿಸುತ್ತಿದೆ ಅವನಿಗೆ ಇಂಥ ಅಶುಭ ಪರಿಣಾಮಗಳಿರುತ್ತವೆ, ಆ ಜೀವರುಗಳು ದೇಶನಾ ಕೇಳಲಿಕ್ಕೆ ಯೋಗ್ಯವಿಲ್ಲ. ಆದರೆ ಆ ವಸ್ತುಗಳ ಕಾರಣದಿಂದ ಅವನ ಅನರ್ಹತೆಯಿಲ್ಲ. ಅವನ ಅನರ್ಹತೆಯು ತೀವ್ರ ಮಿಥ್ಯಾಭಾವ ಮತ್ತು ತೀವ್ರ ಕಷಾಯದ ಕಾರಣದಿಂದಿದೆ. ಸಾಮಾನ್ಯ ಆರ್ಯನಿದ್ದವನಿಗೆ ಕೂಡ ಮಾಂಸಾದಿಗಳನ್ನು ತಿನ್ನುವ ಭಾವ ಇರುವುದೇ ಇಲ್ಲ ಮತ್ತು ಆ ವಸ್ತುಗಳು ಬಿಟ್ಟಿರುವುದರಿಂದ ಧರ್ಮ ಅಥವಾ ಸಮ್ಯಗ್ದರ್ಶನವಾಗುತ್ತದೆಂದು ಕೂಡ ಇಲ್ಲ. ಜೀವನು ಅಷ್ಟ ಮೂಲಗುಣಗಳ ಪಾಲನೆಯನ್ನಂತೂ ಅನಂತಬಾರಿ ಮಾಡಿದ್ದಾನೆ, ಆದರೆ ಅದರಿಂದ ಧರ್ಮವಾಗಲಿಲ್ಲ. ಧರ್ಮವಂತೂ ಗುಣ-ಗುಣಿಯ ಏಕತಾರೂಪದ ದೃಷ್ಟಿಯಿಂದ ಎಂದರೆ ದ್ರವ್ಯದೃಷ್ಟಿಯಿಂದ ಆಗುತ್ತದೆ.

ಜೀವರುಗಳು ಅನಂತಬಾರಿ ಶುಭಭಾವ ಮಾಡಿದ್ದಾರೆ, ಶುಕ್ಲಲೇಶ್ಯೆಯ ಪರಿಣಾಮ ಮಾಡಿದ್ದಾರೆ, ಬಾಹ್ಯದಲ್ಲಿ ಮುನಿತನ ಸ್ವೀಕರಿಸಿದ್ದಾರೆ. ಶರೀರವನ್ನು ತುಂಡು-ತುಂಡು ಮಾಡಿದರೂ ಕ್ರೋಧ ಮಾಡಲಿಲ್ಲ, ಆದರೆ ಅಂತರ್ಯದ ಪರಿಣಾಮ ನಿಮಿತ್ತದ ಮೇಲೆ ಮತ್ತು ರಾಗದ ಮೇಲೆ ಒಲೆದಿದೆ ತಮ್ಮ ಗುಣಗಳು ಪರದಿಂದ ಪ್ರಕಟವಾಗುತ್ತವೆಂದು ಅವರು ಮನ್ನಿಸಿದ್ದಾರೆ, ಆದರೆ ಗುಣ-ಗುಣಿಯ ಏಕತೆಮಾಡಿ ನಮ್ಮ ದ್ರವ್ಯದೊಳಗಿಂದ ಧರ್ಮವು ಪ್ರಕಟಿಸುವುದೆಂಬ ಮಾತು ಅವರಿಗೆ ಒಪ್ಪಿಗೆಯಾಗುತ್ತಿಲ್ಲ ಅಂಥ ಜೀವರುಗಳು ಪುಣ್ಯದ ಕಾರಣದಿಂದ ಸ್ವರ್ಗದಲ್ಲಿ ಹೋಗುತ್ತಾರೆ ಆದರೆ ಅವರಿಗೆ

ಧರ್ಮವಾಗುವುದಿಲ್ಲ ಅದರಿಂದ ಚತುರ್ಗತಿಗಳಲ್ಲಿ ಸುತ್ತುತ್ತಾರೆ.

ನಿನಗೆ ಧರ್ಮಮಾಡುವುದಿದೆಯಲ್ಲವೇ ? ಆ ಧರ್ಮವು ಆತ್ಮನಲ್ಲಿ ಆಗುತ್ತದೆ. ಆತ್ಮನು ಗುಣಗಳ ಸಾಗರನಿದ್ದಾನೆ ನೀನು ಗುಣ-ಗುಣಿಯನ್ನು ಭಿನ್ನವೆಂದು ಕಲ್ಪಿಸಿದರೆ ಧರ್ಮವಾಗುವುದಿಲ್ಲ ನಿಮಿತ್ತ ಬಂದರೆ ಗುಣಗಳು ಪ್ರಕಟವಾಗುವವು, ಜ್ಞಾನದ ಉದಯವು ಪುಸ್ತಕದೊಳಗಿಂದ ಬರುವುದು, ಮೊದಲು ಜ್ಞಾನವಿರಲಿಲ್ಲ ಮತ್ತು ವಾಣಿಯನ್ನು ಕೇಳಿದ ನಂತರ ಜ್ಞಾನವು ಪ್ರಕಟವಾಯಿತು. ಇತ್ಯಾದಿ ಪ್ರಕಾರದಿಂದ ಮನ್ನಿಸುವವನು ತನ್ನ ಜ್ಞಾನಾದಿ ಗುಣಗಳು ಪರದೊಳಗಿಂದ ಬರುತ್ತವೆಂದು ಮನ್ನಿಸಿದ್ದಾನೆ, ಅವನನ್ನು ತನ್ನ ಆತ್ಮನಿಂದ ಭಿನ್ನವಾಗಿ ಮನ್ನಿಸಿದ್ದಾನೆ, ಆದರೆ ತಾನು ಜ್ಞಾನಾದಿಗುಣಗಳಿಂದ ಅಭೇದಸ್ವರೂಪನಿದ್ದೇನೆಂಬುದನ್ನು ಮನ್ನಿಸುವುದಿಲ್ಲ ಅವನ ಶ್ರದ್ಧೆಯು ತುಂಡು-ತುಂಡಾಗುತ್ತದೆ ಅಥವಾ ಮಿಥ್ಯಾಶ್ರದ್ಧೆಯಾಗುತ್ತದೆ.

ನೈಯಾಯಿಕರು ಕೂಡ ಗುಣ-ಗುಣಿಯನ್ನು ಭಿನ್ನವಾಗಿ ಮನ್ನಿಸಿದ್ದಾರೆ, ಒಂದು ನವೀನ-ಹೊಸ ಕೊಡದಲ್ಲಿ ನೀರು ಹಾಕಿದರೆ ಗಂಧ ಹೊರಡುತ್ತದೆ ಮೊದಲು ಕೊಡದಲ್ಲಿ ಗಂಧವಿರಲಿಲ್ಲ, ಆದರೆ ನೀರು ಹಾಕುವುದರಿಂದ ಗಂಧ ಬರುವುದು ನೈಯಾಯಿಕರು ಈ ದೃಷ್ಟಾಂತವಿತ್ತು ಗುಣ-ಗುಣಿಯ ಭಿನ್ನತೆ ಮನ್ನಿಸುತ್ತಾರೆ. ಕೊಡದಲ್ಲಿ ಗಂಧನಾಮದ ಗುಣವಿದೆ ಅದು ವ್ಯಕ್ತವಾಗುತ್ತದೆಂದು ಮನ್ನಿಸದೆ ಗಂಧವು ನೀರಿನೊಳಗಿಂದ ಬರುತ್ತದೆಂದು ಮನ್ನಿಸುವುದು ಅದು ತಪ್ಪು ಇದೆ. ಅದರಂತೆ ಮೊದಲು ನಮಗೆ ಜ್ಞಾನವಿರಲಿಲ್ಲ ಆದರೆ ನಿಮಿತ್ತ ದೊರೆತು ಜ್ಞಾನವು ಪ್ರಕಟವಾಯಿತು ಮತ್ತು ಎಂಥ ನಿಮಿತ್ತ ದೊರಕುತ್ತದೆ ಅಂಥ ಪರ್ಯಾಯವಾಗುತ್ತದೆಂದು ಮನ್ನಿಸುವವರು ತಮ್ಮ ಗುಣಗಳು ಪರದೊಳಗಿಂದ ಬರುತ್ತವೆಂದು ಮನ್ನಿಸುತ್ತಿದ್ದಾರೆ, ಆದರೆ ತಮ್ಮಲ್ಲಿ ಗುಣಗಳು ತುಂಬಿಕೊಂಡಿದ್ದು ಅದರೊಳಗಿಂದ ಅವು ಪ್ರಕಟವಾಗುತ್ತವೆಂದು ಮನ್ನಿಸುವುದಿಲ್ಲ. ಇಂಥ ಜೈನರಲ್ಲಿ ಮತ್ತು ನೈಯಾಯಿಕರಲ್ಲಿ ಪರಮಾರ್ಥದಿಂದ ಯಾವ ವ್ಯತ್ಯಾಸವಿಲ್ಲ. ಇವರೀರ್ವರ ಶ್ರದ್ಧೆಯು ಅಸತ್ಯವಿದೆ.

ತಮ್ಮ ಗುಣಗಳು ತಮ್ಮೊಳಗಿಂದ ಪ್ರಕಟವಾಗುತ್ತವೆಂದು ಗುಣ-ಗುಣಿಯ ಅಭೇದ ಮನ್ನಿಸಿ ಶ್ರದ್ಧೆ ಮಾಡಿದರೆ ಧರ್ಮವಾಗುವಂತಿದೆ.

ಗುಣ-ಗುಣಿಯ ಭಿನ್ನತೆಯನ್ನು ಮನ್ನಿಸುವುದರಿಂದ ಒಂದು ದ್ರವ್ಯದ ಅನೇಕ ದ್ರವ್ಯಗಳಾಗುವವು ಅಥವಾ ದ್ರವ್ಯದ ನಾಶವಾಗುತ್ತದೆ ಅದಕ್ಕಾಗಿ ಗುಣ-ಗುಣಿಯು ಪ್ರದೇಶದಿಂದ ಅಭೇದವಿವೆ ಸರ್ವಥಾ ಪ್ರಕಾರದಿಂದ ಭೇದವಿಲ್ಲ. ಕಥಂಚಿತ್ ಪ್ರಕಾರದಿಂದ ಭೇದವಿದೆ.

ಯಾವನಿಗೆ ತನ್ನ ಆತ್ಮನ ಕಲ್ಯಾಣಮಾಡಿಕೊಳ್ಳುವುದಿದೆ ಅವನು ಮೊದಲು ಪರಪದಾರ್ಥಗಳಿಂದ ನಾನು ಬೇರೆಯಿದ್ದೇನೆಂದು ನಿಶ್ಚಿತಮಾಡಿಕೊಳ್ಳಬೇಕಾಗುವುದು. ತನ್ನ ಧರ್ಮವು ಪರಪದಾರ್ಥಗಳ ಅವಲಂಬನದಿಂದ ಅಥವಾ ಪರದಲ್ಲಿ ಇರುವುದಿಲ್ಲ ಅದಕ್ಕಾಗಿ ಆತ್ಮನು ಪರದಿಂದ ಬೇರೆಯಿದ್ದಾನೆ ಮತ್ತು ತನ್ನ ಗುಣಗಳಿಂದ ಅಭೇದನಿದ್ದಾನೆಂದು ಜ್ಞಾನ ಮಾಡಿಕೊಳ್ಳಬೇಕಾಗುವುದು.

**ಅವಿಭತ್ತಮಣಣ್ಣತ್ತಂ ದವ್ವಗುಣಾಣಂ ವಿಭತ್ತಮಣ್ಣತ್ತಂ।**
**ಣೇಚ್ಛಂತಿ ಣಿಚ್ಛಯಣ್ಹೂ ತವ್ವಿವರೀದಂ ಹಿ ವಾ ತೇಸಿಂ ॥೪೫॥**

**ದ್ರವ್ಯ ಮೇಣ್‌ಗುಣಗಳಲಿ ಅವಿಭಕ್ತರೂಪದ ಅನನ್ಯತೆಯಿರುವುದು।**
**ದ್ರವ್ಯ-ಗುಣಗಳ ವಿಭಕ್ತನನ್ಯತೆಯಿಲ್ಲವೆ ಅನ್ಯತೆಯ ಬುಧರು ಮನ್ನಿಸರು ॥೪೫॥**

ದ್ರವ್ಯ ಮತ್ತು ಗುಣಗಳ ಭಾವವು ಒಂದಿದೆ ಶರೀರ ಮತ್ತು ಕರ್ಮಗಳು ಏಕಕ್ಷೇತ್ರದಲ್ಲಿ ಕಂಡುಬರುತ್ತವೆ. ಹಾಲು

ಮತ್ತು ನೀರು ಒಂದು ಸ್ಥಳದಲ್ಲಿ ಕಂಡುಬರುತ್ತವೆ, ಆದರೆ ಅವು ಏಕವಿಲ್ಲ. ಅದೇ ರೀತಿ ಗುಣ ಮತ್ತು ದ್ರವ್ಯದ ಹೆಸರು ಬೇರೆಯಿದ್ದರೂ ಏಕರೂಪಭಾವದಿಂದಿವೆ. ನೀರು ಮತ್ತು ಹಾಲಿನ ಪ್ರದೇಶಗಳು ಬೇರೆಯಿವೆ, ಕರ್ಮ ಮತ್ತು ಶರೀರದ ಪ್ರದೇಶಗಳು ಬೇರೆಯಿವೆ ಅದರಂತೆ ಗುಣ ಮತ್ತು ದ್ರವ್ಯದ ಪ್ರದೇಶಗಳು ಬೇರೆಯಿಲ್ಲ. ಹಾಲಿನ ಶುಭ್ರತೆಯಲ್ಲಿ ನಾಮಭೇದದಿಂದ ಭೇದವಿದೆ, ಆದಾಗ್ಯೂ ಹಾಲು ಮತ್ತು ಶುಭ್ರತೆ-ಬಿಳಿಯತನಗಳು ಪ್ರದೇಶಗಳಿಂದ ಬೇರೆಯಿಲ್ಲ, ಅದರಂತೆ ಆತ್ಮ ಮತ್ತು ಅವನ ಜ್ಞಾನ, ದರ್ಶನ, ವೀರ್ಯ ಮೊದಲಾದ ಗುಣಗಳಲ್ಲಿ ನಾಮಭೇದದಿಂದ ಭೇದವಿದೆ, ಆದರೆ ಅವುಗಳ ಪ್ರದೇಶಗಳು ಬೇರೆಯಿಲ್ಲ. ಹೀಗೆ ಗುಣ-ಗುಣಿಯಲ್ಲಿ ಅಭೇದವಿದೆಯೆಂಬ ಅಂತರ್ದೃಷ್ಟಿಯಿಂದ ಧರ್ಮವಾಗುವಂತಿದೆ.

ಗುಣ-ಗುಣಿಗಳೆರಡರ ಭಿನ್ನ ಪ್ರದೇಶದ ರಹಿತತೆಯಿದೆ. ದ್ರವ್ಯದ ನಾಶವಾಗುವುದರಿಂದ ಗುಣಗಳ ಅಭಾವ ಅಥವಾ ಗುಣಗಳ ನಾಶವಾಗುವುದರಿಂದ ದ್ರವ್ಯದ ಅಭಾವವಾಗಿ ಹೋಗುವುದು ಹೀಗೆ ಏಕಭಾವವಿದೆ. ಹಾಲಿನೊಳಗಿಂದ ನೀರಿನ ನಾಶವಾಗುವುದರಿಂದ ಹಾಲಿನ ನಾಶವಾಗುವುದಿಲ್ಲ ಏಕೆಂದರೆ ಅವೆರಡೂ ಭಿನ್ನ ವಸ್ತುಗಳಿವೆ. ಅದರಂತೆ ಶರೀರ, ಕರ್ಮ ಮೊದಲಾದ ಪದಾರ್ಥಗಳು ನಾಶವಾಗುವುದರಿಂದ ಆತ್ಮನ ನಾಶವಾಗುವುದಿಲ್ಲ ಏಕೆಂದರೆ ಶರೀರ ಕರ್ಮಾದಿಗಳಿಂದ ಆತ್ಮನು ಭಿನ್ನನಿದ್ದಾನೆ. ಆದರೆ ಯಾವ ಪ್ರಕಾರ ಹಾಲಿನೊಳಗಿಂದ ಶುಭ್ರತೆಯು ಹೊರಟುಹೋದರೆ ಹಾಲಿನ ನಾಶವಾಗುತ್ತದೆ ಮತ್ತು ಹಾಲಿನ ನಾಶವಾದೊಡನೆ ಶುಭ್ರತೆಯ ನಾಶವಾಗುತ್ತದೆ, ಅದೇ ಪ್ರಕಾರ ಆತ್ಮನಲ್ಲಿ ಜ್ಞಾನ, ದರ್ಶನ ಮೊದಲಾದ ಗುಣಗಳಿಲ್ಲವೆಂಬ ಮನ್ನಣೆಯಿಂದ ಆತ್ಮನ ನಾಶವಾಗಿ ಹೋಗುತ್ತದೆ ಮತ್ತು ಆತ್ಮನ ನಾಶವಾದೊಡನೆ ಜ್ಞಾನ, ದರ್ಶನಾದಿ ಗುಣಗಳು ನಾಶವಾಗುತ್ತವೆ. ನನ್ನಲ್ಲಿ ಧರ್ಮದಶೆಯಂತೂ ಅನುಕೂಲ ಸಂಯೋಗಗಳು ಬಂದರೆ ಅಥವಾ ಶರೀರದ ಕ್ರಿಯೆ ಮಾಡಿದರೆ ಪ್ರಕಟವಾಗುತ್ತದೆಂದು ಮನ್ನಿಸುವವನು ಜೀವ ಮತ್ತು ಶರೀರವು ಪ್ರದೇಶ ಭೇದಸಹಿತವಿದ್ದು ಅದರ ಜತೆ ಏಕತ್ವ ಬುದ್ಧಿ ಮಾಡುವವನು ಮತ್ತು ತನ್ನಲ್ಲಿ ಜ್ಞಾನ-ದರ್ಶನಾದಿಗುಣಗಳು ತುಂಬಿಕೊಂಡಿದ್ದರೂ ಅವನ್ನು ಪರದಲ್ಲಿ ಮನ್ನಿಸುತ್ತಿದ್ದಾನೆ ಎಂದರೆ ಗುಣಗಳಿಲ್ಲದೆ ದ್ರವ್ಯವನ್ನು ಮನ್ನಿಸುತ್ತಿದ್ದಾನೆ. ಈ ಮನ್ನಣೆಯು ಅಜ್ಞಾನ ಭಾವವಿದೆ.

ಗುಣ-ಗುಣಿಯಲ್ಲಿ ದ್ರವ್ಯ, ಕ್ಷೇತ್ರ, ಕಾಲ ಮತ್ತು ಭಾವದಿಂದ ಏಕಭಾವವಿವೆಯೆಂಬುದನ್ನು ದೃಷ್ಟಾಂತವಿತ್ತು ತಿಳಿಸಿಕೊಡುತ್ತಾರೆ.

''ಎಂದರೆ ಯಾವ ಪ್ರಕಾರ ಒಂದು ಪರಮಾಣುವಿನದು ತನ್ನ ಒಂದು ಪ್ರದೇಶದಿಂದ ಪೃಥಕ್‌ತೆಯಿಲ್ಲ ಮತ್ತು ಹೇಗೆ ಅದೇ ಪರಮಾಣುವಿನಲ್ಲಿ ಸ್ಪರ್ಶ, ರಸ, ಗಂಧ, ವರ್ಣ ಗುಣಗಳ ಪೃಥಕ್‌ತೆಯಿಲ್ಲ ಅದೇ ಪ್ರಕಾರ ಸಮಸ್ತ ದ್ರವ್ಯಗಳಲ್ಲಿ ಪ್ರದೇಶಭೇದವಿಲ್ಲದೆ ಗುಣಪರ್ಯಾಯಗಳ ಅಭೇದಭಾವವಿದೆಯೆಂದು ತಿಳಿಯುವುದು. ಇಂಥ ಪ್ರದೇಶಭೇದವಿಲ್ಲದ ದ್ರವ್ಯ-ಗುಣಗಳ ಏಕತೆಯನ್ನು ಆಚಾರ್ಯದೇವರು ಅಂಗೀಕಾರ ಮಾಡಿದ್ದಾರೆ.''

ಒಂದು ಪರಮಾಣುವಿನ ದೃಷ್ಟಾಂತ ಕೊಡಲಾಗಿದೆ. ಪರಮಾಣುವು ಸ್ವಯಂ ದ್ರವ್ಯವಿದೆ. ಅದರ ಒಂದು ಪ್ರದೇಶವು ಅದು ಅದರ ಕ್ಷೇತ್ರವಿದೆ. ಸ್ಪರ್ಶ ಮೊದಲಾದವು ಅದರ ಗುಣಗಳಿವೆ ಮತ್ತು ಸ್ಪರ್ಶಾದಿಗಳ ಸಮಯ ಸಮಯದ ಅವಸ್ಥೆಯು ಅವು ಪರ್ಯಾಯವಿವೆ. ಹೀಗೆ ನಾಲ್ಕು ಪ್ರಕಾರದಿಂದ ಪರಮಾಣುವಿನದು ತನ್ನ ದ್ರವ್ಯ, ಕ್ಷೇತ್ರ, ಕಾಲ, ಭಾವದಿಂದ ಏಕತೆಯಿದೆ. ಪರಮಾಣುವು ತನ್ನ ಕ್ಷೇತ್ರದಿಂದ, ಗುಣಗಳಿಂದ ಅಥವಾ ಪರ್ಯಾಯಗಳಿಂದ ಭಿನ್ನವಿಲ್ಲ ಈ ಅಂಗುಲಿಯಿದೆ ಇದು ತನ್ನ ವಿಸ್ತಾರ ಭಿನ್ನವಿಲ್ಲ ಅದರ ಸ್ಪರ್ಶ ಗುಣದಿಂದ ಮತ್ತು ಅದರ ಪರ್ಯಾಯದಿಂದ ಭಿನ್ನವಿಲ್ಲ-ಅಂಗುಲಿ ಇದೆ ಮತ್ತು ಗುಣಗಳು, ಕ್ಷೇತ್ರ ಅಥವಾ ಪರ್ಯಾಯವಿಲ್ಲವೆಂಬುದು ಸಾಧ್ಯವಿಲ್ಲ. ಗುಣ-ಪರ್ಯಾಯಗಳಿವೆ ಮತ್ತು ಅಂಗುಲಿಯಿಲ್ಲವೆಂಬುದೂ ಸಾಧ್ಯವಿಲ್ಲ. ಆದರೆ ದ್ರವ್ಯ, ಕ್ಷೇತ್ರ, ಕಾಲ, ಭಾವದಿಂದ ಏಕಭಾವವಿದೆ ಅದೇ ಪ್ರಕಾರ ಸಮಸ್ತ ದ್ರವ್ಯಗಳಲ್ಲಿ ಪ್ರದೇಶಭೇದವಿಲ್ಲದೆ ಗುಣಪರ್ಯಾಯಗಳಿದ್ದು ಅಭೇದಭಾವವಿದೆಯೆಂದು ತಿಳಿಯಬೇಕು. ಆತ್ಮನು ದ್ರವ್ಯವಿದ್ದು ಅವನ ಅಸಂಖ್ಯ ಪ್ರದೇಶಗಳು ಅವನ ಕ್ಷೇತ್ರವಿವೆ, ಸಮಯ-ಸಮಯದ ಅವಸ್ಥೆಯು ಅವನ ಕಾಲವಿದೆ ಮತ್ತು ಜ್ಞಾನ-ದರ್ಶನಾದಿಗಳು ಅವನ ಭಾವವಿವೆ. ಹೀಗೆ ಆತ್ಮನು ತನ್ನ ದ್ರವ್ಯ, ಕ್ಷೇತ್ರ, ಕಾಲ, ಭಾವದಿಂದ ಏಕನಿದ್ದಾನೆ, ಭಿನ್ನನಿಲ್ಲ.

ಒಂದು ಪರಮಾಣುವು ಇನ್ನೊಂದು ಪರಮಾಣುವಿನಿಂದ ಮತ್ತು ಆತ್ಮನಿಂದ ಭಿನ್ನವಿದೆ, ಆದರೆ ತನ್ನ ದ್ರವ್ಯ, ಕ್ಷೇತ್ರ, ಕಾಲ ಭಾವದಿಂದ ಭಿನ್ನವಿಲ್ಲ. ಶರೀರ, ವಾಣಿ ಮೊದಲಾದ ಪದಾರ್ಥಗಳೆಲ್ಲವು ತಮ್ಮ ತಮ್ಮ ಚತುಷ್ಟಯದಲ್ಲಿವೆ ಮತ್ತು ಆತ್ಮನಿಂದ ಭಿನ್ನವಿವೆ. ಶರೀರ, ಕರ್ಮ ಮತ್ತು ಆತ್ಮನು ಭಿನ್ನನಾಗಿದ್ದರೂ ಕೂಡ ಅನಾದಿಯಿಂದ ಅಜ್ಞಾನೀ ಜೀವನಿಗೆ ಏಕತೆಯ ಮನ್ನಣೆಯಾಗಿ ಹೋಗಿದೆ. ವಿಂಧ್ಯಾಚಲ ಮತ್ತು ಹಿಮಾಚಲ ಪರ್ವತಗಳು ಹೇಗೆ ಭಿನ್ನವಿವೆ ಹಾಗೆ ಶರೀರ ಮತ್ತು ಆತ್ಮ ಭಿನ್ನವಿವೆ.

ಈ ಜಗತ್ತಿನಲ್ಲಿ ಆರು ದ್ರವ್ಯಗಳಿದ್ದು ಅವು ತಮ್ಮ ತಮ್ಮ ದ್ರವ್ಯ, ಕ್ಷೇತ್ರ, ಕಾಲ, ಭಾವದಿಂದ ಏಕವಿವೆ ಮತ್ತು ಪರದಿಂದ ಮೂರು ಕಾಲದಲ್ಲಿ ಭಿನ್ನವಿವೆ. ಆತ್ಮನು ತನ್ನ ಅಸಂಖ್ಯ ಪ್ರದೇಶಗಳಿಂದ ತನ್ನ ಗುಣ-ಪರ್ಯಾಯಗಳಿಂದ ಏಕನಿದ್ದಾನೆ. ಧರ್ಮಾಸ್ತಿಕಾಯವು ತನ್ನ ಅಸಂಖ್ಯ ಪ್ರದೇಶಗಳಿಂದ ತನ್ನ ಗುಣ-ಪರ್ಯಾಯಗಳಿಂದ ಏಕವಿದೆ. ಅದರಂತೆ ಪ್ರತಿಯೊಂದು ದ್ರವ್ಯವು ತನ್ನ ದ್ರವ್ಯ, ಕ್ಷೇತ್ರ, ಕಾಲ, ಭಾವದಿಂದ ಏಕವಿದೆ ಹೀಗೆ ಪ್ರದೇಶ ಭೇದವಿಲ್ಲದ ಏಕತೆಯನ್ನು ಆಚಾರ್ಯದೇವರು ಸ್ವೀಕರಿಸಿದ್ದಾರೆ. ಆದರೆ ಪ್ರದೇಶಭೇದಸಹಿತದ ಏಕತೆಯನ್ನು ಸ್ವೀಕರಿಸಿಲ್ಲ. ಗುಣಗಳ ಪ್ರದೇಶ ಬೇರೆ ಮತ್ತು ಆತ್ಮನ ಪ್ರದೇಶಗಳು ಬೇರೆಯೆಂದು ಜ್ಞಾನಿಯು ಸ್ವೀಕರಿಸುವುದಿಲ್ಲ.

ತೀರ್ಥಂಕರದೇವರು ವಸ್ತುವಿನ ಸ್ವರೂಪವನ್ನು ನೋಡಿದ್ದಾರೆ ಮತ್ತು ಹಾಗೆಯೇ ವಾಣಿಯಲ್ಲಿ ಬಂದಿದೆ. ನಿನ್ನ ಸ್ವಭಾವವು ನಿನ್ನ ಗುಣ-ಪರ್ಯಾಯಗಳಿಂದ ಭಿನ್ನವಿಲ್ಲ ಗುಣಗಳನ್ನು ಶೋಧಿಸಬೇಕಾಗುವುದೇನು ? ಧರ್ಮ ಶೋಧಿಸಬೇಕಾಗುವುದೇನು ? ನಿನ್ನ ವಸ್ತುವನ್ನು ಬಿಟ್ಟು ಧರ್ಮವು ಬಾಹ್ಯದಲ್ಲಿದೆಯೇನು ? ತನ್ನ ಧರ್ಮವನ್ನು ಬಾಹ್ಯದಲ್ಲಿ ಶೋಧಿಸುವವನು ತನ್ನ ಗುಣ-ಪರ್ಯಾಯಗಳಿಂದ ತನ್ನನ್ನು ಭಿನ್ನವಾಗಿ ಮನ್ನಿಸಿದ್ದಾನೆ, ಆ ಮನ್ನಣೆಯು ಅಸತ್ಯವಿದೆ. ಹೇಗೆ ಹಾಲು ಮತ್ತು ಶುಭ್ರತೆ ಭಿನ್ನವಿಲ್ಲ ಹಾಗೆ ಜ್ಞಾನ, ದರ್ಶನ, ಸುಖ ಮೊದಲಾದ ಗುಣಗಳು ಮತ್ತು ಅವುಗಳ ಪರ್ಯಾಯಗಳು ನಿನ್ನ ಆತ್ಮನಿಂದ ಭಿನ್ನವಿಲ್ಲ. ನೀನು ಬಾಹ್ಯದಲ್ಲಿ ಶೋಧಿಸಹೋದರೆ ದೊರಕುವಂತಿಲ್ಲ ಅದಕ್ಕಾಗಿ ಅಂತರ್ಯದಲ್ಲಿ ಗುಣ-ಪರ್ಯಾಯಗಳ ಏಕತೆ ಮಾಡಿದರೆ ಧರ್ಮದಶೆಯು ಪ್ರಕಟವಾಗುವಂತಿದೆ.

''ಮತ್ತು ಗುಣ-ಗುಣಿಯಲ್ಲಿ ಕಥಂಚಿತ್ ಭೇದದಿಂದ ನಿಜಸ್ವರೂಪವನ್ನು ತಿಳಿಯುವವನಿದ್ದಾನೆ ಅವನು ದ್ರವ್ಯ ಗುಣಗಳಲ್ಲಿ ಪ್ರದೇಶಭೇದದಿಂದ ಭೇದಭಾವವನ್ನು ಅಪೇಕ್ಷಿಸುವುದಿಲ್ಲ.''

ನಾಮಾದಿಗಳ ಭೇದದಿಂದ ಗುಣ-ಗುಣಿಯಲ್ಲಿ ಭೇದವಿದೆ, ಆದರೆ ಪ್ರದೇಶ ಭೇದವಿಲ್ಲ. ಆತ್ಮ ಮತ್ತು ಜ್ಞಾನವೆಂದು ನಾಮಭೇದವಿದೆ, ಆದರೆ ಗುಣಗಳ ಪ್ರದೇಶಗಳು ಒಂದೆಡೆಯಲ್ಲಿ ಮತ್ತು ಆತ್ಮದ್ರವ್ಯದ ಪ್ರದೇಶಗಳು ಇನ್ನೊಂದೆಡೆಯಲ್ಲಿ ಈ ಪ್ರಕಾರದ ಭೇದವಿಲ್ಲ.

**ಭಾವಾರ್ಥ :-** ದ್ರವ್ಯ ಅಥವಾ ಗುಣಗಳಲ್ಲಿ ಸಂಜ್ಞೆ, ಸಂಖ್ಯೆ, ಲಕ್ಷಣ, ಪ್ರಯೋಜನ ಮೊದಲಾದವುಗಳಿಂದ ಭೇದವಿದ್ದರೂ ಕೂಡ ಪ್ರದೇಶಗಳ ಪೃಥಕ್‌ತೆಯಿರುವಂಥ ಭೇದಗಳಿಲ್ಲ. ನೋಡಿರಿ, ಇಲ್ಲಿ ಕೇವಲೀ ಭಗವಂತರುಗಳ ವೀತರಾಗವಿಜ್ಞಾನವನ್ನು ತಿಳಿಸಿಕೊಟ್ಟಿದ್ದಾರೆ.

**ಸಂಜ್ಞೆ** -- ಆತ್ಮ ದ್ರವ್ಯದ ಹೆಸರು ಆತ್ಮವಿದೆ ಮತ್ತು ಗುಣಗಳ ಹೆಸರು ಜ್ಞಾನ-ದರ್ಶನ ಮೊದಲಾದುವಿವೆ, ಹೀಗೆ ದ್ರವ್ಯವು ಮತ್ತು ಗುಣಗಳ ಹೆಸರುಗಳಲ್ಲಿ ಭೇದವಿದೆ.

**ಸಂಖ್ಯೆ** -- ಪ್ರತಿಯೊಬ್ಬ ಆತ್ಮನು ಸಂಖ್ಯೆಯಿಂದ ಏಕನಿದ್ದಾನೆ ಮತ್ತು ಅವನ ಗುಣಗಳು ಅನಂತವಿವೆ ಜ್ಞಾನ, ದರ್ಶನ, ಚಾರಿತ್ರ, ಅಸ್ತಿತ್ವ, ಅನ್ಯತ್ವ ಮೊದಲಾದ ಅನಂತಗುಣಗಳಿವೆ. ಹೀಗೆ ದ್ರವ್ಯ ಮತ್ತು ಗುಣಗಳಲ್ಲಿ ಸಂಖ್ಯಾಭೇದವಿದೆ.

**ಲಕ್ಷಣ** -- ಅನಂತಗುಣಗಳ ಪಿಂಡವು ಅದು ದ್ರವ್ಯದ ಲಕ್ಷಣವಿದೆ. ಜ್ಞಾನದ ಲಕ್ಷಣವು ತಿಳಿಯುವುದು, ದರ್ಶನದ ಲಕ್ಷಣವು ನೋಡುವುದು. ಹೀಗೆ ದ್ರವ್ಯ ಮತ್ತು ಗುಣಗಳಲ್ಲಿ ಲಕ್ಷಣಭೇದದಿಂದ ಭೇದವಿದೆ.

**ಪ್ರಯೋಜನ** -- ದ್ರವ್ಯದ ಪ್ರಯೋಜನವು ಅನಂತಗುಣಗಳನ್ನು ಹಾಗೂ ಅವುಗಳ ಪರ್ಯಾಯಗಳನ್ನು ಧಾರಣ ಮಾಡಿ ಇಟ್ಟುಕೊಳ್ಳುವುದರಲ್ಲಿದೆ ಮತ್ತು ಪ್ರತಿಯೊಂದು ಗುಣದ ಪ್ರಯೋಜನವು ಬೇರೆ-ಬೇರೆಯಿದೆ.

ಹೀಗೆ ದ್ರವ್ಯ ಮತ್ತು ಗುಣಗಳಲ್ಲಿ ಸಂಜ್ಞೆ, ಸಂಖ್ಯೆ, ಲಕ್ಷಣ ಮತ್ತು ಪ್ರಯೋಜನ ಭೇದದಿಂದ ಭೇದಗಳಿದ್ದರೂ ಕೂಡ ಪ್ರದೇಶಭೇದವಿಲ್ಲ, ಅದರಂತೆ ಗುಣಭೇದವಿಲ್ಲ. ದ್ರವ್ಯ ಮತ್ತು ಗುಣ ಇವೆರಡೂ ತ್ರಿಕಾಲವಿವೆ. ಎಲ್ಲಿ ದ್ರವ್ಯವಿದೆ ಅಲ್ಲಿ ಗುಣಗಳಿವೆ. ಆತ್ಮನು ಬೇರೆಡೆಯಲ್ಲಿ ಮತ್ತು ಗುಣಗಳು ಬೇರೆಡೆಯಲ್ಲಿ ಇರುತ್ತವೆನ್ನುವುದು ಸಾಧ್ಯವಿಲ್ಲ. ನೀನು ಜೀವಾಸ್ತಿಕಾಯನಿರುವೆ. ಜೀವವು ಅಸ್ತಿಯಿದೆ ಮತ್ತು ಅಸಂಖ್ಯ ಪ್ರದೇಶರೂಪ ಸಮೂಹವಿದೆ ಅಥವಾ ಕಾಯವಿದೆ. ಅದರಲ್ಲಿ ನಿನ್ನ ಗುಣಗಳಿರುತ್ತವೆ, ಬಾಹ್ಯದಲ್ಲಿ ಇರುವುದಿಲ್ಲ.

ಸಮ್ಯಗ್ದೃಷ್ಟಿಜೀವರುಗಳು ತೀರ್ಥಂಕರ ನಾಮಕರ್ಮದ ಹೆಸರು ಕೇಳಿದೊಡನೆ ಸಂತೋಷಿತರಾಗಿ ಹೋಗುತ್ತಾರೆ. ಮತ್ತು ಅದರ ಸಲುವಾಗಿ ಸೋಳಹಕಾರಣ ಭಾವನೆ ಭಾವಿಸುತ್ತಾರೆ, ಆದರೆ ಮಿಥ್ಯಾದೃಷ್ಟಿಗಳಿಗಂತೂ ಅದು ಕಟ್ಟುವುದಿಲ್ಲ. ಸಮ್ಯಗ್ದೃಷ್ಟಿಜೀವನು ಕರ್ಮವನ್ನು ಪರವೆಂದು ಮನ್ನಿಸುತ್ತಾನೆ ಶುಭವನ್ನು ಹೇಯವೆಂದು ಮನ್ನಿಸಿ ಸ್ವಭಾವವನ್ನು ಉಪಾದೇಯವೆಂದು ತಿಳಿಯುತ್ತಾನೆ.

ಸೋದರನೇ ! ಕರ್ಮದ ಕ್ಷೇತ್ರವು ಭಿನ್ನವಿದೆ ಮತ್ತು ನಿನ್ನ ಕ್ಷೇತ್ರವು ಭಿನ್ನವಿದೆ ಅದಕ್ಕಾಗಿ ಭಿನ್ನದಿಂದ ಲಾಭ ಅಥವಾ ಹಾನಿಯಾಗುತ್ತದೆಯೆಂದು ಸಮ್ಯಗ್ದೃಷ್ಟಿಯು ಮನ್ನಿಸುವುದಿಲ್ಲ, ಆದರೆ ತನ್ನ ಜತೆ ಗುಣ, ಗುಣಿಯ ಏಕತೆ ಮಾಡಿದರೆ ಲಾಭವಾಗುತ್ತದೆ. ಸಕ್ಕರೆಯ ಹಳಕು ಮತ್ತು ಸಿಹಿ ಭಿನ್ನವಿರುವುದು ಸಾಧ್ಯವಿಲ್ಲ ಅದರಂತೆ ಆತ್ಮವಸ್ತುವು ತನ್ನ ಜ್ಞಾನಾದಿ ಗುಣಗಳು ಮತ್ತು ತನ್ನ ನಿರ್ಮಲಪರ್ಯಾಯ ಹೀಗೆ ದ್ರವ್ಯ-ಗುಣ-ಪರ್ಯಾಯಗಳು ಏಕಕ್ಷೇತ್ರದಲ್ಲಿರುತ್ತವೆ, ಭಿನ್ನಕ್ಷೇತ್ರದಲ್ಲಿಲ್ಲ. ದ್ರವ್ಯ ಮತ್ತು ಪರ್ಯಾಯವೆಂದು ನಾಮಭೇದದಿಂದ ಭೇದವಿದೆ. ದ್ರವ್ಯವು ಒಂದಿದ್ದರೆ ಪರ್ಯಾಯಗಳು ಅನಂತವಿವೆ. ಹೀಗೆ ಸಂಖ್ಯಾಭೇದದಿಂದ ಭೇದವಿದೆ. ದ್ರವ್ಯದ ಲಕ್ಷಣವು ಅನಂತಗುಣಗಳ ಪಿಂಡವಿದೆ. ಪರ್ಯಾಯದ ಲಕ್ಷಣವು ಪೃಥಕ್ - ಪೃಥಕ್‌ತನವಿದೆ ಹೀಗೆ ಲಕ್ಷಣಭೇದದಿಂದ ಭೇದವಿದೆ. ದ್ರವ್ಯದ ಪ್ರಯೋಜನವು ಗುಣ-ಪರ್ಯಾಯಗಳಿಗೆ ಆಧಾರವೀಯುವುದಿದೆ ಮತ್ತು ಪರ್ಯಾಯದ ಪ್ರಯೋಜನವು ಸಮಯ - ಸಮಯದ ಕಾರ್ಯಮಾಡುವುದಿದೆ. ಹೀಗೆ ಪ್ರಯೋಜನ ಭೇದದಿಂದ ಭೇದವಿದೆ ದ್ರವ್ಯದ ಕಾಲವು ತ್ರಿಕಾಲವಿದೆ ಪರ್ಯಾಯದ ಕಾಲವು ಒಂದು ಸಮಯದ್ದಿದೆ ಹೀಗೆ ಕಾಲಭೇದದಿಂದ ಭೇದವಿದೆ, ಹೀಗಿದ್ದರೂ ಕೂಡ ದ್ರವ್ಯ ಮತ್ತು ಪರ್ಯಾಯದಲ್ಲಿ ಪ್ರದೇಶ ಭೇದವಿಲ್ಲ. ಗುಣ-ಗುಣಿಯ ಏಕತೆಮಾಡಿ ಅಭೇದ ದೃಷ್ಟಿಮಾಡಿದರೆ ಧರ್ಮವಾಗುವಂತಿದೆ.

ಆದುದರಿಂದ ಗುಣ-ಗುಣಿಯಲ್ಲಿ ವಸ್ತುರೂಪ ವಿಚಾರದಿಂದ ಪ್ರದೇಶಗಳ ಏಕತೆಯಿದೆ, ಪ್ರದೇಶಗಳಲ್ಲಿ ಭಿನ್ನತೆಯಿಲ್ಲವೆಂಬ ಮಾತು ನಿಶ್ಚಿತವಾಯಿತು, ಸಂಜ್ಞಾಮಾತ್ರದಿಂದ ಭಿನ್ನತೆಯಿದೆ.

ಪರಮಾಣುವು ಪರಮಾಣುವಿನಲ್ಲಿ ಇದೆ. ಅದು ಆತ್ಮನ ಕಾರಣದಿಂದಿಲ್ಲ. ಆತ್ಮನು ತನ್ನ ಗುಣ-ಪರ್ಯಾಯಗಳಿಂದ ತನ್ನ ಕ್ಷೇತ್ರದಲ್ಲಿದ್ದಾನೆ. ಬೆಲ್ಲದೊಳಗಿಂದ ಸಿಹಿತನದ ನಾಶವಾದರೆ ಬೆಲ್ಲದ ನಾಶವಾಗುವುದು, ಆದರೆ ಬೆಲ್ಲ ಹಾಕಿದ ಡಬ್ಬದ ನಾಶವಾದರೆ ಬೆಲ್ಲದ ನಾಶವಾಗುವುದಿಲ್ಲ. ಅದರಂತೆ ಶರೀರ, ಕರ್ಮ ಮೊದಲಾದವು ಡಬ್ಬಗಳಿದ್ದು ಅವುಗಳ ನಾಶವಾದರೆ ಆತ್ಮನ ನಾಶವಾಗುವುದಿಲ್ಲ, ಆದರೆ ಜ್ಞಾನ, ದರ್ಶನಾದಿಗಳಿಲ್ಲದೆ ಮನ್ನಿಸಿದರೆ ಆತ್ಮನ ನಾವಾಗುವುದು ಪರ ವಸ್ತುಗಳಿದ್ದರೆ ಧರ್ಮವಾಗುವುದೆಂದು ಮನ್ನಿಸುವವನು ತನ್ನ ಆತ್ಮನನ್ನು ಜ್ಞಾನ, ದರ್ಶನ, ಆನಂದಾದಿಗಳಿಲ್ಲದವನೆಂದು ಮನ್ನಿಸಿದ್ದಾನೆ ಮತ್ತು ಗುಣ-ಗುಣಿಯನ್ನು ತೀರ ಭೇದರೂಪ ಮನ್ನಿಸಿದ್ದಾನೆ. ಆ ಜೀವನಿಗೆ ಅನಂತಗುಣಗಳ ಪಿಂಡರೂಪನಾದ ಅಖಂಡ ಆತ್ಮನ ಶ್ರದ್ಧೆಯಿಲ್ಲದಿರುವುದರಿಂದ ಅವನಿಗೆ ಧರ್ಮವಾಗುವುದಿಲ್ಲ. ಇನ್ನು ಮಿಥ್ಯಾದೃಷ್ಟಿ ಜೀವರುಗಳು ತಮ್ಮ ಶ್ರದ್ಧೆಯಲ್ಲಿ ಆತ್ಮನ ನಾಶ ಮಾಡಿದ್ದಾರೆ ಅದಕ್ಕಾಗಿ ಶರೀರವು ಜೀರ್ಣವಾಗಿ ಹೋಗುವುದು ಅಥವಾ ರೋಗಿಯಾಗುವುದೆಂಬುದು ಸಾಧ್ಯವಿಲ್ಲ

ಏಕೆಂದರೆ ಎರಡರ ಪ್ರದೇಶಗಳು ಭಿನ್ನವಿವೆ.

ಶರೀರವು ಜೀರ್ಣವಾಗಿ ಹೋದರೆ ಅದರಿಂದ ಆತ್ಮನು ಜೀರ್ಣವಾಗಿ ಹೋಗುವುದಿಲ್ಲ. ಏಕೆಂದರೆ ಶರೀರದ ಪರಮಾಣುಗಳು ತನ್ನ ಗುಣಪರ್ಯಾಯಗಳಿಂದ ಏಕವಿದ್ದರೆ ಆತ್ಮನಿಂದ ಭಿನ್ನವಿವೆ. ಆ ಭಿನ್ನಪರಮಾಣುಗಳು ಆತ್ಮನಿಗೇನೂ ಮಾಡುವುದಿಲ್ಲ. ಆದರೆ ಜೀವನು ಆತ್ಮನ ದೃಷ್ಟಿ ಬಿಟ್ಟರೆ ಆತ್ಮನು ಜೀರ್ಣನಾಗುವನು ಮತ್ತು ಶರೀರವು ಜೀರ್ಣವಾದರೂ ಗುಣ-ಗುಣಿಯ ಏಕತೆಯ ಅರಿವು ಮಾಡಿಕೊಂಡರೆ ಧರ್ಮವಾಗುವುದು. ಶರೀರವು ಜೀರ್ಣವಾಗುವುದರಿಂದ ಆತ್ಮನು ಜೀರ್ಣನಾಗುವುದಿಲ್ಲ ಮತ್ತು ಆತ್ಮನು ಜೀರ್ಣನಾಗುವುದರಿಂದ ಶರೀರವು ಜೀರ್ಣವಾಗುವುದಿಲ್ಲ. ಹೀಗೆ ಆತ್ಮ ಮತ್ತು ಶರೀರ ಭಿನ್ನವಿವೆ. ಅದೇ ಪ್ರಕಾರ ಆರು ದ್ರವ್ಯಗಳು ಬೇರೆಯಿವೆ ಆದರೆ ಅವು ತಮ್ಮ-ತಮ್ಮ ಗುಣ-ಪರ್ಯಾಯಗಳಿಂದ ಬೇರೆಯಿಲ್ಲ.

ಈಗ ಎರಡನೆಯ ರೀತಿ ಹೇಳುತ್ತಾರೆ --

ಒಂದು ದ್ರವ್ಯದಲ್ಲಿ ಭೇದ-ಅಭೇದಗಳನ್ನು ಈ ಪ್ರಕಾರ ತಿಳಿಯಬೇಕು ಅಥವಾ ನಿಶ್ಚಯದಿಂದ ಆ ದ್ರವ್ಯ-ಗುಣಗಳನ್ನು ಆ ಪೂರ್ವೋಕ್ತ ಪ್ರಕಾರ ಭೇದ-ಅಭೇದದಿಂದ ಇನ್ನು ಬೇರೆ ಪ್ರಕಾರದ ಭೇದ-ಅಭೇದಗಳಿವೆ ಅವನ್ನು ಆ ತತ್ತ್ವಸ್ವರೂಪದ ವೇತ್ತಾರರು ವಸ್ತುವಿನಲ್ಲಿ ಮನ್ನಿಸುವುದಿಲ್ಲ.

ಒಂದು ದ್ರವ್ಯದಲ್ಲಿ ಭೇದ ಅಭೇದದ ಪ್ರಕಾರದಿಂದ ತಿಳಿಯುವುದು ಅಥವಾ ಆತ್ಮನಲ್ಲಿ ಮತ್ತು ಆತನ ಗುಣಗಳಲ್ಲಿ ಸಂಜ್ಞೆ, ಸಂಖ್ಯಾಭೇದದಿಂದ ಭೇದವಿದೆ, ಆದರೆ ಪ್ರದೇಶದಿಂದ ಅಭೇದವಿದೆ. ಈ ಪ್ರಕಾರ ಭೇದಾಭೇದ ಸ್ವರೂಪವನ್ನು ತಿಳಿಯುವುದು. ಆದರೆ ಇದರಿಂದ ವಿಪರೀತ ರೀತಿಯಿಂದ ಭೇದ ಮತ್ತು ಅಭೇದದ ಸ್ವರೂಪವನ್ನು ಲೋಕದಲ್ಲಿ ಹೇಳುತ್ತಾರೆ ಆ ಪ್ರಕಾರ ತತ್ತ್ವಜ್ಞಾನಿಯು ಮಾನ್ಯ ಮಾಡುವುದಿಲ್ಲ.

**ಭಾವಾರ್ಥ :-** ಆತ್ಮ ಮತ್ತು ಪರಮಾಣು ಮೊದಲಾದ ವಸ್ತುಗಳಲ್ಲಿ ಗುಣ-ಗುಣಿಯ ಭೇದ ಮತ್ತು ಅಭೇದತೆಯನ್ನು ತಿಳಿಸಿದೆ, ವಸ್ತುವನ್ನು ಸಾಧಿಸುವ ಸಲುವಾಗಿ ಅದನ್ನು ಮಾನ್ಯ ಮಾಡುವುದರಲ್ಲಿ ಬರುತ್ತದೆ. ಏಕೆಂದರೆ ಅದರಿಂದ ಆತ್ಮನ ಹಿತ ಸಾಧಿಸಲಾಗುತ್ತದೆ. ಆದರೆ ಲೋಕ ವ್ಯವಹಾರದಲ್ಲಿ ಉಪಚಾರ ಮಾತ್ರ ಪದಾರ್ಥಗಳ ಭೇದ ಮತ್ತು ಅಭೇದದ ಯಾವ ವ್ಯವಹಾರ ಮಾಡಲಾಗಿದೆ ಅದನ್ನು ಆಚಾರ್ಯಭಗವಂತರು ಮಾನ್ಯ ಮಾಡುವುದಿಲ್ಲ ಯಾವ ಪ್ರಕಾರ ಕರ್ಮ ಮತ್ತು ಆತ್ಮ ಏಕವಿವೆ-ಅಭೇದವಿದೆಯೆಂದು ಜನರು ಹೇಳುತ್ತಾರೆ ಅದನ್ನು ಆಚಾರ್ಯದೇವರು ಮಾನ್ಯ ಮಾಡುವುದಿಲ್ಲ. ಏಕೆಂದರೆ ಲೋಕವ್ಯವಹಾರದಿಂದ ವಸ್ತುಸ್ವರೂಪದ ಸಿದ್ಧಿಯಾಗುವುದಿಲ್ಲ ಮತ್ತು ಆತ್ಮನ ಹಿತವಾಗುವುದಿಲ್ಲ. ಈಗ ಅದನ್ನು ದೃಷ್ಟಾಂತದ ಮುಖಾಂತರ ತಿಳಿಸಿಕೊಡಲಾಗುವುದು.

ಲೋಕವ್ಯವಹಾರದಿಂದ ವಿಂಧ್ಯಾಚಲ ಮತ್ತು ಹಿಮಾಚಲದಲ್ಲಿ ದೊಡ್ಡ ಭೇದ ಹೇಳಲಾಗಿದೆ ಏಕೆಂದರೆ ಹಿಮಾಚಲ ಒಂದು ಸ್ಥಳದಲ್ಲಿ ಮತ್ತು ವಿಂಧ್ಯಾಚಲ ಇನ್ನೊಂದು ಸ್ಥಳದಲ್ಲಿ ನಿಂತುಕೊಂಡಿವೆ, ಅದನ್ನು ಲೋಕದಲ್ಲಿ ಭೇದವೆಂದು ಹೇಳುತ್ತಾರೆ. ಅಂಥ ಭೇದವನ್ನು ಗುಣ-ಗುಣಿಯಲ್ಲಿ ಸ್ವೀಕರಿಸಲು ಬರುವುದಿಲ್ಲ. ನಾಮದಿಂದ ಪರ್ವತದ ಭೇದವಿದೆ ಅದರಂತೆ ವಸ್ತುಗಳು ಕೂಡ ಬೇರೆಯಿವೆ, ಇಂಥ ಭೇದ ಸ್ವೀಕರಿಸಲಾಗುವುದಿಲ್ಲ. ಈ ಶರೀರದ ಕ್ರಿಯೆಯು ಆತ್ಮನ ಕಾರಣದಿಂದ ಆಗುತ್ತದೆಂಬುದು ಸಾಧ್ಯವಿಲ್ಲ. ಏಕೆಂದರೆ ಶರೀರದ ಪರಮಾಣುಗಳು ಅವುಗಳ ಗುಣ-ಪರ್ಯಾಯದಿಂದ ಭೇದರೂಪವಿಲ್ಲ, ಆದರೆ ಅಭೇದವಿದೆ. ಅದಕ್ಕಾಗಿ ಆತ್ಮನಿಂದ ಶರೀರದ್ದೇನೂ ಆಗುವುದಿಲ್ಲ, ಒಂದು ಹುಲ್ಲಿನಕಡ್ಡಿ ಹೊತ್ತುವುದರಿಂದ ಹತ್ತು ಕಿಲೋಮೀಟರ ದೂರದಲ್ಲಿರುವ ಇನ್ನೊಂದು ಹೊಸ ಕಡ್ಡಿ ಹೊತ್ತುವುದಿಲ್ಲ. ಏಕೆಂದರೆ ಅವು ಭಿನ್ನ-ಭಿನ್ನವಿವೆ. ಆಯಾ ಪರಮಾಣುಗಳು ತಮ್ಮ ಗುಣ-ಪರ್ಯಾಯಗಳಿಂದ ಅಭೇದವಿವೆ ಮತ್ತು ಇನ್ನೊಂದರ ಗುಣ-ಪರ್ಯಾಯಗಳಿಂದ ಭೇದರೂಪವಿವೆ. ಈ ಪೇಟೆಯಲ್ಲಿ ಮಂದಿಯಿರುವುದರಿಂದ ವ್ಯಾಪಾರದಲ್ಲಿ ತುಂಬ ಹಾನಿಯಾಗುತ್ತದೆಂದು ಅಜ್ಞಾನಿಯು ರೋದಿಸುತ್ತಾನೆ. ಆದರೆ ಸೋದರನೇ ! ದುಡ್ಡು ತನ್ನ ಗುಣ-ಪರ್ಯಾಯದ ಕ್ಷೇತ್ರಾಂತರವಾಗುವುದರಿಂದ ಪರ್ಯಾಯದ

ಜತೆ ಅಭೇದವಿದೆ ಮತ್ತು ನಿನ್ನಿಂದ ಮೂರು ಕಾಲದಲ್ಲಿ ಭೇದರೂಪವಿದೆ. ಆದುದರಿಂದ ಸರಿಯಾದ ಜ್ಞಾನ ಮಾಡಿಕೊಳ್ಳು.

ಒಂದು ಪರಮಾಣುವು ಒಂದು ಸಮಯದಲ್ಲಿ ಜೀವದ ನಿಮಿತ್ತವಿಲ್ಲದೆ ಹದಿನಾಲ್ಕು ರಜ್ಜುಲೋಕ ಪ್ರಮಾಣ ಹೋಗುವ ಸಾಮರ್ಥ್ಯ ಹೊಂದಿದೆ. ಅದರ ಕ್ಷೇತ್ರಾಂತರರೂಪದ ಪರ್ಯಾಯ ಮತ್ತು ಇತರ ಗುಣಗಳಿಂದ ಅದು ತುಂಬಿಕೊಂಡಿದೆ, ಮತ್ತು ಅದು ಆತ್ಮನಿಂದ ಭೇದರೂಪವಿದೆ. ಆ ಪದಾರ್ಥಗಳು ತಮ್ಮ ಗುಣ-ಪರ್ಯಾಯಗಳಿಂದ ಅಭೇದವಿದೆ, ಪರದ ಕಾರಣದಿಂದ ಅದರ ಪರ್ಯಾಯವು ಕುಂಠಿತವಾಗುವುದಿಲ್ಲ.

ಆರು ದ್ರವ್ಯಗಳನ್ನು ಮನ್ನಿಸಬೇಕಾಗುವುದೆಂದು ಜನರು ಹೇಳುತ್ತಾರೆ, ಆದರೆ ಯಾವ ಪರದಿಂದ ನನ್ನ ಕಾರ್ಯವಾಗುತ್ತದೆ ಮತ್ತು ನನ್ನಿಂದ ಪರಕಾರ್ಯವಾಗುತ್ತದೆಂದು ಹೇಳುವವರು ಆರು ದ್ರವ್ಯಗಳನ್ನು ಮನ್ನಿಸಿಲ್ಲ ಪರವಸ್ತುವಿನಿಂದ ಭೇದ ಮತ್ತು ತನ್ನ ಗುಣ-ಪರ್ಯಾಯದಿಂದ ಅಭೇದ ಮನ್ನಿಸಿದವನು ಆರು ದ್ರವ್ಯಗಳನ್ನು ನಿಜವಾಗಿ ಮನ್ನಿಸಿದ್ದಾನೆಂದು ಹೇಳಲಾಗುತ್ತದೆ.

ಜನರು ಯಾವುದನ್ನು ಅಭೇದವೆಂದು ಹೇಳುತ್ತಾರೆ ಅಂಥ ಅಭೇದ ಕೂಡ ನಾವು ಮನ್ನಿಸುವುದಿಲ್ಲವೆಂಬುದನ್ನು ತಿಳಿಸಿದೆ. ಹಾಲು ಮತ್ತು ನೀರಿನಲ್ಲಿ ಅಭೇದವೆಂದು ಹೇಳಿದೆ ಅದನ್ನು ನಾವು ಒಪ್ಪುವುದಿಲ್ಲ, ಏಕೆಂದರೆ ನಿಜವಾಗಿ ಹಾಲು ಮತ್ತು ನೀರಿನಲ್ಲಿ ಪ್ರದೇಶಗಳ ಭಿನ್ನತೆಯಿದೆ, ಅದರಂತೆ ಅಜ್ಞಾನೀ ಜೀವನು ಶರೀರ ಮತ್ತು ಆತ್ಮನನ್ನು ಒಂದೆಂದು ಹೇಳುತ್ತಾನೆ, ಕರ್ಮ ಮತ್ತು ಆತ್ಮನನ್ನು ಒಂದೆಂದು ಹೇಳುತ್ತಾನೆ ಶರೀರ ಮತ್ತು ಕರ್ಮ ಇವೆರಡೂ ಆತ್ಮನಿಂದ ಬೇರೆಯಾಗಿದ್ದರೂ ಕೂಡ ಅವು ನನ್ನವಿವೆಯೆಂದು ಅಜ್ಞಾನೀ ಜೀವನು ಅಭೇದ ಮಾಡುತ್ತಾನೆ, ಇಂಥ ಅಭೇದತೆ ನಮಗೆ ಮಾನ್ಯವಿಲ್ಲವೆಂದು ಆಚಾರ್ಯದೇವರು ಹೇಳುತ್ತಾರೆ. ನಮಗಂತೂ ನಮ್ಮ ಗುಣ-ಪರ್ಯಾಯದಿಂದ ಅಭೇದ ಬೇಕು, ಇಂಥ ಅಭೇದತೆ ಸ್ವೀಕರಿಸಬೇಕು ಹೀಗೆ ನಿಜವಾದ ಜ್ಞಾನ ಮಾಡಿಕೊಂಡರೆ ಪರದಿಂದ ಬೇರೆಯಾದ ಪರ್ಯಾಯದಷ್ಟು ನಾನಿರುವುದಿಲ್ಲ, ನಾನು ತ್ರಿಕಾಲೀ ಶುದ್ಧನಿದ್ದೇನೆಂದು ಉಪಾದೇಯಬುದ್ಧಿಯಾದರೆ ಧರ್ಮವಾಗುವುದು.

ಇಲ್ಲಿ ಆತ್ಮ ಮತ್ತು ಪರಮಾಣು ಪ್ರತಿಯೊಂದು ದ್ರವ್ಯದ ಪರಿಚಯ ಮಾಡಿಕೊಡುತ್ತಾರೆ.

ಜಗತ್ತಿನಲ್ಲಿ ನೀರು ಮತ್ತು ಹಾಲನ್ನು ಏಕತೆಯಿಂದ ಹೇಳುತ್ತಾರೆ, ಆದರೆ ನೀರಿನ ಪ್ರದೇಶಗಳು ಮತ್ತು ಹಾಲಿನ ಪ್ರದೇಶಗಳು ಬೇರೆಯಿರುವುದರಿಂದ ಪ್ರದೇಶಭೇದಸಹಿತವಾದ ಏಕತೆಯು ಮಾನ್ಯವಿಲ್ಲ. ಲೋಕದಲ್ಲಿ ಆತ್ಮ ಮತ್ತು ಶರೀರ ಹಾಗೂ ಕರ್ಮದ ಏಕತೆಯನ್ನು ಹೇಳುತ್ತಾರೆ, ಆದರೆ ಆತ್ಮನ ಪ್ರದೇಶಗಳು ಮತ್ತು ಶರೀರದ ಪ್ರದೇಶಗಳು ಹಾಗೂ ಕರ್ಮದ ಪ್ರದೇಶಗಳು ಬೇರೆ-ಬೇರೆಯಿರುವುದರಿಂದ ಪ್ರದೇಶಭೇದ ಸಹಿತವಾದ ಏಕತೆಯು ಮಾನ್ಯವಿಲ್ಲ. ಆತ್ಮನು ರಾಗ ಮಾಡುವುದು ಮತ್ತು ಶರೀರವು ನಡೆಯುವಂಥ ಮನ್ನಣೆಯು ಮಾನ್ಯವಿಲ್ಲ, ಏಕೆಂದರೆ ಎರಡರ ಪ್ರದೇಶಗಳು ಬೇರೆಯಿವೆ. ಆದರೆ ಗುಣ ಮತ್ತು ಗುಣಿ ಎಂದರೆ ಆತ್ಮ ಮತ್ತು ಜ್ಞಾನ-ದರ್ಶನದ ಪ್ರದೇಶಗಳ ಭಿನ್ನತೆಯಿಲ್ಲ ಅದಕ್ಕಾಗಿ ಅವುಗಳ ಏಕತೆಯು ನಮಗೆ ಮಾನ್ಯವಿದೆ. ಪರದ ಜತೆ ಅಭೇದತೆ ಮಾನ್ಯವಿಲ್ಲ. ಆದರೆ ತನ್ನ ಗುಣ-ಗುಣಿಯ ಅಭೇದತೆಯು ನಮಗೆ ಮಾನ್ಯವಿದೆ.

ಯಾವ ಪ್ರಕಾರ ವಿಂಧ್ಯಾಚಲ ಮತ್ತು ಹಿಮಾಚಲಗಳು ಎರಡು ಇವೆ ಆ ಭೇದವು ಪ್ರದೇಶಭೇದಸಹಿತವಿದೆ ಅಂಥ ಭೇದವು ದ್ರವ್ಯ ಮತ್ತು ಅದರ ಗುಣಗಳ ಮಧ್ಯದಲ್ಲಿಲ್ಲ. ಆತ್ಮ ಮತ್ತು ಅವನ ಜ್ಞಾನ-ದರ್ಶನಾದಿ ಗುಣಗಳು ಹೀಗೆ ನಾಮ ಭೇದದಿಂದ ಭೇದವಿದ್ದರೂ ಕೂಡ ಆತ್ಮನಿರುವಲ್ಲಿಯೇ ಅವನ ಗುಣಗಳಿವೆ, ಅವುಗಳಲ್ಲಿ ಪ್ರದೇಶಭೇದವಿಲ್ಲ ಅದಕ್ಕಾಗಿ ಅದು ಮಾನ್ಯವಿದೆ, ಆದರೆ ಪ್ರದೇಶಭೇದ ಸಹಿತವಾದ ಭೇದವು ನಮಗೆ ಮಾನ್ಯವಿಲ್ಲ. ಹೀಗೆ ಭೇದ ಮತ್ತು ಅಭೇದತೆಯನ್ನು ತಮ್ಮಲ್ಲಿ ಸಾಧಿಸುವುದಿದೆ, ದ್ರವ್ಯ ಮತ್ತು ಗುಣವೆಂಬ ನಾಮಭೇದವು ತನ್ನಲ್ಲಿ ಇದೆ, ಆದರೆ ಪ್ರದೇಶದಿಂದ ಅಭೇದತೆಯಿದೆ. ಹೀಗೆ ಭೇದ-ಅಭೇದವು ತನ್ನಲ್ಲಿ ಎಂದರೆ ಪ್ರದೇಶಭೇದ ರಹಿತತೆಯಿರುವಲ್ಲಿ ಸಾಧಿಸುವುದು ಮಾನ್ಯವಿದೆ, ಆದರೆ ಪ್ರದೇಶಭೇದಸಹಿತವಾದ ಭೇದ ಮತ್ತು ಅಭೇದತೆಯು ಲೋಕದಲ್ಲಿ ಕಳೆದುಹೋಗಿದೆ ಅದು ನಮಗೆ ಮಾನ್ಯವಿಲ್ಲ.

ಪರದ ಏಕತೆಯು ಪರದಲ್ಲಿದೆ, ನನ್ನದು ಮತ್ತು ಅದರದು ಯಾವ ಸಂಬಂಧವಿಲ್ಲ. ನಾನು ಇಚ್ಛೆ ಮಾಡುವುದು ಮತ್ತು ಶರೀರ ನಡೆಯುವುದು, ಪದಾರ್ಥಗಳನ್ನು ಸ್ವೀಕರಿಸುವುದು ಮತ್ತು ಬಿಡುವಂತೆ ಪರದೊಡನೆ ಏಕತೆಯಿಲ್ಲ. ಆ ಪದಾರ್ಥಗಳ ಏಕತೆಯು ಆಯಾ ಪದಾರ್ಥಗಳಲ್ಲಿದೆ ಮತ್ತು ನನ್ನ ಏಕತೆಯು ನನ್ನಲ್ಲಿದೆ ನನ್ನ ದ್ರವ್ಯ-ಗುಣ-ಪರ್ಯಾಯಗಳು ನನ್ನಿಂದ ಬೇರೆಯಿಲ್ಲ ಮತ್ತು ನನ್ನ ದ್ರವ್ಯ-ಗುಣ-ಪರ್ಯಾಯಗಳಲ್ಲಿ ನಾಮಭೇದವಿದ್ದರೂ ಕೂಡ ನನ್ನಿಂದ ಬೇರೆಯಿಲ್ಲ, ಆದರೆ ಏಕರೂಪವಿದೆ.

ಯಾವ ಪ್ರಕಾರ ಒಂದು ಪ್ರರ್ವತದಿಂದ ಇನ್ನೊಂದು ಪರ್ವತವು ಭಿನ್ನವಿದೆ ಅದೇ ಪ್ರಕಾರ ಹಣದ ಪ್ರದೇಶಗಳು ಮತ್ತು ಆತ್ಮನ ಪ್ರದೇಶಗಳು ಬೇರೆ-ಬೇರೆಯಿವೆ. ಆತ್ಮನ ಕಾರಣದಿಂದ ಹಣದ ಅಸ್ತಿತ್ವವಿಲ್ಲ ಹಣವು ಪುದ್ಗಲಾಸ್ತಿಕಾಯವಿದ್ದು ಅದರಲ್ಲಿ ದ್ರವ್ಯ-ಗುಣ-ಪರ್ಯಾಯದಿಂದ ಏಕವಿದೆ. ಮತ್ತು ಜೀವವು ಅಸಂಖ್ಯ ಪ್ರದೇಶಿಯಿದ್ದು ಅದು ತನ್ನ ಗುಣ-ಪರ್ಯಾಯಗಳಿಂದ ಏಕವಿದೆ,

ಜೀವವು ರಾಗ ಮಾಡಿದರೆ ಶರೀರವು ಉಚ್ಚ-ನೀಚವಾಗುವುದನ್ನು ಕಣ್ಣುಗಳಿಂದ ನೋಡಲಾಗುತ್ತದೆಂದು ಅಜ್ಞಾನಿಯು ಹೇಳುತ್ತಾನೆ. ಸೋದರನೇ ! ಶರೀರ ಮತ್ತು ಇಂದ್ರಿಯಗಳು ಜಡವಿದ್ದು ಪ್ರದೇಶಭೇದವುಳ್ಳ ವಸ್ತುಗಳಿವೆ, ಆತ್ಮ ಮತ್ತು ಕಣ್ಣುಗಳು ಭಿನ್ನವಿದ್ದರೂ ಕೂಡ ಅಜ್ಞಾನಿಯು ಕ್ಷೇತ್ರಭೇದವುಳ್ಳ ವಸ್ತುಗಳನ್ನು ಲಕ್ಷ್ಯದಲ್ಲಿ ತಂದುಕೊಂಡು ಸಂಯೋಗಗಳನ್ನು ನೋಡುತ್ತಾನೆ, ಆದರೆ ಪ್ರತಿಯೊಂದು ಪದಾರ್ಥದ ಸ್ವಭಾವವು ಹೇಗಿದೆಯೆಂಬುದನ್ನು ನೋಡುವುದಿಲ್ಲ. ಆತ್ಮ ಮತ್ತು ಕಣ್ಣುಗಳ, ಆತ್ಮ ಮತ್ತು ಶರೀರದ, ಆತ್ಮ ಮತ್ತು ತಿನ್ನುವ ಪದಾರ್ಥಗಳ ಪ್ರದೇಶಗಳು ಭಿನ್ನವಿವೆ ಪ್ರತಿಯೊಂದು ಪರಮಾಣುವು ತನ್ನ ದ್ರವ್ಯ-ಗುಣ-ಪರ್ಯಾಯದಿಂದ ಅಭೇದ ಮತ್ತು ಏಕವಿದೆ. ಮತ್ತು ಬೇರೆ ಪರಮಾಣುವಿನಿಂದ ಹಾಗೂ ಆತ್ಮನಿಂದ ಸರ್ವಥಾ ಭೇದರೂಪವಿದೆ. ಆತ್ಮನು ತನ್ನ ದ್ರವ್ಯ-ಗುಣ-ಪರ್ಯಾಯದಿಂದ ಅಭೇದನಿದ್ದಾನೆ ಮತ್ತು ಬೇರೆ ಆತ್ಮ ಹಾಗೂ ಪರಮಾಣುವಿನಿಂದ ಸರ್ವಥಾ ಭೇದರೂಪನಿದ್ದಾನೆ. ಆ ಸರ್ವಥಾ ಪ್ರದೇಶಭೇದದಿಂದ ಭೇದರೂಪವಿರುವಂಥ ಪದಾರ್ಥಗಳನ್ನು ಪ್ರದೇಶಭೇದರಹಿತ ದೃಷ್ಟಿಯಿಂದ ನೋಡುವುದು ಮತ್ತು ಏಕತೆ ಮಾಡುವುದು ಅದು ಸಂಯೋಗಗಳನ್ನು ನೋಡುವ ಮಿಥ್ಯಾದೃಷ್ಟಿಯಿದೆ,ಆದರೆ ಪ್ರತಿಯೊಂದು ಪದಾರ್ಥವು ತನ್ನ ಗುಣ-ಪರ್ಯಾಯಗಳಿಂದ ಏಕಾಂತವಿದೆ ಹೀಗೆ ಯಾವುದರಲ್ಲಿ ಪ್ರದೇಶಭೇದರಹಿತತೆಯಿದೆ ಅಂಥ ಪ್ರದೇಶಭೇದರಹಿತ ಪದಾರ್ಥಗಳ ಜತೆ ಅಭೇದತೆ ಸಾಧಿಸುವುದು ಅದು ಯಥಾರ್ಥವಿದೆ.

ಹಿಟ್ಟಿನಿಂದ ರೊಟ್ಟಿಯಾಗುವಲ್ಲಿ ನವೀನ ಪರ್ಯಾಯ ಕಾಣುತ್ತದೆ, ಆದರೆ ಆ ಪರ್ಯಾಯಕ್ಕೆ ಅದರ ದ್ರವ್ಯ-ಗುಣದಿಂದ ಪ್ರದೇಶಭೇದವಿಲ್ಲ, ಆದರೆ ಏಕಾಕಾರವಿದೆ ಹೀಗೆ ಏಕಾಕಾರ ವಸ್ತುವನ್ನು ಪ್ರದೇಶಭೇದವುಳ್ಳದ್ದೆಂದು ಮನ್ನಿಸುವುದು ಮತ್ತು ಪರದ ಜತೆ ಏಕಾಕಾರತೆಯನ್ನು ಮನ್ನಿಸುವುದು ಅದು ಅಜ್ಞಾನವಿದೆ. ಏಕೆಂದರೆ ಸ್ತ್ರೀಯ ಕೈಗಳಿಂದ ರೊಟ್ಟಿಯ ಪರ್ಯಾಯವಾಯಿತೆಂದು ಮನ್ನಿಸುವವನು ಅಜ್ಞಾನಿಯಾಗಿದ್ದಾನೆ, ಅವುಗಳ ಪ್ರದೇಶಗಳು ಭಿನ್ನವಿದ್ದರೂ ಕೂಡ ಒಂದರಿಂದ ಇನ್ನೊಂದು ವಸ್ತುವಿನ ಏಕಾಕಾರತೆಯನ್ನು ಮನ್ನಿಸುವುದು ಅದು ಅಜ್ಞಾನವಿದೆ.

ರಾಮನು ಲಕ್ಷ್ಮಣನ ಶರೀರವನ್ನು ಆರು ತಿಂಗಳು ಹೊತ್ತುಕೊಂಡಿರುವಲ್ಲಿ ರಾಮನ ಜೀವ, ರಾಮನ ಶರೀರ ಮತ್ತು ಲಕ್ಷ್ಮಣನ ಶರೀರ. ಈ ಮೂರರ ಪ್ರದೇಶಗಳು ಬೇರೆಯಿವೆ, ಪ್ರದೇಶಭೇದ ಸಹಿತವಿದೆ. ಆದಾಗ್ಯೂ ಜೀವದ ಕಾರಣದಿಂದ ಶರೀರ ಹೊರುವ ಕಾರ್ಯವಾಯಿತೆಂದು ಮನ್ನಿಸುವುದು ಅದು ಅಜ್ಞಾನವಿದೆ. ಲಕ್ಷ್ಮಣನ ಶರೀರವು ಅದರ ಗುಣ-ಪರ್ಯಾಯದಿಂದ ಏಕವಿದೆ, ಏಕೆಂದರೆ ಅದಕ್ಕೆ ಪ್ರದೇಶಭೇದವಿಲ್ಲ ಅದು ನಮಗೆ ಮಾನ್ಯವಿದೆ, ಆದರೆ ಪ್ರದೇಶಭೇದಸಹಿತವಿರುವಂಥ ರಾಮನ ಜೀವದ ಕಾರಣದಿಂದ ಶರೀರ ಹೊರುವ ಕ್ರಿಯೆಯಾಯಿತೆನ್ನುವುದು ಅದು ನಮಗೆ ಮಾನ್ಯವಿಲ್ಲ.

ನಮ್ಮಲ್ಲಿ ನಮ್ಮ ಧರ್ಮ ಹೇಗೆ ಮಾಡುವುದೆಂದರೆ ಸೋದರನೇ ! ಪ್ರತಿಯೊಂದು ದ್ರವ್ಯವು ತನ್ನ ಗುಣ-ಪರ್ಯಾಯಗಳನ್ನು ಧರಿಸಿ ನಿಂತಿದೆಯೆಂದು ಜ್ಞಾನಮಾಡಿಕೊಳ್ಳುವುದೇ ಧರ್ಮವಿದೆ. ಆದರೆ ತನ್ನ ಗುಣ-ಪರ್ಯಾಯಗಳನ್ನು ಬೇರೊಂದು ಧರಿಸಿದೆ ಮತ್ತು ಬೇರೊಂದರ ಗುಣ-ಪರ್ಯಾಯಗಳನ್ನು ತಾನು ಧರಿಸಿದ್ದೇನೆಂದು ಮನ್ನಿಸುವವನು ವಸ್ತುಸ್ವರೂಪವನ್ನು ತಿಳಿಯುವುದಿಲ್ಲ. ತನ್ನ ದರ್ಶನ-ಜ್ಞಾನಾದಿಗುಣಗಳು ಮತ್ತು ಪರ್ಯಾಯಗಳು ತನ್ನಲ್ಲಿ ಆಗುತ್ತವೆ, ಅದಕ್ಕೆ ಪ್ರದೇಶಭೇದವಿಲ್ಲವೆಂದು ಪ್ರದೇಶಭೇದರಹಿತವಾದಂಥ ತನ್ನ ಆತ್ಮನನ್ನು ಅಭೇದತೆಯಿಂದ ನೋಡಿದರೆ ಬೇರೆ ಪದಾರ್ಥಗಳು ಅಥವಾ ಅದರ ಗುಣ-ಪರ್ಯಾಯಗಳಿಂದ ಅಭೇದವಿರುವುದನ್ನು ಅದರ ಅಭೇದತೆಯಿಂದ ನೋಡಿದರೆ ಅದು ಪ್ರತ್ಯಕ್ಷ ಕಾಣುತ್ತದೆ ಮತ್ತು ಅದು ನಿಜವಾದ ದಾರ್ಶನಿಕ ಪ್ರಮಾಣವಿದೆ ಮತ್ತು ಅದನ್ನು ಪ್ರಮಾಣಜ್ಞಾನವೆಂದು ಹೇಳುತ್ತಾರೆ.

ಎರಡು ಬೆಟ್ಟಗಳು ಬೇರೆಯಿರುವಂತೆ ಗುಣ-ಗುಣಿಗಳು ಬೇರೆಯಿಲ್ಲ. ಎರಡು ಬೆಟ್ಟಗಳ ಹೆಸರು ಬೇರೆಯಿರುವಂತೆ ಗುಣ-ಗುಣಿಯ ಹೆಸರು ಬೇರೆಯಿಲ್ಲ. ಎರಡು ಬೆಟ್ಟಗಳಲ್ಲಿ ಪ್ರದೇಶಭೇದವಿರುವಂತೆ ಗುಣ-ಗುಣಿಯ ಮಧ್ಯದಲ್ಲಿ ಪ್ರದೇಶಭೇದವಿಲ್ಲ, ಆದರೆ ಪ್ರದೇಶದಿಂದ ಅಭೇದತೆಯಿದೆ. ನೀರು ಮತ್ತು ಹಾಲಿನಲ್ಲಿ ಏಕತೆಯಿದೆಯೆಂದು ಜನರು ಹೇಳುತ್ತಾರೆ ಅಂಥ ಏಕತೆಯು ಗುಣ-ಗುಣಿಯ ಮಧ್ಯದಲ್ಲಿಲ್ಲ. ಏಕೆಂದರೆ ಹಾಲು ಮತ್ತು ನೀರಿನ ಪ್ರದೇಶಗಳು ಬೇರೆಯಿವೆ, ಆದರೆ ಗುಣ-ಗುಣಿಯ ಪ್ರದೇಶಗಳು ಬೇರೆಯಿಲ್ಲ. ಹೀಗೆ ಯಥಾರ್ಥವಾಗಿ ಮನ್ನಿಸದವನು ದೇವ-ಗುರು-ಶಾಸ್ತ್ರಗಳನ್ನು ಮನ್ನಿಸುವುದಿಲ್ಲ. ಅವನು ಅರ್ಥಸಮಯದ ಜ್ಞಾನವನ್ನು ಸರಿಯಾಗಿ ಮಾಡಿಕೊಳ್ಳುವುದಿಲ್ಲ ಮತ್ತು ತನ್ನ ಆತ್ಮನನ್ನು ಮನ್ನಿಸುವುದಿಲ್ಲ. ಇನ್ನು ಯಥಾರ್ಥ ತಿಳಿಯುವವನಿಗೆ ಪರದಿಂದ ನನ್ನಲ್ಲಿ ಯಾವುದಾದರೂ ಆಗುತ್ತದೆ ಅಥವಾ ನನ್ನಿಂದ ಪರದಲ್ಲಿ ಯಾವುದಾದರೂ ಆಗುತ್ತದೆಂಬ ಅಸತ್ಯ ಮನ್ನಣೆಯ ನಾಶವಾಗಿ ಸಮ್ಯಗ್ದರ್ಶನವಾಗುತ್ತದೆ.

ಮುನಿಗೆ ಶುಭರಾಗ ಬಂದಾಗ ಈರ್ಯಾಸಮಿತಿ ಮಾಡಬೇಕಾಗುವುದಿಲ್ಲವೇ ? ಸೋದರನೇ ! ಶರೀರದ ನಡೆಯುವಿಕೆಯು ಅದು ಈರ್ಯಾಸಮಿತಿಯೇನು ? ಆತ್ಮನು ಜ್ಞಾನಸ್ವರೂಪನಿದ್ದಾನೆ. ಅದರಲ್ಲಿ ಮುನಿಯು ಸ್ಥಿರವಿರುವ ಸಾಧ್ಯತೆಯಿಲ್ಲದಾಗ ಶುಭರಾಗ ಬರುತ್ತದೆ ; ಆದರೆ ಶುಭರಾಗದಿಂದ ಶರೀರದ ಕ್ರಿಯೆಯಾಗುತ್ತದೆಂಬುದಾಗಿಲ್ಲ, ಸಾವಧಾನತೆಯೊಡನೆ ನಡೆಯುವ ಶುಭರಾಗವು ಅದು ವ್ಯವಹಾರಸಮಿತಿಯಿದೆ ಮತ್ತು ಧರ್ಮಾತ್ಮ ಜೀವನಿಗೆ ಅದರ ನಿಷೇಧವು ವರ್ತಿಸುತ್ತದೆ. ಆದರೆ ಶರೀರದ ಕ್ರಿಯೆಯು ಸಮಿತಿಯಲ್ಲ. ಶರೀರ ಮತ್ತು ಆತ್ಮನ ಪ್ರದೇಶಗಳು ಭಿನ್ನವಿವೆ. ಭೇದವುಳ್ಳ ಪದಾರ್ಥದ ಕಾರಣದಿಂದ ಆತ್ಮನ ಧರ್ಮಪರ್ಯಾಯವು ಪ್ರಕಟವಾಗುವುದು ಸಾಧ್ಯವಿಲ್ಲ.

''ಆದರೆ ಪ್ರದೇಶಭೇದರಹಿತ ಆ ಗುಣ-ಗುಣಿಯಲ್ಲಿ ಕಥಂಚಿತ್ ಪ್ರಕಾರದಿಂದ ಭೇದ-ಅಭೇದವನ್ನು ಪರಮಾರ್ಥ ತಿಳಿಸುವ ಸಲುವಾಗಿ ಕೃಪಾವಂತರಾದ ಆಚಾರ್ಯದೇವರು ತಿಳಿಸಿರುವುದನ್ನು ಸರಿಯಾಗಿ ತಿಳಿದುಕೊಳ್ಳಬೇಕಾಗುವುದು''.

ಪ್ರದೇಶಭೇದವಿಲ್ಲದ ಗುಣ-ಗುಣಿಯಲ್ಲಿ ಕಥಂಚಿತ್ ಭೇದ-ಅಭೇದತೆಯಿದೆ. ಆ ಪರಮಾರ್ಥ ತಿಳಿಸಿ ಕೊಡುವುದಕ್ಕಾಗಿ ಕೃಪಾವಂತರಾದ ಆಚಾರ್ಯದೇವರು ಹೇಳಿರುವುದನ್ನು ಚನ್ನಾಗಿ ತಿಳಿದುಕೊಳ್ಳಬೇಕು. ದ್ರವ್ಯ-ಗುಣ-ಪರ್ಯಾಯಗಳು ಪ್ರದೇಶಭೇದರಹಿತವಿವೆ. ಅದರಲ್ಲಿ ನಾಮುಭೇದವಿದ್ದರೂ ಪ್ರದೇಶದಿಂದ ಅಭೇದವಿದೆಯೆಂದು ಕಥಂಚಿತ್ ಭೇದಾಭೇದಸ್ವರೂಪ ತಿಳಿಯಬೇಕು.

ಆತ್ಮನು ದ್ರವ್ಯನಿದ್ದು ಅವನ ಜ್ಞಾನಾದಿಗುಣಗಳು ಮತ್ತು ಸ್ವಭಾವದ ಆಶ್ರಯದಿಂದ ಪ್ರಕಟವಾಗುವ ಸಮ್ಯಗ್ದರ್ಶನ-ಜ್ಞಾನ-ಚಾರಿತ್ರದ ನಿರ್ಮಲ ಪರ್ಯಾಯಗಳು ಮತ್ತು ಅಪೂರ್ಣದಶೆಯಲ್ಲಿ ಯಾವ ರಾಗವು ಉತ್ಪನ್ನವಾಗುತ್ತದೆ ಆ ರಾಗದ ಪರ್ಯಾಯ-ಹೀಗೆ ದ್ರವ್ಯ-ಗುಣ-ನಿರ್ಮಲಪರ್ಯಾಯ ಮತ್ತು ರಾಗ ಈ ನಾಲ್ವರ ಕ್ಷೇತ್ರ

ಒಂದೇ ಇದೆ ಎಷ್ಟು ಕ್ಷೇತ್ರದಲ್ಲಿ ದ್ರವ್ಯವಿದೆ ಅಷ್ಟರಲ್ಲಿ ಗುಣಗಳಿವೆ, ಅಷ್ಟರಲ್ಲಿ ನಿರ್ಮಲ ಪರ್ಯಾಯವಿವೆ ಮತ್ತು ಅಷ್ಟೇ ಕ್ಷೇತ್ರದಲ್ಲಿ ರಾಗವಿದೆ.

ಒಂದು ಪರಮಾಣು, ಅದರ ಸ್ಪರ್ಶಾದಿಗುಣಗಳು, ಅದರ ಒಂದು ಸಮಯದ ಪರ್ಯಾಯ ಮತ್ತು ಸ್ಕಂಧ ರೂಪವಾದಾಗ ವಿಭಾವಪರ್ಯಾಯ ಈ ನಾಲ್ಕರ ಕ್ಷೇತ್ರವು ಒಂದಿದೆ. ಹೀಗೆ ಪ್ರದೇಶಭೇದವಿಲ್ಲದ ದ್ರವ್ಯ-ಗುಣ-ಪರ್ಯಾಯದ ಅಭೇದತೆಯನ್ನು ಸ್ವೀಕರಿಸಲಾಗಿದೆ. ಇದು ಚೈತನ್ಯ ಸತ್ತಾ ಇದೆ. ಪರಮಾಣುವು ತನ್ನ ಸತ್ತಾದಲ್ಲಿದೆ, ಅದರ ಅಸ್ತಿತ್ವವು ಬೇರೆ-ಬೇರೆಯಿದೆ, ಆದರೆ ಅದು ತನ್ನ ದ್ರವ್ಯ-ಗುಣ-ಪರ್ಯಾಯದಿಂದ ಬೇರೆಯಿಲ್ಲ ಸಂಸಾರದಶೆಯಲ್ಲಿ ಕರ್ಮ, ಶರೀರ ಮೊದಲಾದ ನಿಮಿತ್ತಗಳಿವೆ, ಆ ನಿಮಿತ್ತಗಳು ಭಿನ್ನ ಪದಾರ್ಥಗಳಿವೆಯೆಂದು ಜ್ಞಾನ ಮಾಡಿಕೊಳ್ಳಬೇಕು, ವಿಕಾರಿಪರ್ಯಾಯ, ಅವಿಕಾರಿಪರ್ಯಾಯ, ಗುಣಗಳು ಮತ್ತು ದ್ರವ್ಯ ಹೀಗೆ ಎಲ್ಲವುಗಳ ಯಥಾರ್ಥ ಪ್ರಮಾಣಜ್ಞಾನ ಮಾಡಿಕೊಳ್ಳಬೇಕು. ಜಗತ್ತಿನ ಸ್ವರೂಪವು ಹೇಗಿದೆ ಹಾಗೆ ಸರ್ವಜ್ಞ ಭಗವಂತರು ನೋಡಿದ್ದಾರೆ. ಹಾಗೆ ಹೇಳುವ ಆಚಾರ್ಯಭಗವಂತರಿಗೆ ವಿಕಲ್ಪವುಂಟಾಗಿದೆ ಮತ್ತು ವಾಣಿಯು ಹೊರಟಿದೆ. 'ಕೃಪಾವಂತರಾದ ಆಚಾರ್ಯ'ರೆಂಬ ಶಬ್ದವು ವಿಕಲ್ಪಸೂಚಕವಿದೆ ನಮ್ಮ ಮೇಲೆ ಕರುಣೆ ಮಾಡಿ ನಮಗೆ ಯಾವ ವಸ್ತುಸ್ವರೂಪ ತಿಳಿಸಿದ್ದಾರೆ ಅದನ್ನು ಸರಿಯಾಗಿ ತಿಳಿದುಕೊಳ್ಳಬೇಕು.

ಮಂದಿರ ಮೊದಲಾದವುಗಳ ಅಂಶಗಳು ಆತ್ಮನಿಂದ ಬೇರೆಯಿದ್ದರೂ ರಾಗಮಾಡಿ, ಅವಸರ ಮಾಡಿ ಕಟ್ಟಿಕೊಳ್ಳುವ ಸಾಧ್ಯತೆಯಿದೆಯೇನು ? ಸೋದರನೇ ! ಶಾಂತನಾಗು. ಜೀವವು ತನ್ನಲ್ಲಿ ರಾಗಮಾಡುವುದು, ಆದರೆ ಪರದ ಪರ್ಯಾಯವನ್ನು ತಿರುಗಿಸುವ ಸಾಧ್ಯತೆಯಿಲ್ಲ ಅಥವಾ ನಿಶ್ಚಿತ ಸಮಯದಲ್ಲಿ ಪರಿವರ್ತನ ಮಾಡುವ ಸಾಧ್ಯತೆಯಿಲ್ಲ.

ನಿನ್ನ ದ್ರವ್ಯ-ಗುಣಗಳು ತ್ರಿಕಾಲವಿದ್ದು ರಾಗದ ಪರ್ಯಾಯವು ಒಂದು ಸಮಯದ್ದಿದೆ. ಹೀಗೆ ಕಾಲ ಭೇದವಿದೆ ಮತ್ತು ನಾಮಭೇದವಿದೆ, ಆದರೆ ಪ್ರದೇಶಭೇದರಹಿತವಾದ ಭೇದವಿದೆ ಅದಕ್ಕಾಗಿ ಅದನ್ನು ಸ್ವೀಕರಿಸಲಾಗುತ್ತದೆ. ಅದರಂತೆ ಪರಮಾಣುವಿನ ದ್ರವ್ಯ-ಗುಣಗಳು ತ್ರಿಕಾಲವಿವೆ ಮತ್ತು ಅದರ ಅಸ್ತಿತ್ವಾದಿ ಗುಣಗಳ ಅವಿಕಾರೀ ಪರ್ಯಾಯ ಮತ್ತು ಸ್ಕಂಧರೂಪ ವಿಭಾವ ಪರ್ಯಾಯಗಳು ಒಂದು ಸಮಯದ್ದಿವೆ. ಹೀಗೆ ನಾಮಭೇದ ಹಾಗೂ ಕಾಲಭೇದವಿದೆ, ಆದರೆ ಕ್ಷೇತ್ರಭೇದವಿಲ್ಲ. ನಾಲ್ಕರ ವಿಸ್ತಾರವು ಒಂದು ರೀತಿಯಿದೆ.

ಯಾವ ಪ್ರಕಾರ ಗೋಡೆಯನ್ನು ಬೆಳ್ಳಗೆ ಮಾಡಿದರೆ ಆ ಬಿಳಿಯತನದ ವಿಸ್ತಾರವು ಆ ಕ್ಷೇತ್ರದಷ್ಟಿದೆ ಮತ್ತು ಬೆಳ್ಳಗೆ ಮಾಡಿದ ನಂತರ ಗೋಡೆಯು ಮಲಿನವಾದರೆ ಮಲಿನದ ವಿಸ್ತಾರವು ಅದರಷ್ಟೇ ಇರುತ್ತದೆ. ಅದೇ ಪ್ರಕಾರ ಇಲ್ಲಿ ಆತ್ಮನ ಮನೆಯ ಮಾತು ಹೇಳುತ್ತಾರೆ. ಪ್ರತಿಯೊಂದು ಆತ್ಮವು ಅಸಂಖ್ಯ ಪ್ರದೇಶೀ ವಿಸ್ತಾರವುಳ್ಳದ್ದಿದೆ. ಅದರ ಗುಣಗಳು, ಅದರ ನಿರ್ವಿಕಾರಿಪರ್ಯಾಯ ಮತ್ತು ಅದರ ವಿಕಾರಿಪರ್ಯಾಯಗಳು ಅಸಂಖ್ಯ ಪ್ರದೇಶದಷ್ಟು ಕ್ಷೇತ್ರದಲ್ಲಿವೆ. ಇಲ್ಲಿ ಅಸ್ತಿಕಾಯ ಸಿದ್ಧಮಾಡುವುದಿದೆ. ಸಂಸಾರವು ಒಂದು ಸಮಯದ್ದಿದೆ, ಎರಡು ಸಮಯದ್ದು ಇಲ್ಲ, ದ್ರವ್ಯ-ಗುಣಗಳು ತ್ರಿಕಾಲವಿವೆ. ಕಾಲಭೇದವಿದೆ, ಆದರೆ ಸಂಸಾರದ ಪ್ರಮಾಣವು ದ್ರವ್ಯದಷ್ಟು ವಿಸ್ತಾರವಿದೆ.

ಅದೇಪ್ರಕಾರ ಕರ್ಮದ ಪರಮಾಣು ಉದಯದಲ್ಲಿ ಬಂದರೆ ಅದರ ದ್ರವ್ಯ, ಅದರ ಗುಣಗಳು ಮತ್ತು ಅದರ ಉದಯ ಬರುವ ರೂಪ ಅವಸ್ಥೆಯ ಕ್ಷೇತ್ರವು ಒಂದಿದೆ. ಕರ್ಮದ ಉದಯದ ಅವಸ್ಥೆಯು-ಕ್ಷೇತ್ರವು ವಿಸ್ತಾರವಾಗಿ ಆತ್ಮನ ರಾಗಪರ್ಯಾಯದಲ್ಲಿ ಪ್ರವೇಶಿಸುವುದಿಲ್ಲ. ರಾಗದ ವಿಸ್ತಾರವು ತನ್ನ ಅಸಂಖ್ಯ ಪ್ರದೇಶದಷ್ಟಿದೆ. ಅದೇ ಪ್ರಕಾರ ಶರೀರ, ಮನಸ್ಸು, ವಾಣಿ ಮೊದಲಾದವುಗಳ ದ್ರವ್ಯ-ಗುಣ-ಪರ್ಯಾಯಗಳು ಅವುಗಳಲ್ಲಿ ಇವೆ, ಅದರ ವಿಸ್ತಾರವನ್ನು ಅವು ಧಾರಣಮಾಡಿವೆ, ಆತ್ಮನಪ್ರದೇಶಗಳು ಅದರಲ್ಲಿ ಪ್ರವೇಶಿಸಿಹೋಗುವುದಿಲ್ಲ.

ಆತ್ಮನ ಧ್ಯಾನಮಾಡಿದರೆ ಧರ್ಮದಶೆ ಪ್ರಕಟವಾಗುವುದು ಅದು ಒಂದು ಸಮಯದ್ದಿದೆ. ಪ್ರಥಮ ಸಮಯದಲ್ಲಿ

ಪ್ರಥಮ, ದ್ವಿತೀಯ ಸಮಯದಲ್ಲಿ ದ್ವಿತೀಯ, ಅದರ ವಿಸ್ತಾರವು ದ್ರವ್ಯ-ಗುಣಗಳಷ್ಟಿದೆ. ಕಾಲಭೇದವಿದೆ, ಆದರೆ ಪ್ರದೇಶಭೇದವಿಲ್ಲ.

ರಾಗದ ಪರಿಮಾಣ ಅಸಂಖ್ಯ ಪ್ರದೇಶ ಮತ್ತು ಧರ್ಮದ ಪರಿಮಾಣ ಅಸಂಖ್ಯ ಪ್ರದೇಶ ಹೀಗೆ ಎರಡೂ ಸಮಾನ ಬರುತ್ತವೇನು ?- ಎಂದು ಓರ್ವನು ಪ್ರಶ್ನೆ ಮಾಡುತ್ತಾನೆ ಅದಕ್ಕೆ ಸೋದರನೇ ! ಎರಡರ ಪರಿಮಾಣವು ಸಮಾನವಿದ್ದರೂ ಕೂಡ ರಾಗವು ಅದು ದುಃಖರೂಪವಿದೆ ಮತ್ತು ವೀತರಾಗಪರ್ಯಾಯವು ಅದು ಸುಖರೂಪವಿದೆ. ಮತ್ತು ದ್ರವ್ಯ-ಗುಣಗಳು ಶಕ್ತಿರೂಪದಿಂದಿವೆ ಹೀಗೆ ಅಂತರವಿದೆ.

ಈ ಪ್ರಕಾರ ದ್ರವ್ಯ-ಗುಣ-ಪರ್ಯಾಯಗಳಲ್ಲಿ ನಾಮಭೇದ, ಕಾಲಭೇದ, ಲಕ್ಷಣಭೇದ ಹೇಳಿದೆ, ಆದರೆ ಪ್ರದೇಶಭೇದವಿಲ್ಲ. ಹೀಗೆ ಆಚಾರ್ಯ ಭಗವಂತರು ಕರುಣಾಬುದ್ಧಿಯಿಂದ ವಸ್ತುವಿನ ಸ್ವರೂಪ ಭೇದಾಭೇದ ತಿಳಿಸಿದ್ದಾರೆ, ಒಳ್ಳೆಯ ಪ್ರಕಾರದಿಂದ ಅದರ ಜ್ಞಾನ ಮಾಡಿಕೊಳ್ಳುವುದು ಅದು ಪ್ರಮಾಣಜ್ಞಾನವಿದೆ.

ಪುರುಷ ಪ್ರಮಾಣದಿಂದ ವಚನ ಪ್ರಮಾಣ ಹೇಳಿದೆ ಅದರ ಅರ್ಥವೇನು ? ಸೋದರನೇ ! ವಾಣಿಯು ವಾಣಿಯ ಕಾರಣದಿಂದ ಹೊರಡುತ್ತದೆ, ಅದರಲ್ಲಿ ಜ್ಞಾನಿಯು ನಿಮಿತ್ತನಿದ್ದಾನೆ, ಹೀಗೆ ನಿಮಿತ್ತ-ನೈಮಿತ್ತಿಕದ ಸಲುವಾಗಿ ಸಂಬಂಧ ತಿಳಿಸುವುದಿತ್ತು. ಆದರೆ ಜ್ಞಾನಿಯಕಾರಣದಿಂದ ವಾಣಿಯಿದೆ ಮತ್ತು ವಾಣಿಯ ಕಾರಣದಿಂದ ಜ್ಞಾನಿಯಿದ್ದಾನೆ ಎಂಬುದಾಗಿಲ್ಲ. ಭಾಷೆಯು ಪರಮಾಣುವಿನ ಅಸ್ತಿಕಾಯವಿದೆ. ಅದು ತನ್ನ ದ್ರವ್ಯ-ಗುಣ-ಪರ್ಯಾಯದಿಂದ ಏಕರೂಪವಿದೆ. ಆತ್ಮನು ತನ್ನ ದ್ರವ್ಯ-ಗುಣ-ಪರ್ಯಾಯದಿಂದ ಏಕರೂಪ ಇದ್ದಾನೆ, ಆತ್ಮನು ಭಾಷೆ ಆಡುವ ಸಾಧ್ಯತೆಯಿಲ್ಲ. ಏಕೆಂದರೆ ಎರಡೂ ಆಸ್ತಿಕಾಯಗಳು ಬೇರೆಯಿವೆ ಹೀಗೆ ಯಥಾರ್ಥ ಜ್ಞಾನಮಾಡಿಕೊಳ್ಳಬೇಕಾಗುವುದು.

ಈಗ ವ್ಯಪದೇಶ-ಕಥನ, ಸಂಸ್ಥಾನ-ಆಕಾರ, ಸಂಖ್ಯೆ, ವಿಷಯ-ಆಧಾರವೆಂದು ನಾಲ್ಕು ಪ್ರಕಾರದಿಂದ ದ್ರವ್ಯ-ಗುಣದಲ್ಲಿ ಭೇದವನ್ನು ತಿಳಿಸಿಕೊಡಲಾಗಿದೆ.

ವವದೇಸಾ ಸಂಠಾಣಾ ಸಂಖಾ ವಿಸಯಾ ಯ ಹೋಂತಿ ತೇ ಬಹುಗಾ ।
ತೇ ತೇಸಿಮಣಣ್ಣತ್ತೇ ಅಣ್ಣತ್ತೇ ಚಾವಿ ವಿಜ್ಜಂತೇ ॥೪೬॥

**ವ್ಯಪದೇಶ, ಸಂಸ್ಥಾನ, ಸಂಖ್ಯೆಯಲ್ಲದೆ ವಿಷಯಗಳಿವು ಅನೇಕವಿರುವವು ।**
**ವ್ಯಪದೇಶಾದಿ ದ್ರವ್ಯ-ಗುಣಗಳ ಅನ್ಯತೆ ಅನನ್ಯತೆಯಲ್ಲೂ ಸಂಭವಿಪವು ॥೪೬॥**

''ಆ ದ್ರವ್ಯ ಮತ್ತು ಗುಣಗಳಿಂದ ಗುಣ-ಗುಣಿಯಲ್ಲಿ ಭೇದವಾಗುತ್ತವೆ ಅವು ಕಥನದ ಭೇದ ಮತ್ತು ಆಕಾರ ಭೇದವೆಂದು ಗಣಿಸುವುದು ಮತ್ತು ಯಾವವುಗಳಲ್ಲಿ ಇರುವವು ಅಂಥ ಆಧಾರಭಾವವು ಇವು ನಾಲ್ಕು ಪ್ರಕಾರದ ಭೇದಗಳು ಅಧಿಕ ಆಕಾರದವಿರುತ್ತವೆ. ಮತ್ತು ವ್ಯಪದೇಶಾದಿ ನಾಲ್ಕುಪ್ರಕಾರದ ಭೇದಗಳು ಕಥಂಚಿತ್ ಪ್ರಕಾರ ಅಭೇದ ಭಾವದಲ್ಲಿ ಮತ್ತು ಕಥಂಚಿತ್ ಪ್ರಕಾರ ಭೇದಭಾವದಲ್ಲಿ ಕೂಡ ಪ್ರವರ್ತಿಸುತ್ತವೆ.

**ಭಾವಾರ್ಥ :-** ಈ ನಾಲ್ಕು ಪ್ರಕಾರದ ವ್ಯಪದೇಶಾದಿಯ ಭಾವಗಳು ಅಭೇದ ಹಾಗೂ ಭೇದದಲ್ಲಿವೆ. ಎರಡು ಪ್ರಕಾರದಿಂದ ಅದರ ವಿವಕ್ಷೆಯಿದೆ. ಯಾವಾಗ ಒಂದು ದ್ರವ್ಯದ ಅಪೇಕ್ಷೆಯಿಂದ ಕಥನ ಮಾಡಲಾಗುತ್ತದೆ. ಆಗ ನಾಲ್ಕೂ ಭಾವಗಳು ಅಭೇದಕಥನದ ಅಪೇಕ್ಷೆಯಿಂದ ಇವೆ ಮತ್ತು ಯಾವಾಗ ಅನೇಕ ದ್ರವ್ಯದ ಅಪೇಕ್ಷೆಯಿಂದ ಕಥನ ಮಾಡಲಾಗುತ್ತದೆ ಆಗ ವ್ಯಪದೇಶಾದಿ ನಾಲ್ಕು ಭಾವಗಳನ್ನು ಭೇದಕಥನದ ಅಪೇಕ್ಷೆಯಿಂದ ಹೇಳಲಾಗುತ್ತದೆ. ಈಗ ಎರಡೂ ಭೇದಗಳನ್ನು ದೃಷ್ಟಾಂತದ ಮುಖಾಂತರ ತಿಳಿಸಿಕೊಡಲಾಗುತ್ತದೆ.

೧. ಅ) ಯಾವ ಪ್ರಕಾರ ಓರ್ವ ಪುರುಷನ ಹಸುವೆಂದು ಹೇಳುವುದು ಅದು ಭೇದದ ಕಥನವಿದೆ ಏಕೆಂದರೆ ಹಸು ಬೇರೆ ಮತ್ತು ಪುರುಷ ಬೇರೆಯಿದ್ದಾನೆ. ಈ ಮನುಷ್ಯನ ಹಣ, ಈ ಮನುಷ್ಯನ ಮನೆಯೆಂದು ಹೇಳುವುದು ಅದು ಭೇದ ಕಥನವಿದೆ, ಹೇಳಲು ಮಾತ್ರವಿದೆ. ಮನೆ ಅಥವಾ ಹಸುವಿನ ನಾಶವಾದೊಡನೆ ಆತ್ಮನ ನಾಶವಾಗುವುದಿಲ್ಲ, ತಾನು ಸತ್ತು ಹೋಗಲಿ ಮತ್ತು ಹಸು ಉಳಿದುಕೊಳ್ಳಲಿ ಎರಡೂ ಭಿನ್ನ ವಸ್ತುಗಳಿವೆ. ಆತ್ಮನ ಕರ್ಮವೆಂದು ಹೇಳುವುದು ಅದು ಕಥನ ಮಾತ್ರವಿದೆ-ಕರ್ಮದ ನಾಶವಾಗುವುದರಿಂದ ಆತ್ಮನ ನಾಶವಾಗುವುದಿಲ್ಲ ಅದಕ್ಕಾಗಿ ಆತ್ಮ ಮತ್ತು ಕರ್ಮ ಬೇರೆಯಿವೆ. ಇಂಥ ಕಥನ ಬಂದಾಗ ಆತ್ಮನನ್ನು ಪರದಿಂದ ಭೇದರೂಪವಾಗಿ ತಿಳಿಯುವುದು ಅದು ಧರ್ಮವಿದೆ.

೧, ಬ) 'ವೃಕ್ಷದ ಶಾಖೆ'ಯೆಂದು ಹೇಳುವಲ್ಲಿ ವೃಕ್ಷ ಮತ್ತು ಶಾಖೆಯೆಂದು ಭೇದವಾಗುತ್ತದೆ, ಆದರೂ ವೃಕ್ಷ ಮತ್ತು ಶಾಖೆ ಬೇರೆಯಿಲ್ಲ. ವೃಕ್ಷದ ಪ್ರದೇಶಗಳು ಬೇರೆ ಮತ್ತು ಶಾಖೆಯ ಪ್ರದೇಶಗಳು ಬೇರೆಯೆಂಬುದಾಗಿಲ್ಲ. ಈ ಮಾವಿನಹಣ್ಣು ಹುಳಿಯಿದೆ, ಮಾವಿನಹಣ್ಣು ಮತ್ತು ಹುಳಿಯೆಂದು ಭೇದವಾಗುತ್ತಿದ್ದರೂ ಕೂಡ ವಸ್ತುವಿನಲ್ಲಿ ಭೇದವಿಲ್ಲ ಅದರಂತೆ ಆತ್ಮನ ಗುಣಗಳಲ್ಲಿ ದರ್ಶನ-ಜ್ಞಾನ-ಚಾರಿತ್ರವೆಂಬ ಭೇದಗಳಾಗುತ್ತಿದ್ದರೂ ವಸ್ತುವಿನಲ್ಲಿ ಭೇದವಿಲ್ಲ. ಹೇಗೆ ಮನುಷ್ಯ ಮತ್ತು ಹಸುವಿನಲ್ಲಿ ಸರ್ವಥಾ ಭೇದವಿದೆ ಹಾಗೆ ಆತ್ಮ ಮತ್ತು ಅವನ ಗುಣಗಳಲ್ಲಿ ಸರ್ವಥಾ ಭೇದವಿಲ್ಲ, ಆದರೆ ತನ್ನ ದ್ರವ್ಯ-ಗುಣ-ಪರ್ಯಾಯಗಳಿಂದ ಅಭೇದವಿದೆ ಹೀಗೆ ಪರದ ದ್ರವ್ಯ-ಗುಣ-ಪರ್ಯಾಯಗಳಿಂದ ಆತ್ಮನನ್ನು ಭಿನ್ನವಾಗಿ ತಿಳಿದುಕೊಳ್ಳುವುದು ಮತ್ತು ತನ್ನ ದ್ರವ್ಯ-ಗುಣ-ಪರ್ಯಾಯಗಳಿಂದ ಅಭೇದವೆಂದು ತಿಳಿದುಕೊಳ್ಳುವುದು ಅದು ಸಮ್ಯಗ್ಜ್ಞಾನವಿದೆ.

ಜೀವದ್ರವ್ಯದಲ್ಲಿ ಮತ್ತು ಅದರ ಗುಣಗಳಲ್ಲಿ ನಾಮಭೇದವಿದೆ, ಆದರೆ ವಸ್ತು ಭೇದವಿಲ್ಲ. ವ್ಯವಹಾರಕಥನ ಮತ್ತು ನಿಶ್ಚಯ ಕಥನವೆಂದು ಕಥನವು ಎರಡು ಪ್ರಕಾರದ್ದಿದೆ. ಭೇದವು ಅದು ವ್ಯವಹಾರವಿದೆ ಮತ್ತು ಅಭೇದವು ಅದು ವಾಸ್ತವಿಕವಿದೆ. ಯಾವ ಪ್ರಕಾರ ಈ ಪುರುಷನದು ಈ ಹಸುವಿದೆ, ಆದರೆ ಹಸುವು ನಿಜವಾಗಿ ಮನುಷ್ಯನದಿಲ್ಲ.

ಇದು ವೃಕ್ಷದ ಶಾಖೆಯಿದೆ, ವೃಕ್ಷವಿಲ್ಲದೆ ಶಾಖೆಯಿಲ್ಲ. ಎಲ್ಲಿ ಶಾಖೆಯಿದೆ ಅಲ್ಲಿ ವೃಕ್ಷವಿದೆ ಮತ್ತು ವೃಕ್ಷವಿದೆ ಅಲ್ಲಿ ಶಾಖೆಯಿದೆ. ಅದರಂತೆ ಆತ್ಮನು ತನ್ನ ಜ್ಞಾನ-ದರ್ಶನ-ಚಾರಿತ್ರಗುಣವುಳ್ಳವನಿದ್ದಾನೆ, ಆದರೆ ಆತ್ಮನು ಮತ್ತು ಅವನ ಗುಣಗಳು ಬೇರೆಯಾಗಿಲ್ಲ.

ಈಗ ಆರು ವ್ಯವಹಾರ ಕಾರಣ ಮತ್ತು ಆರು ನಿಶ್ಚಯ ಕಾರಣಗಳನ್ನು ಹೇಳಲಾಗುತ್ತದೆ.

ಹೇಗೆ ಓರ್ವ ಪುರುಷನು ಮಾಗಿದ ಫಲವನ್ನು ಧನವಂತ ಪುರುಷನ ನಿಮಿತ್ತವಾಗಿ ಉಪವನದ ವೃಕ್ಷದಿಂದ ಕೊಯ್ದುಕೊಂಡಿದ್ದಾನೆ. ಈ ಭೇದದಲ್ಲಿ ವ್ಯಪದೇಶವಿದೆ. ಈ ಭೇದವು ಕಾರಕದ ಕಥನವಿದೆ.

೧) **ಕರ್ತೃ** - ಓರ್ವ ಪುರುಷನು ಹಣ್ಣನ್ನು ಕೊಯ್ದಿದ್ದಾನೆ ಇದರಲ್ಲಿ ಪುರುಷನನ್ನು ವ್ಯವಹಾರದಿಂದ ಕರ್ತೃನೆಂದು ಹೇಳಲಾಗುತ್ತದೆ. ಪುರುಷ ಮತ್ತು ಹಣ್ಣು ಎರಡೂ ಭಿನ್ನವಿವೆ. ಪುರುಷನು ಹಣ್ಣನ್ನು ಕೊಯ್ಯುವ ಸಾಧ್ಯತೆಯಿಲ್ಲ, ಆದರೆ ಹಣ್ಣು ಕೊಯ್ಯುವ ಕ್ರಿಯೆಯು ಹಣ್ಣಿನ ಕಾರಣದಿಂದ ಆಗಿದೆ. ಅದರಲ್ಲಿ ಪುರುಷನು ನಿಮಿತ್ತನಿದ್ದಾನೆಂದು ತಿಳಿಸಿಕೊಡುವ ಸಲುವಾಗಿ ಪುರುಷನು ಕೊಯ್ದಿದ್ದಾನೆಂದು ಹೇಳಲಾಗಿದೆ.

೨) **ಕರ್ಮ** - ಫಲವನ್ನು ಕೊಯ್ಯುವುದು ಅದು ಕರ್ಮ ಅಥವಾ ಕಾರ್ಯವಿದೆ. ಆ ಕಾರ್ಯವು ಸ್ವತಂತ್ರವಾಗಿ ಆಗಿದೆ. ಆದರೆ ನಿಮಿತ್ತ-ನೈಮಿತ್ತಿಕ ಸಂಬಂಧವನ್ನು ತಿಳಿಸಿಕೊಡುವ ಸಲುವಾಗಿ ಹೀಗೆ ಹೇಳಿದೆ.

೩) **ಕರಣ** - ಪುರುಷನು ಕತ್ತಿಯಿಂದ ಫಲವನ್ನು ಕೊಯ್ದಿದ್ದಾನೆ, ಇದು ಸಾಧನದ ವ್ಯವಹಾರ ಕಥನವಿದೆ. ಕತ್ತಿ ಬೇರೆ ಮತ್ತು ಹಣ್ಣು ಬೇರೆ ಇದೆ. ಅದು ನಿಮಿತ್ತದ ಸಂಬಂಧವನ್ನು ತಿಳಿಸಿಕೊಡಲಾಗಿದೆ.

೪) **ಸಂಪ್ರದಾನ** - ಧನವಂತ ಪುರುಷನಿಗೆ ಕೊಡುವ ಸಲುವಾಗಿ ಹಣ್ಣು ಕೊಯ್ದಿದ್ದಾನೆ ವ್ಯವಹಾರದಿಂದ ಅದು

ಸಂಪ್ರದಾನವಿದೆ. ಯಾರೂ ಯಾರ ಸಲುವಾಗಿ ಕೊಯ್ಯುವುದಿಲ್ಲ. ಕೊಯ್ಯುವ ಪುರುಷ ಬೇರೆ ಮತ್ತು ಧನವಂತ ಪುರುಷ ಬೇರೆಯಿದ್ದಾನೆ.

೫) **ಅಪಾದಾನ** - ಪುರುಷನು ವೃಕ್ಷದಿಂದ ಹಣ್ಣು ಕೊಯ್ದಿದ್ದಾನೆ. ಈ ಅಪಾದಾನವು ವ್ಯವಹಾರ ಕಥನವಿದೆ, ವೃಕ್ಷ ಬೇರೆಯಿದೆ ಮತ್ತು ಪುರುಷನು ಬೇರೆಯಿದ್ದಾನೆ.

೬) **ಅಧಿಕರಣ** - ಪುರುಷನು ವನದಲ್ಲಿ ಹಣ್ಣು ಕೊಯ್ದಿದ್ದಾನೆ. ವ್ಯವಹಾರದಿಂದ ಇದು ಅಧಿಕರಣ ಕಥನವಿದೆ ವನವು ಬೇರೆಯಿದೆ ಮತ್ತು ಪುರುಷನು ಬೇರೆಯಿದ್ದಾನೆ ಯಾರೂ ಯಾವುದರ ಆಧಾರವಿಲ್ಲ.

**ಕ್ರಿಯೆ** - ಪುರುಷನು ಹಣ್ಣು ಕೊಯ್ದಿದ್ದಾನೆ ವ್ಯವಹಾರದಿಂದ ಇದು ಕ್ರಿಯೆಯ ಕಥನವಿದೆ ಪುರುಷನು ಹಣ್ಣು ಕೊಯ್ಯುವ ಕ್ರಿಯೆ ಮಾಡುವ ಸಾಧ್ಯತೆಯಿಲ್ಲ. ಆದರೂ ಪುರುಷನು ಹಣ್ಣು ಕೊಯ್ದಿದ್ದಾನೆಂದು ಹೇಳುವುದು ಅದು ವ್ಯವಹಾರವಿದೆ.

ಹೀಗೆ ಎಲ್ಲಿ ವ್ಯವಹಾರದ ಕಥನ ಬರುತ್ತದೆ ಅಲ್ಲಿ ಯಥಾರ್ಥ ತಿಳಿಯಬೇಕು. ಇಲ್ಲಿ ಕರ್ತೃ, ಕರ್ಮ, ಕರಣ ಮೊದಲಾದ ಆರು ಕಾರಣ ತಿಳಿಸಿದೆ ಅವು ಪ್ರತಿಯೊಂದು ಬೇರೆಯಿವೆ. ಮಗನ ಸಲುವಾಗಿ ತಂದೆ ಹಣ ಸಂಪಾದಿಸುತ್ತಾನೆ ಅದು ವ್ಯವಹಾರ ಕಥನವಿದೆ. ಮಗ, ತಂದೆ ಮತ್ತು ಹಣ ಮೂರೂ ಬೇರೆ-ಬೇರೆಯಿವೆ ಯಾರೂ ಯಾರ ಸಲುವಾಗಿ ಮಾಡುವುದಿಲ್ಲ.

ಈಗ ಮಣ್ಣಿನ ಉದಾಹಣೆಯಿಂದ ಅಭೇದ ಕಾರಣ ಹೇಳುತ್ತಾರೆ.

''ಮತ್ತು ಮೃತ್ತಿಕೆಯು ಹೇಗೆ ತನ್ನ ಘಟಭಾವವನ್ನು ತಾನಾಗಿ ತನ್ನ ನಿಮಿತ್ತ ತನ್ನಿಂದ ತನ್ನಲ್ಲಿ ಮಾಡುತ್ತದೆ.''

೧) **ಕರ್ತೃ** - ಮಣ್ಣು ಸ್ವಯಂ ಕೊಡದ ಕರ್ತೃವಿದೆ, ಬೇರಾವುದೂ ಅದರ ಕರ್ತೃವಿಲ್ಲ. ಕುಂಭಕಾರನು ಕೊಡದ ಕರ್ತೃವಿಲ್ಲ, ಕುಂಭಕಾರನು ಮಾಡಿದ್ದಾನೆಂದು ಅಜ್ಞಾನಿಯು ಮನ್ನಿಸುತ್ತಾನೆ ಅದು ಅಜ್ಞಾನವಿದೆ, ಏಕೆಂದರೆ ಕುಂಭಕಾರ ಮತ್ತು ಕೊಡ ಭಿನ್ನವಸ್ತುಗಳಿವೆ.

೨) **ಕರ್ಮ** - ಮಣ್ಣು ಸ್ವಯಂ ಪರಿಣಮಿಸಿ ಕೊಡರೂಪದ ಕರ್ಮ ಅಥವಾ ಕಾರ್ಯವಾಗಿದೆ ಅದು ತನ್ನ ಕಾರ್ಯವಿದೆ.

೩) **ಸಾಧನ** - ಮಣ್ಣು ತನ್ನ ಸಾಧನದಿಂದ-ತನ್ನ ಮುಖಾಂತರ ಕೊಡವಾಗಿದೆ. ಕುಂಭಕಾರ, ಚಕ್ರ ಮೊದಲಾದವುಗಳ ಸಾಧನವೆಂದು ಹೇಳುವುದು ಅದು ವ್ಯವಹಾರ ಕಥನವಿದೆ.

೪) **ಸಂಪ್ರದಾನ** - ಮಣ್ಣು ಸ್ವಯಂ ತನಗೆ ಕೊಡರೂಪದ ದಾನ ಮಾಡಿದೆ.

೫) **ಅಪಾದಾನ** - ಮಣ್ಣು ತನ್ನೊಳಗಿಂದ ಕೊಡರೂಪವಾಗಿ ಆಗಿದೆ, ಪರದೊಳಗಿಂದ ಆಗುವುದಿಲ್ಲ.

೬) **ಅಧಿಕರಣ** - ಮಣ್ಣು ತನ್ನ ಆಧಾರದಿಂದ ಕೊಡ ಮಾಡಿದೆ, ಪರದ ಆಧಾರದಿಂದ ಮಾಡುವುದಿಲ್ಲ.

ಮಣ್ಣಿನ ಕರ್ತೃ, ಕರ್ಮ, ಕರಣ ಮೊದಲಾದವುಗಳ ಪ್ರದೇಶಗಳು ಬೇರೆಯಿಲ್ಲ ಏಕವಿವೆ.

''ಹಾಗೆಯೇ ಆತ್ಮನು ತನ್ನನ್ನು ತನ್ನ ಮುಖಾಂತರ ತನ್ನ ನಿಮಿತ್ತ ಆತ್ಮನಿಂದ ತನ್ನಲ್ಲಿ ತಿಳಿದಿದ್ದಾನೆ.''

ಅದೇ ಪ್ರಕಾರ ಆತ್ಮನಲ್ಲಿ ಆರು ಕಾರಕಗಳು ಅಭೇದವಿವೆ.

೧) **ಕರ್ತೃ** - ಆತ್ಮನು ಸ್ವಯಂ ತನ್ನನ್ನು ತಿಳಿಯುವ ಕ್ರಿಯೆಯ ಕರ್ತೃವಿದ್ದಾನೆ, ಬೇರೆ ಕರ್ತೃವಿಲ್ಲ.

೨) **ಕರ್ಮ** - ಆತ್ಮನು ತನ್ನನ್ನು ತಿಳಿಯುವರೂಪದ ಕಾರ್ಯ ಮಾಡುತ್ತಾನೆ, ಪರದ ಕಾರ್ಯ ಮಾಡುವುದಿಲ್ಲ.

೩) **ಸಾಧನ** - ಆತ್ಮನು ತನ್ನ ಮುಖಾಂತರ ತಿಳಿಯುವ ಕಾರ್ಯ ಮಾಡುತ್ತಾನೆ. ಪರದ ಮುಖಾಂತರ ನಿಮಿತ್ತದ ಮುಖಾಂತರ, ಗುರುವಿನ ಮುಖಾಂತರ, ಪುಸ್ತಕದ ಮುಖಾಂತರ ತಿಳಿಯುವುದಿಲ್ಲ, ಆದಾಗ್ಯೂ ಪರದ ಮುಖಾಂತರ ತಿಳಿಯುತ್ತಾನೆಂದು ಹೇಳುವುದು ಅದು ಉಪಚಾರ ಕಥನವಿದೆ. ನಿಮಿತ್ತದ ಉಪಸ್ಥಿತಿಯನ್ನು ತಿಳಿಸಿಕೊಡುತ್ತದೆ.

೪) **ಸಂಪ್ರದಾನ** - ಆತ್ಮನು ತನ್ನ ಸಲುವಾಗಿ ತಿಳಿಯುತ್ತಾನೆ, ಇತರರ ಸಲುವಾಗಿ ತಿಳಿಯುವುದಿಲ್ಲ. ಕೆಲವರು ನಮಗೆ ತಿಳಿಯಬೇಕಾಗಿದೆ ಅವರು ನಮಗೆ ಉಪದೇಶ ಕೊಡುವುದಕ್ಕಾಗಿ ಇದ್ದಾರೆಂದು ಮನ್ನಿಸುತ್ತಾರೆ ಅವರು ಅಜ್ಞಾನಿಯಿದ್ದಾರೆ, ಪರದ ಸಲುವಾಗಿ ಯಾರೂ ಮಾಡುವುದಿಲ್ಲ. ತಿಳಿಯುವರೂಪದ ದಾನವನ್ನು ತಾನು ತನಗೆ ಕೊಡುತ್ತಾನೆ.

೫) **ಅಪಾದಾನ** - ಆತ್ಮನು ತನ್ನೊಳಗಿಂದ ತಿಳಿಯುವ ಕಾರ್ಯ ಮಾಡುತ್ತಾನೆ, ಪರದೊಳಗಿಂದ ತಿಳಿಯುವುದಿಲ್ಲ.

೬) **ಅಧಿಕರಣ** - ಆತ್ಮನು ತನ್ನ ಅಧಿಕರಣದಿಂದ ತಿಳಿಯುತ್ತಾನೆ, ಪರದ ಆಧಾರದಿಂದ ತಿಳಿಯುವುದಿಲ್ಲ.

ಈ ಪ್ರಕಾರ ಅಭೇದ ಕಥನವನ್ನು ತಿಳಿದುಕೊಳ್ಳಬೇಕು.

ಸಮಯಸಾರದ ಮೋಕ್ಷ ಅಧಿಕಾರದಲ್ಲಿ ಈ ಅಭೇದ ಆರು ಕಾರಕಗಳದ್ದೂ ಕೂಡ ಭೇದ ಹೇಳಿದೆ ಮತ್ತು ಕಾರಕಗಳ ಭೇದದಲ್ಲಿ ಇರುವವರೆಗೆ ಸಮ್ಯಗ್ದರ್ಶನವಾಗುವುದಿಲ್ಲವೆಂದು ಹೇಳಿದೆ. ಅದಂತೂ ಆತ್ಮನ ವಸ್ತುವು ಏಕವಿದ್ದು ಅದರಲ್ಲಿ ಆರು ಭೇದಗಳನ್ನು ಕಲ್ಪಿಸಿ ಭೇದದಲ್ಲಿ ಮತ್ತು ರಾಗದಲ್ಲಿ ನಿಂತುಕೊಳ್ಳಬಾರದೆಂದು ಹೇಳಿದೆ. ಅಲ್ಲಿ ದೃಷ್ಟಿಪ್ರಧಾನ ಕಥನವಿದೆ. ಇಲ್ಲಿಯಂತೂ ಜ್ಞಾನಪ್ರಧಾನವಾದ ಕಥನವಿದೆ. ಷಟ್‌ಕಾರಕಗಳು ತನ್ನ ಅಸ್ತಿಕಾಯದಲ್ಲಿ ಆಗುತ್ತವೆ, ಆದರೆ ಪರದಲ್ಲಿ ಆಗುವುದಿಲ್ಲವೆಂಬುದನ್ನು ಇಲ್ಲಿ ತಿಳಿಸಿಕೊಡಲಾಗಿದೆ.

ಈ ಪ್ರಕಾರ ಧರ್ಮದಲ್ಲಿ ಇಳಿಯುವ ಸಾಧ್ಯತೆಯಿದೆ. ಧರ್ಮದ-ವೀತರಾಗದಶೆಯ ಕರ್ತೃವು ಸ್ವಯಂ ಆತ್ಮನಿದ್ದು ಅವನು ಕರ್ತೃ, ವೀತರಾಗ ದಶೆರೂಪವಾಗಿ ಸ್ವಯಂ ಆತ್ಮನು ಪರಿಣಮಿಸುತ್ತಾನೆ ಅದು ಕಾರ್ಯ, ವೀತರಾಗದಶೆಯು ಆತ್ಮನ ಸಾಧನದಿಂದ ಆಗುತ್ತದೆ ಅದು ಸಾಧನ, ಯಾವುದೇ ವಿಕಲ್ಪದಿಂದ ಅಥವಾ ನಿಮಿತ್ತದ ಸಾಧನದಿಂದ ಧರ್ಮವಾಗುವುದಿಲ್ಲ. ವೀತರಾಗದಶೆ ಪ್ರಕಟ ಮಾಡಿ ಅದರ ದಾನವನ್ನು ತನಗೆ ಕೊಡುತ್ತಾನೆ ಅದು ಸಂಪ್ರದಾನವಿದೆ, ಇತರರು ಕೊಡುವುದಿಲ್ಲ. ವೀತರಾಗದಶೆಯು ತನ್ನೊಳಗಿಂದ ಆಗುತ್ತದೆ ಅದು ಸಂಪ್ರದಾನವಿದೆ, ಸ್ವಾಧ್ಯಾಯ ಮಂದಿರದಿಂದ ಶತ್ರುಂಜಯದಿಂದ, ಸಮ್ಮೇದಶಿಖರದಿಂದ ಧರ್ಮವಾಗುವುದಿಲ್ಲ. ವೀತರಾಗದಶೆಯು ತನ್ನ ಆಧಾರದಿಂದ ಆಗುತ್ತದೆ ಇದು ಅಧಿಕರಣವಿದೆ, ಅದು ಪರದ ಆಧಾರದಿಂದ ಆಗುವುದಿಲ್ಲ.

ಈ ಪ್ರಕಾರ ಕರ್ತೃ, ಕರ್ಮ, ಕರಣ ಮೊದಲಾದ ಕಾರಕಗಳ ಭೇದವಾಗುತ್ತಿದ್ದರೂ ಕೂಡ ಅವುಗಳ ಪ್ರದೇಶಗಳು ಮತ್ತು ಆತ್ಮನ ಪ್ರದೇಶಗಳು ಬೇರೆಯಿಲ್ಲ. ಅಸಂಖ್ಯ ಪ್ರದೇಶಗಳಲ್ಲಿ ಷಟ್‌ಕಾರಕಗಳು ಪರಿಣಮಿಸುತ್ತಲಿವೆ ಅವುಗಳ ಸಮಯವು ಒಂದಿದೆ, ಕಾಲಭೇದವಿಲ್ಲ, ಅದರಂತೆ ಪ್ರದೇಶ ಭೇದ ಕೂಡ ಇಲ್ಲ.

ಅಜ್ಞಾನೀ ಜೀವನು ದೇಹದಿಂದ, ದೇಹದ ಆಧಾರದಿಂದ ಅಥವಾ ಪುಣ್ಯದಿಂದ ಧರ್ಮವಾಗುತ್ತದೆಂದು ಮನ್ನಿಸುತ್ತಿದ್ದಾನೆ, ಆದರೆ ಅದು ಅವನದು ಅಜ್ಞಾನಭಾವವಿದೆ.

ಸದ್ಗುರುವಿನ ಉಪದೇಶವಿಲ್ಲದೆ ಹೇಗೆ ತಿಳಿದುಕೊಳ್ಳುವುದೆಂದು ಕೆಲವರು ಕೇಳುತ್ತಾರೆ. ಅವರಿಗೆ ಹೇಳುತ್ತಾರೆ-ಸದ್ಗುರುವಿನ ಉಪದೇಶದಿಂದ ತಿಳಿಯಿತೆಂದು ಹೇಳುವುದು ಅದು ನಿಮಿತ್ತದ ಕಥನವಿದೆ. ಆತ್ಮನಲ್ಲಿ ಜ್ಞಾನಮಯವಾದ ಗುಣವಿದೆ, ಆ ಜ್ಞಾನದಿಂದ ತಿಳಿಯುತ್ತಾನೆ. ತಾನು ತನ್ನಿಂದ ತಿಳಿದುಕೊಂಡರೆ ಗುರುವನ್ನು ನಿಮಿತ್ತವೆಂದು ಹೇಳಲಾಗುತ್ತದೆ.

ಶಬ್ದಸಮಯವೆಂದು ಯಾವುದಕ್ಕೆ ಹೇಳುತ್ತಾರೆಂದರೆ ಯಾವ ಶಾಸ್ತ್ರವು ಯಥಾರ್ಥ ವಸ್ತುವನ್ನು ತಿಳಿಸುತ್ತದೆ ಮತ್ತು ತಾನು ತನ್ನಿಂದ ತನ್ನಲ್ಲಿ ಧರ್ಮ ಮಾಡುವುದೆಂದು ಹೇಳುತ್ತದೆ ಆ ಶಾಸ್ತ್ರವು ನಿಜವಾದ ಶಾಸ್ತ್ರವಿದೆ, ಯಾವುದು ವಿಕಲ್ಪದಿಂದ, ರಾಗದಿಂದ, ವ್ಯವಹಾರದಿಂದ ಧರ್ಮವಾಗುತ್ತದೆಂದು ಹೇಳುತ್ತದೆ ಅದು ನಿಜವಾದ ಶಾಸ್ತ್ರವಿಲ್ಲ. ಆ ಪ್ರಕಾರ ಜ್ಞಾನ ಮಾಡಿದರೆ ಆ ಜ್ಞಾನವು ಸರಿಯಲ್ಲ. ಪದಾರ್ಥದ ಸ್ವರೂಪವು ಹಾಗೆ ಇಲ್ಲ. ತಾನು ತನ್ನಿಂದ ಧರ್ಮ ಪಡೆಯುತ್ತಾನೆಂದು ನಿಶ್ಚಯದಿಂದ ತಿಳಿಸುತ್ತದೆ ಮತ್ತು ಆಗ ಯಾರು ನಿಮಿತ್ತವಾದರೆಂದು ತಿಳಿಸುತ್ತದೆ - ಹೀಗೆ ನಿಶ್ಚಯ-ವ್ಯಯವಹಾರವನ್ನು ಯಥಾರ್ಥವಾಗಿ ತಿಳಿಸಿಕೊಡುತ್ತದೆ ಅದು ಶಾಸ್ತ್ರವಿದೆ.

ಮನುಷ್ಯನ ಯತ್ನವು ಈಶ್ವರ ಕೃಪೆಯಿದೆಯೆಂದು ಹೇಳುವುದು ಅಸತ್ಯವಿದೆ. ಆತ್ಮ ಬೇರೆ ಮತ್ತು ಈಶ್ವರ ಬೇರೆಯಿದ್ದಾನೆ. ಯಾರ ಕೃಪೆಯಿಂದ ಕಲ್ಯಾಣವಾಗುವುದಿಲ್ಲ. ಗುರುಗಳ ಕೃಪೆಯಿಂದ ಕಲ್ಯಾಣವಾಯಿತೆಂದು ಹೇಳುವುದು ಅದು ವ್ಯವಹಾರ ಕಥನವಿದೆ. ಯಾವುದೇ ಒಂದು ಪದಾರ್ಥದಲ್ಲಿ ಕಾರ್ಯವಾದಾಗ ಇನ್ನೊಂದು ವಸ್ತುವಿನ ಉಪಸ್ಥಿತಿಯನ್ನು ತಿಳಿಸಿಕೊಡುತ್ತದೆಯೆಂಬ ಕಥನ ಮಾಡಲಾಗುತ್ತದೆ.

ಇಲ್ಲಿ ವ್ಯಪದೇಶ ಎಂದರೆ ಕಥನವು ಎರಡು ಪ್ರಕಾರವಿದೆ ಅದರ ಜ್ಞಾನವಮಾಡಿಸುವುದಿದೆ. ಆತ್ಮನು ಕರ್ಮವುಳ್ಳವನು. ಶರೀರವುಳ್ಳವನೆಂದು ಹೇಳುವುದು ಅದು ವ್ಯವಹಾರ ಅಥವಾ ಭೇದಕಥನವಿದೆ ಎಂದರೆ ನಿಜವಾಗಿ ಹಾಗೆ ಇಲ್ಲ. ಏಕೆಂದರೆ ಎರಡರ ಪ್ರದೇಶಗಳು ಬೇರೆಯಿವೆ. ಆದರೆ ಆತ್ಮನು ಜ್ಞಾನಾದಿಗುಣವುಳ್ಳನೆಂದು ಹೇಳುವುದು ಅದು ಅಭೇದಕಥನವಿದೆ. ಆತ್ಮ ಮತ್ತು ಗುಣಗಳೆಂದು ನಾಮಭೇದವಿದ್ದರೂ ಕೂಡ ಪ್ರದೇಶಭೇದವಿಲ್ಲ, ಅದಕ್ಕಾಗಿ ಅದು ಅಭೇದಕಥನವಿದೆ.

ಒಬ್ಬ ಆತ್ಮನು ತಾನು ತನ್ನ ಸಲುವಾಗಿ ಕಾರ್ಯ ಮಾಡುತ್ತಾನೆ, ಹೀಗೆ ಷಟ್‌ಕಾರಕಗಳು ತನ್ನಲ್ಲಿ ಇವೆ, ಪರದ ಕಾರಣದಿಂದ ಇಲ್ಲ. ಮಹಿಳೆಯು ತನ್ನ ಪತಿಯ ಸಲುವಾಗಿ ಅಡಿಗೆ ಮಾಡುತ್ತಾಳೆಂದು ಹೇಳುವುದು ಅದು ವ್ಯವಹಾರವಿದೆ. ಯಾವ ವಸ್ತುವು ಯಾರ ಕಾರಣದಿಂದ ಆಗುವುದಿಲ್ಲ, ಯಾರ ಸಲುವಾಗಿ ಯಾರೂ ಮಾಡುವುದಿಲ್ಲ. ಪ್ರತಿಯೊಬ್ಬ ಆತ್ಮ ಮತ್ತು ಪ್ರತಿಯೊಂದು ಪರಮಾಣುವಿನಲ್ಲಿ ಷಟ್‌ಕಾರಕಗಳು ಅಭೇದವಾಗಿ ವರ್ತಿಸುತ್ತವೆ.

ಹೀಗೆ ವಸ್ತುಸ್ವರೂಪವನ್ನು ತಿಳಿದುಕೊಳ್ಳದೆ ಅಜ್ಞಾನೀಜೀವರುಗಳು ಹೀಗೆ ಹೇಳುತ್ತಾರೆ - ತಿಳಿದುಕೊಂಡಲ್ಲದೆ ಸಮಾಧಿ ಮಾಡಿರಿ, ಸ್ವಾಧ್ಯಾಯ-ಚರ್ಯೆಮಾಡಿ ಬಂಧ ಮಾಡಿಕೊಂಡು ನಿರ್ವಿಕಲ್ಪವಾಗಿ ಹೋಗುವುದು. ಬೇಕಾದರೆ ಆತ್ಮನ ಅಜ್ಞಾನವಿರಲಿ, ಆದರೆ ಆಂತರ್ಯದಿಂದ ಕಲ್ಯಾಣವಾಗಿ ಹೋಗುವುದೆಂದು ಮನ್ನಿಸುವವನಿಗೆ ವಸ್ತುಸ್ವರೂಪದ ಅರಿವಿಲ್ಲ. ಶರೀರವೇನು, ಆತ್ಮನೇನು ಅವುಗಳ ಪೃಥಕತೆಯನ್ನು ತಿಳಿದುಕೊಂಡಲ್ಲದೆ ಧರ್ಮವಾಗುವುದಿಲ್ಲ.

''ಮತ್ತು ಹೇಗೆ ದೊಡ್ಡ ಪುರುಷನ ಹಸುವು ದೊಡ್ಡದಿದೆ, ಇದು ಭೇದಸಂಸ್ಥಾನವಿದೆ. ಹಾಗೆಯೇ ದೊಡ್ಡ ವೃಕ್ಷದ ದೊಡ್ಡ ಶಾಖೆ, ಮೂರ್ತಿಕದ್ರವ್ಯದ ಮೂರ್ತಿಕಗುಣ, ಇದು ಅಭೇದಸಂಸ್ಥಾನವೆಂದು ತಿಳಿಯುವುದು.''

ಈಗ ಸಂಸ್ಥಾನ ಎಂದರೆ ಆಕಾರದ ಮಾತು ಮಾಡುತ್ತಾರೆ. ದೊಡ್ಡ ಪುರುಷನದು ದೊಡ್ಡ ಹಸುವೆಂದು ಕಥನ ಮಾಡಿದಾಗ ಹಸುವಿನ ಆಕಾರ ಮತ್ತು ಪುರುಷನ ಆಕಾರವು ಬೇರೆ-ಬೇರೆಯಿವೆ ಮನುಷ್ಯನ ಕಾರಣದಿಂದ ಹಸುವಿನ ಆಕಾರವಿಲ್ಲ ಮತ್ತು ಹಸುವಿನ ಆಕಾರದ ಕಾರಣದಿಂದ ಮನುಷ್ಯನ ಆಕಾರವಿಲ್ಲ, ಮತ್ತು ಓರ್ವಳು ದೊಡ್ಡ ಸ್ತ್ರೀಯಿದ್ದಳು ಅದಕ್ಕಾಗಿ ಅವಳ ಮಗನು ದಪ್ಪ ಮತ್ತು ದೊಡ್ಡವನಾದನೆಂದು ಹೇಳುವುದು ಅದು ಉಪಚಾರ ಕಥನವಿದೆ ಸ್ತ್ರೀಯ ಆಕಾರವು ಬೇರೆಯಿದೆ ಮತ್ತು ಮಗನ ಆಕಾರವು ಬೇರೆಯಿದೆ, ಯಾರೂ ಯಾರ ಕಾರಣದಿಂದ ಇಲ್ಲ.

ಈಗ ಅಭೇದಕಥನ ಹೇಳುತ್ತಾರೆ. ದೊಡ್ಡವೃಕ್ಷದ ದೊಡ್ಡ ಶಾಖೆ - ವಟವೃಕ್ಷದ ಶಾಖೆಯು ವಟವೃಕ್ಷದಿಂದ ಬೇರೆಯಿಲ್ಲ, ಎರಡರ ಆಕಾರವು ಒಂದೇ ಇದೆ. ಅದರಂತೆ ಮೂರ್ತಿಕದ್ರವ್ಯದ ಆಕಾರ ಕೂಡ ಮೂರ್ತಿಕವಿದೆ.

ಪರಮಾಣುದ್ರವ್ಯವು ಮೂರ್ತಿಕ, ಅದರ ಗುಣಗಳು ಮೂರ್ತಿಕ ಮತ್ತು ಅದರ ಪರ್ಯಾಯಗಳು ಕೂಡ ಮೂರ್ತಿಕವಿದೆ.

ಆತ್ಮನು ಅಮೂರ್ತಿಕನಿದ್ದಾನೆ. ಅವನ ಗುಣಗಳು-ಪರ್ಯಾಯಗಳು ಕೂಡ ಅಮೂರ್ತಿಕವಿವೆ, ಜ್ಞಾನವು ಸಾಕಾರವಿದೆ. ಅದು ಸ್ವ-ಪರವನ್ನು ತಿಳಿಯುತ್ತದೆ ಅದಕ್ಕಾಗಿ ಸಾಕಾರವೆಂದು ಹೇಳಲಾಗುವುದು, ಆದರೆ ಅದರ ಆಕಾರವಂತೂ ಅಮೂರ್ತಿಕವಿದೆ. ಮತ್ತು ಆತ್ಮನ ಪರ್ಯಾಯದಲ್ಲಾಗುವ ವಿಕಾರ ಕೂಡ ಅಮೂರ್ತಿಕವಿದೆ. ದ್ರವ್ಯ, ಗುಣ, ನಿರ್ಮಲಪರ್ಯಾಯ ಮತ್ತು ವಿಕಾರೀಪರ್ಯಾಯಗಳು ಅಮೂರ್ತಿಕವಿವೆ ಮತ್ತು ಅಸಂಖ್ಯ ಪ್ರದೇಶದಲ್ಲೆಲ್ಲ ಪೂರ್ಣ ವ್ಯಾಪಿಸಿವೆ. ಪುಣ್ಯ-ಪಾಪದ ಹಾಗೂ ಧರ್ಮದಶೆಯ ಆಕಾರವು ಆತ್ಮನ ಅಸಂಖ್ಯ ಪ್ರದೇಶಗಳಷ್ಟೇ ಇರುತ್ತದೆ.

**ಪ್ರಶ್ನೆ :-** ಸಮಯಸಾರದಲ್ಲಿ ರಾಗ-ದ್ವೇಷಗಳನ್ನು ಪುದ್ಗಲದ ಪರಿಣಾಮಗಳೆಂದು ಹೇಳಿದೆಯಲ್ಲವೇನು ?

**ಉತ್ತರ :-** ಸೋದರನೇ ! ಮೊದಲು ನಿಜವಾದ ಜ್ಞಾನಮಾಡಿಕೊಳ್ಳಬೇಕು ಎಂದರೆ ರಾಗ-ದ್ವೇಷಗಳು ತನ್ನ ಅಸಂಖ್ಯ ಪ್ರದೇಶಗಳ ಆಕಾರದಿಂದ ತನ್ನ ಕಾರಣದಿಂದ ಆಗುತ್ತವೆಂದು ನಿಶ್ಚಿತಮಾಡಿದ ನಂತರ ಅದರ ಮೇಲಿನ ಲಕ್ಷ್ಯಬಿಡುವ ಮತ್ತು ದ್ರವ್ಯದೃಷ್ಟಿ ಮಾಡುವುದಕ್ಕಾಗಿ ರಾಗ-ದ್ವೇಷಗಳನ್ನು ಪುದ್ಗಲದವೆಂದು ಹೇಳಿದೆ. ಶುದ್ಧ ಆತ್ಮನ ಆಶ್ರಯದಿಂದ ವೀತರಾಗತೆಯಾಗುತ್ತದೆ ಆದರೆ ರಾಗವಾಗುವುದಿಲ್ಲ. ಇದನ್ನು ತಿಳಿಸಿಕೊಡುವುದಕ್ಕಾಗಿ ರಾಗವು ಪುದ್ಗಲದಲಕ್ಷ್ಯದಿಂದ ಆಗುತ್ತದೆಂದು ರಾಗ-ದ್ವೇಷಗಳನ್ನು ಪುದ್ಗಲವೆಂದು ಹೇಳಿದೆ. ಆದರೆ ಅವುಗಳ ಆಕಾರವು ರೂಪೀಪುದ್ಗಲದ್ದು ಇವೆಯೆಂದು ತಿಳಿಯಬಾರದು. ಸಮಯಸಾರದಲ್ಲಿ ದೃಷ್ಟಿಪ್ರಧಾನಕಥನವಿದೆ. ಇಲ್ಲಿ ಜ್ಞಾನಪ್ರಧಾನವಾದ ಕಥನದಲ್ಲಿ ಪೂರ್ಣ ಅಸ್ತಿಕಾಯದ ಸ್ವರೂಪ ತಿಳಿಸುವುದರಿಂಂದ ವಿಕಾರವನ್ನು ಅಸಂಖ್ಯ ಪ್ರದೇಶದಷ್ಟು ಆಕಾರವುಳ್ಳದ್ದೆಂದು ಹೇಳಿದೆ.

ಆತ್ಮ ಮತ್ತು ಶರೀರದ ಭೇದಜ್ಞಾನವಿಲ್ಲದೆ ಕೇವಲ ಶಬ್ದಗಳಿಂದ ಹೇಳುವುದರಿಂದ ಅಥವಾ ದೇಹವನ್ನು ಸ್ಥಿರಮಾಡುವುದರಿಂದ ಯಾವ ಧರ್ಮವಾಗುವುದಿಲ್ಲ.

**ಪ್ರಶ್ನೆ :-** ಆತ್ಮನಿಗೆ ಆಕಾರವಿದೆಯಲ್ಲವೇ ? ಅದಂತೂ ನಿರಂಜನ ನಿರಾಕಾರವಿದೆಯಲ್ಲವೇನು ?

**ಉತ್ತರ :-** ಸೋದರನೇ ! ಪ್ರತಿಯೊಂದು ವಸ್ತುವಿನಲ್ಲಿ ಪ್ರದೇಶತ್ವಗುಣವಿದೆ, ಅದರ ಕಾರಣದಿಂದ ಪ್ರತಿಯೊಂದು ವಸ್ತುವಿಗೆ ಆಕಾರವು ಅವಶ್ಯವಾಗಿರುತ್ತದೆ. ಆತ್ಮನು ವಸ್ತುವಿದ್ದು ಅಮೂರ್ತನಿದ್ದಾನೆ. ಅದಕ್ಕಾಗಿ ಅವನ ಆಕಾರವು ಅಮೂರ್ತಿಕವಿದೆ. ಅವನಲ್ಲಿ ಶರೀರದ ಅಥವಾ ಪರದ ಆಕಾರವಿಲ್ಲ ಅದಕ್ಕಾಗಿ ನಿರಾಕಾರನೆಂದು ಹೇಳಿದೆ. ಮತ್ತು ರಾಗ-ದ್ವೇಷರೂಪದ ಅಂಜನವಿಲ್ಲ, ಅದಕ್ಕಾಗಿ ನಿರಂಜನನೆಂದು ಹೇಳಿದೆ. ಹೇಗೆ ಪಾತ್ರೆಯಲ್ಲಿ ನೀರು ಇದ್ದು ಅದರಲ್ಲಿ ನೀರಿನ ಆಕಾರವು ನೀರಿನ ಕಾರಣದಿಂದಿದೆ ಮತ್ತು ಪಾತ್ರೆಯ ಆಕಾರವು ಪಾತ್ರೆಯ ಕಾರಣದಿಂದಿದೆ. ವಸ್ತುವಿದ್ದು ಅದಕ್ಕೆ ವಿಸ್ತಾರ ಅಥವಾ ವ್ಯಾಪಕತೆಯಿಲ್ಲವೆಂಬುದು ಸಾಧ್ಯವಿಲ್ಲ. ಅದಕ್ಕೆ ಕ್ಷೇತ್ರವಿಲ್ಲವೆಂದು ಹೇಳಿದರೆ ವಸ್ತು ಉಳಿಯುವುದಿಲ್ಲ. ಶರೀರದ ಆಕಾರವು ಮೂರ್ತಿಕವಿದ್ದು ಆತ್ಮನ ಆಕಾರವು ಅಮೂರ್ತಿಕವಿದೆ ಆತ್ಮನ ಗುಣಗಳಿಗೆ ಆಕಾರವಿದೆ. ದರ್ಶನಗುಣವು ಆಕಾರವುಳ್ಳದ್ದಿದೆ ಎಂದರೆ ಅದರ ಆಕಾರ ಅಸಂಖ್ಯಪ್ರದೇಶಿಯಿದೆ ಆತ್ಮನ ಸಮ್ಯಗ್ದರ್ಶನಪರ್ಯಾಯ, ಮೋಕ್ಷಮಾರ್ಗಪರ್ಯಾಯ, ಮೋಕ್ಷಪರ್ಯಾಯ, ವಿಕಾರೀಪರ್ಯಾಯ ಎಲ್ಲ ಪರ್ಯಾಯಗಳಿಗೆ ತನ್ನ ಅಸಂಖ್ಯ ಪ್ರದೇಶಿಯಾದ ಆತ್ಮನಷ್ಟು ಆಕಾರವಿದೆ. ಆತ್ಮನು ವಸ್ತುವಿದ್ದು ಅವನಲ್ಲಿ ಗುಣಗಳಿವೆ ಮತ್ತು ಅವನ ಅನಂತಪರ್ಯಾಯಗಳಿವೆ ಅವೆಲ್ಲವುಗಳ ಆಕಾರವು ಅಸಂಖ್ಯಪ್ರದೇಶಿ, ಅಮೂರ್ತಿಕವಿದೆ, ಇವೆಲ್ಲವುಗಳಲ್ಲಿ ಅಭೇದವಿದೆ ಮತ್ತು ಪರದ ಆಕಾರರೂಪದಿಂದಿಲ್ಲವೆಂದು ಯಥಾರ್ಥ ಜ್ಞಾನಮಾಡಿಕೊಳ್ಳಬೇಕಾಗುವುದು.

ಯಾರಿಗೆ ಧರ್ಮಮಾಡುವುದಿದೆ ಅವರು ಎಲ್ಲಕ್ಕಿಂತ ಮೊದಲು ಆತ್ಮನನ್ನು ತಿಳಿದುಕೊಳ್ಳಬೇಕು. ನೋಡಿರಿ, ಆತ್ಮನು ದೇಹದಿಂದ ಭಿನ್ನನಿದ್ದರೂ ಕೂಡ ಇದು ಆತ್ಮನ ದೇಹವಿದೆ, ಈತನ ಲಕ್ಷ್ಮಿಯಿದೆ, ಆತ್ಮನ ಕರ್ಮವಿದೆ ಮೊದಲಾದ

ಪ್ರಕಾರದ ಕಥನವು ನಿಮಿತ್ತದ್ದಿದೆ. ಶರೀರ, ಕರ್ಮ, ವಾಣಿ ಮೊದಲಾಗಿ ಯಾವ ವಸ್ತುವೂ ಆತ್ಮನದು ಇಲ್ಲ.

೧) **ಕಥನ** -- ಇದು ಮನುಷ್ಯನ ಹಸು, ಆತ್ಮನಶರೀರ, ಆತ್ಮನಕರ್ಮವೆಂದು ಹೇಳುವುದೆಲ್ಲವು ಕಥನ ಮಾತ್ರವಿದೆ. ಶರೀರ, ಕರ್ಮ ಮೊದಲಾದವು ಜಡವಿವೆ ಆತ್ಮನು ಚೈತನ್ಯನಿದ್ದು ಅವುಗಳಿಂದ ಬೇರೆಯಿದ್ದಾನೆ. ಆತ್ಮ ಮತ್ತು ಶರೀರವೆಂದು ನಾಮಭೇದವಿರುವಂತೆ ಆ ವಸ್ತು ಕೂಡ ಭೇದಸ್ವರೂಪವೇ ಇದೆ, ಆದರೆ ಆತ್ಮನು ಜ್ಞಾನದರ್ಶನವುಳ್ಳವನು ಹಾಗೂ ಪರ್ಯಾಯವುಳ್ಳವನೆಂದು ಹೇಳುವಲ್ಲಿ ಆತ್ಮ ಮತ್ತು ಅವನ ಗುಣಗಳು ಅಥವಾ ಪರ್ಯಾಯವೆಂದು ನಾಮಭೇದವಿದ್ದರೂ ಕೂಡ ವಸ್ತುಭೇದವಿಲ್ಲ. ಆತ್ಮನಜ್ಞಾನ, ಆತ್ಮನಧರ್ಮ, ಆತ್ಮನಪರ್ಯಾಯ, ಆತ್ಮನಕ್ರೋಧವೆಂದು ಭೇದದಿಂದ ಕಥನ ಮಾಡಲಾಗುತ್ತಿದ್ದರೂ ಕೂಡ ಆತ್ಮನು ತನ್ನ ಗುಣ-ಪರ್ಯಾಯಗಳಿಂದ ಬೇರೆಯಿಲ್ಲ. ಶರೀರ, ಕರ್ಮ ಮೊದಲಾದುವನ್ನು ಆತ್ಮನವೆಂದು ಹೇಳಲಾಗುತ್ತಿದ್ದರೂ ಕೂಡ ಅವುಗಳಿಂದ ನೀನು ಸರ್ವಥಾ ಬೇರೆಯಿರುವೆನೆಂದು ಜ್ಞಾನ ಮಾಡಿಕೊಳ್ಳು ಮತ್ತು ಗುಣ-ಪರ್ಯಾಯಗಳು ಆತ್ಮನವಿವೆಯೆಂದು ಭೇದದಿಂದ ಹೇಳಲಾಗುತ್ತಿದ್ದರೂ ಕೂಡ ಅವುಗಳಿಂದ ನೀನು ಬೇರೆಯಿಲ್ಲ. ಆದರೆ ಅಭೇದವಾಗಿರುವೆನೆಂದು ಜ್ಞಾನ ಮಾಡಿಕೊಳ್ಳು.

೨) **ಸಂಸ್ಥಾನ** -- ದೊಡ್ಡ ಮನುಷ್ಯನ ದೊಡ್ಡ ಹಸು, ಶರೀರದ ಆಕಾರದಿಂದ ಆತ್ಮನ ಆಕಾರವು, ದಪ್ಪ ಮನುಷ್ಯನಿಗೆ ದಪ್ಪಮಗನೆಂದು ಹೇಳುವುದರಲ್ಲಿ ಬರುತ್ತದೆ. ಆದರೆ ಹಸುವಿನ ಆಕಾರವು ಬೇರೆಯಿದೆ ಮತ್ತು ಮನುಷ್ಯನ ಆಕಾರವು ಬೇರೆಯಿದೆ, ಶರೀರದ ಆಕಾರ ಮತ್ತು ಆತ್ಮನ ಆಕಾರವು ಬೇರೆಯಿದೆ, ಶರೀರವು ರೂಪಿಯಿದ್ದರೆ ಆತ್ಮನು ಅರೂಪಿಯಿದ್ದಾನೆ, ರೂಪಿಯ ಕಾರಣದಿಂದ ಅರೂಪಿಯ ಆಕಾರ ಹೇಳುವುದು ಅದು ನಾಮಮಾತ್ರವಿದೆ, ಕೇವಲೀ ಸಮುದ್ಘಾತದ ಸಮಯದಲ್ಲಿ ಕಾರ್ಮಣ, ತೈಜಸ ಶರೀರಗಳು ಆತ್ಮನ ಆಕಾರದಿಂದ ಆಗುತ್ತವೆ ಮತ್ತು ಆತ್ಮನ ಆಕಾರವು ಆ ಶರೀರದಷ್ಟು ಇರುತ್ತದೆನ್ನುವುದು ಅದು ಕಥನ ಮಾತ್ರವಿದೆ. ಜೀವವು ಯಾವ ಶರೀರಧಾರಣ ಮಾಡುತ್ತದೆ ಅದರ ಅನುಸಾರವಾಗಿ ಅವನ ಆಕಾರವಾಗುತ್ತದೆ ಮತ್ತು ಕಾರ್ಮಣ, ತೈಜಸಗಳು ಕೂಡ ಆ ಆಕಾರದಿಂದ ಆಗುತ್ತವೆ. ಆದರೆ ದೇಹದ ಕಾರಣದಿಂದ ಆತ್ಮನ ಆಕಾರವಿಲ್ಲ.

ಆತ್ಮನು ಅಸಂಖ್ಯ ಪ್ರದೇಶಿಯಿದ್ದಾನೆ ಅವನಿಗೆ ಅನಂತಗುಣಗಳು ಮತ್ತು ಪರ್ಯಾಯಗಳಿವೆ ದ್ರವ್ಯವು ಗುಣ-ಪರ್ಯಾಯಗಳ ಆಕಾರದಿಂದಿದ್ದರೆ ಪರ್ಯಾಯಗಳು ದ್ರವ್ಯ-ಗುಣಗಳ ಆಕಾರದಿಂದಿವೆ. ಜ್ಞಾನ-ದರ್ಶನಾದಿ ನಿರ್ಮಲಪರ್ಯಾಯದ ಆಕಾರ ಅಥವಾ ಕ್ರೋಧ-ಮಾನಾದಿ ವಿಕಾರೀಪರ್ಯಾಯದ ಆಕಾರವು ಆತ್ಮನ ಆಕಾರದಿಂದಿದೆ. ಪರ್ಯಾಯದ ಆಕಾರ ಮತ್ತು ದ್ರವ್ಯದ-ಆಕಾರವೆಂದು ಭೇದವಾಗುತ್ತಿದ್ದರೂ ಕೂಡ ನಿಜವಾಗಿ ಭೇದವಿಲ್ಲ.

ಶರೀರದ ಆಕಾರದಿಂದ ಆತ್ಮನನ್ನು ಹೇಳುವುದು ಅದು ಕಥನಮಾತ್ರವಿದೆ. ಶರೀರವು ಮೂರ್ತವಿದ್ದು ಅದರ ಆಕಾರವೂ ಮೂರ್ತವಿದೆ. ಆತ್ಮನು ಅರೂಪಿಯಿದ್ದು ಅವನ ದ್ರವ್ಯ-ಗುಣ-ಪರ್ಯಾಯ ಈ ಮೂರು ಅರೂಪಿಯಿದೆ ಅರೂಪೀ ಆತ್ಮನ ಆಕಾರವು ಶರೀರದ ಕಾರಣದಿಂದ ಇಲ್ಲ. ಹೀಗೆ ಶರೀರದಿಂದ ಭೇದಜ್ಞಾನ ಮಾಡುವುದು ಅದು ಧರ್ಮವಿದೆ.

ಶರೀರವು ವಿಸ್ತಾರವಾಗಿದೆ ಅದಕ್ಕಾಗಿ ಆತ್ಮನು ವಿಸ್ತಾರವಾಗಿದ್ದಾನೆಂಬುದಾಗಿಲ್ಲ, ಶರೀರವು ಬೇರೆ ಮತ್ತು ಆತ್ಮನು ಬೇರೆಯಿದ್ದಾನೆ. ಆತ್ಮನು ಅವನ ಅನಂತ ಗುಣಗಳು ಮತ್ತು ಅವನ ವಿಕಾರೀ ಅಥವಾ ಅವಿಕಾರಿದಶೆಯೆಂದು ಮೂರರ ಆಕಾರವು ಆತ್ಮನ ಪ್ರಮಾಣದಿಂದಿದೆ. ಹೀಗೆ ಪರದಿಂದ ಭೇದಜ್ಞಾನ ಮಾಡಿಸಿದೆ.

೩) **ಸಂಖ್ಯೆ** -- ''ಮತ್ತು ಹೇಗೆ ಓರ್ವ ಪುರುಷನ ಹತ್ತು ಹಸುಗಳಿವೆಯೆಂದು ಹೇಳುವುದು ಅದು ಭೇದ ಸಂಖ್ಯೆಯಿದೆ. ಹಾಗೆಯೇ ಒಂದು ವೃಕ್ಷಕ್ಕೆ ಹತ್ತು ಶಾಖೆಗಳಿವೆ. ಒಂದು ದ್ರವ್ಯಕ್ಕೆ ಅನಂತಗುಣಗಳಿವೆಯೆನ್ನುವುದು

ಅಭೇದಸಂಖ್ಯೆಯೆಂದು ತಿಳಿಯುವುದು.''

ಓರ್ವ ಪುರುಷನಿಗೆ ಹತ್ತು ಹಸುಗಳಿವೆ. ಅಲ್ಲಿ ಪುರುಷನೊಬ್ಬನಿದ್ದರೆ ಹಸುಗಳು ಹತ್ತು ಇವೆ, ಎರಡೂ ಭಿನ್ನವಸ್ತುಗಳಿವೆ. ಆದಾಗ್ಯೂ ನಿಮಿತ್ತದ ಸಂಬಂಧ ತಿಳಿಸಲು ಒಬ್ಬ ಪುರುಷನಿಗೆ ಹತ್ತು ಹಸುಗಳಿವೆಯೆಂದು ಹೇಳಲಾಗಿದೆ ಪುರುಷನು ಸತ್ತುಹೋಗಿ ಹಸುಗಳು ಉಳಿಯುವುದು ಅಥವಾ ಹಸುಗಳು ಸತ್ತುಹೋಗಿ ಪುರುಷನು ಉಳಿಯುವುದು. ಅದರಂತೆ ಆತ್ಮ ಒಬ್ಬ ಮತ್ತು ಎಂಟು ಕರ್ಮಗಳು, ಆತ್ಮ ಒಬ್ಬ ಮತ್ತು ಔದಾರಿಕ, ಕಾರ್ಮಣ, ತೈಜಸವೆಂದು ಮೂರು ಶರೀರಗಳು, ಆತ್ಮ ಒಬ್ಬ ಮತ್ತು ದಶಪ್ರಾಣಗಳು ಅಥವಾ ಐದು ಇಂದ್ರಿಯಗಳುಳ್ಳವನೆಂದು ಹೇಳುವುದು ಅದು ಹೇಳಲು ಮಾತ್ರವಿದೆ. ಕರ್ಮ, ಇಂದ್ರಿಯ, ಪ್ರಾಣ ಮೊದಲಾದವು ಜಡವಿದೆ, ನೀನು ಚೈತನ್ಯನಿರುವೆ ಅದಕ್ಕಾಗಿ ವ್ಯವಹಾರದ ಕಥನ ತಿಳಿದು ಅವುಗಳಿಂದ ಭೇದಜ್ಞಾನ ಮಾಡು. ಈ ಮನುಷ್ಯನಿಗೆ ಹತ್ತು ಹೆಣ್ಣು ಹತ್ತು ಗಂಡು ಇವೆ, ಚಕ್ರವರ್ತಿಗೆ ೯೬,೦೦೦ ಸ್ತ್ರೀಯರಿದ್ದಾರೆಂದು ಹೇಳುವುದು ಅದು ಉಪಚಾರ ಮಾತ್ರವಿದೆ, ಏಕೆಂದರೆ ಎರಡೂ ಭಿನ್ನವಸ್ತುಗಳಿವೆ.

ಒಂದು ವೃಕ್ಷಕ್ಕೆ ಹತ್ತು ಶಾಖೆಗಳೆಂದು ಹೇಳುವುದು ಅದು ಅಭೇದದ ಕಥನವಿದೆ, ವೃಕ್ಷವು ಒಂದು ಮತ್ತು ಶಾಖೆಗಳು ಹತ್ತು ಎಂದು ಭೇದಮಾಡಿದರೂ ವೃಕ್ಷ ಮತ್ತು ಶಾಖೆ ಬೇರೆಯಿಲ್ಲ, ಒಂದೇ ಕ್ಷೇತ್ರದಲ್ಲಿವೆ. ಅದರಂತೆ ಆತ್ಮನು ಅನಂತಗುಣಗಳುಳ್ಳವನಿದ್ದಾನೆ. ಅದರಲ್ಲಿ ಆತ್ಮನು ಓರ್ವ ಮತ್ತು ಗುಣಗಳು ಅನಂತವೆಂದು ಭೇದವಾದರೂ ಕೂಡ ಮನುಷ್ಯ ಮತ್ತು ಹಸುವೆಂಬ ಭೇದವಿಲ್ಲ. ಆತ್ಮ ಮತ್ತು ಗುಣಗಳಲ್ಲಿ ವಸ್ತು ಭೇದದಿಂದ ಭೇದವಿಲ್ಲ ಆತ್ಮನನ್ನು ಅನಂತಗುಣಗಳುಳ್ಳವನೆಂದು ಹೇಳುವಲ್ಲಿ ಎರಡೂ ವಸ್ತುಗಳು ಬೇರೆಯಿಲ್ಲ. ಆದರೆ ಆತ್ಮನನ್ನು ಅನಂತಗುಣವುಳ್ಳವನೆಂದು ಹೇಳುವಲ್ಲಿ ವಸ್ತುಭೇದವಿಲ್ಲ. ಅನಂತಗುಣಪರ್ಯಾಯಗಳ ಜತೆಯಲ್ಲಿ ಆತ್ಮನು ಏಕಾಕಾರನಿದ್ದಾನೆ.

ನೀನು ಜೀವಾಸ್ತಿಕಾಯನಿರುವೆ, ಈ ಶರೀರದ ಕಾಯವು ನಿನ್ನ ಕಾಯವಿಲ್ಲ. ಅಸಂಖ್ಯಪ್ರದೇಶಿತನವು ಅದು ನಿನ್ನ ಕಾಯವಿದೆ. ಅದರಲ್ಲಿ ನಿನ್ನ ಗುಣ-ಪರ್ಯಾಯಗಳು ಉಳಿದುಕೊಂಡಿವೆ. ಆತ್ಮನು ಒಬ್ಬ ಮತ್ತು ಅವನಿಗೆ ಅಸಂಖ್ಯ ಪ್ರದೇಶಗಳು, ಆತ್ಮನು ಒಬ್ಬ ಮತ್ತು ಅನಂತಗುಣಗಳು, ಆತ್ಮನು ಒಬ್ಬ ಮತ್ತು ಅನಂತ ಪರ್ಯಾಯಗಳು ಆತ್ಮನು ಒಬ್ಬ ಮತ್ತು ಅವನ ಜ್ಞಾನ-ದಶೆಗಳೆಂದು ಬೇದಗಳಾಗುತ್ತವೆ. ಗುಣ-ಗುಣಿಯೆಂಬ ಭೇದವಾದರೂ ಪರಪದಾರ್ಥಗಳ ಜತೆಯಂಥ ಭೇದವಿಲ್ಲ ಗುಣ-ಗುಣಿಗಳು ಏಕಾಕಾರವಿವೆ. ಹೀಗೆ ಪರದಿಂದ ಭೇದಜ್ಞಾನ ಮಾಡಿಸಿದೆ ಮತ್ತು ತನ್ನಲ್ಲಿ ಗುಣ-ಗುಣಿಯ ಅಭೇದತೆ ಮಾಡಿಸಲಾಗಿದೆ.

ಈ ಜೀವನು ಇಷ್ಟು ಜೀವಗಳ ದಯೆ ಪಾಲಿಸಿದ್ದಾನೆಂದು ಹೇಳುವಲ್ಲಿ ಜೀವನು ಪರದದಯೆಪಾಲಿಸುವ ಸಾಧ್ಯತೆಯಿಲ್ಲ ಆದರೆ ಪರದ ಸಂಬಂಧ ತಿಳಿಸಲು ಹೇಳಿದೆ. ಈ ಜೀವನು ಇಷ್ಟು ಹಣ ಉಪಯೋಗಿಸಿದನು. ಇಲ್ಲಿ ಈ ಜೀವ ಹಣ ಉಪಯೋಗಿಸುವ ಸಾಧ್ಯತೆಯಿಲ್ಲ, ಆದರೆ ನಿಮಿತ್ತದ ಕಥನವಿದೆಯೆಂದು ತಿಳಿಯಬೇಕು. ಆತ್ಮನು ತನ್ನ ಜ್ಞಾನ-ದರ್ಶನರೂಪದ ಮೂಲದಲ್ಲಿ ಏಕಾಗ್ರನಾಗಿ ನಿರ್ಮಲಪರ್ಯಾಯ ಹೊರಡಿಸಿದನು, ಆತ್ಮನು ತನ್ನ ಜ್ಞಾನಗುಣದ ವ್ಯಾಪಾರ ಮಾಡಿದನು, ಆತ್ಮ ಮತ್ತು ಜ್ಞಾನಗುಣವೆಂದು ಭೇದವಾದರೂ ಕೂಡ ಆ ವ್ಯಾಪಾರವು ಅಸಂಖ್ಯಪ್ರದೇಶದಲ್ಲಿ ಆಗುತ್ತಲಿದೆ. ಆತ್ಮನು ರತ್ನದ ವ್ಯಾಪಾರ ಮಾಡುವುದು ಅಸತ್ಯವಿದೆ, ಆದರೆ ತನ್ನ ಅಸಂಖ್ಯಪ್ರದೇಶದಲ್ಲಿ ರಾಗದ ವ್ಯಾಪಾರ ಮಾಡಿದನೆಂಬುದು ಸರಿಯಿದೆ.

ಸಕ್ಕರೆಯಲ್ಲಿ ಬಿಳಿಯತನ, ಸಿಹಿಯತನದಂಥ ಗುಣಗಳ ಭೇದವಾಗುತ್ತಿದ್ದರೂ ಕೂಡ ಅವು ಭಿನ್ನವಾಗುವುದಿಲ್ಲ. ಅದರಂತೆ ಆತ್ಮನಲ್ಲಿ ಜ್ಞಾನ-ದರ್ಶನ ಮೊದಲಾದ ಗುಣಗಳು ಭಿನ್ನವಾಗುವುದಿಲ್ಲ.

ಆತ್ಮನನ್ನು ಎಂಟು ಕರ್ಮ ಹಾಗೂ ಅವುಗಳ ೧೪೮ ಪ್ರಕೃತಿಗಳು ಅಂಟಿಕೊಂಡಿವೆಯಲ್ಲವೇನು ?- ಎಂದು ಕೆಲವರು ಕೇಳುತ್ತಾರೆ ಆದರೆ ಕರ್ಮಗಳು ಅಂಟಿಕೊಂಡಿಲ್ಲ. ಕರ್ಮ ಬೇರೆ ಮತ್ತು ಆತ್ಮ ಬೇರೆ ಇದ್ದಾನೆ. ಆತ್ಮನನ್ನಂತೂ

ಅನಂತಗುಣಗಳು ಅಂಟಿಕೊಂಡಿವೆಯೆಂಬುದು ನಿಜವಿದೆ. ಆತ್ಮ ಮತ್ತು ಅವನ ಜ್ಞಾನ-ದರ್ಶನ ಮೊದಲಾದ ಅನಂತಗುಣಗಳು ಮತ್ತು ಅವನ ಅನಂತಪರ್ಯಾಯಗಳೆಂದು ಸಂಖ್ಯಾಭೇದವಿದೆ, ಆದರೆ ವಸ್ತು ಭೇದವಿಲ್ಲ. ಹೀಗೆ ಪರದಿಂದ ಭಿನ್ನತೆ ಮತ್ತು ಗುಣದಿಂದ ಅಭೇದತೆಯನ್ನು ಮಾಡಿಸಿದೆ. ಇಂಥ ಜ್ಞಾನವಿಲ್ಲದೆ ರಾಗವನ್ನು ಮಂದ ಮಾಡಿದರೆ ಪುಣ್ಯವಾಗುವುದು, ಆದರೆ ಧರ್ಮವಾಗುವುದಿಲ್ಲ. ಶರೀರ, ಕರ್ಮ ಮೊದಲಾದುವಿಂದ ಭೇದಜ್ಞಾನ ಮಾಡಿ, ಗುಣ ಮತ್ತು ಪರ್ಯಾಯದಜತೆ ಸಂಖ್ಯಾಭೇದವಾದರೂ ನೀನು ಅವುಗಳ ಜತೆ ಅಭೇದ ಏಕಾಕಾರನಿರುವೆಯೆಂದು ಜ್ಞಾನಮಾಡಿಕೊಳ್ಳುವುದು ಅದು ಧರ್ಮವಿದೆ.

**೪) ಆಧಾರ --** ''ಮತ್ತು ಹೇಗೆ ಗೋಕುಲದಲ್ಲಿ ಹಸುಗಳಿವೆಯೆಂದು ಹೇಳುವುದು ಇದು ಭೇದವಿಷಯವಿದೆ ಹಾಗೆಯೇ ವೃಕ್ಷದಲ್ಲಿ ಶಾಖೆಗಳು, ದ್ರವ್ಯದಲ್ಲಿ ಗುಣಗಳಿರುವುದು ಇದು ಅಭೇದ ವಿಷಯವಿದೆ.''

ಗೋಕುಲದಲ್ಲಿ ಹಸುಗಳಿವೆ, ವನದಲ್ಲಿ ಹಸುಗಳಿವೆ ಇದು ಭೇದದ ಕಥನವಿದೆ. ಹಸುಗಳು ಸತ್ತು ಹೋಗುವುದು ಮತ್ತು ಕ್ಷೇತ್ರವು ಬಿದ್ದಿರುವುದು, ಕಾನನದ ಆಧಾರದಿಂದ ಮನುಷ್ಯನಿರುವುದು ಇದು ಭೇದದ ಕಥನವಿದೆ, ಕಾನನವು ನಾಶವಾಗಿ ಮನುಷ್ಯನು ಜೀವಂತನಿರುವನು. ಆತ್ಮನ ಆಧಾರದಿಂದ ಶರೀರ, ಶರೀರದ ಆಧಾರದಿಂದ ಧರ್ಮ, ಗುರುಗಳ ಆಧಾರದಿಂದ ಧರ್ಮ ಈ ಎಲ್ಲ ಕಥನವು ನಿಮಿತ್ತದ್ದಿದೆ, ಅವು ಪರಪದಾರ್ಥಗಳಿವೆ. ಅವಕ್ಕೆ ಒಂದು ಇನ್ನೊಂದರ ಆಧಾರವಿಲ್ಲ. ಕರ್ಮದ ಆಧಾರದಿಂದ ವಿಕಾರವೆನ್ನುವುದು ಅದು ನಿಮಿತ್ತದ ಕಥನವಿದೆ ; ವಿಕಾರವು ಭಿನ್ನವಸ್ತುವಿದೆ ಮತ್ತು ಕರ್ಮವು ಭಿನ್ನವಸ್ತುವಿದೆ, ಒಂದು ಇನ್ನೊಂದಕ್ಕೆ ಆಧಾರವಾಗಿಲ್ಲ.

ವೃಕ್ಷದ ಆಧಾರದಿಂದ ಶಾಖೆಯೆಂದು ಹೇಳುವುದು ಅದು ಅಭೇದಕಥನವಿದೆ. ವೃಕ್ಷ ಮತ್ತು ಶಾಖೆಯೆಂದು ಹೆಸರು ಬೇರೆಯಿದ್ದರೂ ವಸ್ತು ಒಂದಿದೆ. ಅದರಂತೆ ಆತ್ಮನ ಆಧಾರದಿಂದ ಅನಂತಗುಣಗಳು ಇವೆ, ಆತ್ಮನ ಆಧಾರದಿಂದ ಧರ್ಮ, ಅದರಲ್ಲಿ ಆತ್ಮ ಮತ್ತು ಗುಣಗಳು, ಆತ್ಮ ಮತ್ತು ಧರ್ಮವೆಂದು ಭೇದವಾಗುತ್ತಿದ್ದರೂ ಕೂಡ ವಸ್ತುವಿನಲ್ಲಿ ಭೇದವಿಲ್ಲ. ಆತ್ಮನ ಆಧಾರದಿಂದ ವಿಕಾರವಂತೂ ಅದು ಸರಿಯಿದೆ, ಏಕೆಂದರೆ ಕರ್ಮ ಹಾಗೂ ಪರದ ಕಾರಣದಿಂದ ವಿಕಾರವಿಲ್ಲ. ಆದರೆ ನೀನು ಮಾಡಿದರೆ ಆಗುತ್ತದೆಂದು ಇಲ್ಲಿ ಜೀವಾಸ್ತಿಕಾಯದ ಸ್ವರೂಪ ತಿಳಿಸುವುದಿದೆ. ಆತ್ಮನು ತನ್ನ ದ್ರವ್ಯ-ಗುಣ ಹಾಗೂ ವಿಕಾರೀ ಅಥವಾ ಅವಿಕಾರೀಪರ್ಯಾಯ ಸಹ ಅಸಂಖ್ಯಪ್ರದೇಶದಲ್ಲಿದ್ದಾನೆ. ಅವುಗಳಲ್ಲಿ ಪ್ರದೇಶಭೇದವಿಲ್ಲ.

ನಿನಗೆ ಪರಪದಾರ್ಥಗಳ ಆಧಾರವಿಲ್ಲ, ನಿನ್ನ ಗುಣಗಳು ನಿನ್ನ ಆಧಾರದಿಂದಿವೆಯೆಂದು ನಿಶ್ಚಯ ಮಾಡು. ಹೀಗೆ ಗುಣ-ಗುಣಿಯ ಏಕತೆ ಮಾಡಿದರೆ ಧರ್ಮವಾಗುವಂತಿದೆ. ಆತ್ಮನ ಯಥಾರ್ಥ ಜ್ಞಾನವಿಲ್ಲದೆ ತ್ಯಾಗಿಯಾಗುವುದು, ಪಂಚಮಹಾವ್ರತ ಪಾಲಿಸುವುದು, ಶುಕ್ಲಲೇಶ್ಯೆಯ ಪರಿಣಾಮ ಮಾಡುವುದು, ಶರೀರವನ್ನು ತುಂಡು-ತುಂಡು ಮಾಡಿದರೂ ಕ್ರೋಧ ಮಾಡದಿದ್ದರೂ ಆತ್ಮನ ಅರಿವಿಲ್ಲದೆ ಪರದಿಂದ ಧರ್ಮ ಮನ್ನಿಸಿ ಸಂಸಾರದಲ್ಲಿ ಸಿಲುಕಿಕೊಂಡಿದೆ. ಏಕೆಂದರೆ ದೇವ-ಗುರು ಶಾಸ್ತ್ರದ ಸ್ವರೂಪದಲ್ಲಿ ಅಪರಾಧ ಮಾಡಿದೆ. ಏಕೆಂದರೆ ಅವನ್ನು ತಿಳಿದುಕೊಳ್ಳುವಲ್ಲಿ ಅಪರಾಧ ಮಾಡಿದೆ, ಮತ್ತು ಪರದಿಂದ ಲಾಭ-ಹಾನಿಯನ್ನು ಮನ್ನಿಸಿ ಸಿಲುಕಿಕೊಂಡಿದೆ. ಬೇಕಾದಷ್ಟು ಬಾಹ್ಯಕ್ರಿಯೆಗಳನ್ನು ಮಾಡಿದರೂ ಧರ್ಮವಾಗುವುದಿಲ್ಲ.

ಅಜ್ಞಾನೀ ಜೀವನು ಹಣದಿಂದ ದೇವ-ಗುರುಗಳಿಂದ, ಶರೀರದಿಂದ ಧರ್ಮವಾಗುತ್ತದೆಂದು ಮನ್ನಿಸಿ ಕೊಂಡಿದ್ದಾನೆ, ಪರದ ಕಾರಣದಿಂದ ನಾನು ಮತ್ತು ನನ್ನ ಕಾರಣದಿಂದ ಪರವೆಂದು ಮನ್ನಿಸಿಕೊಂಡಿದ್ದಾನೆ. ಕರ್ಮದ ಕಾರಣದಿಂದ ವಿಕಾರವಾಗುತ್ತವೆಂದು ಮನ್ನಿಸಿ ಕುಳಿತಿದ್ದಾನೆ. ಇದೇ ಅಜ್ಞಾನಭಾವವಿದೆ. ಕರ್ಮದ ಆಧಾರದಿಂದ ವಿಕಾರವಾಗುವುದಿಲ್ಲ, ನಿನ್ನ ಅಪರಾಧದ ಆಧಾರದಿಂದ ವಿಕಾರವಾಗುತ್ತದೆಯೆಂದು ಜ್ಞಾನ ಮಾಡಿಕೊಳ್ಳಬೇಕಾಗುವುದು.

ರೊಟ್ಟಿಯಿಲ್ಲದೆ ನಡೆಯುತ್ತದೆ ಆದರೆ ಮನೆಯಿಲ್ಲದೆ ನಡೆಯುತ್ತದೇನು ? ಸೋದರನೇ ! ನಿನ್ನ ಮನೆಯು

ನಿನ್ನಲ್ಲಿದೆ, ನಿನ್ನ ಆಶ್ರಯವು ನಿನ್ನಲ್ಲಿದೆ. ಮತ್ತು ಅಜ್ಞಾನೀ ಜೀವನು ಹಣ ಹಾಗೂ ಧಾನ್ಯದ ಆಧಾರದಿಂದ ಜೀವವಿದೆಯೆಂದು ಮನ್ನಿಸಿದ್ದಾನೆ, ಅದು ಭ್ರಾಂತಿಯಿದೆ. ಇನ್ನು ಶರೀರ ಹಾಗೂ ಪ್ರಾಣದ ಆಧಾರದಿಂದ ಧರ್ಮವಿಲ್ಲ. ಕೇವಲಜ್ಞಾನವು ಮಹಾವಿದೇಹಕ್ಷೇತ್ರದ ಆಧಾರದಿಂದ ಇಲ್ಲ, ಆದರೆ ಆತ್ಮನ ಆಧಾರದಿಂದ ಇದೆ. ಆತ್ಮನು ಶುದ್ಧ ಚಿದಾನಂದಮೂರ್ತಿಯಿದ್ದಾನೆ. ಅವನ ಶ್ರದ್ಧೆ, ಜ್ಞಾನ ಮತ್ತು ಲೀನತೆ ಮಾಡಿದರೆ ಕೇವಲಜ್ಞಾನವಾಗುವುದು. ವಿಕಾರ ಮಾಡಿದರೂ ಕೂಡ ತನ್ನ ಆತ್ಮನ ಆಶ್ರಯದಿಂದ ಆಗುತ್ತದೆ. ಇಲ್ಲಿ ಅಸ್ತಿಕಾಯಸಿದ್ಧ ಮಾಡುವುದಿದೆ. ವಿಕಾರ ಮಾಡಿದರೂ ಕೂಡ ತನ್ನ ಕಾರಣದಿಂದ ಮತ್ತು ಧರ್ಮ ಮಾಡಿದರೂ ಕೂಡ ತನ್ನ ಕಾರಣದಿಂದೆಂದು ಮನ್ನಿಸಬೇಕಾಗುವುದು. ಪರದ ಕಾರಣದಿಂದ ವಿಕಾರ ಅಥವಾ ಪರದ ಕಾರಣದಿಂದ ಧರ್ಮ ಮನ್ನಿಸುವುದು ಅದು ಮಿಥ್ಯಾಭಾವವಿದೆ. ತನ್ನಿಂದ ಆಗುತ್ತದೆಂದು ಮನ್ನಿಸಿದರೆ ಪರದಿಂದ ಬಿಡುಗಡೆಯಾಗುವುದು ಮತ್ತು ವಿಕಾರವಾಗುತ್ತಿರುವುದು ಅದು ನನ್ನ ಅಶಕ್ತತೆಯಿಂದ ನನ್ನ ಪರ್ಯಾಯದಲ್ಲಿ ಒಂದು ಸಮಯಮಾತ್ರ ಆಗುತ್ತದೆ ಮತ್ತು ನಾನು ತ್ರಿಕಾಲನಿದ್ದೇನೆ. ಅಂಶವನ್ನು ಅಂಶದಷ್ಟು ತಿಳಿದರೆ ಮತ್ತು ಅಂಶಿಯನ್ನು ಅಂಶಿಯಷ್ಟು ತಿಳಿದರೆ ಮತ್ತು ಸ್ವಭಾವದ ಕಡೆಗೆ ಪ್ರವೃತ್ತಿ ಮಾಡಿದರೆ ಪ್ರಮಾಣ ಜ್ಞಾನವಾಗುವುದು.

೧) ಜೀವವು ಅಸ್ತಿಕಾಯವಿದ್ದು ಪರದಿಂದ ಭಿನ್ನವಿದೆ. ಈ ಪುರುಷನದು ಈ ಹಸುವಿದೆ ಇದು ಸರ್ವಥಾ ಭೇದವಿದೆ. ಮತ್ತು ಪೃಥಕ್ ವ್ಯವಹಾರದ ಕಥನವಿದೆ. ಆತ್ಮನ ಜ್ಞಾನಗುಣ ಮತ್ತು ಪರ್ಯಾಯದಲ್ಲಿ ಕಥನ, ಸಂಖ್ಯೆ, ಲಕ್ಷಣ ಭೇದದಿಂದ ಭೇದವಾದರೂ ಕೂಡ ಪ್ರದೇಶಭೇದವಿಲ್ಲ. ಜ್ಞಾನಸಮಯವು ಈ ಪ್ರಕಾರವಾಗಿ ತಿಳಿಯುತ್ತದೆ ಮತ್ತು ಶಬ್ದಸಮಯವು ಹಾಗೆ ಹೇಳುತ್ತದೆ.

೨) ಹಸುವಿನ ಆಕಾರವು ಬೇರೆ ಮತ್ತು ಮನುಷ್ಯನ ಆಕಾರವು ಬೇರೆಯಿದ್ದರೂ ದೊಡ್ಡ ಮನುಷ್ಯನ ದೊಡ್ಡ ಹಸುವೆಂದು ಹೇಳುವುದು ಅದು ವ್ಯವಹಾರದ ಕಥನವಿದೆ. ಆತ್ಮನ ಜ್ಞಾನಗುಣದ ಆಕಾರವು ಆತ್ಮನಷ್ಟು, ಆತ್ಮನ ಆಕಾರವು ಆತ್ಮನ ಪರ್ಯಾಯದಷ್ಟು ವಿಕಾರದ ಆಕಾರವು ಆತ್ಮನಷ್ಟು, ಅದು ಏಕತ್ವ ವ್ಯವಹಾರವಿದೆ, ಅದರಲ್ಲಿ ಪ್ರದೇಶಭೇದವಿಲ್ಲ. ವಿಕಾರದ ಆಕಾರವೆಷ್ಟು ? ಶರೀರದಷ್ಟಲ್ಲವೇ ? ಇಲ್ಲ. ತನ್ನ ಆತ್ಮನ ಅಸಂಖ್ಯಪ್ರದೇಶದಷ್ಟೆಂದು ಭೇದಜ್ಞಾನ ಮಾಡಿಸುವ ಸಲುವಾಗಿ ಕಥನ ಮಾಡಲಾಗಿದೆ. ಜೀವದ ಸಂಸ್ಥಾನವು ಶರೀರದಿಂದ ಭಿನ್ನವಿದೆಯೆಂದು ಭೇದಜ್ಞಾನ ಮಾಡಿಸಿದೆ. ಗುಣ-ಪರ್ಯಾಯದ ಆಕಾರವು ದ್ರವ್ಯದೃಷ್ಟಿದೆ. ದ್ರವ್ಯ-ಗುಣ-ಪರ್ಯಾಯವೆಂದು ಮೂರರಲ್ಲಿ ನಾಮಭೇದವಾಗುತ್ತಿದ್ದರೂ ಪ್ರದೇಶಭೇದವಿಲ್ಲ, ಮತ್ತು ಪರ್ಯಾಯವು ವಿಕಾರೀ ಅಥವಾ ಅವಿಕಾರಿಯೆಂದು ಒಂದು ಸಮಯದ್ದಿದೆ ಮತ್ತು ದ್ರವ್ಯ-ಗುಣಗಳು ತ್ರಿಕಾಲವಿವೆಯೆಂದು ಕಾಲಭೇದವಿದ್ದರೂ ಕೂಡ ಪ್ರದೇಶಭೇದವಿಲ್ಲ. ಆದುದರಿಂದ ಇದನ್ನು ಸಂಸ್ಥಾನ ಅಭೇದ ವ್ಯಪದೇಶವೆಂದು ಹೇಳುವುದರಲ್ಲಿ ಬಂದಿದೆ.

ಅಮೂರ್ತದ್ರವ್ಯದ ಗುಣ-ಪರ್ಯಾಯಗಳು ಅಮೂರ್ತವಿವೆ, ವಿಕಾರವು ಕೂಡ ಅಮೂರ್ತವಿದೆ. ಅಮೂರ್ತದ ಆಕಾರವು ಅಮೂರ್ತವಿದೆ, ಆತ್ಮನ ಆಕಾರವು ಅನಂತಪ್ರದೇಶಿಯಿದ್ದರೂ ಕೂಡ ಅದನ್ನು ಶರೀರ ಪ್ರಮಾಣವೆಂದು ಹೇಳುವುದು ಅಥವಾ ಆತ್ಮನ ಪ್ರಮಾಣದಿಂದ ಕರ್ಮದ ಆಕಾರವೆಂದು ಹೇಳುವುದು ಅದು ಪೃಥಕ್ ವ್ಯವಹಾರದ ಕಥನವಿದೆ.

ಶರೀರ, ಕರ್ಮಗಳು ಮೂರ್ತದ್ರವ್ಯವಿವೆ, ಅವುಗಳ ಗುಣಗಳು ಮೂರ್ತವಿವೆ ಮತ್ತು ಅವುಗಳ ವಿಕಾರ ಎಂದರೆ ಸ್ಕಂಧರೂಪದ ಅವಸ್ಥೆ ಕೂಡ ಮೂರ್ತವಿದೆ. ಇದು ಪುದ್ಗಲದಲ್ಲಿ ಅಭೇದ ಏಕತ್ವ ವ್ಯವಹಾರ ಕಥನವಿದೆ.

ಯಾವ ಶಬ್ದವು ಪದಾರ್ಥವನ್ನು ರಾಗ-ದ್ವೇಷ ರಹಿತತೆಯಿಂದ ತಿಳಿಸುವುದು ಅದು ಶಬ್ದಸಮಯವಿದೆ. ಆ ಶಬ್ದಸಮಯದ ಯಥಾರ್ಥ ಜ್ಞಾನ ಮಾಡುವುದು ಅದು ಜ್ಞಾನಸಮಯವಿದೆ ಮತ್ತು ಜ್ಞಾನದಲ್ಲಿ ಆ ಜ್ಞೇಯವನ್ನು ಯಥಾರ್ಥರೀತಿಯಿಂದ ತಿಳಿಯುವುದು ಅದು ಜ್ಞೇಯ ಅರ್ಥಸಮಯವಿದೆ.

ಸಮಯಸಾರದೊಳಗೆ ದೃಷ್ಟಿಪ್ರಧಾನವಾದ ಕಥನದಲ್ಲಿ ಜೀವಸ್ಥಾನ, ಗುಣಸ್ಥಾನ, ವಿಕಾರ ಮೊದಲಾದ ಪರಿಣಾಮಗಳಿಗೆ ಶುದ್ಧ ಚೈತನ್ಯದೃಷ್ಟಿ ಮಾಡಿಸುವ ಮತ್ತು ರಾಗದ ಮೇಲಿನ ದೃಷ್ಟಿಯನ್ನು ಬಿಡಿಸುವ ಅಶಕ್ತತೆಯು ಪರದ ಆಶ್ರಯದಿಂದ ಆಗುತ್ತದೆ, ಆದುದರಿಂದ ಪುದ್ಗಲದಪರಿಣಾಮವೆಂದು ಹೇಳುವುದರಲ್ಲಿ ಬಂದಿದೆ. ಆದರೆ ಇಲ್ಲಿ ಜ್ಞಾನ ಪ್ರಧಾನ ಕಥನವಿದೆ. ಇಲ್ಲಿ ದ್ರವ್ಯ-ಗುಣ-ಪರ್ಯಾಯಗಳೆಂದು ಮೂರಾಗಿ ಪೂರ್ಣ ಅಸ್ತಿಕಾಯದ ಜ್ಞಾನ ಮಾಡಿಸುವುದಿದೆ. ವಿಕಾರೀ ಅಥವಾ ಅವಿಕಾರೀ ಪರ್ಯಾಯದ ಆಕಾರವು ಅಸಂಖ್ಯ ಪ್ರದೇಶಗಳಷ್ಟಿದೆ, ದ್ರವ್ಯ-ಗುಣಗಳು ಎಷ್ಟಿವೆ ಅಷ್ಟು ಇದೆ. ಇದು ಅಭೇದ ಸಂಸ್ಥಾನವಿದೆಯೆಂದು ಇದನ್ನು ಶಬ್ದಸಮಯವೆಂದು ಹೇಳಿದೆ.

೩) ಆತ್ಮನಿಗೆ ಮೂರು ಶರೀರವೆಂದು ಹೇಳುವುದು ಅದು ಪೃಥಕ್ ವ್ಯವಹಾರದ ಕಥನವಿದೆ. ಶರೀರ ಮತ್ತು ಆತ್ಮನ ಅಸ್ತಿಕಾಯವು ಬೇರೆಯಿವೆ. ಭಿನ್ನಪದಾರ್ಥಗಳಿದ್ದರೂ ಕೂಡ ಒಂದು ಇನ್ನೊಂದರದೆಂದು ಹೇಳುವುದು ಅದು ಸಮೀಪ ಉಪಸ್ಥಿತವಿರುವ ವಸ್ತುವಿನ ಜ್ಞಾನ ಮಾಡಿಸುವುದಕ್ಕಾಗಿ ಇದೆ. ಆತ್ಮನಿಗೆ ಅನಂತಗುಣ ಮತ್ತು ಅನಂತಪರ್ಯಾಯಗಳಿದ್ದು ಅದರಲ್ಲಿ ಆತ್ಮನ ಸಂಖ್ಯೆ ಒಂದು ಮತ್ತು ಗುಣ-ಪರ್ಯಾಯಗಳ ಸಂಖ್ಯೆ-ಅನಂತವೆಂದು ಸಂಖ್ಯಾಭೇದವಾದರೂ ಪ್ರದೇಶಭೇದವಿಲ್ಲ - ಆತ್ಮನ ಪ್ರದೇಶ ಬೇರೆ ಮತ್ತು ಗುಣ-ಪರ್ಯಾಯಗಳ ಪ್ರದೇಶ ಬೇರೆಯೆಂಬುದಾಗಿ ಇಲ್ಲವೇ ಇಲ್ಲ.

ಇದು ಪಂಚಾಸ್ತಿಕಾಯದ ವರ್ಣನೆಯಿದೆ. ಪಂಚಾಸ್ತಿಕಾಯ ಶಬ್ದ, ಅರ್ಥ ಮತ್ತು ಜ್ಞಾನ ಈ ಮೂರರ ವರ್ಣನೆ ನಡೆಯುತ್ತಿದೆ ಯಾವ ಜ್ಞಾನವು ಪರದಿಂದ ಭೇದಜ್ಞಾನಮಾಡಿಸುವುದು ಮತ್ತು ತನ್ನ ಅಸ್ತಿಕಾಯದಲ್ಲಿ ಹೇಗಿದೆ ಹಾಗೆ ಜ್ಞಾನ ಮಾಡಿಸುವುದು ಅದು ಯಥಾರ್ಥ ಜ್ಞಾನವಿದೆ. ಆತ್ಮನ ಹೊರತಾಗಿ ಅನಂತದ್ರವ್ಯಗಳಿದ್ದರೂ ಆತ್ಮನಿಂದ ಭಿನ್ನವಿವೆ. ಅವುಗಳೊಡನೆ ಅಭಾವರೂಪದ ಸಂಬಂಧವಿದೆಯೆಂದು ಭೇದಜ್ಞಾನ ಮಾಡುವುದು ಅದು ಧರ್ಮವಿದೆ, ತ್ರಿಕಾಲೀ ದ್ರವ್ಯಗುಣಗಳು, ವಿಕಾರೀ ಅಥವಾ ಅವಿಕಾರೀ ಪರ್ಯಾಯಗಳಲ್ಲಿ ದ್ರವ್ಯ ಮತ್ತು ಗುಣ-ಪರ್ಯಾಯಗಳಲ್ಲಿ ಸಂಖ್ಯಾಭೇದವಿದ್ದರೂ ಪ್ರದೇಶಭೇದವಿಲ್ಲ , ಆದುದರಿಂದ ಏಕತ್ವವ್ಯವಹಾರವಿದೆ.

೪) ಆತ್ಮನ ಆಧಾರದಿಂದ ಶರೀರ, ಆತ್ಮನ ಆಧಾರದಿಂದ ಕರ್ಮ ಅದು ಪೃಥಕ್ ವ್ಯವಹಾರದ ಕಥನವಿದೆ. ಶರೀರ, ಕರ್ಮಗಳು ಆತ್ಮನ ಅಸಂಖ್ಯ ಪ್ರದೇಶಗಳಲ್ಲಿ ಇಲ್ಲ. ಇಲ್ಲಿ ವಿಷಯದ ಅರ್ಥವು ಆಧಾರವಿದೆ. ಒಂದು ಅಸ್ತಿಕಾಯಕ್ಕೆ ಇನ್ನೊಂದು ಅಸ್ತಿಕಾಯದ ಆಧಾರವೆಂದು ಹೇಳುವುದು ಅದು ಪೃಥಕ್ ವ್ಯವಹಾರವಿದೆ. ಹೇಗೆಂದರೆ ಗೋಕುಲದ ಆಧಾರದಿಂದ ಹಸು, ಕರ್ಮದ ಆಧಾರದಿಂದ ವಿಕಾರ, ಶರೀರದ ಆಧಾರದಿಂದ ಆತ್ಮನೆಂದು ಹೇಳುವುದು ಅದು ಪೃಥಕ್ ವ್ಯವಹಾರವಿದೆ.

ವೃಕ್ಷದ ಆಧಾರದಿಂದ ಶಾಖೆಯೆಂದು ಹೇಳುವುದು ಅದು ಪೃಥಕ್ ವ್ಯವಹಾರವಲ್ಲ , ಆದರೆ ಏಕತ್ವ ವ್ಯವಹಾರವಿದೆ. ಅದರಂತೆ ಆತ್ಮನ ಆಧಾರದಿಂದ ಗುಣಗಳು ಹಾಗೂ ಪರ್ಯಾಯಗಳೆಂದು ಹೇಳುವುದು ಅದು ಏಕತ್ವವ್ಯವಹಾರವಿದೆ, ಅದು ಒಂದು ಅಸ್ತಿಕಾಯದಲ್ಲಿ ಬರುತ್ತದೆ. ಆತ್ಮನ ಆಧಾರದಿಂದ ವಿಕಾರವು ಅದು ಸ್ವಅಸ್ತಿಕಾಯದಲ್ಲಿ ಬರುತ್ತದೆ. ಇಲ್ಲಿ ಜ್ಞಾನಪ್ರಧಾನವಾದ ಕಥನದಲ್ಲಿ ವಿಕಾರವು ತನ್ನಲ್ಲಿ ತನ್ನಿಂದ ಆಗುತ್ತದೆ, ಆದರೆ ಪರದ ಕಾರಣದಿಂದ ಆಗುವುದಿಲ್ಲವೆಂಬುದನ್ನು ತಿಳಿಸಿಕೊಡಲಾಗಿದೆ.

''ವ್ಯಪದೇಶ, ಸಂಸ್ಥಾನ, ಸಂಖ್ಯೆ, ವಿಷಯ ಈ ನಾಲ್ಕು ಪ್ರಕಾರದ ಭೇದಗಳನ್ನು ದ್ರವ್ಯ-ಗುಣದಲ್ಲಿ ಅಭೇದರೂಪದಿಂದ ತಿಳಿಸಲಾಗುತ್ತದೆ, ಅನ್ಯದ್ರವ್ಯದಿಂದ ಭೇದಮಾಡಿ ತಿಳಿಸಲಾಗುತ್ತದೆ. ಒಂದುವೇಳೆ ದ್ರವ್ಯ-ಗುಣದಲ್ಲಿ ವ್ಯಪದೇಶಾದಿಗಳನ್ನು ಹೇಳಲಾಗುತ್ತಿದ್ದರೂ ವಸ್ತುವಿನ ವಿಚಾರದಲ್ಲಿ ಇಲ್ಲ.''

ಜ್ಞಾನ, ದರ್ಶನ ಮೊದಲಾದವು ಆತ್ಮನ ಗುಣಗಳಿವೆ. ಹೀಗೆ ಆತ್ಮ ಮತ್ತು ಗುಣವೆಂಬ ಭೇದಕಥನದಲ್ಲಿ

(ವ್ಯಪದೇಶದಲ್ಲಿ) ಸಂಭವಿಸುವುದು ಆತ್ಮನ ಆಕಾರವೇ ಗುಣ-ಪರ್ಯಾಯಗಳ ಆಕಾರವಿದೆಯೆಂಬ ಭೇದ ಸಂಭವಿಸುವುದು. ಆತ್ಮನು ಒಬ್ಬನಿದ್ದು ಗುಣಗಳು ಅನಂತವಿದೆಯೆಂಬ ಸಂಖ್ಯೆಯಲ್ಲಿ ಭೇದ ಸಂಭವಿಸುವುದು ಜ್ಞಾನ-ದರ್ಶನಾದಿಗಳು ಆತ್ಮನ ಆಧಾರದಿಂದಿವೆಯೆಂಬ (ವಿಷಯ) ಆಧಾರದಲ್ಲಿ ಭೇದವಾದರೂ ಕೂಡ ದ್ರವ್ಯ-ಗುಣ-ಪರ್ಯಾಯಗಳಿಗೆ ಪ್ರದೇಶಭೇದವಿಲ್ಲ. ಅದಕ್ಕಾಗಿ ಅಭೇದವಿದೆ ಒಂದು ಅಭೇದ ಅಸ್ತಿಕಾಯದಲ್ಲಿ ಭೇದವನ್ನು ತಿಳಿಸಿಕೊಡಲಾಗಿದೆ. ಇದು ಜ್ಞಾನಗುಣವಿದೆ, ಇದು ವಿಕಾರೀ ಪರ್ಯಾಯವಿದೆ, ಇದು ಅವಿಕಾರೀ ಪರ್ಯಾಯವಿದೆ, ಇದು ದ್ರವ್ಯವಿದೆ. ಹೀಗೆ ದ್ರವ್ಯ-ಗುಣ ಮತ್ತು ಪರ್ಯಾಯ ವಿಕಾರೀ ಅಥವಾ ಅವಿಕಾರಿಯೆಂದು ನಾಲ್ಕೂ ಸೇರಿ ಅಸ್ತಿಕಾಯವು ಪೂರ್ಣವಾಗುತ್ತದೆ ಮತ್ತು ಪರದ್ರವ್ಯ ಅದು ಭೇದರೂಪವಿದೆ. ಪರವನ್ನು ಪರರೂಪ ತಿಳಿಯುವುದು, ತನ್ನಲ್ಲಿ ಕೂಡ ಪರ್ಯಾಯದ ಅಂಶವನ್ನು ಪರ್ಯಾಯದಷ್ಟು ತಿಳಿಯುವುದು ಮತ್ತು ಅಂಶಿಯಷ್ಟು ಇಲ್ಲವೆಂದು ತಿಳಿಯುವುದು, ದ್ರವ್ಯವು-ಅಂಶಿಯು ತ್ರಿಕಾಲವಿದೆ ಅದನ್ನು ಅಂಶಿಯೆಂದು ತಿಳಿಯುವುದು, ಹೀಗೆ ಜ್ಞಾನಮಾಡಿ ಪರದ ಮೇಲಿಂದ ಮತ್ತು ಅಂಶದ ಮೇಲಿಂದ ದೃಷ್ಟಿ ತೆಗೆದು ಅಂಶಿಯದೃಷ್ಟಿ ಮಾಡಿದರೆ ಪ್ರಮಾಣಜ್ಞಾನವಾಗುವುದು.

ಈಗ ಭೇದ-ಅಭೇದ ಕಥನದ ಸ್ವರೂಪವನ್ನು ಮೂಲಗಾಥೆಯಲ್ಲಿ ತಿಳಿಸಿಕೊಡಲಾಗಿದೆ.

**ಣಾಣಂ ಧಣಂ ಚ ಕುವ್ವದಿ ಧಣಿಣಂ ಜಹ ಣಾಣಿಣಂ ಚ ದುವಿಧೇಹಿಂ ।**
**ಭಣ್ಣಂತಿ ತಹ ಪುಧತ್ತಂ ಏಯತ್ತಂ ಚಾವಿ ತಚ್ಚಣ್ಹೂ ॥೪೭॥**

**ಹೇಗೆ ಧನದಿಂದ 'ಧನಿಕ' ಜ್ಞಾನದಿಂದ 'ಜ್ಞಾನಿ'ಯೆಂಬೆರಡು ವ್ಯಪದೇಶವಿವೆ ।**
**ಹಾಗೆ ತತ್ತ್ವಜ್ಞರು ಪೃಥಕತ್ವ ಮತ್ತದರಂತೆ ಏಕತ್ವವನು ಹೇಳುವರು ॥೪೭॥**

''ಹೇಗೆ ದ್ರವ್ಯವು ಪುರುಷನನ್ನು ಧನವಂತ ಮಾಡುತ್ತದೆ ಎಂದರೆ ಧನವು ಬೇರೆಯಿದೆ ಪುರುಷನು ಬೇರೆಯಿದ್ದಾನೆ, ಆದರೆ ಧನದ ಸಂಬಂಧದಿಂದ ಪುರುಷನು ಧನಿ ಇಲ್ಲವೆ ಧನವಂತನೆಂಬ ಹೆಸರು ಪಡೆಯುತ್ತಾನೆ ಮತ್ತು ಯಾವ ಚೈತನ್ಯಗುಣವಿದೆ ಅದು ಆತ್ಮನನ್ನು 'ಜ್ಞಾನಿ'ಯೆಂಬ ಹೆಸರಿನಿಂದ ಕರೆಯುತ್ತದೆ ಜ್ಞಾನ ಮತ್ತು ಆತ್ಮನಲ್ಲಿ ಪ್ರದೇಶಭೇದರಹಿತವಾದ ಏಕತೆಯಿದೆ. ಆದರೆ ಗುಣ-ಗುಣಿಯ ಕಥನದ ಅಪೇಕ್ಷೆಯಿಂದ ಜ್ಞಾನಗುಣದ ಮುಖಾಂತರ ಆತ್ಮನು 'ಜ್ಞಾನಿ'ಯೆಂಬ ಹೆಸರನ್ನು ಧಾರಣ ಮಾಡುತ್ತಾನೆ.

ಧನದ ಸಂಬಂಧದಿಂದ ಪುರುಷನನ್ನು ಧನವಂತನೆಂದು ಹೇಳುತ್ತಾರೆ, ಆದರೆ ಧನ ಮತ್ತು ಪುರುಷನು ಬೇರೆಯಿದ್ದಾನೆ, ಎರಡೂ ಒಂದಾಗುವುದಿಲ್ಲ ಎರಡರ ಅಸ್ತಿಕಾಯಗಳು ಭಿನ್ನವಿವೆ. ಕರ್ಮದ ಕಾರಣದಿಂದ ಆತ್ಮನು ಕರ್ಮಿ, ಶರೀರದ ಕಾರಣದಿಂದ ಆತ್ಮನು ಶರೀರಿ, ಪ್ರಾಣದ ಕಾರಣದಿಂದ ಪ್ರಾಣವುಳ್ಳವನೆಂದು ಹೇಳಲಾಗುತ್ತದೆ, ಆದರೆ ಕರ್ಮ, ಶರೀರ ಮತ್ತು ಪ್ರಾಣದಿಂದ ಆತ್ಮನ ಅಸ್ತಿಕಾಯವು ಬೇರೆಯಿದೆ. ಎರಡರ ಮಧ್ಯದಲ್ಲಿ ಅಭಾವದ ದೊಡ್ಡ ವಜ್ರಶಿಲೆಯಿದೆ. ಒಂದರ ಕಾರಣದಿಂದ ಇನ್ನೊಂದಿಲ್ಲ. ಧನವು ಹೊರಟುಹೋಗುವುದು ಮತ್ತು ಪುರುಷನು ಉಳಿಯುವನು. ಪುರುಷನು ಹೋಗುವನು ಧನವು ಉಳಿಯುವುದು. ಕರ್ಮ ಮತ್ತು ಶರೀರವು ಭಿನ್ನವಾಗಿ ಹೋಗುವವು ಮತ್ತು ಸಿದ್ಧರ ಆತ್ಮನು ಬೇರೆ ಉಳಿಯುವನು. ಅವು ಒಂದು ಅಸ್ತಿಕಾಯವಿದ್ದರೆ ಭಿನ್ನವಾಗಬೇಕಾಗುವುದಿಲ್ಲ. ಆದ್ದರಿಂದ ಕರ್ಮದಿಂದ ಕರ್ಮಿ ಮೊದಲಾಗಿ ಹೇಳುವರೂಪದ ಕಥನವು ಅದು ವ್ಯವಹಾರದಿಂದ ಹೇಳಲಾಗುತ್ತದೆ. ನಿಜವಾಗಿ ಹಾಗೆ ಇಲ್ಲ ಏಕೆಂದರೆ ಅವೆಲ್ಲವು ಪರಪದಾರ್ಥಗಳಿವೆ- ಶರೀರ, ಕರ್ಮ ಮೊದಲಾದವುಗಳ ಪ್ರದೇಶ ಮತ್ತು ಆತ್ಮನ ಪ್ರದೇಶಗಳಲ್ಲಿ ಭಿನ್ನತೆಯಿದೆ.

ಚೈತನ್ಯಗುಣದಿಂದ ಆತ್ಮನನ್ನು ಜ್ಞಾನಿಯೆಂದು ಹೇಳಿದೆ. ಏಕೆಂದರೆ ಜ್ಞಾನದಲ್ಲಿ ಮತ್ತು ಆತ್ಮನಲ್ಲಿ ಪ್ರದೇಶಭೇದವಿಲ್ಲದ ಏಕತೆಯಿದೆ. ಜ್ಞಾನದ ಕಾರಣ ಜ್ಞಾನಿಯೆಂದು ಹೇಳಲಾಗುತ್ತದೆ. ಕೇವಲಜ್ಞಾನದ ಕಾರಣ ಕೇವಲಿ, ಧರ್ಮದ ಕಾರಣ

ಧರ್ಮಿ, ಸಮ್ಯಗ್ದರ್ಶನದಿಂದ ಸಮ್ಯಗ್ದೃಷ್ಟಿ, ಚಾರಿತ್ರದಿಂದ ಚಾರಿತ್ರವಂತನೆಂದು ಹೇಳಲಾಗುತ್ತದೆ. ಆದರೆ ಅವುಗಳ ಪ್ರದೇಶಗಳು ಬೇರೆಯಿಲ್ಲ. ಹಾಗೆ ಧನದಿಂದ ಧನವಂತನೆಂದು ಹೇಳುವುದು ಅಂಥ ಕಥನವಿಲ್ಲ. ಧನ ಮತ್ತು ಧನವಂತನು ಬೇರೆಯಿದ್ದಾನೆ ಹಾಗೆ ಚಾರಿತ್ರ ಮತ್ತು ಚಾರಿತ್ರವಂತನ ಪ್ರದೇಶಗಳು ಭಿನ್ನವಿಲ್ಲ. ವಿಕಾರವು ಒಂದೆಡೆಯಲ್ಲಿದೆ ಮತ್ತು ಆತ್ಮನು ಇನ್ನೊಂದೆಡೆಯಲ್ಲಿರುವನು ಹೀಗೆ ಆಗುವುದಿಲ್ಲ. ಧರ್ಮ ಒಂದೆಡೆ ಉಳಿಯುವುದು ಎಂದರೆ ಸಮ್ಮೇದಶಿಖರ ಮತ್ತು ಸ್ವಾಧ್ಯಾಯಮಂದಿರದಲ್ಲಿ ಉಳಿಯುವುದು ಮತ್ತು ಧರ್ಮೀ ಆತ್ಮನು ಬೇರೆಡೆ ಉಳಿಯುವುದು ಹೀಗೆ ಆಗುವುದಿಲ್ಲ. ಗುಣ-ಗುಣಿಯಲ್ಲಿ ಸಂಖ್ಯೆ, ನಾಮ, ಲಕ್ಷಣಭೇದದಿಂದ ಭೇದವಾದರೂ ಪ್ರದೇಶಭೇದದಿಂದ ಭೇದವಿಲ್ಲ. ದ್ರವ್ಯ-ಗುಣ-ಪರ್ಯಾಯ ಮೂರೂ ತನ್ನ ವ್ಯಾಪಕತನದಲ್ಲಿ ಇವೆ. ಜೀವ 'ಇದೆ'ಯೆಂದು ಹೇಳುವಲ್ಲಿ ಅಸ್ತಿ ಮತ್ತು ಅದರ ಅಸಂಖ್ಯಪ್ರದೇಶ ಅದು ಅದರ ಕಾಯವೆಂದು ಅಸ್ತಿಕಾಯವನ್ನು ಸಿದ್ಧಮಾಡಿದೆ. ಮತ್ತು ಅಸ್ತಿ ಎಂದರೆ ದ್ರವ್ಯ ಬಂತು, ಕಾಯ ಎಂದರೆ ಕ್ಷೇತ್ರ ಬಂತು, ಪರ್ಯಾಯವು ಅಸ್ತಿಕಾಯದಲ್ಲಿ ಬಂದುಬಿಟ್ಟಿತೆಂದು ಹೇಳಿದರೆ ಕಾಲವು ಬಂತು ಮತ್ತು ಗುಣಗಳು ಅಸ್ತಿಕಾಯದಲ್ಲಿವೆಯೆಂದು ಹೇಳಿದರೆ ಅದರ ಭಾವವು ಬಂದುಬಿಟ್ಟಿತು. ಹೀಗೆ ಅಸ್ತಿಕಾಯವನ್ನು ಸಿದ್ಧಮಾಡುವಾಗ ತನ್ನ ದ್ರವ್ಯ, ಕ್ಷೇತ್ರ, ಕಾಲ ಮತ್ತು ಭಾವವೆಂದು ನಾಲ್ಕೂ ಬಂದುಬಿಡುವವು ಇಲ್ಲಿ ಪಂಚಾಸ್ತಿಕಾಯದ ವರ್ಣನೆಯಿರುವುದರಿಂದ ಕಥನ ಪದ್ಧತಿಯಲ್ಲಿ ವ್ಯತ್ಯಾಸವಿದೆ.

ಇಲ್ಲಿ ಪಂಚಾಸ್ತಿಕಾಯದ ವರ್ಣನೆಯಿದೆ. ಜೀವದ ಮಮತೆಯ ಪರಿಣಾಮವು ಕೂಡ ಅಸಂಖ್ಯ ಪ್ರದೇಶದ ಆಕಾರದಿಂದಿದೆ, ಅದು ಪರದ ಕಾರಣದಿಂದ ಇಲ್ಲ. ಅದರಂತೆ ಧರ್ಮದ ಪರಿಣಾಮವು ಕೂಡ ತನ್ನಲ್ಲಿ ಇದೆ. ಶಬ್ದಸಮಯವು ಅದು ಪುದ್ಗಲಾಸ್ತಿಕಾಯವಿದೆ, ಜ್ಞಾನಸಮಯವು ಜೀವಾಸ್ತಿಕಾಯವಿದೆ, ಪದಾರ್ಥಸಮಯವು ದ್ರವ್ಯ-ಗುಣ-ಪರ್ಯಾಯ, ಸಂಸಾರಪರ್ಯಾಯಗಳೆಲ್ಲವು ಪದಾರ್ಥಸಮಯವಿವೆ. ಶಬ್ದಸಮಯದಿಂದ ಜ್ಞಾನವಾಗುವುದೆಂದು ಹೇಳುವುದು ಅದು ಕಥನಮಾತ್ರವಿದೆ. ಆದರೆ ಆತ್ಮನ ಜ್ಞಾನವೆಂದು ಹೇಳುವುದು, ದರ್ಶನದಿಂದ ದೃಷ್ಟಾಯೆಂದು ಹೇಳುವುದು, ಜ್ಞಾನದಿಂದ ಜ್ಞಾನಿಯೆಂದು ಹೇಳುವುದು, ಧರ್ಮದಿಂದ ಧರ್ಮಿಯೆಂದು ಹೇಳುವುದು, ಪಾಪದಿಂದ ಪಾಪಿಯೆಂದು ಹೇಳುವುದರಲ್ಲಿ ನಾಮಭೇದವಾದರೂ ವಸ್ತುವೃತ್ತಿಯಿಂದ ಅಸ್ತಿಕಾಯರೂಪದಿಂದ ಭೇದವಿಲ್ಲ.

''ಹಾಗೆಯೇ ಈ ಎರಡು ಪ್ರಕಾರದ ಭೇದಾಭೇದಕಥನದಿಂದ ವಸ್ತುಸ್ವರೂಪವನ್ನು ತಿಳಿಯುವಂಥ ಪುರುಷರಿದ್ದಾರೆ ಅದರು ಪ್ರದೇಶಭೇದದ ಪೃಥಕ್ಕತೆಯಿಂದ ಯಾವ ಸಂಬಂಧವಿದೆ ಅದನ್ನು ಪೃಥಕತ್ವವೆಂದು ಹೇಳುತ್ತಾರೆ. ಮತ್ತು ನಿಶ್ಚಯದಿಂದ ಪ್ರದೇಶಗಳ ಏಕತೆಯಿಂದ ಸಂಬಂಧವಿದೆ ಅದರ ಹೆಸರು ಏಕತ್ವವಿದೆ. ಹೀಗೆ ಎರಡು ಭೇದಗಳನ್ನು ಹೇಳುತ್ತಾರೆ.''

ಈ ಪ್ರಕಾರದ ಭೇದಾಭೇದ ಕಥನದ ಮುಖಾಂತರ ವಸ್ತುಸ್ವರೂಪವನ್ನು ತಿಳಿಯುವಂಥ ಪುರುಷರು ಪ್ರದೇಶಭೇದದ ಪೃಥಕ್ಕತೆಯುಳ್ಳ ಯಾವ ಸಂಬಂಧವಿದೆ ಅದನ್ನು ಪೃಥಕತ್ವವೆಂದು ಹೇಳುತ್ತಾರೆ ಮತ್ತು ನಿಶ್ಚಯದಿಂದ ಪ್ರದೇಶಗಳ ಏಕತೆಯನ್ನು ಏಕತ್ವವೆಂದು ಹೇಳುತ್ತಾರೆ. ಆತ್ಮನನ್ನು ಕರ್ಮವುಳ್ಳವನೆಂದು ಹೇಳುವುದು ಅದು ಪೃಥಕತ್ವವಿದೆ ಮತ್ತು ಗುಣದಿಂದ ಗುಣಿಯೆಂದು ಹೇಳುವುದು ಅದು ಏಕತ್ವಸಂಬಂಧವಿದೆ.

**ಭಾವಾರ್ಥ :-** ವ್ಯವಹಾರವು ಪೃಥಕತ್ವವ್ಯವಹಾರ ಮತ್ತು ಏಕತ್ವವ್ಯವಹಾರವೆಂದು ಎರಡು ಪ್ರಕಾರದ್ದಿದೆ. ಎಲ್ಲಿ ದ್ರವ್ಯಗಳ ಜತೆ ಏಕತೆಯ ಸಂಬಂಧ ತಿಳಿಸಿಕೊಡಲಾಗುತ್ತದೆ ಅದನ್ನು ಪೃಥಕತ್ವವ್ಯವಹಾರವೆಂದು ಹೇಳಲಾಗುತ್ತದೆ. ಲಕ್ಷ್ಮಿಗೆ ಆತ್ಮನ ಸಂಬಂಧ ಹೇಳುವುದು ಅದು ಪೃಥಕತ್ವವ್ಯವಹಾರವಿದೆ ಮತ್ತು ಒಂದು ವಸ್ತುವಿನಲ್ಲಿ ಭೇದ ಹೇಳಲಾಗುತ್ತದೆ ಅದನ್ನು ಏಕತ್ವವ್ಯವಹಾರವೆಂದು ಹೇಳುವುದರಲ್ಲಿ ಬರುತ್ತದೆ, ಜ್ಞಾನದ ಕಾರಣದಿಂದ ಜ್ಞಾನೀ ಧರ್ಮದ ಕಾರಣದಿಂದ ಧರ್ಮಿಯೆಂದು ಹೇಳುವುದು ಇದು ಏಕತ್ವವ್ಯವಹಾರವಿದೆ.

ಈ ಎರಡನೇ ಪ್ರಕಾರದ ಸಂಬಂಧವನ್ನು ಧನ ಮತ್ತು ಧನಿಯಲ್ಲಿ ಹಾಗೂ ಜ್ಞಾನ ಮತ್ತು ಜ್ಞಾನಿಯಲ್ಲಿ ವ್ಯಪದೇಶ ಮೊದಲಾದ ನಾಲ್ಕು ಪ್ರಕಾರದಿಂದ ತಿಳಿಸಿಕೊಡುವುದರಲ್ಲಿ ಬಂದಿದೆ.

೧)ಧನದ ಹೆಸರು ಧನ. ಧನಿಯ ಹೆಸರು ಧನಿ. ಎರಡರ ಹೆಸರು ಬೇರೆಯಿವೆ ಮತ್ತು ಎರಡೂ ವಸ್ತುಗಳು ಬೇರೆಯಿವೆ. ಏಕವಿಲ್ಲ, ಆದರೆ ಪ್ರದೇಶಭೇದವಿದೆ. ಧನವು ಒಂದೆಡೆಯಿರುತ್ತದೆ ಮತ್ತು ಧನವಂತನು ಇನ್ನೊಂದಡೆ ಇರುತ್ತಾನೆ.

೨) ಧನದ ಆಕಾರ, ವಜ್ರದ ಆಕಾರ, ಒಡವೆ ಮೊದಲಾದವುಗಳ ಆಕಾರ ಮತ್ತು ಆತ್ಮನ ಆಕಾರವು ಏಕವಿಲ್ಲ, ಬೇರೆ-ಬೇರೆಯಿವೆ ಮನುಷ್ಯನು ಮೂರೂವರೆಮೊಳ ಎತ್ತರನಿದ್ದಾನೆ ಮತ್ತು ಹಣದಚೀಲ ತುಂಬುವನು. ಜೀವದ ಆಕೃತಿ ಬೇರೆ ಮತ್ತು ಹಣದ ಚೀಲದ ಆಕೃತಿ ಬೇರೆಯಿದೆ. ಅದಕ್ಕಾಗಿ ಆಕಾರದಿಂದ ಎರಡರಲ್ಲಿ ಭೇದವಿದೆ, ಪ್ರದೇಶಭೇದವಿದೆ.

೩) ಈ ಮನುಷ್ಯನು ಕೋಟ್ಯಾಧೀಶನಿದ್ದಾನೆ. ಮನುಷ್ಯನು ಓರ್ವ ಮತ್ತು ರೂಪಾಯಿ ಕೋಟಿ, ಇದು ಪೃಥಕತ್ವವ್ಯವಹಾರವಿದೆ. ಆತ್ಮನಿಗೆ ೧೪೮ ಕರ್ಮದ ಪ್ರಕೃತಿಗಳಿವೆಯೆಂಬುದು ಪೃಥಕ್ ಅಸ್ತಿಕಾಯವನ್ನು ತಿಳಿಸಿಕೊಡುತ್ತದೆ. ಆತ್ಮನು ಬೇರೆಯಿದ್ದಾನೆ ಮತ್ತು ಕರ್ಮವು ಬೇರೆಯಿದೆ.

೪) ಈ ಮನುಷ್ಯನ ಆಧಾರದಿಂದ ಲಕ್ಷ್ಮೀಯಿದ್ದಾಳೆ. ಹಣದ ಆಧಾರದಿಂದ ಉಪಜೀವಿಕೆ ನಡೆಯುತ್ತದೆ ಯೆನ್ನುವುದು ಅದು ಭೇದಕಥನವಿದೆ. ಲಕ್ಷ್ಮೀಯ ಆಧಾರವು ಅದು ಪರಮಾಣುವಿನ ದ್ರವ್ಯಗುಣವಿದೆ. ಯಾವನಾದರೂ ಓರ್ವ ವ್ಯವಸ್ಥೆ ಮಾಡುವವನ ಆಧಾರದಿಂದ ಹಣ ಉಳಿದಿದೆಯೆಂಬ ಮಾತು ಅಸತ್ಯವಿದೆ. ಹಣವು ಬೇರೆಯಿದೆ ಮತ್ತು ವ್ಯವಸ್ಥೆ ಮಾಡುವವನು ಬೇರೆಯಿದ್ದಾನೆ.

ಹಣದ ಹೆಸರು, ಸಂಖ್ಯೆ, ಆಕಾರ, ಆಧಾರಗಳು ಅದರ ದ್ರವ್ಯಗುಣಗಳಿವೆ, ಹೀಗೆ ನಾಲ್ಕು ಭೇದದಿಂದ ಧನವು ಧನವಂತನಿಂದ ಭಿನ್ನವಿದೆ. ಮತ್ತು ಧನವಂತ ಪುರುಷ, ಅವನ ಹೆಸರು, ಅವನ ಆಕಾರ, ಅವನ ಸಂಖ್ಯೆ, ಅವನ ಆಧಾರವೆಂದು ನಾಲ್ಕು ಭೇದಗಳಿಂದ ಧನದಿಂದ ಭಿನ್ನನಿದ್ದಾನೆ. ಈ ಪ್ರಕಾರ ಧನ ಮತ್ತು ಧನವಂತನು ಭಿನ್ನನಿದ್ದರೂ ಧನದ ಸಂಬಂಧದಿಂದ ಪುರುಷನನ್ನು ಧನವಂತನೆಂದು ಹೇಳಲಾಗುವುದು ಅದು ಪೃಥಕತ್ವವ್ಯವಹಾರವಿದೆ.

ಹೀಗೆ ಪರದಿಂದ ಬೇರೆಯೆಂದು ಮನ್ನಿಸುವುದು ಮತ್ತು ತನ್ನ ಜ್ಞಾನ ಮಾಡಿಕೊಳ್ಳುವುದು ಅದು ಧರ್ಮವಿದೆ.

ಪ್ರತಿಯೊಂದು ದ್ರವ್ಯದಲ್ಲಿ ಎರಡು ಪ್ರಕಾರದ ವ್ಯವಹಾರದ ಜ್ಞಾನಮಾಡಿಕೊಳ್ಳಬೇಕಾಗುವುದು. ಆತ್ಮನಿಗೆ ಕರ್ಮದ ಸಂಬಂಧವಿದೆಯೆಂದು ಹೇಳುವುದು ಅದು ಪೃಥಕತ್ವವ್ಯವಹಾರವಿದೆ ಮತ್ತು ಆತ್ಮನಿಗೆ ಜ್ಞಾನದ ಸಂಬಂಧವಿದೆಯೆಂದು ಹೇಳುವುದು ಅದು ಏಕತ್ವವ್ಯವಹಾರವಿದೆ, ಧನದ ಕಾರಣದಿಂದ ಧನವಂತನೆಂದು ಹೇಳುವುದು ಅದು ಪೃಥಕ್ವ್ಯವಹಾರವಿದೆ. ಲಕ್ಷ್ಮೀಯ ಪ್ರದೇಶಗಳು ಆತ್ಮನಲ್ಲಿ ಬಾರದಿದ್ದರೂ ಜೀವದ ಮಮತೆಯಲ್ಲಿ ನಿಮಿತ್ತವಿದೆಯೆಂದು ನಿಮಿತ್ತ-ನೈಮಿತ್ತಿಕ ಸಂಬಂಧವನ್ನು ತಿಳಿಸಿಕೊಡುವ ಕಥನ ಮಾಡಲಾಗಿದೆ. ಅದೇ ರೀತಿ ಆತ್ಮನನ್ನು ಕರ್ಮವುಳ್ಳವನು, ಕೀರ್ತಿವುಳ್ಳವನು, ಪತ್ನಿಯುಳ್ಳವನು, ಶರೀರವುಳ್ಳವನೆಂದು ಹೇಳುವುದು ಅದು ಪೃಥಕ್ವ್ಯವಹಾರವಿದೆ. ಸೌದೆ ಸುಡುತ್ತಿರುವಾಗ ಆತ್ಮನಿಗೆ ದುಃಖವಾಗುವುದಿಲ್ಲ, ಆದರೆ ಶರೀರ ಸುಡುತ್ತಿರುವಾಗ ದುಃಖವಾಗುತ್ತದೆಯಲ್ಲವೇನು ? ಸ್ವಯಂ ದುಃಖದ ಕಲ್ಪನೆ ಮಾಡುತ್ತಾನೆ. ಓರ್ವ ಮುನಿಯ ಶರೀರ ಸುಡುತ್ತಿದ್ದರೂ ಅವರು ಆಂತರ್ಯದಲ್ಲಿ ಆನಂದದೊಳಗೆ ಲೀನರಿರುತ್ತಾರೆ, ಅದಕ್ಕಾಗಿ ಶರೀರವು ದುಃಖದ ಕಾರಣವಿಲ್ಲ, ವಿಕಾರ ಮಾಡುವ ಸಮಯದಲ್ಲಿ ಶರೀರದ ಮೇಲೆ ಲಕ್ಷ್ಯಹೋಗುತ್ತದೆ ಅದಕ್ಕಾಗಿ ನಿಮಿತ್ತದ ಮೇಲೆ ಆರೋಪ ಮಾಡಲಾಗುತ್ತದೆ. ನಿಮಿತ್ತ-ನೈಮಿತ್ತಿಕ ಸಂಬಂಧವು ಪೃಥಕ್ವ್ಯವಹಾರವನ್ನು ತಿಳಿಸಿಕೊಡುವುದಕ್ಕಾಗಿ ಇದೆ.

ಲಕ್ಷ್ಮೀ ಮತ್ತು ಪುರುಷ ಎರಡೂ ನಾಮ, ಆಕಾರ, ಸಂಖ್ಯೆ ಮತ್ತು ಆಧಾರ ಈ ನಾಲ್ಕೂ ಪ್ರಕಾರದಿಂದ ಭೇದಸ್ವರೂಪವಿವೆ. ಕೇವಲೀ ಅಥವಾ ಶ್ರುತಕೇವಲಿಗಳ ಕಾರಣದಿಂದ ಕ್ಷಾಯಿಕಸಮ್ಯಕ್ತ್ವವಾಗುತ್ತದೆಂದು ಹೇಳುವುದು ಅದು ಪೃಥಕ್ವ್ಯವಹಾರದ ಕಥನವಿದೆ.

ಕಣ್ಣುಗಳು ತೆರೆದಿದ್ದರೆ ಜ್ಞಾನೋಪಯೋಗವಾಗುತ್ತದೆ ಮತ್ತು ಕಣ್ಣುಗಳು ಮುಚ್ಚಿದ್ದರೆ ಜ್ಞಾನೋಪಯೋಗವಾಗುವುದಿಲ್ಲವೆಂದು ಹೇಳುವವನು ಸ್ಥೂಲಭ್ರಮೆಯಲ್ಲಿದ್ದಾನೆ. ಕಣ್ಣುಗಳು ಮುಚ್ಚಿದ್ದರೂ ಇದು ಕಾಣಿಸಲಿಲ್ಲವೆಂಬ ಜ್ಞಾನವಾದದ್ದು ಅದು ಕೂಡ ಜ್ಞಾನೋಪಯೋಗವಿದೆ. ಆದಾಗ್ಯೂ ಜ್ಞಾನೋಪಯೋಗವಿಲ್ಲವೆಂದು ಹೇಳುವುದು ಅದು ಭ್ರಾಂತಿಯಿದೆ ಮತ್ತು ನಿಮಿತ್ತ-ನೈಮಿತ್ತಿಕ ಸಂಬಂಧವು ಒಂದೇ ಸಮಯದಲ್ಲಿದೆ. ಅದರಲ್ಲಿ ಸಮಯಭೇದವಿಲ್ಲ. ಜ್ಞಾನಪರ್ಯಾಯವಾದ ಸಮಯದಲ್ಲಿಯೇ ನಿಮಿತ್ತವಿರುತ್ತದೆ ಅದನ್ನು ನಿಮಿತ್ತ-ನೈಮಿತ್ತಿಕ ಸಂಬಂಧ ತಿಳಿಸುವ ಪೃಥಕ್‌ವ್ಯವಹಾರವೆಂದು ಹೇಳಲಾಗುತ್ತದೆ. ಅದು ಹಿಂದೆ-ಮುಂದೆ ಆಗುವುದಿಲ್ಲ. ಮತ್ತು ಕಣ್ಣುಗಳಿದ್ದರೆ ಜ್ಞಾನೋಪಯೋಗವಿದೆ ಮತ್ತು ಕಣ್ಣುಗಳಿಲ್ಲದಿದ್ದರೆ ಜ್ಞಾನೋಪಯೋಗವಿಲ್ಲವೆನ್ನುವಂತೆ ಜ್ಞಾನೋಪಯೋಗವು ಪರಾಧೀನವಿಲ್ಲ. ಅದನ್ನು ನಿಮಿತ್ತ-ನೈಮಿತ್ತಿಕ ಸಂಬಂಧ ಅಥವಾ ಪೃಥಕ್‌ವ್ಯವಹಾರವೆಂದು ಕೂಡ ಹೇಳಲಾಗುವುದಿಲ್ಲ. ನಿಮಿತ್ತ ಮತ್ತು ನೈಮಿತ್ತಿಕಗಳು ತಮ್ಮ-ತಮ್ಮ ಕಾರಣದಿಂದ ಸ್ವತಂತ್ರವಿವೆ.

''ಜ್ಞಾನ ಮತ್ತು ಜ್ಞಾನಿಯಲ್ಲಿ ಏಕತೆಯಿದ್ದರೂ ನಾಮ, ಸಂಖ್ಯೆ, ಸಂಸ್ಥಾನ ವಿಷಯಗಳಿಂದ ಜ್ಞಾನದ ಭೇದಮಾಡಲಾಗುತ್ತದೆ. ವಸ್ತುಸ್ವರೂಪವನ್ನು ಚನ್ನಾಗಿ ತಿಳಿದುಕೊಳ್ಳುವ ಕಾರಣ ಆ ಜ್ಞಾನದ ಸಂಬಂಧದಿಂದ ಜ್ಞಾನಿಯೆಂಬ ಹೆಸರು ಪಡೆಯುತ್ತಾನೆ ಇದನ್ನು ಏಕತ್ವವ್ಯವಹಾರವೆನ್ನುತ್ತಾರೆ. ಇವೆರಡೂ ಪ್ರಕಾರದ ಸಂಬಂಧವನ್ನು ಸಮಸ್ತ ದ್ರವ್ಯಗಳಲ್ಲಿ ನಾಲ್ಕು ಪ್ರಕಾರದಿಂದ ತಿಳಿಯುವುದು.''

ಜ್ಞಾನದ ಹೆಸರು ಜ್ಞಾನ ಮತ್ತು ಜ್ಞಾನಿಯ ಹೆಸರು ಆತ್ಮವೆಂದು ನಾಮಭೇದವಿದೆ, ಆತ್ಮ ಒಬ್ಬ ಮತ್ತು ಜ್ಞಾನ ಹೆಚ್ಚಿಗೆ ಹೆಚ್ಚು ನಾಲ್ಕು ಇವೆ. (ಮೂರು ಲಬ್ಧ ಮತ್ತು ಒಂದು ಉಪಯೋಗರೂಪ) ಹೀಗೆ ಸಂಖ್ಯಾ ಭೇದದಿಂದ ಭೇದವಿವೆ ಆತ್ಮ ಮತ್ತು ಅವನ ಅಸಂಖ್ಯ ಪ್ರದೇಶಗಳೆಂದು ಭೇದವಿದೆ, ಆತ್ಮನ ಆಧಾರದಿಂದ ಜ್ಞಾನ ಮೊದಲಾದ ಗುಣಗಳಿವೆ. ಹೀಗೆ ಆಧಾರದಲ್ಲಿ ಭೇದವಿವೆ, ಆದರೆ ವಸ್ತುಭೇದದಿಂದ ಭೇದವಿಲ್ಲ. ಒಂದೇ ಪ್ರಕಟವಿದೆ. ತನ್ನ ಕ್ಷೇತ್ರದಲ್ಲಿ ಭೇದ ಮಾಡುವುದು ಅದು ಏಕತ್ವವ್ಯವಹಾರ ಕಥನವಿದೆ.

ಆತ್ಮನು ಇನ್ನೊಂದು ಜೀವದ ದಯೆ ಪಾಲಿಸುತ್ತಾನೆಂದು ಹೇಳುವುದು ಅದು ಪೃಥಕ್‌ವ್ಯವಹಾರವಿದೆ. ಮತ್ತು ತನ್ನ ದಯೆ ಪಾಲಿಸುವುದು ಅದು ಏಕತ್ವವ್ಯವಹಾರವಿದೆ. ಆಕಾಶದ ಆಧಾರದಿಂದ ಐದು ದ್ರವ್ಯಗಳಿವೆಯೆಂದು ಹೇಳುವುದು ಅದು ಪೃಥಕತ್ವವ್ಯವಹಾರವಿದೆ. ಆಕಾಶವು ತನ್ನ ಆಧಾರದಿಂದಿದೆಯೆಂದು ಹೇಳುವುದು ಅದು ಏಕತ್ವವ್ಯವಹಾರವಿದೆ. ನಾಮ, ಸಂಸ್ಥಾನ, ಸಂಖ್ಯೆ, ಆಧಾರಗಳು ಬೇರೆ, ಆದರೆ ಪ್ರದೇಶ ಒಂದು ಅದು ಏಕತ್ವವ್ಯವಹಾರವಿದೆ. ಹೀಗೆ ಎರಡು ಪ್ರಕಾರದ ಸಂಬಂಧವನ್ನು ಸಮಸ್ತ ದ್ರವ್ಯಗಳಲ್ಲಿ ನಾಲ್ಕು ಪ್ರಕಾರದಿಂದ ತಿಳಿಯುವುದು.

ಈಗ ಜ್ಞಾನ ಮತ್ತು ಆತ್ಮನಲ್ಲಿ ಸಂಪೂರ್ಣ ಪ್ರಕಾರದಿಂದ ಭೇದ ಮನ್ನಿಸಹೋದರೆ ದೊಡ್ಡ ದೋಷವು ಬರುತ್ತದೆಯೆಂದು ಹೇಳಲಾಗುತ್ತದೆ.

**ಣಾಣೀ ಣಾಣಂ ಚ ಸದಾ ಅತ್ಥಂತರಿದಾ ದು ಅಣ್ಣಮಣ್ಣಸ್ಸ ।**
**ದೋಣ್ಹಂ ಅಚೇದಣತ್ತಂ ಪಸಜದಿ ಸಮ್ಮಂ ಜಿಣಾವಮದಂ ॥೪೮॥**

**ನಿರಂತರ ಜ್ಞಾನಿ ಮೇಣ್ ಜ್ಞಾನದಲಿ ಅನ್ಯೋನ್ಯ ಅರ್ಥಾಂತರಭೂತವಾದರೆ ।**
**ಎರಡರಲಿ ಅಚೇತನತೆ ಬರುವುದಿದು ಜಿನರಿಗೆ ಸಮ್ಯಕ್‌ಸಮ್ಮತವಿಲ್ಲ ॥೪೮॥**

ಆತ್ಮ ಮತ್ತು ಚೈತನ್ಯಗುಣದಲ್ಲಿ ಸದಾಕಾಲ ಸರ್ವಥಾ ಪ್ರಕಾರ ಭೇದವಿದ್ದರೆ ಪರಸ್ಪರ ಜ್ಞಾನೀ ಮತ್ತು ಜ್ಞಾನಕ್ಕೆ

ಜಡಭಾವವಾಗುತ್ತದೆ. ಯಥಾರ್ಥದಲ್ಲಿ ಇದು ಜಿನೇಂದ್ರಭಗವಂತರ ಕಥನವಿದೆ.

ಜ್ಞಾನವು ಇಂದ್ರಿಯಗಳ ಕಾರಣದಿಂದ ಅಥವಾ ಪುಸ್ತಕದ ಕಾರಣದಿಂದ ಆಗುತ್ತದೆಂದು ಮನ್ನಿಸಿದರೆ. ಜ್ಞಾನವು ಆತ್ಮನಿಂದ ಆಯಿತೆಂದು ಮನ್ನಿಸಲಿಲ್ಲ, ಅವನು ಜ್ಞಾನ ಮತ್ತು ಆತ್ಮನನ್ನು ಸರ್ವಥಾ ಭಿನ್ನವೆಂದು ಮನ್ನಿಸುವುದರಿಂದ ಜ್ಞಾನವು ಜಡವಾಗಿ ಹೋಯಿತು ಮತ್ತು ಜ್ಞಾನದ ಅಭಾವ ಮನ್ನಿಸಿದರೆ ಆತ್ಮನು ಜಡವಾಗಿ ಹೋಗುವನು. ಇಂದ್ರಿಯ ಅಥವಾ ಶರೀರದ ಕಾರಣದಿಂದ ಧರ್ಮ ಮನ್ನಿಸಿದರೆ ಧರ್ಮವು ಜಡವಾಗುವುದು ಮತ್ತು ಧರ್ಮಧಾರಕನಾದ ಆತ್ಮನು ಜಡನಾಗುವನು. ಅಂಥ ಮನ್ನಣೆಯುಳ್ಳ ಜೀವನು ಅಭೇದ ಆತ್ಮನ ಆಶ್ರಯದಿಂದ ಧರ್ಮವಾಗುತ್ತದೆಂದು ಮನ್ನಿಸುವುದಿಲ್ಲ.

**ಭಾವಾರ್ಥ :-** ಅಗ್ನಿದ್ರವ್ಯದಲ್ಲಿ ಉಷ್ಣತೆಯು ಗುಣವಿದೆ. ಆ ಅಗ್ನಿ ಮತ್ತು ಉಷ್ಣತೆಯಲ್ಲಿ ಪೃಥಕ್ಕತೆಯಿದ್ದರೆ ಅದು ಸೌದೆಯನ್ನು ಸುಡುವ ಸಾಧ್ಯತೆಯಿಲ್ಲ. ಇಲ್ಲಿ ದೃಷ್ಟಾಂತದ ಸಲುವಾಗಿ ಅಗ್ನಿಯು ಪರಮಾಣುವಿನ ವೈಭಾವಿಕಪರ್ಯಾಯವಿದ್ದರೂ ದ್ರವ್ಯದ ಹಾಗೆ ಸ್ವೀಕರಿಸಲಾಗಿದೆ. ಮತ್ತು ಉಷ್ಣತೆಯು ಪರ್ಯಾಯವಿದ್ದರೂ ಕೂಡ ಗುಣವೆಂದು ಹೇಳಿದೆ. ಉಷ್ಣತೆಯಿಲ್ಲದ ಅಗ್ನಿಯು ಸೌದೆಯನ್ನು ಸುಡುವ ಸಾಧ್ಯತೆಯಿಲ್ಲ ಮತ್ತು ಅಗ್ನಿಯಿಲ್ಲದ ಉಷ್ಣತೆಯು ಸೌದೆಯನ್ನು ಸುಡುವ ಸಾಧ್ಯತೆಯಿಲ್ಲ, ಪ್ರಥಮವಾಗಿ ಉಷ್ಣಗುಣವು ಬೇರೆಯಾದರೆ ಹೇಗೆ ಸುಡುವುದು ? ಮತ್ತು ಆ ಅಗ್ನಿಯು ಬೇರೆಯಾದರೆ ಉಷ್ಣಗುಣವು ಯಾವುದರ ಆಶ್ರಯದಿಂದಿರುವುದು ? ಉಷ್ಣತೆಗೆ ಅಗ್ನಿಯ ಆಶ್ರಯವಿಲ್ಲದಿದ್ದರೆ ಉಷ್ಣತೆಯು ಇರುವ ಸಾಧ್ಯತೆಯಿಲ್ಲ ಮತ್ತು ಸುಡುವ ಶಕ್ತಿಯಿಂದ ರಹಿತವಾಗುವುದು. ಗುಣ ಮತ್ತು ಗುಣಿಗಳು ಪರಸ್ಪರ ಬೇರೆಯಾದರೆ ಕಾರ್ಯಮಾಡಲು ಸಮರ್ಥವಾಗುವುದಿಲ್ಲ. ಉಷ್ಣತೆ ಮತ್ತು ಅಗ್ನಿಯು ಬೇರೆಯಾದರೆ ಅಗ್ನಿಯು ಉಷ್ಣತೆಯ ಗುಣವಿಲ್ಲದೆ ಕಾರ್ಯ ಮಾಡಲಾರದು ಮತ್ತು ಉಷ್ಣತಾಗುಣವು ಅಗ್ನಿಯ ಆಧಾರವಿಲ್ಲದೆ ಕಾರ್ಯ ಮಾಡಲಾರದು. ಇವೆರಡರಲ್ಲಿ ಏಕತೆಯಿದ್ದರೆ ಸುಡುವುದರಲ್ಲಿ ಸಮರ್ಥವಾಗುವುದು.

ಅದರಂತೆ ಆತ್ಮ ಮತ್ತು ಅವನ ಜ್ಞಾನಗುಣ ಹಾಗೂ ಪರ್ಯಾಯಗಳು ಬೇರೆಯಾದರೆ ತಿಳಿಯುವ ಕ್ರಿಯೆಯಲ್ಲಿ ಅಸಮರ್ಥತೆಯಾಗುವುದು. ಜ್ಞಾನದ ಪರ್ಯಾಯವು ಪರದಿಂದ ಅಥವಾ ಇಂದ್ರಿಯಗಳಿಂದಾದರೆ ಪರ್ಯಾಯವುಳಿಯಲಾರದು ಮತ್ತು ಪರ್ಯಾಯದ ಅಭಾವವಾದರೆ ಪರ್ಯಾಯವಂತವಂತೂ ಉಳಿಯುವುದಿಲ್ಲ. ಧರ್ಮದ ಪರ್ಯಾಯವು ಪರದ ಕಾರಣದಿಂದಿದೆಯೆಂದು ಮನ್ನಿಸಹೋದರೆ ಧರ್ಮದ ಆಧಾರವು ಪರವಾದರೆ ಧರ್ಮ ಉಳಿಯುವುದಿಲ್ಲ, ಮತ್ತು ಧರ್ಮದ ಅಭಾವವಾದರೆ ಧರ್ಮಿಯು-ಆತ್ಮನು ಉಳಿಯುವುದಿಲ್ಲ. ಇದರೊಳಗಿಂದ ಜ್ಞಾನ ಮನ್ನಿಸಹೋದರೆ ಜ್ಞಾನಪರ್ಯಾಯವು ಜಡದ್ದಾಗುವುದು ಮತ್ತು ಪರ್ಯಾಯವಿಲ್ಲದೆ ದ್ರವ್ಯ ಮನ್ನಿಸಿದರೆ ದ್ರವ್ಯವು ಉಳಿಯುವುದಿಲ್ಲ.

ಕ್ಷಾಯಕಸಮ್ಯಗ್ದೃಷ್ಟಿಗೆ ಆತ್ಮನ ಅವಲಂಬನವಿಲ್ಲದಿದ್ದರೆ ಮತ್ತು ತೀರ್ಥಂಕರರಿಂದ ಅದು ಆದರೆ ಆ ಪರ್ಯಾಯಕ್ಕೆ ತನ್ನ ದ್ರವ್ಯದ ಆಧಾರ ಉಳಿಯಲಿಲ್ಲ ಮತ್ತು ದ್ರವ್ಯವು ಪರ್ಯಾಯವಿಲ್ಲದೆ ಉಳಿಯಿತು, ಅದರಿಂದ ದ್ರವ್ಯದಲ್ಲಿ ಮತ್ತು ಪರ್ಯಾಯದಲ್ಲಿ ಕಾರ್ಯ ಮಾಡುವ ಸಾಮರ್ಥ್ಯವು ಉಳಿಯುವುದಿಲ್ಲ. ತೀರ್ಥಂಕರರ ಸಮೀಪ ಹೋಗುವುದರಿಂದ ತೀರ್ಥಂಕರ ನಾಮಕರ್ಮವು ಕಟ್ಟುವಲ್ಲಿ ಆ ಶುಭರಾಗವು ನಿಮಿತ್ತದ ಅವಲಂಬನದಿಂದಿದ್ದರೆ ಆ ಪರ್ಯಾಯವು ದ್ರವ್ಯರಹಿತವಾಗಿ ಹೋಯಿತು ಮತ್ತು ಪರ್ಯಾಯವು ಪರದಿಂದಾದರೆ ದ್ರವ್ಯವು ಪರ್ಯಾಯರಹಿತವಾಯಿತು. ಹೀಗೆ ದ್ರವ್ಯ ಮತ್ತು ಪರ್ಯಾಯಗಳೆರಡರ ನಾಶವಾಗಿ ಹೋಗುವುದು.

ಅದರಂತೆ ಸಂಹನನ, ಮನುಷ್ಯದೇಹ, ಮಹಾವಿದೇಹಕ್ಷೇತ್ರ, ಚತುರ್ಥಕಾಲ ಮೊದಲಾದವುಗಳಿದ್ದರೆ ಕೇವಲಜ್ಞಾನವಾಗುವುದು, ಆಪ್ತಪುರುಷನ ಶ್ರದ್ಧೆಯಿಂದ ಸಮ್ಯಗ್ದರ್ಶನವಾಗುವುದು ಮೊದಲಾದ ಪ್ರಕಾರದಿಂದ ಮನ್ನಿಸಹೋದರೆ ಜ್ಞಾನ ಮತ್ತು ಶ್ರದ್ಧೆಯ ಪರ್ಯಾಯಗಳು ಪರದಿಂದಾದರೆ ಆ ಪರ್ಯಾಯಗಳು ಜಡದ್ದಾಗಿ ಹೋದವು ಮತ್ತು ಪರ್ಯಾಯವಿಲ್ಲದೆ ದ್ರವ್ಯ ಕೂಡ ಉಳಿಯುವುದಿಲ್ಲ, ಎರಡೂ ಕೆಲಸ ಮಾಡಲು ಅಸಮರ್ಥವಾಗುವುವು. ಜ್ಞಾನ,

ದರ್ಶನ, ಶ್ರದ್ಧೆ, ವೀರ್ಯ ಮೊದಲಾದ ಪರ್ಯಾಯಗಳು ದ್ರವ್ಯದ ಆಧಾರದಿಂದಿವೆಯೆಂದು ಮನ್ನಿಸದಿದ್ದರೆ ಸಮಯ-ಸಮಯದ ಪರ್ಯಾಯವು ದ್ರವ್ಯದೊಡನೆ ಏಕತೆ ಪಡೆಯಲಾರದು. ಪರದಿಂದ ಪರ್ಯಾಯ ಮನ್ನಿಸಿದರೆ ಪರ್ಯಾಯವು ದ್ರವ್ಯರಹಿತವಾಯಿತು ಮತ್ತು ದ್ರವ್ಯವು ಪರ್ಯಾಯರಹಿತವಾದರೆ ಯಾವ ರೀತಿ ಕೆಲಸಮಾಡುವುದು? ಜ್ಞಾನವು ಆತ್ಮರಹಿತವಾದರೆ ಜ್ಞಾನವು ಅಚೇತನವಾಗಿ ಬಿಟ್ಟಿತು ಮತ್ತು ಆತ್ಮನು ಜ್ಞಾನರಹಿತನಾದರೆ ಆತ್ಮನು ಅಚೇತನನಾಗಿ ಬಿಟ್ಟನು.

**ಪ್ರಶ್ನೆ :-** ಪೃಥಕ್‌ರೂಪವಾದ ಹಲ್ಲುಗಳಿಂದ ಕಚ್ಚುವುದರಿಂದ ಪುರುಷನನ್ನು ಕಚ್ಚುವವನೆಂದು ಹೇಳಲಾಗುತ್ತದೆ, ಆದರೆ ಹಲ್ಲು ಬೇರೆ ಮತ್ತು ಮನುಷ್ಯ ಬೇರೆಯಿದ್ದಾನೆ. ಹಲ್ಲು ಬಿದ್ದುಹೋಗುತ್ತವೆ ಮತ್ತು ಮನುಷ್ಯ ಉಳಿಯುತ್ತಾನೆ. ಆದಾಗ್ಯೂ ಹಲ್ಲುಗಳ ಕ್ರಿಯೆಯಿಂದ ಮನುಷ್ಯನನ್ನು ಕಚ್ಚುವವನೆಂದು ಹೇಳಲಾಗುತ್ತದೆ ಅದರಂತೆ ಜ್ಞಾನ ಮತ್ತು ಆತ್ಮನನ್ನು ಭಿನ್ನವಾಗಿ ಮನ್ನಿಸುವುದು ಮತ್ತು ಆತ್ಮನು ಜ್ಞಾನದಿಂದ ತಿಳಿಯುವ ಕೆಲಸ ಮಾಡುತ್ತಾನೆ ಮತ್ತು ಅದರಿಂದ ಆತ್ಮನನ್ನು ತಿಳಿಯುವವನೆಂದು ಹೇಳಿದರೆ ತಪ್ಪೇನಿದೆ ? ಹೇಗೆ ಜನ್ಮಸಮಯದಲ್ಲಿ ಹಲ್ಲುಗಳಿರಲಿಲ್ಲ, ಆದರೆ ನಂತರ ಹೊಸ ಹಲ್ಲುಗಳು ಬಂದವು ಮತ್ತು ಹಲ್ಲುಗಳಿಂದ ಕಚ್ಚುವ ಕ್ರಿಯೆಯಾಗುವುದರಿಂದ ಪುರುಷನನ್ನು ಕಚ್ಚುವವನೆಂದು ಹೇಳುವರು ಹಾಗೆ ಹೊಸ ಜ್ಞಾನವು ಬರುವುದರಿಂದ ಆತ್ಮನನ್ನು ತಿಳಿಯುವವನೆಂದು ಹೇಳಿದರೆ ತಪ್ಪೇನಿದೆ ? ಮೊದಲು ಆತ್ಮನು ನಿಗೋದದಲ್ಲಿದ್ದನು ಅಲ್ಲಿ ತೀರ ಕಡಿಮೆ ಜ್ಞಾನವಿತ್ತು, ಮತ್ತು ಇಲ್ಲಿ ಮನುಷ್ಯಪರ್ಯಾಯದಲ್ಲಿ ಈ ಮಾತು ಕೇಳಿ ವಿಶೇಷ ಜ್ಞಾನವಾಯಿತು ಅದರೊಳಗಿಂದ ಜ್ಞಾನ ಬಂತು ಮತ್ತು ಆ ಜ್ಞಾನದಿಂದ ಆತ್ಮನನ್ನು ತಿಳಿಯುವವನೆಂದು ಹೇಳಿದರೆ ತಪ್ಪೇನಿದೆ ? ಹೇಗೆ ಹಲ್ಲುಗಳು ಬೇರೆಯಿದ್ದರೂ ಹಲ್ಲಿನ ಕ್ರಿಯೆಯಿಂದ ಮನುಷ್ಯನನ್ನು ಕಚ್ಚುವವನೆಂದು ಹೇಳುತ್ತಾರೆ ಹಾಗೆ ಜ್ಞಾನ ಮತ್ತು ಆತ್ಮನನ್ನು ಭಿನ್ನ-ಮನ್ನಿಸುವುದು ಮತ್ತು ಭಿನ್ನಜ್ಞಾನದ ಕ್ರಿಯೆಯಿಂದ ಆತ್ಮನನ್ನು ತಿಳಿಯುವವನೆಂದು ಹೇಳಿದರೆ ತಪ್ಪೇನಿದೆ ?

**ಉತ್ತರ :-** ಕಚ್ಚುವ ಕ್ರಿಯೆಯಲ್ಲಿ ಹಲ್ಲು ಬಾಹ್ಯನಿಮಿತ್ತವಿವೆ. ಉಪಾದಾನ ಕಾರಣವಂತೂ ಪುರುಷನಲ್ಲಿ ಆ ವಸ್ತುವನ್ನು ಕಚ್ಚುವ ಶಕ್ತಿಯಿದೆ ಇಲ್ಲಿ ಆ ಪುರುಷನು ಪುದ್ಗಲ-ಪರವಸ್ತುವನ್ನು ಕತ್ತರಿಸುವ ಸಾಧ್ಯತೆಯಿದೆಯೆಂದು ಸಿದ್ಧಮಾಡಿಲ್ಲ. ಕಚ್ಚುವರೂಪದ ಯೋಗ್ಯತೆಯಂತೂ ಆ ಪುರುಷನದಿದೆ. ಆದರೆ ಇಲ್ಲಿಯಂತೂ ಜೀವದ ವೀರ್ಯದ ಕ್ಷಯೋಪಶಮವು ಕಾರ್ಯ ಮಾಡಿದೆ ಅದನ್ನು ತಿಳಿಸುವುದಿದೆ. ಆ ಶಕ್ತಿಯು ಪುರುಷನಲ್ಲಿಲ್ಲದಿದ್ದರೆ ಅವನು ಹೇಗೆ ಕಾರ್ಯ ಮಾಡುತ್ತಿದ್ದನು ? ಹಲ್ಲುಗಳೇನು ಕಾರ್ಯಕಾರಿಯಾಗುವುದಿಲ್ಲ. ರೋಗೀ ಅಶಕ್ತ ಪುರುಷನಿಗೆ ಹಲ್ಲುಗಳಿರುತ್ತವೆ ಆದರೆ ತನ್ನಲ್ಲಿ ಶಕ್ತಿಯು ಕಡಿಮೆಯಿರುವುದರಿಂದ ಯಾವ ವಸ್ತುವನ್ನು ಅವನು ಕತ್ತರಿಸುವ ಸಾಧ್ಯತೆಯಿಲ್ಲ. ಉಪಾದಾನದ ಶಕ್ತಿಯಿಂದ ಕಾರ್ಯವಾದರೆ ಹಲ್ಲುಗಳನ್ನು ನಿಮಿತ್ತವೆಂದು ಹೇಳಲಾಗುವುದು. ಅದಕ್ಕಾಗಿ ಪುರಷನ ಶಕ್ತಿಯು ಮುಖ್ಯವಿದೆ, ಶಕ್ತಿವಂತಪುರುಷನ ಜತೆ ಆ ಶಕ್ತಿಯ ಏಕತೆಯಿದೆ. ಆದರೆ ಶಕ್ತಿವಂತ ಪುರುಷನ ಜತೆ ಹಲ್ಲುಗಳ ಸಂಬಂಧವಿಲ್ಲ, ಏಕೆಂದರೆ ಹಲ್ಲುಗಳು ಬೇರೆ ಮತ್ತು ಶಕ್ತಿವಂತ ಪುರುಷನು ಬೇರೆಯಿದ್ದಾನೆ. ಅದೇ ಪ್ರಕಾರ ಆತ್ಮನ ಜತೆ ಜ್ಞಾನದ ಸಂಬಂಧವಿದೆ, ಏಕತಾರೂಪದ ಸಂಬಂಧವಿದೆ, ಪುರುಷ ಮತ್ತು ಹಲ್ಲುಗಳ ಸಂಬಂಧವು ಹಾಗೆ ಇಲ್ಲ, ಪುರುಷ ಮತ್ತು ಹಲ್ಲಿನ ಪ್ರದೇಶಗಳು ಭಿನ್ನವಿವೆ ಹಾಗೆ ಜ್ಞಾನ ಮತ್ತು ಆತ್ಮನ ಪ್ರದೇಶಗಳ ಭಿನ್ನತೆಯಿಲ್ಲ, ಆದರೆ ಪ್ರದೇಶಗಳ ಏಕತೆಯಿದೆ ಶಕ್ತಿಯು ಶಕ್ತಿವಂತನ ಆಧಾರದಿಂದ ಕಾರ್ಯ ಮಾಡುತ್ತದೆ. ಜ್ಞಾನವು ಪರದ ಆಧಾರದಿಂದ ಕಾರ್ಯ ಮಾಡುವುದಿಲ್ಲ, ಓರ್ವನು ಶರೀರದಿಂದ ಗಟ್ಟಿಮುಟ್ಟಾಗಿರುವನು ಮತ್ತು ಮತಿ ಅಜ್ಞಾನವಿರುವುದು, ಓರ್ವನು ಶರೀರದಿಂದ ಅಶಕ್ತನಿರುವನು ಮತ್ತು ಕೇವಲಜ್ಞಾನ ಪ್ರಕಟಿಸುವನು. ತಾನು ರಾಗ-ದ್ವೇಷ ಮಾಡಿ ಇಂಥ ಪರಿಣಮನ ಮಾಡುತ್ತಾನೆ, ಅದು ಕರ್ಮದ ಕಾರಣದಿಂದಿಲ್ಲ. ಕರ್ಮದ ಉದಯದ ಕಾರಣದಿಂದ ರಾಗ ಮಾಡಬೇಕಾಯಿತೆಂಬ ಮಾತು ಅಸತ್ಯವಿದೆ. ತನ್ನ ವಿಪರೀತ ಪುರುಷಾರ್ಥದಿಂದ ವಿರುದ್ಧವಾದರೆ ಕರ್ಮದ ನಿಮಿತ್ತ ಹೇಳಲಾಗುವುದು ಮತ್ತು ತನ್ನ ಗುಣ-ಪರ್ಯಾಯಗಳ ಜತೆ ಸಂಬಂಧ ಕೂಡಿಸಿ ತನ್ನಲ್ಲಿ ಉಗ್ರಪುರುಷಾರ್ಥ ಮಾಡಿದರೆ ಕರ್ಮದ ಅಭಾವವನ್ನು ನಿಮಿತ್ತವೆನ್ನುವರು. ಹೇಗೆ ಹಲ್ಲುಗಳ ಕ್ರಿಯೆಯಲ್ಲಿ ಶಕ್ತಿ

ಪುರುಷನದಿದೆ, ಅಲ್ಲಿ ಶಕ್ತಿ ಮತ್ತು ಶಕ್ತಿವಂತ ಪುರುಷನ ಏಕತೆಯಿದೆ, ಹಾಗೆ ತನ್ನ ಗುಣಗಳ ಮತ್ತು ಆತ್ಮನ ಏಕತೆಯಿದೆಯೆಂದು ಅಭೇದತೆ ಮಾಡಿದರೆ ಧರ್ಮವು ಆಗುವಂತಿದೆ.

ಜ್ಞಾನ ಮತ್ತು ಆನಂದಗಳು ಆತ್ಮನ ಜತೆ ಸಂಬಂಧವಿಟ್ಟಿವೆ, ಅವು ಹೇಗೆ ಪ್ರಾಪ್ತವಾಗುತ್ತವೆ ಅದರ ಕಥನ ಇಲ್ಲಿದೆ. ಹೇಗೆ ಬೆಲ್ಲ ಮತ್ತು ಸಿಹಿತನದಲ್ಲಿ ನಾಮಭೇದವಿದ್ದರೂ ಅವು ಏಕರೂಪವಿವೆ, ಹಾಗೆ ಜ್ಞಾನ-ಆನಂದಗಳು ಸ್ವಭಾವ-ಸ್ವಭಾವವಂತನಾದ ಆತ್ಮನ ಜತೆ ಏಕರೂಪವಿವೆ. ಸ್ವಭಾವವು ಸ್ವಭಾವವಂತನಿಲ್ಲದೆ ಇರುವುದಿಲ್ಲ ಮತ್ತು ಸ್ವಭಾವವಂತನು ಸ್ವಭಾವವಿಲ್ಲದೆ ಇರುವುದಿಲ್ಲ. ಶಾಂತಿ ಮತ್ತು ಆನಂದಗಳು ಆತ್ಮನಿಂದ ಬೇರೆಯಾದ ವಸ್ತುವಿನಿಂದ ಪ್ರಾಪ್ತವಾಗುವುದಿಲ್ಲ. ಶ್ರದ್ಧೆ ಮತ್ತು ಶ್ರದ್ಧಾವಂತ, ಜ್ಞಾನ ಮತ್ತು ಜ್ಞಾನವಂತ, ಚಾರಿತ್ರ ಮತ್ತು ಚಾರಿತ್ರವಂತನೆಂದು ನಾಮಭೇದವಿದ್ದರೂ ಪ್ರದೇಶಭೇದವಿಲ್ಲ, ವಸ್ತುವುಏಕವಿದೆ. ಹೀಗೆ ಗುಣ ಮತ್ತು ಆತ್ಮನು ಅಭೇದನೆಂಬ ದೃಷ್ಟಿ ಮಾಡಿ ಒಳಗೆ ಏಕಾಗ್ರವಾದರೆ ಧರ್ಮ ಮತ್ತು ಶಾಂತಿಯು ಪ್ರಾಪ್ತವಾಗುವುದು.

**ಪ್ರಶ್ನೆ :-** ಇಂದ್ರಿಯ, ಶಬ್ದ, ಪುಸ್ತಕ ಮೊದಲಾದುವುಗಳ ನಿಮಿತ್ತವಿದ್ದರೆ ಜ್ಞಾನವಾಗುತ್ತದೆಯಲ್ಲವೇನು ?

**ಉತ್ತರ :-** ಜ್ಞಾನದ ಸಾಮರ್ಥ್ಯವು ತನ್ನಲ್ಲಿದೆ, ನಿಮಿತ್ತದಲ್ಲಿಲ್ಲ, ತಿಳಿಯುವ-ನೋಡುವ ಶಕ್ತಿಯು ಆತ್ಮನಲ್ಲಿಲ್ಲದಿದ್ದರೆ ನಿಮಿತ್ತವೇನು ಮಾಡುವುದು ? ನಿಮಿತ್ತದಲ್ಲಿ ತಿಳಿಯುವ-ನೋಡುವ ಶಕ್ತಿಯಿಲ್ಲ. ಅಜ್ಞಾನಿಯು ಪರದಿಂದ ಜ್ಞಾನ ವೃದ್ಧಿಸುತ್ತದೆಂದು ಮನ್ನಿಸಿ ಪರದಲ್ಲಿ ಸಿಕ್ಕಿಕೊಳ್ಳುತ್ತಾನೆ. ಆದರೆ ಆಂತರ್ಯದ ಧ್ರುವಸ್ವಭಾವದಲ್ಲಿ ಶಕ್ತಿಯಿದೆ ಮತ್ತು ಅದರಲ್ಲಿ ಏಕಾಗ್ರವಾಗುವುದರಿಂದ ಶುದ್ಧತೆಯಾಗುವುದೆಂಬ ಮಾತು ಅವನು ಒಪ್ಪುವುದಿಲ್ಲ. ಅಲ್ಲದೆ ಕನ್ನಡಕ ಮತ್ತು ಕಣ್ಣುಗಳಿದ್ದರೆ ಜ್ಞಾನವಾಗುತ್ತದೆಂದು ಅವನು ಮನ್ನಿಸುತ್ತಾನೆ. ಆದರೆ ಕನ್ನಡಕ ಮತ್ತು ಕಣ್ಣುಗಳಂತೂ ಜಡವಿದ್ದು ಅವೇನು ಮಾಡುವವು? ವರ್ತಮಾನ ಪರ್ಯಾಯದ ಯೋಗ್ಯತೆಯ ಅನುಸಾರ ಉದಯವು ತನ್ನ ಕಾರಣದಿಂದ ಆದರೆ ಕನ್ನಡಕವನ್ನು ನಿಮಿತ್ತವೆಂದು ಹೇಳಲಾಗುವುದು. ಉಪಾದಾನದಲ್ಲಿ ಕಾರ್ಯವಾದಲ್ಲದೆ ನಿಮಿತ್ತವೇತರದು ? ಸ್ವಸಾಮರ್ಥ್ಯರೂಪ ಕ್ರಿಯೆಯ ಎದುರು ನಿಮಿತ್ತದಲ್ಲಿ ಕಾಲಭೇದವಿಲ್ಲ. ಸ್ವಯಂ ಜ್ಞಾನಮಾಡಿಕೊಂಡರೆ ಕಣ್ಣುಗಳನ್ನು ಮತ್ತು ಕನ್ನಡಕವನ್ನು ನಿಮಿತ್ತವೆಂದು ಹೇಳಲಾಗುವುದು.

ಯಾವುದೇ ದ್ರವ್ಯದ ಒಂದು ಸಮಯದ ಅವಸ್ಥೆಯನ್ನು ಪರದಿಂದೆಂದು ಮನ್ನಿಸಹೋದರೆ ಅದರ ವರ್ತಮಾನವು ಉಳಿಯುವುದಿಲ್ಲ. ಒಂದು ಸಮಯದ ವರ್ತಮಾನ ಮನ್ನಿಸದಿದ್ದರೆ ದ್ರವ್ಯವು ತ್ರಿಕಾಲ ವರ್ತಮಾನ ರಹಿತವಾಗುವುದು, ದ್ರವ್ಯದ ನಾಶವಾಗುವುದು, ವಿದ್ಯಾರ್ಥಿಯ ಅಭ್ಯಾಸದಲ್ಲಿ ಪ್ರಕಾಶ ಮತ್ತು ಉಪಾಧ್ಯಾಯನು ನಿಮಿತ್ತನಿದ್ದಾನೆ, ಆದರೆ ವಿದ್ಯಾರ್ಥಿಯಲ್ಲಿ ತಿಳಿದುಕೊಳ್ಳುವ ಶಕ್ತಿಯಿಲ್ಲದಿದ್ದರೆ ಉಪಾಧ್ಯಾಯ ಮತ್ತು ಪ್ರಕಾಶವೇನು ಮಾಡುವುದು ? ಕೋಲಿನ ಹತ್ತಿರ ಉಪಾಧ್ಯಾಯ ಮತ್ತು ಪ್ರಕಾಶವಿಟ್ಟರೆ ಕೋಲಿಗೆ ಜ್ಞಾನವಾಗುವುದಿಲ್ಲ. ಏಕೆಂದರೆ ಕೋಲಿನಲ್ಲಿ ಜ್ಞಾನವಿಲ್ಲದಿರುವುದರಿಂದ ಜ್ಞಾನವು ಪ್ರಕಟವಾಗುವುದಿಲ್ಲ. ಆದುದರಿಂದ ಉಪಾಧ್ಯಾಯ ಮತ್ತು ಪ್ರಕಾಶವನ್ನು ಕೋಲಿಗೆ ನಿಮಿತ್ತವೆಂದು ಹೇಳಲಾಗುವುದಿಲ್ಲ. ಆದರೆ ವಿದ್ಯಾರ್ಥಿಯು ತನ್ನ ಕಾರಣದಿಂದ ಜ್ಞಾನ ಪ್ರಕಟಮಾಡಿಕೊಂಡರೆ ಉಪಾಧ್ಯಾಯ ಮತ್ತು ಪ್ರಕಾಶವನ್ನು ನಿಮಿತ್ತವೆಂದು ಹೇಳಲಾಗುತ್ತದೆ. ಅದಕ್ಕಾಗಿ ಜ್ಞಾನವು ತನ್ನಿಂದ ಪ್ರಕಟವಾಯಿತೆಂದು ನಿಶ್ಚಿತವಾಯಿತು. ಜ್ಞಾನದ ಪರಿಣಮನವು ತನ್ನ ಕಾರಣದಿಂದ ಆಗದಿದ್ದರೆ ಮತ್ತು ಬಾಹ್ಯಶರೀರವು ಸರಿಯಾಗಿದ್ದರೇನು ಮಾಡುವುದು ? ಆದರೆ ಅಜ್ಞಾನೀ ಜೀವನು ಅಂತರ್ಮುಖ ಶ್ರದ್ಧೆ ಮಾಡುವುದಿಲ್ಲ ಮತ್ತು ಬಹಿರ್ಮುಖ ಶ್ರದ್ಧೆಯನ್ನು ಬಿಟ್ಟು ಕೊಡುವುದಿಲ್ಲ.

ತಟ್ಟೆ ಆಧಾರ ಮತ್ತು ಲಡ್ಡು ಆಧೇಯವಿದೆ. ಇದೇ ರೀತಿ ದ್ರವ್ಯಕ್ಕೆ ಗುಣವಿಲ್ಲ, ತಟ್ಟೆ ಮತ್ತು ಲಡ್ಡು ಸರ್ವಥಾ ಭಿನ್ನವಿವೆ ಹಾಗೆ ದ್ರವ್ಯ ಮತ್ತು ಗುಣ ಸರ್ವಥಾ ಭಿನ್ನವಿಲ್ಲ. ಶರೀರ, ಮನ, ವಾಣಿ ಇವು ಆತ್ಮನಿಂದ ಸರ್ವಥಾ ಭಿನ್ನವಿವೆ. ಅದಕ್ಕಾಗಿ ಶರೀರ, ಮನ, ವಾಣಿಗಳು ಧರ್ಮದ ಆಧಾರರೂಪವಿಲ್ಲ. ಜ್ಞಾನ-ದರ್ಶನಗಳ ಆಧಾರನು ಆತ್ಮನಿದ್ದಾನೆ, ಆಧಾರನಾದ ಆತ್ಮನಿಗೆ ಜ್ಞಾನ-ದರ್ಶನದ ಪರ್ಯಾಯಗಳು ಆಧೇಯವಿವೆ, ಹೀಗೆ ನಾಮಭೇದವಿದ್ದರೂ ಕೂಡ

ಪ್ರದೇಶಭೇದವಿಲ್ಲ.

'ಯಾವುವಕ್ಕೆ ಪ್ರದೇಶಗಳ ಏಕತೆಯಿದೆ ಅವನ್ನೇ ಗುಣ-ಗುಣಿಯೆಂದೂ ಹೇಳುತ್ತಾರೆ. ಜ್ಞಾನ ಮತ್ತು ಜ್ಞಾನಿಯಲ್ಲಿ ಸಂಯೋಗಸಂಬಂಧವಿಲ್ಲ, ಆದರೆ ತನ್ಮಯಭಾವವಿದೆ.''

ಯಾವುವಕ್ಕೆ ಪ್ರದೇಶಗಳ ಏಕತೆಯಿದೆ ಅವನ್ನು ಗುಣ-ಗುಣಿಯ ಏಕತೆಯೆಂದು ಹೇಳುತ್ತಾರೆ. ಜ್ಞಾನಕ್ಕೆ ಮತ್ತು ಆತ್ಮನಿಗೆ ಸಂಯೋಗ ಸಂಬಂಧವಿಲ್ಲ, ಆದರೆ ತನ್ಮಯಭಾವವಿದೆ. ಬೆಲ್ಲವು ಗುಣಿಯಿದ್ದರೆ ಸಿಹಿತನವು ಗುಣವಿದೆ, ನಾಮಭೇದವಿದೆ, ವಸ್ತು ಬೇರೆಯಿಲ್ಲ, ಪ್ರದೇಶಗಳು ಬೇರೆಯಿಲ್ಲ. ಅದರಂತೆ ಆತ್ಮ ಮತ್ತು ಜ್ಞಾನ, ಆನಂದ, ವೀರ್ಯ ಮೊದಲಾದ ಶಕ್ತಿಗಳ ಹೆಸರು ಬೇರೆಯಿದೆ, ಆದರೆ ಶಕ್ತಿ ಮತ್ತು ಶಕ್ತಿವಂತನು ಬೇರೆಯಿಲ್ಲ. ಆತ್ಮ ಮತ್ತು ಕರ್ಮ, ವಾಣಿಗಳು ಬೇರೆಯಿವೆ, ಅವುಗಳಲ್ಲಿ ಪೃಥಕ್ಕತೆಯಿದೆ ಏಕತೆಯಿಲ್ಲ, ಹೀಗೆ ಪರದಿಂದ ಭೇದಜ್ಞಾನ ಮಾಡಿಸಿದೆ.

ಶರೀರವು ನಿರೋಗವಿದ್ದರೆ, ವಾಣಿಯು ಶ್ರವಣರೂಪವಿದ್ದರೆ ಧರ್ಮವಾಗುತ್ತದೆಂದು ಅಜ್ಞಾನೀ ಜೀವನು ಹೇಳುತ್ತಾನೆ, ಆದರೆ ಅದು ಸರಿಯಿಲ್ಲ, ಭಿನ್ನವಸ್ತುವಿನಿಂದ ಧರ್ಮವಾಗುವುದಿಲ್ಲ. ಆತ್ಮ ಮತ್ತು ಶರೀರವೆಂದು ಹೇಳಿದರೆ ಎರಡು ವಸ್ತುಗಳು ಸಿದ್ಧವಾಗುತ್ತವೆ. ಇದು ಇದೆಯೆಂದು ಹೇಳುವುದು ನಂತರ ಅದು ನನ್ನದಿದೆಯೆಂದು ಹೇಳುವಲ್ಲಿ ವಿರೋಧವಿದೆ. 'ನಾನು' ಎಂದು ಹೇಳಿದರೆ ಪರದ ಕಾರಣದಿಂದ ನಾನಿಲ್ಲ, ಪರವೆಂದು ಹೇಳಿದರೆ ಪರವು ಪರದ ಕಾರಣದಿಂದಿದೆ ನನ್ನ ಕಾರಣದಿಂದಿಲ್ಲ. ಎರಡು ಹೇಳಿದರೆ ಒಂದರಲ್ಲಿ ಇನ್ನೊಂದರ ಅಭಾವವು ಸಿದ್ಧವಾಗುತ್ತದೆ. ಶರೀರದ ಕಾರಣದಿಂದ ನಾನು ಮತ್ತು ನನ್ನ ಕಾರಣದಿಂದ ಶರೀರವೆಂದು ಮನ್ನಿಸಹೋದರೆ ಎರಡು ವಸ್ತು ಉಳಿಯುವುದಿಲ್ಲ, ಎರಡು ವಸ್ತುಗಳು ಪೃಥಕ್ ಇವೆ ವರ್ತಮಾನದಲ್ಲಿ ಪೃಥಕ್ಕಿದ್ದವು ತ್ರಿಕಾಲ ಪೃಥಕ್ ಇವೆ ಮತ್ತು ತ್ರಿಕಾಲಪೃಥಕ್ಕಿದ್ದವು ವರ್ತಮಾನದಲ್ಲಿ ಪೃಥಕ್ ಇವೆ.

ಅನುಕೂಲ ಸಂಯೋಗಗಳಿದ್ದರೆ ಸ್ವಭಾವಕ್ಕೆ ಲಾಭವಾಗುವುದೆಂದು ಮನ್ನಿಸುವವನು ಸಂಯೋಗ ಮತ್ತು ಸ್ವಭಾವವನ್ನು ಏಕರೂಪವಾಗಿ ಮನ್ನಿಸಿದ್ದಾನೆ. 'ಸಂಯೋಗಗಳನ್ನು ತ್ಯಜಿಸುವುದೆಂದು ಹೇಳಿರುವುದರ ಅರ್ಥವೇನು ? ಸಂಯೋಗಗಳು ಪರವಿದ್ದು ನಾನು ಅವುಗಳಿಂದ ಬೇರೆಯಿದ್ದೇನೆ, ಸಂಯೋಗಗಳ ಜತೆ ಒಂದಾಗಿ ಹೋಗಿಲ್ಲ, ಸಂಯೋಗವೆಂದರೆ ಏಕತೆಯಿಲ್ಲ, ಆದರೆ ಪೃಥಕತೆಯಿದೆ. ತಾನು ಸ್ವಭಾವದ ಕರ್ತೃವಿದ್ದಾನೆ, ಆದರೆ ಸಂಯೋಗಗಳ ಕರ್ತೃವಿಲ್ಲ ಹೀಗೆ ಆಂತರ್ಯದಲ್ಲಿ ತಿಳಿದುಕೊಂಡಲ್ಲದೆ ಪರದಿಂದ ಹಿಂದಿರುಗುವುದಿಲ್ಲ.

**ಪ್ರಶ್ನೆ :-** ಎಲ್ಲಿ ಕೂಡ್ರುವುದಿದೆ ? ಆ ಸ್ಥಾನ ಸ್ವಚ್ಛಮಾಡಬೇಕು ಮತ್ತು ವ್ಯವಸ್ಥೆ ಮಾಡಬೇಕು ಎಂದರೆ ಶಾಂತಿಯಿಂದ ಕೂಡ್ರಬಹುದು ಅದರಂತೆ ಸ್ವಯಂ ಯಾವ ಕ್ಷೇತ್ರ ಮತ್ತು ಸಮಾಜದಲ್ಲಿರುವುದು ಅದರ ಸರಿಯಾದ ವ್ಯವಸ್ಥೆಯಿದ್ದರೆ ಶಾಂತಿಯಿರುವುದಿಲ್ಲವೇನು ?

**ಉತ್ತರ :-** ಸೋದರನೇ ! ಬಾಹ್ಯಸಂಯೋಗ ಹಾಗೂ ಸಮಾಜ ಮತ್ತು ನೀನು ಏಕವೋ ಅಥವಾ ಭಿನ್ನವಿರುವೆಯೋ ? ಇವುಗಳಿಂದ ನಿನಗೆ ಶಾಂತಿಯಿದ್ದರೆ ನೀನು ಶಾಂತಿರಹಿತನಾಗಿ ಹೋದೆ ಮತ್ತು ನಿನ್ನ ಶಾಂತಿಯು ಪರ ಸಂಯೋಗಗಳ ಕಾರಣದಿಂದಿದ್ದರೆ, ಸಂಯೋಗದೊಡನೆ ನೀನು ಒಂದಾಗಿ ಹೋದೆ, ಪೃಥಕತೆ ಉಳಿಯುವುದಿಲ್ಲ. ಆದರೆ ಅದು ಸರಿಯಾದುದಲ್ಲ.

ನೀರಿನ ಅಲೆ ಮತ್ತು ಗಾಳಿ ತೀರ ಭಿನ್ನವಿವೆ, ಗಾಳಿಯಿಂದ ನೀರಿನ ಅಲೆಗಳಿಲ್ಲ. ನೀರಿನ ತರಂಗ ಮತ್ತು ನೀರು ಭಿನ್ನವಿಲ್ಲ. ಹಾಗೆ ಸ್ತ್ರೀ, ಮಕ್ಕಳು, ಶರೀರ, ಬಾಹ್ಯಪದಾರ್ಥಗಳು ಮತ್ತು ನೀನು ತೀರ ಭಿನ್ನವಿರುವುದರಿಂದ ಆ ಪರವಸ್ತುಗಳ ಕಾರಣದಿಂದ ನಿನ್ನ ಜ್ಞಾನಪರ್ಯಾಯವಾಗುತ್ತದೆಂಬುದು ಸಾಧ್ಯವಿಲ್ಲ, ಆದರೆ ನಿನ್ನ ಜ್ಞಾನಪರ್ಯಾಯವು ನಿನ್ನ ಆಧಾರದಿಂದಿದೆ.

ಶರೀರವು ಸರಿಯಾಗಿದ್ದರೆ ಧರ್ಮವಾಗುವುದು ಮತ್ತು ಶ್ರವಣವಿದ್ದರೆ ಧರ್ಮದ ಜ್ಞಾನವು ವೃದ್ಧಿಸುವುದೆಂದು ಜಗತ್ತಿಗೆ ಭ್ರಾಂತಿಯಿದೆ. ಸೋದರನೇ ! ಶ್ರವಣವು ನಿನಗೆ ಜ್ಞಾನಮಾಡುವುದೇನು ? ಆ ಶ್ರವಣದ ಜತೆ ಆತ್ಮನ ಏಕತೆಯಿದ್ದರೆ ಎಲ್ಲರಿಗೆ ಒಂದೇತರ ಜ್ಞಾನವಾಗಬೇಕು, ಎಷ್ಟು ಏಕಾಗ್ರತೆ ಮಾಡುತ್ತಾನೆ ಅಷ್ಟು ಜ್ಞಾನವಾಗುತ್ತದೆಂದರೆ ಶ್ರವಣವನ್ನು ನಿಮಿತ್ತವೆಂದು ಹೇಳಲಾಗುವುದು. ನಿಮಿತ್ತವಾಗುವುದು ನಿಜವೇನು ? ಯಾವ ನಿಮಿತ್ತ ? ನೈಮಿತ್ತಿಕದಲ್ಲಿ ಕಾರ್ಯವಾದಲ್ಲದೆ ನಿಮಿತ್ತದ ಮೇಲೆ ಆರೋಪವಾಗುವುದಿಲ್ಲ., ಇನ್ನು ಜ್ಞಾನದ ಅವಸ್ಥೆಯಾಗಿಲ್ಲ ಅಲ್ಲಿ ನಿಮಿತ್ತವೇತರದು ? ಯಾವಾಗ ಜ್ಞಾನದ ಅವಸ್ಥೆಯಾಗುತ್ತದೆ ಆಗ ಶ್ರವಣವನ್ನು ನಿಮಿತ್ತವೆಂದು ಹೇಳಲಾಗುವುದು. ನಿಮಿತ್ತವು ನೈಮಿತ್ತಿಕದಲ್ಲೇನು ಮಾಡಿತು ? ಆತ್ಮನು ಜ್ಞಾನಸ್ವಭಾವಿಯಾದ ವಸ್ತುವಿದ್ದಾನೆ ಅವನು ಸ್ಥಿರವಾಗಿದ್ದು ಸಮಯ-ಸಮಯಕ್ಕೆ ಜ್ಞಾನದ ಪರಿಣಮನವಾಗುತ್ತಿರುತ್ತದೆ ಮೊದಲು ವಿಶ್ವಾಸವಿರಲಿಲ್ಲ ಕೇಳಿದ ನಂತರ ವಿಶ್ವಾಸವಾಯಿತೆನ್ನುವುದೂ ಕೂಡ ಭ್ರಾಂತಿಯಿದೆ. ಜ್ಞಾನದ ವಿಶ್ವಾಸದ ಕ್ರಿಯೆಯು ತನ್ನಲ್ಲಿ ತನ್ನ ಕಾರಣದಿಂದ ಆಗುತ್ತದೆ. ಕಾರಣದಲ್ಲಿ-ಗುಣದಲ್ಲಿ ಮತ್ತು ಆತ್ಮನಲ್ಲಿ ಏಕತೆಯಿದೆ.

ಯಾವ ಜೀವನು ತನ್ನ ಜ್ಞಾನ ಮತ್ತು ಶಾಂತಿಯು ಬಾಹ್ಯದಿಂದ ಬರುತ್ತದೆಂದು ಮನ್ನಿಸುತ್ತಾನೆ ಅವನು ಸದಾ ಪರವನ್ನು ನೋಡುತ್ತಾನೆ ಅವನಿಗೆ ಒಳಗೆ ನೋಡುವ ಅವಕಾಶ ಉಳಿಯುವುದಿಲ್ಲ. ಶಾಂತಿಯು ಬಾಹ್ಯದಿಂದೆಂದೂ ಬರುವುದಿಲ್ಲ. ಅವನಿಗೆಂದೂ ಶಾಂತಿಯಾಗುವುದಿಲ್ಲ.

ಜ್ಞಾನ ಮತ್ತು ಆತ್ಮನಲ್ಲಿ ಸಂಯೋಗ ಸಂಬಂಧವಿಲ್ಲ. ಆದರೆ ತನ್ಮಯಭಾವವಿದೆ. ಹೇಗೆ ಜ್ಞಾನದ ಎಲ್ಲ ಗುಣ-ಪರ್ಯಾಯಗಳು ಆತ್ಮನ ಜತೆ ತನ್ಮಯಭಾವವಿದೆ ಹಾಗೆ ಕರ್ಮ, ಶರೀರದ್ದು ಆತ್ಮನ ಜತೆ ತನ್ಮಯ ಭಾವವಿಲ್ಲ ವಿಕಾರಕ್ಕೆ ಮತ್ತು ಆತ್ಮನಿಗೆ ಒಂದು ಸಮಯದ ತನ್ಮಯಭಾವವಿದೆ, ತ್ರಿಕಾಲೀ ತನ್ಮಯಭಾವವಿಲ್ಲ. ಹೀಗೆ ಪರದಿಂದ ಭಿನ್ನವಾದರೆ, ಕ್ಷಣಿಕವಿಕಾರದಿಂದ ಭಿನ್ನವಾದರೆ ತ್ರಿಕಾಲೀದ್ರವ್ಯದ ಆಶ್ರಯ ಪಡೆದರೆ ಆಗ ಧರ್ಮವಾಗುವುದು.

ತಾನು ಧ್ಯಾನಮಾಡಿ ಶಾಂತಿ ಪಡೆಯಬೇಕೆಂದು ಕೆಲವರು ಹೇಳುತ್ತಾರೆ. ಆದರೆ ಸೋದರನೇ ! ಯಾವುದರ ಧ್ಯಾನ ಮಾಡುವೆ ? ಧ್ಯೇಯವನ್ನು ಲಕ್ಷ್ಯದಲ್ಲಿ ತಂದುಕೊಂಡು ಏಕಾಗ್ರವಾಗುವುದರ ಹೆಸರು ಧ್ಯಾನವಿದೆ ನಿನಗೆ ಧ್ಯೇಯವೆಂದರೇನೆಂಬುದರ ಅರಿವಿಲ್ಲ. ತನ್ನ ಶಕ್ತಿಯು ತನ್ನಿಂದ ಪ್ರಕಟವಾಗುತ್ತದೆಯೆಂಬ ತಿಳಿವಳಿಕೆಯಿಲ್ಲದೆ ಧ್ಯಾನವಾಗುವುದಿಲ್ಲ. ಶ್ರದ್ಧೆ, ಜ್ಞಾನ, ಚಾರಿತ್ರ ಮೊದಲಾದ ಶಕ್ತಿಗಳು ಶಕ್ತಿವಂತನಿಂದ ಪ್ರಕಟಿಸುತ್ತವೆಂಬ ಜ್ಞಾನವಾದಲ್ಲದೆ ಜ್ಞಾನದ ವಿಷಯವು ತನಗೆ ತಿಳಿಯುವುದಿಲ್ಲ. ಧ್ಯೇಯವಿಲ್ಲದೆ ಧ್ಯಾನವಾಗುವುದಿಲ್ಲ. ಸ್ವಯಂ ಸಿದ್ಧತತ್ತ್ವನಿದ್ದೇನೆಂಬ ಸ್ವೀಕೃತಿಯಿಲ್ಲದೆ ಜ್ಞಾನದ ತಪ್ಪು ತಿಳಿವಳಿಕೆಯು ಹೋಗಲಾರದು, ತಪ್ಪು ಜ್ಞಾನವೆಂದೂ ಸುಖವನ್ನು ಕೊಡಲಾರದು.

ಮೆಣಸಿನಕಾಳಿನಲ್ಲಿ ಶಕ್ತಿಯಿದೆ ಅದು ವ್ಯಕ್ತವಾಗುತ್ತದೆ. ಪಾಷಾಣದ ಕಾರಣದಿಂದ ಅದು ವ್ಯಕ್ತವಾಗುವುದಿಲ್ಲ. ಪಾಷಾಣ ಮತ್ತು ಮೆಣಸಿನಕಾಳಿನ ಮಧ್ಯದಲ್ಲಿ ಅಭಾವದ ದೊಡ್ಡ ಅಂತರವಿದೆ. ಪಾಷಾಣವು ಮೆಣಸಿನ ಕಾಳನ್ನು ತಡೆಯುವುದಿಲ್ಲ. ಅಭಾವವೇನು ಸಹಾಯ ಮಾಡುವುದು ? ಪಾಷಾಣವು ದೂರವಿದ್ದಾಗ ಅಭಾವವು ಭಾಸವಾಗುವುದು, ಆದರೆ ಪಾಷಾಣವು ಮೆಣಸಿನಕಾಳಿನ ಹತ್ತಿರ ಎಂದರೆ ಆಕಾಶ ಕ್ಷೇತ್ರದ ಹತ್ತಿರ ಬಂದಾಗ ಪಾಷಾಣ ಮತ್ತು ಮೆಣಸಿನಕಾಳಿನ ಮಧ್ಯದ ಅಭಾವವು ಕಂಡುಬರುವುದಿಲ್ಲ, ಇದು ಭ್ರಮೆಯಿದೆ. ಅಜ್ಞಾನಿಗೆ ಸಂಯೋಗದೃಷ್ಟಿಯಿದೆ. ಪುಸ್ತಕ ಮೊದಲಾದ ಬಾಹ್ಯಪದಾರ್ಥಗಳದ್ದು ನಿನ್ನಲ್ಲಿ ಅಭಾವವಿದೆ. ಪುದ್ಗಲ ಪರಮಾಣುಗಳು ಕೂಡ ನಿನ್ನಲ್ಲಿ ಅಭಾವರೂಪವಿವೆ. ಆದರೆ ಆ ಪುದ್ಗಲಪರಮಾಣುಗಳು ದೂರವಿರುವವರೆಗೆ ಅಭಾವವು ಭಾಸವಾಗುತ್ತದೆ, ಆದರೆ ಆ ಪರಮಾಣುಗಳು ಬದಲಾಗಿ ಶರೀರ ಮತ್ತು ಕರ್ಮರೂಪವಾಗಿ ಹತ್ತಿರ ಬಂದರೆ ಎಂದರೆ ಆಕಾಶದ ಒಂದು ಕ್ಷೇತ್ರದಲ್ಲಿ ಹತ್ತಿರ ಬಂದಾಗ ಅಜ್ಞಾನಿಗೆ ಏಕತೆಯು ಭಾಸವಾಗುತ್ತದೆ. ಹತ್ತಿರ ಬಂದಾಗ ಆತ್ಮ ಮತ್ತು ಶರೀರ ಒಂದಾಗಿ ಹೋಗಿವೆಯೆಂದು ತಿಳಿಯುತ್ತಾನೆ, ಹಾಗೆ ಅವನಿಗೆ ಭಾಸವಾಗುತ್ತದೆ. ದೂರವಿದ್ದಾಗ ಎರಡೂ ಪದಾರ್ಥಗಳು ಭಿನ್ನವಿದ್ದವು ಮತ್ತು ಹತ್ತಿರವಿದ್ದರೂ ಕೂಡ ಭಿನ್ನವಿವೆ.

ಎರಡೂ ಸೇರಿ ಒಂದರ ಕಾರ್ಯ ಮಾಡಿದರೆ ಪೃಥಕ್ ಇರುವುದಿಲ್ಲ ಅದಕ್ಕಾಗಿ ಆತ್ಮನು ಶರೀರ ಮತ್ತು ಕರ್ಮಾದಿಗಳಿಂದ ಪೃಥಕ್ ಇದ್ದಾನೆ ಮತ್ತು ಜ್ಞಾನಾದಿಗುಣಗಳಿಂದ ತನ್ಮಯನಿದ್ದಾನೆ. ಹೀಗೆ ಪರದಿಂದ ಅಭಾವರೂಪವಾಗಿದ್ದು ತನ್ನಲ್ಲಿ ಏಕತ್ವಬುದ್ಧಿ ಮಾಡುವುದು ಅದು ಧರ್ಮವಿದೆ.

ಯಾರಿಗೆ ಧರ್ಮ ಮಾಡುವುದಿದೆ ಅವರು ಗುಣೀ ಆತ್ಮನು ಎಲ್ಲಿದ್ದಾನೆಂಬುದನ್ನು ಶೋಧಿಸಬೇಕಾಗುವುದು. ಗುಣ ಮತ್ತು ಗುಣೀನಾಮದಿಂದ ಬೇರೆಯಿರುವಂತೆ ಪ್ರದೇಶಗಳು ಬೇರೆಯಿವೆಯೇನು ? ಹೇಗೆ ಕರ್ಮ, ಮನ, ವಾಣಿಯ ಕ್ಷೇತ್ರಗಳು ಬೇರೆಯಿವೆ ಹಾಗೆ ಆತ್ಮ ಮತ್ತು ಗುಣಗಳ ಪ್ರದೇಶಗಳು ಬೇರೆಯಿದ್ದವು ಮತ್ತು ನಂತರ ಅವು ಏಕತ್ರವಾದವೇನು? ಕಟ್ಟಿಗೆ ಮತ್ತು ಅರಗು ಹೇಗೆ ಏಕತ್ವವಾಗಿದೆ ಹಾಗೆ ಆತ್ಮ ಮತ್ತು ಜ್ಞಾನವು ನಂತರ ಏಕತ್ವವಾಗಿರ ಬೇಕೇನು ? ಈ ಪ್ರಕಾರದ ಮನ್ನಣೆಯುಳ್ಳವರ ನಿಷೇಧವನ್ನು ಈ ಗಾಥೆಯಲ್ಲಿ ಮಾಡಲಾಗಿದೆ.

**ಣ ಹಿ ಸೋ ಸಮವಾಯದೋ ಅತ್ಥಂತರಿದೋ ದು ಣಾಣದೋ ಣಾಣೀ ।**
**ಅಣ್ಣಾಣೀತಿ ಯ ವಯಣಂ ಏಗತ್ತಪಸಾಧಗಂ ಹೋದಿ ॥೪೯॥**

**ಜ್ಞಾನದಿಂದರ್ಥಾಂತರಭೂತನಾದಾತ್ಮ ಸಮವಾಯದಿಂ ಜ್ಞಾನಿಯಾಗುವನು ।**
**ಎನ್ನುವೀ 'ಅಜ್ಞಾನಿ'ಯ ವಚನವದು ಏಕತ್ವವನು ಸಿದ್ಧಮಾಡುವುದು ॥೪೯॥**

**ಅರ್ಥ :-** ನಿಶ್ಚಯದಿಂದ ಈ ಚೈತನ್ಯಸ್ವರೂಪನಾದ ಆತ್ಮನು ತನ್ನ ಜ್ಞಾನಗುಣದಿಂದ ಭಿನ್ನಸ್ವರೂಪವಂತೂ ಇಲ್ಲ, ಏಕೆಂದರೆ ಆತ್ಮನು ಅಜ್ಞಾನಗುಣಸಂಯುಕ್ತನಿದ್ದಾನೆಂಬ ಕಥನವು ಗುಣ-ಗುಣಿಯಲ್ಲಿ ಏಕತ್ವವನ್ನು ಸಾಧಿಸುವಂಥದ್ದಿರುತ್ತದೆ.

ನಿಜವಾಗಿ ಆತ್ಮನು ಚೈತನ್ಯಸ್ವರೂಪನಿದ್ದಾನೆ, ಅವನು ತನ್ನ ಜ್ಞಾನ ಮೊದಲಾದ ಗುಣಗಳಿಂದ ಬೇರೆಯಿಲ್ಲ, ಶರೀರ-ಕರ್ಮ ಮೊದಲಾದವುಗಳಿಂದ ಭಿನ್ನನಿದ್ದಾನೆ ಆತ್ಮನು ಯಾವವುಗಳಿಂದ ಭಿನ್ನನಿದ್ದಾನೆ ಅವುಗಳಿಂದ ಅಜ್ಞಾನಿಯು ಸಂಯುಕ್ತನೆಂದು ಮನ್ನಿಸಿದ್ದಾನೆ ಮತ್ತು ಜ್ಞಾನ-ದರ್ಶನಾದಿಗಳು ಬಾಹ್ಯದಿಂದ ಪ್ರಕಟವಾಗುತ್ತವೆಂದು ಮನ್ನಿಸಿ ಜ್ಞಾನವನ್ನು ಬೇರೆಯೆಂದು ಮನ್ನಿಸಿದ್ದಾನೆ ಅದು ಭ್ರಾಂತಿಯಿದೆ. ಆದರೆ ಜ್ಞಾನ ಮೊದಲಾದವು ತನ್ನಿಂದ ಬೇರೆಯಿಲ್ಲ. ಇನ್ನು ಜ್ಞಾನ ಮೊದಲಾದವುಗಳು ಬೇರೆಯಿದ್ದವು ಅವು ಅನಂತರ ಬಂದು ಸೇರಿಕೊಂಡವೆಂಬುದಾಗಿಯೂ ಇಲ್ಲ. ಏಕೆಂದರೆ ಜ್ಞಾನವಿಲ್ಲದಾಗ ಅಜ್ಞಾನವಿತ್ತು ಆ ಅಜ್ಞಾನವು ಕೂಡ ಅವನ ಭಾವವಿತ್ತು, ದುಃಖರೂಪವಾದ ಭಾವ, ವಿಪರೀತ ಶ್ರದ್ಧೆ ಮೊದಲಾದ ಭಾವಗಳು ಕೂಡ ಆತ್ಮನ ಭಾವಗಳಿವೆ. ಆದರೆ ಆ ಭಾವಗಳು ಪರದ ಕಾರಣದಿಂದ ಸಿದ್ಧವಾಗುವುದಿಲ್ಲ. ಗುಣಸಹಿತವಾದ ಭಾವ ಅಥವಾ ಗುಣರಹಿತವಾದ ಭಾವಗಳು ಆತ್ಮನವಿವೆಯೆಂದು ನಿಶ್ಚಯಮಾಡಿದ ಮೇಲೆ ಗುಣ-ಗುಣಿಯ ಏಕತೆಯು ಸಿದ್ಧವಾಗುತ್ತದೆ.

**ಭಾವಾರ್ಥ :-** ಆತ್ಮನಿಗೆ ಮತ್ತು ಜ್ಞಾನಗುಣಕ್ಕೆ ಪ್ರದೇಶಭೇದವಿಲ್ಲದ ಏಕತೆಯಿದೆ. ಆತ್ಮನು ಅಸಂಖ್ಯಾತ ಪ್ರದೇಶಿಯಿದ್ದಾನೆ ಮತ್ತು ಗುಣಗಳು ಕೂಡ ಅಲ್ಲಿರುತ್ತವೆ, ಅವುಗಳ ಪ್ರದೇಶಗಳು ಬೇರೆಯಿಲ್ಲ. ಯಾವ ಜೀವನು ಶರೀರದಿಂದ ಧರ್ಮವಾಗುತ್ತದೆಂದು ಮನ್ನಿಸಿದ್ದಾನೆ ಮತ್ತು ಜ್ಞಾನವು ಸಂಯೋಗದಿಂದ ಪ್ರಕಟವಾಗುತ್ತದೆಂದು ಮನ್ನಿಸಿದ್ದಾನೆ ಅವನು ಜ್ಞಾನ ಮತ್ತು ಧರ್ಮವನ್ನು ತನ್ನ ಆತ್ಮನಿಂದ ಬೇರೆಯಾಗಿ ಮನ್ನಿಸಿದ್ದನೆ, ಗುಣ-ಗುಣಿಯನ್ನು ಒಂದಾಗಿ ಮನ್ನಿಸಿಲ್ಲ. ತನ್ನ ಧರ್ಮದ ಸಲುವಾಗಿ ಬಾಹ್ಯದಲ್ಲಿ ಶೋಧ ಮಾಡಬೇಕಾಗುತ್ತದೆಂಬುದಾಗಿಲ್ಲ, ಆದರೆ ತನ್ನಲ್ಲಿಯೇ ಧರ್ಮವಾಗುತ್ತದೆ.

ಜ್ಞಾನ ಮತ್ತು ಆತ್ಮನು ಬೇರೆಯಿದ್ದಾನೆಂದು ಯಾರಾದರೂ ಹೇಳಿದರೆ ಅವರಿಗೆ ಜ್ಞಾನದ ಸಂಬಂಧವು ಆತ್ಮನಿಗೆ

ಪೂರ್ವದಲ್ಲಿ ಇಲ್ಲದಾಗ ಆತ್ಮನು ಜ್ಞಾನಿಯಿದ್ದನೋ ಅಥವಾ ಅಜ್ಞಾನಿಯಿದ್ದನೆಂದು ನಾವು ಕೇಳುತ್ತೇವೆ, ಅದಕ್ಕೆ ಆತ್ಮನು ಜ್ಞಾನಿಯಿದ್ದನೆಂದು ಅವರು ಹೇಳಿದರೆ ಜ್ಞಾನ ಮತ್ತು ಆತ್ಮನು ಬೇರೆಯಿದ್ದಾನೆಂಬ ಕಥನ ಮಾಡುವ ಅವಶ್ಯಕತೆಯಿಲ್ಲ. ಆತ್ಮನು ಜ್ಞಾನಾನಂದ ಸ್ವರೂಪನೇ ಇದ್ದಾನೆಂಬ ದೃಷ್ಟಿ ಮಾಡಿದರೆ ಧರ್ಮವಾಗುವುದು.

ಅಥವಾ ಆತ್ಮನು ಮೊದಲು ಅಜ್ಞಾನಿಯಿದ್ದನು ಮತ್ತು ಅನಂತರ ಜ್ಞಾನದ ಸಂಬಂಧವಾಗುವುದರಿಂದ ಜ್ಞಾನಿಯಾದನೆಂದು ಅವರು ಹೇಳಿದರೆ ಆತ್ಮನು ಅಜ್ಞಾನಿಯಿದ್ದಾಗ ಅಜ್ಞಾನಗುಣದ ಸಂಬಂಧದಿಂದ ಅಜ್ಞಾನಿಯಿದ್ದನೋ ಅಥವಾ ಅಜ್ಞಾನಗುಣದಿಂದ ಒಂದಾಗಿದ್ದನೆಂದು ನಾವು ಕೇಳುತ್ತೇವೆ ಅದಕ್ಕೆ ಅವರು'ಅಜ್ಞಾನ ಗುಣದ ಸಂಬಂಧದಿಂದ ಅಜ್ಞಾನಿಯಿದ್ದನೆ'ಂದು ಹೇಳಿದರೆ ಅವನು ಮೊದಲಿನಿಂದಂತೂ ಅಜ್ಞಾನಿಯೇ ಇದ್ದನು, ಅಜ್ಞಾನದ ಸಂಬಂಧದಿಂದೇನೂ ಪ್ರಯೋಜನವಿಲ್ಲ, ಅದಕ್ಕಾಗಿ ಅವನು ಸ್ವಭಾವದಿಂದಲೇ ಅಜ್ಞಾನಿಯಾದನು ಶರೀರ, ಕರ್ಮ ಮೊದಲಾದ ಪರಪದಾರ್ಥಗಳನ್ನು ತನ್ನವೆಂದು ಮನ್ನಿಸಿ ಸ್ವಯಂ ಅಜ್ಞಾನಿಯಾಗಿದ್ದಾನೆ. ಆ ಅಜ್ಞಾನವೇನು ಪರದ ಕಾರಣದಿಂದಿಲ್ಲ ಆದರೆ ತನ್ನ ಅಪರಾಧದ ಕಾರಣದಿಂದ ಇದೆ,

ಜ್ಞಾನ ಗುಣವನ್ನು ಆತ್ಮನ ಜತೆಯಲ್ಲಿ ಪ್ರದೇಶಭೇದವಿಲ್ಲದ ಏಕತೆಯೆಂದು ಮನ್ನಿಸಬೇಕಾದರೆ ಆತ್ಮನನ್ನು ಅಜ್ಞಾನಭಾವದ ಜತೆಯಲ್ಲಿ ಏಕಭಾವವೆಂದು ಮನ್ನಿಸಲಾಯಿತು ಮತ್ತು ಆ ಅಜ್ಞಾನೀಪದವು ನಿಶ್ಚಿತವಾಯಿತು. ಜ್ಞಾನ ಅಥವಾ ಅಜ್ಞಾನವು ತನ್ನಲ್ಲಿರುತ್ತದೆ ಅದು ಬಾಹ್ಯದ ಕಾರಣದಿಂದ ಇಲ್ಲ. ಆತ್ಮನು ಶುದ್ಧ, ಚಿದಾನಂದ ಪರಿಪೂರ್ಣನಿದ್ದಾನೆಂಬ ದೃಷ್ಟಿಯು ಹೊರಟುಹೋದರೆ ಅಜ್ಞಾನವು ತನ್ನಲ್ಲಿ ಆಗುತ್ತದೆ ಮತ್ತು ಆತ್ಮನ ಅರಿವು ಮೂಡಿದರೆ ಜ್ಞಾನವು ಕೂಡ ತನ್ನಲ್ಲಿ ಆಗುತ್ತದೆ, ಪರದಿಂದ ಆಗುವುದಿಲ್ಲ, ಪರದೊಳಗಿಂದ ಬರುವುದಿಲ್ಲ. ಈ ಕಾರಣದಿಂದ ಜ್ಞಾನ ಮತ್ತು ಆತ್ಮನಲ್ಲಿ ಅನಾದಿಯಿಂದ ಏಕತೆಯಿದೆ, ಅದು ಎಂದೂ ಪೃಥಕ್ ಇರುವುದಿಲ್ಲ.

ಜ್ಞಾನಕ್ಕೆ ಮತ್ತು ಆತ್ಮನಿಗೆ ಎಷ್ಟು ಏಕತೆಯಿದೆಯೆಂದರೆ ಜ್ಞಾನದ ಅಭಾವದಿಂದ ಆತ್ಮನ ಅಭಾವವಾಗಿ ಹೋಗುತ್ತದೆ. ಹೇಗೆ ಸಿಹಿತನದ ನಾಶದಿಂದ ಸಕ್ಕರೆಯ ನಾಶವಾಗುತ್ತದೆ ಹಾಗೆ ಜ್ಞಾನದ ನಾಶದಿಂದ ಆತ್ಮನ ನಾಶವಾಗುತ್ತದೆ ಆದರೆ ಹಾಗೆಂದೂ ಆಗುವುದಿಲ್ಲ. ಆತ್ಮನ ನಾಶವಂತೂ ಆಗುವುದಿಲ್ಲ, ಆದರೆ ಅಜ್ಞಾನಿಗೆ ಅವನ ದೃಷ್ಟಿಯಲ್ಲಿ ಆತ್ಮನು ಬರುವುದಿಲ್ಲ.

ಅಥವಾ ಹೀಗೆ ಮನ್ನಿಸದಿದ್ದರೆ ಆತ್ಮನು ಅಜ್ಞಾನಭಾವದ ಏಕತೆಯಿಂದ ಅವಶ್ಯವಾಗಿ ಅಜ್ಞಾನಿಯಾಗುತ್ತಾನೆ. ಆತ್ಮನು ಸಮ್ಯಗ್ದರ್ಶನದೊಡನೆ ಏಕತೆ ಹೊಂದದಿದ್ದರೆ ಮಿಥ್ಯಾದರ್ಶನದೊಡನೆ ಒಂದಾಗುತ್ತಾನೆ. ಆತ್ಮನು ಸಮ್ಯಗ್ಜ್ಞಾನದಿಂದ ಒಂದಾಗದಿದ್ದರೆ ಮಿಥ್ಯಾಜ್ಞಾನದಿಂದ ಒಂದಾಗುತ್ತಾನೆ. ಆತ್ಮನು ಸಮ್ಯಕ್ಚಾರಿತ್ರದಿಂದ ಒಂದಾಗದಿದ್ದರೆ ಮಿಥ್ಯಾಚಾರಿತ್ರದಿಂದ ಒಂದಾಗುತ್ತಾನೆ ಆತ್ಮನು ಪಂಡಿತವೀರ್ಯದಿಂದ ಒಂದಾಗದಿದ್ದರೆ ಬಾಲವೀರ್ಯದಿಂದ ಒಂದಾಗುತ್ತಾನೆ. ಆತ್ಮನು ತ್ರಿಕಾಲಿಯಿದ್ದಾನೆ ಅವನ ಗುಣಗಳು ಶುದ್ಧವಿವೆ ಮತ್ತು ಅವನ ಪರ್ಯಾಯದಲ್ಲಿ ಅರಿವು ಮೂಡಿದರೆ ನಿರ್ಮಲ ಪರ್ಯಾಯದಿಂದ ಒಂದಾಗುತ್ತಾನೆ ಮತ್ತು ಅರಿವು ಮೂಡದಿದ್ದರೆ ಅಜ್ಞಾನ ಮೊದಲಾದ ವಿಪರೀತ ಪರ್ಯಾಯಗಳಿಂದ ಒಂದಾಗುತ್ತಾನೆ.

ಅಥವಾ ಆತ್ಮನು ಅಜ್ಞಾನದ ನಾಶಮಾಡಿ ಜ್ಞಾನಿಯಾಗಿದ್ದಾನೆಂದು ಹೇಳಿದರೆ ಆ ಕಥನವು ಕರ್ಮದ ನಿಮಿತ್ತ ಸಂಬಂಧ ತಿಳಿಸುವ ವ್ಯವಹಾರನಯದಿಂದಿದೆಯೆಂದು ತಿಳಿಯುವುದು. ಆತ್ಮನ ಜ್ಞಾನ ಮಾಡಿಕೊಂಡು ಅಜ್ಞಾನದ ನಾಶಮಾಡಿ ಕರ್ಮದ ಅಭಾವವಾಯಿತೆನ್ನುವುದು ಅದು ನಿಮಿತ್ತದ ಕಥನವಿದೆ. ಆದರೆ ಅದರಿಂದ ಅಜ್ಞಾನಭಾವವು ಆತ್ಮನಿಂದ ಬೇರೆಯಿದೆಯೆಂಬ ಮಾತು ಬರುವುದಿಲ್ಲ. ಅಜ್ಞಾನವು ಹೋಯಿತು ಮತ್ತು ಜ್ಞಾನವು ನವೀನವಾಗಿ ಬಂದು ಅಂಟಿಕೊಂಡಿತೆಂಬುದು ಇದರ ಅರ್ಥವಲ್ಲ. ಜ್ಞಾನದ ವಿಪರೀತ ಅವಸ್ಥೆಯು ಹೋಯಿತು ಮತ್ತು ಕರ್ಮವು ಕೂಡ ನಿಮಿತ್ತರೂಪದಿಂದ ಹೊರಟುಹೋಯಿತು ಮತ್ತು ಜ್ಞಾನದ ಸರಳ ಅವಸ್ಥೆಯು ಪ್ರಕಟವಾಯಿತು ಹಾಗೂ ಕರ್ಮವು

ಹೊರಟುಹೋಯಿತು. ಆದರೆ ಹೊಸ ಜ್ಞಾನವು ಬಂದಿತೆಂಬುದು ಸಿದ್ಧವಾಗುವುದಿಲ್ಲ ಜೀವವು ವಿಕಾರ ಮಾಡಿದರೆ ತನ್ನ ಭಾವದಲ್ಲಿದೆ ಮತ್ತು ಜ್ಞಾನ ಮಾಡಿದರೂ ಕೂಡ ತನ್ನಲ್ಲಿ ಮಾಡುತ್ತದೆ. ಚಿಂತೆಯ ಸ್ಥಾನವು ಕೂಡ ತನ್ನಲ್ಲಿದೆ ಮತ್ತು ಚಿಂತೆಯ ಅಭಾವವೂ ಕೂಡ ತನ್ನಲ್ಲಿ ಆಗುತ್ತದೆ. ಪರದಲ್ಲಿ ಅಥವಾ ಪರದ ಅವಲಂಬನದಿಂದ ಆಗುವುದಿಲ್ಲ.

ಯಾವ ಪ್ರಕಾರ ಸೂರ್ಯನು ಮೋಡದಿಂದ ಆಚ್ಛಾದಿತನಾಗುವುದರಿಂದ ಪ್ರಕಾಶರಹಿತನೆಂದು ಹೇಳಲಾಗುತ್ತದೆ. ಆದರೆ ಸೂರ್ಯನು ತನ್ನ ಸ್ವಭಾವದಿಂದ ಆ ಪ್ರಭೆಯಿಂದ ಎಂದೂ ಬೇರೆಯಾಗುವುದಿಲ್ಲ. ಮೋಡದ ಆವರಣವಾಗುವುದರಿಂದ ಅವನ ಪ್ರಭೆಯಲ್ಲಿ ಹೀನಾಧಿಕತೆಯನ್ನು ಹೇಳಲಾಗುತ್ತದೆ. ಅದೇ ಪ್ರಕಾರ ಆತ್ಮನು ಅನಾದಿಯಿಂದ ಪುದ್ಗಲಕರ್ಮದ ಕಡೆಗಿನ ಪ್ರವೃತ್ತಿಯ ಭಾವದಿಂದ ಅಜ್ಞಾನಿಯಾಗಿದ್ದಾನೆ. ಆದರೆ ಅವನು ತನ್ನ ಸ್ವಾಭಾವಿಕ ಅಖಂಡ ಕೇವಲಜ್ಞಾನದ ಶಕ್ತಿಯಿಂದ ಯಾವ ಕಾಲದಲ್ಲೂ ಬೇರೆಯಾಗಿಲ್ಲ ಕರ್ಮದ ನಿಮಿತ್ತತೆಯಿಂದ ಹೀನತೆ-ಅಧಿಕತೆಯನ್ನು ಹೇಳಲಾಗುತ್ತದೆ.

ದೃಷ್ಟಾಂತವು ಏಕದೇಶ ದೊರಕುತ್ತದೆ ಪೂರ್ಣರೀತಿಯಿಂದ ದೊರಕುವುದಿಲ್ಲ. ಈ ದೃಷ್ಟಾಂತವಿತ್ತು ಕೇವಲಜ್ಞಾನವನ್ನು ಸತ್ತಾರೂಪ ಎಂದರೆ ಪ್ರಕಟರೂಪವೆಂದು ಮನ್ನಿಸಲಾಗಿದೆ. ಯಾವ ಪ್ರಕಾರ ಸೂರ್ಯನು ಪ್ರಕಟಜ್ವಾಜ್ವಲ್ಯಮಾನನಿದ್ದಾನೆ ಆದರೆ ಮೇಲೆ ಮೋಡವು ಬರುವುದರಿಂದ ಅವನ ಕಾಂತಿಯು ಕಡಿಮೆಯಾಗಿ ಕಂಡುಬರುತ್ತದೆ ಅದೇ ಪ್ರಕಾರ ಆತ್ಮನಲ್ಲಿ ಕೇವಲಜ್ಞಾನಜ್ಯೋತಿಯು ಸತ್ತಾರೂಪದಿಂದ ಇದ್ದರೂ ಕೂಡ ಅವನ ಮೇಲೆ ಕರ್ಮರೂಪದ ಮೋಡವು ಬಂದುಬಿಡುವುದರಿಂದ ಜ್ಞಾನವು ಹೀನಾಧಿಕವಾಗಿ ಕಂಡುಬರುತ್ತದೆಯೆಂದು ಕೆಲವರು ಮನ್ನಿಸುತ್ತಾರೆ, ಆದರೆ ಆ ಮಾತು ಸತ್ಯವಿಲ್ಲ. - ಯಾವ ಪ್ರಕಾರ ಅಗ್ನಿಯು ಪ್ರಜ್ವಲರೂಪವಿದೆ ಮತ್ತು ಮೇಲೆ ಬೂದಿಯು ಮುಚ್ಚಿಕೊಂಡಿದೆ ಅಥವಾ ದೀಪವು ಜ್ವಲಿಸುತ್ತಿದೆ ಮತ್ತು ಮೇಲೆ ಆವರಣವಿರುವುದರಿಂದ ದೀಪವು ಗೋಚರಿಸುವುದಿಲ್ಲ ಅದೇ ಪ್ರಕಾರ ಕೇವಲಜ್ಞಾನರೂಪದ ದೀವಿಗೆಯು ಪ್ರಕಟರೂಪವಿದೆ, ಆದರೆ ಅದರ ಮೇಲೆ ಕರ್ಮರೂಪದ ಬೂದಿ ಅಥವಾ ಆವರಣವು ಮುಚ್ಚಿಕೊಂಡಿದೆ ಮತ್ತು ಯಾವ ಪ್ರಕಾರ ಬೂದಿ ಅಥವಾ ಆವರಣ ತೆಗೆಯುವುದರಿಂದ ಅಗ್ನಿ ಅಥವಾ ದೀವಿಗೆಯು ಜ್ವಾಜ್ವಲ್ಯಮಾನವಾಗಿ ಕಂಡು ಬರುತ್ತದೆ ಅಥವಾ ಮೋಡವು ಸರಿದುಹೋಗುವುದರಿಂದ ಸೂರ್ಯನು ಸ್ಪಷ್ಟವಾಗಿ ಕಂಡುಬರುತ್ತಾನೆ ಅದೇ ಪ್ರಕಾರ ಕರ್ಮವು ಜಾರುವುದರಿಂದ ಅಥವಾ ನಾಶ ಮಾಡುವುದರಿಂದ ಕೇವಲಜ್ಞಾನವು ಪ್ರಕಟವಾಗುತ್ತದೆ. ಅದಕ್ಕಾಗಿ ಕರ್ಮದ ನಾಶ ಮಾಡುವ ಪ್ರಯತ್ನ ಮಾಡಬೇಕು ಮತ್ತು ಆ ಕರ್ಮವನ್ನು ನಾಶ ಮಾಡಲು ವ್ರತ, ತಪಸ್ಸು ಪೂಜೆ ಮೊದಲಾದವು ಸಾಧನವಿವೆಯೆಂದು ಒಂದು ಸಂಪ್ರದಾಯವು ಹೇಳುತ್ತದೆ ಆದರೆ ಆ ಮಾತೆಲ್ಲವು ಅಸತ್ಯವಿದೆ.

ವಸ್ತುಸ್ವರೂಪವು ಹೀಗಿಲ್ಲ. ಇಲ್ಲಿ ಮೋಡದ ಯಾವ ದೃಷ್ಟಾಂತ ಕೊಡಲಾಗಿದೆ ಅದು ಜ್ಞಾನದಹೀನ ಪರ್ಯಾಯದಲ್ಲಿ ಕರ್ಮವು ನಿಮಿತ್ತವಿದೆ ಮತ್ತು ಜ್ಞಾನವು ಪೂರ್ಣವಾದ ಮೇಲೆ ಕರ್ಮದ ಅಭಾವವಾಗುತ್ತದೆಯೆಂದು ಮೋಡದ ಮೇಲಿಂದ ಕರ್ಮದ ನಿಮಿತ್ತತೆಯನ್ನು ತಿಳಿಸಿ ಜ್ಞಾನದ ಹೀನಪರ್ಯಾಯವಿರಲಿ ಅಥವಾ ಪೂರ್ಣಪರ್ಯಾಯವಿರಲಿ ಅದು ಆತ್ಮನ ತನ್ನ ಭಾವವಿದೆಯೆಂಬುದನ್ನು ತಿಳಿಸುವ ಸಲುವಾಗಿ ಇದೆ. ಹೀನ ಪರ್ಯಾಯವು ಪರದ ಕಾರಣದಿಂದಿಲ್ಲ ಮತ್ತು ಅಜ್ಞಾನವು ನಾಶವಾಗಿ ಜ್ಞಾನವು ಪ್ರಕಟವಾದರೆ ಆ ಜ್ಞಾನವು ಹೊರಗಿನಿಂದ ಬರುವುದಿಲ್ಲ ಆದರೆ ತನ್ನ ಶ್ರದ್ಧೆಯು ಸರಿಯಾದರೆ ತನ್ನೊಳಗಿಂದ ಪ್ರಕಟವಾಗುತ್ತದೆಯೆಂಬುದನ್ನು ತಿಳಿಸುವುದಿದೆ. ಅಜ್ಞಾನಭಾವ ಅಥವಾ ಜ್ಞಾನಭಾವವು ತನ್ನ ಭಾವವಿದೆಯೆಂದು ತಿಳಿಸಿ ಜೀವಾಸ್ತಿಕಾಯದ ಸ್ವರೂಪ ಮತ್ತು ಗುಣ-ಗುಣಿಯ ಏಕತೆಯನ್ನು ತಿಳಿಸುವುದಿದೆ. ಕೇವಲಜ್ಞಾನವು ಒಳಗೆ ಉಜ್ವಲರೂಪದಿಂದ ಪ್ರಕಟವಾಗುತ್ತದೆ ಮತ್ತು ಮೇಲೆ ಕರ್ಮದ ಆವರಣವು ಬಂದುಬಿಟ್ಟಿದೆಯೆಂಬುದು ಅದರ ಅರ್ಥವಲ್ಲ. ಆತ್ಮನಲ್ಲಿ ಕೇವಲಜ್ಞಾನವು ಶಕ್ತಿರೂಪದಿಂದ ಇದೆ. ಯಾವ ಪ್ರಕಾರ ದೀಪದ

ಕಡ್ಡಿಯಲ್ಲಿ ಬೆಂಕಿಯಾಗುವ ಶಕ್ತಿಯಿದೆ, ಅದನ್ನು ಉಜ್ಜುವುದರಿಂದ ಬೆಂಕಿಯು ಹುಟ್ಟುತ್ತದೆ ಅದೇ ಪ್ರಕಾರ ಆತ್ಮನಲ್ಲಿ ದೀಪದ ಕಡ್ಡಿಯಂತೆ ಕೇವಲಜ್ಞಾನವು ಶಕ್ತಿರೂಪದಿಂದ ಇದೆ. ಶ್ರದ್ಧೆ-ಜ್ಞಾನಪೂರ್ವಕವಾಗಿ ಆತ್ಮನಲ್ಲಿ ಏಕಾಗ್ರವಾಗುವುದರಿಂದ ಕೇವಲಜ್ಞಾನರೂಪದ ಜ್ವಾಲೆಯುಂಟಾಗುತ್ತದೆ. ಇಲ್ಲಿ ವರ್ತಮಾನ ಜ್ಞಾನಪರ್ಯಾಯವು ಹೀನಾಧಿಕವಾಗುತ್ತದೆ ಅದರಲ್ಲಿ ಕರ್ಮದ ನಿಮಿತ್ತವಿದೆಯೆಂಬುದನ್ನು ತಿಳಿಸಿಕೊಡಲು ಹೇಳಲಾಗಿದೆ, ಆದರೆ ಕರ್ಮದ ನಾಶಮಾಡಿದರೆ ಒಳಗೆ ಕೇವಲಜ್ಞಾನವು ಪ್ರಕಟರೂಪವಾಗಿಯೇ ಇದೆಯೆಂಬುದು ಇದರ ಅರ್ಥವಲ್ಲ.

ಯಾವ ಪ್ರಕಾರ ಕಮಲವು ಅರಳಿದ್ದು ಮೇಲೆ ಆವರಣವು ಮುಚ್ಚಿಕೊಂಡಿದೆ ಮತ್ತು ಆ ಆವರಣವನ್ನು ತೆಗೆಯುವುದರಿಂದ ಅರಳಿದ ಕಮಲವು ಕಂಡುಬರುತ್ತದೆ ಅದೇ ಪ್ರಕಾರ ಕೇವಲಜ್ಞಾನವು ಒಳಗೆ ವ್ಯಕ್ತವಿದೆ ಅರಳಿದೆ ಮತ್ತು ಮೇಲೆ ಕರ್ಮದ ಆವರಣವಿದೆ ಆ ಕರ್ಮದ ಆವರಣವು ಹೊರಟುಹೋಗುವುದರಿಂದ ಕೇವಲಜ್ಞಾನವು ಗೋಚರಿಸುತ್ತದೆಯೆಂದು ಅಜ್ಞಾನಿಯು ಹೇಳುತ್ತಾನೆ ಆದರೆ ಈ ಮಾತು ನಿಜವಿಲ್ಲ. ಯಾವ ಪ್ರಕಾರ ಕಮಲದಲವು ಸಂಕುಚಿತವಿರುತ್ತದೆ ಮತ್ತು ಆ ದಳವು ತನ್ನ ಅರಳುವ ಸಾಮರ್ಥ್ಯದಿಂದ ಪೂರ್ಣ ಕಮಲರೂಪವಾಗಿ ಅರಳುತ್ತದೆ ಅದೇ ಪ್ರಕಾರ ಆತ್ಮನಲ್ಲಿ ಕೇವಲಜ್ಞಾನವು ಶಕ್ತಿರೂಪದಿಂದ ಇದೆ, ಆದರೆ ಪರ್ಯಾಯದಲ್ಲಿ ಆ ದಳದಂತೆ ಸಂಕುಚಿತವಿದೆ ಮತ್ತು ತನ್ನ ಆತ್ಮನಲ್ಲಿ ಏಕಾಗ್ರವಾಗುವುದರಿಂದ ಆ ಶಕ್ತಿರೂಪದಿಂದ ಇದ್ದುದು ಪರ್ಯಾಯದಲ್ಲಿ ಕೇವಲಜ್ಞಾನರೂಪದಿಂದ ಅರಳಿದ ಕಮಲದ ಹಾಗೆ ಪ್ರಕಟವಾಗುತ್ತದೆ. ಅಜ್ಞಾನರೂಪದ ಪರ್ಯಾಯ ಮಾಡು ಅಥವಾ ಕೇವಲಜ್ಞಾನರೂಪದ ಪರ್ಯಾಯ ಮಾಡು ಅದು ತನ್ನ ಸ್ವಭಾವದ ಜತೆ ಒಂದಾಗಿದೆಯೆಂದು ಇಲ್ಲಿ ಪೂರ್ಣ ಅಸ್ತಿಕಾಯ ಸಿದ್ಧಮಾಡುವುದಿದೆ.

ಇದು ಮೂಲ ಮಾತು ಇರುವುದರಿಂದ ಇಲ್ಲಿ ಅಧಿಕ ಲಕ್ಷ್ಯವಹಿಸಬೇಕು.

೧) ಕೇವಲಜ್ಞಾನವು ಸತ್ತಾರೂಪದಿಂದ ಇದೆಯೆಂದು ಒಂದು ಸಂಪ್ರದಾಯವು ಹೇಳುತ್ತದೆ, ಆದರೆ ಆ ಮಾತು ನಿಜವಿಲ್ಲ. ಕೇವಲಜ್ಞಾನವು ಪ್ರಕಟರೂಪದಿಂದಿಲ್ಲ, ಆದರೆ ಅದು ದೀಪದ ಕಡ್ಡಿಯಂತೆ ಶಕ್ತಿ ರೂಪದಿಂದ ಇದೆ.

೨) ಕರ್ಮದ ಆವರಣವು ದೂರವಾದರೆ ಕೇವಲಜ್ಞಾನವು ಪ್ರಕಟಿಸುವುದೆಂದು ಒಂದು ಸಂಪ್ರದಾಯವು ಹೇಳುತ್ತದೆ, ಆದರೆ ಆ ಮಾತು ನಿಜವಿಲ್ಲ. ಕರ್ಮವು ಜಡವಿದ್ದು ಅದನ್ನು ತೊಲಗಿಸುವ ಸಾಧ್ಯತೆಯಿಲ್ಲ. ಆದರೆ ತನ್ನ ಆತ್ಮನಲ್ಲಿ ಏಕಾಗ್ರವಾಗುವುದರಿಂದ ಕೇವಲಜ್ಞಾನವು ಪ್ರಕಟವಾಗುತ್ತದೆ ಮತ್ತು ಕರ್ಮವು ಸ್ವಯಂ ಹೊರಟು ಹೋಗುತ್ತದೆ.

೩) ಕರ್ಮ ತೊಲಗಿಸುವ ಸಲುವಾಗಿ ತಪಸ್ಸು ಮಾಡಿರಿ, ಪೂಜೆ ಮಾಡಿರಿ. ಹೇಗೆ ಪಾತ್ರೆ ಮಲಿನವಾದರೆ ಅದನ್ನು ಸ್ವಚ್ಛಮಾಡುವ ಸಲುವಾಗಿ ತೆಂಗಿನ ಸಿಪ್ಪೆಯಿಂದ ಉಜ್ಜಬೇಕಾಗುತ್ತದೆ ಹಾಗೆ ಕರ್ಮರೂಪದ ಮಲವನ್ನು ತೆಗೆಯುವ ಸಲುವಾಗಿ ಪೂಜೆ, ತಪಸ್ಸು ಮಾಡಬೇಕಾಗುತ್ತದೆಯೆಂದು ಒಂದು ಸಂಪ್ರದಾಯವು ಹೇಳುತ್ತದೆ. ಆದರೆ ಆ ಮಾತು ಯಥಾರ್ಥವಿಲ್ಲ, ತನ್ನ ಆತ್ಮನ ಶ್ರದ್ಧೆ-ಜ್ಞಾನ-ಚಾರಿತ್ರದಿಂದ ರಾಗ-ದ್ವೇಷ ಮತ್ತು ಅಜ್ಞಾನದ ನಾಶವಾಗಿ ಕರ್ಮವು ತಾನಾಗಿಯೇ ಹೊರಟುಹೋಗುತ್ತದೆ.

೪) ಇದೇ ರೀತಿಯಿಂದ ಒಂದು ಸಂಪ್ರದಾಯವು ಕರ್ಮ ದೂರಮಾಡುವ ಮಾತು ಹೇಳುತ್ತದೆ ಎಂದರೆ ನಿಮಿತ್ತದಿಂದ ಅಥವಾ ವ್ಯವಹಾರದಿಂದ ಪ್ರಾರಂಭ ಮಾಡುತ್ತದೆ. ಆಗ ತನ್ನ ಆತ್ಮನ ಪುರುಷಾರ್ಥ ಮಾಡುವುದರಿಂದ ಕರ್ಮದ ಸಂಯೋಗವು ಹೊರಟುಹೋಗುವುದು. ಹೀಗೆ ಉಪಾದಾನದೊಡನೆ ನಿಮಿತ್ತವನ್ನು ಮನ್ನಿಸುವುದು ಅದು ಯಥಾರ್ಥವಿದೆ.

೫) ನಿಶ್ಚಯವಿಲ್ಲದ ವ್ಯವಹಾರವು ಅಸತ್ಯವಿದೆ ಮತ್ತು ಉಪಾದಾನವಿಲ್ಲದ ನಿಮಿತ್ತವು ನಿಮಿತ್ತವೆಂಬ ಹೆಸರನ್ನು ಪಡೆಯುವುದಿಲ್ಲ.

೬) ಮತ್ತು ಕರ್ಮವು ದೂರವಾದರೆ ಕೇವಲಜ್ಞಾನವಾಗುತ್ತದೆಂದು ಮನ್ನಿಸಹೋದರೆ ಆತ್ಮನಿಂದ ಕೇವಲ

ಜ್ಞಾನವಾಯಿತೆಂಬ ಮಾತು ಉಳಿಯುವುದಿಲ್ಲ. ಎಂದರೆ ವ್ಯವಹಾರದಿಂದ ನಿಶ್ಚಯದ ಕಾರ್ಯ ಮಾಡಿತು ಅಥವಾ ನಿಮಿತ್ತದಿಂದ ಉಪಾದಾನದ ಕಾರ್ಯಮಾಡಿತೆಂದು ಮನ್ನಿಸುವವನಿಗೆ ನಿಶ್ಚಯವಂತೂ ಇಲ್ಲ, ಆದರೆ ಅವನ ವ್ಯವಹಾರ ಅಥವಾ ನಿಮಿತ್ತವು ಕೂಡ ನಿಜವಿಲ್ಲ ಎಂದರೆ ಅವನ ನಿಶ್ಚಯ ಮತ್ತು ವ್ಯವಹಾರಗಳೆರಡೂ ಅಸತ್ಯವಿವೆ.

೭) ಆದುದರಿಂದ ಆತ್ಮನಲ್ಲಿ ಕೇವಲಜ್ಞಾನವು ಶಕ್ತಿರೂಪದಿಂದ ಇದೆಯೆಂಬುದು ನಿಜವಾದ ಮಾತು ಇದೆ, ಆತ್ಮನ ಶ್ರದ್ಧೆ-ಜ್ಞಾನ ಮತ್ತು ಲೀನತೆ ಮಾಡುವುದರಿಂದ ಕೇವಲಜ್ಞಾನವು ಪ್ರಕಟವಾಗುತ್ತದೆಂಬುದು ನಿಶ್ಚಯವಿದೆ ಮತ್ತು ಅದರ ಕಾರಣದಿಂದ ಸ್ವಯಂ ಕರ್ಮದ ಅಭಾವವಾಗುತ್ತದೆಂಬುದು ವ್ಯವಹಾರವಿದೆ, ಹೀಗೆ ನಿಶ್ಚಯ ಮತ್ತು ವ್ಯವಹಾರದ ಸ್ವರೂಪವಿದೆ ಅಥವಾ ಉಪಾದಾನ ಮತ್ತು ನಿಮಿತ್ತದ ಸ್ವರೂಪವಿದೆ, ಈ ಪ್ರಕಾರ ಜೀವರುಗಳು ಯಥಾರ್ಥವಾದ ಶ್ರದ್ಧೆಯನ್ನು ಮಾಡಬೇಕಾಗುವುದು.

ಎಂದರೆ ಇಲ್ಲಿ ಜೀವವು ಅಜ್ಞಾನರೂಪದಿಂದ ಪರಿಣಮಿಸಲಿ ಅಥವಾ ಹೀನಾಧಿಕ ಜ್ಞಾನರೂಪದಿಂದ ಪರಿಣಮಿಸಲಿ ಅದರಲ್ಲಿ ಕರ್ಮದ ನಿಮಿತ್ತ ತಿಳಿಸಿದೆ ಮತ್ತು ಕೇವಲಜ್ಞಾನರೂಪದಿಂದ ಪರಿಣಮಿಸಿದರೆ ಕರ್ಮದ ಅಭಾವ ಹೇಳಿದೆ, ಆದರೆ ಹೀನಜ್ಞಾನರೂಪದಿಂದ ಪರಿಣಮಿಸುವುದು ಅಥವಾ ಕೇವಲಜ್ಞಾನರೂಪದಿಂದ ಪರಿಣಮಿಸುವುದು ಅದು ತನ್ನ ಭಾವವಿದೆ, ಅದು ಕರ್ಮದ ಕಾರಣದಿಂದ ಇಲ್ಲ. ಹೀಗೆ ತನ್ನ ಜ್ಞಾನವು ತನ್ನೊಳಗಿಂದ ಪ್ರಕಟವಾಗುತ್ತದೆಂಬ ಜ್ಞಾನ ಮಾಡಿಸಿದೆ, ಗುಣ-ಗುಣಿಯ ಏಕತೆ ಮಾಡಿದರೆ ಸಮ್ಯಗ್ದರ್ಶನ-ಜ್ಞಾನ-ಚಾರಿತ್ರರೂಪದ ಧರ್ಮವು ಪ್ರಕಟವಾಗುತ್ತದೆ ಮತ್ತು ವಿಶೇಷ ಏಕಾಗ್ರವಾದರೆ ಕೇವಲಜ್ಞಾನವು ಪ್ರಕಟವಾಗುತ್ತದೆ.

ಆತ್ಮನು ಗುಣೀ ಮತ್ತು ಅವನ ಗುಣಗಳು ಏಕಮೇಕವಿವೆ. ಗುಣಗಳು ಬೇರೆಯಿದ್ದವು ಮತ್ತು ಅನಂತರ ಒಂದಾದವು ಎನ್ನುವಂತಿಲ್ಲ. ಜ್ಞಾನ ಮೊದಲಾದ ಗುಣಗಳು ಆತ್ಮನಿಂದ ಬೇರೆಯಿದ್ದರೆ ಜ್ಞಾನವಿಲ್ಲದ ಆತ್ಮನು ಅಚೇತನನಾಗಿ ಹೋಗುವನು ಮತ್ತು ಗುಣಗಳು ಆತ್ಮನಿಲ್ಲದೆ ಅಚೇತನವಾಗಿ ಹೋಗುವವು. ಎಂದರೆ ಇಲ್ಲಿ ಗುಣ-ಗುಣಿಯ ಏಕತೆಯನ್ನು ತಿಳಿಸಿಕೊಡಲಾಗಿದೆ.

ಸೂರ್ಯನು ತನ್ನ ಪ್ರಭೆಯಿಂದ ಬೇರೆಯಿಲ್ಲ. ಪ್ರಭೆಯು ಶಕ್ತಿಯಿದ್ದರೆ ಸೂರ್ಯನು ಶಕ್ತಿವಂತನಿದ್ದಾನೆ. ಮೋಡದ ಉಪಾಧಿಯ ನಿಮಿತ್ತದಿಂದ ಪ್ರಭೆಯ ಹೀನಾಧಿಕತೆಯನ್ನು ಹೇಳಲಾಗುತ್ತದೆ. ಆದರೆ ಪ್ರಭೆಯ ಭಾವವು ಉಳಿಯುವುದಿಲ್ಲ ಎನ್ನುವಂತಿಲ್ಲ ಇಲ್ಲಿ ಭಾವ ಮತ್ತು ಭಾವವಂತನು ಬೇರೆಯಿಲ್ಲವೆಂದು ಸಿದ್ಧಮಾಡುವುದಿದೆ. ಶುದ್ಧಚೈತನ್ಯವು ಅದು ಸ್ವಭಾವವಿದೆ ಮತ್ತು ಆತ್ಮನು ಸ್ವಭಾವವಂತನಿದ್ದಾನೆ ಅವೆರಡೂ ಏಕಮೇಕವಿವೆ. ಅಜ್ಞಾನಿಯು ಕರ್ಮವು ನನಗೆ ದುಃಖ ಕೊಡುತ್ತದೆಯೆಂದು ಮನ್ನಿಸುತ್ತಾನೆ. ಆದರೆ ಆ ಅಜ್ಞಾನಭಾವವೇನು ಪರದಲ್ಲಿಲ್ಲ. ಅದು ತನ್ನ ಜೀವಾಸ್ತಿಕಾಯದಲ್ಲಿ ಇದೆ. ಹೀನಪರಿಣಮನವಾಗುವುದು ಅದು ಕೂಡ ಜೀವದ ಭಾವವಿದೆ. ಕೇವಲಜ್ಞಾನವು ಶಕ್ತಿರೂಪದಿಂದ ಇದೆ ಆದರೆ ತನ್ನ ಅಶಕ್ತತೆಯಿಂದ ಹೀನಪರಿಣಮನವಿದೆ.

ಕರ್ಮವು ನಮ್ಮನ್ನು ಬಂಧಿಸಿದೆಯೆಂದು ಕೆಲವರು ಹೇಳುತ್ತಾರೆ. ಆದರೆ ಸೋದರನೇ ! ಕರ್ಮವಂತೂ ಪುದ್ಗಲಾಸ್ತಿಕಾಯವಿದೆ. ಆ ಅಸ್ತಿಕಾಯವು ನಿನ್ನನ್ನು ಬಂಧಿಸುವ ಸಾಧ್ಯತೆಯಿಲ್ಲ. ಅದು ನನಗೆ ದುಃಖ ಕೊಡುತ್ತದೆಂಬ ಅಜ್ಞಾನಭಾವವು ನಿನ್ನಲ್ಲಿ ಇದೆ. ಪರ್ಯಾಯದಲ್ಲಿನ ಅಜ್ಞಾನಭಾವವು ನಿಶ್ಚಯದಿಂದ ತನ್ನದಿದೆ ಮತ್ತು ಕರ್ಮದಿಂದ ಅಜ್ಞಾನವೆಂದು ಹೇಳುವುದು ಅದು ವ್ಯವಹಾರವಿದೆ.

ಇಲ್ಲಿ ಸೂರ್ಯನ ದೃಷ್ಟಾಂತ ಕೊಟ್ಟಿದೆ ಅದರ ಸ್ಪಷ್ಟೀಕರಣವು 'ಮೋಕ್ಷಮಾರ್ಗ ಪ್ರಕಾಶಕ'ದಲ್ಲಿ ಕೂಡ ಇದೆ. ಯಾವ ಪ್ರಕಾರ ಮೋಡವು ಸೂರ್ಯನ ಪ್ರಭೆಯನ್ನು ತಡೆಯುವಲ್ಲಿ ನಿಮಿತ್ತವಿದೆ ಅದೇ ಪ್ರಕಾರ ಜ್ಞಾನದ ದಶೆಯು ಹೀನವಾಗುವುದರಲ್ಲಿ ಕರ್ಮವು ನಿಮಿತ್ತವಿದೆ. ಇದು ಕರ್ಮದ ನಿಮಿತ್ತತೆಯನ್ನು ತಿಳಿಸಿಕೊಡುವ ದೃಷ್ಟಾಂತವಿದೆ. ಆದರೆ

ಹೇಗೆ ಸೂರ್ಯನು ಒಳಗೆ ಪೂರ್ಣಕಳೆಯಿಂದ ಪ್ರಕಟವಾಗಿದ್ದಾನೆ ಹಾಗೆ ಆತ್ಮನು ಪೂರ್ಣಪ್ರಕಟನಿದ್ದಾನೆಂದು ತಿಳಿದುಕೊಳ್ಳಬಾರದು.

ಆತ್ಮನಲ್ಲಿ ಕೇವಲಜ್ಞಾನವು ಸತ್ತಾರೂಪದಿಂದ ಇಲ್ಲ, ಆದರೆ ಶಕ್ತಿರೂಪದಿಂದ ಇದೆ. ಆದುದರಿಂದ ದೃಷ್ಟಾಂತವನ್ನು ಏಕದೇಶ ತಿಳಿದುಕೊಳ್ಳಬೇಕು. ಕಪ್ಪು ಮೆಣಸಿನಕಾಳಿನಲ್ಲಿ ೬೪ ಗುಣ ಕಾರವು ಸತ್ತಾರೂಪದಿಂದ ಇಲ್ಲ. ಆದರೆ ಶಕ್ತಿರೂಪದಿಂದ ಇದೆ. ದೀಪದ ಕಡ್ಡಿಯಲ್ಲಿ ಅಗ್ನಿಯು ಸತ್ತಾರೂಪದಿಂದ ಇಲ್ಲ, ಆದರೆ ಶಕ್ತಿರೂಪದಿಂದ ಇದೆ. ನವಿಲದ ಮೊಟ್ಟೆಯಲ್ಲಿ ಪೂರ್ಣ ನವಿಲಿಲ್ಲ. ಆದರೆ ನವಿಲಾಗುವ ಶಕ್ತಿಯಿದೆ. ಹಾಗೆ ಕೇವಲಜ್ಞಾನವು ಶಕ್ತಿರೂಪದಿಂದ ಇದೆ. ಆತ್ಮನಲ್ಲಿ ಶ್ರದ್ಧೆ-ಜ್ಞಾನ ಮತ್ತು ಏಕಾಗ್ರತೆ ಮಾಡುವುದರಿಂದ ಕೇವಲಜ್ಞಾನವು ಪ್ರಕಟವಾಗುತ್ತದೆ ಮತ್ತು ನಿಮಿತ್ತರೂಪದಿಂದ ಕರ್ಮದ ಅಭಾವವಾಗುತ್ತದೆ. ವಸ್ತು ಸ್ವರೂಪವು ಹೇಗಿದೆ ಹಾಗೆ ಮನ್ನಿಸದಿದ್ದರೆ ಅಜ್ಞಾನ-ರಾಗ-ದ್ವೇಷಗಳಾಗಿ ಕರ್ಮವು ನಿಮಿತ್ತರೂಪದಿಂದ ವೃದ್ಧಿಸುತ್ತದೆ ಮತ್ತು ಹೇಗಿದೆ ಹಾಗೆ ತಿಳಿದುಕೊಂಡರೆ ಕರ್ಮವು ನಿಮಿತ್ತರೂಪದಿಂದ ಕಡಿಮೆಯಾಗುತ್ತದೆ ಮತ್ತು ಕೇವಲಜ್ಞಾನವಾದರೆ ಕರ್ಮವು ಸರ್ವಥಾ ನಾಶಹೊಂದುತ್ತದೆ. ಆತ್ಮನಲ್ಲಿ ಪ್ರಕಟರೂಪ ಕೇವಲಜ್ಞಾನವು ಬಿದ್ದುಕೊಂಡಿದೆ ಮತ್ತು ಕರ್ಮದ ಆವರಣವು ಅದನ್ನು ತಡೆದು ಹಿಡಿದಿದೆಯೆಂಬ ಮನ್ನಣೆಯು ನಿಜವಾಗಿಲ್ಲ. ಹೀಗೆ ಮನ್ನಿಸುವವನು ದೇವ-ಗುರು-ಶಾಸ್ತ್ರದ ಅವರ್ಣವಾದ ಮಾಡುತ್ತಾನೆ.

ಪರಜೀವದ ದಯೆಯ ಶುಭಭಾವನೆಯಿಂದ ಸಂಸಾರವು ಕುಂದಿತೆಂದು ಅದೆಷ್ಟೋ ಜೀವರುಗಳು ಹೇಳುತ್ತಾರೆ ಅದು ಸರಿಯಲ್ಲ. ಶುಭಭಾವದಿಂದಂತೂ ಸಾತಾವೇದನೀಯವು ಕಟ್ಟುತ್ತದೆ, ಆದರೆ ಅದರಿಂದ ಸಂಸಾರವು ಕಡಿಮೆಯಾಗುವುದಿಲ್ಲ. ರಾಗ ಮತ್ತು ಪುಣ್ಯದಿಂದ ಸಂಸಾರವು ತುಂಡಾಗುವುದಿಲ್ಲ ಮತ್ತು ಕರ್ಮದಿಂದ ಪರ್ಯಾಯವು ಹೀನವಾಗುವುದಿಲ್ಲ ಆದರೂ ಕೂಡ ಯಾವ ಶಾಸ್ತ್ರವು ದಯೆಯ ಶುಭಭಾವದಿಂದ ಸಂಸಾರವು ಸೀಮಿತವಾಗುತ್ತದೆಯೆಂದು ಹೇಳುತ್ತದೆ ಆ ಶಾಸ್ತ್ರವು ನಿಜವಿಲ್ಲ. ಅವರಂತೂ ಭಗವಂತರ ಹೆಸರಿನಲ್ಲಿ ಶಾಸ್ತ್ರದೊಳಗೆ ಕಾಲ್ಪನಿಕ ಮಾತುಗಳನ್ನು ಸೇರಿಸಿಬಿಟ್ಟಿದ್ದಾರೆ.

ಜ್ಞಾನ ಮೊದಲಾದ ಗುಣಗಳು ತಮ್ಮ ಆತ್ಮನಿಂದ ಬೇರೆಯಿಲ್ಲ, ಆದರೆ ಪರಸ್ಪರ ಏಕತ್ವವಿವೆಯೆಂದು ಈ ಗಾಥೆಯಲ್ಲಿ ಹೇಳಿದೆ ಕರ್ಮದ ನಿಮಿತ್ತದಿಂದ ಹೀನಾಧಿಕತೆಯಾಗುತ್ತದೆ, ಆದರೆ ಹೀನಾಧಿಕತೆಯಾಗುವುದು ಅದು ತನ್ನ ಭಾವವಿದೆ. ಈ ಕಾರಣದಿಂದ ಆತ್ಮನು ನಿಜವಾಗಿ ಜ್ಞಾನಗುಣದಿಂದ ಬೇರೆಯಿಲ್ಲ. ಆನಂದವಾಗಲಿ ಅಥವಾ ದುಃಖವಾಗಲಿ, ಜ್ಞಾನವಾಗಲಿ ಅಥವಾ ಅಜ್ಞಾನವಾಗಲಿ, ಸಮ್ಯಕ್‌ಶ್ರದ್ಧೆಯಾಗಲಿ ಅಥವಾ ಸುಳ್ಳು ಶ್ರದ್ಧೆಯಾಗಲಿ ಅವೆಲ್ಲ ಭಾವಗಳು ನಿನ್ನಿಂದ ಆಗುತ್ತವೆ, ಅವು ನಿನ್ನ ಅಸ್ತಿಕಾಯದಲ್ಲಿ ಏಕಾಕಾರವಿವೆ. ಕರ್ಮದ ಸದ್ಭಾವದಿಂದ ದುಃಖವೆಂದು ಹೇಳುವುದು ಮತ್ತು ಕರ್ಮದ ಅಭಾವದಿಂದ ಸುಖವೆಂದು ಹೇಳುವುದು ಅದು ನಿಮಿತ್ತ ತಿಳಿಸಿಕೊಡುವ ಸಲುವಾಗಿ ಇದೆ. ಆದರೆ ಹೀನಾಧಿಕಭಾವಗಳು ಜೀವಾಸ್ತಿಕಾಯದಲ್ಲಿ ಆಗುತ್ತವೆ.

ಕರ್ಮೋಪಾಧಿಯ ವಶದಿಂದ ಜೀವನನ್ನು ಅಜ್ಞಾನಿಯೆಂದು ಹೇಳಲಾಗುತ್ತದೆ ಎಂದರೆ ಯಾವ ಜೀವನು ತನ್ನ ಶುದ್ಧ ಚೈತನ್ಯಸ್ವಭಾವದ ವಶನಾಗುವುದಿಲ್ಲ ಮತ್ತು ಪರದ ವಶನಾಗುತ್ತಾನೆ ಅವನನ್ನು ಕರ್ಮದ ವಶನಾದನೆಂದು ಹೇಳಲಾಗುತ್ತದೆ ಮತ್ತು ತನ್ನಲ್ಲಿ ಅರಿವು ಮೂಡಿದರೆ ಸುಖ ಹಾಗೂ ಜ್ಞಾನ ಪ್ರಕಟಪಡಿಸಿಕೊಂಡರೆ ಸುಖೀ ಮತ್ತು ಜ್ಞಾನಿಯಾಗುತ್ತಾನೆ. ಇನ್ನು ಕರ್ಮದ ಅಭಾವದಿಂದ ಅವನು ಸುಖೀ ಮತ್ತು ಜ್ಞಾನಿಯಾದನೆಂದು ನಿಮಿತ್ತದಿಂದ ಹೇಳಲಾಗುತ್ತದೆ, ಕರ್ಮವಂತೂ ಪರವಿದೆ ಕರ್ಮವಿರುವಲ್ಲಿ ದುಃಖವಿಲ್ಲ, ಕರ್ಮವಿಲ್ಲದಿರುವಲ್ಲಿ ಸುಖವಿಲ್ಲ. ದುಃಖ ಅಥವಾ ಸುಖದ ಇರುವಿಕೆಯು ನಿನ್ನ ಅಸ್ತಿಕಾಯದಲ್ಲಿ ಇದೆ. ಭಾವ ಮತ್ತು ಭಾವವಂತ ಏಕವಿದೆ. ಕರ್ಮದ ಉದಯದ ಕಾರಣದಿಂದ ಅಜ್ಞಾನೀ ಮತ್ತು ಕರ್ಮದ ಅಭಾವದಿಂದ ಜ್ಞಾನಿಯೆನ್ನುವುದು ಇದು ವ್ಯವಹಾರನಯದ ಕಥನವಿದೆ.

ಗುಣ-ಗುಣಿಯಲ್ಲಿ ಒಂದು ಭಾವದ ಹೊರತಾಗಿ ಬೇರೆ ಯಾವುದೇ ಪ್ರಕಾರದ ಸಂಬಂಧವಿಲ್ಲವೆಂಬುದನ್ನು ಈಗ ತಿಳಿಸಿಕೊಡುತ್ತಾರೆ, --

**ಸಮವತ್ತೀ ಸಮವಾಓ ಅಪುಧಬ್ಭೂದೋ ಯ ಅಜುದಸಿದ್ಧೋಯ ।**
**ತಮ್ಹಾ ದವ್ವಗುಣಾಣಂ ಅಜುದಾ ಸಿದ್ಧಿ ತ್ತಿ ಣಿದ್ದಿಟ್ಠಾ ॥೫೦॥**

**ಸಮವರ್ತಿತ್ವ ಸಮವಾಯವಿದ್ದದೇ ಅಪೃಥಕತ್ವ ಅಯುತಸಿದ್ಧತ್ವವಿದೆ ।**
**ಕ್ರಮವರಿದು ಪೇಳಿಹರು ದ್ರವ್ಯಮೇಣ್ಗುಣಗಳ ಅಯುತ ಸಿದ್ಧಿಯನು ॥೫೦॥**

ದ್ರವ್ಯ ಮತ್ತು ಗುಣಗಳ ಒಂದು ಅಸ್ತಿತ್ವ ಮಾಡಿ ಅನಾದಿ-ಅನಂತ ಧಾರಾವಾಹೀರೂಪದ ಯಾವ ಪ್ರವೃತ್ತಿಯಿದೆ ಅದರ ಹೆಸರು ಜಿನಾಗಮದಲ್ಲಿ ಸಮವಾಯವಿದೆ.

ಸಮಸ್ತ ದ್ರವ್ಯಗಳಲ್ಲಿ ಸಮವಾಯವಿದೆಯೆಂದು ತಿಳಿಯಬೇಕು. ಆತ್ಮನು ವಸ್ತುವಿದ್ದು ಅವನಲ್ಲಿ ಜ್ಞಾನ, ದರ್ಶನ, ವೀರ್ಯ, ಸ್ವಚ್ಛತ್ವ, ಪ್ರಭುತ್ವ ಮೊದಲಾದ ಅನಂತಗುಣಗಳಿವೆ. ಭಾವವಂತ ದ್ರವ್ಯ ಮತ್ತು ಅದರ ಭಾವವು ಒಂದು ಅಸ್ತಿರೂಪದಿಂದಿವೆ. ಅದರ ಅನಾದಿ ಅನಂತ ಧಾರಾವಾಹೀ ಪ್ರವೃತ್ತಿಯನ್ನು ಸಮವಾಯ ಸಂಬಂಧವೆಂದು ಹೇಳಲಾಗಿದೆ. ನಿಮಿತ್ತ-ನೈಮಿತ್ತಿಕ ಸಂಬಂಧ ಅಥವಾ ಸಂಯೋಗ ಸಂಬಂಧವು ಎರಡು ದ್ರವ್ಯಗಳ ಪೃಥಕತೆಯನ್ನು ತಿಳಿಸುತ್ತದೆ. ಆತ್ಮ ಮತ್ತು ಅವನ ಗುಣಗಳಲ್ಲಿ ಸಂಯೋಗ ಸಂಬಂಧವಿಲ್ಲ, ಆದರೆ ಸಮವಾಯ ಅಥವಾ ತಾದಾತ್ಮ್ಯ ಸಂಬಂಧವಿದೆ. ಅನ್ಯಮತದಲ್ಲಿ ಗುಣ-ಗುಣೀ ಬೇರೆಯಿದ್ದು ಅನಂತರ ಏಕತ್ವವಾದುದವೆಂದು ಹೇಳಿ ಸಮವಾಯಸಂಬಂಧ ಹೇಳಿದೆ, ಆದರೆ ಅದು ಯಥಾರ್ಥವಿಲ್ಲ. ಅನಾದಿ ಅನಂತ ಆತ್ಮ ಮತ್ತು ಗುಣಗಳು ಏಕರೂಪ ತಾದಾತ್ಮ್ಯಭಾವದಿಂದಿವೆ, ಅದನ್ನು ಜೈನಮತದಲ್ಲಿ ಸಮವಾಯಸಂಬಂಧವೆಂದು ಹೇಳಿದೆ.

**ಭಾವಾರ್ಥ :-** ಸಂಬಂಧವು ಎರಡು ಪ್ರಕಾರದ್ದಿದೆ. ಒಂದು ಸಂಯೋಗಸಂಬಂಧ ಅಥವಾ ನಿಮಿತ್ತ-ನೈಮಿತ್ತಿಕಸಂಬಂಧ ಎಂದರೆ ಜೀವ ಮತ್ತು ಪುದ್ಗಲ ಸಂಬಂಧ. ಜೀವನಿಗೆ ಕರ್ಮದ ಸಂಬಂಧವು ಅದು ಸಂಯೋಗ ಸಂಬಂಧವಿದೆ. ಸಂಯೋಗವೆಂದು ಹೇಳುವಲ್ಲಿ ಎರಡು ಪೃಥಕ್ ವಸ್ತುಗಳೆಂಬುದು ನಿಶ್ಚಿತವಾಗುತ್ತದೆ.

ಕಾರ್ಮಾಣ ವರ್ಗಣಾದ ಪರಮಾಣುಗಳು ಎಲ್ಲಿಯವರೆಗೆ ದೂರವಿರುವವು ಅಲ್ಲಿಯವರೆಗೆ ಆತ್ಮನಿಗೇನೂ ಮಾಡುವುದಿಲ್ಲ. ಆದರೆ ಕರ್ಮರೂಪದಿಂದ ಪರಿಣಮಿಸಿ ಆತ್ಮನ ಸಮೀಪ ಬಂದರೆ ಆತ್ಮನ ಪರಿಣಾಮದಲ್ಲಿ ಅದಲು-ಬದಲು ಮಾಡುತ್ತವೆಯಲ್ಲವೆ? ಸೋದರನೇ ! ದೂರವಿರಲಿ ಅಥವಾ ಸಮೀಪವಿರಲಿ ಆದಾಗ್ಯೂ ಕೂಡ ಪೃಥಕ್ ಪೃಥಕ್ ತಮ್ಮ-ತಮ್ಮಲ್ಲಿ ಸಕ್ರಿಯತೆಯಿಂದ ಇರುತ್ತವೆ. ಕರ್ಮವು ಆತ್ಮನಲ್ಲಿ ಯಾವುದೇ ಕ್ರಿಯೆಯನ್ನು ಮಾಡುವುದಿಲ್ಲ, ಅವೆರಡೂ ಪೃಥಕ್ ಕಾರ್ಯ ಮಾಡುತ್ತವೆ. ಅದಕ್ಕೆ ಸಂಯೋಗ ಸಂಬಂಧವೆಂದು ಹೇಳಲಾಗಿದೆ.

ಈಗ ಸಮವಾಯಸಂಬಂಧ ಅಥವಾ ತಾದಾತ್ಮ್ಯಸಂಬಂಧ ಹೇಳುತ್ತಾರೆ. ಎಲ್ಲಿ ದ್ರವ್ಯದ ಭಾವಗಳು, ಅದರ ಅನಂತಗುಣಗಳ ಭಾವಗಳು, ಅದರ ಅನಂತಪರ್ಯಾಯದ ಭಾವಗಳು-ಹೀಗೆ ಅನೇಕ ಭಾವಗಳು ಏಕರೂಪದಿಂದ ಇರುತ್ತವೆ ಅದನ್ನು ಸಮವಾಯಸಂಬಂಧವೆಂದು ಹೇಳುತ್ತಾರೆ. ಗುಣ-ಪರ್ಯಾಯ ಮತ್ತು ದ್ರವ್ಯ ಇವು ಒಂದೇ ರೀತಿಯಾಗಿ ಪರಿಣಮಿಸಿದಲ್ಲದೆ ಇರುತ್ತವೆಂಬುದು ಸಂಭವಿಸುವುದಿಲ್ಲ. ಆತ್ಮ, ಅವನ ಜ್ಞಾನ-ದರ್ಶನ ಮೊದಲಾದ ಗುಣಗಳು ಮತ್ತು ಅವುಗಳ ಪರ್ಯಾಯಗಳ ಭಾವಗಳದ್ದು ಒಂದು ಅಸ್ತಿತ್ವವಿದೆ. ಪರಮಾಣು, ಅದರ ಸ್ಪರ್ಶ ಮೊದಲಾದ ಗುಣಗಳು

ಮತ್ತು ಅವುಗಳ ಪರ್ಯಾಯಗಳ ಭಾವಗಳದ್ದು ಒಂದು ಅಸ್ತಿತ್ವವಿದೆ. ಜ್ಞಾನಾದಿಗುಣಗಳ ನಾಶವಾಗುವುದರಿಂದ ಆತ್ಮನ ನಾಶವಾಗುತ್ತದೆ ಮತ್ತು ಆತ್ಮನ ನಾಶವಾಗುವುದರಿಂದ ಜ್ಞಾನಾದಿಗುಣಗಳು ನಾಶವಾಗುತ್ತವೆ. ಈ ಪ್ರಕಾರ ದ್ರವ್ಯ, ಗುಣ, ಪರ್ಯಾಯ ಮೊದಲಾದ ಅನೇಕ ಭಾವಗಳ ಸಂಬಂಧವಿರುವುದನ್ನು ಸಮವಾಯ ಸಂಬಂಧ ಅಥವಾ ತಾದಾತ್ಮ್ಯಸಂಬಂಧವೆಂದು ಹೇಳುತ್ತಾರೆ.

ಮತ್ತು ಅದೇ ಗುಣ-ಗುಣಿಯ ಸಮವಾಯಸಂಬಂಧವು ಪ್ರದೇಶಭೇದರಹಿತವೆಂದು ತಿಳಿಯುವುದು.

ದ್ರವ್ಯ-ಗುಣ-ಪರ್ಯಾಯಗಳ ಸಂಬಂಧವು ಪ್ರದೇಶಭೇದರಹಿತವೆಂದು ತಿಳಿಯುವುದು. ಏಕೆಂದರೆ ಗುಣ-ಗುಣಿಯಲ್ಲಿ ಸಂಖ್ಯೆ, ಸಂಜ್ಞೆ, ಲಕ್ಷಣ ಮತ್ತು ಪ್ರಯೋಜನ ಭೇದದಿಂದ ಭೇದವಿದ್ದರೂ ಯಾವ ಪ್ರಕಾರ ಚಿನ್ನ ಮತ್ತು ಅದರ ಹಳದೀ ಮೊದಲಾದ ಗುಣಗಳದ್ದು ನಾಮ ಮೊದಲಾದ ಭೇದದಿಂದ ಭೇದವಿದ್ದರೂ ಕೂಡ ಚಿನ್ನದ್ದು ಹಳದೀತನದ ಜತೆ ತಾದಾತ್ಮ್ಯವಿದೆ ಅದೇ ಪ್ರಕಾರ ಆತ್ಮನಿಗೆ ಜ್ಞಾನದ ಜತೆಯಲ್ಲಿ ತಾದಾತ್ಮ್ಯಸಂಬಂಧವಿದೆ.

ಹೀಗೆ ತಿಳಿಸಿಕೊಟ್ಟು ನಿನಗೆ ಪರದ ಎದುರು ನೋಡುವುದಿಲ್ಲವೆಂದು ಹೇಳಿದೆ. ಅನೇಕ ಮಕ್ಕಳಿದ್ದರೆ ಏನು ಮಾಡುವುದು ? ಮಕ್ಕಳು ವಿವಾದ ಮಾಡಿದರೆ ಆತ್ಮನ ಧ್ಯಾನ ಯಾವ ರೀತಿಯಾಗುವುದು ?-ಎಂದು ಅಜ್ಞಾನಿಯೂ ಪ್ರಶ್ನೆ ಮಾಡುತ್ತಾನೆ. ಅವನಿಗೆ ಎಲೈ ಸೋದರನೇ ! ನೀನು ನಿನ್ನೆದುರು ನೋಡು, ನಿನ್ನ ಶಾಂತಿ ಮತ್ತು ಸುಖವು ನಿನ್ನಲ್ಲಿದೆ. ಯಾವ ಪ್ರಕಾರ ಆಯುಷ್ಯ ಪೂರ್ಣವಾದ ಮೇಲೆ ಅದನ್ನು ಯಾರೂ ತಡೆಯಲು ಸಮರ್ಥರಿಲ್ಲ ಅದೇ ಪ್ರಕಾರ ತನ್ನ ಆತ್ಮನ ಶಾಂತಿಯನ್ನು ಯಾವುದೇ ಸಂಯೋಗವು ತಡೆಯಲು ಸಮರ್ಥವಿಲ್ಲ. ಆದುದರಿಂದ ಗುಣ-ಗುಣಿಯ ಏಕತೆ ಮಾಡಿದರೆ ಶಾಂತಿಯು ನಿನ್ನಲ್ಲಿದೆಯೆಂದು ತಿಳಿದುಕೊಳ್ಳು-ಅರಿವು ಮಾಡಿಕೊಳ್ಳು.

ಮತ್ತು ಆ ಗುಣ-ಗುಣಿಯ ಸಮವಾಯಸಂಬಂಧವು ಮಿಳಿತವಾಗಿ ಆಗಿಲ್ಲ ಅನಾದಿಸಿದ್ಧ ಒಂದೇ ಇದೆ. ಆ ಕಾರಣದಿಂದ ಗುಣ-ಗುಣಿಯಲ್ಲಿ ಆ ಸಮವಾಯ ಸಂಬಂಧವು ಅನಾದಿಸಿದ್ಧವಿದೆಯೆಂದು ಭಗವಂತದೇವರು ತಿಳಿಸಿದ್ದಾರೆ. ಈ ಪ್ರಕಾರ ಗುಣ-ಗುಣಿಯಲ್ಲಿ ಸಮವಾಯ ಸಂಬಂಧವಿದೆಯೆಂದು ತಿಳಿಯುವುದು.

ಆ ಗುಣ-ಗುಣಿಯ ಸಮವಾಯಸಂಬಂಧವು ಒಂದುಗೂಡಿ ಆಗಿಲ್ಲ. ಮೊದಲು ಆತ್ಮ ಮತ್ತು ಜ್ಞಾನವು ಬೇರೆಯಿದ್ದವು.ಅನಂತರ ಜ್ಞಾನವು ಬಂದು ಆತ್ಮನಲ್ಲಿ ಸೇರಿಕೊಂಡಿತು, ಎನ್ನುವಂತಹ ಸಂಬಂಧವಿಲ್ಲ. ಆದರೆ ಅನಾದಿಯಿಂದ ಆತ್ಮನಲ್ಲಿ ಮತ್ತು ಜ್ಞಾನ ಮೊದಲಾದ ಗುಣಗಳಲ್ಲಿ ತಾದಾತ್ಮ್ಯಸಂಬಂಧವಿದೆ. ಈ ಕಾರಣದಿಂದ ಗುಣ-ಗುಣಿಯಲ್ಲಿ ಸಮವಾಯಸಂಬಂಧ ಅಥವಾ ತಾದಾತ್ಮ್ಯಸಂಬಂಧವು ಅನಾದಿಯಿಂದ ಸಿದ್ಧವಿದೆ. ಈ ಪ್ರಕಾರದಿಂದ ಭಗವಂತರು ತಿಳಿಸಿಕೊಟ್ಟಿದ್ದಾರೆ. ಈ ರೀತಿಯಾಗಿ ಗುಣ-ಗುಣಿಯ ಸಂಬಂಧವನ್ನು ತಿಳಿದುಕೊಳ್ಳಬೇಕು. ಹೀಗೆ ಗುಣ-ಗುಣಿಯ ಏಕತೆಯನ್ನು ತಿಳಿಸಿಕೊಡಲಾಗಿದೆ.

ಈಗ ದೃಷ್ಟಾಂತದೊಡನೆ ಗುಣ-ಗುಣಿಯ ಕಥನವನ್ನು ಸಂಕ್ಷೇಪದಿಂದ ಮಾಡುತ್ತಾರೆ,--

**ವಣ್ಣರಸಗಂಧಫಾಸಾ ಪರಮಾಣು ಪರೂವಿದಾ ವಿಸೇಸೇಹಿಂ ।**
**ದವ್ವಾದೋ ಯ ಅಣಣ್ಣಾ ಅಣ್ಣತ್ತಪಗಾಸಗಾ ಹೋಂತಿ ॥೫೧॥**

**ದಂಸಣಣಾಣಾಣಿ ತಹಾ ಜೀವಣಿಬದ್ಧಾಣಿ ಣಣ್ಣಭೂದಾಣಿ ।**
**ವವದೇಸದೋ ಪುಧತ್ತಂ ಕುವ್ವಂತಿ ಹಿ ಣೋ ಸಭಾವಾದೋ ॥೫೨॥**

**ಪರಮಾಣುವಿನಲ್ಲಿ ಪ್ರರೂಪಿಸಲ್ಪಡುವ ವರ್ಣ, ರಸ, ಗಂಧ, ಸ್ಪರ್ಶಗಳು ।**
**ಪರಮಾಣುದಿಂದಭಿನ್ನವಿದ್ದು ವಿಶೇಷಗಳಿಂದ ಭೇದವ ಪ್ರಕಟಿಸುವವು ॥೫೧॥**

**ಈ ಪರಿ ಜೀವನಿಬದ್ಧ ದರ್ಶನ ಜ್ಞಾನಗಳು ಜೀವದಿಂದನನ್ಯ ವರ್ತಿಸುತ್ತ ।**
**ವ್ಯಪದೇಶದಿಂದ ಪೃಥಕತ್ವವನು ಮಾಡುವವು ಸ್ವಭಾವದಿಂದ ತಾನಿಲ್ಲ ॥೫೨॥**

ನಿಶ್ಚಯದಿಂದ ಪರಮಾಣುಗಳಲ್ಲಿ ಆ ವರ್ಣ ರಸ, ಗಂಧ, ಸ್ಪರ್ಶವೆಂಬ ನಾಲ್ಕು ಗುಣಗಳು ಪುದ್ಗಲದ್ರವ್ಯದಿಂದ ಬೇರೆಯಾಗಿಲ್ಲ.

ನಿಶ್ಚಯದಿಂದ ಪರಮಾಣುವಿನ ಸ್ಪರ್ಶ, ರಸ, ಗಂಧ ಮತ್ತು ವರ್ಣವೆಂಬ ನಾಲ್ಕು ಗುಣಗಳು ಪರಮಾಣುವಿನಿಂದ ಭಿನ್ನವಿಲ್ಲ. ಮಾವಿನಹಣ್ಣಿನ ಸಿಹಿತನವು ಮಾವಿನಹಣ್ಣಿನಿಂದ ಭಿನ್ನವಿಲ್ಲ. ಪ್ರತಿಯೊಂದು ಪರಮಾಣುವು ತನ್ನ ಗುಣಗಳಿಂದ ಬೇರೆಯಿಲ್ಲ, ಆದರೆ ಇನ್ನೊಂದು ಪರಮಾಣುವಿನ ಗುಣಗಳಿಂದ ಬೇರೆಯಿದೆ ಅದರಂತೆ ಆತ್ಮನಿಂದ ಬೇರೆಯಿದೆ, ಆತ್ಮನ ಇಚ್ಛೆಯ ಕಾರಣದಿಂದ ಶರೀರದಲ್ಲಿ ಹೆಚ್ಚು ಕಡಿಮೆಯಾಗುವುದಿಲ್ಲ ಏಕೆಂದರೆ ಶರೀರದ ಪರಮಾಣುಗಳು ಅದರ ಭಾವಗಳಲ್ಲಿ ವಾಸಿಸುತ್ತವೆ.

**ಭಾವಾರ್ಥ :-** ನಿಶ್ಚಯನಯದಿಂದ ಸ್ಪರ್ಶ, ರಸ, ಗಂಧ ಮತ್ತು ವರ್ಣ ಮೊದಲಾದ ಗುಣಗಳು ಪುದ್ಗಲ ದ್ರವ್ಯದಿಂದ ಬೇರೆಯಿಲ್ಲ. ಅವುಗಳಲ್ಲಿ ಪ್ರದೇಶಭೇದವಿಲ್ಲ, ಆದರೆ ಇನ್ನೊಂದು ಪರಮಾಣುವಿನ ಜತೆ ಅಥವಾ ಜೀವದ ಜತೆ ಅವಕ್ಕೆ ಸಂಯೋಗಸಂಬಂಧವಿಲ್ಲ. ಸಂಯೋಗ ಎಂದರೆ ಪೃಥಕ್ಕಿದೆಯೆಂಬುದು ನಿಶ್ಚಿತವಾಗುತ್ತದೆ. ಹಣದ ಅಥವಾ ಶರೀರದ ಇರುವಿಕೆಯು ಅದು ಆತ್ಮನ ಆಧೀನವಿಲ್ಲ, ಆದರೆ ಆ ಪರಮಾಣುಗಳು ತಮ್ಮ ಗುಣಗಳ ಜತೆ ಸಮವಾಯಸಂಬಂಧ-ಏಕತ್ವಸಂಬಂಧವನ್ನು ಇಟ್ಟುಕೊಂಡಿವೆ.

ಮತ್ತು ಇವೇ ನಾಲ್ಕು ವರ್ಣ ಮೊದಲಾದ ಗುಣಗಳು ವ್ಯವಹಾರದ ಅಪೇಕ್ಷೆಯಿಂದ ಪುದ್ಗಲದ್ರವ್ಯದಿಂದ ಪೃಥಕತೆಯನ್ನು ಕೂಡ ಪ್ರಕಟಮಾಡುತ್ತವೆ.

ಒಂದು ಪರಮಾಣುವಿನ ಒಂದು ಪ್ರದೇಶದಲ್ಲಿ ವರ್ಣ, ಗಂಧ ಮೊದಲಾದವುಗಳ ಪ್ರದೇಶವು ಬೇರೆಯಿಲ್ಲ, ಪರಸ್ಪರ ಏಕತ್ರವಿದ್ದರೂ ಕೂಡ ಅದರಲ್ಲಿ ಗುಣ-ಗುಣಿಯ ಭೇದದ ಅಪೇಕ್ಷೆಯಿಂದ ಭೇದ ಕೂಡ ಇದೆ.

**ಭಾವಾರ್ಥ :-** ಏಕೆಂದರೆ ವರ್ಣ ಮೊದಲಾದ ಗುಣಗಳು ಪುದ್ಗಲದ್ರವ್ಯದಲ್ಲಿ ಪರಸ್ಪರ ಏಕತ್ವವಿವೆ. ಗುಣಭಾವ ಮತ್ತು ಗುಣಿಭಾವಗಳು ಏಕರೂಪವಿದ್ದರೂ ಕೂಡ ವ್ಯವಹಾರನಯದಿಂದ ಸಂಜ್ಞೆ ಮೊದಲಾದ ಭೇದಗಳಾಗುತ್ತವೆ. ಪರಮಾಣುವಿನ ಹೆಸರು ಪರಮಾಣುವಿದೆ ಮತ್ತು ಸ್ಪರ್ಶ ಮೊದಲಾದ ಗುಣಗಳ ಹೆಸರು ಸ್ಪರ್ಶ ಮೊದಲಾದ ಗುಣಗಳಿವೆ. ಪರಮಾಣುವು ಒಂದಿದೆ ಮತ್ತು ಗುಣಗಳು ಅನೇಕವಿವೆ. ಅನೇಕ ಗುಣಗಳ ಪಿಂಡ ಮತ್ತು ರೂಪಿತನ ಅದು ಪರಮಾಣುವಿನ ಲಕ್ಷಣವಿದೆ ಮತ್ತು ಗುಣದ ಲಕ್ಷಣವು ಬೇರೆಬೇರೆಯಿದೆ, ಗುಣಗಳನ್ನು ಧಾರಣ ಮಾಡಿರುವುದು ಅದು ದ್ರವ್ಯದ ಪ್ರಯೋಜನವಿದೆ ಮತ್ತು ಪ್ರತಿಯೊಂದು ಗುಣದ ಪ್ರಯೋಜನವು ಬೇರೆಬೇರೆಯಿದೆ. ಈ ಪ್ರಕಾರ ಪರಮಾಣು ಮತ್ತು ಅದರ ಗುಣಗಳಲ್ಲಿ ಸಂಜ್ಞೆ ಮೊದಲಾದ ಭೇದದಿಂದ ಭೇದವಿದೆ, ಆದರೆ ಪ್ರದೇಶಭೇದವಿಲ್ಲ, ಅಭೇದ ಏಕರೂಪವಿದೆ.

ಮತ್ತು ಯಾವ ಪ್ರಕಾರ ಪುದ್ಗಲದ್ರವ್ಯದಿಂದ ವರ್ಣ ಮೊದಲಾದ ಗುಣಗಳು ಅಭಿನ್ನವಿವೆ. ಅದೇ ಪ್ರಕಾರ ನಿಶ್ಚಯನಯದಿಂದ ಸಮವಾಯಸಂಬಂಧದ ಸಲುವಾಗಿ ದರ್ಶನ-ಜ್ಞಾನದಂಥ ಅಸಾಧಾರಣ ಗುಣಗಳೂ ಜೀವದಿಂದ ಬೇರೆಯಿಲ್ಲ. ಸಂಜ್ಞೆ ಮೊದಲಾದ ಭೇದದ ಕಥನದಿಂದ ಆಚಾರ್ಯರು ಆತ್ಮ ಮತ್ತು ಜ್ಞಾನ-ದರ್ಶನದಲ್ಲಿ ಭೇದ ಭಾವವನ್ನು ಮಾಡುತ್ತಾರೆ. ಆದಾಗ್ಯೂ ನಿಶ್ಚಯದಿಂದ ನಿಜಸ್ವರೂಪದಿಂದ ಭೇದವು ಸಂಭವಿಸುವುದಿಲ್ಲ.

ಪರಮಾಣುವಿನ ದೃಷ್ಟಾಂತದಿಂದ ಆತ್ಮನ ಮಾತು ಹೇಳುತ್ತಾರೆ. ಯಾವ ಪ್ರಕಾರ ಪುದ್ಗಲದ್ರವ್ಯದಲ್ಲಿ ವರ್ಣ ಮೊದಲಾದ ಗುಣಗಳು ಅಭಿನ್ನವಿವೆ, ಅದೇ ಪ್ರಕಾರ ನಿಶ್ಚಯನಯದಿಂದ ಜೀವದಲ್ಲಿ ದರ್ಶನ-ಜ್ಞಾನ ಮೊದಲಾದ ಅಸಾಧಾರಣ ಗುಣಗಳು ಸಮವಾಯಸಂಬಂಧರೂಪದಿಂದ ಇವೆ, ಪರಸ್ಪರ ಏಕತ್ರವಿವೆ, ಬೇರೆಯಿಲ್ಲ. ಆತ್ಮ ಮತ್ತು ಅವನ ಗುಣಗಳಲ್ಲಿ ನಾಮ, ಸಂಖ್ಯೆ ಮೊದಲಾದ ಭೇದದಿಂದ ಭೇದವಿದೆ. ಆದರೆ ಒಬ್ಬ ಆತ್ಮನಿಗೆ ಇನ್ನೊಬ್ಬ ಆತ್ಮನ ಜತೆ ಎಂಥ ಭೇದವಿದೆ, ಒಂದು ಪರಮಾಣುವಿಗೆ ಇನ್ನೊಂದು ಪರಮಾಣುವಿನ ಜತೆ ಎಂಥ ಭೇದವಿದೆ ಅಂಥ ಭೇದವು ಆತ್ಮ ಮತ್ತು ಅವನ ಜ್ಞಾನ-ದರ್ಶನ ಮೊದಲಾದ ಗುಣಗಳಲ್ಲಿ ಇಲ್ಲ. ಪ್ರತಿಯೊಂದು ವಸ್ತುವು ಭೇದಾಭೇದಸ್ವರೂಪವಿದೆ, ಪ್ರದೇಶದಿಂದ ಅಭೇದತೆಯು ಅದು ನಿಶ್ಚಯವಿದೆ ಮತ್ತು ಸಂಜ್ಞೆ ಮೊದಲಾದ ಭೇದದಿಂದ ಭೇದತನವು ಅದು ವ್ಯವಹಾರವಿದೆ. ಹೀಗೆ ನಿಶ್ಚಯ ಮತ್ತು ವ್ಯವಹಾರವೆಂದು ಎರಡಾಗಿ ಅನೇಕಾಂತವಾಗುತ್ತದೆ. ಆದುದರಿಂದ ಪರವಸ್ತುವಿನ ಇರುವಿಕೆಯು ನಿನ್ನಿಂದ ಬೇರೆಯಿದೆ. ಪರದ ಪರ್ಯಾಯವು ಪರದಿಂದ ಆಗುತ್ತದೆ, ನಿನ್ನಿಂದ ಆಗುವುದಿಲ್ಲ. ಹೀಗೆ ಪರದಿಂದ ಬೇರೆಯಾಗಿ ತನ್ನಲ್ಲಿ ಭೇದಾಭೇದಸ್ವರೂಪದ ಜ್ಞಾನ ಮಾಡಿಸಿದೆ. ಈ ತಿಳಿವಳಿಕೆಯಿಲ್ಲದೆ ಮಿಥ್ಯಾತ್ವವು ತೊಲಗುವುದಿಲ್ಲ. ಅದಕ್ಕಾಗಿ ಯಥಾರ್ಥಜ್ಞಾನ ಮಾಡಿಕೊಂಡು ಅನೇಕಾಂತದ ಸ್ವರೂಪ ತಿಳಿದುಕೊಳ್ಳಬೇಕು.

ಭಗವಂತರ ಮತವು ಅನೇಕಾಂತವಿದೆ ಅದನ್ನು ಎರಡು ನಯಗಳಿಂದ ಸಾಧಿಸಲಾಗುತ್ತದೆ, ಆದುದರಿಂದ ನಿಶ್ಚಯ-ವ್ಯವಹಾರದಿಂದ ಭೇದ-ಅಭೇದ, ಗುಣ-ಗುಣಿಯ ಸ್ವರೂಪವನ್ನು ಪರಮಾಗಮದಿಂದ ವಿಶೇಷ ರೂಪವಾಗಿ ತಿಳಿದುಕೊಳ್ಳಬೇಕು. ಈ ನಾಲ್ಕು ಪ್ರಕಾರದ ದರ್ಶನೋಪಯೋಗ, ಎಂಟು ಪ್ರಕಾರದ ಜ್ಞಾನೋಪಯೋಗ ಶುದ್ಧ-ಅಶುದ್ಧ ಭೇದಕಥನದಿಂದ ಸಾಮಾನ್ಯ ಸ್ವರೂಪವನ್ನು ಪೂರ್ವೋಕ್ತ ಕಥನದಿಂದ ತಿಳಿದುಕೊಳ್ಳಬೇಕು. ಈ ಉಪಯೋಗಗಳಿಂದ ವ್ಯಾಖ್ಯಾನವು ಪೂರ್ಣವಾಯಿತು.

ಭಗವಂತರ ಮತದಲ್ಲಿ ಅನೇಕಾಂತಸ್ವರೂಪ ಹೇಳಿದೆ. ಅದನ್ನು ಎರಡು ನಯಗಳ ಮೂಲಕ ಸಾಧಿಸಲಾಗುತ್ತದೆ. ಅದಕ್ಕಾಗಿ ನಿಶ್ಚಯ-ವ್ಯವಹಾರದಿಂದ ಭೇದ-ಅಭೇದ, ಗುಣ-ಗುಣಿಯ ಸ್ವರೂಪವನ್ನು ಪರಮಾಗಮದಿಂದ ವಿಶೇಷರೂಪವಾಗಿ ತಿಳಿದುಕೊಳ್ಳಬೇಕು. ಚಕ್ಷುದರ್ಶನ, ಅಚಕ್ಷುದರ್ಶನ, ಅವಧಿದರ್ಶನ ಮತ್ತು ಕೇವಲದರ್ಶನವೆಂಬ ನಾಲ್ಕು ಪ್ರಕಾರದ ದರ್ಶನೋಪಯೋಗ ಮತ್ತು ಮತಿ, ಶ್ರುತ, ಅವಧಿ, ಮನಃಪರ್ಯಾಯ ಹಾಗೂ ಕೇವಲಜ್ಞಾನ ಮತ್ತು ಕುಮತಿ, ಕುಶ್ರುತ ಹಾಗೂ ವಿಭಂಗಜ್ಞಾನವೆಂದು ಎಂಟು ಪ್ರಕಾರದ ಜ್ಞಾನೋಪಯೋಗವಿದೆ. ತಾನು ತನ್ನ ಕಾರಣದಿಂದ ಜ್ಞಾನ ಅಥವಾ ದರ್ಶನೋಪಯೋಗ ಮಾಡುವುದು ಅದು ನಿಶ್ಚಯವಿದೆ ಮತ್ತು ಅದರಲ್ಲಿ ಇಂದ್ರಿಯಾದಿಗಳ ನಿಮಿತ್ತವಿದೆಯೆಂದು ತಿಳಿಯುವುದು ಅದು ವ್ಯವಹಾರವಿದೆ. ಪರದಿಂದ ಭೇದಜ್ಞಾನ ಮಾಡಿಸುವುದು, ತನ್ನಲ್ಲಿ ಭೇದವಿರುವುದರ ಜ್ಞಾನ ಮಾಡುವುದು ತಾನು ಏಕಸ್ವರೂಪ ಅಖಂಡನಿದ್ದೇನೆಂದು ಪ್ರತೀತಿ ಮಾಡುವುದು ಅದು ಧರ್ಮವಿದೆ.

ಆತ್ಮನು ದರ್ಶನಪರ್ಯಾಯದಿಂದ ನೋಡುತ್ತಾನೆ ಮತ್ತು ಜ್ಞಾನಪರ್ಯಾಯದಿಂದ ತಿಳಿಯುತ್ತಾನೆ- ಎಂಬ ಭೇದವಾಗುವುದು ಅದು ವ್ಯವಹಾರವಿದೆ. ಆತ್ಮನ ಜತೆ ಜ್ಞಾನ-ದರ್ಶನ, ಗುಣಗಳದ್ದು ಸಂಜ್ಞೆ ಮೊದಲಾದ ಭೇದದಿಂದ ಭೇದವಿದೆ, ಆದರೆ ಪ್ರದೇಶಭೇದವಿಲ್ಲ, ಪ್ರದೇಶದಿಂದ ಅಖಂಡಸ್ವರೂಪವಿದೆಯೆಂದು ಅಖಂಡದ ಶ್ರದ್ಧೆ ಮಾಡಬೇಕು.

ಇದೆಲ್ಲದರ ವಿಸ್ತಾರವನ್ನು ತತ್ತ್ವಾರ್ಥಸೂತ್ರದಿಂದ ತಿಳಿದುಕೊಳ್ಳಬೇಕು. ಮತಿಜ್ಞಾನದಲ್ಲಿ ಅವಗ್ರಹ, ಈಹಾ, ಅವಾಯ ಮತ್ತು ಧಾರಣಾವೆಂದು ಭೇದಗಳಿವೆ. ಅವಗ್ರಹವಾಗುತ್ತದೆ ಅದು ತನ್ನಿಂದ ಆಗುತ್ತದೆ, ಪರದ ಕಾರಣದಿಂದ ಆಗುವುದಿಲ್ಲ. ಜೀವವು ವಿಚಾರ ಮಾಡುತ್ತದೆ ಅದು ತನ್ನಿಂದ ಮಾಡುತ್ತದೆ. ಅದರಲ್ಲಿ ಪುಸ್ತಕ, ಮನಸ್ಸು, ಇಂದ್ರಿಯಗಳ ನಿಮಿತ್ತ ಮಾತ್ರವಿವೆ, ಬೇರೆ ವಸ್ತುಗಳಿವೆ ಅಥವಾ ಇಂದ್ರಿಯ ಮೊದಲಾದವುಗಳಿವೆ. ಅದಕ್ಕಾಗಿ ಅವಗ್ರಹವಾಗುತ್ತದೆ

ಎಂಬುದಾಗಿಲ್ಲ. ಮತಿಜ್ಞಾನದ ಅವಗ್ರಹಾದಿ ಭೇದಗಳು ಅದರಂತೆ ಶ್ರುತಜ್ಞಾನವು ತನ್ನ ಸ್ವ-ಅಸ್ತಿಕಾಯದಲ್ಲಿ ಆಗುತ್ತದೆ. ಪರದ ಕಾರಣದಿಂದ ಆಗುವುದಿಲ್ಲ. ಮನಸ್ಸಿನಿಂದ ವಿಚಾರಣವಾಗುತ್ತದೆ, ಇಂದ್ರಿಯಗಳ ಕಾರಣದಿಂದ ಜ್ಞಾನವಾಗುತ್ತದೆಂಬ ಕಥನವು ಶಾಸ್ತ್ರದಲ್ಲಿ ಬರುತ್ತದೆ, ಆದರೆ ಅದು ನಿಮಿತ್ತದ ಕಥನವಿದೆ. ಇಂದ್ರಿಯ ಮೊದಲಾದವು ಪುದ್ಗಲಾಸ್ತಿಕಾಯವಿದ್ದು ಜೀವದಿಂದ ಬೇರೆಯಿವೆ. ದರ್ಶನದ ನಾಲ್ಕು ಉಪಯೋಗ ಮತ್ತು ಜ್ಞಾನದ ಎಂಟು ಉಪಯೋಗ ಹೀಗೆ ಹನ್ನೆರಡು ಉಪಯೋಗಗಳು ಜೀವದಲ್ಲಿ ಜೀವದ ಕಾರಣದಿಂದ ಆಗುತ್ತವೆ. ಅವುಗಳ ಆಕಾರವು ಆತ್ಮನಷ್ಟು ಇದೆ. ನಾಮಭೇದವಿದ್ದರೂ ಕೂಡ ಪ್ರದೇಶಭೇದವಿಲ್ಲ. ಅವುಗಳಲ್ಲಿ ಕೇವಲಜ್ಞಾನ-ಕೇವಲದರ್ಶನವು ಶುದ್ಧವಿದ್ದು ಉಳಿದ ಹತ್ತು ಜ್ಞಾನ-ದರ್ಶನೋಪಯೋಗಗಳು ಅಶುದ್ಧವಿವೆ. ಈ ಪ್ರಕಾರ ಸಾಮಾನ್ಯ ಪ್ರಕಾರದಿಂದ ಸ್ವರೂಪವನ್ನು ತಿಳಿದುಕೊಳ್ಳುವುದು.

**ಪ್ರಶ್ನೆ :-** ಈ ಕನ್ನಡಕವಿದೆ ಅದರಿಂದ ಜ್ಞಾನವಾಗುತ್ತದೆಯಲ್ಲವೇನು ?

**ಉತ್ತರ :-** ಜ್ಞಾನವು ತನ್ನಿಂದ ಆಗುತ್ತದೆ, ಆಗ ಕನ್ನಡಕವು ನಿಮಿತ್ತವಿದೆಯೆಂದು ಜ್ಞಾನ ಮಾಡಿಸಲಾಗಿದೆ.

**ಪ್ರಶ್ನೆ :-** ಆ ಕನ್ನಡಕವನ್ನು ಏತಕ್ಕಾಗಿ ಧರಿಸುವುದು ?

**ಉತ್ತರ :-** ಜೀವದ ಇಚ್ಚೆಯ ಕಾರಣದಿಂದ ಕನ್ನಡಕ ಧರಿಸುವುದಿಲ್ಲ. ಕನ್ನಡಕವನ್ನು ಕನ್ನಡಕದ ಕಾರಣದಿಂದ ಇಡಲಾಗುತ್ತದೆ ಮತ್ತು ಜ್ಞಾನವು ಜ್ಞಾತಾರನ ಕಾರಣದಿಂದ ಆಗುತ್ತದೆ. ರಾಗೀ ಜೀವದ ರಾಗ ಮತ್ತು ಕನ್ನಡಕದಲ್ಲಿ ನಿಮಿತ್ತ-ನೈಮಿತ್ತಿಕ ಸಂಬಂಧವಿದೆ.

ಜ್ಞಾನದ ಉಪಯೋಗವು ತನ್ನ ಕಾರಣದಿಂದ ಆಗುತ್ತದೆಯೆಂದು ಜ್ಞಾನ ಮಾಡಿಕೊಂಡು ಜ್ಞಾನೋಪಯೋಗದ ಭೇದದ ಮೇಲಿನ ಲಕ್ಷ್ಯವನ್ನು ಕೂಡ ಬಿಟ್ಟುಕೊಟ್ಟು ಅನಾಕುಲ ಲಕ್ಷಣವುಳ್ಳ ಅಖಂಡ ಚೈತನ್ಯ ಸ್ವಭಾವದ ಶ್ರದ್ಧೆ ಮಾಡುವುದು ಅದು ಧರ್ಮವಿದೆ.

ಈಗ ಕರ್ತೃತ್ವ ಅಧಿಕಾರ ಹೇಳುತ್ತಾರೆ.

ಈ ಪಂಚಾಸ್ತಿಕಾಯದ ೨೧ ನೇ ಗಾಥೆಯಲ್ಲಿ ಜೀವನು ಚೇತಯಿತನಿದ್ದಾನೆ ಉಪಯೋಗವುಳ್ಳನಿದ್ದಾನೆಂದು ಯಾವ ಮಾತು ಬಂದಿತ್ತು ಅದರ ವರ್ಣನೆಯಾಗಿ ಹೋಯಿತು. ಅದರ ನಂತರ ಆತ್ಮನು ಪ್ರಭು ಇದ್ದಾನೆಂದು ಹೇಳಲಾಗಿದೆ. ಆದರೆ ಆ ಮಾತು ಅನಂತರ ಬರುವುದು; ಈಗ ಆತ್ಮನು ಕರ್ತೃವಿದ್ದಾನೆಂಬ ಅಧಿಕಾರ ಹೇಳಲಾಗುತ್ತದೆ.

ಜೀವನು ನಿಶ್ಚಯನಯದಿಂದ ಶರೀರ, ಮನಸ್ಸು, ವಾಣಿ ಮೊದಲಾದ ಪರಪದಾರ್ಥಗಳ ಕರ್ತೃವಿಲ್ಲ. ಜೀವನು ಇಂದ್ರಿಯಗಳನ್ನು ಉಚ್ಚ-ನೀಚ ಮಾಡುವ ಸಾಧ್ಯತೆಯಿಲ್ಲ. ಕನ್ನಡಕ ಧರಿಸುವ ಸಾಧ್ಯತೆಯಿಲ್ಲ. ಕಣ್ಣುಗಳನ್ನು ತೆರೆಯುವ ಸಾಧ್ಯತೆಯಿಲ್ಲ. ಇಚ್ಚೆಯಿಂದ ಶರೀರವನ್ನು ನಡೆಸುವ ಸಾಧ್ಯತೆಯಿಲ್ಲ. ನಿಮಿತ್ತದ ಹತ್ತಿರ ಹೋಗುವ ಸಾಧ್ಯತೆಯಿಲ್ಲ. ಇಚ್ಚೆ ಆಯಿತು ಮತ್ತು ಶರೀರ ಚಲಿಸಿತೆನ್ನುವಂತೆ ಇಲ್ಲವೇ ಇಲ್ಲ, ಆದರೆ ಇಚ್ಚೆಯಾಯಿತು ಮತ್ತು ಆತ್ಮನು ಗಮನ ಮಾಡಿದನೆಂದು ಕೂಡ ಇಲ್ಲ. ಏಕೆಂದರೆ ಇಚ್ಚೆಯು ಚಾರಿತ್ರಗುಣದ ವಿಪರೀತ ಪರ್ಯಾಯವಿದೆ. ಮತ್ತು ಕ್ಷೇತ್ರಾಂತರವಾಗುವುದು ಅದು ಕ್ರಿಯಾವತೀ ಶಕ್ತಿಯ ಪರ್ಯಾಯವಿದೆ. ಅವೆರಡೂ ಸ್ವತಂತ್ರವಿವೆ ಜೀವನು ಶರೀರದ ಕರ್ತೃವಿಲ್ಲ. ತನ್ನ ಶುದ್ಧಭಾವ ಅಥವಾ ಅಶುದ್ಧಭಾವ (ಶುಭ ಅಥವಾ ಅಶುಭ)ದ ಕರ್ತೃವಿದ್ದಾನೆ ತಾನು ಸಮಯ ಸಮಯಕ್ಕೆ ಅನಾದಿ-ಅನಂತ ಏಕರೂಪವಾಗಿ ಪರಿಣಮನ ಮಾಡುತ್ತಾನೆ ಆ ಪಾರಿಣಾಮಿಕಭಾವದ ಕರ್ತೃವಿದ್ದಾನೆ. ಅವು ಅನಾದಿ ಅನಂತವಿವೆ ಅಥವಾ ಔದಯಿಕ ಮೊದಲಾದ ಭಾವಗಳು ಸಮಯ ಸಮಯಕ್ಕೆ ನವೀನ ಆಗುತ್ತವೆ ಮತ್ತು ಕೊನೆ ಬರುತ್ತವೆ. ಅಂಥ ಸಾದಿ ಸಾಂತ ಪರಿಣಾಮದ ಕರ್ತೃ ಇದ್ದಾನೆ ಮತ್ತು ಕ್ಷಾಯಿಕಭಾವದ ಪ್ರಾರಂಭವಾಗುತ್ತದೆ ಆದರೆ ಕೊನೆ ಬರುವುದಿಲ್ಲ ಅದಕ್ಕಾಗಿ ಸಾದಿ ಅನಂತವಿದೆ ಅವುಗಳ ಕರ್ತೃ ಇದ್ದಾನೆ ಹೀಗೆ ತನ್ನ ಭಾವಗಳನ್ನು ಬದಲಿಸುತ್ತಾನೆ, ಆದರೆ ಪರವನ್ನು ಬದಲಿಸುವುದಿಲ್ಲ. ಪರರೂಪವಾಗಿ ಪರಿಣಮಿಸುವುದಿಲ್ಲ. ಈಗ ಆತ್ಮನು ತನ್ನ ಈ ಭಾವಗಳಲ್ಲಿ ಪರಿಣಮಿಸುತ್ತಿರುವನೋ ಅಥವಾ ಇಲ್ಲವೋ

ಪರಿಣಮಿಸುತ್ತಿರುವನೆಂಬ ಆಶಂಕೆಯ ಸಮಾಧಾನವನ್ನು ಆಚಾರ್ಯ ಭಗವಂತರು ಈಗ ಮಾಡುತ್ತಾರೆ,-

ಜೀವಾ ಅಣಾಇಣಿಹಣಾ ಸಂತಾ ಣಂತಾ ಯ ಜೀವಭಾವಾದೋ ।
ಸಬ್ಭಾವದೋ ಅಣಂತಾ ಪಂಚಗ್ಗಗುಣಪ್ಪಧಾಣಾ ಯ ॥೫೩॥

**ಜೀವಗಳು ಅನಾದಿಅನಂತ, ಸಾಂತವಲ್ಲದೆ ಜೀವಭಾವದಿಂದನಂತವಿದೆ ।**
**ಜೀವ ಸದ್ಭಾವದಿಂದನಂತವಾಗಿದ್ದು ಪಂಚಾಗ್ರಗುಣಗಳಿಂದ ಪ್ರಧಾನವಿದೆ ॥೫೩॥**

ಆತ್ಮದ್ರವ್ಯವು ಸಹಜಶುದ್ಧಚೇತನ ಪಾರಿಣಾಮಿಕಭಾವಗಳಿಂದ ಅನಾದಿ ಅನಂತವಿದೆ. ಸ್ವಾಭಾವಿಕ ಭಾವದ ಅಪೇಕ್ಷೆಯಿಂದ ಜೀವವು ಮೂರು ಕಾಲಗಳಲ್ಲಿ ಟಂಕೋತ್ಕೀರ್ಣ ಅವಿನಾಶಿಯಿದೆ ಮತ್ತು ಅದೇ ಜೀವವು ಸಾದಿ ಸಾಂತ ಕೂಡ ಇದೆ ಮತ್ತು ಸಾದಿ ಅನಂತ ಕೂಡ ಇದೆ.

೧) ಆತ್ಮನು ತನ್ನ ಸ್ವಾಭಾವಿಕ ತ್ರಿಕಾಲ ಏಕರೂಪಭಾವದಿಂದ ಸಹಜತೆಯಿಂದ ಪರಿಣಮಿಸುತ್ತಾನೆ. ಅವನು ಸ್ವಭಾವಭಾವದಿಂದ ಟಂಕೋತ್ಕೀರ್ಣ ಏಕರೂಪನಿದ್ದಾನೆ. ಇಲ್ಲಿ ಜೀವಾಸ್ತಿಕಾಯದ ವರ್ಣನೆ ಮಾಡಲಾಗಿದೆ. ಧ್ರುವರೂಪ ಇದ್ದಕ್ಕಿದ್ದಂತೆ ಸಹಜಸ್ವಭಾವವಿದೆ. ಅವನಿಗೆ ಕರ್ಮದ ಅಪೇಕ್ಷೆಯು ಅನ್ವಯಿಸುವುದಿಲ್ಲ. ಅನಾದಿ ಅನಂತಶುದ್ಧ ಚೈತನ್ಯಪರಿಣಾಮಗಳಿಂದ ಇದ್ದಕ್ಕಿದ್ದಂತೆ ಇದ್ದಾನೆ. ಅವನು ಅನಾದಿ ಅನಂತನಿದ್ದಾನೆ.

೨) ಆ ಜೀವನು ಸಾದಿ-ಸಾಂತನಿದ್ದಾನೆ. ಉದಯ, ಕ್ಷಯೋಪಶಮ ಮತ್ತು ಉಪಶಮಭಾವದ ಅಪೇಕ್ಷೆಯಿಂದ ಸಾದಿ-ಸಾಂತನಿದ್ದಾನೆ. ಈ ಮೂರು ಭಾವಗಳು ಕರ್ಮದ ನಿಮಿತ್ತದ ಅಪೇಕ್ಷೆಯಿಂದ ಇವೆ. ಸಮಯ ಸಮಯಕ್ಕೆ ಜೀವದ ಪರಿಣಾಮದ ನಿಮಿತ್ತ ಪಡೆದು ಕರ್ಮಗಳು ಕಟ್ಟಲ್ಪಡುತ್ತವೆ ಮತ್ತು ಬಿಡಲ್ಪಡುತ್ತವೆ ಆ ಕರ್ಮಗಳ ನಿಮಿತ್ತದ ಅಪೇಕ್ಷೆಯಿಂದ ಆ ಪರಿಣಾಮದಿಂದ ಸಾದಿ-ಸಾಂತನೆಂದು ಹೇಳಲಾಗಿದೆ.

**ಅ) ಔದಯಿಕಭಾವ ೩-** ಕರ್ಮಜನ್ಯದ ಹೇತು ಕರ್ಮಗಳು ರಾಗ-ದ್ವೇಷ ಮಾಡಿಸುತ್ತವೆಯೆಂಬುದಾಗಿಲ್ಲ; ಆದರೆ ಜೀವದಲ್ಲಿ ವಿಕಾರಿಯಾಗುವ ಯೋಗ್ಯತೆಯಿದೆ ಅದರಲ್ಲಿ ಕರ್ಮವು ನಿಮಿತ್ತವಿದೆ. ಹೀಗೆ ಕರ್ಮದ ನಿಮಿತ್ತತನದ ಜ್ಞಾನ ಮಾಡಿಸಲಾಗಿದೆ. ಮಿಥ್ಯಾತ್ವ, ರಾಗ-ದ್ವೇಷ, ಪ್ರಮಾದ, ಕಷಾಯ, ಯೋಗವೆಂಬ ಪರಿಣಾಮಗಳು ತನ್ನ ಪರ್ಯಾಯದಲ್ಲಿ ಆಗುತ್ತವೆ ಅವನ್ನು ಔದಯಿಕಭಾವವೆಂದು ಹೇಳಿದೆ. ಹೊಸ-ಹೊಸ ರಾಗ-ದ್ವೇಷಗಳನ್ನು ಮಾಡುತ್ತಾನೆ ಮತ್ತು ಬಿಟ್ಟುಕೊಡುತ್ತಾನೆ. ಅದರಲ್ಲಿ ಕರ್ಮವು ನಿಮಿತ್ತವಿದೆ, ಆ ಭಾವಗಳು ಕ್ಷಣ ಕ್ಷಣಕ್ಕೆ ನವೀನವಾಗುತ್ತವೆ ಮತ್ತು ಕೊನೆಗೊಳ್ಳುತ್ತವೆ, ಮತ್ತು ಸಿದ್ಧ ದಶೆಯಾದ ಮೇಲೆ ಕೊನೆಗೊಳ್ಳುತ್ತವೆ ಅದಕ್ಕಾಗಿ ಸಾದಿ-ಸಾಂತವಿವೆ.

**ಬ) ಕ್ಷಾಯೋಪಶಮಿಕಭಾವ ೩-** ಜೀವದ ಪರ್ಯಾಯದಲ್ಲಿ ಸ್ವಲ್ಪ ವಿಕಾರ ಮತ್ತು ಸ್ವಲ್ಪ ಅವಿಕಾರವಾಗುವುದನ್ನು ಕ್ಷಾಯೋಪಶಮಿಕಭಾವವೆಂದು ಹೇಳುತ್ತಾರೆ. ಅದರಿಂದ ಜ್ಞಾನ-ದರ್ಶನ-ಚಾರಿತ್ರ-ವೀರ್ಯದ ಕ್ಷಯೋಪಶಮವಾಗುತ್ತದೆ. ಅದರ ಪ್ರಾರಂಭವಾಗುತ್ತದೆ ಮತ್ತು ಕೊನೆ ಬರುತ್ತದೆ, ಮತ್ತು ಕೇವಲಜ್ಞಾನವಾದ ಮೇಲೆ ಕೊನೆ ಬರುತ್ತದೆ ಅದಕ್ಕಾಗಿ ಸಾದಿ-ಸಾಂತವಿದೆ.

**ಕ) ಉಪಶಮಭಾವಃ ೩-** ಜೀವದ ಪರ್ಯಾಯದಲ್ಲಿ ಶುದ್ಧತೆಯು ಪ್ರಕಟವಾಗುವುದು ಮತ್ತು ಅಶುದ್ಧತೆಯು ಕುಗ್ಗುವುದನ್ನು ಉಪಶಮಭಾವವೆಂದು ಹೇಳುತ್ತಾರೆ. ಶ್ರದ್ಧೆ ಮತ್ತು ಚಾರಿತ್ರದಲ್ಲಿ ಉಪಶಮಭಾವವಿರುತ್ತದೆ. ಸಮಯ ಸಮಯಕ್ಕೆ ನವೀನವಾಗುತ್ತದೆ ಮತ್ತು ಕೊನೆಗೊಳ್ಳುತ್ತದೆ ಮತ್ತು ಕೇವಲಜ್ಞಾನವಾದಮೇಲೆ ಕೊನೆ ಬರುತ್ತದೆ ಅದಕ್ಕಾಗಿ ಸಾದಿ-ಸಾಂತವಿದೆ.

ಈ ಮೂರು ಭಾವಗಳು ಕರ್ಮದ ಅಪೇಕ್ಷೆಯನ್ನಿಡುತ್ತವೆ. ಆತ್ಮನು ತನ್ನ ಯೋಗ್ಯತೆಗನುಸರಿಸಿ ಯಾವ ಭಾವ ಪ್ರಕಟಿಸುವನು ಅವು ನೈಮಿತ್ತಿಕವಿವೆ ಮತ್ತು ದ್ರವ್ಯಕರ್ಮವು ನಿಮಿತ್ತವಿದೆ. ಹೀಗೆ ಈ ಮೂರು ಭಾವಗಳು ಕರ್ಮದ ಸಂಬಂಧವುಳ್ಳವುಗಳಿರುವುದರಿಂದ ಕರ್ಮಜನಿತವೆಂದು ಹೇಳಲಾಗಿದೆ. ಆದರೆ ಕರ್ಮದ ಕಾರಣದಿಂದ ಆ ಭಾವಗಳಿಲ್ಲ. ಕರ್ಮವಂತೂ ನಿಮಿತ್ತಮಾತ್ರವಿದೆ. ಹೀಗೆ ಜೀವಾಸ್ತಿಕಾಯದ ಧರ್ಮವಿದೆ.

**೩) ಕ್ಷಾಯಿಕಭಾವ :-** ಆತ್ಮನ ಪುರುಷಾರ್ಥದಿಂದ ಅಶುದ್ಧತೆಯು ನಾಶವಾಗಿ ಶುದ್ಧತೆಯು ಪ್ರಕಟವಾಗುವಂಥ ಭಾವವನ್ನು ಕ್ಷಾಯಿಕಭಾವವೆಂದು ಹೇಳುತ್ತಾರೆ. ಕೇವಲಜ್ಞಾನ, ಕೇವಲದರ್ಶನ, ಅನಂತವೀರ್ಯ ಮೊದಲಾದವು ಕ್ಷಾಯಿಕಭಾವಗಳಿವೆ. ಕರ್ಮದ ನಾಶವಾಗಿ ಪೂರ್ಣ ಶುದ್ಧತೆಯ ಪ್ರಾರಂಭವಾಗುತ್ತದೆ ಆದರೆ ಪ್ರಕಟವಾದ ನಂತರ ಇದ್ದಕ್ಕಿದ್ದಂತೆ ಶುದ್ಧವಿರುತ್ತದೆ. ಅದಕ್ಕಾಗಿ ಈ ಭಾವವನ್ನು ಸಾದಿ-ಅನಂತವೆಂದು ಹೇಳಿದೆ. ರಾಗ-ದ್ವೇಷ ಮತ್ತು ಅಲ್ಪಜ್ಞತೆಯ ನಾಶವಾಗಿ ಸಿದ್ಧಭಗವಂತನಿಗೆ ಅವಿನಾಶಿ ನಿಶ್ಚಲರೂಪವು ಪ್ರಕಟವಾಗುವುದು ಅದು ಇದ್ದಕ್ಕಿದ್ದಂತೆ ಇರುವುದು ಅದಕ್ಕಾಗಿ ಅದನ್ನು ಕ್ಷಾಯಿಕಭಾವವೆಂದು ಹೇಳಿದೆ.

ಅಭವ್ಯನಿಗೆ ಔದಯಿಕಭಾವವು ಅನಾದಿ-ಅನಂತವಿರುತ್ತದೆ ಅದನ್ನು ಇಲ್ಲಿ ಸ್ವೀಕರಿಸಿಲ್ಲ ಮತ್ತು ಭವ್ಯನಿಗೆ ಇಲ್ಲಿ ಔದಯಿಕಭಾವವು ಅನಾದಿ-ಸಾಂತವಿರುತ್ತದೆ ಅದನ್ನು ಸ್ವೀಕರಿಸಿಲ್ಲ. ಆದರೆ ಅವೆಲ್ಲವೂ ಸಮಯ ಸಮಯಕ್ಕೆ ನವೀನ ಪ್ರಕಟವಾಗುತ್ತವೆ ಮತ್ತು ನಾಶ ಹೊಂದುತ್ತವೆ. ಈ ಅಪೇಕ್ಷೆಯಿಂದ ಇವೆರಡು ಭಂಗಗಳನ್ನು ಸಾದಿ-ಸಾಂತದಲ್ಲಿ ಸೇರಿಸಲಾಗಿದೆ. ಪಾರಿಣಾಮಿಕಭಾವವು ದ್ರವ್ಯದಲ್ಲಿದೆ ಅದು ಅನಾದಿ-ಅನಂತ ಏಕರೂಪವಿದೆ. ಸಮಯ ಸಮಯಕ್ಕೆ ಜೀವನು ಏಕರೂಪಶುದ್ಧಚೇತನಾಭಾವದಿಂದ ಪರಿಣಮನ ಮಾಡುತ್ತಾನೆ ಅವನು ಅನಾದಿ-ಅನಂತನಿದ್ದಾನೆ.

ಸತ್ತಾ ಸ್ವರೂಪದಿಂದ ಜೀವದ್ರವ್ಯಗಳು ಅನಂತವಿವೆ.

ಈಗ ಅಸ್ತಿರೂಪದಿಂದ ಜೀವಗಳು ಅನಂತವಿವೆ ಎಲ್ಲವೂ ಸೇರಿ ಒಂದು ಜೀವವಿಲ್ಲ. ಅಭವ್ಯಗಳು ಅನಂತವಿವೆ ಮತ್ತು ಭವ್ಯಗಳು ಆ ಅಭವ್ಯಕ್ಕಿಂತ ಅನಂತಗುಣಿತವಿವೆ.

**ಪ್ರಶ್ನೆ :-** ಆತ್ಮನು ಶುದ್ಧ ಚೈತನ್ಯಸ್ವಭಾವದಿಂದಂತೂ ಅನಾದಿ-ಅನಂತನಿದ್ದಾನೆ ಅವನನ್ನು ಯಾರೂ ಉತ್ಪನ್ನ ಮಾಡಿಲ್ಲ ಅದರಂತೆ ಅವನನ್ನು ಯಾರೂ ನಾಶ ಮಾಡುವುದಿಲ್ಲ. ವಸ್ತು ತ್ರಿಕಾಲವಿದೆಯೆಂದಮೇಲೆ ಅವನಿಗೆ ಪ್ರಾರಂಭ ಮತ್ತು ಕೊನೆಯೆಂಬ ಸಾದಿ-ಸಾಂತದ ಭಂಗಗಳು ಮತ್ತು ಪ್ರಾರಂಭ ಹಾಗೂ ಅಂತ್ಯವಿಲ್ಲದಂಥ ಸಾದಿ-ಅನಂತದ ಭಂಗಗಳು ಹೇಗೆ ಅನ್ವಯಿಸುತ್ತವೆ ?

**ಉತ್ತರ :-** ಆತ್ಮನು ಅನಾದಿಯಿಂದ ಕರ್ಮದ ಕಡೆಗಿರುವ ಪ್ರವೃತ್ತಿಯ ಕಾರಣದಿಂದ ಅಶುದ್ಧಭಾವರೂಪದಿಂದ ಪರಿಣಮಿಸುತ್ತಾನೆ. ಜೀವಗಳು ರಾಗ-ದ್ವೇಷಗಳರೂಪದಿಂದ ಪರಿಣಮಿಸುತ್ತವೆ. ಜ್ಞಾನ ಮೊದಲಾದವುಗಳಲ್ಲಿ ಸ್ವಲ್ಪ ವಿಕಾಸ ಮತ್ತು ಸ್ವಲ್ಪ ಅವಿಕಾಸರೂಪದಿಂದ ಪರಿಣಮಿಸುತ್ತವೆ ಮತ್ತು ಕೆಲವೊಂದು ಬಾರಿ ಉಪಶಮಭಾವರೂಪದಿಂದ ಪರಿಣಮಿಸುತ್ತವೆ, ಆದರೆ ಆ ಪರಿಣಾಮದ ಪ್ರಾರಂಭವಿದೆ ಮತ್ತು ಕೊನೆ ಬರುವುದರಿಂದ ಸಾದಿ-ಸಾಂತಭಾವರೂಪದಿಂದ ಪರಿಣಮಿಸುವುದೆಂದು ಹೇಳಲಾಗುತ್ತದೆ. ಮತ್ತು ತಾನು ಸಂಪೂರ್ಣ ಶುದ್ಧತೆಯರೂಪದಿಂದ ಪರಿಣಮಿಸುತ್ತದೆ ಮತ್ತು ಆ ಶುದ್ಧತೆಯ ಕೊನೆ ಬರುವುದಿಲ್ಲ ಅದಕ್ಕಾಗಿ ಸಾದಿ-ಅನಂತಭಾವರೂಪದಿಂದ ಪರಿಣಮಿಸಿತೆಂದು ಹೇಳಲಾಗುತ್ತದೆ. ಆ ಭಾವಗಳಲ್ಲಿ ಕರ್ಮದ ಸಂಯೋಗದ ಅಥವಾ ವಿಯೋಗದ ಅಪೇಕ್ಷೆಯು ಬರುತ್ತದೆ.

ಕರ್ಮದ ನಿಮಿತ್ತದಿಂದ ಸ್ವಯಂ ರಾಗ-ದ್ವೇಷಾದಿಗಳ ಪರಿಣಾಮ ಮಾಡುತ್ತದೆ ಅದನ್ನು ಔದಾಯಿಕಭಾವವೆಂದು ಹೇಳಿದೆ.

ಕರ್ಮದ ನಿಮಿತ್ತಗಳಲ್ಲಿ ಆಂಶಿಕ ಕೂಡುವುದು ಮತ್ತು ಆಂಶಿಕ ಕೂಡದಿರುವುದನ್ನು ಕ್ಷಯೋಪಶಮಭಾವವೆಂದು ಹೇಳಿದೆ.

ಕರ್ಮದ ನಿಮಿತ್ತಗಳಲ್ಲಿ ಒಂದಾಗದಿರುವುದು ಮತ್ತು ಉಪಶಮ ಮಾಡುವುದನ್ನು ಉಪಶಮಭಾವವೆಂದು ಹೇಳಿದೆ.

ಕರ್ಮದ ನಿಮಿತ್ತಗಳಲ್ಲಿ ಸರ್ವಥಾ ಒಂದಾಗದಿರುವುದನ್ನು ಕ್ಷಾಯಿಕಭಾವವೆಂದು ಹೇಳಿದೆ.

ಈ ಅಧಿಕಾರದಲ್ಲಿ ಜೀವವು ತನ್ನ ಪರಿಣಾಮದ ಕರ್ತೃವಿದೆಯೆಂಬುದನ್ನು ತಿಳಿಸಿಕೊಡಲಾಗಿದೆ, ಜೀವವು ವಿಕಾರರೂಪದಿಂದ ಅಥವಾ ಅವಿಕಾರರೂಪದಿಂದ ಸ್ವಯಂ ಪರಿಣಮಿಸುತ್ತದೆ. ಕರ್ಮದ ಕಾರಣದಿಂದ ವಿಕಾರ ರೂಪದಿಂದಾಗುವುದಿಲ್ಲವೆಂಬುದನ್ನು ತಿಳಿಸಿಕೊಡಲಾಗಿದೆ. ಪ್ರತಿಯೊಂದು ಪರಿಣಾಮವನ್ನು ಸ್ವಯಂ ಮಾಡುತ್ತದೆ. ತಾನು ಔದಯಿಕಭಾವ, ಕ್ಷಯೋಪಶಮಭಾವ ಅಥವಾ ಉಪಶಮಭಾವವನ್ನು ತನ್ನ ಯೋಗ್ಯತೆಯಿಂದ ಮಾಡುತ್ತದೆ ಅದರಲ್ಲಿ ಕರ್ಮವು ನಿಮಿತ್ತವಿದೆ ಮತ್ತು ತಾನು ಕ್ಷಾಯಿಕಭಾವ ಮಾಡುತ್ತದೆ ಅದರಲ್ಲಿ ಕರ್ಮದ ಅಭಾವರೂಪ ನಿಮಿತ್ತವಿದೆ. ಆತ್ಮನು ಸ್ವಯಂ ಸ್ಥಿರವಿದ್ದು ಪಾರಿಣಾಮಿಕಭಾವರೂಪದಿಂದಿದ್ದು ಉದಯ, ಉಪಶಮ ಅಥವಾ ಕ್ಷಯೋಪಶಮಭಾವರೂಪದಿಂದಾಗಿ ಇರುತ್ತಾನೆ ಅದು ಸಾದಿ-ಸಾಂತವಿದೆ. ಕ್ಷಾಯಿಕಭಾವರೂಪದಿಂದಾಗಿ ಇರುತ್ತಾನೆ ಅದು ಸಾದಿ-ಅನಂತವಿದೆ. ತಾನು ಅನಾದಿ-ಅನಂತವಿದ್ದು ಸಾದಿ-ಸಾಂತನಿರುತ್ತಾನೆ ಅಥವಾ ತಾನು ಅನಾದಿ-ಅನಂತವಿದ್ದು ಸಾದಿ-ಅನಂತನಿರುತ್ತಾನೆ. ಹೀಗೆ ಸ್ವಭಾವವಿದೆ. ೧) ಹೀಗೆ ತ್ರಿಕಾಲವಿರುವುದು, ೨) ನವೀನ ನವೀನ ಮತ್ತು ಕೊನೆ ಬರುವುದು, ೩) ನವೀನವಾಗಿ ಅನಂತಕಾಲದವರೆಗಿರುವುದು ಹೀಗೆ ಮೂರು ಪ್ರಕಾರದಿಂದಾಗುವುದು ಅದು ಜೀವಾಸ್ತಿಕಾಯದ ಸ್ವಭಾವವಿದೆ. ಅದು ಪರದ ಕಾರಣದಿಂದ ಇಲ್ಲ. ತಾನು ಪರಿಣಾಮದ ಭಾವತನದಿಂದ ಏಕರೂಪವಿರುತ್ತಿರುತ್ತದೆ. ತಾನು ಕರ್ತೃವಾಗಿ ಸತತ ಏಕರೂಪ ಶುದ್ಧ ಚೈತನ್ಯತನದಿಂದ ಸಮಯ ಸಮಯಕ್ಕೆ ಪರಿಣಮಿಸುತ್ತದೆ, ಪಾರಿಣಾಮಿಕಭಾವವು ಏಕರೂಪ ಅನಾದಿ-ಅನಂತ ಶುದ್ಧವಿದೆ ಮತ್ತು ತಾನು ಕರ್ತೃವಾಗಿ ಔದಯಿಕ, ಉಪಶಮ, ಕ್ಷಯೋಪಶಮ ಅಥವಾ ಕ್ಷಾಯಿಕಭಾವರೂಪದಿಂದ ಪರಿಣಮಿಸುತ್ತದೆ ಅದು ಕೂಡ ತನ್ನ ಕಾರಣದಿಂದ ಇದೆ, ಪರದ ಕಾರಣದಿಂದ ಇಲ್ಲ.

ಔದಯಿಕ, ಔಪಶಮಿಕ, ಕ್ಷಾಯೋಪಶಮಿಕ, ಕ್ಷಾಯಿಕ ಮತ್ತು ಪಾರಿಣಾಮಿಕವೆಂದು ಐದು ಭಾವಗಳ ಪ್ರವೃತ್ತಿಯು ಜೀವದಲ್ಲಿ ಮುಖ್ಯತೆಯಿಂದ ಇದೆ.

**ಔದಯಿಕಭಾವ** :- ರಾಗ-ದ್ವೇಷ ಮೊದಲಾದವುಗಳ ಪರಿಣಾಮವಾಗುವುದು ಅದು. ಎಂಟು ಕರ್ಮಗಳ ಉದಯದ ನಿಮಿತ್ತದಿಂದ ಔದಯಿಕಭಾವವಿರುತ್ತದೆ. ಅದು ಸಾದಿ-ಸಾಂತವಿದೆ.

**ಉಪಶಮಭಾವ** :- ತನ್ನ ಪರಿಣಾಮದಲ್ಲಿ ಸ್ಥಿರವಾಗಿ ನಿಂತುಕೊಳ್ಳುವುದು ಅದು. ಸಮ್ಯಗ್ದರ್ಶನ ಮತ್ತು ಚಾರಿತ್ರದಲ್ಲಿ ಇರುತ್ತದೆ. ಅದು ಸಾದಿ-ಸಾಂತವಿದೆ.

**ಕ್ಷಯೋಪಶಮಭಾವ** :- ನಾಲ್ಕು ಘಾತಿಕರ್ಮಗಳ ಕ್ಷಯೋಪಶಮದ ನಿಮಿತ್ತದಿಂದ ಜ್ಞಾನ, ದರ್ಶನ, ಚಾರಿತ್ರ ಮತ್ತು ವೀರ್ಯದಲ್ಲಿ ಆಂಶಿಕ ವಿಕಾಸವು ಕಂಡು ಬರುವುದು. ಅದು ಸಾದಿ-ಸಾಂತವಿದೆ.

**ಕ್ಷಾಯಿಕಭಾವ** :- ಎಂಟೂ ಕರ್ಮಗಳಲ್ಲಿ ಕ್ಷಯವಾಗುತ್ತದೆ. ಕರ್ಮಗಳ ಕ್ಷಯವಾಗುವುದರಿಂದ ಯಾವ ಭಾವವು ಉತ್ಪನ್ನವಾಗುತ್ತದೆ ಅದು ಕ್ಷಾಯಿಕವಿವೆ, ಅದು ಸಾದಿ-ಅನಂತವಿದೆ.

**ಪಾರಿಣಾಮಿಕಭಾವ** :- ತನ್ನ ಸ್ವಭಾವವು ತ್ರಿಕಾಲ ಏಕರೂಪವಿದೆ. ಸಮಯ ಸಮಯಕ್ಕೆ ಏಕರೂಪ ಶುದ್ಧ ಚೈತನ್ಯರೂಪದಿಂದ ಪರಿಣಮಿಸುತ್ತದೆ. ಅದಕ್ಕೆ ಯಾವುದೇ ಕರ್ಮದ ಅಪೇಕ್ಷೆಯಿಲ್ಲ ಅದು ಅನಾದಿ-ಅನಂತವಿದೆ.

ಯಾವ ಪ್ರಕಾರ ಯಾರೂ ಆತ್ಮನ ಕರ್ತೃವಿಲ್ಲ ಅದೇ ಪ್ರಕಾರ ಆತ್ಮನ ಈ ಐದು ಭಾವಗಳ ಕರ್ತೃ ಕೂಡ ಯಾರೂ ಇಲ್ಲ. ತತ್ತ್ವಾರ್ಥಸೂತ್ರದಲ್ಲಿ ಔದಯಿಕಭಾವವನ್ನು ಸ್ವತತ್ತ್ವವೆಂದು ಹೇಳಲಾಗಿದೆ. ವಿಕಾರವಾಗುವುದು ತನ್ನ ಯೋಗ್ಯತೆಯಿದೆಯೆಂದು ಹೇಳಿ ಕರ್ಮದ ಮೇಲಿನ ದೃಷ್ಟಿಯನ್ನು ಬಿಡಿಸಿದೆ ಮತ್ತು ತನ್ನಲ್ಲಿ ದೃಷ್ಟಿ ಮಾಡೆಂದು ಹೇಳಿದೆ.

೧) ನಿಗೋದದ ಜೀವ ಕೂಡ ಅನಾದಿ-ಅನಂತ ಏಕರೂಪ ಶುದ್ಧ ಚೇತನಾಭಾವದಿಂದ ಪರಿಣಮನ ಮಾಡುತ್ತಲಿದೆ. ಆ ಪಾರಿಣಾಮಿಕಭಾವವು ಅನಾದಿ-ಅನಂತವಿದೆ ಆ ಭಾವವಿಲ್ಲದಿದ್ದರೆ ಜೀವದ ಅಭಾವವಾಗಿ ಹೋಗುವುದು.

೨) ನಿಗೋದದ ಜೀವಕ್ಕೆ ಜ್ಞಾನ, ದರ್ಶನ ಮತ್ತು ವೀರ್ಯದ ವಿಕಾಸವು ಸ್ವಲ್ಪ ಇದೆ. ಅನಾದಿಯಿಂದ ಇದ್ದರೂ ಕೂಡ ಸಮಯ ಸಮಯಕ್ಕೆ ನವೀನ ವಿಕಾಸ ಮಾಡುತ್ತದೆ ಮತ್ತು ಮೊದಲಿನದು ನಾಶವಾಗುತ್ತದೆ. ಆ ಕ್ಷಯೋಪಶಮಭಾವವು ಸಾದಿ-ಸಾಂತವಿದೆ. ಆ ಕ್ಷಯೋಪಶಮಭಾವದ (ವಿಕಾಸ)ವಿಲ್ಲದಿದ್ದರೆ ಜೀವವು ಜಡವಾಗಿ ಹೋಗುವುದು.

೩) ನಿಗೋದದ ಜೀವವು ರಾಗ-ದ್ವೇಷ ಮೊದಲಾದ ವಿಕಾರೀಭಾವಗಳಲ್ಲಿ ಒಂದಾಗುತ್ತದೆ. ಅನಾದಿಯಿಂದ ಇದ್ದರೂ ಕೂಡ ಸಮಯ ಸಮಯಕ್ಕೆ ನವೀನವಾಗುತ್ತದೆ ಮತ್ತು ಅದು ಸಾದಿ-ಸಾಂತವಿದೆ. ಔದಯಿಕಭಾವವು ಇಲ್ಲದಿದ್ದರೆ ಜೀವವು ಸಿದ್ಧವಾಗಿ ಹೋಗುವುದು. ನಿಗೋದದ ಜೀವಕ್ಕೆ ಉಪಶಮ ಮತ್ತು ಕ್ಷಾಯಿಕಭಾವವಾಗುವುದಿಲ್ಲ. ಕೆಲವು ಸಂಜ್ಞೀಪಂಚೇಂದ್ರಿಯಕ್ಕೆ ಉಪಶಮ ಅಥವಾ ಕ್ಷಯೋಪಶಮಸಮ್ಯಕ್ತ್ವ ಅಥವಾ ಚಾರಿತ್ರವಾಗುತ್ತದೆ.

೪) ಅನಾದಿ-ಅನಂತ ಆತ್ಮನು ಸತತ ಇರುತ್ತಾನೆ ಮತ್ತು ಅವನಲ್ಲಿ ಔದಯಿಕ ಮೊದಲಾದ ಭಾವದ ಪ್ರಾರಂಭವಾಗುತ್ತದೆ ಮತ್ತು ಕೊನೆ ಬರುತ್ತದೆ. ೨) ಅನಾದಿ ಅನಂತ ಆತ್ಮನು ಸ್ಥಿರ ಉಳಿಯುತ್ತಾನೆ ಮತ್ತು ಅವನಲ್ಲಿ ಕ್ಷಾಯಿಕಭಾವದ ಪ್ರಾರಂಭವಾಗುತ್ತದೆ ಹಾಗೂ ಅಂತ್ಯ ಬರುವುದಿಲ್ಲ. ವಸ್ತುವಿನ ಸ್ವರೂಪವೇ ಹೀಗೆ ಇದೆ ಅದನ್ನು ಯಥಾರ್ಥವಾಗಿ ತಿಳಿದುಕೊಳ್ಳಬೇಕು.

ಜೀವದ ಐದು ಭಾವಗಳಲ್ಲಿ ಅನಾದಿ-ಅನಂತ, ಸಾದಿ-ಸಾಂತ ಮತ್ತು ಸಾದಿ-ಅನಂತತೆಯನ್ನು ಹೇಳಿದ್ದರೂ ಕೂಡ ದ್ರವ್ಯಾರ್ಥಿಕ, ಪರ್ಯಾಯಾರ್ಥಿಕ ನಯದಿಂದ ವಿರೋಧವಿಲ್ಲವೆಂದು ಈಗ ಕಥನ ಮಾಡಲಾಗುತ್ತದೆ,-

ಏವಂ ಸದೋ ವಿಣಾಸೋ ಅಸದೋ ಜೀವಸ್ಸ ಹವದಿ ಉಪ್ಪಾದೋ ।
ಇದಿ ಜಿಣವರೇಹಿಂ ಭಣಿದಂ ಅಣ್ಣೋಣ್ಣವಿರುದ್ಧಮವಿರುದ್ಧಂ ॥೫೪॥

**ಈ ರೀತಿ ಜೀವಕ್ಕೆ ಸತ್‌ದ ವಿನಾಶ ಮೇಣಸತ್‌ದ ಉತ್ಪಾದವಾಗುವುದೆಂದು ।**
**ವರ ಜಿನರು ಪೇಳಿಹರದು ಅನ್ಯೋನ್ಯ ವಿರುದ್ಧವಿದ್ದರು ಅವಿರುದ್ಧವಿದೆ ॥೫೪॥**

ಮೊದಲು ಹೇಳಿದ ಭಾವಗಳರೂಪವಾಗಿ ಜೀವನು ಸ್ವಯಂ ಪರಿಣಮಿಸುತ್ತಾನೆ ಅದನು ಉತ್ಪಾದವ್ಯಯದ ಅಪೇಕ್ಷೆಯಿಂದ ನೋಡಹೋದರೆ ವಿದ್ಯಮಾನ ಮನುಷ್ಯ ಪರ್ಯಾಯದ ನಾಶವಾಗುತ್ತದೆ ಮತ್ತು ಅವಿದ್ಯಮಾನವಾದ ದೇವಪರ್ಯಾಯದ ಉತ್ಪಾದವಾಗುತ್ತದೆ. ಈ ಪ್ರಕಾರದಿಂದ ವಿರುದ್ಧವೆನಿಸುತ್ತಿದ್ದರೂ ಕೂಡ ವಿರೋಧರಹಿತವಿದೆ.

**ಭಾವಾರ್ಥ :-** ಒಂದು ದ್ರವ್ಯರ್ಥಿಕನಯ ಮತ್ತು ಇನ್ನೊಂದು ಪರ್ಯಾಯಾರ್ಥಿಕನಯವೆಂದು ಭಗವಂತರ ಮತದಲ್ಲಿ ಎರಡು ನಯಗಳನ್ನು ಹೇಳಲಾಗಿದೆ.

**೧) ದ್ರವ್ಯಾರ್ಥಿಕನಯ :-** ದ್ರವ್ಯಾರ್ಥಿಕನಯದಿಂದ ವಸ್ತುವು ಉತ್ಪನ್ನವಾಗುವುದಿಲ್ಲ ಅದರಂತೆ ನಾಶ

ಹೊಂದುವುದಿಲ್ಲ. ಅನಾದಿ ಅನಂತ ಏಕರೂಪ ಇದ್ದಹಾಗೆ ಇರುತ್ತದೆ. ವಸ್ತುವು ಸ್ಥಿರವಿಲ್ಲದಿದ್ದರೆ ಈಗ ಕಂಡು ಬರುವ ವಸ್ತುವು ಉಳಿಯಲಿಕ್ಕಿಲ್ಲ. ಅದಕ್ಕಾಗಿ ದ್ರವ್ಯಾರ್ಥಿಕನಯದಿಂದ ವಸ್ತುವು ಸ್ಥಿರ ಉಳಿಯುತ್ತದೆ.

**ಪರ್ಯಾಯಾರ್ಥಿಕನಯ :-** ಪರ್ಯಾಯಾರ್ಥಿಕನಯದಿಂದ ವಸ್ತುವಿನಲ್ಲಿ ಉತ್ಪಾದ-ವ್ಯಯಗಳಾಗುತ್ತವೆ. ಆತ್ಮನು ತ್ರಿಕಾಲವಿದ್ದು ಪೂರ್ವ ಅವಸ್ಥೆಯ ನಾಶವಾಗುತ್ತದೆ ಮತ್ತು ನವೀನ ಅವಸ್ಥೆಯ ಉತ್ಪಾದವಾಗುತ್ತದೆ. ಯಾವ ಪ್ರಕಾರ ನೀರು ನಿತ್ಯ-ಅನಿತ್ಯ ಸ್ವರೂಪವಿದೆ. ದ್ರವ್ಯದ ಅಪೇಕ್ಷೆಯಿಂದ ನೀರು ನಿತ್ಯವಿದೆ ಮತ್ತು ಒಂದು ನೀರಿನ ಅಲೆಯು ಉತ್ಪನ್ನವಾಗುತ್ತದೆ ಮತ್ತು ಒಂದು ನಾಶವಾಗುತ್ತದೆ ಆ ಅಪೇಕ್ಷೆಯಿಂದ ಅನಿತ್ಯವಿದೆ, ಅದೇ ಪ್ರಕಾರ ದ್ರವ್ಯವು ಸ್ಥಿರ ಉಳಿಯುವ ಅಪೇಕ್ಷೆಯಿಂದ ನಿತ್ಯವಿದೆ ಮತ್ತು ಪೂರ್ವ ಅವಸ್ಥೆಯ ನಾಶವಾಗಿ ನವೀನ ಅವಸ್ಥೆಯ ಉತ್ಪಾದವಾಗುವ ಅಪೇಕ್ಷೆಯಿಂದ ಅನಿತ್ಯವಿದೆ ಆತ್ಮನು ಸ್ಥಿರ ಉಳಿಯುತ್ತಾನೆ ಅವನು ನಿತ್ಯನಿದ್ದಾನೆ ಮತ್ತು ಮನುಷ್ಯಪರ್ಯಾಯದ ವ್ಯಯವಾಗಿ ದೇವನಾಗಿ ಉತ್ಪನ್ನವಾಗುವ ಅಪೇಕ್ಷೆಯಿಂದ ಅನಿತ್ಯನಿದ್ದಾನೆ. ಸ್ವಯಂ ಆ ರೂಪದಿಂದ ಪರಿಣಮಿಸುವವನಿದ್ದಾನೆಂದು ಸಿದ್ಧಮಾಡುವುದಿದೆ ಪರದ ಕಾರಣದಿಂದಿಲ್ಲ. ನವೀನ ಅವಸ್ಥೆಯರೂಪದಿಂದ ಉತ್ಪನ್ನವಾಗುವುದು ಹಳೆಯ ಅವಸ್ಥೆಯರೂಪದಿಂದ ನಾಶವಾಗುವುದು ಮತ್ತು ಸ್ವಯಂ ಸ್ಥಿರ ಉಳಿಯುವುದು ಹೀಗೆ ವಸ್ತುವಿನ ಸ್ವರೂಪವಿದೆ.

ಈಗ ಜೀವದ ಉತ್ಪಾದ-ವ್ಯಯಗಳು ಕರ್ಮದ ನಿಮಿತ್ತದಿಂದಿವೆಯೆಂದು ನಿಮಿತ್ತದ ಮುಖ್ಯತೆಯಿಂದ ಕಥನ ಮಾಡಿ ನಿಮಿತ್ತದ ಸಿದ್ಧಿ ಮಾಡುತ್ತಾರೆ. ನಿಮಿತ್ತದಿಂದ ಉತ್ಪನ್ನವಾಗುತ್ತದೆ ಅಥವಾ ನಾಶವಾಗುತ್ತದೆಯೆಂದು ಇಲ್ಲವೇ ಇಲ್ಲ. ತಾನು ತನ್ನ ಕಾರಣದಿಂದ ಉತ್ಪನ್ನವಾಗುತ್ತದೆ ಮತ್ತು ವಿನಾಶವಾಗುತ್ತದೆಯೆಂಬುದು ನಿಶ್ಚಯವಿದೆ, ಅದರಲ್ಲಿ ಕರ್ಮವು ನಿಮಿತ್ತವಿದೆ ಅದು ವ್ಯವಹಾರವಿದೆ. ಹೀಗೆ ಪ್ರಮಾಣಜ್ಞಾನದ ಮಾತು ನಡೆಯುತ್ತಿದೆ.

**ಣೇರಇಯತಿರಿಯಮಣುಯಾ ದೇವಾ ಇದಿ ಣಾಮಸಂಜುದಾ ಪಯಡೀ ।**
**ಕುವ್ವಂತಿ ಸದೋ ಣಾಸಂ ಅಸದೋ ಭಾವಸ್ಸ ಉಪ್ಪಾದಂ ।।೫೫।।**

**ನಾರಕ-ತಿರ್ಯಂಚ-ಮನುಷ್ಯ-ದೇವವೆಂಬ ಹೆಸರಿನ ಪ್ರಕೃತಿಗಳಿವೆಯವು ।**
**ನೇರ ಸತ್‌ಭಾವದ ನಾಶ ಮೇಣಸತ್‌ಭಾವದ ಉತ್ಪಾದವನು ಮಾಡುವವು ।।೫೫।।**

ನರಕ, ತಿರ್ಯಂಚ, ಮನುಷ್ಯ ಮತ್ತು ದೇವವೆಂಬ ಹೆಸರುಗಳಿಂದ ಸಂಯುಕ್ತವಾದ ನಾಮಕರ್ಮದ ಪ್ರಕೃತಿಗಳು ವಿದ್ಯಮಾನಪರ್ಯಾಯದ ವಿನಾಶ ಮಾಡುತ್ತವೆ ಮತ್ತು ಅವಿದ್ಯಮಾನಪರ್ಯಾಯದ ಉತ್ಪತ್ತಿ ಮಾಡುತ್ತವೆ.

ನಾಮಕರ್ಮದ ಕಾರಣದಿಂದ ಮನುಷ್ಯಪರ್ಯಾಯದ ನಾಶವಾಗಿ ದೇವನಾಗುತ್ತಾನೆ, ನಾರಕಿಯ ನಾಶವಾಗಿ ತಿರ್ಯಂಚನಾಗುತ್ತಾನೆ, ತಿರ್ಯಂಚದ ನಾಶವಾಗಿ ನರಕಾದಿಗಳಲ್ಲಿ ಹೋಗುತ್ತಾನೆ, ಈ ಪ್ರಕಾರದಿಂದ ನಾಮಕರ್ಮವು ವಿದ್ಯಮಾನಪರ್ಯಾಯದ ನಾಶ ಮಾಡುತ್ತದೆ ಮತ್ತು ಅವಿದ್ಯಮಾನಪರ್ಯಾಯದ ಉತ್ಪತ್ತಿ ಮಾಡುತ್ತದೆ. ಇಲ್ಲಿ ನಿಮಿತ್ತದಿಂದ ಕಥನಮಾಡಲಾಗಿದೆ. ಕರ್ಮವು ಜೀವವನ್ನು ಗತಿಗಳಲ್ಲಿ ಕೊಂಡೊಯ್ಯುವುದಿಲ್ಲ. ಜೀವವು ತನ್ನ ನಿರ್ವಿಕಲ್ಪ ಸ್ವರೂಪದಿಂದ ಚ್ಯುತವಾಗುತ್ತದೆ ಮತ್ತು ತನ್ನಲ್ಲಿ ಗತಿಯ ಯೋಗ್ಯತೆಯ ಪರಿಣಾಮ ಮಾಡುತ್ತದೆ ಆಗ ನಾಮಕರ್ಮದ ನಿಮಿತ್ತದಿಂದ ದೇವನು ಸತ್ತು ಮನುಷ್ಯನಾದನೆಂದು ಕಥನ ಮಾಡಲಾಗುತ್ತದೆ. ಜೀವವು ತನ್ನ ಕಾರಣದಿಂದ ಪರಿಣಾಮ ಮಾಡುತ್ತದೆ ಅದು ಉಪಾದಾನ ಕಾರಣವಿದೆ ಅಲ್ಲಿ ನಿಶ್ಚಯನಯವಿದೆಯೆಂದು ತಿಳಿಯಬೇಕು ಮತ್ತು ಕರ್ಮದ ಕಾರಣದಿಂದ ಪರಿಣಾಮ ಮಾಡುತ್ತವೆಂಬ ಕಥನದಲ್ಲಿ ಕರ್ಮವು ನಿಮಿತ್ತ ಕಾರಣವಿದೆ ಅಲ್ಲಿ ವ್ಯವಹಾರನಯವಿದೆಯೆಂದು ತಿಳಿಯಬೇಕು.

ಈ ವಿವಕ್ಷೆಯು ಎಲ್ಲೆಡೆಗೆ ಅನ್ವಯಿಸುತ್ತದೆ.

**ಭಾವಾರ್ಥ :-** ಯಾವ ಪ್ರಕಾರ ಸಮುದ್ರವು ತನ್ನ ಸ್ವರೂಪದಿಂದ ಸ್ಥಿರವಿದೆ. ತನ್ನ ಉತ್ಪಾದ-ವ್ಯಯ ಅವಸ್ಥೆಗೆ ಪ್ರಾಪ್ತವಾಗುವುದಿಲ್ಲ ಆದರೆ ನಾಲ್ಕೂ ದಿಕ್ಕುಗಳಿಂದ ವಾಯುವು ಬರುವುದರಿಂದ ಸಮುದ್ರದಲ್ಲಿ ಅಲೆಗಳ ಉತ್ಪಾದ-ವ್ಯಯವಾಗುತ್ತದೆ, ಆ ಅಲೆಗಳು ವಾಯುವಿನ ಕಾರಣದಿಂದ ಆಗುವುದಿಲ್ಲ. ವಾಯುವಿನ ಕಾರಣದಿಂದ ಆಗುತ್ತಿದ್ದರೆ ಆಕಾಶದಲ್ಲೂ ಅಲೆಗಳು ಆಗಬೇಕಾಗುವುದು. ನೀರಿನಲ್ಲಿ ಅಲೆಗಳ ಉತ್ಪಾದ-ವ್ಯಯವಾಗುವ ಯೋಗ್ಯತೆಯಿದೆ. ಅದನ್ನು ವಾಯುವಿನ ನಿಮಿತ್ತವೆಂದು ಹೇಳಲಾಗುತ್ತದೆ. ಅದೇ ಪ್ರಕಾರ ಜೀವದ್ರವ್ಯವು ತನ್ನ ತ್ರಿಕಾಲೀ ಶುದ್ಧ ಸ್ವಭಾವದಿಂದ ಉತ್ಪನ್ನವಾಗುವುದಿಲ್ಲ ಅದರಂತೆ ವಿನಾಶ ಹೊಂದುವುದಿಲ್ಲ, ಯಾವಾಗಲೂ ಟಂಕೋತ್ಕೀರ್ಣ ಚೈತನ್ಯಮೂರ್ತಿಯಿದೆ. ಆದರೆ ಅನಾದಿ ಕರ್ಮದ ಉಪಾಧಿಯ ನಿಮಿತ್ತದಿಂದ ಚತುರ್ಗತಿ ನಾಮಕರ್ಮದ ಉದಯದಿಂದ ನವೀನ ಅವಸ್ಥೆ ಪಡೆಯುತ್ತದೆ ಮತ್ತು ಹಳೆಯ ಅವಸ್ಥೆಯ ನಾಶವಾಗುತ್ತದೆ.

ಇಲ್ಲಿ ಕರ್ಮದ ವಶದಿಂದ ಎಂದರೆ ಪರದ್ರವ್ಯದ ನಿಮಿತ್ತದಿಂದೆಂದು ಹೇಳುವುದು ವ್ಯವಹಾರವಾಯಿತು. ತಾನು ತನ್ನ ಶುದ್ಧಸ್ವಭಾವದಿಂದ ಚ್ಯುತವಾಗಿ ದೇವತನದಲ್ಲಿ ಉತ್ಪನ್ನವಾಗುವ ಯೋಗ್ಯತೆಯನ್ನು ಉಂಟು ಮಾಡಿದರೆ ದೇವನಾಮಕರ್ಮದ ಉದಯವನ್ನು ನಿಮಿತ್ತವೆಂದು ಹೇಳಲಾಗುತ್ತದೆ.

ಕರ್ಮದ ಉದಯ ಬರುವುದರಿಂದ ಹೀಗಾಯಿತು, ಶ್ರೇಣಿಕರಾಜನಿಗೆ ನರಕಗತಿ-ನಾಮಕರ್ಮದ ಉದಯ ಬರುವುದರಿಂದ ಅವನಿಗೆ ಇಚ್ಛೆಯಿಲ್ಲದಿದ್ದರೂ ಕೂಡ ಕರ್ಮವು ಬಲವಂತದಿಂದ ನರಕದಲ್ಲಿ ಕೊಂಡೊಯ್ಯಬೇಕಾಯಿತೆಂದು ಅಜ್ಞಾನಿಯು ಹೇಳುತ್ತಾನೆ ಅವನಿಗೆ ಅಂಥ ಭ್ರಾಂತಿಯಾಗಿದೆ. ಆದರೆ ಸೋದರರನೇ ! ನರಕದಲ್ಲಿ ಹೋಗುವ ತನ್ನ ಯೋಗ್ಯತೆಯು ಆ ಸಮಯದಲ್ಲಿ ಇತ್ತು ಅದಕ್ಕಾಗಿ ನರಕದಲ್ಲಿ ಹೋಗಬೇಕಾಯಿತು. ತನ್ನ ಯೋಗ್ಯತೆಯಿಲ್ಲದೆ ಯಾವ ಜೀವನು ಹೋಗುವುದಿಲ್ಲ, ತನ್ನ ಯೋಗ್ಯತೆಯಿದ್ದರೆ ಕರ್ಮವನ್ನು ನಿಮಿತ್ತವೆಂದು ಹೇಳಲಾಗುತ್ತದೆ.

ಇದು ಜೀವದ ಕರ್ತೃತನದ ಅಧಿಕಾರವಿದೆ. ತಾನು ನರಕ, ಮನುಷ್ಯ ಮೊದಲಾದ ಗತಿಯ ಔದಯಿಕ ಭಾವಗಳನ್ನು ಮಾಡುತ್ತಾನೆ ಆಗ ಯಾವ ಕರ್ಮವು ನಿಮಿತ್ತವಿದೆ ಅದನ್ನು ಸಿದ್ಧಮಾಡುತ್ತಾರೆ. ಜೀವವು ಇದ್ದ ಪರ್ಯಾಯದ ನಾಶ ಮಾಡುತ್ತದೆ ಮತ್ತು ಬರುವ ಪರ್ಯಾಯದ ಉತ್ಪಾದ ಮಾಡುತ್ತದೆಂಬುದು ನಿಶ್ಚಯವಿದೆ ಅದರಲ್ಲಿ ಕರ್ಮವು ನಿಮಿತ್ತವಿದೆ.ಕರ್ಮದ ಕಾರಣದಿಂದ ಉತ್ಪಾದ-ವಿನಾಶವೆಂದು ಹೇಳುವಂಥ ನಿಮಿತ್ತದ ಕಥನ ಮಾಡುವಲ್ಲಿ ವಿರೋಧವಿಲ್ಲ ಅದರಂತೆ ಜೀವವು ಕರ್ಮದ ಕಾರಣದಿಂದ ಸುತ್ತುತ್ತಿದೆಯೆನ್ನುವುದು ವ್ಯವಹಾರ ಕಥನವಿದೆ. ಮತ್ತು ತನ್ನ ಅಪರಾಧದ ಕಾರಣದಿಂದ ಸುತ್ತುತ್ತದೆಯೆನ್ನುವುದು ನಿಶ್ಚಯ ಕಥನವಿದೆ. ಇವೆರಡರಲ್ಲಿ ವಿರೋಧವಿಲ್ಲ, ಆದರೆ ವಿರೋಧದ ಪರಿಹಾರವಿದೆ.

ಕರ್ಮವು ನಿನಗೆ ರಾಗ-ದ್ವೇಷಗಳನ್ನು ಮಾಡಿಸುವುದಿಲ್ಲ, ಆದರೆ ನೀನು ಸ್ವಯಂ ಮಾಡುವುದರಿಂದ ವಿಕಾರವಾಗುತ್ತದೆ. ಆತ್ಮನಲ್ಲಿ ೧೪೮ ಪ್ರಕೃತಿಗಳೇ ಇಲ್ಲ, ಅದಕ್ಕಾಗಿ ಕರ್ಮದ ಮೇಲಿನ ಲಕ್ಷ್ಯವನ್ನು ಬಿಟ್ಟು ಕೊಡುವ ಮಾತಿದೆ. ಮತ್ತು ಆತ್ಮನು ವೀತರಾಗಸ್ವರೂಪ ಪರಮ ಅಹ್ಲಾದಸ್ವರೂಪ ಏಕರೂಪ ಚೈತನ್ಯ ಪ್ರಕಾಶವುಳ್ಳವನಿದ್ದಾನೆ. ಅವನನ್ನು ಉಪಾದೇಯವನ್ನಾಗಿ ಮಾಡುವಂತಿದೆ ನೀನು ಜ್ಞಾತಾ ಇರುವೆನೆಂಬ ದೃಷ್ಟಿ ಮಾಡಿದರೆ ಏಕಾಗ್ರತೆಯಾಗುವುದೆಂದು ಹೇಳುವ ಭಾವವಿದೆ.

ಈಗ ಜೀವದ ಐದು ಭಾವಗಳ ವರ್ಣನೆ ಮಾಡುತ್ತಾರೆ,

ಉದಯೇಣ ಉವಸಮೇಣ ಯ ಖಿಏಣ ದುಹಿಂ ಮಿಸ್ಸಿದೇಹಿಂ ಪರಿಣಾಮೇ ।
ಜುತ್ತಾ ತೇ ಜೀವಗುಣಾ ಬಹುಸು ಯ ಅತ್ಥೇಸು ವಿತ್ಥಿಣ್ಣಾ ।।೫೬।।

**ಉದಯ, ಉಪಶಮ, ಕ್ಷಯ, ಕ್ಷಯೋಪಶಮಮೇಣ್ಪರಿಣಾಮದಿಂ ಯುಕ್ತವಾದ ।**
**ಐದು ಜೀವಗುಣಗಳಿವೆಯೆಂದರಿವುದು ಮತ್ತವು ಬಹುಭೇದದಿಂ ವಿಸ್ತೃತಮಪ್ಪುವು ।।೫೬।।**

ಈ ಭಾವಗಳು ಕರ್ಮದ ಉದಯದಿಂದ ಮತ್ತು ಕರ್ಮದ ಉಪಶಮವಾಗುವುದರಿಂದ ಹಾಗೂ ಕರ್ಮದ ಕ್ಷಯದಿಂದ ಉಪಶಮ ಮತ್ತು ಕ್ಷಯ ಇವೆರಡು ಜಾತಿಯು ಕೂಡಿಕೊಂಡ ಕರ್ಮಪರಿಣಾಮಗಳಿಂದ ಹಾಗೂ ಆತ್ಮಿಕ ನಿಜಭಾವಗಳಿಂದ ಸಂಯುಕ್ತವಿರುವಂಥ ಭಾವಗಳು ಜೀವದ ಸಾಮಾನ್ಯತೆಯಿಂದ ಐದು ಭಾವಗಳೆಂದು ತಿಳಿಯುವುದು. ಆ ಭಾವಗಳು ನಾನಾ ಪ್ರಕಾರದ ಭೇದಗಳಲ್ಲಿ ವಿಸ್ತಾರ ಮಾಡಲ್ಪಟ್ಟವುಗಳಾಗಿವೆ.

**ಭಾವಾರ್ಥ :-** ಜೀವದ ಔದಯಿಕ, ಔಪಶಮಿಕ, ಕ್ಷಾಯಿಕ, ಕ್ಷಾಯೋಪಶಮಿಕ ಮತ್ತು ಪಾರಿಣಾಮಿಕವೆಂಬ ಐದು ಭಾವಗಳನ್ನು ತತ್ತ್ವಾರ್ಥಸೂತ್ರದ ಎರಡನೆಯ ಅಧ್ಯಾಯದಲ್ಲಿ ಹೇಳಿದೆ.

**ಔದಯಿಕ :-** ಜೀವವು ಶುಭಾಶುಭಕರ್ಮದ ಉದಯದಲ್ಲಿ ಒಂದಾಗುವುದು ಮತ್ತು ತನ್ನಲ್ಲಿ ವಿಕಾರ ಮೊದಲಾದ ಭಾವಗಳನ್ನು ಮಾಡುವುದಕ್ಕೆ ಔದಯಿಕ ಭಾವವೆಂದು ಹೇಳುತ್ತಾರೆ. ಕರ್ಮದ ಉದಯವನ್ನು ಉದಯವೆಂದು ಹೇಳಿದೆ ಮತ್ತು ಜೀವವು ಅದರಲ್ಲಿ ಒಂದಾಗುವುದನ್ನು ಔದಯಿಕಭಾವವೆಂದು ಹೇಳಲಾಗುತ್ತದೆ ಮತ್ತು ಒಂದಾಗದಿದ್ದರೆ ಔದಯಿಕ ಭಾವವೆಂದು ಹೇಳಲಾಗುವುದಿಲ್ಲ. ಅದಕ್ಕಾಗಿ ಕರ್ಮದ ಕಾರಣದಿಂದ ಜೀವದಲ್ಲಿ ರಾಗ-ದ್ವೇಷಗಳಾಗುತ್ತವೆಂಬ ಮಾತು ಉಳಿಯುವುದಿಲ್ಲ; ಸ್ವಯಂ ಶುಭಾಶುಭಭಾವಗಳನ್ನು ಮಾಡಿ ಕರ್ಮವನ್ನು ನಿಮಿತ್ತವೆಂದು ಹೇಳಲಾಗುವುದು, ಯಾವ ಭಾವದಿಂದ ತೀರ್ಥಂಕರನಾಮಕರ್ಮ ಕಟ್ಟುತ್ತದೆ ಅದು ಔದಯಿಕಭಾವವಿದೆ. ಎಲ್ಲ ಪ್ರಕಾರದ ಔದಯಿಕಭಾವಗಳು ಸಂಸಾರಕ್ಕೆ ಕಾರಣವಿವೆ, ಆದರೆ ಧರ್ಮಕ್ಕೆ ಕಾರಣವಿಲ್ಲ.

**ಔಪಶಮಿಕ :-** ಕರ್ಮದಲ್ಲಿ ಉಪಶಮವಾಗುವುದನ್ನು ಉಪಶಮವೆಂದು ಹೇಳಿದೆ. ಕರ್ಮದ ಉಪಶಮದ ನಿಮಿತ್ತದಿಂದ ಜೀವದಲ್ಲಿ ತನ್ನ ಪುರುಷಾರ್ಥದಿಂದ ಸಮ್ಯಗ್ದರ್ಶನ ಮತ್ತು ಚಾರಿತ್ರದಲ್ಲಿ ಉಪಶಮವಾಗುವುದನ್ನು ಔಪಶಮಿಕಭಾವವೆಂದು ಹೇಳಿದೆ. ಯಾವ ಪ್ರಕಾರ ಕೊಳೆಯು ಕೆಳಗೆ ಕೂಡ್ರುವುದರಿಂದ ನೀರು ನಿರ್ಮಲವಾಗುತ್ತದೆ ಅದೇ ಪ್ರಕಾರ ಕರ್ಮದ ಉಪಶಮವಾಗುವುದರಿಂದ ಜೀವದಲ್ಲಿ ಉಪಶಮವಾಗುತ್ತದೆ. ನೀರು ತನ್ನ ಯೋಗ್ಯತೆಯಿಂದ ನಿರ್ಮಲವಾಗುತ್ತದೆ ಅದರಲ್ಲಿ ಕೊಳೆಯು ಕೆಳಗೆ ಕುಳಿತುಕೊಳ್ಳುವುದು ನಿಮಿತ್ತವಿದೆ ಅದರಂತೆ ಜೀವವು ತನ್ನ ಪುರುಷಾರ್ಥದಿಂದ ದರ್ಶನ ಅಥವಾ ಚಾರಿತ್ರದಲ್ಲಿ ಉಪಶಮಭಾವವನ್ನು ಪ್ರಕಟ ಮಾಡಿದರೆ ಅದು ಕರ್ಮದ ನಿಮಿತ್ತದಿಂದ ಪ್ರಕಟವಾಯಿತೆಂದು ಹೇಳುವುದರಲ್ಲಿ ಬರುತ್ತದೆ.

**ಕ್ಷಾಯೋಪಶಮಿಕ :-** ಸ್ವಲ್ಪ ಕರ್ಮದ ಉದಯವಿರುವುದು ಮತ್ತು ಸ್ವಲ್ಪ ಉದಯವಿಲ್ಲದಿರುವುದನ್ನು ಕರ್ಮದ ಕ್ಷಯೋಪಶಮವೆಂದು ಹೇಳಿದೆ ಅದರಲ್ಲಿ ಜೀವವು ಒಂದಾಗುವುದು ಮತ್ತು ತನ್ನಲ್ಲಿ ಜ್ಞಾನ, ದರ್ಶನ, ವೀರ್ಯದ ಇಂಥ ಪ್ರಕಟತೆ ನೋಡಿತು ಮತ್ತು ಇಂಥದು ನೋಡಲಿಲ್ಲ. ಎಷ್ಟು ಪುರುಷಾರ್ಥವಿದೆ ಅಷ್ಟು ಪ್ರಕಟತೆ ಕಂಡಿರುತ್ತದೆ ಮತ್ತು ಎಷ್ಟು ಪುರುಷಾರ್ಥವಿಲ್ಲ ಅಷ್ಟು ಪ್ರಕಟತೆ ಕಂಡಿರುವುದಿಲ್ಲ. ತನ್ನ ಯೋಗ್ಯತೆಯಿರುವಷ್ಟು ಪ್ರಕಟತೆ ಕಂಡಿರುತ್ತದೆ. ಆಗ ಕರ್ಮದ ಕಾರಣದಿಂದ ಕ್ಷಾಯೋಪಶಮಿಕಭಾವವಾಯಿತೆಂದು ಹೇಳಲಾಗುತ್ತದೆ.

**ಕ್ಷಾಯಿಕಭಾವ :-** ಕರ್ಮದ ನಾಶವಾಗುವುದನ್ನು ಕ್ಷಯವೆಂದು ಹೇಳಿದೆ, ಅದರ ನಿಮಿತ್ತದಿಂದ ಉತ್ಪನ್ನವಾಗುವ ಭಾವವನ್ನು ಕ್ಷಾಯಿಕಭಾವವೆಂದು ಹೇಳಿದೆ. ಕೇವಲಜ್ಞಾನವು ಕ್ಷಾಯಿಕಭಾವದಿಂದಿದೆ, ತನ್ನಲ್ಲಿ ಏಕಾಗ್ರವಾಗಿ ಸರ್ವಥಾ

ಶುದ್ಧತೆಯು ಪ್ರಕಟವಾಗುವುದು ಮತ್ತು ಅಶುದ್ಧತೆಯ ನಾಶವಾಗುವುದನ್ನು ಕ್ಷಾಯಿಕಭಾವವೆಂದು ಹೇಳಲಾಗುತ್ತದೆ.

**ಪಾರಿಣಾಮಿಕಭಾವ :-** ಜೀವವು ತನ್ನ ಶುದ್ಧ ಚೈತನ್ಯ ಮೊದಲಾದ ಭಾವಗಳಿಂದ ಏಕರೂಪವಿದೆ, ಇರುವ ಸ್ವರೂಪವಿದೆ ಅದನ್ನು ಪಾರಿಣಾಮಿಕಭಾವವೆಂದು ಹೇಳಿದೆ. ಈ ಭಾವಕ್ಕೆ ಕರ್ಮದ ಅಪೇಕ್ಷೆಯಿಲ್ಲ. ಕರ್ಮವು ಅಧಿಕವಿರುವುದನ್ನು ಅಭವ್ಯವೆಂದು ಹೇಳುವುದು ಮತ್ತು ಕರ್ಮವು ಕಡಿಮೆಯಿರುವುದನ್ನು ಭವ್ಯವೆಂದು ಹೇಳುವಂತಿಲ್ಲ. ಆದರೆ ತನ್ನ ಏಕರೂಪ ಪರಿಣಾಮದ ಅನುಸಾರವಿರುವುದನ್ನು ಪಾರಿಣಾಮಿಕಭಾವವೆಂದು ಹೇಳಲಾಗುತ್ತದೆ.

ಈ ಐದು ಭಾವಗಳು ಜೀವಕ್ಕಿವೆ. ಭಾವಗಳ ಅಪೇಕ್ಷೆಯಿಂದ ಗುಣಗಳನ್ನು ಹೇಳಿದೆ ಅದರಲ್ಲಿ ಔದಯಿಕ, ಉಪಶಮ, ಕ್ಷಯೋಪಶಮ, ಕ್ಷಾಯಿಕ ಇವು ನಾಲ್ಕು ಪರ್ಯಾಯಗಳಲ್ಲಿವೆ ಮತ್ತು ಪಾರಿಣಾಮಿಕಭಾವವು ತ್ರಿಕಾಲಿಸ್ವಭಾವ ಭಾವವಿದೆ. ಪ್ರತಿಯೊಂದರಲ್ಲಿ ಅಧಿಕ ಭೇದಗಳಿವೆ. ಇಲ್ಲಿ ಮುಖ್ಯ ಐದನ್ನು ಹೇಳಿದೆ.

ಕರ್ಮದ ಉದಯ ಬರುವುದು ಮತ್ತು ಅದರಲ್ಲಿ ಜೀವವು ಒಂದಾದರೆ ಜೀವದಲ್ಲಿ ಔದಯಿಕಭಾವವಾಯಿತೆಂದು ಹೇಳುವರು. ಮತ್ತು ಕರ್ಮದ ಉದಯವಿದ್ದರೂ ಅದರಲ್ಲಿ ಜೀವವು ಒಂದಾಗದಿದ್ದರೆ ಜೀವದಲ್ಲಿ ಔದಯಿಕಭಾವ ವಾಗಲಿಲ್ಲವೆಂಬ ಕಥನವು ಶಾಸ್ತ್ರದಲ್ಲಿ ಬಂದಿದೆ. ಅದರ ಆಧಾರವು ಈ ೫೬ ನೇ ಗಾಥೆಯಲ್ಲಿದೆ. ಮೂಲ ಗಾಥೆಯಲ್ಲಿ 'ಜುತ್ತಾ' ಶಬ್ದವಿದೆ ಮತ್ತು ಶ್ರೀ ಅಮೃತಚಂದ್ರಾಚಾರ್ಯದೇವರ ಟೀಕೆಯಲ್ಲಿ 'ತತ್ರೋದಯೇನಯುಕ್ತ ಔದಯಿಕಃ' 'ಉಪಶಮೇನಯುಕ್ತ ಔಪಶಮಿಕಃ' ಎಂದಿದೆ.

ಪುದ್ಗಲಕರ್ಮದ ಉದಯವು ಅದು ಉದಯವಿದೆ ಮತ್ತು ಅದರಲ್ಲಿ ಜೀವದ ಒಂದಾಗುವಿಕೆಯು ಅದು ಔದಯಿಕಭಾವವಿದೆ.

ಪುದ್ಗಲಕರ್ಮದ ಉಪಶಮವು ಅದು ಉಪಶಮವಿದೆ ಮತ್ತು ಅದರಲ್ಲಿ ಜೀವದ ಒಂದಾಗುವಿಕೆಯು ಅದು ಔಪಶಮಿಕಭಾವವಿದೆ.

ಪುದ್ಗಲಕರ್ಮದ ಕ್ಷಯೋಪಶಮವು ಅದು ಕ್ಷಯೋಪಶಮವಿದೆ ಮತ್ತು ಅದರಲ್ಲಿ ಜೀವದ ಒಂದಾಗುವಿಕೆಯು ಅದು ಕ್ಷಯೋಪಶಮಭಾವವಿದೆ.

ಪುದ್ಗಲಕರ್ಮದ ಕ್ಷಯವು ಅದು ಕ್ಷಯವಿದೆ ಮತ್ತು ಅದರಲ್ಲಿ ಜೀವದ ಒಂದಾಗುವಿಕೆಯು ಅದು ಕ್ಷಾಯಿಕ ಭಾವವಿದೆ. (ಕರ್ಮದ ಅಭಾವದ ಅನುಸಾರವಾಗುವ ಭಾವಗಳು) ನಾಲ್ಕು ಭಾವಗಳಲ್ಲಿ 'ಈಕ' ಪ್ರತ್ಯಯವಿದೆ. ಕರ್ಮದ ಜತೆ ಸಂಬಂಧ ಮಾಡಿ ತನ್ನಿಂದ ಉತ್ಪನ್ನವಾಗುವ ಭಾವವೆಂದು ಅದರ ಅರ್ಥ ತಿಳಿಯುವುದು. ಪಾರಿಣಾಮಿಕಭಾವದಲ್ಲಿ ಕರ್ಮದ ಅಪೇಕ್ಷೆಯಿಲ್ಲ. ಜೀವದ ತನ್ನ ತ್ರಿಕಾಲ ಏಕರೂಪಪರಿಣಾಮದ ಅನುಸಾರವಾಗುವ ಭಾವ ಎಂದರೆ ತಾನು ತನ್ನಲ್ಲಿ ತ್ರಿಕಾಲ ಒಂದಾಗುವ ರೂಪವಿದೆ ಇಂಥ ಭಾವವನ್ನು ಪಾರಿಣಾಮಿಕ ಭಾವವೆಂದು ಹೇಳಿದೆ. ಈ ಪ್ರಕಾರ ಐದೂ ಭಾವಗಳು ಜೀವದಲ್ಲಿರುತ್ತವೆ.

ಧರ್ಮವಂತೂ ಸ್ವದ ಆಧಾರದಿಂದಿದೆ ಪರದ ಆಧಾರದಿಂದಿಲ್ಲ. ಆದರೆ ವೀತರಾಗತೆಯ ಸಮಯದಲ್ಲಿ ನಿಮಿತ್ತವು ಎಂಥದಿರಬೇಕೆಂಬುದರದೂ ಯಥಾರ್ಥ ಜ್ಞಾನ ಮಾಡಿಕೊಳ್ಳಬೇಕು. ಕೇಸರ ತರಲು ಹೋಗುವಾಗ ಚೀಲವಿರುವುದಿಲ್ಲ ಆದರೆ ಡಬ್ಬವಿರುವುದು. ಹಾಗೆ ಶುದ್ಧಧರ್ಮ ಪ್ರಕಟವಾಗುವ ಸಮಯದಲ್ಲಿ ಕುದೇವಾದಿಗಳು ನಿಮಿತ್ತವಿರುವುದಿಲ್ಲ. ನಿಜವಾದ ದೇವ, ಶಾಸ್ತ್ರ, ಗುರು, ವೀತರಾಗಬಿಂಬವು ನಿಮಿತ್ತವಿರುತ್ತದೆ. ಲೌಕಿಕ ಪ್ರಸಂಗದಲ್ಲಿ ರಾಜಾದಿಕರಿಗೆ ನಮಿಸುವ ಮಾತು ಬೇರೆಯಿದೆ. ಆದರೆ ಧಾರ್ಮಿಕ ದೃಷ್ಟಿಯಿಂದ ಅನ್ಯರಿಗೆ ವಂದಿಸುವುದು ಅದು ಮಿಥ್ಯಾಭಾವವಿದೆ.

**ಭಾವಾರ್ಥ :-** ಈ ಐದು ಭಾವಗಳು ಜೀವನಿಗಿರುತ್ತವೆ. ಅದರಲ್ಲಿ ನಾಲ್ಕು ಭಾವಗಳು ಕರ್ಮಗಳ ನಿಮಿತ್ತದಿಂದ

ಆಗುತ್ತವೆ. ಲೇಶ್ಯೆ-ಗತಿ ಮೊದಲಾದವುಗಳ ಭಾವಗಳನ್ನು ಜೀವನು ಮಾಡುತ್ತಾನೆ. ಅದರಲ್ಲಿ ಕರ್ಮವು ನಿಮಿತ್ತವಿದೆ. ಔದಯಿಕಭಾವವು ಬಂಧದ ಕಾರಣವಿರುವುದರಿಂದ ಹೇಯವಿದೆ. ಉಪಶಮ, ಕ್ಷಯೋಪಶಮಭಾವ ಮತ್ತು ಕ್ಷಾಯಿಕಭಾವವು ಪರ್ಯಾಯಗಳಿರುವುದರಿಂದ ಮೋಕ್ಷದ ಉಪಚಾರ ಕಾರಣವಿವೆ. ನಿಜವಾಗಿ ನಿಶ್ಚಯಕಾರಣವಂತೂ ದ್ರವ್ಯವಿದೆ, ಅದಕ್ಕಾಗಿ ನಾಲ್ಕೂ ಭಾವಗಳು ಹೇಯವಿವೆ. ತ್ರಿಕಾಲೀ ಸ್ವಭಾವ ಪರಮಪಾರಿಣಾಮಿಕಭಾವವು ಆ ಕರ್ಮದ ಅಪೇಕ್ಷೆಯಿಲ್ಲದಂಥದು ಅದು ಉಪಾದೇಯವಿದೆ. ಔದಯಿಕ ಭಾವದಲ್ಲಿ ಕರ್ಮದ ಉದಯದ, ಔಪಶಮಿಕದಲ್ಲಿ ಕರ್ಮದ ಉಪಶಮದ, ಕ್ಷಯೋಪಶಮಿಕದಲ್ಲಿ ಕರ್ಮದ ಕ್ಷಯೋಪಶಮದ, ಕ್ಷಾಯಿಕದಲ್ಲಿ ಕರ್ಮದ ಕ್ಷಯದ ನಿಮಿತ್ತತೆಯು ಬರುತ್ತದೆ, ಮತ್ತು ಪಾರಿಣಾಮಿಕಭಾವದಲ್ಲಿ ಕರ್ಮದ ಅಪೇಕ್ಷೆಯಿಲ್ಲ. ಹೀಗೆ ಕರ್ಮದ ನಿಮಿತ್ತದ ಅಪೇಕ್ಷೆಯಿಂದ ಹಾಗೂ ಸ್ವರೂಪದ ಭೇದದ ಅಪೇಕ್ಷೆಯಿಂದ ಈ ಐದರಲ್ಲಿ ಅನೇಕ ಪ್ರಕಾರಗಳಾಗುತ್ತವೆ. ಔದಯಿಕದಲ್ಲಿ ಗತಿ, ಲೇಶ್ಯೆ, ಕಷಾಯ ಮೊದಲಾದ ಭೇದಗಳಿವೆ, ಔಪಶಮಿಕದಲ್ಲಿ ಸಮ್ಯಕ್ತ್ವ, ಚಾರಿತ್ರವೆಂಬ ಭೇದಗಳಿವೆ ಕ್ಷಯೋಪಶಮದಲ್ಲಿ ಕೂಡ ಪ್ರಕಾರಗಳಾಗುತ್ತವೆ, ಕ್ಷಾಯಿಕದಲ್ಲಿ ಕ್ಷಾಯಿಕಜ್ಞಾನ-ದರ್ಶನ ಮೊದಲಾದ ಪ್ರಕಾರಗಳಾಗುತ್ತವೆ ಮತ್ತು ಪಾರಿಣಾಮಿಕದಲ್ಲಿ ಕೂಡ ಪ್ರಕಾರಗಳಾಗುತ್ತವೆ.

ಔದಯಿಕ, ಔಪಶಮಿಕ ಮತ್ತು ಕ್ಷಾಯೋಪಶಮಿಕ ಈ ಮೂರು ಭಾವಗಳು ಕರ್ಮಜನಿತವಿವೆ. ಜೀವವು ತನ್ನ ಸ್ವಭಾವದಿಂದ ಚ್ಯುತವಾಗಿ ವಿಕಾರ ಮಾಡಿದರೆ ಆಗ ಕರ್ಮದ ಉದಯವನ್ನು ನಿಮಿತ್ತವೆಂದು ಹೇಳುತ್ತಾರೆ. ಚಿಂದಾನಂದ ಸ್ವಭಾವದ ಆಶ್ರಯದಿಂದ ಉಪಶಮಸಮ್ಯಕ್ತ್ವ ಅಥವಾ ಚಾರಿತ್ರ ಪ್ರಕಟಪಡಿಸಿದಾಗ ಕರ್ಮದ ಉಪಶಮವಾಗುತ್ತದೆ. ಜೀವವು ತನ್ನಲ್ಲಿ ಕ್ಷಯೋಪಶಮಸಮ್ಯಕ್ತ್ವ ಅಥವಾ ಚಾರಿತ್ರ ಪ್ರಕಟಪಡಿಸಿದಾಗ ಕರ್ಮದ ಕ್ಷಯೋಪಶಮವಿರುತ್ತದೆ. ಅದಕ್ಕಾಗಿ ಆ ಭಾವಗಳನ್ನು ಕರ್ಮಜನಿತವೆಂದು ಹೇಳಲಾಗಿದೆ. ಆದರೆ ಕರ್ಮಗಳು ಔದಯಿಕ ಮೊದಲಾದ ಭಾವಗಳನ್ನು ಮಾಡಿಸುತ್ತವೆಯೆಂಬುದು ಅದರ ಅರ್ಥವಲ್ಲ. ಶಾಸ್ತ್ರಕಾರರ ಆಶಯವನ್ನು ತಿಳಿದುಕೊಳ್ಳಬೇಕಾಗುವುದು.

ಕೇವಲಜ್ಞಾನ, ಕೇವಲದರ್ಶನ, ಅನಂತಸುಖ, ಅನಂತವೀರ್ಯ ಮೊದಲಾದವು ಕ್ಷಾಯಿಕಭಾವವಿವೆ. ಅವು ಶುದ್ಧವಿವೆ. ಅವು ಒಂದು ಸಮಯದ ಪರ್ಯಾಯಗಳಾಗಿದ್ದರೂ ಕೂಡ ಸಾದಿ ಅನಂತ ಕಾಲದವರೆಗೆ ಇರುತ್ತವೆ. ಅದಕ್ಕಾಗಿ ಅವನ್ನು ಅವಿನಾಶಿಯೆಂದು ಹೇಳಿದೆ ಶುದ್ಧಚೈತನ್ಯಸ್ವಭಾವದ ಉಗ್ರಅವಲಂಬನದಿಂದ ಪ್ರಕಟವಾಗುತ್ತವೆ. ಆದರೆ ಅವು ಪ್ರಕಟವಾದಾಗ ಕರ್ಮದ ಅಭಾವವಾಗುತ್ತದೆ. ಕರ್ಮದ ಅಭಾವದ ನಿಮಿತ್ತತೆಯನ್ನು ತಿಳಿಸಿಕೊಡುವ ಸಲುವಾಗಿ ಅವನ್ನು ಕರ್ಮಜನಿತವೆಂದು ಹೇಳಿದೆ. ಕೇವಲಜ್ಞಾನಾವರಣೀಯ ಕರ್ಮವು ತೊಲಗುವುದರಿಂದ ಕೇವಲಜ್ಞಾನ ಪ್ರಕಟವಾಯಿತೆಂಬ ಪರಾಧೀನತೆಯಿಲ್ಲ. ಆತ್ಮನು ತ್ರಿಕಾಲಿಯಿದ್ದರೂ ಕೂಡ ಪರ್ಯಾಯದಲ್ಲಿ ಕ್ಷಾಯಿಕಭಾವದ ಕರ್ತೃ ಸ್ವತಂತ್ರವಿದ್ದು ಅದರಲ್ಲಿ ನಿಮಿತ್ತ ತಿಳಿಸಿಕೊಟ್ಟು ಪ್ರಮಾಣಜ್ಞಾನ ಮಾಡಿಸಿದೆ.

ಪಾರಿಣಾಮಿಕಭಾವಕ್ಕೆ ಪರಮಸ್ವಭಾವಭಾವಕ್ಕೆ ಕರ್ಮದ ನಿಮಿತ್ತದ ಅಪೇಕ್ಷೆಯಿಲ್ಲ, ಶುದ್ಧ ಪಾರಿಣಾಮಿಕ ಭಾವವು ಜೀವದ ಸ್ವಭಾವವಿದೆ. ಅದಕ್ಕಾಗಿ ಅದು ಕರ್ಮಜನಿತವಿಲ್ಲ. ಈ ಪಾರಿಣಾಮಿಕಭಾವದಲ್ಲಿ ಭವ್ಯ ಮತ್ತು ಅಭವ್ಯವೆಂದು ಎರಡು ಭೇದಗಳಿವೆ. ಅವು ಕೂಡ ಕರ್ಮಜನಿತವಿಲ್ಲ. ಸಮ್ಯಕ್‌ಶ್ರದ್ಧೆಯನ್ನು ಪ್ರಕಟಿಸುವವನು ಭವ್ಯ ಮತ್ತು ಪ್ರಕಟಿಸದವನು ಅಭವ್ಯವೆಂಬ ಪ್ರಕಾರದ ಭೇದವಿಲ್ಲ, ಅನಂತಕಾಲದವರೆಗೆ ಸಮ್ಯಕ್‌ಶ್ರದ್ಧೆಯನ್ನು ಪ್ರಕಟಪಡಿಸಿಕೊಳ್ಳದಂಥ ಅದೆಷ್ಟೋ ಭವ್ಯರಿದ್ದಾರೆ, ಆದರೂ ಭವ್ಯರಿದ್ದಾರೆ. ಭವ್ಯ ಅಥವಾ ಅಭವ್ಯವೆಂಬುದು ಜೀವದ ಸ್ವಭಾವವಿದೆ ಹೇಗೆ ಕಳ್ಳಕಾಳು ಎಷ್ಟು ಕುದಿಸಿದರೂ ಕೂಡ ಕುದಿಯುವುದಿಲ್ಲ. ಹಾಗೆ ಅಭವ್ಯನು ತೀರ್ಥಂಕರರ ಸಮವಸರಣದಲ್ಲಿ ಹೋದರೂ ಕೂಡ ಎಂದೂ ಧರ್ಮ ಪಡೆಯುವುದಿಲ್ಲ. ಅಭವ್ಯಜೀವನು ಒಮ್ಮೊಮ್ಮೆ ರಾಜ್ಯಭಾರ ತ್ಯಜಿಸುವನು, ಬ್ರಹ್ಮಚರ್ಯ ಪಾಲಿಸುವನು, ದಯೆ ಪಾಲಿಸುವನು, ಮುನಿಗಳ ಸೇವೆ ಮಾಡುವನು, ತಾನು ಮುನಿಯಾಗುವನು ಮಹಾವ್ರತ ಪಾಲಿಸುವನು ಆದರೂ ಅಭವ್ಯನೆಂದೂ ಭವ್ಯನಾಗುವುದಿಲ್ಲ. ಜಡವು ಹೇಗೆ ಚೇತನವಾಗುವುದಿಲ್ಲ ಹಾಗೆ ಅವನೆಂದೂ ಸಮ್ಯಗ್ದರ್ಶನ

ಪಡೆಯುವುದಿಲ್ಲ ಮತ್ತು ಮೋಕ್ಷಕ್ಕೆ ಹೋಗುವುದಿಲ್ಲ. ಇನ್ನು ಭವ್ಯನೋರ್ವನು ಎಂದಾದರೂ ತೀರ್ಥಂಕರರ ವಿರೋಧ ಮಾಡಿದರೂ, ಕಸಾಯಿಖಾನೆಯಿಡುವಂಥ ಪಾಪ ಮಾಡಿದರೂ ಕೂಡ ಭವ್ಯಜೀವನು ಅಭವ್ಯವಾಗುವುದಿಲ್ಲ. ಆ ಜೀವಗಳು ಆತ್ಮನ ಜ್ಞಾನ ಮಾಡಿಕೊಳ್ಳುವ ಸಾಧ್ಯತೆಯಿದೆ ಮತ್ತು ಮೋಕ್ಷಕ್ಕೆ ಹೋಗುವ ಸಾಧ್ಯತೆಯಿದೆ.

ಕರ್ಮದ ಅಪೇಕ್ಷೆಯಿಂದ ಭವ್ಯ-ಅಭವ್ಯ ಸ್ವಭಾವವನ್ನು ತಿಳಿಯುವ ಸಾಧ್ಯತೆಯಿದೆ, ಕರ್ಮದ ನಾಶ ಮಾಡಿದವನನ್ನು ಭವ್ಯನೆಂದು ಹೇಳಲಾಗುವುದು. ಇದು ವ್ಯವಹಾರದ, ಅಪೇಕ್ಷೆಯಿಂದ ಮಾತು ಹೇಳಿದೆ. ಅಭವ್ಯದ ಹಾಗೆ ಎಂದೂ ಧರ್ಮ ಪ್ರಾಪ್ತಮಾಡಿಕೊಳ್ಳದಂಥ ಭವ್ಯರು ಬಿದ್ದುಕೊಂಡಿದ್ದಾರೆ, ಆದರೂ ಅವರು ಭವ್ಯರಿದ್ದಾರೆ. ಮತ್ತು ಎಂದೂ ಕರ್ಮದ ನಾಶಮಾಡದವನನ್ನು ಅಭವ್ಯನೆಂದು ತಿಳಿದರೂ ಕರ್ಮದ ಕಾರಣದಿಂದ ಭವ್ಯ-ಅಭವ್ಯನೆಂದು ಹೇಳುವ ಸಾಧ್ಯತೆಯಿಲ್ಲ. ಏಕೆಂದರೆ ಭವ್ಯ-ಅಭವ್ಯನಾಮದ ಯಾವುದೇ ಕರ್ಮವಿಲ್ಲ. ಆದುದರಿಂದ ಭವ್ಯಾಭವ್ಯತೆಯು ಕರ್ಮಜನಿತವಿಲ್ಲ.

ಅಭವ್ಯನಿಗೆ ಎಂದೂ ಸಂಸಾರದಿಂದ ಬಿಡುಗಡೆ ಹೊಂದುವುದಾಗುವುದಿಲ್ಲ, ಅವನ ಸಂಸಾರವು ಅನಾದಿ ಅನಂತವಿರುವಂಥದೇ ಅವನ ಸ್ವಭಾವವಿದೆಯೆಂದು ಭಗವಂತರು ಕೇವಲಜ್ಞಾನದಲ್ಲಿ ನೋಡಿದ್ದಾರೆ. ಭವ್ಯನಿಗೆ ಅನಾದಿ ಅನಂತ ಸಂಸಾರದ ಯೋಗ್ಯತೆಯಿರುವಂಥ ಸ್ವಭಾವವಿಲ್ಲ. ಭಗವಂತರು ಹೇಗೆ ನೋಡಿದ್ದಾರೆ ಹಾಗೆ ವಾಣಿಯಲ್ಲಿ ತಿಳಿದುಬಂದಿದೆ.

'ಸ್ವರೂಪಭೇದಾತ್'ವೆಂಬ ಶಬ್ದವು ಟೀಕೆಯಲ್ಲಿದೆ. ಪಾರಿಣಾಮಿಕಭಾವದಲ್ಲಿ ಸ್ವರೂಪದಿಂದ ಮೂರು ಪ್ರಕಾರದ ಭೇದವಿದೆ. ಶುದ್ಧ ಜೀವತ್ವ-ಭವ್ಯತ್ವ ಮತ್ತು ಅಭವ್ಯತ್ವ ಶುದ್ಧಜೀವತ್ವದ ಜತೆ ಮೋಕ್ಷದ ಯೋಗ್ಯತೆಯುಳ್ಳ ಭವ್ಯಜೀವರುಗಳು ಮತ್ತು ಶುದ್ಧಜೀವತ್ವದ ಜತೆ ಮೋಕ್ಷದ ಯೋಗ್ಯತೆಯಿಲ್ಲದಿರುವಂತೆ ಅವುಗಳ ಸ್ವಭಾವವಿರುವಂಥ ಅಭವ್ಯಜೀವಗಳು. ಅಭವ್ಯಜೀವಗಳು ವ್ಯವಹಾರ ಶ್ರದ್ಧೆ ಮಾಡಿದರೂ ಆಂತರ್ಯದ ರುಚಿ ಮಾಡುವುದಿಲ್ಲ. ಅದರಿಂದ ಅವು ಎಂದೂ ಮೋಕ್ಷಕ್ಕೆ ಹೋಗುವುದಿಲ್ಲ. ಯಾವ ಪ್ರಕಾರ ಕಟ್ಟಿಗೆಯ ಸ್ವಭಾವವು ತೇಲುವುದಿದೆ ಅದೇ ಪ್ರಕಾರ ಭವ್ಯಜೀವದಸ್ವಭಾವವು ತೇಲುವುದಿದೆ, ಆದಾಗ್ಯೂ ಅನಂತಕಾಲದವರೆಗೆ ಮೋಕ್ಷಕ್ಕೆ ಹೋಗದಿರುವಂಥ ಅದೆಷ್ಟೋ ಭವ್ಯಜೀವಗಳಿವೆ. ಸಂಸಾರದಲ್ಲಿ ಯಾವುದೇ ಸಮಯದಲ್ಲಿ ಭವ್ಯನಿರುವುದಿಲ್ಲ ಎನ್ನುವಂತಿಲ್ಲ. ಸಮಸ್ತ ಭವ್ಯರು ಮೋಕ್ಷಕ್ಕೆ ಹೋದರೆ ನವತತ್ತ್ವ ಉಳಿಯುವುದಿಲ್ಲ. ನವತತ್ತ್ವವು ಅನಾದಿ ಅನಂತಕಾಲ ಉಳಿಯುವುದಿದೆ. ಸಮಸ್ತ ಭವ್ಯಜೀವರು ಮೋಕ್ಷಕ್ಕೆ ಹೋದರೆ ಸಂವರ-ನಿರ್ಜರಾತತ್ತ್ವ ಎಂದರೆ ಸಾಧು-ಶ್ರಾವಕತನ ಉಳಿಯುವುದಿಲ್ಲ. ಸಂಸಾರ ಯಾವಾಗಲೂ ಇರುವುದು ಮತ್ತು ತಿಳಿದುಕೊಳ್ಳುವವನು ಮೋಕ್ಷಕ್ಕೆ ಹೋಗುವನು. ಆದುದರಿಂದ ಯಾರ ಸ್ವಭಾವ ಹೇಗಿದೆ ಹಾಗೇ ಉಳಿಯುವುದು. ಅದಕ್ಕಾಗಿ ಭವ್ಯ-ಅಭವ್ಯವು ತಮ್ಮ ಸ್ವಭಾವದ ಯೋಗ್ಯತೆಯ ಮೇಲೆ ಇದೆ, ಅದು ಕರ್ಮ ಜನಿತವಿಲ್ಲ. ಹೀಗೆ ಮೂರು ಪ್ರಕಾರದ ಪಾರಿಣಾಮಿಕಭಾವವು ಸ್ವಭಾವಜನಿತವಿದೆಯೆಂದು ಹೇಳಿದೆ.

ಕೇವಲಜ್ಞಾನಿಯು ಪರಿಪೂರ್ಣಸುಖಿಯಿದ್ದಾನೆಂದು ಶ್ರದ್ಧೆ ಮಾಡದವನು ಅಭವ್ಯನಿದ್ದಾನೆಂದು ಭಗವಾನ ಕುಂದಕುಂದಾಚಾರ್ಯದೇವರು ಪ್ರವಚನಸಾರದ ೬೨ ನೇ ಗಾಥೆಯಲ್ಲಿ ಹೇಳಿದ್ದಾರೆ. ಕೆಲವರು ಇಷ್ಟು ಕಠೋರವಾಗೇಕೆ ಹೇಳಿದ್ದಾರೆಂದು ಕೇಳುತ್ತಾರೆ. ಆದರೆ ಸೋದರನೇ ! ಅವರು ತಮ್ಮ ಪುರುಷಾರ್ಥದ ಉಗ್ರತೆಯನ್ನು ತಿಳಿಸಿದ್ದಾರೆ. ಯಾರು ಕೇವಲಿಯನ್ನು ಸುಖಿಯೆಂದು ಮನ್ನಿಸುವುದಿಲ್ಲ, ಆದರೆ ಕೇವಲಿಗಳು ಆಹಾರ ಮತ್ತು ಔಷಧ ಸ್ವೀಕರಿಸುತ್ತಾರೆಂದು ಮನ್ನಿಸುತ್ತಾರೆ ಅವರು ಮಿಥ್ಯಾದೃಷ್ಟಿಯಿದ್ದಾರೆ. ಕೇವಲಿಗೆ ರೋಗವಾಯಿತೆಂದು ಮನ್ನಿಸುವುದು, ರಕ್ತಭೇದಿಯಾಯಿತೆಂದು ಮನ್ನಿಸುವುದು, ಔಷಧ ಸ್ವೀಕರಿಸಿದರೆಂದು ಮನ್ನಿಸುವುದು, ಔಷಧ ಸ್ವೀಕರಿಸಿದ ನಂತರ ಒಳ್ಳೆಯದಾಯಿತು ಮತ್ತು ಅದರಿಂದ ಎಲ್ಲರೂ ಸುಖಿಯಾದರು ಮೊದಲಾಗಿ ಅನೇಕ ಪ್ರಕಾರದ ಮನ್ನಣೆಯು ವಸ್ತುದೃಷ್ಟಿಯ ನಾಶಮಾಡುವಂಥದ್ದಿದೆ. ಕೇವಲಿಯನ್ನು ದುಃಖಿಯೆಂದು ಮನ್ನಿಸುವವನು ಕೇವಲಜ್ಞಾನಪರ್ಯಾಯದ ವಿರೋಧ ಮಾಡುತ್ತಾನೆ, ಅವನು ಅಭವ್ಯನಿದ್ದಾನೆ.

ಅನಂತಚತುಷ್ಟಯವು ಪ್ರಕಟವಾದವನಿಗೆ ಆಹಾರವಿರುವುದಿಲ್ಲ, ರೋಗವಿರುವುದಿಲ್ಲ ಉಗ್ರ ಪುರುಷಾರ್ಥ ಮಾಡುವಂಥ, ಕೇವಲಜ್ಞಾನ ಹಾಗೂ ಮೋಕ್ಷದ ಸಿದ್ಧತೆಯಲ್ಲಿರುವಂಥ ಮುನಿಗಳ ಎದುರು ಕೇವಲೀ ಭಗವಂತರ ಕುರಿತು ಇಂಥ ಹೀನ ಮಾತುಗಳನ್ನಾಡುವವನು ಅಭವ್ಯನಿದ್ದಾನೆ-ಅಯೋಗ್ಯನಿದ್ದಾನೆ.

ಪಾರಿಣಾಮಿಕಭಾವದಲ್ಲಿ ಭವ್ಯ ಮತ್ತು ಅಭವ್ಯವೆಂಬೆರಡು ಭೇದ ಹೇಳಿದ್ದು ಅದು ತಿಳಿದುಕೊಳ್ಳುವ ಸಲುವಾಗಿ ಇದೆ. ಆತ್ಮನು ಶುದ್ಧ ಚಿದಾನಂದಸ್ವರೂಪನಿದ್ದಾನೆಂಬ ದೃಷ್ಟಿಯಲ್ಲಿ ಭವಗಳೇ ಇಲ್ಲ. ರಾಗ-ದ್ವೇಷ-ವಿಕಾರಗಳು ತ್ರಿಕಾಲದಲ್ಲಿಲ್ಲವೆಂಬ ಅರಿವು ಮಾಡಿಕೊಂಡ ಜೀವನು ತನ್ನ ಜ್ಞಾನವಾದಮೇಲೆ ಪರಜೀವಗಳನ್ನು ತಿಳಿದುಕೊಳ್ಳುತ್ತಾನೆ. ನಾನು ಆತ್ಮನು ಜ್ಞಾನಸ್ವಭಾವಿಯಿದ್ದೇನೆ, ನನ್ನಲ್ಲಿ ಭವಗಳೇ ಇಲ್ಲವೆಂದು ದೃಢ ಪ್ರತೀತಿ ಮತ್ತು ಜ್ಞಾನ ಮಾಡಿಕೊಂಡವನಿಗೆ ಪರದ ಜ್ಞಾನವು ಯಥಾರ್ಥವಾಗಿ ಆಗುತ್ತದೆ ಎಂದೂ ಮೋಕ್ಷಕ್ಕೆ ಹೋಗದಿರುವಂಥ ಅಭವ್ಯಜೀವರುಗಳು ಜಗತ್ತಿನಲ್ಲಿ ಇದ್ದಾರೆಂದು ಅವನು ತಿಳಿದುಕೊಳ್ಳುತ್ತಾನೆ. ತನ್ನ ಜ್ಞಾನ ಸ್ವಭಾವದಲ್ಲಿ ಪರವನ್ನು ತಿಳಿದುಕೊಳ್ಳುವ ಮುಖ್ಯತೆಯಿಲ್ಲ. ತನ್ನನ್ನು ತಿಳಿದುಕೊಳ್ಳುವ ಮುಖ್ಯತೆಯಿರಬೇಕು, ತನ್ನ ಕಡೆಗೆ ರುಚಿ ಮಾಡಬೇಕಾಗುವುದು. ತನ್ನ ಜ್ಞಾನವಾದಮೇಲೆ ಜಗತ್ತಿನ ಜ್ಞೇಯಗಳು, ಭವ್ಯ-ಅಭವ್ಯದ ಪ್ರಕಾರಗಳು ಯಥಾರ್ಥವಾಗಿ ತಿಳಿದುಬರುತ್ತವೆ.

ಈಗ ಔದಯಿಕ ಮೊದಲಾದ ಐದು ಭಾವಗಳ ಕರ್ತೃವು ಜೀವನಿದ್ದಾನೆಂದು ತಿಳಿಸಿಕೊಡುತ್ತಾರೆ, --

**ಕಮ್ಮಂ ವೇದಯಮಾಣೋ ಜೀವೋ ಭಾವಂ ಕರೇದಿ ಜಾರಿಸಯಂ ।**
**ಸೋ ತಸ್ಸ ತೇಣ ಕತ್ತಾ ಹವದಿ ತ್ತಿ ಯ ಸಾಸಣೇ ಪಢಿದಂ ॥೫೭॥**

**ಜೀವಕರ್ಮವನನುಭವಿಸುವಾಗೆಂಥ ಭಾವವ ಮಾಡುವನು ಆ ಭಾವದ ।**
**ಆ ವಿಧದಿಂದವನು ಕರ್ತೃವಾಗುವನೆಂದು ಜಿನಶಾಸನದಿ ಹೇಳಿರುವುದು ॥೫೭॥**

ಜಡಕರ್ಮದ ಪರಮಾಣುವು ಸತ್ತಾದಲ್ಲಿ ಬಿದ್ದುಕೊಂಡಿದೆ. ಆ ಸತ್ತಾದೊಳಗಿಂದ ಉದಯಲ್ಲಿ ಬಂದು ಫಲ ಕೊಡುವ ಯೋಗ್ಯತೆಯುಳ್ಳದ್ದಾದಾಗ ಜೀವನು ಅದರಲ್ಲಿ ಒಂದಾಗುತ್ತಾನೆ ಮತ್ತು ವಿಕಾರ ಮಾಡುತ್ತಾನೆ, ಆಗ ಆ ವಿಕಾರದ ಅನುಭವ ಮಾಡುವಂಥವನು ಸ್ವಯಂ ಆತ್ಮನಿದ್ದಾನೆಂದು ಜಿನೇಂದ್ರ ಭಗವಂತರ ಮತದಲ್ಲಿ ಹೇಳಿದೆ. ಕರ್ಮವು ಜಡವಿದ್ದು ಅದನ್ನು ಆತ್ಮನು ಅನುಭವಿಸುವುದಿಲ್ಲ, ಆದರೆ ವಿಕಾರವನ್ನು ಅನುಭವಿಸುತ್ತಾನೆ.

ಕರ್ಮದ ಪ್ರಕೃತಿಗಳು ಕ್ಷೇತ್ರವಿಪಾಕಿ, ಭಾವವಿಪಾಕಿ, ಜೀವವಿಪಾಕಿ ಮತ್ತು ಪುದ್ಗಲವಿಪಾಕಿಯೆಂದು ನಾಲ್ಕು ಪ್ರಕಾರದ್ದಿವೆ. ಅವುಗಳ ಉದಯ ಸಮಯದಲ್ಲಿ ಜೀವನು ತನ್ನ ಯೋಗ್ಯತೆಯಿಂದ ಒಂದಾದರೆ ವಿಕಾರದ ಅನುಭವ ಮಾಡುತ್ತಾನೆ. ಮತ್ತು ಕರ್ಮದ ಉದಯದ ಪ್ರಕಾರ ಜೀವನಿಗೆ ರಾಗ-ದ್ವೇಷಗಳನ್ನು ಮಾಡಬೇಕಾಗುತ್ತದೆಂಬ ಮನ್ನಣೆಯು ಅಸತ್ಯವಿದೆ. ಅದು ಹೀಗಿದ್ದರೆ ಜೀವನೆಂದೂ ಧರ್ಮ ಪಡೆಯುವ ಸಾಧ್ಯತೆಯಿಲ್ಲ. ಮತ್ತು ಜೀವನು ಕರ್ಮದ ಉದಯದ ಸಮಯದಲ್ಲಿ ಅದರೊಳಗೆ ಒಂದಾಗದಿದ್ದರೆ ಕರ್ಮದ ಪ್ರೇರಕತನವು ಉಳಿಯುವುದಿಲ್ಲವೆಂದು ಯಾರಾದರೂ ಹೇಳಿದರೆ ಆ ಮಾತು ಕೂಡ ಅಸತ್ಯವಿದೆ. ಕರ್ಮವು ಜೀವದಲ್ಲಿ ರಾಗದ ಪ್ರೇರಣೆ ಮಾಡಿಸುವುದಿಲ್ಲ. ಇಲ್ಲಿ ಪಾಠದಲ್ಲಿ 'ಯಾದೃಶಕಂ ಭಾವಂ' ಎಂದು ಹೇಳಿದೆ. ಕರ್ಮದ ಉದಯದ ಪ್ರಕಾರ ಭಾವವಾಗುತ್ತದೆಂಬ ಮಾತನ್ನು ಬರೆದಿಲ್ಲ, ಆದರೆ ಎಂಥ ತನ್ನ ಪರಿಣಾಮ ಮಾಡುತ್ತದೆ ಅಂಥ ಪರಿಣಾಮದ ಕರ್ತೃವಾಗುತ್ತಾನೆಂದು ಭಗವಂತರ ಮತದಲ್ಲಿ ತತ್ತ್ವದ ತಿಳಿವಳಿಕೆಯುಳ್ಳ ಪುರುಷರು ಹೇಳಿದ್ದಾರೆ.

**ಭಾವಾರ್ಥ :-** ಸಂಸಾರೀ ಜೀವನಿಗೆ ಅನಾದಿಯಿಂದ ದ್ರವ್ಯಕರ್ಮದ ಸಂಬಂಧವಿದೆ. ಆ ಕರ್ಮದ ಉದಯದ ಸಮಯದಲ್ಲಿ ಹರ್ಷ-ವಿಷಾದದ ಪರಿಣಾಮ ಮಾಡಿದರೆ ಕರ್ಮವನ್ನು ಭೋಗಿಸುತ್ತಾನೆಂದು ಹೇಳಲಾಗಿದೆ. ಹೇಗೆಂದರೆ

ಜೀವನು ರೊಟ್ಟಿ, ಪಲ್ಯ, ಅನ್ನವನ್ನು ಭೋಗಿಸುತ್ತಾನೆ ಎಂದರೆ ಆ ಪ್ರಕಾರದ ವಿಕಾರ ಪರಿಣಾಮವನ್ನು ಜೀವನು ಭೋಗಿಸುತ್ತಾನೆ. ಅದು ಅಶುದ್ಧ ನಿಶ್ಚಯನಯವಿದೆ ಮತ್ತು ಅದರಲ್ಲಿ ಆ ಪದಾರ್ಥಗಳು ನಿಮಿತ್ತವಿವೆ ಅದಕ್ಕಾಗಿ ಪದಾರ್ಥಗಳನ್ನು ಭೋಗಿಸುತ್ತಾನೆಂದು ವ್ಯವಹಾರದಿಂದ ಕಥನ ಮಾಡಲಾಗಿದೆ. ಅದೇ ರೀತಿ ಜೀವನು ಹರ್ಷ-ಶೋಕವನ್ನು ಭೋಗಿಸುತ್ತಾನೆ ಅದು ನಿಶ್ಚಯವಿದೆ ಮತ್ತು ಕರ್ಮವನ್ನು ಭೋಗಿಸುತ್ತಾನೆ ಅದು ಉಪಚಾರ ಕಥನವಿದೆ. ಆದರೆ ವಿಕಾರೀ ಪರಿಣಾಮವನ್ನು ನಿಶ್ಚಯದಿಂದ ಭೋಗಿಸುತ್ತಾನೆ ಮತ್ತು ಕರ್ಮಗಳನ್ನು ವ್ಯವಹಾರದಿಂದ ಭೋಗಿಸುತ್ತಾ ನೆನ್ನುವುದು ವ್ಯವಹಾರನಯದ ಅರ್ಥವಲ್ಲ. ಕರ್ಮ ಹಾಗೂ ಪರಪದಾರ್ಥಗಳು ಜಡವಿದ್ದು ಅವನ್ನು ಆತ್ಮನು ವ್ಯವಹಾರದಿಂದಕೂಡ ಭೋಗಿಸುವುದಿಲ್ಲ.

ಯಾವಾಗ ಆ ದ್ರವ್ಯಕರ್ಮವನ್ನು ಆತ್ಮನು ಭೋಗಿಸುತ್ತಾನೆಂದು ಹೇಳಲಾಗುತ್ತದೆ ಆಗ ಆ ಕರ್ಮದ ನಿಮಿತ್ತ ಪಡೆದು ಜೀವದಲ್ಲಿ ಜೀವಮಯವಾದ ಚಿದ್ವಿಕಾರರೂಪದ ಪರಿಣಾಮವಾಗುತ್ತದೆ ಆ ಪರಿಣಾಮವನ್ನು ಜೀವವು ಮಾಡಿರುತ್ತದೆ. ಆ ಕಾರಣದಿಂದ ಜೀವನಿಗೆ ಆ ಪರಿಣಾಮದ ಕರ್ತೃವೆಂದು ಹೇಳುವುದರಲ್ಲಿ ಬರುತ್ತದೆ. ಜೀವವು ತನ್ನ ಜ್ಞಾನಸ್ವಭಾವದ ವಿರೋಧ ಮಾಡಿ ಅಂಥ ವಿರಾಧಕ ಭಾವವನ್ನು ಭೋಗಿಸುತ್ತದೆ. ಆಗ ಜ್ಞಾನಾವರಣೀಯಕರ್ಮವನ್ನು ಭೋಗಿಸುತ್ತದೆಯೆಂದು ಹೇಳಲಾಗುತ್ತದೆ ಯಾವ ಜೀವವೂ ಶರೀರದ ರೋಗವನ್ನು ಅನುಭವಿಸುವುದಿಲ್ಲ, ಆದರೆ ತನ್ನಲ್ಲಿ ಶೋಕ ಮತ್ತು ದ್ವೇಷದ ಪರಿಣಾಮವನ್ನು ಭೋಗಿಸುತ್ತದೆ. ಅದರ ಉಪಚಾರವನ್ನು ರೋಗದ ಮೇಲೆ ಮಾಡಲಾಗುತ್ತದೆ.

ಜೀವವು ತನ್ನ ಜ್ಞಾನಸ್ವಭಾವದಿಂದ ಚ್ಯುತವಾಗುತ್ತದೆ ಮತ್ತು ಪರದಲ್ಲಿ ಏಕಾಕಾರ ಹೊಂದಿ ಅನುಕೂಲತೆಯಲ್ಲಿ ರಾಗವನ್ನು ಮತ್ತು ಪ್ರತಿಕೂಲತೆಯಲ್ಲಿ ದ್ವೇಷವನ್ನು ಭೋಗಿಸುತ್ತದೆ ಅದು ಜೀವದ ಪರ್ಯಾಯವಿದೆ, ಜೀವವು ಅದರ ಕರ್ತೃವಿದೆ. ಕರ್ಮಗಳು ಆ ಭಾವಮಾಡಿಸುವುದಿಲ್ಲ. 'ಕರ್ಮದ ನಿಮಿತ್ತ ಪಡೆದು ಎಂಬುದರ ಅರ್ಥವು ಜೀವದಲ್ಲಿ ಹರ್ಷ-ಶೋಕರೂಪದ ನೈಮಿತ್ತಿಕ ಪರ್ಯಾಯವಾಗುತ್ತಿದ್ದರೆ ಕರ್ಮವನ್ನು ನಿಮಿತ್ತವೆಂದು ಹೇಳಲಾಗುತ್ತದೆ-ಎಂಬುದಿದೆ.

ಅದಕ್ಕಾಗಿ ಆತ್ಮನು ಆ ಭಾವಗಳ ರೂಪವಾಗಿ ಪರಿಣಮಿಸುತ್ತಾನೆಂಬ ಮಾತು ನಿಶ್ಚಿತವಾಯಿತು. ಜೀವನು ಉದಯಭಾವರೂಪದಿಂದ ಪರಿಣಮಿಸುವುದರಿಂದ ಅವಶ್ಯವಾಗಿ ಆ ಭಾವಗಳ ಕರ್ತೃವೆಂದು ತಿಳಿಯಬೇಕು. ಕರ್ಮವು ರಾಗ-ದ್ವೇಷಗಳನ್ನು ಮಾಡಿಸುವುದಿಲ್ಲ, ಆದರೆ ರಾಗ-ದ್ವೇಷಗಳು ವಿಕಾರರೂಪದಿಂದ ಸ್ವಯಂ ಆಗುತ್ತದೆ.

ಸಮಯಸಾರದಲ್ಲಿ ರಾಗ-ದ್ವೇಷದ ಪರಿಣಾಮವನ್ನು ಪುದ್ಗಲದ್ದೆಂದು ಹೇಳಿದೆ, ಜೀವದ್ದೆಂದು ಹೇಳಿಲ್ಲ. ಏಕೆಂದರೆ ಅಲ್ಲಿ ದೃಷ್ಟಿಪ್ರಧಾನವಾದ ಕಥನವಿದೆ. ದರ್ಶನ ವಿಕಾರವನ್ನು ಅಥವಾ ಅಪೂರ್ಣತೆಯನ್ನು ಸ್ವೀಕರಿಸುವುದಿಲ್ಲ, ಮಾತ್ರ ಶುದ್ಧ ದ್ರವ್ಯವನ್ನೇ ಸ್ವೀಕರಿಸುತ್ತದೆ. ವಿಕಾರವು ಶುದ್ಧದ್ರವ್ಯದಿಂದ ಬರುವುದಿಲ್ಲ. ಆದರೆ ವಿಕಾರವು ಪರಲಕ್ಷ್ಯದಿಂದ ಪರಲಕ್ಷ್ಯದಲ್ಲಿ ಸಿಲುಕಿಕೊಂಡಿರುವಾಗ ಪರಿಣಾಮವಾಗುವುದರಿಂದ ಪುದ್ಗಲದ ಪರಿಣಾಮವೆಂದು ಹೇಳಿದೆ. ಅಲ್ಲಿ ದ್ರವ್ಯದೃಷ್ಟಿಯ ಕಥನವಿದೆ.

ಇಲ್ಲಿ ಜ್ಞಾನಪ್ರಧಾನವಾದ ಕಥನವಿದೆ, ದೃಷ್ಟಿಪೂರ್ವಕವಾದ ಜ್ಞಾನವು ಇನ್ನೂ ನನ್ನ ಅಶಕ್ತತೆಯಿಂದ ರಾಗವಾಗುತ್ತದೆಯೆಂದು ತಿಳಿಯುತ್ತದೆ. ದರ್ಶನವು ರಾಗವನ್ನು ಸ್ವೀಕಾರ ಮಾಡದಿದ್ದರೂ ಕೂಡ ಜ್ಞಾನವು ಎಷ್ಟು ರಾಗವು ಬಾಕಿಯಿದೆ ಅದೇ ನನ್ನ ಕರ್ತವ್ಯವಿದೆ ನಾನು ಮಾಡಿದರೆ ಆಗುತ್ತದೆ, ಆದರೆ ಕರ್ಮವು ಮಾಡಿಸುವುದಿಲ್ಲವೆಂದು ತಿಳಿಯುತ್ತದೆ. ಅದಕ್ಕಾಗಿ ಇಲ್ಲಿ ಕರ್ತೃ, ಕರ್ಮ, ಕ್ರಿಯೆಯೆಂದು ಮೂರು ಪ್ರಕಾರದಿಂದ ಕರ್ತೃತ್ವದ ಸಿದ್ಧಿಯಿದೆಯೆಂದು ತಿಳಿಯಬೇಕು.

೧) ಯಾವುದು ಸ್ವತಂತ್ರವಾಗಿ ಪರಿಣಮಿಸುತ್ತದೆ ಅಥವಾ ಮಾಡುತ್ತದೆ ಅದನ್ನು ಕರ್ತೃವೆಂದು ಹೇಳುವರು. ಕಾಮ, ಕ್ರೋಧ, ದಯೆ, ದಾನಾದಿಗಳ ಪರಿಣಾಮಗಳು ತನ್ನಲ್ಲಿ ತನ್ನ ಕಾರಣದಿಂದ ಆಗುತ್ತವೆ, ಪರದಿಂದ ಆಗುವುದಿಲ್ಲ, ಜಡಕರ್ಮವು ಮಾಡಿಸುವುದಿಲ್ಲ.

೨) ಯಾವ ಪರಿಣಾಮವಾಗುತ್ತದೆ ಅದು ಕರ್ಮವಿದೆ. ಕರ್ತೃವಿನ ಇಷ್ಟವು ಅದು ಕಾರ್ಯವಿದೆ. ದೃಷ್ಟಿಯ ವಿಷಯದಲ್ಲಿ ಇಷ್ಟವು ಅದು ವೀತರಾಗಪರಿಣಾಮವಿದೆ. ಅಲ್ಲಿ ಕರ್ತೃವಿನ ಇಷ್ಟವಿಕಾರವಿಲ್ಲ, ಆದರೆ ಇಲ್ಲಿ ಅಭೇದದೃಷ್ಟಿಯಿದ್ದರೂ ಕೂಡ ಅಶಕ್ತತೆಯಿಂದ ರಾಗ-ದ್ವೇಷದ ಯಾವ ಪರಿಣಾಮವಾಗುತ್ತದೆ ಅದುಕೂಡ ಕರ್ಮವಿದೆ. ಇಂಥ ಅಸ್ಥಿರತೆಯು ಸಮ್ಯಗ್ದೃಷ್ಟಿಗೆ ವರ್ತಿಸುತ್ತದೆ ಅದಕ್ಕಾಗಿ ಅದು ಅವನ ಕಾರ್ಯವಿದೆ.

೩) ಪೂರ್ವ ಅವಸ್ಥೆಯಿಂದ ಬದಲಾಗಿ ನವೀನ ಅವಸ್ಥೆಯಾಗುವುದು ಅದು ಕಾರ್ಯವಿದೆ. ಆತ್ಮನಿಂದ ಆತ್ಮನಲ್ಲಿ ಕ್ರಿಯೆಯು ಆಗುತ್ತದೆ ಜಡದ ಕಾರಣದಿಂದ ಆಗುವುದಿಲ್ಲ. ಆತ್ಮನು ತನ್ನನ್ನು ಹೇಗೆ ವೇದಿಸುತ್ತಾನೆಂಬುದರ ಉತ್ತರವನ್ನು ಜಯಸೇನಾಚಾರ್ಯರು ಹೀಗೆ ಹೇಳುತ್ತಾರೆ- ನೀರಾಗ, ನಿರ್ಭರ, ಆನಂದಲಕ್ಷಣವುಳ್ಳ ಆತ್ಮನಲ್ಲಿ ಪ್ರಚಂಡ ಅಖಂಡ ಜ್ಞಾನಕಾಂಡದಿಂದ ಪರಿಣತನಾಗದೆ ಮನ-ವಚನ ಕಾಯದ ಲಕ್ಷ್ಯದಿಂದ ಪುಣ್ಯ-ಪಾಪರೂಪದ ಪರಿಣಾಮ ಉತ್ಪನ್ನವಾಗುತ್ತದೆ ಅದರಿಂದ ಜ್ಞಾನಾವರಣೀಯ ಮೊದಲಾದ ಕರ್ಮಗಳು ಹುಟ್ಟುತ್ತವೆ ಮತ್ತು ಅವುಗಳ ಉದಯ ಬಂದರೆ ಹರ್ಷ-ಶೋಕದ ಪರಿಣಾಮವನ್ನು ಅನುಭವಿಸುತ್ತಾನೆ ಎಂದರೆ ಕರ್ಮಗಳನ್ನು ಅನುಭವಿಸುತ್ತಾನೆಂದು ಕಥನ ಮಾಡಲಾಗಿದೆ. ಜೀವವು ಸ್ವತಂತ್ರವಾಗಿ ವಿಕಾರ ಮಾಡುತ್ತದೆ, ಆದರೆ ಆ ವಿಕಾರವು ತನ್ನ ಸ್ವರೂಪವಲ್ಲ, ಆತ್ಮನ ನಿಜವಾದ ಸ್ವರೂಪವು ತ್ರಿಕಾಲಿಶುದ್ಧಸ್ವರೂಪವೇ ಇದೆಯೆಂದು ತಿಳಿಯಬೇಕು. ಅದನ್ನು ಉಪಾದೇಯವೆಂದು ಮನ್ನಿಸಿ ಯಥಾರ್ಥ ದೃಷ್ಟಿ ಮಾಡಿದರೆ ಧರ್ಮವಾಗುತ್ತದೆ.

ಆತ್ಮನು ದ್ರವ್ಯಕರ್ಮಗಳ ನಿಮಿತ್ತ ಪಡೆದು ಔದಯಿಕ ಮೊದಲಾದ ಭಾವಗಳ ಕರ್ತೃವಾಗುತ್ತಾನೆಂಬ ಕಥನವನ್ನು ಈಗ ಮಾಡಲಾಗುತ್ತದೆ,-

**ಕಮ್ಮೇಣ ವಿಣಾ ಉದಯಂ ಜೀವಸ್ಸ ಣ ವಿಜ್ಜದೇ ಉವಸಮಂ ವಾ ।**
**ಖಇಯಂ ಖಓವಸಮಿಯಂ ತಮ್ಹಾ ಭಾವಂ ತು ಕಮ್ಮಕದಂ ॥೫೮॥**

**ಜೀವಕೆ ಪುದ್ಗಲಕರ್ಮವಿಲ್ಲದೆ ಉದಯ, ಉಪಶಮ, ಕ್ಷಾಯಿಕವಿಲ್ಲವೆ ।**
**ಯಾವ ಕ್ಷಾಯೋಪಶಮಿಕವಿಲ್ಲದರಿಂದ ಭಾವಗಳು ಕರ್ಮಕರ್ತೃವಾಗಿವೆ ॥೫೮॥**

ದ್ರವ್ಯಕರ್ಮವಿಲ್ಲದೆ ಆತ್ಮನ ರಾಗಾದಿ ವಿಭಾವಗಳ ಉದಯ ಅಥವಾ ದ್ರವ್ಯಕರ್ಮವಿಲ್ಲದೆ ಉಪಶಮಭಾವವು ಕೂಡ ಇಲ್ಲ ಅಥವಾ ಕ್ಷಾಯಿಕಭಾವವು ಕೂಡ ದ್ರವ್ಯಕರ್ಮವಿಲ್ಲದೆ ಇರುವುದಿಲ್ಲ ಅಥವಾ ದ್ರವ್ಯಕರ್ಮವಿಲ್ಲದೆ ಕ್ಷಾಯೋಪಶಮಿಕಭಾವವೂ ಇರುವುದಿಲ್ಲ. ಆದುದರಿಂದ ಈ ನಾಲ್ಕು ಪ್ರಕಾರದ ಜೀವದ ಭಾವಗಳಿವೆ ಅವನ್ನು ಕರ್ಮವೇ ಮಾಡಿದೆ.

ಜೀವನು ಐದು ಭಾವಗಳ ಕರ್ತೃವಿದ್ದಾನೆಂದು ೫೭ನೇ ಗಾಥೆಯಲ್ಲಿ ಹೇಳಿದೆ ವಿಕಾರೀ ಪರಿಣಾಮ, ಧರ್ಮ ಮತ್ತು ಧರ್ಮಫಲದ ಮಾತು ಹೇಳಿತು. ಆತ್ಮವು ವಸ್ತುವಿದ್ದು ಅದರಿಂದ ಚ್ಯುತವಾಗಿ ಜೀವವು ವಿಕಾರ ಮಾಡುತ್ತದೆ. ಅದರ ಕರ್ತೃವು ಆತ್ಮನಿದ್ದಾನೆ ಮತ್ತು ಆತ್ಮನ ಜ್ಞಾನ ಮಾಡಿಕೊಂಡು ಉಪಶಮ ಹಾಗೂ ಕ್ಷಯೋಪಶಮ ಭಾವ ಮಾಡಿದರೆ ಅದರ ಕರ್ತೃವು ಆತ್ಮನಿದ್ದಾನೆ ಮತ್ತು ಅದರ ಫಲರೂಪದಿಂದ ಕ್ಷಾಯಿಕ ಭಾವದ ಕರ್ತೃವು ಆತ್ಮನಿದ್ದಾನೆ. ಪರಮಪರಿಣಾಮಿಕಭಾವವು ಅದು ತ್ರಿಕಾಲವಿದೆ, ಅದು ಏಕರೂಪವಿದೆ ಅದರ ಆಶ್ರಯ ತೆಗೆದುಕೊಳ್ಳುವಂತಿದೆಯೆಂದು ತಿಳಿಸಿಕೊಡಲಾಗಿದೆ. ನಿಶ್ಚಯದಿಂದ ತಾನು ತನ್ನ ಪರಿಣಾಮದ ಕರ್ತೃವಿದ್ದಾನೆ ಬೇರೆ ಯಾವುದೂ ಕರ್ತೃವಿಲ್ಲವೆಂದು ೫೭ನೇ ಗಾಥೆಯಲ್ಲಿ ತಿಳಿಸಿಕೊಡಲಾಗಿದೆ. ಈ ೫೮ನೇ ಗಾಥೆಯಲ್ಲಿ ನಿಮಿತ್ತದ ಮಾತು ಸಿದ್ಧ ಮಾಡಲಾಗುವುದು.

ದ್ರವ್ಯಕರ್ಮದ ನಿಮಿತ್ತವಿಲ್ಲದೆ ಆತ್ಮನಲ್ಲಿ ರಾಗ ಮೊದಲಾದ ಉದಯಭಾವಗಳಾಗುವುದಿಲ್ಲ. ವಸ್ತುವಿನ

ಸ್ವಭಾವದಲ್ಲಿ ವಿಕಾರವಿಲ್ಲವೆಂಬ ಅರಿವು ಮಾಡಿಕೊಳ್ಳದಿದ್ದರೆ ವಿಕಾರವಾಗುತ್ತದೆ. ಅಶುಭ ಮಾಡುವ ಇಚ್ಚೆಯಿರಲಿಲ್ಲ ಮತ್ತು ಅಶುಭವಾಗಿ ಹೋಯಿತೆಂದು ಕೆಲವರು ಹೇಳುತ್ತಾರೆ, ಆದರೆ ಆ ಮಾತು ಅಸತ್ಯವಿದೆ. ಯಾವ ಭಾವವಾಗುತ್ತದೆ ಅದು ಜೀವದ ಕರ್ತವ್ಯವಿದೆ. ಅದರಲ್ಲಿ ಕರ್ಮವು ನಿಮಿತ್ತವಿದೆ. ಕರ್ಮವಿದೆ ಅದಕ್ಕಾಗಿ ವಿಕಾರವಾಗುತ್ತದೆ ಎಂಬುದಾಗಿ ಅರ್ಥವಿಲ್ಲ, ಆದರೆ ನಿಮಿತ್ತ-ನೈಮಿತ್ತಿಕ ಸಂಬಂಧವನ್ನು ತಿಳಿಸಿಕೊಡಲಾಗಿದೆ.

ಆತ್ಮನಲ್ಲಿ ಉಪಶಮಸಮ್ಯಕ್ತ್ವ ಮತ್ತು ಉಪಶಮಚಾರಿತ್ರವಾಗುತ್ತದೆ ಅದು ಕೂಡ ದ್ರವ್ಯಕರ್ಮದ ಉಪಶಮವಿಲ್ಲದೆ ಆಗುವುದಿಲ್ಲವೆಂಬುದರ ಅರ್ಥವು ಅಲ್ಲಿ ನಿಮಿತ್ತವನ್ನು ಸಿದ್ಧಮಾಡುವುದಿದೆ. ಆತ್ಮನಲ್ಲಿ ಉಪಶಮಭಾವದ ಯೋಗ್ಯತೆಯಾಗುವ ಸಲುವಾಗಿ ಕರ್ಮವು ಉಪಶಮವಾಯಿತೆಂಬುದಾಗಿಲ್ಲ ಅದರಂತೆ ಕರ್ಮವು ಉಪಶಮವಾಗುವ ಸಲುವಾಗಿ ಜೀವದಲ್ಲಿ ಉಪಶಮಭಾವವಾಯಿತೆಂಬುದಾಗಿ ಕೂಡ ಇಲ್ಲ. ಆತ್ಮನು ಜ್ಞಾತಾ-ದೃಷ್ಟಾ ಇದ್ದಾನೆಂಬ ಅರಿವಿನೊಡನೆ ಶುದ್ಧತೆಯಭಾವವನ್ನು ಸ್ವಯಂ ಮಾಡುತ್ತಾನೆ ಆಗ ಕರ್ಮವು ಉಪಶಮವಾಗುವ ಯೋಗ್ಯತೆಯುಳ್ಳದ್ದಿರುತ್ತದೆಂಬುದು ನಿಮಿತ್ತ-ನೈಮಿತ್ತಿಕ ಸಂಬಂಧವಿದೆ.

ಆತ್ಮನಲ್ಲಿ ಕೇವಲಜ್ಞಾನ, ಕೇವಲದರ್ಶನ, ಅನಂತಸುಖ, ಅನಂತವೀರ್ಯದ ಅವಸ್ಥೆಯು ಆಗುತ್ತದೆ ಆಗ ಕರ್ಮದ ಕ್ಷಯರೂಪ ಅವಸ್ಥೆಯಿರುತ್ತದೆ. ಜೀವನು ತನ್ನ ಆತ್ಮನ ಉಗ್ರಪುರುಷಾರ್ಥದಿಂದ ಕೇವಲಜ್ಞಾನರೂಪದಿಂದ ಪರಿಣಮಿಸುತ್ತಾನೆ ಆಗ ಕರ್ಮಗಳಲ್ಲಿ ಅಭಾವರೂಪವಾಗುವ ಯೋಗ್ಯತೆಯಿರುತ್ತದೆ ಹೀಗೆ ನಿಮಿತ್ತ-ನೈಮಿತ್ತಿಕ ಸಂಬಂಧವಿದೆ. ಸ್ವಯಂ ಶುದ್ಧತೆಯ ಭಾವ ಮಾಡುತ್ತಾನೆ ಆಗ ಕರ್ಮಗಳು ಉಪಶಮವಾಗುವ ಯೋಗ್ಯತೆಯುಳ್ಳವುಗಳಿರುವಂಥ ನಿಮಿತ್ತ-ನೈಮಿತ್ತಿಕ ಸಂಬಂಧವಿದೆ

ಆತ್ಮನಲ್ಲಿ ಕೇವಲಜ್ಞಾನ, ಕೇವಲದರ್ಶನ, ಅನಂತಸುಖ, ಅನಂತವೀರ್ಯದ ಅವಸ್ಥೆಯಾಗುತ್ತದೆ ಆಗ ಕರ್ಮದ ಕ್ಷಯರೂಪ ಅವಸ್ಥೆಯಿರುತ್ತದೆ. ಜೀವನು ತನ್ನ ಆತ್ಮನ ಉಗ್ರಪುರುಷಾರ್ಥದಿಂದ ಕೇವಲಜ್ಞಾನರೂಪದಿಂದ ಪರಿಣಮಿಸಿದಾಗ ಕರ್ಮಗಳಲ್ಲಿ ಅಭಾವರೂಪವಾಗುವ ಯೋಗ್ಯತೆಯಿರುವಂಥದು ನಿಮಿತ್ತ-ನೈಮಿತ್ತಿಕ ಸಂಬಂಧವಿದೆ.

ಅದೇ ಪ್ರಕಾರ ಆತ್ಮನಲ್ಲಿ ಕ್ಷಯೋಪಶಮಭಾವವು ದ್ರವ್ಯಕರ್ಮದ ಕ್ಷಯೋಪಶಮವಿಲ್ಲದೆ ಇರುವುದಿಲ್ಲ. ಆ ನಿಮಿತ್ತವಿಲ್ಲದಿದ್ದರೆ ನೈಮಿತ್ತಿಕತೆ ಯಾವುದು ? ಮತ್ತು ನೈಮಿತ್ತಕರೂಪದಿಂದ ತನ್ನ ಯೋಗ್ಯತೆಯಿಲ್ಲದಿದ್ದರೆ ನಿಮಿತ್ತ ಯಾವುದು? ಎರಡೂ ಸ್ವತಂತ್ರವಿವೆ. ಆ ಪ್ರಕಾರ ನಾಲ್ಕೂ ಭಾವಗಳಲ್ಲಿ ಕರ್ಮಗಳ ಅಪೇಕ್ಷೆಯು ಬರುತ್ತಿರುವುದರಿಂದ ಕರ್ಮಕೃತವೆಂದು ಹೇಳಲಾಗಿದೆ ೫೮ನೇ ಗಾಥೆಯ ಶೀರ್ಷಿಕೆಯಲ್ಲಿ 'ದ್ರವ್ಯಕರ್ಮಣಾಂ ನಿಮಿತ್ತಮಾತ್ರತ್ವೇನ ಔದಯಿಕಾದಿಭಾವಕರ್ತೃತ್ವಮ್ ಅತ್ರ ಉಕ್ತಮ್' ಎಂದು ಸಂಸ್ಕೃತದಲ್ಲಿ ಇದೆ. ಅದರ ಅರ್ಥವು-ಔದಯಿಕ ಮೊದಲಾದ ಭಾವಗಳಲ್ಲಿ ಕರ್ಮವು ನಿಮಿತ್ತವಿದೆ ಅದಕ್ಕಾಗಿ ಕರ್ಮವನ್ನು ಆ ಭಾವಗಳ ವ್ಯವಹಾರಕರ್ತೃ ಅಥವಾ ಕಾರಣವೆಂದು ಹೇಳಲಾಗಿದೆ.

**ಭಾವಾರ್ಥ :-** ಔದಯಿಕ, ಔಪಶಮಿಕ, ಕ್ಷಾಯಿಕ, ಕ್ಷಾಯೋಪಶಮಿಕವೆಂದು ಈ ನಾಲ್ಕು ಭಾವಗಳನ್ನು ಕರ್ಮಜನಿತವೆಂದು ತಿಳಿಯಬೇಕು. ಜೀವನು ವಿಕಾರಭಾವ ಮಾಡಿದಾಗ ಕರ್ಮದ ಉದಯವಿದೆ. ಉಪಶಮಸಮ್ಯಗ್ದರ್ಶನ ಮಾಡಿದಾಗ ಕರ್ಮದ ಉಪಶಮವಿದೆ. ಕ್ಷಾಯೋಪಶಮಿಕ ಜ್ಞಾನಾದಿಗಳನ್ನು ಪ್ರಕಟ ಮಾಡಿದಾಗ ಕರ್ಮದ ಕ್ಷಯೋಪಶಮವಿದೆ ಮತ್ತು ಕೇವಲಜ್ಞಾನಾದಿಗಳನ್ನು ಪ್ರಕಟ ಮಾಡಿದಾಗ ಕರ್ಮದ ಕ್ಷಯವಿದೆ. ಅದರಲ್ಲಿ ನಿಮಿತ್ತರೂಪದಿಂದ ಕರ್ಮದ ಉಪಸ್ಥಿತಿ ಅಥವಾ ಅನುಪಸ್ಥಿತಿಯನ್ನು ತಿಳಿಸಿದೆ, ಅದಕ್ಕಾಗಿ ಕರ್ಮಜನಿತವೆಂದು ಹೇಳಿದೆ. ಕರ್ಮವು ವಿಕಾರ ಮಾಡಿಸುವುದು ಅಥವಾ ಸಮ್ಯಕ್ತ್ವ ಮಾಡಿಸುವುದೆಂಬ ಮಾತೇ ಇಲ್ಲ, ಆದರೆ ಕರ್ಮದ ಉಪಸ್ಥಿತಿಯನ್ನು ತಿಳಿಸಲಾಗಿದೆ. ಐದನೆಯದಾದ ಪಾರಿಣಾಮಿಕಭಾವವು ಅನಾದಿಅನಂತ ನಿರುಪಾಧಿಕ ಸ್ವಭಾವಭಾವವಿದೆ, ಅದಕ್ಕೆ ಕರ್ಮದ ಅಪೇಕ್ಷೆಯಿಲ್ಲ ಅದಕ್ಕಾಗಿ ಅದನ್ನು ಆತ್ಮನ ಸ್ವಾಭಾವಿಕ ಭಾವವೆಂದು ತಿಳಿಯಬೇಕು. ಹೀಗೆ ಐದು ಭಾವಗಳ ಸ್ವರೂಪ ತಿಳಿಸಿ, ವಿಕಾರೀ

ಪರಿಣಾಮ ಅಥವಾ ಅವಿಕಾರೀ ಪರಿಣಾಮವು ನಿನ್ನಿಂದ ಆಗುತ್ತದೆ ಅದಕ್ಕಾಗಿ ನಿಮಿತ್ತದ ಮೇಲಿನ ಅಭಿರುಚಿ ಬಿಟ್ಟು, ವಿಕಾರವನ್ನು ಅಶುದ್ಧವೆಂದು ತಿಳಿದು ನಿನ್ನ ಸ್ವಾಭಾವಿಕಭಾವದ ಪರಮಪಾರಿಣಾಮಿಕ ಭಾವದ ಶ್ರದ್ಧೆ-ಜ್ಞಾನ ಮಾಡಿದರೆ ಧರ್ಮವಾಗುತ್ತದೆಯೆಂದು ಹೇಳಿದೆ.

ಔದಯಿಕ ಮೊದಲಾದ ನಾಲ್ಕೂ ಭಾವಗಳ ಕರ್ತೃವು ಆತ್ಮನಿದ್ದಾನೆ ತನ್ನ ಸ್ವಭಾವವನ್ನು ಮರೆತು ರಾಗ-ದ್ವೇಷರೂಪದ ಭಾವಕರ್ಮಗಳಾಗುವುದರ ಕರ್ತೃವು ಆತ್ಮನಿದ್ದಾನೆ. ಸ್ವಭಾವದ ಅವಲಂಬನೆಯಿಂದ ಉಪಶಮ ಸಮ್ಯಕ್ತ್ವ ಮತ್ತು ಚಾರಿತ್ರವಾಗುತ್ತದೆ ಅದು ಕೂಡ ಆತ್ಮನ ಭಾವಕರ್ಮವಿದೆ.

ತನ್ನ ಜ್ಞಾನ, ದರ್ಶನ, ವೀರ್ಯದ ವಿಕಾಸವಾಗುವುದು ಅದು ಕೂಡ ಆತ್ಮನ ಭಾವಕರ್ಮವಿದೆ ಮತ್ತು ಕೇವಲಜ್ಞಾನಾದಿ ದಶಾರೂಪದ ಭಾವಕರ್ಮವು ಕೂಡ ಆತ್ಮನ ಭಾವಕರ್ಮವಿದೆ ಅದು ಜೀವದ ಕರ್ತವ್ಯವಿದೆ. ಜಡದ ಕರ್ತವ್ಯವಿಲ್ಲದಿದ್ದರೂ ಕೂಡ ದ್ರವ್ಯಕರ್ಮವು ಆ ಭಾವಗಳ ಕರ್ತೃವೆಂದು ವ್ಯವಹಾರನಯದಿಂದ ಹೇಳುವುದರಲ್ಲಿ ಬರುತ್ತದೆ ಆತ್ಮನು ಅನಾದಿಅನಂತನಿದ್ದಾನೆ. ಅವನ ಪರ್ಯಾಯದಲ್ಲಿ ಅಂಥ ಭಾವಗಳಾಗುತ್ತವೆ ಆಗ ಕರ್ಮದಲ್ಲಿ ಕರ್ಮದ ಕಾರಣದಿಂದ ಉದಯಾದಿಗಳಾಗುತ್ತಿರುವಂಥ ನಿಮಿತ್ತ-ನೈಮಿತ್ತಿಕ ಸಂಬಂಧವನ್ನು ಜಾಹೀರ ಮಾಡಲು ಕರ್ಮವನ್ನು ಆ ಭಾವಗಳ ಕರ್ತೃವೆಂದು ವ್ಯವಹಾರದಿಂದ ಹೇಳುವುದರಲ್ಲಿ ಬರುತ್ತದೆ. ಕೇವಲಜ್ಞಾನವಾಗುವ ಸಲುವಾಗಿ ಕೇವಲಜ್ಞಾನಾವರಣೀಯಕ್ಕೆ ಹೊರಡಬೇಕಾಗುತ್ತದೆನ್ನುವಂತಿಲ್ಲ ಮತ್ತು ಕೇವಲಜ್ಞಾನಾವರಣೀಯವು ಹೋಯಿತು ಅದಕ್ಕಾಗಿ ಕೇವಲಜ್ಞಾನವಾಯಿತೆಂಬುದಾಗಿ ಕೂಡ ಇಲ್ಲ. ಒಂದು ಇನ್ನೊಂದರ ಆಧೀನವಿಲ್ಲ ಸ್ವತಂತ್ರವೆಂದು ಸಾರುತ್ತದೆ.

ಆದರೆ ವ್ಯವಹಾರಕರ್ತೃವಿನ ಮಾತು ಮಾಡುವಲ್ಲಿ ಅಜ್ಞಾನಿಯು ತನ್ನ ಅಜ್ಞಾನದ ಕಾರಣದಿಂದ ಉದಾಸೀನನಾಗಿ ಬಿಡುತ್ತಾನೆ. ಕರ್ಮವು ವ್ಯವಹಾರದಿಂದ ರಾಗದ ಕರ್ತೃವಂತೂ ಇದೆಯಲ್ಲವೇ ? ಸೋದರನೇ ! ನಿನಗೆ ಪಾರತಂತ್ರ್ಯವು ಒಳ್ಳೆಯದೆನಿಸುತ್ತದೆ, ಆದರೆ ನೀನು ಸ್ವತಂತ್ರನಿರುವೆ ನಿನ್ನ ಭ್ರಮಣವಿದ್ದರೆ ಕರ್ಮದಲ್ಲಿ ನಿನ್ನ ಜತೆಯಲ್ಲಿರುವಂಥ ಯೋಗ್ಯತೆಯಿದೆ ಮತ್ತು ನಿನಗೆ ಮೋಕ್ಷಕ್ಕೆ ಹೋಗುವುದಿದ್ದರೆ ಕರ್ಮದಲ್ಲಿ ಅಭಾವವಾಗುವ ಯೋಗ್ಯತೆಯಿದೆ. ಜೀವದ ಪರಿಣಾಮದ ಕರ್ತೃ ಉಪಾದಾನಕಾರಣನು ತಾನು ಅದು ನಿಶ್ಚಯ ಮತ್ತು ಕರ್ಮವು ನಿಮಿತ್ತಕಾರಣ ಅದು ವ್ಯವಹಾರವೆಂದು ಪ್ರಮಾಣಜ್ಞಾನ ಮಾಡಿಸಿದ್ದಾರೆ.

ಯಾವ ಜೀವನು ಯಥಾರ್ಥದೃಷ್ಟಿ ಮಾಡುತ್ತಾನೆ ಅವನಿಗೆ ಸ್ವಭಾವದೃಷ್ಟಿಯಾಗುತ್ತದೆ ಸ್ವಭಾವದೃಷ್ಟಿಯಲ್ಲಿ ಕರ್ಮದ ಮುಖ್ಯತೆಯಂತೂ ಇರುವುದಿಲ್ಲ, ಆದರೆ ರಾಗದ ಮುಖ್ಯತೆಯು ಇರುವುದಿಲ್ಲ . ನಾನು ಜ್ಞಾತಾ-ದೃಷ್ಟಾ ಇದ್ದೇನೆಂಬ ಅರಿವಿನಲ್ಲಿ ವೀತರಾಗತೆಯ ಮುಖ್ಯತೆಯಿರುತ್ತದೆ. ಆ ಸಮಯದಲ್ಲಿ ರಾಗ ಮತ್ತು ಅಶಕ್ತತೆಯ ಜ್ಞಾನ ಆಗುವುದಿಲ್ಲವೆನ್ನುವಂತಿಲ್ಲ , ಆದರೆ ಯಥಾರ್ಥಜ್ಞಾನವಿರುತ್ತದೆ, ಯಥಾರ್ಥಜ್ಞಾನವಾಗುತ್ತದೆ.

ನಾನು ಜ್ಞಾನಸ್ವಭಾವಿಯಿದ್ದೇನೆಂಬ ಅವಲಂಬನವು ಯಾವನಿಗೆ ವರ್ತಿಸುತ್ತಿದೆ ಅವನು ತನ್ನಲ್ಲಿದ್ದುಕೊಂಡು ಪರ ಆತ್ಮರುಗಳು ಹೇಗಿದ್ದಾರೆ ಹಾಗೆ ಯಥಾರ್ಥ ಜ್ಞಾನಮಾಡಿಕೊಳ್ಳುತ್ತಾನೆ. ಆದಾಗ್ಯೂ ಅವನಿಗೆ ಪರವನ್ನು ತಿಳಿದುಕೊಳ್ಳುವ ಪ್ರಾಧಾನ್ಯತೆ ಇರುವುದಿಲ್ಲ. ಧರ್ಮಾತ್ಮ ಜೀವನಿಗೆ ಯಾವ ಸಿದ್ಧರು ತನಗಿಂತ ಮೊದಲು ಆಗಿಹೋಗಿದ್ದಾರೆ. ಅವರಿಗಿಂತ ವಿಲಂಬವಾಗಿ ನನಗೆ ಸುಖವು ಪ್ರಕಟವಾಗುತ್ತಿದೆಯೆಂಬ ಆಕುಲತೆ ಮತ್ತು ವಿಷಮತೆಯಂತೂ ಇರುವುದೇ ಇಲ್ಲ, ಆದರೆ ಆ ಪ್ರಕಾರದ ಜ್ಞಾನವು ವರ್ತಿಸುತ್ತಿದ್ದರೆ ಅದಕ್ಕೆ ಕೂಡ ಅವನು ಪ್ರಾಧಾನ್ಯತೆ ಕೊಡುವುದಿಲ್ಲ. ಮೊದಲು ಆದ ಸಿದ್ಧರ ಸುಖದ ಕಾಲವು ಅಧಿಕ ಮತ್ತು ನನ್ನ ಸುಖದ ಕಾಲವು ಕಡಿಮೆಯೆಂಬ ವಿಷಮತೆಯು ಧರ್ಮಾತ್ಮನಿಗೆ ಇರುವುದಿಲ್ಲ, ಆದರೆ ಸ್ವಾತ್ಮ ಜ್ಞಾನದ ಪ್ರಧಾನತೆಯು ವರ್ತಿಸುತ್ತದೆ ಮತ್ತು ಆ ಸಮಯದಲ್ಲಿ ಪರಗಳು ಸ್ವಾಭಾವಿಕವಾಗಿ ತಿಳಿದುಬರುತ್ತವೆ.

ಪ್ರಮಾಣಜ್ಞಾನವು ಯಾವಾಗ ಯಥಾರ್ಥವೆಂದು ಕರೆಸಿಕೊಳ್ಳುತ್ತದೆಯೆಂದರೆ ನಾನು ಜ್ಞಾನಸ್ವಭಾವಿಯಿದ್ದೇನೆಂಬ ದೃಷ್ಟಿಯಾದೊಡನೆ ಯಾವ ಸ್ವ-ಪರ ಪ್ರಕಾಶಕಜ್ಞಾನವು ವಿಕಸಿಸುತ್ತದೆ ಆ ಜ್ಞಾನವು ವಿಷಮತೆ ಹಾಗೂ ಭೇದದ ಲಕ್ಷ್ಯ ಮಾಡುವುದಿಲ್ಲ, ಭೇದದ ಜ್ಞಾನ ಮಾಡಿಕೊಳ್ಳಲು ತತ್ಪರವಾಗುವುದಿಲ್ಲ ನಾನು ಚೈತನ್ಯಸ್ವಭಾವಿಯಿದ್ದೇನೆ, ನನ್ನ ಸ್ವಭಾವದಲ್ಲಿ ಭವಗಳಿಲ್ಲವೆಂಬ ಆಂತರ್ಯದ ರುಚಿಯ ಒಲವಿನಲ್ಲಿ ಇಷ್ಟು ಭವಗಳಾದವು ಇಷ್ಟು ಭವಗಳಾಗುವವೆಂಬ ಪ್ರಶ್ನೆಯೇ ಇಲ್ಲ, ಆದರೆ ಭೂತಕಾಲದಲ್ಲಿ ಇಷ್ಟು ಸಂಸಾರದ ಪರ್ಯಾಯಗಳು ಹೋದುವೆಂಬುದರ ಸಂಬಂಧದ ಜ್ಞಾನದ್ದೂ ಕೂಡ ಮುಖ್ಯತೆಯಿಲ್ಲ. ತನ್ನ ಜ್ಞಾನವಾದೊಡನೆ ತನ್ನ ಸಾಮರ್ಥ್ಯದಿಂದ ಹೇಗಿದೆ ಹಾಗೆ ಯಥಾರ್ಥವಾಗಿ ತಿಳಿದುಕೊಳ್ಳುತ್ತಾನೆ.

ಜೀವವು ತನ್ನಲ್ಲಿ ವಿಕಾರ ಮಾಡಿದಾಗ ಕರ್ಮದ ಉದಯವು ನಿಮಿತ್ತವಿದೆ, ಉಪಶಮ ಸಮ್ಯಕ್ತ್ವವನ್ನು ಪ್ರಕಟಮಾಡಿದರೆ ಕರ್ಮದ ಉಪಶಮವು ನಿಮಿತ್ತವಿದೆ. ಕ್ಷಯೋಪಶಮಭಾವವನ್ನು ಪ್ರಕಟಮಾಡಿದರೆ ಕರ್ಮದ ಕ್ಷಯೋಪಶಮವು ನಿಮಿತ್ತವಿದೆ, ಕ್ಷಾಯಿಕಭಾವವನ್ನು ಪ್ರಕಟಪಡಿಸಿಕೊಂಡಾಗ ಕರ್ಮದ ಕ್ಷಯವು ನಿಮಿತ್ತವಿದೆ. ಆದರೆ ಪರ್ಯಾಯದಲಕ್ಷ್ಯದಿಂದ ಅಥವಾ ನಿಮಿತ್ತದ ಲಕ್ಷ್ಯದಿಂದ ಯಥಾರ್ಥ ಜ್ಞಾನವಾಗುವುದಿಲ್ಲ ಧ್ರುವ ಸ್ವಭಾವದ ಆಶ್ರಯದಿಂದ ಪ್ರಕಟವಾದ ಜ್ಞಾನವು ರಾಗವನ್ನು ಮತ್ತು ನಿರ್ಮಲತೆಯನ್ನು ಹಾಗೂ ಅದರ ಯಥಾಯೋಗ್ಯ ನಿಮಿತ್ತವನ್ನು ತಿಳಿದುಕೊಳ್ಳುತ್ತದೆ. ಅದರಂತೆ ಇವರು ಮೊದಲು ಸಿದ್ಧರಾದರು ಮತ್ತು ಇವರು ಅನಂತರ ಸಿದ್ಧರಾದರೆಂಬುದೆಲ್ಲವು ವ್ಯವಹಾರದ ವಿಷಯವಿದೆ.

**ಬಢೇ ನ ಸಿದ್ಧ ಅನಂತತಾ, ಘಟೇ ನ ರಾಶ ನಿಗೋದ ।**
**ಜೈಸೆ ಕೆ ತೈಸೆ ರಹೇ ಯಹ ಜಿನವಚನ ವಿನೋದ ॥**

ಸಿದ್ಧ ಜೀವರುಗಳು ವೃದ್ಧಿಸುವುದಿಲ್ಲ ಮತ್ತು ನಿಗೋದದ ಜೀವಗಳು ಕಡಿಮೆಯಾಗುವುದಿಲ್ಲ ಅನಂತವಾಗಿ ಉಳಿಯುತ್ತವೆ. ಅನಂತವು ಅದರ ನಿಶ್ಚಯವಿದೆ ಇಂತಿಷ್ಟು ಜೀವರುಗಳು ನಿಗೋದದಿಂದ ಹೊರಗೆ ಬಂದು ಮೋಕ್ಷಕ್ಕೆ ಹೋದರೆನ್ನುವುದಂತೂ ವ್ಯವಹಾರದ ಸಂಖ್ಯೆಯಿವೆ. ಹೆಚ್ಚುವುದು-ಕಡಿಮೆಯಾಗುವುದು ಅದು ವ್ಯವಹಾರವಿದೆ ಅನಂತವಿರುತ್ತದೆ ಅದು ನಿಶ್ಚಯವಿದೆ ವ್ಯವಹಾರದ ಜ್ಞಾನದಿಂದ ನಿಶ್ಚಯದ ಜ್ಞಾನವಾಗುವುದಿಲ್ಲ, ಆದರೆ ನಿಶ್ಚಯದಜ್ಞಾನದಲ್ಲಿ ವ್ಯವಹಾರದ ಜ್ಞಾನವು ಬಂದುಬಿಡುತ್ತದೆ. ಕೆಳಗಿನ ಭೂಮಿಯಲ್ಲಿರುವ ಜೀವರುಗಳು ನಾನು ಜ್ಞಾನಸ್ವಭಾವಿಯಿದ್ದೇನೆಂದು ನಿಶ್ಚಯ ಮಾಡಬೇಕು. ಅಂಥ ಅಭೇದದೃಷ್ಟಿಯುಳ್ಳವನಿಗೆ 'ನನಗೆ ವರ್ತಮಾನದಲ್ಲಿ ಅಪೂರ್ಣತೆಯಿದೆ ಮತ್ತು ಪರಿಪೂರ್ಣತೆಯಾಗುವುದು ಎಂದರೆ ಸಿದ್ಧನಾಗುವೆನು ಮತ್ತು ಸಂಸಾರವು ಹೊರಟುಹೋಗುವುದೆ'ಂಬ ಭೇದದೃಷ್ಟಿಯು ಇರುವುದೇ ಇಲ್ಲ. ನಿಗೋದದಲ್ಲಿರುವ ಜೀವಗಳು ಇಂತಿಷ್ಟು ಕಡಿಮೆಯಾದವು ಮತ್ತು ಸಿದ್ಧರಲ್ಲಿ ವೃದ್ಧಿಸಿದವೆಂಬ ವ್ಯವಹಾರವು ಅಭೇದದಲ್ಲಿ ಅನ್ವಯಿಸುವುದಿಲ್ಲ. ಅಭೇದದ ಆಶ್ರಯದಿಂದ ಯಾವ ಜ್ಞಾನವು ಪ್ರಕಟವಾಯಿತು ಅದು ವ್ಯವಹಾರವನ್ನು ತಿಳಿದುಕೊಳ್ಳುತ್ತದೆ.

ಜ್ಞಾನದ ಸ್ವಭಾವವು ಸ್ವ-ಪರಪ್ರಕಾಶಕವಿದೆ, ಆ ಸ್ವಭಾವವು ನಿಮಿತ್ತ ರಾಗ ಅಥವಾ ದ್ವೇಷದ ಕಾರಣದಿಂದ ಇಲ್ಲ ಅದರಂತೆ ಜಗತ್ತಿನಲ್ಲಿ ಇಂತಿಷ್ಟು ಜೀವಗಳಿವೆ ಅದಕ್ಕಾಗಿ ಸ್ವ-ಪರಪ್ರಕಾಶಕ ಸ್ವಭಾವವಿದೆಯೆಂದು ಕೂಡ ಇಲ್ಲ. ಜ್ಞಾಯಕವಸ್ತುವು ತಾನೇ ಪರಿಪೂರ್ಣವಿದೆ ಕ್ರಮಬದ್ಧಪರ್ಯಾಯದ ನಿರ್ಣಯಮಾಡುವವರ ದೃಷ್ಟಿಯು ದ್ರವ್ಯದ ಮೇಲೆ ಹೋಗುತ್ತದೆ. ಈಗ ಸಿದ್ಧರಾಗುವುದು ಅಥವಾ ನಂತರ ಆಗುವುದೆಂಬುದು ವಸ್ತುಸ್ವಭಾವದಲ್ಲಿ ಇಲ್ಲ. ನಾನು ಜ್ಞಾಯಕನಿದ್ದೇನೆಂಬ ಪರಿಣಮನವಿದೆ ಮತ್ತು ಆಗ ಎದುರಿಗೆ ಕರ್ಮದ ಉಪಶಮವಿದೆ ಮತ್ತು ಆ ಪರಿಣಮನವು ನಿಮಿತ್ತದ ಕಾರಣದಿಂದಿಲ್ಲ ಅದರಂತೆ ಅದು ಪರ್ಯಾಯ ಪರ್ಯಾಪ್ತವಿಲ್ಲ ನಾನು ಸ್ವಭಾವದ ಜತೆ ಏಕಾಕಾರನಿದ್ದೇನೆಂಬ ಅರಿವಿನಲ್ಲಿ ಭೇದ, ಪರ್ಯಾಯ, ರಾಗ, ಕರ್ಮ ನಿಮಿತ್ತಗಳೆಲ್ಲವೂ ಗೌಣವಾಗಿ ಬಿಡುತ್ತವೆ ಮತ್ತು ಸಮ್ಯಗ್ಜ್ಞಾನವು ಪ್ರಕಟವಾಗುತ್ತದೆ.

ಹೀಗೆ ಜೀವನಿಗೆ ಪರದ ಕಾರಣದಿಂದ ಜ್ಞಾನವಾಗುವುದಿಲ್ಲ ಆದಾಗ್ಯೂ ಪರದ ಜ್ಞಾನವಾದಲ್ಲದೆ ಇರುವುದಿಲ್ಲ.

**ಪ್ರಶ್ನೆ :-** ಧರ್ಮದ ಸಲುವಾಗಿ ರಾಗದ ಪರ್ಯಾಯದ ಅಥವಾ ಪರದ ಆಶ್ರಯವಿಲ್ಲ, ಆದರೆ ಒಂದು ಅಭೇದ ಸ್ವಭಾವದ ಲಕ್ಷ್ಯದಿಂದ ಧರ್ಮವಾಗುತ್ತದೆಯೆಂದು ಒಂದು ಪಾರ್ಶ್ವದಿಂದ ತಾವು ಹೇಳಿದ್ದೀರಿ. ಇನ್ನೊಂದು ಪಾರ್ಶ್ವದಿಂದ ವಸ್ತ್ರವಿದ್ದರೆ ಮುನಿತನವಿಲ್ಲವೆಂದು ಹೇಳುತ್ತೀರಿ, ಆದರೆ ಇದರ ಮೇಳ ಹೇಗೆ ? ವಸ್ತ್ರವಂತೂ ಪರವಸ್ತುವಿದೆ, ಎಂದಮೇಲೆ ಮುನಿಗೆ ವಸ್ತ್ರವಿದ್ದರೆ ಬರುವ ಬಾಧೆಯೇನು ?

**ಉತ್ತರ :-** ಸ್ವಭಾವದ ಆಶ್ರಯದಿಂದ ಪ್ರಕಟವಾಗುವ ಜ್ಞಾನವು ನಿಮಿತ್ತ-ನೈಮಿತ್ತಿಕ ಸಂಬಂಧದ್ದೂ ಕೂಡ ಯಥಾರ್ಥ ಜ್ಞಾನ ಮಾಡುತ್ತದೆ. ಜೀವವು ಸ್ವಭಾವದ ಆಶ್ರಯದಿಂದ ವೀತರಾಗತೆಯನ್ನು ಪ್ರಕಟಪಡಿಸಿಕೊಳ್ಳುವಾಗ ಕರ್ಮದ ಉದಯವು ಇರುತ್ತದೆಯೆಂದು ಸಂಭವಿಸುವುದಿಲ್ಲ. ಅದರಂತೆ ಆತ್ಮನ ಆಶ್ರಯದಿಂದ ಮುನಿತನವನ್ನು ಪ್ರಕಟಮಾಡುವುದು ಮತ್ತು ಮೂರು ಕಷಾಯಗಳು ದೂರವಾದಾಗ ವಸ್ತ್ರದ ಕುರಿತಾದ ರಾಗವು ಇರುತ್ತದೆಯೆಂಬುದು ಸಂಭವಿಸುವುದಿಲ್ಲವೆಂಬ ನಿಮಿತ್ತ-ನೈಮಿತ್ತಿಕ ಸಂಬಂಧವಿದೆ. ಇದನ್ನು ಯಾವನು ತಿಳಿಯುವುದಿಲ್ಲ ಅವನು ದೇವ, ಶಾಸ್ತ್ರ-ಗುರುಗಳನ್ನು ಕೂಡ ಯಥಾರ್ಥವಾಗಿ ತಿಳಿದುಕೊಳ್ಳುವುದಿಲ್ಲ.

ಜೀವನಿಗೆ ಏಕಕ್ಷೇತ್ರಾವಗಾಹ ಸಂಬಂಧದಿಂದ ಒಂದು ಸಮಯದಲ್ಲಿ ಎಂಟೂ ಕರ್ಮಗಳು ಉದಯರೂಪದಿಂದ ಇದ್ದರೂ ಕೂಡ ಜೀವವು ರಾಗ ದ್ವೇಷ ಮಾಡಿದರೆ ಮೋಹದ ಉದಯವನ್ನು ನಿಮಿತ್ತವೆಂದು ಹೇಳಲಾಗುವುದು. ಆದರೆ ಜ್ಞಾನಾವರಣೀಯ ಕರ್ಮವನ್ನು ರಾಗದಲ್ಲಿ ನಿಮಿತ್ತವೆಂದು ಹೇಳಲಾಗುವುದಿಲ್ಲ. ಜ್ಞಾನದ ಹೀನತೆ ಮಾಡಿದಾಗ ಜ್ಞಾನಾವರಣೀಯ ಕರ್ಮವನ್ನು ನಿಮಿತ್ತವೆಂದು ಹೇಳಲಾಗುವುದು, ಆದರೆ ಬೇರೆ ಕರ್ಮವನ್ನು ನಿಮಿತ್ತವೆಂದು ಹೇಳಲಾಗುವುದಿಲ್ಲ ಅನುಕೂಲ ನಿಮಿತ್ತದ ಮೇಲೆಯೇ ಆರೋಪಬರುತ್ತದೆ.

**ಪ್ರಶ್ನೆ :-** ನಿಮಿತ್ತವೇ ಇಲ್ಲದಿದ್ದರೆ ?

**ಉತ್ತರ :-** ನೀನು ವಸ್ತುಸ್ವರೂಪವನ್ನು ತಿಳಿದುಕೊಳ್ಳುವುದಿಲ್ಲ. ಎಲ್ಲಿ ನೈಮಿತ್ತಿಕ ಪರ್ಯಾಯದ ಯೋಗ್ಯತೆಯಾಗಿದೆ ಅಲ್ಲಿ ಅದಕ್ಕೆ ಅನುಕೂಲ ನಿಮಿತ್ತವು ನಿಮಿತ್ತದ ಕಾರಣದಿಂದ ಇರುತ್ತದೆ ಮತ್ತು ನಿಮಿತ್ತ-ನೈಮಿತ್ತಿಕ ಸಂಬಂಧದ ಜ್ಞಾನವು ನಿಮಿತ್ತ-ನೈಮಿತ್ತಿಕ ಸಂಬಂಧದ ಕಾರಣದಿಂದ ಇಲ್ಲ, ಆದರೆ ನಾನು ಜ್ಞಾತಾನಿದ್ದೇನೆ, ಪರಿಪೂರ್ಣನಿದ್ದೇನೆಂಬ ದೃಷ್ಟಿ, ಮತ್ತು ಜ್ಞಾನವಾದರೆ ಆ ಜ್ಞಾನವಾಗಿ ಹೋಗುತ್ತದೆ.

ಯಾವ ಜೀವನು ರಾಗದಪರ್ಯಾಯದ ಅಥವಾ ನಿಮಿತ್ತದ ಆಶ್ರಯ ತೆಗೆದುಕೊಳ್ಳುತ್ತಾನೆ ಅವನಂತೂ ಮಿಥ್ಯಾದೃಷ್ಟಿಯಿದ್ದಾನೆ. ಕೇವಲಿಗೆ ಆಹಾರ ಮನ್ನಿಸುವವನು, ಮುನಿಗೆ ವಸ್ತ್ರ ಮನ್ನಿಸುವವನು ಅವನಂತೂ ಮಿಥ್ಯಾದೃಷ್ಟಿಯಿದ್ದಾನೆ. ಕೇವಲಜ್ಞಾನೀ ಭಗವಂತನಿಗೆ ಆಹಾರವಿರುವುದಿಲ್ಲ, ಅಂತರ್ಯದಲ್ಲಿ ಮುನಿತನವು ಪ್ರಕಟವಾದಾಗ ಬಾಹ್ಯದಲ್ಲಿ ವಸ್ತ್ರವಿರುವುದಿಲ್ಲ. ಹೀಗೆ ಉಪಾದಾನದ ಯೋಗ್ಯತೆಯ ಸಮಯದಲ್ಲಿ ನಿಮಿತ್ತವು ಹೇಗಿರುತ್ತದೆಂಬುದನ್ನು ತಿಳಿಸಿಕೊಟ್ಟಿದ್ದಾರೆ, ಆದರೆ ಆತ್ಮಸ್ವರೂಪದ ನಿಶ್ಚಯ ಜ್ಞಾನವಿಲ್ಲದೆ ವ್ಯವಹಾರದ ಜ್ಞಾನವು ಯಥಾರ್ಥವಾಗುವುದಿಲ್ಲ.

ಮುನಿದಶೆರೂಪವಾದ ಚಾರಿತ್ರದ ಕರ್ತೃವು ಸ್ವಯಂ ಆತ್ಮನಿದ್ದಾನೆ. ಆಗ ಶರೀರದ ನಗ್ನಾವಸ್ಥೆಯು-ವಸ್ತ್ರದ ಅಭಾವರೂಪವಾದ ದಶೆಯು ವ್ಯವಹಾರದಿಂದ ಚಾರಿತ್ರದ ಕರ್ತೃವೆಂದು ಹೇಳಲಾಗುತ್ತದೆ. ಯಾವುದರ ಕಾರಣದಿಂದ ಯಾವುದೂ ಇಲ್ಲ. ನಗ್ನದಶೆಯಾಯಿತು ಅದಕ್ಕಾಗಿ ಚಾರಿತ್ರವಾಯಿತೆಂಬುದಾಗಿಲ್ಲ , ಆದರೆ ಮುನಿಯಾದಾಗ ದೇಹದ ನಗ್ನದಶೆಯು ಇದ್ದಲ್ಲದೆ ಇರುವುದಿಲ್ಲ. ಆತ್ಮನ ಅರಿವುಂಟಾದರೆ ಸ್ವ-ಪರದ ವಿವೇಕ ಮಾಡಿಕೊಂಡು ಯಾವ ಜ್ಞಾನವು ಪ್ರಕಟವಾಯಿತು ಅದು ತನ್ನನ್ನು , ರಾಗವನ್ನು , ಪರ್ಯಾಯವನ್ನು , ಕರ್ಮ ಮೊದಲಾಗಿ ಎಲ್ಲವುಗಳನ್ನು ಶೃಂಖಲಾಬಂಧವು ಹೇಗಿದೆ-ಹಾಗೆ ತಿಳಿದುಕೊಳ್ಳುತ್ತದೆ, ಒಂದು ಶೃಂಖಲೆಯಲ್ಲಿ ನೂರು ಕುಣಿಕೆಗಳಿದ್ದು ಅದರೊಳಗಿಂದ ಒಂದು ಕುಣಿಕೆಯು

ಮುರಿದುಹೋದರೆ ಶೃಂಖಲೆಯ ಅಖಂಡತೆಯು ಮುರಿದುಹೋಗುತ್ತದೆ ಅದೇ ಪ್ರಕಾರ ಚೈತನ್ಯಸ್ವಭಾವವು ಅಖಂಡವಿದೆ. ಅದರ ಗುಣಗಳು, ವಿಕಾರ, ಅಪೂರ್ಣಪರ್ಯಾಯ, ನಿಮಿತ್ತಗಳ-ಸದ್ಭಾವ ಅಥವಾ ಅಭಾವ ಮೊದಲಾದ ಪ್ರಕಾರದಿಂದ ಯಾವ ಭೂಮಿಕೆಗಳು ಹೇಗಿವೆ ಹಾಗೆ ತಿಳಿದುಕೊಳ್ಳದಿರುವುದು ಮತ್ತು ಒಂದು ವಚನದ್ದು ಕೂಡ ವ್ಯತ್ಯಾಸವಾದರೆ ಶೃಂಖಲೆಯ ಹಾಗೆ ದ್ರವ್ಯದ ಅಖಂಡತೆಯು ಮುರಿದುಹೋಗುತ್ತದೆ ಎಂದರೆ ಪ್ರಮಾಣಜ್ಞಾನವಾಗುವುದಿಲ್ಲ.

ನಿಮಿತ್ತ-ನೈಮಿತ್ತಿಕ ಸಂಬಂಧವು ಪೃಥಕತೆಯನ್ನು ತಿಳಿಸಿಕೊಡುತ್ತದೆ. ಪೃಥಕತೆಯು ಯಾವ ಪ್ರಕಾರದ್ದಿದೆ ಯೆಂಬುದರ ಜ್ಞಾನ ಮಾಡಿಸುತ್ತದೆ. ಹೇಗೆಂದರೆ ಸಿದ್ಧರ ಪರ್ಯಾಯದ ಕರ್ತೃವು ಅವರ ಆತ್ಮನಿದ್ದಾನೆ ಕಾಲದ್ರವ್ಯವು ನಿಮಿತ್ತಕರ್ತೃವಿದೆ-ಹೇತುವಿದೆ ಆದರೆ ಕಾಲದ ಕಾರಣದಿಂದ ಸಿದ್ಧರ ಪರಿಣಮನವನ್ನು ಮನ್ನಿಸಿದರೆ ದ್ರವ್ಯವು ಪರಾಧೀನವಾಗುವುದು.

ಈಗಂತೂ ಆತ್ಮನ ಹೆಸರಿನಲ್ಲಿ ಬೇಕಾದಷ್ಟು ಮಾತುಗಳನ್ನು ಆಡುತ್ತಾರೆ. ಸಾಧಾರಣ ಮನುಷ್ಯರಿಗೆ ಎಲ್ಲವೂ ಸಮಾನವೆನಿಸುತ್ತದೆ. ಯಾವ ಪ್ರಕಾರ ಕೆರೆಯು ನೀರಿನ ಸಪಾಟಿಯು ಮೇಲಿನಿಂದ ಸಮಾನವಾಗಿ ತೋರುತ್ತದೆ ಆದರೆ ನೀರು ತೀರದಲ್ಲಿ ಅರ್ಧಅಡಿ ಆಳವಿದ್ದರೆ ಮಧ್ಯದಲ್ಲಿ ಇಪ್ಪತ್ತುಅಡಿ ಆಳವಿರುತ್ತದೆ ಅದೇ ಪ್ರಕಾರ ಬೇಕಾದಷ್ಟು ಆತ್ಮನ ಮಾತುಗಳನ್ನಾಡಲಾರಂಭಿಸಿದರೆ ಆ ಜ್ಞಾನಿಗಳಿಗೆ ಸಮಾನವೆನಿಸುತ್ತದೆ, ಆದರೆ ಅದರಲ್ಲಿ ದೊಡ್ಡ ವ್ಯತ್ಯಾಸವಿದೆ. ಆಳದಲ್ಲಿಳಿದರೆ ಅರಿವು ಮೂಡಿಬರುವಂತಿದೆ. ತಾನು ಎಲ್ಲಿ ವಿಸಂಧಿ ಮಾಡುತ್ತಾನೆಂಬುದರ ಅರಿವು ಉಪದೇಶಕನಿಗೆ ಕೂಡ ಇರುವುದಿಲ್ಲ.

ಉದಯ, ಉಪಶಮ, ಕ್ಷಯೋಪಶಮ ಮತ್ತು ಕ್ಷಾಯಿಕಭಾವಗಳ ಕರ್ತೃವು ಸ್ವಯಂ ಆತ್ಮನಿದ್ದಾನೆಂದು ಹೇಳಿದೆ. ಆಗ ವ್ಯವಹಾರವು ಬೇರೆ ವಸ್ತುವಿದೆ. ವ್ಯವಹಾರ ಅಥವಾ ನಿಮಿತ್ತವನ್ನು ಹಾರಿಸಿದರೆ ಉಪಾದಾನವು ಕೂಡ ಹಾರಿಹೋಗುತ್ತದೆ ಮತ್ತು ನಿಮಿತ್ತದ ಕಾರಣದಿಂದ ಉಪಾದಾನದಲ್ಲಿ ಕಾರ್ಯವಾಗುತ್ತದೆಯೆಂದು ಮನ್ನಿಸಿದರೆ ಎರಡು ವಸ್ತುಗಳು ಒಂದಾಗಿ ಹೋಗುತ್ತವೆ. ಚಾರಿತ್ರದಶೆಯ ಸಮಯದಲ್ಲಿ ನಗ್ನಾವಸ್ಥೆಯು ನಿಮಿತ್ತವಿದ್ದರೂ ಕೂಡ ನಗ್ನಾವಸ್ಥೆಯ ಕಾರಣದಿಂದ ಚಾರಿತ್ರವಿಲ್ಲ. ಅದೇ ಪ್ರಕಾರ ಚಾರಿತ್ರದ ಸಮಯದಲ್ಲಿ ನಗ್ನಾವಸ್ಥೆಯಾದಲ್ಲದೆ ಇರುವುದಿಲ್ಲ. ಕೇವಲಜ್ಞಾನ ಪಡೆದುಕೊಂಡಾಗ ಕೇವಲಜ್ಞಾನಾವರಣೀಯ ಕರ್ಮವು ಹೊರಡಬೇಕಾಗುತ್ತದೆ ಎಂಬುದಾಗಿಲ್ಲ. ಆದರೆ ತನ್ನ ಕಾರಣದಿಂದ ಅದು ಹೊರಟುಹೋದಲ್ಲದೆ ಇರುವುದೇ ಇಲ್ಲ.

ಜೀವನಿಗೆ ರಾಗವಾಗುತ್ತದೆ ಅದರಲ್ಲಿ ರಾಗದ ಅಸ್ತಿತ್ವದ ಬಲವಿದೆ ? ರಾಗದ ಬಲವಿದೆ ? ಅಥವಾ ತ್ರಿಕಾಲೀ ಜ್ಞಾಯಕಸ್ವಭಾವದ ಬಲವಿದೆ ? ದೃಷ್ಟಿಯು ಒಂದು ಸಮಯದ ಜ್ಞಾನಪರ್ಯಾಯವನ್ನು ಕೂಡ ಸ್ವೀಕರಿಸುವುದಿಲ್ಲವೆಂದಮೇಲೆ ರಾಗವನ್ನೆಲ್ಲಿಂದ ಸ್ವೀಕರಿಸುವುದು ?

ನಿಮಿತ್ತದ ಕಾರಣದಿಂದ ರಾಗವಾಗುತ್ತದೆ, ರಾಗದ ಕಾರಣದಿಂದ ಜ್ಞಾನವಾಗುತ್ತದೆ, ಆಂಶಿಕಪರ್ಯಾಯದಿಂದ ಲಾಭವಾಗುತ್ತದೆಯೆಂಬೆಲ್ಲ ಮನ್ನಣೆಗಳು ವಿರುದ್ಧವಿವೆ. ನಾನು ತ್ರಿಕಾಲ ಜ್ಞಾನಸ್ವಭಾವಿಯಿದ್ದೇನೆಂಬ ಅರಿವಾದೊಡನೆ ಒಂದು ಸಮಯದ ಪರ್ಯಾಯದಲ್ಲಿ ಯಾವ ರಾಗ ವರ್ತಿಸುತ್ತದೆ ; ಯಾವ ನಿಮಿತ್ತವಿರುತ್ತದೆ ಅದೆಲ್ಲದರ ಜ್ಞಾನವು ಯಥಾರ್ಥವಾಗಿ ಹೋಗುತ್ತದೆ.

ಇಲ್ಲಿ ಗಾಥೆಯೊಳಗೆ ಕರ್ಮವನ್ನು ರಾಗ-ದ್ವೇಷ ಮೊದಲಾದ ಪರಿಣಾಮದ ಕರ್ತೃವೆಂದು ವ್ಯವಹಾರದಿಂದ ಹೇಳಿದೆ ಕರ್ಮದಲ್ಲಿ ಕೂಡ ಕರ್ಮದ ಕಾರಣದಿಂದ ಉದಯ, ಉಪಶಮ, ಕ್ಷಯೋಪಶಮ ಮತ್ತು ಕ್ಷಯದ ಅವಸ್ಥೆಯಾಗುತ್ತದೆ ದ್ರವ್ಯಕರ್ಮವು ತನ್ನ ಶಕ್ತಿಯಿಂದ ಆ ರೂಪದಿಂದ ಪರಿಣಮಿಸುತ್ತದೆ. ಆತ್ಮನು ಅದರ ನಿಮಿತ್ತ ಪಡೆದು

ತನ್ನಲ್ಲಿ ಪರಿಣಾಮ ಮಾಡುತ್ತಾನೆ. 'ನಿಮಿತ್ತ ಪಡೆದು' ಎಂದರೆ ನಿಮಿತ್ತವು ಮಾಡಿಸುವುದಿಲ್ಲ, ಆದರೆ ನಿಮಿತ್ತದ ಮೇಲೆ ಲಕ್ಷ್ಯ ಮಾಡಿ ರಾಗ-ದ್ವೇಷಗಳನ್ನು ಮಾಡುತ್ತಾನೆ. ನಿಮಿತ್ತ ಮತ್ತು ನೈಮಿತ್ತಿಕದಲ್ಲಿ ಸಮಯಭೇದವಿಲ್ಲ. ಜೀವನದು ಆ ರೂಪವಾಗುವ ಯೋಗ್ಯತೆಯಿದೆ ಮತ್ತು ಎದುರಿಗೆ ಅಂಥದೇ ಕರ್ಮದ ನಿಮಿತ್ತವಿದೆ. ಇಲ್ಲಿ ಉಪಾದಾನ-ನಿಮಿತ್ತದವ್ಯಾಖ್ಯೆ ಮಾಡಿದ್ದಾರೆ. ವ್ಯವಹಾರನಯದಿಂದ ದ್ರವ್ಯಕರ್ಮವನ್ನು ನಾಲ್ಕು ಭಾವಗಳ ಕರ್ತೃವೆಂದು ತಿಳಿಯಬೇಕು.

**ಪ್ರಶ್ನೆ :-** ವ್ಯವಹಾರನಯವು ಅಭೂತಾರ್ಥವಿದೆಯಲ್ಲವೇ ?

**ಉತ್ತರ :-** ತ್ರಿಕಾಲದೃಷ್ಟಿಯಿಂದ ವ್ಯವಹಾರನಯವು ಅಭೂತಾರ್ಥವಿದೆಯೆಂಬುದು ಸರಿಯಿದೆ. ಆದರೆ ವ್ಯವಹಾರನಯದ ವಿಷಯವೇ ಇಲ್ಲವೆನ್ನುವಂತಿಲ್ಲ. ಒಂದು ಸಮಯದ ಪರ್ಯಾಯವಿದೆ, ರಾಗವಿದೆ, ನಿಮಿತ್ತವಿದೆ ಅವನ್ನು ವ್ಯವಹಾರನಯವು ತಿಳಿಯುತ್ತದೆ. ಆತ್ಮನು ನಿಶ್ಚಯದಿಂದ ರಾಗ-ದ್ವೇಷಗಳ ಕರ್ತೃವಿದ್ದಾನೆ, ವ್ಯವಹಾರದಿಂದ ಕರ್ಮವು ರಾಗ-ದ್ವೇಷಗಳ ಕರ್ತೃವಿದೆ, ಆದರೆ ಕರ್ಮವಿದೆ ಅದಕ್ಕಾಗಿ ರಾಗ-ದ್ವೇಷಗಳಾಗುತ್ತವೆಯೆಂದು ಮನ್ನಿಸಿದರೆ ವ್ಯವಹಾರವು ಸ್ವಯಂ ನಿಶ್ಚಯವಾಗಿ ಬಿಡುತ್ತದೆಯೆಂದಮೇಲೆ ಅದು ಅಸತ್ಯವಿದೆ. ತನ್ನ ಪರ್ಯಾಯದ ನಿಶ್ಚಯಕರ್ತೃವು ಸ್ವಯಂ ಇದ್ದು ಆ ಸಮಯದೊಳಗೆ ನಿಮಿತ್ತದಲ್ಲಿ ಕರ್ಮದ ಪರ್ಯಾಯವು ಅದಕ್ಕೆ ಅನುಕೂಲವಿರುತ್ತದೆ, ಸಮಯ ಭೇದವಿಲ್ಲ. ಈ ಪ್ರಕಾರ ನಿಮಿತ್ತ-ನೈಮಿತ್ತಿಕ ಸಂಬಂಧದ ಜ್ಞಾನ ಮಾಡಿಸಿದೆ. ಅದಕ್ಕಾಗಿ ನಿಮಿತ್ತಬುದ್ಧಿ ಬಿಡುವುದು, ರಾಗಬುದ್ಧಿ ಬಿಡುವುದು ಮತ್ತು ಅಭೇದದೃಷ್ಟಿ ಹಾಗೂ ಜ್ಞಾನ ಮಾಡಿಕೊಂಡು ಭೇದಜ್ಞಾನ ಮಾಡುವುದು ಅದು ಅದರ ಫಲವಿದೆ.

೫೮ನೇ ಗಾಥೆಯಲ್ಲಿ ನಾಲ್ಕೂ ಭಾವಗಳನ್ನು ಕರ್ಮಕೃತವೆಂದು ಹೇಳಲಾಗಿದೆ ಅಲ್ಲಿ ಕರ್ಮದ ನಿಮಿತ್ತವನ್ನು ತಿಳಿಸಿಕೊಡುವುದಕ್ಕಾಗಿ ಹಾಗೆ ಹೇಳಿದೆ, ಆದರೆ ಕರ್ಮವನ್ನು ಸರ್ವಥಾ ಪ್ರಕಾರದಿಂದ ಜೀವದ ಭಾವಗಳ ಕರ್ತೃವೆಂದು ಹೇಳಿದರೆ ದೋಷವು ಬರುತ್ತದೆಯೆಂಬ ಕಥನವನ್ನು ಈಗ ಮಾಡಲಾಗುತ್ತದೆ. ಆರಂಭದಲ್ಲಿ ಗಾಥೆ ಹೇಳುತ್ತರೆ,-

ಭಾವೋ ಜದಿ ಕಮ್ಮಕದೋ ಅತ್ತಾ ಕಮ್ಮಸ್ಸ ಹೋದಿ ಕಿಧ ಕತ್ತಾ ।
ಣ ಕುಣದಿ ಅತ್ತಾ ಕಿಂಚಿ ವಿ ಮುತ್ತಾ ಅಣ್ಣಂ ಸಗಂ ಭಾವಂ ॥೫೯॥

**ಭಾವಕರ್ಮ ಕೃತವಾದರೆ ಆತ್ಮ ಕರ್ಮದ ಕರ್ತೃವಾಗಬೇಕದು ಹೇಗೆ ಸಾಧ್ಯ ।**
**ಜೀವನಂತೂ ತನ್ನ ಭಾವಗಳ ಬಿಟ್ಟು ಬೇರಾವುದನೆಂದು ತಾ ಮಾಡಲಾರನು ॥೫೯॥**

ಎಲ್ಲ ಪ್ರಕಾರದಿಂದ ಭಾವಕರ್ಮವು ದ್ರವ್ಯಕರ್ಮದ ಮೂಲಕ ಮಾಡಿದ್ದು ಇದ್ದರೆ ಜೀವನು ಹೇಗೆ ಭಾವ ಕರ್ಮವನ್ನು ಮಾಡುವವನಾಗುತ್ತಾನೆ.

ಆತ್ಮನಲ್ಲಿ ರಾಗ-ದ್ವೇಷದ ವಿಕಾರಭಾವಗಳಾಗುತ್ತವೆ ಅಥವಾ ಆತ್ಮನ ಜ್ಞಾನ ಮಾಡಿಕೊಂಡು ಉಪಶಮ, ಕ್ಷಯೋಪಶಮ ಅಥವಾ ಕ್ಷಾಯಿಕಭಾವಗಳಾಗುವುದು ಅದು ಆತ್ಮನ ಕರ್ತವ್ಯವಿದೆ, ಅದು ಆತ್ಮನ ಭಾವಕರ್ಮವಿದೆ, ಅದು ಆತ್ಮನ ಪರ್ಯಾಯದಲ್ಲಿ ಆಗುತ್ತದೆ. ಅದರಲ್ಲಿ ಕರ್ಮವು ನಿಮಿತ್ತವಿದೆ, ವಿಕಾರದ ಸಮಯದಲ್ಲಿ ಕರ್ಮದ ಉದಯರೂಪವಾದ ನಿಮಿತ್ತ, ಉಪಶಮದ ಸಮಯದಲ್ಲಿ ಕರ್ಮದ ಉಪಶಮರೂಪವಾದ ನಿಮಿತ್ತ ಮೊದಲಾದ ಪ್ರಕಾರದಿಂದ ನಿಮಿತ್ತಗಳಿರುವುದರಿಂದ ಕರ್ಮವನ್ನು ರಾಗ-ದ್ವೇಷಗಳ ಪರ್ಯಾಯದ ಹಾಗೂ ಸಮ್ಯಗ್ದರ್ಶನರೂಪವಾದ ಧರ್ಮಪರ್ಯಾಯದ ಎಂದರೆ ಭಾವಕರ್ಮದ ಕರ್ತೃವೆಂದು ಹೇಳಲಾಗಿದೆ. ಆದರೆ ದ್ರವ್ಯಕರ್ಮವು ಎಲ್ಲ ಪ್ರಕಾರದಿಂದ ಭಾವಕರ್ಮದ ಕರ್ತೃವಿದೆಯೆಂದು ಯಾರಾದರೂ ಹೇಳಿದರೆ ರಾಗರೂಪಿವಿಕಾರಿಭಾವಕರ್ಮದ ಅಥವಾ ಧರ್ಮರೂಪದ ನಿರ್ವಿಕಾರೀ ಭಾವಕರ್ಮದ ಕರ್ತೃವು ಆತ್ಮನು ಉಳಿಯಲಿಲ್ಲ.

**ಭಾವಾರ್ಥ :-** ಕರ್ಮದ ಉದಯದ ಪ್ರಕಾರ ರಾಗ-ದ್ವೇಷಗಳನ್ನು ಮಾಡಬೇಕಾಗುತ್ತದೆ ಅಥವಾ ಕರ್ಮವು ಕಡಿಮೆಯಾದರೆ ಧರ್ಮವಾಗುತ್ತದೆಯೆಂದು ಅಜ್ಞಾನೀ ಜೀವನು ಹೇಳುತ್ತಾನೆ. ಆದರೆ ದ್ರವ್ಯಕರ್ಮವನ್ನು ಸರ್ವಥಾ ಔದಯಿಕ ಮೊದಲಾದ ಭಾವಗಳ ಕರ್ತೃವೆಂದು ಹೇಳಹೋದರೆ ಆತ್ಮನು ವಿಕಾರ ಮಾಡುವವನಾಗಿ ಉಳಿಯಲಿಲ್ಲ. ದ್ರವ್ಯಕರ್ಮವು ವಿಕಾರದ ಕರ್ತೃವಾದರೆ ಆತ್ಮನ ಪರ್ಯಾಯದಲ್ಲಿ ಸಂಸಾರವು ಸಿದ್ಧವಾಗುವುದಿಲ್ಲ. ಮತ್ತು ಕರ್ಮವು ಆತ್ಮನಲ್ಲಿ ಸಮ್ಯಕ್ತ್ವ ಮತ್ತು ಚಾರಿತ್ರವನ್ನು (ಎಂದರೆ ಉಪಶಮ ಹಾಗೂ ಕ್ಷಯೋಪಶಮಭಾವವನ್ನು) ಪ್ರಕಟಪಡಿಸಿದರೆ ಸಾಧಕದಶೆಯು ಉಳಿಯುವುದಿಲ್ಲ ಮತ್ತು ಕರ್ಮದ ಕ್ಷಾಯಿಕಭಾವವನ್ನು ಪ್ರಕಟಪಡಿಸಿದರೆ ಮೋಕ್ಷವು ಉಳಿಯುವುದಿಲ್ಲ, ಅದಕ್ಕಾಗಿ ಆ ಮಾತುಗಳು ಅಸತ್ಯವಿವೆ.

ಅಥವಾ ಆತ್ಮನು ದ್ರವ್ಯಕರ್ಮದ ಕರ್ತೃವಿದ್ದಾನೆ ಅದಕ್ಕಾಗಿ ಸಂಸಾರದ ಅಭಾವವಾಗುವುದಿಲ್ಲವೆಂದು ಹೇಳಿದರೆ ಜ್ಞಾನಾವರಣೀಯ, ದರ್ಶನಾವರಣೀಯ ಕರ್ಮಗಳು ಜಡದ ಪರ್ಯಾಯಗಳಿದ್ದು ಆತ್ಮನು ಜಡದ ಅವಸ್ಥೆಯನ್ನು ಏಕೆ ಮಾಡುವನು ? ಜಡವಂತೂ ಆತ್ಮನಿಂದ ಬೇರೆಯಿದೆ ಅದಕ್ಕಾಗಿ ಆತ್ಮನು ಕರ್ಮವನ್ನು ಮಾಡುವುದಿಲ್ಲವೆಂದು ಅವರಿಗೆ ಹೇಳಲಾಗುತ್ತದೆ.

ಏಕೆಂದರೆ ಜೀವದ್ರವ್ಯವಿದೆ ಅದು ತನ್ನ ಭಾವಕರ್ಮವನ್ನು ಹೊರತುಪಡಿಸಿ ಬೇರೆ ಯಾವುದೇ ಪರದ್ರವ್ಯ ಸಂಬಂಧದ ಭಾವವನ್ನು ಮಾಡುವುದಿಲ್ಲ.

ಕಾರಣವೇನೆಂದರೆ ಜೀವನು ತನ್ನಲ್ಲಿ ರಾಗ-ದ್ವೇಷಗಳರೂಪದ ಭಾವಕರ್ಮ, ಉಪಶಮ ಸಮ್ಯಗ್ದರ್ಶನರೂಪದ ಭಾವಕರ್ಮ, ಕ್ಷಯೋಪಶಮ ಜ್ಞಾನಾದಿಗಳರೂಪದ ಭಾವಕರ್ಮ, ಅಥವಾ ಕ್ಷಾಯಿಕ ಕೇವಲಜ್ಞಾನಾದಿಗಳರೂಪದ ಭಾವಕರ್ಮಗಳನ್ನು ಮಾಡುತ್ತಾನೆ, ಆದರೆ ಪರದ್ರವ್ಯದ ಅವಸ್ಥೆಯನ್ನು ಮಾಡುವುದಿಲ್ಲ. ಆತ್ಮನು ಶರೀರವನ್ನು ಮಾಡುವುದು ಅಥವಾ ಕರ್ಮವನ್ನು ಕಟ್ಟಿಕೊಳ್ಳುತ್ತಾನೆಂಬುದು ಸಂಭವಿಸುವುದಿಲ್ಲ ತನ್ನಲ್ಲಿ ಶುಭ-ಅಶುಭ ಭಾವಗಳನ್ನು ಮಾಡುವನು ಅಥವಾ ಆತ್ಮನ ಜ್ಞಾನ ಮಾಡಿಕೊಂಡು ಸಮ್ಯಗ್ದರ್ಶನ ಪ್ರಕಟಮಾಡುವನು ಮತ್ತು ಕೇವಲಜ್ಞಾನವನ್ನು ಅಥವಾ ಯೋಗದ ಕಂಪನವನ್ನು ಮಾಡುವನು ಆದರೆ ಆತ್ಮನು ದೇಹ, ಮನಸ್ಸು, ವಾಣಿಯ ಕ್ರಿಯೆಗಳನ್ನು ಮಾಡುವ ಸಾಧ್ಯತೆಯಿಲ್ಲ.

ಕರ್ಮದ ನಿಮಿತ್ತ ತಿಳಿಸುವ ಸಲುವಾಗಿ ಕರ್ಮವು ರಾಗ-ದ್ವೇಷ ಮೊದಲಾದ ಭಾವಗಳ ಕರ್ತೃವಿದೆಯೆಂದು ೫೮ನೇ ಗಾಥೆಯಲ್ಲಿ ಹೇಳಲಾಗಿದೆ. ಆದರೆ ಇಲ್ಲಿ ೫೯ನೇ ಗಾಥೆಯಲ್ಲಿ ಔದಯಿಕ, ಉಪಶಮ, ಕ್ಷಯೋಪಶಮ ಅಥವಾ ಕ್ಷಾಯಿಕಭಾವರೂಪದ ಕರ್ಮಗಳು ಆತ್ಮನವಿವೆ. ಆತ್ಮನು ಪರದ್ದೇನೂ ಮಾಡುವುದಿಲ್ಲ ಅದರಂತೆ ಪರಪದಾರ್ಥಗಳು ಕೂಡ ಆತ್ಮನದೇನೂ ಮಾಡುವುದಿಲ್ಲವೆಂದು ಸ್ಪಷ್ಟಪಡಿಸಲಾಗಿದೆ.

**ಭಾವಾರ್ಥ :-** ಇಲ್ಲಿ ಸ್ಪಷ್ಟ ಮಾಡುತ್ತಾರೆ. ಭಗವಂತರ ಶಾಸ್ತ್ರದಲ್ಲಿ ಕಾರ್ಯದ ಎರಡು ಕಾರಣಗಳನ್ನು ಹೇಳಿದ್ದಾರೆ. ಆತ್ಮನಲ್ಲಿ ದ್ರವ್ಯ ಮತ್ತು ಗುಣಗಳಂತೂ ತ್ರಿಕಾಲವಿವೆ. ಅವುಗಳಲ್ಲಿ ಕಾರ್ಯವಿಲ್ಲ, ಆದರೆ ಸಮಯ ಸಮಯಕ್ಕೆ ಪರ್ಯಾಯಗಳು ಉತ್ಪನ್ನವಾಗುತ್ತವೆ ಅದು ಕಾರ್ಯವಿದೆ ಮತ್ತು ಆ ಕಾರ್ಯದ ಉತ್ಪತ್ತಿಯ ಸಲುವಾಗಿ ಎರಡು ಕಾರಣಗಳಿವೆ. ಅದರಲ್ಲಿ ಒಂದು ಉಪಾದಾನ ಕಾರಣವಿದ್ದರೆ ಇನ್ನೊಂದು ನಿಮಿತ್ತ ಕಾರಣವಿದೆ. ದ್ರವ್ಯದ ಶಕ್ತಿಯ ಹೆಸರು ಉಪಾದಾನವಿದೆ. ಹಿಟ್ಟಿನಲ್ಲಿ ರೊಟ್ಟಿಯಾಗುವ ಶಕ್ತಿಯಂತೂ ಸ್ಥಾಯಿಯಿದೆ, ಆದರೆ ರೊಟ್ಟಿಯಾಗುವ ಶಕ್ತಿಯು ಯಾವ ಸಮಯದ ಪರ್ಯಾಯದಲ್ಲಿರುತ್ತದೆ ಅದೇ ಸಮಯದಲ್ಲಿ ರೊಟ್ಟಿಯರೂಪದ ಅವಸ್ಥೆಯಾಗುತ್ತದೆ. ಆದರೆ ಸ್ತ್ರೀ ಹಾಗೂ ಲಟ್ಟಣಿಗೆಯಿಂದ ರೊಟ್ಟಿಯಾಗುವುದಿಲ್ಲ ಸ್ತ್ರೀ ಮತ್ತು ಲಟ್ಟಣಿಗೆ ನಿಮಿತ್ತಮಾತ್ರವಿವೆ. ಯಾವ ಪ್ರಕಾರ ಕೊಡವಾಗುವಲ್ಲಿ ಮೃತ್ತಿಕೆಯಪಿಂಡದ ಶಕ್ತಿಯು ಉಪಾದಾನ ಕಾರಣವಿದೆ ಮತ್ತು ಕುಂಭಕಾರ ಚಕ್ರ ಮೊದಲಾದವು ನಿಮಿತ್ತ ಕಾರಣವಿವೆ ಕುಂಭಕಾರನ ಕಾರಣದಿಂದ ಕೊಡವಾಗುವುದಿಲ್ಲ, ಹಾಗಾದರೆ ಕುಂಭಕಾರನಿಗೆ ಪ್ರತಿಯಾಗಿ ವೀತರಾಗನಿಮಿತ್ತವೇಕಿಲ್ಲ ?

ಸೋದರನೇ ! ವೀತರಾಗೀ ಆತ್ಮನು ಕೊಡದ ರಾಗ ಮಾಡುವುದು, ಅಂಗಡಿಯ ರಾಗ ಮಾಡುವುದು ಹಾಗೆ ಸಂಭವಿಸುವುದಿಲ್ಲ. ಕೊಡದಲ್ಲಿ ಕುಂಭಕಾರನ ರಾಗವು ನಿಮಿತ್ತವಿದೆ ವೀತರಾಗನಿಗೆ ರಾಗವಿಲ್ಲದಿರುವುದರಿಂದ ಅಂಥ ನಿಮಿತ್ತ-ನೈಮಿತ್ತಿಕ ಸಂಬಂಧವಿರುವ ಸಾಧ್ಯತೆಯಿಲ್ಲ.

ಯಾವ ಜೀವನು ಕೇವಲೀಭಗವಂತ ಅಥವಾ ಯಾರು ವೀತರಾಗರಿದ್ದಾರೆ ಅವರ ಸ್ವರೂಪವು ರಾಗವೆಂದು ಹೇಳುವನು, ತೀರ್ಥಂಕರಭಗವಂತರು ಮನೆಯಲ್ಲಿರುತ್ತಾರೆಂದು ಹೇಳುವನು, ಸ್ತ್ರೀಗೆ ಕೇವಲಜ್ಞಾನವಾಗುತ್ತದೆಂದು ಹೇಳುವನು, ಶುಭರಾಗದಿಂದ ಕೇವಲಜ್ಞಾನ ಪಡೆದರೆಂದು ಹೇಳುವನು ಮತ್ತು ಕೇವಲಜ್ಞಾನವಾದ ನಂತರ ಮತ್ತೆ ರಾಗ ಮಾಡುತ್ತಾರೆಂದು ಮನ್ನಿಸುವವನು ಕೇವಲಜ್ಞಾನಿಗಳ ಸ್ವರೂಪವನ್ನು ತಿಳಿಯುವುದಿಲ್ಲ. ಸೋದರನೇ ! ಕೇವಲಜ್ಞಾನವಂತೂ ಆಂತರ್ಯದ ಸಾಧ್ಯವಿದೆ. ರಾಗರಹಿತರಾಗಿ ಆತ್ಮನಲ್ಲಿ ಮಗ್ನವಾಗುವುದರಿಂದ ಪ್ರಕಟವಾಗುತ್ತದೆ ಮತ್ತು ಕೇವಲಜ್ಞಾನವಾದನಂತರ ಭಗವಂತರಿಗೆ ರಾಗವಿರುವುದಿಲ್ಲ. ಅವರು ನೆಲದ ಮೇಲೆ ಕೂಡ ನಡೆಯುವುದಿಲ್ಲ ಆದರೆ ಆಗಸದಲ್ಲಿ ವಿಹಾರ ಮಾಡುತ್ತಾರೆ.

ಕೊಡವಾಗುವುದರಲ್ಲಿ ಮೂಲಕಾರಣವು ಮೃತ್ತಿಕೆಯಿದೆ ಮತ್ತು ಕುಂಭಕಾರ, ಚಕ್ರ ಮೊದಲಾದವು ಜತೆಯಲ್ಲಿ ಉಪಸ್ಥಿತವಿರುತ್ತವೆ ಅವು ನಿಮಿತ್ತದ ಕಾರಣವಿವೆ, ಆದ್ದರಿಂದ ನಿಜವಾಗಿ ಮೃತ್ತಿಕೆಯು ಕೊಡದ ಕರ್ತೃವಿದೆ. ಕಾರಣವೇನೆಂದರೆ ಮೃತ್ತಿಕೆಯಪಿಂಡವು ಪರಿವರ್ತನೆಗೊಂಡು ಕೊಡವಾಗುತ್ತದೆ. ಕುಂಭಕಾರನು ಪರಿವರ್ತನಗೊಂಡು ಕೊಡವಾಗುವುದಿಲ್ಲ. ವ್ಯವಹಾರದಿಂದ ಕುಂಭಕಾರನನ್ನು ಕರ್ತೃವೆಂದು ಹೇಳಲಾಗುತ್ತದೆ. ಸಹಕಾರೀ ಕಾರಣ ಎಂದರೆ ಜತೆಯಲ್ಲಿ ಇರುವಂಥವು, ಆದರೆ ಅವು ಒಂದು ಇನ್ನೊಂದರಲ್ಲಿ ಸೇರುವುದಿಲ್ಲ. ವ್ಯವಹಾರವು ಅಭೂತಾರ್ಥವಿದೆ ಎಂದರೆ ಅಸತ್ಯವಿದೆಯಲ್ಲವೇ? ಕುಂಭಕಾರನು ಕೊಡಮಾಡಿದನೆಂಬ ಮಾತು ಅಸತ್ಯವಿದೆ, ಆದರೆ ಕೊಡುವಾಗುವ ಸಮಯದಲ್ಲಿ ಕುಂಭಕಾರನ ಉಪಸ್ಥಿತಿಯಿತ್ತೆಂಬ ಮಾತು ಸತ್ಯವಿದೆ.

ನಿಜವಾಗಿ ಕುಂಭಕಾರನಂತೂ ತನ್ನ ಪರ್ಯಾಯದಲ್ಲಿ ಕೊಡ ನಿರ್ಮಾಣ ಮಾಡುವ ಪರಿಣಾಮ ಮಾಡುತ್ತಾನೆ. ಆದುದರಿಂದ ನಿಜವಾಗಿ ಅವನು ತನ್ನ ಪರಿಣಾಮದ ಕರ್ತೃವಿದ್ದಾನೆ. ಬರೆಯುವುದರ ಸಲುವಾಗಿ ಲೇಖನಿ ಓಡಿಸುವುದರಲ್ಲಿ ಬರೆಯುವ ರಾಗವನ್ನು ಮಾಡುವ ಜೀವನು ಕರ್ತೃವಿದ್ದಾನೆ ಲೇಖನಿಯು ನಿಮಿತ್ತಮಾತ್ರವಿದೆ ಮೊದಲಿನ ಗಾಥೆಯಲ್ಲಿ ಕರ್ಮವನ್ನು ರಾಗದ ಕರ್ತೃವೆಂದು ಹೇಳುವುದರ ಜತೆಯಲ್ಲಿ ಸಂಧಿ ಮಾಡಿ, ಸೋದರನೇ ! ಎಲ್ಲಿ ಕರ್ತೃವೆಂದು ಹೇಳಿದೆ ಅದು ನಿಮಿತ್ತದ ಅಪೇಕ್ಷೆಯಿಂದ ಹೇಳಿತು ಎಂದು ಸ್ಪಷ್ಟಪಡಿಸಲಾಗಿದೆ.

ಅಂಗುಲಿಯ ಕಾರಣದಿಂದ ಕೋಲು ಮೇಲಕ್ಕೇಳುತ್ತದೆಯೆಂದು ಅಜ್ಞಾನಿಯು ಮನ್ನಿಸುತ್ತಾನೆ. ಆದರೆ ಕೋಲು ಕೋಲಿನ ಕಾರಣದಿಂದ ಎತ್ತರವಾಗುತ್ತದೆ, ಅಂಗುಲಿಯ ಕಾರಣದಿಂದ ಆಗುವುದಿಲ್ಲ. ಎರಡು ಭಿನ್ನ ವಸ್ತುಗಳಿವೆ. ಅಜ್ಞಾನಿಯು ಸಂಯೋಗಗಳನ್ನು ನೋಡುತ್ತಾನೆಯೇ ವಿನಹ ಸ್ವಭಾವವನ್ನು ನೋಡುವುದಿಲ್ಲ, ಸಂಯೋಗೀ ವಸ್ತುಗಳನ್ನು ನೋಡುವಂಥವನು ಮತ್ತು ಸ್ವಭಾವವನ್ನು ನೋಡದಂಥವನು ತನ್ನ ಪರ್ಯಾಯದಲ್ಲಿ ಕೂಡ ಕರ್ಮದ ಕಾರಣದಿಂದ ವಿಕಾರ ಮತ್ತು ಪುಣ್ಯದ ಕಾರಣದಿಂದ ಧರ್ಮವಾಗುತ್ತದೆಯೆಂದು ಮನ್ನಿಸಿದಲ್ಲದೆ ಇರುವುದಿಲ್ಲ.

ಕುಂಭಕಾರನು ರಾಗ ಅಥವಾ ಇಚ್ಛೆ ಮಾಡುತ್ತಾನೆ ಅದು ಉದಯಭಾವವಿದೆ, ಅದರಲ್ಲಿ ಅವನು ಪರಿಣಮಿಸುತ್ತಾನೆ. ಅವನು ಅದರ ಕರ್ತೃವಿದ್ದಾನೆ, ಕೊಡದ ಕರ್ತೃ ಇಲ್ಲ. ಕೊಡದ ಪರಿಣಾಮದ ಕರ್ತೃವಿಲ್ಲ. ಆ ಕುಂಭಕಾರನು ಕೊಡವನ್ನು ನಿರ್ಮಾಣ ಮಾಡಿದ್ದರೆ ಕೊಡದ ಕಾಲವಿರಲಿಲ್ಲವೇನು ಮತ್ತು ಕುಂಭಕಾರನು ಬಂದು ಮಾಡಿದನೇನು ? ಆದರೆ ಸೋದರನೇ ! ಆ ಸಮಯದಲ್ಲಿ ಕೊಡದ ಕಾಲವಿತ್ತು. ಹಾಗಾದರೆ ಇಷ್ಟು ವರ್ಷಗಳವರೆಗೆ ಆ ಮೃತ್ತಿಕೆ ಬಿದ್ದುಕೊಂಡಿತ್ತು ಅದು ಕುಂಭಕಾರನಿಲ್ಲದೆ ಕೊಡದ ರೂಪವೇಕಾಗಿರಲಿಲ್ಲ ?ಸೋದರನೇ ! ಆಗ ಮೃತ್ತಿಕೆಯು

ಮೃತ್ತಿಕೆಯರೂಪದಿಂದ ಇರುವ ಅವಸ್ಥೆಯ ಕಾಲವಿತ್ತು. ಕೊಡದ ಕಾಲ ಬಂದಾಗ ಕೊಡವಾಯಿತು ಮತ್ತು ಕೊಡವಾಯಿತು ಆ ಸಮಯದಲ್ಲಿ ಕುಂಭಕಾರನಿರುವುದಿಲ್ಲವೆಂಬುದು ಸಂಭವಿಸುವುದಿಲ್ಲ ಮತ್ತು ಕುಂಭಕಾರನು ಕೊಡವನ್ನು ಮಾಡಿಬಿಟ್ಟನೆನ್ನುವುದು ಕೂಡ ಸಂಭವಿಸುವುದಿಲ್ಲ. ಆದುದರಿಂದ ಕುಂಭಕಾರನು ನಿಜವಾಗಿ ತನ್ನ ಪರಿಣಾಮದ ಕರ್ತೃ ಇದ್ದಾನೆ, ಮತ್ತು ವ್ಯವಹಾರದಿಂದ ಕೊಡದ ಕರ್ತೃ ಇದ್ದಾನೆ.

ಎಲ್ಲಿ ಉಪಾದಾನ ಕಾರಣವಿದೆ ಅಲ್ಲಿ ನಿಶ್ಚಯನಯವಿದೆ ಮತ್ತು ಎಲ್ಲಿ ನಿಮಿತ್ತಕಾರಣವಿದೆ ಅಲ್ಲಿ ವ್ಯವಹಾರ ನಯವಿದೆ. ಮೃತ್ತಿಕೆಯಿಂದ ಕೊಡವಾಯಿತು, ಆತ್ಮನಿಂದ ರಾಗವಾಯಿತು, ಶರೀರವು ಶರೀರದ ಕಾರಣದಿಂದ ನಡೆಯುವುದು ಅದು ಉಪಾದಾನ ಕಾರಣವಿದೆ ಮತ್ತು ಅದು ನಿಶ್ಚಯನಯದ ಕಥನವಿದೆ. ಕುಂಭಕಾರನಿಂದ ಕೊಡವಾಯಿತು ಗುರುವಿನಿಂದ ಜ್ಞಾನವಾಯಿತೆನ್ನುವುದು ಅದು ನಿಮಿತ್ತ ಕಾರಣವನ್ನು ತಿಳಿಸಿಕೊಡುತ್ತದೆ ಮತ್ತು ಅದು ವ್ಯವಹಾರನಯದ ಕಥನವಿದೆ.

ಆತ್ಮನು ಪರದ ಕ್ರಿಯೆ ಮಾಡುವ ಸಾಧ್ಯತೆಯಿಲ್ಲವೆಂದು ಹೇಳಿದೆಯಲ್ಲವೆ ಮತ್ತು ಈ ಸ್ವಾಧ್ಯಾಯಮಂದಿರ, ಜಿನಮಂದಿರಗಳೆಲ್ಲವೂ ಆದದ್ದು ಕಂಡುಬರುತ್ತವೆಯಲ್ಲವೇ ? ಸೋದರನೇ ! ಆ ಪುದ್ಗಲ ಪರಪದಾರ್ಥಗಳಲ್ಲಿ ಸ್ಕಂಧರೂಪದ ಅವಸ್ಥೆಯು ಪುದ್ಗಲ ಪರಿವರ್ತನದ ಕಾಲದಲ್ಲಿ ಆಗುತ್ತದೆ. ಜೀವದ ಶುಭರಾಗದಿಂದ ಆ ಅವಸ್ಥೆಯು ಆಗುವುದಿಲ್ಲ. ಮಂದಿರವಾಗುವುದರಲ್ಲಿ ಜೀವದ ರಾಗವು ನಿಮಿತ್ತ ಮಾತ್ರವಿದೆ. ಎರಡೂ ಬೇರೆ ಬೇರೆಯಾಗಿ ಪರಿಣಮಿಸುತ್ತವೆ. ಜೀವನು ತನ್ನಲ್ಲಿ ಶುಭರಾಗ ಮಾಡುತ್ತಾನೆ ಅದು ನಿಶ್ಚಯವಿದೆ, ಆದರೆ ಜೀವನು ಮಂದಿರವನ್ನು ಮಾಡುತ್ತಾನೆಂದು ಹೇಳುವುದು ಅದು ವ್ಯವಹಾರವಿದೆ ಮತ್ತು ಅದು ನಿಮಿತ್ತದ ಕಥನವಿದೆ. ರೋಗದ ಸಮಯದಲ್ಲಿ ಜೀವನು ದ್ವೇಷ ಮಾಡುತ್ತಾನೆ, ಆ ದ್ವೇಷದ ಪರಿಣಾಮವನ್ನು ಜೀವನು ಮಾಡಿರುವುದರಿಂದ ಅದು ನಿಶ್ಚಯವಿದೆ,. ಶರೀರವು ನಿಮಿತ್ತ ಮಾತ್ರವಿದೆ. ಶರೀರದಲ್ಲಿ ಶರೀರದ ಅವಸ್ಥೆಯಾಗುವುದು ಅದು ನಿಶ್ಚಯವಿದೆ. ಅದರಲ್ಲಿ ಆತ್ಮನು ನಿಮಿತ್ತಮಾತ್ರನಿದ್ದಾನೆ. ಆತ್ಮನು ತನ್ನಲ್ಲಿ ಧರ್ಮ ಅಥವಾ ಅಧರ್ಮದ ಪರಿಣಾಮ ಮಾಡುವುದು ಅದು ನಿಶ್ಚಯವಿದೆ. ಕಮದ ಪರಮಾಣುಗಳು ಕರ್ಮರೂಪದಿಂದ ಪರಿಣಮಿಸಿದವೆಂದು ಹೇಳುವುದು ಅದು ನಿಶ್ಚಯವಿದೆ ಮತ್ತು ಆತ್ಮನು ಕರ್ಮಗಳನ್ನು ಕಟ್ಟಿಕೊಂಡನೆಂದು ಹೇಳುವುದು ಅದು ವ್ಯವಹಾರವಿದೆ.

ಕೊಡವನ್ನು ನಿರ್ಮಾಣ ಮಾಡುವ ಕುಂಭಕಾರನ ರಾಗದ ಪರಿಣಾಮದ ಕರ್ತೃವು ಸರ್ವಥಾ ಪ್ರಕಾರದಿಂದ ನಿಶ್ಚಯನಯದಿಂದ ಕೊಡವಿದೆ ಮತ್ತು ಕುಂಭಕಾರನಿಲ್ಲದಿದ್ದರೆ ಅಚೇತನವಾದ ಕೊಡವು ಆತ್ಮನ ಪರಿಣಾಮದ ಕರ್ತೃವು ಯಾವ ರೀತಿಯಿಂದ ಆಗುವುದು ? ಕೊಡವಾಗುವುದಿತ್ತು ಅದಕ್ಕಾಗಿ ರಾಗ ಮಾಡಬೇಕಾಯಿತೆಂಬ ಮಾತು ಅಸತ್ಯವಿದೆ. ಕೊಡವು ಅಚೇತನವಿದೆ ಮತ್ತು ರಾಗವು ಚೇತನದ ಪರಿಣಾಮವಿದೆ. ಧಾನ್ಯದ ವ್ಯಾಪಾರದಲ್ಲಿ ದರವು ಕಡಿಮೆಯಾಗಿ ಹೋಗಿರುವುದರಿಂದ ದ್ವೇಷವಾದರೆ ಅದೇನು ಆ ಧಾನ್ಯವು ದ್ವೇಷ ಮಾಡಿಸಿತೇನು ? ಇಲ್ಲ. ಧಾನ್ಯವು ಅಚೇತನವಿದೆ, ರಾಗವು ಚೇತನವಿದೆ. ಅಚೇತನವಾದ ಧಾನ್ಯದಿಂದ ಜೀವದಲ್ಲಿ ದ್ವೇಷವಾಗುವುದಿಲ್ಲ, ಆದರೆ ಜೀವವು ಸ್ವಯಂ ದ್ವೇಷದ ಪರಿಣಾಮ ಮಾಡುತ್ತದೆ ಯಾವನೋ ಕತ್ತಿಯಿಂದ ಇರಿಯಲು ಬಂದರೆ ಅದರಲ್ಲಿ ಆ ಜೀವನು ದ್ವೇಷದ ಪರಿಣಾಮದ ಕರ್ತೃ ಇದ್ದಾನೆ ಆದರೆ ಕತ್ತಿಯ ಕರ್ತೃವಿಲ್ಲ ಅದೇ ಪ್ರಕಾರ ಜಡದ ಕಾರಣದಿಂದ ದ್ವೇಷವಾಯಿತೆಂಬುದಾಗಿ ಕೂಡ ಇಲ್ಲ. ಚೇತನದ್ರವ್ಯ ಎಂದರೆ ಆತ್ಮನು ತನ್ನ ಚೇತನ ಪರಿಣಾಮಗಳಾದ ಔದಯಿಕ, ಉಪಶಮ, ಕ್ಷಯೋಪಶಮ ಅಥವಾ ಕ್ಷಾಯಿಕ ಪರಿಣಾಮದ ಕರ್ತೃ ಇದ್ದಾನೆ. ಆದರೆ ಅಚೇತನವಾದ ಪರವಸ್ತುವು ಯಾವುದು ಜಡವಿದೆ ಅದು ಆತ್ಮನ ಚೇತನ ಪರಿಣಾಮದ ಕರ್ತೃವಿಲ್ಲ. ಅದೇ ಪ್ರಕಾರ ಆತ್ಮ ಮತ್ತು ಕರ್ಮಗಳ ಮಧ್ಯದಲ್ಲಿ ಕೂಡ ಉಪಾದಾನ ನಿಮಿತ್ತದ ಕಥನವನ್ನು ತಿಳಿಯಬೇಕು. ಜೀವನು ತನ್ನಲ್ಲಿ ವಿಕಾರೀ ಪರಿಣಾಮ ಮಾಡುವುದು ಅದು ಉಪಾದಾನ ಕಾರಣವಿದೆ ಮತ್ತು ಅದರಲ್ಲಿ

ಕರ್ಮವು ನಿಮಿತ್ತ ಕಾರಣವಿದೆ. ಕರ್ಮಗಳು ಸ್ವಯಂ ತಮ್ಮ ಕಾರಣದಿಂದ ಬಂಧಿಸಲ್ಪಡುವುದು ಅದು ಉಪಾದಾನ ಕಾರಣವಿದೆ. ಮತ್ತು ಆತ್ಮನ ರಾಗವು ಅದರಲ್ಲಿ ನಿಮಿತ್ತ ಕಾರಣವಿದೆ. ತನ್ನ ಪರಿಣಾಮದ ಕರ್ತೃವೆಂದು ಹೇಳುವುದು ಅದು ನಿಶ್ಚಯದಿಂದ ಇದೆ ಮತ್ತು ಕರ್ಮವನ್ನು ಕರ್ತೃವೆಂದು ಹೇಳುವುದು ಅದು ವ್ಯವಹಾರದಿಂದಿದೆಯೆಂದು ಇಲ್ಲಿ ೫೮-೫೯ನೇ ಗಾಥೆಯ ಸಂಧಿ ಮಾಡಿದ್ದಾರೆ.

ದ್ರವ್ಯಕರ್ಮವನ್ನು ಸರ್ವಥಾ ಪ್ರಕಾರದಿಂದ ಭಾವಕರ್ಮದ ಕರ್ತೃವೆಂದು ಮನ್ನಿಸುವುದರಲ್ಲಿ ಬಂದರೆ ಆತ್ಮನು ಭಾವಕರ್ಮದ ಕರ್ತೃವಾಗಿ ಹೋಗುವನು. ಜಡಕರ್ಮದ ಕಾರಣದಿಂದ ವಿಕಾರವಾದರೆ ಮತ್ತು ಕರ್ಮವು ದೂರ ಸರಿದರೆ ಧರ್ಮವಾಗುತ್ತದೆಯೆಂದು ಮನ್ನಿಸುವುದರಲ್ಲಿ ಬಂದರೆ ಆತ್ಮನು ಅಕರ್ತೃವಾಗುತ್ತಾನೆ ಮತ್ತು ಆ ದ್ರವ್ಯಕರ್ಮದಲ್ಲಿ ನಿಮಿತ್ತ ಯಾರಾಗುವುದು ? ಅದಕ್ಕಾಗಿ ಕರ್ಮದ ಕಾರಣದಿಂದ ರಾಗ-ದ್ವೇಷಗಳಾಗುವುದಿಲ್ಲ. ಆದರೆ ತನ್ನ ಕಾರಣದಿಂದ ಆಗುತ್ತವೆ ಅದರಲ್ಲಿ ದ್ರವ್ಯಕರ್ಮವು ನಿಮಿತ್ತಮಾತ್ರವಿದೆ.

ಆತ್ಮನಲ್ಲಿ ಆಗುವ ವಿಕಾರೀಭಾವ ಅಥವಾ ಧರ್ಮಭಾವದ ಕರ್ತೃವು ಜಡಕರ್ಮವೇ ಇದ್ದರೆ ಯಾವ ನವೀನ ಕರ್ಮವು ಬಂಧವಾಗುತ್ತದೆ ಅದಕ್ಕೆ ನಿಮಿತ್ತ ಉಳಿಯುವುದಿಲ್ಲ ಮತ್ತು ಆತ್ಮನು ಅಕರ್ತೃವೆಂದು ನಿಶ್ಚಿತನಾಗುತ್ತಾನೆ. ೫೮ನೇ ಗಾಥೆಯಲ್ಲಿ ಔದಯಿಕ ಮೊದಲಾದ ಭಾವಗಳನ್ನು ಕರ್ಮಕೃತವೆಂದು ಹೇಳಲಾಗಿತ್ತು. ಅದು ಕರ್ಮದ ಉಪಸ್ಥಿತಿಯನ್ನು ತಿಳಿಸಿಕೊಡುವ ಸಲುವಾಗಿ ಹೇಳಲಾಗಿತ್ತು. ಆದರೆ ಅದರಿಂದ ಕರ್ಮಗಳು ರಾಗ-ದ್ವೇಷಗಳನ್ನು ಮಾಡಿಸುತ್ತವೆಯೆಂದು ಅರ್ಥವಲ್ಲ. ೯೦ನೇ ಪುಟದಲ್ಲಿ 'ಯತೋನಿಶ್ಚಯನಯೇನಾತ್ಮಾ ಸ್ವಂ ಭಾವಮುಜ್ಝಿತ್ವಾನ್ಯತ್ಕಿಮಪಿ ಕರೋತೀತಿ'-ಎಂದು ಹೇಳಿದೆ. ಎಂದರೆ ನಿಶ್ಚಯನಯದಿಂದ ಆತ್ಮನು ತನ್ನ ಸ್ವಭಾವವನ್ನು ಹೊರತುಪಡಿಸಿ ಬೇರೆ ಏನನ್ನೂ ಮಾಡುವುದಿಲ್ಲ. ನಾಲ್ಕೂ ಭಾವಗಳನ್ನು ಇಲ್ಲಿ ಸ್ವಭಾವವೆಂದು ಹೇಳಿದೆ 'ಸ್ವಸ್ಯಭಾವನಮ್ ಇತಿ ಸ್ವಭಾವಃ' ತನ್ನಲ್ಲಿ ಆಗುವ ಪರಿಣಾಮವನ್ನು ಸ್ವಭಾವವೆಂದು ಹೇಳಿದೆ. ಅಜ್ಞಾನ, ಮಿಥ್ಯಾತ್ವ, ರಾಗ-ದ್ವೇಷಗಳ ರೂಪದ ಔದಯಿಕ ಭಾವಗಳನ್ನು ಸ್ವಯಂ ಮಾಡುತ್ತದೆ. ಆತ್ಮನ ಜ್ಞಾನ ಮಾಡಿಕೊಂಡು ಉಪಶಮಭಾವ ಅಥವಾ ಕ್ಷಯೋಪಶಮಭಾವ ದರ್ಶನ ಅಥವಾ ಚಾರಿತ್ರಗಳನ್ನು ಮಾಡುವುದು ಅದು ತನ್ನ ಕರ್ತವ್ಯವಿದೆ ಮತ್ತು ಸಂಪೂರ್ಣವಾದ ಶುದ್ಧಪರ್ಯಾಯವನ್ನು ಪ್ರಕಟ ಮಾಡುವುದು ಅದು ಕೂಡ ತನ್ನ ಕಾರ್ಯವಿದೆ. ನಾಲ್ಕೂ ಭಾವಗಳು ತನ್ನ ಸ್ವಭಾವವಿದ್ದು ಕರ್ಮವು ಆ ಭಾವಗಳನ್ನು ಮಾಡುವುದಿಲ್ಲ. ವಿಕಾರ ಮಾಡಿದರೆ ಕರ್ಮದ ಉದಯವು ನಿಮಿತ್ತವಿದೆ, ಧರ್ಮದಶೆ ಮಾಡಿದರೆ ಕರ್ಮದ ಉಪಶಮ ಅಥವಾ ಕ್ಷಯೋಪಶಮವು ನಿಮಿತ್ತವಿದೆ ಮತ್ತು ಕೇವಲಜ್ಞಾನ ಪ್ರಕಟ ಮಾಡಿದರೆ ಕರ್ಮದ ಅಭಾವವು ನಿಮಿತ್ತವಿದೆ. ಹೀಗೆ ನೈಮಿತ್ತಿಕವು ತನ್ನ ಪರ್ಯಾಯವಿದೆ ಅದರಲ್ಲಿ ಕರ್ಮವು ನಿಮಿತ್ತವಿದೆಯೆಂದು ತಿಳಿಸಿಕೊಡಲಾಗಿದೆ. ಆದರೆ ಒಂದು ಇನ್ನೊಂದರದೇನೂ ಮಾಡುವುದಿಲ್ಲ. ಆ ಕರ್ಮವು ಅದರ ಕರ್ತೃವಿದ್ದರೆ ಆತ್ಮನು ಅಕರ್ತೃವಾಗಿ ಬಿಡುತ್ತಾನೆ ಮತ್ತು ದ್ರವ್ಯಕರ್ಮದಲ್ಲಿ ನಿಮಿತ್ತ ಉಳಿಯುವುದಿಲ್ಲ. ಅದಕ್ಕಾಗಿ ಆತ್ಮನು ಸ್ವಯಂ ಭಾವಕರ್ಮ ಮಾಡುತ್ತಾನೆ, ಅದರ ನಿಮಿತ್ತದಿಂದ ದ್ರವ್ಯಕರ್ಮವು ಕಟ್ಟುತ್ತದೆ ಮತ್ತು ದ್ರವ್ಯಕರ್ಮದಿಂದ ಸಂಸಾರವಾಗುತ್ತದೆ. ಆದರೆ ದ್ರವ್ಯಕರ್ಮದ ಕರ್ತೃವು ಆತ್ಮನಿಲ್ಲ. ಏಕೆಂದರೆ ಆತ್ಮನು ತನ್ನ ಪರ್ಯಾಯವನ್ನು ಬಿಟ್ಟು ಜಡದಲ್ಲಿ ಹೋಗುವುದಿಲ್ಲ.

ಮತಿ-ಶ್ರುತಗಳ ಲಬ್ಧರೂಪವಾದ ಜ್ಞಾನವು ಪೂರ್ಣ ಆತ್ಮನಲ್ಲಿದೆ, ಆದರೆ ಕಣ್ಣುಗಳನ್ನು ಮುಚ್ಚಿದರೆ ಕಂಡುಬರುವುದಿಲ್ಲ ಮತ್ತು ಕಣ್ಣುಗಳನ್ನು ತೆರೆದರೆ ಗೋಚರಿಸುತ್ತದೆಯೆಂದು ಅಜ್ಞಾನಿಯು ಹೇಳುತ್ತಾನೆ. ಆದರೆ ಅವನ ಸಮಾಧಾನರೂಪವಾಗಿ ಹೇಳುತ್ತಾರೆ. ಮತಿ, ಶ್ರುತ, ಅವಧಿ, ಮನಃಪರ್ಯಾಯ ಮತ್ತು ಕೇವಲಜ್ಞಾನರೂಪದ ಭಾವಕರ್ಮಗಳ ಕರ್ತೃವು ಆತ್ಮನಿದ್ದಾನೆ. ಆತ್ಮನು ಕಣ್ಣುಗಳ ಮೂಲಕ ನೋಡುವುದಿಲ್ಲ. ಸ್ವಯಂ ನೋಡುವ ರೂಪದಿಂದ ಪರಿಣಮಿಸುತ್ತಾನೆ, ಜ್ಞಾನರೂಪದಿಂದ ಅಥವಾ ಅಜ್ಞಾನರೂಪದಿಂದ, ವಿಕಾರರೂಪದಿಂದ ಅಥವಾ ಅವಿಕಾರರೂಪದಿಂದ

ಸ್ವಯಂ ಪರಿಣಮಿಸುತ್ತಾನೆ ಪರದ್ದೇನೂ ಮಾಡುವುದಿಲ್ಲ ಮತ್ತು ಪರಪದಾರ್ಥಗಳು ಆತ್ಮನಲ್ಲಿ ಏನೂ ಮಾಡುವುದಿಲ್ಲ.

ಈಗ ಅದರ ಉತ್ತರರೂಪವಾಗಿ ಭಗವಾನ ಕುಂದಕುಂದಾಚಾರ್ಯದೇವರು ೬೦ನೇ ಗಾಥೆಯನ್ನು ಹೇಳುತ್ತಾರೆ,-

**ಭಾವೋ ಕಮ್ಮಣಿಮಿತ್ತೋ ಕಮ್ಮಂ ಪುಣ ಭಾವಕಾರಣಂ ಹವದಿ ।**
**ಣ ದು ತೇಸಿಂ ಖಲು ಕತ್ತಾ ಣ ವಿಣಾ ಭೂದಾ ದು ಕತ್ತಾರಂ ॥೬೦॥**

**ಜೀವಭಾವಕ್ಕೆ ಕರ್ಮನಿಮಿತ್ತವಿದ್ದು ಕರ್ಮಕ್ಕೆ ಜೀವಭಾವನಿಮಿತ್ತವಿದ್ದರೂ ।**
**ಅವೆರಡು ಪರಸ್ಪರ ಕರ್ತೃವಿಲ್ಲದೆ ಆಗುವಂತೆಯೂ ತಾನಿಲ್ಲ ॥೬೦॥**

ನಿಮಿತ್ತ ಮಾತ್ರವಿರುವುದರ ಕಾರಣವಾಗಿ ವ್ಯವಹಾರದಿಂದ ಜೀವಭಾವಕ್ಕೆ ಕರ್ಮವು ಕರ್ತೃವಿದೆ (ಔದಯಿಕ ಮೊದಲಾದ ಜೀವಭಾವಕ್ಕೆ ದ್ರವ್ಯಕರ್ಮವು ಕರ್ತೃವಿದೆ). ಕರ್ಮಕ್ಕೂ ಜೀವಭಾವವು ಕರ್ತೃವಿದೆ. ನಿಶ್ಚಯದಿಂದಂತೂ ಜೀವಭಾವಗಳ ಕರ್ತೃವು ಕರ್ಮವಿಲ್ಲ ಮತ್ತು ಕರ್ಮದ ಕರ್ತೃವು ಜೀವಭಾವಗಳಿಲ್ಲ. ಅವು (ಜೀವಭಾವ ಮತ್ತು ದ್ರವ್ಯಕರ್ಮಗಳು) ಕರ್ತೃವಿಲ್ಲದೆ ಆಗುತ್ತವೆಯೆಂಬುದಾಗಿಯೂ ಇಲ್ಲ. ಏಕೆಂದರೆ ನಿಶ್ಚಯದಿಂದ ಜೀವಪರಿಣಾಮಗಳ ಕರ್ತೃವು ಜೀವವಿದೆ ಮತ್ತು ಕರ್ಮಪರಿಣಾಮಗಳ ಕರ್ತೃವು ಕರ್ಮವಿದೆ-ಪುದ್ಗಲವಿದೆ.

ಜೀವವು ತನ್ನಲ್ಲಿ ರಾಗ-ದ್ವೇಷ ಮೊದಲಾದ ಔದಯಿಕಭಾವ ಮಾಡುತ್ತಿದ್ದರೆ ಅದರಲ್ಲಿ ಕರ್ಮದ ಉತ್ಪಾದದ ನಿಮಿತ್ತವಿದೆ. ಜೀವವು ತನ್ನಲ್ಲಿ ಕ್ಷಯೋಪಶಮಭಾವ ಮಾಡಿದರೆ ಇಂಥ ಕರ್ಮದ ಉತ್ಪಾದ ಮತ್ತು ಯಾವುದರದೋ ವ್ಯಯದ ನಿಮಿತ್ತವಿದೆ. ಜೀವವು ತನ್ನಲ್ಲಿ ಉಪಶಮಭಾವ ಮಾಡಿದ್ದರೆ ಇಂಥದೊಂದು ಕರ್ಮದ ವ್ಯಯದ ನಿಮಿತ್ತವಿದೆ. ಜೀವವು ತನ್ನಲ್ಲಿ ಕ್ಷಾಯಿಕಭಾವ ಮಾಡಿದರೆ ಇಂಥದೊಂದು ಕರ್ಮದ ಕ್ಷಯದ ನಿಮಿತ್ತವಿದೆ ತನ್ನ ಪರಿಣಾಮವು ತನ್ನ ಕಾರಣದಿಂದ ಆಗುತ್ತದೆ, ನಿಮಿತ್ತದ ಕಾರಣದಿಂದ ಆಗುವುದಿಲ್ಲ ಮತ್ತು ಜೀವವು ಭಾವ ಮಾಡಿದರೆ ಅದಕ್ಕಾಗಿ ಕರ್ಮಕ್ಕೆ ಬದಲಾಗಬೇಕಾಯಿತೆಂಬುದಾಗಿಯೂ ಇಲ್ಲ. ಆದರೆ ಜೀವವು ಭಾವ ಮಾಡುತ್ತದೆ ಆಗ ನಿಮಿತ್ತದಲ್ಲಿ ನಿಮಿತ್ತದ ಕಾರಣದಿಂದ ಬದಲಾವಣೆಯಾದಲ್ಲದೆ ಇರುವುದಿಲ್ಲ. ಕ್ಷಾಯಿಕಸಮ್ಯಕ್ತ್ವವಾಗುತ್ತದೆ ಆಗ ದರ್ಶನಮೋಹದ ವ್ಯಯವಾಗುತ್ತದೆ. ಕೇವಲಜ್ಞಾನವು ಪ್ರಕಟವಾಗುತ್ತದೆ ಆಗ ಕೇವಲಜ್ಞಾನಾವರಣೀಯದ ನಾಶವಾಗುತ್ತದೆ. ಮತ್ತು ಕೇವಲಜ್ಞಾನವನ್ನು ಪ್ರಕಟಪಡಿಸದಿದ್ದರೆ ಕೇವಲಜ್ಞಾನಾವರಣೀಯದ ಉದಯವು ನಿಮಿತ್ತವಿದೆ.

**ಪ್ರಶ್ನೆ :-** ಮನುಷ್ಯನು ನಗುತ್ತಾನೆ, ಆಗ ಕನ್ನಡಿಯಲ್ಲಿ ಮನುಷ್ಯನು ನಗುತ್ತಿರುವುದು ಕಂಡುಬರುತ್ತದೆ. ಆದರೆ ಅತ್ತರೆ ಕಂಡುಬರುವುದಿಲ್ಲ.

**ಉತ್ತರ :-** ಸೋದರನೇ ! ಕನ್ನಡಿಯ ಪರ್ಯಾಯವು ಆ ರೂಪದಿಂದ ಆಗುವ ಕಾಲವಿತ್ತು ಅದಕ್ಕಾಗಿ ಆಗುತ್ತದೆ. ನಗುತ್ತಿರುವ ಮನುಷ್ಯನ ಕಾರಣದಿಂದ ಆ ಪರ್ಯಾಯವು ಆಗಿಲ್ಲ. ಕನ್ನಡಿಯು ಪ್ರದೀಪ್ತವಾಗುವುದರಿಂದ ಮನುಷ್ಯನು ಉರಿದುಹೋಗುವುದಿಲ್ಲ ಮತ್ತು ಮನುಷ್ಯನು ಪ್ರದೀಪ್ತವಾಗುವುದರಿಂದ ಕನ್ನಡಿಯು ಉರಿದುಹೋಗುವುದಿಲ್ಲ. ಏಕೆಂದರೆ ಎರಡೂ ಭಿನ್ನ ಭಿನ್ನವಾದ ವಸ್ತುಗಳಿವೆ. ಆದಾಗ್ಯೂ ನಿಮಿತ್ತ-ನೈಮಿತ್ತಿಕ ಸಂಬಂಧವು ಹೀಗಿದೆ ಯಾವ ಪ್ರಕಾರ ಆತ್ಮನು ರಾಗ ಮಾಡುತ್ತಾನೆ ಆಗ ಕರ್ಮದ ಉದಯವು ಇರುವುದಿಲ್ಲವೆಂಬುದು ಸಂಭವವಿಲ್ಲ ಮತ್ತು ವೀತರಾಗ ದಶೆಯರೂಪದ ಧರ್ಮವನ್ನು ಪ್ರಕಟ ಮಾಡುತ್ತಾನೆ ಆಗ ಆಯಾ ಕರ್ಮದ ಅಭಾವವು ಇರುವುದಿಲ್ಲವೆಂಬುದು ಸಂಭವಿಸುವುದಿಲ್ಲ. ಇಲ್ಲಿ 'ನಿಮಿತ್ತ ಪಡೆದು ಎಂಬ ಶಬ್ದದ ಪ್ರಯೋಗವಿದೆ. ನೈಮಿತ್ತಿಕ ಪರ್ಯಾಯವಾದಾಗ ನಿಮಿತ್ತವಿದೆ, ಕಾಲಭೇದವಿಲ್ಲವೆಂಬುದು ಅದರ ಅರ್ಥವಿದೆ. ಅದು ನಿಮಿತ್ತ-ನೈಮಿತ್ತಿಕ ಸಂಬಂಧವನ್ನು ತಿಳಿಸಿಕೊಡುತ್ತದೆ.

ಜೀವದಲ್ಲಿ ಔದಯಿಕ ಮೊದಲಾದ ಭಾವಗಳು ಕರ್ಮದ ನಿಮಿತ್ತ ಪಡೆದು ಆಗುತ್ತವೆ, ಮತ್ತು ಆ

ಜ್ಞಾನಾವರಣೀಯ ಮೊದಲಾದ ದ್ರವ್ಯಕರ್ಮಗಳು ಔದಯಿಕ ಮೊದಲಾದ ಭಾವಕರ್ಮಗಳಲ್ಲಿ ನಿಮಿತ್ತಗಳಾಗುತ್ತವೆ. ಜ್ಞಾನಾವರಣೀಯಕರ್ಮದ ಉದಯವು ಜ್ಞಾನದ ಹೀನಾವಸ್ಥೆಗೆ ನಿಮಿತ್ತವಿದೆ, ಜ್ಞಾನಾವರಣೀಯದ ಕ್ಷಯೋಪಶಮವು ಜ್ಞಾನದ ಕ್ಷಯೋಪಶಮಕ್ಕೆ ನಿಮಿತ್ತವಿದೆ ಮತ್ತು ಜ್ಞಾನವು ಕ್ಷಾಯಿಕ ಮಾಡಿದರೆ ಕರ್ಮದ ಅಭಾವರೂಪ ನಿಮಿತ್ತವೆಂದು ಹೇಳಲಾಗುತ್ತದೆ. ಆದಾಗ್ಯೂ ಒಂದು ಇನ್ನೊಂದರ ಕಾರಣದಿಂದ ಇಲ್ಲ ಶ್ರೇಣಿಕ ದೊರೆಯು ನರಕದಲ್ಲಿ ಹೋಗಿದ್ದಾನೆ, ಅವನು ನರಕದ ಆಯುಕರ್ಮದ ಅಥವಾ ಗತಿನಾಮಕರ್ಮದ ಕಾರಣದಿಂದ ಹೋಗಿಲ್ಲ, ಆದರೆ ತನ್ನ ಯೋಗ್ಯತೆಯ ಕಾರಣದಿಂದ ಹೋಗಿದ್ದಾನೆ. ಅದರಲ್ಲಿ ಕರ್ಮವು ನಿಮಿತ್ತಮಾತ್ರವಿದೆ. ಜೀವವು ವಿಕಾರ ಮಾಡಿದರೆ ಕರ್ಮದ ಬರುವಿಕೆಯು ಕರ್ಮದ ಕಾರಣದಿಂದ ಬರುವುದು ಮತ್ತು ಧರ್ಮದಶೆ ಮಾಡಿದರೆ ಕರ್ಮವು ಕರ್ಮದ ಕಾರಣದಿಂದ ಹೊರಟುಹೋಗುತ್ತದೆ. ಇನ್ನು ಸಂಪೂರ್ಣ ನಿರ್ವಾಣದಶೆಯನ್ನು ಪ್ರಕಟಪಡಿಸಿದರೆ ಸಮಸ್ತ ಕರ್ಮಗಳು ಹೊರಟುಹೋಗುತ್ತವೆ. ಆದಾಗ್ಯೂ ಪುದ್ಗಲ ಕರ್ಮವು ಭಾವಕರ್ಮದ ಕರ್ತೃವಿಲ್ಲ ಅದರಂತೆ ಜೀವವು ದ್ರವ್ಯಕರ್ಮದ ಕರ್ತೃವಿಲ್ಲ. ಆತ್ಮನು ಕರ್ಮವನ್ನು ಎಳೆದು ಉದಯದಲ್ಲಿ ತರುತ್ತಾನೆಂದು ಸಂಭವಿಸುವುದಿಲ್ಲ.ಜೀವನು ಕರ್ಮದ ಉದೀರಣ, ಅಪಕರ್ಷಣ ಮೊದಲಾದುವನ್ನು ಮಾಡಿದನೆಂಬ ಕಥನವು ಶಾಸ್ತ್ರಗಳಲ್ಲಿ ಬರುತ್ತದೆ ಅಲ್ಲಿ ಜೀವದ ಆ ಪ್ರಕಾರದ ಪುರುಷಾರ್ಥವನ್ನು ತಿಳಿಸಿಕೊಡುವುದರ ಸಲುವಾಗಿ ಇದೆ, ಆದರೆ ಜೀವನು ಆ ಕರ್ಮದ ಅವಸ್ಥೆಯನ್ನು ಹಾಗೆ ಮಾಡುತ್ತಾನೆಂಬುದು ಸಂಭವಿಸುವುದಿಲ್ಲ. ದರ್ಶನ-ಮೋಹದ ಉಪಶಮದಿಂದ ಯಾವ ಸಮ್ಯಕ್ತ್ವವು ಉತ್ಪನ್ನವಾಗುತ್ತದೆ ಅದನ್ನು ಪ್ರಥಮೋಪಶಮಸಮ್ಯಕ್ತ್ವವೆಂದು ಹೇಳುತ್ತಾರೆ. ಇಂಥ ವ್ಯಾಖ್ಯೆ ಬರುವೆಡೆಗಳಲ್ಲೆಲ್ಲ ಆತ್ಮನ ಪುರುಷಾರ್ಥವನ್ನು ತಿಳಿಸಿಕೊಡುವ ಉದ್ದೇಶವಿರುತ್ತದೆ. ಉಪಶಮ ಸಮ್ಯಗ್ದರ್ಶನವಾದರೆ ಕರ್ಮಗಳ ಸ್ಥಿತಿಯು ಹಿಂದು-ಮುಂದು ಆಗುತ್ತವೆಯೆಂಬ ಯಾವ ಕಥನವು ಬರುತ್ತದೆ ಅದು ವ್ಯವಹಾರದ ಕಥನವಿದೆ. ಆ ಕರ್ಮವು ಆ ಸಮಯದಲ್ಲಿ ಆ ರೂಪವಾಗಿ ಆಗುವ ಯೋಗ್ಯತೆಯುಳ್ಳದ್ದಿತ್ತು. ಮತ್ತು ಜೀವದ್ದು ಆ ಸಮಯದಲ್ಲಿ ಅಂಥದೇ ಪುರುಷಾರ್ಥವಿತ್ತು. ಮತ್ತು ಹಾಗೆ ಕೇವಲಿಗಳು ನೋಡಿದ್ದಾರೆ, ಇನ್ನು ಜೀವನು ಶುಭದ ಪುರುಷಾರ್ಥ ಮಾಡಿದರೆ ಪಾಪದ ಸ್ಥಿತಿಯು ಕಡಿಮೆಯಾಗುತ್ತದೆ ಮತ್ತು ಪುಣ್ಯದ ಸ್ಥಿತಿಯು ವೃದ್ಧಿಸುತ್ತದೆ. ಮತ್ತು ಅಶುಭ ಮಾಡಿದರೆ ಪುಣ್ಯದ ಸ್ಥಿತಿಯು ಕಡಿಮೆಯಾಗುತ್ತದೆ ಮತ್ತು ಪಾಪದ ಸ್ಥಿತಿಯು ವೃದ್ಧಿಸಿ ಬಿಡುತ್ತದೆಯೆಂದು ವ್ಯವಹಾರದಿಂದ ಹೇಳಲಾಗುತ್ತದೆ. ಆದರೆ ಅದಂತೂ ಹಾಗೇ ಆಗುವುದಿತ್ತು ಇನ್ನು ಜೀವದ ಆಯಾ ಜಾತಿಯ ಪುರುಷಾರ್ಥವನ್ನು ತಿಳಿಸಿಕೊಡುವುದಕ್ಕಾಗಿ ಹಾಗೆ ಕಥನ ಮಾಡುವುದರಲ್ಲಿ ಬರುತ್ತದೆ. ಜೀವನು ರಾಗ-ದ್ವೇಷ ಮಾಡಿದರೆ ಕರ್ಮ ಕಟ್ಟುತ್ತದೆ ಮತ್ತು ಕರ್ಮದ ಉದಯ ಬಂದರೆ ಜೀವನಿಗೆ ರಾಗ-ದ್ವೇಷ ಮಾಡಬೇಕಾಗುತ್ತದೆಯೆಂದರೆ ಎರಡೂ ಒಂದಾಗಿ ಹೋದವು ಹೀಗಾದರೆ ವಸ್ತುಸ್ಥಿತಿಯ ನಾಶವಾಗಿ ಹೋಗುವುದು, ಆದರೆ ಹೀಗೆಂದೂ ಸಂಭವಿಸುವುದಿಲ್ಲ,

ಅಜ್ಞಾನೀ ಜೀವರುಗಳಿಗೆ ಇತರರು ದುಃಖಿಯಾಗಿರುವುದನ್ನು ಕಂಡು ಕರುಣೆ ಬರುತ್ತದೆ ಮತ್ತು ಅವನ ಪ್ರತಿಕಾರ ಮಾಡಬೇಕು ಹಾಗೂ ಅವರ ದುಃಖ ನಿವಾರಣೆ ಮಾಡಬೇಕೆಂಬ ಭಾವವಾಗುತ್ತದೆ, ಆದರೆ ಅದು ಅಜ್ಞಾನಭಾವವಿದೆ ಅದರ ಸಲುವಾಗಿ ೧೩೭ನೇ ಗಾಥೆಯಲ್ಲಿ ಹೀಗೆ ಹೇಳುತ್ತಾರೆ 'ದಯಾಭಾವವು ಅಜ್ಞಾನಿಗೆ ಕೂಡ ಆಗುತ್ತದೆ ಮತ್ತು ಜ್ಞಾನಿಗೆ ಕೂಡ ಆಗುತ್ತದೆ.'

ಆದರೆ ಅದರಲ್ಲಿರುವ ವಿಶೇಷತೆಯೇನೆಂದರೆ ಅಜ್ಞಾನಿಗೆ ಯಾವ ದಯಾಭಾವವಿದೆ ಅದು ಯಾವನೋ ಪುರುಷನು ದುಃಖಿತನಾಗಿರುವುದನ್ನು ನೋಡಿ ಅವನ ದುಃಖವನ್ನು ದೂರ ಮಾಡುವ ಉಪಾಯದಲ್ಲಿ ಅಹಂಬುದ್ಧಿಯಿಂದ ಆಕುಲ ಚಿತ್ತವುಳ್ಳವನಾಗಿ ಪ್ರವರ್ತಿಸುತ್ತಾನೆ.' ಸೋದರರನೇ ! ಯಾವ ಜೀವನು ಇನ್ನೊಬ್ಬನ ಪರ್ಯಾಯವನ್ನು ತಿರುಗಿಸುವ ಸಾಧ್ಯತೆಯಿಲ್ಲ ದುಃಖದ ಪರ್ಯಾಯವನ್ನಂತೂ ಆ ಜೀವನು ತನ್ನ ಅಜ್ಞಾನದ ಕಾರಣದಿಂದ ಸ್ವಯಂ ನಿರ್ಮಿಸಿಕೊಂಡಿದ್ದಾನೆ ಮತ್ತು ಆ ತನ್ನ ಅಜ್ಞಾನವು ಹೊರಟು ಹೋದರೇನೇ ದುಃಖವು ಹೊರಟುಹೋಗುವಂತಿದೆ, ಆದರೆ ಅಜ್ಞಾನಿಯು ಹಾಗೆ

ತಿಳಿದುಕೊಳ್ಳುವುದಿಲ್ಲ, ಪರರ ಕ್ರಿಯೆ ಮಾಡುವುದರ ಕುರಿತು ಅಭಿಮಾನ ಪಟ್ಟುಕೊಳ್ಳುತ್ತಾನೆ ಮತ್ತು ಅತ್ಯಂತ ಅಕುಲ-ವ್ಯಾಕುಲನಾಗುತ್ತಾನೆ. ಕೆಳಗಿನ ಭೂಮಿಕೆಯಲ್ಲಿರುವ ಜ್ಞಾನಿಗೂ ಖೇದವಾಗುತ್ತದೆ, ಆದರೆ ಇತರ ಜೀವಗಳು ದುಃಖಿಯಿವೆಯೆಂದು ಖೇದವಾಗುವುದಿಲ್ಲ. ಓಹೋ ! ಸಂಸಾರೀ ಜೀವರುಗಳು ಜನ್ಮ-ಮರಣಗಳಲ್ಲಿ ಮುಳುಗೇಳುತ್ತಿದ್ದಾರೆಯೆಂಬುದಾಗಿ ವಿಚಾರ ಮಾಡುತ್ತಿರುವಾಗ ಕೆಲವೊಂದುಬಾರಿ ತನ್ನ ಕಾರಣದಿಂದ ಖೇದವಾಗುತ್ತದೆ ಮತ್ತು ಪ್ರತಿಕಾರದ ಕ್ರಿಯೆಯಂತೂ ಅವನ ಕಾರಣದಿಂದ ಆಗುತ್ತದೆ. ಇನ್ನು ಮಗನಿಗೆ ದೊಡ್ಡ ವ್ಯಾಧಿಯು ಆವರಿಸಿಕೊಂಡರೆ ಅಥವಾ ಸತ್ತುಹೋದರೆ ಅಜ್ಞಾನಿಯು ಘೋರ ದುಃಖ ಮಾಡುತ್ತಾನೆ ವೈದ್ಯರನ್ನು ಕರಿಸಿದ್ದರೆ ಏನಾದರೂ ಉಪಯೋಗವಾಗುತ್ತಿತ್ತು ಮಗನು ಬದುಕಿಕೊಳ್ಳುತ್ತಿದ್ದನು ಮೊದಲಾದ ಪ್ರಕಾರದಿಂದ ಪರರ ಕ್ರಿಯೆಯನ್ನು ತನ್ನ ಆಧೀನವೆಂದು ಮನ್ನಿಸಿ ಆಕುಲವ್ಯಾಕುಲನಾಗುತ್ತಾನೆ. ಅವನಿಗೆ ಧೈರ್ಯ ಉಳಿಯುವುದಿಲ್ಲ, ಜ್ಞಾನಿಯು ಧೈರ್ಯ ಕಳೆದುಕೊಳ್ಳುವುದಿಲ್ಲ. ಜ್ಞಾನಿಗೆ ಅಂಥ ಪ್ರಸಂಗ ಬಂದರೂ ಕೂಡ ಒಳಗೆ ಶಾಂತಿಯಿರುತ್ತದೆ. ಉಪಾಯ ಮಾಡುವ ಮಾತು ಬಂದರೂ ಕೂಡ ಆಂತರ್ಯದಲ್ಲಿ ಧೈರ್ಯ ಕಳೆದುಕೊಳ್ಳುವುದಿಲ್ಲ. ಈ ಪ್ರಕಾರ ಅಜ್ಞಾನಿಯು ಪರರ ಕ್ರಿಯೆಯ ಅಧಿಪತಿಯಾಗುತ್ತಾನೆ ಮತ್ತು ಜ್ಞಾನಿಯು ಪರರ ಕ್ರಿಯೆಯ ಅಧಿಪತಿಯಾಗುವುದಿಲ್ಲ, ಆದರೆ ಜ್ಞಾನಿಯಾಗಿ ಉಳಿಯುತ್ತಾನೆ.

ಜೀವನು ಪುದ್ಗಲಪರ್ಯಾಯದ ಕರ್ತೃವಿಲ್ಲ ಮತ್ತು ಪುದ್ಗಲಕರ್ಮವು ಜೀವದ ಪರ್ಯಾಯದ ಕರ್ತೃವಿಲ್ಲವೆಂದು ಇಲ್ಲಿ ಹೇಳಿದೆ. ಕರ್ಮದಲ್ಲಿ ಅಪಕರ್ಷಣ, ಉತ್ಕರ್ಷಣ ಸಂಕ್ರಮಣ ಮೊದಲಾದವುಗಳಾಗುತ್ತವೆ ಅವು ಕರ್ಮದ ಕಾರಣದಿಂದ ಆಗುತ್ತವೆ. ಜೀವದ ಕಾರಣದಿಂದ ಇಲ್ಲ ಇನ್ನು ಆ ದ್ರವ್ಯಕರ್ಮ ಹಾಗೂ ಭಾವಕರ್ಮಗಳು ಕರ್ತೃವಿಲ್ಲದೆ ಆಗುವುದಿಲ್ಲ. ಏಂದರೆ ಪುದ್ಗಲಪರಮಾಣುಗಳು ಕರ್ತೃವಾಗಿ ದ್ರವ್ಯಕರ್ಮರೂಪದಿಂದಾಗುತ್ತವೆ ಮತ್ತು ಜೀವವು ಕರ್ತೃವಾಗಿ ಭಾವಕರ್ಮಗಳನ್ನು ಮಾಡುತ್ತದೆ. ಜೀವದ ಪರಿಣಾಮದ ಕರ್ತೃವು ಜೀವವಿದೆ ಮತ್ತು ಪುದ್ಗಲದ ಪರಿಣಾಮದ ಕರ್ತೃವು ಪುದ್ಗಲವಿದೆ. ಹೀಗೆ ತಮ್ಮ ತಮ್ಮ ಕರ್ತೃತನವಿಲ್ಲದೆ ಅವು ಆಗುವುದಿಲ್ಲ.

**ಭಾವಾರ್ಥ :-** ನಿಶ್ಚಯನಯದಿಂದ ಜೀವದ್ರವ್ಯವು ತನ್ನ ಚೇತನಭಾವಕರ್ಮ-ರಾಗ-ದ್ವೇಷ ವಿಕಾರ ಅಥವಾ ಅವಿಕಾರೀಭಾವಕರ್ಮಗಳ ಕರ್ತೃವಿದೆ ಮತ್ತು ಪುದ್ಗಲದ್ರವ್ಯವು ನಿಶ್ಚಯದಿಂದ ತನ್ನ ದ್ರವ್ಯರೂಪ ಅವಸ್ಥೆಯ ಕರ್ತೃವಿದೆ.

ವ್ಯವಹಾರನಯದ ಅಪೇಕ್ಷೆಯಿಂದ ನೋಡಹೋದರೆ ಜೀವವು ದ್ರವ್ಯಕರ್ಮದ ಅವಸ್ಥೆಯ ಕರ್ತೃವಿದೆ ಮತ್ತು ದ್ರವ್ಯಕರ್ಮವು ಜೀವದ ವಿಭಾವಭಾವದ ಕರ್ತೃವಿದೆ. ಇಲ್ಲಿ ವ್ಯವಹಾರನಯದಿಂದ ಯಾವ ಕರ್ತೃವನ್ನು ಹೇಳಿದೆ ಅದು ನಿಮಿತ್ತ ತಿಳಿಸಿಕೊಡುವ ಸಲುವಾಗಿ ಇದೆ. ಜೀವವು ರಾಗ-ದ್ವೇಷಗಳನ್ನು ಮಾಡಿದಾಗ ಪುದ್ಗಲಕರ್ಮವು ಅಲ್ಲಿ ಸ್ವಯಂ ಕಟ್ಟುತ್ತದೆ ಅದನ್ನು ತಿಳಿಸುವುದಕ್ಕಾಗಿ ಜೀವವು ಕರ್ಮ ಕಟ್ಟಿಕೊಂಡಿತೆಂಬ ಕಥನ ಮಾಡಿದೆ ಮತ್ತು ಜೀವವು ರಾಗ-ದ್ವೇಷಗಳನ್ನು ಮಾಡಿದಾಗ ಕರ್ಮದ ಉದಯವಾಗುತ್ತದೆಯೆಂದು ತಿಳಿಸಲು ಕರ್ಮದ ಉದಯದಿಂದ ಜೀವದಲ್ಲಿ ವಿಭಾವವಾಯಿತೆಂದು ಕಥನ ಮಾಡಿದೆ. ಕರ್ಮದಲ್ಲಿ ಆತ್ಮನ ರಾಗದ ನಿಮಿತ್ತ ಮತ್ತು ಆತ್ಮನ ರಾಗದಲ್ಲಿ ಕರ್ಮದ ನಿಮಿತ್ತವನ್ನು ತಿಳಿಸಿಕೊಡುವ ಸಲುವಾಗಿ ಕಥನ ಮಾಡಲಾಗಿದೆ.

'ವ್ಯವಹಾರನಯವು ಸ್ವದ್ರವ್ಯ-ಪರದ್ರವ್ಯಗಳನ್ನು ಅಥವಾ ಅವುಗಳ ಭಾವಗಳನ್ನು ಅಥವಾ ಕಾರಣ-ಕಾರ್ಯಾದಿಗಳನ್ನು ಯಾವುದನ್ನೋ ಯಾವುದರಲ್ಲೋ ಸೇರಿಸಿ ನಿರೂಪಣೆ ಮಾಡುತ್ತದೆ. ಅದಕ್ಕಾಗಿ ಇಂಥ ಶ್ರದ್ಧೆಯಿಂದಲೇ ಮಿಥ್ಯಾತ್ವವಿದೆ, ಮಿಥ್ಯಾತ್ವವಿರುವುದರಿಂದ ಅದರ ತ್ಯಾಗ ಮಾಡಬೇಕು. ಇನ್ನು ನಿಶ್ಚಯನಯವು ಅದನ್ನೇ ಯಥಾವತ್ ನಿರೂಪಣೆ ಮಾಡುತ್ತದೆ. ಅಲ್ಲಿ ಯಾವುದನ್ನೂ ಯಾವುದರಲ್ಲೂ ಸೇರಿಸದಿರುವುದರಿಂದ ಅಂಥ ಶ್ರದ್ಧೆಯಿಂದಲೇ ಸಮ್ಯಕ್ತ್ವವಾಗುತ್ತದೆ ಅದಕ್ಕಾಗಿ ಅದರ ಶ್ರದ್ಧೆ ಮಾಡಬೇಕೆಂದು ಶ್ರೀ ಮೋಕ್ಷಮಾರ್ಗಪ್ರಕಾಶಕದಲ್ಲಿ ಹೇಳಲಾಗಿದೆ.

ಜೀವವು ರಾಗ-ದ್ವೇಷಗಳನ್ನು ಮಾಡಿದರೂ ವ್ಯವಹಾರನಯವು ಕರ್ಮದ ಕಾರಣದಿಂದ ರಾಗ-ದ್ವೇಷಗಳಾಗುತ್ತವೆಯೆಂದು ಹೇಳಿದೆ. ಏಕೆಂದರೆ ಸ್ವ-ಪರದ್ರವ್ಯಗಳನ್ನು ಯಾವುದನ್ನೋ ಯಾವುದರಲ್ಲೋ ಸೇರಿಸಿ

ಕಥನ ಮಾಡುತ್ತದೆ. ಅಲ್ಲಿ ಜೀವವು ಕರ್ಮದ ಕಾರಣದಿಂದಲೇ ರಾಗ-ದ್ವೇಷಗಳಾಗುತ್ತವೆಯೆಂದು ತಿಳಿದುಕೊಂಡರೆ ಜೀವನಿಗೆ ಮಿಥ್ಯಾತ್ವವಾಗುತ್ತದೆ.

ವ್ಯವಹಾರನಯದ ಕಥನದ ಹಿಂದಿರುವ ಆಶಯವನ್ನು ತಿಳಿದುಕೊಳ್ಳಬೇಕು ನಿಮಿತ್ತ ತಿಳಿಸಿಕೊಡುವ ಉದ್ದೇಶವಿದೆಯೆಂಬುದನ್ನು ತಿಳಿದುಕೊಳ್ಳದೆ ಜಡದ ಭಾವಗಳನ್ನು ಜೀವನು ಮಾಡಿದನು ಮತ್ತು ಜೀವನ ಭಾವಗಳನ್ನು ಜಡವು ಮಾಡಿತೆಂದು ಅಜ್ಞಾನಿಯು ಮನ್ನಿಸಿಕೊಂಡರೆ ಆ ಜೀವನು ಉಪದೇಶ ಕೇಳಲು ಕೂಡ ಯೋಗ್ಯನಿಲ್ಲ.

ಪುರುಷಾರ್ಥಸಿದ್ಧ್ಯುಪಾಯದ ಆರನೇ ಗಾಥೆಯ ಆಧಾರ ತೆಗೆದುಕೊಂಡು ಮೋಕ್ಷಮಾರ್ಗಪ್ರಕಾಶಕದಲ್ಲಿ ಹೀಗೆ ಹೇಳುತ್ತಾರೆ-ಮುನಿರಾಜರುಗಳು ಅಜ್ಞಾನಿಗೆ ತಿಳಿಸಿಕೊಡುವ ಸಲುವಾಗಿ ಅಸತ್ಯಾರ್ಥವಾದ ಆ ವ್ಯವಹಾರನಯದ ಉಪದೇಶ ಮಾಡುತ್ತಾರೆ. ಆದರೆ ಯಾವನು ಕೇವಲ ವ್ಯವಹಾರನಯವನ್ನೇ ತಿಳಿದುಕೊಳ್ಳುತ್ತಾನೆ ಅವನಿಗಂತೂ ಉಪದೇಶ ಮಾಡುವುದೂ ಕೂಡ ಯೋಗ್ಯವಿಲ್ಲ.

ಈ ಪ್ರಕಾರ ಉಪಾದಾನ-ನಿಮಿತ್ತ ಕಾರಣದ ಭೇದದಿಂದ ಜೀವದ ಕರ್ತೃತ್ವ ಮತ್ತು ಕರ್ಮದ ಕರ್ತೃತ್ವ, ನಿಶ್ಚಯ ಮತ್ತು ವ್ಯವಹಾರನಯದ ಮೂಲಕ ಆಗಮ ಪ್ರಮಾಣವನ್ನು ತಿಳಿಯಬೇಕು. ಜೀವವು ರಾಗ ಮಾಡುವುದು ಅದು ನಿಶ್ಚಯವಿದೆ ಮತ್ತು ಜೀವವು ಭಾಷೆ ಆಡುವುದು ಅದು ವ್ಯವಹಾರವಿದೆ. ಭಾಷೆಯ ಪರ್ಯಾಯವು ಪುದ್ಗಲದಿಂದ ಆಗುವುದು ಅದು ನಿಶ್ಚಯವಿದೆ. ಭಾಷೆಯಿಂದ ಜ್ಞಾನವಾಗುವುದು ಅದು ವ್ಯವಹಾರವಿದೆ. ತನ್ನಿಂದ ಜ್ಞಾನವಾಗುವುದು ಅದು ನಿಶ್ಚಯವಿದೆ. ಒಂದು ಇನ್ನೊಂದರಿಂದ ಒಂದು ಇನ್ನೊಂದರಲ್ಲಿ ಕಾರ್ಯವಾಗುತ್ತದೆಯೆಂದು ಮನ್ನಿಸುವುದು ಅದು ಅಜ್ಞಾನವಿದೆ ಮತ್ತು ಸಂಸಾರವಿದೆ. ಶಿಷ್ಯನು ಯಾವ ಪ್ರಶ್ನೆಯನ್ನು ಗುರುಗಳಿಗೆ ಮಾಡಿದ್ದನು ಆ ಪ್ರಶ್ನೆಯ ಉತ್ತರವನ್ನು ಆಚಾರ್ಯರು ಈ ಪ್ರಕಾರ ತಿಳಿಸಿಕೊಟ್ಟು ಸಮಾಧಾನ ಮಾಡಿದ್ದಾರೆ.

ಜೀವವು ಜಡದ ಪರ್ಯಾಯವನ್ನು ಮಾಡುವುದಿಲ್ಲ ಅದರಂತೆ ಜಡವು ಜೀವದ ಪರ್ಯಾಯವನ್ನು ಮಾಡುವುದಿಲ್ಲ ಮತ್ತು ಆ ಕಾರ್ಯಗಳು ತಮ್ಮ-ತಮ್ಮ ಕರ್ತೃವಿಲ್ಲದೆ ಆಗುವುದಿಲ್ಲವೆಂಬುದನ್ನು ಅರವತ್ತನೇ ಗಾಥೆಯಲ್ಲಿ ಹೇಳಲಾಗಿದೆ. ಈಗ ಅದೇ ಕಥನವನ್ನು ದೃಢ ಮಾಡುವ ಸಲುವಾಗಿ ಆಗಮದ ಪ್ರಮಾಣ ತಿಳಿಸುತ್ತಾರೆ ಮತ್ತು ನಿಶ್ಚಯನಯದಿಂದ ಜೀವನು ತನ್ನ ಭಾವಕರ್ಮದ ಕರ್ತೃವಿದ್ದಾನೆ, ಆದರೆ ಪುದ್ಗಲಕರ್ಮದ ಕರ್ತೃವಿಲ್ಲವೆಂದು ಹೇಳುತ್ತಾರೆ,-

**ಕುವ್ವಂ ಸಗಂ ಸಹಾವಂ ಅತ್ತಾ ಕತ್ತಾ ಸಗಸ್ಸ ಭಾವಸ್ಸ ।**
**ಣ ಹಿ ಪೋಗ್ಗಲಕಮ್ಮಾಣಂ ಇದಿ ಜಿಣವಯಣಂ ಮುಣೇಯವ್ವಂ ॥೬೧॥**

**ತನ್ನ ಭಾವವ ಮಾಡುತಿರುವಾತ್ಮನಿಜದಿ ತನ್ನ ಭಾವದ ಕರ್ತೃವಿರುವನು ।**
**ಭಿನ್ನ ಪುದ್ಗಲ ಕರ್ಮಗಳ ಕರ್ತೃವಿಲ್ಲೆಂಬ ಜಿನವಚನ ತಿಳಿಯುವುದು ॥೬೧॥**

ತನ್ನ ಪರಿಣಾಮವನ್ನು ಮಾಡುತ್ತಿರುವ ಆತ್ಮನು ವಾಸ್ತವಿಕವಾಗಿ ತನ್ನ ಭಾವದ ಕರ್ತೃವಿದ್ದಾನೆ, ಆದರೆ ಅವನು ಪುದ್ಗಲಮಯ ದ್ರವ್ಯಕರ್ಮಗಳ ಕರ್ತೃವಿಲ್ಲೆಂಬ ಜಿನವಚನವನ್ನು ತಿಳಿಯುವುದು.

ಇಲ್ಲಿ ಮೂಲ ಗಾಥೆಯಲ್ಲಿ ಹಾಗೂ ಜಯಸೇನಾಚಾರ್ಯದೇವರ ಟೀಕೆಯಲ್ಲಿ ರಾಗ-ದ್ವೇಷ ಮೊದಲಾದ ಪರಿಣಾಮ ಹಾಗೂ ಸ್ವಭಾವವನ್ನು ಹೇಳಿದೆ. ಏಕೆಂದರೆ ಆತ್ಮನು ಸ್ವಯಂ ಆ ಭಾವವನ್ನು ಮಾಡುತ್ತಾನೆ. ಸ್ವತಂತ್ರವಾಗಿ ಆ ಭಾವವನ್ನು ಮಾಡುವುದರಿಂದ ಆತ್ಮನು ಕರ್ತೃವಿದ್ದಾನೆ. ಕರ್ಮದ ಕಾರಣದಿಂದ ಜೀವನು ವಿಕಾರ ಮಾಡುತ್ತಾನೆನ್ನುವುದು ಅದು ನಿಮಿತ್ತದ ಕಥನವಿದೆ. ಮತ್ತು ಜೀವನು ಎಷ್ಟು ಪ್ರಮಾಣದಲ್ಲಿ ರಾಗ-ದ್ವೇಷ ಮಾಡುತ್ತಾನೆ ಅಷ್ಟು ಪ್ರಮಾಣದಲ್ಲಿ

ಜಡಕರ್ಮವು ಕಟ್ಟುತ್ತಿದ್ದರೂ ಆತ್ಮನು ಆ ಜಡಕರ್ಮದ ಅವಸ್ಥೆಯ ಕರ್ತೃವಿಲ್ಲ. ಜಡದ ಅವಸ್ಥೆಯು ಜಡದ ಕಾರಣದಿಂದ ಆಗುತ್ತದೆ. ಈ ಪ್ರಕಾರ ಜಿನೇಂದ್ರ ಭಗವಂತರ ವಾಣಿಯಿರುವುದನ್ನು ತಿಳಿಯಬೇಕು.

ಕರ್ಮವಿಲ್ಲದೆ ಯಾರಿಗೆ ವಿಕಾರವಾಗುತ್ತದೆ ? ಅದಕ್ಕಾಗಿ ಕರ್ಮದ ಕಾರಣದಿಂದ ವಿಕಾರವಾಗುತ್ತದೆಯೆಂದು ಅಜ್ಞಾನಿಯು ಮನ್ನಿಸುತ್ತಿರುವನು ಸೋದರನೇ ! ಆತ್ಮವಸ್ತುವು ತ್ರಿಕಾಲ ಸ್ವತಂತ್ರವಿದೆ ಮತ್ತು ಅದರ ಪ್ರತಿಯೊಂದು ಸಮಯದ ವಿಕಾರೀ ಅಥವಾ ಅವಿಕಾರೀ ಪರ್ಯಾಯವು ಕೂಡ ಸ್ವತಂತ್ರವಿದೆ. ಅದರಲ್ಲಿ ಒಂದು ಪರ್ಯಾಯವನ್ನಾದರೂ ಪರಾಧೀನವೆಂದು ಮನ್ನಿಸ ಹೋದರೆ ದ್ರವ್ಯವು ಕೂಡ ಪರಾಧೀನವಾಗಿ ಹೋಗುತ್ತದೆ ಅಂಥ ದೃಷ್ಟಿಯುಳ್ಳವನಿಗೆ ಎಂದೂ ಧರ್ಮವಾಗುವುದೇ ಇಲ್ಲ.

**ಭಾವಾರ್ಥ :-** ಜೀವನಿಗೆ ಅನಾದಿಕಾಲದಿಂದ ಸಂಸಾರದ ಕಾರ್ಯದಲ್ಲಿ ಕೂಡ ಇನ್ನೊಬ್ಬನ ಮೇಲೆ ದೋಷ ಹೊರಿಸುವ ಅಭ್ಯಾಸವೇ ಬಿದ್ದುಬಿಟ್ಟಿದೆ. ತಾನು ತಪ್ಪುಮಾಡುವುದು ಮತ್ತು ಇನ್ನೊಬ್ಬರ ಮೇಲೆ ಹೊರಿಸುವುದು ಅದರಂತೆ ಇಲ್ಲಿ ಕೂಡ ತನ್ನ ದೋಷವಿದ್ದರೂ ಅದನ್ನು ಕರ್ಮದ ಮೇಲೆ ಹಾಕುತ್ತಾನೆ. ಕರ್ಮವು ಒಂದು ಕ್ಷೇತ್ರದಲ್ಲಿದೆ ಅದಕ್ಕಾಗಿ ವಿಕಾರ ಮಾಡಿಸುತ್ತದೆಯೆಂದು ಅಜ್ಞಾನಿಯು ಮನ್ನಿಸಿಕೊಂಡಿರುವುದೇ ಭ್ರಾಂತಿಯಿದೆ. ಜೀವನು ನಿಶ್ಚಯದಿಂದ ತನ್ನ ಭಾವದ ಕರ್ತೃವಿದ್ದಾನೆ ಮತ್ತು ಪರದ್ರವ್ಯದ ಕರ್ತೃವಿಲ್ಲ. ಪರದ ಅವಸ್ಥೆಯಾಗುತ್ತಿರುವುದು ಅದು ನಿನ್ನ ಸ್ವಾಧೀನವಿಲ್ಲ ಮತ್ತು ನಿನ್ನ ಭಾವಗಳಾಗುತ್ತಿರುವುದು ಅದು ಪರದ ಆಧೀನವಿಲ್ಲ.

ನಿಶ್ಚಯದಿಂದ ಉಪಾದಾನ ಕಾರಣದ ಅಪೇಕ್ಷೆಯಿಂದ ಕರ್ಮವು ಸ್ವರೂಪದ ಕರ್ತೃವಿದೆಯೆಂಬ ಕಥನ ಮಾಡುತ್ತಾರೆ.

ಕಮ್ಮಂ ಪಿ ಸಗಂ ಕುವ್ವದಿ ಸೇಣ ಸಹಾವೇಣ ಸಮ್ಮಮಪ್ಪಾಣಂ ।
ಜೀವೋ ವಿ ಯ ತಾರಿಸಓ ಕಮ್ಮಸಹಾವೇಣ ಭಾವೇಣ ॥೬೨॥

**ಕರ್ಮವು ತನ್ನ ಸ್ವಭಾವದಿಂದ ತನ್ನನೆ ಮಾಡುವುದು ಮತ್ತದರಂತೆ ।**
**ಕರ್ಮಸ್ವಭಾವಭಾವದಿಂದ ಜೀವವು ಸರಿಯಾಗಿ ತನ್ನನೇ ಮಾಡುವುದು ॥೬೨॥**

ಕರ್ಮರೂಪದಿಂದ ಪರಿಣಮಿಸಿದ ಪುದ್ಗಲ ಸ್ಕಂಧಗಳು ನಿಶ್ಚಯವಾಗಿ ತನ್ನ ಸ್ವಭಾವದಿಂದ ಇದ್ದಕ್ಕಿದ್ದಂತೆ ತನ್ನ ಸ್ವರೂಪವನ್ನು ಮಾಡುತ್ತವೆ. ಜೀವ ಪದಾರ್ಥವು ಕೂಡ ಕರ್ಮರೂಪಭಾವಗಳಿಂದ (ಔದಯಿಕ ಮೊದಲಾದ ಭಾವದಿಂದ) ಸರಿಯಾಗಿ ತನ್ನನ್ನು ಮಾಡುತ್ತದೆ.

ಆತ್ಮನು ದಯೆ-ದಾನಾದಿಗಳ ಭಾವ ಮಾಡುತ್ತಾನೆ ಅಥವಾ ಭ್ರಾಂತಿ ಮಾಡುತ್ತಾನೆ ಮತ್ತು ಅದರ ನಿಮಿತ್ತದಿಂದ ಆತ್ಮನು ಸಮಸ್ತ ಜಡಕರ್ಮಗಳ ಕರ್ತೃವಿಲ್ಲ. ಪುದ್ಗಲದ್ರವ್ಯವು ಸ್ವಯಂ ಕರ್ತೃವಾಗಿ ಕಾರ್ಯರೂಪವಾಗುತ್ತದೆ ಮತ್ತು ಜೀವವು ಕೂಡ ತನ್ನ ಕಾರ್ಯದ ಕರ್ತೃವಿದೆ.

**ಭಾವಾರ್ಥ :-** ಜೀವ ಮತ್ತು ಪುದ್ಗಲದಲ್ಲಿ ಅಭೇದ ಷಟ್ ಕಾರಕಗಳನ್ನು ತಿಳಿಸಿಕೊಡಲಾಗುತ್ತದೆ.

೧) **ಕರ್ತೃ :-** ಕರ್ಮಯೋಗ್ಯ ಪುದ್ಗಲ ಸ್ಕಂಧಗಳು ಕರ್ಮವನ್ನು ಮಾಡುತ್ತಿರುವುದರಿಂದ ಪುದ್ಗಲವು ದ್ರವ್ಯಕರ್ಮದ ಕರ್ತೃವಿದೆ, ಜೀವವು ಅದನ್ನು ಮಾಡುವುದಿಲ್ಲ. ಇದು ಕೈಇದ್ದು ಇದರ ಕ್ಷೇತ್ರಾಂತರವಾಗುವ ಕ್ರಿಯೆಯ ಕರ್ತೃವು ಆ ಪುದ್ಗಲ ಸ್ಕಂಧಗಳಿವೆ, ಆದರೆ ಆತ್ಮನು ಅದರ ಕರ್ತೃವಿಲ್ಲ.

**ಪ್ರಶ್ನೆ :-** ಜೀವವು ಇಲ್ಲದಾಗ ಹಾಗೆ ಕ್ಷೇತ್ರಾಂತರವಾಗುವುದಿಲ್ಲವಲ್ಲವೇ ?

**ಉತ್ತರ :-** ಶವದ ಅವಸ್ಥೆಯಲ್ಲಿ ಕೂಡ ಸ್ಥಿರವಿರುವರೂಪದ ಮತ್ತು ಪರಮಾಣುಗಳು ಭಿನ್ನವಾಗುವ ರೂಪದ ಅವಸ್ಥೆಯು ಆಗುತ್ತಿರುತ್ತದೆ. ಅದರ ಕರ್ತೃವು ಆ ಪುದ್ಗಲಗಳಿವೆ. ಪ್ರತಿಯೊಂದು ಸಮಯದಲ್ಲಿ ಪರ್ಯಾಯವು ಒಂದೇ ರೀತಿಯಿರುವುದಿಲ್ಲ, ಬದಲಾಗುತ್ತದೆ ಮತ್ತು ಜೀವವು ಒಂದು ಕ್ಷೇತ್ರದಲ್ಲಿದ್ದರೂ ಪಕ್ಷಘಾತದಲ್ಲಿ ಕೈ ಕಾಲುಗಳು ಚಲಿಸುವುದಿಲ್ಲ. ಜೀವದಿಂದ ಶರೀರದ ಕ್ಷೇತ್ರಾಂತರವಾಗುತ್ತಿದ್ದರೆ ಆ ಸಮಯದಲ್ಲೇಕೆ ಆಗುವುದಿಲ್ಲ ? ಸೋದರನೇ ! ಶರೀರವು ಅಜೀವವಿದೆ ಅದರ ಕ್ರಿಯೆಯ ಕರ್ತೃ ಆ ಪುದ್ಗಲಗಳಿವೆ. ಜೀವದ ಪರಿಣಾಮದ ನಿಮಿತ್ತ ಪಡೆದು ಜ್ಞಾನಾವರಣೀಯ, ದರ್ಶನಾವರಣೀಯ ಮೊದಲಾದ ಪುದ್ಗಲ ಕರ್ಮಗಳೆಲ್ಲವುಗಳ ಕರ್ತೃವು ಜೀವವಿಲ್ಲ, ಆದರೆ ಪುದ್ಗಲಗಳಿವೆ. ಈ ಮನೆಯನ್ನು ಕಟ್ಟಿಸಲಾಗಿದೆ ಇದರ ಹೊಸ ಹೊಸ ಅವಸ್ಥೆಗಳ ಕರ್ತೃವು ಆ ಪರಮಾಣುಗಳಿವೆ. ಉಪ್ಪಾರ ಮೊದಲಾದವರು ಅದರ ಕರ್ತೃವಿಲ್ಲ. ಪುದ್ಗಲದ ಕಾರ್ಯವು ಜೀವದಿಂದಾಗುವುದಿಲ್ಲ ಮತ್ತು ತನ್ನಿಂದಾದಲ್ಲದೆ ಇರುವುದಿಲ್ಲ. ಪುದ್ಗಲಗಳು ಅಸ್ತಿಯಿದ್ದು ಅವು ತಮ್ಮಿಂದ ಪರಿಣಮಿಸುತ್ತ ಆಯಾ ಅವಸ್ಥೆಯ ಕರ್ತೃವಾಗುತ್ತವೆ. ಹೀಗೆ ಅನಂತ ಪುದ್ಗಲಗಳಿಂದ ತಾನು ಭಿನ್ನನಿದ್ದು ಅವುಗಳ ಕಾರ್ಯವು ನನ್ನ ಕಾರ್ಯವಲ್ಲವೆಂದು ನಿಶ್ಚಿತ ಮಾಡಿದರೆ ತನಗೆ ಭೇದಜ್ಞಾನವಾಗುತ್ತದೆ.

**೨) ಕರ್ಮ :-** ಜ್ಞಾನಾವರಣೀಯ, ದರ್ಶನಾವರಣೀಯ, ವೇದನೀಯ ಮೊದಲಾದ ಕರ್ಮರೂಪ ಪರಮಾಣುಗಳಿಂದ ಕರ್ಮಗಳು ಕಟ್ಟಲ್ಪಡುತ್ತವೆ. ಆತ್ಮನು ಕಟ್ಟಲ್ಪಡುವುದಿಲ್ಲ. ಈ ಆತ್ಮನಿಗೆ ಜ್ಞಾನಾವರಣೀಯ ಕರ್ಮವು ಕಟ್ಟಿತೆಂಬ ಯಾವ ಕಥನವು ಬರುತ್ತದೆ ಅದು ಕರ್ಮ ಕಟ್ಟುವ ಸಮಯದಲ್ಲಿ ಜೀವವೇಕೆ ನಿಮಿತ್ತವಿತ್ತೆಂಬುದನ್ನು ತಿಳಿಸುವ ಸಲುವಾಗಿ ಹೇಳಲಾಗುತ್ತದೆ. ಜ್ಞಾನಾವರಣೀಯವೆಂಬ ನಾಮವಿರುವುದರಿಂದ ಕರ್ಮವು ಜ್ಞಾನವನ್ನು ಆವರಿಸುವುದಿಲ್ಲ. ಆದರೆ ಜೀವವು ತನ್ನ ಜ್ಞಾನವನ್ನು ಆವರಿಸುವ ರೂಪದ ಕರ್ಮ ಮಾಡುತ್ತದೆ ಅದರ ಆರೋಪ ಕರ್ಮದ ಮೇಲೆ ಮಾಡಲಾಗುತ್ತದೆ. ಮಹಿಳೆ ರೊಟ್ಟಿ ಮಾಡುತ್ತಾಳೆನ್ನುವಲ್ಲಿ ರೊಟ್ಟಿಯ ಕಾರ್ಯವು ಪರಮಾಣುಗಳಿಂದ ಆಗಿದೆ, ಅದನ್ನು ಮಹಿಳೆಯು ಮಾಡಿಲ್ಲ.

**೩) ಕರಣ :-** ಕರ್ಮರೂಪದ ಪರಿಣಮನದಲ್ಲಿ ಸಾಧನವು ಪುದ್ಗಲದ್ರವ್ಯವಿದೆ ತನ್ನ ಶಕ್ತಿಯ ಸಾಧನದಿಂದ ಅದು ಕರ್ಮರೂಪದಿಂದ ಪರಿಣಮಿಸಿದೆ. ಯಾವುದರಿಂದಾಗುತ್ತದೆ ಅದನ್ನು ಕರಣವೆಂದು ಹೇಳುತ್ತಾರೆ. ಹೆಸರು ಬರೆಯುವ ಅಕ್ಷರದ ಸಾಧನವು ಸ್ವಯಂ ಪರಮಾಣುಗಳಿದ್ದು ಲೇಖನಿಯಿಲ್ಲ. ಜ್ಞಾನಾವರಣೀಯ ಕರ್ಮವು ಕಟ್ಟುವ ಸಾಧನವು ಪರಮಾಣುಗಳಿವೆ. ಘನದಿಂದ ಪಾಷಾಣ ತುಂಡಾಗುತ್ತದೆ, ಆದರೆ ಪಾಷಾಣವು ತನ್ನ ಶಕ್ತಿಯಿಂದ ತುಂಡಾಗಿದೆ. ಬಾಲಕನು ತನ್ನಿಂದ ತಾನು ದೊಡ್ಡವನಾಗುತ್ತಿದ್ದಾನೆ. ನೀನು ಅವನ ಸಾಧನವಿಲ್ಲ. ಹೀಗೆ ಭೇದಜ್ಞಾನ ಮಾಡದವನಿಗೆ ಮುಕ್ತಿ ಯಾಗುವುದಿಲ್ಲ. ನನ್ನಿಂದ ಪರದಲ್ಲಿ ಕಾರ್ಯವಾಗುತ್ತದೆ ಮತ್ತು ಪರದಿಂದ ನನ್ನಲ್ಲಿ ಕಾರ್ಯವಾಗುತ್ತದೆಯೆಂದು ಮನ್ನಿಸುವವನಿಗೆ ಪರಸಾಧನದ ಏಕತ್ವಬುದ್ಧಿಯಿಂದ ಬಿಡುಗಡೆ ಹೊಂದುವುದು ಸಾಧ್ಯವಾಗುವುದಿಲ್ಲ.

**೪) ಸಂಪ್ರದಾನ :-** ಜಡದ ಪರ್ಯಾಯವು ಪರಿಣಮಿಸಿ ಜಡದಲ್ಲಿರುತ್ತದೆ. ಸಂಪ್ರದಾನ-ಸಮ್ಯಕ್‌ಪ್ರಕಾರದಿಂದ ದಾನ ಕೊಡುವುದು. ಪರಮಾಣುಗಳು ತಮಗೆ ತಾವು ದಾನ ಕೊಡುತ್ತವೆ.ಇಷ್ಟು ಹಣವನ್ನು ದಾನವಾಗಿ ಕೊಟ್ಟೆನೆಂದು ಜನರು ಹೇಳುತ್ತಾರೆ, ಆದರೆ ಪರಮಾಣುವನ್ನು ಜೀವನು ಕೊಡುವ ಸಾಧ್ಯತೆಯಿಲ್ಲ. ಜೀವನು ತನ್ನಲ್ಲಿ ತನ್ನ ಅಥವಾ ಅಜ್ಞಾನದ ದಾನ ಕೊಡುತ್ತಾನೆ ಮತ್ತು ಜ್ಞಾನ ಮಾಡಿಕೊಂಡರೆ ಶುದ್ಧಾತ್ಮನ ದಾನ ಕೊಡುತ್ತಾನೆ, ಆದರೆ ಜಡವನ್ನು ಕೊಡುವ ಸಾಧ್ಯತೆಯಿಲ್ಲ ಶರೀರದ ಪರಮಾಣುಗಳು ಶರೀರದ ಪರ್ಯಾಯದರೂಪದ ದಾನವನ್ನು ತನ್ನಲ್ಲಿ ಕೊಡುತ್ತವೆ. ಕರ್ಮವು ತನ್ನ ಪರ್ಯಾಯವನ್ನು ತನ್ನಲ್ಲಿ ಇಟ್ಟುಕೊಳ್ಳುವುದು ಅದು ಸಂಪ್ರದಾನವಿದೆ.

**೫) ಅಪಾದಾನ :-** ಪುದ್ಗಲ ಪರಮಾಣುಗಳು ಕರ್ಮದ ಪರ್ಯಾಯವನ್ನು ಪುದ್ಗಲದೊಳಗಿಂದ ತಡೆಯುತ್ತವೆ ವಿಕಾರದೊಳಗಿಂದ ಕರ್ಮಪರ್ಯಾಯ ಬರುವುದಿಲ್ಲ. ಜಡದೊಳಗಿಂದ ಬರುತ್ತದೆ. ಅದಕ್ಕಾಗಿ ಸ್ವಯಂ ಅಪಾದಾನವಿದೆ.

**೬) ಅಧಿಕರಣ :-** ಪುದ್ಗಲಪರಮಾಣುಗಳು ತಮ್ಮ ಆಧಾರದಿಂದ ಕರ್ಮವನ್ನು ಮಾಡುತ್ತವೆ. ಅದಕ್ಕಾಗಿ ತಾನು ತನ್ನ ಅಧಿಕರಣವಿದೆ. ಆತ್ಮನ ಆಧಾರದಿಂದ ಕರ್ಮವಿಲ್ಲ. ಒಡವೆಗಳ ಆಧಾರವು ಚಿನ್ನ ಅಥವಾ ಸುತ್ತಿಗೆಯಿಲ್ಲ. ಆದರೆ ಪುದ್ಗಲ ಪರಮಾಣುಗಳು ತನ್ನ ಆಧಾರದಿಂದ ಪರಿಣಮಿಸಿ ಒಡವೆಗಳ ರೂಪವಾಗುತ್ತವೆ.

ಈ ಪ್ರಕಾರ ಪುದ್ಗಲದ್ರವ್ಯವು ಷಟ್‌ಕಾರಕಗಳರೂಪದಿಂದ ಒಂದು ಸಮಯದಲ್ಲಿ ಪರಿಣಮಿಸುತ್ತದೆ. ಇನ್ನೊಂದು ದ್ರವ್ಯದ ಕಾರಣದಿಂದ ಆ ರೂಪವಾಗುವುದಿಲ್ಲ. ಲೆಕ್ಕನಿಕೆ, ಪುಸ್ತಕ, ಶರೀರ ಮೊದಲಾದುವಲ್ಲಿ ಹೀಗೆ ತಿಳಿಯಬೇಕು ಇದು ಅಭೇದಷಟ್‌ಕಾರಕ ಹೇಳಿದೆ ಏಕೆಂದರೆ ಅವು ಪರದಲ್ಲಿಲ್ಲ ಅದರಂತೆ ಪರವೆನಿಸಿದ ಆತ್ಮನಿಂದ ಆಗಿಲ್ಲ, ಆದರೆ ತನ್ನಲ್ಲಿ ಆಗಿದೆ ಅದಕ್ಕಾಗಿ ಅಭೇದವೆಂದು ಹೇಳಲಾಗಿದೆ.

ಈ ಶರೀರವು ಅದು ಶರೀರದ ಆಧಾರದಿಂದಿದೆ. ಅದು ಆತ್ಮನ ಆಧಾರದಿಂದ ಇಲ್ಲ. ಆದರೆ ಸತ್ತುಹೋದನಂತರ ಶರೀರವು ಇದೇ ರೀತಿ ಉಳಿಯುವುದಿಲ್ಲವಲ್ಲ ? ಸೋದರನೇ ! ಆ ಪರಮಾಣುಗಳು ಆ ರೂಪದಿಂದಿರುವ ಅವಸ್ಥೆಯ ಯೋಗ್ಯತೆಯುಳ್ಳವುಗಳಿವೆ ಅದಕ್ಕಾಗಿ ಹಾಗೆ ಆಗುತ್ತದೆ ಅದು ವಸ್ತುವಿದೆಯೋ ಅಥವಾ ಇಲ್ಲವೋ ? ವಸ್ತುವಿದ್ದರೆ ಶಕ್ತಿಯುಳ್ಳದ್ದಿದೆ ಅಥವಾ ಶಕ್ತಿರಹಿತವಿದೆ ? ಪ್ರತಿಯೊಂದು ವಸ್ತುವು ಅನಂತ ಶಕ್ತಿಯಿಂದ ತುಂಬಿಕೊಂಡಿದೆ ಮತ್ತು ಅದು ತನ್ನಿಂದಲೇ ಉಳಿದುಕೊಂಡಿದೆ.

ಜೀವವು ರಾಗ-ದ್ವೇಷ ಮಾಡಿದಾಗ ಆ ರಾಗ-ದ್ವೇಷದ ಪ್ರಮಾಣದಿಂದ ದ್ರವ್ಯಕರ್ಮಗಳು ಕಟ್ಟುತ್ತವೆ. ಹೀಗೆ ಜೀವಕ್ಕೆ ಮತ್ತು ಕರ್ಮಕ್ಕೆ ನಿಮಿತ್ತ-ನೈಮಿತ್ತಿಕ ಸಂಬಂಧವಿದೆ ಆದಾಗ್ಯೂ ಜೀವವು ದ್ರವ್ಯಕರ್ಮದ ಕರ್ತೃವಿಲ್ಲವೆಂದ ಬಳಿಕ ಜೀವವು ಶರೀರ, ಪುಸ್ತಕ, ಧಾನ್ಯ ಮೊದಲಾದ ಬಾಹ್ಯ ಪದಾರ್ಥಗಳ ಕರ್ತೃವಾಗುತ್ತದೆಯೆಂಬುದು ಎಂದೂ ಸಂಭವಿಸುವುದಿಲ್ಲ. ಜೀವವು ರಾಗ ಮಾಡುತ್ತದೆ ಮತ್ತು ಶರೀರವು ಚಲಿಸುತ್ತದೆ ಅಥವಾ ಚಲಿಸುವುದಿಲ್ಲ. ಪುಸ್ತಕದ ಕ್ರಿಯೆಯಾಗುತ್ತದೆ ಅಥವಾ ಆಗುವುದಿಲ್ಲ. ಆದರೆ ರಾಗ ಮಾಡಿದಾಗ ಕರ್ಮವಂತೂ ಅವಶ್ಯವಾಗಿ ಕಟ್ಟುತ್ತದೆ, ಆದಾಗ್ಯೂ ಆತ್ಮನು ಅದರ ಕರ್ತೃವಿಲ್ಲ. ಎಂದಮೇಲೆ ಶರೀರ ಮೊದಲಾದ ಬಾಹ್ಯ ಪದಾರ್ಥಗಳು ಅಥವಾ ಆ ನಿಮಿತ್ತ-ನೈಮಿತ್ತಿಕ ಸಂಬಂಧಗಳು ಸರ್ವಥಾ ಆಶ್ರಯಿಸದಂಥವುಗಳ ಕರ್ತೃ ಆತ್ಮನು ಹೇಗೆ ಆಗುವನು ? ಆಗುವುದೇ ಇಲ್ಲ. ಅದಕ್ಕಾಗಿ ಪುದ್ಗಲದ ಯಾವ ಕ್ರಿಯೆಗಳಾಗುತ್ತವೆ ಅವುಗಳ ಕರ್ತೃವು ಆತ್ಮನಿಲ್ಲ. ಪುದ್ಗಲ ಕರ್ಮಗಳು ತಮ್ಮ ಕಾರಣದಿಂದ ಪರಿಣಮಿಸುತ್ತಲಿವೆ, ಅವು ಜೀವದ ವಿಕಾರದ ಅಪೇಕ್ಷೆಯನ್ನು ಇಟ್ಟುಕೊಳ್ಳುವುದಿಲ್ಲ. ಶರೀರವು ರೋಗರಹಿತವಾಗುವಲ್ಲಿ ಔಷಧದ ಅಪೇಕ್ಷೆಯನ್ನು ಇಟ್ಟುಕೊಳ್ಳುವುದಿಲ್ಲ ಹೀಗೆ ವಸ್ತುವಿನ ಸ್ವಭಾವವೇ ಇದೆ.

ಇದರಲ್ಲಿ ಧರ್ಮವೇನು ಬಂತು ? ನಿನಗೆ ಶಾಂತಿ ಬೇಕಾಗಿದೆಯಲ್ಲವೇ ? ಶಾಂತಿಯು ಸ್ವತಂತ್ರತೆಯಿಂದ ಬರುತ್ತದೆಯೋ ಅಥವಾ ಪರತಂತ್ರತೆಯಿಂದ ಬರುತ್ತದೆಯೋ ? ಜಡವನ್ನು ಸ್ವತಂತ್ರವೆಂದು ತಿಳಿ, ನೀನು ಕೂಡ ಸ್ವತಂತ್ರನಿರುವೆನೆಂದು ತಿಳಿ. ನಿನ್ನನ್ನು ಪರದಿಂದ ಭಿನ್ನನೆಂದು ತಿಳಿದರೆ ಶಾಂತಿಯು ಬರಬಹುದಾಗಿವೆ.

ಈಗ ಜೀವದಲ್ಲಿ ಷಟ್‌ಕಾರಕಗಳನ್ನು ಘಟಿಸುತ್ತಾರೆ. ಈ ಪ್ರಕಾರ ಜೀವದ್ರವ್ಯವು ಕೂಡ ತನ್ನ ಔದಯಿಕ ಮೊದಲಾದ ಭಾವಗಳಲ್ಲಿ ಕೂಡ ಷಟ್ಕಾರಕರೂಪದಿಂದ ಪರಿಣಮಿಸುತ್ತದೆ. ಅದರಲ್ಲಿ ಇನ್ನೊಂದು ದ್ರವ್ಯದ ಅಪೇಕ್ಷೆಯಿಲ್ಲ.

### ಪುಣ್ಯದಲ್ಲಿ ಷಟ್ಕಾರಕಗಳು

**ಕರ್ತೃ :-** ಆತ್ಮನು ದಯೆ ದಾನಾದಿ ಶುಭಭಾವದ ಕರ್ತೃನಿದ್ದಾನೆಂಬ ಭಾವವು ಕರ್ಮದ ಅಪೇಕ್ಷೆಯನ್ನಿಡುವುದಿಲ್ಲ.

**ಕರ್ಮ :-** ಶುಭಭಾವರೂಪದ ಕಾರ್ಯವು ಸ್ವಯಂ ಜೀವದ್ದಿದೆ. ಆ ಕಾರ್ಯವು ಇನ್ನೊಂದರದಿಲ್ಲ.

**ಕರಣ :-** ಶುಭಭಾವದ ಸಾಧನನು ಸ್ವಯಂ ಆತ್ಮನಿದ್ದಾನೆ ; ಐದುಸಾವಿರ ರೂಪಾಯಿ ಬರುವುದು ಅದು

ಸಾಧನವಿಲ್ಲ. ಆ ಹಣವು ಪುಣ್ಯದ ಸಾಧನವಿದ್ದರೆ ದರಿದ್ರಮನುಷ್ಯನು ಶುಭಭಾವ ಮಾಡುವಸಾಧ್ಯತೆಯಿಲ್ಲ. ಧರ್ಮಶಾಲೆ, ಮಂದಿರಗಳನ್ನು ವ್ಯವಹಾರದಿಂದ ಪುಣ್ಯದ ಸಾಧನವೆಂದು ಹೇಳಲಾಗುತ್ತದೆ. ನಿಜವಾಗಿ ಜೀವನು ಸ್ವಯಂ ಶುಭಭಾವ ಮಾಡುತ್ತಾನೆ ಅದರ ಉಪಚಾರ ಮಂದಿರ ಮೊದಲಾದವುಗಳ ಮೇಲೆ ಮಾಡಲಾಗುತ್ತದೆ. ಪದ್ಮನಂದಿ ಆಚಾರ್ಯರು ದಾನ ಅಧಿಕಾರದಲ್ಲಿ ಹೇಳಿರುವ ಮಾತು ನಿಮಿತ್ತದ ಕಥನವಿದೆ ಇಂಥ ಪ್ರತಿಮೆ ಮಾಡಿದರೆ ಇಂಥ ಪುಣ್ಯವಾಗುತ್ತದೆಂದು ಹೇಳಿರುವಲ್ಲಿ ಜೀವನು ಯಾವ ಶುಭಭಾವ ಮಾಡಿರುತ್ತಾನೆ ಅದರ ಸಾಧನ ಸ್ವಯಂ ಇದ್ದಾನೆ. ಆ ಸಮಯದಲ್ಲಿ ಯಾವ ಪದಾರ್ಥದ ಮೇಲೆ ಲಕ್ಷ್ಯವಿರುತ್ತದೆ ಅದರ ಆರೋಪ ಮಾಡಿ ಕಥನ ಮಾಡಿರುತ್ತದೆ.

**ಸಂಪ್ರದಾನ :-** ಜೀವನು ಶುಭಭಾವದ ಪರಿಣಾಮವನ್ನು ತನ್ನಲ್ಲಿಟ್ಟಿರುತ್ತಾನೆ. ಇತರರಿಗೆ ಕೊಡುವುದಿಲ್ಲ.

**ಅಪಾದಾನ :-** ಜೀವನು ತನ್ನೊಳಗಿಂದ ಶುಭ ಪರಿಣಾಮ ಮಾಡುತ್ತಾನೆ

**ಅಧಿಕರಣ :-** ಜೀವನು ತನ್ನ ಆಧಾರದಿಂದ ಶುಭಭಾವ ಮಾಡುತ್ತಾನೆ. ಇತರ ಆಧಾರದಿಂದ ಶುಭಮಾಡುವುದಿಲ್ಲ.

**ಹಿಂಸೆ : ಪಾಪದ ಷಟ್ಕಾರಕಗಳು.**

**ಕರ್ತೃ :-** ಜೀವನು ಸ್ವಯಂ ಹಿಂಸೆಯಭಾವದ ಕರ್ತೃ ಇದ್ದಾನೆ. ಇತರರು ಕರ್ತೃ ಇಲ್ಲ.

**ಕರ್ಮ :-** ಹಿಂಸೆಯ ಪರಿಣಾಮದ ಕಾರ್ಯ ಜೀವನು ಸ್ವಯಂ ಮಾಡುತ್ತಾನೆ. ಜೀವವು ಸಾಯುವುದರಿಂದ ಪಾಪವಾಗುವುದಿಲ್ಲ.

**ಕರಣ :-** ಸ್ವಯಂ ಹಿಂಸೆಯ ಸಾಧನನಿದ್ದಾನೆ ಇಂಥ ಸಾಧನದಿಂದ ಜೀವನು ಹೊಡೆವನೆಂಬ ಕಥನವು ನಿಮಿತ್ತದಿಂದಿದೆ. ಜಡದ ಕ್ರಿಯೆಯನ್ನು ಆತ್ಮನು ಮಾಡುವ ಸಾಧ್ಯತೆಯಿಲ್ಲ.

**ಸಂಪ್ರದಾನ :-** ಜೀವನು ತನಗೆ ತಾನು ಪಾಪದ ಪರಿಣಾಮ ಕೊಡುತ್ತಾನೆ.

**ಅಪಾದಾನ :-** ಜೀವನು ತನ್ನೊಳಗಿಂದ ಪಾಪದ ಪರಿಣಾಮ ಮಾಡುತ್ತಾನೆ.

**ಅಧಿಕರಣ :-** ಜೀವನು ತನ್ನ ಆಧಾರದಿಂದ ಪಾಪದ ಪರಿಣಾಮ ಮಾಡುತ್ತಾನೆ. ತನ್ನ ಆತ್ಮನು ನಿಶ್ಚಯದಿಂದ ಅಧಿಕರಣನಿದ್ದಾನೆ ಆಗ ಇನ್ನೊಂದನ್ನು ನಿಮಿತ್ತವೆಂದು ಹೇಳಲಾಗುತ್ತದೆ.

**ಅಸತ್ಯ :-** ಜೀವನು ಸ್ವಯಂ ಅಸತ್ಯಭಾವದ ಕರ್ತೃ ಇದ್ದಾನೆ, ಅದು ಜೀವದ ಕಾರ್ಯವಿದೆ, ವಾಣಿಯ ಕಾರ್ಯವಿಲ್ಲ; ತಾನು ಸಾಧನನಿದ್ದಾನೆ, ಭಾಷೆಯು ಸಾಧನವಿಲ್ಲ ; ತಾನು ತನ್ನಲ್ಲಿ ಅಸತ್ಯದ ಭಾವವಿಡುವುದು ಅದು ಸಂಪ್ರದಾನವಿದೆ ; ತನ್ನೊಳಗಿಂದ ಆ ಭಾವವಾಗುವುದು ಅದು ಅಪಾದಾನವಿದೆ ; ತನ್ನ ಆಧಾರದಿಂದಾದುದು ಅದು ಅಧಿ ಕರಣವಿದೆ.

**ಕಳವು :-** ಸ್ವಯಂ ಕಳವಿನ ಕರ್ತೃ ಇದ್ದಾನೆ ; ಕಳವು ತನ್ನ ಕಾರ್ಯವಿದೆ. ಸ್ವಯಂ ಕಳವಿನ ಸಾಧನನಿದ್ದಾನೆ, ಪರವಿಲ್ಲ; ತನ್ನಲ್ಲಿ ಭಾವವಿಟ್ಟಿರುವುದು ಅದು ಸಂಪ್ರದಾನವಿದೆ; ತನ್ನೊಳಗಿಂದ ಆಗುವುದು ಅದು ಅಪಾದಾನವಿದೆ ಮತ್ತು ತನ್ನ ಆಧಾರದಿಂದ ಆದುದು ಅದು ಅಧಿಕರಣವಿದೆ.

**ಅಬ್ರಹ್ಮಚರ್ಯ :-** ಜೀವನು ವಿಷಯಭೋಗ ಪರಿಣಾಮದ ಕರ್ತೃ ಇದ್ದಾನೆ. ಆ ಪರಿಣಾಮವು ತನ್ನ ಕಾರ್ಯವಿದೆ. ಅದರ ಸಾಧಕನು ಸ್ವಯಂ ಇದ್ದಾನೆ, ಶರೀರವು ಸಾಧನವಿಲ್ಲ. ತಾನು ತನ್ನಲ್ಲಿ ಭಾವವಿಟ್ಟಿರುವುದು ಅದು ಸಂಪ್ರದಾನವಿದೆ. ಆ ಭಾವವು ತನ್ನೊಳಗಿಂದ ಆದುದು ಅದು ಅಪಾದಾನವಿದೆ, ತನ್ನ ಆಧಾರದಿಂದ ಭಾವವಾದುದು ಅದು ಅಧಿಕರಣವಿದೆ. ಆ ಭಾವವು ಇನ್ನೊಂದರ ಆಧಾರದಿಂದ ಆಗುವುದಿಲ್ಲ. ಶರೀರದ ಕ್ರಿಯೆಯ ಸಂಬಂಧವು ಆತ್ಮನ

ಜತೆ ಸ್ವಲ್ಪವೂ ಇಲ್ಲ.

**ಪರಿಗ್ರಹ :-** ಆತ್ಮನು ಪರಿಗ್ರಹಭಾವದ ಕರ್ತೃ ಇದ್ದಾನೆ. ಆ ಭಾವವು ತನ್ನ ಕಾರ್ಯವಿದೆ. ಪರಿಗ್ರಹದ ಸಾಧನನು ಸ್ವಯಂ ಇದ್ದಾನೆ. ಹಣದ ಪ್ರಮಾಣದಲ್ಲಿ ಪಾಪದ ಪರಿಣಾಮವಾಗುವುದಿಲ್ಲ. ಸ್ವಯಂ ಸಾಧನನಿದ್ದಾನೆ. ತಾನು ತನಗೆ ಪರಿಗ್ರಹ ಪರಿಮಾಣದ ದಾನ ಕೊಡುತ್ತಾನೆ. ಅದು ಸಂಪ್ರದಾನವಿದೆ, ಪತ್ನೀಪುತ್ರರಿಗೆ ಧನ, ಮನೆ ಮೊದಲಾದುವನ್ನು ಬರೆದಿಡುವುದು ಅದು ನಿಮಿತ್ತದ ಕಥನವಿದೆ. ಇತರರಿಗೆ ಯಾವ ದಾನ ಕೊಡುವ ಸಾಧ್ಯತೆಯಿಲ್ಲ. ಪರಿಗ್ರಹದ ಪರಿಣಾಮ ತನ್ನೊಳಗಿಂದ ಮಾಡುತ್ತಾನೆ ಮತ್ತು ತನ್ನ ಆಧಾರದಿಂದ ಮಾಡುತ್ತಾನೆ, ಧನದ ಆಧಾರದಿಂದ ಮಮತೆಯ ಪರಿಣಾಮ ಮಾಡಿರುವುದಿಲ್ಲ.

ಈ ಪ್ರಕಾರ ಐದು ಪಾಪದ ಷಟ್ಕಾರಕಗಳು ತನ್ನಿಂದ ಆಗುತ್ತವೆ.

ಹೀಗೆ ಜೀವನು ಪರದಿಂದ ಭೇದಜ್ಞಾನ ಮಾಡಿದರೆ ತನ್ನ ಕಡೆಗೆ ಪ್ರವೃತ್ತವಾಗುವ ಮತ್ತು ಧರ್ಮ ಪ್ರಕಟ ಮಾಡಿಕೊಳ್ಳುವ ಅವಸರವಿರುತ್ತದೆ. ಧರ್ಮ ಪ್ರಕಟಪಡಿಸಿಕೊಳ್ಳಲು ಇದನ್ನು ಹೊರತುಪಡಿಸಿ ಬೇರೆ ಯಾವ ಉಪಾಯವಿಲ್ಲವೆಂಬುದನ್ನು ಚನ್ನಾಗಿ ತಿಳಿದುಕೊಳ್ಳಬೇಕು.

ಆತ್ಮ ಮತ್ತು ಜಡಶರೀರ, ವಾಣಿ, ಕರ್ಮಗಳು ಬೇರೆ ಬೇರೆ ಇವೆ. ಈ ಜಗತ್ತಿನಲ್ಲಿ ಅನೇಕ ವಸ್ತುಗಳಿವೆ ಅವು ಯಾವಾಗ ಅನಂತವಿರುತ್ತವೆಂದರೆ ಅವು ಒಂದು ಇನ್ನೊಂದರಲ್ಲಿ ಅಭಾವ ವರ್ತಿಸುತ್ತಿದ್ದರೆ ಅನಂತವಿರುತ್ತವೆ ಆದರೆ ಒಂದು ಇನ್ನೊಂದರ ಭಾವದಲ್ಲಿ ಪ್ರವೇಶಿಸಿದರೆ ವಸ್ತುಗಳು ಅನಂತವಾಗಿ ಉಳಿಯುವುದಿಲ್ಲ. ಈ ಎರಡು ಬೆರಳುಗಳು ಬೇರೆ ಬೇರೆಯಿವೆ. ಒಂದರದು ಇನ್ನೊಂದರಲ್ಲಿ ಅಭಾವವಿದೆ. ದೂರ ಹತ್ತಿರದ ಪ್ರಶ್ನೆಯಿಲ್ಲ. ಆಕಾಶದ ಪ್ರದೇಶವು ದೂರವಿರಲಿ ಅಥವಾ ಹತ್ತಿರವಿರಲಿ, ಪ್ರತಿಯೊಂದು ಪದಾರ್ಥವು ಪರದ ಅಭಾವರೂಪದಿಂದ ಪರಿಣಮಿಸುತ್ತಿದೆ ಮತ್ತು ತನ್ನ ಭಾವರೂಪದಿಂದ ಪರಿಣಮಿಸುತ್ತಿದೆ. ಒಂದು ಪರಮಾಣುವಿನಲ್ಲಿ ಅನಂತ ಗುಣಗಳಿವೆ ಮತ್ತು ಪ್ರತಿಯೊಂದು ಗುಣದ ಅನಂತ ಪರ್ಯಾಯಗಳಿವೆ. ಸ್ಪರ್ಶ, ರಸ, ಗಂಧ, ವರ್ಣ, ಅಸ್ತಿತ್ವ ಮೊದಲಾದ ಪ್ರತಿಯೊಂದು ಪರ್ಯಾಯದಲ್ಲಿ ಷಟ್ಕಾರಕಗಳಾಗುತ್ತವೆ. ಪರಮಾಣುವಿನ ವರ್ಣವು ನೀಲಿಯಾಗುವುದರ ಕರ್ತೃವು ಪರಮಾಣುವಿದೆ, ನೀಲಿರೂಪಕಾರ್ಯವು ಪರಮಾಣುವಿನದಿದೆ. ಅದರ ಸಾಧನವು ಪರಮಾಣುವಿದೆ. ನೀಲಿರೂಪ ಅವಸ್ಥೆಯ ದಾನವನ್ನು ಸ್ವಯಂ ಮಾಡಿದೆ. ಅವಸ್ಥೆಯು ತನ್ನೊಳಗಿಂದ ಆಗುತ್ತದೆ. ಅದು ತನ್ನ ಆಧಾರದಿಂದ ಆಗುತ್ತದೆ. ಅದರದು ಇನ್ನೊಂದು ಪರಮಾಣುವಿನ ಜತೆ ಸಂಬಂಧವಿರುವುದಿಲ್ಲ.

ಈ ಕೋಲು ಮೇಲೆ ಹೋಗುತ್ತಿರುವುದು ಅದು ತನ್ನಿಂದ ಹೋಗುತ್ತದೆ, ಕೈಯ ಆಧಾರದಿಂದ ಹೋಗುವುದಿಲ್ಲ. ಶರೀರದ ಪ್ರತಿಯೊಂದು ಪರಮಾಣುವು ಮತ್ತು ಪ್ರತಿಯೊಂದು ವಸ್ತುವಿನ ಪರಮಾಣುವು ತನ್ನಿಂದ ಬದಲಾಗುತ್ತದೆ. ಪ್ರತಿಯೊಂದರಲ್ಲಿ ಷಟ್ಕಾರಕಗಳು ತನ್ನಿಂದ ಆಗುತ್ತಲಿವೆ.

**ಔದಯಿಕ ಭಾವದಲ್ಲಿ ಷಟ್ಕಾರಕಗಳು :-** ಈಗ ಜೀವಭಾವದ ಮಾತು ಹೇಳುತ್ತಾರೆ. ಪುಣ್ಯ-ಪಾಪದ ಷಟ್ಕಾರಕಗಳನ್ನು ಹೇಳಿಯಾಗಿದೆ. ಔದಯಿಕದಲ್ಲಿ ಗತಿ, ಜಾತಿ ಮೊದಲಾದ ಭಾವಗಳಿವೆ. ನರಕಗತಿಯ ಭಾವದ ಕರ್ತೃವು ಜೀವನಿದ್ದಾನೆ ; ಅದು ಜೀವದ ಕಾರ್ಯವಿದೆ. ಗತಿಯ ಸಾಧನನು ಆತ್ಮನಿದ್ದಾನೆ, ಗತಿರೂಪ ಪರಿಣಾಮದ ದಾನವನ್ನು ತಾನು ಕೊಡುತ್ತಾನೆ. ಆ ಪರಿಣಾಮವು ತನ್ನೊಳಗಿಂದ ಆಗುತ್ತದೆ, ತನ್ನ ಆಧಾರದಿಂದ ಆಗುತ್ತದೆ ಕರ್ಮದ ಕಾರಣದಿಂದ ನರಕಗತಿಯ ಪರಿಣಾಮವಾಗುವುದಿಲ್ಲ. ಗತಿಯ, ಜಾತಿಯ, ಕ್ರೋಧ, ಮಾನ, ಮಾಯೆ, ಲೋಭ ಮತ್ತು ಅಸಿದ್ಧತ್ವ ಮೊದಲಾದ ಇಪ್ಪತ್ತೊಂದು ವಚನ ಔದಯಿಕ ಭಾವದ್ದಿವೆ. ಪ್ರತಿಯೊಂದರಲ್ಲಿ ಷಟ್ಕಾರಕಗಳಾಗುತ್ತವೆ, ರಾಗದ ಕರ್ತೃ ಜೀವನಿದ್ದು ರಾಗವು ಜೀವದ ಕರ್ಮವಿದೆ. ರಾಗದ ಸಾಧನನು ಜೀವನಿದ್ದು ತನ್ನಲ್ಲಿ ರಾಗವಿರಿಸುತ್ತಾನೆ ಅದಕ್ಕಾಗಿ ತಾನು

ಸಂಪ್ರದಾನನಿದ್ದಾನೆ. ರಾಗವು ತನ್ನೊಳಗಿಂದ ಮತ್ತು ತನ್ನ ಆಧಾರದಿಂದ ಆಗುತ್ತದೆ ಹೀಗೆ ಪ್ರತಿಯೊಂದರಲ್ಲಿ ತಿಳಿಯಬೇಕು.

**ಉಪಶಮಭಾವದಲ್ಲಿ ಷಟ್ಕಾರಕಗಳು :-** ಆತ್ಮನು ಶುದ್ಧ ಚೈತನ್ಯ ಸ್ವಭಾವದ ಜ್ಞಾನ ಮಾಡಿಕೊಂಡು ಮೊದಲು ಉಪಶಮಸಮ್ಯಗ್ದರ್ಶನ ಪ್ರಕಟ ಮಾಡುತ್ತಾನೆ ಅದರ ಕರ್ತೃ ಜೀವನಿದ್ದಾನೆ, ಅದು ಜೀವದ ಕಾರ್ಯವಿದೆ. ಕರ್ಮದ ಕಾರ್ಯವಿಲ್ಲ. ಅದರ ಸಾಧನನು ಆತ್ಮನಿದ್ದಾನೆ. ಉಪಶಮ ಭಾವವನ್ನು ತಾನು ತನಗೆ ಕೊಡುತ್ತಾನೆ ಮಿಥ್ಯಾತ್ವದ ನಾಶವಾಗಿ ಉಪಶಮ ಸಮ್ಯಕ್ತ್ವವು ಪ್ರಕಟವಾಗಿರುವುದು ಅದು ತನ್ನೊಳಗಿಂದ ಆಗಿದೆ ಮತ್ತು ತನ್ನ ಆಧಾರದಿಂದ ಆಗಿದೆ. ದಯೆ-ದಾನದ ಆಧಾರದಿಂದ ಉಪಶಮಸಮ್ಯಕ್ತ್ವವಾಗುವುದಿಲ್ಲ ಅಥವಾ ಜಡಕರ್ಮವು ದೂರವಾಗವುದರಿಂದ ಆ ಭಾವವಾಯಿತೆಂಬುದಾಗಿಲ್ಲ. ಅದೇ ಪ್ರಕಾರ ಉಪಶಮ ಚಾರಿತ್ರದಲ್ಲೂ ತಿಳಿದುಕೊಳ್ಳಬೇಕು. ಈ ಎಲ್ಲ ಭಾವಗಳು ನಿಮಿತ್ತ ಕರ್ಮದ ಅಪೇಕ್ಷೆಯನ್ನಿಡುತ್ತಿದ್ದರೂ ಕರ್ಮದ ಕಾರಣದಿಂದ ಆಗುವುದಿಲ್ಲ, ಆದರೆ ತನ್ನಿಂದ ಪ್ರಕಟವಾಗುತ್ತವೆಂಬ ಮಾತನ್ನು ಇಲ್ಲಿ ಸಿದ್ಧಪಡಿಸಲಾಗಿದೆ

**ಕ್ಷಯೋಪಶಮಭಾವದಲ್ಲಿ ಷಟ್ಕಾರಕಗಳು :-** ಕ್ಷಯೋಪಶಮಭಾವದಲ್ಲಿ ಹದಿನೆಂಟು ಭೇದಗಳಿವೆ. ಜ್ಞಾನ, ಅಜ್ಞಾನ ಮೊದಲಾದ ಪ್ರತಿಯೊಂದರಲ್ಲಿ ಷಟ್ಕಾರಕಗಳು ಅನ್ವಯಿಸುತ್ತವೆ. ಮತಿಜ್ಞಾನವಾಗುವುದರ ಕಾರ್ಯವು ಆತ್ಮನದಿದೆ, ಮತಿಜ್ಞಾನವು ಆತ್ಮನ ಕಾರ್ಯವಿದೆ, ಅದರ ಸಾಧನನು ಆತ್ಮನಿದ್ದಾನೆ, ಶರೀರದಿಂದ ಅಥವಾ ಕಣ್ಣುಗಳಿಂದ ಜ್ಞಾನವಾಗುವುದಿಲ್ಲ, ಜ್ಞಾನವನ್ನು ತಾನು ಇಡುವುದರಿಂದ ಅದು ಸಂಪ್ರದಾನವಿದೆ. ತನ್ನಿಂದಾಗಿ ಇರುತ್ತದೆ ಮತ್ತು ತನ್ನ ಆಧಾರದಿಂದ ಇರುತ್ತದೆ. ಸಂಯೋಗಗಳು ಅನುಕೂಲವಿದ್ದರೆ, ಶರೀರವು ಒಳ್ಳೆಯದಿದ್ದರೆ ಜ್ಞಾನವಾಗುತ್ತದೆಂದು ಅಜ್ಞಾನಿ ಮನ್ನಿಸುತ್ತಾನೆ ಐದು ಜ್ಞಾನ ಮೂರು ದರ್ಶನ ಮೊದಲಾದೆಲ್ಲ ಭಾವಗಳ ಅವಸ್ಥೆಯು ತನ್ನಿಂದ ಆಗುತ್ತದೆ.

**ಪ್ರಶ್ನೆ :-** ವ್ಯಂಜನ ಅವಗ್ರಹವಂತೂ ಬೇರೆ ವಸ್ತು ಅಡ್ಡಲಾಗಿದ್ದರೆ ಆಗುತ್ತದೆಯಲ್ಲವೇ ?

**ಉತ್ತರ :-** ಒಂದು ವಸ್ತುವು ಇನ್ನೊಂದು ವಸ್ತುವನ್ನು ತಡೆಯುವುದಿಲ್ಲ. ಒಂದರದು ಇನ್ನೊಂದರಲ್ಲಿ ಒಂದು ಇನ್ನೊಂದರ ಅಭಾವವಿದೆ. ಪ್ರತಿಯೊಂದು ಪದಾರ್ಥದಲ್ಲಿ ಒಂದು ಸಮಯದೊಳಗೆ ಷಟ್ಕಾರಕಗಳಿವೆ.

**ಕ್ಷಾಯಿಕಭಾವದಲ್ಲಿ ಷಟ್ಕಾರಕಗಳು :-** ಕ್ಷಾಯಿಕಭಾವದಲ್ಲಿ ಕೇವಲಜ್ಞಾನ, ಕೇವಲದರ್ಶನ ಮೊದಲಾದ ಒಂಭತ್ತು ಭೇದಗಳಿವೆ. ಕೇವಲಜ್ಞಾನದ ಕರ್ತೃವು ಸ್ವಯಂ ಆತ್ಮನಿದ್ದಾನೆ, ಅದು ತನ್ನ ಕಾರ್ಯವಿದೆ. ಆತ್ಮನ ಸಾಧನದಿಂದ ಆಗುತ್ತದೆ. ಆತ್ಮನು ತನಗೆ ಕೇವಲಜ್ಞಾನದ ದಾನ ಮಾಡುತ್ತಾನೆ. ಅದು ತನ್ನೊಳಗಿಂದ ಮತ್ತು ತನ್ನ ಆಧಾರದಿಂದ ಆಗುತ್ತದೆ. ಗಟ್ಟಿಯಾದ ಶರೀರ ಅಥವಾ ಮನುಷ್ಯತನದ ಆಧಾರದಿಂದ ಅದು ಪ್ರಕಟವಾಗುವುದಿಲ್ಲ.

ಈ ಪ್ರಕಾರ ೨೧ ಔದಯಿಕಭಾವದ್ದು, ೨ ಉಪಶಮದ್ದು, ೧೮ ಕ್ಷಯೋಪಶಮದ್ದು, ೯ ಕ್ಷಾಯಿಕದ್ದು ಹೀಗೆ ಒಟ್ಟು ಐವತ್ತು ವಚನಗಳಲ್ಲಿ ಷಟ್ಕಾರಕಗಳನ್ನು ತೆಗೆದುಕೊಳ್ಳಬೇಕು. ಅಸ್ತಿತ್ವ ಮೊದಲಾದವನ್ನು ತೆಗೆದುಕೊಳ್ಳಬಾರದು, ಏಕೆಂದರೆ ಅದರಲ್ಲಿ ಕರ್ಮದ ನಿಮಿತ್ತವಿಲ್ಲ.

ಶರೀರವು ಧರ್ಮದ ಸಾಧನವಿದೆಯೆಂದು ಅಜ್ಞಾನಿಯು ಮನ್ನಿಸುತ್ತಾನೆ. ಶರೀರವು ಜೀರ್ಣವಾಗಿದ್ದರೆ ಧರ್ಮವಾಗುವುದಿಲ್ಲ. ಶರೀರವು ಸರಿಯಾಗಿದ್ದರೆ ಜ್ಞಾನ ಹೆಚ್ಚುವುದು, ಮನುಷ್ಯನು ಮಂದಬುದ್ಧಿಯವನಿದ್ದರೆ ಮತ್ತು ಜ್ವರವು ಬರುತ್ತಿದ್ದರೆ ಧರ್ಮ ಹೇಗೆ ಮಾಡುವ ಸಾಧ್ಯತೆಯಿದೆಯೆಂದು ಅಜ್ಞಾನೀಜೀವನು ಮನ್ನಿಸುತ್ತಿದ್ದಾನೆ. ಆದರೆ ಸೋದರನೇ ! ಅವೆಲ್ಲ ಪರವಸ್ತುಗಳು ಆತ್ಮನಲ್ಲಿ ಅಭಾವರೂಪವಿವೆ. ಯಾವುದರಿಂದ ಯಾವುದರಲ್ಲಿ ಏನೂ ಆಗುವುದಿಲ್ಲ ಅದಕ್ಕಾಗಿ ನಿನ್ನದು ಪರದೆದುರು ನೋಡುವುದು ಉಳಿಯುವುದಿಲ್ಲ. ಕ್ಷಾಯಿಕಸಮ್ಯಕ್ತ್ವವು ತೀರ್ಥಂಕರರ ಸನ್ನಿಧಿಯಲ್ಲಿ ಆಗುತ್ತದೆಂಬುದು ನಿಮಿತ್ತದ ಕಥನವಿದೆ. ಕ್ಷಾಯಿಕ ಸಮ್ಯಕ್ತ್ವವು ಆತ್ಮನ ಸಮೀಪದಲ್ಲಿ ಆಗುತ್ತದೆ. ಅದು ಪರದ ಆಧಾರದಿಂದ ಆಗುವುದಿಲ್ಲ, ನಿಮಿತ್ತದ ಜ್ಞಾನ ಮಾಡಿಸುವ ಸಲುವಾಗಿ ಆ ಕಥನವಿದೆ.

ಜೀವವನ್ನು ಅಜೀವವೆಂದು ಮನ್ನಿಸಿದರೆ, ಮಾರ್ಗವನ್ನು ಕುಮಾರ್ಗವೆಂದು ಮನ್ನಿಸಿದರೆ, ಕುಮಾರ್ಗವನ್ನು ಮಾರ್ಗವೆಂದು ಮನ್ನಿಸಿದರೆ ಮಿಥ್ಯಾತ್ವ ತಗಲುವುದೆಂದು ಅಜ್ಞಾನಿಯು ಶಬ್ದ ಹೇಳುತ್ತಾನೆ, ಆದರೆ ಅದರ ಅರ್ಥ ತಿಳಿಯುವುದಿಲ್ಲ. ಕರ್ಮ, ಶರೀರ ಮೊದಲಾದವು ಜಡದ ಪರ್ಯಾಯವಿದೆ, ಅವನ್ನು ಆತ್ಮನು ಮಾಡುವುದಿಲ್ಲ, ಭೋಗಿಸುವುದಿಲ್ಲ. 'ಕರ್ಮಗಳು ಭೋಗಿಸಿದಲ್ಲದೆ ಬಿಡುವುದಿಲ್ಲ'ವೆಂದು ಹೇಳುತ್ತಾರೆ. ಅದು ಕೂಡ ನಿಮಿತ್ತದ ಕಥನವಿದೆ. ಜೀವನು ತನ್ನ ವಿಕಾರಿಭಾವವನ್ನು ಭೋಗಿಸುತ್ತಾನೆ, ಜಡವನ್ನು ಭೋಗಿಸುವುದಿಲ್ಲ ಮತ್ತು ಶಾಸ್ತ್ರದಲ್ಲಿ ಹೀಗೆ ಕಥನಬರುತ್ತದೆ. ಜೀವನ ಆರು ಭಾವಗಳಿಂದ ಜ್ಞಾನಾವರಣೀಯಕರ್ಮಕಟ್ಟುತ್ತದೆ, ಅದರಿಂದ ಯಾವನಾದರೂ ಜ್ಞಾನ ಪಡೆಯುತ್ತಿದ್ದರೆ ಅದರಲ್ಲಿ ಅಂತರಾಯ ಮಾಡುವುದು ಯಾರಿಂದ ಜ್ಞಾನ ದೊರಕಿದೆ ಅವರ ಹೆಸರು ಮರೆಯುವುದು, ಜ್ಞಾನಿಯ ದ್ವೇಷ ಮಾಡುವುದು, ಜ್ಞಾನಿಯ ಅವಹೇಲನ ಮಾಡುವುದು ಮೊದಲಾದ ಪ್ರಕಾರದಿಂದ ಜ್ಞಾನಾವರಣೀಯಕರ್ಮ ಕಟ್ಟುವುದು ಅಲ್ಲಿ ಜೀವನು ತನ್ನ ಜ್ಞಾನದ ಅಂತರಾಯದ ಭಾವ ಮಾಡಿದ್ದಾನೆ. ಜ್ಞಾನಾವರಣೀಯಕರ್ಮವು ಕಟ್ಟಿತೆನ್ನುವುದು ಅದು ನಿಮಿತ್ತದ ಕಥನವಿದೆ. ಸೋದರನೇ ! ಆತ್ಮನು ಅರೂಪಿಯಿದ್ದಾನೆ, ಕರ್ಮ, ಶರೀರ ಇವು ರೂಪಿ ಇವೆ, ಅರೂಪಿಯು ರೂಪಿಯನ್ನು ಭೋಗಿಸುತ್ತಾನೆನ್ನುವುದು ಮೂರು ಕಾಲದಲ್ಲಿ ಸಂಭವಿಸುವುದಿಲ್ಲ, ಈ ಜಗತ್ತಿನಲ್ಲಿ ಅನಂತ ಜೀವಗಳು, ಅನಂತಾನಂತ ಪುದ್ಗಲಗಳು, ಧರ್ಮ,ಅಧರ್ಮ, ಆಕಾಶ ಮತ್ತು ಕಾಲವೆಂದು ಆರು ದ್ರವ್ಯಗಳಿದ್ದು ಪ್ರತಿಯೊಂದು ಸ್ವತಂತ್ರವಿದೆ. ಆದಾಗ್ಯೂ ಯಾವ ಜೀವನು ಒಂದರ ಕಾರಣದಿಂದ ಇನ್ನೊಂದರಲ್ಲಿ ಕಾರ್ಯ ಮನ್ನಿಸುತ್ತಾನೆ ಅವನು ಈಶ್ವರ ಕರ್ತೃವಿನ ಮನ್ನಣೆಯಂತೆ ಮಿಥ್ಯಾದೃಷ್ಟಿಯಿದ್ದಾನೆ. ಹೇಗೆ ಜಗತ್ತನ್ನು ಈಶ್ವರನು ರಚಿಸಿದನೆಂದು ಮನ್ನಿಸುವವರು ಮಿಥ್ಯಾದೃಷ್ಟಿಯಿದ್ದಾರೆಂದು ಸಮಯಸಾರದಲ್ಲಿ ಹೇಳುತ್ತಾರೆ ಹಾಗೆ ಜೈನರಲ್ಲಿ ಜನ್ಮವೆತ್ತಿ ಆತ್ಮನು ಶರೀರವನ್ನು ಕರ್ಮವನ್ನು ಹಾಗೂ ಪರದ್ರವ್ಯವನ್ನು ಮಾಡುತ್ತಾನೆ ಮತ್ತು ಭೋಗಿಸುತ್ತಾನೆಂದು ಮನ್ನಿಸುವವರು ಕೂಡ ಅವರ ಹಾಗೆಯೇ ಮಿಥ್ಯಾದೃಷ್ಟಿಗಳಿದ್ದಾರೆ. ಅದಕ್ಕಾಗಿ ಪ್ರತಿಯೊಂದು ಪದಾರ್ಥದ ಅವಸ್ಥೆಯಲ್ಲಿ ಷಟ್ಕಾರಕಗಳು ಸ್ವತಂತ್ರವಿವೆಯೆಂದು ಇಲ್ಲಿ ಹೇಳಿದ್ದಾರೆ. ಆದುದರಿಂದ ಸರಿಯಾಗಿ ಜ್ಞಾನ ಮಾಡಿಕೊಳ್ಳುವುದು ಆವಶ್ಯಕವಿದೆ.

ಕರ್ಮ ಹಾಗೂ ಜೀವದ ಕರ್ತೃ ಯಾರು ಇದ್ದಾರೆ ಅಥವಾ ಫಲ ಕೊಡುವವರು ಯಾರು ಇದ್ದಾರೆ ಅಥವಾ ಜಡಕರ್ಮದ ಫಲವು ಆತ್ಮನಲ್ಲಿ ಬರುತ್ತದೆಯೇನೆಂಬ ಮಾತನ್ನು ಶಿಷ್ಯನು ಪ್ರಶ್ನೆ ರೂಪದಿಂದ ವಿಚಾರಿಸುತ್ತಾನೆ.

**ಕಮ್ಮಂ ಕಮ್ಮಂ ಕುವ್ವದಿ ಜದಿ ಸೋ ಅಪ್ಪಾ ಕರೇದಿ ಅಪ್ಪಾಣಂ ।**
**ಕಿಧ ತಸ್ಸ ಫಲಂ ಭುಂಜದಿ ಅಪ್ಪಾ ಕಮ್ಮಂ ಚ ದೇದಿ ಫಲಂ ॥೬೩॥**

**ಕರ್ಮ ಕರ್ಮವನೆ ಮಾಡಿದರೆ ಮತ್ತದರಂತೆ ಆತ್ಮ ಆತ್ಮನನೆ ಮಾಡಿದರೆ ।**
**ಕರ್ಮ ಆತ್ಮನಿಗೆ ಫಲ ಹೇಗೆ ಕೊಡುವುದು ಅದನಾತ್ಮ ಹೇಗೆ ಭೋಗಿಸುವನು ॥೬೩॥**

ಜ್ಞಾನಾವರಣ ಮೊದಲಾದ ಎಂಟು ಪ್ರಕಾರದ ಕರ್ಮಸಮೂಹವಿದ್ದು ಅದು ತನ್ನ ಪರಿಣಾಮವನ್ನು ಮಾಡುತ್ತದೆ ಮತ್ತು ಆ ಸಂಸಾರೀ ಜೀವದ್ರವ್ಯವು ತನ್ನ ಸ್ವರೂಪವನ್ನು ಮಾಡುತ್ತಿರುವಾಗ ಆ ಕರ್ಮದ ಉದಯದ ಅವಸ್ಥೆಗೆ ಪ್ರಾಪ್ತವಾದ ಫಲವನ್ನು ಜೀವದ್ರವ್ಯವು ಯಾವ ಪ್ರಕಾರ ಭೋಗಿಸುತ್ತದೆ ? ಮತ್ತು ಜ್ಞಾನಾವರಣ ಮೊದಲಾದ ಎಂಟು ಪ್ರಕಾರದ ಕರ್ಮಗಳು ತಮ್ಮ ವಿಪಾಕವನ್ನು ಹೇಗೆ ಕೊಡುತ್ತವೆ ?

ಜೀವನು ತನ್ನ ಭಾವ ಮಾಡುತ್ತಾನೆ ಮತ್ತು ಜೀವದದಶೆಯು ಪರದಲ್ಲಿ ಹೋಗುವುದಿಲ್ಲ ಮತ್ತು ಜಡಕರ್ಮದ ಅವಸ್ಥೆಯು ಕೂಡ ಜಡದಿಂದ ಆಗುತ್ತದೆ, ಕರ್ಮವು ಜೀವನಿಗೇನೂ ಮಾಡುವುದಿಲ್ಲವೆಂದು ತಾವು ಹೇಳಿದಿರಿ. ಆದರೆ ಕರ್ಮದ ಉದಯ ಬರುವುದರಿಂದ ಕರ್ಮದ ಫಲವನ್ನು ಜೀವನು ಭೋಗಿಸುತ್ತಾನೆ. ಮತ್ತು ಜ್ಞಾನಾವರಣೀಯ

ಮೊದಲಾದ ಜಡಕರ್ಮಗಳು ತಮ್ಮ ಫಲವನ್ನು ಜೀವನಿಗೆ ಹೇಗೆ ಕೊಡುತ್ತವೆಂದು ಶಿಷ್ಯನು ಗುರುಗಳಿಗೆ ಕೇಳುತ್ತಾನೆ. ನೋಡಿರಿ, ಇಲ್ಲಿ ಶಿಷ್ಯನಿಗೆ ಆಕುಲತೆಯಾಗಿದೆ, ಆತ್ಮನಂತೂ ಅರೂಪಿ-ಅಮೂರ್ತನಿದ್ದಾನೆ, ಕರ್ಮವು ರೂಪಿಮೂರ್ತವಿದೆ. ಶರೀರ, ವಾಣಿ ಮೊದಲಾದುವೆಲ್ಲವೂ ರೂಪಿಯಿವೆ. ಯಾವ ಪ್ರಕಾರ ನೀರು ಮತ್ತು ಮರಳು ಏಕಕ್ಷೇತ್ರದಲ್ಲಿ ಸಾವಿರಾರು ವರ್ಷಗಳಿಂದ ಒಟ್ಟಿಗಿದ್ದರೂ ಕೂಡ ನೀರು ಮರಳಿನರೂಪವಾಗುವುದಿಲ್ಲ ಮತ್ತು ಮರಳು ನೀರಿನ ರೂಪವಾಗುವುದಿಲ್ಲ ಅದೇ ಪ್ರಕಾರ ಚೈತನ್ಯಾತ್ಮನು ನೀರಿನ ಹಾಗೆ ಎಂದೂ ಶರೀರ, ಮನ, ವಾಣಿ, ಕರ್ಮರೂಪದಿಂದ ಆಗುವುದಿಲ್ಲ ಮತ್ತು ಏನೂ ಮಾಡುವ ಸಾಧ್ಯತೆಯಿಲ್ಲವೆಂದ ಮೇಲೆ ಅರೂಪಿಯಾದ ಆತ್ಮನು ಕಟ್ಟಲ್ಪಟ್ಟ ರೂಪಿಯಾದ ಕರ್ಮಗಳನ್ನು ಯಾವ ರೀತಿ ಭೋಗಿಸುತ್ತಾನೆ ಮತ್ತು ರೂಪಿಯಾದ ಕರ್ಮಗಳು ತಮ್ಮ ರೂಪಿ ಫಲಗಳನ್ನು ಅರೂಪಿಯಾದ ಆತ್ಮನಿಗೆ ಯಾವ ರೀತಿ ಕೊಡುತ್ತವೆಯೆಂದು ಶಿಷ್ಯನು ಪ್ರಶ್ನೆ ಮಾಡುತ್ತಾನೆ.

**ಭಾವಾರ್ಥ :-** ರೂಪೀ ಕರ್ಮಗಳಂತೂ ತಮ್ಮ ರೂಪೀ ಸ್ವರೂಪದ ಕರ್ತೃ ಇವೆ. ಮತ್ತು ಆತ್ಮನು ತನ್ನ ವಿಕಾರೀ ಅಥವಾ ಅವಿಕಾರೀ ಭಾವದ ಕರ್ತೃ ಇದ್ದಾನೆಂದಮೇಲೆ ಅರೂಪಿಯಾದ ಆತ್ಮನು ಜಡಸ್ವರೂಪದ ಕರ್ಮಗಳನ್ನು ಯಾವ ರೀತಿ ಭೋಗಿಸುತ್ತಾನೆ ಮತ್ತು ಜಡಕರ್ಮಗಳು ಚೈತನ್ಯಸ್ವರೂಪನಾದ ಆತ್ಮನಿಗೆ ಯಾವ ರೀತಿ ಫಲ ಕೊಡುತ್ತವೆ? ಜಡಕರ್ಮಗಳು ಆತ್ಮನಿಗೆ ಫಲ ಕೊಡುತ್ತಿರುವವೇನು ?

**ಉತ್ತರ :-** ನಿಶ್ಚಯನಯದ ಅಪೇಕ್ಷೆಯಿಂದ ಆತ್ಮನು ಯಾವ ಪ್ರಕಾರದಿಂದಲೂ ಕೂಡ ಕರ್ಮವನ್ನು ಭೋಗಿಸುವುದಿಲ್ಲ ಅದೇ ಪ್ರಕಾರ ಕರ್ಮವು ಕೂಡ ಆತ್ಮನಿಗೆ ಫಲ ಕೊಡುವುದಿಲ್ಲ. ಆದರೆ ಆತ್ಮನು ತನ್ನ ಅಜ್ಞಾನದ ಕಾರಣದಿಂದ ರಾಗ-ದ್ವೇಷದ ಪರಿಣಾಮ ಮಾಡುತ್ತಾನೆ ಆಗ ಪರ ಪದಾರ್ಥಗಳಲ್ಲಿ ಸುಖ-ದುಃಖ ಮನ್ನಿಸುತ್ತಾನೆ. ಮತ್ತು ಕರ್ಮದ ಫಲವು ಬಂದಿತೆಂದು ಹೇಳಲಾಗುತ್ತದೆ. ಅಜ್ಞಾನೀ ಜೀವನಿಗೆ ಆತ್ಮ ಮತ್ತು ಪರ ಪದಾರ್ಥಗಳ ಭೇದಜ್ಞಾನದ ಅರಿವಿಲ್ಲದಿರುವುದರಿಂದ ಅವನು ನಾನು ಈ ಪರ ಪದಾರ್ಥಗಳನ್ನು ಭೋಗಿಸುತ್ತೇನೆ. ಏಕೆಂದರೆ ಈ ಮನೆ, ಈ ಮೋಟಾರುಗಾಡಿ, ಈ ಸಂಪತ್ತು , ಈ ತಿಂಡಿ-ತಿನಿಸುಗಳನ್ನೆಲ್ಲ ನಾನು ಭೋಗಿಸುತ್ತಿದ್ದೇನೆಂದು ಮನ್ನಿಸುತ್ತಾನೆ. ಅರೂಪಿಯಾದ ಆತ್ಮನು ತಿನ್ನುಣ್ಣುವಂಥ ರೂಪೀ ಪದಾರ್ಥಗಳನ್ನು ತಿನ್ನುತ್ತಿರುವನೇನು ? ಇಲ್ಲ. ಅವನು ಜ್ಞಾನಿಯಿರಲಿ ಅಥವಾ ಅಜ್ಞಾನಿಯಿರಲಿ ಯಾವ ಜೀವನು ಕೂಡ ಪರ ಪದಾರ್ಥಗಳ ಭೋಕ್ತೃವು ಇಲ್ಲವೇ ಇಲ್ಲ. ಅಜ್ಞಾನಿಗೆ ಭೇದಜ್ಞಾನವಿಲ್ಲದಿರುವುದರಿಂದ ಅವನು ನಾನು ಅದನ್ನು ತಿಂದೆ, ಇದನ್ನು ತಿಂದೆನೆಂದು ಮನ್ನಿಸುತ್ತಾನೆ, ಆದರೆ ಅದು ಅವನ ವಿಪರೀತ ಮನ್ನಣೆಯಿದೆ ಮತ್ತು ಅವನು ವಿಕಾರವನ್ನು ಅನುಭವಿಸುತ್ತಾನೆ ಜಡವನ್ನು ಅನುಭವಿಸುವುದಿಲ್ಲ. ಚೂರಿ ತಗಲಿದರೆ ಚೂರಿಯನ್ನು ಅನುಭವಿಸುವುದಿಲ್ಲ, ಆದರೆ ದ್ವೇಷವನ್ನು ಅನುಭವಿಸುತ್ತಾನೆ. ಬೆಂಕಿಯಲ್ಲಿ ಕೈಯು ಬಿದ್ದಾಗ ಜೀವನು ಬೆಂಕಿಯನ್ನು ಅನುಭವಿಸುವುದಿಲ್ಲ ಆದರೆ ದ್ವೇಷವನ್ನು ಅನುಭವಿಸುತ್ತಾನೆ. ನಿಗೋದದ ಜೀವವು ಕೂಡ ಸಮಯ ಸಮಯಕ್ಕೆ ತನ್ನ ಪರಿಣಾಮವನ್ನು ಅನುಭವಿಸುತ್ತದೆ. ಕರ್ಮ ಅಥವಾ ಪರ ಪದಾರ್ಥಗಳನ್ನು ಅನುಭವಿಸುವುದಿಲ್ಲ. ಪರದ ಕಾರಣದಿಂದ ದುಃಖವಾಗುತ್ತಿದ್ದರೆ ಕೇವಲೀ ಭಗವಂತರು ಎಲ್ಲವನ್ನು ತಿಳಿಯುತ್ತಾರೆ ಮತ್ತು ಸಮುದ್ಘಾತದ ಸಮಯದೊಳಗೆ ನರಕದಲ್ಲಿ ಕೂಡ ಅವರ ಪ್ರದೇಶಗಳು ಹರಡುತ್ತವೆ, ಆದಾಗ್ಯೂ ಅವರಿಗೆ ದುಃಖವಿಲ್ಲ. ಏಕೆಂದರೆ ಅವರಿಗೆ ರಾಗ-ದ್ವೇಷವಿಲ್ಲ ಇದರಿಂದ ಅಜ್ಞಾನೀ ಜೀವನಿಗೆ ಕೂಡ ಪರದಿಂದ ದುಃಖವಿಲ್ಲವೆಂಬುದು ಸಿದ್ಧವಾಗುತ್ತದೆ. ರೋಗ ಬರುವುದು ಅದು ದುಃಖವಿಲ್ಲ ಶರೀರದಲ್ಲಿ ರೋಗ ಬಂದರೆ ನನಗೆ (ಆತ್ಮನಿಗೆ) ರೋಗ ಬಂದಿತೆಂದು ಮನ್ನಿಸಿ ದ್ವೇಷವನ್ನು ಅನುಭವಿಸುತ್ತಾನೆ. ಪರದಿಂದ ಭಿನ್ನ ಮನ್ನಿಸಿ ಮತ್ತು ವಿಕಾರವು ಕ್ಷಣಿಕವಿದ್ದು ನಾನಂತೂ ಶುದ್ಧ ಚೈತನ್ಯ ದ್ರವ್ಯನಿದ್ದೇನೆಂಬ ಅರಿವುಂಟಾದರೆ ಧರ್ಮವಾಗುವುದು, ಆದರೆ ಅಜ್ಞಾನಿಗೆ ಶುದ್ಧ ಚೈತನ್ಯ ಸ್ವಭಾವದ ಅರಿವಿಲ್ಲದಿರುವುದರಿಂದ ಅವನು ವಿಪರೀತ ಮನ್ನಣೆ ಮಾಡುತ್ತಾನೆ. ಚೇಳು ಕಚ್ಚಿದರೆ ಅದರ ಕಡಿತವನ್ನು ಅನುಭವಿಸುವುದಿಲ್ಲ, ಆದರೆ ದ್ವೇಷವನ್ನು ಅನುಭವಿಸುತ್ತಾನೆ. ಹೀಗೆ ತನ್ನಲ್ಲಿ ರಾಗ-ದ್ವೇಷದ ಪರಿಣಾಮ ಮಾಡಿದರೂ ಪರದ ಕಾರಣದಿಂದ ರಾಗ-ದ್ವೇಷ ಮನ್ನಿಸಿ ಪರವನ್ನು

ಅನುಭವಿಸುತ್ತೇನೆಂದು ಮನ್ನಿಸುತ್ತಾನೆ. ಆದರೆ ಜಡಪದಾರ್ಥಗಳಿಂದ ಆತ್ಮನು ಭಿನ್ನನಿದ್ದಾನೆಂದು ಮನ್ನಿಸುವುದಿಲ್ಲ. ಆದುದರಿಂದ ಅಜ್ಞಾನಿಯು ರಾಗ-ದ್ವೇಷಗಳನ್ನು ಅನುಭವಿಸುತ್ತಿದ್ದರೂ ನಾನು ಪರ ಪದಾರ್ಥಗಳನ್ನು ಅನುಭವಿಸುತ್ತಿದ್ದೇನೆ, ನನಗೆ ಕರ್ಮದ ಫಲ ದೊರಕಿತು ಮತ್ತು ನಾನು ಆ ಫಲವನ್ನು ಭೋಗಿಸುತ್ತಿದ್ದೇನೆಂದು ಮನ್ನಿಸುತ್ತಿದ್ದಾನೆ, ಆ ಸಮಯದಲ್ಲಿ ಇಂಥ ಪರಿಣಾಮ ಮಾಡುತ್ತಿರುವುದು ಕೂಡ ತನ್ನಿಂದ ಮಾಡುತ್ತಾನೆ, ಆದರೆ ಕರ್ಮದ ಕಾರಣದಿಂದ ಮಾಡುವುದಿಲ್ಲ. ಆದರೆ ಕರ್ಮಗಳ ಫಲವು ಬರುತ್ತಿದೆ ಮತ್ತು ನಾನು ಅದನ್ನು ಭೋಗಿಸುತ್ತಿದ್ದೇನೆಂದು ಮನ್ನಿಸಿ, ಪರದ್ರವ್ಯ ಸಂಬಂಧವಾಗಿ ಸುಖ-ದುಃಖ ಮನ್ನಿಸಿಕೊಳ್ಳುತ್ತಿದ್ದಾನೆ.

ಜಡವು ಜಡದ ಕಾರಣದಿಂದ ಪರಿಣಮಿಸುತ್ತದೆ ಮತ್ತು ಆತ್ಮನು ಆತ್ಮನ ಕಾರಣದಿಂದ ಪರಿಣಮಿಸುತ್ತಾನೆಂದು ಷಟ್ಕಾರಕಗಳನ್ನು ಹೇಳಿದ್ದೀರಿ, ಆದರೆ ಕರ್ಮವಿಲ್ಲದಿದ್ದರೆ ಶರೀರವು ಹೇಗೆ ದೊರಕಿತೆಂದು ಅಜ್ಞಾನಿಕೇಳುತ್ತಾನೆ. ಈ ಎಲ್ಲ ಬೇರೆ ಬೇರೆ ಅನೇಕ ಪ್ರಕಾರದ ಆತ್ಮನು ಕಂಡುಬರುತ್ತಾನಲ್ಲವೇ ! ಆ ಕರ್ಮವು ಆತ್ಮನಲ್ಲಿ ಏನನ್ನೂ ಮಾಡದಿದ್ದರೆ ಈ ವಿಪರೀತತೆಯ ಕಾರಣವೇನಿದೆ ? ಇನ್ನು ಶರೀರ ಹಾಗೂ ಕರ್ಮವು ಆತ್ಮನಲ್ಲಿ ಇಲ್ಲದಿದ್ದರೆ ಆತ್ಮನಿಗೆ ಈಗ ಮೋಕ್ಷವಾಗಬೇಕು! ಈಗ ಮುಕ್ತಿಯಾಗಿಲ್ಲವೆಂದ ಮೇಲೆ ಶರೀರ ಮತ್ತು ಕರ್ಮ ಆತ್ಮನಿಗೆ ಇರಬೇಕೆಂದೆನಿಸುತ್ತದೆ. ಕೆಲವರ ಸ್ತ್ರೀ-ಪುತ್ರಾದಿಕರು ಸತ್ತುಹೋಗುವುದು, ಕೆಲವರಿಗೆ ವ್ಯಾಪಾರದಲ್ಲಿ ಹಾನಿಯಾಗುವುದೆಲ್ಲವೂ ಕರ್ಮದ ಫಲವಿದೆ. ಆತ್ಮ, ಶರೀರ ಅಥವಾ ಕರ್ಮ ಬೇರೆಯಿದ್ದರೆ ಆ ಬೇರೆ ಬೇರೆಯ ಫಲವು ಹೇಗೆ ಬರುವುದು ? ಮತ್ತು ಫಲವು ಬರದಿದ್ದರೆ ಭಿನ್ನ ಆತ್ಮನು ಫಲ ಹೇಗೆ ಭೋಗಿಸಿದ್ದನು ? ಎಂಬ ಪ್ರಶ್ನೆಯನ್ನು ೬೩ನೇ ಗಾಥೆಯಲ್ಲಿ ಶಿಷ್ಯನು ಮಾಡಿದ್ದನು ಅದರ ಉತ್ತರವನ್ನು ಈಗ ಭ. ಕುಂದಕುಂದದೇವರು ಗಾಥೆಯ ಮೂಲಕ ಕೊಡುತ್ತಾರೆ-

**ಓಗಾಢಗಾಢಣಿಚಿದೋ ಪೋಗ್ಗಲಕಾಏಹಿಂ ಸವ್ವದೋ ಲೋಗೋ ।**
**ಸುಹಮೇಹಿಂ ಬಾದರೇಹಿಂ ಯ ಣಂತಾಣಂತೇಹಿಂ ವಿವಿಧೇಹಿಂ ॥೬೪॥**

**ಅವಗಾಢಗಾಢತರದಿಂದ ಲೋಕವೆಲ್ಲೆಡೆ ತುಂಬಿದೆ ಪುದ್ಗಲಕಾಯದಿಂದ ।**
**ವಿವಿಧಪ್ರಕಾರದ ಅನಂತಾನಂತ ಸೂಕ್ಷ್ಮಮತ್ತದರಂತೆ ಬಾದರಗಳಿಂದ ॥೬೪॥**

ಸಮಸ್ತ ತ್ರೈಲೋಕವು ಎಲ್ಲ ಕಡೆಗೆ ಪುದ್ಗಲ ಸ್ಕಂಧಗಳಿಂದ ಅತಿಶಯ ಪರಿಪೂರ್ಣ ಗಾಢತರವಾಗಿ ತುಂಬಿಕೊಂಡಿದೆ. ಯಾವ ಪ್ರಕಾರ ಅಂಜನ ತುಂಬುವ ಅಂಜನದ ಡಬ್ಬಿಯು ಅಂಜನದಿಂದ ತುಂಬಿಕೊಂಡಿರುತ್ತದೆ ಅದೇ ಪ್ರಕಾರ ಲೋಕವು ಎಲ್ಲ ಕಡೆಗೆ ಪುದ್ಗಲಗಳಿಂದ ಪರಿಪೂರ್ಣವಾಗಿ ತುಂಬಿಕೊಂಡಿದೆ. ಆ ಪುದ್ಗಲಗಳು ಅತ್ಯಂತ ಸೂಕ್ಷ್ಮವಿವೆ ಮತ್ತು ಅತಿಶಯ ಬಾದರವಿವೆ. ಮತ್ತೆ ಆ ಪುದ್ಗಲಗಳು ಹೇಗಿವೆಯೆಂದರೆ ಅಪರಿಮಿತವಾದ ಸಂಖ್ಯೆಯಿಂದ ಕೂಡಿಕೊಂಡಿವೆ. ಪುನಃ ಆ ಪುದ್ಗಲಗಳು ಹೇಗಿವೆಯೆಂದರೆ ನಿಶ್ಚಯದಿಂದ ಕರ್ಮ ಪರಮಾಣು, ಸ್ಕಂಧ ಮೊದಲಾದ ಅನೇಕ ಪ್ರಕಾರದವುಗಳಾಗಿವೆ.

ಮೂರು ಲೋಕದಲ್ಲಿ ಜೀವಗಳು ತುಂಬಿಕೊಂಡಿವೆ. ಯಾವೊಂದು ಸ್ಥಳವೂ ಜೀವದಿಂದ ರಹಿತವಿಲ್ಲ. ಅದರಂತೆ ಇಡೀ ಲೋಕದಲ್ಲಿ ಪುದ್ಗಲಸ್ಕಂಧಗಳು ಅತ್ಯಂತ ಗಾಢತರವಾಗಿ ತುಂಬಿಕೊಂಡಿವೆ. ಅದೇ ಪ್ರಕಾರ ಅಂಜನ ತುಂಬುವ ಅಂಜನ ಡಬ್ಬಿಯು ಅಂಜನದಿಂದ ತುಂಬಿಕೊಂಡಿರುತ್ತದೆ ಅದರಂತೆ ಎಲ್ಲೆಡೆಗೆ ಊರ್ಧ್ವ, ಮಧ್ಯ ಮತ್ತು ಅಧೋಲೋಕ ಹೀಗೆ ಮೂರೂ ಲೋಕದಲ್ಲಿ ಪುದ್ಗಲಗಳು ಒತ್ತೊತ್ತಾಗಿ ತುಂಬಿವೆ. ಅವು ಅತ್ಯಂತ ಸೂಕ್ಷ್ಮವಿವೆ ಮತ್ತು ಸ್ಥೂಲ ಕೂಡ ಇವೆ. ಅವುಗಳ ಸಂಖ್ಯೆಯ ಎಣಿಕೆಯಿಲ್ಲ, ಎರಡು ಪರಮಾಣುಗಳ ಸ್ಕಂಧದಿಂದ ಹಿಡಿದು ಅನಂತ ಪರಮಾಣುಗಳ ಸ್ಕಂಧವುಳ್ಳ ಅನೇಕ ವಿಚಿತ್ರತೆಯುಳ್ಳವುಗಳಿವೆ. ಔದಾರಿಕ, ಕಾರ್ಮಣ, ತೈಜಸ ಶರೀರದ ಪರಮಾಣುವಿನ ಸ್ಕಂಧಗಳು

ಕೂಡ ಒತ್ತೊತ್ತಾಗಿ ತುಂಬಿವೆ. ಯಾವ ಪ್ರಕಾರ ಜಗತ್ತಿನಲ್ಲಿ ಬೇರೆ ಬೇರೆ ಜಾತಿಯ ಮನೆಗಳ ಪ್ಲಾಸ್ಟರವಾಗುತ್ತದೆ ಮತ್ತು ಅದು ತನ್ನ ತನ್ನ ಕಾರಣದಿಂದಾಗುತ್ತದೆ ಕುಶಲಕರ್ಮಿಗಳಿಂದ ಆಗುವುದಿಲ್ಲ ಅದೇ ಪ್ರಕಾರ ಅನೇಕ ಪ್ರಕಾರದ ವಿಚಿತ್ರತೆಯುಳ್ಳ ಕರ್ಮ ಪರಮಾಣುವಿನ ಸ್ಕಂಧಗಳು ತಮ್ಮ ಕಾರಣದಿಂದ ಆಗುತ್ತವೆ. ನಿಗೋದದ ಜೀವಗಳು ಕೆಳಗಿದ್ದರೂ ಕರ್ಮದಿಂದ ಬದ್ಧವಿವೆ ಮತ್ತು ಸಿದ್ಧಶಿಲೆಯಲ್ಲಿದ್ದರೂ ಕೂಡ ಕರ್ಮದಿಂದ ಬದ್ಧವಿವೆ ಮತ್ತು ಅಲ್ಲಿರುವ ಸಿದ್ಧರು ಕರ್ಮರಹಿತರಿದ್ದಾರೆ. ಕೇವಲೀ ಸಮುದ್ಘಾತ ಮಾಡಿದಾಗ ಎಲ್ಲಿ ಕೇವಲಿಯಿದ್ದಾರೆ ಅಲ್ಲಿ ನಿಗೋದದ ಜೀವವಿದೆ. ಕೇವಲೀಭಗವಂತರ ಯೋಗದ ಕಾರಣದಿಂದ ಒಂದು ಸಮಯದಲ್ಲಿ ಕರ್ಮ ಬರುತ್ತವೆ ಮತ್ತು ಎರಡನೇ ಸಮಯದಲ್ಲಿ ಉದುರಿಹೋಗುತ್ತವೆ ಮತ್ತು ಆ ಸ್ಥಳದಲ್ಲಿರುವ ನಿಗೋದದ ಜೀವಗಳು ಮೋಹನೀಯ ಮೊದಲಾದ ಕರ್ಮ ಕಟ್ಟಿಕೊಳ್ಳುತ್ತವೆ. ಮುನಿ ಇಂಥ ಕರ್ಮದಿಂದ ಬದ್ಧನಾಗುತ್ತಾನೆ ಅಜ್ಞಾನೀ ಇಂಥ ಕರ್ಮ ಕಟ್ಟಿಕೊಳ್ಳುತ್ತಿದ್ದರೆ ಅವರು ಏಕಕ್ಷೇತ್ರದಲ್ಲಿದ್ದರೂ ಹೀಗೆ ಕರ್ಮ ಕಟ್ಟುವಲ್ಲಿ ಅಂತರವಾದರೆ ಆ ಕರ್ಮ ಕಟ್ಟುವಲ್ಲಿ ಆತ್ಮನು ಆಧಾರನಿದ್ದಾನೋ ಅಥವಾ ಇಲ್ಲವೋ ? ಮತ್ತು ಆ ಆತ್ಮನು ಆಧಾರನಿಲ್ಲದಿದ್ದರೆ ಪುದ್ಗಲ ಸ್ಕಂಧಗಳು ಬೇರೆ ಬೇರೆ ಜೀವಗಳ ಹತ್ತಿರ ಬೇರೆ ಬೇರೆ ರೂಪದಿಂದೇಕೆ ಪರಿಣಮಿಸುತ್ತವೆ ? ಇದರ ಉತ್ತರವನ್ನು ಈ ಮುಂದಿನ ಗಾಥೆಯಲ್ಲಿ ಕೊಡುತ್ತಾರೆ.

ಬೇರಾವ ಕಾರಣದಿಂದ ಕರ್ಮದ ಉತ್ಪತ್ತಿಯಿಲ್ಲ. ಯಾವಾಗ ಆತ್ಮನು ರಾಗಾದಿಗಳ ಭಾವರೂಪದಿಂದ ಪರಣಮಿಸುತ್ತಾನೆ ಆಗ ಅದರ ನಿಮಿತ್ತ ಪಡೆದು ಪುದ್ಗಲ ಕರ್ಮಗಳು ಸ್ವಯಂ ಕಟ್ಟುತ್ತವೆ.

**ಅತ್ತಾ ಕುಣದಿ ಸಭಾವಂ ತತ್ಥ ಗದಾ ಪೋಗ್ಗಲಾ ಸಭಾವೇಹಿಂ ।**
**ಗಚ್ಛಂತಿ ಕಮ್ಮಭಾವಂ ಅಣ್ಣಣ್ಣೋಗಾಹಮವಗಾಢಾ ॥೬೫॥**

**ಆತ್ಮ ತನ್ನ ಭಾವಮಾಡುವಾಗಲ್ಲಿರುವ ಪುದ್ಗಲಗಳು ತಮ್ಮ ಭಾವಗಳಿಂದ ।**
**ಆತ್ಮನಲಿ ಅನ್ಯೋನ್ಯ ಅವಗಾಹದಿಂದೊಳಪೊಕ್ಕು ಕರ್ಮಭಾವವಪಡೆವವು ॥೬೫॥**

ಆತ್ಮನು ಮೋಹ ರಾಗ ದ್ವೇಷರೂಪವಾದ ತನ್ನ ಭಾವಗಳನ್ನು ಮಾಡುತ್ತಿರುವಾಗ ಅಲ್ಲಿ ನೆಲೆಸಿರುವಂಥ ಪುದ್ಗಲಗಳು ತಮ್ಮ ಭಾವಗಳಿಂದ ಜೀವದಲ್ಲಿ ವಿಶಿಷ್ಟ ಪ್ರಕಾರದಿಂದ ಅನ್ಯೋನ್ಯ-ಅವಗಾಹರೂಪದಿಂದ ಪ್ರವಿಷ್ಟವಾಗಿ ಕರ್ಮಭಾವಕ್ಕೆ ಪ್ರಾಪ್ತವಾಗುತ್ತವೆ.

ಜೀವದ ಶುಭಾಶುಭ ಭಾವಗಳನ್ನು ಅಭವ್ಯನ ಮಿಥ್ಯಾತ್ವದ ಭಾವಗಳನ್ನು, ತೀರ್ಥಂಕರರ ಅದರಂತೆ ಜ್ಞಾನಿಯ ಅಸಾತಾದ ಭಾವಗಳನ್ನು ಇಲ್ಲಿ ಸ್ವಭಾವವೆಂದು ಹೇಳಿದೆ. ಏಕೆಂದರೆ ಜೀವನು ಸ್ವಯಂ ಆ ಭಾವಗಳನ್ನು ಪರ್ಯಾಯದಲ್ಲಿ ಮಾಡುತ್ತಾನೆ. ತನ್ನ ಚೈತನ್ಯಸ್ವಭಾವದ ಅರಿವಿಲ್ಲದವನು ಮತ್ತು ವಿರುದ್ಧ ಮನ್ನಣೆಯುಳ್ಳವನು ಕೇವಲಿಯ ನಿಂದೆ ಮಾಡುತ್ತಿದ್ದಾನೆ. ಆ ನಿಂದೆಯ ಭಾವಗಳನ್ನು ಅದರಂತೆ ಕಸಾಯಿಖಾನೆಯಲ್ಲಿ ಪಶುಗಳನ್ನು ಕತ್ತರಿಸುವ ಭಾವಗಳನ್ನು ಇಲ್ಲಿ ಸ್ವಭಾವಭಾವವೆಂದು ಹೇಳಿದ್ದಾರೆ.

ಇದೇ ರೀತಿಯಾಗಿ ಅಜ್ಞಾನೀಜೀವನು ತನ್ನಲ್ಲಿ ಮಿಥ್ಯಾತ್ವ ರಾಗ-ದ್ವೇಷ ಮೊದಲಾದ ಅಶುದ್ಧಭಾವಗಳನ್ನು ಮಾಡುತ್ತಾನೆ. ಎಲ್ಲಿ ಜೀವದ್ರವ್ಯವಿದೆ ಅಲ್ಲಿ ಕಾರ್ಮಣವರ್ಗಣಾರೂಪದ ಪರಮಾಣುಗಳಿರುತ್ತವೆ ಆ ಪರಮಾಣುಗಳು ಕರ್ಮರೂಪದಿಂದ ಪರಿಣಮಿಸುತ್ತವೆ. ಕರ್ಮಗಳು ಬಾಹ್ಯದಿಂದ ಬರುತ್ತವೆಯೆಂದು ಕೆಲವರು ಹೇಳುತ್ತಾರೆ. ಆದರೆ ಹಾಗೆ ಇಲ್ಲ. ಅವುಗಳ ವರ್ಗಣಾಗಳು ಕರ್ಮರೂಪದಿಂದ ಪರಿಣಮಿಸುತ್ತವೆ. ಜೀವನು ಅವನ್ನು ಮಾಡುವುದಿಲ್ಲ. ಜೀವನು ಕರ್ಮಗಳನ್ನು ಮಾಡಿದರೆ ಜೀವ-ಪುದ್ಗಲ ಒಂದಾಗಿ ಹೋಗುವವು, ಆದರೆ ಹಾಗೆ ಆಗುವುದಿಲ್ಲ. ಏಕೆಂದರೆ ಎರಡೂ ಭಿನ್ನತತ್ತ್ವವಿವೆ. ಅಜ್ಞಾನಿಯು ಶರೀರ ಮತ್ತು ಕರ್ಮ ನನ್ನವಿವೆ ಮತ್ತು ನಾನು ಅವುಗಳವನಿದ್ದೇನೆಂಬ ಅಜ್ಞಾನಭಾವ

ಪ್ರಕಟಮಾಡುತ್ತಾನೆ. ಆಗ ಪುದ್ಗಲಗಳು ಸ್ವಯಂ ಜ್ಞಾನಾವರಣ ಮೊದಲಾದ ಎಂಟು ಕರ್ಮಗಳ ರೂಪದಿಂದ ಪರಿಣಮಿಸುತ್ತವೆ, ಅವನು ಕರ್ಮದಿಂದ ಭಿನ್ನತೆಯನ್ನು ಮನ್ನಿಸಲಿಲ್ಲ ಮತ್ತು ಮಿಥ್ಯಾಭಾವರೂಪದಿಂದ ಆದನು ಆದುದರಿಂದ ಕರ್ಮಗಳು ಮಿಥ್ಯಾತ್ವದ ಪ್ರಕೃತಿರೂಪದಿಂದ ಪರಿಣಮಿಸಿವೆ, ನೀನು ಅವನ್ನು ಪರಿಣಮಿಸುವುದಿಲ್ಲ. ಜಡಪರಮಾಣುಗಳಲ್ಲಿ ಜ್ಞಾನಾವರಣೀಯ ಮೊದಲಾದ ಕರ್ಮರೂಪದಿಂದ ಪರಿಣಮಿಸುವ ಸ್ವಭಾವವಿದೆ. ಮೂಲದಲ್ಲಿ 'ಸ್ವಭಾವೈಃ' ಶಬ್ದವಿದೆ. ತನ್ನ ಪರ್ಯಾಯವು ಸ್ವಭಾವದೊಳಗಿಂದ ಕರ್ಮರೂಪ ಅವಸ್ಥೆಯಾಗಿ ಪರಿಣಮಿಸಿದೆ ಮತ್ತು 'ಗಚ್ಛಂತಿ' ಶಬ್ದದ ಅರ್ಥವು 'ಪ್ರಾಪ್ತವಾಗುತ್ತದೆ' ಎಂದಿದೆ. ಸ್ವಯಂ ಕರ್ಮರೂಪದ ಅವಸ್ಥೆಗೆ ಪ್ರಾಪ್ತವಾಗುತ್ತದೆ, ಯಾರೂ ಪ್ರಾಪ್ತ ಮಾಡಿಸುವುದಿಲ್ಲ.

ಮತ್ತು ಔದಾರಿಕ, ಕಾರ್ಮಣ, ತೈಜಸ ಮತ್ತು ಭಾಷೆ ಮೊದಲಾದವುಗಳ ಪರಮಾಣುಗಳು ಇಡೀ ಲೋಕದಲ್ಲಿ ತುಂಬಿಕೊಂಡಿವೆ. ಯಾವನೋ ಈಶ್ವರನಾಗಲಿ ಅಥವಾ ಆತ್ಮನಾಗಲಿ ಅವನ್ನು ನಿರ್ಮಿಸಿಲ್ಲ, ಅವು ಆತ್ಮನಿಂದ ಬೇರೆಯಿವೆಯೆಂಬ ಅರಿವಿಲ್ಲದ ಜೀವನು ಪರದಿಂದ ತನ್ನ ಕಾರ್ಯವಾಗುತ್ತದೆಂದು ಮನ್ನಿಸಿ ಅಜ್ಞಾನಭಾವ ಮಾಡುತ್ತಾನೆ ಆಗ ಜಡಪರಮಾಣುಗಳು ಕರ್ಮರೂಪದಿಂದ ಕಟ್ಟಲ್ಪಟ್ಟು ಏಕಕ್ಷೇತ್ರಾವಗಾಹರೂಪದಿಂದ ಇರುತ್ತವೆ. ಪ್ರತಿಯೊಬ್ಬ ಆತ್ಮನ ಜತೆಯಲ್ಲಿ ಪರಸ್ಪರ ಏಕಕ್ಷೇತ್ರದಿಂದ ಅತ್ಯಂತ ದೃಢತೆಯಿಂದ ಪುದ್ಗಲಪರಮಾಣುಗಳಿರುತ್ತವೆ. ಆ ಪುದ್ಗಲ ಪರಮಾಣುಗಳು ಕರ್ಮರೂಪದಿಂದ ಕಟ್ಟಲ್ಪಟ್ಟಿವೆ.

ಜೀವ ಮತ್ತು ಅಜೀವವೆಂಬ ಎರಡು ತತ್ತ್ವಗಳು ಸ್ವತಂತ್ರವಿವೆ. ಅವುಗಳ ಏಳು ಪರ್ಯಾಯಗಳು ಸೇರಿ ನವತತ್ತ್ವಗಳಾಗುತ್ತವೆ. ಆ ಒಂಭತ್ತನ್ನು ಸ್ವತಂತ್ರವೆಂದು ಮನ್ನಿಸದೆ ಒಂದು ಇನ್ನೊಂದರಲ್ಲಿ ಒಂದು ಇನ್ನೊಂದರ ಕಾರ್ಯ ಮನ್ನಿಸಿದರೆ ಮಿಥ್ಯಾತ್ವವಾಗುತ್ತದೆ. ಜೀವವು ಅಜೀವವಾಗುವುದಿಲ್ಲ, ಅಜೀವವು ಜೀವವಾಗುವುದಿಲ್ಲ. ಪುಣ್ಯವು ಅದು ಪಾಪವಲ್ಲ, ಪಾಪವು ಅದು ಪುಣ್ಯವಲ್ಲ. ಪುಣ್ಯದಿಂದ ಧರ್ಮವಾಗುವುದಿಲ್ಲ, ಪುಣ್ಯ-ಪಾಪಗಳೆರಡೂ ಆಸ್ರವ ಮತ್ತು ಬಂಧವಿವೆ. ಅವು ಸಂವರ-ನಿರ್ಜರೆಗಳಲ್ಲ, ಸಂವರ-ನಿರ್ಜರೆ ಆಂಶಿಕ ಶುದ್ಧತೆಯಿದೆ ಮತ್ತು ಮೋಕ್ಷವು ಪೂರ್ಣಶುದ್ಧತೆಯಿದೆ. ಹೀಗೆ ಒಂಭತ್ತನ್ನು ಬೇರೆ ಬೇರೆಯಾಗಿ ಮನ್ನಿಸಿದರೆ ಅವನಿಗೆ ವ್ಯವಹಾರಶ್ರದ್ಧೆ ಎಂದರೆ ಪುಣ್ಯದ ಕಾರಣವಿದೆ. ಒಂಭತ್ತನ್ನು ಭಿನ್ನವಾಗಿ ತಿಳಿಯದೆ ಒಂದು ಇನ್ನೊಂದಕ್ಕೆ ಪರಾಧೀನವೆಂದು ಮನ್ನಿಸುವವನಿಗೆ ಧರ್ಮವಂತೂ ಇಲ್ಲ, ಆದರೆ ಪುಣ್ಯ ಕೂಡ ಇಲ್ಲ. ಹೇಗೆ ಮರಳು ಮತ್ತು ನೀರು ಜತೆಯಲ್ಲಿದ್ದರೂ ಮರಳು ನೀರಾಗುವುದಿಲ್ಲ ಹಾಗೆ ಆತ್ಮನು ಜಡದಲ್ಲಿ ಒಂದಾಗಿ ಹೋಗಿದ್ದರೂ ಒಂದು ಇನ್ನೊಂದರ ರೂಪವಾಗುವುದಿಲ್ಲ. ಹೀಗೆ ತನ್ನ ಆತ್ಮನನ್ನು ಪರದಿಂದ ಭಿನ್ನವಾಗಿ ಮನ್ನಿಸಿ, ವಿಕಾರದಷ್ಟೂ ಕೂಡ ಇಲ್ಲ, ಆದರೆ ನಾನು ಶುದ್ಧಚೈತನ್ಯನಿದ್ದೇನೆಂದು ಶ್ರದ್ಧೆ-ಜ್ಞಾನ ಮಾಡಿದರೆ ಧರ್ಮವಾಗುತ್ತದೆ.

**ಭಾವಾರ್ಥ :-** ಈ ಆತ್ಮನು ಸಂಸಾರ ಅವಸ್ಥೆಯಲ್ಲಿ ಅನಾದಿಕಾಲದಿಂದ ಪರದ್ರವ್ಯದ ನಿಮಿತ್ತವಾಗಿ ಮಿಥ್ಯಾತ್ವ, ರಾಗ ಮೊದಲಾದ ಅಶುದ್ಧಭಾವಗಳ ರೂಪದಿಂದ ಪರಿಣಮಿಸುತ್ತಾನೆ. ಜೀವನು ಮುನಿತನವನ್ನು ಸ್ವೀಕರಿಸಿ ಒಂಭತ್ತನೇ ಗ್ರೈವೇಯಕಕ್ಕೆ ಹೋದರೂ ಆತ್ಮನು ಪರದಿಂದ ಬೇರೆಯಿದ್ದಾನೆಂಬ ಜ್ಞಾನ ಮಾಡಿಕೊಳ್ಳಲಿಲ್ಲ. ಅದರಿಂದಾಗಿ ಅಶುದ್ಧಭಾವರೂಪದಿಂದ ಪರಿಣಮಿಸಿದ್ದಾನೆ. ಆತ್ಮನು ಅರೂಪೀ ಶುದ್ಧಚೈತನ್ಯಸ್ವಭಾವಿಯಿದ್ದಾನೆ. ಕರ್ಮವು ರೂಪೀ ಜಡಸ್ವಭಾವಿಯಿದೆ, ಶರೀರವು ಕೂಡ ರೂಪಿಯಿದೆ, ಎರಡೂ ಭಿನ್ನವಿದ್ದರೂ ಶರೀರ, ಕರ್ಮ, ಕುಟುಂಬ ನನ್ನವೆಂಬ ಮಿಥ್ಯಾಭಾವವು ತನ್ನ ಚೈತನ್ಯಸ್ವಭಾವವನ್ನು ತಪ್ಪಿಸಿಬಿಟ್ಟಿರುವುದು ಅದು ನಿಮಿತ್ತದ ಲಕ್ಷ್ಯದಿಂದ ತಪ್ಪಿಸಿದೆ. ಪತ್ನಿ-ಪುತ್ರ, ಕರ್ಮ ಅಥವಾ ಶರೀರ ಇವು ಸಂಸಾರವಲ್ಲ, ಆದರೆ ಅವು ನನ್ನವು ಮತ್ತು ನಾನು ಅವುಗಳವನೆಂಬ ಅಜ್ಞಾನಭಾವದಿಂದ ಮೋಹ-ರಾಗ-ದ್ವೇಷರೂಪದಿಂದ ಪರಿಣಮಿಸಿದೆ. ಆದರೆ ಆತ್ಮನು ಕರ್ಮ ಹಾಗೂ ವಿಕಾರದಿಂದ ಭಿನ್ನನಿದ್ದಾನೆಂಬ ಜ್ಞಾನ ಮಾಡಿಕೊಳ್ಳಲಿಲ್ಲ. ಅಜ್ಞಾನದಿಂದಾಗಿ ನಿಗೋದದಿಂದ ಹಿಡಿದು ಸಮಸ್ತ ಸಂಸಾರೀಜೀವಗಳು ತಮ್ಮ ಕಾರಣದಿಂದ ವಿಭಾವರೂಪವಾಗಿ ಪರಿಣಮಿಸಿದಾಗ ಈ ಭಾವಗಳ ನಿಮಿತ್ತ ಪಡೆದು ಪುದ್ಗಲ ಪರಮಾಣುಗಳು ತಮ್ಮ ಉಪಾದಾನ

ಶಕ್ತಿಯಿಂದ ಎಂಟು ಕರ್ಮಗಳ ರೂಪದಿಂದ ಪರಿಣಮಿಸುತ್ತವೆ ಎಂದರೆ ಅವು ನಿಶ್ಚಯದಿಂದ ತಮ್ಮ ಕಾರಣದಿಂದ ಕರ್ಮರೂಪದಿಂದಾಗುತ್ತವೆ. ಆತ್ಮ ಮತ್ತು ಕರ್ಮ ಭಿನ್ನವಿವೆಯೆಂಬ ಜ್ಞಾನವು ಅಜ್ಞಾನಿಗಿಲ್ಲದಿರುವುದರಿಂದ ಆತ್ಮನು ಕರ್ಮ ಮಾಡುತ್ತಾನೆ ಮತ್ತು ಕರ್ಮವು ಆತ್ಮನಿಂದ ರಾಗಾದಿಗಳನ್ನು ಮಾಡಿಸುತ್ತದೆಯೆಂದು ಅಜ್ಞಾನಿಯು ಮನ್ನಿಸುತ್ತಿದ್ದರೂ ಕೂಡ ಅಜ್ಞಾನಿಯ ಆತ್ಮನು ಸ್ವತಂತ್ರವಾಗಿ ವಿಭಾವರೂಪದಿಂದ ಪರಿಣಮಿಸುತ್ತಿದ್ದಾನೆ ಮತ್ತು ಕರ್ಮಗಳು ಕೂಡ ಸ್ವತಂತ್ರವಾಗಿ ಕಟ್ಟುತ್ತವೆ. ಜ್ಞಾನಿಯು ಜ್ಞಾನಭಾವದ ಕರ್ತೃ ಇದ್ದಾನೆ, ಅಜ್ಞಾನಿಯು ಅಜ್ಞಾನಭಾವದ ಕರ್ತೃ ಇದ್ದಾನೆ ಮತ್ತು ಜಡವು ಜಡಭಾವದ ಕರ್ತೃವಿದೆ.

ಅಜ್ಞಾನೀಜೀವಗಳು ಅಧಿಕ ಅಜ್ಞಾನ ಮಾಡುವುದರಿಂದ ಅಲ್ಲಿ ಸ್ನಿಗ್ಧಕರ್ಮರೂಪದಿಂದ ಕಟ್ಟಬೇಕೆಂದು ಪುದ್ಗಲ ಪರಮಾಣುಗಳಿಗೆ ಅರಿವಿದೆಯೇನು ? ಶರೀರಕ್ಕೇನಾದರೂ ಅರಿವಿದೆಯೇನು ? ಅರಿವಿಲ್ಲದಿದ್ದರೂ ಹೇಗೆ ಕಟ್ಟುತ್ತವೆ ? ಸೋದರನೇ ! ಅದರಲ್ಲಿ ಅರಿವಿರುವುದರ ಅವಶ್ಯಕತೆಯಿಲ್ಲ, ಜಡದಲ್ಲಿ ಶಕ್ತಿಯಿದೆ, ಜಡವು ಕೂಡ ಈಶ್ವರವಿದೆ, ಹೇಗೆ ಚೇತನವು ಭಾವ ಮಾಡುತ್ತದೆ ಹಾಗೆ ಜಡವು ತನ್ನ ಜಡಭಾವವನ್ನು ಮಾಡುವಂಥ ಸಾಮರ್ಥ್ಯವಿದೆ. ಯಾವುದರ ಕಾರಣದಿಂದ ಯಾವುದಿಲ್ಲ. ಯಾವನೋ ಈಶ್ವರನು ಜಡವನ್ನು ಮಾಡುತ್ತಾನೆ ಅಥವಾ ಯಾವನೋ ಆತ್ಮನು ಜಡದ ಅವಸ್ಥೆಯನ್ನು ಮಾಡುತ್ತಾನೆಂದು ಮನ್ನಿಸುವವನಿಗೆ ಪರದಿಂದ ಬೇರೆಯಾಗುವುದು ಹಿಡಿಸುವುದಿಲ್ಲ. ಅವನಿಗೆ ತೀವ್ರತರವಾದ ಏಕತ್ವಬುದ್ಧಿಯು ವರ್ತಿಸುತ್ತದೆ. ಅವನ ತ್ರಸದ ಸ್ಥಿತಿಯು ಪೂರ್ಣವಾಗಲು ಬಂದಿದೆ ಮತ್ತು ನಿಗೋದದಲ್ಲಿ ಹೊರಟುಹೋಗುವ ಸಿದ್ಧತೆಯವನಿದ್ದಾನೆ.

ಅಜ್ಞಾನೀಜೀವನು ಎಷ್ಟು ಪ್ರಮಾಣದಲ್ಲಿ ಅಜ್ಞಾನಭಾವ ಮಾಡುತ್ತಾನೆ ಅಷ್ಟೇ ಪ್ರಮಾಣದಲ್ಲಿ ಪುದ್ಗಲ ಪರಮಾಣುಗಳು ಕರ್ಮರೂಪದಿಂದ ಪರಿಣಮಿಸಿ ಏಕಕ್ಷೇತ್ರಾವಗಾಹತನದಿಂದ ಇರುತ್ತವೆ, ಆದಾಗ್ಯೂ ಆತ್ಮನು ಕರ್ಮದಲ್ಲಿ ಒಂದಾಗಿಹೋಗುವುದಿಲ್ಲ. ಅವೆರಡರ ಕ್ರಿಯೆಗಳು ಸ್ವತಂತ್ರವಾಗಿರುತ್ತವೆ.

ಇದರಿಂದ ನಿಶ್ಚಯವಾಗುವುದೇನೆಂದರೆ ಮೊದಲು ಕಟ್ಟಿದ ಕರ್ಮದ ಉದಯದ ಸಮಯದಲ್ಲಿ ಜೀವನು ತನ್ನ ಶುದ್ಧ ಚಿದಾನಂದ ಸ್ವಭಾವವನ್ನು ಮರೆತು ತನ್ನ ಪರ್ಯಾಯದ ಯೋಗ್ಯತೆಯ ಕಾರಣದಿಂದ ಮಿಥ್ಯಾತ್ವ ರಾಗ-ದ್ವೇಷ ಮೊದಲಾದ ಭಾವಗಳ ಕರ್ತೃವಾಗುತ್ತಾನೆ. ಮೊದಲು ಆರು ನಿರಪೇಕ್ಷಕಾರಕಗಳನ್ನು ಹೇಳಲಾಗಿತ್ತು ಆ ಮಾತನ್ನಿಟ್ಟು ಈ ಮಾತು ಹೇಳಿದೆ. ಜಡ ಕರ್ಮಗಳು ಅವನನ್ನು ಅಶುದ್ಧಗೊಳಿಸಿಲ್ಲ, ಆದರೆ ಕರ್ಮಗಳು ನನ್ನನ್ನು ದುಃಖಿ ಮಾಡುತ್ತವೆಂದು ಜಡಕರ್ಮದ ಮೇಲೆ ದೋಷ ಹೊರಿಸುತ್ತ ತನ್ನ ಸ್ವಭಾವವನ್ನು ಮರೆಯುತ್ತ ಅಜ್ಞಾನಭಾವರೂಪದಿಂದ ಪರಿಣಮಿಸುತ್ತಾನೆ. ಜಡಕರ್ಮವು ಆತ್ಮನ ಕರ್ತೃವಿಲ್ಲ ಮತ್ತು ಆತ್ಮನು ಜಡದ ಕರ್ತೃವಿಲ್ಲ, ಆದಾಗ್ಯೂ ಆತ್ಮನು ಕರ್ತೃವಿಲ್ಲದೆ ರಾಗ-ದ್ವೇಷಗಳಾಗುವುದಿಲ್ಲ ಮತ್ತು ಜಡದ ಕರ್ತೃವಿಲ್ಲದೆ ಕರ್ಮರೂಪದಿಂದ ಅದರ ಕಾರ್ಯವಾಗುವುದಿಲ್ಲ. ಕರ್ಮವು ಕರ್ಮದಲ್ಲಿದೆ, ಕರ್ಮವು ಆತ್ಮನಿಂದ ಪರವಿದೆ, ವಿಕಾರವು ವಿಕಾರದಲ್ಲಿದೆ, ಅದು ಕ್ಷಣಿಕವಿದೆ, ಅದು ಇಲ್ಲದೆ ಆತ್ಮನು ಶುದ್ಧನಿದ್ದಾನೆ, ಹೀಗೆ ದ್ರವ್ಯ, ವಿಕಾರ ಮತ್ತು ನಿಮಿತ್ತ ಈ ಮೂರರ ಪ್ರಮಾಣಜ್ಞಾನ ಮಾಡಿಸಿದೆ. ಈ ಪ್ರಕಾರ ನಿಜವಾದ ಜ್ಞಾನ ಮಾಡಿಕೊಳ್ಳದವರು ರಾಗಾದಿಗಳ ರೂಪದಿಂದ ಪರಿಣಮಿಸುತ್ತಾರೆ. ನನ್ನ ಬುದ್ಧಿವಂತಿಕೆಯಿಂದ ಹಣವು ಲಭಿಸಿತೆಂದು ಮನ್ನಿಸುವ ಅಜ್ಞಾನಿಗೆ ಪುಣ್ಯದ ಶ್ರದ್ಧೆಯು ಕೂಡ ಇಲ್ಲ, ಇಲ್ಲಿಯಂತೂ ದಯೆ-ದಾನಾದಿಗಳ ಭಾವಗಳಾಗುತ್ತವೆ ಅವು ವಿಕಾರವಿದ್ದು ಅವು ಕರ್ಮದ ಕಾರಣದಿಂದ ಆಗುವುದಿಲ್ಲ, ಆದರೆ ನಿನ್ನ ಅಪರಾಧದಿಂದ ಆಗುತ್ತವೆಂದು ಹೇಳಿದ್ದಾರೆ. ಅದು ನಿನ್ನ ಪರ್ಯಾಯವಿದೆ, ಮತ್ತು ಆ ವಿಕಾರದಿಂದ ನಿನಗೆ ದ್ರವ್ಯಕರ್ಮ ಕಟ್ಟುವುದಿಲ್ಲ. ದ್ರವ್ಯಕರ್ಮವು ಪುದ್ಗಲದ ಕಾರಣದಿಂದ ಕಟ್ಟುತ್ತದೆ, ಈ ಪ್ರಕಾರವಾಗಿ ಕರ್ಮ ಮತ್ತು ವಿಕಾರದ ಸ್ವತಂತ್ರತೆಯನ್ನು ಇಲ್ಲಿ ತಿಳಿಸಿಕೊಡಲಾಗಿದೆ.

ಇಂಥ ಸ್ವತಂತ್ರತೆಯ ಅರಿವಿಲ್ಲದಿರುವಂಥ ಅಜ್ಞಾನೀಜೀವನು ನಾನಿರುವುದರಿಂದ ಶರೀರ ಚಲಿಸುತ್ತದೆ ಮತ್ತು ಶರೀರದಿಂದ ಆತ್ಮನಲ್ಲಿ ಕಾರ್ಯವಾಗುತ್ತದೆಯೆಂದು ಮನ್ನಿಸುತ್ತಾನೆ. ಅವನಿಗೆ ರಾಗಾದಿಗಳ ಭಾವಗಳಾಗುತ್ತವೆ ಅದರ

ನಿಮಿತ್ತ ಪಡೆದು ಕಾರ್ಮಾಣ ವರ್ಗಣಾಗಳ ಪುದ್ಗಲ ಪರಮಾಣುಗಳು ತಮ್ಮ ಉಪಾದಾನದ ಶಕ್ತಿಯಿಂದ ಎಂಟು ಕರ್ಮಗಳ ರೂಪವಾಗುತ್ತವೆ. ಮತ್ತು ಆ ಪರಮಾಣುಗಳು ಆ ಕರ್ಮಗಳ ಕರ್ತೃವಾಗುತ್ತವೆ. ಆದರೆ ಜೀವನು ಆ ಕರ್ಮಗಳ ಕರ್ತೃವಿಲ್ಲ, ಈ ಜೀವನು ಅಜ್ಞಾನಭಾವ ಮಾಡಿದನು. ಅದಕ್ಕಾಗಿ ನಾನು ಅಲ್ಲಿ ಕರ್ಮರೂಪದಿಂದ ಪರಿಣಮಿಸಿದೆನೆಂಬ ಅರಿವು ಪುದ್ಗಲಕ್ಕೆ ಇಲ್ಲ. ಕರ್ಮವು ಕರ್ಮದ ಕಾರಣದಿಂದ ಪರಿಣಮಿಸಿದೆ ಅದು ಉಪಾದಾನ ಕಾರಣವಿದೆ. ಜೀವದ ರಾಗ-ದ್ವೇಷಗಳು ಅದರಲ್ಲಿ ನಿಮಿತ್ತಮಾತ್ರವಿವೆ.

**ಪ್ರಶ್ನೆ ಃ-** ಜೀವವು ರಾಗ-ದ್ವೇಷ ಮಾಡಿದರೆ ಕರ್ಮಕ್ಕೆ ಬರಬೇಕಾಗುವುದಲ್ಲವೇ ?

**ಉತ್ತರ ಃ-** ಇಲ್ಲ, ಪುದ್ಗಲ ಪರಮಾಣುಗಳಲ್ಲಿ ಕರ್ಮರೂಪದಿಂದಾಗುವ ಯೋಗ್ಯತೆಯಿರುವುದರಿಂದ ಆಗುತ್ತವೆ. ಯಾವುದರ ಕಾರಣದಿಂದ ಆಗುವುದಿಲ್ಲ, ಜಗತ್ತಿನಲ್ಲಿ ಕರ್ತೃವು ಈಶ್ವರನಿದ್ದಾನೆ ಮತ್ತು ಈಶ್ವರನ ಇಚ್ಛೆಯಿಲ್ಲದೆ ಒಂದು ಹುಲ್ಲುಕಡ್ಡಿಯೂ ಚಲಿಸುವುದಿಲ್ಲವೆಂದು ಅಜ್ಞಾನಿಯು ಹೇಳುತ್ತಾನೆ. ಆದರೆ ಇಂಥ ಮನ್ನಣೆಯುಳ್ಳವನು ಮಿಥ್ಯಾದೃಷ್ಟಿಯಿದ್ದಾನೆ. ಅದರಂತೆ ಜೈನನೆನಿಸಿಕೊಳ್ಳುವವನು ಆತ್ಮನಿಲ್ಲದೆ ಶರೀರ ಮತ್ತು ಕರ್ಮ ಚಲಿಸುವುದಿಲ್ಲವೆಂದರೆ ಅವನು ಕೂಡ ಅವನಂತೆಯೇ ಮಿಥ್ಯಾದೃಷ್ಟಿಯಿದ್ದಾನೆ. ಅವನು ಇಂಥ ವಿಪರೀತ ದೃಷ್ಟಿಯಿಂದ ಭ್ರಮಣ ಮಾಡುತ್ತಿದ್ದಾನೆ.

ಆರು ದ್ರವ್ಯಗಳು ಪೃಥಕ್ ಪೃಥಕ್ಕಿವೆ. ಯಾವುದೂ ಯಾವುದರ ಕಾರ್ಯ ಮಾಡುವುದಿಲ್ಲ, ಆತ್ಮನು ಪುದ್ಗಲದ ಕರ್ತೃವಿಲ್ಲ ಮತ್ತು ಪುದ್ಗಲವು ಆತ್ಮನ ಕರ್ತೃವಿಲ್ಲ. ಪುದ್ಗಲವು ತನ್ನ ಕಾರಣದಿಂದ ಕರ್ಮರೂಪದಿಂದಾಗುತ್ತದೆ ಅದರಲ್ಲಿ ಉಪಾದಾನವು ತಾನೇ ಇದೆ. ಪರದ್ರವ್ಯದಲ್ಲಿ ಕೇವಲ ನಿಮಿತ್ತ ನೈಮಿತ್ತಿಕ ಸಂಬಂಧವಿದೆ.

ಅನೇಕ ಪ್ರಕಾರದ ಕರ್ಮದ ವಿಚಿತ್ರತೆಗೆ ಬೇರೆ ಯಾವ ದ್ರವ್ಯವೂ ಕರ್ತೃವಿಲ್ಲ, ಆದರೆ ಅದರ ಕರ್ತೃವು ಪುದ್ಗಲವಿದೆ. ಆತ್ಮನು ಅದರ ಕರ್ತೃವಿಲ್ಲವೆಂಬುದನ್ನು ತಿಳಿಸಿಕೊಟ್ಟಿದ್ದಾರೆ.

ಜಹ ಪೋಗ್ಗಲದವ್ವಾಣಂ ಬಹುಪ್ಪಯಾರೇಹಿಂ ಖಂಧಣಿವ್ವತ್ತೀ ।
ಅಕದಾ ಪರೇಹಿಂ ದಿಟ್ಠಾ ತಹ ಕಮ್ಮಾಣಂ ವಿಯಾಣಾಹಿ ॥೬೬॥

**ಹೇಗೆ ಪುದ್ಗಲದ್ರವ್ಯಗಳ ಬಹುವಿಧ ಸ್ಕಂಧರಚನೆ ಪರಕೃತವಿಲ್ಲದೆ ।**
**ವಿಗೋಚರವಿದೆ ಹಾಗೆ ಕರ್ಮಗಳ ಬಹುಪ್ರಕಾರತೆಯೆಂದು ತಿಳಿಯುವುದು ॥೬೬॥**

ಯಾವ ಪ್ರಕಾರ ಪುದ್ಗಲದ್ರವ್ಯಗಳ ನಾನಾ ಪ್ರಕಾರದ ಸ್ಕಂಧ ರಚನೆಯು ಪರದಿಂದ ಮಾಡಲಾಗದೆಯೆ ಆಗುತ್ತಿರುವುದು ಕಂಡುಬರುತ್ತದೆ. ಅದೇ ಪ್ರಕಾರ ಕರ್ಮಗಳ ವಿಪುಲ ಪ್ರಕಾರತೆಯು ಪರದಿಂದ ಅಕೃತವೆಂದು ತಿಳಿಯುವುದು.

ಪುದ್ಗಲದ್ರವ್ಯಗಳ ಅನೇಕ ಪ್ರಕಾರದ ಸ್ಕಂಧಗಳು ಕಂಡುಬರುತ್ತವೆ. ಆ ಸ್ಕಂಧಗಳು ತಮ್ಮ ಕಾರಕಗಳಿಂದ ಆಗಿವೆ. ಅವು ಆತ್ಮನ ಕಾರಣದಿಂದ ಅಥವಾ ಇತರ ದ್ರವ್ಯದ ಕಾರಣದಿಂದ ಆಗಿಲ್ಲ. ಅದೇ ಪ್ರಕಾರ ಕರ್ಮದ ವಿಚಿತ್ರತೆಯನ್ನು ತಿಳಿಯುವುದು. ಜೀವವು ಎಷ್ಟು ಪ್ರಮಾಣದಲ್ಲಿ ರಾಗ ಮಾಡುತ್ತದೆ ಅಷ್ಟು ಪ್ರಮಾಣದಲ್ಲಿ ಕರ್ಮಗಳು ಕಟ್ಟುತ್ತವೆ ಆದಾಗ್ಯೂ ಜೀವನು ಅವುಗಳ ಕರ್ತೃವಿಲ್ಲ, ಎಂದ ಮೇಲೆ ಜೀವನು ಶರೀರದ ಅಥವಾ ಬಾಹ್ಯದಲ್ಲಿನ ಪದಾರ್ಥಗಳ ಕರ್ತೃವಾಗುತ್ತಾನೆಂಬುದು ಎಂದೂ ಸಂಭವಿಸುವುದಿಲ್ಲ.

**ಭಾವಾರ್ಥ ಃ-** ಚಂದ್ರನಿಂದ ಅಥವಾ ಸೂರ್ಯನ ಪ್ರಭೆಯ ನಿಮಿತ್ತ ಪಡೆದು ಸಂಧ್ಯಾರಾಗವು ಅರಳುತ್ತದೆ ಆಗ ಆಕಾಶದಲ್ಲಿ ಅನೇಕ ಪ್ರಕಾರದ ಕೆಂಬಣ್ಣದ ವರ್ಣವು ಕಂಡುಬರುತ್ತದೆ. ಪುದ್ಗಲಗಳು ಅನೇಕ ಪ್ರಕಾರದ ವರ್ಣರೂಪವಾಗಿ ತಮ್ಮ ಕಾರಣದಿಂದ ಆಗುತ್ತವೆ. ಸೂರ್ಯ ಅಥವಾ ಚಂದ್ರನ ನಿಮಿತ್ತವಿರುವುದರಿಂದ

ಆಗುತ್ತದೆಯೆಂಬುದಾಗಿಲ್ಲ, ಆದರೆ ಸ್ವತಂತ್ರತೆಯಿಂದ ಆಗುತ್ತದೆ. ಯಾವ ಪ್ರಕಾರ ಬಿಸಿಲೊಳಗೆ ಕೈ ಮಾಡುವುದರಿಂದ ಪರಮಾಣಿವಿನ ಕಪ್ಪು ಪರ್ಯಾಯವಾಗುತ್ತದೆ ಅದು ಪರಮಾಣುವಿನ ಕಾರಣದಿಂದಾಗಿದೆ, ಕೈಯ ಕಾರಣದಿಂದ ಆಗಿಲ್ಲ, ಬೆಳಿಗ್ಗೆ ಕೂಡ ಆಕಾಶದಲ್ಲಿ ಅನೇಕ ವರ್ಣಗಳು ಕಂಡುಬರುತ್ತವೆ ಅವು ಪರಮಾಣುವಿನ ಕಾರಣದಿಂದಾಗುತ್ತವೆ, ಸೂರ್ಯನ ಕಾರಣದಿಂದ ಇಲ್ಲ, ಮೋಡಗಳ ಅನೇಕ ವರ್ಣ ರೂಪಗಳಾಗುವುದು, ಮಳೆ ಬೀಳುವಾಗ ಇಂದ್ರಧನುಷ ಮೂಡುವುದು, ಚಂದ್ರನ ಸುತ್ತ ಮಂಡಲಾಕಾರವಾಗುವುದು ಮೊದಲಾದ ಅನೇಕ ಜಾತಿಯ ಪುದ್ಗಲ ಸ್ಕಂಧಗಳ ಅವಸ್ಥೆಯು ತನ್ನ ಯೋಗ್ಯತೆಯಿಂದ ಆಗುತ್ತದೆ, ಪರದ ಕಾರಣದಿಂದ ಇಲ್ಲ. ಬಿರುಗಾಳಿಯು ಸುತ್ತುವುದು ಮತ್ತು ಹರಡುವುದು ಕೂಡ ತನ್ನ ಕಾರಣದಿಂದ ಹರಡುತ್ತದೆ. ಇನ್ನೊಂದರ ಕರ್ತೃತ್ವತೆಯ ಅಪೇಕ್ಷೆಯಿಲ್ಲದೆ ಆಯಾರೂಪವಾಗಿ ಪರಿಣಮಿಸುತ್ತವೆ. ಈ ದೃಷ್ಟಾಂತದ ಅನುಸಾರ ಜೀವದ ಅಶುದ್ಧ ವಿಕಾರೀ ಪರಿಣಾಮದ ನಿಮಿತ್ತ ಪಡೆದು ಪುದ್ಗಲ ವರ್ಗಣಗಳು ಎಂಟು ಕರ್ಮಗಳ ದಶೆಯರೂಪದಿಂದ ಸ್ವಯಂ ಪರಿಣಮಿಸುತ್ತವೆ.

ಯಾವ ಜೀವನು ಸ್ವರೂಪ ತಿಳಿದು ಕೊಳ್ಳುವುದಿಲ್ಲ ಅವನಿಗೆ ಸ್ವಲ್ಪ ದೋಷ ತಗಲುತ್ತದೆ ಮತ್ತು ಯಾವನು ತಿಳಿದುಕೊಂಡು ಪಾಪ ಮಾಡುತ್ತಾನೆ ಅವನು ಅಧಿಕ ದೋಷಕ್ಕೆ ಪಾತ್ರನಿದ್ದಾನೆಂಬ ಮಾತು ಅಸತ್ಯವಿದೆ. ವಸ್ತು ಸ್ವರೂಪದ ಅಜ್ಞಾನತನವೇ ಮಹಾನ ಪಾಪವಿದೆ. ನಿಗೋದದ ಜೀವಕ್ಕೆ ನಾನು ಯಾರನ್ನಾದರೂ ಹೊಡೆಯುವೆನೆಂಬ ಅರಿವಿರುವುದಿಲ್ಲ ಆದರೂ ವಿಪರೀತ ಮನ್ನಣೆ ಮತ್ತು ವಿಪರೀತ ಆಚರಣೆಯೇ ಮಹಾನ್ ಪಾಪವಿದೆ.

ಸಮ್ಯಗ್ದೃಷ್ಟಿ ಜೀವನು ಯುದ್ಧದಲ್ಲಿ ನೂರಾರು ಜನರ ಹಿಂಸೆ ಮಾಡುತ್ತಿರುವುದು ಕಂಡುಬಂದರೂ ಚಾರಿತ್ರದ ಅಸ್ಥಿರತೆಯ ಅಲ್ಪಬಂಧವಿದೆ.ಮತ್ತು ನಿಗೋದದ ಜೀವವು ಯಾರನ್ನು ಹೊಡೆಯುತ್ತಿರುವುದು ಗೋಚರಿಸದಿದ್ದರೂ ವಿಪರೀತ ಮನ್ನಣೆಯ ಮೂಲಕ ಪಾಪ ಕಟ್ಟಿಕೊಳ್ಳುತ್ತಿದೆ. ದ್ರವ್ಯ-ಗುಣ-ಪರ್ಯಾಯಗಳ ಸ್ವರೂಪವು ಹೇಗಿದೆಯೆಂಬುದರ ಅರಿವಿಲ್ಲದಿರುವುದೇ ಮಹಾನ ಪಾಪವಿದೆ.

ಆ ಅಜ್ಞಾನೀ ನಿಗೋದದ ಜೀವವು ಇಷ್ಟು ದೊಡ್ಡ ಮಿಥ್ಯಾತ್ವದ ಪಾಪ ಮಾಡುತ್ತಿದೆಯೆಂಬ ಅರಿವು ಜಡಪರಮಾಣುವಿಗೆ ಇಲ್ಲ, ಆದಾಗ್ಯೂ, ಜಡಪರಮಾಣುಗಳು ವಿಕಾರದ ಪ್ರಮಾಣದಲ್ಲಿ ಕರ್ಮರೂಪದಿಂದ ಪರಿಣಮಿಸಿದರೂ ಆತ್ಮನು ಆ ಕರ್ಮವನ್ನು ಕಟ್ಟಿಕೊಳ್ಳುವುದಿಲ್ಲವೆಂಬ ಸ್ವತಂತ್ರ ಕ್ರಿಯೆಯು ಪ್ರತಿಯೊಂದು ಜೀವ ಮತ್ತು ಪುದ್ಗಲದಲ್ಲಿ ಸ್ಥಿರವಿದೆ.

ಇಲ್ಲಿ 'ಚೇತನಾತ್ಮಕ ಭಾವಗಳ ನಿಮಿತ್ತ ಪಡೆದೆ'ಂದು ಹೇಳಿದೆ. ಇದರ ಅರ್ಥವು ರಾಗ-ದ್ವೇಷದಿಂದ ಕರ್ಮ ಮಾಡಿಸುತ್ತದೆಯೆಂದಲ್ಲ ಅಥವಾ ಪರಮಾಣುವಿನಲ್ಲಿ ಕರ್ಮರೂಪದಿಂದಾಗುವ ಯೋಗ್ಯತೆಯಿದ್ದರೂ ಜೀವವು ವಿಕಾಸ ಮಾಡಲಿಲ್ಲ ಅದಕ್ಕಾಗಿ ಅದು ಸಿಕ್ಕಿಕೊಂಡಿತೆಂಬುದಾಗಿಯೂ ಇಲ್ಲ. ಅಶುದ್ಧಭಾವಗಳ ನಿಮಿತ್ತ ಪಡೆದು ಪುದ್ಗಲ ಸ್ಕಂಧಗಳು ತಮ್ಮ ಶಕ್ತಿಯಿಂದ ಕರ್ಮರೂಪದಿಂದ ಬಂಧಿಸಲ್ಪಟ್ಟಿವೆ.

'ಆತ್ಮನು ಕರ್ಮದಿಂದ ಕಟ್ಟಿರದಿದ್ದರೆ ಅವನು ಅಬಂಧನೆಂದು ಸಿದ್ಧವಾಗುವುದು ಅದರಿಂದ ಅವನು ಈಗಲೇ ಸಿದ್ಧನಾಗಬೇಕಾಗುವುದೆಂದು ಯಾವನೋ ಹೇಳುತ್ತಾನೆ. ಸೋದರನೇ ! ನಿನ್ನ ಭಾವ ಹೇಗಾಗುವುದು ಹಾಗೆ ಕರ್ಮ ಕಟ್ಟುವುದು, ಆ ಕರ್ಮಗಳನ್ನು ಅವನು ಮಾಡಿಲ್ಲ ಮತ್ತು ಕರ್ಮದ ನಿಮಿತ್ತವಾದ ರಾಗ-ದ್ವೇಷಗಳು ನಿನ್ನಲ್ಲಿಲ್ಲವೆಂದು ಕೂಡ ಇಲ್ಲ, ಆ ರಾಗ-ದ್ವೇಷಗಳಿಲ್ಲದಿದ್ದರೆ ಸಿದ್ಧನಾಗಿಹೋಗುವೆ ನಿನ್ನಲ್ಲಿ ರಾಗ-ದ್ವೇಷರೂಪದ ಸಂಸಾರವಿದೆ ಅದಕ್ಕಾಗಿ ಪುದ್ಗಲಕ್ಕೆ ಕರ್ಮರೂಪದಿಂದಾಗಬೇಕಾಗಿದೆಯೆಂದು ಕೂಡ ಇಲ್ಲ. ಜೀವದ ರಾಗ-ದ್ವೇಷದಲ್ಲಿ ಮತ್ತು ಕರ್ಮದಲ್ಲಿ ಹೀಗೆ ಇವೆರಡರಲ್ಲಿ ಸ್ವತಂತ್ರವಾದ ನಿಮಿತ್ತ-ನೈಮಿತ್ತಿಕ ಸಂಬಂಧವಿದೆ.

ಜೀವವು ಎಷ್ಟು ರಾಗ-ದ್ವೇಷ ಮಾಡುತ್ತದೆ ಅಷ್ಟು ಪ್ರಮಾಣದಲ್ಲಿ ಕರ್ಮಗಳು ಕಟ್ಟುತ್ತವೆ. ಈ ಶರೀರದ ಕಾರ್ಯವು

ನನ್ನದಿದೆಯೆಂದು ಏಕತ್ವಬುದ್ಧಿ ಮಾಡಿದರೆ ಅದರ ಪ್ರಮಾಣದಲ್ಲಿ ಕರ್ಮ ಕಟ್ಟಿದರೂ ಕೂಡ ಆತ್ಮನು ಅದರ ಕರ್ತೃವಿಲ್ಲ ಮತ್ತು ಒಂದು ಜೀವವು ಸ್ವಲ್ಪ ದಯೆಮಾಡಿ ಅಧಿಕ ಪುಣ್ಯಕರ್ಮ ಕಟ್ಟಿಕೊಳ್ಳುವಂತೆಯೂ ಇಲ್ಲ. ಹೆಚ್ಚು ದಯೆಮಾಡಿ ಸ್ವಲ್ಪ ಪುಣ್ಯಕರ್ಮ ಕಟ್ಟಿಕೊಳ್ಳುವಂತೆಯೂ ಇಲ್ಲ. ಹೆಚ್ಚು ಅಶುಭಭಾವ ಮಾಡುವುದು ಮತ್ತು ಕಡಿಮೆ ಪಾಪಕರ್ಮ ಕಟ್ಟುವಂತೆ ಕೂಡ ಇಲ್ಲ. ಇದೇ ಪ್ರಕಾರ ತಕ್ಕಡಿಯಲ್ಲಿ ತೂಕ ಮಾಡುವಾಗ ಪರಡೆಯಲ್ಲಿ ವಸ್ತುಗಳು ಹೆಚ್ಚು ಕಡಿಮೆಯಿದ್ದರೆ ತಕ್ಕಡಿಯು ವಕ್ರವಾಗಿ ನಿಲ್ಲುವುದು, ಆದಾಗ್ಯೂ ತಕ್ಕಡಿಯು ತನ್ನ ಕಾರಣದಿಂದ ವಕ್ರವಾಗಿ ನಿಂತಿದೆ ಅದು ವಸ್ತುವಿನ ನ್ಯೂನಾಧಿಕತೆಯಿಂದ ವಕ್ರವಾಗಿದೆಯೆನ್ನುವಂತಿಲ್ಲ. ಮತ್ತು ಪರಡೆಯಲ್ಲಿ ವಸ್ತುಗಳು ಸರಿಯಾಗಿದ್ದರೆ ತಕ್ಕಡಿಯು ಸರಿಯಾಗುತ್ತದೆ ಅದು ತನ್ನ ಕಾರಣದಿಂದ ಆಗುತ್ತದೆ, ಆದರೆ ಪರವಸ್ತುಗಳ ಕಾರಣದಿಂದ ಆಗುವುದಿಲ್ಲ ಈಗ ನಾನು ಸರಿಯಾಗಿದ್ದೇನೆಂಬ ಅರಿವು ಆ ತಕ್ಕಡಿಗೆ ಇಲ್ಲ. ಆದಾಗ್ಯೂ ಅದು ತನ್ನ ಕಾರಣದಿಂದ ಸರಿಯಾಗುತ್ತದೆ. ಅದೇ ಪ್ರಕಾರ ಜೀವವು ಎಷ್ಟು ಪ್ರಮಾಣದಲ್ಲಿ ರಾಗ-ದ್ವೇಷ ಮಾಡುತ್ತದೆ ಅಷ್ಟು ಪ್ರಮಾಣದಲ್ಲಿ ಜಡಕರ್ಮಗಳು ಕಟ್ಟುತ್ತವೆ. ಜೀವವು ಇಷ್ಟು ಮತ್ತು ಇಂಥ ರಾಗ-ದ್ವೇಷ ಮಾಡಿದೆ ಅದಕ್ಕಾಗಿ ನಾನು ಅದರ ಪ್ರಮಾಣದಲ್ಲಿ ಕಟ್ಟುವೆನೆಂದು ಜಡಕರ್ಮಗಳಿಗೆ ಅರಿವಿರುವುದಿಲ್ಲ, ಆದಾಗ್ಯೂ ವಿಕಾರದ ಪ್ರಮಾಣದಲ್ಲಿ ಕರ್ಮಗಳು ಕಟ್ಟುತ್ತಿದ್ದರೂ ಕೂಡ ಜೀವವು ಅವುಗಳ ಕರ್ತೃವಿಲ್ಲವೆಂದ ಮೇಲೆ ಅಂಗಡಿ, ಮನೆ, ಶರೀರ ಮೊದಲಾದ ಪರಪದಾರ್ಥಗಳ ಕರ್ತೃವು ಆತ್ಮನಾಗುತ್ತಾನೆಂಬುದು ಎಂದೂ ಸಂಭವಿಸುವುದಿಲ್ಲ.

ನಿಶ್ಚಯದ ಅಪೇಕ್ಷೆಯಿಂದ ಜೀವವು ತನ್ನ ವಿಕಾರಭಾವಗಳ ಕರ್ತೃವಿದೆ ಮತ್ತು ಪುದ್ಗಲವು ತನ್ನ ಕರ್ಮರೂಪಭಾವದ ಕರ್ತೃವಿದೆ, ಆದಾಗ್ಯೂ ವ್ಯವಹಾರದಿಂದ ಕರ್ಮದ ಮೂಲಕ ಹೇಳಿದ ಸುಖ-ದುಃಖದ ಸಾಮಗ್ರಿಯ ಫಲವನ್ನು ಜೀವವು ಭೋಗಿಸುತ್ತದೆಯೆಂಬ ವ್ಯವಹಾರ ಕಥನದಲ್ಲಿ ವಿರೋಧವಿಲ್ಲವೆಂದು ಹೇಳಿದೆ.

ಜೀವಾ ಪೋಗ್ಗಲಕಾಯಾ ಅಣ್ಣೋಣ್ಣಾಗಾಢಗಹಣಪಡಿಬದ್ಧಾ ।
ಕಾಲೇ ವಿಜುಜ್ಜಮಾಣಾ ಸುಹದುಕ್ಖಂ ದೇಂತಿ ಭುಂಜಂತಿ ।।೬೭।।

**ಜೀವಮೇಣ್ಪುದ್ಗಲಕಾಯ ಅನ್ಯೋನ್ಯ ಅವಗಾಢ ಗ್ರಹಣದಿಂದ ಬದ್ಧವಿವೆ ।**
**ಅವು ಕಾಲದಿಂ ಬೇರೆಯಾದಾಗ ಸುಖ-ದುಃಖ ಕೊಡುವವು ಮೇಣ್ಭೋಗಿಸುವವು ।।೬೭।।**

ಜೀವ ಮತ್ತು ಪುದ್ಗಲಕಾಯಗಳು ವಿಶಿಷ್ಟ ಪ್ರಕಾರದಿಂದ ಅನ್ಯೋನ್ಯ ಅವಗಾಹದ ಗ್ರಹಣದಿಂದ ಪರಸ್ಪರ ಬದ್ಧವಾಗಿವೆ ; ಕಾಲದಿಂದ ಬೇರೆಯಾದ ಮೇಲೆ ಸುಖ-ದುಃಖ ಕೊಡುತ್ತವೆ ಮತ್ತು ಭೋಗಿಸುತ್ತವೆ. ಎಂದರೆ ಪುದ್ಗಲಕಾಯಗಳು ಸುಖ-ದುಃಖ ಕೊಡುತ್ತವೆ ಜೀವಗಳು ಭೋಗಿಸುತ್ತವೆ.

ನಿಶ್ಚಯನಯದ ಅಪೇಕ್ಷೆಯಿಂದ ಜೀವವು ತನ್ನ ವಿಕಾರ ಭಾವಗಳ ಕರ್ತೃವಿದೆ ಮತ್ತು ಪುದ್ಗಲವು ತನ್ನ ಕರ್ಮರೂಪ ಭಾವಗಳ ಕರ್ತೃವಿದೆ. ಆದರೂ ವ್ಯವಹಾರದಿಂದ ಕರ್ಮದ ಮೂಲಕ ದೊರೆತ ಸುಖ-ದುಃಖದ ಸಾಮಗ್ರಿಯ ಫಲವನ್ನು ಜೀವನು ಭೋಗಿಸುತ್ತಾನೆಂಬ ವ್ಯವಹಾರ ಕಥನದಲ್ಲಿ ವಿರೋಧವಿಲ್ಲವೆಂದು ಹೇಳಿದೆ.

ಆತ್ಮನು ಜ್ಞಾನಾನಂದಸ್ವರೂಪನಿರುವುದನ್ನು ಮರೆತು ವಿಕಾರಭಾವ ಮಾಡಿದಾಗ ಪುದ್ಗಲ ವರ್ಗಣಗಳು ತಮ್ಮ ಕಾರಣದಿಂದ ಕರ್ಮರೂಪವಾಗಿ ಪರಿಣಮಿಸುತ್ತವೆ ಮತ್ತು ಜೀವವನ್ನು ಪುದ್ಗಲಕರ್ಮಗಳು ಪರಸ್ಪರ ಅನಾದಿಕಾಲದಿಂದ ನಿಬಿಡರೂಪವಾಗಿ ಬಂಧಿಸಿವೆ, ಎಂದರೆ ಏಕಕ್ಷೇತ್ರಾವಗಾಹರೂಪದಿಂದಿವೆ. ಆತ್ಮನು ಆತ್ಮರೂಪದಿಂದಿದ್ದಾನೆ ಮತ್ತು ಜಡ ಜಡದ ಕಾರಣದಿಂದ ಕರ್ಮರೂಪವಾಗಿದೆ. ಯಾವುದರ ಕಾರಣದಿಂದ ಯಾವುದಿಲ್ಲ. ಪುದ್ಗಲಕರ್ಮಗಳು ತಮ್ಮ ಉದಯಕಾಲದಲ್ಲಿ ರಸವಿತ್ತು ಉದುರಿಹೋಗುತ್ತವೆ. ಆಗ ಸಾತಾ ಅಥವಾ ಅಸಾತಾದ ಸಂಯೋಗದ ಪ್ರಾಪ್ತಿಯು ಜೀವನಿಗಾಗುತ್ತದೆ. ಅಜ್ಞಾನೀಜೀವನು ಆ ಸಂಯೋಗಗಳಲ್ಲಿ ಒಳಿತು-ಕೆಡಕುಗಳ ಕಲ್ಪನೆ ಮಾಡುವುದರಿಂದ ಆ

ಪದಾರ್ಥಗಳನ್ನು ಅಥವಾ ಕರ್ಮವನ್ನು ಭೋಗಿಸುತ್ತಾನೆಂದು ಹೇಳಲಾಗುತ್ತದೆ. ಒಬ್ಬನಿಗೆ ಹಣ ದೊರಕುತ್ತದೆ, ಒಬ್ಬನಿಗೆ ರೋಗವಾಗುತ್ತದೆ, ಒಬ್ಬನ ಮಗನು ಸತ್ತುಹೋಗುತ್ತಾನೆ, ಒಬ್ಬನಿಗೆ ಸರ್ಪದಂಶ ಮಾಡುತ್ತದೆ. ಇಂಥ ಪ್ರಸಂಗಗಳು ತಮ್ಮ ಕಾರಣದಿಂದ ಬಂದರೂ ಅದರಲ್ಲಿ ಪೂರ್ವಕರ್ಮದ ನಿಮಿತ್ತವನ್ನು ಹೇಳಲಾಗುತ್ತದೆ ಮತ್ತು ಆ ವಸ್ತುಗಳಲ್ಲಿ ಜೀವನು ಹರ್ಷ-ವಿಷಾದಗಳನ್ನು ಮಾಡುತ್ತಾನೆ ಅದಕ್ಕಾಗಿ ಭೋಗಿಸುತ್ತಾನೆಂದು ಹೇಳಲಾಗುತ್ತದೆ.

**ಭಾವಾರ್ಥ ಃ-** ಏಕೇಂದ್ರಿಯದಿಂದ ಹಿಡಿದು ಪಂಚೇಂದ್ರಿಯದವರೆಗಿನ ಅನಂತ ಅಜ್ಞಾನಿಜೀವಗಳು ತಮ್ಮ ಸ್ವರೂಪವನ್ನು ಮರೆತು ಪೂರ್ವಕರ್ಮದ ನಿಮಿತ್ತದಿಂದ ಮೋಹ-ರಾಗ-ದ್ವೇಷರೂಪದ ಭಾವ ಮಾಡುತ್ತವೆ ಅದರಲ್ಲಿ ರಾಗವು ಸ್ನಿಗ್ಧವಿದ್ದರೆ ದ್ವೇಷವು ರೂಕ್ಷವಿದೆ. ಆ ಸಮಯದಲ್ಲಿ ಪುದ್ಗಲ ಪರಮಾಣುಗಳು ತಮ್ಮ ಸ್ನಿಗ್ಧರೂಪ ಪರಿಣಾಮದ ಮೂಲಕ ಕರ್ಮದ ಸ್ಕಂಧರೂಪದಿಂದ ಪರಿಣಮಿಸುತ್ತವೆ.

ಎರಡು ಗುಣ ಅಥವಾ ಅಂಶಗಳ ಸ್ನಿಗ್ಧ-ರೂಕ್ಷತೆಯ ವೃದ್ಧಿಯಾದರೆ ಪುದ್ಗಲದ ಬಂಧಾವಸ್ಥೆಯಾಗುತ್ತದೆ. ಶರೀರ ಕಾಷ್ಟ ಮೊದಲಾದವು ಪುದ್ಗಲಪರಮಾಣುಗಳ ಸ್ಕಂಧವಿವೆ. ಪುದ್ಗಲಪರಮಾಣು ದ್ರವ್ಯವಿದ್ದು ಅದರಲ್ಲಿ ಸ್ಪರ್ಶ, ರಸ, ಗಂಧ, ವರ್ಣಗುಣಗಳಿವೆ. ಮತ್ತು ಅದರಲ್ಲಿ ಸ್ಪರ್ಶಗುಣದ ರೂಕ್ಷ ಅಥವಾ ಸ್ನಿಗ್ಧರೂಪದ ಪರ್ಯಾಯವಿರುತ್ತದೆ. ಅದರಲ್ಲಿ ಎರಡು ಗುಣಗಳು ಸ್ನಿಗ್ಧತೆಯುಳ್ಳ ನಾಲ್ಕು ಗುಣಗಳು ರೂಕ್ಷತೆಯುಳ್ಳವುಗಳ ಜತೆ, ನಾಲ್ಕುಳ್ಳವು ಆರು ಗುಣಗಳುಳ್ಳವುಗಳ ಜತೆ, ಐದುಳ್ಳವು ಏಳು ಗುಣಗಳುಳ್ಳವುಗಳ ಜತೆ ಸ್ಕಂಧರೂಪದಿಂದ ಆಗುತ್ತವೆ. ಅವು ಕೂಡ ತಮ್ಮ ಯೋಗ್ಯತೆಯಿಂದ ಆಗುತ್ತವೆ. ಜೀವನು ಅವುಗಳ ಕರ್ತೃವಿಲ್ಲ.

ಪರಮಾಣುವಿನಲ್ಲಿ ಒಂದು ಗುಣವು ಅಧಿಕವಿದ್ದರೆ ಬಂಧವಾಗುವುದಿಲ್ಲ. ಎರಡು ಅಂಶಗಳು ಅಧಿಕವಿದ್ದರೇನೇ ಬಂಧಿಸುತ್ತವೆ. ಹಾಗೆ ಆತ್ಮನಲ್ಲಿ ರಾಗ-ದ್ವೇಷದ ಅಂತಿಮ ಅಂಶಗಳು ಬಂಧದ ಕಾರಣವಿಲ್ಲ. ಆ ಅಂತಿಮ ಅಂಶಗಳು ಬಂಧದ ಕಾರಣವಾದರೆ ಆತ್ಮನೆಂದೂ ಅಬಂಧನಾಗುವುದಿಲ್ಲ.

ಶರೀರದ ಬಂಧನ, ಕರ್ಮದ ಬಂಧನ, ಪಿಂಡವಾಗುವ ಆ ಜಡದ ರೂಕ್ಷತೆ ಮತ್ತು ಸ್ನಿಗ್ಧತೆಯ ಕಾರಣದಿಂದ ಆಗುತ್ತದೆ. ಈ ಎಲ್ಲ ಪುದ್ಗಲಸ್ಕಂಧಗಳು ಆತ್ಮನಿಲ್ಲದೆ ಏಕತ್ರವಾಗುತ್ತವೆ. ಕರ್ಮಕ್ಕಿಂತ ಅನಂತ ಗುಣಿತವಾಗಿ ಪುದ್ಗಲಸ್ಕಂಧಗಳಿವೆ ಅವುಗಳದು ಆತ್ಮನ ಜತೆ ಸಂಬಂಧವಿಲ್ಲ, ಅವು ತಮ್ಮ ಕಾರಣದಿಂದ ಪಿಂಡರೂಪವಾಗುತ್ತವೆ. ಈ ಬೆರಳು ಮೇಲೆ ಕೆಳಗೆ ಆಗುತ್ತಿರುವುದು ಅದು ತನ್ನ ಕಾರಣದಿಂದ ಆಗುತ್ತದೆ ಆದರೂ ಅದನ್ನು ಆತ್ಮನಿಂದ ಆಗುತ್ತದೆಯೆಂದು ಮನ್ನಿಸುವವನು ಮಿಥ್ಯಾದೃಷ್ಟಿಯಿದ್ದಾನೆ.

ಹೇಗೆ ಪುದ್ಗಲವು ಸ್ಕಂಧರೂಪವಾಗುತ್ತದೆ ಹಾಗೆ ಪುದ್ಗಲ ವರ್ಗಣವು ಕರ್ಮದ ಸ್ಕಂಧರೂಪವಾಗಿ ಪರಿಣಮಿಸುತ್ತದೆ ಅದು ಕರ್ಮಪರಮಾಣುವಿನ ಉದಯಕಾಲದಲ್ಲಿ ಸಾತಾ-ಅಸಾತಾದ ಫಲವು ದೊರಕುವುದರಿಂದ ಅದನ್ನು ಸುಖ-ದುಃಖರೂಪವೆಂದು ಹೇಳಲಾಗಿದೆ. ಅದರ ನಿಮಿತ್ತದಿಂದ ಧನ, ಮನೆ, ಸ್ತ್ರೀ, ಕುಟುಂಬ ಮೊದಲಾದವು ದೊರಕಿದಾಗ ಅಜ್ಞಾನೀಜೀವನು ತನ್ನ ಅಜ್ಞಾನದ ಕಾರಣದಿಂದ ಈ ಪದಾರ್ಥಗಳನ್ನು ನಾನು ತಂದೆನೆಂದು ಅಭಿಮಾನಪಟ್ಟು ಅದರಲ್ಲಿ ಸುಖ-ದುಃಖದ ಕಲ್ಪನೆ ಮಾಡುತ್ತಾನೆ. ಆಯಾ ಪದಾರ್ಥಗಳು ತಮ್ಮ ತಮ್ಮ ಕಾರಣದಿಂದ ಬಂದಿವೆ ಅದರಲ್ಲಿ ಮೊದಲು ಕಟ್ಟಿದ ಕರ್ಮವು ನಿಮಿತ್ತ ಮಾತ್ರವಿದೆ ಮತ್ತು ಜೀವನು ತನ್ನ ರಾಗ-ದ್ವೇಷದ ಭಾವ ಮಾಡಿ ಆಕುಲತೆಯನ್ನು ಭೋಗಿಸುತ್ತಾನೆ ಅದರಲ್ಲಿ ಕೂಡ ಕರ್ಮವು ನಿಮಿತ್ತಮಾತ್ರವಿದೆ. ಹಳೆಯ ಕರ್ಮಗಳು ಸ್ವತಂತ್ರ, ಸಾಮಗ್ರಿ ಬರುವುದು ಸ್ವತಂತ್ರ ಮತ್ತು ಜೀವದ ಹರ್ಷ-ವಿಷಾದದ ಪರಿಣಾಮವಾಗುವುದು ಕೂಡ ಸ್ವತಂತ್ರವಿದೆ. ಶರೀರದಲ್ಲಿ ರೋಗ ಬಂದರೆ ಅಸಾತಾಕರ್ಮದ ಫಲ ಬಂತೆಂದು ಹೇಳುವರು. ಸಾಮಗ್ರಿಯ ಸಮೂಹ ಬಂದಾಗ ಸಾತಾದ ಫಲ ಬಂತೆಂದು ಹೇಳುವರು. ಹೀಗೆ ಆತ್ಮನು ಕರ್ಮಫಲ ಭೋಗಿಸುವಲ್ಲಿ ಕರ್ಮವು ಆತ್ಮನಿಗೆ ಸುಖ-ದುಃಖದ ಫಲ ಕೊಟ್ಟಿತೆಂದು ಹೇಳಲಾಗುವುದು.

ಅಜ್ಞಾನಿಜೀವನಿಗೆ ಸ್ವ-ಪರದ ಅರಿವಿಲ್ಲದಿರುವುದರಿಂದ ಶರೀರವನ್ನು ನಾನು ನಡೆಸುತ್ತೇನೆ, ಈ ಹಣವನ್ನು ನಾನು ಸಂಪಾದಿಸಿದ್ದೇನೆಂದು ಅವನು ಮನ್ನಿಸುತ್ತಾನೆ. ಶರೀರವು ಶರೀರದ ಕಾರಣದಿಂದ ಮತ್ತು ಹಣವು ಹಣದ ಕಾರಣದಿಂದ ಬಂದಿದ್ದರೂ ಅಜ್ಞಾನೀಜೀವನು ಅವು ನನ್ನ ಕಾರಣದಿಂದ ಬಂದಿವೆಯೆಂದು ಮನ್ನಿಸುತ್ತಾನೆ, ಮಿಥ್ಯಾತ್ವದ ಭಾವ ಮಾಡುತ್ತಾನೆ ಮತ್ತು ಸಂಸಾರದಲ್ಲಿ ಪರಿಭ್ರಮಣ ಮಾಡುತ್ತಾನೆ.

ಈಗ ಜೀವರುಗಳಿಗೆ ವಸ್ತುಸ್ವರೂಪದ ಯಥಾರ್ಥಜ್ಞಾನವಿಲ್ಲ. 'ಣಮೋ ಅರಹಂತಾಣಂ'ದ ಅರ್ಥವನ್ನು ತಿಳಿಯುವುದಿಲ್ಲ. ಭಗವಂತರು ಜಡಕರ್ಮರೂಪದ ಶತ್ರುವನ್ನು ನಾಶ ಮಾಡಿದರೆಂದು ಅಜ್ಞಾನಿಯು ಮನ್ನಿಸುತ್ತಾನೆ. ಆತ್ಮನನ್ನು ತಿಳಿಯದಿರುವುದೇ ವೈರಿಯಿದೆ. ಆ ವೈರಿಯನ್ನು ಎಂದರೆ ಅಜ್ಞಾನ-ರಾಗ-ದ್ವೇಷವನ್ನು ಆತ್ಮನ ಅರಿವಿನೊಡನೆ ಯಾರು ನಾಶಮಾಡಿದ್ದಾರೆ ಅವರನ್ನು ಅರಹಂತರೆಂದು ಹೇಳುತ್ತಾರೆ. ವ್ಯವಹಾರದಿಂದ ಕರ್ಮವನ್ನು ನಾಶ ಮಾಡಿದರೆಂದು ಹೇಳಲಾಗುತ್ತದೆ. ನೀರಿನ ಪಾತ್ರೆಯೆಂದು ಹೇಳಲಾಗುವುದೆಲ್ಲವೂ ನಿಮಿತ್ತದ ಕಥನವಿದೆ.

ಶುಭಾಶುಭ ಬಾಹ್ಯಪದಾರ್ಥಗಳಲ್ಲಿ ಕರ್ಮವು ನಿಮಿತ್ತ ಕಾರಣವಿದೆಯೆಂದು ಹೇಳಲಾಗುತ್ತದೆ. ಈಗಲೂ ಕೂಡ ಸಮಾಜದ ವ್ಯವಸ್ಥೆಯು ಸರಿಯಾಗಿಲ್ಲದಿರುವುದರಿಂದ ಕೆಲವರು ಕೋಟ್ಯಾಧೀಶರಾಗಿದ್ದಾರೆ ಕೆಲವರು ದರಿದ್ರರಾಗಿ ಉಳಿದಿದ್ದಾರೆಂದು ಹೇಳಲಾಗುತ್ತದೆ, ಆದರೆ ಆ ಮಾತು ಸತ್ಯವಿಲ್ಲ. ಎಲ್ಲರಿಗೂ ಕರ್ಮಕ್ಕನುಸರಿಸಿ ಸಂಯೋಗಗಳ ಪ್ರಾಪ್ತಿಯಾಗುತ್ತದೆ. ಆ ಸಾಮಗ್ರಿಗಳು ದೊರಕಿದಾಗ ಅಜ್ಞಾನೀಜೀವನು ರಾಗ-ದ್ವೇಷ ಮಾಡಿದರೆ ಸಾಮಗ್ರಿಯನ್ನು ಸುಖ-ದುಃಖದಲ್ಲಿ ನಿಮಿತ್ತವೆಂದು ಹೇಳಲಾಗುತ್ತದೆ. ಈ ಪ್ರಕಾರ ಕರ್ಮದ ನಿಮಿತ್ತದಿಂದ ಸಾಮಗ್ರಿಗಳು ದೊರಕುತ್ತವೆ. ಮತ್ತು ಅದರ ನಿಮಿತ್ತದಿಂದ ಜೀವನು ಸುಖ-ದುಃಖದ ಕಲ್ಪನೆ ಮಾಡುತ್ತಾನೆ ಅದರಿಂದ ಕರ್ಮಗಳು ಸುಖ-ದುಃಖದ ಫಲವನ್ನು ಕೊಡುತ್ತವೆ ಮತ್ತು ಜೀವನು ಅವನ್ನು ಭೋಗಿಸುತ್ತಾನೆಂದು ಹೇಳಲಾಗುತ್ತದೆ.

ಆತ್ಮನು ಜಡಕರ್ಮಗಳ ಕರ್ತೃವಿಲ್ಲ. ಆತ್ಮನು ತನ್ನ ರಾಗ-ದ್ವೇಷಗಳ ಕರ್ತೃ ಇದ್ದಾನೆ. ಕರ್ಮವಿಲ್ಲದೆ ಆತ್ಮನಿಗೆ ಸುಖ-ದುಃಖಗಳಾಗುತ್ತವೇನೆಂದು ಕೇಳುತ್ತಾರೆ. ಆದರೆ ಸೋದರನೇ ! ಜೀವನು ಸುಖ-ದುಃಖದ ಕಲ್ಪನೆ ಮಾಡಿದರೆ ಅದನ್ನು ಬಾಹ್ಯವಸ್ತುವನ್ನು ಮತ್ತು ಕರ್ಮವನ್ನು ಭೋಗಿಸಿದನೆಂದು ಹೇಳಲಾಗುತ್ತದೆ. ಜಡಕರ್ಮಗಳು ಎರಡು ಪ್ರಕಾರದಿಂದ ನಿಮಿತ್ತವಾಗುತ್ತವೆ. ಜೀವದ ರಾಗ-ದ್ವೇಷದ ಪರಿಣಾಮದಲ್ಲಿ ಮೋಹನೀಯಕರ್ಮವು ನಿಮಿತ್ತವಿದೆ. ಮತ್ತು ಸಂಯೋಗ ದೊರಕುವಲ್ಲಿ ಅಘಾತಿ ಕರ್ಮಗಳು ನಿಮಿತ್ತವಿವೆ. ಕರ್ಮವು ರಾಗ-ದ್ವೇಷ ಮಾಡಿಸುವುದು ಅಥವಾ ಬಾಹ್ಯ ವಸ್ತುಗಳನ್ನು ದೊರಕಿಸಿಕೊಡುವುದೆಂಬುದು ಸಂಭವವಿಲ್ಲ, ಆದರೆ ಜೀವನು ರಾಗ-ದ್ವೇಷ ಮಾಡಿದರೆ ಕರ್ಮವನ್ನು ನಿಮಿತ್ತವೆಂದು ಹೇಳಲಾಗುತ್ತದೆ ಮತ್ತು ಸಂಯೋಗಿ ವಸ್ತುಗಳು ತಮ್ಮ ಕಾರಣದಿಂದ ಬಂದರೆ ಕರ್ಮವನ್ನು ನಿಮಿತ್ತವೆಂದು ಹೇಳಲಾಗುತ್ತದೆ ಮತ್ತು ಜೀವನು ಅದನ್ನು ಭೋಗಿಸಿದನೆಂದೂ ಹೇಳಲಾಗುತ್ತದೆ.

ಶರೀರದಲ್ಲಿ ಚೂರಿ ತಗುಲಿದರೆ ಅಜ್ಞಾನಿಯು ಚೂರಿಯನ್ನು ದುಃಖದ ಕಾರಣವೆಂದು ಮನ್ನಿಸುತ್ತಾನೆ, ಆದರೆ ಅದರ ದುಃಖವಿಲ್ಲ, ಅಜ್ಞಾನದಶೆಯ ದುಃಖವಿದೆ ಮತ್ತು ಕೆಲವರು ಶರೀರವನ್ನು ದುಃಖದ ಕಾರಣವೆಂದು ಮನ್ನಿಸಿದ್ದಾರೆ ಕೆಲವರು ಶರೀರವನ್ನು ಧರ್ಮದ ಕಾರಣವೆಂದು ಮನ್ನಿಸಿದ್ದಾರೆ. ಆದರೆ ಅವರೀರ್ವರು ಭ್ರಾಂತಿಯಲ್ಲಿದ್ದಾರೆ.

ಸಂಸಾರದಲ್ಲಿ ಜೀವನು ಕರ್ಮದ ಕಾರಣದಿಂದ ಸಿಲುಕಿದ್ದಾನೆಂದು ಕೆಲವರು ಹೇಳುತ್ತಾರೆ. ಆದರೆ ಸೋದರನೇ ! ಆ ಕಥನವು ನಿಮಿತ್ತದಿಂದಿದೆ, ಜೀವನು ಕರ್ಮದ ಕಾರಣದಿಂದ ಸಿಕ್ಕಿಕೊಂಡಿಲ್ಲ, ತನ್ನ ತಪ್ಪಿನ ಕಾರಣದಿಂದಾಗಿ ಸಿಕ್ಕಿಕೊಂಡಿದ್ದಾನೆ. ಚಿದಾನಂದ ಸ್ವಭಾವವನ್ನು ಮರೆತು ಇಷ್ಟಪದಾರ್ಥಗಳನ್ನು ನೋಡಿ ರಾಗ ಮಾಡುವುದು ಅನಿಷ್ಟ ಪದಾರ್ಥಗಳನ್ನು ನೋಡಿ ದ್ವೇಷ ಮಾಡುವುದು ಅದು ಅಪರಾಧವಿದ್ದು ಆ ಅಪರಾಧವನ್ನು ಭೋಗಿಸುತ್ತಾನೆ. ವ್ಯಾಪಾರದಲ್ಲಿ ಹಾನಿಯಾದರೆ ತನ್ನ ಕಾರಣದಿಂದ ಶೋಕ ಮಾಡುತ್ತಾನೆ ಹಾನಿಯ ಕಾರಣದಿಂದ ಶೋಕವಿಲ್ಲ. ಜೀವನು

ಪರವಸ್ತುಗಳನ್ನೆಂದೂ ಅನುಭವಿಸುವುದಿಲ್ಲ, ಏಕೆಂದರೆ ಜೀವದ ದ್ರವ್ಯ-ಕ್ಷೇತ್ರ-ಕಾಲ-ಭಾವರೂಪದ ಸ್ವ ಚತುಷ್ಟಯಗಳು ತನ್ನಲ್ಲಿವೆ ಮತ್ತು ಪರದ ಚತುಷ್ಟಯಗಳುಪರದಲ್ಲಿವೆ. ಜೀವನು ತನ್ನ ಚೈತನ್ಯಸ್ವಭಾವವನ್ನು ಮರೆತು ತಪ್ಪು ಮಾಡುತ್ತಾನೆ ಮತ್ತು ತಪ್ಪನ್ನು ಭೋಗಿಸುತ್ತಾನೆ ಅಥವಾ ಸ್ವಭಾವದ ಜ್ಞಾನಮಾಡಿಕೊಂಡು ತಪ್ಪನ್ನು ತೊರೆಯುತ್ತಾನೆ. ಇದರ ಹೊರತಾಗಿ ಜೀವನು ಬೇರೆ ಏನನ್ನೂ ಮಾಡುವ ಸಾಧ್ಯತೆಯಿಲ್ಲ ಎಂದರೆ ನಿಜವಾಗಿ ತನ್ನ ಸುಖ-ದುಃಖದ ಪರಿಣಾಮಗಳ ಭೋಕ್ತೃವಿದ್ದಾನೆ.

**ವ್ಯವಹಾರದಿಂದ ದ್ರವ್ಯಕರ್ಮದ ಉದಯದಿಂದ ಪ್ರಾಪ್ತವಾದ ಆ ಶುಭಾಶುಭ ಪದಾರ್ಥಗಳನ್ನು ಭೋಗಿಸುತ್ತಾನೆ.**

ಸಮಾಜದ ವ್ಯವಸ್ಥೆಯು ಸರಿಯಾಗಿಲ್ಲದುದರಿಂದ ಕೆಲವರು ಶ್ರೀಮಂತರು ಕೆಲವರು ದರಿದ್ರರಾಗಿದ್ದಾರೆ ಅದಕ್ಕಾಗಿ ವ್ಯವಸ್ಥೆಯನ್ನು ಸರಿಮಾಡುವುದರಿಂದ ಎಲ್ಲರೂ ಸಮಾನರಾಗುತ್ತಾರೆಂದು ಎಷ್ಟೋ ಜನರು ಹೇಳುತ್ತಾರೆ. ಆದರೆ ಇಂಥ ಮನ್ನಣೆಯುಳ್ಳವರು ಪುಣ್ಯಕರ್ಮವನ್ನು ಮನ್ನಿಸುವುದಿಲ್ಲ. ದ್ರವ್ಯಕರ್ಮದ ಉದಯದಿಂದ ಶುಭಾಶುಭ ಪದಾರ್ಥಗಳ ಪ್ರಾಪ್ತಿಯಾಗುತ್ತದೆಂದು ಇಲ್ಲಿ ಸ್ಪಷ್ಟವಾಗಿ ಹೇಳಿದ್ದಾರೆ. ಎಂಥ ಕರ್ಮವನ್ನು ಉಪಾರ್ಜನೆ ಮಾಡಿರುತ್ತದೆ ಆ ಪ್ರಮಾಣದಲ್ಲಿ ಸಾಮಗ್ರಿಗಳು ದೊರಕುತ್ತವೆ.

ದ್ರವ್ಯಕರ್ಮದ ಉದಯದ ನಿಮಿತ್ತದಿಂದ ಯಾವ ಸಾಮಗ್ರಿಗಳು ದೊರಕುತ್ತವೆ ಅದರಲ್ಲಿ ಅಜ್ಞಾನೀ ಜೀವನು ಸುಖ-ದುಃಖದ ಕಲ್ಪನೆ ಮಾಡುತ್ತಾನೆ ಅದನ್ನು ಜೀವನು ಈ ಪದಾರ್ಥಗಳನ್ನು ಭೋಗಿಸಿದನೆಂದು ಹೇಳಲಾಗುತ್ತದೆ. ಜಡ ಪರಮಾಣುವನ್ನು ಜೀವದ್ರವ್ಯವು ಎಂದೂ ತಡೆಯುವುದಿಲ್ಲ, ಆದರೆ ಜೀವವು ರಾಗ-ದ್ವೇಷ ಮಾಡುತ್ತದೆ ಅದರಲ್ಲಿ ಆ ಪದಾರ್ಥಗಳು ನಿಮಿತ್ತವಿವೆ, ಅದಕ್ಕಾಗಿ ಆ ಪದಾರ್ಥಗಳನ್ನು ಭೋಗಿಸಿದನೆಂದು ಹೇಳಲಾಗುತ್ತದೆ. ಜೀವದಲ್ಲಿ ಭೋಕ್ತಾಗುಣವಿದೆ, ಹರ್ಷ-ಶೋಕದ ವೇದನಾರೂಪದಿಂದಾಗುವ ಯೋಗ್ಯತೆಯಿದೆ. ಕರ್ಮದಲ್ಲಾಗಲಿ ಅಥವಾ ಪುದ್ಗಲದಲ್ಲಾಗಲಿ ರಾಗ-ದ್ವೇಷದ ವೇದನಾರೂಪದ ಭೋಕ್ತಾಗುಣವಿಲ್ಲ, ಏಕೆಂದರೆ ಆ ಪದಾರ್ಥಗಳು ಜಡವಿವೆ. ಶರೀರಕ್ಕಾಗಲಿ ಅಥವಾ ಕರ್ಮಕ್ಕಾಗಲಿ ಸುಖ-ದುಃಖದ ಅನುಭವವಾಗುವುದಿಲ್ಲ.

ಇದರಲ್ಲಿ ಜೀವನು ಪರವನ್ನು ಅನುಭವಿಸುವುದಿಲ್ಲವೆಂಬುದು ಧರ್ಮವಿದೆ. ಜೀವನು ಅಜ್ಞಾನದಿಂದಾಗಿ ವಿಕಾರವನ್ನು ಅನುಭವಿಸುತ್ತಾನೆ ಮತ್ತು ತನ್ನ ಸ್ವಭಾವದ ಜ್ಞಾನ ಮಾಡಿಕೊಂಡರೆ ತನ್ನ ಜ್ಞಾನವನ್ನು ಹಾಗೂ ಆನಂದವನ್ನು ಅನುಭವಿಸುತ್ತಾನೆ. ಅದಕ್ಕಾಗಿ ಪರದ ಮೇಲಿನ ದೃಷ್ಟಿಯನ್ನು ಬಿಟ್ಟುಕೊಟ್ಟು ವಿಕಾರವು ಕ್ಷಣಿಕವಿದೆ ಅದು ಆತ್ಮನ ಸ್ವರೂಪವಲ್ಲವೆಂದು ಜ್ಞಾನ ಮಾಡಿಕೊಂಡು ಸ್ವಭಾವದ ಕಡೆಗೆ ಪ್ರವೃತ್ತವಾಗುವುದೇ ಧರ್ಮವಿದೆ.

ಆತ್ಮನು ಜಡಕರ್ಮವನ್ನು ಹೇಗೆ ಭೋಗಿಸುತ್ತಾನೆ ಮತ್ತು ಜಡಕರ್ಮವು ಆತ್ಮನಿಗೆ ಯಾವ ರೀತಿ ಫಲ ಕೊಡುತ್ತದೆಯೆಂದು ಶಿಷ್ಯನು ಪ್ರಶ್ನೆ ಮಾಡಿದ್ದನು. ಜೀವನು ತನ್ನ ಸ್ವರೂಪವನ್ನು ಮರೆತು ರಾಗ-ದ್ವೇಷ ಮಾಡಿದರೆ ಕರ್ಮವನ್ನು ಹಾಗೂ ಸಂಯೋಗಗಳನ್ನು ಭೋಗಿಸುತ್ತಾನೆಂದು ವ್ಯವಹಾರದಿಂದ ಹೇಳಲಾಗುತ್ತದೆಂಬ ಉತ್ತರ ಕೊಟ್ಟರು.

ಈಗ ಸಂಕ್ಷೇಪದಿಂದ ಕರ್ತೃತ್ವ-ಭೋಕ್ತೃತ್ವದ ವ್ಯಾಖ್ಯಾನ ಮಾಡುತ್ತಾರೆ,-

**ತಮ್ಹಾ ಕಮ್ಮಂ ಕತ್ತಾ ಭಾವೇಣ ಹಿ ಸಂಜುದೋಧ ಜೀವಸ್ಸ ।**
**ಭೋತ್ತಾ ದು ಹವದಿ ಜೀವೋ ಚೇದಗಭಾವೇಣ ಕಮ್ಮಫಲಂ ।।೬೮।।**

**ಅದರಿಂದ ಜೀವದ ಭಾವದಿಂದ ಸಂಯುಕ್ತವಾದಂಥ ಕರ್ಮವು ಕರ್ತೃವಿದೆ ।**
**ಆದರೆ ಚೇತಕಭಾವದ ಕಾರಣ ಕರ್ಮಫಲದ ಭೋಕ್ತೃವಂತೂ ಜೀವವಿದೆ ।।೬೮।।**

ಆದುದರಿಂದ ಜೀವದ ಭಾವದಿಂದ ಸಂಯುಕ್ತವಾದಂಥ ಕರ್ಮವು (ದ್ರವ್ಯಕರ್ಮವು) ಕರ್ತೃವಿದೆ. (ನಿಶ್ಚಯದಿಂದ ತನ್ನ ಕರ್ತೃ ಮತ್ತು ವ್ಯವಹಾರದಿಂದ ಜೀವಭಾವದ ಕರ್ತೃವಿದೆ, ಆದರೆ ಅದು ಭೋಕ್ತೃವಿಲ್ಲ) ಭೋಕ್ತೃವಂತೂ ಕೇವಲ ಜೀವವಿದೆ, ಚೇತಕಭಾವದ ಕಾರಣವಾಗಿ ಕರ್ಮಫಲದ ಭೋಕ್ತೃವಿದೆ.

**ಭಾವಾರ್ಥ :-** ನಿಜವಾಗಿ ದ್ರವ್ಯಕರ್ಮವು ತನ್ನ ಪರಿಣಾಮಗಳ ಎಂದರೆ ಜ್ಞಾನಾವರಣ ಮೊದಲಾದ ಪರಿಣಾಮಗಳ ಉಪಾದಾನ ಕರ್ತೃವಿದೆ, ಮತ್ತು ವ್ಯವಹಾರದಿಂದ ಜೀವದ ರಾಗ-ದ್ವೇಷ ಮೊದಲಾದ ಭಾವಗಳ ಕರ್ತೃವೆಂದು ಹೇಳಲಾಗುತ್ತದೆ.

ಮತ್ತೆ ಇದೇ ಪ್ರಕಾರ ಜೀವದ್ರವ್ಯವು ತನ್ನ ಅಶುದ್ಧ ಚೇತನಾತ್ಮಕ ಭಾವಗಳ ಉಪಾದಾನರೂಪ ಕರ್ತೃವಿದೆ. ಜ್ಞಾನಾವರಣ ಮೊದಲಾದ ದ್ರವ್ಯಕರ್ಮಗಳಿಗೆ ಅಶುದ್ಧ ಚೇತನಾತ್ಮಕವಾದ ಭಾವಗಳು ನಿಮಿತ್ತ ಭೂತವಿವೆ. ಈ ಕಾರಣದಿಂದ ಜೀವವು ವ್ಯವಹಾರದಿಂದ ದ್ರವ್ಯಕರ್ಮದ ಕರ್ತೃ ಕೂಡ ಇದೆ.

ಜೀವವು ತನ್ನ ಅಶುದ್ಧ ಪರಿಣಾಮಗಳ ಕರ್ತೃವಿದೆ, ಆದರೆ ದ್ರವ್ಯಕರ್ಮದ ಕರ್ತೃವಿಲ್ಲ.ಆದಾಗ್ಯೂ ನವೀನ ಕರ್ಮಗಳು ತನ್ನ ಕಾರಣದಿಂದ ಕಟ್ಟುತ್ತವೆ ಅದರಲ್ಲಿ ಜೀವದ ವಿಕಾರೀಭಾವಗಳು ನಿಮಿತ್ತವಿರುವುದರಿಂದ ಜೀವನು ದ್ರವ್ಯಕರ್ಮದ ಕರ್ತೃವೆಂದು ವ್ಯವಹಾರದಿಂದ ಹೇಳಲಾಗುತ್ತದೆ. ನೀರಿನಲ್ಲಿ ಅಲೆಗಳೆದ್ದರೆ ಗಾಳಿಯ ನಿಮಿತ್ತವೆಂದು ಹೇಳಲಾಗುವುದು ಮತ್ತು ಅಲೆಗಳೇಳದಿದ್ದರೆ ಗಾಳಿಯ ಅಭಾವವು ನಿಮಿತ್ತವೆಂದು ಹೇಳಲಾಗುವುದು ಅದರಂತೆ ಜೀವನು ವಿಕಾರ ಮಾಡಿದರೆ ಕರ್ಮವನ್ನು ನಿಮಿತ್ತವೆಂದು ಹೇಳಲಾಗುವುದು ಮತ್ತು ಶುದ್ಧತೆ ಮಾಡಿದರೆ ಕರ್ಮದ ಅಭಾವವು ನಿಮಿತ್ತವೆಂದು ಹೇಳಲಾಗುವುದು. ಜಡಕರ್ಮವನ್ನು ಆತ್ಮನು ಮಾಡುವುದಿಲ್ಲ, ಆದರೆ ವಿಕಾರ ಮಾಡಿದಾಗ ಕರ್ಮವು ಕಟ್ಟುತ್ತದೆ. ಆಗ ಆತ್ಮನು ಕರ್ಮ ಮಾಡಿದನೆಂದು ಹೇಳಲಾಗುತ್ತದೆ.

**ಪ್ರಶ್ನೆ :-** ಕರ್ಮವು ನಿಮಿತ್ತ ಮಾತ್ರವಿದ್ದರೆ ಅದರ ಕೆಲಸ ಯಾವುದಿದೆ ?

**ಉತ್ತರ :-** ಆತ್ಮನ ಜ್ಞಾನಸ್ವಭಾವವು ಸ್ವಪರ ಪ್ರಕಾಶವಿದೆ. ತನ್ನ ಅಪೂರ್ಣದಶೆಯಲ್ಲಿ ಸಾಧಕ ಜೀವನು ಕರ್ಮವೆಷ್ಟು ಉಳಿದಿದೆ ಮತ್ತು ಎಷ್ಟು ಹೋಯಿತೆಂಬುದರ ಜ್ಞಾನ ಮಾಡಿಕೊಳ್ಳುತ್ತಾನೆ ಹೀಗೆ ಸ್ವ-ಪರಗಳೆರಡರ ಜ್ಞಾನ ಮಾಡಿಕೊಳ್ಳುತ್ತಾನೆ. ಕೇವಲ ಸ್ವವನ್ನು ಅಥವಾ ಕೇವಲ ಪರವನ್ನು ತಿಳಿದುಕೊಳ್ಳುವುದು ಆತ್ಮನ ಸ್ವಭಾವವಿಲ್ಲ. ಸ್ವ-ಪರಗಳೆರಡನ್ನು ತಿಳಿದುಕೊಳ್ಳುವುದು ಆತ್ಮನ ಕಾರ್ಯವಿದೆ.

ಮತ್ತು ಆತ್ಮದ್ರವ್ಯವು ತನ್ನ ಅಶುದ್ಧ ಚೇತನಾತ್ಮಕ ರಾಗ ಮೊದಲಾದ ಭಾವಗಳಿಂದ ಸಾತಾ-ಅಸಾತಾರೂಪ ಕರ್ಮಫಲವನ್ನು ಭೋಗಿಸುವಂಥವನಿರುತ್ತಾನೆ.

ಜೀವದ್ರವ್ಯವು ತನ್ನ ವಿಕಾರೀಭಾವಗಳನ್ನು ಭೋಗಿಸುತ್ತದೆ. ಕರ್ಮವನ್ನು ಹಾಗೂ ಸಾಮಗ್ರಿಗಳನ್ನು ಭೋಗಿಸುವುದಿಲ್ಲ. ಆದರೆ ಪೂರ್ವಕರ್ಮದ ನಿಮಿತ್ತದಿಂದ ಸಂಯೋಗರೂಪದ ಫಲ ಬರುತ್ತವೆ ಮತ್ತು ಜೀವವು ರಾಗಾದಿ ಪರಿಣಾಮ ಮಾಡಿದರೆ ವ್ಯವಹಾರದಿಂದ ಕರ್ಮವನ್ನು ಹಾಗೂ ಸಾವಗ್ರಿಯನ್ನು ಭೋಗಿಸಿತೆಂದು ಹೇಳಲಾಗುತ್ತದೆ.

**ಭಾವಾರ್ಥ :-** ಯಾವ ಪ್ರಕಾರ ಜೀವ ಅಥವಾ ಕರ್ಮವು ನಿಶ್ಚಯ-ವ್ಯವಹಾರನಯದಿಂದ ಪರಸ್ಪರ ಒಂದು ಇನ್ನೊಂದರ ಕರ್ತೃವಿದೆ ಅದೇ ಪ್ರಕಾರ ಎರಡೂ ಭೋಕ್ತೃವಿಲ್ಲ. ನಿಶ್ಚಯದಿಂದ ಜೀವವು ತನ್ನ ಪರಿಣಾಮದ ಕರ್ತೃವಿದೆ. ವ್ಯವಹಾರದಿಂದ ಜೀವವು ಜಡಕರ್ಮದ ಕರ್ತೃವಿದೆ ; ನಿಶ್ಚಯದಿಂದ ಪರಮಾಣು ತನ್ನ ಜ್ಞಾನಾವರಣ ಮೊದಲಾದ ಪರ್ಯಾಯದ ಕರ್ತೃವಿದೆ, ವ್ಯವಹಾರದಿಂದ ಕರ್ಮವು ರಾಗ-ದ್ವೇಷದ ಕರ್ತೃವಿದೆ. ಹೀಗೆ ಕರ್ತೃವಿನಲ್ಲಿ ಜೀವ ಮತ್ತು

ಕರ್ಮಗಳೆರಡರಲ್ಲಿ ಪರಸ್ಪರ ನಿಶ್ಚಯ ಮತ್ತು ವ್ಯವಹಾರಗಳು ಅನ್ವಯಿಸುತ್ತವೆ. ಅದರಂತೆ ಭೋಕ್ತಾತನದಲ್ಲಿ ಎರಡೂ ಪರಸ್ಪರ ಅನ್ವಯಿಸುವುದಿಲ್ಲ, ಭೋಕ್ತತನವೆಂದರೆ ಹರ್ಷ-ವಿಷಾದದ ಪರಿಣಾಮದ ಅನುಭವವು ಕೇವಲ ಜೀವದ್ರವ್ಯದಲ್ಲಿದೆ. ಏಕೆಂದರೆ ಅದು ಸ್ವಯಂ ಚೈತನ್ಯಸ್ವರೂಪವಿದೆ. ಪುದ್ಗಲದ್ರವ್ಯವು ಅಚೇತನವಿದೆ, ಅದರಲ್ಲಿ ಸುಖ-ದುಃಖದ ಅನುಭವದ ಅಥವಾ ಶುದ್ಧತೆಯ ಅನುಭವದ ಗುಣವಿಲ್ಲದಿರುವುದರಿಂದ ಪುದ್ಗಲದ್ರವ್ಯವು ನಿಶ್ಚಯದಿಂದ ಅಥವಾ ವ್ಯವಹಾರದಿಂದ ಭೋಕ್ತೃವಿಲ್ಲ.

೧) ಜೀವವು ತನ್ನ ರಾಗಾದಿಭಾವಗಳ ಕರ್ತೃವಿದೆ ಅದು ನಿಶ್ಚಯವಿದೆ. ೨) ಜೀವವನ್ನು ಜಡಕರ್ಮಗಳ ಕರ್ತೃವೆಂದು ಹೇಳುವುದು ಅದು ವ್ಯವಹಾರವಿದೆ. ೩) ಜಡಪುದ್ಗಲವು ಜ್ಞಾನಾವರಣಾದಿ ಕರ್ಮದ ಕರ್ತೃವಿದೆ ಅದು ನಿಶ್ಚಯವಿದೆ. ೪) ಕರ್ಮವನ್ನು ವಿಕಾರ ಮೊದಲಾದವುಗಳ ಕರ್ತೃವೆಂದು ಹೇಳುವುದು ಅದು ವ್ಯವಹಾರವಿದೆ. ೫) ಜೀವವು ತನ್ನ ಹರ್ಷಶೋಕದ ಪರಿಣಾಮವನ್ನು ಭೋಗಿಸುವುದು ಅದು ನಿಶ್ಚಯದಿಂದೆ. ೬) ಜೀವವು ಕರ್ಮವನ್ನು ಹಾಗೂ ಸಾಮಗ್ರಿಯನ್ನು ಭೋಗಿಸುವುದೆಂದು ಹೇಳುವುದು ಅದು ವ್ಯವಹಾರವಿದೆ. ಕರ್ಮವು ಅಚೇತನವಿರುವುದರಿಂದ ಅದು ತನ್ನ ಪರ್ಯಾಯದಲ್ಲಿ ಹರ್ಷ-ಶೋಕ ಮೊದಲಾದುವನ್ನು ಭೋಗಿಸುವುದಿಲ್ಲ. ಅದರಿಂದ ಕರ್ಮವು ಆತ್ಮನನ್ನು ಭೋಗಿಸುತ್ತದೆಂಬ ವ್ಯವಹಾರವು ಅನ್ವಯಿಸುವುದಿಲ್ಲ. ಜೀವವು ತನ್ನ ಅಜ್ಞಾನದ ಕಾರಣದಿಂದ ವಿಕಾರದ ಭೋಕ್ತೃವಾಗುತ್ತದೆ. ಮತ್ತು ವ್ಯವಹಾರದಿಂದ ಕರ್ಮದ ಹಾಗೂ ಪರಪದಾರ್ಥದ ಭೋಕ್ತೃವಾಗುತ್ತದೆ. ಆದರೆ ಕರ್ಮಕ್ಕೆ ಅಥವಾ ಜಡಪದಾರ್ಥಕ್ಕೆ ಸುಖ-ದುಃಖದ ಅನುಭವವಿಲ್ಲ ಅದರಂತೆ ಅವು ಸುಖ-ದುಃಖವನ್ನು ಮಾಡಿಸುವುದಿಲ್ಲ. ಅದಕ್ಕಾಗಿ ಕರ್ಮದ ಮೇಲಿನ ದೃಷ್ಟಿ ತೆಗೆದು ಸುಖ-ದುಃಖದ ಪರಿಣಾಮ ಸ್ವಯಂ ಸ್ವತಂತ್ರ ಮಾಡುತ್ತೇನೆಂದು ನಿಶ್ಚಯಮಾಡಿ, ಆ ವಿಕಾರಗಳು ಕ್ಷಣಿಕವಿವೆ ಮತ್ತು ಆತ್ಮನಂತೂ ಶುದ್ಧ ಚೈತನ್ಯಸ್ವಭಾವಿಯಿದ್ದಾನೆಂದು ದೃಷ್ಟಿ ಮಾಡುವುದು ಅದು ಧರ್ಮವಿದೆ.

ಜೀವನು ಕರ್ತೃ-ಭೋಕ್ತೃಯಿದ್ದಾನೆಂಬ ಮಾತು ಪೂರ್ಣವಾಯಿತು. ಈಗ ಕರ್ಮ ಸಂಯುಕ್ತ ಜೀವದ ಮುಖ್ಯತೆಯಿಂದ ಪ್ರಭುತ್ವಗುಣದ ವ್ಯಾಖ್ಯಾನ ಮಾಡುತ್ತಾರೆ. ಇಪ್ಪತ್ತೇಳನೆಯ ಗಾಥೆಯಲ್ಲಿ ಜೀವವನ್ನು ಪ್ರಭುವೆಂದು ಹೇಳಿದೆ. ಆ ಪ್ರಭುವಿನ ವ್ಯಾಖ್ಯೆಯನ್ನು ಈ ಗಾಥೆಯಲ್ಲಿ ಪ್ರಾರಂಭ ಮಾಡುತ್ತಾರೆ. ಮೂರು ಪ್ರಕಾರದ ಪ್ರಭು ಇದ್ದಾರೆ.

**೧) ಜಡೇಶ್ವರ :-** ಜಡವು ಕೂಡ ಪ್ರಭು ಇದೆ, ತನ್ನಲ್ಲಿ ಶಕ್ತಿವಂತವಿದೆ. ಈ ಕಟ್ಟಿಗೆಯ ನಾಶದ ಪರ್ಯಾಯವಾಗುತ್ತದೆ ಆ ಸಮಯದಲ್ಲಿ ಆತ್ಮನು ತನ್ನ ಪ್ರಭುತ್ವವನ್ನು ಉಪಯೋಗಿಸಿದರೂ ಕೂಡ ಆ ಜಡದ ನಾಶವಾಗುವ ರೂಪದ ಪ್ರಭುತೆಯನ್ನು ಬದಲಿಸುವ ಸಾಧ್ಯತೆಯಿಲ್ಲ. ಈ ಕಟ್ಟಿಗೆಯು ಆತ್ಮನ ಪ್ರಭುತೆಗಿಂತ ಎತ್ತರವಾಗುತ್ತಿದ್ದರೆ ಆತ್ಮನ ಕಾರಣದಿಂದ ಆಕಾಶವು ಕೂಡ ಎತ್ತರವಾಬೇಕು, ಆದರೆ ಅದು ಎತ್ತರವಾಗುವುದಿಲ್ಲ. ಧರ್ಮ, ಅಧರ್ಮ, ಆಕಾಶ ಮತ್ತು ಕಾಲಗಳು ಅನಾದಿಯಿಂದ ಎಲ್ಲಿ ಬಿದ್ದ ಪದಾರ್ಥಗಳಿವೆ ಅಲ್ಲಿ ತಮ್ಮ ಪ್ರಭುತೆಯಿಂದಿವೆ. ಪುದ್ಗಲವು ಕೂಡ ಪ್ರಭು ಇದೆ. ಹೀಗೆ ಜಡದ ದ್ರವ್ಯ-ಗುಣ-ಪರ್ಯಾಯಗಳೆಲ್ಲವು ಪ್ರಭು ಇವೆ.

**೨) ವಿಭಾವೇಶ್ವರ :-** ಜೀವವು ಸ್ವಯಂ ರಾಗ-ದ್ವೇಷ ಮಾಡುವಲ್ಲಿ ಪ್ರಭು ಇದೆ. ಪ್ರತ್ಯಕ್ಷ ತೀರ್ಥಂಕರರು ಕೂಡ ಇತರರ ರಾಗ-ದ್ವೇಷದ ಪ್ರಭುತೆಯನ್ನು ತಡೆಯುವ ಸಾಧ್ಯತೆಯಿಲ್ಲ. ಹೀಗ ವಿರುದ್ಧದಲ್ಲಿ ಅಜ್ಞಾನೀ ಪ್ರಭು ಇದ್ದಾನೆ, ವಿಭಾವೇಶ್ವರನಿದ್ದಾನೆ.

**೩) ಸ್ವಭಾವೇಶ್ವರ :-** ತನ್ನ ಶುದ್ಧಸ್ವಭಾವದ ಜ್ಞಾನ ಮಾಡಿಕೊಂಡು ಪರಿಪೂರ್ಣ ಶುದ್ಧತೆಯನ್ನು ಪ್ರಕಟಪಡಿಸಿಕೊಳ್ಳುವವನು ಅವನು ಸ್ವಭಾವೇಶ್ವರನಿದ್ದಾನೆ.

ಈಗ ಈ ಗಾಥೆಯಲ್ಲಿ ಸಂಸಾರಿಯ ಪ್ರಭುತೆಯ ಮಾತು ಹೇಳುತ್ತಾರೆ, ಆದರೆ ಸಿದ್ಧಿಯ ಮಾತಲ್ಲ,-

**ಏವಂ ಕತ್ತಾ ಭೋತ್ತಾ ಹೋಜ್ಜಂ ಅಪ್ಪಾ ಸಗೇಹಿಂ ಕಮ್ಮೇಹಿಂ ।**
**ಹಿಂಡದಿ ಪಾರಮಪಾರಂ ಸಂಸಾರಂ ಮೋಹಸಂಛಣ್ಣೋ ॥೬೯॥**

**ಈ ತೆರದಿ ತನ್ನ ಕರ್ಮಗಳಿಂದ ಕರ್ತೃ-ಭೋಕ್ತೃವಾದಾತ್ಮಮೋಹಾಚ್ಛಾದಿತನಾಗಿ ।**
**ವರ್ತಿಸುತ ಸಾಂತವಿಲ್ಲವೆ ಅನಂತಸಂಸಾರದಿ ಪರಿಭ್ರಮಣಮಾಡುವನು ॥೬೯॥**

ಜೀವವು ಅನಾದಿಯಿಂದ ಅವಿದ್ಯಾರೂಪವಾಗಿ ಪರಿಣಮಿಸಿದೆ. ಜ್ಞಾನಾವರಣ ಮೊದಲಾದ ಜಡಕರ್ಮದ ಉದಯವು ಜಡದಲ್ಲಿದೆ. ಕರ್ಮವು ವಿಕಾರ ಮಾಡಿಸುವುದಿಲ್ಲ. ತಾನು ತನ್ನ ಸ್ವಭಾವದ ಪ್ರಭುತ್ವವನ್ನು ಮರೆಯುತ್ತದೆ ಮತ್ತು ಅಜ್ಞಾನದಿಂದ ವರ್ತಿಸಿದರೆ ಕರ್ಮದ ಉದಯವನ್ನು ನಿಮಿತ್ತವೆಂದು ಹೇಳಲಾಗುತ್ತದೆ. ಈ ಪ್ರಕಾರ ಜೀವದ್ರವ್ಯವು ನಿಶ್ಚಯದಿಂದ ರಾಗ-ದ್ವೇಷಗಳ ಮತ್ತು ನಿಮಿತ್ತರೂಪದಿಂದ ಕರ್ಮದ ಕರ್ತೃ-ಭೋಕ್ತೃವಾಗುತ್ತದೆ. ಭವ್ಯನ ಅಪೇಕ್ಷೆಯಿಂದ ಸಂಸಾರವು ಸಾಂತವೆಂದು ಹೇಳಲಾಗುತ್ತದೆ. ಜೀವವು ಭವಿಷ್ಯದಲ್ಲಿ ತನ್ನ ಆತ್ಮನ ಜ್ಞಾನ ಮಾಡಿಕೊಂಡು ರಾಗ-ದ್ವೇಷ ತ್ಯಜಿಸುವುದರಿಂದ ಭವ್ಯನಿಗೆ ಕರ್ತೃ-ಹರ್ತೃತನದ ಕೊನೆಯಿದೆ ಮತ್ತು ಅಭವ್ಯನೆಂದೂ ಸಂಸಾರ ತ್ಯಜಿಸದಿರುವುದರಿಂದ ಅವನ ಸಂಸಾರವು ಅನಂತವಿದೆ. ಭವ್ಯನು ಸಂಸಾರವನ್ನು ತ್ಯಜಿಸಿದರೂ ಕೂಡ ತನ್ನ ಪ್ರಭುತೆಯಿಂದ ದೂರಾಗುತ್ತಾನೆ ಮತ್ತು ಅಭವ್ಯನು ತ್ಯಜಿಸುವುದಿಲ್ಲ ಮತ್ತು ಸಿಕ್ಕಿಕೊಂಡರು ಕೂಡ ಅವನು ತನ್ನ ಪ್ರಭುತೆಯಿಂದಿದ್ದಾನೆ. ಈ ಪ್ರಕಾರ ಪಂಚಪರಾವರ್ತನರೂಪ ಸಂಸಾರವನ್ನು ಧಾರಣಮಾಡಿ ಅಜ್ಞಾನಿಯು ಚತುರ್ಗತಿಗಳಲ್ಲಿ ಭ್ರಮಣ ಮಾಡುತ್ತಾನೆ. ಪಂಚಪರಾವರ್ತನ ಎಂದರೆ ೧) **ದ್ರವ್ಯ**-ದ್ರವ್ಯದ ಸಂಯೋಗಗಳಲ್ಲಿ , ೨) **ಕ್ಷೇತ್ರ**-ಬೇರೆ-ಬೇರೆ ಕ್ಷೇತ್ರಗಳಲ್ಲಿ , ೩) **ಕಾಲ**-ಉತ್ಸರ್ಪಿಣಿ-ಅವಸರ್ಪಿಣಿಯ ಕಾಲಗಳಲ್ಲಿ, ೪) **ಭಾವ**-ಬೇರೆ-ಬೇರೆ ಶುಭಾಶುಭ ಭಾವಗಳಲ್ಲಿ, ೫) **ಭವ**-ನಾಲ್ಕು ಗತಿರೂಪವಾದ ಭವಗಳಲ್ಲಿ ಹೀಗೆ ಐದು ಪ್ರಕಾರದ ಪರಾವರ್ತನಗಳಲ್ಲಿ ಜೀವವು ಅಖಂಡವಾಗಿ ಭ್ರಮಣ ಮಾಡುತ್ತಲಿದೆ.

ಜೀವವು ಶುಭಾಶುಭ ಭಾವಗಳ ಕಾರಣದಿಂದ ಅಲೆಯುತ್ತಿದೆ. ತನ್ನ ಪ್ರಭುತೆಯಿಂದ ಅಲೆಯುತ್ತಿದೆ. ಯಾರೂ ಅಲೆದಾಡಿಸುವುದಿಲ್ಲ. ತಾನು ಮಿಥ್ಯಾದರ್ಶನ-ಜ್ಞಾನ ಮತ್ತು ಚಾರಿತ್ರರೂಪದ ಅಶುದ್ಧಪರಿಣತಿಯಿಂದ ಆಚ್ಛಾದಿತವಿದೆ. ಕರ್ಮದ ಕಾರಣದಿಂದ ಆಚ್ಛಾದಿತವೆಂದು ಹೇಳಿಲ್ಲ. ಶುಭಾಶುಭಭಾವದ ಅಭಿರುಚಿ ಮತ್ತು ಸ್ವಭಾವದ ಅರುಚಿಯು ಅದು ಮಿಥ್ಯಾಭಾವವಿದೆ, ತನ್ನ ಸ್ವರೂಪದಿಂದ ವಿಪರೀತವಾದ ಜ್ಞಾನವು ಅದು ಮಿಥ್ಯಾಜ್ಞಾನವಿದೆ ಮತ್ತು ಶುಭಾಶುಭಭಾವವು ಅದು ಮಿಥ್ಯಾ ಆಚರಣೆಯಿದೆ.

ಯಾವ ಪ್ರಕಾರ ಮಂತ್ರವಾದಿಯು ದಾರ ಎಳೆದು ಬೊಂಬೆಯನ್ನು ಕುಣಿಸುತ್ತಾನೆ ಅದೇ ಪ್ರಕಾರ ಕರ್ಮರೂಪದ ದಾರವನ್ನೆಳೆದು ಮಂತ್ರವಾದಿಯ ಹಾಗೆ ಸಂಸಾರೀಜೀವಗಳನ್ನು ಕುಣಿಸುತ್ತದೆಂದು ಅಜ್ಞಾನೀ ಜೀವರುಗಳು ಹೇಳುತ್ತಾರೆ, ಆದರೆ ಆ ಮನ್ನಣೆಯು ತಪ್ಪು ಇದೆ. ಜೀವವು ತನ್ನ ಅಪರಾಧದಿಂದಲೇ ಅನೇಕ ವಿಭಾವಪರ್ಯಾಯಗಳನ್ನು ಧಾರಣಮಾಡಿ ಸಂಸಾರದಲ್ಲಿ ಕುಣಿಯುತ್ತದೆಂದು ಇಲ್ಲಿ ಹೇಳುತ್ತಾರೆ. ಜೀವವು ತನ್ನನ್ನು ತಾನು ಮರೆತು ದುಃಖಿಯಾಗಿದೆ, ಅದನ್ನು ಯಾರೂ ದುಃಖಿ ಮಾಡುವುದಿಲ್ಲ. ಕರ್ಮವು ಜಡವಿದ್ದು ಅದು ದುಃಖಿ ಮಾಡುವುದಿಲ್ಲ. ಅದಕ್ಕಾಗಿ ನಾನು ಕರ್ಮದ ಕಾರಣದಿಂದ ದುಃಖಿಯಾಗುವುದಿಲ್ಲ. ನನ್ನ ಅಜ್ಞಾನದ ಕಾರಣದಿಂದ ವಿಭಾವರೂಪವಾಗಿ ಸ್ವತಂತ್ರವಾಗಿ ಆಗುತ್ತಿದ್ದೇನೆಂದು ಜ್ಞಾನ ಮಾಡಿಕೊಂಡರೆ ಸ್ವಭಾವರೂಪವಾಗುವ ಯೋಗ್ಯತೆಯು ನನ್ನಲ್ಲಿದೆಯೆಂದು ತಿಳಿದುಕೊಂಡರೆ ಮುಕ್ತಿಯ ಮಾರ್ಗವು ತಾನಾಗಿಯೇ ಕೈಯಲ್ಲಿ ಬಂದುಬಿಡುತ್ತದೆ.

ಕರ್ಮವು ಜಡವಿದೆ, ಕರ್ಮವು ಆತ್ಮನನ್ನು ಅಲೆದಾಡಿಸುವುದಿಲ್ಲ. ಆದರೆ ಆತ್ಮನು ತನ್ನ ತಪ್ಪಿನಿಂದ ಅಲೆಯುತ್ತಾನೆ.

ಆತ್ಮನು ತಪ್ಪುಮಾಡುವಲ್ಲಿ ಪ್ರಭು ಇದ್ದಾನೆ ಮತ್ತು ಧರ್ಮಮಾಡುವಲ್ಲಿಕೂಡ ಪ್ರಭು ಇದ್ದಾನೆ. ತನ್ನ ಜ್ಞಾನಾನಂದಸ್ವಭಾವದ ರುಚಿಮಾಡಿ ಅದರಲ್ಲಿ ಕ್ರೀಡಿಸುವುದು ಅದು ಧರ್ಮವಿದೆ. ಅನುಕೂಲಶರೀರ ಅಥವಾ ಸಂಹನನದಿಂದ ಧರ್ಮವಾಗುವುದಿಲ್ಲ. ಜ್ಞಾನಾವರಣ ಮೊದಲಾದ ಕರ್ಮಗಳು ಆತ್ಮನ ಶಕ್ತಿಯನ್ನು ತಡೆಯುವುದಿಲ್ಲ. ತಾನು ಆತ್ಮನ ಸ್ವಭಾವ ಮರೆತು ತನ್ನ ಅಪರಾಧದಿಂದ ತಪ್ಪು ಮಾಡುತ್ತಾನೆ. ಆಗ ಕರ್ಮವನ್ನು ನಿಮಿತ್ತವೆಂದು ಹೇಳಲಾಗುವುದು. ಪುಣ್ಯ-ಪಾಪಗಳೆರಡು ದೋಷವಿದ್ದು ಅವು ಆತ್ಮನ ಗುಣಗಳಲ್ಲ. ಪುಣ್ಯದಿಂದ ಮತ್ತು ಶರೀರದಿಂದ ಧರ್ಮವಾಗುತ್ತದೆಂದು ಮನ್ನಿಸುವ ಜೀವನು ಚತುರ್ಗತಿಗಳಲ್ಲಿ ಅಲೆಯುತ್ತಾನೆ.

**ಪ್ರಶ್ನೆ :-** ಅಪರಾಧವು ಏಕೆ ಆಗುತ್ತದೆ.

**ಉತ್ತರ :-** ಆತ್ಮನ ವರ್ತಮಾನ ಪರ್ಯಾಯದ ಯೋಗ್ಯತೆಯಿಂದ ತಪ್ಪು ಆಗುತ್ತದೆ, ಆದರೆ ಪದಾರ್ಥದಿಂದ ತಪ್ಪು ಆಗುವುದಿಲ್ಲ. ಆತ್ಮನಲ್ಲಿ ಪರಪದಾರ್ಥದ ಅಭಾವವಿದೆ, ಕರ್ಮವು ಜಡವಿದೆ. ವಿಕಾರದಲ್ಲಿ ಕರ್ಮದ ಅತ್ಯಂತ ಅಭಾವವಿವೆ.

೬೯ನೇ ಗಾಥೆಯಲ್ಲಿ 'ಮೋಹ ಸಂಛಣ್ಣೋ' ಎಂದು ಹೇಳಿದ್ದಾರೆ. ಎಂದರೆ ಮಿಥ್ಯಾದರ್ಶನ, ಮಿಥ್ಯಾಜ್ಞಾನ, ಮಿಥ್ಯಾಚಾರಿತ್ರರೂಪದ ಅಶುದ್ಧ ಪರಿಣತಿಯಿಂದ ಆತ್ಮನು ಆವರಿಸಿಕೊಂಡಿದ್ದಾನೆ. ಅವನು ಮೋಹ ಕರ್ಮದಿಂದ ಆವರಿಸಿಕೊಂಡಿಲ್ಲ, ಅದರಿಂತೆ ಮೋಹಕರ್ಮದ ಕಾರಣದಿಂದ ಆವರಿಸಿಕೊಂಡಿಲ್ಲ. ಮೋಹಕರ್ಮದಿಂದ ಆವರಿಸಿಕೊಂಡಿದ್ದಾನೆಂದು ಹೇಳುವುದು ಅದು ನಿಮಿತ್ತದ ಕಥನವಿದೆ. ನಾನು ಚಿದಾನಂದನಿದ್ದೇನೆಂಬ ಅಭಿರುಚಿ ಬಿಟ್ಟು ಅನುಕೂಲ ನಿಮಿತ್ತದಿಂದ ಲಾಭವಾಗುವುದು ಪುಣ್ಯದಿಂದ ಧರ್ಮವಾಗುವುದೆಂಬ ಮನ್ನಣೆಯನ್ನು ಮಿಥ್ಯಾದರ್ಶನವೆಂದು ಹೇಳುತ್ತಾರೆ. ಕರ್ಮವು ಮೋಹ ಮಾಡಿಸುವುದಿಲ್ಲ, ತತ್ತ್ವಾರ್ಥಸೂತ್ರದಲ್ಲಿ ಮಿಥ್ಯಾದರ್ಶನ ಮೊದಲಾದ ಔದಯಿಕ ಭಾವಗಳನ್ನು ಜೀವದ ಸ್ವತತ್ತ್ವವೆಂದು ಹೇಳಿದೆ. ಕರ್ಮದ ಉದಯವು ಪರತತ್ತ್ವವಿದೆ, ಪರತತ್ತ್ವದಿಂದ ನನ್ನಲ್ಲೇನೂ ಆಗುವುದಿಲ್ಲ. ನಾನು ಜಡದ ಕ್ರಿಯೆಯನ್ನು ಮಾಡುವ ಸಾಧ್ಯತೆಯಿಲ್ಲ. ಪುಣ್ಯ-ಪಾಪಗಳು ನನ್ನ ಸ್ವರೂಪವಲ್ಲ, ನಾನಂತೂ ಜ್ಞಾತಾನಿರುವೆನೆಂದು ನಿಜವಾದ ರುಚಿ ಮಾಡುವುದಿಲ್ಲ ಮತ್ತು ವಿಕಾರದಿಂದ ಧರ್ಮವಾಗುವುದೆಂಬ ಮನ್ನಣೆಯು ಮಿಥ್ಯಾದರ್ಶನವಿದೆ ಹಾಗೂ ಅದು ಜೀವದ ನಿಜತತ್ತ್ವದಲ್ಲಿ ಆಗುತ್ತದೆ. ಆತ್ಮನು ತ್ರಿಕಾಲಶುದ್ಧ ದ್ರವ್ಯನಿದ್ದಾನೆ, ಅವನ ಗುಣಗಳು ತ್ರಿಕಾಲವಿವೆ ಮತ್ತು ವರ್ತಮಾನ ಪರ್ಯಾಯವು ಅಶುದ್ಧವಿದೆ. ದಯೆ-ದಾನ ಅಥವಾ ಕಾಮ-ಕ್ರೋಧದ ಪರ್ಯಾಯಗಳು ಒಂದು ಸಮಯದ್ದಿವೆ, ಮೋಕ್ಷಮಾರ್ಗವು ಕೂಡ ಪರ್ಯಾಯವಿದೆ ಮತ್ತು ಕೇವಲಜ್ಞಾನವು ಕೂಡ ಪರ್ಯಾಯವಿದೆ. ಆತ್ಮನ ತ್ರಿಕಾಲಸ್ವಭಾವವು ಶುದ್ಧವಿದೆ, ಅವನ ರುಚಿ ಬಿಟ್ಟು ನಿಮಿತ್ತದಿಂದ ಲಾಭ ಮನ್ನಿಸುವುದು, ಆತ್ಮನನ್ನು ಒಂದು ಸಮಯದ ವಿಕಾರದಷ್ಟು ಮನ್ನಿಸುವುದು ಅಥವಾ ಒಂದು ಸಮಯದ ಜ್ಞಾನದ ಪ್ರಕಟತೆಯಷ್ಟು ಮನ್ನಿಸುವುದು ಅದು ಮಿಥ್ಯಾದರ್ಶನವಿದೆ.

ತ್ರಿಕಾಲಸ್ವಭಾವದ ಆಶ್ರಯದಿಂದ ಭ್ರಾಂತಿಯ ನಾಶವಾಗುತ್ತದೆ. ನಿಮಿತ್ತದಿಂದ ಪುಣ್ಯದಿಂದ ಅಥವಾ ವರ್ತಮಾನ, ಪರ್ಯಾಯದ ಆಶ್ರಯದಿಂದ ಸಮ್ಯಗ್ದರ್ಶವಾಗುವುದಿಲ್ಲ, ತ್ರಿಕಾಲಶುದ್ಧ ಸ್ವಭಾವದ ಅಭಿರುಚಿ ಮಾಡಿದರೆ ಸಮ್ಯಗ್ದರ್ಶನವಾಗುವುದು.

ಆದರೆ ಅನಾದಿಯಿಂದ ಅಜ್ಞಾನಿಜೀವನು ಪರ್ಯಾಯಬುದ್ಧಿಯಲ್ಲಿ ಸರ್ವಸ್ವ ಮನ್ನಿಸಿ ಕುಳಿತುಕೊಂಡಿದ್ದಾನೆ. ಕರ್ಮ, ಶರೀರ ಅಥವಾ ಕುಟುಂಬದಲ್ಲಿ ಸಂಸಾರವಿಲ್ಲ, ಜೀವದ ವರ್ತಮಾನ ವಿರುದ್ಧ ಮನ್ನಣೆಯಲ್ಲಿ ಸಂಸಾರವಿದೆ. ಮಿಥ್ಯಾದರ್ಶನದಲ್ಲಿ ಆತ್ಮನ ವಿರುದ್ಧ ಪ್ರಭುತೆಯಿದೆ, ಆತ್ಮನಲ್ಲಿ ಪ್ರಭುತ್ವವೆಂಬ ಹೆಸರಿನ ಒಂದು ಶಕ್ತಿಯಿದೆ. ಅದರ ವಿಪರೀತ ಪರಿಣತಿಯು ತನ್ನ ಅಪರಾಧದಿಂದ ಆಗುತ್ತದೆ, ಯಾವುದೇ ಪರ ಅಥವಾ ಕರ್ಮವು ಅಪರಾಧ ಮಾಡಿಸುವುದಿಲ್ಲ.

ತನ್ನ ಶುದ್ಧ ಚೈತನ್ಯದ ಸ್ವಸಂವೇದನ ಬಿಟ್ಟು ರಾಗದಿಂದ ಧರ್ಮ ಮನ್ನಿಸಿ ವಿಪರೀತ ಜ್ಞಾನ ಮಾಡುವುದು ಅದು ಮಿಥ್ಯಾಜ್ಞಾನವಿದೆ ಮತ್ತು ರಾಗ-ದ್ವೇಷದ ಭಾವವಾಗುವುದು ಅದು ಮಿಥ್ಯಾಚಾರಿತ್ರವಿದೆ. ನಾನು ಜ್ಞಾತಾ-ದೃಷ್ಟಾ ಇದ್ದೇನೆಂಬ ಅರಿವಿನಿಂದ ಸಮ್ಯಗ್ದರ್ಶನವಾದ ನಂತರ ಆತ್ಮನ ಆಶ್ರಯದಿಂದ ಅಕಷಾಯ, ಶಾಂತಿಯಾಯಿತು ಅದು ವಿಶೇಷ ಲೀನತೆಯಾಯಿತು ಅದನ್ನು ಸಮ್ಯಕ್ಚಾರಿತ್ರವೆಂದು ಹೇಳುವರು, ಅದರಿಂದ ವಿರುದ್ಧವಾದ ಭಾವವನ್ನು ಮಿಥ್ಯಾಚಾರಿತ್ರವೆನ್ನುವರು.

ಈಗ ಜನರು ಕ್ರಿಯೆಯ ಸ್ವರೂಪ ತಿಳಿಯುವುದಿಲ್ಲ ಮತ್ತು ತನ್ನ ಮನ್ನಣೆಯ ಕ್ರಿಯೆಯಿಂದ ಧರ್ಮ ಮನ್ನಿಸುತ್ತಾರೆ.

**ಕರ್ತಾ ಪರಿಣಾಮೀ ದ್ರವ್ಯ, ಕರ್ಮರೂಪ ಪರಿಣಾಮ ।**
**ಕ್ರಿಯಾ ಪರ್ಯಾಯ ಕೀ ಫೇರಣೀ, ವಸ್ತು ಏಕ ತ್ರಯ ನಾಮ ॥**

ಆತ್ಮನು ಸ್ವಯಂ ಪದಾರ್ಥನಿದ್ದಾನೆ, ತಾನು ತನ್ನ ಪರಿಣಾಮದ ಕರ್ತೃ ಇದ್ದಾನೆ, ಪರಮಾಣುವಿನ ಕರ್ತೃವಿಲ್ಲ. ಜಡಪರಮಾಣುವು ತನ್ನ ಕರ್ತೃ ಇದೆ, ಅದು ಚೇತನದ ಕತೃವಿಲ್ಲ. ಮತ್ತು ಯಾವ ಪರಿಣಾಮವಾಗುತ್ತದೆ ಅದು ಅವನ ಕರ್ಮವಿದೆ-ಕಾರ್ಯವಿದೆ. ಮತ್ತು ಪೂರ್ವ ಅವಸ್ಥೆ ಬದಲಾಗಿ ನವೀನ ಅವಸ್ಥೆಯಾಗುವುದು ಅದು ಅವನ ಕ್ರಿಯೆಯಿದೆ. ಭಗವಂತರು ಕ್ರಿಯೆಯನ್ನು ಮೂರು ಪ್ರಕಾರದಿಂದ ಹೇಳಿದೆ.

**೧) ಜಡದ ಕ್ರಿಯೆ :-** ಜಡದ ಅವಸ್ಥೆಯು ಜಡದಿಂದಾಗುವುದು ಅದು ಜಡದ ಕ್ರಿಯೆಯಿದೆ. ಶರೀರದ ಪರಮಾಣುವಿನ ಪ್ರಥಮಾವಸ್ಥೆಯು ವ್ಯಯವಾಗಿ ಎರಡನೆಯ ಅವಸ್ಥೆಯಾಗುವುದು. ಅದು ಶರೀರದ ಅಥವಾ ಜಡದ ಪರ್ಯಾಯವಿದೆ. ಜಡದ ಕ್ರಿಯೆಯಿಂದ ಪುಣ್ಯವಿಲ್ಲ, ಪಾಪವಿಲ್ಲ ಅದರಂತೆ ಧರ್ಮವು ಕೂಡ ಇಲ್ಲ.

**೨) ವಿಕಾರೀಕ್ರಿಯೆ :-** ಆತ್ಮನು ತನ್ನ ಶುದ್ಧ ಚೈತನ್ಯಸ್ವಭಾವವನ್ನು ಮರೆತು ನಿಮಿತ್ತದಿಂದ ಲಾಭವಾಗುವುದು, ಪುಣ್ಯದಿಂದ ಧರ್ಮವಾಗುವುದೆಂದು ಮನ್ನಿಸುತ್ತಾನೆ ಅದು ಮಿಥ್ಯಾದರ್ಶನದ ವಿಕಾರೀಕ್ರಿಯೆಯು ತನ್ನ ಪರ್ಯಾಯದಲ್ಲಿ ಆಗುತ್ತದೆ.

**೩) ನಿರ್ವಿಕಾರೀ ಧಾರ್ಮಿಕಕ್ರಿಯೆ :-** ನಾನು ಶುದ್ಧ ಚೈತನ್ಯಸ್ವಭಾವಿಯಿದ್ದೇನೆ, ನಾನು ಜಡದ ಪರ್ಯಾಯದ ಹಾಗೂ ರಾಗದ ಜ್ಞಾತಾ ಇದ್ದೇನೆಂದು ಅರಿವು ಮಾಡಿಕೊಂಡು ಶುದ್ಧಚೈತನ್ಯದ ಅವಲಂಬನ ಮಾಡಿದರೆ ಆ ಮೋಕ್ಷಮಾರ್ಗವು ಪ್ರಕಟವಾಗಿ ಮೋಕ್ಷವಾಗುತ್ತದೆ ಅದನ್ನು ನಿರ್ವಿಕಾರಿಯಾದ ಧಾರ್ಮಿಕಕ್ರಿಯೆಯೆಂದು ಹೇಳಿದೆ. ಜಡದ ಕ್ರಿಯೆಯಿಂದ ಧರ್ಮವಾಗಲಿ ಅಥವಾ ಮೋಕ್ಷವಾಗಲಿ ಆಗುವುದಿಲ್ಲ.

ಅಜ್ಞಾನಿಜೀವನಿಗೆ ಕ್ರಿಯೆಯ ನಿಜವಾದ ಸ್ವರೂಪದ ಅರಿವಿಲ್ಲ. ಹಿಂಸೆ, ಅಸತ್ಯ, ಕಳವು ಮೊದಲಾದ ಅಶುಭಭಾವಗಳು ಪಾಪದಕ್ರಿಯೆಯಿವೆ. ದಯೆ, ದಾನಾದಿಗಳ ಭಾವಗಳು ಪುಣ್ಯದಕ್ರಿಯೆಯಿವೆ ಮತ್ತು ಅವೆರಡರಿಂದ ರಹಿತವಾದುದು ಧರ್ಮದಕ್ರಿಯೆಯಿದೆ. ಅಜ್ಞಾನಿಜೀವನು ಅಶುದ್ಧಪರಿಣಿತಿಯ ಮೂಲಕ ಆಚ್ಛಾದಿತನಿದ್ದಾನೆ. ಪರದಿಂದ ಅಶುದ್ಧತೆಯನ್ನು ಮನ್ನಿಸಿದ್ದಾನೆ ಅಥವಾ ಅಶುದ್ಧತೆಯಷ್ಟು ನಾನಿದ್ದೇನೆಂದು ಮನ್ನಿಸಿ ಸ್ವಯಂ ಸಿಕ್ಕಿಕೊಂಡಿದ್ದಾನೆ. ತನ್ನ ಸಾಮಾನ್ಯ ಶುದ್ಧಸ್ವಭಾವವು ವಿಕಾರದಿಂದಮುಚ್ಚಿಹೋಗಿದೆಯೆಂದು ಜೀವನು ತನ್ನ ಭಾವಬಂಧದಿಂದ ಸಿಕ್ಕಿಹಾಕಿಕೊಂಡಿದ್ದಾನೆ. ಭಾವ ಬಂಧಮಾಡಿಕೊಂಡರೆ ದ್ರವ್ಯಬಂಧವನ್ನು ನಿಮಿತ್ತವೆಂದು ಹೇಳಲಾಗುವುದು. ಅಜ್ಞಾನಜೀವನು ಅನಂತಬಾರಿ ಸಮವಸರಣದಲ್ಲಿ ಹೋಗಿದ್ದಾನೆ. ಆದರೆ ತನ್ನ ಅಜ್ಞಾನದ ಕಾರಣದಿಂದ ತಿಳಿದುಕೊಳ್ಳಲಿಲ್ಲ. ಈಗಲೂ ಮಹಾವಿದೇಹಕ್ಷೇತ್ರದಲ್ಲಿ ಭಗವಂತರು ವಿದ್ಯಮಾನರಿದ್ದಾರೆ, ಅಲ್ಲಿ ಮಿಥ್ಯಾದೃಷ್ಟಿ ಜೀವಗಳು ಕೂಡ ಇವೆ, ಅವರಿಗೆ ಭಗವಂತರು ತಿಳಿಸಿಕೊಡುತ್ತಾರೆಂಬುದಾಗಿಲ್ಲ. ಸ್ವಯಂ ತಿಳಿದುಕೊಂಡರೆ ಭಗವಂತರನ್ನು ನಿಮಿತ್ತವೆಂದು ಹೇಳಲಾಗುವುದು. ಆರು ಗುರಾಣಿಯಲ್ಲಿ ಪಂ. ದೌಲತರಾಮರು ಹೀಗೆ ಹೇಳುತ್ತಾರೆ,-

**ಧರಿಸಿ ಮುನಿದೀಕ್ಷೆಯನು ಜೀವನು । ಪಿರಿಯಮಹನಿಯಮಗಳ ತಾನಾ ।**
**ಚರಿಸಿ ನೌಗ್ರೈವೇಯಕದಿ ಜನಿಸಿಹನು ಪಲವು ಸಲ ॥**
**ಅರಿತುಕೊಳ್ಳದೆ ತನ್ನ ಆತ್ಮನ । ಮರೆತು ಭೇದಜ್ಞಾನವನು ತಾ**
**ಬರಿದೆ ತಪ ಮಾಡಿದರು ಸುಖಲೇಶವನು ಪಡೆಲಿಲ್ಲ ॥**

ಸಮ್ಯಗ್ದರ್ಶನವಿಲ್ಲದೆ ವ್ರತ, ತಪಾದಿಗಳು ಸತ್ಯವೆನಿಸವು, ಮುನಿಪದ ಧರಿಸಿ ಅನಂತಬಾರಿ ನವಗ್ರೈವೇಯಕಕ್ಕೆ ಹೋಗಿದೆ, ಆದರೆ ಆತ್ಮನ ಜ್ಞಾನವಿಲ್ಲದೆ ಸ್ವಲ್ಪ ಕೂಡ ಸುಖವನ್ನು ಪಡೆಯಲಿಲ್ಲ, ಯಾತ್ರೆ ಮೊದಲಾದ ಶುಭ ಭಾವದಿಂದ ಪುಣ್ಯವಾಗುತ್ತದೆ, ಆದರೆ ಪುಣ್ಯದಿಂದ ಧರ್ಮ ಮನ್ನಿಸಿದರೆ ಮಿಥ್ಯಾತ್ವದ ಮಹಾನಪಾಪವು ಕಟ್ಟುವುದು.

ಅಜ್ಞಾನಿಜೀವರುಗಳು ಕರ್ಮದ ಬಲವಿದೆಯೆಂದು ಮನ್ನಿಸಿ ಭ್ರಾಂತಿಯ ಸೇವನೆ ಮಾಡುತ್ತಿದ್ದಾರೆ. ಬಲದೇವನು ಆರು ತಿಂಗಳವರೆಗೆ ವಾಸುದೇವನ ಶವವನ್ನು ಹೊತ್ತು ತಿರುಗುತ್ತಿದ್ದನು. ಅಲ್ಲಿ ಚಾರಿತ್ರ ಮೋಹನೀಯ ಕರ್ಮದ ಬಲದ ಕಾರಣದಿಂದ ಅಂಥ ರಾಗವಾಯಿತೆಂದು ಅಜ್ಞಾನೀ ಮನ್ನಿಸುತ್ತಾನೆ. ಜ್ಞಾನಿಯಿರಲಿ ಅಥವಾ ಅಜ್ಞಾನಿಯಿರಲಿ ಯಾರಿಗೂ ಕರ್ಮದಿಂದ ರಾಗವಾಗುವುದಿಲ್ಲ, ತಮ್ಮ ಅಶಕ್ತತೆಯ ಕಾರಣದಿಂದ ರಾಗವಾಗುತ್ತದೆ.

**ಪ್ರಶ್ನೆ :-** ಕಷಾಯದ ಮಂದತೆಯಿಂದ ಗುಣಸ್ಥಾನವಿರುವುದೇನು ?

**ಉತ್ತರ :-** ಇಲ್ಲ, ಕಷಾಯದ ಮಂದತೆಯು ಅದು ವಿಕಾರವಿದೆ, ಅದು ಪುಣ್ಯಾಸ್ರವವಿದೆ. ಯಾವ ಕಾರಣದಿಂದ ಆಸ್ರವವಾಗುತ್ತದೆ. ಆ ಕಾರಣದಿಂದ ಸಂವರವಾಗುವುದಿಲ್ಲ, ಎರಡರ ಕಾರಣವು ಒಂದೇ ಆದರೆ ಆಸ್ರವ ಮತ್ತು ಸಂವರಗಳೆರಡೂ ಒಂದಾದರೆ ನವತತ್ತ್ವಗಳೇ ಉಳಿಯುವುದಿಲ್ಲ. ನಿಮಿತ್ತದಿಂದಂತೂ ಧರ್ಮವಿಲ್ಲ ಪುಣ್ಯದಿಂದಲೂ ಧರ್ಮವಿಲ್ಲ, ಆದರೆ ಸಮ್ಯಗ್ದರ್ಶನದ ನಿರ್ಮಲ ಪರ್ಯಾಯದಿಂದ ಕೂಡ ಚಾರಿತ್ರವಾಗುವುದಿಲ್ಲ. ಚಾರಿತ್ರ ಅಥವಾ ಗುಣಸ್ಥಾನದ ಶುದ್ಧತೆಯ ವೃದ್ಧಿಯು ತ್ರಿಕಾಲಿಶುದ್ಧ ಚೈತನ್ಯಸ್ವಭಾವದ ಅವಲಂಬನದಿಂದ ಪ್ರಕಟವಾಗುತ್ತದೆ. ಆದುದರಿಂದ ಜೀವನು ನಿಮಿತ್ತದ, ಪುಣ್ಯದ ಅದರಂತೆ ಪರ್ಯಾಯದ ಅಭಿರುಚಿ ಬಿಟ್ಟು ಮೊದಲು ಶುದ್ಧಸ್ವಭಾವದ ಅಭಿರುಚಿ ಮಾಡಬೇಕಾಗುವುದು. ಅದರ ಆಧಾರದಿಂದ ಸಮ್ಯಗ್ದರ್ಶನವಾಗುವುದು ಮತ್ತು ಸಮ್ಯಗ್ದರ್ಶನವಾದ ನಂತರ ಸ್ವಭಾವದಲ್ಲಿ ಲೀನತೆ ಮಾಡಿದರೆ ಆಸಕ್ತಿಯು ಕಡಿಮೆಯಾಗುತ್ತ ಹೋಗುವುದು ಮತ್ತು ಅಪ್ರತ್ಯಾಖ್ಯಾನವರಣೀಯ ಹಾಗೂ ಪ್ರತ್ಯಾಖ್ಯಾನಾವರಣೀಯ ಕಷಾಯವು ದೂರವಾಗುವುದು. ಹೀಗೆ ಆರನೇ ಗುಣಸ್ಥಾನವು ಶುದ್ಧಸ್ವಭಾವದ ಅವಲಂಬನದಿಂದ ಪ್ರಕಟವಾಗುವುದು. ಆರನೇ ಗುಣಸ್ಥಾನದಲ್ಲಿ ಪಂಚಮಹಾವ್ರತಾದಿಗಳ ಪರಿಣಾಮವಾಗುತ್ತದೆ. ಅದು ಕೂಡ ಪುಣ್ಯಾಸ್ರವವಿದೆ. ಅದರಿಂದ ಗುಣಸ್ಥಾನ ಉಳಿಯುವುದಿಲ್ಲ, ಆದರೂ ಆ ಭೂಮಿಕೆಯಲ್ಲಿ ಆ ಪ್ರಕಾರದ ರಾಗದ ಮಂದತೆಯಿರುತ್ತದೆ ಮತ್ತು ನಿಮಿತ್ತರೂಪದಿಂದ ವಸ್ತ್ರ , ಪಾತ್ರೆಗಳಿರುವುದಿಲ್ಲ. ವಸ್ತ್ರ , ಪಾತ್ರೆಗಳಿದ್ದು ಮುನಿತನ ಪ್ರಕಟಿಸುವುದೆಂದರೆ ಅದು ಅಸತ್ಯವಿದೆ ಮತ್ತು ವಸ್ತ್ರ , ಪಾತ್ರೆಗಳು ಬಿಡುವುದರಿಂದ ಮುನಿತನ ಪ್ರಕಟವಾಗುವುದೆಂದು ಮನ್ನಿಸುವವನು ಕೂಡ ಮಿಥ್ಯಾದೃಷ್ಟಿಯಿದ್ದಾನೆ. ಗುಣಸ್ಥಾನ ಪ್ರಕಟವಾಗುವುದು, ಉಳಿಯುವುದು ಮತ್ತು ಮುಂದೆ ವೃದ್ಧಿಸುವುದು ಅದು ತನ್ನ ಶುದ್ಧ ಚೈತನ್ಯಸ್ವಭಾವದ ಆಶ್ರಯದಿಂದಿದೆ. ಕಷಾಯದ ಮಂದತೆಯಿಂದ ಗುಣಸ್ಥಾನ ಹೆಚ್ಚುವುದಿಲ್ಲ, ವರ್ತಮಾನದಲ್ಲಿ. ಅಜ್ಞಾನಿಜೀವರು ಕಷಾಯದ ಮಂದತೆಯಿಂದ ಧರ್ಮವಾಗುವುದೆಂದು ಮನ್ನಿಸುತ್ತಿದ್ದಾರೆ. ಇಂಥ ಕಷಾಯ ಮಂದತೆಯ ಪರಿಣಾಮವನ್ನು ಜೀವರು ಅದೆಷ್ಟೋ ಬಾರಿ ಮಾಡಿದ್ದಾರೆ. ಶರೀರದ ತುಂಡು-ತುಂಡು ಮಾಡಿದರೂ ಕೂಡ ರೊಚ್ಚಿಗೇಳಲಿಲ್ಲ. ಇಂಥ ಶುಭ ಪರಿಣಾಮವಿದ್ದರೂ ಅಂತರ್ಯದ ಅರಿವಿಲ್ಲದಿರುವುದರಿಂದ ಅಜ್ಞಾನಿಗಳು ಅನಂತ ಸಂಸಾರದಲ್ಲಿ ಅಲೆಯುತ್ತಿದ್ದಾರೆ. ಕಷಾಯದ ಮಂದತೆಯಿಂದ ಧರ್ಮವಾಗುವುದಿಲ್ಲ, ಆದರೆ ನಾನು ತ್ರಿಕಾಲ ಜ್ಞಾನಸ್ವರೂಪನಿದ್ದೇನೆಂಬ ಶ್ರದ್ಧೆ ಹಾಗೂ ಸ್ಥಿರತೆಯಿಂದ ಧರ್ಮವಾಗುತ್ತದೆ. ಉಪಶಮ ಹಾಗೂ

ಕ್ಷಯೋಪಶಮಭಾವದಿಂದ ಕ್ಷಾಯಿಕಭಾವವಾಗುವುದಿಲ್ಲ. ಆ ಉಪಶಮ ಹಾಗೂ ಕ್ಷಯೋಪಶಮಭಾವ ಕೂಡ ಶುದ್ಧ ಚೈತನ್ಯಸ್ವಭಾವದ ಅವಲಂಬನದಿಂದ ಪ್ರಕಟವಾಗುತ್ತವೆ. ರಾಗದ ಮಂದತೆಯಿಂದ ಆ ಭಾವಗಳು ಪ್ರಕಟವಾಗುವುದಿಲ್ಲ. ದ್ರವ್ಯದ ಅವಲಂಬನದಿಂದ ಶುದ್ಧತೆಯು ಪ್ರಕಟಿಸುತ್ತದೆ ಮತ್ತು ವರ್ಧಿಸುತ್ತದೆ.

ಮತ್ತು ಯಾವ ಕಷಾಯವು ಉತ್ಪನ್ನವಾಗುತ್ತದೆ ಅದನ್ನು ಯಾವ ರೀತಿಯಾಗಿ ನಾಶ ಮಾಡುವುದು ? ಆತ್ಮನ ಪರ್ಯಾಯದಲ್ಲಿ ಯಾವ ರಾಗವಾಗುತ್ತದೆ ಅದು ಎರಡು ಸಮಯವಂತೂ ಇರುವುದಿಲ್ಲ, ಅದು ಒಂದು ಸಮಯ ಮಾತ್ರವೇ ಇರುತ್ತದೆ. ಯಾವ ಸಮಯದಲ್ಲಿ ರಾಗವು ಉತ್ಪನ್ನವಾಗುತ್ತದೆ ಅದನ್ನು ಅದೇ ಸಮಯದಲ್ಲಿ ಹೇಗೆ ನಾಶ ಮಾಡುವುದು ? ಆ ಸಮಯದಲ್ಲಂತೂ ನಾಶಮಾಡುವ ಸಾಧ್ಯತೆಯಿಲ್ಲ, ಆದರೆ ಎರಡನೇ ಸಮಯದಲ್ಲಿ ಉತ್ಪನ್ನವಾಗದಂತೆ ಮಾಡಿದರೆ ನಾಶಮಾಡಿತೆಂದು ಹೇಳಲಾಗುವುದು. ದ್ರವ್ಯದೃಷ್ಟಿಮಾಡುವುದೇ ಅದರ ಉಪಾಯವಿದೆ. ನಾನು ಒಂದು ಸಮಯದ ಪರ್ಯಾಯದೃಷ್ಟಿಲ್ಲ, ನಾನಂತೂ ಶುದ್ಧ ಚೈತನ್ಯಸ್ವಭಾವಿಯಿದ್ದೇನೆಂದು ಜ್ಞಾನಮಾಡಿಕೊಂಡು ಸ್ವಭಾವದಲ್ಲಿ ಸ್ಥಿರತೆ ಮಾಡಿದರೆ ರಾಗವು ಉತ್ಪನ್ನವಾಗುವುದಿಲ್ಲ. ಅದನ್ನು ರಾಗದ ನಾಶಮಾಡಿತೆಂದು ಹೇಳಲಾಗುವುದು. ಸರ್ವಜ್ಞರು ಹೇಳಿದ ವಸ್ತುಸ್ವಭಾವವನ್ನು ತಿಳಿದುಕೊಳ್ಳಬೇಕು. ಈ ಜಗತ್ತಿನಲ್ಲಿ ಆರುದ್ರವ್ಯಗಳು ಸ್ವತಂತ್ರವಿವೆ, ಯಾವುದು ಯಾವುದರ ಸ್ವಾತಂತ್ರವನ್ನು ಹರಣಮಾಡುವುದಿಲ್ಲ. ಆರುದ್ರವ್ಯಗಳನ್ನು ಸ್ವತಂತ್ರವೆಂದು ತಿಳಿದುಕೊಂಡು ತನ್ನ ಅಪರಾಧದಿಂದಾದ ವಿಕಾರವನ್ನು ಕ್ಷಣಿಕವೆಂದು ತಿಳಿದು ಆ ತನ್ನ ತ್ರಿಕಾಲೀ ಸ್ವಭಾವವು ಶುದ್ಧವಿದೆಯೆಂದು ಅಭಿರುಚಿ ಮಾಡುವುದು ಅದು ಧರ್ಮವಿದೆ.

**೬೯ನೇ ಗಾಥೆಯ ಭಾವಾರ್ಥ :-** ಜೀವವು ತನ್ನ ಅಪರಾಧದ ಕಾರಣದಿಂದ ಅಲೆಯುತ್ತಿದೆ ದೋಷಯುಕ್ತ ಉಪದೇಶ, ಅಥವಾ ಕುದೇವ, ಕುಗುರು, ಕುಶಾಸ್ತ್ರದ ಕಾರಣದಿಂದ ಅಲೆಯುವುದಿಲ್ಲ. ಅದರಂತೆ ಸತ್ಯದೇವ-ಗುರು-ಶಾಸ್ತ್ರಗಳಿಂದ ದಾಟಿ ಹೋಗುವುದಿಲ್ಲ. ವಿರುದ್ಧದಶೆ ಮಾಡುವಲ್ಲಿ ಅಥವಾ ಸರಳದಶೆ ಮಾಡುವಲ್ಲಿ ಕೂಡ ಸ್ವಯಂಪ್ರಭು ಇದ್ದಾನೆ.

**ಪ್ರಶ್ನೆ :-** ಸಿದ್ಧರ ಗುಣಗಳನ್ನು ಸ್ಮರಣೆ ಮಾಡುವುದರಿಂದ ಧರ್ಮವಾಗುವುದೇನು ?

**ಉತ್ತರ :-** ಇಲ್ಲ, ಸ್ಮರಣೆ ಮಾಡುವ ಭಾವವು ಅದು ಶುಭರಾಗವಿದೆ, ನಿಮಿತ್ತದಿಂದ ಧರ್ಮವಾಗುವುದಿಲ್ಲ. ಶುಭರಾಗದಿಂದ ಧರ್ಮವಿಲ್ಲ. ಅದರಂತೆ ಪರ್ಯಾಯದಿಂದ ಕೂಡ ಧರ್ಮದ ಪರ್ಯಾಯ ಬರುವುದಿಲ್ಲ. ಶುದ್ಧ ಚೈತನ್ಯಸ್ವಭಾವದ ಅವಲಂಬನದಿಂದ ಧರ್ಮವಾಗುತ್ತದೆ. ಸಿದ್ಧರ ಸ್ಮರಣೆಯನ್ನು ಅನಂತಬಾರಿ ಮಾಡಿದರೂ ಮತ್ತು ವೈರಾಗ್ಯಪೂರ್ವಕವಾಗಿ ಮುನಿತನವನ್ನು ಪಾಲಿಸಿದರು ಕೂಡ ಆತ್ಮನ ಜ್ಞಾನವಿಲ್ಲದೆ ಧರ್ಮವಾಗುವುದಿಲ್ಲ. ಸಿದ್ಧರ ಸ್ಮರಣದಿಂದಂತೂ ಕಲ್ಯಾಣವಿಲ್ಲ ಆದರೆ ತನ್ನ ದ್ರವ್ಯ-ಗುಣ-ಪರ್ಯಾಯದ ಭೇದದಿಂದಕೂಡ ಕಲ್ಯಾಣವಿಲ್ಲ. ಭೇದ ಬುದ್ಧಿಯು ಧರ್ಮದ ಕಾರಣವಿಲ್ಲ ಆದರೆ ನಾನು ಅಭೇದ ಸ್ವಭಾವಿ ಶುದ್ಧನಿದ್ದೇನೆಂದು ಅಭಿರುಚಿ ಮಾಡುವುದು ಅದು ಧರ್ಮದ ಕಾರಣವಿದೆ.

ಜೀವನು ತನ್ನ ಅಪರಾಧದಿಂದ ಸಂಸಾರದ ಅನೇಕ ಪ್ರಕಾರದ ಉದಯ ಭಾವರೂಪದ ಪರಿಣಾಮದಿಂದ ಅಲೆಯುತ್ತಾನೆ. ಮತ್ತು ಅಸತ್ ವಸ್ತುವಿನಲ್ಲಿ ಸತ್‌ರೂಪ ಮನ್ನಿಸುತ್ತಾನೆ. ಶರೀರ ವಾಣಿ, ಮನಸ್ಸುಗಳು ಆತ್ಮವಲ್ಲ, ಅವು ಪರವಿದ್ದರೂ ಕೂಡ ಅವನ್ನು ತನ್ನವೆಂದು ಮನ್ನಿಸುವುದು ಅಸತ್ ಇದೆ. ವಾಣಿ ವಿಕಾರವು ಒಂದು ಸಮಯ ಮಾತ್ರ ಸತ್ ಇದೆ, ಆದರೆ ತ್ರಿಕಾಲೀ ಸ್ವಭಾವದಲ್ಲಿಲ್ಲ ಅದಕ್ಕಾಗಿ ಅದು ಕೂಡ ಅಸತ್ ಇದೆ. ವಿಕಾರದಿಂದ ಸಮ್ಯಗ್ದರ್ಶನವಾಗುವುದೆಂದು ಮನ್ನಿಸುವುದು ಅದು ಅಸತ್‌ನ್ನು ಸತ್ ಮನ್ನಿಸಿದ ಸಮಾನವೇ ಇದೆ. ಯಾವ ಪ್ರಕಾರ ಮದ್ಯ ಕುಡಿದ ಮನುಷ್ಯನಿಗೆ ಸ್ವಸ್ತ್ರೀ ಹಾಗೂ ಪರಸ್ತ್ರೀಯ ವಿವೇಕವಿಲ್ಲ ಬೇಕಾದಂತೆ ವರ್ತಿಸುತ್ತಾನೆ ಅದೇ ಪ್ರಕಾರ ಮಿಥ್ಯಾದೃಷ್ಟಿ ಜೀವನು ಅಸತ್‌ನ್ನು ಸತ್ ಮನ್ನಿಸಿ ಭ್ರಾಂತಿರೂಪವಾಗಿ ಪ್ರವರ್ತಿಸುತ್ತಾನೆ ಮತ್ತು ತನ್ನ ಶುದ್ಧಸ್ವಭಾವವನ್ನು ಮರೆತುಬಿಡುತ್ತಾನೆ. ಹೀಗೆ ಮಿಥ್ಯಾದೃಷ್ಟಿ

ಜೀವನು ತನ್ನ ಅಜ್ಞಾನದ ಕಾರಣದಿಂದ ಯಾವರೀತಿ ಪ್ರವರ್ತಿಸುತ್ತಾನೆಂಬುದನ್ನು ತಿಳಿಸಿಕೊಡಲಾಗಿದೆ.

ಅನಾದಿಯಿಂದ ಅಜ್ಞಾನಿಜೀವನು ಸತ್‌ನ್ನು ಅಸತ್ತಾಗಿ ಮನ್ನಿಸಿದ್ದಾನೆ ಮತ್ತು ಅಸತ್‌ನ್ನು ಸತ್ತಾಗಿ ಮನ್ನಿಸಿದ್ದಾನೆ. ಅದು ತನ್ನ ಅಜ್ಞಾನದ ಕಾರಣದಿಂದಿದೆ. ನಾನು ಶುದ್ಧ ಚೈತನ್ಯನಿದ್ದೇನೆಂಬುದನ್ನು ಮರೆಯುತ್ತಿದ್ದಾನೆ. ಕರ್ಮದ ಅಧಿಕ್ಯದಿಂದ ಸ್ವಭಾವವನ್ನು ಮರೆತಿದ್ದಾನೆಂಬುದಾಗಿಲ್ಲ. ತನ್ನ ತ್ರಿಕಾಲ ನಿಜ ಪ್ರಭುತ್ವವನ್ನು ಮರೆತಿದ್ದಾನೆ ಮತ್ತು ದಯೆ ದಾನದಲ್ಲಿ ಸಿಕ್ಕಿಹಾಕಿಕೊಂಡಿದ್ದಾನೆ ಅದರಲ್ಲಿ ಕರ್ಮವು ನಿಮಿತ್ತರೂಪದಿಂದಿದೆ. ಹೀಗೆ ಕರ್ಮ ಸಂಯುಕ್ತ ಜೀವದ ವಿಕಾರದಲ್ಲಿ ಪ್ರಭುತೆಯನ್ನು ತಿಳಿಸಿತು. ಈಗ ೭೦ನೇ ಗಾಥೆಯಲ್ಲಿ ಜೀವವು ತನ್ನ ಪುರುಷಾರ್ಥದಿಂದ ಧರ್ಮ ಮಾಡುತ್ತದೆ ಕರ್ಮದ ವಿಯೋಗವಿರುವುದರಿಂದ ಧರ್ಮವಾಗುತ್ತದೆಂಬುದಾಗಿಲ್ಲ. ರಾಗ-ದ್ವೇಷ ಮಾಡಿದರೂ ತನ್ನ ಪ್ರಭುತೆಯಿಂದ ಮಾಡುತ್ತದೆ ಮತ್ತು ಸಾಧಕದಶೆಯಲ್ಲಿ ಧರ್ಮ ಮಾಡಿದರೂ ತನ್ನ ಪ್ರಭುತೆಯಿಂದ ಮಾಡುತ್ತದೆಂದು ಹೇಳುತ್ತಾರೆ,-

**ಉವಸಂತಖೀಣಮೋಹೋ ಮಗ್ಗಂ ಜಿಣಭಾಸಿದೇಣ ಸಮುವಗದೋ ।**
**ಣಾಣಾಣುಮಗ್ಗಚಾರೀ ಣಿವ್ವಾಣಪುರಂ ವಜದಿ ಧೀರೋ ॥೭೦॥**

**ಜಿನವಚನದಿಂದ ಮಾರ್ಗವ ಪಡೆದು ಉಪಶಾಂತಕ್ಷೀಣಮೋಹಿಯಾಗುತ್ತ ।**
**ಜ್ಞಾನಾನುಮಾರ್ಗದಲಿ ವಿಹರಿಸುವಧೀರ ಶಿವಪುರವ ಪಡೆಯುವನು ॥೭೦॥**

ಯಾವನು ಜಿನವಚನದ ಮೂಲಕ ಮಾರ್ಗವನ್ನು ಪ್ರಾಪ್ತ ಮಾಡಿಕೊಂಡು ಜ್ಞಾನಾನುಮಾರ್ಗದಲ್ಲಿ ವಿಹರಿಸುತ್ತಾನೆ, ಜ್ಞಾನದ ಅನುಸರಣೆ ಮಾಡುವಂಥ ಮಾರ್ಗದಲ್ಲಿ ವರ್ತಿಸುತ್ತಾನೆ ಆ ಧೀರಪುರುಷನು ನಿರ್ವಾಣ ಪುರವನ್ನು ತಲುಪುತ್ತಾನೆ ಎಂದರೆ ಪಡೆದುಕೊಳ್ಳುತ್ತಾನೆ.

ಜೀವನಿಗೆ ತನ್ನ ಪ್ರಭುತೆಯಿಂದ ಉಪಶಮಸಮ್ಯಕ್ತ್ವವಾಗುತ್ತದೆ, ಕರ್ಮದ ಉಪಶಮವಾಗುವುದರಿಂದ ಉಪಶಮ ಸಮ್ಯಕ್ತ್ವವಾಗುವುದಿಲ್ಲ. ಕರ್ಮದ ಉಪಶಮವಾಗುವ ಸಮಯ ಮತ್ತು ಆತ್ಮನಲ್ಲಿ ಉಪಶಮ ಸಮ್ಯಕ್ತ್ವವಾಗುವ ಸಮಯವು ಒಂದೇ ಇದ್ದರೂ ಕರ್ಮದ ಉಪಶಮದ ಕಾರಣದಿಂದ ಸಮ್ಯಕ್ತ್ವವಾಗುವುದಿಲ್ಲ. ಜೀವನು ತನ್ನ ಶುದ್ಧ ಚಿದಾನಂದ ಸ್ವಭಾವದ ಆಶ್ರಯದಿಂದ ಶ್ರದ್ಧೆ ಮಾಡಿದರೆ ಕರ್ಮದ ಉಪಶಮವು ಕರ್ಮದ ಕಾರಣದಿಂದ ಆಗುತ್ತದೆ. ಕರ್ಮವು ಆತ್ಮನಲ್ಲಿ ಏನನ್ನೂ ಮಾಡುವುದಿಲ್ಲ, ಅದರಂತೆ ಆತ್ಮನೂ ಕರ್ಮದಲ್ಲಿ ಏನನ್ನೂ ಮಾಡುವುದಿಲ್ಲ. ಅವೆರಡರಲ್ಲಿ ಕ್ರಿಯೆಗಳು ಸ್ವತಂತ್ರವಾಗಿ ಆಗುತ್ತವೆ.

ಮತ್ತು ಅಜ್ಞಾನದಶೆಯಲ್ಲಿ ನಾನು ಶರೀರನಿದ್ದೇನೆ, ನಾನು ವಿಕಲ್ಪನಿದ್ದೇನೆಂಬ ವಿಪರೀತ ಪ್ರತೀತಿಯಿತ್ತು. ಅದನ್ನು ತನ್ನ ಜ್ಞಾನಸ್ವಭಾವದ ಅವಲಂಬನದಿಂದ ಪುರುಷಾರ್ಥದ ಮೂಲಕ ಮೂಲಸಹಿತ ನಾಶ ಮಾಡುವುದರಿಂದ ನಿಮಿತ್ತರೂಪದಿಂದ ಕರ್ಮದ ನಾಶವಾಗುವುದನ್ನು ಕ್ಷಾಯಿಕ ಸಮ್ಯಕ್ತ್ವವೆಂದು ಹೇಳುತ್ತಾರೆ. ದರ್ಶನಮೋಹಕರ್ಮದ ಕ್ಷಯವಾದರೆ ಕ್ಷಾಯಿಕಸಮ್ಯಕ್ತ್ವವಾಗುತ್ತದೆಂಬ ಕಥನವು ಗೊಮ್ಮಟಸಾರದಲ್ಲಿ ಬಂದಿದೆ ಅದು ನಿಮಿತ್ತದ ಕಥನವಿದೆ. ಅಲ್ಲಿ ಅಂತರಂಗ ಹೇತುವು ಕರ್ಮದ ಕ್ಷಯವನ್ನು ಹೇಳಿದೆ ಮತ್ತು ಬಾಹ್ಯ ಹೇತುವು ಸತ್ ದೇವ-ಗುರು-ಶಾಸ್ತ್ರಗಳನ್ನು ಹೇಳಿದೆ ಮತ್ತು ಉಪಾದಾನವು ತನ್ನಿಂದ ಇದೆಯೆಂದು ಯಾವ ಧರ್ಮಾತ್ಮ ಜೀವನು ಉಪಶಮ ಅಥವಾ ಕ್ಷಾಯಿಕ ಸಮ್ಯಕ್ತ್ವ ಪ್ರಕಟ ಮಾಡುತ್ತಾನೆ ಅವನು ತನ್ನ ಸ್ವರೂಪದ ವಿಷಯದಲ್ಲಿ ನಿಶ್ಚಲನಿದ್ದಾನೆ, ಅಚಲನಿದ್ದಾನೆ ಮತ್ತು ಅವನು ಮೋಕ್ಷಪುರಿಗೆ ಹೋಗುತ್ತಾನೆ ಎಂದರೆ ತನ್ನಲ್ಲಿ ಪರಿಪೂರ್ಣ ಶುದ್ಧ ಪರ್ಯಾಯ ಪ್ರಕಟಪಡಿಸಿಕೊಳ್ಳುತ್ತಾನೆ. ತನ್ನ ಪರಮಾನಂದದ ದಶೆಯಲ್ಲಿ ಏಕಾಕಾರನಾಗುತ್ತಾನೆ. ಕರ್ಮದ ಅಭಾವದ ಕಾರಣದಿಂದಾಗಿ ಮೋಕ್ಷ ಪಡೆಯುವುದಿಲ್ಲ, ಆದರೆ ತನ್ನ ಪ್ರಭುತೆಯಿಂದ ಮೋಕ್ಷ ಪಡೆಯುತ್ತಾನೆ.

**ಭಾವಾರ್ಥ :-** ಧರ್ಮಾತ್ಮ ಜೀವನಿಗೆ ನಾಲ್ಕನೇ ಗುಣಸ್ಥಾನದಲ್ಲಿ ಶುದ್ಧ ಚೈತನ್ಯಸ್ವಭಾವದ ಶ್ರದ್ಧೆಯಿರುತ್ತದೆ ಐದನೇ ಗುಣಸ್ಥಾನದಲ್ಲಿ ಶ್ರದ್ಧೆಯೊಡನೆ ವಿಶೇಷ ಸ್ಥಿರತೆಯಿರುತ್ತದೆ, ಆರರಲ್ಲಿ ವಿಶೇಷ ಸ್ಥಿರತೆಯೊಡನೆ ಮುನಿತನವಿರುತ್ತದೆ. ಸಾಧಕಜೀವನು ತನ್ನ ಪ್ರಭುತೆಯಿಂದ ಮುಂದುವರೆಯುತ್ತಾನೆ. ಜಡದ ಪ್ರಭುತೆಯು ಜಡದಲ್ಲಿದೆ, ವಿಕಾರದಲ್ಲಿ ಕೂಡ ತನ್ನ ಪ್ರಭುತೆಯಿದೆ ಮತ್ತು ಧರ್ಮದಶೆಯಲ್ಲಿ ಕೂಡ ತನ್ನ ಪ್ರಭುತೆಯಿದೆ. ಶರೀರವಿಲ್ಲ, ಮನ-ವಾಣಿಗಳಿಲ್ಲ, ಪುಣ್ಯ ವಿಕಾರವಿದೆ, ನಾನಂತೂ ಶುದ್ಧ ಚೈತನ್ಯಸ್ವಭಾವಿಯಿದ್ದೇನೆಂಬ ಶ್ರದ್ಧೆಯಂತೂ ಇದೆ. ಅನಂತರ ಆಂತರ್ಯದಲ್ಲಿ ವಿಶೇಷ ಪುರುಷಾರ್ಥ ಮಾಡಿ ಸಮ್ಯಗ್ದೃಷ್ಟಿ ಜೀವನು ತನ್ನ ಪ್ರಭುತೆಯಿಂದ ಮುಕ್ತದಶೆಯನ್ನು ಪ್ರಾಪ್ತಮಾಡಿಕೊಳ್ಳುತ್ತಾನೆ.

ಆ ಸಮ್ಯಗ್ದೃಷ್ಟಿ ಜೀವನು ಸರ್ವಜ್ಞ ಪ್ರಣೀತ ಆಗಮದಿಂದ ಸಮ್ಯಗ್ದರ್ಶನ-ಜ್ಞಾನ-ಚಾರಿತ್ರರೂಪವಾದ ಮೋಕ್ಷಮಾರ್ಗದಲ್ಲಿ ಆರೂಢನಿದ್ದಾನೆ, ಸ್ವಸಂವೇದನ ಪ್ರತ್ಯಕ್ಷವಾದ ಜ್ಞಾನಮಾರ್ಗದಲ್ಲಿ ಪ್ರವರ್ತಿಸುತ್ತಾನೆ.

ಸಮ್ಯಗ್ದೃಷ್ಟಿ ಜೀವನು ಮೋಕ್ಷಮಾರ್ಗವನ್ನು ಪಡೆದಿದ್ದಾನೆ. ಅದರಲ್ಲಿ ನಿಮಿತ್ತರೂಪದಿಂದ ಒಂದು ಸಮಯದಲ್ಲಿ ಮೂರುಕಾಲ ಮತ್ತು ಮೂರುಲೋಕದ ಜ್ಞಾನವು ಸ್ಪಷ್ಟ ವರ್ತಿಸುತ್ತಿದೆ. ಆಗ ಸರ್ವಜ್ಞ ಭಗವಂತರು ಹೇಳಿದ ಶಾಸ್ತ್ರಗಳು ನಿಮಿತ್ತವಿರುತ್ತವೆ.

ಅದರಲ್ಲಿ ಕುಶಾಸ್ತ್ರಗಳು ನಿಮಿತ್ತವಿಲ್ಲ. ಹದಿನೈದು ಭೇದದಿಂದ ಸಿದ್ಧದಶೆಯಾಗುತ್ತದೆಂದು ಹೇಳುವ ಶಾಸ್ತ್ರಗಳು ನಿಜವಾದ ಶಾಸ್ತ್ರಗಳಲ್ಲ, ಸ್ವರೂಪದ ಆಶ್ರಯದಿಂದ ಸಿದ್ಧದಶೆಯಾಗುವಂಥದ್ದೊಂದೇ ಭೇದವಿದೆ. ಆತ್ಮನ ಅರಿವಿನೊಡನೆ ಅಂತರದಶೆಯು ವೃದ್ಧಿಸಿದರೆ ಮುನಿತನ ಪ್ರಕಟವಾಗುವುದು, ಆಗ ಬಾಹ್ಯದಲ್ಲಿ ನಗ್ನದಿಗಂಬರ ದಶೆಯಿರುತ್ತದೆ ಆ ಮುನಿಯು ತನ್ನ ಸ್ವಭಾವದ ಆಶ್ರಯದಿಂದಲೇ ಮೋಕ್ಷಪ್ರಕಟಮಾಡುತ್ತಾನೆ. ಇದೊಂದೇಪ್ರಕಾರದಿಂದ ಮುಕ್ತಿಯಿದೆ. ಯಾವ ಶಾಸ್ತ್ರಗಳು ವಸ್ತ್ರಸಹಿತ ಮುನಿತನ, ಸ್ತ್ರೀಯರಿಗೆ ಮೋಕ್ಷ, ಗೃಹಸ್ಥಲಿಂಗದಿಂದ ಮೋಕ್ಷ , ಅನ್ಯಲಿಂಗದಿಂದಮೋಕ್ಷ ಹೇಳುತ್ತವೆ ಆ ಶಾಸ್ತ್ರಗಳು ನಿಜವಾಗಿಲ್ಲ. ಮೂರುಕಾಲದಲ್ಲಿ ಪರಮಾರ್ಥಮಾರ್ಗವು ಒಂದೇ ಇರುತ್ತದೆ.

ಈರೀತಿ ಸತ್ಯಶಾಸ್ತ್ರಗಳ ನಿಮಿತ್ತದಿಂದ ಧರ್ಮಾತ್ಮಜೀವನು ಆತ್ಮನ ನಿಜವಾದದೃಷ್ಟಿ , ಸ್ವಸಂವೇದನ ಜ್ಞಾನ ಮತ್ತು ಆಂತರ್ಯದಲ್ಲಿ ಕ್ರೀಡೆಯರೂಪದ ಮೋಕ್ಷಮಾರ್ಗವನ್ನು ಪಡೆಯುತ್ತಾನೆ.

**ಪ್ರಶ್ನೆ :-** ಭಗವಂತರವಾಣಿಯು ನಿಮಿತ್ತವಾಗುವುದರಿಂದ ಆತ್ಮನಪ್ರಭುತೆಯು ಖಂಡಿತವಾಗುತ್ತದೆಯೇನು ?

**ಉತ್ತರ :-** ಇಲ್ಲ, ವಾಣಿಯಿಂದ ಧರ್ಮಾತ್ಮನು ಮೋಕ್ಷಮಾರ್ಗಪಡೆಯುವುದಿಲ್ಲ, ಆದರೆ ಕುದೇವಾದಿಗಳ ವಾಣಿಯು ನಿಮಿತ್ತರೂಪದಿಂದಿರುವುದಿಲ್ಲ, ಆದರೆ ಸತ್ಯದೇವರವಾಣಿಯು ನಿಮಿತ್ತವಿರುವುದೆಂದು ತಿಳಿಸುವುದಿದೆ.ಜೀವನು ತನ್ನ ಪರುಷಾರ್ಥದಿಂದ ಕ್ಷಾಯಿಕ ಸಮ್ಯಕ್ತ್ವ ಪಡೆದಾಗ ತೀರ್ಥಂಕರರ ಸಾನಿಧ್ಯತೆಯಿರುತ್ತದೆ ಆದರೆ ತೀರ್ಥಂಕರರ ಕಾರಣದಿಂದ ಕ್ಷಾಯಿಕಸಮ್ಯಕ್ತ್ವವಾಗುವುದಿಲ್ಲ. ಅದರಿಂದ ಪಡೆಯಲಾಗುತ್ತಿದ್ದರೆ ಸಭೆಯೊಳಗಿನವರೆಲ್ಲರಿಗೆ ಕ್ಷಾಯಿಕಸಮ್ಯಕ್ತ್ವವಾಗಬೇಕಾಗುವುದು. ಅಲ್ಲಿ ಮಿಥ್ಯಾದೃಷ್ಟಿ ಜೀವನು ಧರ್ಮ ಪಡೆಯುವುದಿಲ್ಲ, ತನ್ನ ಉಪಾದಾನದ ಪುರುಷಾರ್ಥದಿಂದ ಕಾರ್ಯ ಮಾಡಿದರೆ ಪ್ರಭುವನ್ನು ನಿಮಿತ್ತವೆಂದು ಹೇಳಲಾಗುವುದು ಅದರಲ್ಲಿ ತನ್ನ ಪ್ರಭುತೆಯು ಖಂಡಿತವಾಗುವುದಿಲ್ಲ.

ಸಮ್ಯಗ್ದೃಷ್ಟಿಯು 'ಜ್ಞಾನಾನುಮಾರ್ಗಚಾರಿ'ಯಿರುತ್ತಾನೆಂದು ಹೇಳಿದೆ. ನಾನು ಶುದ್ಧನಿದ್ದೇನೆ, ಚೈತನ್ಯಸ್ವಭಾವಿ ಯಿದ್ದೇನೆಂದು ಜ್ಞಾನದ ಅನುಸರಣೆ ಮಾಡಿ ಪ್ರತ್ಯಕ್ಷ ಜ್ಞಾನಮಾರ್ಗದಲ್ಲಿ ಪ್ರವರ್ತಿಸುತ್ತಾನೆ. ಯಾರೂ ನಿಮಿತ್ತದ ಅನುಸಾರಿ, ಭಗವಂತರ ಅನುಸಾರಿ, ಅಥವಾ ರಾಗದ ಅನುಸಾರಿಯೆಂದು ಹೇಳಿಲ್ಲ. ನಾನು ಜ್ಞಾತಾ-ದೃಷ್ಟಾಯಿದ್ದೇನೆಂದು ಜ್ಞಾನವನ್ನನುಸರಿಸಿ ಅನಂತರ ಮಾರ್ಗವನ್ನನುಸರಿಸುವುದು ಅದು ಮೋಕ್ಷಮಾರ್ಗವಿದೆ. ಸಾಧಕಜೀವನಿಗೆ ತನ್ನ ಅಶಕ್ತತೆಯ ಕಾರಣದಿಂದ ದೇವ-ಗುರು-ಶಾಸ್ತ್ರದ ಕುರಿತು ಶುಭರಾಗ ಬರುತ್ತದೆ, ಆದರೆ ಅವನು ಅದನ್ನು ಪುಣ್ಯವೆಂದು

ತಿಳಿದುಕೊಂಡಿದ್ದಾನೆ. ಬಂಧಮಾರ್ಗವೆಂದು ತಿಳಿದುಕೊಂಡಿದ್ದಾನೆ, ಮೋಕ್ಷಮಾರ್ಗವೆಂದು ತಿಳಿದುಕೊಂಡಿಲ್ಲ.

ನಿಮಿತ್ತದ, ಶುಭರಾಗದ ಮತ್ತು ಪರ್ಯಾಯದ ಅಭಿರುಚಿ ಬಿಟ್ಟು, ನಾನು ಜ್ಞಾನಸ್ವಭಾವಿಯಿದ್ದೇನೆಂದು ಅಂತರ್ಯದ ಆಶ್ರಯದಿಂದ ಪ್ರಕಟವಾಗುವ ಜ್ಞಾನವು ಪ್ರತ್ಯಕ್ಷ ಸ್ವಸಂವೇದನ ಜ್ಞಾನವಿದೆ. ಅಂಥ ಪ್ರತ್ಯಕ್ಷಜ್ಞಾನದಲ್ಲಿ ಪ್ರವರ್ತಿಸುವುದು ಅದು ಮೋಕ್ಷಮಾರ್ಗವಿದೆ. ಸಮ್ಯಗ್ದರ್ಶನವಿಲ್ಲದ ಜ್ಞಾನವನ್ನು ಪರೋಕ್ಷ ಜ್ಞಾನವೆಂದು ಹೇಳುವುದಿಲ್ಲ. ನಾನು ಶುದ್ಧ ಚೈತನ್ಯಸ್ವಭಾವಿಯಿದ್ದೇನೆಂಬ ಶುದ್ಧದ ಲಕ್ಷ್ಯದಿಂದ ಸಾಧಕನಿಗೆ ಪ್ರಕಟವಾಗುವ ಜ್ಞಾನವು ಅದು ಆಂಶಿಕ ಪ್ರತ್ಯಕ್ಷಜ್ಞಾನವಿದೆ ಅವನಿಗೆ ರಾಗದ ಲಕ್ಷ್ಯದಿಂದಾಗುವ ಜ್ಞಾನವು ಪರೋಕ್ಷವೆನಿಸಿಕೊಳ್ಳುತ್ತದೆ. ಕೇವಲ ರಾಗದಿಂದಾಗುವ ಜ್ಞಾನವು ಅದು ಪರೋಕ್ಷ ಕೂಡ ಇಲ್ಲ.

ಹೀಗೆ ಸಮ್ಯಗ್ದೃಷ್ಟಿ ಜೀವನು ತನ್ನ ಪ್ರಭುತೆಯಿಂದ ಮೋಕ್ಷಮಾರ್ಗದಲ್ಲಿ-ಜ್ಞಾನಮಾರ್ಗದಲ್ಲಿ ಪ್ರವರ್ತಿಸುತ್ತಾನೆ. ಅವನಿಗೆ ಕರ್ಮದ ಅಭಾವವಾಗುತ್ತದೆ ಅದಕ್ಕಾಗಿ ಮೋಕ್ಷಮಾರ್ಗದಲ್ಲಿ ಪ್ರವರ್ತಿಸುತ್ತಾನೆಂಬುದಾಗಿಲ್ಲ.

**ಭಾವಾರ್ಥ :-** ಯಾವ ಜೀವನು ಪುರುಷಾರ್ಥದ ಮೂಲಕ ಅನಾದಿ ಮಿಥ್ಯಾದರ್ಶನ-ಜ್ಞಾನ-ಚಾರಿತ್ರರೂಪ ಅವಿದ್ಯೆಯ ನಾಶಮಾಡುತ್ತಾನೆ ಅವನಿಗೆ ನವತತ್ತ್ವಗಳ ಪ್ರತೀತಿಯು ವರ್ತಿಸುತ್ತದೆ.

ಕಾಲಲಬ್ಧಿ ಎಂದರೆ ತನ್ನ ಸ್ವಕಾಲ ಅಥವಾ ಪುರುಷಾರ್ಥವೆಂದು ತಿಳಿಯುವುದು. ಪಂಚಮಕಾಲ ಅಥವಾ ಚತುರ್ಥಕಾಲವೆಂಬ ವ್ಯವಹಾರಕಾಲದ ಮಾತಿಲ್ಲ. ತಾನು ಯಾವ ಸಮಯದಲ್ಲಿ ಜ್ಞಾನಸ್ವಭಾವದ ಪುರುಷಾರ್ಥ ಮಾಡುತ್ತಾನೆ ಅದು ತನ್ನ ಸ್ವಕಾಲವಿದೆ ಎಂದರೆ ಅವನಿಗೆ ತನ್ನ ಕಾಲಲಬ್ಧಿಯು ಪರಿಪಕ್ವವಾಗಿದೆ.

ಧರ್ಮಾತ್ಮಜೀವನು ತನ್ನ ಪುರುಷಾರ್ಥದಿಂದ ಅನಾದಿ ಅವಿದ್ಯೆಯ ನಾಶಮಾಡುತ್ತಾನೆ, ಶರೀರ, ವಿಕಾರ ಪರ್ಯಾಯದಷ್ಟೇ ನಾನಿದ್ದೇನೆಂಬ ಮಿಥ್ಯಾಶ್ರದ್ಧೆ, ಮಿಥ್ಯಾಜ್ಞಾನ ಮತ್ತು ಮಿಥ್ಯಾಚಾರಿತ್ರವನ್ನು ಅವಿದ್ಯೆಯೆಂದು ಹೇಳಿದೆ. ಅವನ್ನು ನಿಜವಾದ ಜ್ಞಾನದಿಂದ ನಾಶಮಾಡಿ ಎಂದರೆ ನಿಮಿತ್ತಬುದ್ಧಿಯ ಹಾಗೂ ಪರ್ಯಾಯ ಬುದ್ಧಿಯ ನಾಶಮಾಡಿ, ನಾನು ಶುದ್ಧನಿದ್ದೇನೆಂದು ಸತ್ಯ ಪ್ರತೀತಿ ಮಾಡುವುದು. ಹೀಗೆ ಸಮ್ಯಗ್ದರ್ಶನ-ಜ್ಞಾನ-ಚಾರಿತ್ರರೂಪವಾದ ಮೋಕ್ಷಮಾರ್ಗದಲ್ಲಿ ಪ್ರವರ್ತಿಸುವವನಿಗೆ ನವಪದಾರ್ಥದ ಯಥಾರ್ಥ ಪ್ರತೀತಿ ವರ್ತಿಸುತ್ತದೆ. ನಾನು ಶುದ್ಧಚೈತನ್ಯಸ್ವಭಾವಿಯಿದ್ದೇನೆಂಬುದರಲ್ಲಿ ಜೀವದ ಪ್ರತೀತಿ ಬಂತು, ನಾನು ಜೀವನಿದ್ದೇನೆಂದರೆ ನನ್ನಲ್ಲಿ ಅಜೀವ ಪದಾರ್ಥಗಳಿಲ್ಲವೆಂದು ನಿಶ್ಚಯ ಮಾಡಿದರೆ ಅಜೀವದ ಪ್ರತೀತಿಯಾಯಿತು. ನನ್ನ ಶುದ್ಧ ಚೈತನ್ಯಸ್ವಭಾವದ ಆಶ್ರಯವಿಲ್ಲವೆಂದರೆ ನನ್ನಲ್ಲಿ ಅಶುದ್ಧತೆ ಬರುವುದು ಅದು ಆಸ್ರವವಿದೆ ಅದರಲ್ಲಿ ಪುಣ್ಯ-ಪಾಪವೆಂದೆರಡು ಭೇದಗಳಿದ್ದು ಅಶುದ್ಧತೆಯಲ್ಲಿದ್ದಷ್ಟು ಬಂಧವಿದೆ ತನ್ನ ಶುದ್ಧ ಚೈತನ್ಯಸ್ವಭಾವದ ಆಶ್ರಯದಿಂದ ಶುದ್ಧತೆ ಪ್ರಕಟವಾಗುವುದು ಅದು ಸಂವರವಿದೆ ಮತ್ತು ಶುದ್ಧತೆಯ ವೃದ್ಧಿಯು ನಿರ್ಜರವಿದೆ ಸಂವರ-ನಿರ್ಜರೆಗಳು ಅಪೂರ್ಣಶುದ್ಧತೆಯಿದ್ದು ಪೂರ್ಣಶುದ್ಧತೆ ಮೋಕ್ಷವಿದೆಯೆಂದು ಮೋಕ್ಷದ ಪ್ರತೀತಿ ವರ್ತಿಸುತ್ತದೆ ಮತ್ತು ತಾನು ಧರ್ಮದಶೆ ಪ್ರಕಟಿಸುತ್ತಾನೆ. ನವಪದಾರ್ಥದ ಪ್ರತೀತಿ ಮಾಡುವಲ್ಲಿ ಸತ್ಯದೇವ-ಗುರು-ಶಾಸ್ತ್ರಗಳು ನಿಮಿತ್ತವಿವೆ, ಆದಾಗ್ಯೂ ಅವುಗಳಿಂದ ಧರ್ಮವಾಗುವುದಿಲ್ಲ. ಈ ರೀತಿ ಪದಾರ್ಥಗಳ ಯಥಾರ್ಥ ಪ್ರತೀತಿ ವರ್ತಿಸುತ್ತದೆ. ಅಜ್ಞಾನಿಜೀವನಿಗೆ ಪುರುಷಾರ್ಥದ ಮಾತು ಒಪ್ಪಿಗೆಯಾಗುವುದಿಲ್ಲ ಅದು ಕೂಡ ಅವನ ಪ್ರಭುತೆಯಿದೆ.

ಧರ್ಮಾತ್ಮಜೀವನು ಪ್ರಕಟ ಭೇದವಿಜ್ಞಾನದ ಜ್ಯೋತಿಯಿಂದ ರಾಗ-ದ್ವೇಷಗಳ ಕರ್ತೃತ್ವ-ಭೋಕ್ತೃತ್ವ ರೂಪದ ಅಂಧಕಾರವನ್ನು ನಾಶಮಾಡಿದ್ದಾನೆ. ಆ ನಿಮಿತ್ತದಿಂದ ಧರ್ಮವಾಗುತ್ತಿದ್ದರೆ ನಿಮಿತ್ತದಿಂದ ಭೇದ ವಿಜ್ಞಾನ ಮಾಡಿಸುವ ಅವಸರವೇ ಉಳಿಯುವುದಿಲ್ಲ. ಪರದಿಂದ ಮತ್ತು ರಾಗದಿಂದ ಭಿನ್ನನಿದ್ದೇನೆ ಚಿದಾನಂದನಿದ್ದೇನೆಂಬುದರ ಜ್ಞಾನಮಾಡಿಕೊಳ್ಳುವುದು ಅದು ಭೇದಜ್ಞಾನವಿದೆ. ಇಲ್ಲಿ ಪ್ರಭುತ್ವಶಕ್ತಿಯನ್ನು ಪರ್ಯಾಯದಲ್ಲಿ ತಿಳಿಸಿಕೊಡಲಾಗಿದೆ.

ಸಮಯಸಾರದಲ್ಲಿ ೪೭ ಶಕ್ತಿಗಳೊಳಗೆ ಒಂದು ಪ್ರಭುತ್ವಶಕ್ತಿಯ ಮಾತು ಬಂದಿದೆ ಅದು ತ್ರಿಕಾಲಿ ಗುಣ ಅಥವಾ ತ್ರಿಕಾಲಿಶಕ್ತಿಯ ಮಾತಿದೆ. ಯಾವುದರ ಪ್ರತಾಪವು ಅಖಂಡವಿದೆ ಎಂದರೆ ಯಾವುದರಿಂದ ಖಂಡಿತವಾಗುವ ಸಾಧ್ಯತೆಯಿಲ್ಲ ಅಂಥ ಸ್ವತಂತ್ರತೆಯಿಂದ-ಸ್ವಾಧೀನತೆಯಿಂದ ಶೋಭಾಯಮಾನತೆಯು ಯಾವುದರ ಲಕ್ಷಣವಿದೆ ಅದನ್ನು ಪ್ರಭುತ್ವಶಕ್ತಿಯೆಂದು ಹೇಳಿದೆ. ಅಂಥ ಪ್ರಭುತ್ವಶಕ್ತಿಯು ಅನಾದಿ ಅನಂತವಿರುವಂಥ ಶುದ್ಧ ಚೈತನ್ಯಸ್ವಭಾವದ ಲಕ್ಷ್ಯ ಮಾಡಿದರೆ ಪರ್ಯಾಯದಲ್ಲಿ ಪ್ರಭುತೆಯು ಪ್ರಕಟವಾಗುವುದು. ಅಲ್ಲಿ ತ್ರಿಕಾಲಶಕ್ತಿಯ ಮಾತಿದೆ. ಅಲ್ಲಿ ಸ್ವಪ್ರಭುತೆಯ ಮಾತು ಗೌಣವಿದೆ. ಹೀಗೆ ಪ್ರತಿಯೊಂದು ಗುಣದಲ್ಲಿ ಪ್ರಭು ಶಕ್ತಿಯಿದೆ. ಜ್ಞಾನದ ಪ್ರಭುತ್ವ ದರ್ಶನದ ಪ್ರಭುತ್ವ, ಆನಂದದ ಪ್ರಭುತ್ವವೆಂದು ಅನಂತಗುಣಗಳ ಪ್ರಭುತ್ವವಿದೆ. ಎಂದರೆ ಅಲ್ಲಿ ತ್ರಿಕಾಲಿಶಕ್ತಿಯ ಮಾತಿದೆ. ಅಂಥ ಪ್ರಭುತ್ವಶಕ್ತಿಯಿಂದ ತುಂಬಿಹೋದ ಆತ್ಮನ ಆಶ್ರಯದಿಂದ ಧರ್ಮವಾಗುತ್ತದೆ. ಅಲ್ಲಿ ದ್ರವ್ಯದೃಷ್ಟಿಯಿಂದ ದರ್ಶನ ಮುಖ್ಯವಾದ ಕಥನವಿದೆ.

ಇಲ್ಲಿ ಪಂಚಾಸ್ತಿಕಾಯದೊಳಗೆ ಪ್ರಭುತೆಯ ಮಾತನ್ನು ಪರ್ಯಾಯದಲ್ಲಿ ಸ್ವೀಕರಿಸಿ ಪ್ರಮಾಣಜ್ಞಾನ ಮಾಡಿಸಿದ್ದಾರೆ. ಪ್ರಭುತ್ವಶಕ್ತಿಯಂತೂ ಅನಾದಿ ಅನಂತವಿದೆ. ಪ್ರಭುತ್ವಶಕ್ತಿಗಳು ಎರಡಿಲ್ಲ, ಒಂದೇ ಇದೆ, ಆದರೆ ಯಾರಿಗೆ ಅದರ ಅರಿವಿಲ್ಲ ಮತ್ತು ರಾಗ-ದ್ವೇಷಾದಿಗಳ ಪರಿಣಾಮ ಮಾಡುತ್ತಾರೆಂದರೆ ವಿಕಾರದಲ್ಲಿ ತಮ್ಮ ಪ್ರಭುತೆಯಿದೆ ಮತ್ತು ಅವರು ಸ್ವಭಾವದ ಅರಿವು ಮಾಡಿಕೊಂಡು ಶುದ್ಧತೆಯನ್ನು ಪ್ರಕಟಿಸಿದರೆ ಆ ಶುದ್ಧತೆಯ ಪ್ರಕಟತೆಯಲ್ಲಿ ಕೂಡ ತಮ್ಮ ಪ್ರಭುತೆಯಿದೆ. ಹೀಗೆ ೬೯ ಮತ್ತು ೭೦ನೇ ಗಾಥೆಯಲ್ಲಿ ಪರ್ಯಾಯದ ಪ್ರಭುತೆಯ ಮಾತನ್ನು ಮಾಡಲಾಗಿದೆ. ಮತ್ತು ಸ್ವತಂತ್ರ ಪರ್ಯಾಯದ ಜ್ಞಾನ ಮಾಡಿಸಿ ಪ್ರಮಾಣಜ್ಞಾನ ಮಾಡಿಸಲಾಗಿದೆ. ಇಲ್ಲಿ ಜ್ಞಾನಪ್ರಧಾನವಾದ ಕಥನವಿದೆ.

ಇಲ್ಲಿ ಧರ್ಮಾತ್ಮಜೀವನು ಭೇದವಿಜ್ಞಾನ ಪ್ರಕಟ ಮಾಡಿದ್ದಾನೆಂದು ಹೇಳಿದೆ. ನಿಮಿತ್ತವಂತೂ ಪರವಿದ್ದು ಅದರಿಂದ ನಾನು ಭಿನ್ನನಿದ್ದೇನೆಂಬ ಭೇದಜ್ಞಾನ ಮಾಡಿದೆ, ಆದರೆ ನಿಮಿತ್ತದ ಮೇಲಿನ ಶುಭರಾಗವು ಒಂದು ಸಮಯದ ಪರ್ಯಾಯವಿದೆ. ನಾನಂತೂ ಶುದ್ಧ ಚೈತನ್ಯನಿದ್ದೇನೆಂಬ ಭೇದಜ್ಞಾನ ಮಾಡಿದ್ದೇನೆ.ಪರಪದಾರ್ಥಗಳನ್ನು ರಾಗದಲ್ಲಿ ಸೇರಿಸಬಹುದು ಮತ್ತು ಪರಪದಾರ್ಥಗಳನ್ನು ಭೋಗಿಸಬಹುದೆಂಬ ಪರಪದಾರ್ಥಗಳ ಸ್ವಾಮಿತ್ವದ ಹಾಗೂ ಭೋಕ್ತೃತ್ವದ ಬುದ್ಧಿಯು ಅದು ಅಂಧಕಾರವಿದೆ. ಅದನ್ನು ಭೇದವಿಜ್ಞಾನದ ಜ್ಯೋತಿಯಿಂದ ನಾಶಮಾಡಿದ್ದೇನೆ. ಅದು ಕೂಡ ಪರ್ಯಾಯದ ಕಥನವಿದೆ. ಶುದ್ಧಸ್ವಭಾವದ ಅವಲಂಬನೆ ತೆಗೆದುಕೊಂಡರೆ ಅಜ್ಞಾನಾಂಧಕಾರದ ವಿನಾಶವಾಗಿ ಹೋಗುವುದು. ನಿಮಿತ್ತದ ಕರ್ತೃತ್ವ ಮತ್ತು ಭೋಕ್ತೃತ್ವವು ನನ್ನಲ್ಲಿ ಇಲ್ಲ ಮತ್ತು ನನ್ನ ಕರ್ತೃತ್ವ ಹಾಗೂ ಭೋಕ್ತೃತ್ವವು ನಿಮಿತ್ತದಲ್ಲಿ ಇಲ್ಲ. ನಾನು ಮನುಸ್ಸು, ವಾಣಿ ಹಾಗೂ ಪರಪದಾರ್ಥಗಳ ರೂಪವಿಲ್ಲ. ನಾನು ಶುದ್ಧ ಚೈತನ್ಯಸ್ವಭಾವಿಯಿದ್ದೇನೆಂಬ ಮನ್ನಣೆಯಿಂದ ಅಜ್ಞಾನಾಂಧಕಾರದ ವಿನಾಶಮಾಡಿ ಧರ್ಮಾತ್ಮಜೀವನು ತನ್ನ ಪ್ರಭುತ್ವಶಕ್ತಿಯಿಂದ ಸ್ವರೂಪದಲ್ಲಿ ಪ್ರವರ್ತಿಸುತ್ತಾನೆ. ಯಾವುದೇ ಕಾಲದಿಂದ ಅಥವಾ ವಜ್ರಕಾಯದ ಬಲದಿಂದ ಆತ್ಮನಲ್ಲಿ ಲಾಭವಾಗುವುದಿಲ್ಲ. ವ್ಯವಹಾರದಲ್ಲಿ ಅಥವಾ ರಾಗದಲ್ಲಿ ಪ್ರವರ್ತಿಸುವುದಿಲ್ಲ, ಆದರೆ ತನ್ನ ಪ್ರಭುತೆಯಿಂದ ಸ್ವರೂಪದಲ್ಲಿ ಪ್ರವರ್ತಿಸುತ್ತಾನೆ. ಹೀಗೆ ಯಾರು ತಮ್ಮ ಶುದ್ಧ ಚೈತನ್ಯಸ್ವಭಾವದ ಪ್ರಭುತೆಯನ್ನು ತಿಳಿದುಕೊಂಡು ಅದರ ಆಶ್ರಯ ಮಾಡುತ್ತಾರೆ ಅವರು ಮೋಕ್ಷದಶೆಯನ್ನು ಪ್ರಾಪ್ತ ಮಾಡಿಕೊಳ್ಳುತ್ತಾರೆ.

**ಎಕ್ಕೋ ಚೇವ ಮಹಪ್ಪಾ ಸೋ ದುವಿಯಪ್ಪೋ ತಿಲಕ್ಖಣೋ ಹೋದಿ ।**
**ಚದುಚಂಕಮಣೋ ಭಣಿದೋ ಪಂಚಗ್ಗಗುಣಪ್ಪಧಾಣೋ ಯ ॥೭೧॥**

**ಛಕ್ಕಾಪಕ್ಕಮಜುತ್ತೋ ಉವಉತ್ತೋ ಸತ್ತಭಂಗಸಬ್ಭಾವೋ ।**
**ಅಟ್ಠಾಸಓ ಣವಟ್ಠೋ ಜೀವೋ ದಸಟ್ಠಾಣಗೋ ಭಣಿದೋ ॥೭೨॥**

**ಉತ್ತಮ ಮಹಾತ್ಮನೊಬ್ಬನಿದ್ದವನು ದ್ವಿಭೇದ, ತ್ರಿಲಕ್ಷಣಯುಕ್ತನಿಹನು ।**
**ಮತ್ತವನಿಗೆ ಚತುರ್ವಿಧ ಭ್ರಮಣ ಪಂಚಾಗ್ರಗುಣಪ್ರಧಾನನೆಂದು ಪೇಳಿದೆ ॥೭೧॥**

**ಉಪಯೋಗರೂಪಾತ್ಮ ಆರು-ಅಪಕ್ರಮಸಹಿತ ಸಪ್ತಭಂಗಸದ್ಭಾವನಿದ್ದು ।**
**ಉಪರಿ ಎಂಟು-ಆಶ್ರಯರೂಪ, ನವ-ಅರ್ಥರೂಪ, ದಶಸ್ಥಾನಗತನೆಂದಿದೆ ॥೭೨॥**

ಆ ಜೀವದ್ರವ್ಯವು ಅವಿನಾಶಿ ಚೈತನ್ಯ ಉಪಯೋಗ ಸಂಯುಕ್ತವಿರುವುದರಿಂದ ಸಾಮಾನ್ಯ ನಯದಿಂದ ಒಂದೇ ಇದೆ. ಜೀವಗಳೆಲ್ಲವೂ ಚೇತನಸ್ವರೂಪವಿರುವುದರಿಂದ ಜೀವವು ಒಂದೇಯೆಂದು ಹೇಳಲಾಗುತ್ತದೆ.

ಜೀವದ್ರವ್ಯವು ಅವಿನಾಶಿ ಜ್ಞಾತಾ ದೃಷ್ಟಾ ಉಪಯೋಗವುಳ್ಳದ್ದಿದೆ. ದೇಹಾದಿಗಳ ಹಾಗೂ ಪುಣ್ಯ-ಪಾಪದ ಕ್ರಿಯೆಗಳಾಗುತ್ತವೆ ಅವನ್ನು ತಿಳಿಯುವಂಥವನಿದ್ದಾನೆ. ಪುಣ್ಯ-ಪಾಪದ ಭೇದಗಳು ಹಾಗೂ ಅವಸ್ಥೆಯ ಹೆಚ್ಚು-ಕಡಿಮೆ ಭೇದಗಳಾಗುತ್ತವೆ ಅವು ಪರ್ಯಾಯಗಳಲ್ಲಿ ಆಗುತ್ತಿದ್ದರೂ ತ್ರಿಕಾಲೀಸ್ವಭಾವದ ಅಪೇಕ್ಷೆಯಿಂದ ಸಮಸ್ತ ಜೀವರುಗಳು ಯಾವಾಗಲೂ ಚೈತನ್ಯ ಉಪಯೋಗಿಯಿರುವುದೇ ಅವುಗಳ ಸ್ವರೂಪವಿದೆ.

**ಪ್ರಶ್ನೆ ಃ-** ಹಾಗಾದರೆ ದಯೆಯನ್ನು ಯಾರು ಪಾಲಿಸುತ್ತಾರೆ ?

**ಉತ್ತರ ಃ-** ಪರಜೀವದ ದಯೆಯನ್ನು ಯಾರೂ ಪಾಲಿಸುವ ಸಾಧ್ಯತೆಯಿಲ್ಲ. ತನ್ನ ಪರ್ಯಾಯದಲ್ಲಿ ರಾಗವು ಬರುವ ಮಾತು ಬೇರೆಯಿದೆ ಆದರೆ ಈ ಜೀವನು ದಯೆಪಾಲಿಸುವಂಥವನಿದ್ದಾನೆ ಮತ್ತು ಈ ಜೀವನು ಸಾಯಿಸುವಂಥವನಿದ್ದಾನೆಂಬುದು ಮೂಲವಸ್ತು ಸ್ವಭಾವದಲ್ಲಿಲ್ಲ. ಕೇವಲೀಭಗವಂತರಿದ್ದಾರೆಂದು ನನಗೆ ಆದರಣೀಯರಿದ್ದಾರೆ ಮತ್ತು ನಿಗೋದದ ಜೀವವು ಆದರಣೀಯವಿಲ್ಲವೆಂಬ ಭೇದವು ಮೂಲಸ್ವಭಾವದಲ್ಲಿ ಇಲ್ಲ. ಜೀವನು ಎಲ್ಲವನ್ನು ತಿಳಿಯುವಂಥವನು-ನೋಡುವಂಥವನು ಇದ್ದಾನೆ, ತನಗಿಂತ ಇತರರನ್ನು ಮಹಾನರೆಂದು ಸ್ವೀಕರಿಸುವಂತೆ ಜೀವದ ಸ್ವಭಾವವಿಲ್ಲ, ತಾನೇ ಮಹಾತ್ಮನಿದ್ದಾನೆ. ಜಡಶರೀರ ಅಥವಾ ಕರ್ಮ ಅದು ಜೀವದ ಸ್ವರೂಪವಲ್ಲ, ಆದರೆ ಜೀವದ ಪರ್ಯಾಯದಲ್ಲಿ ಆಗುವ ಭೇದಗಳು ಕೂಡ ತಿಳಿದುಕೊಳ್ಳುವಂತಿವೆ, ಅವು ಮೂಲಸ್ವರೂಪದಲ್ಲಿ ಇಲ್ಲ, ಅದಕ್ಕಾಗಿ ಆದರಣೀಯವಿಲ್ಲ. ಐದು ಜ್ಞಾನ, ಮೂರು ಅಜ್ಞಾನ ಮತ್ತು ನಾಲ್ಕು ದರ್ಶನವೆಂದು ಹನ್ನೆರಡು ಭೇದಗಳಾಗುತ್ತವೆ ಅವು ಪರ್ಯಾಯದಲ್ಲಿ ಆಗುತ್ತವೆ. ಈಗ ಅವುಗಳ ಮಾತಿಲ್ಲ, ನಾನು ತ್ರಿಕಾಲ ಏಕರೂಪ ಚೈತನ್ಯ ಉಪಯೋಗಿಯಿದ್ದೇನೆ. ನನಗೆ ಯಾರೂ ದೇವರಿಲ್ಲ, ನಾನು ಯಾರದೂ ದೇವನಿಲ್ಲ, ನಾನು ಯಾರ ಒಡೆಯನಿಲ್ಲ ಮತ್ತು ಯಾರೂ ನನ್ನ ಒಡೆಯರಿಲ್ಲ. ಸ್ವಾಮಿ ಮತ್ತು ಸೇವಕತೆಯ ವಿಕಲ್ಪದ ಸಮಯದಲ್ಲಿರುವ ಪರ್ಯಾಯದ ಭೇದವು ಕೇವಲ ತಿಳಿದುಕೊಳ್ಳಲು ಯೋಗ್ಯವಿದೆ. ಪುಣ್ಯ-ಪಾಪದ ಭೇದಗಳು ಪರ್ಯಾಯದಲ್ಲಿ ಆಗುತ್ತಿದ್ದರೂ ನಾನು ಅಭೇದ ಚೈತನ್ಯಸ್ವಭಾವಿಯಿದ್ದೇನೆಂದು ತಿಳಿದುಕೊಳ್ಳುವುದು ಅದು ಧರ್ಮವಿದೆ.

**ಪ್ರಶ್ನೆ ಃ-** ವಿಶ್ವಪ್ರೇಮವು ಹೇಗಾಗುತ್ತದೆ ?

**ಉತ್ತರ ಃ-** ಈ ಜೀವನು ಕೀಳು ಇದ್ದಾನೆ ಮತ್ತು ಈ ಜೀವನು ಉಚ್ಚನಿದ್ದಾನೆಂದು ಎಲ್ಲಿಯೂ ಜ್ಞೇಯದಲ್ಲಿ ಭೇದ ಮಾಡದಿರುವುದು ಮತ್ತು ಪರ್ಯಾಯದ ಭೇದವನ್ನು ಗೌಣಮಾಡಿ ತ್ರಿಕಾಲಿಸ್ವಭಾವದ ಏಕರೂಪತೆಯ ದೃಷ್ಟಿಯಿಂದ ಸಮಸ್ತ ಜೀವರುಗಳನ್ನು ನೋಡುವುದು ಅದು ವಿಶ್ವಪ್ರೇಮವಿದೆ.

ಸಿದ್ಧರು ಆದರಣೀಯರಿದ್ದಾರೆ ಮತ್ತು ನಿಗೋದಿಗಳು ಆದರಣೀಯವಲ್ಲ, ಧರ್ಮಾತ್ಮಜೀವನ ಕುರಿತು ರಾಗಮಾಡುವಂತಿದೆ ಮತ್ತು ಧರ್ಮದ ವಿರೋಧಮಾಡುವವನ ಕುರಿತು ದ್ವೇಷಮಾಡುವಂತಿದೆಯೆಂದು ಅನೇಕ ಭೇದಗಳಾಗುತ್ತವೆ, ಇಂಥ ಭೇದಗಳಿಗೆ ಸ್ವಭಾವದಲ್ಲಿ ಸ್ಥಾನವಿಲ್ಲ. ಸಮಸ್ತ ಜೀವರುಗಳು ತ್ರಿಕಾಲಶುದ್ಧ

ಚೈತನ್ಯಸ್ವಭಾವದವರಿದ್ದಾರೆಂದು ತ್ರಿಕಾಲದದೃಷ್ಟಿಯಿಂದ ನೋಡುವುದು ಅದು ವಿಶ್ವಪ್ರೇಮವಿದೆ.

**ಪ್ರಶ್ನೆ :-** ಭಗವಂತರ ವಾಣಿಯು ಆತ್ಮನನ್ನು ಸ್ಥಿರಮಾಡುವುದೇನು ?

**ಉತ್ತರ :-** ವಾಣಿಯಂತೂ ಜಡವಿದೆ, ವಾಣಿಯಿಂದ ಆತ್ಮನು ಸ್ಥಿರನಾಗುವುದಿಲ್ಲ, ಅದರಂತೆ ಆತ್ಮನು ವಾಣಿಯನ್ನು ಹೊರಡಿಸುವುದೂ ಇಲ್ಲ ವಾಣಿಯು ಹೊರಟರೆ ಇಚ್ಛೆಯನ್ನು ನಿಮಿತ್ತವೆಂದು ಹೇಳಲಾಗುತ್ತದೆ. ಇಲ್ಲಿಯಂತೂ ಇಚ್ಛೆಮಾಡಿದರೂ ಕೂಡ ಆತ್ಮನು ಹೇಳುವುದಿಲ್ಲ, ಆದರೆ ಆತ್ಮನು ಇಚ್ಛೆಯನ್ನು ತಿಳಿಯುವವನಿದ್ದಾನೆ. ಜ್ಞಾನವಾಗುತ್ತದೆ ಅದು ಶ್ರವಣದಿಂದ ಆಗುವುದಿಲ್ಲ. ಅಂತರ್ಯದ ಚೈತನ್ಯಸ್ವಭಾವದೊಳಗಿಂದ ಜ್ಞಾನವು ಪ್ರಕಾಶವಾದರೆ ವಾಣಿಯನ್ನು ನಿಮಿತ್ತವೆಂದು ಹೇಳಲಾಗುತ್ತದೆ. ವಾಣಿಯು ಜ್ಞಾನವನ್ನು ತಡೆಯುವುದಿಲ್ಲ ಮತ್ತು ಜ್ಞಾನವು ವಾಣಿಯನ್ನು ತಡೆಯುವುದಿಲ್ಲ, ಅವೆರಡೂ ಸ್ವತಂತ್ರವಿವೆ.

**ಪ್ರಶ್ನೆ :-** ಗೋಡೆಯೊಳಗಿಂದೇಕೆ ವಾಣಿಹೊರಡುವುದಿಲ್ಲ ಮತ್ತು ಆತ್ಮನಿದ್ದರೇನೇ ಹೊರಡುತ್ತದೆಯಲ್ಲವೇ?

**ಉತ್ತರ :-** ಪಾರ್ಶ್ವವಾಯುವುಳ್ಳ ಜೀವನು ಮಾತನಾಡುವ ಸಾಧ್ಯತೆಯಿಲ್ಲ, ಅಲ್ಲಿ ಜೀವನಿದ್ದರೂ ಕೂಡ ವಾಣಿಯು ಹೊರಡುವುದಿಲ್ಲ. ಏಕೆಂದರೆ ವಾಣಿಯ ಹೊರಡುವಿಕೆಯು ಅದು ವಾಣಿಯ ಕಾರಣದಿಂದಿದೆ. ಆತ್ಮನ ಕಾರಣದಿಂದ ವಾಣಿಯು ಹೊರಡುವುದಿಲ್ಲ ಮತ್ತು ವಾಣಿಯ ಕಾರಣದಿಂದ ಆತ್ಮನಿಗೆ ಲಾಭವಾಗುವುದಿಲ್ಲ, ಅವನು ಸ್ವಯಂ ಶುದ್ಧ ಚೈತನ್ಯ ಸ್ವರೂಪನಿದ್ದಾನೆ.

ಯಾರು ವಾಣಿಯ ಕಾರಣದಿಂದ ಜ್ಞಾನವಾಯಿತೆಂದು ಮನ್ನಿಸುತ್ತಾರೆ ದೇವ-ಶಾಸ್ತ್ರ-ಗುರುಗಳ ಕಾರಣದಿಂದ ಜ್ಞಾನವಾಯಿತೆಂದು ಮನ್ನಿಸುತ್ತಾರೆ ಅವರು ತಮ್ಮ ಚೈತನ್ಯಸ್ವಭಾವವನ್ನು ತಿಳಿಯುವುದಿಲ್ಲ. ಆದುದರಿಂದ ಅಂಥ ಜೀವರುಗಳು ವ್ರತ, ಜಪ, ತಪಗಳನ್ನು ಮಾಡಿದರೂ ಪುಣ್ಯವಾಗುತ್ತದೆ. ಆದರೆ ಅವರಿಗೆ ಧರ್ಮವಾಗುವುದಿಲ್ಲ. ಚಿನ್ನವು ತಾಮ್ರದಿಂದ ಹದಿನೈದಾಣೆಯೆಂದು ಹೇಳಲಾಗುತ್ತದೆ, ಆದರೆ ಚಿನ್ನವಂತೂ ಹದಿನಾರಾಣೆಯುಳ್ಳದ್ದೇ ಇದೆ. ಅದರಂತೆ ಜೀವದ ಪರ್ಯಾಯದಲ್ಲಿ ಭೇದವಾದರೂ ಕೂಡ ಸಮಸ್ತ ಜೀವರುಗಳು ಶುದ್ಧ ಉಪಯೋಗಮಯರಿದ್ದಾರೆ. ಸಮಸ್ತ ಜೀವರುಗಳು ಸಿದ್ಧಸಮಾನರಿದ್ದಾರೆಂದು ತಿಳಿದವರು ಸಿದ್ಧದಶೆಯನ್ನು ಪಡೆಯುತ್ತಾರೆ.

ಈಗ ಎರಡು ಭೇದದಿಂದ ಜೀವದ ಸ್ವರೂಪ ಹೇಳುತ್ತಾರೆ.

ಜೀವದ್ರವ್ಯವುಜ್ಞಾನೋಪಯೋಗ-ದರ್ಶನೋಪಯೋಗದಭೇದದಿಂದ ಎರಡುಪ್ರಕಾರದ್ದಾಗಿ ಹೇಳಲಾಗುತ್ತದೆ.

ಜ್ಞಾನ ಮತ್ತು ದರ್ಶನೋಪಯೋಗವುಳ್ಳದ್ದೆಂದು ಜೀವಗಳು ಎರಡು ಪ್ರಕಾರದಿಂದಿವೆ, ಸೋದರನೇ ! ತನ್ನ ದರ್ಶನ ಮತ್ತು ಜ್ಞಾನದ ವ್ಯಾಪಾರ ಮಾಡುವುದು ಜೀವದ ಸ್ವಭಾವವಿದೆ, ಪರದ ವ್ಯಾಪಾರ ಮಾಡುವ ಅಥವಾ ರಾಗ-ದ್ವೇಷ ಮಾಡುವುದು ಜೀವದ ಸ್ವಭಾವವಿಲ್ಲ. ಹಣವು ಬರಲಿ ಅಥವಾ ಹೋಗಲಿ ಅದನ್ನು ಆತ್ಮನು ತಿಳಿಯುವಂಥವನಿದ್ದಾನೆ, ಆದರೆ ಅಜ್ಞಾನೀಜೀವನು ಪರದಿಂದ ಬಹಳಷ್ಟು ಆಗುತ್ತದೆಯೆಂದು ತಿಳಿಯುತ್ತಾನೆ. ಅವನಿಗೆ ಜಡದ ಪರವೆಯಿಲ್ಲ. ನನ್ನ ಮೇಲೆ ಯಾರು ಪ್ರೀತಿ ಮಾಡುತ್ತಾರೆ ಶರೀರದ ಮೇಲೆ ಜೀವನು ಪ್ರೀತಿ ಮಾಡುತ್ತಾನೆ, ಆದರೆ ಆ ಶರೀರವು ಹೇಗಿದೆಯೆಂಬುದರ ಅರಿವಿಲ್ಲ. ಅಜ್ಞಾನಿಯು ಮನೆಯನ್ನು ನೋಡಿ ಅಭಿಮಾನ ಮಾಡುತ್ತಾನೆ, ಆದರೆ ಮನೆಯ ಅರಿವಿಲ್ಲ. ಅಜ್ಞಾನಿಯು ಜಡಪದಾರ್ಥಗಳನ್ನು ನಂಬಿ ಕುಳಿತುಕೊಂಡಿದ್ದಾನೆ. ಅವನಿಗೆ ತನ್ನ ಜ್ಞಾನ-ದರ್ಶನಗಳ ವ್ಯಾಪಾರದ ಎಚ್ಚರವೇ ಇಲ್ಲದಿರುವುದರಿಂದ ಇಲ್ಲಿ ದರ್ಶನ ಮತ್ತು ಜ್ಞಾನೋಪಯೋಗವುಳ್ಳವನೆಂದು ಹೇಳಿ ಎರಡು ಪ್ರಕಾರದ ಭೇದದಿಂದ ಜೀವದ ಪರಿಚಯ ಮಾಡಿಕೊಡಲಾಗಿದೆ.

ಈಗ ಜೀವದ ಮೂರು ಪ್ರಕಾರ ಹೇಳುತ್ತಾರೆ.

ಅದೇ ಜೀವದ್ರವ್ಯವು ಕರ್ಮಚೇತನ, ಕರ್ಮಫಲಚೇತನ, ಜ್ಞಾನಚೇತನವೆಂದು ಮೂರು ಭೇದದಿಂದ ಯುಕ್ತವಿದೆ.

**ಕರ್ಮಚೇತನವುಳ್ಳ ಜೀವ :-** ಜೀವನು ತನ್ನ ಶುದ್ಧ ಚೈತನ್ಯಸ್ವರೂಪವನ್ನು ಮರೆತು ದಯೆ, ದಾನ, ಕಾಮ, ಕ್ರೋಧ ಮೊದಲಾದ ಭಾವಗಳಲ್ಲಿ ಏಕಾಗ್ರನಾಗಿರುವವನು ಅವನು ಕರ್ಮಚೇತನವುಳ್ಳ ಜೀವನಿದ್ದಾನೆ. ನಾವು ಇಷ್ಟು ಯಾತ್ರೆ ಮಾಡಿದೆವು, ಇಷ್ಟು ಮಂದಿರ ಕಟ್ಟಿಸಿದೆವು, ಇಷ್ಟು ವ್ರತ-ತಪ ಮಾಡಿದೆವೆಂದು ರಾಗದ ಕರ್ತೃತ್ವ ಮನ್ನಿಸುತ್ತಾರೆ ಅವನ್ನೇ ಸರ್ವಸ್ವವೆಂದು ಮನ್ನಿಸುತ್ತಾರೆ ಮತ್ತು ತಮ್ಮ ಜ್ಞಾತಾಸ್ವಭಾವವನ್ನು ಮರೆತುಬಿಟ್ಟಿದ್ದಾರೆ. ಅಂಥ ಅಜ್ಞಾನೀಜೀವರುಗಳೆಲ್ಲರೂ ರಾಗಾದಿಗಳಲ್ಲಿ ಕರ್ತೃತ್ವ ಮನ್ನಿಸುತ್ತಾರೆ.

**ಕರ್ಮಫಲಚೇತನವುಳ್ಳ ಜೀವ :-** ತನ್ನ ಶುದ್ಧಸ್ವಭಾವವನ್ನು ಮರೆತು ಹರ್ಷ-ವಿಷಾದಗಳಲ್ಲಿ ಏಕಾಗ್ರವಾಗುವುದು ಕರ್ಮಫಲ ಚೇತನವಿದೆ. ಅನುಕೂಲತೆಯ ಸಮಯದಲ್ಲಿ ಹರ್ಷಿತನಾಗಿ ಹೋಗುವುದು ಮತ್ತು ಪ್ರತಿಕೂಲತೆಯ ಸಮಯದಲ್ಲಿ ಸತ್ತುಹೋದನೆಂದು ಶೋಕದಲ್ಲಿ ಏಕಾಗ್ರವಾಗುವುದು ಅದು ಕರ್ಮಫಲ ಚೇತನವಿದೆ.

ಏಕೇಂದ್ರಿಯ ಜೀವಗಳಿಗೆ ಕರ್ಮಫಲ ಚೇತನಾವು ಅಧಿಕವಿರುವುದರ ಮುಖ್ಯತೆಯಿಂದ ಕಥನಮಾಡಿ ಹೇಳಲಾಗಿದೆ. ತ್ರಸ ಜೀವಗಳಂತೆ ವಿಶೇಷ ವೀರ್ಯ ತಿರುಗಿಸುವ ರಾಗದ ಕರ್ತೃತ್ವ ಬುದ್ಧಿಯು ಅವಕ್ಕೆ ಮುಖ್ಯತೆಯಿಂದ ಆಗುವುದಿಲ್ಲ, ಅದರಿಂದಾಗಿ ಅಲ್ಲಿ ಕರ್ಮಫಲ ಚೇತನಾವನ್ನು ಮುಖ್ಯವೆಂದು ಗಣಿಸಲಾಗಿದೆ ಆದರೆ ಕರ್ಮಚೇತನಾವು ಅಲ್ಲಿ ಕೂಡ ಇದೆ. ತ್ರಸಜೀವಗಳು ರಾಗದ ಕರ್ತೃತ್ವದ ಮುಖ್ಯತೆಯಲ್ಲಿ ನಿಂತು ಕೊಂಡಿರುವುದರಿಂದ ಅವಕ್ಕೆ ಕರ್ಮಚೇತನವು ಮುಖ್ಯವೆಂದು ಗಣಿಸಲಾಗಿದೆ. ಆದರೆ ಅಲ್ಲಿ ಕೂಡ ಕರ್ಮ ಚೇತನಾವೇ ಇದೆ.

ಅದೆಷ್ಟೋ ಜೀವರುಗಳು ಪ್ರತಿಕೂಲತೆಯು ಬಂದುಬಿಟ್ಟರೆ ದುಃಖದ ಮಡುವಿನಲ್ಲಿ ಮುಳುಗಿಹೋಗುತ್ತಾರೆ ಮತ್ತು ಅನುಕೂಲತೆಯ ಬಂದರೆ ರಾಗದ ಮಂಜುಗಡ್ಡೆಯಲ್ಲಿ ಇಳಿದುಹೋಗುತ್ತಾರೆ. ಅವರಿಗೆ ಜ್ಞಾನಚೇತನಾದ ಅರಿವಿಲ್ಲ. ಅವರಿಗೆ ಧರ್ಮವಾಗುವುದಿಲ್ಲ. ನಿಗೋದದಿಂದ ಪಂಚೇಂದ್ರಿಯವರೆಗಿನ ಸಮಸ್ತ ಅಜ್ಞಾನೀ ಜೀವಗಳಿಗೆ ಕರ್ಮಫಲ ಚೇತನಾ ಇದೆ.

**ಜ್ಞಾನಚೇತನವುಳ್ಳ ಜೀವ :-** ಹರ್ಷ-ವಿಷಾದಗಳು ನನ್ನ ಅಶಕ್ತತೆಯಿಂದಾಗುತ್ತವೆಂದು ಧರ್ಮಾತ್ಮ ಜೀವನು ತಿಳಿಯುತ್ತಾನೆ. ನಾನು ಅವನ್ನು ತಿಳಿಯುವವನಿದ್ದೇನೆ. ಶಾಂತಿನಾಥ ಮೊದಲಾದ ಮೂವರು ತೀರ್ಥಂಕರರಿದ್ದರು, ಚಕ್ರವರ್ತಿಯಿದ್ದರು ಅವರಿಗೆ ತೊಂಭತ್ತಾರುಸಾವಿರ ರಾಣಿಯರಿದ್ದರು, ಹದಿನಾಲ್ಕು ರತ್ನ, ನವನಿಧಿಗಳಿದ್ದರೂ ಇದೆಲ್ಲವೂ ಪುಣ್ಯದ ವೈಭವವಿದೆಯೆಂದು ಅವರು ಅಂತರ್ಯದಲ್ಲಿ ತಿಳಿದುಕೊಂಡಿದ್ದರು. ಅವೆಂದರೆ ನಾನಲ್ಲ, ನಾನಂತೂ ಜ್ಞಾನಸ್ವಭಾವಿಯಾದ ಆತ್ಮನಿದ್ದೇನೆ. ಆತ್ಮನು ಜ್ಞಾನದ ನಿಧಿಯಿದ್ದಾನೆಂದು ಜ್ಞಾನಸ್ವಭಾವದ ಪರಿಚಯ ಮಾಡಿಕೊಂಡು ಅಂತರ್ಯದಲ್ಲಿ ಏಕಾಕಾರವಾಗುವ ಜೀವದ ಒಂದು ವರ್ಗವಿದೆ. ಸಮ್ಯಗ್ದೃಷ್ಟಿಯಿಂದ ಸಿದ್ಧರವರೆಗಿನ ಜೀವರುಗಳು ಈ ವರ್ಗದಲ್ಲಿ ಸೇರಿದವರಿದ್ದಾರೆ.

ಇದು ಜೀವದ ಭೇದದ ವರ್ಣನೆಯಿದೆ. ಜೀವವು ರಾಗದಲ್ಲಿ ಏಕಾಕಾರವಾಗಲಿ ಅಥವಾ ಶೋಕದಲ್ಲಿ ಏಕಾಕಾರವಾಗಲಿ ಅದು ಜೀವದ ಸ್ವಯಂ ಭೇದವಿದೆ. ಕರ್ಮದ ಕಾರಣ ಕರ್ಮಚೇತನವಾಗಲಿ ಅಥವಾ ಲಕ್ಷ್ಮಿಯ ಕಾರಣ ಹರ್ಷವಾಗಲಿ ಅಥವಾ ಯಾತ್ರೆಯ ಸ್ಥಾನದ ಕಾರಣ ಪುಣ್ಯವಾಗಲೆಂಬುದು ವಸ್ತುಸ್ವರೂಪವಿಲ್ಲ. ಜೀವದ ಪರ್ಯಾಯದ ಯೋಗ್ಯತೆಯ ಕಾರಣದಿಂದ ಶುಭಾಶುಭಭಾವಗಳಾಗುತ್ತವೆ. ಅವು ಪರದ ಕಾರಣದಿಂದಾಗುವುದಿಲ್ಲ. ಕರ್ಮದ ಕಾರಣದಿಂದ ಕರ್ಮಚೇತನಾವಿಲ್ಲ ಅದರಂತೆ ಕರ್ಮ ಸರಿಯಿತೆಂದು ಜ್ಞಾನ ಚೇತನಾ ಇಲ್ಲ. ಅನುಕೂಲ ಸಾಮಗ್ರಿ ದೊರೆತರೆ ಜ್ಞಾನವು ಪ್ರಕಟವಾಗುವುದು ಮತ್ತು ಪ್ರತಿಕೂಲ ಸಾಮಗ್ರಿ ಬಂದರೆ ಜ್ಞಾನವು

ತಡೆಯುವುದೆಂಬುದಾಗಿಲ್ಲ. ನಿಗೋದದ ಜೀವಗಳು ಹೆಚ್ಚು ಕರ್ಮ ಮಾಡಿರುವುದರಿಂದ ಕರ್ಮಫಲ ಚೇತನಾ ಇವೆ? ಮತ್ತು ತ್ರಸದಲ್ಲಿ ನಡೆದಾಡುವ ಶಕ್ತಿಯಿದೆ ಅಲ್ಲದೆ ವ್ಯಾಪಾರ ಮೊದಲಾದ ಸಂಯೋಗವಿರುವುದರಿಂದ ಕರ್ಮಚೇತನಾ ಇದೆ ? ಇಲ್ಲ ; ಅದು ಜೀವದ ಪರ್ಯಾಯದ ಭೇದವಿದೆ, ಅದು ಪರದ ಕಾರಣದಿಂದ ಇಲ್ಲ. ಶಿಕ್ಷಕನ ಬುದ್ಧಿವಂತಿಕೆಯ ಪ್ರಮಾಣದಲ್ಲಿ ವಿದ್ಯಾರ್ಥಿಗಳು ಕಲಿಯುವುದಿಲ್ಲ, ಆದರೆ ತಮ್ಮ ಕಾರಣದಿಂದ ತಮ್ಮ ಯೋಗ್ಯತೆಯಿಂದ ಕಲಿಯುತ್ತಾರೆ. ಅದೇ ಪ್ರಕಾರ ಧರ್ಮದಲ್ಲಿ ಎಂಥ ಗುರು ದೊರೆಯುತ್ತಾನೆ ಆ ಪ್ರಕಾರದಿಂದ ಜ್ಞಾನಮಾಡಿಕೊಳ್ಳುವುದಿಲ್ಲ, ಆದರೆ ತಮ್ಮ ಕಾರಣದಿಂದ ಜ್ಞಾನ ಅಥವಾ ಅಜ್ಞಾನ ಮಾಡುತ್ತಾನೆ ಗುರುಗಳ ಕಾರಣದಿಂದ ಇಲ್ಲ.

ಈಗ ಜೀವದ ಮೂರು ಪ್ರಕಾರದ ಭೇದಗಳನ್ನು ಬೇರೆ ರೀತಿಯಿಂದ ಹೇಳುತ್ತಾರೆ.

''ಉತ್ಪಾದ ವ್ಯಯ ಧ್ರೌವ್ಯಗುಣಸಂಯುಕ್ತವಿರುವುದರಿಂದ ಮೂರು ಪ್ರಕಾರಗಳೂ ಆಗುತ್ತವೆ.''

ಉತ್ಪಾದ, ವ್ಯಯ ಮತ್ತು ಧ್ರುವದ ಅಪೇಕ್ಷೆಯಿಂದ ಜೀವದ ಮೂರು ಭೇದಗಳಿದ್ದು ಅವನ್ನು ಹೇಳುತ್ತಾರೆ.

**ಉತ್ಪಾದ ಃ-** ಸಿದ್ಧರಿಗೆ ಸಮಯ ಸಮಯಕ್ಕೆ ಕೇವಲಜ್ಞಾನವಾಗುತ್ತದೆ, ನಿಗೋದಿಗಳಿಗೆ ಸಮಯ ಸಮಯಕ್ಕೆ ಅಜ್ಞಾನವಾಗುತ್ತದೆ. ಅಭವ್ಯಗಳಿಗೆ ಸಮಯ ಸಮಯಕ್ಕೆ ಮಿಥ್ಯಾತ್ವದ ಉತ್ಪಾದವಾಗುತ್ತದೆ. ಉತ್ಪಾದವು ಎಲ್ಲರಲ್ಲಿ ಸಮಯ ಸಮಯಕ್ಕೆ ಆಗುತ್ತದೆ ಈ ಅಪೇಕ್ಷೆಯಿಂದ ಎಲ್ಲರೂ ಸಮಾನರಿದ್ದಾರೆ. ಕರ್ಮದ ಉತ್ಪಾದದ ಕಾರಣದಿಂದ ಮಿಥ್ಯಾತ್ವವಾಗುವುದಿಲ್ಲ, ಮಾಣೆಯ ಕಾರಣದಿಂದ ಜ್ಞಾನದ ಉತ್ಪಾದವಾಗುವುದಿಲ್ಲ. ಅಜ್ಞಾನವಿರಲಿ ಅಥವಾ ಜ್ಞಾನವಿರಲಿ, ವಿಕಾರವಿರಲಿ ಅಥವಾ ಅವಿಕಾರವಿರಲಿ, ಪೂರ್ಣ ಪರ್ಯಾಯವಿರಲಿ ಅಥವಾ ಅಪೂರ್ಣ ಪರ್ಯಾಯವಿರಲಿ ಆ ಉತ್ಪಾದವು ತಮ್ಮ ಕಾರಣದಿಂದಿದೆ, ಪರದ ಕಾರಣದಿಂದಿಲ್ಲ. ಯಾವುದೇ ಜೀವನಿಗೆ ಕೇವಲಜ್ಞಾನದ ಉತ್ಪಾದ, ಯಾವನಿಗೆ ಅಜ್ಞಾನದ ಉತ್ಪಾದ, ಯಾವನಿಗೆ ಕ್ಷಾಯಿಕಸಮ್ಯಕ್ತ್ವದ ಉತ್ಪಾದ, ಯಾವನಿಗೆ ಮಿಥ್ಯಾತ್ವದ ಉತ್ಪಾದ, ಯಾವನಿಗೆ ವೀತರಾಗತೆಯ ಉತ್ಪಾದ, ಯಾವನಿಗೆ ಅಚಾರಿತ್ರದ ಉತ್ಪಾದವೆಂದು ಜೀವದ ಪ್ರಕಾರಗಳಿವೆ, ಆ ಉತ್ಪಾದಗಳು ಕರ್ಮದ ಕಾರಣದಿಂದ ಇಲ್ಲ.

ತೀರ್ಥಂಕರರ ಸಮವಸರಣದಲ್ಲಿ ಹೋಗಿ ಸಮ್ಯಗ್ಜ್ಞಾನದ ಉತ್ಪಾದ ಮಾಡಲಿ ಅಥವಾ ಮಿಥ್ಯಾ ಜ್ಞಾನದ ಉತ್ಪಾದ ಮಾಡಲಿ ಅದು ತನ್ನ ಕಾರಣದಿಂದ ಇದೆ, ಮತ್ತು ಏಳನೇ ನರಕದಲ್ಲಿ ಅಜ್ಞಾನದ ಉತ್ಪಾದ ಮಾಡಲಿ ಅದು ತನ್ನ ಕಾರಣದಿಂದ ಇದೆ. ಪರದಿಂದ ಉತ್ಪಾದವಾಗುವುದಿಲ್ಲ. ಜೀವನು ತನ್ನಲ್ಲಿ ಧರ್ಮಮಾಡಲಿ ಅಥವಾ ಅಧರ್ಮಮಾಡಲಿ, ರಾಗಮಾಡಲಿ ಅಥವಾ ವೀತರಾಗತೆಮಾಡಲಿ, ಗುಣಮಾಡಲಿ ಅಥವಾ ಅವಗುಣಮಾಡಲಿ ಅವು ಪರದಕಾರಣದಿಂದಲ್ಲ, ತನ್ನಕಾರಣದಿಂದಿದೆ. ಹೀಗೆ ತನ್ನ ಕಾರಣದಿಂದ ಉತ್ಪಾದಮಾಡುತ್ತಾನೆ ಈ ಅಪೇಕ್ಷೆಯಿಂದ ಎಲ್ಲ ಜೀವರುಗಳು ನಿಗೋದದಿಂದ ಸಿದ್ಧರವರಗಿನವರೆಲ್ಲರು ಸಮಾನರಿದ್ದಾರೆ. ಹೀಗೆ ಉತ್ಪಾದದ ಅಪೇಕ್ಷೆಯಿಂದ ಜೀವಗಳ ಭೇದ ಹೇಳಲಾಯಿತು.

ಜೀವದಲ್ಲಿ ಸಮಯಸಮಯಕ್ಕೆ ನವೀನ ಅವಸ್ಥೆಯು ಉತ್ಪನ್ನವಾಗುತ್ತದೆ ಅದು ಜೀವದಸ್ವಭಾವವಿದೆ. ಜೀವಕ್ಕೆ ಬೇರೆ ಬೇರೆ ಸಮಯದಲ್ಲಿ ಬೇರೆ ಬೇರೆ ಭಾವಗಳಾಗುತ್ತವೆ. ರಾಗ-ದ್ವೇಷದ ಭಾವಗಳಾಗುತ್ತವೆ. ಕಾಮ, ಕ್ರೋಧ, ಮಿಥ್ಯಾತ್ವ, ಸಮ್ಯಕ್ತ್ವ, ಕೇವಲಜ್ಞಾನ, ಸಿದ್ಧದಶೆ ಮೊದಲಾದವುಗಳ ಉತ್ಪಾದವಾಗುತ್ತದೆ ಅದು ಜೀವದಕಾರಣದಿಂದಿದೆ, ಯಾವುದೇ ಕರ್ಮದಕಾರಣದಿಂದಲ್ಲ. ಹೀಗೆ ಪರದಿಂದ ಭೇದಜ್ಞಾನಮಾಡಿಸಿ, ಉತ್ಪಾದವನ್ನು ಸ್ವತಂತ್ರವೆಂದು ತಿಳಿಸಿ ಕೇವಲ ಉತ್ಪಾದದಷ್ಟೇ ಇಲ್ಲ, ಆದರೆ ಅಖಂಡ ಪರಿಪೂರ್ಣವಿರುವಂಥ ದ್ರವ್ಯ ಮತ್ತು ಪರ್ಯಾಯದ ಪ್ರಮಾಣಜ್ಞಾನ ಮಾಡಿಸುವುದಿದೆ.

**ವ್ಯಯ :-** ಜೀವವು ಸಮಯಸಮಯಕ್ಕೆ ಮೊದಲಿನ ಅವಸ್ಥೆಯಿಂದ ಬದಲಾಗುತ್ತದೆ ಅದು ಜೀವದ ಭೇದವಿದೆ. ಮನುಷ್ಯಗತಿಯ ವ್ಯಯವಾಗಿ ದೇವಗತಿಯಾಗುವುದು ಅದು ಕರ್ಮದಕಾರಣದಿಂದಲ್ಲ. ಅಲ್ಪಜ್ಞತೆಯ ವ್ಯಯವಾಗುವುದು, ಸಂಸಾರದವ್ಯಯವಾಗುವುದು, ಸಮ್ಯಕ್ತ್ವದ ನಾಶವಾಗಿ ಮಿಥ್ಯಾತ್ವವಾಗುವುದು, ಹನ್ನೊಂದನೆಯ ಗುಣಸ್ಥಾನದಿಂದ ಉರುಳುವುದು ಅವು ಉಪಶಮಭಾವದ ವ್ಯಯವಾಗುವುದು ಅದು ತನ್ನ ಕಾರಣದಿಂದಿದೆ. ಕರ್ಮದ ಎದುರುಬರುವುದರಿಂದ ಜೀವನು ಹನ್ನೊಂದನೆಯ ಗುಣಸ್ಥಾನದಿಂದ ಉರುಳಿದನೆಂಬ ಮಾತು ನಿಜವಲ್ಲ. ಕುದೇವ ದೊರಕುವುದರಿಂದ ಸಮ್ಯಕ್ತ್ವದ ವ್ಯಯವಾಗಿಲ್ಲ, ವ್ಯಯವು ಅದು ಜೀವದ ಭೇದವಿದೆ. ಯಾವುದೇ ಅಜ್ಞಾನದವ್ಯಯ, ಕಷಾಯದವ್ಯಯ ಮೊದಲಾಗಿ ಸಮಸ್ತವ್ಯಯದಕಾರಣನು ಸ್ವಯಂ ಜೀವನಿದ್ದಾನೆ. ಮುನಿಯು ಆರು-ಏಳನೆಯ ಚಾರಿತ್ರವಂತನಿದ್ದಾನೆ ಮತ್ತು ದೇಹದ ವಿಯೋಗವಾಗುವಾಗ ದಾರಿಯಲ್ಲಿ ಅಸಂಯಮಿಯಾದರೆ ಚಾರಿತ್ರದಶೆಯ ವ್ಯಯದ ಕಾರಣದಿಂದಿಲ್ಲ, ದೇವನಾಮಕರ್ಮದ ಉದಯ ಬಂದಿತೆಂದಿಲ್ಲ. ವ್ಯಯವಂತೂ ಜೀವದ ಭೇದವಿದೆ, ಪರದ ಕಾರಣದಿಂದಿಲ್ಲ, ಮೊದಲಿನ ಕಾರಣದಿಂದ ವ್ಯಯವಿಲ್ಲ. ಉತ್ಪಾದದ ಕಾರಣದಿಂದ ವ್ಯಯವಿಲ್ಲ, ಆದರೆ ವ್ಯಯದ ಕಾರಣದಿಂದ ವ್ಯಯವಾಗುತ್ತದೆ ಅದು ಜೀವದ ಭೇದವಿದೆ.

**ಪ್ರಶ್ನೆ :-** ಅದರಲ್ಲಿ ಪರ್ಯಾಯದ ಮಹತ್ವವು ಬರುತ್ತದಲ್ಲವೇ ?

**ಉತ್ತರ :-** ಒಂದು ಸಮಯದ ಪರ್ಯಾಯದ ಸ್ವತಂತ್ರತೆಯನ್ನು ಸ್ವೀಕರಿಸಿದರೆ ತ್ರಿಕಾಲೀದ್ರವ್ಯದ ಸ್ವತಂತ್ರತೆಯು ಸ್ವೀಕಾರದಲ್ಲಿ ಬರುತ್ತದೆ.

ಇಲ್ಲಿ ಸಮಯ ಸಮಯದ ಸ್ವತಂತ್ರತೆಯನ್ನು ಜಾಹೀರುಪಡಿಸಲಾಗಿದೆ. ಅಲ್ಪಜ್ಞಾನದ ವ್ಯಯವಾಗುವುದು, ಮಿಥ್ಯಾತ್ವದ ವ್ಯಯವಾಗುವುದು, ಮನುಷ್ಯಗತಿಯ ವ್ಯಯವಾಗುವುದು ಇವೆಲ್ಲವುಗಳಲ್ಲಿ ತನ್ನ ಕಾರಣವಿದೆ. ಅದು ಕರ್ಮದ ಕಾರಣದಿಂದ ಆಗುವುದಿಲ್ಲ.

**ಧ್ರುವ :-** ಜೀವದ ಧ್ರುವತನವು ಜೀವದ ಕಾರಣದಿಂದಿದೆ. ಧ್ರುವತನವು ಉತ್ಪಾದ ಅಥವಾ ವ್ಯಯದ ಕಾರಣದಿಂದ ಇಲ್ಲ. ತ್ರಿಕಾಲೀ ಧ್ರುವಸ್ವಭಾವವು ತನ್ನ ಕಾರಣದಿಂದ ಇದೆ, ಅದು ಇನ್ನೊಂದರ ಕಾರಣದಿಂದ ಇಲ್ಲ.

ಹೀಗೆ ಉತ್ಪಾದ, ವ್ಯಯ ಮತ್ತು ಧ್ರುವದ ಅಪೇಕ್ಷೆಯಿಂದ ಜೀವದ ಮೂರು ಭೇದಗಳನ್ನು ಇಲ್ಲಿ ತಿಳಿಸಿಕೊಡಲಾಗಿದೆ.

ಜೀವನು ಮನುಷ್ಯ, ದೇವ, ನಾರಕೀ ಮತ್ತು ತಿರ್ಯಂಚವೆಂಬ ಈ ನಾಲ್ಕು ಗತಿಗಳಲ್ಲಿ ಸುತ್ತುತ್ತಿರುವ ಅಪೇಕ್ಷೆಯಿಂದ ಜೀವದ ನಾಲ್ಕು ಭೇದಗಳಿವೆ. ಯಾವುದೇ ಕರ್ಮದ ಕಾರಣದಿಂದ ಇಂಥ ಗತಿಯು ದೊರಕುತ್ತದೆನ್ನುವಂತೆ ಸ್ವರೂಪವಿಲ್ಲ. ನಿಗೋದದಲ್ಲಿ ಕರ್ಮದ ಬಲವು ಅಧಿಕವಿದೆ ಮತ್ತು ತ್ರಸದಲ್ಲಿ ವಿಪರೀತ ಪುರುಷಾರ್ಥದ ಬಲವಿದೆಯೆಂದು ಕೆಲವರು ಹೇಳುತ್ತಾರೆ, ಆದರೆ ನಿಗೋದ ಮತ್ತು ತ್ರಸದಲ್ಲಿ ಈ ಪ್ರಕಾರದ ಭೇದವನ್ನು ಅಜ್ಞಾನಿಗಳು ಮಾಡುತ್ತಾರೆ. ನಿಗೋದದಲ್ಲಿರಲಿ ಅಥವಾ ತ್ರಸದಲ್ಲಿರಲಿ ಯಾವುದೇ ಗತಿಯಲ್ಲಿದ್ದರೂ ಕೂಡ ವಿಕಾರವು ತನ್ನ ಕಾರಣದಿಂದಿದೆ, ಕರ್ಮದ ಕಾರಣದಿಂದ ಇಲ್ಲ. ಶ್ರೇಣಿಕದೊರೆಯು ನರಕ ಗತಿಯ ಕರ್ಮದ ಬಂಧವಾಗುವುದರಿಂದ ನರಕದಲ್ಲಿ ಹೋಗಬೇಕಾಗಲಿಲ್ಲ. ಯಾವನೋ ಓರ್ವನು ಮನುಷ್ಯ ಗತಿಯಿಂದ ಅನುತ್ತರ ವಿಮಾನದಲ್ಲಿ ಹೋದರೆ ಅವನು ಶುಭಕರ್ಮವು ಕಟ್ಟುವುದರಿಂದ ಹೋಗಲಿಲ್ಲ. ನಾರಕ ಅಥವಾ ತಿರ್ಯಂಚ, ಮನುಷ್ಯ ಅಥವಾ ದೇವ ಈ ಎಲ್ಲ ಗತಿಗಳಲ್ಲಿ ಹೋಗುವುದು ಜೀವದ ಯೋಗ್ಯತೆಯಿದೆ. ತನ್ನ ಸ್ವತಂತ್ರತೆಯಿಂದ ಜೀವನು ಸುತ್ತುತ್ತಿದ್ದಾನೆ. ಹೀಗೆ ಪರದಿಂದ ಭೇದಜ್ಞಾನ ಮಾಡಿಸಿದೆ.

ಮತ್ತೆ ಜೀವದಲ್ಲಿ ಐದು ಪ್ರಕಾರದಿಂದ ಭೇದ ಮಾಡುತ್ತಾರೆ.

**ಪಾರಿಣಾಮಿಕಭಾವ :-** ಆತ್ಮನಲ್ಲಿ ಪಾರಿಣಾಮಿಕ ಶುದ್ಧಭಾವವಿದೆ ಅದು ಏಕರೂಪಿದೆ. ಅದು ಶರೀರ ಮತ್ತು

ಕರ್ಮದ ಕಾರಣದಿಂದ ಇಲ್ಲ. ಸ್ವಯಂ ಏಕರೂಪವಿದೆ. ಮತ್ತು ಪಾರಿಣಾಮಿಕಭಾವದಲ್ಲಿ ಭವ್ಯ ಹಾಗೂ ಅಭವ್ಯವೆಂದು ಭೇದಗಳಿದ್ದು ಅವು ತಮ್ಮ ಕಾರಣದಿಂದಿವೆ, ಯಾವುದೇ ಕರ್ಮದ ಕಾರಣದಿಂದ ಇಲ್ಲ, ಭವ್ಯ ಹಾಗೂ ಅಭವ್ಯತೆಗಳು ಪಾರಿಣಾಮಿಕಭಾವದಿಂದಿದ್ದು ಅದರಲ್ಲಿ ಯಾವುದೇ ಕರ್ಮದ ಕಾರಣವಿಲ್ಲ. ಅಲ್ಲದೆ ಉದಯ, ಉಪಶಮ, ಕ್ಷಯೋಪಶಮ ಮತ್ತು ಕ್ಷಾಯಿಕಭಾವಗಳು ಸ್ವ-ಅಪೇಕ್ಷೆಯಿಂದ ಪಾರಿಣಾಮಿಕದಲ್ಲಿ ಬಂದುಹೋಗುತ್ತವೆ. ಪಾರಿಣಾಮಿಕಭಾವವು ಪರ್ಯಾಯ ಅಪೇಕ್ಷೆಯಿಂದ ವಿಕಾರರೂಪವಾಗಿ ಅಥವಾ ಉಪಶಮರೂಪವಾಗಿ ಸ್ವಯಂ ಆಗುತ್ತದೆ. ಯಾವುದೇ ಕರ್ಮದ ಕಾರಣದಿಂದ ರಾಗವಾಯಿತು ಅಥವಾ ಕರ್ಮವು ದೂರವಾಗುವುದರಿಂದ ಗುಣವಾಯಿತೆಂಬುದಾಗಿಲ್ಲ. ತನ್ನ ಪರಿಣಾಮದ ಅನುಸಾರ ಭೇದಗಳಾಗುತ್ತವೆ. ಹೀಗೆ ಸ್ವತಂತ್ರವೆಂದು ತಿಳಿಯುವುದು ಮತ್ತು ನಾನು ಅಂಶ ಮಾತ್ರವಿಲ್ಲ, ಆದರೆ ನಾನಂತೂ ಅಂಶೀಯಿದ್ದೇನೆಂದು ಜ್ಞಾನಮಾಡಿಕೊಂಡರೆ ಧರ್ಮವಾಗುವುದು.

**ಔದಾಯಿಕಭಾವ :-** ಜೀವದ ಪರ್ಯಾಯದಲ್ಲಿ ರಾಗ-ದ್ವೇಷ, ದಯೆ-ದಾನ ಮೊದಲಾದವುಗಳ ಪರಿಣಾಮಗಳಾಗುತ್ತವೆ ಅವು ಜೀವದ ಭೇದಗಳಿದ್ದು ಕರ್ಮದ ಕಾರಣದಿಂದ ಉದಯಭಾವವಿಲ್ಲ. ಕೇವಲಿಭಗವಂತರ ಔದಾಯಿಕಭಾವ ಮತ್ತು ನಿಗೋದದ ಔದಯಿಕಭಾವಗಳು ತಮ್ಮ ಕಾರಣದಿಂದ ಇವೆಯೆಂಬ ಅಪೇಕ್ಷೆಯಿಂದ ಸಮಾನವಿವೆ. ಭಗವಂತರಿಗೆ ಕರ್ಮವು ಇನ್ನೂ ಬಾಕಿ ಇದೆ ಅದಕ್ಕಾಗಿ ವಿಭಾವ ಮತ್ತು ಯೋಗದ ಕಂಪನವಿದೆಯೆಂಬುದಾಗಿಲ್ಲ. ಅಜ್ಞಾನೀಜೀವರುಗಳು ಕರ್ಮದ ಮೇಲೆ ದೋಷ ಕೊಡುತ್ತಾರೆ. ಕರ್ಮ ಹಾಗೂ ಪ್ರತಿಕೂಲ ಸಂಯೋಗಗಳು ಜೀವದಲ್ಲಿ ಪ್ರವೇಶಿಸುವುದಿಲ್ಲ ಮತ್ತು ಅವು ರಾಗ-ದ್ವೇಷಗಳನ್ನು ಮಾಡಿಸುವುದಿಲ್ಲ, ಆದರೆ ಅಜ್ಞಾನೀಜೀವರುಗಳು ವರ್ತಮಾನ ಸಂಯೋಗಗಳನ್ನು ನೋಡಿ ವರ್ತಮಾನ ತುಳಿತದಲ್ಲಿ ನುಗ್ಗಾಗಿ ಹೋಗುತ್ತಾರೆ. ಆದರೆ ರಾಗ-ದ್ವೇಷಗಳು ತನ್ನಿಂದ ಆಗುತ್ತವೆಂದು ಸ್ವತಂತ್ರಜ್ಞಾನ ಮಾಡಿದರೆ ಪರದಿಂದ ಬಿಡುಗಡೆ ಹೊಂದಿ ದ್ರವ್ಯಸ್ವಭಾವದ ಕಡೆಗೆ ತಿರುಗುವ ಅವಕಾಶ ಲಭಿಸುವುದು.

**ಉಪಶಮಭಾವ :-** ಜೀವದಲ್ಲಿ ಸಮ್ಯಕ್ತ್ವ ಅಥವಾ ಚಾರಿತ್ರದ ಉಪಶಮವಾಗುತ್ತದೆ ಅದು ತನ್ನ ಕಾರಣದಿಂದಿದೆ. ಕರ್ಮದ ಉಪಶಮವಾಗುವುದರಿಂದ ಉಪಶಮಭಾವವಾಯಿತೆಂಬುದಾಗಿಲ್ಲ. ಮತ್ತು ಕರ್ಮಗಳು ಮಂದವಾದರೆ ಆತ್ಮನು ಉಪಶಮ ಶ್ರೇಣಿಯಲ್ಲಿ ಮುಂದುವರೆಯುತ್ತಾನೆಂಬುದಾಗಿಲ್ಲ. ಅವನು ತನ್ನ ಕಾರಣದಿಂದ ವೃದ್ಧಿಸುತ್ತಾನೆ. ಮತ್ತು ದೇವ-ಶಾಸ್ತ್ರ-ಗುರುಗಳಿಂದ ಉಪಶಮ ಸಮ್ಯಕ್ತ್ವವಿಲ್ಲ, ಆದರೆ ತನ್ನಿಂದ ಇದೆ. ಹನ್ನೊಂದನೇ ಗುಣಸ್ಥಾನದಲ್ಲಿ ಉಪಶಮಭಾವ ಹಾಗೂ ನಾಲ್ಕನೆಯ ಗುಣಸ್ಥಾನದಲ್ಲಿ ಉಪಶಮಭಾವವು ತನ್ನ ಕಾರಣದಿಂದ ಇದೆ. ಎಂದರೆ ಅಪೇಕ್ಷೆಯಿಂದ ಎರಡೂ ಸಮಾನವಿವೆ, ಅವು ಪರದ ಕಾರಣದಿಂದಿಲ್ಲ ಇದು ಜೀವದ ಭೇದದ ವರ್ಣನೆಯಿದೆ.

**ಕ್ಷಯೋಪಶಮಭಾವ :-** ಜೀವದಲ್ಲಿ ಜ್ಞಾನ, ದರ್ಶನ, ವೀರ್ಯದ ಪ್ರಕಟತೆಯು ತಿಳಿದುಬರುತ್ತದೆ ಅದು ಜೀವದ ಕಾರಣದಿಂದಿದೆ. ಅಜ್ಞಾನಿಗಳು ಕೊಡವಿದೆಯೆಂದು ಕೊಡದ ಜ್ಞಾನವಾಗುತ್ತದೆಂದು ಹೇಳುತ್ತಾರೆ. ಜೈನರು ಜ್ಞಾನದ ಕಾರಣದಿಂದಿದೆಯೆಂದು ಹೇಳುತ್ತಾರೆ. ಪರವಸ್ತುವು ಕಾರಣವಿಲ್ಲ, ಹಾಗಾದರೆ ಕೊಡದ ಸಮಯದಲ್ಲಿ ಕೊಡದ ಜ್ಞಾನ ಹೇಗಾಗುತ್ತದೆ ಮತ್ತು ಬೇರೆ ವಸ್ತುವಿನ ಜ್ಞಾನ ಹೇಗಾಗುವುದಿಲ್ಲವೆಂದು ಅನ್ಯಮತದವರು ಕೇಳುತ್ತಾರೆ, ಉತ್ತರ ಹೀಗಿದೆ. ಆ ಸಮಯದೊಳಗೆ ಜೀವದ ಪರ್ಯಾಯದಲ್ಲಿ ಕ್ಷಯೋಪಶಮದ ಯೋಗ್ಯತೆಯ ಕಾರಣ ಜ್ಞಾನವಾಗುತ್ತದೆ. ನಾವು ಕ್ಷಯೋಪಶಮದ ಮಾತು ಹೇಳಿದಾಗ ಅಜ್ಞಾನಿಗಳು ಜ್ಞಾನಾವರಣೀಯ ಕರ್ಮದ ಕ್ಷಯೋಪಶಮವಿರುವುದರಿಂದ ಜ್ಞಾನದ ವಿಕಾಸವು ಕಂಡುಬರುತ್ತದೆಂದು ಹೇಳುತ್ತಾರೆ. ಆದರೆ ಅದು ಕೂಡ ಅಸತ್ಯ ಮನ್ನಣೆಯಿದೆ. ಜ್ಞಾನವು ಕಡಿಮೆ ಕಂಡುಬರಲಿ ಅಥವಾ ಅಧಿಕ ಕಂಡುಬರಲಿ ಅದು ಜೀವದ ಕಾರಣದಿಂದಿದೆ, ಪರದ ಕಾರಣದಿಂದ ಇಲ್ಲ. ಕ್ಷಯೋಪಶಮಭಾವದಲ್ಲಿ ಕಂಡುಬರುವ ವಿವಿಧತೆ ಮತ್ತು ವಿಚಿತ್ರತೆಯು ಅದು ಜೀವದ ಭೇದವಿದೆ. ಹೀಗೆ ಸಮಯ ಸಮಯದ ಪರ್ಯಾಯವನ್ನು ಸ್ವತಂತ್ರವೆಂದು ತಿಳಿದರೆ ತ್ರಿಕಾಲಿಸ್ವಭಾವದ ಸ್ವತಂತ್ರತೆಯು ತಿಳಿದುಬರುತ್ತದೆ.

**ಕ್ಷಾಯಿಕಭಾವ :-** ಕ್ಷಾಯಿಕಸಮ್ಯಕ್ತ್ವವು ಕೇವಲೀ ಅಥವಾ ಶ್ರುತಕೇವಲಿಯ ಕಾರಣದಿಂದ ಆಗುವುದಿಲ್ಲ. ಕ್ಷಾಯಿಕದ ಭೇದವು ನಿನ್ನದಿದ್ದು ಅದು ನಿಮಿತ್ತದ ಭೇದವಲ್ಲ. ಕೇವಲಜ್ಞಾನಾವರಣೀಯದ ಕಾರಣದಿಂದ ಕೇವಲಜ್ಞಾನವು ತಡೆಯಲ್ಪಟ್ಟಿದೆಯೆಂದು ಸ್ವಾಮಿ ಕಾರ್ತಿಕೇಯಾನುಪ್ರೇಕ್ಷೆಯಲ್ಲಿ ಹೇಳಿರುವಲ್ಲಿಯಂತೂ ಕೇವಲಜ್ಞಾನಾವರಣೀಯ ಪುದ್ಗಲಕರ್ಮದ ನಿಮಿತ್ತತೆಯನ್ನು ತಿಳಿಸುವುದಿದೆ. ಆದರೆ ಅದರಿಂದ ಕೇವಲಜ್ಞಾನವು ತಡೆಯಲ್ಪಟ್ಟಿದೆಯೆಂದು ಅಲ್ಲಿ ಹೇಳಿರುವುದಿಲ್ಲ. ಕೇವಲಜ್ಞಾನವು ನಿನ್ನ ಕಾರಣದಿಂದ ತಡೆಯಲ್ಪಟ್ಟಿದೆ.

ಪಾರಿಣಾಮಿಕಭಾವದಲ್ಲಿ ಮೂರು ಭೇದಗಳಿವೆ ಮತ್ತು ಉಳಿದ ನಾಲ್ಕು ಭಾವಗಳಲ್ಲಿ ಐವತ್ತು ಭೇದಗಳಿವೆ. ಹೀಗೆ ಒಟ್ಟು ಐವತ್ತಾರು ಭೇದಗಳಲ್ಲಿ ಪ್ರತಿಯೊಂದು ಪರಿಣಾಮವು ತನ್ನ ಕಾರಣದಿಂದಿದೆಯೆಂದು ತಿಳಿದುಕೊಳ್ಳಬೇಕು. ಮತ್ತು ಅದು ಸ್ವಭಾವವಿದೆ, ಕೋಟ್ಯಂತರ ಉಪದೇಶದ ಪ್ರಪಾತವಾದರೂ ಕೂಡ ಅವನ ಜ್ಞಾನವು ಕೊಚ್ಚಿಹೋಗುವಂತೆ ಅವನ ಸ್ವಭಾವವಿಲ್ಲ. ಜಾತಿ, ಲೇಶ್ಯೆ, ಅಸಿದ್ಧತ್ವ ಮೊದಲಾದ ಪ್ರತಿಯೊಂದು ಭೇದವು ಸ್ವತಂತ್ರ ತನ್ನ ಕಾರಣದಿಂದ ಇದೆ. ಜೀವನು ತನ್ನ ವಿಕಾರದಲ್ಲಿ ನಿಂತುಕೊಳ್ಳಲಿ ಅಥವಾ ಸ್ವಭಾವದಲ್ಲಿ ನಿಂತುಕೊಂಡರೂ ಕೂಡ ಪರದಲ್ಲಿ ಏನನ್ನೂ ಮಾಡುವ ಸಾಧ್ಯತೆಯಿಲ್ಲ. ಅದರಂತೆ ಪರಪದಾರ್ಥಗಳು ಜೀವದಲ್ಲಿ ಏನನ್ನೂ ಮಾಡುವ ಸಾಧ್ಯತೆಯಿಲ್ಲ. ಪರದಕಾರಣದಿಂದ ತನ್ನಲ್ಲಿ ಏನಾದರೂ ಆಗುವುದು ಮತ್ತು ತನ್ನ ಕಾರಣದಿಂದ ಪರದಲ್ಲಿ ಏನಾದರೂ ಆದರೆ ತತ್ತ್ವಗಳು ಶಕ್ತಿಹೀನವಾಗಿಹೋಗುವವು. ಆದುದರಿಂದ ಸ್ವತಂತ್ರತೆಯ ಜ್ಞಾನಮಾಡಿಕೊಂಡು ಪರದಿಂದ ಬೇರೆಯಾಗಬೇಕು. ಅಂಶದ ಜ್ಞಾನಮಾಡಿ ಅಂಶದಷ್ಟು ನಾನಿಲ್ಲ. ನಾನು ಸ್ವಭಾವದಿಂದ ತ್ರಿಕಾಲೀ ಅಂಶಿಯಿದ್ದೇನೆಂದು ಪ್ರಮಾಣಜ್ಞಾನವಾದರೆ ಧರ್ಮವಾಗುವುದು.

ಜೀವನು ಪೂರ್ವ-ಪಶ್ಚಿಮ, ಉತ್ತರ-ದಕ್ಷಿಣ, ಮೇಲೆ ಕೆಳಗೆ ಹೀಗೆ ಆರುದಿಶೆಗಳಲ್ಲಿ ಗಮನಮಾಡುತ್ತಾನೆಂದು ಆರುಪ್ರಕಾರದಿಂದ ಜೀವದ ಭೇದವಿದೆ. ವಿದಿಶೆಯಲ್ಲಿ ಜೀವನು ಗಮನಮಾಡುವುದಿಲ್ಲ. ವಿದಿಶೆಯು ವಿಸ್ತಾರದ ಅಪೇಕ್ಷೆಯಿಂದ ಏಕಪ್ರದೇಶವಿರುವುದರಿಂದ ಜೀವನು ನೇರವಾಗಿ ವಿದಿಶೆಗಳಲ್ಲಿ ಹೋಗುವುದಿಲ್ಲ. ಪೂರ್ವ-ಪಶ್ಚಿಮಾದಿದಿಶೆಗಳು ಅಸಂಖ್ಯಪ್ರದೇಶಿಯಿವೆ. ಅವುಗಳಲ್ಲಿ ಜೀವನು ಗಮನಮಾಡುತ್ತಾನೆ. ಅದರಕಾರಣನು ಸ್ವಯಂ ಇದ್ದಾನೆ ಕರ್ಮಗಳು ಕಾರಣವಿಲ್ಲ.

ಸಪ್ತಭಂಗಿಯ ಏಳುಭಂಗಗಳಿಂದ ಜೀವನು ತಿಳಿದುಬರುವುದರಿಂದ ಜೀವನು ಏಳುಪ್ರಕಾರದಿಂದ ಕೂಡ ಇದ್ದಾನೆ.

**ಅಸ್ತಿತ್ವಭಂಗ :-** ಜೀವನು ಸ್ವದ್ರವ್ಯ-ಕ್ಷೇತ್ರ-ಕಾಲ-ಭಾವದಿಂದ ಅಸ್ತಿರೂಪದಿಂದ್ದಾನೆ. ಇಂಥ ಒಂದು ಭಾಗದಲ್ಲಿ ಸಮಸ್ತ ಜೀವಗಳು ಬಂದಬಿಡುತ್ತವೆ. ದ್ರವ್ಯ-ತ್ರಿಕಾಲಿವಸ್ತು, ಕ್ಷೇತ್ರ-ತನ್ನ ಅಸಂಖ್ಯಪ್ರದೇಶರೂಪವಿಸ್ತಾರ, ಕಾಲ-ಸಮಯ ಸಮಯದ ಪರ್ಯಾಯ, ಭಾವ-ತ್ರಿಕಾಲೀಗುಣಗಳು ಅಥವಾ ಶಕ್ತಿಗಳು ಹೀಗೆ ಪ್ರತಿಯೊಬ್ಬ ಜೀವನು ಸ್ವಚತುಷ್ಟಯದಿಂದ ಇದ್ದಾನೆ.

**ನಾಸ್ತಿತ್ವಭಂಗ :-** ಈ ಜೀವನು ಶರೀರ, ಕರ್ಮ, ವಾಣಿ, ದೇವ-ಶಾಸ್ತ್ರ-ಗುರುಗಳ ರೂಪದಿಂದಿಲ್ಲದಿರುವಂಥ ನಾಸ್ತಿತ್ವಧರ್ಮವು ಜೀವನದಿದೆ. ನಾಸ್ತಿತ್ವಧರ್ಮವು ಇತರರದಿಲ್ಲ, ಆದರೆ ತನ್ನದಿದೆ. ಜೀವದಲ್ಲಿ ಕರ್ಮ, ಶರೀರ, ವಾಣಿಯ ಅಭಾವವಿದೆ. ಮೂರುಕಾಲದಲ್ಲೂ ಈ ಜೀವದ ಮಾತುನಡೆಯುತ್ತದೆ, ಕೇವಲ ಸಿದ್ಧರದಿಲ್ಲ. ಭವ್ಯ-ಅಭವ್ಯ, ಸಂಸಾರಿ ಅಥವಾ ಸಿದ್ಧ ಮೊದಲಾಗಿ ಎಲ್ಲ ಜೀವರುಗಳು ಪರರೂಪದಿಂದಿಲ್ಲವೆಂಬ ಭೇದದಲ್ಲಿ ಸೇರಿಹೋಗುವುದು.

**ಅಸ್ತಿತ್ವನಾಸ್ತಿತ್ವಭಂಗ :-** ಆತ್ಮನು ಸ್ಯಾತ್ ತನ್ನಿಂದ ಅಸ್ತಿಇದ್ದಾನೆ, ಸ್ಯಾತ್ ಪರದಿಂದ ನಾಸ್ತಿಯಿದ್ದಾನೆಂದು ಕ್ರಮದಿಂದ ಹೇಳಬಹುದಾಗಿದೆಯೆಂಬ ಧರ್ಮವು ಆತ್ಮನಲ್ಲಿದೆ. ವಾಣಿಯಲ್ಲಿ ಕ್ರಮವಿರುತ್ತದೆ ಅದಕ್ಕಾಗಿ ವಕ್ತವ್ಯವು ಧರ್ಮವಿದೆಯೆಂಬುದಾಗಿಲ್ಲ. ಈ ಧರ್ಮವು ತನ್ನ ಕಾರಣದಿಂದಿದೆ.

**ಅವಕ್ತವ್ಯ ಭಂಗ :-** ಆತ್ಮನು ತನ್ನಿಂದ ಇದ್ದಾನೆ ಮತ್ತು ಪರದಿಂದ ಇಲ್ಲವೆಂದು ಯುಗಪತ್ ಹೇಳುವ ಸಾಧ್ಯತೆಯಿಲ್ಲವೆಂಬುದು ಜೀವದ ಧರ್ಮವಿದೆ. ವಾಣಿಯು ಏಕಕಾಲಕ್ಕೆ ಹೇಳುವ ಸಾಧ್ಯತೆಯಿಲ್ಲದಿರುವುದರಿಂದ ಅವಕ್ತವ್ಯ ಭಂಗವಿದೆಯೆಂಬುದಾಗಿಲ್ಲ, ಆದರೆ ತನ್ನ ಕಾರಣದಿಂದಿದೆ.

**ಅಸ್ತಿತ್ವ-ಅವಕ್ತವ್ಯಭಂಗ :-** ಸ್ವಯಂ ಅಸ್ತಿರೂಪವೆಂದು ಹೇಳಲಾಗಿದೆ, ಆದರೆ ಅಸ್ತಿತ್ವ , ನಾಸ್ತಿತ್ವ ಯುಗಪತ್ ಹೇಳುವ ಸಾಧ್ಯತೆಯಿಲ್ಲವೆಂಬ ಅಸ್ತಿತ್ವ-ಅವಕ್ತವ್ಯ ಧರ್ಮವು ಜೀವದ್ದಿದೆ. ಅದು ವಾಣಿಯ ಕಾರಣದಿಂದ ಇಲ್ಲ.

**ನಾಸ್ತಿತ್ವ-ಅವಕ್ತವ್ಯಭಂಗ :-** ನಾಸ್ತಿತ್ವ ಧರ್ಮವನ್ನು ಹೇಳುವ ಸಮಯದಲ್ಲಿ ಅಸ್ತಿತ್ವ ,ನಾಸ್ತಿತ್ವ ಯುಗಪತ್ ಹೇಳುವ ಸಾಧ್ಯತೆಯಿಲ್ಲವೆಂಬ ನಾಸ್ತಿತ್ವ ಅವಕ್ತವ್ಯಧರ್ಮವು ಜೀವದ್ದಿದೆ. ಅದು ವಾಣಿಯ ಕಾರಣದಿಂದ ಇಲ್ಲ.

**ಅಸ್ತಿತ್ವ, ನಾಸ್ತಿತ್ವ ಅವಕ್ತವ್ಯಭಂಗ :-** ಅಸ್ತಿ, ನಾಸ್ತಿಯನ್ನು ಕ್ರಮದಿಂದ ಹೇಳುವ ಸಾಧ್ಯತೆಯಿದೆ, ಆದರೆ ಎರಡನ್ನು ಯುಗಪತ್ ಹೇಳುವ ಸಾಧ್ಯತೆಯಿಲ್ಲವೆಂಬ ಅಸ್ತಿತ್ವ, ನಾಸ್ತಿತ್ವ ಅವಕ್ತವ್ಯ ಧರ್ಮವು ಜೀವದ್ದಿದೆ.

ಹೀಗೆ ಜೀವದಲ್ಲಿ ಸಂಭವಿಸುವ ಏಳು ಭೇದಗಳಿಂದ ಬೇರೆಯಾಗುವ ಭೇದಜ್ಞಾನ ಮಾಡಿಸಿದ್ದಾರೆ.

ಸಿದ್ಧಜೀವರುಗಳಲ್ಲಿ ಅನಂತಜ್ಞಾನ, ದರ್ಶನ, ವೀರ್ಯ, ಅವ್ಯಾಬಾಧ ಮೊದಲಾದ ಎಂಟು ಗುಣಗಳಿವೆ ಅದರಂತೆ ಸಂಸಾರೀಜೀವರುಗಳಲ್ಲಿ ಎಂಟು ಗುಣಗಳು ಶಕ್ತಿರೂಪದಿಂದ ಇರುವುದರಿಂದ ಆ ಪ್ರಕಾರವಾಗಿ ಜೀವನು ತಿಳಿದು ಬರುವ ಸಾಧ್ಯತೆಯಿದೆ ಅಥವಾ ಸಂಸಾರದಶೆಯಲ್ಲಿ ಜೀವನು ಎಂಟು ಕರ್ಮಗಳ ಆಶ್ರಯ ತೆಗೆದುಕೊಳ್ಳುತ್ತಾನೆ ಮತ್ತು ಸಿಲುಕಿಕೊಂಡಿದ್ದಾನೆ. ಎಂಬುದಾಗಿಲ್ಲ, ಆದರೆ ಜೀವನು ತನ್ನ ತ್ರಿಕಾಲಿ ಸ್ವಭಾವವನ್ನು ಮರೆತಿದ್ದಾನೆ ಮತ್ತು ಎಂಟು ಪ್ರಕಾರದ ಕರ್ಮದ ಆಶ್ರಯ ತೆಗೆದುಕೊಂಡಿದ್ದಾನೆ ಅದಕ್ಕಾಗಿ ತನ್ನಲ್ಲಿ ವಿಕಾರವಾಗುವುದರಿಂದ ಜೀವದಲ್ಲಿ ಎಂಟು ಪ್ರಕಾರದ ಭೇದಗಳನ್ನು ಹೇಳಲಾಗಿದೆ.

ಆರು-ಏಳನೆಯ ಗುಣಸ್ಥಾನದಲ್ಲಿ ಜೀಕುತ್ತಿರುವಂಥ ಮಹಾಮುನಿಗಳು ಇದರ ರಚನೆ ಮಾಡಿದ್ದಾರೆ. ಇಲ್ಲಿ ಪರದಿಂದ ಭೇದಜ್ಞಾನ ಮಾಡಿಸುವುದು, ಪರ್ಯಾಯದ ಸ್ವತಂತ್ರತೆಯನ್ನು ತಿಳಿಸುವುದು, ಜ್ಞಾನದ ನಿರ್ಮಲತೆ ಮಾಡಿಸುವುದು ಪ್ರಯೋಜನವಿದೆ. ಪರ್ಯಾಯದಲ್ಲಿ ವಿವಿಧತೆ ಮತ್ತು ವಿಚಿತ್ರತೆಯಿದ್ದರೂ ಕೂಡ ಪರ್ಯಾಯಗಳು ಸ್ವತಂತ್ರವಿವೆಯೆಂದು ಯಥಾರ್ಥ ಮನ್ನಿಸುವ ಜೀವನು ವಿವಿಧತೆಯಿಲ್ಲದ ಏಕರೂಪ ದ್ರವ್ಯ ಸ್ವಭಾವವನ್ನು ಸ್ವತಂತ್ರವೆಂದು ಮನ್ನಿಸದೆ ಇರಲಾರನು. ಮತ್ತು ವಿವಿಧತೆಯನ್ನು ಪರತಂತ್ರವೆಂದು ಮನ್ನಿಸುವವರು ದ್ರವ್ಯವನ್ನು ಸ್ವತಂತ್ರವೆಂದು ಮನ್ನಿಸುವ ಸಾಧ್ಯತೆಯಿಲ್ಲ. ಪರದ ಜತೆಗೆ ಏಕತ್ವಬುದ್ಧಿಯುಳ್ಳ ಜೀವನು ತನ್ನ ಕಡೆಗೆ ತಿರುಗುವ ಸಾಧ್ಯತೆಯಿಲ್ಲದಿರುವುದರಿಂದ ಇಲ್ಲಿ ಪರದಿಂದ ಭೇದಜ್ಞಾನ ಮಾಡಿಸಿದ್ದಾರೆ. ಕರ್ಮದ ಕಾರಣದಿಂದ ಜೀವದಲ್ಲಿ ಏನೂ ಇಲ್ಲದಿದ್ದರೂ ಜೀವನು ಸ್ವಯಂ ವಿಕಾರ ಮಾಡುವುದರಿಂದ ಆಗುತ್ತದೆ.

ಹೀಗೆ ಎಂಟು ಪ್ರಕಾರದಿಂದ ಜೀವದ ಭೇದ ತಿಳಿಸಿಕೊಡಲಾಗಿದೆ.

ಇಲ್ಲಿ ಯಾವುದನ್ನು ಜೀವವೆನ್ನಬೇಕೆಂಬ ಮಾತನ್ನು ಪ್ರಮಾಣಜ್ಞಾನದಿಂದ ಹೇಳಿದ್ದಾರೆ, ಜೀವದಲ್ಲಿ ಪರ್ಯಾಯದ ಭೇದದ ಅಪೇಕ್ಷೆಯಿಂದ ಮಾತು ಮಾಡಿದೆ ಎಂದರೆ ಇಲ್ಲಿ ಜ್ಞಾನಪ್ರಧಾನವಾದ ಕಥನವಿದೆ.

ಸಮಯಸಾರದಲ್ಲಿ ಮತ್ತು ನಿಯಮಸಾರದಲ್ಲಿ ಜೀವದ್ರವ್ಯದ ವ್ಯಾಖ್ಯೆಯನ್ನು ದೃಷ್ಟಿಪ್ರಧಾನ ಕಥನದಿಂದ ಮಾಡಲಾಗಿದೆ. ಅಲ್ಲಿಯಂತೂ ಪುಣ್ಯ-ಪಾಪ, ಆಸ್ರವ, ಬಂಧ ಮತ್ತು ವಿಕಾರಗಳ ಗಣನೆಯನ್ನು ಶುದ್ಧ ಜೀವದಲ್ಲಿ ಗಣಿಸಲಾಗಿಲ್ಲ. ಏಕೆಂದರೆ ವಿಕಾರದ ಲಕ್ಷ್ಯದಿಂದ ಧರ್ಮವಾಗುವುದಿಲ್ಲ. ಮತ್ತು ಸಂವರ, ನಿರ್ಜರೆ ಹಾಗೂ ಮೋಕ್ಷ

ಇವು ಕೂಡ ಪರ್ಯಾಯಗಳಿವೆ. ಆ ಧರ್ಮದ ಪರ್ಯಾಯಗಳೊಳಗಿಂದ ಕೂಡ ಧರ್ಮಪರ್ಯಾಯ ವಾಗದಿರುವುದರಿಂದ ಅವನ್ನು ಕೂಡ ಪರದ್ರವ್ಯವೆಂದು ಗಣಿಸಿ ಜೀವವೆಂದು ಗಣಿಸಿಲ್ಲ ಒಂದು ಶುದ್ಧಜೀವ ತ್ರಿಕಾಲಿ ಅಂತಃತತ್ತ್ವದ ಆಶ್ರಯದಿಂದಲೇ ಸಮ್ಯಗ್ದರ್ಶನವಾಗುವುದರಿಂದ ಅದನ್ನು ಜೀವತತ್ತ್ವವೆಂದು ಗಣಿಸಲಾಗಿದೆ. ವಿಕಾರೀಪರ್ಯಾಯ ಹಾಗೂ ಅಪೂರ್ಣ ಪರ್ಯಾಯವನ್ನು ಗೌಣಮಾಡಿ ಶುದ್ಧಜೀವವು ತ್ರಿಕಾಲೀ ಏಕರೂಪಧ್ರುವವಿರುವುದೇ ಸಮ್ಯಗ್ದರ್ಶನದ ವಿಷಯವಿದೆ ಅದರ ಆಶ್ರಯದಿಂದ ಧರ್ಮವಾಗುವುದು ಮತ್ತು ಧರ್ಮದಶೆ ವೃದ್ಧಿಸುವುದು, ಆದ್ದರಿಂದ ದರ್ಶನಪ್ರಧಾನವಾದ ಕಥನದಲ್ಲಿ ಪರ್ಯಾಯಬುದ್ಧಿಯನ್ನು ಬಿಡಿಸುವ ಮತ್ತು ಸ್ವಭಾವಬುದ್ಧಿಯನ್ನು ಮಾಡಿಸುವ ಶುದ್ಧಜೀವವನ್ನೇ ಜೀವವೆಂದು ಗಣಿಸಲಾಗಿದೆ.

ಇಲ್ಲಿ ಜ್ಞಾನಪ್ರಧಾನದಿಂದ ಜೀವದ್ರವ್ಯದ ಮಾತು ಹೇಳಿದೆ. ವರ್ತಮಾನಪರ್ಯಾಯ ಮತ್ತು ಸಾಮಾನ್ಯದ್ರವ್ಯವೆಂದು ಎರಡಾಗಿ ಜೀವದ್ರವ್ಯವಿದೆ. ಇಲ್ಲಿ ಜೀವದ ಒಂಭತ್ತು ಭೇದ ಹೇಳುತ್ತಾರೆ.

**೧) ಜೀವ :-** ನಾನು ತ್ರಿಕಾಲ ಏಕರೂಪ ಶುದ್ಧಜೀವನಿದ್ದೇನೆನ್ನುವುದು ಅದು ಜೀವತತ್ತ್ವವಿದೆ.

**೨) ಜೀವದ ಭೇದ ಅಜೀವ :-** ಇದು ಶರೀರವಿದೆ, ವಾಣಿಯಿದೆ, ಧರ್ಮವಿದೆ, ಅಧರ್ಮವಿದೆ, ಕಾಲವಿದೆಯೆಂದು ಈ ಅಜೀವ ಪದಾರ್ಥದ ಲಕ್ಷ್ಯದಿಂದ ರಾಗದ ಉತ್ಪತ್ತಿಯಾಗುತ್ತದೆ, ಆ ರಾಗವನ್ನು ಅಜೀವವೆಂದು ಹೇಳಿದೆ ಮತ್ತು ಆ ರಾಗದಲ್ಲಿ ಜೀವವು ಸ್ವಯಂ ನಿಲ್ಲುವುದರಿಂದ ಜೀವವು ಸ್ವಯಂ ಅಜೀವರೂಪವಾಗಿದೆ. ಇಲ್ಲಿ ಅಜೀವವೆಂದು ಹೇಳಿದರೆ ಶರೀರ, ಮನಸ್ಸು, ವಾಣಿಯೆಂದು ತಿಳಿದುಬಾರದು ಅವಂತೂ ಅಜೀವವಿವೆ ಮತ್ತು ಆತ್ಮನಿಂದ ಭಿನ್ನವೇ ಇವೆ, ಆದರೆ ಅಜೀವದ ಲಕ್ಷ್ಯದಿಂದ ಯಾವ ರಾಗವಾಗುತ್ತದೆ ಅದು ತನ್ನ ಭೇದವಿದೆ ಅದಕ್ಕಾಗಿ ರಾಗವನ್ನು ಅಜೀವವೆಂದು ಗಣಿಸಿ ಅದನ್ನು ಜೀವದ ಭೇದವೆಂದು ಗಣಿಸಲಾಗಿದೆ. ಕರ್ಮ, ಶರೀರಗಳಂತೂ ರೂಪಿ ಇವೆ, ಆದರೆ ಕರ್ಮದ ಲಕ್ಷ್ಯದಿಂದ ಆಗುವ ರಾಗವು ಜೀವದ ದ್ರವ್ಯ-ಗುಣಗಳಂತೆ ಅರೂಪಿಯಿದೆ ಅದು ಜೀವದ ಅಸ್ತಿಕಾಯದಲ್ಲಿ ಆಗುತ್ತದೆ ; ಆದರೆ ಅಜೀವದ ಲಕ್ಷ್ಯದಿಂದ ಆಗುವುದರಿಂದ ಅದನ್ನು ಅಜೀವವೆಂದು ಹೇಳಿದೆ, ಆದರೆ ಆ ರಾಗವು ಶರೀರ ಅಥವಾ ಕರ್ಮದ ಕಾರಣದಿಂದ ಆಗುವುದಿಲ್ಲ ಆದರೆ ಜೀವದ ಕಾರಣದಿಂದ ಆಗುತ್ತದೆ. ಆದುದರಿಂದಲೇ ಅವನ್ನು ಜೀವದ ಭೇದವೆಂದು ಹೇಳಿದೆ. ಹೀಗೆ ಜೀವವು ಸ್ವಯಂ ಅಜೀವದ ಭೇದರೂಪವಾಗುತ್ತದೆ.

**೩) ಜೀವದ ಭೇದ ಪುಣ್ಯ :-** ಜೀವದ ಪರ್ಯಾಯದಲ್ಲಿ ದಯೆ-ದಾನಾದಿಗಳ ಭಾವಗಳಾಗುತ್ತವೆ ಅವು ಜೀವದ ಕಾರಣದಿಂದಿವೆ, ಅರೂಪಿಯಿವೆ. ಕರ್ಮದ ಕಾರಣದಿಂದ ಅಥವಾ ಪರದ ಕಾರಣದಿಂದ ಪುಣ್ಯಭಾವವಾಗುವುದಿಲ್ಲ. ಜೀವದ ಪರ್ಯಾಯದಲ್ಲಿ ಪುಣ್ಯವಾಗುವ ಯೋಗ್ಯತೆಯಿದೆ. ಕರ್ಮ ಹಾಗೂ ಆತ್ಮನಲ್ಲಿ ಅತ್ಯಂತ ಅಭಾವವಿದೆ, ಪುಣ್ಯ ಹಾಗೂ ಆತ್ಮನಲ್ಲಿ ಕಥಂಚಿತ್ ಭಾವವಿದೆ, ಏಕೆಂದರೆ ಪರ್ಯಾಯದಲ್ಲಿ ಪುಣ್ಯವಾಗುತ್ತದೆ ಮತ್ತು ಪುಣ್ಯದ ಭಾವಗಳು ತ್ರಿಕಾಲಿಸ್ವಭಾವದಲ್ಲಿ ಇಲ್ಲದಿರುವುದರಿಂದ ಪುಣ್ಯದಲ್ಲಿ ಮತ್ತು ಆತ್ಮನಲ್ಲಿ ಕಥಂಚಿತ್ ಅಭಾವವಿದೆ. ಜೀವನಿಗೆ ಶುಭಭಾವಗಳಾಗುತ್ತವೆ ಅವು ಜೀವದ ಭೇದವಿವೆಯೆಂದು ಇಲ್ಲಿ ಹೇಳುತ್ತಾರೆ ಕರ್ಮದ ತೀವ್ರ ಉದಯವಿರುವಾಗ ಪುರುಷಾರ್ಥವಾಗುವ ಸಾಧ್ಯತೆಯಿಲ್ಲವೆಂದು ಮೋಕ್ಷಮಾರ್ಗ ಪ್ರಕಾಶಕದಲ್ಲಿ ಬಂದಿದೆ. ಆದರೆ ಕರ್ಮದ ಉದಯವು ಮಂದವಾಗಿರುವಾಗ ಪ್ರಮಾದಿಯಾಗಬಾರದು ಆದರೆ ಸಾವಧಾನರಾಗಿ ತಮ್ಮ ಕಾರ್ಯ ಮಾಡಿಕೊಳ್ಳಬೇಕೆಂದು ಕಥನ ಬರುತ್ತದೆ ಅದು ನಿಮಿತ್ತದ ಕಥನವಿದೆ. ಕರ್ಮ ಹಾಗೂ ಆತ್ಮನಲ್ಲಿ ಅತ್ಯಂತ ಅಭಾವವಿದೆ. ಮಂದಕರ್ಮದ ಕಾರಣದಿಂದ ಕಷಾಯಗಳು ಮಂದವಾದವೆಂಬ ಮನ್ನಣೆ ಮಾಡುವುದು ಅದು ಅಸತ್ಯದೃಷ್ಟಿಯಿದೆ. ಪುಣ್ಯದ ಭಾವಗಳು ಜೀವದ್ದಿವೆಯೆಂದು ಯಥಾರ್ಥ ಜ್ಞಾನಮಾಡಿಕೊಂಡ ನಂತರ ಒಂಭತ್ತೂ ಭೇದಗಳಿಂದ ರಹಿತನಿದ್ದೇನೆ, ಅಖಂಡಶುದ್ಧನಿದ್ದೇನೆಂದು ದೃಷ್ಟಿ ಮಾಡುವುದು ಅದು ಧರ್ಮವಿದೆ.

**೪) ಜೀವದ ಭೇದ ಪಾಪ :-** ಜೀವದ ಪರ್ಯಾಯದಲ್ಲಿ ಮಿಥ್ಯಾತ್ವ, ಅವಿರತಿ, ಪ್ರಮಾದ, ಕಷಾಯದ ಅಶುಭ ಪರಿಣಾಮಗಳಾಗುತ್ತವೆ ಅವು ಪಾಪವಿವೆ. ಅವು ಜೀವದ ಭೇದವಿವೆ. ಪರನಿಮಿತ್ತದಿಂದ ಅಥವಾ ಜಡದ ಅಸ್ತಿತ್ವದಿಂದ ಪಾಪದ ಪರಿಣಾಮಗಳಾಗುವುದಿಲ್ಲ. ಕರ್ಮದ ಉದಯ ಬಂದಿದೆಯೆಂದು ಅಶುಭಭಾವಗಳಾಗುತ್ತಿವೆ, ಏನು ಮಾಡುವುದೆಂದು ಅಜ್ಞಾನೀಜೀವರುಗಳು ಹೇಳುತ್ತಾರೆ. ಆದರೆ ಕರ್ಮದ ದ್ರವ್ಯ-ಕ್ಷೇತ್ರ-ಕಾಲ-ಭಾವಗಳು ನಿನ್ನಿಂದ ಪರವಿವೆ, ಅವುಗಳ ಅಸ್ತಿಕಾಯವು ನಿನ್ನಲ್ಲಿ ಇಲ್ಲ. ಕರ್ಮದಿಂದ ರಾಗವಾಗುತ್ತಿದ್ದರೆ ಮೋಕ್ಷವಾಗುವ ಅವಸರವೇ ಉಳಿಯುವುದಿಲ್ಲ. ನೀನು ಜೀವನಿದ್ದು ವಿಕಾರರೂಪದಿಂದಾಗುವುದು ಅಥವಾ ಸ್ವಭಾವರೂಪದಿಂದಾಗುವುದು ಅದು ನಿನ್ನ ಭೇದವಿದೆ. ಕರ್ಮದ ಭೇದವಿಲ್ಲ. ತನ್ನ ಶುದ್ಧ ತ್ರಿಕಾಲಿಸ್ವಭಾವವನ್ನು ಮರೆತು ಜೀವನು ಅಶುಭ ಪರಿಣಾಮರೂಪದಿಂದ ಸ್ವಯಂ ಆಗುತ್ತಾನೆ, ಶರೀರದ ಕಾರಣದಿಂದ ಅಥವಾ ಪರದ ಕಾರಣದಿಂದ ಅಶುಭಭಾವವಾಗುವುದಿಲ್ಲ, ತನ್ನ ಅಸ್ತಿಕಾಯದಲ್ಲಿ ಆಗುತ್ತವೆ.

**೫) ಜೀವದ ಭೇದ ಆಸ್ರವ :-** ಪುಣ್ಯ-ಪಾಪದ ಭಾವಗಳೆರಡೂ ಆಸ್ರವವಿವೆ. ಕರ್ಮದ ಪರಮಾಣುಗಳು ಬರುತ್ತವೆ, ಅದಕ್ಕಾಗಿ ಜೀವದಲ್ಲಿ ಆಸ್ರವವಾಗುತ್ತದೆಯೆಂಬುದಾಗಿಲ್ಲ. ಏಕೆಂದರೆ ಕರ್ಮದ ಆಸ್ರವವು ಕರ್ಮದಲ್ಲಿದೆ. ಕರ್ಮವು ಜಡವಿದೆ, ಅದರೊಳಗೆ ಒಂದು ರತ್ನದ ವ್ಯಾಪಾರ ಮಾಡಿಸುವುದು, ಇನ್ನೊಂದು ವಿದ್ಯಾರ್ಥಿಯನ್ನು ಓದಿಸುವುದು, ಮತ್ತೊಂದು ಮಗನನ್ನು ಉಚ್ಚ ಶಿಕ್ಷಣಕ್ಕಾಗಿ ವಿಲಾಯಿತಿಗೆ ಕಳಿಸುವುದು ಹೀಗೆ ಬೇರೆ ಬೇರೆ ಅಶುಭಭಾವದ ಆಸ್ರವಗಳಾಗುತ್ತವೆ ಅದರ ಕಾರಣ ಬೇರೆ ಬೇರೆ ಕರ್ಮಗಳು ಉದಯದಲ್ಲಿ ಬರುತ್ತವೆಂದು ವಿಚಿತ್ರತೆಯಿಲ್ಲ. ಅದು ಕರ್ಮದ ಕಾರಣದಿಂದ ವಿಚಿತ್ರತೆಯಿಲ್ಲ, ನಿನ್ನ ಕಾರಣದಿಂದ ವಿಚಿತ್ರತೆಯಿದೆ ಜೀವವು ಸ್ವಯಂ ಆಸ್ರವರೂಪವಾಗುತ್ತದೆ.

**೬) ಜೀವದ ಭೇದ ಬಂಧ :-** ಇದು ಭಾವಬಂಧದ ಮಾತು ಇದೆ. ಕರ್ಮದ ಬಂಧವು ಕರ್ಮದಲ್ಲಿದೆ. ಕರ್ಮವು ಜಡವಿದೆ. ಜೀವವು ರಾಗ-ದ್ವೇಷಗಳಲ್ಲಿ ನಿಂತುಕೊಳ್ಳುವುದು ಅದು ಭಾವಬಂಧವು ತನ್ನ ಅಸ್ತಿಕಾಯದಲ್ಲಾಗುತ್ತದೆ. ಅದು ಜೀವದ ಭೇದವಿದೆ ಕರ್ಮದ ಬಂಧನವು ಆತ್ಮನ ಜತೆ ಸಂಬಂಧವಿಲ್ಲ. ಭಾವಬಂಧವು ಜಡದಲ್ಲಿಲ್ಲ, ಜಡದ ಕಾರಣದಿಂದ ಇಲ್ಲ.

**೭) ಜೀವದ ಭೇದ ಸಂವರ :-** ಆತ್ಮನು ಶುದ್ಧ ಚೈತನ್ಯಸ್ವಭಾವಿಯಿದ್ದಾನೆಂದು ಪರಿಚಯಮಾಡಿಕೊಂಡು ಸಮ್ಯಗ್ದರ್ಶನದ ನಿರ್ಮಲಪರ್ಯಾಯ ಪ್ರಕಟಿಸುವುದು ಅದು ಸಂವರವಿದೆ, ಅದು ಜೀವದ ಭೇದವಿದೆ. ಕರ್ಮ ತಡೆಯುವದಕ್ಕಾಗಿ ಸ್ತ್ರೀ-ಕುಟುಂಬ ಬಿಟ್ಟುಕೊಡುವುದರಿಂದ ಸಂವರವಾಗುತ್ತದೆಂದಿಲ್ಲ. ಕರ್ಮವು ಪರವಿದೆ ಮತ್ತು ವಿಕಾರವು ನನ್ನ ಸ್ವರೂಪವಲ್ಲ. ಪುಣ್ಯ-ಪಾಪವಿಲ್ಲದ ಸ್ವಭಾವದ ಆಶ್ರಯ ಮಾಡುವುದರಿಂದ ಯಾವ ಅರಾಗಪರ್ಯಾಯವು ಪ್ರಕಟವಾಗುವುದು ಅದು ಸಂವರವಿದೆ. ಸಂಕಲ್ಪ-ವಿಕಲ್ಪದ ಅಭಾವ ಮಾಡಿದರೆ ಸಂವರವಾಗುತ್ತದೆಂದು ಹೇಳಲಾಗುತ್ತದೆ ಅದು ವ್ಯವಹಾರದಿಂದ ಕಥನವಿದೆ. ಆ ವಿಕಲ್ಪವಾಗುವುದನ್ನು ಅದೇ ಸಮಯದಲ್ಲಿ ಬಿಡುವ ಸಾಧ್ಯತೆಯಿಲ್ಲ. ಅದರ ವ್ಯಯವು ಎರಡನೇ ಸಮಯದಲ್ಲಾದರೆ ಅದು ಹೇಗಾಯಿತು ? ಸಂಕಲ್ಪ-ವಿಕಲ್ಪದ ಅಭಿರುಚಿ ಬಿಟ್ಟು ನಾನು ಶುದ್ಧ ಜ್ಞಾತಾ-ದೃಷ್ಟಾ ಇದ್ದೇನೆಂಬ ಅರಿವಿನೊಡನೆ ಸ್ವಭಾವದಲ್ಲಿ ಏಕಾಗ್ರವಾದರೆ ಸಂಕಲ್ಪ-ವಿಕಲ್ಪಗಳು ಉತ್ಪನ್ನವಾಗುವುದೇ ಇಲ್ಲ. ಇದನ್ನು ವಿಕಲ್ಪ ಬಿಟ್ಟು ಅಥವಾ ತಡೆದು ಸಂವರ ಮಾಡಿದನೆಂದು ಹೇಳಲಾಗುತ್ತದೆ. ಕರ್ಮ ಬರುವುದು ನಿಂತುಹೋಯಿತು ಅದಕ್ಕಾಗಿ ಸಂವರವಾಯಿತೆಂಬುದಾಗಿಲ್ಲ. ಇದು ಜೀವದ್ರವ್ಯದ ಅಸ್ತಿಕಾಯದ ವ್ಯಾಖ್ಯೆಯಿದೆ. ಜೀವದ ಕಾರಣದಿಂದ ಜೀವದಲ್ಲಿ ಸಂವರವಾಗುತ್ತದೆ.

**೮) ಜೀವದ ಭೇದ ನಿರ್ಜರೆ :-** ಜೀವದ ಪರ್ಯಾಯದಲ್ಲಿ ಶುದ್ಧಿಯ ವೃದ್ಧಿಯಾಗುವುದು ಅದು ನಿರ್ಜರೆಯಿದೆ. ಕರ್ಮವು ಬಿಟ್ಟುಹೋಗುವುದು ಕರ್ಮದಲ್ಲಿದೆ. ಆತ್ಮನ ಜತೆಯಲ್ಲಿ ಅದರ ಸಂಬಂಧವಿಲ್ಲ. ಚಿನ್ನದಲ್ಲಿ ಬೇರೆ ಬೇರೆ ಚೂರ್ಣದ

ಭೇದಗಳಾಗುವುದು ಅದು ಚಿನ್ನದ ಭೇದವಿದೆ, ಹಾಗೆ ಜೀವದಲ್ಲಿ ಬೇರೆ ಬೇರೆ ಭೇದಗಳಾಗುವುದು ಅದು ಜೀವದ ಭೇದವಿದೆ. ಅಜ್ಞಾನಿಯು ಪರದ ಕಾರಣದಿಂದ ಕಾರ್ಯವಾಗುತ್ತದೆಂದು ಮನ್ನಿಸಿದ್ದಾನೆ. ತನ್ನ ಪರ್ಯಾಯದಲ್ಲಿ ಒಂಭತ್ತು ಭೇದದ ಜ್ಞಾನ ಮಾಡಿಕೊಳ್ಳುವುದು ಮತ್ತು ತ್ರಿಕಾಲೀ ದ್ರವ್ಯಸಾಮಾನ್ಯದ ಜ್ಞಾನ ಮಾಡಿಕೊಳ್ಳುವುದು ಹೀಗೆ ಎರಡರ ಜ್ಞಾನ ಮಾಡಿಕೊಳ್ಳುವುದು ಅದು ಪ್ರಮಾಣಜ್ಞಾನವಿದೆ.

**೯) ಜೀವದ ಭೇದ ಮೋಕ್ಷ :-** ಜೀವನು ಮೋಕ್ಷದಶೆ ಪಡೆದಿರುವುದು ಅದು ಜೀವದ ಭೇದವಿದೆ. ಕರ್ಮಗಳು ಬಿಟ್ಟುಹೋದವೆಂದು ಮೋಕ್ಷವಾಯಿತೆಂಬುದಾಗಿಲ್ಲ. ಜೀವದ ಕಾರಣದಿಂದ ಜೀವದ ಅಸ್ತಿಕಾಯದಲ್ಲಿ ಮೋಕ್ಷವಾಗುತ್ತದೆ.

**ಪ್ರಶ್ನೆ :-** ನವತತ್ತ್ವಗಳು ಜೀವದೊಳಗಿಂದ ಹೊರಟುಹೋಗುತ್ತವೆ, ಅದಕ್ಕಾಗಿ ನವಪದಾರ್ಥಗಳೆಂದು ಹೇಳಬಾರದು ಜೀವದ ರೂಪವೊಂದೇ ಇರುವುದರಿಂದ ಏಕರೂಪವೆಂದೇ ಹೇಳಬೇಕೆಂದು ಪಂಚಾಧ್ಯಾಯದಲ್ಲಿ ಶಂಕಾಕಾರ ಹೇಳುತ್ತಾರೆ.

**ಉತ್ತರ :-** ನವಭೇದಗಳು ಜೀವದಲ್ಲಾಗುವುದರಿಂದ ನವಭೇದಗಳು ಸರಿಯೆಂದು ಹೇಳಬೇಕಾಗುವುದು. ಸರ್ವಥಾ ಪರ್ಯಾಯದ ಅಭಾವ ಮನ್ನಿಸುವುದರಿಂದ ಪರ್ಯಾಯವಂತನ ಅಭಾವದ ಪ್ರಸಂಗ ಬರುವುದು. ಮತ್ತು ಪರದಿಂದ ನವಭೇದಗಳಾಗುತ್ತಿದ್ದರೆ ಅದರ ನಿಷೇಧ ಮಾಡಲಾಗುವುದಿಲ್ಲ. ಆ ಭೇದಗಳು ತಮ್ಮಿಂದ ತಮ್ಮಲ್ಲಿ ಆಗುತ್ತವೆಂದು ಒಪ್ಪಿಕೊಂಡ ನಂತರ ಸ್ವಭಾವದ ಆಶ್ರಯ ಪಡೆಯುವ ಸಲುವಾಗಿ ಅವುಗಳ ನಿಷೇಧ ಮಾಡಬೇಕಾಗುವುದು ಆದರೆ ಪದಾರ್ಥಗಳು ಮತ್ತು ಕರ್ಮಗಳು ಆತ್ಮನಲ್ಲಿ ಇಲ್ಲದಿದ್ದರೆ ಅವುಗಳ ನಿಷೇಧವನ್ನೇಕೆ ಮಾಡುವುದು ? ಇನ್ನು ಪರದ ಕಾರಣದಿಂದ ಜೀವದಲ್ಲಿ ನವಭೇದಗಳಾಗುತ್ತಿದ್ದರೆ ಅವುಗಳ ನಿಷೇಧವನ್ನು ಹೇಗೆ ಮಾಡುವುದು ? ಆದುದರಿಂದ ಅಶುದ್ಧತೆಯ ಪರಿಣಾಮಗಳು ಜೀವದಲ್ಲಿ ಜೀವದ ಕಾರಣದಿಂದ ಆಗುತ್ತವೆಂದು ನಿಶ್ಚಿತಮಾಡಿ ಅವುಗಳ ನಿಷೇಧ ಮಾಡಿದರೆ ಅಭೇದ ಸ್ವಭಾವದಲ್ಲಿ ಸ್ಥಿರವಾಗಬಹುದು, ಆದರೆ ನವಭೇದಗಳನ್ನು ಪರ್ಯಾಯದಲ್ಲಿ ಮನ್ನಿಸದಿದ್ದರೆ ಅಥವಾ ಪರದಿಂದ ಮನ್ನಿಸಿದರೆ ಅವನ ಜ್ಞಾನವು ಯಥಾರ್ಥವಿಲ್ಲ, ಅವನಿಗೆ ಧರ್ಮವಾಗುವುದಿಲ್ಲ. ನವಭೇದಗಳು ಪರ್ಯಾಯದಲ್ಲಿ ತಮ್ಮಿಂದ ಆಗುತ್ತವೆ ಮತ್ತು ತಾನು ತ್ರಿಕಾಲ ಒಂದು ಅಭೇದಸ್ವರೂಪಿಯಿದ್ದೇನೆಂದು ಪರ್ಯಾಯದ ಮತ್ತು ದ್ರವ್ಯದ ಜ್ಞಾನ ಮಾಡಿಕೊಂಡು ಸ್ವಭಾವದ ಕಡೆಗೆ ತಿರುಗುವುದು ಅದು ಧರ್ಮವಿದೆ.

ಮತ್ತೆ ಹತ್ತು ಪ್ರಕಾರದಿಂದ ಜೀವದ ವರ್ಣನೆ ಮಾಡುತ್ತಾರೆ.

**೧) ಪೃಥ್ವಿಕಾಯ ಜೀವ :-** ಸಮಯಸಾರದಲ್ಲಿ ಪೃಥ್ವಿಕಾಯ ಮೊದಲಾದ ಜೀವಗಳ ಭೇದವನ್ನು ಕರ್ಮಕೃತವೆಂದು ಹೇಳಿದೆ. ಅಲ್ಲಿ ಪರ್ಯಾಯದೃಷ್ಟಿ ಬಿಡಿಸಲು ಮತ್ತು ಸ್ವಭಾವದದೃಷ್ಟಿ ಮಾಡಿಸಲು ಹಾಗೆ ಹೇಳಿದೆ. ಇಲ್ಲಿ ಜ್ಞಾನಪ್ರಧಾನ ಕಥನವಿದೆ. ಸಚೇತ ಲವಣದ ಒಂದು ಕಣದಲ್ಲಿ ಅಸಂಖ್ಯ ಶರೀರಗಳಿವೆ ಮತ್ತು ಒಂದೊಂದು ಶರೀರದಲ್ಲಿ ಒಂದೊಂದು ಜೀವವಿದೆ. ಆ ಪೃಥ್ವಿಕಾಯದ ಜೀವಗಳು ಏಕೇಂದ್ರಿಯವಾಗಿರುತ್ತವೆ ಅವು ತಮ್ಮ ಅಪರಾಧದಿಂದ ಆಗಿರುತ್ತವೆ ನಾಮಕರ್ಮದ ಉದಯದಿಂದ ಆಗಿವೆಯೆಂಬುದಾಗಿಲ್ಲ. ಕರ್ಮವು ಪುದ್ಗಲಾಸ್ತಿಕಾಯವಿದೆ, ಜೀವದಲ್ಲಿ ಅದರ ಅಭಾವವಿದೆ. ಮತ್ತು ಕರ್ಮವು ರೂಪಿಯಿದ್ದರೆ ಜೀವವು ಅರೂಪಿಯಿದೆ. ಇಲ್ಲಿ ಏಕೇಂದ್ರಿಯ ಶರೀರದ ಮಾತಿಲ್ಲ, ಅದಂತೂ ಜಡವಿದೆ. ಜೀವವು ಸ್ವಯಂ ಅಪರಾಧ ಮಾಡಿ ಏಕೇಂದ್ರಿಯದ ಹೀನದಶೆಯರೂಪವಾಗಿ ಆಗಿದೆ. ಆ ಅಪರಾಧವು ಜೀವದ್ದಿದ್ದು ಅದು ಕರ್ಮದ್ದಲ್ಲ.

**೨) ಆಪಕಾಯ ಜೀವ :-** ನೀರಿನ ಒಂದು ಬಿಂದುವಿನಲ್ಲಿ ಅಸಂಖ್ಯ ಶರೀರಗಳಿವೆ ಮತ್ತು ಒಂದು ಶರೀರದಲ್ಲಿ ಒಂದು ಜೀವವಿದೆ. ಇಲ್ಲಿ ಏಕೇಂದ್ರಿಯ ಶರೀರದ ಮಾತಿಲ್ಲ, ಒಳಗೆ ಜೀವವಿದೆ ಅದರ ಮಾತು ನಡೆಯುತ್ತಿದೆ. ಮತ್ತು ಏಕೇಂದ್ರಿಯ ಕರ್ಮದ ಉದಯ ಬಂದಿದೆಯೆಂದು ನೀರಿನಲ್ಲಿ ಜನ್ಮವಾಗಿಲ್ಲ. ಕರ್ಮವು ಪುದ್ಗಲವಿದೆ, ಪುದ್ಗಲದ

ಕಾರಣದಿಂದ ಜೀವದಲ್ಲಿ ಏನೂ ಆಗುವುದಿಲ್ಲ.

ಪರದ ಕಾರಣದಿಂದ ಅಥವಾ ಕರ್ಮದ ಕಾರಣದಿಂದ ವಿಕಾಸವು ಅಪೂರ್ಣವಾಗಿದೆಯೆಂದು ಮನ್ನಿಸ ಹೋದರೆ ಪರ್ಯಾಯವು ಪರಾಧೀನವಾಗಿ ಜೀವದ್ರವ್ಯವು ಪರಾಧೀನವಾಗುತ್ತದೆ ಎಂದರೆ ಜೀವವು ಸಿದ್ಧವಾಗುವುದಿಲ್ಲ. ಜೀವವು ಕೀಳು ಪರಿಣಮನರೂಪದಿಂದಾಗಿರುವುದು ಅದು ಜೀವದ ಭೇದವಿದೆ.

**೩) ಅಗ್ನಿಕಾಯ ಜೀವ :-** ಅಗ್ಗಿಸ್ಟಿಕೆ ಹಾಗೂ ಕುಲುಮೆಗಳಲ್ಲಿ ಕಂಡುಬರುವ ಅಗ್ನಿಯು ಅದು ಶರೀರವಿದೆ, ಅದರಲ್ಲಿ ಅರೂಪಿ ಅಗ್ನಿಕಾಯದ ಜೀವವಿದೆ. ಶರೀರವಂತೂ ಪುದ್ಗಲವಿದೆ ಮತ್ತು ಕರ್ಮವು ಪುದ್ಗಲವಿದೆ, ಅವೆರಡೂ ರೂಪಿಯಿದ್ದು ಜೀವವು ಅರೂಪಿಯಿದೆ. ಜೀವವು ತನ್ನ ಕಾರಣದಿಂದ ಕೀಳುರೂಪವಾಗಿ ಪರಿಣಮಿಸಿದೆ. ಶರೀರವು ಉಷ್ಣ ದೊರಕುವುದರಿಂದ ಅಗ್ನಿಕಾಯಿಕ ಜೀವವಿದೆಯೆಂಬುದಾಗಿಲ್ಲ.

ನೀರು ದ್ರವರೂಪವಿದೆಯೆಂದು ಜಲಕಾಯ ಜೀವವಿದೆಯೆಂಬುದಾಗಿಲ್ಲ.

ಪೃಥ್ವಿಯು ಕಠಿಣವಿದೆಯೆಂದು ಪೃಥ್ವಿಕಾಯ ಜೀವವಿದೆಯೆಂಬುದಾಗಿಲ್ಲ

ಪ್ರತಿಯೊಂದರಲ್ಲಿ ಜೀವವು ತನ್ನ ಕಾರಣದಿಂದಿದೆಯೆಂದು ಪರದಿಂದ ಬೇರೆಯಾಗಿ ಭೇದಜ್ಞಾನ ಮಾಡುವುದು ಅದು ಧರ್ಮವಿದೆ.

ಇಲ್ಲಿ ಜೀವಾಸ್ತಿಕಾಯದ ವರ್ಣನೆಯಿದೆ. ಜೀವನು ಅಸಂಖ್ಯಪ್ರದೇಶಿಯೂ ಅನಂತಗುಣಗಳ ಪಿಂಡನೂ ಇದ್ದಾನೆ. ಅವನಲ್ಲಿ ಸಮಯ ಸಮಯದ ಅವಸ್ಥೆಯಾಗುತ್ತದೆ ಅದು ಜೀವದ ಕಾರಣದಿಂದ ಆಗುತ್ತದೆ. ಪರದ ಕಾರಣದಿಂದ ಆಗುವುದಿಲ್ಲ. ಉದಯಾದಿ ಭಾವಗಳು ಜೀವದ ನಿಜತತ್ತ್ವವಿದ್ದು ಕರ್ಮದ ಕಾರಣದಿಂದ ಅವು ಇಲ್ಲ. ಬೇರೆ ತತ್ತ್ವವು ಬೇಕಾದರೆ ಉಪಸ್ಥಿತವಿದ್ದರೂ ಅದರ ಕಾರಣದಿಂದ ಭೇದವಾಗುವುದಿಲ್ಲ.

ಇಲ್ಲಿ ಜೀವದ ಪರ್ಯಾಯದ ಸ್ವತಂತ್ರಭೇದ ತಿಳಿಸಿ, ಆ ಭೇದ ಅಥವಾ ರಾಗದಷ್ಟೇ ನಾನಿಲ್ಲ, ನಾನಂತೂ ತ್ರಿಕಾಲೀ ಶುದ್ಧದ್ರವ್ಯನಿದ್ದೇನೆಂದು ಆಂತರ್ಯದ ರುಚಿಯ ಪರಿಣಮನ ಮಾಡಿದರೆ ಸಮ್ಯಗ್ದರ್ಶನವಾಗುತ್ತದೆ, ಆದರೆ ಆ ಸಮ್ಯಗ್ದರ್ಶನವಾಗುವ ಮೊದಲು ಪರ್ಯಾಯವು ಸ್ವತಂತ್ರವೆಂದು ಸ್ವೀಕರಿಸಬೇಕಾಗುವುದು, ಜೀವನು ಪರದಿಂದ ಪರ್ಯಾಯವೆಂದು ಮನ್ನಿಸಿದರೆ ಅವನಿಗೆ ಪರ್ಯಾಯದೃಷ್ಟಿಯು ಹೋಗುವ ಸಾಧ್ಯತೆಯಿಲ್ಲ. ಜೀವದಲ್ಲಿ ಸಮಯ ಸಮಯಕ್ಕೆ ಕ್ರಮಬದ್ಧ ಪರ್ಯಾಯಗಳು ಆಗುತ್ತಿರುತ್ತವೆ. ದ್ರವ್ಯವು ಮೂರು ಕಾಲದ ಪರ್ಯಾಯದಷ್ಟಿದೆ. ಮತ್ತು ಎಷ್ಟು ಪರ್ಯಾಯಗಳು ಅಷ್ಟು ಮೂರು ಕಾಲದ ಸಮಯಗಳಿವೆ. ಇಂಥ ಪ್ರಕಾರದ ನಿಮಿತ್ತವು ದೊರಕಿದರೆ ಇಂಥ ಪರ್ಯಾಯವಾಗುತ್ತದೆ ಮತ್ತು ಈ ಪ್ರಕಾರದ ನಿಮಿತ್ತವು ಬಾರದೆಹೋದರೆ ಇಂಥ ಪರ್ಯಾಯವಾಗುವುದಿಲ್ಲವೆಂದು ಮನ್ನಿಸಿದರೆ ಪರ್ಯಾಯವು ಸ್ವತಂತ್ರವಾಗಿ ಉಳಿಯಲಿಲ್ಲ ಅದರಿಂದ ದ್ರವ್ಯವು ಅವ್ಯವಸ್ಥಿತವಾಗಿಹೋಗುವುದು. ಅವನಿಗೆ ಪರ್ಯಾಯದೃಷ್ಟಿಯು ಹೊರಟುಹೋಗಿ ದ್ರವ್ಯದೃಷ್ಟಿಯಾಗುವುದಿಲ್ಲ.

**೪) ವಾಯುಕಾಯ :-** ಹತ್ತು ಪ್ರಕಾರದಿಂದ ಜೀವದ ಭೇದ ಹೇಳಿದೆ. ಅದರಲ್ಲಿ ಪೃಥ್ವಿಕಾಯ, ಆಪಕಾಯ ಮತ್ತು ಅಗ್ನಿಕಾಯದ ಮಾತು ಆಗಿಹೋಯಿತು ಇಲ್ಲಿ ವಾಯುಕಾಯದ ಶರೀರದ ಮಾತಿಲ್ಲ. ಅದರಂತೆ ನಾಮಕರ್ಮ ಕೂಡ ಜಡವಿದೆ. ಒಳಗೆ ಜೀವದ ಪರ್ಯಾಯವು ಏಕೇಂದ್ರಿಯಗತಿಗೆ ಯೋಗ್ಯವಿದೆ ಅದರ ಮಾತು ನಡೆಯುತ್ತಿದೆ. ಅದು ಜೀವದ ಭೇದವಿದೆ. ಜೀವದಲ್ಲಿ ಶರೀರ ಮತ್ತು ಕರ್ಮದ ಅತ್ಯಂತ ಅಭಾವವಿದೆ. ಜೀವದಪರ್ಯಾಯವು ಕರ್ಮದಿಂದ ಬೇರೆಯಿದೆಯೆಂದು ಭೇದಜ್ಞಾನ ಮಾಡುವ ಸಾಮರ್ಥ್ಯವು ಪ್ರಕಟವಾಗಿಲ್ಲ.

ಕರ್ಮದ ಉದಯದ ಕಾರಣದಿಂದ ಜೀವವು ವಾಯುಕಾಯರೂಪವಾಗಿದೆಯೆಂದು ಅಜ್ಞಾನಿಗಳು ಮನ್ನಿಸುತ್ತಾರೆ.

ಆ ಮನ್ನಣೆಯು ದೋಷಯುಕ್ತವಿದೆ. ಜೀವದ ದ್ರವ್ಯ, ಗುಣಗಳು ಶುದ್ಧವಿವೆ, ಆದರೆ ಪರ್ಯಾಯದಲ್ಲಿ ಯಾವ ಅಶುದ್ಧತೆ ಹಾಗೂ ಹೀನತೆಯಿದೆ ಅದು ಜೀವದ ಪರ್ಯಾಯದ ಯೋಗ್ಯತೆಯ ಕಾರಣದಿಂದಿದೆ ಕರ್ಮ ಅಥವಾ ಶರೀರದ ಕಾರಣದಿಂದಿಲ್ಲ ಮತ್ತು ಜೀವದ ಏಕೇಂದ್ರಿಯದ ಯೋಗ್ಯತೆಯಾಗಿದೆಯೆಂದು ಶರೀರವು ಆ ರೂಪದಿಂದ ಪರಿಣಮಿಸಿದೆಯೆಂದು ಕೂಡ ಇಲ್ಲ. ಅದರಂತೆ ನಾಮಕರ್ಮದ ಉದಯ ಬಂದಿದೆಯೆಂದು ಶರೀರವು ಏಕೇಂದ್ರಿಯವಾಗಿ ಪರಿಣಮಿಸಿದೆಯೆಂದು ಕೂಡ ಇಲ್ಲ. ಜೀವದ ಏಕೇಂದ್ರಿಯತನದ ಯೋಗ್ಯತೆ, ಕರ್ಮದ ಆ ಪ್ರಕಾರದ ಉದಯ ಮತ್ತು ಶರೀರದ ಏಕೇಂದ್ರಿಯತೆಯಾಗುವುದು ಇವು ಮೂರು ಏಕಕಾಲದಲ್ಲಿದ್ದರೂ ಕೂಡ ಒಂದರ ಕಾರಣದಿಂದ ಇನ್ನೊಂದು ಇಲ್ಲ. ಒಂದು ಇನ್ನೊಂದರಲ್ಲಿ ನಿಮಿತ್ತ-ನೈಮಿತ್ತಿಕ ಸಂಬಂಧವಿದೆ, ಆದರೆ ಕರ್ತೃ-ಕರ್ಮ ಸಂಬಂಧವಿಲ್ಲ. ಒಂದರ ಕಾರಣದಿಂದ ಇನ್ನೊಂದರ ಕಾರ್ಯವಾಗುತ್ತದೆಂದು ಮನ್ನಿಸಹೋದರೆ ಕರ್ತಾ-ಕರ್ಮಸಂಬಂಧ ಬರುವುದು. ಜೀವ ಮತ್ತು ಪುದ್ಗಲದಲ್ಲಿ ಅತ್ಯಂತ ಅಭಾವವಿದೆ. ಮತ್ತು ಪುದ್ಗಲದ ಒಂದು ಪರ್ಯಾಯದ್ದು ಪುದ್ಗಲದ ಇನ್ನೊಂದು ಪರ್ಯಾಯದಲ್ಲಿ ಅನ್ಯೋನ್ಯ ಅಭಾವವಿದೆ. ಅಭಾವರೂಪವಿರುವುದು ಅದು ಇನ್ನೊಂದರಲ್ಲಿ ಏನು ಮಾಡುವುದು ? ಏನೂ ಮಾಡದಿದ್ದರೂ ಜೀವನು ಒಂದರ ಕಾರಣದಿಂದ ಇನ್ನೊಂದರಲ್ಲಿ ಕಾರ್ಯ ಮನ್ನಿಸಿದರೆ ಅವನು ಈಶ್ವರ ಕರ್ತೃತ್ವದ ಮನ್ನಣೆಯುಳ್ಳವನಂತೆ ಮಿಥ್ಯಾದೃಷ್ಟಿಯಿದ್ದಾನೆ.

ಮತ್ತು ಜೀವವು ವಿಗ್ರಹಗತಿಯಲ್ಲಿದ್ದಾಗಕೂಡ ಸ್ವತಂತ್ರವಿದೆ. ಅನುಪೂರ್ವಿನಾಮಕರ್ಮದ ಉದಯವಿರುವುದರಿಂದ ಏಕೇಂದ್ರಿಯದ ಪರಿಣಮನವಿದೆ ಅಥವಾ ಕಾರ್ಮಣಶರೀರ ಪೂರ್ಣ ಮಾಡಿದೆಯೆಂದು ಏಕೇಂದ್ರಿಯತೆಯಾಗಿದೆಯೆಂದಿಲ್ಲ. ಕಾರ್ಮಣಶರೀರ ಅಥವಾ ಔದಾರಿಕಶರೀರದ ಕಾರಣದಿಂದ ಜೀವದ ಏಕೇಂದ್ರಿಯತೆಯಿಲ್ಲ. ಮತ್ತು ಜೀವದ ಏಕೇಂದ್ರಿಯತನದ ಕಾರಣದಿಂದ ಶರೀರವಿಲ್ಲ. ಶರೀರವು ಶರೀರದ ಯೋಗ್ಯತೆಯಿಂದ ಇದ್ದರೆ ಜೀವದ ಏಕೇಂದ್ರಿಯತನವನ್ನು ನಿಮಿತ್ತವೆಂದು ಹೇಳಲಾಗುತ್ತದೆ. ಜೀವವು ಜೀವದಲ್ಲಿದೆ, ಜೀವವು ಪುದ್ಗಲದಲಿಲ್ಲ. ಪುದ್ಗಲವು ಪುದ್ಗಲದಲ್ಲಿದೆ, ಪುದ್ಗಲವು ಜೀವದಲ್ಲಿಲ್ಲ. ಒಂದರದು ಇನ್ನೊಂದರಲ್ಲಿ ನಿಮಿತ್ತ-ನೈಮಿತ್ತಿಕ ಸಂಬಂಧವಿದೆ. ಆದರೆ ಒಂದರದು ಇನ್ನೊಂದರಲ್ಲಿ ಯಾವುದೇ ಪ್ರವೇಶವಿಲ್ಲ. ಹೀಗೆ ತಿಳಿದುಕೊಂಡರೆ ಒಂದು ಜೀವವು ಇನ್ನೊಂದನ್ನು ಕೊಲ್ಲುವ ಸಾಧ್ಯತೆಯಿಲ್ಲ ಅಥವಾ ಕಾಯುವ ಸಾಧ್ಯತೆಯಿಲ್ಲವೆಂಬುದು ನಿಶ್ಚಿತವಾಗಿಹೋಗುತ್ತದೆ. ಪ್ರತಿಯೊಂದು ದ್ರವ್ಯದ ಉತ್ಪಾದ-ವ್ಯಯ-ಧ್ರೌವ್ಯರೂಪದ ಮೂರೂ ಅಂಶಗಳು ತನ್ನಲ್ಲಿವೆ, ಒಂದರ ಕಾರಣದಿಂದ ಇನ್ನೊಂದರಲ್ಲಿ ಉತ್ಪಾದ-ವ್ಯಯ-ಧ್ರೌವ್ಯವಿಲ್ಲ. ಹೀಗೆ ಸ್ವತಂತ್ರವೆಂದು ತಿಳಿದುಕೊಂಡರೆ ಪರದಿಂದ ಬಿಡುಗಡೆಯಾಗಿ ದ್ರವ್ಯದ ಕಡೆಗೆ ತಿರುಗುವ ಅವಸರವು ಉಳಿಯುವುದು.

**೫) ಪ್ರತ್ಯೇಕ :-** ಒಂದು ಶರೀರದಲ್ಲಿ ಒಂದು ಜೀವವಿರುತ್ತದೆನ್ನುವುದು ಅದು ನಿಮಿತ್ತದ ಕಥನವಿದೆ. ಪ್ರತಿಯೊಂದು ಪದಾರ್ಥವು ತನ್ನ ದ್ರವ್ಯ-ಕ್ಷೇತ್ರ ಕಾಲ-ಭಾವದಿಂದಿದೆ ಮತ್ತು ಪರದ ದ್ರವ್ಯ-ಕ್ಷೇತ್ರ-ಕಾಲ-ಭಾವದಿಂದಿಲ್ಲ. ಗತಿ, ಲೇಶ್ಯೆ, ಕಷಾಯ ಮೊದಲಾದವುಗಳ ಪರಿಣಾಮವಾಗುವುದು ಅದು ಕರ್ಮದ ಕಾರಣದಿಂದ ಅಥವಾ ಶರೀರದ ಕಾರಣದಿಂದಿಲ್ಲ, ಆದರೆ ತನ್ನ ಕಾರಣದಿಂದಿದೆ. ಮತ್ತು ಜೀವದ ಪರಿಣಾಮದ ಕಾರಣದಿಂದ ಶರೀರವು ಬರುತ್ತದೆಂದು ಕೂಡ ಇಲ್ಲ, ಅದರಂತೆ ಕರ್ಮದ ಕಾರಣದಿಂದ ಶರೀರವು ಬರುತ್ತದೆಂದು ಕೂಡ ಇಲ್ಲ. ಕರ್ಮವು ಕಾರ್ಮಣದ ಪರಮಾಣುವಿದ್ದರೆ ಶರೀರವು ಔದಾರಿಕದ ಪರಮಾಣುವಿದೆ. ಪ್ರತ್ಯೇಕ ವನಸ್ಪತಿ ಜೀವದ ಭೇದವು ತನ್ನ ಕಾರಣದಿಂದಿದ್ದರೆ ಕರ್ಮವನ್ನು ಹಾಗೂ ಶರೀರವನ್ನು ನಿಮಿತ್ತವೆಂದು ಹೇಳಲಾಗುತ್ತದೆ. ರಾಗ-ದ್ವೇಷಗಳು ನನ್ನಿಂದ ಆಗುತ್ತಿದ್ದು ಅವು ನನ್ನ ಭೇದವಿವೆಯೆಂದು ಜ್ಞಾನಮಾಡಿಕೊಂಡು ನಾನು ಅಂಶನಿಲ್ಲ ತ್ರಿಕಾಲೀ ಶುದ್ಧದ್ರವ್ಯನಿದ್ದೇನೆಂದು ತಿಳಿದು ದ್ರವ್ಯದ ಆಶ್ರಯ ಪಡೆದರೆ ಸಮ್ಯಗ್ದರ್ಶನವಾಗುವುದು. ನಿಮಿತ್ತದಿಂದ, ರಾಗದೊಳಗಿಂದ ಅಥವಾ ಪರ್ಯಾಯದೊಳಗಿಂದ

ಸಮ್ಯಗ್ದರ್ಶನವಾಗುವುದಿಲ್ಲ.

ಜೀವದ ವ್ಯವಹಾರರತ್ನತ್ರಯದ ಪರಿಣಾಮವು ಜಡವಿದೆ, ಪುದ್ಗಲದ್ದಿದೆ. ಏಕೆಂದರೆ ಶುದ್ಧಸ್ವಭಾವದೊಳಗಿಂದ ಆ ಪರಿಣಾಮಗಳು ಹೊರಡುತ್ತವೆಂದು ಹೇಯವಿದೆ. ಶುದ್ಧ ಚೈತನ್ಯಸ್ವಭಾವವೊಂದೇ ಆದರಣೀಯವಿದೆಯೆಂದು ನಿಯಮಸಾರ ಮತ್ತು ಸಮಯಸಾರದಲ್ಲಿ ಹೇಳಿದೆ.

ರಾಗಾದಿ ಪರಿಣಾಮಗಳು ನಿನ್ನ ಯೋಗ್ಯತೆಯಿಂದ ಆಗುತ್ತವೆಂದು ಈ ಪಂಚಾಸ್ತಿಕಾಯದಲ್ಲಿ ಹೇಳಿದೆ. ಮತ್ತು ಅವು ಜೀವದ ಭೇದವಿವೆಯೆಂದು ಒಪ್ಪಿಕೊಂಡರೆ ಅಭೇದದ ದೃಷ್ಟಿಯಾಗುವುದು.

**ಪ್ರಶ್ನೆ :-** ಹಾಗಾದರೆ ಮೊದಲು ಸಮಯಸಾರ ಓದಬೇಕೋ ಅಥವಾ ಪಂಚಾಸ್ತಿಕಾಯ ಓದಬೇಕೋ ?

**ಉತ್ತರ :-** ಪರ್ಯಾಯವು ತನ್ನದಿದೆಯೆಂದು ಅಂಶದ ನಿಜವಾದ ಜ್ಞಾನವು ತನ್ನ ಕಡೆಗೆ ತಿರುಗಿದಾಗಲೇ ಆಗುವುದು. ಉಪಶಮ, ಔದಯಿಕ, ಕ್ಷಯೋಪಶಮ ಅಥವಾ ಕ್ಷಾಯಿಕವೆಂದು ಯಾವುದೇ ಭಾವದ ಪರ್ಯಾಯವು ಸ್ವತಂತ್ರವಿದೆಯೆಂದು ಮೊದಲು ವ್ಯವಹಾರಜ್ಞಾನ ಮಾಡುವುದು, ಆದರೆ ಅಂಶಿಯಾದ ದ್ರವ್ಯಸ್ವಭಾವದ ಜ್ಞಾನವಿಲ್ಲದೆ ಪರ್ಯಾಯದ ಜ್ಞಾನವು ಯಥಾರ್ಥವೆಂದು ಹೇಳಲಾಗುವುದಿಲ್ಲ. ದ್ರವ್ಯಾನುಯೋಗದಲ್ಲಿ ದೃಷ್ಟಿಪ್ರಧಾನವಾದ ಕಥನದೊಳಗೆ ರಾಗವನ್ನು ಅಸದ್ಭೂತ ವ್ಯವಹಾರನಯದ ವಿಷಯವೆಂದು ಹೇಳಿದೆ ಮತ್ತು ಅಭೂತಾರ್ಥವೆಂದು ಹೇಳಿದೆ. ಪಂಚಾಸ್ತಿಕಾಯದಲ್ಲಿ ಜ್ಞಾನಪ್ರಧಾನವಾದ ಕಥನದೊಳಗೆ ರಾಗಾದಿಗಳ ಪರಿಣಾಮವನ್ನು ಅಶುದ್ಧನಿಶ್ಚಯದ ಪರ್ಯಾಯವೆಂದು ಹೇಳಿದೆ. ಮತ್ತು ಅದು ಸಮಯಪರ್ಯಾಪ್ತಭೂತಾರ್ಥವಿದೆ. ಅದು ವ್ಯವಹಾರ ವಿಷಯದ ಜ್ಞಾನ ಮಾಡಿಸುವುದು ಅದನ್ನು ಪರತಂತ್ರವೆಂದು ಮನ್ನಿಸಿದರೆ ಅವನಂತೂ ಸ್ಥೂಲದೋಷದಲ್ಲಿರುವುದರಿಂದ ಅವನಿಗೆ ಸಮಯ ಪರ್ಯಾಪ್ತ ಭೂತಾರ್ಥವೆಂದು ಹೇಳಿದೆ. ಅದು ನಿನ್ನ ಪರ್ಯಾಯದಲ್ಲಿ ನಿನ್ನ ಕಾರಣದಿಂದ ಆಗುತ್ತದೆ, ಆದರೆ ಆ ರಾಗವು ವ್ಯವಹಾರದ ವಿಷಯವಿದೆ. ಅದು ಜ್ಞೇಯವಿದೆ. ಆದರೆ ರಾಗ ಅಥವಾ ವ್ಯವಹಾರದ ಆಶ್ರಯದಿಂದ ಧರ್ಮವಾಗುವುದಿಲ್ಲ ಆದುದರಿಂದ ಅನಿತ್ಯಭೂತಾರ್ಥವನ್ನು ಗೌಣಮಾಡಿ ನಿಶ್ಚಯದ ದೃಷ್ಟಿಯಲ್ಲಿ ಅದನ್ನು ಅಭೂತಾರ್ಥವೆಂದು ಹೇಳಿದೆ. ಏಕರೂಪವಾದ ಸ್ವಭಾವವನ್ನು ಭೂತಾರ್ಥವೆಂದು ಹೇಳಿದೆ.

ಸಮಯಸಾರದ ಹನ್ನೊಂದನೆಯ ಗಾಥೆಯಲ್ಲಿ ಹೀಗೆ ಹೇಳುತ್ತಾರೆ,-

**ವವಹಾರೋಭೂದತ್ಥೋ ಭೂದತ್ಥೋ ದೇಸಿದೋ ದು ಸುದ್ಧಣಓ ।**
**ಭೂದತ್ಥಮಸ್ಸಿದೋ ಖಲು ಸಮ್ಮಾದಿಟ್ಠೀ ಹವದಿ ಜೀವೋ ॥**

ಪರ್ಯಾಯದ ಸ್ವತಂತ್ರತೆಯನ್ನು ಸ್ವೀಕರಿಸುವವನಿಗೆ ತ್ರಿಕಾಲೀಸ್ವಭಾವದ ಯಥಾರ್ಥಜ್ಞಾನವಾಗುತ್ತದೆ. ಪರ್ಯಾಯದಲ್ಲಿ ವಿವಿಧತೆ ಮತ್ತು ವಿಚಿತ್ರತೆಯಿದೆ ಅದು ನನ್ನ ಭೇದವಿದೆಯೆಂದು ನಿರ್ಣಯ ಮಾಡಿದಲ್ಲದೆ ದ್ರವ್ಯದ ನಿಜವಾದ ಜ್ಞಾನವಾಗುವುದಿಲ್ಲ.

**ಪ್ರಶ್ನೆ :-** ಮೊದಲು ಯಾವುದರ ಜ್ಞಾನ ಮಾಡಿಕೊಳ್ಳಬೇಕು.

**ಉತ್ತರ :-** ಭೂತಾರ್ಥ ತ್ರಿಕಾಲೀ ಶುದ್ಧನಿದ್ದೇನೆಂದು ಮೊದಲು ನಿಶ್ಚಿಯದ ಜ್ಞಾನಮಾಡಿಕೊಂಡಲ್ಲದೆ ಪರ್ಯಾಯದ ಜ್ಞಾನವು ಯಥಾರ್ಥವೆಂದು ಹೇಳಲಾಗುವುದಿಲ್ಲ. ಅಭೇದವಿಲ್ಲದೆ ಭೇದ ಯಾವುದರದು? ವಿಕಾರವು ಸ್ವತಂತ್ರವಾಗುತ್ತದೆಯೆಂದು ಸಾಧಾರಣ ನಿಶ್ಚಿತ ಮಾಡುವುದು, ಆದರೆ ಸ್ವಭಾವದಜ್ಞಾನ ಮಾಡಿಕೊಂಡಲ್ಲದೆ ರಾಗಾದಿ ಪರ್ಯಾಯಗಳು ಜ್ಞಾನವು ಯಥಾರ್ಥವಿಲ್ಲ ನನ್ನ ಜ್ಞಾನವು ನನ್ನ ಅಖಂಡ ಶುದ್ಧ ಸ್ವಭಾವದೊಳಗಿಂದ ಬರುತ್ತದೆಯೆಂದು ನಿಶ್ಚಿತ ಮಾಡಿದರೆ ಆ ಸ್ವ-ಪರ ಪ್ರಕಾಶಕಜ್ಞಾನವು ಪ್ರಕಟವಾಗುತ್ತದೆ ಆ ಜ್ಞಾನವು ತಿಳಿಯುವುದೇನೆಂದರೆ ಈ ಪ್ರಕಾರದ ವ್ಯವಹಾರರತ್ನತ್ರಯದ ಶುಭರಾಗವು ಪರ್ಯಾಯದಲ್ಲಿ ವರ್ತಿಸುತ್ತದೆ ಮತ್ತು ಇಂಥ ನಿಮಿತ್ತಗಳಿದ್ದರೂ ಸಮ್ಯಗ್ದರ್ಶನ

ಅಥವಾ ಸಮ್ಯಗ್ಜ್ಞಾನವು ನಿಮಿತ್ತದೊಳಗಿಂದ ಅಥವಾ ರಾಗದೊಳಗಿಂದ ಬರುವುದಿಲ್ಲ, ಆದರೆ ದ್ರವ್ಯದ ಆಶ್ರಯದಿಂದ ಪ್ರಕಟವಾಗುತ್ತವೆ. ಆದರೆ ಜೀವನು ಪರಿಪೂರ್ಣ ವೀತರಾಗನಾಗುವುದಿಲ್ಲ ಅಲ್ಲಿಯವರೆಗೆ ಸಾಧಕದಶೆಯಲ್ಲಿ ಶುಭರಾಗಗಳು ಬರುತ್ತವೆ. ಪರಿಪೂರ್ಣ ವೀತರಾಗ ಭಗವಂತರಾದವರಿಗೆ ನಯವಿಲ್ಲ. ಅಜ್ಞಾನಿಗೆ ನಯವಿಲ್ಲ, ಸಾಧಕನಿಗೆ ನಯವಿದೆ. ಸಾಧಕಜೀವನು ನಯಜ್ಞಾನದಿಂದ ನಾಲ್ಕು, ಐದು, ಆರನೆಯ ಗುಣಸ್ಥಾನದಲ್ಲಿ ಯಾವ ಪ್ರಕಾರದ ಶುಭರಾಗವಿರುತ್ತದೆ ಅದನ್ನು ತಿಳಿದುಕೊಳ್ಳುತ್ತಾರೆ. ಜಡದ ಪರ್ಯಾಯವು ವ್ಯವಹಾರವಲ್ಲ.

ಈ ಶರೀರ, ಕರ್ಮ ಮೊದಲಾದವು ಪರವಿವೆ, ಮತ್ತು ರಾಗವು ನನ್ನ ಸ್ವರೂಪವಲ್ಲ, ನಾನಂತೂ ಶುದ್ಧ ಚೈತನ್ಯಸ್ವಭಾವಿಯಿದ್ದೇನೆಂಬ ನಿಶ್ಚಯದ ಜ್ಞಾನವುಳ್ಳವನಿಗೇ ರಾಗ-ದ್ವೇಷಾದಿಗಳ ಪರಿಣಾಮಗಳು ವರ್ತಿಸುತ್ತವೆ ಅವನ್ನು ಸಮಯಸಾರದಲ್ಲಿ ವ್ಯವಹಾರವೆಂದು ಹೇಳಿದೆ. ಆದರೆ ನಿಶ್ಚಯದ ಜ್ಞಾನವಿಲ್ಲದೆ ವ್ಯವಹಾರವನ್ನು ಹೇಳಲಾಗುವುದಿಲ್ಲ. ಸಮಯಸಾರದಲ್ಲಿ ಯಾವ ರಾಗಾದಿ ಪರಿಣಾಮಗಳನ್ನು ವ್ಯವಹಾರವೆಂದು ಹೇಳಿದೆ. ಅವನ್ನು ಇಲ್ಲಿ ಅಶುದ್ಧ ನಿಶ್ಚಯದಿಂದ ತನ್ನವೆಂದು ಹೇಳಿ ಜ್ಞಾನ ಮಾಡಿಸಲಾಗಿದೆ.

**೬) ಸಾಧಾರಣ :-** ನಿತ್ಯ ನಿಗೋದದ ಜೀವಗಳು ತಮ್ಮ ಅಧಿಕತರವಾದ ಅಶುಭ ಪರಿಣಾಮಗಳ ಕಾರಣದಿಂದ ನಿಗೋದದಲ್ಲಿ ಉಳಿದಿವೆ, ಕರ್ಮದ ಕಾರಣದಿಂದ ನಿಗೋದತನವಿದೆಯೆಂಬುದಾಗಿಲ್ಲ.

**ಪ್ರಶ್ನೆ :-** ಹಾಗೆಂದರೆ ಏಕಾಂತವಾಗಿ ಹೋಗುವುದಿಲ್ಲವೇನು ?

**ಉತ್ತರ :-** ಜೀವವು ತನ್ನಿಂದ ಇದೆ ಮತ್ತು ಪರದಿಂದ ಇಲ್ಲವೆಂಬುದೇ ಅನೇಕಾಂತವಿದೆ. ತನ್ನ ಧರ್ಮಗಳು ತನ್ನಲ್ಲಿವೆ ಮತ್ತು ಪರದ ಧರ್ಮಗಳು ಪರದಲ್ಲಿ ವೆ.

ಒಂದು ವಸ್ತುವಿನಲ್ಲಿ ವಸ್ತುತ್ವವನ್ನು ಉತ್ಪನ್ನ ಮಾಡುವಂಥ ಅಸ್ತಿ-ನಾಸ್ತಿ ಮೊದಲಾದ ಪರಸ್ಪರ ವಿರುದ್ಧವಾದ ಎರಡು ಶಕ್ತಿಗಳನ್ನು ಪ್ರಕಟಪಡಿಸುವುದು ಅದು ಅನೇಕಾಂತವಿದೆ. ತನ್ನ ವಿರುದ್ಧ ಶಕ್ತಿಗಳಾದಂಥ ಅಸ್ತಿ-ನಾಸ್ತಿ ಮೊದಲಾದವು ತನ್ನಲ್ಲಿಯಿವೆ.

ಸಂಜ್ಞೀ ಜೀವಗಳಿಗೆ ಮನವಿರುವುದರಿಂದ ಅವು ಪುರುಷಾರ್ಥ ಮಾಡುವ ಸಾಧ್ಯತೆಯಿದೆ. ಆದರೆ ಅಸಂಜ್ಞೀ ಜೀವಗಳಿಗೆ ಮನವಿಲ್ಲದಿರುವುದರಿಂದ ಅಲ್ಲಿ ಕರ್ಮದ ಬಲವಿದೆ ಅದಕ್ಕಾಗಿ ಅವು ಪುರುಷಾರ್ಥ ಮಾಡುವ ಸಾಧ್ಯತೆಯಿಲ್ಲವೆಂದು ಅಜ್ಞಾನೀಜೀವರುಗಳು ಹೇಳುತ್ತಾರೆ, ಆದರೆ ಆ ಮಾತು ಅಸತ್ಯವಿದೆ. ಪ್ರತಿಯೊಂದು ಜೀವವು ತನ್ನ ಕಾರಣದಿಂದ ಪುರುಷಾರ್ಥ ಮಾಡುತ್ತದೆ. ಮನವಿದೆಯೆಂದು ಪುರುಷಾರ್ಥ ಮಾಡುತ್ತದೆಯೆಂಬುದಾಗಿಲ್ಲ. ಮತ್ತು ಮನಸ್ಸಿನ ಅಭಾವವಿರುವುದರಿಂದ ಪುರುಷಾರ್ಥವು ನಿಂತುಹೋಗಿದೆಯೆಂಬುದಾಗಿ ಕೂಡ ಇಲ್ಲ.

ಇದು ಜೈನದರ್ಶವಿದೆ. ಸರ್ವಜ್ಞರು ವಸ್ತುಸ್ವಭಾವವನ್ನು ತಿಳಿಸಿಲ್ಲ. ಆದರೆ ವಸ್ತುಗಳು ಹೇಗಿವೆ ಹಾಗೆ ನೋಡಿದ್ದಾರೆ ಮತ್ತು ವಾಣಿಯ ಮೂಲಕ ಬಂದಿದೆ. ವಸ್ತುವು ವಸ್ತುವಿನ ಕಾರಣದಿಂದ ಮತ್ತು ಸರ್ವಜ್ಞರು ಸರ್ವಜ್ಞರ ಕಾರಣದಿಂದಿದ್ದಾರೆ. ನಿತ್ಯನಿಗೋದದ ಜೀವಗಳು ಇಂದಿನವರೆಗೆ ತ್ರಸ ಕೂಡ ಆಗಿಲ್ಲ ಅದು ತಮ್ಮ ಕಾರಣದಿಂದಿದೆ ಇನ್ನು ಶರೀರದಲ್ಲಿ ಅನಂತಜೀವಗಳಿವೆ. ಅವು ಶ್ವಾಸ, ಆಹಾರ ಒಟ್ಟಿಗೆ ತೆಗೆದುಕೊಳ್ಳುತ್ತವೆಂಬ ಯಾವ ಕಥನ ಬರುತ್ತದೆ ಅದು ವ್ಯವಹಾರದ ಕಥನವಿದೆ. ಶರೀರ, ಶ್ವಾಸ, ಆಹಾರ ಮೊದಲಾದ ಭೇದಗಳು ಪುದ್ಗಲದ್ದಿವೆ, ಅವು ಜೀವದ ಭೇದಗಳಿಲ್ಲ. ತನ್ನ ಕಾರಣದಿಂದ ನಿತ್ಯನಿಗೋದ ಅಥವಾ ವ್ಯವಹಾರ ನಿಗೋದರೂಪದಿಂದಿವೆ. ಪರ್ಯಾಯವನ್ನು ಪರದಿಂದೆಂದು ಮನ್ನಿಸಹೋದರೆ ಪರ್ಯಾಯವು ತನ್ನದಾಗಿ ಉಳಿಯುವುದಿಲ್ಲ. ಆದರಿಂದ ದ್ರವ್ಯವು ಪರ್ಯಾಯರಹಿತವಾಗಿ ಹೋಗುವುದು ಹೀಗೆ ಮನ್ನಿಸುವುದರಿಂದ ಜ್ಞಾನವು ಅಸತ್ಯವೆಂದು ಸಿದ್ಧವಾಗುವುದು.

ಇಲ್ಲಿ ಮೊದಲು ನಿಮಿತ್ತದಿಂದ ಭೇದಜ್ಞಾನ ಮಾಡಿಸಲಾಗಿದೆ. ಆತ್ಮನಲ್ಲಿ ಶ್ರದ್ಧೆ, ಜ್ಞಾನ, ಚಾರಿತ್ರ ಮೊದಲಾದ

ತ್ರಿಕಾಲಗುಣಗಳಿವೆ ಅದರ ಎಷ್ಟು ಪರ್ಯಾಯಗಳು ಅಷ್ಟು ಸಮಯಗಳಿವೆ ಮತ್ತು ಎಷ್ಟು ಸಮಯಗಳಿವೆ ಅಷ್ಟು ಪರ್ಯಾಯಗಳಿವೆ. ಮಿಥ್ಯಾತ್ವ, ಅಜ್ಞಾನ ಮೊದಲಾದವುಗಳ ಭಾವವು ತನ್ನ ಕಾರಣದಿಂದಿದೆ. ದರ್ಶನಮೋಹದ ಕಾರಣದಿಂದ ಇಲ್ಲ. ಆ ಭಾವಗಳು ಜಡಕರ್ಮದ ಕಾರಣದಿಂದ ಆದರೆ ಕರ್ಮದ ಕಡೆಗೆ ನೋಡುವುದು ಉಳಿಯಿತು, ಆದರೆ ತನ್ನ ಸ್ವಚತುಷ್ಟಯದ ಎದುರು ನೋಡುವುದುಳಿಯಲಿಲ್ಲ, ಇಂಥ ಜೀವನಿಗೆ ಧರ್ಮವಾಗುವುದಿಲ್ಲ.

ವನಸ್ಪತಿಕಾಯದ ಜೀವಗಳಿಗೆ ಮಿಥ್ಯಾತ್ವ, ಅಜ್ಞಾನ, ಅಸಂಯಮ, ಗತಿಯಭಾವ ಮೊದಲಾದ ಯಾವ ಪರಿಣಾಮಗಳಾಗುತ್ತವೆ ಅವು ಅವುಗಳ ಅಸಂಖ್ಯ ಪ್ರದೇಶದಲ್ಲಿ ಆಗುತ್ತವೆ. ಹೀಗೆ ಕ್ಷೇತ್ರವು ಒಂದಿದ್ದರೂ ಕಾಲವು ಒಂದು ಸಮಯದ್ದಿದೆ ಜ್ಞಾನ-ದರ್ಶನ ಮೊದಲಾದ ಗುಣಗಳು ಅಸಂಖ್ಯಪ್ರದೇಶದಲ್ಲಿದ್ದರೂ ಅವು ತ್ರಿಕಾಲವಿವೆ ಹೀಗೆ ರಾಗವು ಒಂದು ಸಮಯದಿದ್ದರೂ ಅದು ತನ್ನ ಕಾರಣದಿಂದ ಇದೆ. ಅದು ಜಡದಲ್ಲಿಲ್ಲ ಮತ್ತು ಜಡದ ಕಾರಣದಿಂದ ಕೂಡ ಇಲ್ಲ. ಹೀಗೆ ಸ್ವತಂತ್ರಜ್ಞಾನ ಮಾಡಿಕೊಳ್ಳಬೇಕಾಗುವುದು.

ಇನ್ನು ನಿಗೋದದೊಳಗಿಂದ ಹೊರಟು ಯಾವುದೇ ಜೀವವು ಮನುಷ್ಯವಾದರೆ ಕರ್ಮವು ಮಂದವಾಗುವುದರಿಂದ ಮನುಷ್ಯನಾದನೆಂಬುದಾಗಿಲ್ಲ. ಆದರೆ ತನ್ನ ಕಾರಣದಿಂದ ಮೇಲೆ ಬಂದಿದ್ದಾನೆ. ಹೇಗೆ ದ್ರವ್ಯ-ಗುಣಗಳು ಸ್ವತಂತ್ರವಿವೆ ಹಾಗೆ ಪರ್ಯಾಯವು ಕೂಡ ಸ್ವತಂತ್ರವಿದೆ, ಯಾರೂ ಅದರ ಕರ್ತೃವಿಲ್ಲ. ಈ ಗಾಥೆಯಲ್ಲಿ ಶಬ್ದಗಳು ಕಡಿಮೆಯಿದ್ದರೂ ಅವುಗಳ ಹಿಂದೆ ಭಾವವು ವಿಪುಲವಿದೆ. ಭ. ಕುಂದಕುಂದಾಚಾರ್ಯದೇವರು ಮತ್ತು ಅಮೃತಚಂದ್ರಾಚಾರ್ಯದೇವರು ಭಾವಲಿಂಗೀ ಸಮರ್ಥ ಆಚಾರ್ಯರಿದ್ದರು, ಅವರು ತಮ್ಮ ಸ್ವಭಾವದ ಆಶ್ರಯದಿಂದ ಮೂರು ಕಷಾಯಗಳ ನಾಶಮಾಡಿದ್ದರು, ಮತ್ತು ಕರ್ಮಗಳಂತೂ ತಮ್ಮ ಕಾರಣದಿಂದ ನಾಶವಾಗಿದ್ದವು. ಇಂಥ ಚಾರಿತ್ರವಂತರಾದ ಮುನಿರಾಜರುಗಳಿಗೆ ವಿಕಲ್ಪವುಂಟಾಯಿತು ಮತ್ತು ಗ್ರಂಥದ ರಚನೆಯು ಗ್ರಂಥದ ಕಾರಣದಿಂದ ಆಯಿತು. ಆಚಾರ್ಯರು ಹೇಳುತ್ತಾರೆ. ನಮ್ಮಿಂದ ಪುದ್ಗಲದಲ್ಲಿ ಏನೂ ಆಗುವುದಿಲ್ಲ ಮತ್ತು ಪುದ್ಗಲದಿಂದ ನಮ್ಮಲ್ಲಿ ಭೇದಗಳಾಗುವುದಿಲ್ಲ. ಅವರು ಮುಂದುವರೆದು ಹೇಳುವುದೇನೆಂದರೆ ಸೋದರನೇ ! ಪ್ರತಿಯೊಂದು ಜೀವದ ಪರಿಣಾಮವು ತನ್ನಿಂದ ಆಗುತ್ತದೆ, ಇದು ನಿನ್ನ ಸ್ವತಂತ್ರತೆಯ ಮಾತಾಯಿತು. ನಿಗೋದದಲ್ಲಿ ಮೂರು ಭಾವಗಳಿದ್ದು ಪಾರಿಮಾಮಿಕಭಾವವು ತ್ರಿಕಾಲವಿದೆ, ಔದಯಿಕ ಹಾಗೂ ಕ್ಷಯೋಪಶಮಭಾವಗಳು ಪರ್ಯಾಯದಲ್ಲಿವೆ ಅದನ್ನು ನಿಗೋದದ ಜೀವವು ಸ್ವತಂತ್ರವಾಗಿ ಮಾಡುತ್ತದೆ.

೧) ಆ ಉದಯಭಾವವಿಲ್ಲದಿದ್ದರೆ ಸಿದ್ಧದೆಶೆಯಾಗಿ ಹೋಗುವುದು.

೨) ಆ ಜ್ಞಾನಾದಿಗಳ ಕ್ಷಯೋಪಶಮಭಾವವಿಲ್ಲದಿದ್ದರೆ ಕೇವಲದಶೆಯಾಗಿ ಹೋಗುವುದು.

೩) ಆ ತ್ರಿಕಾಲೀ ಪಾರಿಣಾಮಿಕಭಾವವಿಲ್ಲದಿದ್ದರೆ ಜೀವದ ಅಭಾವವಾಗಿ ಹೋಗುವುದು.

ತತ್ತ್ವಾರ್ಥಸೂತ್ರದಲ್ಲಿ ರಾಗ ಮೊದಲಾದ ಔದಯಿಕಭಾವಗಳನ್ನು ಸ್ವತಂತ್ರವೆಂದು ಹೇಳಿದ್ದಾರೆ ಮತ್ತು ಸಮಯಸಾರದಲ್ಲಿ ರಾಗಾದಿಗಳನ್ನು ಪರತತ್ತ್ವವೆಂದು ಹೇಳಿದ್ದಾರೆ. ಸಮಯಸಾರದಲ್ಲಿ ದೃಷ್ಟಿಪ್ರಧಾನ ಕಥನವಿದ್ದು ವಿಕಾರವು ಬಿಟ್ಟುಹೋಗಿರುವುದರಿಂದ ಅದನ್ನು ಪರತತ್ತ್ವವೆಂದು ಹೇಳಿದೆ. ಮತ್ತು ಜಡಪದಾರ್ಥಗಳನ್ನಂತೂ ಆತ್ಮನು ಬಿಡುವುದಿಲ್ಲ ಏಕೆಂದರೆ ಅವನ್ನೆಂದೂ ಗ್ರಹಣ ಮಾಡಿಯೇ ಇಲ್ಲ, ಆದರೆ ಆತ್ಮನು ರಾಗವನ್ನು ಬಿಟ್ಟಿದ್ದಾನೆ ಅಥವಾ ನಾಶಮಾಡಿದ್ದಾನೆಂದು ಹೇಳುವುದು ಅದು ವ್ಯವಹಾರವಿದೆ. ಯಾವ ಸಮಯದಲ್ಲಿ ರಾಗದ ಉತ್ಪಾದವಿದೆ ಅದನ್ನು ಆ ಸಮಯದಲ್ಲಿ ಹೇಗೆ ನಾಶಮಾಡುವುದು ? ಮತ್ತು ಯಾವ ರಾಗವಿಲ್ಲ ಅದನ್ನು ಹೇಗೆ ನಾಶಮಾಡಿದನು ? ಸ್ವಭಾವದೃಷ್ಟಿಪೂರ್ವಕವಾಗಿ ಲೀನತೆ ಮಾಡಿದರೆ ರಾಗವು ಉತ್ಪನ್ನವಾಗುವುದಿಲ್ಲ ಆಗ ರಾಗವನ್ನು ಬಿಟ್ಟುಕೊಟ್ಟನು ಅಥವಾ ನಾಶಮಾಡಿದನೆಂದು ಕಥನ ಮಾಡಲಾಗುತ್ತದೆ.

ಇಲ್ಲಿ ಸಾಧಾರಣ ವನಸ್ಪತಿಕಾಯದ ಮಾತು ನಡೆಯುತ್ತಿದೆ. ಗೊಮ್ಮಟಸಾರದ ೧೯೧ನೇ ಗಾಥೆಯಲ್ಲಿ 'ಭಾವಕಲಂಕ ಸುಪಉರಾ' ಎಂದು ಹೇಳಿದೆ. ಎಂದರೆ ನಿಗೋದದ ಜೀವಗಳು ತಮ್ಮ ಅತ್ಯಂತ ಕೀಳು ಅಶುಭ ಪರಿಣಾಮದ ಕಾರಣದಿಂದ ನಿಗೋದದ ಅವಸ್ಥೆಯನ್ನು ಬಿಡುವುದಿಲ್ಲ. ಅಂದರೆ ಅಲ್ಲಿ ಅವು ಇರುತ್ತವೆ.

**ಪ್ರಶ್ನೆ ಃ-** ಕರ್ಮದ ಪ್ರಭಾವವು ಜೀವದ ಮೇಲೆ ಬೀಳುತ್ತದೆಯಲ್ಲವೇ ?

**ಉತ್ತರ ಃ-** ಇಲ್ಲ, ಒಂದು ದ್ರವ್ಯದಲ್ಲಿ ಇನ್ನೊಂದು ದ್ರವ್ಯದ ಅಭಾವವಿದೆ. ಅಭಾವರೂಪವಿದ್ದುದು ಪರಿಣಾಮ ಹೇಗೆ ಮಾಡುತ್ತದೆ ? ಅದು ಪರಿಣಾಮ ಮಾಡಿದರೆ ಭಾವರೂಪವಾಗಿ ಹೋಗುವುದು, ಅಭಾವರೂಪ ಉಳಿಯುವುದಿಲ್ಲ ಒಂದು ಸ್ಕಂಧದ ಪರ್ಯಾಯದಲ್ಲಿ ಒಂದು ಪರಮಾಣುವಿನ ಪರ್ಯಾಯವು ಇನ್ನೊಂದನ್ನು ತಡೆಯುವುದಿಲ್ಲ. ಎರಡು ಗುಣಗಳು ಅಧಿಕವಾದರೆ ಸ್ಕಂಧರೂಪವಾಗುತ್ತದೆಂದ ಮೇಲೆ ಒಂದು ದ್ರವ್ಯವು ಇನ್ನೊಂದು ದ್ರವ್ಯದಲ್ಲಿ ಪ್ರಭಾವ ಬೀರುವುದು ಅದು ಅಸಂಭವವಿದೆ. ಯಾವುದೇ ಕಾರ್ಯವು ಪರ್ಯಾಯದಲ್ಲಿ ಆಗುತ್ತದೆ, ದ್ರವ್ಯ-ಗುಣಗಳಲ್ಲಿ ಕಾರ್ಯವಾಗುವುದಿಲ್ಲ. ಆ ಕಾರ್ಯವನ್ನು ಪರತಂತ್ರವೆಂದು ಮನ್ನಿಸಹೋದರೆ ಸ್ವತಂತ್ರವಾಗುವ ಅವಸರವೇ ಉಳಿಯಲಾರದು. ಅದಕ್ಕಾಗಿ ಇಲ್ಲಿ ಸ್ವತಂತ್ರತೆಯ ಜ್ಞಾನ ಮಾಡಿಸಲಾಗಿದೆ.

**ದ್ವೀಂದ್ರಿಯ ಃ-** ದ್ವೀಂದ್ರಿಯ ಶರೀರವು ಅದು ಜೀವವಲ್ಲ, ಭಾವೇಂದ್ರಿಯತೆಯು ಜೀವದ ಭೇದವಿದೆ. ಮತ್ತು ಜ್ಞಾನಾವರಣೀಯ ಕರ್ಮದ ಕ್ಷಯೋಪಶಮದ ಕಾರಣದಿಂದ ಜ್ಞಾನದ ಪ್ರಕಟತೆಯಿಲ್ಲ ಮತ್ತು ನಾಮಕರ್ಮದ ಕಾರಣದಿಂದ ದ್ವೀಂದ್ರಿಯದ ಶರೀರವಿಲ್ಲ. ಕಾರ್ಮಾಣ ಶರೀರದ ಪರಮಾಣುವಿದೆ, ಇಂದ್ರಿಯ ಔದಾರಿಕದ ಪರಮಾಣುವಿದೆ, ಎರಡರ ಜಾತಿಯು ಬೇರೆಯಿದೆ. ಒಂದು ಪರಮಾಣುವಿನ ಪರ್ಯಾಯವು ಇನ್ನೊಂದು ಪರಮಾಣುವಿನ ಪರ್ಯಾಯವನ್ನು ನಿರ್ಮಿಸುವುದಿಲ್ಲ. ಅದಕ್ಕಾಗಿ ಕರ್ಮದ ಪರಮಾಣುವಿನಿಂದ ಅಥವಾ ಶರೀರದ ಪರಮಾಣುವಿನಿಂದ ಆತ್ಮನಲ್ಲಿ ಕಾರ್ಯವಾಗುತ್ತದೆಂಬುದು ಸಂಭವವಿಲ್ಲ. ಎಲ್ಲವೂ ಸ್ವತಂತ್ರವಿವೆ. ಹೀಗೆ ಸ್ವತಂತ್ರಜ್ಞಾನ ಮಾಡಿಕೊಂಡು ನಾನು ರಾಗದಷ್ಟೇ ಇಲ್ಲ. ನಾನಂತೂ ಜ್ಞಾಯಕನಿದ್ದೇನೆಂದು ಜ್ಞಾನಮಾಡಿಕೊಳ್ಳುವುದು ಅದು ಧರ್ಮವಿದೆ. ಇಂಥ ಅರಿವಿಲ್ಲದೆ ವ್ರತ, ತಪಸ್ಸುಗಳೆಲ್ಲವೂ ಅಂಕವಿಲ್ಲದ ಸೊನ್ನೆಗಳಂತಿವೆ.

**೮) ತ್ರೀಂದ್ರಿಯ ಃ-** ಅಂತರ್ಯದಲ್ಲಿ ಮೂರು ಭಾವೇಂದ್ರಿಯಗಳ ಪ್ರಕಟತೆಯಾಗುವುದು ಅದು ಜೀವದ ಭೇದವಿದೆ. ತನ್ನ ಜ್ಞಾನದ ಉತ್ಪಾದವು ತನ್ನ ಕಾರಣದಿಂದಿದೆ ಮತ್ತು ಜ್ಞಾನಾವರಣೀಯ ಕರ್ಮದ ಕ್ಷಯೋಪಶಮವು ಕರ್ಮದ ಕಾರಣದಿಂದಿದೆ.

**ಪ್ರಶ್ನೆ ಃ-** ಪುದ್ಗಲದಲ್ಲಿ ಮತ್ತು ಜೀವದಲ್ಲಿ ಏಕಕಾಲಕ್ಕೆ ಏಕಪ್ರಕಾರದ ಪರಿಣಮನವಾಗುವುದರಿಂದ ಭ್ರಾಂತಿಯಿದೆ?

**ಉತ್ತರ ಃ-** ಇಲ್ಲ ; ತನ್ನ ಅಜ್ಞಾನದ ಕಾರಣದಿಂದ ಭ್ರಾಂತಿಯಿದೆ. ಸೂರ್ಯನ ಉದಯವಾಗುತ್ತದೆ ಮತ್ತು ಕಮಲವು ಅರಳುತ್ತದೆ, ಗಾಳಿಯು ಬೀಸುತ್ತದೆ ಮತ್ತು ನೀರಿನಲ್ಲಿ ಅಲೆಗಳು ಏಳುತ್ತವೆ. ಹೀಗೆ ಇವೆಲ್ಲವೂ ಏಕಕಾಲಕ್ಕೆ ಆಗುತ್ತಿದ್ದರೂ ಯಾವುದರ ಕಾರಣದಿಂದ ಯಾವುದೂ ಇಲ್ಲ. ಯಾವುದೂ ಯಾವುದರಲ್ಲಿ ಪ್ರಭಾವ ಬೀರುವುದು ಅಥವಾ ಪ್ರೇರಣೆ ಕೊಡುತ್ತದೆಂಬುದು ಸಂಭವಿಸುವುದಿಲ್ಲ. ಯಾವ ಪರ್ಯಾಯವು ಆಗುವುದಿರುವುದಿಲ್ಲ ಮತ್ತು ಆಗುತ್ತದೆಂಬುದು ಕೂಡ ಇಲ್ಲ. ಜೀವ ಮತ್ತು ಪುದ್ಗಲ ಮೊದಲಾದ ಪ್ರತಿಯೊಂದು ಪದಾರ್ಥದ ಯಾವ ಸಮಯದಲ್ಲಿ ಯಾವ ಪರ್ಯಾಯವಾಗುವುದಿದೆ ಅದು ಆಗೇ ಆಗುವುದು, ಜೀವದ ಭೇದವು ಜೀವದಲ್ಲಿದೆ ಮತ್ತು ಪುದ್ಗಲದ ಭೇದವು ಪುದ್ಗಲದಲ್ಲಿದೆ. ಹೀಗೆ ಭೇದ ತಿಳಿದುಕೊಂಡರೆ ದ್ರವ್ಯದೃಷ್ಟಿಯಾಗುವ ಅವಕಾಶವಿರುವುದು.

ಆತ್ಮನು ಸಾಮಾನ್ಯ ಸ್ವಭಾವದಿಂದ ಏಕರೂಪನಿದ್ದಾನೆ ಮತ್ತು ವಿಶೇಷರೂಪದ ಭೇದಗಳಾಗುತ್ತದೆ ಅದು ತನ್ನ ಕಾರಣದಿಂದ ಆಗುತ್ತದೆ. ಭೇದವು ನಿಮಿತ್ತದ ಕಾರಣದಿಂದ ಆಗುವುದಿಲ್ಲ. ಇಲ್ಲಿ ಹತ್ತು ಪ್ರಕಾರದಿಂದ ಜೀವದ

ಭೇದ ನಡೆದಿದೆ.

**೬) ಚತುರಿಂದ್ರಿಯ :-** ಜೀವವು ಚತುರಿಂದ್ರಿಯ ರೂಪವಾಗಿ ಆದುದು ಅದು ತನ್ನ ಯೋಗ್ಯತೆಯಿಂದ ಆಗಿದೆ. ಜೀವವು ಕರ್ಮದ ಕಾರಣದಿಂದ ಚತುರಿಂದ್ರಿಯರೂಪವಾಗಿಲ್ಲ. ಅದರಂತೆ ನಾಲ್ಕು ಇಂದ್ರಿಯಗಳಿವೆಯೆಂದು ಜೀವವು ಚತುರಿಂದ್ರಿಯವಿದೆಯೆಂಬುದಾಗಿಲ್ಲ, ಜೀವವು ತನ್ನ ಕಾರಣದಿಂದ ಆ ರೂಪವಾಗಿದೆ. ಜಡಪರಮಾಣುವಿನ ಕಾರಣದಿಂದ ಜೀವದಲ್ಲಿ ಭೇದಗಳಾಗುವುದಿಲ್ಲ. ನೊಣ, ದೀಪದಹುಳು ಮೊದಲಾದ ಜೀವಗಳ ಶರೀರವು ಎತ್ತರದಲ್ಲಿ ನಡೆಯುತ್ತವೆಂದು ಅವುಗಳ ಜೀವಗಳು ಎತ್ತರದಲ್ಲಿ ನಡೆಯುತ್ತವೆಂಬುದಾಗಿಲ್ಲ, ಶರೀರವು ಶರೀರದ ಕಾರಣದಿಂದ ಮತ್ತು ಆತ್ಮನು ಆತ್ಮನ ಕಾರಣದಿಂದ ಎತ್ತರಕ್ಕೆ ಹೋಗುತ್ತಾನೆ.

**೧೦) ಪಂಚೇಂದ್ರಿಯ :-** ನಾರಕೀ, ದೇವ, ಮನುಷ್ಯ, ತಿರ್ಯಂಚದ ಶರೀರಗಳು ಕಂಡುಬರುತ್ತವೆ ಅವು ಪಂಚೇಂದ್ರಿಯ ಜೀವಗಳಿಲ್ಲ. ಆಂತರ್ಯದಲ್ಲಿ ಜ್ಞಾನದ ವಿಕಾಸವಿದೆ ಅದು ತನ್ನ ಭೇದವಿದೆ. ಪ್ರಕಟತೆಯಿದೆಯೆಂದು ಐದು ಇಂದ್ರಿಯಗಳು ದೊರಕಿವೆಯೆಂಬುದಾಗಿಲ್ಲ ಮತ್ತು ಪಂಚೇಂದ್ರಿಯಗಳು ದೊರಕಿವೆಂದು ಪ್ರಕಟತೆಯಿದೆಯೆಂದು ಕೂಡ ಇಲ್ಲ. ಪಂಚೇಂದ್ರಿಯಗಳು ಪುದ್ಗಲದ ಸ್ಕಂಧವಿವೆ, ಅವು ಪುದ್ಗಲದ ಕಾರಣದಿಂದಿವೆ ಜೀವದ ಭಾವ ಪಂಚೇಂದ್ರಿಯರೂಪವು ಜೀವದ ಕಾರಣದಿಂದಿದೆ, ಯಾವುದರ ಕಾರಣದಿಂದ ಯಾವುದೂ ಇಲ್ಲ. ಪಂಚೇಂದ್ರಿಯಗಳನ್ನು ವಶದಲ್ಲಿಟ್ಟುಕೊಳ್ಳುವುದು ಧರ್ಮವಿದೆಯೆಂದು ಜನರು ಹೇಳುತ್ತಾರೆ. ಆದರೆ ಸೋದರನೇ ! ಎಲ್ಲಿಯ ಪಂಚೇಂದ್ರಿಯಗಳು? ಈ ಪಂಚೇಂದ್ರಿಗಳನ್ನು ನೋಡಿದರೆ ಅವಂತೂ ಜಡವಿವೆ. ಅವನ್ನು ವಶಮಾಡಿಕೊಂಡಿದ್ದೇನೆಂದು ಮನ್ನಿಸುವುದು ಅದು ಮಿಥ್ಯಾಭಾವವಿದೆ. ಜೀವನು ಅವನ್ನು ವಶಪಡಿಸಿಕೊಳ್ಳುವ ಸಾಧ್ಯತೆಯಿಲ್ಲ. ಭಾವಪಂಚೇಂದ್ರಿಯಗಳು ತಮ್ಮ ತಮ್ಮ ವಿಷಯಗಳತ್ತ ತುಂಡು ತುಂಡಾಗಿ ತಿರುಗಿವೆ ಅವನ್ನು ಅಖಂಡಸ್ವಭಾವದ ಶ್ರದ್ಧೆ-ಜ್ಞಾನಗಳ ಕಡೆಗೆ ತಿರುಗಿಸಿ ಅಖಂಡ ಜ್ಞಾನೋಪಯೋಗ ಮಾಡುವುದು ಅದು ಪಂಚೇಂದ್ರಿಯಗಳನ್ನು ಜಯಿಸುವಿಕೆಯಿದೆ.

ನಾನು ಜ್ಞಾಯಕನಿದ್ದೇನೆಂಬ ಸ್ವಭಾವದಲ್ಲಿ ಏಕಾಗ್ರವಾದರೆ ಭಾವೇಂದ್ರಿಯಗಳು ವಶವಾಗುತ್ತವೆ. ಜಡಇಂದ್ರಿಯಗಳನ್ನು ವಶದಲ್ಲಿಟ್ಟುಕೊಳ್ಳಬೇಕಾಗುವುದಿಲ್ಲ. ಹೀಗೆ ಹತ್ತು ಪ್ರಕಾರದ ಜೀವವನ್ನು ಹೇಳಲಾಯಿತು.

ಪ್ರತಿಯೊಂದು ಭೇದವು ಜೀವದ ಕಾರಣದಿಂದಿದೆ. ಅಜ್ಞಾನೀಜೀವರುಗಳು ರಾಗ-ದ್ವೇಷ, ಉಪಶಮ, ಕ್ಷಾಯಿಕಭಾವ ಮೊದಲಾದ ಕರ್ಮದಿಂದ ಮನ್ನಿಸುತ್ತಾರೆ. ಆದರೆ ಪ್ರತಿಯೊಂದು ಪರ್ಯಾಯವು ಸ್ವತಂತ್ರವಿದೆಯೆಂದು ಮನ್ನಿಸಿದರೆ ದ್ರವ್ಯವನ್ನು ಸ್ವತಂತ್ರವೆಂದು ಮನ್ನಿಸುವ ಶ್ರದ್ಧೆಯು ಪ್ರಕಟವಾಗುತ್ತದೆಂದು ಆಚಾರ್ಯದೇವರು ಹೇಳುತ್ತಾರೆ.

ಸಿದ್ಧದಶೆಯನ್ನು ಪ್ರಾಪ್ತಮಾಡಿಕೊಂಡ ಜೀವನು ಊರ್ಧ್ವಗತಿಯಿಂದ ಹೋಗುತ್ತಾನೆ ಮತ್ತು ಸಂಸಾರಿಯಿದ್ದವನು ಆರು ದಿಶೆಗಳಲ್ಲಿ ಹೋಗುತ್ತಾನೆ. ಜೀವನು ಮುಕ್ತನಿರಲಿ ಅಥವಾ ಸಂಸಾರಿಯಿರಲಿ ಅವನು ತನ್ನ ಕಾರಣದಿಂದ ಗಮನ ಮಾಡುತ್ತಾನೆ. ಕರ್ಮದ ಕಾರಣದಿಂದ ಗಮನ ಮಾಡುವುದಿಲ್ಲ.

ಪಯಡಿಟ್ಠಿದಿಅಣುಭಾಗಪ್ಪದೇಸಬಂಧೇಹಿಂ ಸವ್ವದೋ ಮುಕ್ಕೋ ।
ಉಡ್ಢಂ ಗಚ್ಛದಿ ಸೇಸಾ ವಿದಿಸಾವಜ್ಜಂ ಗದಿಂ ಜಂತಿ ।।೭೩।।

**ಜೀವ ಪ್ರಕೃತಿ-ಸ್ಥಿತಿ-ಅನುಭಾಗ ಮೇಣ್ ಪ್ರದೇಶಬಂಧದಿಂ ಪೂರ್ಣಮುಕ್ತನಾಗಿ ।**
**ಊರ್ಧ್ವಗಮನ ಮಾಡಿದರೆ ಶೇಷಜೀವ ವಿದಿಶಗಳ ಬಿಟ್ಟು ಗಮನಿಸುವವು ।।೭೩।।**

ಶುದ್ಧ ಜೀವವು ನಾಲ್ಕು ಪ್ರಕಾರದ ಬಂಧಗಳಿಂದ ಬಿಡುಗಡೆಯಾಗುವುದು. ಕರ್ಮಗಳ ಸ್ವಭಾವವು ಅದು ಪ್ರಕೃತಿಯಿದೆ, ಕರ್ಮಗಳ ಇರುವಿಕೆಯ - ಸ್ಥಿತಿಯು ಅದು ಸ್ಥಿತಿಯಿದೆ, ಕರ್ಮ ಪರಮಾಣುಗಳ ಸಂಖ್ಯೆಯು ಅದು ಪ್ರದೇಶವಿದೆ

ಮತ್ತು ಫಲದಾನ ಶಕ್ತಿಯು ಅದು ಅನುಭಾಗವಿದೆ. ಈ ನಾಲ್ಕು ಪ್ರಕಾರದ ಬಂಧಗಳಿಂದ ಸರ್ವಾಂಗ ಅಸಂಖ್ಯ ಪ್ರದೇಶಗಳಿಂದ ಬಿಡುಗಡೆಯಾಗಿ ಶುದ್ಧಜೀವವು ಸಿದ್ಧಗತಿಯನ್ನು ಪಡೆಯುತ್ತದೆ. ಒಂದು ಸಮಯದಲ್ಲಿ ಊರ್ಧ್ವಗತಿಯ ಸ್ವಭಾವದಿಂದ ಮೋಕ್ಷಸ್ಥಾನವನ್ನು ತಲುಪುತ್ತದೆ.

**ಭಾವಾರ್ಥ :-** ಎಂಟು ಕರ್ಮಗಳಿಂದ ರಹಿತನಾದ ಜೀವನು ಒಂದು ಸಮಯದಲ್ಲಿ ತನ್ನ ಊರ್ಧ್ವಗತಿಯ ಸ್ವಭಾವದಿಂದ ಶ್ರೇಣಿಬದ್ಧ ಪ್ರದೇಶಗಳ ಮೂಲಕ ಮೋಕ್ಷಸ್ಥಾನದಲ್ಲಿ ತಲುಪಿಬಿಡುತ್ತಾನೆ.

ಸಂಸಾರಿಗಳ ಸ್ವಭಾವವು ಆರು ದಿಶೆಗಳಲ್ಲಿ ಹೋಗುವುದಿದೆ ಮತ್ತು ಸಿದ್ಧರ ಸ್ವಭಾವವು ಒಂದು ಸಮಯದಲ್ಲಿ ಲೋಕಾಗ್ರಕ್ಕೆ ಹೋಗುವುದಿದೆ.

'ಏಕಸಮಯಲಕ್ಷಣಾವಿಗ್ರಹಗತ್ಯೋರ್ಧ್ವ ಗಚ್ಛತಿ' ಎಂದು ಜಯಸೇನಾಚಾರ್ಯದೇವರ ಟೀಕೆಯಲ್ಲಿ ಬರುತ್ತದೆ. ಊರ್ಧ್ವಗಮನ-ಅವಿಗ್ರಹಗತಿಯ ಸಮಯವೇ ಒಂದು ಇದೆ, ಒಂದು ಸಮಯವೇ ಅದರ ಲಕ್ಷಣವಿದೆ. ಅವರು ಲೋಕಾಗ್ರದಲ್ಲಿ ತಡೆಯುತ್ತಾರೆ ಅದು ತಮ್ಮ ಕಾರಣದಿಂದ ತಡೆಯುತ್ತಾರೆ, ಊರ್ಧ್ವಕ್ಕೆ ಹೋಗುವಂಥದೇ ಅವರ ಸ್ವಭಾವವಿಲ್ಲ. ಒಂದೇ ಸಮಯ ಊರ್ಧ್ವಗಮನ ಮಾಡುವ ಸ್ವಭಾವವಿದೆ. ಶುದ್ಧ ಜೀವನು ಯಾವ ಸ್ಥಾನದಿಂದ ಮುಕ್ತದಶೆಯನ್ನು ಪಡೆಯುತ್ತಾನೆ ಅಲ್ಲಿಂದ ಸಮಶ್ರೇಣಿಯಾಗಿ ಊರ್ಧ್ವಕ್ಕೆ ಹೋಗುತ್ತಾನೆ ಮತ್ತು ಲೋಕಾಗ್ರದಲ್ಲಿ ವಿರಾಜಿಸುತ್ತಾನೆ. ಧರ್ಮಾಸ್ತಿಕಾಯದ ಅಭಾವವಿರುವುದರಿಂದ ಸಿದ್ಧರು ಲೋಕದಿಂದ ಮುಂದೆಹೋಗುವ ಸಾಧ್ಯತೆಯಿಲ್ಲವೆಂಬುದಾಗಿಲ್ಲ, ಅವರು ತಮ್ಮ ಕಾರಣದಿಂದ ಹೋಗುವುದಿಲ್ಲ. ಹೀಗೆ ಸ್ವಭಾವವಿದೆ ಮತ್ತು ಅಲ್ಲಿ ಧರ್ಮದ್ರವ್ಯದ ಅಭಾವವು ನಿಮಿತ್ತವಿದೆ, ನಿಮಿತ್ತವನ್ನು ತಿಳಿಸಿಕೊಡುವುದಿರುವಾಗ ಧರ್ಮದ್ರವ್ಯದ ಅಭಾವದ ಕಾರಣದಿಂದ ಸಿದ್ಧರು ಅಲೋಕದಲ್ಲಿ ಹೋಗುವುದಿಲ್ಲವೆಂದು ಹೇಳಲಾಗುತ್ತದೆ. ಇಲ್ಲಿ ಸಿದ್ಧರ ಸ್ವತಂತ್ರಸ್ವಭಾವವನ್ನು ತಿಳಿಸಿದ್ದಾರೆ. ಆ ಧರ್ಮಾಸ್ತಿಕಾಯದ ಅಭಾವದ ಕಾರಣದಿಂದ ಜೀವನು ನಿಂತುಹೋದರೆ ಅದು ಜೀವದ ಭೇದವಾಗಿ ಉಳಿಯುವುದಿಲ್ಲ, ಅಭಾವದ ಭೇದವಾಗಿ ಹೋಗುತ್ತದೆ. ಇಲ್ಲಿ ಸಿದ್ಧರ ಊರ್ಧ್ವಗಮನದ ಪರ್ಯಾಯವನ್ನು ಸ್ವತಂತ್ರವೆಂದು ತಿಳಿಸಿ ಜೀವದ ಭೇದವನ್ನು ತಿಳಿಸಿಕೊಡುವುದಿತ್ತು.

ಉಳಿದ ಸಂಸಾರೀ ಜೀವಗಳು ಎಂದರೆ ನಿಗೋದದಿಂದ ಪಂಚೇಂದ್ರಿಯದವರೆಗಿನ ಜೀವಗಳು ನಾಲ್ಕು ಮೂಲೆಗಳನ್ನು ಬಿಟ್ಟು ಊರ್ಧ್ವ, ಅಧೋ, ಪೂರ್ವ, ಪಶ್ಚಿಮ, ಉತ್ತರ, ದಕ್ಷಿಣವೆಂದು ಆರು ದಿಶೆಗಳಲ್ಲಿ ಹೋಗುವುದು ಸ್ವಭಾವವಿದೆ. ಸ್ವರ್ಗದಲ್ಲಿ ಹೋಗಲಿ ಅಥವಾ ನರಕದಲ್ಲಿ ಹೋಗಲಿ ಅದು ತಮ್ಮ ಯೋಗ್ಯತೆಯಿಂದ ಹೋಗುತ್ತವೆ, ಕರ್ಮದ ಕಾರಣದಿಂದ ಹೋಗುವುದಿಲ್ಲ.

ಸಂಸಾರೀಜೀವಗಳು ಬೇರೆ ಬೇರೆ ದೇಹದಲ್ಲಿ ಎಷ್ಟು ಇರುವುದಿದೆ ಅಷ್ಟು ಪ್ರಮಾಣದಲ್ಲಿ ಜೀವಗಳು ಇರುತ್ತವೆ ಅದು ತಮ್ಮ ಕಾರಣದಿಂದ ಇರುತ್ತವೆ, ಕರ್ಮದ ಕಾರಣದಿಂದ ಇರುವುದಿಲ್ಲ ಮತ್ತು ಮುಕ್ತವಾದರು ಕೂಡ ತಮ್ಮ ಕಾರಣದಿಂದ ಆಗುತ್ತಾರೆ.

**ಭಾವಾರ್ಥ :-** ಮೋಕ್ಷಗಾಮಿ ಜೀವನು ಊರ್ಧ್ವಗಮನ ಸ್ವಭಾವದಿಂದ ಒಂದು ಸಮಯದಲ್ಲಿ ಲೋಕಾಗ್ರದಲ್ಲಿ ನೆಲೆಸುತ್ತಾನೆ. ಉಳಿದ ಸಮಸ್ತ ಜೀವಗಳು ಆರು ದಿಶೆಗಳಲ್ಲಿ ಗಮನಮಾಡುತ್ತವೆ, ನಾಲ್ಕು ವಿದಿಶೆಗಳಲ್ಲಿ ಹೋಗುವುದಿಲ್ಲ.

ಈ ಪ್ರಕಾರ ಜೀವನು ತನ್ನ ಕರ್ತಾ-ಭೋಕ್ತಾ ಇದ್ದಾನೆ. ಕರ್ಮಸಹಿತವಿರಲಿ, ಕರ್ಮರಹಿತವಿರಲಿ, ಊರ್ಧ್ವಗಮವಿರಲಿ ಅಥವಾ ಆರು ದಿಶೆಗಳಲ್ಲಿ ಗಮನವಿರಲಿ ಅದು ತನ್ನ ಕಾರಣದಿಂದಿದೆ. ಹೀಗೆ ೭೩ ಗಾಥೆಗಳ

ಸ್ಪಷ್ಟೀಕರಣವಾಯಿತು.

ಇಲ್ಲಿಗೆ ಜೀವದ್ರವ್ಯದ ಅಸ್ತಿಕಾಯದ ವ್ಯಾಖ್ಯಾನವು ಪೂರ್ಣವಾಯಿತು.

ಈಗ ಪುದ್ಗಲ ದ್ರವ್ಯಾಸ್ತಿಕಾಯದ ವ್ಯಾಖ್ಯಾನ ಮಾಡುತ್ತಾರೆ ಅದರಲ್ಲಿ ಮೊದಲು ಪುದ್ಗಲದ ಭೇದ ಹೇಳುತ್ತಾರೆ.

**ಖಂಧಾ ಯ ಖಂಧದೇಸಾ ಖಂಧಪದೇಷಾ ಯ ಹೋಂತಿ ಪರಮಾಣೂ ।**
**ಇದಿ ತೇ ಚದುವ್ವಿಯಪ್ಪಾ ಪೋಗ್ಗಲಕಾಯಾ ಮುಣೇದವ್ವಾ ॥೭೪॥**

**ಯಾವ ಜಡಪುದ್ಗಲಕಾಯವಿದೆಯದರಲಿ ನಾಲ್ಕು ಭೇದವೆಂದರಿವುದು ।**
**ಅವು ಸ್ಕಂಧ-ಸ್ಕಂಧದೇಶ-ಸ್ಕಂಧಪ್ರದೇಶ ಮತ್ತದರಂತೆ ಪರಮಾಣುವೆಂದು ॥೭೪॥**

**೧) ಪುದ್ಗಲಸ್ಕಂಧ :-** ಒಂದು ಪುದ್ಗಲ ಪಿಂಡವು ಸ್ಕಂಧ ಜಾತಿಯದಿದೆ ಎಂದರೆ ಆ ಪರಿಣಮನವು ಪುದ್ಗಲದಿದೆ. ಜೀವನು ಶರೀರವನ್ನು ಮಾಡಿಲ್ಲ. ರೊಟ್ಟಿ , ಅನ್ನ , ಸಾರದ ಪರಮಾಣುಗಳು ಪರಿವರ್ತನೆಗೊಂಡು ಶರೀರದ ಸ್ಕಂಧರೂಪದಿಂದ ಆಗಿವೆ, ಅಜ್ಞಾನಿಯು ಪರಪದಾರ್ಥಗಳ ಗ್ರಹಣ-ತ್ಯಾಗದ ಅಧಿಪತಿಯಾಗುತ್ತಾನೆ ಮತ್ತು ನಾನು ಇಷ್ಟು ಪದಾರ್ಥಗಳನ್ನು ಬಿಟ್ಟಿರುವೆನೆಂದು ಮನ್ನಿಸುತ್ತಾನೆ ಅದು ಅಜ್ಞಾನಭಾವವಿದೆ. ಮುನಿರಾಜರುಗಳು ತಮ್ಮ ಸಲುವಾಗಿ ಮಾಡಿದ ಆಹಾರವನ್ನು ಸ್ವೀಕರಿಸುವುದಿಲ್ಲ. ಇದರ ಅರ್ಥವೇನೆಂದರೆ ಆಹಾರದ ಮೇಲಿನ ಲಕ್ಷ್ಯವು ಹೊರಟುಹೋಗಿರುತ್ತದೆ ಮತ್ತು ಆಹಾರವಂತೂ ಇವರ ಕಾರಣದಿಂದ ಹೊರಟುಹೋಗಿರುತ್ತದೆ. ಆಹಾರದ ಪುದ್ಗಲದ ಸ್ಕಂಧಗಳು ಬರುವುದು ಮತ್ತು ಬಿಟ್ಟುಹೋಗುವುದು ಅದು ಪುದ್ಗಲದ ಕಾರಣದಿಂದಿದೆ, ಜೀವದ ಕಾರಣದಿಂದ ಇಲ್ಲ.

**೨) ಪುದ್ಗಲಸ್ಕಂಧದೇಶ :-** ಪುದ್ಗಲದ ಅರ್ಧೋಭಾಗವಾಗುವುದನ್ನು ಸ್ಕಂಧದೇಶವೆಂದು ಹೇಳುತ್ತಾರೆ. ಅದು ಪುದ್ಗಲದಿಂದ ಆಗುತ್ತದೆ. ಕೋಲದ ಎರಡು ತುಂಡುಗಳಾಗುವುದು ಅಥವಾ ಗೋಧಿಯಲ್ಲಿ ಎರಡು ತುಂಡುಗಳಾಗುವುದು ಅದು ಪುದ್ಗಲದ ಸ್ಕಂಧದೇಶವಿದೆ. ಅದು ಪುದ್ಗಲದ ಕಾರಣದಿಂದಿದೆ, ಜೀವದ ಕಾರಣದಿಂದಿಲ್ಲ. ಆ ತುಂಡುಗಳು ಜೀವದಿಂದ ಆಗಿಲ್ಲ. ಅವು ಪುದ್ಗಲದ ಸ್ಕಂಧದೇಶಗಳಿವೆ. ಈಶ್ವರನಿಂದ ಅಥವಾ ಜೀವದ ಇಚ್ಛೆಯಿಂದ ಅಥವಾ ಜ್ಞಾನದಿಂದ ಆ ಸ್ಕಂಧದೇಶಗಳಾಗಿಲ್ಲ. ಯಾವುದೇ ಸ್ಕಂಧದ ಎರಡು ಭಾಗಗಳಾಗುವುದನ್ನು ಪುದ್ಗಲಸ್ಕಂಧದೇಶವೆಂದು ಹೇಳಿದೆ. ಅವು ಪುದ್ಗಲದ ಕಾರಣದಿಂದ ಆಗುತ್ತವೆ.

**೩) ಪುದ್ಗಲಸ್ಕಂಧಪ್ರದೇಶ :-** ಇಡೀ ಸ್ಕಂಧದ ನಾಲ್ಕನೆಯ ಭಾಗರೂಪ ಸ್ಕಂಧವಾಗುವುದನ್ನು ಪುದ್ಗಲಸ್ಕಂದಪ್ರದೇಶವೆಂದು ಹೇಳಿದೆ. ಪುದ್ಗಲವು ಸ್ವಯಂ ಸ್ಕಂಧಪ್ರದೇಶರೂಪವಾಗುತ್ತದೆ. ಅಜ್ಞಾನೀಜೀವನು ಪುದ್ಗಲದ ಸ್ಕಂಧವು ತನ್ನಿಂದಾಯಿತೆಂದು ಅಭಿಮಾನಪಡುತ್ತಾನೆ ಮತ್ತು ಜ್ಞಾನಿಯು ಪುದ್ಗಲದ ಅವಸ್ಥೆಯ ಜ್ಞಾನಮಾಡಿಕೊಳ್ಳುತ್ತಾನೆ.

**೪) ಪುದ್ಗಲ ಪರಮಾಣು :-** ಪುದ್ಗಲಸ್ಕಂಧದೊಳಗಿಂದ ಪರಮಾಣುವು ಬೇರೆಯಾಗಿ ಏಕಾಕಿಯಾಗಿರುವುದು ಕೂಡ ತನ್ನ ಕಾರಣದಿಂದ ಇದೆ. ಅದು ಜೀವದ ಕಾರಣದಿಂದ ಬೇರೆಯಾಗಿ ಹೋಗುವುದಿಲ್ಲ ಅಥವಾ ಏಕಾಕಿ ಪರಮಾಣುವಿನ ಬೇರೆತನವಿದೆ ಅದು ಕೂಡ ತನ್ನ ಕಾರಣದಿಂದ ಇದೆ.

ಈ ಪ್ರಕಾರ ಪುದ್ಗಲದ ಸ್ಕಂಧಗಳು, ಸ್ಕಂಧದ ಅರ್ಧ ಭಾಗಗಳು, ನಾಲ್ಕನೆಯ ಭಾಗಗಳು ಅಥವಾ ಪರಮಾಣುಗಳು ಈ ನಾಲ್ಕು ಪ್ರಕಾರಗಳು ಪುದ್ಗಲ ಕಾರಣದಿಂದಿವೆ, ಜೀವದ ಕಾರಣದಿಂದ ಇಲ್ಲ. ಈ ಪ್ರಕಾರದಿಂದ ನಾಲ್ಕು ಭೇದಗಳನ್ನು ತಿಳಿದುಕೊಳ್ಳುವುದು ಯೋಗ್ಯವಿದೆಯೆಂದು ಹೇಳಿದೆ, ಆದರೆ ನೀನು ಅವನ್ನು ಮಾಡುವ ಸಾಧ್ಯತೆಯಿದೆ ಅಥವಾ ತುಂಡುಮಾಡುವ ಸಾಧ್ಯತೆಯಿದೆಯೆಂದು ಹೇಳಲಾಗಿಲ್ಲ. ಆದುದರಿಂದ ಜೀವರುಗಳು ಪುದ್ಗಲದ ಕರ್ತೃತ್ವತನದ ಅಭಿಮಾನವನ್ನು ಬಿಡಬೇಕೆಂದು ಹೇಳುವ ಉದ್ದೇಶವಿದೆ.

ಅಜ್ಞಾನೀ ಮಹಿಳೆಯರು ಮನೆಯ ವಸ್ತುವನ್ನು ಹಂಚುವುದರಲ್ಲಿ ಮಮತೆ ಮಾಡುತ್ತಾರೆ, ಸೋದರರುಗಳು ರೂಪಾಯಿಗಳನ್ನು ಹಂಚುವುದರಲ್ಲಿ ಮಮತೆ ಮಾಡುತ್ತಾರೆ ಮತ್ತು ಆ ಸ್ಕಂಧದ ಅವಸ್ಥೆಯು ನಮ್ಮಿಂದಾಯಿತೆಂದು ಅಭಿಮಾನಪಡುತ್ತಾರೆ. ರೂಪಾಯಿಯ, ಅನ್ನದ, ರೊಟ್ಟಿಯ ಮೊದಲಾದ ಜಡಪದಾರ್ಥಗಳ ತುಂಡುರೂಪ ಅಥವಾ ಅಖಂಡರೂಪ ಅವಸ್ಥೆಯಾಗುವುದು ಆಯಾ ಪುದ್ಗಲ ಪರಮಾಣುವಿನ ಕಾರಣದಿಂದಿದೆ. ಪುದ್ಗಲವು ಏಕತ್ರವಾಗಿರಲಿ ಅಥವಾ ಬೇರೆ ಬೇರೆಯಾಗಿರಲಿ ಎಂದರೆ ಸ್ಕಂಧರೂಪವಾಗಿರಲಿ ಅಥವಾ ಅರ್ಧ ಭಾಗವಾಗಿರಲಿ ಅದು ತನ್ನ ಕಾರಣದಿಂದ ಇದೆ. ಜೀವನು ಅವುಗಳ ಕರ್ತೃ-ಹರ್ತೃವಿಲ್ಲವೆಂದು ಜ್ಞಾನಮಾಡಿಕೊಂಡರೆ ಪುದ್ಗಲದ ಅಭಿಮಾನವು ಹೊರಟುಹೋಗುವುದು ಮತ್ತು ತಾನು ಕೇವಲ ಅವುಗಳ ಜ್ಞಾತಾನಾಗಿ ಉಳಿದರೆ ಧರ್ಮವಾಗುವುದು.

ಇದು ಪುದ್ಗಲಾಸ್ತಿಕಾಯದ ಅಧಿಕಾರವಿದೆ. ಪುದ್ಗಲದ ಸ್ಕಂಧಗಳು ಪುದ್ಗಲದ ಕಾರಣದಿಂದ ಆಗುತ್ತವೆ. ಜೀವನು ಅವನ್ನು ತಿಳಿದುಕೊಳ್ಳುವವನಿದ್ದಾನೆ. ಸ್ಕಂಧವಾಗಲಿ ಅಥವಾ ಅದರ ಭೇದವಾಗಲಿ ಅದು ಆತ್ಮನಿಂದ ಆಗುವುದಿಲ್ಲ. ಅದು ಪುದ್ಗಲದ ಕಾರಣದಿಂದ ಆಗುತ್ತದೆ.

**ಭಾವಾರ್ಥ :-** ಪುದ್ಗಲದ್ರವ್ಯದ ಪರಿಣಾಮವು ನಾಲ್ಕು ಪ್ರಕಾರದಿಂದಿದೆ. ಅದರಲ್ಲಿ ಸ್ಕಂಧ, ದೇಶ, ಪ್ರದೇಶ ಮತ್ತು ಪರಮಾಣುವೆಂದು ಈ ನಾಲ್ಕರ ಹೊರತಾಗಿ ಬೇರೆ ಯಾವುದೇ ಭೇದವಿಲ್ಲ. ಇವುಗಳ ಹೊರತಾಗಿ ಬೇರೆ ಯಾವುದಾದರೂ ಭೇದವಿದ್ದರೆ ಅದು ಈ ನಾಲ್ಕು ಭೇದಗಳಲ್ಲಿ ಬಂದುಬಿಡುತ್ತದೆ.

ಈಗ ಆ ನಾಲ್ಕು ಪ್ರಕಾರದ ಪುದ್ಗಲಗಳ ಲಕ್ಷಣ ಹೇಳುತ್ತಾರೆ.

ಖಂಧಂ ಸಯಲಸಮತ್ಥಂ ತಸ್ಸ ದು ಅದ್ಧಂ ಭಣಂತಿ ದೇಸೋ ತ್ತಿ ।
ಅದ್ಧದ್ಧಂ ಚ ಪದೇಸೋ ಪರಮಾಣೂ ಚೇವ ಅವಿಭಾಗೀ ॥೭೫॥

**ಸಕಲ-ಸಮಸ್ತವದು 'ಸ್ಕಂಧ'ವಿದ್ದು ಅದರರ್ಧಕೆ 'ದೇಶ'ವೆಂದು ಹೇಳುವರು ।**
**ಸಕಲರ್ಧದ ಅರ್ಧವದು 'ಪ್ರದೇಶ'ವಿದ್ದು ಆವಿಭಾಗಿಯು 'ಪರಮಾಣು' ॥೭೫॥**

೧) **ಸ್ಕಂಧ :-** ಪುದ್ಗಲದ ಸ್ಕಂಧಭೇದವು ಅನಂತ ಪರಮಾಣುಗಳಿಂದ ನಿರ್ಮಿಸಿದ ಒಂದು ಪಿಂಡವಿದೆ, ಅದು ಜೀವದಿಂದ ಆಗಿಲ್ಲ. ಶರೀರ, ವಾಣಿ, ಕರ್ಮದ ಸ್ಕಂಧದ ಅವಸ್ಥೆಯು ಜೀವದಿಂದ ಆಗಲಿಲ್ಲ. ರೊಟ್ಟಿ, ವಡೆ ಮೊದಲಾದವುಗಳ ಸ್ಕಂಧಗಳು ನನ್ನಿಂದ ಆಗಿಲ್ಲ, ಅವು ನನ್ನಿಂದ ಭಿನ್ನವಿವೆ. ನಾನು ಯಾವುದೇ ಪರವಸ್ತುವಿನ ಕರ್ತೃವಿಲ್ಲ, ನಾನಂತೂ ತಿಳಿಯುವವನಿದ್ದೇನೆಂದು ತನ್ನನ್ನು ತಾನು ತಿಳಿದುಕೊಂಡರೆ ಪರವಸ್ತುಗಳು ತಿಳಿದುಬರುತ್ತವೆ.

೨) **ಸ್ಕಂಧದೇಶ :-** ಪುದ್ಗಲಸ್ಕಂಧದ ಅರ್ಧಭಾಗವಾಗುವುದನ್ನು ಸ್ಕಂಧದೇಶವೆಂದು ಹೇಳುತ್ತಾರೆ. ಒಂದು ಹುಲ್ಲುಕಡ್ಡಿಯಿದೆ ಅದು ಸ್ಕಂಧವಿದೆ, ಅದರಲ್ಲಿ ಎರಡು ತುಂಡುಗಳಾದವು ಅವು ಜೀವದಿಂದ ಆಗಲಿಲ್ಲ. ಅವು ನನ್ನಿಂದ ಆದುವೆಂದು ಅಜ್ಞಾನಿಯು ಮನ್ನಿಸುತ್ತಾನೆ ಅದು ಅಜ್ಞಾನಭಾವವಿದೆ, ಪುದ್ಗಲದ ಅವಸ್ಥೆಯನ್ನು ಮಾಡುವುದು ಅದು ಜೀವದ ಸ್ವಭಾವವಲ್ಲ, ಆದರೆ ಅದನ್ನು ತಿಳಿದುಕೊಳ್ಳುವುದಿದೆ. ಸ್ಕಂಧದಲ್ಲಿ ಅರ್ಧಭಾಗವಾದುದು ಅದು ಆತ್ಮನಿಂದ ಆಗುವುದಿಲ್ಲ, ಅದು ಪುದ್ಗಲದ ಕಾರಣದಿಂದ ಆದುದಿದೆ, ಜೀವನು ಕೇವಲ ಜ್ಞಾತಾ ಇದ್ದಾನೆ.

೩) **ಸ್ಕಂಧಪ್ರದೇಶ :-** ಸ್ಕಂಧದ ಅರ್ಧದ ಅರ್ಧಭಾಗ ಅಥವಾ ಸ್ಕಂಧದ ನಾಲ್ಕನೆಯ ಭಾಗವನ್ನು ಸ್ಕಂಧಪ್ರದೇಶವೆಂದು ಹೇಳುತ್ತಾರೆ, ಅದು ಪುದ್ಗಲದಿಂದ ಆಗುತ್ತದೆ.

**೪) ಪುದ್ಗಲಪರಮಾಣು :-** ಯಾವುದರಲ್ಲಿ ಎರಡು ಭಾಗವಾಗುವ ಸಾಧ್ಯತೆಯಿಲ್ಲ ಅದನ್ನು ಪುದ್ಗಲ ಪರಮಾಣುವೆಂದು ಹೇಳಿದೆ. ಈ ಪ್ರಕಾರ ಪುದ್ಗಲದ ನಾಲ್ಕು ವಿಭಾಗಗಳನ್ನು ತಿಳಿಯುವುದು.

ಕಾರ್ಮಣ, ತೈಜಸ, ಔದಾರಿಕ ಶರೀರಗಳು, ವಾಣಿ, ಮನಸ್ಸು ಮೊದಲಾಗಿ ಯಾವ ಪುದ್ಗಲ ಪಿಂಡಗಳು ಜಗತ್ತಿನಲ್ಲಿವೆ ಅವೆಲ್ಲವು ಈ ನಾಲ್ಕರಲ್ಲಿ ಬಂದುಬಿಡುತ್ತವೆ. ಲವಣದ ಚೂರ್ಣವಾಗುತ್ತದೆ ಅದು ಆತ್ಮನಿಂದ ಅಥವಾ ಬೆರಳುಗಳಿಂದ ಆಗುವುದಿಲ್ಲ, ಅದು ಪುದ್ಗಲದ ಕಾರಣದಿಂದ ಆಗುತ್ತದೆ. ಆಹಾರ-ನೀರಿನ ಅವಸ್ಥೆಯು ಆತ್ಮನಿಂದ ಆಗುತ್ತದೆಯೆಂದು ಮನ್ನಿಸುವುದು ಅದು ಮಿಥ್ಯಾಭಾವವಿದೆ. ಎಳ್ಳಿನಿಂದ ಎಣ್ಣೆ ಹೊರಡುತ್ತದೆ ಅದು ಆತ್ಮನಿಂದ ಹೊರಡುವುದಿಲ್ಲ. ಸ್ಕಂಧವಾಗುವುದು, ದೇಶವಾಗುವುದು, ಪ್ರದೇಶವಾಗುವುದು ಅಥವಾ ಪರಮಾಣವು ಭಿನ್ನವಾಗುವುದು ಅದು ಪುದ್ಗಲದ ಕಾರಣದಿಂದಿದೆ. ಅದು ಆತ್ಮನಿಂದ ಸ್ವಲ್ಪಕೂಡ ಆಗುವುದಿಲ್ಲ. ಮೂಲಗಾಥೆಯಿಲ್ಲಿ 'ಮುಣೇಯವ್ವಾ' 'ಜ್ಞಾತವ್ಯಾ' ಎಂದು ಹೇಳಲಾಗಿದೆ. ಎಂದರೆ ಈ ನಾಲ್ಕು ಪ್ರಕಾರದ ಭೇದಗಳು ತಿಳಿದುಕೊಳ್ಳಲು ಯೋಗ್ಯವಿದೆ ಎಂದರೆ ಆತ್ಮನು ಅವುಗಳನ್ನು ತಿಳಿದುಕೊಳ್ಳುವವನಿದ್ದಾನೆ, ಆದರೆ ಕರ್ತಾ-ಹರ್ತಾ ಇಲ್ಲ.

ಮಾನಸ್ತಂಭವಿದೆ, ಈ ಮಾನಸ್ತಂಭದ ನಕ್ಷೆಯಿದೆ ಅವು ಪುದ್ಗಲದ ಕಾರಣದಿಂದಿದೆ, ಜೀವದಕಾರಣದಿಂದ ಇಲ್ಲ. ಆತ್ಮನು ಪುದ್ಗಲದ ಪ್ರಭುವಿಲ್ಲ. ಅದೇ ಪ್ರಕಾರ ಆತ್ಮನು ಪುದ್ಗಲದ ಕರ್ತೃಕೂಡ ಇಲ್ಲ, ಭರಣಿ, ಕಡ್ಡೀಪೆಟ್ಟಿಗೆ ಮೊದಲಾದವು ಸ್ಕಂಧಗಳಿದ್ದು ಅವು ಅವುಗಳಿಂದಿವೆ, ಆದಾಗ್ಯೂ ನನ್ನ ಕಾರಣದಿಂದ ಆ ಸ್ಕಂಧಗಳಿವೆಯೆಂದು ಮನ್ನಿಸುವಂಥ ಅಜ್ಞಾನಿಯು ಪುದ್ಗಲದ್ರವ್ಯವನ್ನು ಹಾರಿಸಿಬಿಡುತ್ತಾನೆ ಮತ್ತು ಅದರಿಂದ ತನ್ನ ಜೀವತತ್ತ್ವವನ್ನು ಕೂಡ ಹಾರಿಸಿಬಿಡುತ್ತಾನೆ ಎಂದರೆ ಅಸತ್ಯ ಶ್ರದ್ಧೆಮಾಡುತ್ತಾನೆ.

**ಭಾವಾರ್ಥ :-** ಸ್ಕಂಧ, ಸ್ಕಂಧದೇಶ, ಸ್ಕಂಧಪ್ರದೇಶವೆಂಬ ಈ ಮೂರು ಪುದ್ಗಲಸ್ಕಂಧಗಳಲ್ಲಿ ಅನಂತ ಅನಂತ ಭೇದಗಳಿವೆ. ಇಲ್ಲಿ ಭೇದದ ಅಪೇಕ್ಷೆಯಿಂದ ಅನಂತದ ಮಾತಿದೆ. ಸಂಖ್ಯೆಯ ಅಪೇಕ್ಷೆಯಿಂದಂತೂ ಮೂರೂ ಅನಂತವಿವೆ. ಆದರೆ ಇಲ್ಲಿ ಸಂಖ್ಯೆಯ ಮಾತಿಲ್ಲ, ಆದರೆ ಅವುಗಳ ಭೇದದಮಾತಿದೆ. ಪರಮಾಣುವಿನಲ್ಲಿ ಒಂದೇ ಪ್ರಕಾರದ ಭೇದವಿದೆ. ಪರಮಾಣುಗಳು ಸಂಖ್ಯೆಯಿಂದ ಅನಂತವಿದ್ದರೂ ಭೇದವು-ಒಂದು ಪ್ರಕಾರದ್ದಿದೆ.

**ಸ್ಕಂಧದ ಪ್ರಕಾರಗಳು :-** ಈಗ ದೃಷ್ಟಾಂತದ ಮೂಲಕ ಈ ಕಥನವನ್ನು ತಿಳಿಸಿಕೊಡಲಾಗುತ್ತದೆ. ಈ ದೃಷ್ಟಾಂತವು ಜಯಸೇನಾಚಾರ್ಯದೇವರ ಟೀಕೆಯಲ್ಲಿ ಬರುತ್ತದೆ. ಅನಂತಾನಂತ ಪರಮಾಣುಗಳ ಸ್ಕಂಧದ ಸಂಕೇತವನ್ನು ಹದಿನಾರು ಅಂಕದಿಂದ ತಿಳಿದುಕೊಳ್ಳುವುದು. ಹಿರಿದರಲ್ಲಿ ಹಿರಿದಾದ ಅನಂತದ ಸಂಖ್ಯೆಯನ್ನು ಹದಿನಾರರ ಉಪಮೆಯನ್ನು ತಿಳಿಯುವ ಸಲುವಾಗಿ ಕೊಡಲಾಗಿದೆ. ಈಗ ಅವುಗಳಲ್ಲಿ ಹದಿನಾರು ಪರಮಾಣುವುಳ್ಳದ್ದನ್ನು ಉತ್ಕೃಷ್ಟ ಸ್ಕಂಧವೆಂದು ತಿಳಿಯಬೇಕು. ಅದರ ಅರ್ಧದಿಂದ ಒಂದು ಪರಮಾಣುವು ಅಧಿಕವಿರುವುದನ್ನು ಜಘನ್ಯ ಸ್ಕಂಧವೆಂದು ತಿಳಿಯಬೇಕು. ಎಣಿಕೆಯ ಲೆಕ್ಕದಿಂದ ಒಂಭತ್ತು ಪರಮಾಣುವುಳ್ಳದ್ದನ್ನು ಜಘನ್ಯ ಸ್ಕಂಧವೆಂದು ತಿಳಿಯಬೇಕು ಮತ್ತು ಹತ್ತರಿಂದ ಹದಿನೈದು ಪರಮಾಣುವಿನ ಸ್ಕಂಧವನ್ನು ಮಧ್ಯಮ ಸ್ಕಂಧವೆಂದು ತಿಳಿಯಬೇಕು ಅದನ್ನು ಅನಂತ ಪ್ರಕಾರದ್ದೆಂದು ತಿಳಿದುಕೊಳ್ಳುವುದು.

ಒಂದು ವಸ್ತುವಿನ ಉತ್ಕೃಷ್ಟ ಸ್ಕಂಧಗಳು ಮತ್ತು ಇನ್ನೊಂದು ವಸ್ತುವಿನ ಉತ್ಕೃಷ್ಟ ಸ್ಕಂಧಗಳ ಪರಮಾಣುವಿನ ಸಂಖ್ಯೆಯ ಅಪೇಕ್ಷೆಯಿಂದ ಸಮಾನವಿವೆಯೆಂದು ನಿರ್ಣಯಿಸುವಂತಿಲ್ಲ. ಪ್ರತಿಯೊಂದರ ಉತ್ಕೃಷ್ಟವನ್ನು ಬೇರೆ ಬೇರೆಯಾಗಿ ತಿಳಿಯುವುದು. ಆದರೆ ಒಂದು ಸ್ಕಂಧದಲ್ಲಿ ಒಂದು ಉತ್ಕೃಷ್ಟ, ಒಂದು ಜಘನ್ಯ ಮತ್ತು ಅನಂತ ಮಧ್ಯಮ ಸ್ಕಂಧಗಳಿರುತ್ತವೆ. ಇದೇ ರೀತಿಯಾಗಿ ಅನಂತ ಪ್ರಕಾರದ ಭೇದದ ಸ್ಕಂಧಗಳನ್ನು ತಿಳಿಯುವುದು. ಒಂದು ಕೊಡವಿದ್ದು ಅದರಲ್ಲಿ ತಮ್ಮ

ಅಪೇಕ್ಷೆಯಿಂದ ಉತ್ಕೃಷ್ಟದ ಒಂದು ಭೇದ, ಜಘನ್ಯದ ಒಂದು ಭೇದ ಮತ್ತು ಮಧ್ಯಮದ ಅನಂತ ಭೇದಗಳೆಂದು ತಿಳಿಯುವುದು. ಹೀಗೆ ಪ್ರತಿಯೊಂದು ಸ್ಕಂಧದಲ್ಲಿ ತಿಳಿಯಬೇಕು.

ಈ ಎಲ್ಲ ಸ್ಕಂಧದ ಭೇದಗಳು ಪುದ್ಗಲದ ಕಾರಣದಿಂದ ಇವೆ, ಜೀವದ ಕಾರಣದಿಂದ ಇಲ್ಲ. ಶರೀರವು ತುಂಡುರೂಪವಾಗಲಿ ಅಥವಾ ಪೂರ್ಣವಾಗಿರಲಿ ಅದು ಪುದ್ಗಲದ ಆಟವಿದೆ.

**ಪ್ರಶ್ನೆ :-** ನೀವು ಎಲ್ಲವನ್ನೂ ಮಾಡುತ್ತಿರುವಿರಿ ಆದಾಗ್ಯೂ ಜೀವವು ಪುದ್ಗಲದಲ್ಲೇನೂ ಮಾಡುವುದಿಲ್ಲವೆಂಬುದನ್ನು ಮನ್ನಿಸಲು ಹೇಗೆ ಹೇಳುತ್ತಿರುವಿರಿ ?

**ಉತ್ತರ :-** ಸೋದರನೇ ! ಪುದ್ಗಲವನ್ನು ಪುದ್ಗಲವು ಮಾಡುತ್ತದೆ, ಜೀವನು ಪುದ್ಗಲವನ್ನು ಮಾಡುವುದೇ ಇಲ್ಲ. ಇವೆಲ್ಲವು ಸ್ಕಂಧಗಳಾದವು, ಧಾನ್ಯದ ಮೂಟೆಯು ಬಂದುಬಿಡುವುದು, ಮಿಲ್ಲುಗಳನ್ನು ನಡೆಸುವುದು, ಎಂಜಿನುಗಳನ್ನು ನಡೆಸುವುದು ಇವೆಲ್ಲವು ಪುದ್ಗಲದ ಕಾರಣದಿಂದ ಸ್ಕಂಧರೂಪವಾಗುತ್ತವೆ. ಜೀವನಂತೂ ಕೇವಲ ತಿಳಿದುಕೊಳ್ಳುವವನಿದ್ದಾನೆಂದು ಇಲ್ಲಿ ಹೇಳಲಾಗಿದೆ.

**ಸ್ಕಂಧದೇಶದ ಪ್ರಕಾರಗಳು :-** ಸ್ಕಂಧದ ಅರ್ಧಭಾಗವು ಅದು ಉತ್ಕೃಷ್ಟ ಸ್ಕಂಧದೇಶವೆಂದು ತಿಳಿಯುವುದು. ಇಲ್ಲಿ ಉದಾಹರಣೆಗಾಗಿ ಎಂಟು ಪರಮಾಣುಗಳ ಸ್ಕಂಧವನ್ನು ಉತ್ಕೃಷ್ಟ ಸ್ಕಂಧದೇಶವೆಂದು ತಿಳಿಯುವುದು. ಅದು ಒಂದಿದೆ ನಾಲ್ಕನೆಯ ಭಾಗದ ಅಪೇಕ್ಷೆಯಿಂದ ಒಂದು ಪರಮಾಣುವು ಅಧಿಕವಿರುವಂಥ ಸ್ಕಂಧವನ್ನು ಎಂದರೆ ಇಲ್ಲಿ ಉದಾಹರಣೆಗಾಗಿ ಐದು ಪರಮಾಣುವಿನ ಸ್ಕಂಧವನ್ನು ಜಘನ್ಯ ಸ್ಕಂಧದೇಶವೆಂದು ತಿಳಿಯುವುದು ಅದು ಒಂದು ಇದೆ ಮತ್ತು ಜಘನ್ಯದಿಂದ ದೊಡ್ಡದು ಹಾಗೂ ಉತ್ಕೃಷ್ಟದಿಂದ ಚಿಕ್ಕದು ಎಂದರೆ ಉದಾಹರಣೆಗಾಗಿ ಆರು ಮತ್ತು ಏಳು ಪರಮಾಣುವಿನ ಸ್ಕಂಧವನ್ನು ಮಧ್ಯಮ ಸ್ಕಂಧದೇಶವೆಂದು ತಿಳಿಯುವುದು. ಅದು ಕೂಡ ಅನಂತ ಪ್ರಕಾರದ್ದಿದೆ. ಹೀಗೆ ಸ್ಕಂಧದೇಶದ ಉತ್ಕೃಷ್ಟ , ಮಧ್ಯಮ ಮತ್ತು ಜಘನ್ಯವಾಗಿ ಅನಂತ ಪ್ರಕಾರಗಳಿವೆಯೆಂದು ತಿಳಿಯುವುದು.

ಜ್ಞಾನಸಮಯ, ಶಬ್ದಸಮಯ ಮತ್ತು ಅರ್ಥಸಮಯವೆಂದು ಮೂರು ಪ್ರಕಾರದ ಸಮಯವಿವೆ. ಯಾವ ಶಾಸ್ತ್ರವು ಅಥವಾ ವಾಣಿಯು ರಾಗ-ದ್ವೇಷಗಳಿಂದ ರಹಿತವಾಗಿ ಪದಾರ್ಥಗಳ ಸ್ವತಂತ್ರತೆಯನ್ನು ಪ್ರಕಟಮಾಡುತ್ತದೆ ಮತ್ತು ಸಮಸ್ತ ಆತ್ಮ ಹಾಗೂ ಪರಮಾಣುಗಳು ಸ್ವತಂತ್ರವಿವೆ, ರಾಗವು ಆತ್ಮನ ಸ್ವಭಾವವಲ್ಲ, ಆದರೆ ಆತ್ಮನು ಜ್ಞಾನಸ್ವಭಾವವಿದ್ದಾನೆಂದು ಯಾವುದು ಪ್ರಸಿದ್ಧ ಮಾಡುತ್ತದೆ ಅದು ಶಬ್ದಸಮಯವಿದೆ, ಅದು ನಿಜವಾದ ಶಾಸ್ತ್ರವಿದೆ. ಇದರಿಂದ ವಿಪರೀತವಾಗಿ ತಿಳಿಸಿಕೊಡುತ್ತದೆ ಅದು ನಿಜವಾದ ಶಾಸ್ತ್ರವಿಲ್ಲ, ಅದು ಶಬ್ದಸಮಯವಿಲ್ಲ. ಮತ್ತು ಹೀಗೆ ವಿಪರೀತವಾಗಿ ಮನ್ನಿಸುವ ಜೀವನು ಮೂಢನಿದ್ದಾನೆ.

**ಪ್ರಶ್ನೆ :-** ವಿಪರೀತತೆಯನ್ನು ತಿಳಿಸಿಕೊಡುವಂಥ ಶಬ್ದಗಳನ್ನು ಶಬ್ದಸಮಯವೆಂದೇಕೆ ಹೇಳುವುದಿಲ್ಲ ?

**ಉತ್ತರ :-** ಲೋಕದಲ್ಲಿ ಅದನ್ನು ಬೇಕಾದರೆ ಭಾಷೆಯೆಂದು ಹೇಳಬಹುದಾಗಿದೆ, ಆದರೆ ಅದು ಶಬ್ದಸಮಯವಲ್ಲ, ನಿಜವಾದ ಶಾಸ್ತ್ರವಲ್ಲ. ನಿಮಿತ್ತದಿಂದ ಅಥವಾ ರಾಗದಿಂದ ಲಾಭವಿದೆಯೆಂದು ಮನ್ನಿಸುವ, ಕೇವಲಿಗೆ ಆಹಾರ ಮನ್ನಿಸುವ, ವಸ್ತ್ರಸಹಿತ ಮುನಿತನವನ್ನು ಮನ್ನಿಸುವುದು ಅದು ಶಬ್ದಸಮಯವಲ್ಲ. ಅವು ಕುಶಬ್ದವಿವೆ ಅಥವಾ ಕುಶಾಸ್ತ್ರವಿದೆ. ಪಂಚಾಸ್ತಿಕಾಯದ ರಚನೆಯನ್ನು ರಾಗ-ದ್ವೇಷಗಳಿಂದ ರಹಿತವಾಗಿ ಯಥಾರ್ಥ ಅಕ್ಷರ, ಪದ ಮತ್ತು ವಾಕ್ಯಗಳಿಂದ ಮಾಡುತ್ತದೆ ಅದನ್ನು ದ್ರವ್ಯಶ್ರುತರೂಪವಾದ ಶಬ್ದಸಮಯವೆಂದು ಹೇಳುತ್ತಾರೆ. ಉಳಿದವುಗಳನ್ನು ಕುಶ್ರುತವೆಂದು ಹೇಳಿದೆ. ಮತ್ತು ಮಿಥ್ಯಾತ್ವಭಾವವು ನಷ್ಟವಾಗಿ ಯಾವ ಯಥಾರ್ಥಜ್ಞಾನವಾಗುತ್ತದೆ ಅದನ್ನು ಭಾವಶ್ರುತರೂಪದ

ಜ್ಞಾನಸಮಯವೆಂದು ಹೇಳಿದೆ. ಯಾವ ಜ್ಞಾನವು ವಿಕಾರರಹಿತವಾಗಿ ಆತ್ಮನನ್ನು ತಿಳಿಯುವುದಿಲ್ಲ ಅದು ಕುಜ್ಞಾನವಿದೆ. ಸಮ್ಯಗ್ಜ್ಞಾನದ ಮೂಲಕ ಯಾವ ಪದಾರ್ಥಗಳನ್ನು ತಿಳಿಯುವ ಸಾಧ್ಯತೆಯಿದೆ ಆ ಪದಾರ್ಥಗಳನ್ನು ಅರ್ಥಸಮಯವೆಂದು ಹೇಳಿದೆ. ಇಲ್ಲಿ ಪದಾರ್ಥ ಸಮಯದ ಮಾತು ನಡೆಯುತ್ತಿದೆ. ಪದಾರ್ಥದಲ್ಲಿ ದ್ರವ್ಯ-ಗುಣ-ಪರ್ಯಾಯ ಈ ಮೂರೂ ಬಂದುಬಿಡುತ್ತವೆ. ಇಲ್ಲಿ ಪುದ್ಗಲಪದಾರ್ಥದ ಸ್ವರೂಪ ತಿಳಿಸಿದೆ. ಹೇಗೆ ಪುದ್ಗಲದ ಸ್ವರೂಪವಿದೆ ಹಾಗೆ ಜ್ಞಾನವು ತಿಳಿದರೆ ಮತ್ತು ಶಾಸ್ತ್ರವು ಹಾಗೆ ಹೇಳಿದರೆ ಮೂರು ನಿಜವಿವೆ, ವಿಪರೀತ ತಿಳಿದರೆ ಯಾವುದೂ ನಿಜವಿಲ್ಲ.

ಇಲ್ಲಿ ಸ್ಕಂಧದೇಶದ ಒಂದು ಉತ್ಕೃಷ್ಟ , ಒಂದು ಜಘನ್ಯ ಮತ್ತು ಅನಂತ ಮಧ್ಯಮವೆಂದು ಅನಂತ ಪ್ರಕಾರದ ಭೇದಗಳನ್ನು ತಿಳಿಸಲಾಯಿತು.

**ಸ್ಕಂಧಪ್ರದೇಶದ ಭೇದಗಳು :-** ಯಾವುದೇ ಸ್ಕಂಧದ ನಾಲ್ಕನೆಯ ಭಾಗವನ್ನು ಉತ್ಕೃಷ್ಟ ಸ್ಕಂಧಪ್ರದೇಶವೆಂದು ತಿಳಿಯಬೇಕು. ಉದಾಹರಣೆಯ ಲೆಕ್ಕದಿಂದ ನಾಲ್ಕು ಪರಮಾಣುಗಳನ್ನು ಉತ್ಕೃಷ್ಟ ಸ್ಕಂಧಪ್ರದೇಶವೆಂದು ತಿಳಿಯುವುದು. ಎರಡು ಪರಮಾಣುಗಳನ್ನು ಜಘನ್ಯ ಸ್ಕಂಧಪ್ರದೇಶವೆಂದು ತಿಳಿಯುವುದು ಮತ್ತು ಜಘನ್ಯದಿಂದ ದೊಡ್ಡದು ಹಾಗೂ ಉತ್ಕೃಷ್ಟದಿಂದ ಚಿಕ್ಕದು ಎಂದರೆ ಮೂರು ಪರಮಾಣುವುಳ್ಳದನ್ನು ಮಧ್ಯಮ ಸ್ಕಂಧಪ್ರದೇಶವೆಂದು ತಿಳಿಯುವುದು, ಹೀಗೆ ಸ್ಕಂಧಪ್ರದೇಶದಲ್ಲಿ ಉತ್ಕೃಷ್ಟ , ಮಧ್ಯಮ ಹಾಗೂ ಜಘನ್ಯವಾಗಿ ಅನಂತಭೇದಗಳಿವೆಯೆಂದು ತಿಳಿಯುವುದು.

ಪುಸ್ತಕದ ಹರಿಯುವಿಕೆಯು ಪುಸ್ತಕದ ಕಾರಣದಿಂದಿದೆ. ಆಹಾರ ಮೊದಲಾದವು ಒಳ್ಳೆಯವಿದ್ದರೆ ಲಾಭವೆಂದು ಮನ್ನಿಸುವವನು ಮೂಢನಿದ್ದಾನೆ. ಸ್ಕಂಧದಲ್ಲಿ ಹೀಗಾಗಬೇಕು ಮತ್ತು ಈ ರೀತಿಯಾಗಿ ಅದನ್ನು ಪರಿಣಮಿಸಬೇಕಾಗುವುದೆಂಬ ಅಭಿಮಾನ ಹಾಗೂ ಹಟಾಗ್ರಹಪಡುವುದು ಒಳ್ಳೆಯದಲ್ಲ. ಪುದ್ಗಲದ ಅವಸ್ಥೆಯು ಪುದ್ಗಲದಿಂದ ಆಗುತ್ತದೆ, ಅದು ನಿನ್ನಿಂದ ಆಗುವುದಿಲ್ಲ. ಪುದ್ಗಲವು ನಿನ್ನಿಂದ ಭಿನ್ನವಿದೆ, ನೀನು ತಿಳಿದುಕೊಳ್ಳುವವನಿರುವೆನೆಂದು ದೃಷ್ಟಿ ಮಾಡಿದರೆ ಆಗ ಧರ್ಮವಾಗುತ್ತದೆ.

ಆತ್ಮನು ಜ್ಞಾನಸ್ವಭಾವಿಯಿದ್ದಾನೆ. ನಾನು ಆತ್ಮನಿದ್ದೇನೆಂದು ಧರ್ಮ ಮಾಡುವವನು ತಿಳಿದುಕೊಳ್ಳಬೇಕಾಗುವುದು. ಪುಣ್ಯ-ಪಾಪಗಳು ವಿಕಾರವಿವೆ, ಶರೀರ ಮೊದಲಾದವುಗಳ ಕ್ರಿಯೆಯು ನನ್ನಿಂದ ಸ್ವಲ್ಪಕೂಡ ಆಗುವುದಿಲ್ಲವೆಂದು ತಿಳಿದುಕೊಳ್ಳದವನಿಗೆ ಅಧರ್ಮ ದೃಷ್ಟಿಯು ಹೋಗುವುದಿಲ್ಲ. ನನ್ನಿಂದ ಈತನು ಸುಧಾರಿಸಿದನೆಂದು ಅಜ್ಞಾನಿಯು ಅಭಿಮಾನಪಟ್ಟುಕೊಳ್ಳುತ್ತಾನೆ, ಆದರೆ ಹೀಗೆ ಮನ್ನಿಸುವುದು ಮಹಾನ್ ಪಾಪವಿದೆ.

ಅಧಿಕ ರಜಕಣಗಳ ಪಿಂಡವನ್ನು ಸ್ಕಂಧವೆಂದು ಹೇಳಿದೆ, ಅದರ ಅರ್ಧಭಾಗವನ್ನು ಸ್ಕಂಧದೇಶವೆಂದು ಹೇಳಿದೆ, ಸ್ಕಂಧದ ನಾಲ್ಕನೆಯ ಭಾಗವನ್ನು ಸ್ಕಂಧಪ್ರದೇಶವೆಂದು ಹೇಳಿದೆ. ಮತ್ತು ಒಂದು ಸ್ಕಂಧದ ಅಪೇಕ್ಷೆಯಿಂದ ಯಾವವು ಸ್ಕಂಧಗಳಾಗಿ ಸ್ಕಂಧದೇಶವಾಗುತ್ತವೆ ಅವು ಮತ್ತೆ ತಮ್ಮ ಅಪೇಕ್ಷೆಯಿಂದ ಸ್ಕಂಧವೆನಿಸಿಕೊಳ್ಳುತ್ತವೆ. ಈ ಪ್ರಮಾಣದಿಂದ ತಿಳಿದುಕೊಳ್ಳಬೇಕು. ಹೀಗೆ ಸ್ಕಂಧ, ದೇಶ ಮತ್ತು ಪ್ರದೇಶದಲ್ಲಿ ಉತ್ಕೃಷ್ಟ , ಮಧ್ಯಮ ಹಾಗೂ ಜಘನ್ಯವೆಂದು ಅನಂತಭೇದಗಳಿವೆಯೆಂದು ತಿಳಿದುಕೊಳ್ಳಬೇಕು. ಮತ್ತು ಪರಮಾಣುವು ಅವಿಭಾಗಿಯಿದೆ, ಅದರಲ್ಲಿ ಭೇದದ ಕಲ್ಪನೆಯಿಲ್ಲ. ಹೀಗೆ ನಾಲ್ಕು ಪ್ರಕಾರದ ಭೇದಗಳ ಮೂಲಕ ತಿಳಿದುಕೊಳ್ಳಬೇಕು.

ಪರಮಾಣುಗಳು ಏಕತ್ರವಾಗುವುದರಲ್ಲಿ ನಾಲ್ಕು ಭೇದ ತಿಳಿಸಲಾಯಿತು. ಪರಮಾಣುಗಳು ಏಕತ್ರವಾಗುವುದನ್ನು ಸಂಘಾಂತವೆಂದು ಹೇಳಿದೆ. ಎರಡು ಪರಮಾಣುಗಳು ಏಕತ್ರವಾಗುವುದನ್ನು ಜಘನ್ಯಸ್ಕಂಧಪ್ರದೇಶವೆಂದು ಹೇಳಿದೆ. ಅದರಲ್ಲಿ ಒಂದೊಂದು ಸೇರುವುದರಿಂದ ಉತ್ತರೋತ್ತರ ಪ್ರದೇಶ, ದೇಶ ಮತ್ತು ಸ್ಕಂಧವೆಂದು ಮೂರು ಪ್ರಕಾರದ ಸ್ಕಂಧಗಳಾಗುತ್ತವೆ. ಅದರಿಂದ ಉತ್ಕೃಷ್ಟ ಸ್ಕಂಧದವರೆಗೆ ತಿಳಿಯುವುದು ಇದೇ ರೀತಿ ಪರಮಾಣುಗಳು ಬೇರೆಯಾಗಲಿ ಅಥವಾ ಏಕತ್ರವಾಗಲಿ ಅದರಲ್ಲಿ ಈ ಮೂರು ಪ್ರಕಾರದ ಸ್ಕಂಧಗಳು ಪರಮಾಗಮದ ವಿಷಯವಾಗಿ ಗಣಿಸುವುದರಲ್ಲಿ

ಬಂದಿದೆ. ಒಂದು ಪೃಥ್ವೀಕಾಯದಲ್ಲಿ-ಪೃಥ್ವೀಪಿಂಡದಲ್ಲಿ ನಾಲ್ಕೂ ಭೇದಗಳಾಗುತ್ತವೆ. ಸಕಲಪಿಂಡದ ಹೆಸರು ಸ್ಕಂಧವಿದೆ. ಅರ್ಧದ ಹೆಸರು ಸ್ಕಂಧದೇಶವಿದೆ, ನಾಲ್ಕನೇ ಭಾಗದ ಹೆಸರು ಸ್ಕಂಧಪ್ರದೇಶವಿದೆ. ಅವಿಭಾಗದ ಹೆಸರು ಪರಮಾಣುವಿದೆ. ಈ ಪ್ರಕಾರ ತುಂಡು ತುಂಡು ಮಾಡುವುದರಿಂದ ಅಭೇದದ ಅನಂತ ಭೇದಗಳಾಗುತ್ತವೆ. ಮತ್ತು ಎರಡು ಪರಮಾಣುಗಳ ಮಿಶ್ರಣದಿಂದ ಯಾವ ಸಂಘಾತವಾಗುವುದು ಅದು ಜಘನ್ಯ ಸ್ಕಂಧಪ್ರದೇಶವಿದೆ, ಆದುದರಿಂದ ಪ್ರಾರಂಭಮಾಡಿದ ಸಮಸ್ತ ಪೃಥ್ವೀಖಂಡರೂಪ ಉತ್ಕೃಷ್ಟ ಸ್ಕಂಧದವರೆಗಿನ ಪರಮಾಣುಗಳ ಸಂಘಾತದಿಂದ ಯಾವ ಸ್ಕಂಧಗಳಾಗುತ್ತವೆ ಅವುಗಳಲ್ಲಿ ಅನಂತ ಭೇದಗಳಾಗುತ್ತವೆ. ಇದೇ ರೀತಿಯ ಭೇದ ಹಾಗೂ ಸಂಘಾತದಿಂದ ಪುದ್ಗಲದ ಅನಂತ ಪರ್ಯಾಯಗಳಾಗುತ್ತವೆ.

ಪರಮಾಣುಗಳು ಏಕತ್ರವಾಗುವುದು ಅದು ಆತ್ಮನ ವಿಜ್ಞಾನದ ಕಾರಣದಿಂದ ಏಕತ್ರವಾಗುವುದಿಲ್ಲ. ಪುಸ್ತಕದ ಏಕತ್ರತೆಯಾಗುವುದು, ಶ್ಲೋಕದ ಅಕ್ಷರಗಳನ್ನು ಬರೆಯುವುದು ಅದು ಪುದ್ಗಲದ ಸ್ವಭಾವವಿದೆ. ಜಿನೇಶ್ವರ ಭಗವಂತರ ಪೂಜೆಯ ಸಲುವಾಗಿ ಎಂಟು ಪ್ರಕಾರದ ಸಾಮಗ್ರಿಗಳನ್ನು ಸೇರಿಸುವುದು ಅದು ಆತ್ಮನ ಕೈಯೊಳಗಿನ ಮಾತಿಲ್ಲ. ಜೀವನಿಗೆ ಶುಭಭಾವಗಳು ಬರುತ್ತವೆ, ಆದರೆ ಶುಭದ ಕಾರಣದಿಂದ ಜಡದ ಅವಸ್ಥೆಯಾಗುವುದಿಲ್ಲ. ಜಡಪದಾರ್ಥಗಳು ಏಕತ್ರವಾಗುವುದು ಅಥವಾ ವಿಂಗಡಿಸಿ ಹೋಗುವುದು ಅದು ಅದರ ಸ್ವಭಾವವಿದೆ. ಒಂದು ಪೃಥ್ವೀಪಿಂಡದಲ್ಲಿ ನಾಲ್ಕು ಭೇದ ಹೇಳಿದೆ ಅದು ಜಡದ ಕಾರಣದಿಂದಿದೆ. ಅದು ಜಗತ್ತಿನ ತತ್ತ್ವವಿದೆ ಅಜ್ಞಾನೀಜೀವನು ಪರದ ಅಧಿಪತಿಯಾಗುತ್ತಾನೆ, ಪರವನ್ನು ಏಕತ್ರಿತ ಮಾಡುವುದರ ಬೆನ್ನು ಹತ್ತಿದ್ದಾನೆ ಅದು ಸಂಯೋಗದೃಷ್ಟಿಯಿದೆ. ಆದರೆ ಅವುಗಳ ಭಿನ್ನ ಭಿನ್ನ ಅವಸ್ಥೆಯಾಗುವುದು ಅದು ಪುದ್ಗಲದ ಕಾರಣದಿಂದಿದೆಯೆಂದು ಜ್ಞಾನಿಗಳು ತಿಳಿಯುತ್ತಾರೆ. ರಾಗಾದಿಗಳ ಪರಿಣಾಮಗಳಾಗುವುದು ಅದು ನನ್ನ ನಿರ್ಬಲತೆಯಿದೆ ಅದನ್ನು ಕೂಡ ನಾನು ತಿಳಿಯುವವನಿದ್ದೇನೆಂದು ಜ್ಞಾತಾನಾಗಿ ಉಳಿಯುವುದು ಅದು ಧರ್ಮವಿದೆ.

ಅಜ್ಞಾನೀ ಜೀವರುಗಳಿಗೆ ಆತ್ಮ ಮತ್ತು ಜಡದ ಮಧ್ಯದಲ್ಲಿನ ಭೇದದ ಜ್ಞಾನವಿಲ್ಲ ಮತ್ತು ತಿಳವಳಿಕೆಯಿಲ್ಲದೆ 'ಆರ್ತ ರೌದ್ರ ಪರಿತ್ಯಾಗಸ್ತದ್ಧಿಸಾಮಾಯಿಕಮತಂ' ಎಂದು ಸಾಮಾಯಿಕದ ಪಾಠ ಹೇಳುತ್ತಾರೆ, ಆದರೆ ಅದರ ಅರ್ಥವೇನೆಂಬುದರ ಅರಿವಿಲ್ಲ. ಸೋದರನೇ ! ನೀನು ಶರೀರವನ್ನು ಸ್ಥಿರವಿಡುವ ಸಾಧ್ಯತೆಯಿಲ್ಲ. ಶರೀರವು ಜಡವಿದ್ದು ಅದರ ಸ್ಥಿರವಿರುವುಕೆಯು ಅದು ಅದರ ಕಾರಣದಿಂದಿದೆ. ನೀನು ಜ್ಞಾನ ಸ್ವಭಾವಿಯಿದ್ದೇನೆಂದು ತಿಳಿದುಕೊಳ್ಳು.

ಎರಡು ಪರಮಾಣುಗಳ ಸಂಯೋಗದಿಂದ ಹಿಡಿದು ಪೃಥ್ವೀಪಿಂಡದವರೆಗಿನ ಸಂಯೋಗಗಳಲ್ಲಿ ಅನಂತ ಭೇದಗಳಿವೆ ಅವೆಲ್ಲವೂ ಪರ್ಯಾಯಗಳಿವೆ. ಭೇದ ಸಂಯೋಗದಿಂದ ಪುದ್ಗಲದ ಅನಂತ ಪರ್ಯಾಯಗಳಾಗುತ್ತವೆ.

ಸ್ಕಂಧದ ಹೆಸರು ಪುದ್ಗಲವೆಂದು ಹೇಳಿರುವುದರಿಂದ ಈಗ ಪುದ್ಗಲದ ಅರ್ಥ ತಿಳಿಸಿಕೊಡುತ್ತಾರೆ,-

**ಬಾದರಸುಹುಮಗದಾಣಂ ಖಂಧಾಣಂ ಪೋಗ್ಗಲೋ ತ್ತಿ ವವಹಾರೋ ।**
**ತೇ ಹೋಂತಿ ಛಪ್ಪಯಾರಾ ತೇಲೋಕ್ಕಂ ಜೇಹಿಂ ಣಿಪ್ಪಣ್ಣಂ ॥೭೬॥**

**ಯಾವ ಬಾದರ ಮೇಣ್ ಸೂಕ್ಷ್ಮಗತಸ್ಕಂಧಕ್ಕೆ 'ಪುದ್ಗಲ'ವೆಂಬ ವ್ಯವಹಾರವಿದೆ ।**
**ಅವು ಆರು ಪ್ರಕಾರಗಳಿದ್ದು ಅವುಗಳಿಂ ಮೂರುಲೋಕಗಳು ನಿಷ್ಪನ್ನವಿವೆ ॥೭೬॥**

ಅನಂತ ಪರಮಾಣುಗಳು ಏಕತ್ರವಾಗುತ್ತವೆ. ಕೆಲವು ಸೂಕ್ಷ್ಮ ಪರಿಣಮನಧಾರಣ ಮಾಡುವವು, ಬೇಕಾದರೆ ಕಾರ್ಮಣ ಶರೀರದ ಸೂಕ್ಷ್ಮ ಪರಿಣಾಮಧಾರಣ ಮಾಡಲಿ ಬೇಕಾದರೆ ಔದಾರಿಕ ಶರೀರಧಾರಣ ಮಾಡಲಿ ಅವೆಲ್ಲವನ್ನು

ಪುದ್ಗಲವೆಂದು ಹೇಳಿದೆ. ಈ ಮೊದಲು ಸ್ಕಂಧ, ದೇಶ, ಪ್ರದೇಶ ಮತ್ತು ಪರಮಾಣುವೆಂದು ನಾಲ್ಕು ಪ್ರಕಾರದ ಭೇದ ಹೇಳಿದೆ ಅವುಗಳಲ್ಲಿ ಗಲನ ಮತ್ತು ಪೂರಣವೆಂಬ ಸ್ವಭಾವವಿದೆ. ಪುದ್ ಎಂದರೆ ಪೂರಣ ಮತ್ತು ಗಲ ಎಂದರೆ ವಿಂಗಡಿಸುವುದು. ತಮ್ಮ ಕಾರಣದಿಂದ ಪೂರಣವಿದೆ ಎಂದರೆ ಸೇರುವುದು ಮತ್ತು ವಿಂಗಡಿಸುತ್ತವೆ ಅದಕ್ಕಾಗಿ ಪುದ್ಗಲವೆಂದು ಹೇಳುತ್ತಾರೆ. ಮತ್ತು ಯಾವವು ವೃದ್ಧಿಸುತ್ತವೆ, ಕಡಿಮೆಯಾಗುತ್ತವೆ ಅವನ್ನು ಪುದ್ಗಲವೆಂದು ಹೇಳಿದೆ.

ನನ್ನಿಂದ ಪುದ್ಗಲದಲ್ಲಿ ವೃದ್ಧಿ-ಹಾನಿ ಮಾಡುವ ಸಾಧ್ಯತೆಯಿದೆಯೆಂದು ಮನ್ನಿಸುವ ಜೀವನು ಮೂಢನಿದ್ದಾನೆ. ಹೀಗೆ ಮನ್ನಿಸುವವನಿಗೆ ಧರ್ಮವಂತೂ ಇರುವುದಿಲ್ಲ, ಆದರೆ ಸ್ವಧರ್ಮತ್ಯಾಗವು ವರ್ತಿಸುತ್ತದೆ. ಮೋಹದ ಅರ್ಥವನ್ನು 'ಸ್ವಧರ್ಮತ್ಯಾಗ'ವೆಂದು ಮಾಡಲಾಗಿದೆ. ತನ್ನ ಜ್ಞಾತಾ-ದೃಷ್ಟಾಸ್ವಭಾವವನ್ನು ಬಿಟ್ಟುಕೊಟ್ಟು ಜಡದ ಕರ್ತಾ-ಹರ್ತಾ-ಭೋಕ್ತಾನಾಗಿರುವುದರಿಂದ ಅವನಿಗೆ ಸ್ವಧರ್ಮತ್ಯಾಗವು ವರ್ತಿಸುತ್ತದೆ. ಅವನೇನೋ ತ್ಯಾಗಿಯೆನಿಸಿಕೊಳ್ಳುತ್ತಾನೆ, ಆದರೆ ಅವನು ಪಾಪದ ತ್ಯಾಗಿಯಲ್ಲ, ತನ್ನ ಧರ್ಮದ ತ್ಯಾಗಿಯಿದ್ದಾನೆ, ಮೊದಲು ಆಹಾರಾದಿ ಕ್ರಿಯೆಗಳು ನನ್ನಿಂದ ಆಗುವುದಿಲ್ಲವೆಂದು ನಿಜವಾದ ಜ್ಞಾನ ಮಾಡಿಕೊಳ್ಳಬೇಕು, ಏಕೆಂದರೆ ನಾನು ಜ್ಞಾನನಿದ್ದೇನೆ. ತಮ್ಮ ಜ್ಞಾನಸ್ವಭಾವದ ಶ್ರದ್ಧೆ ಮಾಡಿದರೆ ಆ ಶ್ರದ್ಧೆಯಲ್ಲಿ ಸಮತೆಯಿದೆ. ಹೀಗೆ ಸ್ವಭಾವದ ಶ್ರದ್ಧೆಯಾದ ನಂತರ ಸ್ವಭಾವದ ಅವಲಂಬನದಿಂದ ರಾಗದ ಅಭಾವವಾಗಿ ವೀತರಾಗತೆಯು ಪ್ರಕಟವಾಗುವುದು ಅದು ಚಾರಿತ್ರದ ಸಮತೆಯಿದೆ. ಯಾರಿಗೆ ಶ್ರದ್ಧೆಯ ಸಮತೆಯ ಗೊತ್ತುಗುರಿಯಿಲ್ಲ, ಮತ್ತು ಪರಪದಾರ್ಥಗಳನ್ನು ಬಿಡುವುದರ ಅಭಿಮಾನಪಡುತ್ತಾನೆ ಅಲ್ಲದೆ ಬೆಳಗಿನಿಂದ ಸಾಯಂಕಾಲದವರೆಗೆ ಆಹಾರದ ಶುದ್ಧಿಯಲ್ಲಿ ನಿಂತುಕೊಂಡಿರುತ್ತಾನೆ ಅವನು ಬಾಹ್ಯದಲ್ಲಿ ತ್ಯಾಗಿಯಾಗಿ ಕಂಡುಬಂದರೂ ಕೂಡ ಅವನಿಗೆ ಚಾರಿತ್ರದ ಸಮತೆಯಾಗದಿರುವುದರಿಂದ ಅವನು ಸ್ವಧರ್ಮದ ತ್ಯಾಗಿಯಿದ್ದಾನೆ.

ಸ್ಕಂಧದಲ್ಲಿ ನ್ಯೂನಾಧಿಕತೆಗಳು ಆಗುತ್ತಿರುವುದರಿಂದ ಅದನ್ನು ಪುದ್ಗಲವೆಂದು ಹೇಳಿದೆ. ಈಗ ಪರಮಾಣುವನ್ನು ಪುದ್ಗಲವೆಂದೇಕೆ ಹೇಳಿದೆಯೆಂಬುದನ್ನು ಹೇಳುತ್ತಾರೆ. ತನ್ನ ಸ್ಪರ್ಶ, ರಸ, ಗಂಧ, ವರ್ಣ ಗುಣದ ಭೇದಗಳಲ್ಲಿ ಷಡ್ ಗುಣಹಾನಿ ವೃದ್ಧಿಯ ಪ್ರಭಾವದಿಂದ ಪುದ್ಗಲವೆಂಬ ಹೆಸರನ್ನು ಪಡೆದಿದೆ. ಒಂದು ಪರಮಾಣುವಿನಲ್ಲಿ ಒಂದು ಗುಣ ಸ್ನಿಗ್ಧತೆಯಿದ್ದರೆ ಎರಡನೆಯ ಸಮಯದಲ್ಲಿ ಅನಂತಗುಣಿತ ಸ್ನಿಗ್ಧತೆಯಾಗಿಬಿಡುತ್ತದೆ. ಹಾಲಿನ ಪರಮಾಣುಗಳು ಸಿಹಿಯಿಂದ ಹುಳಿಯ ರೂಪವಾಗಿ ಹೋಗುತ್ತವೆ, ಕೆಲವು ಅಲ್ಪಸಿಹಿಯಿಂದ ಅಧಿಕ ಸಿಹಿರೂಪವಾಗಿ ಹೋಗುತ್ತವೆ ಕೆಲವೊಂದು ಗುಣ ಹಸಿರು ಇದ್ದರೆ ಅವು ಎರಡನೇ ಸಮಯದಲ್ಲಿ ಅನಂತಗುಣಿತ ಹಸಿರಾಗಿ ಹೋಗುತ್ತವೆ, ಕೆಲವು ಪರಮಾಣುಗಳು ಶೀತದಿಂದ ಉಷ್ಣವಾಗಿಹೋಗುತ್ತವೆ ಅದಕ್ಕಾಗಿ ಅವನ್ನು ಪುದ್ಗಲವೆಂದು ಹೇಳಿದೆ. ಅವೆಲ್ಲವು ಜಡದಿಂದ ಆಗುತ್ತವೆ ಆತ್ಮನ ಇಚ್ಛೆಯಿಂದ ಆಗುವುದಿಲ್ಲ. ಅದಕ್ಕಾಗಿ ಈ ಪುದ್ಗಲದ ನಾಟಕದ ಜ್ಞಾನ ಮಾಡಿಕೊಳ್ಳು ಏಕೆಂದರೆ ನೀನು ಜ್ಞಾತಾ ಇರುವೆ.

ಮತ್ತು ಆ ಪರಮಾಣುವಿನಲ್ಲಿ ಒಂದು ಕಾಲದಲ್ಲಿ ತನ್ನ ಯೋಗ್ಯತೆಯ ಕಾರಣದಿಂದ ಸ್ಕಂಧವಾಗುವ ಶಕ್ತಿಯಿದೆ. ಅದೇ ಪ್ರಕಾರ ಅದೆಷ್ಟೋ ಪರಮಾಣುಗಳು ಎಂದೂ ಸ್ಕಂಧರೂಪವಾಗುವುದೇ ಇಲ್ಲ. ಆದಾಗ್ಯೂ ಅವುಗಳಲ್ಲಿ ಸ್ಕಂಧವಾಗುವ ಯೋಗ್ಯತೆಯಿದೆ, ಅದಕ್ಕಾಗಿ ಅವನ್ನು ಕೂಡ ಪುದ್ಗಲವೆಂದು ಹೇಳಿದೆ. ಅಲ್ಲದೆ ಸ್ಕಂಧ, ದೇಶ ಮತ್ತು ಪ್ರದೇಶವೆಂದು ಮೂರು ಪ್ರಕಾರದ ಸ್ಕಂಧಗಳಿದ್ದು ಆ ಅನಂತ ಪರಮಾಣುಗಳು ಸೇರಿಕೊಂಡು ಒಂದು ಪಿಂಡರೂಪ ಅವಸ್ಥೆಯನ್ನು ಧಾರಣ ಮಾಡುತ್ತವೆ. ಆ ಕಾರಣದಿಂದ ಅವುಗಳಲ್ಲಿ ಕೂಡ ಪೂರಣ-ಗಲನ ಸ್ವಭಾವವಿದೆ ಮತ್ತು ಅವನ್ನು ಕೂಡ ಪುದ್ಗಲವೆಂದು ಹೇಳಲಾಗುತ್ತದೆ. ಅವು ಆರು ಪ್ರಕಾರವಿವೆ. ಇಡೀ ಜಗತ್ತಿನ ಪುದ್ಗಲ ಸ್ಕಂಧಗಳನ್ನು ಆರು ಪ್ರಕಾರದಿಂದ ಹೇಳಲಾಗಿದೆ.

**ಭಾವಾರ್ಥ :-** ಪುದ್ಗಲ ಸ್ಕಂಧಗಳು ತಮ್ಮ ಸ್ಥೂಲ ಸೂಕ್ಷ್ಮ ಪ್ರಮಾಣಗಳ ಭೇದಗಳಿಂದ ಮೂರು ಲೋಕದಲ್ಲಿ ಪ್ರವರ್ತಿಸುತ್ತಲಿವೆ, ಅವನ್ನು ಆರು ಪ್ರಕಾರವಾಗಿ ತಿಳಿಸಿಕೊಡಲಾಗಿದೆ.

**೧) ಬಾದರ ಬಾದರ :-** ಯಾವ ಪುದ್ಗಲ ಪಿಂಡವು ಎರಡು ತುಂಡುಗಳಾದ ನಂತರ ಪುನಃ ತಮ್ಮ ಇಚ್ಛೆಯಿಂದ ಏಕತ್ರವಾಗುವುದಿಲ್ಲ ಅಂಥ ಪುದ್ಗಲ ಪಿಂಡವನ್ನು ಬಾದರ ಬಾದರವೆಂದು ತಿಳಿಯುವುದು. ಉದಾಹರಣೆಗಾಗಿ ಪಾಷಾಣ ಮತ್ತು ಕಾಷ್ಠಗಳನ್ನು ತುಂಡು ಮಾಡಿದ ನಂತರ ಅವು ಮತ್ತೆ ಒಂದಾಗುವುದಿಲ್ಲ. ಆ ಪುದ್ಗಲಗಳು ಸ್ವಭಾವದಿಂದ ಒಂದಾಗುವುದಿಲ್ಲ. ಹೀಗೆ ಪುದ್ಗಲಸ್ಕಂಧದ ಸ್ವಭಾವವಿದೆ.

**೨) ಬಾದರ :-** ಯಾವ ಪುದ್ಗಲದ ಪಿಂಡವು ತುಂಡು ಆದ ನಂತರ ತಮ್ಮ ಇಚ್ಛೆಯಿಂದ ಒಂದಾಗಿಹೋಗುತ್ತವೆ ಅದನ್ನು ಬಾದರವೆಂದು ಹೇಳಿದೆ. ಉದಾಹರಣೆಗಾಗಿ ಎಣ್ಣೆ, ತುಪ್ಪಗಳು ಬೇರೆಯಾಗಿ ಪುನಃ ತಮ್ಮ ಕಾರಣದಿಂದ ಒಂದಾಗಿಹೋಗುವಂಥದು ಇವುಗಳ ಸ್ವಭಾವವಿದೆ, ಅವು ಆತ್ಮನ ಕಾರಣದಿಂದ ಬೇರೆಯಾಗುವುದಿಲ್ಲ ಅಥವಾ ಒಂದಾಗುವುದಿಲ್ಲ. ಇಲ್ಲಿ ಪುದ್ಗಲದ ಜ್ಞಾನಮಾಡಿಸಿ ಅದು ನಿನ್ನಿಂದ ಭಿನ್ನವಿದೆಯೆಂದು ಹೇಳಿದೆ, ನಿನ್ನಿಂದ ಅದರಲ್ಲಿ ಏನೂ ಆಗುವುದಿಲ್ಲ. ಮತ್ತು ಕಾಲದಿಂದ ಕೂಡ ಅದರಲ್ಲಿ ಅದಲು-ಬದಲಾಗುವುದಿಲ್ಲ. ತನ್ನ ಕಾರಣದಿಂದ ಬೇರೆಯಾಗುವುದು ಮತ್ತು ಏಕತ್ರವಾಗುವುದು ಅದು ಅದರ ಸ್ವಭಾವವಿದೆ ಮತ್ತು ಅದು ಬಾದರ ಸ್ಕಂಧವಿದೆ.

**೩) ಬಾದರ ಸೂಕ್ಷ್ಮ :-** ಯಾವವು ನೋಡುವುದರಲ್ಲಿ ಬರುತ್ತವೆ, ಆದರೆ ಹಸ್ತ ಮೊದಲಾದವುಗಳಿಂದ ಗ್ರಹಣವಾಗುವ ಸಾಧ್ಯತೆಯಿಲ್ಲ ಆ ಸ್ಕಂಧವನ್ನು ಬಾದರ ಸೂಕ್ಷ್ಮವೆಂದು ಹೇಳಿದೆ. ಉದಾಹರಣೆಗಾಗಿ ಸೂರ್ಯನ ಪ್ರಕಾಶ, ಚಂದಿರನ ಬೆಳದಿಂಗಳು, ನೆರಳು ಮೊದಲಾದವು ಕಣ್ಣುಗಳಿಂದ ಕಂಡು ಬರುತ್ತವೆ, ಆದರೆ ಕೈಗಳಿಂದ ಹಿಡಿದುಕೊಳ್ಳುವ ಸಾಧ್ಯತೆಯಿಲ್ಲ. ಅದಕ್ಕಾಗಿ ಅವುಗಳನ್ನು ಬಾದರ ಸೂಕ್ಷ್ಮವೆಂದು ತಿಳಿಯುವುದು.

ನೀನು ಅಸಂಖ್ಯ ಪ್ರದೇಶಿಯಾದ ಆತ್ಮನಿರುವೆ, ನಿನ್ನಿಂದ ಪುದ್ಗಲದ ಅವಸ್ಥೆಯಾಗುವುದಿಲ್ಲ, ನೀನು ತಿಳಿದುಕೊಳ್ಳುವವನಿರುವೆ. ಯಾವ ಪ್ರಕಾರ ಸೂರ್ಯನು ಲೋಕದಲ್ಲಿ ಪ್ರಕಾಶಿಸುತ್ತಿದ್ದಾನೆ ಅದೇ ಪ್ರಕಾರ ಜಡಪ್ರಕಾಶದಿಂದ ವಿಲಕ್ಷಣವಾದಂಥ ಕೇವಲಜ್ಞಾನರೂಪದ ಪ್ರಕಾಶದಿಂದ ನೀನು ತುಂಬಿಕೊಂಡು ನಿಂತಿರುವೆ, ನೀನು ಅನಂತ ಪ್ರಕಾಶಿಯಿರುವೆ. ಅನಂತ ಸ್ಕಂಧಗಳನ್ನು ತಿಳಿದುಕೊಳ್ಳುವಂಥದು ನಿನ್ನ ಸ್ವಭಾವವಿದೆ. ಅನಂತವನ್ನು ತಿಳಿಯುವಾಗ ರಾಗವಾಗುವಂಥದು ನಿನ್ನ ಸ್ವಭಾವವಿಲ್ಲ. ಅನಂತವನ್ನು ತಿಳಿದುಕೊಳ್ಳುವಂಥ ಅನಂತಜ್ಞಾನ ಪ್ರಕಾಶದ ಶಕ್ತಿರೂಪವನು ನೀನಿರುವೆ. ಮತ್ತು ಹೇಗೆ ಚಂದ್ರನು ಶೀತಲತೆಯನ್ನು ಕೊಡುತ್ತಾನೆ ಹಾಗೆ ಜಡ ಶೀತಲತೆಯಿಂದ ವಿಲಕ್ಷಣವಾದಂಥ ಚೈತನ್ಯ ಶೀತಲತೆಯು-ಶಾಂತಿಯು-ಧೈರ್ಯವು ನಿನ್ನಲ್ಲಿ ಅನಂತವಿದೆ. ಅನಂತ ಪದಾರ್ಥಗಳಿದ್ದರೂ ಕೂಡ ಅವು ನಿನ್ನೊಳಗೆ ಆಕುಲತೆಯನ್ನು ಉತ್ಪನ್ನ ಮಾಡುವ ಸಾಧ್ಯತೆಯಿಲ್ಲ. ನೀನು ಅನಂತ ಶಕ್ತಿಸಂಪನ್ನನಿರುವೆ. ಹೀಗೆ ಆತ್ಮನು ಅನಂತಜ್ಞಾನ ಪ್ರಕಾಶದ ಮತ್ತು ಅನಂತಶಾಂತಿಯ ಪರಿಪೂರ್ಣ ಭಂಡಾರನಿದ್ದಾನೆ.

ಈ ಪ್ರಕಾರ ತಮ್ಮ ಅರಿವೇ ತಮಗಿಲ್ಲದವರು ಪರಪದಾರ್ಥಗಳನ್ನು ತಮ್ಮವೆಂದು ಮನ್ನಿಸುತ್ತಾರೆ. ಒಂದು ಪುದ್ಗಲದ್ರವ್ಯದ ಕ್ರಿಯೆಯು ನನ್ನಿಂದ ಆಗುತ್ತದೆಯೆಂದು ಮನ್ನಿಸುವವನು ಅನಂತ ಪದಾರ್ಥಗಳ ಅಧಿಪತಿಯಾಗುತ್ತಾನೆ. ಮತ್ತು ತಾನು ಅನಂತ ಆಕುಲತೆಯಲ್ಲಿ ನಿಂತುಕೊಳ್ಳುವುದರಿಂದ ಅವನ ಜ್ಞಾನವು ಯಥಾರ್ಥವಾಗುವುದಿಲ್ಲ, ಅದರಿಂದಾಗಿ ಅವನಿಗೆ ಅಶಾಂತಿಯಾಗುತ್ತದೆ, ಅವನಿಗೆ ಅಧರ್ಮವಾಗುತ್ತದೆ. ಆದರೆ ಪುದ್ಗಲದ ಪರಿಣಮನವು ಪುದ್ಗಲದ ಕಾರಣದಿಂದಿದೆ, ಪುದ್ಗಲದ ಅನೇಕ ಪ್ರಕಾರದ ವಿವಿಧತೆಯ ಜ್ಞಾನಮಾಡಿಕೊಳ್ಳುವುದು ನನ್ನ ಸ್ವಭಾವವಿದೆ, ನನ್ನಲ್ಲಿ ಅನಂತಜ್ಞಾನ ಪ್ರಕಾಶವಿದೆ, ಅನಂತ ಶಾಂತಿಯಿದೆ ಮತ್ತು ಅನಂತ ಶೀತಲತೆಯಿದೆಯೆಂದು ಯಥಾರ್ಥಜ್ಞಾನ ಮಾಡಿಕೊಂಡು ಶ್ರದ್ಧೆ ಮಾಡಿದರೆ ಅವನಿಗೆ ಧರ್ಮದ ದಶೆಯು ಪ್ರಕಟವಾಗುವುದು.

**೪) ಸೂಕ್ಷ್ಮಬಾದರ :-** ಯಾವ ಸ್ಕಂಧವು ಸೂಕ್ಷ್ಮವಿದ್ದು ಸ್ಥೂಲದಂತೆ ಪ್ರತಿಭಾಸವಾಗುತ್ತದೆ ಅದನ್ನು

ಸೂಕ್ಷ್ಮಬಾದರವೆಂದು ಹೇಳಿದೆ. ಉದಾಹರಣೆಗಾಗಿ ಶ್ರೀಗಂಧದ ಗಂಧ ಬರುತ್ತದೆ ಆ ಗಂಧವು ಕಂಡುಬರುವುದಿಲ್ಲ ಅದಕ್ಕಾಗಿ ಸೂಕ್ಷ್ಮವಿದೆ, ಆದರೆ ಮೂಗಿನಿಂದ ತಿಳಿದುಬರುತ್ತದೆಂದು ಬಾದರವಿದೆ, ಹೀಗೆ ಸೂಕ್ಷ್ಮಬಾದರವಿದೆ. ಮತ್ತು ಕಂಡುಬರುವುದಿಲ್ಲ ಸೂಕ್ಷ್ಮವಿದೆ, ಆದರೆ ಕಿವಿಗಳ ಮೂಲಕ ಕೇಳಿ ಬರುತ್ತದೆಯೆಂದು ಸ್ಥೂಲವಿದೆ. ಹೀಗೆ ಸೂಕ್ಷ್ಮಸ್ಥೂಲದ ಅರ್ಥವನ್ನು ತಿಳಿದುಕೊಳ್ಳಬೇಕು. ಆತ್ಮನು ಭಾಷೆಯನ್ನು ಆಡುವುದಿಲ್ಲ ಅದೇಪ್ರಕಾರ ಭಾಷಾಬಂಧ ಮಾಡಿಕೊಳ್ಳುವ ಸಾಧ್ಯತೆಯಿಲ್ಲ ಅವಂತೂ ಪುದ್ಗಲದ ಸೂಕ್ಷ್ಮಬಾದರ ಸ್ಕಂಧಗಳಿವೆ.

**ತನತಾ ಮನತಾ ವಚನತಾ, ಜಡತಾ ಜಡಸಮ್ಮೇಲ ।**
**ಲಘುತಾ ಗುರುತಾ ಗಮನತಾ, ಯೇ ಅಜೀವಕೇ ಖೇಲ ॥**

ಜಡದ ಚಲನವಲನವು ಜಡದಿಂದಿದೆ, ಅದೆಲ್ಲವೂ ಅಜೀವದ ಆಟವಿದೆ. ಇದು ಜಡದ ಅವಸ್ಥೆಯಿದೆಯೆಂದು ಜ್ಞಾನಿಗಳು ತಿಳಿಯುತ್ತಾರೆ. ಅದರಿಂದ ಅವರು ಅದರ ಕುರಿತು ಅಭಿಮಾನಪಡುವುದಿಲ್ಲ. ಆದರೆ ಹೇಗಿದೆ ಹಾಗೆ ತಿಳಿದುಕೊಳ್ಳುತ್ತಾರೆ. ಹೀಗೆ ಪುದ್ಗಲದ ಸ್ಕಂಧಗಳನ್ನು ಹೇಗಿವೆ ಹಾಗೆ ತಿಳಿದುಕೊಳ್ಳುವುದು ಮತ್ತು ಆತ್ಮನು ಅವುಗಳಿಂದ ಬೇರೆಯಿದ್ದು ಅವನು ಕೇವಲ ಜ್ಞಾತಾನಿದ್ದಾನೆಂದು ತಿಳಿದುಕೊಳ್ಳುವುದು ಅದು ಧರ್ಮವಿದೆ.

ಆತ್ಮನು ಜ್ಞಾನಸ್ವಭಾವಿಯಿದ್ದಾನೆ. ಪುದ್ಗಲ ಜ್ಞೇಯಗಳನ್ನು ತಿಳಿದುಕೊಳ್ಳುವುದು ಅವನ ಸ್ವಭಾವವಿದೆ. ಪರಮಾಣುಗಳು ಬೇರೆ ಬೇರೆಯಾಗಲಿ ಅಥವಾ ಏಕತ್ರಿತವಾಗಲಿ ಅದರಲ್ಲಿ ಆತ್ಮನ ಅಧಿಕಾರವಿಲ್ಲ. ಶರೀರ ಮೊದಲಾದ ದೃಶ್ಯಮಾನ ರೂಪಿಪದಾರ್ಥಗಳ ವಿವಿಧತೆ ಮತ್ತು ವಿಚಿತ್ರತೆಯು ಕಂಡುಬರುತ್ತದೆ. ಅದು ಅಂತರ್ಯದಲ್ಲಿ ಚೇತನಸ್ವರೂಪಿಯಾದ ಆತ್ಮನು ಇದ್ದಾನೆಂದು ವಿವಿಧತೆಯಾಗುತ್ತದೆಂಬುದಾಗಿಲ್ಲ. ಈ ವಿವಿಧತೆಯು ನನ್ನಿಂದ ಆಗುತ್ತದೆಯೆಂದು ಅಜ್ಞಾನಿಯು ಮನ್ನಿಸುತ್ತಾನೆ ಮತ್ತು ಹೀಗೆ ಮನ್ನಿಸಿ ಅಸತ್ಯದ ಪಾಪ ಕಟ್ಟಿಕೊಳ್ಳುತ್ತಾನೆ.

ಇಲ್ಲಿ ಸ್ಕಂಧಗಳ ಆರು ಭೇದದ ಮಾತು ನಡೆಯುತ್ತಿದೆ.

**೧) ಬಾದರ ಬಾದರ :-** ಪಾಷಾಣ ಮತ್ತು ಕಾಷ್ಠಗಳು ಒಮ್ಮೆ ತುಂಡುಗಳಾದ ನಂತರ ಪುನಃ ಆ ತುಂಡುಗಳು ಏಕತ್ರವಾಗುವುದಿಲ್ಲ ಹೀಗೆ ಪುದ್ಗಲದ ಸ್ವಭಾವವಿದ್ದು ಅದನ್ನು ಬಾದರ ಬಾದರ ಸ್ಕಂಧವೆಂದು ಹೇಳಿದೆ. ಆತ್ಮನು ಅವುಗಳ ತುಂಡು ಮಾಡುವ ಸಾಧ್ಯತೆಯಿಲ್ಲ.

**೨) ಬಾದರ :-** ಎಣ್ಣೆ, ತುಪ್ಪ ಮೊದಲಾದ ಪ್ರವಾಹೀ ವಸ್ತುಗಳು ಬೇರೆ ಬೇರೆಯಾಗಿ ನಂತರ ಸ್ವಯಂ ಏಕತ್ರವಾಗುತ್ತವೆ ಅವನ್ನು ಬಾದರ ಸ್ಕಂಧವೆಂದು ಹೇಳಿದೆ. ನಾನು ತುಪ್ಪವನ್ನು ಏಕತ್ರ ಮಾಡಿದ್ದೇನೆಂದು ಅಜ್ಞಾನಿಗಳು ಹೇಳುತ್ತಾರೆ ಅದು ಅಜ್ಞಾನವಿದೆ. ತುಪ್ಪವು ಏಕತ್ರವಾಗುವುದು ಅಥವಾ ಬೇರೆಯಾಗುವುದು ಅದು ತುಪ್ಪದ ಕಾರಣದಿಂದ ಇದೆ. ಅಗ್ನಿಯ ಕಾರಣದಿಂದ ಅಥವಾ ಆತ್ಮನ ಕಾರಣದಿಂದ ಇಲ್ಲ.

**೩) ಬಾದರ ಸೂಕ್ಷ್ಮ :-** ಬಿಸಿಲು, ಬೆಳದಿಂಗಳು, ಛಾಯೆ ಇವು ಕಣ್ಣುಗಳಿಂದ ಕಂಡುಬರುತ್ತವೆಂದು ಬಾದರತನವಿದೆ, ಒಂದು ಸ್ಥಳದಿಂದ ಬೇರೊಂದು ಸ್ಥಳಕ್ಕೆ ಕೊಂಡೊಯ್ಯಲಾಗುವುದಿಲ್ಲವೆಂದು ಸೂಕ್ಷ್ಮವಿದೆ. ಈ ರೀತಿಯಾಗಿ ಬಾದರ ಸೂಕ್ಷ್ಮವಿದೆ. ಅದನ್ನು ಯಾರೂ ಮಾಡಲಾಗಿಲ್ಲ, ಸ್ವಭಾವದಿಂದಲೇ ಆದದ್ದು ಇದೆ.

**೪) ಸೂಕ್ಷ್ಮಬಾದರ :-** ಸ್ಪರ್ಶ, ರಸ, ಗಂಧ ಮತ್ತು ಶಬ್ದಾದಿಗಳನ್ನು ಕಣ್ಣುಗಳು ತಿಳಿಯುವುದಿಲ್ಲ ಅದಕ್ಕಾಗಿ ಸೂಕ್ಷ್ಮವಿವೆ ಮತ್ತು ಬೇರೆ ಯಾವುದೇ ಇಂದ್ರಿಯದ ಮೂಲಕ ತಿಳಿದುಬರುತ್ತವೆಂದು ಬಾದರವಿದೆ. ಈ ಸೂಕ್ಷ್ಮಬಾದರವನ್ನು ತಿಳಿಯುವುದು. ಈ ವಸ್ತುವು ಹಗುರು ಇದೆ ಅಥವಾ ಭಾರವಾಗಿದೆಯೆಂಬುದು ಕಣ್ಣುಗಳಿಂದ ಕಂಡುಬರುವುದಿಲ್ಲ ಆದರೆ ಸ್ಪರ್ಶನೇಂದ್ರಿಯದ ಮೂಲಕ ಜ್ಞಾನವಾಗುತ್ತದೆ. ಈ ವಸ್ತುವು ನಯವಿದೆ ಅಥವಾ ಕರ್ಕಶವಿದೆಯೆಂಬುದನ್ನು ಕಣ್ಣುಗಳಿಂದ ಕಾಣಲಾಗುವುದಿಲ್ಲ, ಆದರೆ ಅದು ಸ್ಪರ್ಶನೇಂದ್ರಿಯದಿಂದ ತಿಳಿದು ಬರುತ್ತದೆ. ಸಿಹಿ, ಹುಳಿ, ಒಗರು ಸ್ವಾದಗಳು ಕಣ್ಣುಗಳಿಂದ

ತಿಳಿದುಬರುವುದಿಲ್ಲ ಅದಕ್ಕಾಗಿ ಸೂಕ್ಷ್ಮವಿದೆ ಮತ್ತು ನಾಲಿಗೆಯಿಂದ ತಿಳಿದುಬರುತ್ತದೆಂದು ಬಾದರವಿದೆ ಹೀಗೆ ಸೂಕ್ಷ್ಮಬಾದರವಿದೆ. ಸುಗಂಧದೆಣ್ಣೆಯ ಗಂಧದ ಪರಮಾಣುಗಳು ಕಾಣಬರುವುದಿಲ್ಲವೆಂದು ಸೂಕ್ಷ್ಮವಿವೆ, ಆದರೆ ಮೂಗಿನಿಂದ ತಿಳಿದುಬರುತ್ತದೆಂದು ಬಾದರವಿದೆ ಹೀಗೆ ಸೂಕ್ಷ್ಮಬಾದರವನ್ನು ತಿಳಿಯಬೇಕು. ಶಬ್ದವು ಕಣ್ಣಿಗೆ ಕಾಣುವುದಿಲ್ಲ ಆದರೆ ಕಿವಿಯಿಂದ ಕೇಳಲಾಗುತ್ತದೆ ಈ ಎಲ್ಲ ಅವಸ್ಥೆಗಳು ಪುದ್ಗಲಗಳಿಂದ ಆಗುತ್ತಲಿವೆ, ಆತ್ಮನಿಂದ ಆಗುವುದಿಲ್ಲ.

ಬಾದರ ಬಾದರ ಮತ್ತು ಬಾದರವಂತೂ ಇಂದ್ರಿಯದಿಂದ ಗ್ರಾಹ್ಯವಿದೆ. ಬಾದರಸೂಕ್ಷ್ಮವು ಕಣ್ಣುಗಳಿಂದ ಗ್ರಾಹ್ಯವಿದೆ, ಮತ್ತು ಇತರ ಇಂದ್ರಿಯಗಳಿಂದ ಗ್ರಾಹ್ಯವಿಲ್ಲ. ಇನ್ನು ಸೂಕ್ಷ್ಮಬಾದರವು ಕಣ್ಣುಗಳಿಂದ ಗ್ರಾಹ್ಯವಿಲ್ಲ, ಆದರೆ ಕಣ್ಣುಗಳ ಹೊರತಾಗಿ ಇತರ ಇಂದ್ರಿಯಗಳಿಂದ ಗ್ರಾಹ್ಯವಿದೆ. ಈಗ ಇಂದ್ರಿಯಗಳಿಂದ ಗ್ರಾಹ್ಯವಿಲ್ಲದಂಥ ಸ್ಕಂಧಗಳ ಕಥನ ಮಾಡಲಾಗುವುದು.,

**೫) ಸೂಕ್ಷ್ಮ :-** ಇಂದ್ರಿಯಗಳಿಗೆ ಗ್ರಾಹ್ಯವಿಲ್ಲದಂಥ ಕರ್ಮ ವರ್ಗಣಾದ ಸ್ಕಂಧಗಳನ್ನು ಸೂಕ್ಷ್ಮ ಸ್ಕಂಧಗಳೆಂದು ಹೇಳಿದೆ. ಅವು ಯಾವುದೇ ಇಂದ್ರಿಯದ ಮೂಲಕ ತಿಳಿದುಬರುವ ಸಾಧ್ಯತೆಯಿಲ್ಲ.

**೬) ಸೂಕ್ಷ್ಮ ಸೂಕ್ಷ್ಮ :-** ಕರ್ಮವರ್ಗಣಗಳಿಂದ ಕೂಡ ಅತ್ಯಂತ ಸೂಕ್ಷ್ಮ ಎರಡು ಪರಮಾಣು, ಮೂರು ಪರಮಾಣು ಮೊದಲಾದವುಗಳ ಸ್ಕಂಧಗಳನ್ನು ಸೂಕ್ಷ್ಮಸೂಕ್ಷ್ಮವೆಂದು ಹೇಳಿದೆ. ಅವು ಕೂಡ ಇಂದ್ರಿಯಗಳಿಂದ ಗ್ರಾಹ್ಯವಿಲ್ಲ.

ಇಲ್ಲಿ ಹೇಳಿದ ಭೇದಗಳು ಅವು ಸ್ಕಂಧದ ಭೇದಗಳಿವೆ. ಗೊಮ್ಮಟಸಾರದಲ್ಲಿ ಪುದ್ಗಲದ ಆರು ಭೇದಗಳನ್ನು ಹೇಳಿದೆ ಅದರಲ್ಲಿ ಐದು ವಚನಗಳ ಮೇಲೆ ಇದಕ್ಕೆ ಅನುಸರಿಸಿ ಮತ್ತು ಕೊನೆಯ ವಚನವಾದ ಸೂಕ್ಷ್ಮ ಸೂಕ್ಷ್ಮವನ್ನು ಒಂದು ಪರಮಾಣುವಿನದಾಗಿ ಸ್ವೀಕರಿಸಲಾಗಿದೆ. ಇಲ್ಲಿಯಂತೂ ಆರು ಪ್ರಕಾರದ ಸ್ಕಂಧಗಳ ಮಾತು ಸ್ವೀಕರಿಸಲಾಗಿದೆ.

ಈಗ ಪರಮಾಣುವಿನ ಸ್ವರೂಪ ಹೇಳುತ್ತಾರೆ,-

ಸವ್ವೇಸಿಂ ಖಂಧಾಣಂ ಜೋ ಅಂತೋ ತಂ ವಿಯಾಣ ಪರಮಾಣೂ ।
ಸೋ ಸಸ್ಸದೋ ಅಸದ್ದೋ ಏಕ್ಕೋ ಅವಿಭಾಗೀ ಮುತ್ತಿ ಭವೋ ॥೭೭॥

**ಎಲ್ಲ ಸ್ಕಂಧಗಳಾವಂತಿಮಭಾಗವಿದೆಯದನು ಪರಮಾಣುವೆಂದರಿವುದು ।**
**ಅಲ್ಲದೆ ಅದು ಏಕ, ಅವಿಭಾಗಿ, ಶಾಶ್ವತ, ಮೂರ್ತಪ್ರಭವ ಮೇಣಶಬ್ದವಿದೆ ॥೭೭॥**

ಆ ಕಂಡು ಬರುತ್ತಿರುವಂಥ ಸ್ಥೂಲ ಸ್ಕಂಧಗಳೆಲ್ಲವೂ ಕಾರ್ಯವಿರುವುದರಿಂದ ಅದರ ಕಾರಣವು ಇರಲೇ ಬೇಕಾಗುವುದು. ಅನೇಕತೆಯು ಅಖಂಡ ಉಳಿಯುವುದಿಲ್ಲ. ಹೇಗೆಂದರೆ ಈ ಬೆರಳು ಇದ್ದು ಇದರ ರಜ ಕಣಗಳು ಬಿಡಿ ಬಿಡಿಯಾಗುತ್ತವೆ. ಏಕತ್ರವಾದರೆ ಸ್ಕಂಧವಾಗುವುದು ಮತ್ತು ವಿಭಾಗವಾಗುತ್ತ ಆಗುತ್ತ ಕೊನೆಗೆ ಒಂದು ಪರಮಾಣು ಉಳಿಯುತ್ತದೆ.

ಇದು ಸರ್ವಜ್ಞರ ವಿಜ್ಞಾನವಿದೆ ! ಸ್ಕಂಧದೊಳಗಿಂದ ಬಿಡುಗಡೆಯಾಗಿ ಪರಮಾಣು ಉಳಿದರೆ ಆ ಪರಮಾಣುವು ಪರಮಾಣುವಿನ ಕಾರಣದಿಂದ ಉಳಿಯುತ್ತದೆ. ಜೀವದ ಕಾರಣದಿಂದ ಪರಮಾಣುವಿನಲ್ಲಿ ಅದಲು ಬದಲು ಆಗುವುದಿಲ್ಲ.

**ಪ್ರಶ್ನೆ :-** ಯಾವುದಾದರೂ ನಿಮಿತ್ತವಿರಬೇಕಾಗುವುದಿಲ್ಲವೆ ?

**ಉತ್ತರ :-** ಎಂಥ ನಿಮಿತ್ತ ? ಇನ್ನೂ ಕಾರ್ಯವಾಗುವುದರ ಮೊದಲೇ ಎಲ್ಲಿಯ ನಿಮಿತ್ತ ? ಪುದ್ಗಲದ ಅವಸ್ಥೆಯ ರೂಪವಾದ ಕಾರ್ಯವಾದಾಗಲೇ ಜೀವವನ್ನು ನಿಮಿತ್ತವೆಂದು ಹೇಳಲಾಗುತ್ತದೆ. ನಿಮಿತ್ತವು ಹಿಂದೆ-ಮುಂದೆ ಇರುವುದಿಲ್ಲ. ಆದರೆ ಒಂದೇ ಸಮಯದಲ್ಲಿರುತ್ತದೆ. ನಿಮಿತ್ತವಂತೂ ನಿಜವಿದೆಯಲ್ಲವೇ ? ಎಂದು ಪ್ರಶ್ನಿಸುವವನ ದೃಷ್ಟಿಯು ಸಂಯೋಗದ

ಮೇಲಿರುವುದರಿಂದ ಅವನಿಗೆ ಪರದ ಜತೆ ಏಕತ್ವ ಬುದ್ಧಿಯಿರುವುದರಿಂದ ಅವನಿಗೆ ಧರ್ಮವಾಗುವುದಿಲ್ಲ.

ಸ್ಕಂಧದ ಕೊನೆಯ ಭೇದವು ಪರಮಾಣುವಿದೆಯೆಂದು ಇಲ್ಲಿ ಹೇಳಿದೆ. ಆ ಪರಮಾಣುವು ಆತ್ಮನ ಕಾರಣದಿಂದ ಇಲ್ಲ. ಇಲ್ಲಿ ಕೊನೆಯ ಭೇದ ಹೇಳಿದೆ ಎಂದರೆ ಅಂತಿಮ ಭೇದ ಸೂಕ್ಷ್ಮ ಸೂಕ್ಷ್ಮ ಹೇಳಿದೆ ಅದು ತಿಳಿದುಬರುವುದಿಲ್ಲ, ಆದರೆ ಕೊನೆಯ ಭೇದವೆಂದರೆ ಅಂತಿಮ ತುಂಡಿನ ಎಂದರೆ ಪರಮಾಣುವಿನ ಮಾತಿದೆ. ಯಾವ ಅಂತಿಮ ಭಾಗದೊಳಗಿಂದ ಪುನಃ ಭಾಗಗಳಾಗುವುದಿಲ್ಲ ಆ ಪರಮಾಣುವು ಒಂದೇ ಪ್ರಕಾರದ್ದಿದೆ ಅದರಲ್ಲಿ ಎರಡು ತುಂಡುಗಳಾಗುವುದಿಲ್ಲ.

ಆ ಪರಮಾಣುವು ತ್ರಿಕಾಲ ಅವಿನಾಶಿಯಿದೆ. ಸ್ಕಂಧದ ಜತೆ ಸೇರುವುದರಿಂದ ಅದರದು ಒಂದು ಪರ್ಯಾಯದಿಂದ ಇನ್ನೊಂದು ಪರ್ಯಾಯವಾಗುತ್ತದೆ. ಒಂದು ಪರಮಾಣುವು ಸೂಕ್ಷ್ಮಸ್ಕಂಧದಲ್ಲಿ ಸೇರಿದರೆ ಅದರದು ಸೂಕ್ಷ್ಮವಿಭಾವ ಪರ್ಯಾಯವಾಗುತ್ತದೆ ಮತ್ತು ಸ್ಥೂಲದಲ್ಲಿ ಸೇರಿದರೆ ಸ್ಥೂಲವಿಭಾವಪರ್ಯಾಯವಾಗುತ್ತದೆ. ಹೀಗೆ ಪರ್ಯಾಯದಲ್ಲಿ ಬದಲಾವಣೆಯಾದರೂ ದ್ರವ್ಯದ ಅಪೇಕ್ಷೆಯಿಂದ ಪರಮಾಣುವು ಯಾವಾಗಲೂ ಟಂಕೋತ್ಕೀರ್ಣ ನಿತ್ಯವಿದೆ.

ಮತ್ತು ಒಂದು ಪರಮಾಣುವಿನಲ್ಲಿ ಶಬ್ದರೂಪವಾಗುವ ಸಾಮರ್ಥ್ಯವಿಲ್ಲ. ಒಂದು ಪರಮಾಣುವು ಉಳಿದ ಅನಂತ ಪರಮಾಣುವಿನ ಜತೆ ಸೇರಿದರೆ ಶಬ್ದರೂಪದಿಂದಾಗುವ ಶಕ್ತಿಯಿದೆ. ಆದರೆ ಒಂದೇ ಪರಮಾಣುವು ಶಬ್ದ ಮಾಡವಂಥದು ಅದರ ಸ್ವಭಾವವಿಲ್ಲ.

ನಾನು ಭಾಷೆಯಾಡುತ್ತೇನೆಂದು ಅಜ್ಞಾನಿಗಳು ಹೇಳುತ್ತಾರೆ, ಆದರೆ ಸೋದರನೇ ! ಅದು ನಿಮ್ಮ ಅಜ್ಞಾನವಿದೆ. ಒಂದು ಪರಮಾಣುವು ಸ್ಪರ್ಶ, ರಸ, ಗಂಧ, ವರ್ಣವುಳ್ಳತತ್ತ್ವವಿದೆ ಆದರೆ ಅದರಲ್ಲಿ ಶಬ್ದವಾಗುವ ಸಾಮರ್ಥ್ಯವಿಲ್ಲವೆಂದಮೇಲೆ ನೀನು ಅರೂಪಿ ಆತ್ಮನಿರುವೆ. ಸ್ಪರ್ಶ, ರಸ, ಗಂಧ, ವರ್ಣವಿಲ್ಲದೆ ಮಾತನಾಡುವ ಸಾಧ್ಯತೆಯಿದೆಯೆಂಬುದು ಅಸಂಭವವಿದೆ. ಆದುದರಿಂದ ಅಭಿಮಾನವನ್ನು ಬಿಟ್ಟುಕೊಡು.

ಶಬ್ದವು ಅದು ಪುದ್ಗಲದ್ರವ್ಯದ ಗುಣವಲ್ಲ. ಅದು ಗುಣವಿದ್ದರೆ ಒಂದು ಪರಮಾಣುವಿನಲ್ಲಿ ಯಾವಾಗಲೂ ಇರಬೇಕಾಗುವುದು. ಯಾವಾಗಲೂ ಇರುವುದಕ್ಕೆ ಗುಣವೆಂದು ಹೇಳುತ್ತಾರೆ. ಮತ್ತು ಕಥಂಚಿತ್ ಆಗುವುದಕ್ಕೆ ಪರ್ಯಾಯವೆಂದು ಹೇಳುತ್ತಾರೆ. ಪುದ್ಗಲದಲ್ಲಿ ಶಬ್ದವು ಯಾವಾಗಲೂ ಇರುವುದಿಲ್ಲ. ಏಕಾಕಿ ಪರಮಾಣುವಿನಲ್ಲಿ ಶಬ್ದವಿಲ್ಲ. ಅದಕ್ಕಾಗಿ ಶಬ್ದವು ಗುಣವಲ್ಲ, ಕಥಂಚಿತ್ ಆಗುವುದರಿಂದ ಪರ್ಯಾಯವಿದೆ. ಅದರ ಕರ್ತೃವು ಆತ್ಮನಿಲ್ಲ.

ಮತ್ತು ಪರಮಾಣುವು ಏಕಪ್ರದೇಶಿಯಿದೆ. ಆದಾಗ್ಯೂ ಅದರಲ್ಲಿ ಸ್ಕಂಧರೂಪವಾಗುವ ಯೋಗ್ಯತೆಯಿದೆ. ಅದರಿಂದಲೇ ಪರಮಾಣುವನ್ನು ಪುದ್ಗಲಾಸ್ತಿಕಾಯವೆಂದು ಹೇಳಲಾಗಿದೆ. ಆ ಪರಮಾಣುವಿನಲ್ಲಿ ಎರಡು ಭಾಗವಾಗುವ ಸಾಧ್ಯತೆಯಿಲ್ಲವೆಂಬುದು ಅದು ನಿಜವಿದೆ. ಮತ್ತು ಆ ಪರಮಾಣುವು ಯಾವಾಗಲೂ ಸ್ಪರ್ಶ, ರಸ, ಗಂಧ, ವರ್ಣವೆಂದು ನಾಲ್ಕು ಗುಣಗಳಿಂದ ಯುಕ್ತವಿದೆ ಸ್ಪರ್ಶ ಮೊದಲಾದ ಗುಣಗಳು ಅವು ಸ್ವಭಾವವಿವೆ ಮತ್ತು ಪರಮಾಣುದ್ರವ್ಯವು ಅದು ಸ್ವಭಾವವಾನವಿದೆ. ಹೀಗೆ ಗುಣಗುಣಿ ಅಭೇದವಿದ್ದು ಆತ್ಮನು ಅದನ್ನು ತಿಳಿಯುವವನಿದ್ದಾನೆ, ಆದರೆ ಅದರ ಕರ್ತೃವಿಲ್ಲ.

ಅನಾದಿಯಿಂದ ಪುದ್ಗಲದಲ್ಲಿ ಪೃಥ್ವೀ, ಆಪ್, ತೇಜ, ವಾಯು ಮತ್ತು ಆಕಾಶವೆಂದು ಐದು ಜಾತಿಯ ಐದು ಮಹಾಭೂತಗಳಿವೆ, ಅವುಗಳಿಂದ ಈ ಶರೀರವಾಗುತ್ತದೆಂದು ವೇದಾಂತಿಗಳು ಹೇಳುತ್ತಾರೆ. ಅವುಗಳಲ್ಲಿ ಮೂಳೆಯನ್ನು ಪೃಥ್ವಿಯ ತತ್ತ್ವವೆಂದು ಹೇಳಿದೆ, ರಕ್ತವನ್ನು ನೀರಿನ ತತ್ತ್ವವೆಂದು ಹೇಳಿದೆ, ಜಠರದ ಅಗ್ನಿಯನ್ನು ಅಗ್ನಿಯ ತತ್ತ್ವವೆಂದು ಹೇಳಿದೆ, ಶ್ವಾಸವನ್ನು ವಾಯುವಿನ ತತ್ತ್ವವೆಂದು ಹೇಳಿದೆ. ಇವೇ ಮೊದಲಾದ ಪ್ರಕಾರದಿಂದ ಐದು ಮಹಾಭೂತಗಳ ಪ್ರತಿಮೆಯ ರೂಪವಾಗಿ ಈ ಶರೀರವಾಗಿದೆ. ಮತ್ತು ಮರಣವಾದ ಮೇಲೆ ಆತ್ಮನು ಅನಂತದಲ್ಲಿ ವಿಲೀನವಾಗಿ

ಹೋಗುತ್ತಾನೆಂದು ಹೇಳಿದೆ ಮತ್ತು ಶರೀರವು ವಿಂಗಡಿಸಿ ಮೇಲೆ ಹೇಳಿದ ಆ ಪಂಚಮಹಾಭೂತಗಳ ಪರಮಾಣುರೂಪವಾಗಿ ಹೋಗುತ್ತದೆ. ಈ ರೀತಿಯಾಗಿ ಮನ್ನಿಸುವವರದು ಅದು ಅವರ ಅಜ್ಞಾನಭಾವವಿದೆ. ಆತ್ಮನು ಯಾವುದರ ಜತೆ ಸೇರಿಯೇ ಇಲ್ಲವೆಂದು ಅವರಿಗೆ ಹೇಳುತ್ತಾರೆ. ಆತ್ಮನು ಏಕಾಕಿಯಿದ್ದಾನೆ ಮತ್ತು ಪರಮಾಣುಗಳು ಕೂಡ ಒಂದೇ ಜಾತಿಯವಿವೆ, ಐದು ಜಾತಿಯವಿಲ್ಲ, ಆದರೆ ಪೃಥ್ವೀಕಾಯ ಮೊದಲಾದ ಬೇರೆ ಬೇರೆ ಅವಸ್ಥೆಯ ರೂಪದಿಂದ ಆಗುತ್ತವೆ. ಅದರ ಸ್ಪಷ್ಟತೆಯನ್ನು ಮುಂಬರುವ ೭೮ನೇ ಗಾಥೆಯಲ್ಲಿ ಮಾಡುತ್ತಾರೆ-

**ಆದೇಸಮೇತ್ತಮುತ್ತೋ ಧಾದುಚದುಕ್ಕಸ್ಸ ಕಾರಣಂ ಜೋ ದು ।**
**ಸೋ ಣೇಓ ಪರಮಾಣೂ ಪರಿಣಾಮಗುಣೋ ಸಯಮಸದ್ದೋ ॥೭೮॥**

**ಆದೇಶಮಾತ್ರದಿಂ ಮೂರ್ತವಿದೆ ನಾಲ್ಕು ಧಾತುಗಳ ಕಾರಣವಿವೆ ಯಾವುದು ।**
**ಅದು ಪರಮಾಣುವೆಂದರಿವುದು ಏಕೆಂದರದು ಪರಿಣಾಮಿತಾನಶಬ್ದವಿವೆ ॥೭೮॥**

ಪರಮಾಣುವು ಸ್ವಯಂ ದ್ರವ್ಯ ಎಂದರೆ ಗುಣಿಯಿದೆ ಮತ್ತು ಅದರಲ್ಲಿ ಸ್ಪರ್ಶ, ರಸ, ಗಂಧ, ವರ್ಣ ಮೊದಲಾದ ಗುಣಗಳಿವೆ. ಸಕ್ಕರೆ ಮತ್ತು ಸಿಹಿತನ ಈ ಹೆಸರುಗಳು ಬೇರೆಯಿದ್ದರೂ ವಸ್ತುವು ಬೇರೆಯಿಲ್ಲ. ಅದರಂತೆ ಪರಮಾಣುವಿನ ದ್ರವ್ಯ ಮತ್ತು ಗುಣದಲ್ಲಿ ನಾಮಭೇದವಿದ್ದರೂ ವಸ್ತುಭೇದವಿಲ್ಲ. ವೇದಾಂತಿಗಳು ಪೃಥ್ವೀ ಮೊದಲಾದುವನ್ನು ಬೇರೆ ಬೇರೆ ಜಾತಿಯ ಪರಮಾಣುಗಳೆಂದು ಹೇಳಿದ್ದಾರೆ ಅದು ನಿಜವಾಗಿಲ್ಲ. ಅದನ್ನು ಈ ಗಾಥೆಯಲ್ಲಿ ತಿಳಿಸಿದ್ದಾರೆ. ಪೃಥ್ವಿಯ ಪರಮಾಣುಗಳು ನೀರಿನ ರೂಪದಿಂದಾಗುತ್ತವೆ, ಶವದೊಳಗಿಂದ ನೀರು ಹೊರಡುತ್ತದೆ. ಪೃಥ್ವೀ ಮತ್ತು ನೀರಿನ ಪರಮಾಣುಗಳು ಬೇರೆ ಜಾತಿಯವಿಲ್ಲ. ಪರಮಾಣುಗಳು ಸ್ಥಿರವಾಗಿದ್ದು ಪೃಥ್ವೀ ಮೊದಲಾದ ರೂಪದಿಂದಾಗುತ್ತವೆ, ರೂಪಾಂತರವಾಗುತ್ತವೆ. ಮತ್ತು ಪರಮಾಣುವಿನಲ್ಲಿ ಶಬ್ದದ ವ್ಯಕ್ತತೆಯಿಲ್ಲದಿದ್ದರೂ ಕೂಡ ಶಬ್ದದ ಶಕ್ತಿಯಿದೆ, ಶಬ್ದದ ಕಾರಣವಿದೆ.

**ಭಾವಾರ್ಥ :-** ಪರಮಾಣುವು ದ್ರವ್ಯವಿದ್ದು ಅದರಲ್ಲಿ ಸ್ಪರ್ಶ, ರಸ, ಗಂಧ, ವರ್ಣವೆಂದು ನಾಲ್ಕು ಗುಣಗಳಿವೆ. ಜಡದಲ್ಲಿ ಶಕ್ತಿಯಿಲ್ಲವೆಂದು ಕೆಲವರು ಹೇಳುತ್ತಾರೆ. ಮತ್ತು ಕರ್ಮದ ಮಾತು ಬಂದರೆ ಕರ್ಮವು ಆತ್ಮನನ್ನು ಅಲೆದಾಡಿಸುತ್ತದೆಯೆಂದು ಹೇಳುತ್ತಾರೆ. ಆದರೆ ಕರ್ಮವು ಜಡವಿದ್ದು ಅದರಲ್ಲಿ ಶಕ್ತಿಯಿಲ್ಲವೆಂದಮೇಲೆ ಅದು ಹೇಗೆ ಅಲೆದಾಡಿಸುತ್ತದೆ ? ಎಂದರೆ ಅಲ್ಲಿ ಕರ್ಮವನ್ನು ಶಕ್ತಿವಂತವೆಂದು ಮನ್ನಿಸಿದರು ಮತ್ತು ಇತರ ಸಮಯದಲ್ಲಿ ಆತ್ಮನಿದ್ದರೆ ಶರೀರವು ನಡೆಯುತ್ತದೆಂದು ಹೇಳುತ್ತಾರೆ ಅಲ್ಲಿ ಶರೀರವನ್ನು ಶಕ್ತಿಹೀನವೆಂದು ಮನ್ನಿಸುವರು. ಈ ರೀತಿಯಿಂದ ಅಜ್ಞಾನಿಗಳಿಗೆ ಯಾವುದರ ಎಚ್ಚರವಿಲ್ಲ. ಕರ್ಮಗಳನ್ನು ನೋಡಿರದಿದ್ದರೂ ಅವುಗಳ ಶಕ್ತಿಯನ್ನು ಮನ್ನಿಸುವರು, ಆದರೆ ಈ ಶರೀರವನ್ನು ನೋಡಿದ್ದರೂ ಅದರ ಶಕ್ತಿಯನ್ನು ಮನ್ನಿಸುವುದಿಲ್ಲ. ಹೀಗೆ ಅವರು ಭ್ರಾಂತಿಯಲ್ಲಿ ವರ್ತಿಸುತ್ತಿದ್ದಾರೆ.

ಜೀವರುಗಳು ಮುಕ್ತಿಯನ್ನು ಇಚ್ಛಿಸುತ್ತಾರೆ. ಮುಕ್ತಿ ಎಂದರೆ ಪರದಿಂದ ಸಂಪೂರ್ಣ ಬೇರೆಯಾಗುವ ಕ್ರಿಯೆಯಿದೆ. ಈಗ ಯಾರು ಶರೀರದ ಕ್ರಿಯೆಗಳಲ್ಲಿ ಧರ್ಮವನ್ನು ಮನ್ನಿಸುತ್ತಾರೆ ಅವರಿಗೆ ಇನ್ನೂ ತಾವು ಪರದಿಂದ ಭಿನ್ನರಿದ್ದೇವೆಂಬ ಶ್ರದ್ಧೆಯಾಗಿಲ್ಲವೆಂದ ಮೇಲೆ ವಿಕಾರದಿಂದ ಸರ್ವಥಾ ಭಿನ್ನವಾಗುವ ರೂಪದ ಮೋಕ್ಷದ ಕ್ರಿಯೆಯು ಅವರಿಗೆ ಎಲ್ಲಿಂದ ಪ್ರಕಟವಾಗುವುದು ? ಪರವಿಲ್ಲದೆ ನಡೆಯುವುದಿಲ್ಲವೆಂಬ ಏಕತ್ವಬುದ್ಧಿಯೇ ಮಿಥ್ಯಾಮನ್ನಣೆಯಿದೆ, ಅಂಥ ಜೀವರುಗಳಿಗೆ ತಮ್ಮಲ್ಲಿ ಏಕತ್ವರಾಗಿ ನಿರಾಕುಲ ಶಾಂತಿ ಮತ್ತು ಏಕಾಗ್ರತೆಯ ಕ್ರಿಯೆಯೆಂದೂ ಪ್ರಕಟವಾಗುವ ಸಾಧ್ಯತೆಯಿಲ್ಲ ಅಜ್ಞಾನಿಗಳು ತಮ್ಮ ಮನ್ನಣೆಯ ಪ್ರಕಾರ ಧರ್ಮಾಚರಣೆ ಮಾಡುತ್ತಾರೆ. ಬಾಹ್ಯದಲ್ಲಿ ಅನೇಕ ಪ್ರಕಾರದ ತ್ಯಾಗಮಾಡುತ್ತಾರೆ, ಆದರೆ

ಆತ್ಮನ ಜ್ಞಾನವಿಲ್ಲದ ಬಾಹ್ಯಕ್ರಿಯೆಗಳಿಂದ ಧರ್ಮವಾಗುವುದಿಲ್ಲ. ಅಜ್ಞಾನಿಯು ಧರ್ಮದ ಹೆಸರಿನಲ್ಲಿ ಹರಟೆ ಕೊಚ್ಚುತ್ತಾನೆ, ಆದರೆ ಅಂತರ್ಯದಲ್ಲಿ ಅಜ್ಞಾನರೂಪದ ಅಂಧಕಾರವು ತುಂಬಿಕೊಂಡಿರುತ್ತದೆ.

ಜಡ ಮತ್ತು ಚೇತನಗಳೆರಡೂ ಭಿನ್ನವಿವೆ. ಎರಡೂ ಶಕ್ತಿಸಂಪನ್ನ ತತ್ತ್ವವಿವೆಯೆಂದು ಧರ್ಮಮಾಡುವವನಿಗೆ ಜ್ಞಾನವಿರಬೇಕಾಗುವುದು. ಯಾವುದು ತತ್ತ್ವವಿದೆ ಅದು ಶಕ್ತಿಯಿಲ್ಲದೆ ಇರುವುದಿಲ್ಲ, ಸ್ವಭಾವವಿಲ್ಲವೆ ಸ್ವಭಾವವುಳ್ಳದ್ದು ಇರುವುದಿಲ್ಲ, ಶಕ್ತಿಯಿಲ್ಲದೆ ಶಕ್ತಿಯುಳ್ಳದ್ದಿರುವುದಿಲ್ಲ. ಗುಣವಿಲ್ಲದೆ ಗುಣಿಯಿರುವುದಿಲ್ಲ. ಅನ್ನ , ರೊಟ್ಟಿ , ಸಾರು, ಶರೀರ ಮೊದಲಾದವುಗಳು ಜಡಪದಾರ್ಥಗಳಿವೆ ಅವು ಸ್ವಯಂ ಜಡೇಶ್ವರವಿವೆ, ಅವುಗಳ ಕ್ರಿಯೆಗಳು ಅವುಗಳಿಂದಲೇ ಆಗುತ್ತಲಿವೆ. ಹೀಗೆ ಪರದಿಂದ ಭಿನ್ನತೆಯ ಜ್ಞಾನ ಮಾಡಿಕೊಂಡು ನಾನು ತ್ರಿಕಾಲಶುದ್ಧ ಚೈತನ್ಯಸ್ವರೂಪನಿದ್ದೇನೆಂದು ಅಂತರ್ಯದಲ್ಲಿ ಭಿನ್ನತೆಯು ಅದು ಜ್ಞಾನದ ಅಥವಾ ಧಾರ್ಮಿಕ ಕ್ರಿಯೆಯಿದೆ. ಇದರ ಫಲದಲ್ಲಿಯೇ ಮೋಕ್ಷದ ಪ್ರಾಪ್ತಿಯಾಗುತ್ತದೆ, ಇದೇ ಪೂರ್ಣಸುಖದ ಉಪಾಯವಿದೆ.

ಪರಮಾಣುವು ದ್ರವ್ಯವಿದ್ದು ಅದು ಶಕ್ತಿಸಂಪನ್ನವಿದೆ. ಶಕ್ತಿವಂತವು ಶಕ್ತಿ ಅಥವಾ ಗುಣವಿಲ್ಲದೆ ಇರುವುದಿಲ್ಲ. ಅದರಲ್ಲಿ ಸ್ಪರ್ಶ, ರಸ, ಗಂಧ, ವರ್ಣದ ಶಕ್ತಿ ಅಥವಾ ಗುಣವಿವೆ. ಈ ನಾಲ್ಕೂ ಗುಣಗಳಿಂದ ಪರಮಾಣುವನ್ನು ಮೂರ್ತಿಕವೆಂದು ಹೇಳಲಾಗುತ್ತದೆ. ಪರಮಾಣುವು ನಿರ್ವಿಭಾಗವಿದೆ, ಅದು ಅಂತಿಮ ಅಂಶವಿದೆ. ಈಗ ಯಾವ ಎಟೊಬಾಂಬ-ಅಣುಬಾಂಬವೆಂದು ಹೇಳುತ್ತಾರೆ ಅವಂತೂ ಅನಂತ ಸ್ಕಂಧಗಳಿಂದನಿರ್ಮಿಸಿದವುಗಳಿರುತ್ತವೆ. ಪರಮಾಣುವಂತೂ ಅಂತಿಮ ಅವಿಭಾಗೀ ಅಂಶವಿದೆ. ಮತ್ತು ಇಂದಿನ ವಿಜ್ಞಾನಿಗಳು ಪರಮಾಣು ಎಂದರೆ ಅಂತಿಮ ಬಿಂದುವಿನಲ್ಲಿ ಆಕಾರವಿಲ್ಲ ರೇಖೆ ಮಾಡಿದರೆ ಆಕಾರವಾಗುತ್ತದೆಂದು ಹೇಳುತ್ತಾರೆ, ಆದರೆ ಆ ಮಾತು ಸತ್ಯವಿಲ್ಲ. ಆ ಮೂಲ ಪರಮಾಣುವಿನಲ್ಲಿ ಆಕಾರವಿಲ್ಲದಿದ್ದರೆ ರೇಖೆಯಲ್ಲಿ ಆಕಾರ ಬರುವುದಿಲ್ಲ.

ಯಾವುದು ವಸ್ತುವಿದೆ ಅದು ಸ್ಥಳ ತೆಗೆದುಕೊಳ್ಳುವುದು, ಯಾವುದು ಸ್ಥಳ ತೆಗೆದುಕೊಳ್ಳುವುದಿಲ್ಲ ಅದನ್ನು ವಸ್ತುವೆಂದು ಹೇಳಲಾಗುವುದಿಲ್ಲ ಪರಮಾಣುವು ಒಂದು ದ್ರವ್ಯವಿದೆ ಅದು ಸ್ಥಳ ತೆಗೆದುಕೊಳ್ಳುವುದು. ಅದಕ್ಕೆ ಆಕಾರವಿದ್ದರೆ ರೇಖೆಯಲ್ಲಿ ಆಕಾರ ಬರುತ್ತವೆ ಈ ಪರಮಾಣು ಏಕಾಕಿಯಿದೆ ಅದರ ಯಾವ ಪ್ರದೇಶವು ಆದಿಯಲ್ಲಿದೆ ಅದುವೇ ಮಧ್ಯದಲ್ಲಿದೆ ಮತ್ತು ಅದುವೇ ಅಂತ್ಯದಲ್ಲಿದೆ. ಮೂರು ಪರಮಾಣುಗಳಿದ್ದರೆ ಮೊದಲನೆಯದ್ದು ನಂತರದು ಎಂದು ಹೇಳಲಾಗುತ್ತದೆ, ಆದರೆ ಪರಮಾಣವು ಒಂದೇ ಇದೆ. ಅದು ಆದಿಮಧ್ಯ ಅಂತ್ಯದಲ್ಲಿ ಒಂದೇ ಇದೆ. ಈ ಕಾರಣದಿಂದಲೇ ಪರಮಾಣುವಿನಲ್ಲಿ ಎರಡು ಭಾಗಗಳಾಗುವುದಿಲ್ಲ ಮತ್ತು ಪರಮಾಣುವಿನ ದ್ರವ್ಯಗುಣಗಳಲ್ಲಿ ಪ್ರದೇಶ ಭೇದವಿಲ್ಲ ಸಕ್ಕರೆ ಮತ್ತು ಸಿಹಿತನದ ಕ್ಷೇತ್ರ ಬೇರೆಯಿಲ್ಲ ಯಾವ ಕ್ಷೇತ್ರವು ಸಕ್ಕರೆಯದಿದೆ ಅದೇ ಸಿಹಿತನದ್ದಿದೆ. ಅದರಂತೆ ಪರಮಾಣುವಿನ ಗುಣ-ಗುಣದಲ್ಲಿ ಪ್ರದೇಶ ಭೇದವಿಲ್ಲದಿರುವುದರಿಂದ ಯಾವ ಪ್ರದೇಶವು ಪರಮಾಣುವಿನದಿದೆ ಅದೇ ಪ್ರದೇಶವು ಸ್ಪರ್ಶ, ರಸ, ಗಂಧ, ವರ್ಣಗುಣಗಳದ್ದಿದೆಯೆಂದು ತಿಳಿಯಬೇಕು. ಈ ಸ್ಪರ್ಶ, ರಸ, ಗಂಧ, ವರ್ಣವೆಂಬ ನಾಲ್ಕೂ ಗುಣಗಳು ಪರಮಾಣುವಿನಲ್ಲಿ ಸದಾಕಾಲವೂ ಕಂಡುಬರುತ್ತವೆ. ಆದರೆ ಗೌಣಮುಖ್ಯತೆಯ ಭೇದದಿಂದ ನ್ಯೂನಾಧಿಕದ ರೀತಿಯಿಂದ ಈ ಗುಣಗಳ ಕಥನವನ್ನು ಮಾಡಲಾಗುತ್ತದೆ ಪೃಥ್ವೀ, ಅಗ್ನೀ, ವಾಯು ಮೊದಲಾದ ಬೇರೆ ಬೇರೆ ಪುದ್ಗಲದ ಪರಮಾಣುಗಳಿಲ್ಲ, ಆದರೆ ಪರಮಾಣುಗಳೇ ಬೇರೆ ಬೇರೆ ಅವಸ್ಥೆಗಳನ್ನು ಧಾರಣ ಮಾಡುತ್ತವೆ. ಕೆಲವು ಪೃಥ್ವೀರೂಪದಿಂದ ಪರಿಣಮಿಸುತ್ತವೆ, ಕೆಲವು ನೀರಿನ ರೂಪದಿಂದ ಪರಿಣಮಿಸುತ್ತವೆ. ಅವುಗಳಲ್ಲಿ ಗುಣಗಳ ಪರ್ಯಾಯಗಳ ಕಥನವನ್ನು ನ್ಯೂನಾಧಿಕತೆಯಿಂದ ಮಾಡಲಾಗಿದೆ. ಪೃಥ್ವೀಜಾತಿಯ ಪರಮಾಣುಗಳಲ್ಲಿ ಸ್ಪರ್ಶ, ಮೊದಲಾದ ನಾಲ್ಕೂ ಗುಣಗಳ ಮುಖ್ಯತೆಯಿದೆ, ನೀರಿನಲ್ಲಿ ಗಂಧಗುಣದ ಗೌಣತೆಯಿದೆ ಮತ್ತು ಉಳಿದ ಮೂರು ಗುಣಗಳ ಮುಖ್ಯತೆಯಿದೆ ಇದರಿಂದ ನೀರಿನಲ್ಲಿ ಗಂಧಗುಣವೇ ಇಲ್ಲವೆಂದು ತಿಳಿದುಕೊಳ್ಳಬಾರದು ಆದರೆ ಆ ಗಂಧವು ಇಂದ್ರಿಯ ಗ್ರಾಹ್ಯ ವ್ಯಕ್ತತೆಯಿಲ್ಲದಿರುವುದರಿಂದ ಗಂಧದ ಗೌಣತೆಯನ್ನು ಹೇಳಿದೆ.

ಇದು ಪುದ್ಗಲದ ವಿಜ್ಞಾನವಿದ್ದು ಪುದ್ಗಲದ ಸ್ವಭಾವ ತಿಳಿಸಿದೆ. ಅದರ ಪರಿಣಮನವು ಅದರ ಕಾರಣದಿಂದ ಆಗುತ್ತಲಿದೆ. ಆತ್ಮನು ಅದರ ಕರ್ತೃವಿಲ್ಲ, ಆತ್ಮನು ಅದರ ಜ್ಞಾತಾ-ದೃಷ್ಟಾ ಇದ್ದಾನೆಂದು ಹೇಳುವುದು ಸಾರವಿದೆ.

ಇದು ಪುದ್ಗಲಾಸ್ತಿಕಾಯದ ವರ್ಣನೆಯಿದೆ ಐದು ಅಸ್ತಿಕಾಯ ಮತ್ತು ಕಾಲದ ಸ್ವರೂಪವನ್ನು ಭಗವಂತರು ಹೇಗೆ ನೋಡಿದ್ದಾರೆ ಹಾಗೆ ವಾಣಿಯ ಮೂಲಕ ಬಂದಿದೆ ಮತ್ತು ಅದರ ಯೋಗ್ಯತೆಯು ಹೇಗೆ ಇತ್ತು ಹಾಗೆ ತಿಳಿಸಲಾಗಿದೆ. ಭಗವಂತರು ವಾಣಿ ಅಥವಾ ಇತರರ ದಶೆಯ ಕರ್ತೃಗಳಿಲ್ಲ.

ಇಂದು ಭಗವಾನ ಮಹಾವೀರರ ಜನ್ಮಕಲ್ಯಾಣಿಕದ ದಿವಸವಿದೆ. ಎಷ್ಟೋ ಜನರು ತಮ್ಮ ಭಾಷಣದಲ್ಲಿ ಭಗವಂತರು ಅಜ್ಞಾನ ತೊರೆದು ಮೋಕ್ಷಕ್ಕೆ ಹೋದರೆಂದು ಹೇಳುತ್ತಾರೆ. ಆದರೆ ಆ ಕಥನವು ನಿಮಿತ್ತದಿಂದಿದೆ ಭಗವಂತರು ಯಾರ ಅಜ್ಞಾನವನ್ನು ಬಿಡಿಸುವುದಿಲ್ಲ ಮತ್ತು ಯಾರಿಗೆ ಜ್ಞಾನವನ್ನು ಕೊಡುವುದಿಲ್ಲ. ವಾಣಿಯು ವಾಣಿಯ ಕಾರಣದಿಂದ ಹೊರಡುತ್ತದೆ ಆಗ ಭಗವಂತರ ಕಾರಣದಿಂದ ವಾಣಿಯು ಹೊರಡುತೆಂದು ಹೇಳಲಾಗುತ್ತದೆ ಮತ್ತು ಎಲ್ಲರು ತಮ್ಮ ಕಾರಣದಿಂದ ಜ್ಞಾನ ಮಾಡಿಕೊಂಡರೆ ಭಗವಂತರ ವಾಣಿಯನ್ನು ನಿಮಿತ್ತವೆಂದು ಹೇಳಲಾಗುತ್ತದೆ. ಆಗ ಯಾರಿಗೆ ಹೇಗೆ ರುಚಿಸುತ್ತದೆ ಹಾಗೆ ಭಗವಂತರ ಗುಣಗಾನ ಮಾಡುತ್ತಾರೆ ಇತರರ ಗುಣಗಾನ ಮಾಡುತ್ತಾರೆಂದು ಹೇಳುವುದು ಅದು ನಿಮಿತ್ತದಿಂದಿದೆ. ಭಗವಂತರು ತೀರ್ಥದ ಕರ್ತೃಗಳಿದ್ದರೆ ಭಗವಂತರು ಮತ್ತು ಎದುರಿಗಿನ ಜೀವರುಗಳು ಸ್ವತಂತ್ರ ಉಳಿಯುವುದಿಲ್ಲ ಭಗವಂತರಂತೂ ಜಗತ್ತಿನ ಪ್ರತಿಯೊಂದು ದ್ರವ್ಯದ ಸ್ವತಂತ್ರತೆಯನ್ನು ಘೋಷಿಸಿದ್ದಾರೆ. ಭಗವಂತರಂತೂ ತಮ್ಮಲ್ಲಿ ಕೇವಲಜ್ಞಾನದಶೆಯನ್ನು ಪ್ರಕಟಪಡಿಸಿಕೊಂಡಿದ್ದಾರೆ, ಪರದಲ್ಲಿ ಯಾವ ಕಾರ್ಯವನ್ನೂ ಮಾಡಿಲ್ಲ.

ಆ ಭಗವಂತರ ಜ್ಞಾನದಲ್ಲಿ ಪರಮಾಣುವಿನ ಸ್ವರೂಪವು ಹೇಗೆ ಬಂದಿದೆ ಹಾಗೆ ಹೇಳಿದ್ದಾರೆ, ಅದೆಷ್ಟೋ ಜನರು ಪೃಥ್ವೀ, ನೀರು, ಅಗ್ನೀ ಮೊದಲಾದವುಗಳ ಪರಮಾಣುಗಳನ್ನು ಬೇರೆ ಬೇರೆ ಜಾತಿಯವೆಂದು ಹೇಳಿದ್ದಾರೆ. ಆದರೆ ಆ ಹೇಳಿಕೆಯು ನಿಜವಲ್ಲ. ಯಾವ ಪ್ರಕಾರ ನಿಗೋದದಿಂದ ಹಿಡಿದು ಸಿದ್ಧರವರೆಗಿನ ಜೀವರುಗಳೆಲ್ಲರೂ ಒಂದೇ ಜಾತಿಯವರಿದ್ದಾರೆ, ಜಾತಿಯಲ್ಲಿ ಯಾವ ಅಂತರವಿಲ್ಲ, ಆದರೆ ಪರ್ಯಾಯದಲ್ಲಿ ಅಂತರವಿದೆ. ಅದೇ ಪ್ರಕಾರ ಪೃಥ್ವೀ, ನೀರು ಮೊದಲಾದ ಪರಮಾಣುಗಳ ಜಾತಿಯು ಒಂದೇ ಇದೆ, ಬೇರೆ ಜಾತಿಯಿಲ್ಲ, ಆದರೆ ಪರ್ಯಾಯದಲ್ಲಿ ಅಂತರವಿದೆ. ಪರ್ಯಾಯದ ಭೇದದಿಂದ ಭೇದಗಳಾಗುತ್ತವೆ. ಪೃಥ್ವೀಯ ಪರಮಾಣುಗಳಲ್ಲಿ ನಾಲ್ಕೂ ಗುಣಗಳ ಪರ್ಯಾಯದ ಮುಖ್ಯತೆಯಿದೆ, ನೀರಿನಲ್ಲಿ ಗಂಧದ ಗೌಣತೆಯಿದೆ ಮತ್ತು ಉಳಿದ ಮೂರು ಗುಣಗಳ ಮುಖ್ಯತೆಯಿದೆ. ಅಗ್ನಿಯಲ್ಲಿ ಗಂಧ ಮತ್ತು ರಸದ ಗೌಣತೆಯಿದೆ ಹಾಗೂ ಸ್ಪರ್ಶ, ವರ್ಣದ ಮುಖ್ಯತೆಯಿದೆ. ವಾಯುವಿನಲ್ಲಿ ಮೂರು ಗುಣಗಳ ಗೌಣತೆಯಿದೆ ಮತ್ತು ಸ್ಪರ್ಶಗುಣದ ಮುಖ್ಯತೆಯಿದೆ.

ಪರಮಾಣುಗಳು ಅನೇಕ ಪ್ರಕಾರರೂಪದಿಂದ ಬದಲಿಸುತ್ತವೆ, ಅವು ತಮ್ಮ ಪರ್ಯಾಯ ಸ್ವಭಾವದ ಕಾರಣದಿಂದ ಬದಲಾಗುತ್ತವೆ. ಅವು ಜೀವದ ಕಾರಣದಿಂದ ಪರಿಣಮಿಸುವುದಿಲ್ಲ. ಲವಣವು ಪೃಥ್ವೀಕಾಯ ಜೀವವಿರುವುದರಿಂದ ಲವಣರೂಪ ಶರೀರದ ಅವಸ್ಥೆಯಾಗುತ್ತದೆಂಬುದಾಗಿಲ್ಲ. ಅಗ್ನಿಯ ಜೀವವು ಒಳಗಿರುವುದರಿಂದ ಉಷ್ಣರೂಪದಿಂದ ಶರೀರವಾಗಿದೆಯೆಂಬುದಾಗಿಲ್ಲ. ಜಡಪರಮಾಣುಗಳ ಪರ್ಯಾಯಗಳ ಕಾರಣದಿಂದ ಶರೀರವಾಗುತ್ತಲಿವೆ. ಜೀವವು ಆ ಶರೀರದ ಪರ್ಯಾಯದ ಕರ್ತೃವಿಲ್ಲ.

ಶುಭಭಾವದ ಕಾರಣದಿಂದ ದ್ರವ್ಯಕರ್ಮವು ಕಟ್ಟುತ್ತದೆ ಮತ್ತು ದ್ರವ್ಯಕರ್ಮದ ಕಾರಣದಿಂದ ಶರೀರವು ದೊರಕುತ್ತದೆಂದು ಬೇರೆ ಶಾಸ್ತ್ರಗಳಲ್ಲಿ ಕಥನವು ಬರುತ್ತದೆ ಅದು ನಿಮಿತ್ತದ ಕಥನವಿದೆ. ಶರೀರವು ಶರೀರದ ಕಾರಣದಿಂದ ದೊರಕಿದರೆ ಕರ್ಮವನ್ನು ನಿಮಿತ್ತವೆಂದು ಹೇಳಲಾಗುತ್ತದೆ ಮತ್ತು ಕರ್ಮಕ್ಕೆ ಶುಭಭಾವವು ನಿಮಿತ್ತವೆಂದು ಹೇಳಲಾಗುತ್ತದೆ. ಇಲ್ಲಿ ಕರ್ಮದ ಅಥವಾ ಜೀವದ ಮಾತಿಲ್ಲ. ಆದರೆ ಪ್ರತಿಯೊಂದು ಪುದ್ಗಲದ ಪರ್ಯಾಯವು ತನ್ನ ಕಾರಣದಿಂದ ಇದೆ.

**ಪ್ರಶ್ನೆ :-** ಎರಡರಲ್ಲಿ ಯಾವ ಮಾತನ್ನು ಮನ್ನಿಸುವುದು ?

**ಉತ್ತರ :-** ಎರಡನ್ನು ತಿಳಿಯಬೇಕು. ಕರ್ಮವು ಕರ್ಮದ ಕಾರಣದಿಂದಿದೆ. ಅದರಲ್ಲಿ ಶುಭಭಾವವು ನಿಮಿತ್ತವಿದೆ ಮತ್ತು ಶರೀರವು ಶರೀರದ ಕಾರಣದಿಂದಾಗುತ್ತದೆ ಅದರಲ್ಲಿ ಕರ್ಮವು ನಿಮಿತ್ತವಿದೆ. ನಿಮಿತ್ತದ ಜ್ಞಾನಮಾಡಿಕೊಳ್ಳುವುದು, ಆದರೆ ಪೃಥ್ವಿಯ ಪರಮಾಣುವಿನ ದಶೆಯು ಸ್ವತಂತ್ರವಾಗುತ್ತದೆಂದು ತಿಳಿಯುವುದು. ಇಲ್ಲಿಯಂತೂ ಯಾರು ಪೃಥ್ವೀ ಮೊದಲಾದ ಪರಮಾಣುಗಳ ಜಾತಿಯು ಬೇರೆಯಿದೆಯೆಂದು ಹೇಳುತ್ತಾರೆ ಅವರಿಗೆ ಅವು ಬೇರೆ ಜಾತಿಯವಿಲ್ಲವೆಂದು ತಿಳಿಸುತ್ತಾರೆ. ಪರಮಾಣುಗಳ ಜಾತಿಯು ಒಂದೇ ಇದ್ದು ಅವುಗಳ ಪರ್ಯಾಯಗಳು ಬದಲಾಗುತ್ತವೆ. ಮತ್ತು ನಾವು ಪಂಚಭೂತವೆಂದು ಹೇಳುತ್ತೇವೆ ನೀವು ಪುದ್ಗಲವೆಂದು ಹೇಳುತ್ತೀರಿ, ಎರಡರಲ್ಲಿ ಅಂತರವಿಲ್ಲವೇನು, ಎರಡೂ ಒಂದೇ ಇವೆಯೇನು ಎಂದು ಕೆಲವರು ಕೇಳುತ್ತಾರೆ. ಅವರಿಗೆ ಎರಡರಲ್ಲೂ ಮಹಾನ ಅಂತರವಿದೆಯೆಂದು ಹೇಳುತ್ತಾರೆ. ಪಂಚಭೂತದಲ್ಲಂತೂ ಪರಮಾಣುಗಳನ್ನು ಬೇರೆ ಬೇರೆ ಜಾತಿಯವೆಂದು ಮನ್ನಿಸಲಾಗಿದೆ, ಆ ಮನ್ನಣೆಯು ನಿಜವಲ್ಲ. ಪರಮಾಣುವಿನ ಜಾತಿಯು ಒಂದಿದ್ದು ಪರ್ಯಾಯದಲ್ಲಿ ಅಂತರವಿದೆ. ಕೆಲವೊಮ್ಮೆ ಒಂದು ಗುಣದ ಮುಖ್ಯತೆ ಅಥವಾ ಗೌಣತೆಯಿಂದ ಅನೇಕ ಪ್ರಕಾರದ ಪರಿಣಾಮಗಳು ಪರ್ಯಾಯದಲ್ಲಿ ಬೇರೆ ಬೇರೆಯಾಗಿ ಕಂಡುಬರುತ್ತವೆ, ಆದರೆ ಪರಮಾಣುವಿನ ಜಾತಿಯು ಒಂದೇ ಇದೆ.

**ಪ್ರಶ್ನೆ :-** ಯಾವ ಪ್ರಕಾರ ಪರಮಾಣುಗಳು ಅವಸ್ಥೆಯನ್ನು ಧಾರಣ ಮಾಡುತ್ತ ಮಾಡುತ್ತ ಪೃಥ್ವೀ, ನೀರುಗಳ ರೂಪದಿಂದಾಗುತ್ತವೆ ಅದೇಪ್ರಕಾರ ಒಂದು ಪರಮಾಣುವು ಶಬ್ದ ಮಾಡುತ್ತದೆಯಲ್ಲವೇ ?

**ಉತ್ತರ :-** ಪರಮಾಣುವು ಏಕಪ್ರದೇಶಿಯಿದೆ. ಅದರಲ್ಲಿ ಶಬ್ದ ವ್ಯಕ್ತಮಾಡುವ ಸಾಮರ್ಥ್ಯವಿಲ್ಲ. ಅನೇಕ ಪರಮಾಣುಗಳ ಸ್ಕಂಧಗಳಿಂದ ಶಬ್ದವು ಪರಿಣಮಿಸುತ್ತದೆ, ಆದುದರಿಂದ ಪರಮಾಣುವು ಅಶಬ್ದಮಯವಿದೆ ಎಂದರೆ ಒಂದು ಪರಮಾಣುವಿನಲ್ಲಿ ಶಬ್ದವನ್ನು ವ್ಯಕ್ತಮಾಡುವ ಸಾಮರ್ಥ್ಯವಿಲ್ಲ.

ಭಗವಂತರ ವಾಣಿ ಹೊರಟಿತೆಂದು ಹೇಳುವುದು ಅದು ನಿಮಿತ್ತದ ಕಥನವಿದೆ. ಭಗವಂತರ ವಾಣಿಯಲ್ಲಿ ನಾನು ವಾಣಿ ಹೊರಡಿಸುವ ಸಾಧ್ಯತೆಯಿಲ್ಲವೆಂದು ಬಂದಿದೆ. ವಾಣಿಯು ವಾಣಿಯ ಕಾರಣದಿಂದ ಹೊರಡುತ್ತದೆ, ಮತ್ತು ವಾಣಿ ಹೊರಟಿದೆಯೆಂದು ನಿಮಗೆ ತಿಳಿಯುತ್ತದೆಂಬುದಾಗಿಲ್ಲ. ನಿಮಗೆ ನಿಮ್ಮ ಕಾರಣದಿಂದ ತಿಳಿಯುತ್ತದೆ. ಆರೂ ದ್ರವ್ಯಗಳು ಸ್ವತಂತ್ರವಿವೆ. ಪ್ರತಿಯೊಂದು ದ್ರವ್ಯದ ಗುಣ-ಪರ್ಯಾಯಗಳು ಸ್ವತಂತ್ರವಿವೆಯೆಂದು ಭಗವಂತರ ವಾಣಿಯಲ್ಲಿ ಬಂದಿದೆ. ಪ್ರತಿಯೊಂದು ದ್ರವ್ಯವು ಸ್ವತಂತ್ರವಿದೆಯೆಂಬ ವಾಣಿಯನ್ನು ಭವ್ಯಜೀವನು ತಿಳಿದುಕೊಳ್ಳುತ್ತಾನೆ, ಯಾರು ಯಾರನ್ನು ಪಾರುಗಾಣಿಸುವುದಿಲ್ಲ. ಆದಾಗ್ಯೂ ಅಪೂರ್ಣದಶೆಯಲ್ಲಿ ಭಗವಂತರ ಕುರಿತು ಶುಭರಾಗವು ಬಂದಲ್ಲದೆ ಇರಲಾರದು. ನಂದೀಶ್ವರ ದ್ವೀಪದಲ್ಲಿ ಭಗವಂತರ ಶಾಶ್ವತ ಪ್ರತಿಮೆಗಳಿದ್ದು ಅಲ್ಲಿ ಇಂದ್ರರು ಹೋಗಿ ಮಹೋತ್ಸವ ಮಾಡುತ್ತಾರೆ ಮತ್ತು ನೃತ್ಯ ಮಾಡುತ್ತಾರೆ. ಆದಾಗ್ಯೂ ಶರೀರದ ಕ್ರಿಯೆ ಹಾಗೂ ಪುಣ್ಯವು ಆತ್ಮನ ಸ್ವರೂಪವಲ್ಲವೆಂಬ ಅರಿವು ಇರುತ್ತದೆ. ನಮಗಂತೂ ಶುದ್ಧ ಆತ್ಮನು ಬೇಕೆಂದು ಭಗವಂತರ ವಾಣಿಯಲ್ಲಿ ಬಂದಿದೆ ಮತ್ತು ಇಂದ್ರನು ಕೂಡ ಹೀಗೆಯೇ ತಿಳಿದುಕೊಳ್ಳುತ್ತಾನೆ.

ಇಂದು ಭಗವಾನ ಮಹಾವೀರರ ಜನ್ಮಕಲ್ಯಾಣಕ ದಿವಸವಿದೆ. ಜನರು ಜನ್ಮಜಯಂತಿಯೆಂದು ಹೇಳುತ್ತಾರೆ ಅದು ಸರಿಯಲ್ಲ. ಸಾಮಾನ್ಯವಾಗಿ ಸಾಧಾರಣ ಲೌಕಿಕ ಜನರ ಜನ್ಮತಿಥಿಯನ್ನು ಜಯಂತಿಯೆಂದು ಹೇಳುತ್ತಾರೆ. ಆ ಜಯಂತಿ ಮತ್ತು ಜನ್ಮಕಲ್ಯಾಣಕದಲ್ಲಿ ತುಂಬ ಅಂತರವಿದೆ. ಜನ್ಮಕಲ್ಯಾಣಕವಂತೂ ಅಲೌಕಿಕ ಪುರುಷರದಾಗುತ್ತದೆ. ಸಾಧಾರಣ ಮನುಷ್ಯರ ಜನ್ಮಕಲ್ಯಾಣಕ ಉತ್ಸವವನ್ನು ಆಚರಿಸಲಾಗುವುದಿಲ್ಲ. ಸಾಧಾರಣ ಮನುಷ್ಯನು ಮಾತೆಯ ಗರ್ಭದಲ್ಲಿ ಬರುತ್ತಾನೆ, ಜನ್ಮ ಪಡೆಯುತ್ತಾನೆ, ದೀಕ್ಷೆ ಸ್ವೀಕರಿಸುತ್ತಾನೆ ಆದಾಗ್ಯೂ ಅವನ ಕಲ್ಯಾಣಕ ಉತ್ಸವವನ್ನು ಆಚರಿಸಲಾಗುವುದಿಲ್ಲ.

ಪಂಚಕಲ್ಯಾಣಕ ಉತ್ಸವವನ್ನು ತೀರ್ಥಂಕರರದೇ ಆಚರಿಸಲಾಗುತ್ತದೆ. ಹದಿನಾಲ್ಕು ಪೂರ್ವಗಳಲ್ಲಿ ಕಲ್ಯಾಣವಾದ ನಾಮದ ಹನ್ನೊಂದನೆಯ ಪೂರ್ವವಿದ್ದು ಅದರಲ್ಲಿ ಭಗವಂತರ ಗರ್ಭ ಮೊದಲಾದ ಕಲ್ಯಾಣಕವಾದ ವರ್ಣನೆಯು ಬರುತ್ತದೆ. ತೀರ್ಥಂಕರ ಭಗವಂತರು ಜನ್ಮದಿಂದಲೇ ಮೂರು ಜ್ಞಾನಧಾರಿಗಳಾಗಿ ಅವತರಿಸುತ್ತಾರೆ. ಆತ್ಮನ ಅರಿವಿರುತ್ತದೆ ಮತ್ತು ಮುನಿತನದ ಅಂಗೀಕಾರಮಾಡಿ ಕೇವಲಜ್ಞಾನ ಪ್ರಾಪ್ತ ಮಾಡಿಕೊಳ್ಳುತ್ತಾರೆ ಆಗ ದಿವ್ಯಧ್ವನಿಯು ಹೊರಡುತ್ತದೆ. ಆ ಭಗವಂತರು ಪವಿತ್ರತೆಯಲ್ಲಿ ಮತ್ತು ಪುಣ್ಯದಲ್ಲಿ ಪೂರ್ಣರಿರುತ್ತಾರೆ ಮತ್ತು ಅವರ ಅಲೌಕಿಕ ವಾಣಿಯು ಹೊರಡುತ್ತದೆ. ಇಂದ್ರನಿಗೆ ಭಗವಂತರ ಜನ್ಮವಾದುದರ ಅರಿವಿರುತ್ತದೆ ಮತ್ತು ಭಗವಂತರು ಪೂರ್ಣದಶೆಯನ್ನು ಪ್ರಾಪ್ತಮಾಡಿಕೊಂಡಾಗ ಸ್ವಾಭಾವಿಕವಾಗಿ ವಾಣಿಯು ಹೊರಡುತ್ತದೆ. ಆ ವಾಣಿಯಲ್ಲಿ ನಿನ್ನ ಪ್ರಭುತೆಯಿಂದ ನೀನು ಮೋಕ್ಷ ಪಡೆಯುವೆಯೆಂದು ಬರುತ್ತದೆ.ನಿನ್ನಲ್ಲಿ ದ್ರವ್ಯ-ಗುಣ-ಪರ್ಯಾಯ ಮೂರರ ಪ್ರಭುತೆಯಿದೆ. ನೀನು ಅವನ್ನು ತಿಳಿದುಕೊಂಡರೆ ಪ್ರಭು ಆಗುವೆ. ನಮ್ಮಿಂದ ನೀನು ಸಂಸಾರ ದಾಟಲಾರೆ. ಅದರಂತೆ ನಾವು ಈ ವಾಣಿಯ ಕರ್ತೃವಿಲ್ಲವೆಂಬ ಸ್ವತಂತ್ರ ಮಾತು ಬರುತ್ತದೆಂದು ಇಂದ್ರನು ತಿಳಿದಿರುತ್ತಾನೆ. ಅದರಿಂದ ಅಂಥ ಪುರುಷರ ಕುರಿತು ಬಹುಮಾನ ಮತ್ತು ಭಕ್ತಿ ಬರುತ್ತದೆ ಮತ್ತು ಅವರ ಕಲ್ಯಾಣಕ ಆಚರಿಸುತ್ತಾರೆ. ತಾವು ತಮ್ಮಿಂದ ತಿಳಿದುಕೊಳ್ಳಬೇಕೆಂಬ ಅರಿವುಳ್ಳವರು ಭಗವಂತರ ಮೇಲೆ ಆರೋಪ ಮತ್ತು ಬಹುಮಾನ ಮಾಡುತ್ತಾರೆ.

ಆದರೆ ಅಜ್ಞಾನಿಗಳು ಹೇಳುವುದೇನೆಂದರೆ ನಮ್ಮ ವಾಣಿಯಿಂದ ನೀವು ದಾಟುವಿರಿ, ನಿಮ್ಮಲ್ಲಿ ಪಾಮರತೆಯಿದ್ದರೂ ನಮ್ಮ ಪ್ರಭುತೆಯ ಸಹಾಯದಿಂದ ನಿಮ್ಮ ಉದ್ಧಾರವಾಗುವುದೆಂದು ಒಂದರ ಕಾರಣದಿಂದ ಇನ್ನೊಂದರಲ್ಲಿ ಕಾರ್ಯವಾಗುತ್ತದೆಂದು ಮನ್ನಿಸುವವರು ತಮ್ಮ ಪರಾಧೀನತೆಯನ್ನು ಮನ್ನಿಸುತ್ತಾರೆ. ಅವರು ಕೇಳುವಂಥ ಜೀವರುಗಳನ್ನು ಕೂಡ ಪಾಮರರೆಂದು ಮನ್ನಿಸುವುದರಿಂದ ಅವರ ಅಭಿಪ್ರಾಯದಲ್ಲಿ ಸಂಪೂರ್ಣ ಜಗತ್ತಿನ ಜೀವರುಗಳು ಪಾಮರರಿದ್ದಾರೆ. ಇಂಥ ಅಜ್ಞಾನಿಗಳ ವಾಣಿಯನ್ನು ಧರ್ಮಾತ್ಮರುಗಳು ಕೇಳುವುದಿಲ್ಲ ಮತ್ತು ಅವರ ಕಲ್ಯಾಣಕವನ್ನು ಆಚರಿಸುವುದಿಲ್ಲ. ಈ ಜೀವನು ನನ್ನನ್ನು ಪಾಮರನನ್ನಾಗಿ ಮಾಡಿದ್ದಾನೆ ಮತ್ತು ಇತರರ ಪ್ರಭುತೆಯಲ್ಲಿ ಆರೋಪ ಮಾಡುತ್ತಾನೆಂದು ಧರ್ಮಾತ್ಮನು ತಿಳಿಯುತ್ತಾನೆ. ಇನ್ನೊಂದು ಜೀವದ ರಾಗ-ದ್ವೇಷಗಳನ್ನು ದೂರಮಾಡುತ್ತೇನೆಂದು ಹೇಳುವವನು ರಾಗ-ದ್ವೇಷಗಳ ಪ್ರಭುತೆಯನ್ನು ಕೂಡ ತಿಳಿಯುವುದಿಲ್ಲ. ಏಕೆಂದರೆ ಮುಂದಿರುವ ಜೀವನು ರಾಗ-ದ್ವೇಷಮಾಡುವಲ್ಲಿ ಕೂಡ ಸ್ವತಂತ್ರನಿದ್ದಾನೆ ಅವನು ವಿಕಾರಮಾಡಿದರೆ ಆಗುತ್ತದೆ ಮತ್ತು ಸ್ವಭಾವಸನ್ಮುಖವಾದರೆ ರಾಗ-ದ್ವೇಷಗಳಾಗುವುದಿಲ್ಲ. ಅಜ್ಞಾನಿಯ ವಾಕ್ಯದಲ್ಲಿ ಶಕ್ತಿಯಿಲ್ಲ. ಒಬ್ಬನ ಆಶೀರ್ವಾದದಿಂದ ಕಲ್ಯಾಣವಾಗುವುದು ಮತ್ತು ಒಬ್ಬನ ಶಾಪದಿಂದ ಅಕಲ್ಯಾಣವಾಗುವುದೆಂದು ಹೇಳುವವನು ವಸ್ತುವಿನ ಸ್ವತಂತ್ರತೆಯನ್ನು ತಿಳಿಯುವುದಿಲ್ಲ. ತತ್ತ್ವವನ್ನು ಪರಾಧೀನವೆಂದು ಮನ್ನಿಸುವವನ ಜ್ಞಾನವು ದೋಷಯುಕ್ತ ಹಾಗೂ ರಾಗಯುಕ್ತವಿದೆ. ತತ್ತ್ವವನ್ನು ಸ್ವಾಧೀನವೆಂದು ಮನ್ನಿಸುವವನ ಜ್ಞಾನವು ನಿರ್ದೋಷವಿದೆ ಮತ್ತು ವೀತರಾಗಮಯವಿದೆ. ನಿರ್ದೋಷತೆ ಮತ್ತು ವೀತರಾಗತೆಯು ಪೂಜ್ಯವಾಗಿದ್ದರೆ ದ್ವೇಷ ಮತ್ತು ರಾಗಗಳು ಅಪೂಜ್ಯವಿವೆ. ಜ್ಞಾನಿಗೆ ತನ್ನ ಸ್ವಭಾವದ ಅರಿವಿದೆ ಅವನು ಸ್ವತಂತ್ರತೆಯನ್ನು ತಿಳಿಯುವುದರಿಂದ ತನ್ನ ನಿರ್ದೋಷಸ್ವಭಾವ ಮತ್ತು ನಿರ್ದೋಷಪರ್ಯಾಯವನ್ನು ನಿಶ್ಚಯದಿಂದ ಪೂಜಿಸುತ್ತಾನೆ ಇನ್ನು ವ್ಯವಹಾರದಿಂದ ನಿರ್ದೋಷ ಸರ್ವಜ್ಞ ವೀತರಾಗ ಜಿನೇಂದ್ರ ಭಗವಂತರನ್ನು ಪೂಜಿಸುತ್ತಾನೆ.

'ನಿರ್ದೋಷಸುಖ ನಿರ್ದೋಷತೋಷವದೆಲ್ಲಿಯು ತಾ ದೊರಕಲಿ ಈ ದಿವ್ಯ ಅಂತಃತತ್ತ್ವವದರಿಂ ಬಂಧದಿಂ ಪಾರಾಗಲಿ' ಎಂದೂ ರಾಜಚಂದ್ರರು ಹೇಳಿದ್ದಾರೆ. ಎಂದರೆ ಬೇಕಾದ ರೋಗಗಳಿಂದ ಎಂದರೆ ಪರದೊಳಗಿಂದ ತೆಗೆದುಕೊಳ್ಳುವುದಿಲ್ಲ ಆದರೆ ತನ್ನ ಶುದ್ಧಸ್ವಭಾವದೊಳಗಿಂದ ತೆಗೆದುಕೊಳ್ಳಲು ಹೇಳಿದೆ. ತಾನು ಚಿದಾನಂದ ಆತ್ಮನಿದ್ದೇನೆಂದು ಅರಿವು ಮಾಡಿಕೊಂಡರೆ ಪರ್ಯಾಯದೊಳಗಿನ ಪಾಮರತೆಯು ನಾಶವಾಗಿ ಸ್ವತಂತ್ರತೆಯು ಪ್ರಕಟವಾಗುತ್ತದೆ ಮತ್ತು ನಿರ್ದೋಷ ಸುಖ ಹಾಗೂ ನಿರ್ದೋಷ ಆನಂದವು ಪ್ರಕಟವಾಗುತ್ತದೆ. ತನ್ನ ಅಪರಾಧದ ಕಾರಣದಿಂದ ಪರ್ಯಾಯದಲ್ಲಿ ಬಂಧನಗಳಿಂದ ಕಟ್ಟಿಲ್ಪಟ್ಟಿದೆಯೆಂದು ಜ್ಞಾನಮಾಡಿಕೊಂಡರೆ ಬಿಡುಗಡೆಯಾಗಿ ಹೋಗುವುದು.

ಜೀವನು ಕರ್ಮಗಳಿಂದ ತಿರುಗುತ್ತಾನೆಂದು ಅನಂತ ಉಪಕಾರಿಯಾದ ಸರ್ವಜ್ಞಭಗವಂತರು ಹೇಳಿದ್ದಾರೆಂದು ಕೆಲವರು ಹೇಳುತ್ತಾರೆ ಆದರೆ ಆ ಮಾತು ತೀರ ಅಸತ್ಯವಿದೆ. ಭಗವಂತರು ಹೇಳುವುದೇನೆಂದರೆ ನೀನು ನಿನ್ನ ಅಪರಾಧದಿಂದ ತಿರುಗುವೆಯೆಂಬ ಅಣಾರೋಪ ಕಥನವನ್ನು ತಿಳಿದುಕೊಂಡಾಗ ಕರ್ಮದಿಂದ ತಿರುಗುತ್ತಿವೆಯೆಂಬ ಆರೋಪ ಕಥನ, ಉಪಚಾರ ಕಥನ ಬರುತ್ತದೆ. ಮತ್ತು ಭಕ್ತಿಯಲ್ಲಿ ಕೂಡ 'ಓ ಪ್ರಭು ! ತಮ್ಮಿಂದ ಸಂಸಾರ ದೂರವಾಯಿತೆ'ಂದು ಬರುತ್ತದೆ. ಇದರ ಅರ್ಥವೆಂದರೆ ಎಲೈ ಆತ್ಮನೇ ನಿನ್ನ ಸ್ವಭಾವದಲ್ಲಿ ಸಂಸಾರವಿಲ್ಲ, ಸಂಸಾರವು ಒಂದು ಸಮಯದ ಪರ್ಯಾಯದಲ್ಲಿದೆ. ಸ್ವಭಾವದ ಅರಿವಾದೊಡನೆ ಸಂಸಾರವು ಹೊರಟುಹೋಗುವುದೆಂಬುದರ ಆರೋಪವು ಭಗವಂತರ ಮೇಲೆ ಬರುತ್ತದೆ. ಈಗಂತೂ ಅಜ್ಞಾನವು ತುಂಬ ಬೆಳೆದು ಬರುತ್ತಿದೆ. ಕ್ಷಾಮ ತಲೆದೋರಿದಾಗ ಯಾರಾದರೂ ನೂರಾರು ರೂಪಾಯಿ ಕೊಟ್ಟರೆ ತಮ್ಮಿಂದ ದೊಡ್ಡ ಉಪಕಾರವಾಯಿತೆಂದು ಹೇಳುತ್ತಾನೆ ಮತ್ತು ಹಣ ಕೊಟ್ಟವನು ಕೂಡ ನನ್ನಿಂದ ಬಡವನ ಉದ್ಧಾರವಾಯಿತೆಂದು ಮನ್ನಿಸುತ್ತಾನೆ. ಹೀಗೆ ಅವರೀರ್ವರು ತಿಳಿದುಕೊಳ್ಳುತ್ತಾರೆ. ಆದರೆ ಶ್ರೀಮದ್ ರಾಜಚಂದ್ರರು ಹೇಳುವುದೇನೆಂದರೆ ಯಾರದೇ ಕಾರಣದಿಂದ ತೆಗೆದುಕೊಳ್ಳುವುದಿಲ್ಲ ಮತ್ತು ಯಾರೂ ಕೊಡುವುದೂ ನಿಜವಾಗಿ ಕೊಡುವುದಿಲ್ಲ. ಆದರೆ ಅಜ್ಞಾನೀಜೀವರುಗಳು ಸುಮ್ಮಸುಮ್ಮನೆ ತಮ್ಮ ತಮ್ಮಲ್ಲಿ ವಿಪರೀತವಾಗಿ ಮನ್ನಿಸಿಕೊಳ್ಳುತ್ತಿದ್ದಾರೆ.

ಈ ಎಲ್ಲ ಮಾತುಗಳು ಶಬ್ದ ಸಮಯದಿಂದ ಹೊರಡುತ್ತವೆ. ಶಬ್ದ ಅಥವಾ ವಾಣಿಯು ಸ್ವತಂತ್ರವಿದೆ. ಇಂದು ಭಗವಂತರ ಜನ್ಮದಿವಸವಿದೆ. ಎಂದರೆ ಭಗವಂತರು ಯಜ್ಞದಲ್ಲಿ ಆಗುತ್ತಿರುವ ಪಶುಬಲಿಯನ್ನು ನಿಲ್ಲಿಸಿದರು, ಸ್ತ್ರೀಯರಿಗೆ ಸ್ವಾತಂತ್ರ್ಯ ನೀಡಿದರು ಎಂದು ಮೊದಲಾಗಿ ಊರೂರುಗಳಲ್ಲಿ ಭಾಷಣಗಳಾಗುವವು. ಹೀಗೆ ಹೇಳುವವರು ಭಗವಂತರ ವಾಣಿಯನ್ನೇ ತಿಳಿದುಕೊಂಡಿಲ್ಲ. ಹೀಗೆ ಭಗವಂತರ ವಾಣಿಯಿರುವ ಸಾಧ್ಯತೆಯಿಲ್ಲ. ಸ್ತ್ರೀಯರಿಗೆ ಸಾಧುಪದವಿರುವುದಿಲ್ಲ. ಸ್ತ್ರೀಯ ಮತ್ತು ಪುರುಷನ ಆತ್ಮನು ಸಮಾನನಿದ್ದರೂ ಕೂಡ ಪರ್ಯಾಯದಲ್ಲಿ ಅಂತರವಿದೆ. ಸಾಧುಪದವನ್ನು ಅಂಗೀಕಾರ ಮಾಡುವ ಸಲುವಾಗಿ ಎಷ್ಟು ವೀತರಾಗತೆಯು ಬೇಕು ಅಷ್ಟು ವೀತರಾಗತೆಯು ಸ್ತ್ರೀಯ ಪರ್ಯಾಯದಲ್ಲಿ ಪ್ರಕಟವಾಗುವ ಸಾಧ್ಯತೆಯಿಲ್ಲ. ಸಮ್ಯಗ್ದೃಷ್ಟಿ ಸ್ತ್ರೀಯರು ತಿಳಿದುಕೊಳ್ಳುವುದೇನೆಂದರೆ ನಮ್ಮ ಆತ್ಮನು ದ್ರವ್ಯ ಹಾಗೂ ಗುಣದಿಂದ ಸಮಾನವಿದ್ದರು ಕೂಡ ಐದನೆಯ ಗುಣಸ್ಥಾನದಿಂದ ಮುಂದೆ ಹೋಗದ ಹಾಗೆ ಪರ್ಯಾಯದ ಮರ್ಯಾದೆಯೇ ಇದೆ. ಮತ್ತು ಮುನಿತನದಲ್ಲಿ ವಸ್ತ್ರದ ರಾಗವು ಉಳಿದುಬಿಡುತ್ತದೆಂಬುದು ಸಾಧ್ಯವಿಲ್ಲ. ಮುನಿತನದಲ್ಲಿ ವಸ್ತ್ರದ ಮೇಲೆ ರಾಗವಿರುವುದಿಲ್ಲ. ಮುನಿಗಳು ನಿರ್ಗ್ರಂಥ ದಿಗಂಬರರಾಗಿಯೇ ಇರುತ್ತಾರೆ. ಹೀಗೆ ಯಾವ ಯಾವ ಭೂಮಿಕೆಯ ಮರ್ಯಾದೆಯು ಎಷ್ಟೆಷ್ಟು ಇರುತ್ತದೆ ಅದೇ ಪ್ರಮಾಣದಿಂದ ತಿಳಿಸಿಕೊಡುವ ವಾಣಿಯು ಅದು ನಿಜವಾದ ವಾಣಿಯಿದೆ.

ವಸ್ತ್ರಸಹಿತ ಮುನಿತನವನ್ನು ಹೇಳುವ, ಸ್ತ್ರೀಗೆ ಮುನಿತನ ಹಾಗೂ ಮೋಕ್ಷ ಮನ್ನಿಸುವಂಥ ವಾಣಿ ಮತ್ತು ಶಾಸ್ತ್ರಗಳು ನಿಜವಾದ ಶಾಸ್ತ್ರಗಳಲ್ಲ. ಯಾವ ಜೀವನು ಸೂತ್ರದ ಒಂದು ಶಬ್ದವನ್ನಾದರೂ ತಿರುವು-ಮುರುವು ಮಾಡಿದರೆ ಅವನು ಅನಂತ ಸಂಸಾರಿಯಿದ್ದಾನೆಂದು ಅಷ್ಟಪಾಹುಡದಲ್ಲಿ ಆಚಾರ್ಯ ಭಗವಂತರು ಹೇಳಿದ್ದಾರೆ. ಅಂಥ ಜೀವರುಗಳು ಪೂಜನೀಯರಿಲ್ಲ. ಅವರು ಸರ್ವಜ್ಞ ಪರಂಪರೆಯಿಂದ ನಡೆದುಬಂದಿರುವ ಸೂತ್ರದಲ್ಲಿ ಹೆಚ್ಚು ಕಡಿಮೆಮಾಡಿ ಸುಳ್ಳುಶಾಸ್ತ್ರ ರಚಿಸಿದ್ದಾರೆ. ಅದರಲ್ಲಿ ಮಿಥ್ಯಾದೃಷ್ಟಿಗಳು ನಿಮಿತ್ತರಿದ್ದು ಸಮ್ಯಗ್ದೃಷ್ಟಿಗಳು ನಿಮಿತ್ತರಿಲ್ಲ.

**ಪ್ರಶ್ನೆ :-** ಭಾಷೆಯು ಮಿಥ್ಯಾರೂಪದಿಂದ ಹೊರಟರೆ ಅದರ ಕರ್ತೃ ನಾವಿದ್ದೇವೆಯೇನು ? ನಾವಂತೂ ಭಾಷೆಯ ಅಥವಾ ಶಬ್ದದ ಕರ್ತೃಗಳಿಲ್ಲವಲ್ಲ ?

**ಉತ್ತರ :-** ಭಾಷೆಯ ಕರ್ತೃಗಳು ಜ್ಞಾನಿ ಅಥವಾ ಅಜ್ಞಾನಿ ಯಾರೂ ಇಲ್ಲವೆಂಬ ಮಾತು ಸರಿಯಾಗಿದೆ, ಆದರೆ ಭಾಷೆಯು ಹೊರಡುವ ಸಮಯದಲ್ಲಿ ಜೀವದ ನಿಮಿತ್ತವಿದ್ದುದು ಅದು ವಾಣಿಯ ಮೂಲಕ ನಿಶ್ಚಿತ ಮಾಡುವ ಸಾಧ್ಯತೆಯಿದೆ. ಶಾಸ್ತ್ರದ ಶಬ್ದಗಳ ಕರ್ತೃವಂತೂ ಪುದ್ಗಲ ಪರಮಾಣುಗಳಿವೆ. ಆದರೆ ಆ ಶಾಸ್ತ್ರವನ್ನು ವಿರುದ್ಧ ಮತ್ತು ವಿಪರೀತವಾಗಿ ಬರೆಯುವ ಭಾವದ ಕರ್ತೃ ಅಜ್ಞಾನೀಜೀವನಿದ್ದಾನೆ.ಆದುದರಿಂದ ಅದರಲ್ಲಿ ಅಜ್ಞಾನಿಜೀವನು

ನಿಮಿತ್ತನಿದ್ದಾನೆಂದು ಹೇಳುವ ಸಾಧ್ಯತೆಯಿದೆ. ಹೇಗೆಂದರೆ ಒಂದು ಸ್ಥಳದಲ್ಲಿ ಐದು ಶ್ರೀಫಲಗಳು ಬಿದ್ದುಕೊಂಡಿವೆ, ಆದರೆ ಯಾವನೋ ಓರ್ವನು ಅಲ್ಲಿ ಮೂರು ಶ್ರೀಫಲಗಳು ಬಿದ್ದುಕೊಂಡಿವೆಯೆಂದು ಹೇಳಿದರೆ 'ಮೂರು ಶ್ರೀಫಲಗಳು ಬಿದ್ದುಕೊಂಡಿವೆ'ಯೆಂಬ ಶಬ್ದಗಳಂತೂ ಶಬ್ದದ ಕಾರಣದಿಂದ ಹೊರಟಿವೆ. ಆದರೆ ಅದರ ಹಿಂದೆ ಅವನ ಜ್ಞಾನವು ಅಸತ್ಯವಿದೆಯೆಂಬುದು ಸಿದ್ಧವಾಗುತ್ತದೆ. ವಾಣಿಯ ಕಾರಣದಿಂದ ಇಲ್ಲ ಆದರೆ ವಾಣಿಯ ಹಿಂದೆ ಇರುವ ಮಾತನಾಡುವವನ ಜ್ಞಾನವು ಅಸತ್ಯವಿದೆಯೆಂಬುದನ್ನು ಎದುರಿಗೆ ಇರುವ ಜೀವನು ತನ್ನ ಜ್ಞಾನದಿಂದ ತಿಳಿದುಕೊಳ್ಳುತ್ತಾನೆ. ಅದೇ ಪ್ರಕಾರ ಮಿಥ್ಯಾದೃಷ್ಟಿಯು ಶಾಸ್ತ್ರರಚನೆ ಮಾಡುವಾಗ ಮುನಿಗಳಿಗೆ ವಸ್ತ್ರವಿರುತ್ತದೆ, ಸ್ತ್ರೀಯರಿಗೆ ಮುನಿತನವಿರುತ್ತದೆಂದರೆ ಅಲ್ಲಿ ಶಬ್ದಗಳಂತೂ ಪುದ್ಗಲದ ಕಾರಣದಿಂದ ಪರಿಣಮನ ಮಾಡಿವೆ, ಆತ್ಮನು ಅವುಗಳ ಕರ್ತೃವಿಲ್ಲ, ಆದರೆ ಆ ಶಬ್ದಗಳಲ್ಲಿ ನಿಮಿತ್ತರೂಪದಿಂದ ಅಜ್ಞಾನೀಜೀವನಿದ್ದಾನೆಂದು ನಿಶ್ಚಿತವಾಗುತ್ತದೆ. ಮತ್ತು ವೀತರಾಗ ವಾಣಿಯಲ್ಲಿ ಪ್ರತಿಯೊಂದು ದ್ರವ್ಯವು ಸ್ವತಂತ್ರವಿದೆ, ಮುನಿತನದಲ್ಲಿ ವಸ್ತ್ರವಿರುವುದಿಲ್ಲ, ಸ್ತ್ರೀಯರಿಗೆ ಐದನೆಯ ಗುಣಸ್ಥಾನದಿಂದ ಮೇಲೆ ಹೋಗಲಾಗುವುದಿಲ್ಲವೆಂದು ಬಂದಿದೆ. ಅಲ್ಲಿ ವಾಣಿಯಂತೂ ವಾಣಿಯ ಕಾರಣದಿಂದ ಇದೆ, ಆದರೆ ವಾಣಿಯ ಹಿಂದೆ ಇರುವ ಜ್ಞಾನವು ಅದು ಸಮ್ಯಗ್ಜ್ಞಾನಿಯದಿದೆ ಅಥವಾ ಕೇವಲಜ್ಞಾನಿಯದಿದೆ ಅಥವಾ ಬರವಣಿಗೆಯ ಮೇಲಿಂದ ಶಾಸ್ತ್ರ ಬರೆಯುವವರು ಜ್ಞಾನಿಗಳಿದ್ದಾರೆಂಬುದು ನಿಶ್ಚಿತವಾಗುತ್ತದೆ. ಆದುದರಿಂದ ಭಗವಂತರ ವಾಣಿಯನ್ನು ಕೂಡ ಸತ್‌ವೆಂದು ಹೇಳಿದೆ ಮತ್ತು ಅದರಿಂದ ಪೂಜನೀಯವೆಂದು ಹೇಳಿದೆ. ಯಾವ ಜಾತಿಯ ಶಬ್ದಗಳಿರುತ್ತವೆ ಅದರ ಹಿಂದೆ ಅಜ್ಞಾನವು ಕೆಲಸ ಮಾಡುತ್ತದೆ ಅಥವಾ ಜ್ಞಾನವು ಕೆಲಸ ಮಾಡುತ್ತದೆಂಬುದು ಜ್ಞಾನಿಗೆ ತಿಳಿದುಬರುತ್ತದೆ.

'ಸತ್ತಾ ಸ್ವರೂಪ'ವೆಂಬ ಗ್ರಂಥದಲ್ಲಿ ಒಂದು ದೃಷ್ಟಾಂತವು ಬರುತ್ತದೆ. ಒಂದು ಭದ್ರವಾದ ಕೋಣೆಯಲ್ಲಿ ಓರ್ವ ಕಲಾಕಾರನು ಸಿತಾರ ನುಡಿಸುತ್ತಿದ್ದನು ಅವನು ಅತ್ಯಂತ ಮಧುರವಾಗಿ ನುಡಿಸುತ್ತಿದ್ದನು. ಬೇರೊಬ್ಬ ಬುದ್ಧಿವಂತನಾದ ಮನುಷ್ಯನು ದೂರದಲ್ಲಿ ಕುಳಿತುಕೊಂಡು ಅದನ್ನು ಆಲಿಸುತ್ತಿದ್ದನು. ಆಲಿಸುತ್ತಿರುವವನು ಸಂಗೀತ ನುಡಿಸುವವನಂತೆ ಇರಲಿಲ್ಲ. ಕೋಣೆಯ ಬಾಗಿಲುಗಳು ಕೂಡ ಭದ್ರವಾಗಿದ್ದವು,ಆದಾಗ್ಯೂ ಸಿತಾರ ನುಡಿಸುವ ರೀತಿ ಮತ್ತು ಸ್ವರವು ಕಿವಿಗೆ ಬಿದ್ದರೆ ಆಲಿಸುವಂಥವನು ಬುದ್ಧಿವಂತನಾದ ಮನುಷ್ಯನಿದ್ದರೆ ಅವನು ಸ್ವರದ ಮೇಲಿಂದ ಸಿತಾರ ನುಡಿಸುವವನು ಬುದ್ಧಿವಂತನಿರಲೇಬೇಕೆಂದು ನಿಶ್ಚಿತ ಮಾಡುತ್ತಾನೆ. ಹೀಗೆ ಸ್ವರದ ಮೇಲಿಂದ ಅವನು ಆ ಜಾತಿಯ ಜ್ಞಾನಕಲೆಯ ಜ್ಞಾನಮಾಡಿಕೊಳ್ಳುತ್ತಾನೆ. ಸ್ವರವಂತೂ ಪುದ್ಗಲದ ಪರ್ಯಾಯವಿದೆ ಮತ್ತು ಜ್ಞಾನಕಲೆಯು ಆತ್ಮನದಿದೆ, ಆದರೂ ಇಂಥ ಸುಂದರಸ್ವರ ಮತ್ತು ಜ್ಞಾನಕಲೆಯ ನಿಮಿತ್ತ-ನೈಮಿತ್ತಿಕ ಸಂಬಂಧವಿದೆಯೆಂಬುದರ ಮೇಲಿಂದ ನಿಶ್ಚಿತವಾಗುತ್ತದೆ.

ಅದೇ ಪ್ರಕಾರ ತೀರ್ಥಂಕರರು, ಕೇವಲಿಗಳು, ಮುನಿಗಳು, ಧರ್ಮಾತ್ಮರಾದ ಜ್ಞಾನಿಗಳು ಜ್ಞಾನಕಲೆಯಿಂದ ಪರಿಪೂರ್ಣರಿದ್ದಾರೆ. ಅವರುಗಳ ಆತ್ಮನು ಒಳಗೆ ಶರೀರದಲ್ಲಿದ್ದಾನೆ. ಜ್ಞಾನಿಗಳ ಆತ್ಮನು ಕಂಡು ಬರುವುದಿಲ್ಲ. ಆದರೆ ಅವರ ಜ್ಞಾನದ ಜತೆ ನಿಮಿತ್ತ-ನೈಮಿತ್ತಿಕ ಸಂಬಂಧಧಾರಣ ಮಾಡುತ್ತ ವಾಣಿಯು ಹೊರಡುತ್ತದೆ. ಅದರಲ್ಲಿ ಆರು ದ್ರವ್ಯಗಳು ಸ್ವತಂತ್ರವಿವೆಯೆಂದು ಮೊದಲಾದ ಪ್ರಕಾರದಿಂದ ಯಥಾರ್ಥವಾಗಿ ತಿಳಿಸುತ್ತದೆ ಅದರ ಮೇಲಿಂದ ಆಲಿಸುವಂಥವನು ವಾಣಿಯ ಹಿಂದೆ ಇರುವಂಥ ಆತ್ಮನು ಜ್ಞಾನಿಯಿದ್ದಾನೆಂದು ನಿಶ್ಚಯ ಮಾಡುತ್ತಾನೆ. ಅದರಿಂದ ವಿರುದ್ಧವಾಗಿ ಹೇಳುವ ಪರಾಧೀನತೆಯನ್ನು ತಿಳಿಸುವ ಮತ್ತು ಆತ್ಮನನ್ನು ವಾಣಿಯ ಕರ್ತೃವೆಂದು ತಿಳಿಸಿಕೊಡುವಂಥ ವಾಣಿಯ ಮೇಲಿಂದ ಆಲಿಸುವಂಥವರು ಆ ವಾಣಿಯ ಹಿಂದೆ ಇರುವಂಥ ಆತ್ಮನು ಮಿಥ್ಯಾದೃಷ್ಟಿಯಿದ್ದಾನೆಂದು ನಿಶ್ಚಿತ ಮಾಡುತ್ತಾರೆ. ಶಬ್ದಗಳಂತೂ ಶಬ್ದದ ಕಾರಣದಿಂದ ಪರಿಣಮಿಸುತ್ತವೆ, ಆದರೆ ಹಿಂದೆ ಇರುವಂಥ ಆತ್ಮನು ನಿಮಿತ್ತರೂಪದಿಂದ ಹೇಗಿದ್ದಾನೆಂಬುದನ್ನು ಯಥಾರ್ಥವಾಗಿ ತಿಳಿಯಬಹುದಾಗಿದೆ. ಆದಾಗ್ಯೂ ಆತ್ಮನ ಕಾರಣದಿಂದ ವಾಣಿಯ ಪರಿಣಮನವಾಗಿಲ್ಲ. ಮತ್ತು ಹೇಗೆ ಸಂಗೀತ ಆಲಿಸುವಂಥ ಮನುಷ್ಯನು ಬುದ್ಧಿವಂತನಿದ್ದು ಅವನು ಪರೀಕ್ಷಿಸಬಹುದಾಗಿದೆ, ಆದರೆ ಜ್ಞಾನಿಯು ಸಂಗೀತ ಕೇಳಿದರೂ ಪರೀಕ್ಷಿಸುವ ಸಾಧ್ಯತೆಯಿಲ್ಲ ಹಾಗೆ ಇಲ್ಲಿ ಕೂಡ ವಾಣಿಯನ್ನು ಆಲಿಸುವಂಥವನು ಬುದ್ಧಿವಂತನಿದ್ದರೆ ಇದು

ಜ್ಞಾನಿಯ ವಾಣಿಯಿದೆ ಇದು ಅಜ್ಞಾನಿಯ ವಾಣಿಯಿದೆಯೆಂದು ಪರೀಕ್ಷಿಸಬಹುದಾಗಿದೆ. ಅಜ್ಞಾನಿಯು ಭೇದಮಾಡುವ ಸಾಧ್ಯತೆಯಿಲ್ಲ ಎಂದರೆ ಯಾವನ ಯೋಗ್ಯತೆಯಿದೆ ಅವನು ತಿಳಿದುಕೊಳ್ಳುವನು. ವಾಣಿಯ ಕಾರಣದಿಂದ ಯಾರೂ ತಿಳಿದುಕೊಳ್ಳುವುದಿಲ್ಲ. ಮಿಥ್ಯಾದೃಷ್ಟಿಗೆ ಮಿಥ್ಯಾದೃಷ್ಟಿಯ ವಾಣಿಯು ಸರಿಯೆನಿಸುತ್ತದೆ. ಧರ್ಮಾತ್ಮಜೀವನಿಗೆ ಜ್ಞಾನಿಯ ವಾಣಿಯು ಸರಿಯೆನಿಸುತ್ತದೆ. ಆದರೆ ಜ್ಞಾನಿಯು ವಾಣಿಯ ಕರ್ತೃವಿಲ್ಲ ಮತ್ತು ವಾಣಿಯ ಕಾರಣದಿಂದ ಆಲಿಸುವಂಥ ಜೀವನು ತಿಳಿದುಕೊಳ್ಳುವುದಿಲ್ಲ. ಎಲ್ಲವೂ ಸ್ವತಂತ್ರವಿವೆ ಯಾವನು ಮಿಥ್ಯಾದೃಷ್ಟಿಯಿದ್ದಾನೆ ಮತ್ತು ಯಾರ ಪ್ರರೂಪಣೆಯು ವಿರುದ್ಧವಿದೆ ಆತನ ಕಲ್ಯಾಣಕವನ್ನು ಆಚರಿಸುವುದಿಲ್ಲ. ಆದರೆ ಯಾರು ಸರ್ವಜ್ಞರಿದ್ದಾರೆ ಪವಿತ್ರತೆಯಲ್ಲಿ ಮತ್ತು ಪುಣ್ಯದಲ್ಲಿ ಪರಿಪೂರ್ಣರಿದ್ದಾರೆ ಅಂಥ ತೀರ್ಥಂಕರ ಭಗವಂತರಗಳು ಜನ್ಮಕಲ್ಯಾಣಕ ಮೊದಲಾದ ಪ್ರಸಂಗಗಳ ಉತ್ಸವವನ್ನು ಆಚರಿಸಲಾಗುತ್ತದೆ.

ರೂಪಿಯಿರುವಂಥ ಒಂದು ಪರಮಾಣುವಿನಲ್ಲಿ ಶಬ್ದವನ್ನು ವ್ಯಕ್ತಮಾಡುವಂಥ ಸಾಮರ್ಥ್ಯವು ಇಲ್ಲವೆಂದ ಬಳಿಕ ಅರೂಪಿಯಾಗಿರುವಂಥ ಆತ್ಮನು ಆ ಶಬ್ದದ ಕರ್ತೃವು ಆಗುವ ಸಾಧ್ಯತೆಯೇ ಇಲ್ಲ. ಆದಾಗ್ಯೂ ಶಬ್ದದ ಹಿಂದೆ ಯಾರು ನಿಮಿತ್ತರಿದ್ದಾರೆಂಬುದರ ಜ್ಞಾನವಾಗುವ ಸಾಧ್ಯತೆಯಿದೆ.

ಈ ಗಾಥೆಯಲ್ಲಿ ಅನೇಕ ಪರಮಾಣುಗಳ ಸ್ಕಂಧದಿಂದ ಶಬ್ದವು ಉತ್ಪನ್ನವಾಗುತ್ತದೆಯೆಂದು ಹೇಳಲಾಗಿದೆ, ಆದರೆ ಒಂದು ಪರಮಾಣುವಿನಲ್ಲಿ ಶಬ್ದವನ್ನುಂಟು ಮಾಡುವ ಸಾಮರ್ಥ್ಯವಿಲ್ಲದಿರುವುದರಿಂದ ಪರಮಾಣುಗಳು ಅಶಬ್ದಮಯವಿವೆ.

ಆತ್ಮ ಮತ್ತು ಶಬ್ದ ಇವೆರಡೂ ಭಿನ್ನ ವಸ್ತುಗಳಿವೆ. ಆತ್ಮನಿಂದ ಶಬ್ದವು ಹೊರಡುವುದಿಲ್ಲ. ಶಬ್ದವು ಪುದ್ಗಲದ ಪರ್ಯಾಯವಿದೆ ಮತ್ತು ಆತ್ಮನಿಂದ ಭಿನ್ನವಿದೆ. ಯಾರಿಗೆ ಧರ್ಮ ಪ್ರಕಟ ಮಾಡುವುದಿದೆ ಅವರು ಪರಪದಾರ್ಥದ ಕರ್ತೃತ್ವದ ಅಭಿಮಾನವನ್ನು ಬಿಟ್ಟುಕೊಡಬೇಕಾಗುವುದು. ನಾನು ಮತ್ತು ಭಾಷೆ ಎರಡೂ ಭಿನ್ನವೆಂಬ ಶ್ರದ್ಧೆಯಿದ್ದರೇನೇ ಆ ಅಭಿಮಾನವುಬಿಟ್ಟುಹೋಗುವುದು. ನಾನಂತೂ ಜ್ಞಾನಸ್ವರೂಪಿಯಿದ್ದೇನೆಂದು ಪ್ರಜ್ಞೆಯುಂಟಾದಾಗಲೇ ಧರ್ಮವಾಗುವುದು. ಆದರೆ ಹೀಗೆ ಸ್ವಯಂ ಜ್ಞಾನ ಮಾಡಿಕೊಳ್ಳದೆ ಹೀಗೆ ಉಪದೇಶ ಕೊಡಬೇಕಾಗುವುದು ಹೀಗೆ ದಯೆಪಾಲಿಸಬೇಕಾಗುವುದೆಂದು ಮನ್ನಿಸುವುದು ಅದು ಭ್ರಾಂತಿಯಿದೆ.

ಶಬ್ದವು ಅದು ಪುದ್ಗಲದ ಪರ್ಯಾಯವಿದೆಯೆಂಬುದನ್ನು ಈಗ ತಿಳಿಸಿಕೊಡುತ್ತಾರೆ,-

**ಸದ್ದೋ ಖಂಧಪ್ಪಭವೋ ಖಂಧೋ ಪರಮಾಣುಸಂಗಸಂಘಾದೋ ।**
**ಪುಟ್ಠೇಸು ತೇಸು ಜಾಯದಿ ಸದ್ದೋ ಉಪ್ಪಾದಿಗೋ ಣಿಯದೋ ॥೭೯॥**

**ಸ್ಕಂಧೋತ್ಪನ್ನ ಶಬ್ದಗಳಿದ್ದು ಸ್ಕಂಧಗಳು ಪರಮಾಣುಸಮೂಹಸಂಘಾತವಿವೆ ।**
**ಸ್ಕಂಧಾಭಿಘಾತದಿಂ ಶಬ್ದ ಜನಿಸುವವು ಅವು ನಿಯಮದಿಂದುತ್ಪಾದ್ಯವಿವೆ ॥೭೯॥**

ಶಬ್ದವು ಸ್ಕಂಧದಿಂದ ಉತ್ಪನ್ನವಾಗುತ್ತದೆ. ಯಾವುದೇ ಭಾವವುಳ್ಳ ವಸ್ತುವಿದ್ದರೆ ಪರ್ಯಾಯವು ಪರಿವರ್ತನವಾಗಿ ಶಬ್ದವಾಗುತ್ತದೆ. ಆತ್ಮನಿರುವುದರಿಂದ ಶಬ್ದವಾಗುತ್ತದೆಯೆಂಬುದಾಗಿಲ್ಲ. ಶಬ್ದವು ಸ್ಕಂಧದಿಂದಾಗುತ್ತದೆ ಮತ್ತು ಅನಂತ ಪರಮಾಣುಗಳ ಮಿಶ್ರಣದಿಂದ ಸ್ಕಂಧವಾಗುತ್ತದೆ. ಆ ಸ್ಕಂಧಗಳು ಪರಸ್ಪರ ಸಂಘಟಿಸುವುದರಿಂದ ಭಾಷಾ ವರ್ಗಣದ ಪರಮಾಣುಗಳು ಶಬ್ದರೂಪದಿಂದ ಪರಿಣಮಿಸುತ್ತವೆ. ಆತ್ಮನ ಕಾರಣದಿಂದ ಶಬ್ದವಾಗುವುದಿಲ್ಲ.

ಇದರಲ್ಲಿ ಧರ್ಮವೇನು ಬಂತು ? ಯಾವ ವಸ್ತುವು ನಿನ್ನ ಸ್ವಭಾವವನ್ನು ಧಾರಣಮಾಡಿ ಇರುವುದು ಅದು ನಿನ್ನ ವಸ್ತುವಿದೆ. ಯಾವುದು ಜಡಸ್ವಭಾವವನ್ನು ಧಾರಣಮಾಡಿರುವುದು ಅದು ಜಡವಿದೆ, ಅದು ನಿನ್ನ ವಸ್ತುವಲ್ಲ. ನೀನು

ಜ್ಞಾನಸ್ವಭಾವಿಯಾಗಿರುವೆ, ನಿನ್ನ ಧರ್ಮವು ಜಡದಿಂದ ಆಗುವುದಿಲ್ಲ ಮತ್ತು ಜಡದ ಧರ್ಮವು ನಿನ್ನಿಂದ ಆಗುವುದಿಲ್ಲವೆಂದು ತಿಳಿದುಕೊಂಡರೆ ಧರ್ಮವಾಗುವುದು. ಸಾಮಾಯಿಕ ಪಾಠದಲ್ಲಿ ಶರೀರವನ್ನು ಸ್ಥಿರಗೊಳಿಸುವೆನು ಮತ್ತು ಮೌನನಿರುವೆನೆಂದು ಹೇಳಲಾಗುತ್ತದೆ, ಆದರೆ ಅದು ನಿಮಿತ್ತದ ಕಥನವಿದೆ. ದೇಹವನ್ನು ಯಾರು ಸ್ಥಿರವಿಡುವುದು? ವಾಣಿಯನ್ನು ಮಾತನಾಡದಂತೆ ಯಾರು ಮೌನವಿಡುವುದು ? ಮನಸ್ಸನ್ನು ಯಾರು ದಬ್ಬಿ ಇಡುವುದು? ಮನ-ವಚನ-ಕಾಯಗಳು ಪುದ್ಗಲದ ಸ್ಕಂಧರೂಪವಾದ ಅವಸ್ಥೆಯಿದ್ದು ಆತ್ಮನು ಅವನ್ನು ಮಾಡುವ ಸಾಧ್ಯತೆಯಿಲ್ಲವೆಂದು ಭೇದಜ್ಞಾನಮಾಡಬೇಕಾಗುವುದು.

**ಭಾವಾರ್ಥ :-** ದ್ರವ್ಯಕರ್ಣೇಂದ್ರಿಯದ ನಿಮಿತ್ತದಿಂದ ಭಾವಕರ್ಣೇಂದ್ರಿಯದ ಮೂಲಕ ಯಾವ ಧ್ವನಿಯು ತಿಳಿಯುವುದರಲ್ಲಿ ಬರುತ್ತದೆ ಅದನ್ನು ಶಬ್ದವೆಂದು ಹೇಳುತ್ತಾರೆ. ಈ ಕಿವಿಯಂತೂ ಜಡವಿದೆ, ಆದರೆ ಜ್ಞಾನದ ವಿಕಾಸದಿಂದ ಮತ್ತು ಕಿವಿಯ ನಿಮಿತ್ತದಿಂದ ಇದು ಶಬ್ದವಿದೆಯೆಂದು ತಿಳಿದುಬರುತ್ತದೆ. ಶಬ್ದವು ಜ್ಞಾನವಿಲ್ಲ ಮತ್ತು ಜ್ಞಾನವು ಶಬ್ದವಿಲ್ಲ ವೀತರಾಗದ ಉಪದೇಶವು ಅದು ಪರಮಾಣುವಿನ ಪರ್ಯಾಯವಿದೆ. ಆದರಿಂದ ಆತ್ಮನಿಗೆ ಜ್ಞಾನವಾಗುವುದಿಲ್ಲ. ಜ್ಞಾನಪರ್ಯಾಯವು ಸಮಯ-ಸಮಯಕ್ಕೆ ಶಬ್ದವನ್ನು ತಿಳಿಯುತ್ತದೆ. ಆದರೊಳಗೆ ಕಿವಿಯು ನಿಮಿತ್ತವಿದೆ. ಆ ಶಬ್ದವು ಅನಂತ ಪರಮಾಣುಗಳ ಸ್ಕಂಧದಿಂದ ಉತ್ಪನ್ನವಾಗುತ್ತದೆ. ಪರಸ್ಪರ ಮಹಾಸ್ಕಂಧಗಳ ಸಂಘರ್ಷಣವಾದಾಗಶಬ್ದವಾಗುತ್ತದೆ. ಭಾಷೆಯಾಗಲು ಯೋಗ್ಯವಾದ ಭಾಷಾವರ್ಗಣಗಳು ಈ ಮೂರು ಲೋಕದಲ್ಲಿ ತುಂಬಿಕೊಂಡು ಬಿದ್ದುಕೊಂಡಿವೆ.

ಯಾವ ಪ್ರಕಾರ ದಪ್ಪವಾದ ರವೆಯಿಂದ ಉಪ್ಪಿಟ್ಟವಾಗುತ್ತದೆ ಮತ್ತು ನಯವಾದ ಹಿಟ್ಟಿನಿಂದ ಪೂರಿ ಆಗುತ್ತದೆ, ಅದೇಪ್ರಕಾರ ದಪ್ಪವಾದ ಪರಮಾಣುಗಳೊಳಗಿಂದ ಔದಾರಿಕ ಶರೀರವಾಗುತ್ತದೆ ಮತ್ತು ಸೂಕ್ಷ್ಮವಾದ ಪರಮಾಣುಗಳೊಳಗಿಂದ ಭಾಷೆಯಾಗುತ್ತದೆ. ಈ ಓಷ್ಠ ಮತ್ತು ಹಲ್ಲುಗಳು ದಪ್ಪವಾದ ಪರಮಾಣುಗಳಿಂದ ಆಗಿವೆ ಅವುಗಳೊಳಗಿಂದ ಆಗಿವೆ ಅವುಗಳೊಳಗಿಂದ ಕೂಡ ಭಾಷೆ ಹೊರಡುವುದಿಲ್ಲವೆಂದಮೇಲೆ ಆತ್ಮನಿಂದ ಭಾಷೆಯಾಗುತ್ತದೆಂಬುದು ಅಸಂಭವನೀಯವಿದೆ.

ಎಲ್ಲಿ ಎಲ್ಲಿ ಶಬ್ದಗಳನ್ನು ಉತ್ಪನ್ನ ಮಾಡುವ ಸಲುವಾಗಿ ಬಾಹ್ಯಸಾಮಗ್ರಿಗಳ ಸಂಯೋಗವು ದೊರಕುತ್ತದೆ ಅಲ್ಲಿ ಅಲ್ಲಿ ಶಬ್ದ ಯೋಗ್ಯವಾದ ವರ್ಗಣಗಳು ತಾವಾಗಿಯೇ ಶಬ್ದರೂಪದಿಂದ ಪರಿಣಮಿಸುತ್ತವೆ. ಎಂದರೆ ಭಾಷೆಗೆ ಯೋಗ್ಯವಾದ ಪರಮಾಣುಗಳು ಭಾಷೆಯರೂಪದಿಂದ ಪರಿಣಮಿಸುತ್ತವೆ ಆಗ ಬಾಹ್ಯ ಸಾಮಗ್ರಿಗಳನ್ನು ನಿಮಿತ್ತವೆಂದು ಹೇಳಲಾಗುತ್ತದೆ. ಆದರೆ ಬಾಹ್ಯ ಸಾಮಗ್ರಿಗಳಿಂದ ಭಾಷೆಯಾಗುತ್ತದೆಯೆಂಬುದಾಗಿಲ್ಲ. ಯಾವ ಪ್ರಕಾರ ಮನೆಯಲ್ಲಿ ಬೇರೆ ಬೇರೆ ಪ್ರಕಾರದ ಹಿಟ್ಟು ಇರುತ್ತದೆ ಅವುಗಳಿಂದ ಬೇರೆ ಬೇರೆ ಪ್ರಕಾರದ ವಸ್ತುಗಳನ್ನು ಮಾಡಲಾಗುತ್ತದೆ ಅಲ್ಲಿ ಆಯಾ ಪರಮಾಣುಗಳು ತಾವಾಗಿಯೇ ಆ ರೂಪದಿಂದ ಪರಿಣಮಿಸುತ್ತವೆ ಆಗ ಅವನ್ನು ಮಾಡುವಂಥ ಮಹಿಳೆಯನ್ನು ನಿಮಿತ್ತವೆಂದು ಹೇಳಲಾಗುತ್ತದೆ. ಅಜ್ಞಾನಿಗಳು ನಾನು ಮಾಡಿದೆನೆಂದು ಹೇಳುತ್ತಾರೆ ಅದು ಭ್ರಾಂತಿಯಿದೆ. ಆ ಸತ್ತಾವುಳ್ಳ ಪದಾರ್ಥಗಳು ತಮ್ಮಿಂದ ಇವೆಯೋ ಅಥವಾ ನಿನ್ನ ಕಾರಣದಿಂದ ಇವೆಯೋ ? ಆ ಜಡಪದಾರ್ಥಗಳು ತಮ್ಮಿಂದಲೇ ಇವೆ, ಅವು ತಮ್ಮಿಂದಲೇ ರೂಪಾಂತರ ಹಾಗೂ ಕ್ಷೇತ್ರಾಂತರ ಪಡೆಯುತ್ತವೆ. ಅದೇ ಪ್ರಕಾರ ಭಾಷಾವರ್ಗಣಾಗಳ ಪರಮಾಣುಗಳು ತಮ್ಮಿಂದ ತಾವೇ ಒಟ್ಟುಗೂಡಿ ಶಬ್ದರೂಪದಿಂದ ಪರಿಣಮಿಸುತ್ತವೆ, ಆಗ ಬಾಹ್ಯಸಾಮಗ್ರಿಗಳನ್ನು ನಿಮಿತ್ತವೆಂದು ಹೇಳಲಾಗುತ್ತದೆ. ಈ ಉಪದೇಶವು ಇಚ್ಚೆಯಿಂದ ಹೊರಡುವುದಿಲ್ಲ ತನ್ನ ಯೋಗ್ಯತೆಯಿಂದ ಪರಿಣಮಿಸುತ್ತದೆ. ನಿಮಿತ್ತ ಬರುವುದರಿಂದ ಪರಿಣಮಿಸುತ್ತದೆಯೆಂಬುದಾಗಿಲ್ಲ. ಭಾಷೆಯು ಭಾಷೆಯ ಕಾರಣದಿಂದ ಇದೆ, ಇಚ್ಚೆಯು ನಿರ್ಬಲತೆಯಿಂದ ಉಂಟಾಗುತ್ತದೆ. ಆತ್ಮನು ಆ ಇಚ್ಚೆಯಿಂದ ರಹಿತನಾಗಿ ಜ್ಞಾತಾ ಇದ್ದಾನೆಂದು ನಿರ್ಣಯ ಮಾಡಿದರೆ ಧರ್ಮವಾಗುತ್ತದೆ.

ಯಾವನೋ ಓರ್ವನು ಶಬ್ದವನ್ನು ಆಕಾಶದ ಗುಣವೆಂದು ಹೇಳುತ್ತಾನೆ, ಆದರೆ ಅದು ಎಂದೂ ಆಕಾಶದ

ಗುಣವಿಲ್ಲ. ಆಕಾಶವು ಅದು ಅರೂಪಿಯಿದೆ. ಅರೂಪಿಯ ದ್ರವ್ಯ-ಗುಣ-ಪರ್ಯಾಯಗಳು ಅರೂಪಿಯಿರುತ್ತವೆ. ಶಬ್ದವು ಆಕಾಶದ ಗುಣವಿದ್ದರೆ ಶಬ್ದವು ಅರೂಪಿಯೆಂದು ನಿಶ್ಚಿತವಾಗುತ್ತದೆ, ಆಗ ಅದು ಕಿವಿಯ ಮೂಲಕ ಗ್ರಾಹ್ಯವಾಗಬಾರದು. ಇಂದ್ರಿಯಗಳು ಮೂರ್ತಿಕವಿದ್ದು ಇಂದ್ರಿಯಗಳ ಮೂಲಕ ಯಾವುದು ಗ್ರಹಣವಾಗುತ್ತದೆ ಅದುಕೂಡ ಮೂರ್ತಿಕವಿದೆ. ಶಬ್ದಗಳಂತೂ ಇಂದ್ರಿಯದಿಂದ ಗ್ರಾಹ್ಯವಾಗುತ್ತವೆ, ಆದುದರಿಂದ ಶಬ್ದಗಳು ಮೂರ್ತಿಕವಿವೆ. ಅವು ಅಮೂರ್ತಿಕ ಆಕಾಶದ ಗುಣವಲ್ಲ.

ಮತ್ತು ಶಬ್ದವು ಪ್ರಾಯೋಗಿಕ ಹಾಗೂ ವೈಸ್ರಸಿಕವೆಂದು ಎರಡು ಪ್ರಕಾರದ್ದಿದೆ.

**ಪ್ರಾಯೋಗಿಕ :-** ಯಾವುದು ಪುರುಷಾದಿಕರ ಸಂಬಂಧದಿಂದ ಉತ್ಪನ್ನವಾಗುತ್ತದೆ ಅದನ್ನು ಪ್ರಾಯೋಗಿಕವೆಂದು ಹೇಳುತ್ತಾರೆ. ಭಾಷೆಯಲ್ಲಿ ಆತ್ಮನ ಭಾವ ನಿಮಿತ್ತವಿದೆ, ಆದುದರಿಂದ ಪ್ರಾಯೋಗಿಕವೆಂದು ಹೇಳಲಾಗಿದೆ. ಭಾಷೆಯು ಜೀವದ ಇಚ್ಛೆಯ ಕಾರಣದಿಂದ ಪರಿಣಮಿಸುವಂತಿಲ್ಲ. ಮತ್ತು ಆ ಪರಮಾಣುಗಳ ಯೋಗ್ಯತೆಯು ಭಾಷೆಯರೂಪದಿಂದ ಪರಿಣಮಿಸುವುದಿಲ್ಲ ಮತ್ತು ಪುರುಷನ ಇಚ್ಛೆಯಾಗುವುದರಿಂದ ಭಾಷೆಯು ಹೊರಡುತ್ತದೆಂಬುದು ಪ್ರಾಯೋಗಿಕದ ಅರ್ಥವಲ್ಲ. ಭಾಷಾವರ್ಗಣವು ತನ್ನ ಕಾರಣದಿಂದ ಶಬ್ದರೂಪವಾಗಿ ಪರಿಣಮಿಸುತ್ತದೆ. ಅದರಲ್ಲಿ ಜೀವದ ಪ್ರಯತ್ನ ಮೊದಲಾದ ಕಾರಣಗಳು ನಿಮಿತ್ತವಿವೆ. ಅದಕ್ಕಾಗಿಯೇ ಅದನ್ನು ಪ್ರಾಯೋಗಿಕವೆಂದು ಹೇಳಲಾಗುತ್ತದೆ.

**ವೈಸ್ರಸಿಕ :-** ಯಾವುದು ಮೇಘಾದಿಗಳಿಂದ ಉತ್ಪನ್ನವಾಗುತ್ತದೆ ಅದು ವೈಸ್ರಸಿಕವಿದೆ. ಅದರಲ್ಲಿ ಜೀವದ ನಿಮಿತ್ತತನವಿಲ್ಲವೆಂದು ತಿಳಿಸಿಕೊಡುವುದಿದೆ. ಮತ್ತು ಪ್ರಾಯೋಗಿಕದಲ್ಲಿ ಜೀವದ ನಿಮಿತ್ತತನವಿದೆ. ಉಳಿದ ಎರಡೂ ಪ್ರಕಾರಗಳ ಪರಿಣಮನವು ತಮ್ಮ ಕಾರಣದಿಂದಲೇ ಆಗುತ್ತದೆ.

ಇನ್ನು ಶಬ್ದವು ಭಾಷೆ-ಅಭಾಷೆಯೆಂದು ಎರಡು ಪ್ರಕಾರವಿದೆ. ಅದರಲ್ಲಿ ಭಾಷಾತ್ಮಕ ಶಬ್ದವು ಅಕ್ಷರ-ಅನಕ್ಷರದ ಭೇದದಿಂದ ಎರಡು ಪ್ರಕಾರದ್ದಿದೆ. ಸಂಸ್ಕೃತ, ಪ್ರಾಕೃತ, ಆರ್ಯ, ಮ್ಲೇಚ್ಛ ಮೊದಲಾದ ಭಾಷಾರೂಪದ ಯಾವ ಶಬ್ದಗಳಿವೆ ಅವು ಅಕ್ಷರಾತ್ಮಕವಿವೆ. ಅದು ಜಡದ ಪರಿಣಮನವಿದೆ. ಜಡದ ಪರ್ಯಾಯದ ಅಭಿಮಾನಪಡುವವನು ಅವನು ಅಜ್ಞಾನಿಯಿದ್ದಾನೆ. ಯಾವ ಜೀವನು ಜಡದ ಪರ್ಯಾಯದಿಂದ ಭಿನ್ನನಾಗುವುದಿಲ್ಲ ಅವನು ವಿಕಾರದಿಂದ ಎಂದಿಗೂ ಭಿನ್ನನಾಗುವುದಿಲ್ಲ. ದ್ವೀಂದ್ರಿಯ ಮೊದಲಾದ ಜೀವಗಳು ಹಾಗೂ ನೊಣ, ಸೊಳ್ಳೆ ಮೊದಲಾದವುಗಳ ಭಾಷೆಯು ಅನಕ್ಷರಾತ್ಮಕವಿದೆ. ಮತ್ತು ಭಗವಂತರ ದಿವ್ಯಧ್ವನಿಯು ಕೂಡ ಅನಕ್ಷರಾತ್ಮಕವಿದೆ. ಭಗವಂತರ ವಾಣಿಯಲ್ಲಿ ಶಬ್ದಗಳು ಕ್ರಮಪೂರ್ವಕವಾಗಿ ಹೊರಡುವುದಿಲ್ಲ. ಭಗವಾನ ಗೌತಮ ಗಣಧರ ಹಾಗೂ ಇತರ ಬೇರೆ ಬೇರೆ ವ್ಯಕ್ತಿಗಳನ್ನು ಸಂಬೋಧಿಸಿ ಕ್ರಮಪೂರ್ವಕವಾಗಿ ಇರುತ್ತದೆಂದು ಹೇಳುವವರು ಭಗವಂತರ ವಾಣಿಯನ್ನು ಕೂಡ ತಿಳಿದುಕೊಳ್ಳಲಿಲ್ಲ. ಭಗವಂತರದಂತೂ ಅಸಂಖ್ಯಪ್ರದೇಗಳಿಂದ ಅನಕ್ಷರಿಯಾದ ದಿವ್ಯಧ್ವನಿಯು ಹೊರಡುತ್ತದೆ. ಛದ್ಮಸ್ಥ ಅವಸ್ಥೆಯಲ್ಲಿ ಕಷಾಯಗಳಿರುವವರಿಗೆ ಆ ಕಷಾಯದ ನಿಮಿತ್ತದಿಂದ ವಾಣಿಯು ಕ್ರಮಪೂರ್ವಕವಿರುತ್ತದೆ ಮತ್ತು ಅಕಷಾಯದಶೆಯು ಪ್ರಕಟವಾಗಿ ಸರ್ವಜ್ಞದಶೆಯು ಪ್ರಾಪ್ತವಾದಾಗ ವಾಣಿಯು ಅಕ್ರಮವಾಗಿ ಹೊರಡುತ್ತದೆ. ಆ ವಾಣಿಯನ್ನು ಹನ್ನೆರಡು ಸಭೆಗಳಲ್ಲಿನ ದೇವ, ಮನುಷ್ಯ, ತಿರ್ಯಂಚ ಮೊದಲಾದ ಜೀವರುಗಳು ತಮ್ಮ ತಮ್ಮ ಭಾಷೆಯಲ್ಲಿ ತಿಳಿದುಕೊಳ್ಳುತ್ತಾರೆ. ಮತ್ತು ಅದನ್ನು ಕೇಳುವಂಥ ಪ್ರತಿಯೊಬ್ಬರಿಗೂ ಭಗವಂತರು ನಮ್ಮ ಭಾಷೆಯಲ್ಲಿಯೇ ಹೇಳುತ್ತಿದ್ದಾರೆಂದು ಎನಿಸುತ್ತದೆ. ಆದರೆ ಅಲ್ಲಿಯಂತೂ ವಾಣಿಯು ಅಕ್ರಮ ಅನಕ್ಷರಾತ್ಮಕವಾಗಿರುತ್ತದೆ.

ದ್ವೀಂದ್ರಿಯಾದಿ ಜೀವಗಳ ವಾಣಿಯು ಅನಕ್ಷರಾತ್ಮಕ ಮತ್ತು ಭಗವಂತರ ವಾಣಿಯು ಅನಕ್ಷರಾತ್ಮಕ ವಿರುತ್ತದೆಂದರೆ ಅದರಲ್ಲಿರುವ ವ್ಯತ್ಯಾಸವೇನೆಂದು ಕೆಲವರು ಕೇಳಬಹುದು. ಅವರಿಗೆ ಹೀಗೆ ಹೇಳುತ್ತಾರೆ, ಹರಿಜನ ಮತ್ತು ಓರ್ವ ಚಕ್ರವರ್ತಿ ಇವರಲ್ಲಿ ಮನುಷ್ಯತನದ ಅಪೇಕ್ಷೆಯಿಂದ ಸಮಾನತೆಯಿದೆ, ಆದರೆ ಪರ್ಯಾಯ ಅಪೇಕ್ಷೆಯಿಂದ ಹಾಗೂ ಪುಣ್ಯದ ಅಪೇಕ್ಷೆಯಿಂದ ದೊಡ್ಡ ಅಂತರವಿದೆ. ಅದೇಪ್ರಕಾರ ಭಗವಂತ ಮತ್ತು ದ್ವೀಂದ್ರಿಯಗಳ ಭಾಷೆಯು ಅನಕ್ಷರಾತ್ಮಕವಿದ್ದರೂ

ಎರಡರಲ್ಲಿ ಮಹಾನ ಅಂತರವಿದೆ. ಮಕ್ಷಿಕವು ಯಾವ ಭಾಷೆ ಆಡುತ್ತದೆ ಅದರ ಕರ್ತೃವು ಮಕ್ಷಿಕವಲ್ಲ ಅದೇಪ್ರಕಾರ ದಿವ್ಯಧ್ವನಿಯ ಕರ್ತೃವು ಭಗವಂತರಲ್ಲ , ಆದರೆ ಭಾಷೆಯ ಪರಮಾಣುಗಳು ಸ್ವತಂತ್ರವಾಗಿ ಭಾಷೆಯರೂಪದಿಂದ ಪರಿಣಮಿಸುತ್ತವೆ.

ಮತ್ತು ಅಭಾಷಾತ್ಮಕ ಶಬ್ದಗಳಲ್ಲಿ ಪ್ರಾಯೋಗಿಕ ಹಾಗೂ ವೈಸ್ರಸಿಕವೆಂದು ಎರಡು ಭೇದಗಳಿವೆ. ಪುರುಷನ ಸಂಬಂಧದಿಂದ ಆಗುವುದು ಅದು ಪ್ರಾಯೋಗಿಕವಿದೆ. ಪ್ರಾಯೋಗಿಕದಲ್ಲಿ ತತ್, ವಿತತ್, ಘನ ಸುಷಿರರೂಪವಾಗಿ ನಾಲ್ಕು ಭೇದಗಳಿವೆ. ವೀಣೆಯ ಮೀಟುವಿಕೆಯಿಂದ ಯಾವ ಧ್ವನಿಯು ಹೊರಡುತ್ತದೆ ಅದನ್ನು ತತ್‌ವೆಂದು ಹೇಳುತ್ತಾರೆ. ಅದರಲ್ಲಿ ಪುರುಷನ ಬೆರಳುಗಳ ನಿಮಿತ್ತವಿದೆ. ಡೋಲು ಮೊದಲಾದವುಗಳಿಂದ ಉತ್ಪನ್ನವಾಗುವುದು ಅದು ವಿತತ್‌ಶಬ್ದವಿದೆ, ಅದನ್ನು ಅಭಾಷಾತ್ಮಕ ಶಬ್ದವೆಂದು ಹೇಳುತ್ತಾರೆ. ಕೈತಾಳದಿಂದ ಉತ್ಪನ್ನವಾಗುವಂಥ ಶಬ್ದವನ್ನು ಘನವೆಂದು ಹೇಳುತ್ತಾರೆ. ಕೊಳಲಿನ ನಿಮಿತ್ತದಿಂದ ಯಾವ ಶಬ್ದವು ಉತ್ಪನ್ನವಾಗುತ್ತದೆ ಅದನ್ನು ಸುಷಿರವೆಂದು ಹೇಳುತ್ತಾರೆ. ಈ ಪ್ರಕಾರ ಪ್ರಾಯೋಗಿಕ ಅಭಾಷಾತ್ಮಕವಾದ ಶಬ್ದದ ನಾಲ್ಕು ಭೇದಗಳನ್ನು ತಿಳಿಯುವುದು. ಅವುಗಳಲ್ಲಿ ಪುರುಷನ ನಿಮಿತ್ತವಿರುವುದರಿಂದ ಪ್ರಾಯೋಗಿಕವೆಂದು ಹೇಳಲಾಗಿದೆ. ಆದರೆ ಜೀವದ ಕಾರಣದಿಂದ ಆ ಸ್ವರ ಮೊದಲಾದವುಗಳ ಪರಿಣಮನವಾಗುವುದಿಲ್ಲ. ಅಜ್ಞಾನಿಗಳು ನಾವು ಕೊಳಲು ಬಾರಿಸುವುದರಲ್ಲಿ ಪ್ರವೀಣನಿದ್ದೇನೆಂದು ಅಭಿಮಾನಪಟ್ಟುಕೊಳ್ಳುತ್ತಾರೆ ಅವರು ಜಡದ ಅಧಿಪತಿಯಾಗಿ ಗರ್ವಪಡುತ್ತಾರೆ.

ಯಾವುದು ಮೇಘದಿಂದ ಉತ್ಪನ್ನವಾಗುತ್ತದೆ ಅದನ್ನು ವೈಸ್ರಸಿಕ ಅಭಾಷಾತ್ಮಕ ಶಬ್ದವೆಂದು ಹೇಳುತ್ತಾರೆ. ಹೀಗೆ ಸಮಸ್ತ ಪ್ರಕಾರದ ಶಬ್ದಗಳು ಪುದ್ಗಲ ಸ್ಕಂಧಗಳಿಂದ ಉತ್ಪನ್ನವಾಗುತ್ತವೆ ಜೀವದ ಕಾರಣದಿಂದ ಆಗುವುದಿಲ್ಲ.

ಕೇವಲೀಭಗವಂತರಿಗೆ ಇಚ್ಛೆಯಿಲ್ಲದಿದ್ದರೂ ವಾಣಿಯು ಹೊರಡುತ್ತದೆನ್ನುವುದಂತೂ ಸರಿಯಿದೆ, ಆದರೆ ಛದ್ಮಸ್ಥ ಜೀವನಿಗಂತೂ ಇಚ್ಛೆಯ ಕಾರಣದಿಂದ ವಾಣಿಯು ಹೊರಡುತ್ತದೆನ್ನುವುದಂತೂ ಪೂರ್ಣ ಅಸತ್ಯವಿದೆ. ಏಕೆಂದರೆ ವಾಣಿಯು ಛದ್ಮಸ್ಥನದಿರಲಿ ಅಥವಾ ಕೇವಲೀಭಗವಂತರದಿರಲಿ ಅನಕ್ಷರಾತ್ಮಕವಾದ ಧ್ವನಿಗಳೆರಡೂ ಸ್ವತಂತ್ರವಿವೆ. ಅವು ಜೀವದ ಕಾರಣದಿಂದ ಹೊರಡುವುದಿಲ್ಲ. ಪ್ರತಿಯೊಂದು ಶಬ್ದವು ತನ್ನಿಂದ ಆಗುತ್ತದೆ, ನಿಮಿತ್ತದ ಕಾರಣದಿಂದ ಆಗುವುದಿಲ್ಲ. ಭಾಷೆಯ ಸ್ವರೂಪದಿಂದ ನಿನ್ನ ಸ್ವರೂಪವು ಯಾವಾಗಲೂ ಭಿನ್ನವಿದೆಯೆಂದು ನಿಶ್ಚಿತ ಮಾಡಿಸಿದ್ದಾರೆ.

ಭಾಷಣವನ್ನು ಜೋರು-ಜೋರಾಗಿ ಮಾಡಬೇಕು ಏಕೆಂದರೆ ಕೇಳುವವರ ಮೇಲೆ ಹೆಚ್ಚು ಪ್ರಭಾವವಾಗಬೇಕು, ಮೆತ್ತಗೆ ಮಾತನಾಡಿದರೆ ಅಷ್ಟು ಪ್ರಭಾವ ಬೀಳುವುದಿಲ್ಲವೆಂದು ಮನ್ನಿಸುವವರು ಮೂಢರಿದ್ದಾರೆ, ಅವರು ಭಾಷೆಯ ಅಧಿಪತಿಯಾಗುತ್ತಾರೆ.

ನಿಧಾನವಾಗಿ ಅಥವಾ ಜೋರಾಗಿ ಮಾತನಾಡುವುದು ಅದು ಆತ್ಮನ ಅಧಿಕಾರದ ಮಾತಲ್ಲ. ಇಂಥ ಜಡದ ಅಭಿಮಾನಿಗಳಿಗೆ ನಿಜವಾದ ಪ್ರತಿಕ್ರಮಣವಾಗುವುದಿಲ್ಲ. ಜಡವು ನನ್ನ ಸ್ವರೂಪವಲ್ಲವೆಂದು ಭೇದ ಜ್ಞಾನ ಮಾಡಿ ರಾಗದಿಂದ ವಿಮುಖವಾಗುವುದು ಅದು ಪ್ರತಿಕ್ರಮಣವಿದೆ. ಯಾವನಿಗೆ ಇದರ ಪ್ರಜ್ಞೆಯಿಲ್ಲ ಮತ್ತು ಭಾಷೆಯ ಜತೆಯಲ್ಲಿ ಏಕತ್ವಬುದ್ಧಿ ಮಾಡುತ್ತಾನೆ ಆ ಜೀವನು ಸ್ವಭಾವದಿಂದ ವಿಮುಖನಾಗಿದ್ದಾನೆ ಎಂದರೆ ಅವನು ಮಿಥ್ಯಾತ್ವದ ಸೇವನೆ ಮಾಡುತ್ತಾನೆ.

ಮತ್ತು ಭಗವಂತರ ವಾಣಿಯನ್ನು ಅನಕ್ಷರವೆಂದು ಹೇಳಿದೆ ಅದರಲ್ಲಿ ದೇವರ ಸ್ವರೂಪದ ಮಾತು ಕೂಡ ಬಂದುಬಿಟ್ಟಿತು. ಸಾಧಾರಣ ಮನುಷ್ಯನು ಸಮವಸರಣದಲ್ಲಿ ಭಗವಂತರಿಗೆ ಪ್ರಶ್ನೆ ಕೇಳುತ್ತಾನೆ ಮತ್ತು ಭಗವಂತರು ಆ ವ್ಯಕ್ತಿಗೆ ಉತ್ತರ ಕೊಡುತ್ತಾರೆಂದು ಮನ್ನಿಸುವಂಥ ಜೀವನು ಭಗವಂತರನ್ನು ತಿಳಿದುಕೊಂಡಿಲ್ಲ. ತೀರ್ಥಂಕರರ ಸಮವಸರಣದಲ್ಲಿ ಚಕ್ರವರ್ತಿ, ಇಂದ್ರ, ಗಣಧರ ಮೊದಲಾದ ಪುಣ್ಯವಂತರು ಕೇಳಬಹುದಾದಂಥ ವಾಣಿಗೆ ಮತ್ತು ಪುಣ್ಯವಂತ ಪುರುಷರಿಗೆ ನಿಮಿತ್ತ-ನೈಮಿತ್ತಿಕ ಸಂಬಂಧವಿದೆ. ಯಾವನೋ ಸಾಧಾರಣಜೀವನು ಪ್ರಶ್ನೆ ಮಾಡುವ

ಸಾಧ್ಯತೆಯಿಲ್ಲ. ಯಾವ ಪ್ರಕಾರ ದೊರೆಯ ಸಮೀಪಕ್ಕೆ ಹೋಗಬೇಕಾದರೆ ಯೋಗ್ಯತೆಯುಳ್ಳ ಪುರುಷನೇ ಹೋಗಬೇಕಾಗುತ್ತದೆ ಅದೇಪ್ರಕಾರ ಮೂರು ಲೋಕದ ಪ್ರಭುವನ್ನು ಪುಣ್ಯವಂತ ಪುರುಷನೇ ಪ್ರಶ್ನೆ ಕೇಳುತ್ತಾನೆ ಮತ್ತು ಉತ್ತರವು ಓಂಕಾರ ಧ್ವನಿಯಲ್ಲಿ ಬರುತ್ತದೆ. ಮತ್ತು ಎಲ್ಲರೂ ತಮ್ಮ ತಮ್ಮ ಯೋಗ್ಯತೆಗೆ ಅನುಸರಿಸಿ ತಿಳಿದುಕೊಳ್ಳುತ್ತಾರೆ, ಹೀಗೆ ಇಲ್ಲಿ ಅನಕ್ಷರ ವಾಣಿಯನ್ನು ಹೇಳಿರುವಲ್ಲಿ ದೇವರ ಸ್ವರೂಪದ ಪರಿಚಯ ಕೂಡ ಬಂದಿದೆ, ಭಗವಂತರ ವಾಣಿಯು ಅನಕ್ಷರ-ಅಭೇದವಾಗಿರುತ್ತದೆ.

ಒಂದು ಪರಮಾಣುವಿನಲ್ಲಿ ಶಬ್ದರೂಪದಿಂದ ಆಗುವ ಸಾಮರ್ಥ್ಯವಿರುವುದಿಲ್ಲ , ಅದೆಷ್ಟೋ ಪರಮಾಣುಗಳು ಏಕತ್ರವಾದರೆ ಶಬ್ದವಾಗುತ್ತದೆಯೆಂಬುದು ಇಲ್ಲಿ ಹೇಳುವ ತಾತ್ಪರ್ಯಾರ್ಥವಿದೆ. ಪರಮಾಣುವಿನಲ್ಲಿ ಶಕ್ತಿಯಿರುತ್ತದೆ, ಆದರೆ ವ್ಯಕ್ತವಿಲ್ಲ ಆತ್ಮನಲ್ಲಂತೂ ಶಬ್ದದ ಶಕ್ತಿಯಿಲ್ಲ ಅದರಂತೆ ವ್ಯಕ್ತತೆಯು ಕೂಡ ಇಲ್ಲ. ಈ ಎಲ್ಲ ಶಬ್ದಗಳ ಭೇದವನ್ನು ತಿಳಿಸಿಕೊಡುವುದು ಅದು ಪುದ್ಗಲದ ಕಾರ್ಯವಿದೆ. ಆತ್ಮನು ಅವೆಲ್ಲವುಗಳಿಂದ ಭಿನ್ನನಿದ್ದಾನೆಂದು ಜ್ಞಾನ ಮಾಡಿಕೊಂಡು ಜ್ಞಾತಾನಾಗಿ ಉಳಿದರೆ ಧರ್ಮವಾಗುವುದು.

ಪುದ್ಗಲವು ಆತ್ಮನಿಂದ ಭಿನ್ನವಿದೆಯೆಂದು ತಿಳಿದುಕೊಂಡು ಪುದ್ಗಲವನ್ನು ಹೇಯವೆಂದು ಹೇಳಲಾಗಿದೆ ಮತ್ತು ಆತ್ಮನು ಅಂಗೀಕಾರ ಮಾಡಲು ಯೋಗ್ಯನಿದ್ದಾನೆಂದು ಹೇಳಲಾಗಿದೆ. ಆತ್ಮನು ಜ್ಞಾನಸ್ವಭಾವಿಯಿದ್ದು ಅವನು ತನ್ನಿಂದ ಬೇರೆಯಾದಂಥ ಶಬ್ದವನ್ನು ಮಾಡುವುದಿಲ್ಲ ಅದರಂತೆಯೇ ತನ್ನಿಂದ ಬೇರೆಯಾದಂಥ ಶಬ್ದದಿಂದ ಆತ್ಮನಿಗೆ ಜ್ಞಾನವಾಗುವುದಿಲ್ಲ. ಒಂದು ಪರಮಾಣುವು ಜಡವಿದ್ದು ಅದರಲ್ಲಿ ಶಬ್ದವಾಗುವ ಸಾಮರ್ಥ್ಯವಿಲ್ಲವೆಂದ ಬಳಿಕ ಅರೂಪಿಯಾದ ಆತ್ಮನು ಶಬ್ದವನ್ನು ಮಾಡುತ್ತಾನೆಂಬುದು ಅದು ಅಸಂಭವನೀಯವಿದೆ. ಮತ್ತು ಶಬ್ದದಿಂದ ಜ್ಞಾನವಾಗುತ್ತದೆಯೆನ್ನುವುದು ಕೂಡ ಅಸಂಭವನೀಯವಿದೆ.

**ಪ್ರಶ್ನೆ :-** ಮನೆಯಲ್ಲಿ ಇರುವಾಗ ಈ ಜ್ಞಾನವಿರಲಿಲ್ಲ, ಆದರೆ ಇಲ್ಲಿಗೆ ಬಂದು ಇದೆಲ್ಲವನ್ನು ಕೇಳುವುದರಿಂದ ಜ್ಞಾನವಾಗುವುದಿಲ್ಲವೇನು ?

**ಉತ್ತರ :-** ಸೋದರನೇ ! ಆಲಿಸುವುದರಿಂದ ಜ್ಞಾನವಾಗುವುದಿಲ್ಲ , ಶಬ್ದಗಳಂತೂ ಜಡವಿದೆ, ಆತ್ಮನು ಜ್ಞಾನಾನಂದಸ್ವಭಾವಿಯಿದ್ದಾನೆ, ಶಬ್ದಗಳಿಂದ ಜ್ಞಾನವಾಗುವುದಿಲ್ಲ.

**ಪ್ರಶ್ನೆ :-** ನಿಶ್ಚಯದಿಂದ ಆಗುವುದಿಲ್ಲ, ಆದರೆ ವ್ಯವಹಾರದಿಂದ ಆಗುತ್ತದೆಯಲ್ಲವೇ ? ಭಗವಂತರು ಎರಡು ನಯಗಳನ್ನು ಹೇಳಿದ್ದಾರಲ್ಲವೇ ?

**ಉತ್ತರ :-** ತಮ್ಮಲ್ಲಿ ತಮ್ಮ ಕಾರಣದಿಂದ ಜ್ಞಾನವಾಗುತ್ತದೆಯೆಂಬುದು ಅದು ನಿಶ್ಚಯವಿದೆ, ಆಗ ಬೇರೆ ವಸ್ತುವಿನ ಜ್ಞಾನವನ್ನು ವ್ಯವಹಾರನಯವು ಮಾಡಿಸುತ್ತದೆ, ಆದರೆ ಬೇರೆ ವಸ್ತುವಿನಿಂದ ಜ್ಞಾನವಾಗುವುದಿಲ್ಲ. ನಿಶ್ಚಯನಯವು ಆದರ ಮಾಡುವ ಸಲುವಾಗಿ ಇದೆ, ವ್ಯವಹಾರವು ಜ್ಞಾನ ಮಾಡುವ ಸಲುವಾಗಿ ಇದೆ. ಅದು ಆದರ ಮಾಡುವ ಸಲುವಾಗಿ ಇಲ್ಲ. ಆತ್ಮನು ತ್ರಿಕಾಲೀ ಜ್ಞಾತಾನಿದ್ದು ಅವನಲ್ಲಿ ಶಬ್ದ ಮಾಡುವ ಸಾಮರ್ಥ್ಯವಿಲ್ಲ. ಮತ್ತು ಆತ್ಮನು ಕಾರಣನಾಗಿ ಶಬ್ದವನ್ನು ಮಾಡುವಂಥ ಸಾಮರ್ಥ್ಯವು ಶಬ್ದದಲ್ಲಿ ಇಲ್ಲ. ಶಬ್ದವು ಭಾಷೆಯ ಪರಮಾಣುಗಳ ಕಾರಣದಿಂದ ಆಗುತ್ತದೆ.

ಲೌಕಿಕದಲ್ಲಿ ಕೊಹಿನೂರ ಮಣಿಯನ್ನು ಅತ್ಯಂತ ತೇಜಸ್ವಿಯೆಂದು ಹೇಳಲಾಗುತ್ತದೆ, ಪ್ರಕಾಶದ ಪರ್ವತವೆಂದು ಹೇಳಲಾಗುತ್ತದೆ. ಆದರೆ ಅದು ಇಷ್ಟೊಂದು ಪ್ರಕಾಶವುಳ್ಳದ್ದಿದೆಯೆಂದು ಹೇಳುವಂಥ ಪ್ರಜ್ಞೆಯು ಮಣಿಗೆ ಇಲ್ಲ. ಆ ಕೊಹಿನೂರ ಮಣಿಯು ತನ್ನನ್ನು ಅದರಂತೆ ಪರವನ್ನು ತಿಳಿಯುವುದಿಲ್ಲ. ಆ ಮಣಿಯನ್ನು ತಿಳಿಯುವಂಥ ಆತ್ಮನು ತನ್ನನ್ನು

ಅದರಂತೆ ಪರವನ್ನು ತಿಳಿಯುತ್ತಾನೆ. ಇಂಥ ಜ್ಞಾನದ ಪರ್ವತನಾದ ಆತ್ಮನು ಪ್ರತಿಯೊಂದು ದೇಹದಲ್ಲಿ ವಿರಾಜಿಸುತ್ತಿದ್ದಾನೆ. ಅವನ ಜ್ಞಾನದ ವರ್ತಮಾನ ಅವಸ್ಥೆ ಮತ್ತು ಸತ್ತಾ ಇದೆಯೋ ಅಥವಾ ಇಲ್ಲವೋ ಮತ್ತು ವರ್ತಮಾನ ಜ್ಞಾನದ ಕಾರ್ಯವು ಪರದ ಕಾರಣದಿಂದ ಇದ್ದರೆ ತನ್ನ ವರ್ತಮಾನವೆಂಥದು ? ಆದುದರಿಂದ ಯಾವುದೂ ಯಾವುದರ ಕಾರಣದಿಂದ ಇಲ್ಲ. ಆದರೆ ನನ್ನ ಜ್ಞಾನವು ವಕ್ತಾನೊಳಗಿಂದ ಬರುತ್ತದೆಯೆಂಬ ಭ್ರಾಂತಿಯು ಅಜ್ಞಾನಿಗಳಿಗೆ ಆಗಿ ಹೋಗಿದೆ. ಅದುವೇ ಮಹಾನ ಭ್ರಮೆಯಿದೆ.

**ಪ್ರಶ್ನೆ :-** ಹಾಗಾದರೆ ವಕ್ತಾ ಮತ್ತು ಶ್ರೋತಾನ ಅಭಿಪ್ರಾಯವು ಒಂದು ಹೇಗೆ ಆಗುತ್ತದೆ ?

**ಉತ್ತರ :-** ಈರ್ವರ ಅಭಿಪ್ರಾಯವು ಒಂದೇ ತೆರವಾಗುವುದು ಅದು ತನ್ನ ಕಾರಣದಿಂದ ಆಗುತ್ತದೆ. ವಕ್ತಾನ ಆಶಯವು ಅದು ತನ್ನ ಆತ್ಮನೊಳಗಿಂದ ಬೇರೆಯಾಗಿ ಶ್ರೋತಾನ ಆತ್ಮನಲ್ಲಿ ಬಂದು ಬಿಡುವುದಿಲ್ಲ. ಆದರೆ ಅಜ್ಞಾನಿಗೆ ಭ್ರಾಂತಿ ಹೇಗೆ ಉಂಟಾಗುತ್ತದೆಯೆಂದರೆ ವಾಣಿಯ ಪ್ರವಾಹವು ಅಖಂಡ ಪ್ರವಹಿಸುತ್ತಿದೆ ಅದರ ಕಾರಣದಿಂದ ನನಗೆ ಜ್ಞಾನವಾಗುತ್ತಿದೆಯೆಂದು ತಿಳಿದುಕೊಳ್ಳುತ್ತಾನೆ ಆದರೆ ನೀನು ಭಾವವುಳ್ಳ ಪದಾರ್ಥನಿರುವೆಯೋ ಅಥವಾ ಭಾವರಹಿತನಾಗಿರುವೆಯೋ ? ಯಾವುದು ಪದಾರ್ಥವಿದೆ ಅದು ಭಾವರಹಿತವಾಗಿರುವುದಿಲ್ಲ. ಮತ್ತು ಅದರ ವರ್ತಮಾನವು ತನ್ನಿಂದ ಕಾರ್ಯ ಮಾಡುತ್ತದೆಯೋ ಅಥವಾ ಪರದಿಂದ ಮಾಡುತ್ತದೆ ? ಆ ಜ್ಞಾನದ ಕಾರ್ಯವು ಒಂದು ಸಮಯ ಪರದಿಂದ ಆಗುತ್ತಿದ್ದರೆ ತ್ರಿಕಾಲೀದ್ರವ್ಯವು ಕೂಡ ಪರಾಧೀನವಾಗಿ ಹೋಗುವುದು. ಆದುದರಿಂದ ನಿನಗೆ ಶಬ್ದದಿಂದ ಜ್ಞಾನವಾಗುವುದಿಲ್ಲ, ಆದರೆ ನಿನ್ನಿಂದ ಜ್ಞಾನವಾಗುತ್ತದೆಯೆಂದು ಇಲ್ಲಿ ಹೇಳುತ್ತಾರೆ.

ಪರಮಾಣುವು ಏಕಪ್ರದೇಶಿಯಿದೆಯೆಂದು ಈಗ ತಿಳಿಸಿಕೊಡುತ್ತಾರೆ,-

ಣಿಚ್ಚೋ ಣಾಣವಗಾಸೋ ಣ ಸಾವಗಾಸೋ ಪದೇಸದೋ ಭೇದಾ ।
ಖಂಧಾಣಂ ಪಿ ಯ ಕತ್ತಾ ಪವಿಹತ್ತಾ ಕಾಲಸಂಖಾಣಂ ॥೮೦॥

**ಪ್ರದೇಶದಿಂ ಅನವಕಾಶವಿಲ್ಲ ಸಾವಕಾಶವಿಲ್ಲ ಪರಮಾಣು ನಿತ್ಯವಿದೆ ।**
**ಸ್ಕಂಧಗಳ ಭೇದಿಸುವ ರಚಿಸುವ ಮೇಣ್ಕಾಲಸಂಖ್ಯೆಯಪ್ರವಿಭಾಗಿಯಿದೆ ॥೮೦॥**

ಈ ಪುದ್ಗಲ ಸಂಧದ ಅತ್ಯಂತ ಚಿಕ್ಕದಾದ ಎಂದರೆ ಅದರಲ್ಲಿ ಎರಡು ಭಾಗ ಮಾಡುವ ಸಾಧ್ಯತೆಯಿಲ್ಲದಂಥದನ್ನು ಪರಮಾಣುವೆಂದು ಹೇಳುತ್ತಾರೆ. ಪರಮಾಣುವು ಅದು ನಿರಂತರ ಅವಿನಾಶಿಯಿದೆ ನಿತ್ಯವಿದೆ. ಈ ಶರೀರವು ಕಂಡುಬರುತ್ತಿದೆ ಇದು ಮೂಲತತ್ತ್ವವಲ್ಲ, ಆದರೆ ಅದರ ಚಿಕ್ಕದರಲ್ಲಿ ಅತ್ಯಂತ ಚಿಕ್ಕದಾದ ಯಾವ ಪರಮಾಣುವಿದೆ, ಆ ಪರಮಾಣುವು ಅವಿನಾಶಿಯಿದೆಯೆಂದು ಜ್ಞಾನವು ತಿಳಿಯುತ್ತದೆ.ಪರಮಾಣುವಿಗೆ ತನ್ನ ಪ್ರಜ್ಞೆಯಿಲ್ಲ ಅದರಂತೆ ಇತರದು ಕೂಡ ಪ್ರಜ್ಞೆಯಿಲ್ಲ. ಆದರೆ ಆತ್ಮನು ತನ್ನನ್ನು ಅದರಂತೆ ಪರಮಾಣು ಮೊದಲಾದ ಪರಗಳನ್ನು ಕೂಡ ತಿಳಿಯುತ್ತಾನೆ. ನಾನು ಪರದಿಂದ ಭಿನ್ನನಿದ್ದೇನೆಂದು ಯಥಾರ್ಥಜ್ಞಾನ ಮಾಡಿಕೊಳ್ಳುವಂಥ ಧರ್ಮಾತ್ಮ ಜೀವನಿಗೆ ಓಹೋ ! ನಾನು ಜ್ಞಾನಸ್ವಭಾವಿಯಾದ ಅವಿನಾಶಿಯಿದ್ದೇನೆ ಮತ್ತು ಪರಮಾಣುವು ಜಡಸ್ವಭಾವಿಯಿದ್ದು ಅವಿನಾಶಿಯಿದೆ, ಅನೇಕ ಪರಮಾಣುಗಳ ಸ್ಕಂಧದಿಂದ ಶಬ್ದವಾಗುತ್ತದೆ, ಯಾವನಾದರೂ ಈಶ್ವರ ಅಥವಾ ಆತ್ಮನು ಶಬ್ದದ ಕರ್ತೃವಿಲ್ಲವೆಂಬ ಜ್ಞಾನವಾಗುತ್ತದೆ, ಹಾಗೆ ತಿಳಿದುಬರುತ್ತದೆ.

ಒಂದು ಪರಮಾಣುವು ಒಂದು ಪ್ರದೇಶದಲ್ಲಿ ಇದೆ ಮತ್ತು ಅದು ತನ್ನ ರೂಪ ಮೊದಲಾದ ಗುಣಗಳಿಂದ ಎಂದೂ ಭಿನ್ನವಾಗುವುದಿಲ್ಲವೆಂಬುದನ್ನು ಆತ್ಮನು ತಿಳಿಯುತ್ತಾನೆ. ಅದೇಪ್ರಕಾರ ಆತ್ಮನು ತನ್ನ ಜ್ಞಾನ-ದರ್ಶನ ಮೊದಲಾದ

ಗುಣಗಳಿಂದ ಎಂದೂ ಭಿನ್ನನಾಗುವುದಿಲ್ಲ. ಶುಭಾಶುಭಭಾವಗಳು ಆಗುತ್ತವೆ ಅವು ಪರ್ಯಾಯದಲ್ಲಿ ಆಗುತ್ತವೆ. ಅವು ಬದಲಾಗಿ ನಾಶಹೊಂದುತ್ತವೆ, ಆದರೆ ಜ್ಞಾನ-ದರ್ಶನ ಮೊದಲಾದ ಶಕ್ತಿಗಳು ಯಾವಾಗಲೂ ಉಳಿಯುತ್ತವೆ ಯಾವ ಸಮಯದಲ್ಲೂ ಆತಮನಲ್ಲಿ ಗುಣಗಳಿರುವುದಿಲ್ಲವೆಂಬುದು ಸಂಭವವಿಲ್ಲ. ಅಜ್ಞಾನಿಯು ಶಬ್ದದಿಂದ, ಪುಸ್ತಕದಿಂದ, ಪ್ರತಿಮೆಯಿಂದ ಜ್ಞಾನವಾಗುತ್ತದೆಯೆಂದು ಮನ್ನಿಸುತ್ತಾನೆ, ಆದರೆ ಅವನಿಗೆ ತನ್ನ ಜ್ಞಾನಸ್ವಭಾವದ ವಿಶ್ವಾಸವು ಬರುವುದಿಲ್ಲ, ಯಾವುದು ವಸ್ತುವಿದೆ ಅದು ತನ್ನ ಸ್ವಭಾವವಿಲ್ಲದೆ ಎಂದೂ ಇರುವುದಿಲ್ಲ. ಯಾವುದು ಸ್ವಭಾವದಿಂದ ರಹಿತವಾಗಿರುತ್ತದೆ ಅದನ್ನು ವಸ್ತುವೆಂದು ಹೇಳಲಾಗುವುದಿಲ್ಲ. ಪರಮಾಣುವು ಏಕಪ್ರದೇಶಿಯಾಗಿದ್ದರು ಕೂಡ ಅದು ತನ್ನ ಗುಣದಿಂದ ರಹಿತವಾಗಿರುವುದಿಲ್ಲ. ಅದರಂತೆ ಚೈತನ್ಯಪ್ರಕಾಶದಿಂದ ಪ್ರವರ್ತನಾದ ಆತ್ಮನು ಕೂಡ ತನ್ನ ಜ್ಞಾನ-ದರ್ಶನಾದಿಗುಣಗಳಿಂದ ಎಂದೂ ರಹಿತನಾಗಿರುವುದಿಲ್ಲ.

ಮತ್ತು ಪರಮಾಣವು ಅವಿನಾಶಿಯಿದ್ದು ಅದು ತನ್ನ ಗುಣಗಳಿಂದ ರಹಿತವಿಲ್ಲವೆಂಬ ನಿರ್ಣಯವನ್ನು ಯಾರು ಮಾಡಿದರು ? ಪರಮಾಣುವಿಗೆ ಅದರ ಪ್ರಜ್ಞೆಯಿಲ್ಲ. ಜೀವದ್ರವ್ಯವು ಅದರ ನಿರ್ಣಯ ಮಾಡಿದೆ, ಆದರೆ ನಿರ್ಣಯ ಮಾಡುವ ಕಾರ್ಯವು ಪರ್ಯಾಯದಲ್ಲಿ ಇದೆ, ದ್ರವ್ಯ-ಗುಣದಲ್ಲಿ ಆ ಕಾರ್ಯವಿಲ್ಲ. ಯಾವ ಪ್ರಕಾರ ಪರಮಾಣುವು ಅವಿನಾಶಿಯಿದೆ ಮತ್ತು ತನ್ನ ಗುಣಗಳಿಂದ ರಹಿತವಿಲ್ಲ ಅದೇಪ್ರಕಾರ ಆತ್ಮನು ಅವಿನಾಶಿಯಿದ್ದಾನೆ ಮತ್ತು ತನ್ನ ಜ್ಞಾನಾದಿಗುಣಗಳಿಂದ ರಹಿತನಿಲ್ಲವೆಂಬುದನ್ನು ಪರ್ಯಾಯವು ನಿರ್ಣಯಮಾಡುತ್ತದೆ. ನನ್ನ ಕಾರ್ಯವು ನನ್ನ ಗುಣಗಳನ್ನು ಧಾರಣಮಾಡಿದ ಆತ್ಮದ್ರವ್ಯದ ಆಧಾರದಿಂದ ಆಗುತ್ತದೆ. ಹೀಗೆ ನಾನು ಸ್ವಯಂ ಅವಿನಾಶಿಯಿದ್ದೇನೆ ಮತ್ತು ಗುಣಸಹಿತನಿದ್ದೇನೆಂಬ ಭರವಸೆಯು ಯಾವನಿಗೆ ಬಂದಿದೆ ಆ ಜೀವನು ಪರಮಾಣುವಿನ ನಿರ್ಣಯ ಮಾಡಿದ್ದಾನೆ. ಕೆಳಗಿನ ಅವಸ್ಥೆಯಲ್ಲಿ ಪರಮಾಣುವಂತೂ ಪ್ರತ್ಯಕ್ಷವಾಗಿ ಕಂಡುಬರುವುದಿಲ್ಲ ಪರಮಾಣುವಿನ ಪ್ರತ್ಯಕ್ಷಿಕೆಯಂತೂ ಕೇವಲಿಗಳಿಗೆ ಇರುತ್ತದೆ. ಆದಾಗ್ಯೂ ಕೆಳಗಿನ ಅವಸ್ಥೆಯುಳ್ಳ ಜೀವನಿಗೆ ತನ್ನ ದ್ರವ್ಯಗುಣದ ಏಕತೆಯ ಭರವಸೆಯು ಬಂದಿದೆ ಮತ್ತು ಸ್ವಭಾವದ ಆಶ್ರಯ ತೆಗೆದುಕೊಂಡು ಸ್ವಸಂವೇದನ ಪ್ರತ್ಯಕ್ಷಜ್ಞಾನವು ಪ್ರಕಟವಾಗಿದೆ ಅವನ ಜ್ಞಾನದಲ್ಲಿ ಪರಮಾಣುವು ಪ್ರತ್ಯಕ್ಷವಾಗಿ ಕಂಡುಬಾರದಿದ್ದರು ಕೂಡ ಜ್ಞಾನವು ಯಾವ ಈ ಸ್ಕಂಧವು ಕಂಡುಬರುತ್ತಿದೆ ಇದು ಬಹಳಷ್ಟು ಪರಮಾಣುಗಳ ಪಿಂಡವಿದೆಯೆಂದು ಅನುಮಾನ ಮಾಡುತ್ತದೆ. ಅದರೊಳಗಿಂದ ಭಾಗ ಆಗುತ್ತ-ಆಗುತ್ತ ಕೊನೆಗೆ ಚಿಕ್ಕ ಅಂಶವು ಉಳಿಯುತ್ತದೆ ಅದು ಪರಮಾಣುವಿದೆ. ಪರಮಾಣುವು ಸ್ಕಂಧದ ಅತ್ಯಂತ ಚಿಕ್ಕ ಭಾಗವಿದೆಯೆಂದು ಪ್ರತ್ಯಕ್ಷಪೂರ್ವಕವಾದ ಅನುಮಾನದಿಂದ ನಿರ್ಣಯ ಮಾಡಲಾಗುತ್ತದೆ. ಪರಮಾಣುವು ಏಕಪ್ರದೇಶಿಯಿದ್ದು ಗುಣಸಹಿತವಿದೆ.

ಈ ಮರದ ಹಲಿಗೆಯ ಪಟ್ಟಿ ಕಂಡುಬರುತ್ತಿದೆಯಲ್ಲ ಇದನ್ನು ಯಾವುದರಿಂದ ಮಾಡಲಾಗಿದೆಯೆಂದು ಓರ್ವ ಪಂಡಿತನನ್ನು ಪ್ರಶ್ನೆ ಕೇಳಹೋದರೆ ಅವನು ಉತ್ತರ ಕೊಡುವುದೇನೆಂದರೆ 'ಈ ಹಲಿಗೆಯ ಪಟ್ಟಿಯು ಬಾಚಿಯಿಂದ ಆಗಿದೆಯೆಂದು ಪ್ರತ್ಯಕ್ಷ ಕಂಡುಬರುತ್ತದೆ.' ಹಾಗಾದರೆ ಯಾವುದನ್ನು ಪ್ರತ್ಯಕ್ಷವೆಂದು ಹೇಳುವುದು ? ಆ ಪ್ರತ್ಯಕ್ಷತೆಯು ಜ್ಞಾನಕ್ಕೆ ಅನ್ವಯಿಸುತ್ತದೆಯೋ ಅಥವಾ ಜಡಕ್ಕೆ ಅನ್ವಯಿಸುತ್ತದೆಯೋ ? ಜಡದಲ್ಲಂತೂ ಜ್ಞಾನವಿಲ್ಲದಿರುವುದರಿಂದ ಜಡಕ್ಕೆ ಪ್ರತ್ಯಕ್ಷ ಅಥವಾ ಪರೋಕ್ಷ ಯಾವುದೂ ಇಲ್ಲ. ಮತ್ತು ತಮ್ಮಲ್ಲಿ ಸ್ವಸಂವೇದನಜ್ಞಾನವು-ರಾಗರಹಿತವಾದ ಪ್ರತ್ಯಕ್ಷಜ್ಞಾನವು ಪ್ರಕಟವಾದಲ್ಲದೆ ಸ್ಕಂಧದ ಚಿಕ್ಕದರಲ್ಲಿ ಚಿಕ್ಕಭಾಗವು ಸೂಕ್ಷ್ಮ ಪರಮಾಣುವಿದೆಯೆಂಬ ಅನುಮಾನವನ್ನು ಯಾರು ಮಾಡುವುದು ? ಆತ್ಮನಾದ ನಾನುಶುದ್ಧ ಚೈತನ್ಯಸ್ವಭಾವಿಯಿದ್ದೇನೆ, ಸ್ವಯಂಸಿದ್ಧ ವಸ್ತುವಿದ್ದೇನೆ, ಶರೀರ-ಮನಸ್ಸು-ವಾಣಿ ಮೊದಲಾದವು ಪರವಿವೆ, ಅವುಗಳಿಂದ ನಾನು ತಿಳಿದುಕೊಳ್ಳುವಂತಿಲ್ಲ ಅದರಂತೆ ರಾಗದಿಂದ ಕೂಡ ತಿಳಿದುಕೊಳ್ಳುವಂತಿಲ್ಲ. ನಾನಂತೂ ಯಾವಾಗಲೂ ನನ್ನ ಜ್ಞಾನ-ದರ್ಶನಾದಿಗಳಿಂದ ಸಹಿತನಿದ್ದೇನೆಂಬ ಅರಿವಿನೊಡನೆ ಶ್ರದ್ಧೆ , ಜ್ಞಾನ ಮತ್ತು ಸ್ಥಿರತೆ ಮಾಡಿರುವಂಥ ಸಾಧಕನಿಗೆ ಯಾವ ಜ್ಞಾನವು ಪ್ರಕಟವಾಗುತ್ತದೆ ಆ ಜ್ಞಾನವು ಪ್ರತ್ಯಕ್ಷವಿದೆ. ಆದರೆ ಎಲ್ಲಿಯವರೆಗೆ

ಸರ್ವಜ್ಞದಶೆಯಿರುವುದಿಲ್ಲ ಅಲ್ಲಿಯವರೆಗೆ ಅದು ಪೂರ್ಣ ಪ್ರತ್ಯಕ್ಷವಿಲ್ಲದಿರುವುದರಿಂದ ಒಂದು ಪರಮಾಣುವನ್ನು ಅದು ಪ್ರತ್ಯಕ್ಷ ನೋಡುವ ಸಾಧ್ಯತೆಯಿಲ್ಲ ಸಾಧಕನಿಗೆ ಪ್ರತ್ಯಕ್ಷಜ್ಞಾನವು ಅಪೂರ್ಣವಿದೆ, ಮತ್ತು ವಿಕಲ್ಪವು ಕೂಡ ವರ್ತಿಸುತ್ತದೆ. ಇದು ಸ್ಕಂಧದ ತುಂಡು ಇದೆ ಅದಕ್ಕಾಗಿ ಇದು ಮೂಲವಸ್ತುವಲ್ಲವೆಂದು ಅವನು ಅನುಮಾನ ಮಾಡುತ್ತಾನೆ. ಮೂಲವಸ್ತುವಿದ್ದರೆ ಅದರ ಭಾಗವಾಗುವುದಿಲ್ಲ, ಆದುದರಿಂದ ಸ್ಕಂಧದ ಭಾಗವಾಗುತ್ತ ಆಗುತ್ತ ಯಾವ ಚಿಕ್ಕ ಭಾಗ ಉಳಿಯುತ್ತದೆ ಅದು ಪರಮಾಣುವಿದೆಯೆಂದು ಅವನು ಸ್ಕಂಧದ ಮೂಲವಸ್ತುವಿನ ಅನುಮಾನ ಮಾಡುತ್ತಾನೆ. ಈ ಪ್ರಕಾರ ಆ ಸಾಧಕಜೀವನು ತನ್ನಲ್ಲಿ ಆಂಶಿಕ ಪ್ರತ್ಯಕ್ಷಜ್ಞಾನವು ಪ್ರಕಟವಾಗಿರುವುದರ ಅನುಮಾನವು ನಿಜವಾಗಿದೆ.

ಅನುಮಾನ ಎಂದರೆ ತನ್ನನ್ನು ಅನುಸರಿಸಿ ಜ್ಞಾನದ ಅಳತೆಯಲ್ಲಿ ಬರುವುದು ಅದು ಅನುಮಾನವಿದೆ. ರಾಗ-ದ್ವೇಷ, ಪುಣ್ಯ-ಪಾಪಗಳು ದೋಷವಿವೆ, ಜ್ಞಾನಸ್ವಭಾವವು ಅದು ನಿರ್ದೋಷವಿದೆ.

ನಿರ್ದೋಷ ಸ್ವಭಾವವು ದೋಷದಿಂದ ತಿಳಿಯುವುದಿಲ್ಲ. ನಿರ್ದೋಷ ಜ್ಞಾನಸ್ವಭಾವದ ಪ್ರಜ್ಞೆಯು ಬಂದಲ್ಲದೆ ಇದು ಸ್ಕಂಧದ ಅತ್ಯಂತ ಚಿಕ್ಕದಾದ ಭಾಗವೆನಿಸಿದೆ ಪರಮಾಣುವಿದೆಯೆಂಬುದರ ಜ್ಞಾನವನ್ನು ಯಾರು ಮಾಡುವುದು ಇದು ಪರಮಾಣುವಿನ ಮಾತು ನಡೆಯುತ್ತಿದೆ. ಪರಮಾಣುವು ಅರ್ಥಸಮಯವಿದೆ, ಆದರೆ ಆ ಅರ್ಥಸಮಯವನ್ನು ತಿಳಿಯುವವನಂತೂ ಜ್ಞಾನಸಮಯನಿದ್ದಾನೆ, ಮತ್ತು ಅದನ್ನು ಹೇಳುವಂಥದು ಶಬ್ದಸಮಯವಿದೆ. ಯಾವ ಶಬ್ದವು ರಾಗರಹಿತ ಶುದ್ಧ ಚೈತನ್ಯದ ಜ್ಞಾನವಿಲ್ಲದೆ ರಾಗ-ದ್ವೇಷ ಮೊದಲಾದ ಪರ್ಯಾಯವೊಂದರದೇ ಜ್ಞಾನ ಮಾಡಿಸುತ್ತದೆ ಮತ್ತು ಶುಭದಿಂದ ವಿಕಾಸವಾಗುತ್ತದೆಯೆಂದು ತಿಳಿಸಿಕೊಡುತ್ತದೆ ಅದು ದ್ರವ್ಯಶ್ರುತವಲ್ಲ ಮತ್ತು ಪುದ್ಗಲದಕಾರ್ಯವು ನಮ್ಮಿಂದ ಆಗುತ್ತದೆಯೆಂದು ಯಾರ ಜ್ಞಾನವು ತಿಳಿಯುತ್ತದೆ ಅವರ ಜ್ಞಾನವು ಕೂಡ ಮಿಥ್ಯೆಯಿದೆ ಮತ್ತು ಅವರು ಭಗವಂತರ ವಾಣಿಯನ್ನು ಕೂಡ ತಿಳಿದುಕೊಂಡಿಲ್ಲ.

ಇಲ್ಲಿ ಪರಮಾಣುವಿನ ಮಾತು ಹೇಳಿದೆ, ಆದರೆ ಪರಮಾಣುವನ್ನು ತಿಳಿದುಕೊಳ್ಳುವವನು ಯಾವನಿದ್ದಾನೆ ? ತಿಳಿದುಕೊಳ್ಳುವವನು ಆತ್ಮನಿದ್ದಾನೆ. ಪರಮಾಣುವು ನನ್ನಲ್ಲಿ ಇಲ್ಲವೆಂದು ತಿಳಿದುಕೊಂಡು ಅದನ್ನು ಹೇಯವೆಂದು ಹೇಳಿದೆ. ಆ ವಸ್ತುವು ನನ್ನಲ್ಲಿ ಇಲ್ಲ ಮತ್ತು ನಾನು ಅದರಲ್ಲಿ ಇಲ್ಲ. ಅದು ಅದರಲ್ಲಿ ಇದೆ ಮತ್ತು ನಾನು ನನ್ನಲ್ಲಿ ಇದ್ದೇನೆಂಬ ಜ್ಞಾನವನ್ನು ಕೂಡ ತನ್ನಲ್ಲಿದ್ದುಕೊಂಡೇ ಮಾಡುತ್ತದೆ, ಪರದಲ್ಲಿದ್ದುಕೊಂಡು ಜ್ಞಾನ ಮಾಡುವುದಿಲ್ಲ.

ಪರಮಾಣುವು ತನ್ನ ಗುಣದ ವಿರಹದಿಂದ ರಹಿತವಿದೆ. ವಸ್ತುವೆನ್ನಿರಿ ಮತ್ತು ಅದರ ಗುಣವೆನ್ನಿರಿ ಅವು ಇಲ್ಲದಿರುವುದು ಸಂಭವವಿಲ್ಲ. ಸ್ವಭಾವ ಮತ್ತು ಸ್ವಭಾವವಂತನು ವಿರಹದಿಂದ ರಹಿತನಿದ್ದಾನೆ, ಅಯ್ಯಾ ಪರಮಾಣುವು ಅವಿನಾಶಿಯಿದೆ ಮತ್ತು ತನ್ನ ಗುಣಗಳ ವಿರಹದಿಂದ ರಹಿತವಿದೆಯೆಂದು ಜ್ಞಾನದಿಂದ ನಿರ್ಣಯಮಾಡಿದೆ, ಆದರೆ ಪರಮಾಣುವಿಗೆ ತನ್ನ ಅರಿವಿಲ್ಲ. ನಾನು ಅದನ್ನು ತಿಳಿದುಕೊಳ್ಳುವವನಿದ್ದೇನೆ, ಆದರೆ ನಿರ್ಮಿಸುವವನಿಲ್ಲ. ಮತ್ತು ನಾನು ರಾಗ-ದ್ವೇಷಗಳ ಗ್ರಹಣ-ತ್ಯಾಗವನ್ನು ಕೂಡ ಮಾಡುವಂಥವನಿಲ್ಲ. ನಾನಂತೂ ಪರಮಾಣುಗಳನ್ನು ಹಾಗೂ ರಾಗ ಮೊದಲಾದುವನ್ನು ತಿಳಿದುಕೊಳ್ಳುವಂಥವನಿದ್ದೇನೆ, ಅದು ಕೂಡ ವ್ಯವಹಾರದಿಂದ ತಿಳಿದುಕೊಳ್ಳುತ್ತೇನೆ. ಪರಮಾಣುವನ್ನು ನನ್ನಲ್ಲಿ ಇದ್ದುಕೊಂಡು ತಿಳಿದುಕೊಳ್ಳುತ್ತೇನೆ. ಜ್ಞಾನವು ಪರಮಾಣುವಿನದಿಲ್ಲ, ಜ್ಞಾನವು ನನ್ನದಿದೆ. ನನ್ನ ಸಾಮರ್ಥ್ಯದಿಂದ ತಿಳಿದುಕೊಳ್ಳುತ್ತೇನೆ. ನಾನು ಸ್ವಯಂಸಿದ್ಧ ಜ್ಞಾನವೇ ಇದ್ದೇನೆ. ಜ್ಞಾನಪ್ರಕಾಶದ ಪಿಂಡನಿದ್ದೇನೆ, ಧ್ರುವನಿದ್ದೇನೆಂದು ಯಾವ ಜ್ಞಾನದಿಂದ ನಿರ್ಣಯ ಮಾಡಿದೆ ಆ ಜ್ಞಾನವು ಈ ವಸ್ತುವು ಭಂಗವಾಗಿದೆ-ಮುರಿದುಹೋಗಿದೆ ಅದು ಮೂಲತತ್ತ್ವವಿಲ್ಲ. ಮೂಲತತ್ತ್ವವು ಭಂಗವಾಗುವುದಿಲ್ಲ, ಮುರಿಯುವುದಿಲ್ಲ. ಮೂಲತತ್ತ್ವವಂತೂ ಪರಮಾಣುವಿದೆಯೆಂದು ನಿರ್ಣಯ ಮಾಡುತ್ತದೆ. ಯಾವಪ್ರಕಾರ ನಾನು ಅವಿನಾಶಿ ಮತ್ತು ನನ್ನ ಗುಣಗಳಿಂದ ಸಹಿತನಿದ್ದೇನೆ ಅದೇಪ್ರಕಾರ ಪರಮಾಣು ಕೂಡ ನಿತ್ಯ ಅವಿನಾಶಿಯಿದೆ ಮತ್ತು ತನ್ನ ಗುಣಗಳಿಂದ ಸಹಿತವಿದೆ.

ಆತ್ಮನ ಜ್ಞಾನವಿಲ್ಲದೆ ಕೇವಲ ಶಾಸ್ತ್ರದ ಜ್ಞಾನವು ವ್ಯರ್ಥವಿದೆ. ಕುರುಡ ಮನುಷ್ಯನು ಬೀಸಿದುದನ್ನೆಲ್ಲ ನಾಯಿಯು ತಿಂದುಹೋದರೂ ಅವನಿಗೆ ತಿಳಿಯದಿರುವುದರಿಂದ ಅವನು ಮಾಡಿದ ಕಾಯ ಕಷ್ಟವೆಲ್ಲವೂ ನಿರರ್ಥಕವಾಗುವುದು. ಅವನಿಗೆ ಯಾವ ದಿವಸವೂ ಅವನು ಬೀಸಿದ ಹಿಟ್ಟು ಕೈಗೆ ದೊರಕುವುದಿಲ್ಲ. ಅದೇಪ್ರಕಾರ ಶಾಸ್ತ್ರಗಳನ್ನೇನೋ ಬೇಕಾದಷ್ಟು ಅಭ್ಯಸಿಸಲಾಯಿತು. ಪುದ್ಗಲದ ಭೇದಗಳನ್ನು ಸ್ಮರಣೆಯಲ್ಲಿ ಇಟ್ಟುಕೊಂಡರೂ ಚಿದಾನಂದನಾದ ನಾನು ಯಾವನಿದ್ದೇನೆ ? ವಿಕಾರ ಅಥವಾ ಸಂಯೋಗವು ಅದು ನನ್ನ ಸ್ವಭಾವವಿಲ್ಲವೆಂಬ ಪ್ರಜ್ಞೆಯಿಲ್ಲದೆ ಪುದ್ಗಲ ಸ್ಕಂಧದ ಸೂಕ್ಷ್ಮವಾದ ಭಾಗವು ಅದು ಪರಮಾಣುವಿದೆಯೆಂಬ ಅನುಮಾನವನ್ನು ಯಾರು ಮಾಡುವರು ? ಯಾವನಿಗೆ ಆತ್ಮನ ಪ್ರಜ್ಞೆಯಿದೆ ಮತ್ತು ಆಂಶಿಕ ಪ್ರತ್ಯಕ್ಷ ಜ್ಞಾನವು ಪ್ರಕಟವಾಗಿದೆ ಅವನು ಸ್ಕಂಧವು ಮೂಲವಸ್ತುವಿಲ್ಲ, ಆದರೆ ಅದರ ಅತ್ಯಂತ ಚಿಕ್ಕದಾದ ಭಾಗವು ಅದು ಪರಮಾಣುವಿದೆ, ಅದು ಯಾವಾಗಲೂ ಅವಿನಾಶಿಯಿದೆಯೆಂದು ಅನುಮಾನಮಾಡುತ್ತಾನೆ, ಈ ಪ್ರಕಾರ ಇದು ನಿತ್ಯದ ಕಥನವಾಯಿತು.

ಮತ್ತು ಆ ಪರಮಾಣವು ಏಕಪ್ರದೇಶಿಯಾಗಿದ್ದರೂ ಕೂಡ ಅದು ತನ್ನ ಪ್ರದೇಶಗಳಿಂದ ಭಿನ್ನವಿರುವಂಥ ತನ್ನ ಸ್ಪರ್ಶ ಮೊದಲಾದ ಗುಣಗಳಿಗೆ ಅವಕಾಶ ಕೊಡುವಲ್ಲಿ ಸಮರ್ಥವಿದೆ. ಪರಮಾಣುದ್ರವ್ಯ ಮತ್ತು ಅದರ ಸ್ಪರ್ಶ ಮೊದಲಾದ ಗುಣಗಳ ನಾಮಭೇದವಿದ್ದರು ಕೂಡ ಪರಮಾಣುವು ತನ್ನ ಗುಣಗಳಿಗೆ ಅವಕಾಶ ಕೊಡುತ್ತದೆ. ಒಂದರಲ್ಲಿ ಅನೇಕಗಳು ಯಾವಪ್ರಕಾರ ಸಮಾವೇಶಗೊಳ್ಳುತ್ತಿರಬೇಕು ? ಒಂದು ಕೂಡ ಅನೇಕದಿಂದ ನಿರ್ಮಾಣವಾಗಿದೆ. ಗುಣ-ಗುಣಿಯ ಪ್ರದೇಶಗಳು ಬೇರೆಯಿಲ್ಲದಿರುವುದರಿಂದ ಗುಣಿಯು ಗುಣಗಳಿಗೆ ಅವಕಾಶ ಕೊಡುತ್ತದೆ. ಪರಮಾಣುವು ಏಕಪ್ರದೇಶಿಯಿದೆ ಅದಕ್ಕಾಗಿ ಅದು ಅನೇಕ ಗುಣಗಳಿಗೆ ಅವಕಾಶ ಕೊಡುವುದಿಲ್ಲವೆಂಬುದಾದಿಲ್ಲ. ತನ್ನ ಗುಣಗಳಿಗೆ ಅವಕಾಶ ಕೊಡದಿದ್ದರೆ ಅದು ವಸ್ತುವೇ ಇರುವುದಿಲ್ಲ. ಅನೇಕ ಗುಣ ಸಹಿತವಾಗಿರುವುದು ಅದು ಒಂದು ದ್ರವ್ಯವಿದೆ.

ಅದನ್ನು ತಿಳಿದುಕೊಳ್ಳುವ ಆತ್ಮದ್ರವ್ಯವು ಹೇಗಿದೆ ? ಯಾವಪ್ರಕಾರ ಪರಮಾಣುವು ತನ್ನ ಗುಣಗಳಿಗೆ ಅವಕಾಶ ಕೊಡುತ್ತದೆ ಅದೇಪ್ರಕಾರ ಆತ್ಮದ್ರವ್ಯವು ತನ್ನ ಅಸಂಖ್ಯಪ್ರದೇಶಗಳಿಗೆ ತನ್ನ ಅನಂತ ಗುಣಗಳಿಗೆ ಅವಕಾಶ ಕೊಡುತ್ತದೆ. ಮತ್ತು ಯಾವ ಪ್ರಕಾರ ಸ್ಕಂಧದಲ್ಲಿ ಒಂದು ಪರಮಾಣುವು ಇನ್ನೊಂದು ಪರಮಾಣುವಿನಿಂದ ಬೇರೆಯಿದೆ, ಮತ್ತೊಂದರಿಂದಲೂ ಬೇರೆಯಿದೆ ಮತ್ತು ಸ್ಕಂಧದಲ್ಲಿ ಇರುತ್ತಿದ್ದರು ಕೂಡ ತನ್ನ ದ್ರವ್ಯತ್ವವನ್ನು ಕಾಯ್ದುಕೊಂಡು ಇರುತ್ತದೆ ಅದೇಪ್ರಕಾರ ಒಬ್ಬ ಆತ್ಮನು ಇತರ ಅನಂತ ಆತ್ಮರುಗಳಿಂದ ಹಾಗೂ ಇತರ ಅನಂತ ಜಡದ್ರವ್ಯಗಳಿಂದ ಅನ್ಯತ್ವನಾಗಿ ಇದ್ದಾನೆ. ಒಬ್ಬ ಆತ್ಮನು ಬೇರೆ ಆತ್ಮನಿಂದ ಪೃಥಕ್‌ವಾಗಿ ಇರದಿದ್ದರೆ ಎರಡುತನವು ಉಳಿಯುವುದಿಲ್ಲ. ಹೀಗೆ ಅನಂತ ಪರಪದಾರ್ಥಗಳಿಂದ ಆತ್ಮನು ಭಿನ್ನತೆಯಿಂದ ಉಳಿದುಕೊಂಡಿದ್ದಾನೆ. ಹೀಗೆ ಅನ್ಯತ್ವ ಮೊದಲಾದ ಅನಂತಗುಣಗಳಿಗೆ ಆತ್ಮನು ಅವಕಾಶ ಕೊಟ್ಟಿದ್ದಾನೆ.

ಇಲ್ಲಿ ಪುದ್ಗಲದ ಸ್ವರೂಪ ಎಂದರೆ ಅರ್ಥಸಮಯ ತಿಳಿಸಿಕೊಟ್ಟಿದ್ದಾರೆ, ಆದರೆ ಆ ಅರ್ಥ ಸಮಯದ ಜ್ಞಾನ ಮಾಡುವವನು ಆತ್ಮನಿದ್ದಾನೆ. ತನಗೆ ಸ್ವ-ಪರಪ್ರಕಾಶ ಜ್ಞಾನಸ್ವಭಾವವಿದೆ ಅದು ಜ್ಞಾನದ ಸಾಮರ್ಥ್ಯ ತಿಳಿಸುತ್ತದೆ.

ಈ ಜ್ಞಾನಸ್ವಭಾವವನ್ನು ತಿಳಿದುಕೊಂಡಲ್ಲದೆ ಭಗವಂತರ ಪ್ರತಿಮೆಯಿಂದ ಹಾಗೂ ಕ್ಷೇತ್ರದ ಕಾರಣದಿಂದ ಶುಭಭಾವಗಳಾಗುತ್ತವೆ ಮತ್ತು ಅವನಿಗೆ ಜ್ಞಾನವಾಗುತ್ತದೆಯೆಂದು ಅಜ್ಞಾನಿಯು ಮನ್ನಿಸುತ್ತಾನೆ ತನ್ನ ನಿರ್ಮಲತೆ ಕಾರಣದಿಂದ ಯಾತ್ರೆ ಮಾಡಲು ಹೋಗುತ್ತಾನೆ ಆ ಪರ್ವತದಿಂದ ಇಳಿದುಬರುವಾಗ ಮಿಥ್ಯಾತ್ವವನ್ನು ದೃಢಪಡಿಸಿ ಪರ್ವತದಿಂದ ಕೆಳಗೆ ಇಳಿಯುತ್ತಾನೆ, ಏಕೆಂದರೆ ತನ್ನ ಜ್ಞಾನಸ್ವಭಾವವನ್ನು ಪರಾಧೀನವಾಗಿ ಮನ್ನಿಸುತ್ತಾನೆ ಜ್ಞಾನಿಗೂ ಯಾತ್ರೆಯ ಭಾವ ಬರುತ್ತದೆ. ಆದರೆ ಅವನು ನಾನು ಜ್ಞಾನಸ್ವಭಾವಿಯಿದ್ದೇನೆ. ಪರದ ಕಾರಣದಿಂದ ಶುಭಭಾವಗಳಿಲ್ಲ. ಅದರಂತೆ ಜ್ಞಾನ ಕೂಡ ಇಲ್ಲವೆಂದು ತಿಳಿಯುತ್ತಾನೆ. ರಾಗವು ಬರುತ್ತದೆ ಅದು ತನ್ನ ನಿರ್ಬಲತೆಯಿಂದ ಬರುತ್ತದೆ. ಜ್ಞಾನಸ್ವಭಾವದ ಪ್ರಜ್ಞೆಯಿದ್ದರೂ ಯಾವ ಪ್ರಕಾರದ ರಾಗವು ಬರುವುದಿದೆ ಅದು ಬಂದೇಬರುವುದು. ಭೇದಜ್ಞಾನವು ವರ್ತಿಸುತ್ತಿರುವುದರಿಂದ ಯಾತ್ರೆಮಾಡಿ

ಮರಳಿಬರುತ್ತಾನೆ ಆ ಸಮಯದಲ್ಲಿ ಕೂಡ ಜ್ಞಾನ ದೃಢಪಡಿಸಿಕೊಂಡು ಮರಳಿ ಬರುತ್ತಾನೆ. ಆದುದರಿಂದ ಜ್ಞಾನಸ್ವಭಾವಿಯಿದ್ದಾನೆಂದು ಇಲ್ಲಿ ತಿಳಿಸಿಕೊಟ್ಟಿದ್ದಾರೆ. ಯಾವ ಪ್ರಕಾರ ಪುದ್ಗಲದಲ್ಲಿ ಅದರ ಗುಣಗಳ ಕ್ಷೇತ್ರವು ಬೇರೆಯಿಲ್ಲ ಅದೇಪ್ರಕಾರ ಆತ್ಮ ಮತ್ತು ಅವನ ಜ್ಞಾನ-ದರ್ಶನ ಮೊದಲಾದ ಗುಣಗಳ ಕ್ಷೇತ್ರವು ಬೇರೆಯಿಲ್ಲ.

ಮತ್ತು ಪರಮಾಣುವು ಹೇಗೆ ಇದೆ ? ಪರಮಾಣುವು ಯಾವ ಪ್ರಕಾರ ತನ್ನ ಗುಣಗಳಿಗೆ ಅವಕಾಶ ಕೊಡುತ್ತದೆ ಅದೇಪ್ರಕಾರ ಇನ್ನೊಂದು ಪರಮಾಣುವಿಗೆ ಸ್ಥಳ ಕೊಡುವುದಿಲ್ಲ. ಪರಮಾಣುಗಳು ತಮ್ಮ ವಿಶಿಷ್ಟ ಅವಗಾಹನಶಕ್ತಿಯ ಕಾರಣದಿಂದ ಆಕಾಶದ ಒಂದು ಕ್ಷೇತ್ರದಲ್ಲಿರುವುದು ಅದು ಬೇರೆ ಮಾತಿದೆ ; ಆದರೆ ಒಂದು ಪರಮಾಣುವು ಇನ್ನೊಂದು ಪರಮಾಣುವಿನ ಅಸ್ತಿತ್ವದಲ್ಲಿ ಪ್ರವೇಶಿಸಿಬಿಡುವುದೆಂಬುದು ಸಂಭವಿಸುವುದಿಲ್ಲ. ಏಕಂದರೆ ಪರಮಾಣುವು ನಿರ್ವಿಭಾಗ ಅಂಶವಿದೆ, ಏಕಪ್ರದೇಶಿಯಿದೆ. ಆದಿ-ಮಧ್ಯ-ಅಂತ್ಯದಲ್ಲಿ ಒಂದೇ ಇದೆ. ಅದು ಇನ್ನೊಂದು ಪರಮಾಣುವಿಗೆ ಅವಕಾಶ ಕೊಡುವಲ್ಲಿ ಅಸಮರ್ಥವಿದೆ.

ಅದೇಪ್ರಕಾರ ಆತ್ಮನು ಕೂಡ ಕರ್ಮ, ಶರೀರ, ದೇವ-ಶಾಸ್ತ್ರ-ಗುರು ಯಾವುದಕ್ಕೂ ತನ್ನ ಅಸಂಖ್ಯಪ್ರದೇಶದಲ್ಲಿ ಸ್ಥಾನ ಕೊಡುವುದಿಲ್ಲ. ಭಗವಂತರು ಭಗವಂತರಲ್ಲಿ ಇದ್ದಾರೆ ಮತ್ತು ನಾವು ನಮ್ಮಲ್ಲಿ ಇದ್ದೇನೆಂದು ಧರ್ಮಾತ್ಮನು ಹೇಳುತ್ತಾನೆ. ಹಾಗಾದರೆ ಆತ್ಮನು ಸ್ವಾರ್ಥಿಯಾಗಿಹೋದನೆಂದು ಕೆಲವರು ಹೇಳುತ್ತಾರೆ. ಅವರಿಗೆ ಅಹುದು ; ಪ್ರತಿಯೊಂದು ಪದಾರ್ಥವು ಸ್ವಾರ್ಥಿಯಿದೆಯೆಂದು ಹೇಳುತ್ತಾರೆ. ಸ್ವಪ್ರಯೋಜನವನ್ನು ಸಿದ್ಧಮಾಡಿಕೊಂಡು ತನ್ನಲ್ಲಿ ಸ್ಥಿರ ಉಳಿಯುವುದು ಅದು ಸ್ವಾರ್ಥವಿದೆ. ಯಾರೂ ಪರದ ಪ್ರಯೋಜನ ಸಾಧಿಸುವುದಿಲ್ಲ, ಯಾರೂ ಪರಪದಾರ್ಥಕ್ಕೆ ಸಹಾಯ ಮಾಡುವುದಿಲ್ಲ. ಅದಕ್ಕಾಗಿ ಪ್ರತಿಯೊಂದು ಪದಾರ್ಥವು ಸ್ವಾರ್ಥಿಯಿದೆ, ಆತ್ಮನು ಯಾವುದೇ ಪರಪದಾರ್ಥಕ್ಕೆ ಅವಕಾಶ ಕೊಡುವಲ್ಲಿ ಅಸಮರ್ಥನಿದ್ದಾನೆ.

ಮತ್ತೆ ಆ ಪರಮಾಣುವು ಹೇಗಿದೆ ?ಸ್ವಯಂ ಏಕಪ್ರದೇಶಿಯಾಗಿದ್ದುಕೊಂಡು ಸ್ಕಂಧಗಳ ಭೇದವನ್ನು ವ್ಯವಹಾರದಿಂದ ಮಾಡುತ್ತದೆ ಯಾವಾಗ ಸ್ಕಂಧದೊಳಗಿಂದ ಭಿನ್ನವಾಗುವುದು ಅದರ ಯೋಗ್ಯತೆಯಾಗುತ್ತದೆ. ಆಗ ಪರಮಾಣುವು ಬೇರೆಯಾಗಿಬಿಡುತ್ತದೆ. ಆದುದರಿಂದ ಅದು ವ್ಯವಹಾರದಿಂದ ಸ್ಕಂಧಗಳ ಭೇದ ಮಾಡುವುದೆಂದು ಹೇಳಲಾಗುತ್ತದೆ. ಆದರೆ ನಾನು ಸ್ಕಂಧಗಳ ಭೇದ ಮಾಡುವಂಥವನಿದ್ದೇನೆಂದು ಪರಮಾಣುವಿಗೆ ಪ್ರಜ್ಞೆಯಿಲ್ಲ. ಪರಮಾಣುವು ಬೇರೆಯಾಗಿ ಸ್ಕಂಧದಲ್ಲಿ ಭೇದ ಮಾಡುತ್ತದೆಯೆಂದು ತಿಳಿದುಕೊಳ್ಳುವವನು ಆತ್ಮನಿದ್ದಾನೆ. ಆತ್ಮನಾದ ನಾನು ಜ್ಞಾನಸ್ವಭಾವಿಯಿದ್ದೇನೆ, ನಾನು ಶರೀರ, ಕರ್ಮ ಅಥವಾ ರಾಗಸ್ವಭಾವಿಯಿಲ್ಲ. ನಾನಂತೂ ಜ್ಞಾನವೇ ಇದ್ದೇನೆಂದು ಭೇದಜ್ಞಾನಮಾಡಿ ವೀತರಾಗತೆಯಾದರೆ ಕರ್ಮದಿಂದ ಬೇರೆಯಾಗಿ ಹೋಗುವನು. ಅಜ್ಞಾನದಿಂದ ಯಾವ ಕರ್ಮಗಳು ಏಕತ್ರಿತವಾಗಿದೆ ಅವು ಜ್ಞಾನವಾದ ಕೂಡಲೆ ಭಿನ್ನವಾಗಿ ಹೋಗುತ್ತವೆ. ಆದುದರಿಂದ ಆತ್ಮನು ಕರ್ಮಗಳನ್ನು ಬೇರೆ ಮಾಡುವಂಥವನಿದ್ದಾನೆಂದು ವ್ಯವಹಾರದಿಂದ ಹೇಳಲಾಗುತ್ತದೆ.

ಮತ್ತೆ ಆ ಪರಮಾಣುವು ಹೇಗೆ ಇದೆ ? ಪರಮಾಣುವು ತನ್ನ ಸ್ವಕಾಲದಲ್ಲಿ ತನ್ನ ಯೋಗ್ಯತೆಯ ಕಾರಣದಿಂದ ಸ್ಕಂಧಗಳ ಜತೆಯಲ್ಲಿ ಕೂಡಿಹೋಗುವುದರಿಂದ ಅದನ್ನು ವ್ಯವಹಾರದಿಂದ ಸ್ಕಂಧಗಳ ಕರ್ತೃವೆಂದು ಹೇಳಲಾಗುತ್ತದೆ. ಅದೇಪ್ರಕಾರ ಅಜ್ಞಾನಿ ಆತ್ಮನು ಮಿಥ್ಯಾತ್ವ , ರಾಗ-ದ್ವೇಷಗಳನ್ನು ಮಾಡುತ್ತಾನೆ ಮತ್ತು ಕರ್ಮದ ಬಂಧವಾದರೆ ಆ ಕರ್ಮದ ಕರ್ತೃವೆಂದು ವ್ಯಹಾರದಿಂದ ಹೇಳಲಾಗುತ್ತದೆ.

ಪರಮಾಣುವು ಅವಿನಾಶಿಯಿದೆ. ಅದು ತನ್ನ ಸ್ಪರ್ಶ ಮೊದಲಾದ ಗುಣಗಳಿಂದ ರಹಿತವಿಲ್ಲ, ತನ್ನ ಗುಣಗಳಿಗೆ ಅವಕಾಶ ಕೊಡುವುದಿಲ್ಲ. ಸ್ಕಂಧದೊಳಗಿಂದ ಬೇರೆಯಾಗುವುದರಿಂದ ಸ್ಕಂಧದ ಭೇದ ಮಾಡುವಂಥದ್ದಿದೆ. ಮತ್ತು ಸ್ಕಂಧದ ಜತೆಯಲ್ಲಿ ಕೂಡುತ್ತದೆ. ಆಗ ಸ್ಕಂಧದ ಕರ್ತೃವಿದೆ. ಸ್ವಯಂ ಪರಮಾಣುವಿಗೆ ಇದು ಯಾವುದರದೂ ಅರಿವು ಇಲ್ಲ. ಆದರೆ ಅದೆಲ್ಲವನ್ನೂ ತಿಳಿದುಕೊಳ್ಳುವಂಥವನು ಆತ್ಮನಿದ್ದಾನೆ. ಆತ್ಮನು ಪುದ್ಗಲದಿಂದ ಬೇರೆಯಿದ್ದಾನೆಂದು ತಿಳಿದುಕೊಂಡು

ತನ್ನಲ್ಲಿಯೇ ಉಳಿದು ಸ್ವ-ಪರಪ್ರಕಾಶಕ ಜ್ಞಾನ ಪ್ರಕಟಮಾಡಿಕೊಳ್ಳುವುದು ಅದು ಧರ್ಮವಿದೆ.

ಕೇವಲಜ್ಞಾನಿಯಾದ ಭಗವಂತರು ಪರಮಾಣುವನ್ನು ಜಡವಾಗಿ ನೋಡಿದ್ದಾರೆ, ಅದರ ಸ್ವರೂಪ ಹೇಳಿದ್ದಾರೆ. ಪರಮಾಣುವು ತನ್ನ ಕಾರಣದಿಂದ ಇದೆ, ಅದು ಆತ್ಮನ ಕಾರಣದಿಂದ ಇಲ್ಲ, ಆ ಪರಮಾಣುವನ್ನು ಜ್ಞಾನವು ತಿಳಿಯುತ್ತದೆ. ಆತ್ಮನು ಜ್ಞಾನಸ್ವರೂಪನಿದ್ದಾನೆ. ಒಂದು ಪರಮಾಣುವನ್ನು ಯಾವ ಜ್ಞಾನವು ತಿಳಿಯುತ್ತದೆ ಅದು ಎಷ್ಟು ಸೂಕ್ಷ್ಮವಿರಬೇಕು? ಪರಮಾಣುವು ಜಗತ್ತಿನ ಅಸ್ತಿ ವಸ್ತುವಿದೆ. ಯಾವುದು ವಸ್ತುವಿದೆ ಅದನ್ನು ಜ್ಞಾನವು ತಿಳಿಯುವುದಿಲ್ಲವೆಂಬುದು ಸಂಭವಿಸುವುದೇ ಇಲ್ಲ. ತಿಳಿದುಕೊಳ್ಳದಿದ್ದರೆ ಅದು ಜ್ಞಾನವೆಂದು ಕರೆಸಿಕೊಳ್ಳುವುದೇ ಇಲ್ಲ. ಮತ್ತು ಪದಾರ್ಥವು ತಿಳಿದುಬರದಿದ್ದರೆ ಆ ಪದಾರ್ಥವು ಸತ್‌ವೆಂದು ಕರೆಸಿಕೊಳ್ಳುವುದಿಲ್ಲ. ಇಲ್ಲಿ ಸ್ಕಂಧದ ಯಾವ ಕೊನೆಯ ಅಂಶವಿದೆ ಅದರ ವ್ಯಾಖ್ಯೆ ನಡೆಯುತ್ತಿದೆ. ಅದನ್ನು ತಿಳಿದುಕೊಳ್ಳುವಂಥ ಜ್ಞಾನದ ಸೂಕ್ಷ್ಮತೆ ಎಷ್ಟಿರಬೇಕು ? ಮತ್ತು ಪರಮಾಣುವು ಇಷ್ಟು ಸೂಕ್ಷ್ಮವಿದೆಯೆಂದು ಪ್ರತೀತಿ ಮಾಡಿದ ನಂತರ ಜ್ಞಾನದ ಸೂಕ್ಷ್ಮತೆಯೆಷ್ಟು ವೃದ್ಧಿಸುವುದು ? ಆದರೆ ಆ ಜ್ಞಾನವು ಯಾವ ರೀತಿಯಿಂದ ಪ್ರಕಟವಾಗುವುದು ? ನಾನು ನನ್ನನ್ನು ಸ್ವಯಂ ತಿಳಿದುಕೊಳ್ಳುವವನಿದ್ದೇನೆ. ದಯೆ-ದಾನ ಮೊದಲಾದ ಭಾವಗಳನ್ನು ಹಾಗೂ ಪರಮಾಣುಗಳನ್ನು ಮಾಡುವಂಥವನಿಲ್ಲ. ಆದರೆ ನನ್ನಲ್ಲಿ ಇದ್ದುಕೊಂಡು ಅವನ್ನು ತಿಳಿದುಕೊಳ್ಳುವಂಥವನಿದ್ದೇನೆಂದು ನಿಜದ ಜ್ಞಾನವಾದರೆ ಅವನ ಪರಪ್ರಕಾಶಕ ಜ್ಞಾನವು ಸತ್ಯವೆಂದು ಕರೆಯಿಸಿಕೊಳ್ಳುತ್ತದೆ.

ಪರಮಾಣುವು ತನ್ನ ಮಿಲನಶಕ್ತಿಯಿಂದ ಸ್ಕಂಧಗಳಲ್ಲಿ ಹೋಗಿ ಕೂಡಿಕೊಳ್ಳುವುದರಿಂದ ಸ್ಕಂಧದ ಕರ್ತೃವೆಂದು ಕರೆಯಿಸಿಕೊಳ್ಳುತ್ತದೆ. ಮತ್ತೆ ಹೇಗೆ ಇದೆ ಆ ಪರಮಾಣುವು ?

ಪರಮಾಣುವು ಕಾಲದ ಸಂಖ್ಯೆಯ ಭೇದ ಮಾಡುತ್ತದೆ ಆಕಾಶದ ಒಂದು ಪ್ರದೇಶದಲ್ಲಿ ಇರುವ ಪರಮಾಣುವು ಇನ್ನೊಂದು ಪ್ರದೇಶದಲ್ಲಿ ಹೋಗುವಷ್ಟು ಕಾಲವನ್ನು ಒಂದು ಸಮಯವೆಂದು ಹೇಳುತ್ತಾರೆ.

ಆದುದರಿಂದ ಸಮಯರೂಪವಾಗಿ ಕಾಲವು ಪ್ರಕಟವಾಗುತ್ತದೆ-ತಿಳಿದುಬರುತ್ತದೆ. ಆ ಕಾರಣದಿಂದ ಪರಮಾಣುವನ್ನು ಕಾಲದ ಅಂಶದ ಕರ್ತೃವೆಂದು ಹೇಳಲಾಗುತ್ತದೆ. ಪರಮಾಣುವಿಗೆ ತನ್ನ ಪ್ರಜ್ಞೆಯಿಲ್ಲ ಅದರಂತೆ ಒಂದು ಪ್ರದೇಶದಿಂದ ಇನ್ನೊಂದು ಪ್ರದೇಶಕ್ಕೆ ಹೋಗುವಷ್ಟು ಕಾಲವನ್ನು ಒಂದು ಸಮಯವೆಂದು ಹೇಳುತ್ತಾರೆಂಬುದು ಕೂಡ ಅದಕ್ಕೆ ಪ್ರಜ್ಞೆಯಿಲ್ಲ. ಪ್ರದೇಶಕ್ಕೂ ಪರಿವೆಯಿಲ್ಲ ಅದರಂತೆ ಕಾಲಕ್ಕೂ ಪರಿವೆಯಿಲ್ಲ. ಅದೆಲ್ಲವನ್ನು ತಿಳಿದುಕೊಳ್ಳುವಂಥವನು ಆತ್ಮನಿದ್ದಾನೆ. ಅಸಂಖ್ಯಪ್ರದೇಶಿಯಾದ ಆತ್ಮ-ಅದರಲ್ಲಿ ಒಂದೊಂದು ಪ್ರದೇಶದಲ್ಲಿ ಇರುವ ಜ್ಞಾನವು ಸೂಕ್ಷ್ಮಕಾಲವನ್ನು ಕೂಡ ತಿಳಿದುಕೊಳ್ಳುತ್ತದೆ ಹೀಗೆ ಅದರ ಧರ್ಮವಿದೆ. ಒಂದು ಸಮಯದ ಜ್ಞಾನವು ಸ್ವ-ಪರ ಪ್ರಕಾಶಕವಿದೆ, ಅದು ಇಷ್ಟು ಸಾಮರ್ಥ್ಯವುಳ್ಳದ್ದಿದೆ. ಆತ್ಮನು ಜ್ಞಾನದಿಂದ ತುಂಬಿಕೊಂಡಿದ್ದಾನೆ, ಅವನಲ್ಲಿ ರಾಗ-ದ್ವೇಷಗಳಾಗುವುದು ಅದು ಅವನ ಧರ್ಮವಿಲ್ಲ. ಎಲ್ಲವುಗಳನ್ನು ತಿಳಿದುಕೊಳ್ಳುವುದು ಅವನ ಧರ್ಮವಿದೆ. ಇದರಲ್ಲಿ ಅರಹಂತರ ಕೇವಲಜ್ಞಾನವು ಹೇಗಿರುತ್ತದೆಂಬುದರ ಮಾತು ಬಂದುಹೋಗುತ್ತದೆ. ಕೇವಲಜ್ಞಾನದ ಪ್ರತೀತಿಯಲ್ಲಿ ಆತ್ಮನ ಪ್ರತೀತಿ ಮತ್ತು ಪರಮಾಣುವಿನ ಪ್ರತೀತಿಯು ಬಂದು ಹೋಗುತ್ತದೆ. ಕೇವಲಜ್ಞಾನಿಯ ಆತ್ಮನು ಅಸಂಖ್ಯ ಪ್ರದೇಶಿಯಷ್ಟು ವಿಸ್ತಾರವಾಗಿದ್ದಾನೆ. ಅವನ ಒಂದು ಸಮಯದ ಜ್ಞಾನದಲ್ಲಿ ಮೂರುಕಾಲದ ಸಮಯಗಳೊಳಗಿಂದ ಒಂದೊಂದು ಸಮಯವನ್ನು ಬೇರೆಮಾಡಿ ತಿಳಿದುಕೊಳ್ಳುವ ಸಾಮರ್ಥ್ಯವಿದೆ. ಒಂದೊಂದು ಸಮಯವನ್ನು ತಿಳಿದುಕೊಳ್ಳದಿದ್ದರೆ ಮೂರು ಕಾಲಗಳನ್ನು ಹೇಗೆ ತಿಳಿದುಕೊಳ್ಳುವುದು ? ಭಗವಂತರಿಗೆ ಮೂರು ಕಾಲದ ಜ್ಞಾನವಿದೆ ಮತ್ತು ಒಂದೊಂದು ಸಮಯವನ್ನು ಬೇರೆ ಮಾಡಿಕೂಡ ಅವರು ತಿಳಿದುಕೊಳ್ಳುತ್ತಾರೆ. ಭಗವಂತರಿಗೆ ಮೂರುಕಾಲದ ಜ್ಞಾನವಿದೆ ಮತ್ತು ಒಂದೊಂದು ಸಮಯವನ್ನು ಬೇರೆ ಮಾಡಿ ಕೂಡ ಅವರು ತಿಳಿದುಕೊಳ್ಳುತ್ತಾರೆ. ಅಸಂಖ್ಯಪ್ರದೇಳಗಳಲ್ಲಿ ಪ್ರತಿಯೊಂದು ಪ್ರದೇಶದಲ್ಲಿರುವ ಕೇವಲಜ್ಞಾನವು ಒಂದು

ಸಮಯವನ್ನು ಭಿನ್ನಮಾಡಿ ತಿಳಿಯುತ್ತದೆ. ಒಂದೊಂದು ಪರಮಾಣುವನ್ನು ಭಿನ್ನ ಭಿನ್ನವಾಗಿ ತಿಳಿಯುತ್ತದೆ. ಒಂದೊಂದು ಪ್ರದೇಶವನ್ನು ಭಿನ್ನ ಭಿನ್ನವಾಗಿ ತಿಳಿಯುತ್ತದೆ. ಮತ್ತು ಒಂದು ಪರಮಾಣುವಿನಭಾವವನ್ನು ತಿಳಿಯುತ್ತದೆ. ಪರಮಾಣು, ಕ್ಷೇತ್ರ ಮತ್ತು ಕಾಲಗಳಂತೂಜ್ಞೇಯವಿದ್ದು ಅವನ್ನು ಕೇವಲಜ್ಞಾನಿಯು ತಿಳಿದುಕೊಳ್ಳುವಂಥವರಿದ್ದಾರೆ. ಕೇವಲಜ್ಞಾನದಶೆಯು ಯಾವುದರೊಳಗಿಂದ ಪ್ರಕಟವಾಯಿತು ? ಸರ್ವಜ್ಞ ಭಗವಂತರು ಕೂಡ ನನ್ನಂಥ ಆತ್ಮರಿದ್ದರು, ನಾನು ಕೂಡ ಅವರಂಥ ಆತ್ಮನಿದ್ದೇನೆ. ನಾನು ಕೂಡ ಪರಪದಾರ್ಥಗಳಲ್ಲಿ ಪ್ರವೇಶಿಸದೆ ಸಮಸ್ತ ಪದಾರ್ಥಗಳ ಸೂಕ್ಷ್ಮ ಪರಿಣಮನವನ್ನು ತಿಳಿದುಕೊಳ್ಳುವಂಥದು ನನ್ನ ಸ್ವಭಾವವಿದೆ. ಪರವನ್ನು ಮಾಡುವುದು ಅಥವಾ ರಾಗವನ್ನು ಮಾಡುವುದು ಅದು ನನ್ನ ಸ್ವಭಾವವಲ್ಲವೆಂದು ತನ್ನ ಜ್ಞಾನಸ್ವಭಾವದ ಪ್ರತೀತಿ ಮಾಡುವುದು ಅದು ಅರಹಂತ ದಶೆಯ ಪ್ರತೀತಿಯಿದೆ ಮತ್ತು ಅದುವೇ ಧರ್ಮವಿದೆ.

ನೋಡಿರಿ, ಇದು ಜ್ಞೇಯವಿರುವಂಥ ಪುದ್ಗಲ ಪರಮಾಣುವಿನ ಮಾತು ನಡೆಯುತ್ತಿದೆ. ಆದರೆ ಅದಕ್ಕೆ ಪ್ರಜ್ಞೆಯಿಲ್ಲ. ಅದನ್ನು ತಿಳಿದುಕೊಳ್ಳುವವನಂತೂ ಆತ್ಮನಿದ್ದಾನೆ. ಒಂದು ಪರಮಾಣುವು ಒಂದು ಪ್ರದೇಶದಿಂದ ಇನ್ನೊಂದು ಪ್ರದೇಶಕ್ಕೆ ಹೋಗುವುದು ಮತ್ತು ಒಂದು ಸಮಯ ತಗಲುವುದು ಅದು ಪರಮಾಣುವಿಗೆ ಪರಿಚಯವಿಲ್ಲ, ಪ್ರದೇಶಕ್ಕೆ ಪರಿಚಯವಿಲ್ಲ, ಕಾಲಕ್ಕೆ ಪರಿಚಯವಿಲ್ಲ ; ಆದರೆ ಅದನ್ನು ತಿಳಿಯುವುದು ಜ್ಞಾನವಿದೆ. ವರ್ತಮಾನದಲ್ಲಿ ಸಾಧಕಜೀವನ ಜ್ಞಾನವು ಪರಮಾಣು, ಪ್ರದೇಶ ಅಥವಾ ಸಮಯವನ್ನು ಪ್ರತ್ಯಕ್ಷ ತಿಳಿದುಕೊಳ್ಳುವ ಸಾಧ್ಯತೆಯಿಲ್ಲ. ಕಾರಣವೇನೆಂದರೆ ಜ್ಞಾನವು ಅಪೂರ್ಣವಿದೆ. ಆದಾಗ್ಯೂ ಸಾಧಕಜೀವನು ಪರಮಾಣು, ಕ್ಷೇತ್ರ, ಕಾಲ ಮತ್ತು ಭಾವವನ್ನು ಒಂದು ಸಮಯದಲ್ಲಿ ತಿಳಿದುಕೊಳ್ಳುವಂಥದು ನನ್ನ ಜ್ಞಾನಪರ್ಯಾಯದ ಸಾಮರ್ಥ್ಯವಿದೆಯೆಂದು ವಿಚಾರ ಮಾಡುತ್ತಾನೆ. ಪರಮಾಣುವು ಅತೀಂದ್ರಿಯವಿದೆ, ಪ್ರದೇಶವು ಅತೀಂದ್ರಿಯವಿದೆ, ಸಮಯವು ಅತೀಂದ್ರಿಯವಿದೆ ಮತ್ತು ಅವೆಲ್ಲವುಗಳನ್ನು ತಿಳಿದುಕೊಳ್ಳುವಂಥ ಜ್ಞಾನವು ಕೂಡ ಅತೀಂದ್ರಿಯವಿದೆ.

ಸರ್ವಜ್ಞ ಭಗವಂತರು ತಮ್ಮ ಪ್ರತಿಯೊಂದು ಪ್ರದೇಶಗಳೊಳಗಿಂದ ಒಂದೊಂದು ಪ್ರದೇಶವನ್ನು ಭಿನ್ನ ಭಿನ್ನವಾಗಿ ಒಂದು ಸಮಯದಲ್ಲಿ ತಿಳಿಯುತ್ತಾರೆ. ಛದ್ಮಸ್ಥ ಜೀವನು ವರ್ತಮಾನದಲ್ಲಿ ಪದಾರ್ಥದ ಅಸಂಖ್ಯ ಸಮಯವನ್ನು ತಿಳಿಯುತ್ತಾನೆ. ಆದರೆ ಅಸಂಖ್ಯ ಸಮಯಗಳೊಳಗಿಂದ ಒಂದೊಂದು ಸಮಯವನ್ನು ಭಿನ್ನ ಭಿನ್ನವಾಗಿ ತಿಳಿದುಕೊಳ್ಳುವಂಥ ಸ್ವಭಾವವಿದೆಯೆಂದು ಶ್ರದ್ಧೆ ಮಾಡಿದರೆ ಧರ್ಮವಾಗುವುದು. ಆತ್ಮನು ವಸ್ತುವಿದ್ದು ಅವನ ಸ್ವಭಾವವು ಜ್ಞಾನವಿದೆ. ಅದು ಒಂದು ಸಮಯದ ದಶೆಯಲ್ಲಿ ಪರಮಾಣುವಿನ ದ್ರವ್ಯ ಕ್ಷೇತ್ರ, ಕಾಲ ಮತ್ತು ಭಾವವನ್ನು ತಿಳಿದುಕೊಳ್ಳುವಂಥದ್ದಿದೆ. ಪರಮಾಣುವಿನ ಕಾರಣದಿಂದ ಇಲ್ಲ, ಆದರೆ ತನ್ನ ಸಾಮರ್ಥ್ಯದ ಕಾರಣದಿಂದ ತಿಳಿದುಕೊಳ್ಳುವಂತೆ ಇದೆ. ಅಂಥ ಜ್ಞಾನಸ್ವಭಾವದ ಪ್ರತೀತಿ ಮಾಡುವುದು ಅದು ಕೇವಲದಶೆಯನ್ನು ಪ್ರಾಪ್ತಮಾಡಿಕೊಳ್ಳುವುದರ ಉಪಾಯವಿದೆ.

ನೀನು ಯಾರು ಇರುವೆ ? ಉಳಿದೆಲ್ಲವುಗಳನ್ನು ಮರೆತುಬಿಡು. ದೇಹ, ಮನಸ್ಸು, ವಾಣಿಗಳೆಲ್ಲವು ಪರವಿವೆ, ಅವುಗಳ ಕಾರಣದಿಂದ ನೀನು ಇಲ್ಲ ಎಂದರೆ ಅವುಗಳ ಕಾರಣದಿಂದ ನಿನ್ನ ಜ್ಞಾನವಿಲ್ಲ, ನೀನು ನಿನ್ನ ಕಾರಣದಿಂದ ಇರುವೆ, ನೀನು ಜ್ಞಾನಸ್ವಭಾವಿಯಿರುವೆಯೆಂದು ನಿರ್ಣಯ ಮಾಡುವಲ್ಲಿ ಶಾಂತಿಯಿದೆ. ಪರಮಾಣುವಿನ ವಿಚಾರ ಮಾಡಿದರೆ ಅತೀಂದ್ರಿಯ ಜ್ಞಾನದ ಅರಿವು ಮೂಡಿಬರುವುದು. ಅತೀಂದ್ರಿಯ ಪರಮಾಣುವಿನ ಪ್ರಜ್ಞೆಯು ಮೊದಲು ಬರುವುದಿಲ್ಲ, ಆದರೆ ಅತೀಂದ್ರಿಯ ಜ್ಞಾನಸ್ವಭಾವದ ಪ್ರಜ್ಞೆಯು ಮೊದಲು ಬರುವುದು ಮತ್ತು ಜ್ಞಾನಸ್ವಭಾವವು ಅತ್ಯಂತ ಚಿಕ್ಕದಾದ ಕಾಲವನ್ನು ತಿಳಿದುಕೊಳ್ಳುವುದಿಲ್ಲ ಅದನ್ನು ಸ್ವಭಾವವೆಂದು ಹೇಳಲಾಗುವುದಿಲ್ಲ, ಜ್ಞಾನವು ಸ್ವ-ಪರಗಳೆಲ್ಲವನ್ನು ಭಿನ್ನ ಭಿನ್ನವಾಗಿ ಒಂದು ಸಮಯದಲ್ಲಿ ತಿಳಿದುಕೊಳ್ಳುವ ಸಾಮರ್ಥ್ಯವುಳ್ಳದ್ದಿದೆಯೆಂದು ನಿರ್ಣಯ ಮಾಡುವವನಿಗೆ

ತನ್ನ ಸ್ವಭಾವದ ಕಡೆಗೆ ಪ್ರವೃತ್ತಿಯಾದಲ್ಲದೆ ಇರಲಾರದು. ಆತ್ಮನು ಜ್ಞಾನಸ್ವಭಾವಿಯಿದ್ದಾನೆಂಬುದರ ನಿಶ್ಚಯಜ್ಞಾನವಿಲ್ಲದೆ ನಿಮಿತ್ತ ಮತ್ತು ವ್ಯವಹಾರದ ಜ್ಞಾನವು ಯಥಾರ್ಥವಿರುವ ಸಾಧ್ಯತೆಯಿಲ್ಲ. ಜ್ಞಾನಸಮಯ ಅರ್ಥಸಮಯವನ್ನು ತಿಳಿಯುತ್ತದೆ. ತಿಳಿಯುವ ಸ್ವಭಾವವು ಅರ್ಥಸಮಯದಲ್ಲಿದೆಯೋ ಅಥವಾ ಚೈತನ್ಯದಲ್ಲಿದೆಯೋ? ಪುದ್ಗಲ ಪದಾರ್ಥಗಳಲ್ಲಿ ತಿಳಿದುಕೊಳ್ಳುವ ಸ್ವಭಾವವಿಲ್ಲ. ನನ್ನ ಸ್ವಭಾವವು ಒಂದು ಸಮಯವನ್ನು ತಿಳಿದುಕೊಳ್ಳುವಂಥದ್ದಿದೆ. ಆದರೆ ವರ್ತಮಾನದಲ್ಲಿ ನನ್ನ ತಿಳಿದುಕೊಳ್ಳುವಿಕೆಯು ಒಂದಿಷ್ಟು ಅಡ್ಡಿಗೊಳಗಾಗಿರುವುದರಿಂದ ಒಂದು ಸಮಯವನ್ನು ಬೇರೆ ಮಾಡಿ ತಿಳಿದುಕೊಳ್ಳುವುದಿಲ್ಲ. ಅದು ಒಂದು ಸಮಯವನ್ನು ಬೇರೆ ಮಾಡಿ ತಿಳಿದುಕೊಂಡರೆ ರಾಗವು ಉಳಿಯುವುದಿಲ್ಲ ವರ್ತಮಾನದಲ್ಲಿ ರಾಗವಿದ್ದರು ಕೂಡ ಒಂದು ಸಮಯವನ್ನು ಬೇರೆ ಮಾಡಿ ತಿಳಿದುಕೊಳ್ಳುವಂಥದು ತನ್ನ ಶಕ್ತಿಯಿದೆಯೋ ಅಥವಾ ಇಲ್ಲವೋ ? ರಾಗ ಮತ್ತು ಅಪೂರ್ಣ ಅವಸ್ಥೆಯಿದ್ದರು ಕೂಡ ಒಂದು ಸಮಯವನ್ನು ಬೇರೆ ಮಾಡಿ ತಿಳಿದುಕೊಳ್ಳುವ ಸಾಮರ್ಥ್ಯವು ತನ್ನಲ್ಲಿ ಇದೆಯೆಂದು ತನ್ನ ಸ್ವಭಾವದ ಶ್ರದ್ಧೆಮಾಡಿ ದ್ರವ್ಯಬುದ್ಧಿ ಮಾಡುವುದು ಮತ್ತು ಪರ್ಯಾಯ ಬುದ್ಧಿಯನ್ನು ತ್ಯಜಿಸಿಬಿಡುವುದೇ ನಿಜವಾಗಿ ಧರ್ಮದ ಉಪಾಯವಿದೆ.

ಯಾರಿಗೆ ಧರ್ಮ ಮಾಡುವುದಿದೆ ಮತ್ತು ಯಾವುದರಲ್ಲಿ ಧರ್ಮ ಮಾಡುವುದಿದೆ ಆ ಆತ್ಮಪದಾರ್ಥವು ಯಾವುದಿದೆಯೆಂಬುದನ್ನು ಮೊದಲು ತಿಳಿದುಕೊಳ್ಳಬೇಕಾಗುವುದು. ಮೊದಲು ಮನೆಯ ವಿಚಾರಮಾಡಿ ಅನಂತರ ನೀರು ಕುಡಿಯುವುದಿರುತ್ತದೆ. ಅದೇಪ್ರಕಾರ ಧರ್ಮ ಮಾಡಬೇಕೆನ್ನುವವನು ಮೊದಲು ಧರ್ಮವು ಎಲ್ಲಿ ಆಗುತ್ತದೆಂಬುದನ್ನು ವಿಚಾರಿಸಬೇಕಾಗುವುದು. ಆತ್ಮನು ಯಾವನಿದ್ದಾನೆ ? ತಿಳಿದುಕೊಳ್ಳುವವನು ಎಂಥವನಿದ್ದಾನೆ ? ಒಂದೊಂದು ಪರಮಾಣು, ಒಂದೊಂದು ಪ್ರದೇಶ, ಒಂದೊಂದು ಸಮಯವನ್ನು ಭಿನ್ನ ಭಿನ್ನವಾಗಿ ತಿಳಿದುಕೊಳ್ಳುವ ಸಾಮರ್ಥ್ಯವುಳ್ಳವನಿದ್ದಾನೆ. ಒಂದು ಪರಮಾಣುವು ಒಂದು ಪ್ರದೇಶದಿಂದ ಇನ್ನೊಂದು ಪ್ರದೇಶಕ್ಕೆ ಹೋಗುವುಷ್ಟು ಕಾಲವನ್ನು ಸಮಯವೆಂದು ಹೇಳುತ್ತಾರೆಂಬ ಮಾತಿನ ಜ್ಞಾನವು ಎಲ್ಲಿಂದ ಬರುವುದು ? ನಾನು ವಿಕಾರಸ್ವಭಾವಿಯಿದ್ದೇನೆಂದು ಮನ್ನಿಸುವವನಿಗೆ ಅಂಥ ಜ್ಞಾನವು ಆಗುವುದೇನು ? ಎಂದೂ ಸಾಧ್ಯವಿಲ್ಲ. ನಾನು ರಾಗದಿಂದ ರಹಿತನಾಗಿ ಪ್ರತ್ಯಕ್ಷ ಜ್ಞಾನಸ್ವಭಾವಿಯಾದ ಆತ್ಮನಿದ್ದೇನೆಂದು ಆತ್ಮನ ಜ್ಞಾನವಾದಲ್ಲದೆ ಪರಮಾಣು, ಪ್ರದೇಶ ಅಥವಾ ಸಮಯದ ಜ್ಞಾನವಾಗುವುದಿಲ್ಲ.

ಒಂದು ಪರಮಾಣುವು ಒಂದು ಪ್ರದೇಶದಿಂದ ಇನ್ನೊಂದು ಪ್ರದೇಶಕ್ಕೆ ಹೋಗುವಷ್ಟು ಕಾಲವನ್ನು ಸಮಯವೆಂದು ಹೇಳುತ್ತಾರೆ. ಆದುದರಿಂದ ಪರಮಾಣುವು ಕಾಲದ ಚಿಕ್ಕದರಲ್ಲಿ ಚಿಕ್ಕದಾದ ಅಂಶದ ಕರ್ತೃವಿದೆ. ಅದನ್ನು ಯಾರು ತಿಳಿದಿದ್ದಾರೆ ? ಅತೀಂದ್ರಿಯ ಜ್ಞಾನಸ್ವಭಾವಿಯಾದ ಆತ್ಮನಿದ್ದಾನೆಂದು ಯಾವನಿಗೆ ವಿಶ್ವಾಸವುಂಟಾಗಿದೆ ಅವನಿಗೆ ಈ ಪ್ರತೀತಿಯಾಗುತ್ತದೆ. ಒಂದು ಪರಮಾಣುವಿನ ಪ್ರತೀತಿಯಾದರೆ ಅನಂತ ಪರಮಾಣುಗಳ ಪ್ರತೀತಿಯಾಗುತ್ತದೆ. ಒಂದು ಪ್ರದೇಶದ ಪ್ರತೀತಿಯಾದರೆ ಅನಂತ ಪ್ರದೇಶಗಳ ಪ್ರತೀತಿಯಾಗುತ್ತದೆ, ಒಂದು ಸಮಯದ ಪ್ರತೀತಿಯಾದರೆ ಅಂಥ ಅನಂತ ಸಮಯಗಳ ಪ್ರತೀತಿಯಾಗುತ್ತದೆ. ಇಂದ್ರಿಯಗಳ ಲಕ್ಷ್ಯವಾದರೆ ಜ್ಞಾನದಲ್ಲಿ ಅಥವಾ ನಿಮಿತ್ತದ ಚಲನದಿಂದ ಉಂಟಾದ ಜ್ಞಾನದಲ್ಲಿ ಇಂಥ ಪ್ರತೀತಿಯು ಬರುವುದಿಲ್ಲ. ಅತೀಂದ್ರಿಯ ಸ್ವಭಾವದ ಜ್ಞಾನವಿಲ್ಲದೆ ಅತೀಂದ್ರಿಯ ಪರಮಾಣುವನ್ನು ತಿಳಿದುಕೊಳ್ಳುವುದಾಗುವುದಿಲ್ಲ ಆದುದರಿಂದ ಇಲ್ಲಿ ಹೇಳುವುದೇನೆಂದರೆ ಪರಮಾಣುವು ಕಾಲದ ಭೇದದ ಕರ್ತೃವಿದೆ ಅದನ್ನು ಅತೀಂದ್ರಿಯ ಜ್ಞಾನವುಳ್ಳವನು ತಿಳಿದುಕೊಳ್ಳುವ ಸಾಧ್ಯತೆಯಿದೆ. ಅದಕ್ಕಾಗಿ ನಿನ್ನ ಆತ್ಮನ ಆಶ್ರಯದಿಂದ ಸ್ವಸಂವೇದನ ಜ್ಞಾನವನ್ನು ಪ್ರಕಟ ಮಾಡಿಕೊಂಡು ನಿಜವನ್ನು ತನ್ನನ್ನು ತಿಳಿದುಕೊಂಡರೆ ಪರಮಾಣು, ಪ್ರದೇಶ ಮತ್ತು ಕಾಲವನ್ನು ಯಥಾರ್ಥ ತಿಳಿಯಬಹುದಾಗಿದೆ ಮತ್ತು ಅದುವೇ ಧರ್ಮದಶೆಯಿದೆ.

೧) ಮತ್ತು ಆ ಪರಮಾಣುವು ದ್ರವ್ಯ, ಕ್ಷೇತ್ರ, ಕಾಲ, ಭಾವದ ಸಂಖ್ಯೆಯ ಭೇದದ ಕರ್ತೃವಿದೆ, ಅದು

ತಿಳಿಸಿಕೊಡುತ್ತದೆ. ಒಂದು ಪರಮಾಣುವು ಮೂಲವಸ್ತುವಿದ್ದು ಅದು ತನ್ನ ಒಂದು ಪ್ರದೇಶ ಪ್ರಮಾಣದಿಂದ ಸಂಖ್ಯೆಯನ್ನು ತಿಳಿಸಿಕೊಡುತ್ತದೆ. ಒಂದು ಎರಡು, ಮೂರು, ನಾಲ್ಕು, ಐದು, ಆರು, ಅಸಂಖ್ಯ, ಅನಂತದಂಥ ಪರಮಾಣುವಿನ ಸಂಖ್ಯೆಯನ್ನು ಪರಮಾಣುವು ತಿಳಿಸಿಕೊಡುತ್ತದೆ ಎಂದರೆ ದ್ರವ್ಯದ ಸಂಖ್ಯೆಯನ್ನು ತಿಳಿಸಿಕೊಡುವಲ್ಲಿ ಪರಮಾಣುವು ನಿಮಿತ್ತವಿದೆ. ಅದನ್ನು ತಿಳಿದುಕೊಳ್ಳುವುದಂತೂ ಆತ್ಮ ದ್ರವ್ಯವಿವೆ. ಸ್ಕಂಧಕ್ಕಾಗಲಿ ಅಥವಾ ಪರಮಾಣುವಿಗಾಗಲಿ ಪ್ರಜ್ಞೆಯಿಲ್ಲ, ಅದರ ನಿರ್ಣಯ ಮಾಡುವುದಂತೂ ಜ್ಞಾನವಿದೆ. ಅದು ಪರಮಾಣುವಿನ ಸಂಖ್ಯೆ, ಸಂಖ್ಯಾತ, ಅಸಂಖ್ಯ ಅಥವಾ ಅನಂತದ ನಿರ್ಣಯ ಮಾಡುತ್ತದೆ. ಅದರಲ್ಲಿ ಪರಮಾಣುವು ನಿಮಿತ್ತವಿದೆ. ದ್ರವ್ಯದ ಮತ್ತು ಕಾಲದ ವಿಚಾರವನ್ನು ಜ್ಞಾನವು ಮಾಡುತ್ತದೆ. ಅದರಲ್ಲಿ ಪರಮಾಣು ನಿಮಿತ್ತವಿದೆ, ಆದುದರಿಂದ ಪರಮಾಣುವು ಸ್ಕಂಧಗಳ, ದ್ರವ್ಯಸಂಖ್ಯೆಗಳ ಭೇದದ ಕರ್ತೃವೆಂದು ಕರೆಸಿಕೊಳ್ಳುತ್ತದೆ.

೨) ಮತ್ತು ಒಂದು ಪರಮಾಣುವು ಏಕಪ್ರದೇಶಿಯಿದೆ. ಒಂದು ಪ್ರದೇಶವು ಒಂದು ಪರಮಾಣುವಿನಷ್ಟು ಇದೆ. ಆ ಪರಮಾಣುವಿನ ಅಳತೆಯಿಂದ ಬೇರೆ ಬೇರೆ ವಸ್ತುಗಳ ಕ್ಷೇತ್ರದ ನಿರ್ಣಯವಾಗುವುದರಿಂದ ಪರಮಾಣುವು ಸಂಖ್ಯಾತ, ಅಸಂಖ್ಯ ಅಥವಾ ಅನಂತಪ್ರದೇಶಗಳನ್ನು ಅಳೆಯುವಂಥದ್ದಿದೆ. ಆ ಪರಮಾಣುವು ಏಕಪ್ರದೇಶಿಯಿದೆ. ಸ್ಕಂಧಗಳು ಎರಡು ಪ್ರದೇಶಗಳಿಂದ ಹಿಡಿದು ಸಂಖ್ಯಾತ, ಅಸಂಖ್ಯ ಅಥವಾ ಅನಂತಪ್ರದೇಶಿಯಿವೆ. ಜೀವ, ಧರ್ಮ, ಅಧರ್ಮಗಳು ಅಸಂಖ್ಯಪ್ರದೇಶಿಯಿವೆ. ಮತ್ತು ಆಕಾಶವು ಅನಂತಪ್ರದೇಶಿಯಿದೆ. ಅವೆಲ್ಲವನ್ನು ಪರಮಾಣುವು ತಿಳಿಸಿಕೊಡುತ್ತದೆ. ಕ್ಷೇತ್ರದ ಅಳತೆ ಮಾಡುವಲ್ಲಿ ಪರಮಾಣುವು ನಿಮಿತ್ತವಿದೆ. ಆದುದರಿಂದ ಪರಮಾಣುವು ಕ್ಷೇತ್ರಸಂಖ್ಯೆಯ ಭೇದಕರ್ತೃವಿದೆ. ಪರಮಾಣುವು ಎಲ್ಲವುಗಳ ಕ್ಷೇತ್ರದ ಅಳತೆ ಮಾಡುತ್ತದೆ, ಆದರೆ ಅದರ ಪ್ರಮಾಣ ಮಾಡುವವರು ಯಾರಿದ್ದಾರೆ ? ಪ್ರಮಾಣ ಮಾಡುವವನಂತೂ ಆತ್ಮನಿದ್ದಾನೆ ಅವನು ನಿರ್ಣಯ ಮಾಡುತ್ತಾನೆ.

ದ್ರವ್ಯದಲ್ಲಿ ಅನೇಕತೆಯಿದೆ, ಪರಮಾಣುವು ಆ ದ್ರವ್ಯದ ಅನೇಕತೆಯ ಭೇದಕರ್ತೃವಿದೆ. ಮತ್ತು ಕ್ಷೇತ್ರದಲ್ಲಿ ಅನೇಕತೆಯಿದೆ ಪರಮಾಣುವು ಆ ಕ್ಷೇತ್ರದ ಅನೇಕತೆಯ ಭೇದಕರ್ತೃವಿದೆ. ಆ ಅನೇಕತೆಯ ಭೇದಕರ್ತೃವು ಪರಮಾಣುವಿದೆ. ಆದರೆ ಪರಮಾಣುವಿಗೆ ಅದರ ಪ್ರಜ್ಞೆಯಿಲ್ಲ. ಆ ಅನೇಕತೆಯನ್ನು ತಿಳಿದುಕೊಳ್ಳುವಂಥವನು ಆತ್ಮನಿದ್ದಾನೆ. ಅವನು ಕೂಡ ವ್ಯವಹಾರದಿಂದ ತಿಳಿದುಕೊಳ್ಳುವಂಥವನಿದ್ದಾನೆ. ತನ್ನ ಅತೀಂದ್ರಿಯ ಸ್ವಭಾವವನ್ನು ತಿಳಿದುಕೊಂಡರೆ ಪರಮಾಣುವು ಕ್ಷೇತ್ರದ ಅನೇಕತೆಯ ಭೇದಕರ್ತೃವಿದೆಯೆಂಬುದನ್ನು ವ್ಯವಹಾರದಿಂದ ತಿಳಿದುಕೊಳ್ಳುತ್ತಾನೆ.

೩.)ಮತ್ತು ಆ ಪರಮಾಣುವು ಒಂದು ಪ್ರದೇಶದಿಂದ ಇನ್ನೊಂದು ಪ್ರದೇಶಕ್ಕೆ ಹೋಗುವಷ್ಟು ಕಾಲವನ್ನು ಒಂದು ಸಮಯವೆಂದು ಹೇಳುತ್ತಾರೆ. ಅದೇಪ್ರಕಾರ ಒಂದರಿಂದ ಎರಡನೆಯ, ಎರಡರಿಂದ ಮೂರನೆಯ ಇದೇ ರೀತಿಯಿಂದ ಪ್ರದೇಶಾಂತರರೂಪ ಪ್ರತಿ ಪರಿಣಾಮದಿಂದ ಎರಡು ಸಮಯದಿಂದ ಅನಂತ ಸಮಯದವರೆಗಿನ ಕಾಲದ ಸಂಖ್ಯೆಯನ್ನು ತಿಳಿಸಿಕೊಡಲಾಗಿದೆ. ಅನಂತ ಸಮಯದ ಅಳತೆ ಬರುವುದರಿಂದ ಪರಮಾಣುವನ್ನು ಕಾಲದ ಸಂಖ್ಯೆಯ ಭೇದಕರ್ತೃವೆಂದು ಹೇಳಿದೆ. ಅವೆಲ್ಲವುಗಳನ್ನು ತಿಳಿದುಕೊಳ್ಳುವಂಥವನು ಆತ್ಮನಿದ್ದಾನೆ. ಜ್ಞಾನಸ್ವಭಾವದ ಮಹಿಮೆಯಿಲ್ಲದೆ ಎಲ್ಲವು ವ್ಯರ್ಥವಿದೆ.

ಇಂಥ ಜ್ಞಾನಸ್ವಭಾವಿಯಾದ ಆತ್ಮನ ಪ್ರಜ್ಞೆಯಿಲ್ಲದೆ ಸಾಮಾಯಿಕ, ವ್ರತ, ತಪಸ್ಸು ಮೊದಲಾದುವನ್ನು ತಾವು ಮನ್ನಿಸಿದಂತೆ ಮಾಡಿದರೆ ಅದೆಲ್ಲವು ವ್ಯರ್ಥವಿದೆ. ನಾನು ಜ್ಞಾನಸ್ವಭಾವಿಯಾದ ಆತ್ಮನಿದ್ದೇನೆ. ಪರಮಾಣುವನ್ನು , ಪ್ರದೇಶವನ್ನು ಹಾಗೂ ಕಾಲವನ್ನು ನನ್ನಲ್ಲಿ ಇದ್ದುಕೊಂಡು ತಿಳಿದುಕೊಳ್ಳುವಂಥವನಿದ್ದೇನೆ. ಪರದಲ್ಲಿ ಏನನ್ನೂ ಮಾಡುವಂಥವನಿಲ್ಲ ಅದರಂತೆ ರಾಗ-ದ್ವೇಷಗಳನ್ನು ಕೂಡ ಮಾಡುವಂಥವನಿಲ್ಲ. ಇಂಥ ಶುದ್ಧ ಚೈತನ್ಯಸ್ವಭಾವದ ಪ್ರಜ್ಞೆಯಿಲ್ಲದೆ ಸಮತೆಯಾಗಲಿ ಅಥವಾ ಸಾಮಾಯಿಕವಾಗಲಿ ಎಲ್ಲಿಂದ ಆಗುವುದು ? ಮತ್ತು ಬೋಧಿಬೀಜ ಹಾಕಿಲ್ಲದೆ

ಆತ್ಮನಿಗೆ ಪ್ರೋಷಧರೂಪದ ಕ್ರಿಯೆಯಾಗುವುದಿಲ್ಲ. ಮೊದಲು ಬೋಧಿಬೀಜ ಹಾಕಬೇಕು ಅನಂತರ ಪ್ರತಿಮೆಯಾಗುವುದು. ಬೇವಿನ ಬೀಜದಿಂದ ಮಾವಿನ ವೃಕ್ಷವಾಗುವುದಿಲ್ಲ ಅದೇ ಪ್ರಕಾರ ಮಿಥ್ಯಾದರ್ಶನರೂಪದ ಬೀಜವನ್ನು ಬಿತ್ತಿದರೆ ಸಾಮಾಯಿಕ ಮತ್ತು ಪ್ರೋಷಧರೂಪದ ಮಾವಿನ ವೃಕ್ಷವು ಉನ್ನತವಾಗುವುದಿಲ್ಲ, ಚೈತನ್ಯಸ್ವಭಾವದ ಬೀಜವನ್ನು ಬಿತ್ತಿದರೆ ಆತ್ಮನಿಗೆ ಪ್ರೋಷಧವು ದೊರಕುವದು ಮತ್ತು ಅದು ಪ್ರೋಷಧವೆನಿಸುವುದು.

**ಪ್ರಶ್ನೆ :-** ಇದು ಜ್ಞೇಯ ಅಧಿಕಾರವಿದೆಯೋ ಅಥವಾ ಜ್ಞಾನ ಅಧಿಕಾರವಿದೆಯೋ ?

**ಉತ್ತರ :-** ಇದು ಪುದ್ಗಲದ-ಜ್ಞೇಯದ ಅಧಿಕಾವಿದೆಯೆಂದು ಯಾರು ತಿಳಿದರು ? ಜ್ಞಾನಕ್ಕೆ ಸ್ವಜ್ಞೇಯವಿದೆಯೋ ಅಥವಾ ಇಲ್ಲವೋ ? ಸ್ವಜ್ಞೇಯವನ್ನು ತಿಳಿದುಕೊಂಡಲ್ಲದೆ ಪರಜ್ಞೇಯವನ್ನು ವ್ಯವಹಾರವೆಂದು ಯಾರು ತಿಳಿಯುವರು? ನಿಜಜ್ಞಾನದ ಮಹಿಮೆಯು ಬಂದಲ್ಲದೆ ಪರಜ್ಞೇಯವು ನಿಶ್ಚಿತವಾಗುವುದಿಲ್ಲ. ಈ ಪರಮಾಣುವನ್ನು ಕೂಡ ತಿಳಿದುಕೊಳ್ಳುವವನು ನೀನೇ ಇರುವೆಯೆಂದು ತಿಳಿಸಿಕೊಡಲಾಗಿದೆ. ಒಂದು ಪರಮಾಣುವು ಸಂಖ್ಯೆಯನ್ನು, ಕ್ಷೇತ್ರವನ್ನು, ಸಮಯವನ್ನು ತಿಳಿಸಿಕೊಡುತ್ತದೆಯೆನ್ನುವುದಂತೂ ವ್ಯವಹಾರ ಕಥನವಿದೆ. ಪರಮಾಣುವು ಕ್ಷೇತ್ರ ಅಥವಾ ಸಮಯದ ನಿರ್ಣಯ ಮಾಡುವುದಿಲ್ಲ, ನಿರ್ಣಯ ಮಾಡುವವನಂತೂ ಆತ್ಮನಿದ್ದಾನೆ.

೪) ಮತ್ತು ಸ್ಕಂಧದ ಸ್ಪರ್ಶ ಮೊದಲಾದ ಗುಣಗಳಲ್ಲಂತೂ ಅದಲು-ಬದಲಾಗುತ್ತದೆ. ಆದರೆ ಏಕಾಕಿ ಪರಮಾಣುವಿನಲ್ಲಿ ಕೂಡ ಸ್ವಭಾವ ಭಾವಗಳಲ್ಲಿ ಅದಲು-ಬದಲಾಗುತ್ತದೆ. ಸ್ಕಂಧವು ಅದು ವ್ಯವಹಾರದಿಂದ ಪುದ್ಗಲವಿದೆ ಪರಮಾಣುವು ನಿಶ್ಚಯದಿಂದ ಪುದ್ಗಲವಿದೆ. ಒಂದು ಪರಮಾಣುವಿನ ಒಂದು ಗುಣ ಸ್ನಿಗ್ಧವಿದ್ದರೆ ಅದು ಷಡ್ಗುಣವಾಗಿ ಹೋಗುವುದು, ಅನಂತಗುಣ ಕೂಡ ಆಗಿಹೋಗುವುದು. ಜಘನ್ಯ ಒಂದು ಗುಣದಿಂದ ಹಿಡಿದು ಉತ್ಕೃಷ್ಟ ಅನಂತಗುಣಗಳಾಗಿ ಹೋಗುವುದು, ಇದೇ ರೀತಿಯಿಂದ ಒಂದು ಪರಮಾಣುವಿನ ತನ್ನ ಭಾವದಲ್ಲಿ ಅದಲು-ಬದಲಾಗುವುದರಿಂದ ಪರಮಾಣುವು ಭಾವಭೇದದ ಕರ್ತೃವೆಂದು ಕರೆಸಿಕೊಳ್ಳುತ್ತದೆ.

ತನ್ನ ಸ್ಪರ್ಶ, ರಸ, ಗಂಧ, ವರ್ಣ ಮೊದಲಾದ ಭಾವಗಳ ಜಘನ್ಯದಿಂದ ಹಿಡಿದು ಉತ್ಕೃಷ್ಟದವರೆಗೆ ತಾರತಮ್ಯವಾಗುವಲ್ಲಿ ಒಂದು ಪರಮಾಣುವು ನಿಮಿತ್ತವಿರುವುದರಿಂದ ಭಾವಭೇದದ ಕರ್ತೃವೆಂದು ಹೇಳಲಾಗಿದೆ.

ಕಾಲದ ಕಾರಣದಿಂದ ಭಾವದಲ್ಲಿ ಮಾರ್ಪಾಟು ಆಗುತ್ತಿದ್ದರೆ ಆ ಮಾತು ಅಸತ್ಯವಿದೆ. ಒಂದು ಪರಮಾಣು ಒಂದು ಗುಣ ಸ್ನಿಗ್ಧತೆಯೊಳಗಿಂದ ಹತ್ತು ಗುಣ ಸ್ನಿಗ್ಧತೆಯಾಗುತ್ತದೆ. ಎರಡನೆಯ ಪರಮಾಣುವು ಷಡ್ಗುಣವಾಗುವುದು. ಕಾಲವಂತೂ ಎರಡಕ್ಕೂ ನಿಮಿತ್ತವಿದೆ. ಕಾಲದ ಕಾರಣದಿಂದ ಆಗುವಂತಿದ್ದರೆ ಸಮಾನ ಪರಿಣಮನವಾಗಬೇಕಾಗುವುದು. ಆದರೆ ಹಾಗೆ ಸಂಭವಿಸುವುದಿಲ್ಲ. ತಾನು ತನ್ನ ಕಾರಣದಿಂದ ಜಘನ್ಯಭಾವದಿಂದ ಉತ್ಕೃಷ್ಟರೂಪವಾಗಿ ಮತ್ತು ಉತ್ಕೃಷ್ಟದೊಳಗಿಂದ ಜಘನ್ಯಭಾವರೂಪವಾಗಿ ಆಗುತ್ತದೆ. ಒಂದು ಪರಮಾಣುವು ತನ್ನ ಸ್ಪರ್ಶ, ರಸ, ಗಂಧ, ವರ್ಣದ ಗುಣಭೇದದಲ್ಲಿ ಷಡ್ಗುಣಹಾನಿ-ವೃದ್ಧಿಯಿಂದ ಪುದ್ಗಲವೆಂಬ ಹೆಸರು ಪಡೆಯುತ್ತದೆಯೆಂದು ೭೬ ನೇ ಗಾಥೆಯಲ್ಲಿ ಹೇಳಲಾಗಿದೆ. ಇಲ್ಲಿ ಆ ಷಡ್ಗುಣಹಾನಿ-ವೃದ್ಧಿಯನ್ನು ತಿಳಿಸಿದೆ.

ಆದರೆ ಇಂಥ ಪರಿಣಾಮವನ್ನು ಯಾರು ತಿಳಿಯುತ್ತಾರೆ ? ಆತ್ಮನು ತಿಳಿಯುತ್ತಾನೆಯೋ ಅಥವಾ ಪರಮಾಣುವಿನ ಸ್ಪರ್ಶ ಮೊದಲಾದ ಗುಣಗಳಲ್ಲಿ ಇಂಥ ತಾರತಮ್ಯತೆಯಾಗುವ ಸ್ವಭಾವವಿದೆ. ಜಘನ್ಯ, ಮಧ್ಯಮ ಅಥವಾ ಉತ್ಕೃಷ್ಟರೂಪದಿಂದಾಗುವ ಯೋಗ್ಯತೆಯು ಪರಮಾಣುವಿನಲ್ಲಿದೆಯೆಂಬುದು ಪರಮಾಣುವಿಗೆ ಪ್ರಜ್ಞೆಯಿಲ್ಲ. ತನ್ನ ಜ್ಞಾನದ ಕಾರಣದಿಂದ ಜ್ಞೇಯದ ಸೂಕ್ಷ್ಮಸ್ವರೂಪವು ನಿಶ್ಚಿತವಾಗುತ್ತದೆ.

ಒಂದು ಪರಮಾಣುವು ಒಂದು ದ್ರವ್ಯವಿದೆ ಅಂಥವು ಅನಂತ ಪರಮಾಣುಗಳಿವೆ ಎಂದರೆ ದ್ರವ್ಯದ ಸಂಖ್ಯೆಯನ್ನು ತಿಳಿಸಿಕೊಡಲಾಗಿದೆ. ಒಂದು ಪರಮಾಣುವು ಏಕಪ್ರದೇಶಿಯಿದೆ ಆ ಅಳತೆಯಿಂದ ಒಂದರಿಂದ ಅನಂತಪ್ರದೇಶಗಳ ಸಂಖ್ಯೆಯನ್ನು ತಿಳಿಸಿಕೊಡಲಾಗಿದೆ. ಒಂದು ಪರಮಾಣುವು ಒಂದು ಸಮಯವನ್ನು ತಿಳಿಸುತ್ತದೆ. ಹೀಗೆ ಅನಂತ ಸಮಯಗಳ ಸಂಖ್ಯೆಯನ್ನು ತಿಳಿಸಿಕೊಡಲಾಗಿದೆ. ಒಂದು ಪರಮಾಣುವಿನಲ್ಲಿ ವರ್ಣ ಮೊದಲಾದುವಲ್ಲಿ ಜಘನ್ಯದಿಂದ ಉತ್ಕೃಷ್ಟ ಅದಲು-ಬದಲಾಗುತ್ತದೆಂಬ ಭಾವದ ಭೇದವನ್ನು ತಿಳಿಸಿಕೊಡಲಾಗಿದೆ.

ಈ ಪ್ರಕಾರ ಪರಮಾಣುವಿನ ದ್ರವ್ಯ, ಕ್ಷೇತ್ರ, ಕಾಲ, ಭಾವದಿಂದ ಭೇದವನ್ನು ತಿಳಿಸಿಕೊಡಲಾಗಿದೆ. ಪರಮಾಣುವು ಅನಾದಿಯಿಂದ ಅದನ್ನು ತಿಳಿಸಕೊಡುತ್ತಲಿದೆ. ಆದರೆ ಇಂದಿನವರೆಗೆ ಹೇಗೆ ವಿಚಾರ ಬರಲಿಲ್ಲ ? ತನ್ನ ವಿಚಾರ ಬಂದರೆ ಪರದ ವಿಚಾರವು ಬರುವುದು. ವಿಚಾರ ಮಾಡುವಂಥವನು ಆತ್ಮನಿದ್ದಾನೆಂದು ತನ್ನ ಸೂಕ್ಷ್ಮ ಜ್ಞಾನಸ್ವಭಾವದ ಮಹಿಮೆ ಬಂದರೆ ತನ್ನನ್ನು ತಿಳಿದುಕೊಂಡರೆ ಪರಜ್ಞೇಯಗಳ ಸೂಕ್ಷ್ಮತೆಯನ್ನು ತಿಳಿಯುವನು. ಪರಮಾಣುವಿನ ಮಹಿಮೆಯ ಕಾರಣದಿಂದ ತನ್ನ ಮಾಹಾತ್ಮ್ಯವಿಲ್ಲ. ನಾನು ನನ್ನ ಕಾರಣದಿಂದ ದೊಡ್ಡವನಿದ್ದೇನೆಂದು ಯಾರಿಗೆ ತನ್ನ ಸ್ವಭಾವದ ದೊಡ್ಡಸ್ತಿಕೆಯು ಬರುತ್ತದೆ ಅವರಿಗೆ ನಿಮಿತ್ತದ ಮತ್ತು ವಿಕಾರದ ದೊಡ್ಡಸ್ತಿಕೆಯು ಹೊರಟುಹೋಗುತ್ತದೆ ಮತ್ತು ತನ್ನ ಸೂಕ್ಷ್ಮ ಸ್ವಭಾವವನ್ನು ತಿಳಿದುಕೊಂಡರೆ ಜ್ಞೇಯಗಳ ಸ್ವಭಾವವು ಇಷ್ಟು ಸೂಕ್ಷ್ಮವಿವೆಯೆಂದು ಅದನ್ನು ತಿಳಿದುಕೊಳ್ಳುತ್ತಾರೆ.

ಮತ್ತು ಪರಮಾಣುವಿನ ಭಾವಗಳಲ್ಲಿ ಜಘನ್ಯ, ಮಧ್ಯಮ ಮತ್ತು ಉತ್ಕೃಷ್ಟವೆಂದು ಅದಲುಬದಲಾಗುತ್ತದೆ ಮತ್ತು ಉತ್ಕೃಷ್ಟವು ಸ್ನಿಗ್ಧ ಅಥವಾ ರೂಕ್ಷರೂಪದಿಂದ ಆದ ಬಳಿಕ ಅನಂತರ ಮಧ್ಯಮ ಮತ್ತು ಜಘನ್ಯರೂಪದಿಂದ ಅದು ಆಗಿಹೋಗುವುದು. ಆದರೆ ಯಾವ ಆತ್ಮನು ತನ್ನ ಜ್ಞಾನಸ್ವಭಾವಿಯಾದ ಆತ್ಮನ ಶ್ರದ್ಧೆ-ಜ್ಞಾನಮಾಡಿ ಉತ್ಕೃಷ್ಟದಶೆ-ಕೇವಲದಶೆ ಪ್ರಾಪ್ತಮಾಡಿದವನಿಗೆ ಪುನಃ ಮಧ್ಯಮ ಅಥವಾ ಜಘನ್ಯದಶೆಯು ಎಂದರೆ ಸಂಸಾರದಶೆಯಾಗುವುದಿಲ್ಲ. ಪರಮಾಣುವಿನಲ್ಲಿ ಮತ್ತು ಆತ್ಮನಲ್ಲಿ ಇಷ್ಟು ಅಂತರವಿದೆ.

ಆತ್ಮನ ಸ್ವಭಾವವೇ ಸರ್ವಜ್ಞತೆಯಿದೆ. ಕೇವಲಜ್ಞಾನದಿಂದ ಶೂನ್ಯವಿರುವಂಥ ಸ್ವಭಾವವೇ ಇಲ್ಲ. ಹೀಗೆ ಯಾವನು ನಿರ್ಣಯ ಮಾಡಿದ್ದಾನೆ ಅವನು ಪರಮಾಣುವಿನ ಸೂಕ್ಷ್ಮಸ್ವಭಾವವನ್ನು ವ್ಯವಹಾರದಿಂದ ತಿಳಿಯುತ್ತಾನೆ. ಪರಮಾಣುವಿಗಂತೂ ನಾನು ದ್ರವ್ಯ, ಕ್ಷೇತ್ರ, ಕಾಲ, ಭಾವಗಳ ಭೇದಮಾಡುವಂಥವನಿದ್ದೇನೆಂಬ ಪ್ರಜ್ಞೆಯಿಲ್ಲ. ಆದರೆ ಅದೆಲ್ಲವನ್ನು ಜ್ಞಾನವು ವ್ಯವಹಾರದಿಂದ ತಿಳಿಯುತ್ತದೆ. ಜ್ಞಾನವು ಅವರಲ್ಲಿ ತನ್ಮಯವಾಗದೆಯೇ ತಿಳಿಯುತ್ತದೆ.

ಯಾವ ಜೀವನ ಪ್ರವೃತ್ತಿಯು ನಿಮಿತ್ತದ ಕಡೆಗೆ, ಜ್ಞೇಯಗಳ ಕಡೆಗೆ, ರಾಗ ಮತ್ತು ಅಲ್ಪಜ್ಞತೆಯ ಕಡೆಗೆ ವಾಲುತ್ತಿದೆ ಅವನು ತನ್ನ ಜ್ಞಾನಸ್ವಭಾವವನ್ನು ತಿಳಿದುಕೊಂಡಿಲ್ಲ ಮತ್ತು ಸಮ್ಯಕ್‌ಜ್ಞಾನರೂಪದ ಬೋಧಿಬೀಜವನ್ನು ಬಿತ್ತಿದಲ್ಲದೆ ಆತ್ಮನಿಗೆ ಪೋಷಣೆಯು ದೊರಕುವ ಸಾಧ್ಯತೆಯಿಲ್ಲ.

ಒಂದು ಪರಮಾಣುವು ದ್ರವ್ಯ, ಕ್ಷೇತ್ರ, ಕಾಲ ಮತ್ತು ಭಾವ ಮೊದಲಾದವುಗಳ ಸಂಖ್ಯೆಯ ತಾರ ತಮ್ಯತೆಯನ್ನು ತಿಳಿಸಿಕೊಡುವಲ್ಲಿ ನಿಮಿತ್ತವಿರುವುದರಿಂದ ಪರಮಾಣುವನ್ನು ಅವುಗಳ ಕರ್ತೃವೆಂದು ಹೇಳಲಾಗುತ್ತದೆ. ಅದನ್ನು ತಿಳಿದುಕೊಳ್ಳುವಂಥವನು ಆತ್ಮನಿದ್ದಾನೆ. ಆ ಸಮಸ್ತ ಭೇದಗಳನ್ನು ಒಂದು ಸಮಯದಲ್ಲಿ ತಿಳಿದುಕೊಳ್ಳುವಂಥ ಸಾಮರ್ಥ್ಯವು ನನ್ನ ಆತ್ಮನಲ್ಲಿದೆಯೆಂದು ತನ್ನ ಸಾಮರ್ಥ್ಯವನ್ನು ಒಪ್ಪಿಕೊಳ್ಳುವಂಥವನಿಗೆ ಧರ್ಮವಾಗುತ್ತದೆ. ಯಾರಿಗೆ ಇಂಥ ಸಾಮರ್ಥ್ಯದ ಪ್ರಜ್ಞೆಯಿಲ್ಲ ಅವರಿಗೆ ತಮ್ಮ ಆತ್ಮನ ಪ್ರಜ್ಞೆಯಿಲ್ಲ, ಅದರಿಂದ ಅವರಿಗೆ ಧರ್ಮವಾಗುವುದಿಲ್ಲ ಜ್ಞೇಯಗಳ ಸೂಕ್ಷ್ಮತೆಯಿಂದ ಜ್ಞಾನದ ಸೂಕ್ಷ್ಮತೆಯಿಲ್ಲ. ತನ್ನ ಮಹಿಮಾವಂತವಾದ ಜ್ಞಾನದ ಸೂಕ್ಷ್ಮತೆಯಿಂದ ಜ್ಞೇಯಗಳ ಸೂಕ್ಷ್ಮತೆಯ ವಿಚಾರವು ವ್ಯವಹಾರದಿಂದ ಬಂದುಹೋಗುತ್ತದೆ.

ಈಗ ಪರಮಾಣು ದ್ರವ್ಯದಲ್ಲಿ ಗುಣ-ಪರ್ಯಾಯದ ಸ್ವರೂಪದ ಕಥನ ಮಾಡುತ್ತಾರೆ,-

ಏಯರಸವಣ್ಣ ಗಂಧಂ ದೋಫಾಸಂ ಸದ್ದಕಾರಣಮಸದ್ದಂ ।
ಖಂಧಂತರಿದಂ ದವ್ವಂ ಪರಮಾಣುಂ ತಂ ವಿಯಾಣಾಹಿ ॥೮೧॥

**ಒಂದೇ ರಸ ವರ್ಣ ಗಂಧ ಮೇಣೆರಡು ಸ್ಪರ್ಶಯುಕ್ತ ಪರಮಾಣುವಿದೆಯದು ।**
**ಸ್ಕಂಧದೊಳಗಿದ್ದರು ದ್ರವ್ಯವಿದೆ ಮತ್ತದು ಶಬ್ದದ ಕಾರಣ, ಅಶಬ್ದವಿದೆ ॥೮೧॥**

ಒಂದು ಪರಮಾಣುವಿನಲ್ಲಿ ಒಂದು ರಸ, ಒಂದು ಗಂಧ, ಒಂದು ವರ್ಣ ಮತ್ತು ಎರಡು ಸ್ಪರ್ಶಗಳಿವೆ. ಶಬ್ದದ ಉತ್ಪತ್ತಿಯ ಕಾರಣವಿದೆ. ಆದರೆ ಸ್ವಯಂ ಏಕಪ್ರದೇಶಿ ಒಂದೇ ಇರುವುದರಿಂದ ಶಬ್ದದ ವ್ಯಕ್ತತೆಯ ಶಕ್ತಿಯಿದೆ ಮತ್ತು ಪುದ್ಗಲಸ್ಕಂಧದಿಂದ ಭಿನ್ನವಿದ್ದು ಅದನ್ನು ಪರಮಾಣುವೆಂದು ತಿಳಿಯುವುದು.

ಪರಮಾಣುವು ಸ್ಕಂಧದಲ್ಲಿ ಇದ್ದರು ಕೂಡ ತನ್ನತನದಿಂದ ಇದೆ. ಪರದ ಅಭಾವರೂಪದಿಂದ ಇದೆ. ತನ್ನ ಎರಡು ಸ್ಪರ್ಶ, ಒಂದು ಗಂಧ, ರಸ, ವರ್ಣದ ಭಾವದಲ್ಲಿ ಸ್ಥಿರವಿದೆ. ಇನ್ನೊಂದರ ಜತೆಯಲ್ಲಿ ಎಂದೂ ಏಕರೂಪವಾಗುವುದಿಲ್ಲ. ಇತರ ಸ್ಕಂಧಗಳ ಜತೆಯಲ್ಲಿ ಬೆರೆಯುವುದು ಮತ್ತು ಸ್ಥೂಲತೆಯನ್ನು ಧಾರಣ ಮಾಡಿದರೂ ಇತರ ಸ್ಥೂಲ ಸ್ಕಂಧದ ಕಾರಣದಿಂದ ಸ್ಥೂಲತೆಯನ್ನು ಧಾರಣ ಮಾಡುವುದಿಲ್ಲ. ಆದರೆ ತನ್ನ ಕಾರಣದಿಂದ ಸ್ಥೂಲತೆಯನ್ನು ಧಾರಣಮಾಡಿ ಏಕಾಕಿಯಾಗಿ ಉಳಿದುಕೊಂಡಿದೆ.

ಪರಮಾಣುವು ಸ್ಕಂಧದಲ್ಲಿ ಇದ್ದರು ಕೂಡ ಏಕಾಕಿಯಾಗಿ ತನ್ನಲ್ಲಿ ಕಾರ್ಯ ಮಾಡುತ್ತಲಿದೆಯೆಂಬುದು ಜಡಪರಮಾಣುವಿಗೆ ಪ್ರಜ್ಞೆಯಿಲ್ಲದಿದ್ದರು ಕೂಡ ಏಕಾಕಿಯಾಗಿ ತನ್ನ ಅಸ್ತಿತ್ವವನ್ನು ಕಾಯ್ದುಕೊಂಡಿದೆ ಎಂದಮೇಲೆ ಈ ಚೈತನ್ಯ ಪ್ರಭುವು ತನ್ನನ್ನು ಹಾಗೂ ಪರವನ್ನು ತಿಳಿದುಕೊಳ್ಳುವಂಥ ಸ್ವಭಾವವುಳ್ಳವನಿದ್ದಾನೆ. ಅವನು ಶರೀರ, ಕರ್ಮ ಮತ್ತು ರಾಗ ಮೊದಲಾದ ಪರದ ಜತೆಯಲ್ಲಿ ಒಂದಾಗಿ ಹೋಗಿದ್ದಾನೆಂದು ಮನ್ನಿಸುವುದರಲ್ಲಿ ನಿನ್ನ ಶೋಭೆಯು ಲೂಟಿಯಾಗುವುದು. ನೀನು ಶರೀರ, ಕರ್ಮ ಮೊದಲಾದವುಗಳ ಜತೆಯಲ್ಲಿ ಏಕಕ್ಷೇತ್ರಾವಗಾಹರೂಪದಿಂದ್ದರೂ ಎಂದೂ ಅವುಗಳ ಜತೆಯಲ್ಲಿ ಒಂದಾಗಿ ಹೋಗುವುದಿಲ್ಲ, ಹೋಗಿಲ್ಲ. ನೀನು ಯಾವಾಗಲೂ ಜ್ಞಾನಸ್ವಭಾವಿಯಿರುವೆ. ಮನೆಯಲ್ಲಿ ಬುದ್ಧಿಯಿಲ್ಲದ ಮನುಷ್ಯನು ಹಣ ಸಂಪಾದನೆಮಾಡಿ ತರುವುದು ಮತ್ತು ವಿದ್ಯಾವಂತನಾಗಿ ಎಂದರೆ ಬ್ಯಾರಿಸ್ಟರನಾಗಿ ಏನನ್ನೂ ಸಂಪಾದನೆ ಮಾಡದಿದ್ದರೆ ಇದು ಬ್ಯಾರಿಸ್ಟರನ ಸಲುವಾಗಿ ನಾಚಿಕೆಗೇಡುತನವಿದೆ.

ಅದೇ ಪ್ರಕಾರ ಅಚೇತನವಾದ ಪರಮಾಣುವು ಎಂದೂ ಪರದ ಜತೆಯಲ್ಲಿ ಒಂದಾಗಿ ಹೋಗುವುದಿಲ್ಲ ಮತ್ತು ನೀನು ಚೈತನ್ಯರಾಜನಾಗಿದ್ದುಕೊಂಡು ಶರೀರ, ಕರ್ಮ ಹಾಗೂ ರಾಗದ ಜತೆಯಲ್ಲಿ ಒಂದಾಗಿ ಹೋಗಿದ್ದೇನೆಂದು ಮನ್ನಿಸಿಕೊಂಡರೆ ನಿನ್ನ ಸಲುವಾಗಿ ಅದು ಲಜ್ಜೆ ತರುವಂತಿದೆ. ಬೇಕಾದರೆ ಹಾಗೆ ಅಜ್ಞಾನಿಯು ಮನ್ನಿಸಬಹುದು, ಆದರೆ ಅವನೆಂದೂ ಪರದ ಜತೆಯಲ್ಲಿ ಒಂದಾಗಿ ಹೋಗುವುದಿಲ್ಲ. ಯಾವಾಗಲೂ ಜ್ಞಾನ ಸ್ವಭಾವಿಯಿದ್ದಾನೆಂದು ಪರದಿಂದ ಭೇದಜ್ಞಾನ ಮಾಡಿ ತನ್ನ ಅಭೇದವಾದ ಜ್ಞಾನಸ್ವಭಾವದ ಮಹಿಮೆಯನ್ನು ತಂದುಕೊಳ್ಳುವುದು ಅದು ಧರ್ಮವಿದೆ.

ಇದು ಪುದ್ಗಲದ ಅಧಿಕಾರವಿದೆ, ಪುದ್ಗಲದಿಂದ ಆತ್ಮನು ಬೇರೆಯಿದ್ದಾನೆಂದು ಜ್ಞಾನಮಾಡಿಕೊಳ್ಳದಿದ್ದರೆ ಪುದ್ಗಲ ಮೊದಲಾದ ಪರ ಪದಾರ್ಥದ ಸಂಯೋಗದಿಂದ ಪೃಥಕ್ಕಾಗುವುದಿಲ್ಲ. ಧರ್ಮವು ಅವುಗಳಿಂದ ಪೃಥಕ್ಕಾಗುವ ಸಲುವಾಗಿ ಎಂದರೆ ಮುಕ್ತಿಯ ಸಲುವಾಗಿ ಇದೆ. ಆತ್ಮನಾದ ನಾನು ಜ್ಞಾನ ಸ್ವಭಾವಿಯಿದ್ದೇನೆ. ಪರಮಾಣು ಪರವಿದೆ. ರಾಗ-ದ್ವೇಷಗಳು

ಕ್ಷಣಿಕವಿವೆ. ಜ್ಞಾನ ಮತ್ತು ಆನಂದವು ನನ್ನ ವಸ್ತುವಿದೆ ಮತ್ತು ಅವು ನಿತ್ಯ ಧ್ರುವವಿವೆಯೆಂಬ ಪ್ರಜ್ಞೆಯು ಯಾವನಿಗೆ ಇಲ್ಲ ಅವನಿಗೆ ಧರ್ಮವಾಗುವುದಿಲ್ಲ.

**ಭಾವಾರ್ಥ :-** ಸ್ಕಂಧದ ತುಂಡುಗಳಾಗುತ್ತ ಆಗುತ್ತ ಕೊನೆಗೆ ಯಾವ ಚಿಕ್ಕದಾದ ಅಂಶವು ಉಳಿಯುತ್ತದೆ ಅದನ್ನು ಪರಮಾಣುವೆಂದು ಹೇಳುತ್ತಾರೆ. ಭಗವಂತರು ತಮ್ಮ ಅತೀಂದ್ರಿಯ ಜ್ಞಾನದ ಮೂಲಕ ಆ ಪರಮಾಣುವಿನಲ್ಲಿ ಪುದ್ಗಲದ ಐದು ರಸಗಳೊಗಿಂದ ಒಂದು ರಸ, ಐದು ವರ್ಣಗಳೊಳಗಿಂದ ಒಂದು ವರ್ಣ, ಎರಡು ಪ್ರಕಾರದ ಗಂಧಗಳೊಳಗಿಂದ ಒಂದು ಗಂಧ ಮತ್ತು ಶೀತ ಸ್ನಿಗ್ಧ, ಶೀತ ರೂಕ್ಷ , ಉಷ್ಣ ಸ್ನಿಗ್ಧ, ಅಥವಾ ಉಷ್ಣರೂಕ್ಷವೆಂದು ನಾಲ್ಕು ಸ್ಪರ್ಶದ ಯುಗಲಗಳೊಳಗಿಂದ ಒಂದು ಯುಗಲ ತಿಳಿಯುವುದು. ಈ ಪ್ರಕಾರ ಒಂದು ಪರಮಾಣುವಿನಲ್ಲಿ ಸ್ಪರ್ಶ ಎರಡು, ರಸ ಒಂದು, ಗಂಧ ಒಂದು, ವರ್ಣ ಒಂದು, ಹೀಗೆ ಐದು ಗುಣಗಳೆಂದು ತಿಳಿಯುವುದು.

ಆ ಪರಮಾಣುವು ಸ್ಕಂಧದ ಜತೆಯಲ್ಲಿ ಕೂಡಿ ಹೋಗುತ್ತದೆ ಆಗ ಶಬ್ದ ಪರ್ಯಾಯದ ಕಾರಣವಾಗುತ್ತದೆ ಮತ್ತು ಸ್ಕಂಧದಿಂದ ಪೃಥಕ್ ಆಗುವುದು ಮತ್ತು ಬೇರೆ ಉಳಿಯುವುದು ಆಗ ಏಕಾಕಿ ಪರಮಾಣುವಿನಿಂದ ಶಬ್ದವಾಗುವುದಿಲ್ಲ. ಮತ್ತೆ ಆ ಪರಮಾಣುವು ತನ್ನ ರೂಕ್ಷತೆ ಹಾಗೂ ಸ್ನಿಗ್ಧತೆಯ ಕಾರಣದಿಂದ ಅನೇಕ ಪರಮಾಣುಗಳ ಸ್ಕಂಧದಲ್ಲಿ ಒಂದಾಗಿ ಹೋಗುತ್ತದೆ. ಆದಾಗ್ಯೂ ಅದು ತನ್ನ ಏಕರೂಪಸ್ವಭಾವವನ್ನು ಬಿಟ್ಟುಕೊಡುವುದಿಲ್ಲ, ಏಕದ್ರವ್ಯರೂಪತೆಯನ್ನು ಎಂದೂ ಬಿಟ್ಟುಕೊಡುವುದಿಲ್ಲ.

ನೋಡಿರಿ, ಪರಮಾಣುವಂತೂ ಜಡವಿದೆ. ಪರಮಾಣುವು ಸ್ಥೂಲ ಸ್ಕಂಧದಲ್ಲಿ ಒಂದುಗೂಡುತ್ತದೆ ಆಗ ಅದರಲ್ಲಿ ಎರಡು ಸ್ಪರ್ಶ ಉಳಿಯುವುದಿಲ್ಲ, ಆದಾಗ್ಯೂ ಎರಡು ಸ್ಪರ್ಶ ಮೊದಲಾದ ಗುಣಗಳ ಮೂಲ ಸ್ವಭಾವವನ್ನು ಎಂದೂ ಬಿಡುವುದಿಲ್ಲ. ಪರಮಾಣುವು ಜಡವಿದ್ದು ಪ್ರಜ್ಞೆ ರಹಿತ ತತ್ತ್ವವಿದೆ. ಆದಾಗ್ಯೂ ತನ್ನ ಸ್ವತಂತ್ರತೆಯನ್ನು ಕಾಯ್ದುಯೊಂಡಿದೆ. ಅದೇ ಪ್ರಕಾರ ಈ ಆತ್ಮನು ಶರೀರ, ಕರ್ಮ ಮೊದಲಾದವುಗಳ ಸಂಯೋಗದಲ್ಲಿದ್ದರೂ ಕೂಡ ತನ್ನತನವನ್ನು ಎಂದೂ ಬಿಟ್ಟುಕೊಡುವುದಿಲ್ಲ. ಅಜ್ಞಾನಿಗಳಿಗೆ ಅದರ ಪ್ರಜ್ಞೆಯಿಲ್ಲದಿರುವುದರಿಂದ ಶರೀರ, ಮನಸ್ಸು, ವಾಣಿಗಳನ್ನು ತನ್ನವೆಂದು ಮನ್ನಿಸುತ್ತಾರೆ. ಶರೀರ ಮತ್ತು ಕರ್ಮದ ಕ್ರಿಯೆಯು ತನ್ನಿಂದ ಆಗುತ್ತದೆ ಮತ್ತು ಆ ಕ್ರಿಯೆಯಿಂದ ತನಗೆ ಶಾಂತಿ ಮತ್ತು ಸುಖವು ದೊರಕುತ್ತದೆಯೆಂಬ ಮನ್ನಣೆಯಿರುವ ಕಾರಣದಿಂದ ಶರೀರ ಮೊದಲಾದವುಗಳಿಂದ ತಮ್ಮನ್ನು ಪೃಥಕ್ಕಾಗಿ ಮನ್ನಿಸುವುದಿಲ್ಲ.

ಪರಮಾಣುವು ಸ್ಕಂಧದಲ್ಲಿ ಕೂಡುತ್ತದೆ ಆಗ ಪರ್ಯಾಯ ದೃಷ್ಟಿಯಿಂದ ಪರಮಾಣುವಿನಲ್ಲಿ ಸ್ಥೂಲತೆಯಿದೆ ಮತ್ತು ಸ್ಥೂಲ ಸ್ಕಂಧದಲ್ಲಿ ಕೂಡುತ್ತದೆ. ಆಗ ನಾಲ್ಕು ಸ್ಪರ್ಶದ ಯೋಗ್ಯತೆಯಿರುತ್ತದೆ. ಆದಾಗ್ಯೂ ದ್ರವ್ಯದೃಷ್ಟಿಯಿಂದಂತೂ ಪರಮಾಣುವು ಸೂಕ್ಷ್ಮ ಅತೀಂದ್ರಿಯವಿದೆ ಮತ್ತು ಎರಡು ಸ್ಪರ್ಶದ ಯೋಗ್ಯತೆಯುಳ್ಳದ್ದಿದೆ. ಹೀಗೆ ಪ್ರಜ್ಞೆಯಿಲ್ಲದಂಥ ತತ್ತ್ವವಾದ ಅತೀಂದ್ರಿಯ ಪರಮಾಣುವು ತನ್ನ ಸ್ವತಂತ್ರತೆಯನ್ನು ಕಾಯ್ದುಕೊಂಡು ಇದೆಯೆಂದು ಭಗವಂತರು ನೋಡಿದ್ದಾರೆ. ಆದುದರಿಂದ ಎಲೈ ಸೋದರನೇ ! ನೀನಂತೂ ಜ್ಞಾನಸ್ವಭಾವಿಯಿರುವೆ, ಚೇತನ ರಾಜನಿರುವೆ, ನೀನು ಪರ್ಯಾಯ ದೃಷ್ಟಿಯಿಂದ ಶರೀರ ಮತ್ತು ಕರ್ಮದ ಸಂಯೋಗವುಳ್ಳವನಿರುವೆ. ಪುಣ್ಯ-ಪಾಪದ ವಿಕಾರೀ ಭಾವವುಳ್ಳವನಿರುವೆ, ಆದಾಗ್ಯೂ ಸ್ವಭಾವ ದೃಷ್ಟಿಯಿಂದಂತೂ ನೀನು ಶರೀರ ಮತ್ತು ಕರ್ಮದಿಂದ ರಹಿತನಿರುವೆ. ಪುಣ್ಯ-ಪಾಪಗಳು ನಿನ್ನ ಸ್ವಭಾವದಲ್ಲಿ ಎಂದೂ ಪ್ರವೇಶಿಸಿಲ್ಲ. ನೀನಂತೂ ಜ್ಞಾನ ಸ್ವಭಾವಿಯಾಗಿ ಇದ್ದಕ್ಕಿದ್ದಂತೆಯೇ ಇರುವೆ. ಈ ಪ್ರಕಾರ ಶುದ್ಧ ಚೈತನ್ಯದ ದೃಷ್ಟಿ ಸ್ವೀಕರಿಸಿದರೆ ಧರ್ಮವಾಗುವುದೆಂದು ಹೇಳಿದ್ದಾರೆ.

ಅಚೇತನ ಪರಮಾಣುವು ತನ್ನ ಗುಣ-ಪರ್ಯಾಯವನ್ನು ಪೃಥಕ್ಕಾಗಿ ಉಳಿಸಿಕೊಂಡಿದೆಯೆಂಬುದರ ಅರಿವು

ಅದಕ್ಕೆ ಇಲ್ಲ. ಅದನ್ನು ತಿಳಿದುಕೊಳ್ಳುವವನಂತೂ ಆತ್ಮನಿದ್ದಾನೆ. ಪರಮಾಣುವು ತನ್ನ ಗುಣ-ಪರ್ಯಾಯವನ್ನು ಸ್ವತಂತ್ರ ಕಾಯ್ದುಕೊಂಡಿದೆಯೆಂದು ಆತ್ಮನು ಹೇಳುತ್ತಾನೆ. ಇದು ಪರಮಾಣುವಿನ ಸ್ವತಂತ್ರತೆಯನ್ನು ತಿಳಿಸಿದೆ. ಅದು ಕೇವಲ ಪರಮಾಣುವಿನ ಜ್ಞಾನ ಮಾಡಿಸುವ ಸಲುವಾಗಿ ಇಲ್ಲ, ಆದರೆ ಆತ್ಮನ ಜ್ಞಾನ ಮಾಡಿಸುವ ಸಲುವಾಗಿ ಇದೆಯೆಂಬುದನ್ನು ತಿಳಿದುಕೊಳ್ಳಬೇಕು.

ಶರೀರ, ಕರ್ಮದ ಸಂಯೋಗವಿದ್ದರೂ ಕೂಡ ಅವು ನನ್ನ ವಸ್ತುಗಳಲ್ಲ, ವಿಕಾರವು ನನ್ನ ಸ್ವರೂಪವಿಲ್ಲ, ನಾನಂತೂ ತಿಳಿದುಕೊಳ್ಳುವವನು-ನೋಡುವವನಿದ್ದೇನೆ, ತಿಳಿದುಕೊಳ್ಳುವುದು ಇದು ಒಂದೇ ನನ್ನ ಸ್ವರೂಪವಿದೆಯೆಂದು ಏಕರೂಪ ಜ್ಞಾತಾ-ದೃಷ್ಟಾ ಸ್ವಭಾವದ ಆದರ ಮಾಡುವುದು ಅದು ಧರ್ಮವಿದೆ.

ಚಪ್ಪಾಳೆ ಹೊಡೆಯುವುದರಿಂದ ಒಂದು ಅಂಗೈ ಇನ್ನೊಂದು ಅಂಗೈ ರೂಪವಾಗುವುದಿಲ್ಲ. ಅದೇ ರೀತಿಯಾಗಿ ಪರಮಾಣುವು ಕೂಡ ಸ್ಕಂಧದಲ್ಲಿದ್ದರೂ ಅದು ಇನ್ನೊಂದು ಪರಮಾಣು ರೂಪವಾಗುವುದಿಲ್ಲ. ಅದೇ ಪ್ರಕಾರ ಆತ್ಮನು ಶರೀರ ಮತ್ತು ಕರ್ಮದ ಪರಮಾಣುಗಳ ಜತೆಯಲ್ಲಿ ಏಕ ಕ್ಷೇತ್ರದಲ್ಲಿ ಕಂಡು ಬರುತ್ತಿದ್ದರೂ ಅವುಗಳ ಜತೆಯಲ್ಲಿ ಏಕರೂಪನಾಗಿ ಹೋಗುವುದಿಲ್ಲ, ಪರದಿಂದ ತ್ರಿಕಾಲ ಭಿನ್ನನಿದ್ದಾನೆಂಬ ಭೇದಜ್ಞಾನವನ್ನು ಇಲ್ಲಿ ಮಾಡಿಸಿದ್ದಾರೆ, ಧರ್ಮ ಮಾಡುವವನು ಆತ್ಮನಿದ್ದಾನೆ, ಅದಕ್ಕಾಗಿ ಅವನ ಸ್ವರೂಪವನ್ನು ಯಥಾರ್ಥವಾಗಿ ತಿಳಿದುಕೊಳ್ಳಬೇಕಾಗುವುದು. ಆತ್ಮನಿಗೆ ನಿಮಿತ್ತ ರೂಪದಿಂದ ಶರೀರ ಮತ್ತು ಕರ್ಮದ ಸಂಯೋಗವಿದ್ದರೂ ಮತ್ತು ಪರ್ಯಾಯದಲ್ಲಿ ವಿಕಾರವಿದ್ದರೂ ಒಳಗೆ ಆತ್ಮನು ಶುದ್ಧ ಏಕರೂಪನಿದ್ದಾನೆಂದು ಭೇದಜ್ಞಾನ ಮಾಡುವುದು ಅದು ಧರ್ಮವಿದೆ.

ಈಗ ಸಮಸ್ತ ಪುದ್ಗಲದ ಭೇದಗಳನ್ನು ಸಂಕ್ಷೇಪದಿಂದ ತಿಳಿಸಿಕೊಡುತ್ತಾರೆ-

**ಉವಭೋಜ್ಜಮಿಂದಿಏಹಿಂ ಯ ಇಂದಿಯಕಾಯಾ ಮಣೋ ಯ ಕಮ್ಮಾಣಿ ।**
**ಜಂ ಹವದಿ ಮುತ್ತಮಣ್ಣಂ ತಂ ಸವ್ವಂ ಪೊಗ್ಗಲಂ ಜಾಣೇ ॥೮೨॥**

**ಯಾವ ಇಂದ್ರಿಯಗಳಿಂದುಪಭೋಗ್ಯವಿಷಯ, ಇಂದ್ರಿಯಶರೀರಮನಸ್ಸು ಕರ್ಮ ।**
**ಇವಲ್ಲದೆ ಬೇರಾವ ಮೂರ್ತವಿವೆಯವೆಲ್ಲ ಪುದ್ಗಲವೆಂದು ತಿಳಿಯುವುದು ॥೮೨॥**

ಐದು ಇಂದ್ರಿಯಗಳಿಂದ ಐದು ಪ್ರಕಾರದ ವಿಷಯಗಳನ್ನು ಭೋಗಿಸುವುದರಲ್ಲಿ ಬರುತ್ತದೆ ಅದು ಜಡವಿದೆ ಮೂರ್ತಿಕವಿದೆ. ಸುಪ್ಪತ್ತಿಗೆಯನ್ನು ಸ್ಪರ್ಶ ಮಾಡಿದರೆ ಮೃದುವಾದ ಬೆಣ್ಣೆಯಂತೆ ಎನಿಸುತ್ತದೆ, ಸಕ್ಕರೆಯು ಸಿಹಿ ಎನಿಸುತ್ತದೆ, ಗಂಧವು ಸುಗಂಧ ಅಥವಾ ದುರ್ಗಂಧವೆನಿಸುತ್ತದೆ, ವರ್ಣವು ಕಪ್ಪು ಅಥವಾ ಬೆಳ್ಳಗೆ ಎನಿಸುತ್ತದೆ ಮತ್ತು ಶಬ್ದಗಳೆಲ್ಲವು ಜಡವಿವೆ, ಜಡದ ಅವಸ್ಥೆಯಿದೆ ಅದರಲ್ಲಿ ಸುಖವಿಲ್ಲ. ಅಜ್ಞಾನಿಗಳು ಬೇಸಿಗೆಯ ದಿವಸಗಳಲ್ಲಿ ತಂಪಾದ ಪಾನೀಯಗಳನ್ನು ಕುಡಿಯಬೇಕಾಗುವುದು, ಮೈಮೇಲೆ ತಳುವಾದ ಬಿಳಿಯ ಬಟ್ಟೆಗಳನ್ನು ಧರಿಸಬೇಕಾಗುವುದು, ಗಾಳಿ ಬೀಸಣಿಗೆಯನ್ನು ಓಡಿಸಬೇಕಾಗುವುದು ಎಂದರೆ ಮನುಷ್ಯನು ಹಾಯಾಗಿ ಇರಬಹುದೆಂದು ಮನ್ನಿಸುತ್ತಾನೆ. ಆದರೆ ಆ ಮನ್ನಣೆಯು ಭ್ರಾಂತಿಯಿಂದ ಕೂಡಿದ್ದಿದೆ.ಆತ್ಮನ ಸುಖವು ಆತ್ಮನಲ್ಲಿಯೇ ಇದೆ. ಜಡದಲ್ಲಿ ಆತ್ಮನ ಸುಖವಿಲ್ಲ. ಜಡದಲ್ಲಿ ಸುಖ ಮನ್ನಿಸುವವರಿಗೆ ಧರ್ಮದಿಂದ ಎಂದೂ ಶಾಂತಿಯಾಗುವುದಿಲ್ಲ. ಮತ್ತು ಸ್ಪರ್ಶ, ಜಿಹ್ವೆ, ಕರ್ಣ, ನಾಸಿಕ ಮತ್ತು ನೇತ್ರವೆಂದು ಐದು ಪ್ರಕಾರದ ಇಂದ್ರಿಯಗಳು ಕೂಡ ಜಡವಿವೆ. ಅವುಗಳಲ್ಲಿ ಕೂಡ ಸುಖವಿಲ್ಲ.

**ಪ್ರಶ್ನೆ :** ಅನ್ನವು ಹಳಸಿ ಹೋಗಿದ್ದರೆ ಅದು ಮೂಗಿನಿಂದ ತಿಳಿದು ಬರುತ್ತದೆ ಮತ್ತು ಅದನ್ನು ತಿನ್ನದಿರುವುದರಿಂದ ಆರೋಗ್ಯವು ಕೆಡುವುದಿಲ್ಲ. ಯಾವುದಾದರೂ ವಸ್ತುವಿನಲ್ಲಿ ಕ್ರಿಮಿಗಳು ಉತ್ಪನ್ನವಾಗಿದ್ದರೆ ಅದು ಕಣ್ಣುಗಳಿಂದ ತಿಳಿದುಬರುತ್ತದೆ

ಮತ್ತು ಅಂಥ ವಸ್ತುಗಳನ್ನು ಉಪಯೋಗಿಸದಿರುವುದರಿಂದ ಆ ಜೀವಗಳ ಮೇಲೆ ದಯೆ ಪಾಲಿಸಿದಂತಾಗುತ್ತದೆ. ಇಂದ್ರಿಯಗಳಿಂದ ದಯಾಧರ್ಮದಲ್ಲಿ ಇಷ್ಟಾದರೂ ಸಹಾಯವಾಗುತ್ತದೆಯಲ್ಲವೇ ?

**ಉತ್ತರ :** ಅಯ್ಯಾ ಸೋದರನೇ ! ತಿಳಿದುಕೊಳ್ಳುವವನಂತೂ ಆತ್ಮನಿದ್ದಾನೆ. ಇಂದ್ರಿಯಗಳು ಜಡವಿವೆ, ಆತ್ಮನು ಜಡಪದಾರ್ಥಗಳನ್ನು ಇಂದ್ರಿಯಗಳಿಂದ ತಿಳಿದುಕೊಳ್ಳುವುದಿಲ್ಲ, ತನ್ನಿಂದ ತಿಳಿದುಕೊಳ್ಳುತ್ತಾನೆ ಮತ್ತು ಯಾರಿಗೆ ಆತ್ಮನ ಅತೀಂದ್ರಿಯ ಸುಖದ ಸ್ವಾದದ ಅರಿವು ಇಲ್ಲ ಮತ್ತು ಅನುಭವವು ಇಲ್ಲ ಅಂಥ ಅಜ್ಞಾನೀ ಜೀವರುಗಳು ಪಂಚೇಂದ್ರಿಯಗಳ ವಿಷಯಗಳನ್ನು ಭೋಗಿಸುವಲ್ಲಿ ಸುಖವನ್ನು ಮನ್ನಿಸುತ್ತಾರೆ ಮತ್ತು ಅತೀಂದ್ರಿಯ ಆತ್ಮ ಸ್ವರೂಪದ ಅರಿವಿಲ್ಲದವರು ಐದು ಪ್ರಕಾರದ ದ್ರವ್ಯೇಂದ್ರಿಯಗಳಲ್ಲಿ ಸುಖವನ್ನು ಮನ್ನಿಸುತ್ತಾರೆ.

ಮತ್ತು ಮನುಷ್ಯ ಹಾಗೂ ತಿರ್ಯಂಚಗಳ ಔದಾರಿಕ ಶರೀರ, ದೇವ ಹಾಗೂ ನಾರಕಿಗಳ ವೈಕ್ರಿಯಿಕ ಶರೀರ, ಓರ್ವ ಮುನಿಯ ಮಸ್ತಕದೊಳಗಿಂದ ಧವಲ ಪ್ರತಿಮೆ ಹೊರಡುವ ಆ ಆಹಾರಕ ಶರೀರ, ಅಂಗೈಗಳ ಘರ್ಷಣದಿಂದ ಯಾವ ಉಷ್ಣತೆಯು ಹೊರಡುವುದು ಆ ತೈಜಸ ಶರೀರ ಮತ್ತು ಎಂಟು ಕರ್ಮಗಳ ಶರೀರವಾದ ಆ ಕಾರ್ಮಣ ಶರೀರವೆಂದು ಐದು ಪ್ರಕಾರದ ಶರೀರಗಳೆಲ್ಲವು ಜಡವಿವೆ, ಪುದ್ಗಲವಿವೆ. ಅಜ್ಞಾನೀ ಜೀವರುಗಳು ಶರೀರವನ್ನು ತಮ್ಮದೆಂದು ಮನ್ನಿಸಿ ಸಂಸಾರದಲ್ಲಿ ಪರಿಭ್ರಮಣ ಮಾಡುತ್ತಲಿದ್ದಾರೆ. ಜಡ ಮತ್ತು ಆತ್ಮನನ್ನು ಬೇರೆಯಾಗಿ ಮನ್ನಿಸಿದಲ್ಲದೆ ಧರ್ಮವಾಗುವುದಿಲ್ಲ. ಆತ್ಮನು ಅಶರೀರಿಯಿದ್ದಾನೆ, ಚೈತನ್ಯ ಸ್ವಭಾವಿಯಿದ್ದಾನೆ ಮತ್ತು ಶರೀರವು ಪ್ರತಿಪಕ್ಷಿಯಿದೆ. ಶರೀರವು ಅದು ಭಿನ್ನ ವಸ್ತುವಿದೆ ಅದರಿಂದ ಆತ್ಮನಿಗೆ ಕಲ್ಯಾಣವಾಗುವುದಿಲ್ಲ. ಹೀಗೆ ಪರದಿಂದ ಭೇದಜ್ಞಾನ ಮಾಡಿದರೆ ಧರ್ಮವಾಗುವುದು.

ಸಂಜ್ಞೀ ಜೀವರುಗಳಿಗೆ ಹೃದಯದಲ್ಲಿ ಎಂಟು ದಳದ ಕಮಲದ ಆಕಾರದಿಂದ ದ್ರವ್ಯ ಮನಸ್ಸು ಇರುತ್ತದೆ ಅದು ಜಡವಿದೆ. ಆತ್ಮನು ಅದರಿಂದ ಬೇರೆಯಿದ್ದಾನೆ. ದಯೆ-ದಾನ ಮೊದಲಾದ ಶುಭ ವಿಕಲ್ಪಗಳಿಂದ ಹಾಗೂ ಬೇರೆ ಮನೋಗತ ವಿಕಲ್ಪಗಳಿಂದ ಅದರಂತೆ ದ್ರವ್ಯ ಮನಸ್ಸಿನಿಂದ ಆತ್ಮನು ಪೃಥಕ್ ಇದ್ದಾನೆ ಆತ್ಮನು ಪರದಿಂದ ಭೇದಜ್ಞಾನ ಮಾಡುವುದು ಅದು ಧರ್ಮವಿದೆ.

'ಜ್ಞಾನ ಕ್ರಿಯಾಭ್ಯಾಮ್ ಮೋಕ್ಷಃ' ಆತ್ಮನ ಜ್ಞಾನ ಮತ್ತು ಅದರಲ್ಲಿ ಸ್ಥಿರಗೊಳ್ಳುವುದು ಅದು ಮೋಕ್ಷದ ಉಪಾಯವಿದೆ.

ಜ್ಞಾನಾವರಣ ಮೊದಲಾದ ಎಂಟು ಕರ್ಮಗಳು ಹಾಗೂ ಶರೀರ, ವಾಣಿ ಮೊದಲಾದ ನೋಕರ್ಮಗಳು ಪುದ್ಗಲವಿವೆ, ಆತ್ಮನಿಂದ ಪೃಥಕ್ ಇವೆ, ಆತ್ಮನಂತೂ ಕರ್ಮದಿಂದ ರಹಿತನಿದ್ದಾನೆ ಅದರಂತೆ ಅಮೂರ್ತಿಕನಿದ್ದಾನೆ. ಕರ್ಮ ಮತ್ತು ನೋಕರ್ಮಗಳು ಮೂರ್ತಿಕವಿವೆ. ಅದಕ್ಕಾಗಿ ಅವೆಲ್ಲವುಗಳನ್ನು ಹಾಗೂ ಧನ-ಸಂಪತ್ತು, ಮನೆ ಮೊದಲಾದ ಸಮಸ್ತ ಮೂರ್ತಿಕ ಪದಾರ್ಥಗಳು ಎಂದರೆ ಯಾವವು ಕಂಡುಬರುತ್ತವೆ ಅವೆಲ್ಲವುಗಳನ್ನು ಪುದ್ಗಲದ್ರವ್ಯವೆಂದು ತಿಳಿದುಕೊಳ್ಳು. ಇಲ್ಲಿ 'ಜಾಣೇ'ವೆಂದು ಹೇಳಿದೆ ಅದು ಪುದ್ಗಲದ ಸ್ವರೂಪವು ನಿನ್ನ ಸ್ವರೂಪವಿಲ್ಲವೆಂದು ತಿಳಿದುಕೊಂಡು ಭೇದಜ್ಞಾನ ಮಾಡಬೇಕೆಂದು ಬೇಳಲಾಗಿದೆ.

**ಭಾವಾರ್ಥ :-** ಐದು ಪ್ರಕಾರ ವಿಷಯಗಳು-ಪದಾರ್ಥಗಳು ಪುದ್ಗಲವಿವೆ. ಅವುಗಳಲ್ಲಿ ವಾಣಿ, ಪುಸ್ತಕ, ಮೂರ್ತಿ ಮೊದಲಾದವು ಪಂಚೇಂದ್ರಿಯಗಳ ಶುಭ ವಿಷಯಗಳಲ್ಲಿ ಬರುತ್ತವೆ. ಧರ್ಮಾತ್ಮ ಜೀವನಿಗೆ ನಿರ್ಬಲತೆಯ ಕಾರಣದಿಂದ ಶುಭರಾಗವು ಬರುತ್ತದೆ. ಆಗ ಮೂರ್ತಿಯ ಮೇಲೆ ಲಕ್ಷ್ಯವು ಹೋಗುತ್ತದೆ, ಆದರೆ ಮೂರ್ತಿ ಮೊದಲಾದ ಪದಾರ್ಥಗಳಲ್ಲಿ ಆತ್ಮನಿಲ್ಲ, ಅವುಗಳ ಕಾರಣದಿಂದ ಧರ್ಮ ಅಥವಾ ಜ್ಞಾನವಾಗುವುದಿಲ್ಲ.

ಮತ್ತು ಇಂದ್ರಿಯಗಳ ಅಶುಭ ವಿಷಯಗಳು ಕೂಡ ಅವು ಸ್ವಯಂ ತಮ್ಮ ಕಾರಣದಿಂದ ಬರುತ್ತವೆ, ಆದರೆ ಆತ್ಮನ ಕಾರಣದಿಂದ ಬರುವುದಿಲ್ಲ. ಮೋಟಾರು ಮೊದಲಾದ ವಾಹನಗಳು ಪುದ್ಗಲವಿದ್ದು ಅವನ್ನೂ ತನ್ನವೆಂದು ಮನ್ನಿಸುವುದು ಅದು ಕುಜಾತಿಯವನನ್ನು ಜಾತಿಯವನೆಂದು ಮನ್ನಿಸುವುದರ ಬರಾಬರಿಯಿದೆ. ವ್ಯಾಘ್ರದ ಮರಿಯನ್ನು ಬೆಕ್ಕಿನ ಮರಿಯೆಂದು ಮನ್ನಿಸುವುದು ಅದು ಮೂರ್ಖತೆಯಿದೆ. ಅದೇ ಪ್ರಕಾರ ಶರೀರ, ಮೋಟಾರು ಮೊದಲಾದ ಪುದ್ಗಲಗಳನ್ನು ಬಾಹ್ಯವೆಂದು ಹೇಳಿದರೆ ಅವನ್ನು ಆತ್ಮನವೆಂದು ಮನ್ನಿಸುವುದು ಅದು ಆತ್ಮನ ಕೊಲೆ ಮಾಡಿದುದರ ಬರಾಬರಿಯಿದೆ.

ಐದು ಪ್ರಕಾರದ ಇಂದ್ರಿಯಗಳು ಅಚೇತನವಿವೆ. ದ್ರವ್ಯ ಮನಸ್ಸು , ಎಂಟು ಪ್ರಕಾರದ ದ್ರವ್ಯಕರ್ಮಗಳು, ಶರೀರ ಮೊದಲಾದ ನೋಕರ್ಮಗಳು ಪುದ್ಗಲವಿವೆ ಮತ್ತು ಅವುಗಳಲ್ಲದೆ ಅನೇಕ ಪರ್ಯಾಯಗಳ ಉತ್ಪತ್ತಿಗೆ ಕಾರಣವಾದಂಥ ಅನಂತಾನಂತ ಪುದ್ಗಲವರ್ಗಣಾಗಳಿವೆ. ಅನಂತ ಅಸಂಖ್ಯಾಣು ವರ್ಗಣಾಗಳಿವೆ ಮತ್ತು ಅನಂತ ಸಂಖ್ಯಾಣು ವರ್ಗಣಾಗಳಿವೆ ಮತ್ತು ಒಂದು ಅವಿಭಾಗಿ ಪರಮಾಣುವಿದೆ, ಅವೆಲ್ಲವುಗಳನ್ನು ಪುದ್ಗಲವೆಂದು ತಿಳಿಯುವುದು.

ಅಜ್ಞಾನೀ ಜೀವನಿಗೆ ಹತ್ತಾರು ಲಕ್ಷ ರೂಪಾಯಿಗಳ ಸಂಪಾದನೆಯಾದರೆ ಅವನು ಹರ್ಷಿತನಾಗಿ ಹೋಗುತ್ತಾನೆ, ಆದರೆ ಅದು ಧೂಳದ ಸಮೂಹವಿದೆ. ಅದರಲ್ಲಿ ಸುಖವಿಲ್ಲ ಆ ಹತ್ತಾರು ಲಕ್ಷ ರೂಪಾಯಿಗಳು ನಿನ್ನ ಪುಣ್ಯಕರ್ಮದ ಉದಯದಿಂದ ನಿನ್ನ ಮನೆಯಲ್ಲಿ ಬಂದು ಬಿದ್ದುಕೊಂಡಿದೆ, ಆದರೆ ಅದು ಮಲಿನವಾದ ಮಲದಸಮಾನವಿದೆ. ಮನೆ ಮತ್ತು ಧನಗಳೆರಡೂ ಪುದ್ಗಲಗಳಿದ್ದು ಅವನ್ನು ನಿನ್ನ ಸ್ವರೂಪವೆಂದು ತಿಳಿದುಕೊಳ್ಳಬೇಡ.

ಶರೀರವು ಸರಿಯಾಗಿ ಇದ್ದರೆ ಧರ್ಮವಾಗುತ್ತದೆಯೆಂದು ಕೆಲವರು ಹೇಳುತ್ತಾರೆ. ಆದರೆ ಆ ಮನ್ನಣೆಯು ಭ್ರಾಂತಿಯಿಂದ ತುಂಬಿಕೊಂಡಿದೆ. ಶರೀರವು ನಿನ್ನ ಜಾತಿಯಿಂದ ಭಿನ್ನವಾದ ಜಾತಿಯದಿದೆ. ವಿಜಾತಿಯನ್ನು ತನ್ನ ಜಾತಿಯೆಂದು ಮನ್ನಿಸುವುದು ಅದು ಅಧರ್ಮವಿದೆ. ಈ ಜಗತ್ತಿನಲ್ಲಿ ದೃಶ್ಯಮಾನವಾದ ಯಾವ ಯಾವ ಪದಾರ್ಥಗಳು ಕಂಡುಬರುತ್ತವೆ ಅವೆಲ್ಲವು ಪುದ್ಗಲವಿವೆ ಮತ್ತು ಆತ್ಮನಿಂದ ಪೃಥಕ್ ಇವೆ. ಚೈತನ್ಯಮಯನಾದ ಭಗವಾನ ಆತ್ಮನು ಜ್ಞಾನಮಯನಿದ್ದಾನೆ. ಜ್ಞಾನದ ಪಿಂಡನೇ ಇದ್ದಾನೆ. ಯಾವ ಯಾವ ಪ್ರಕಾರದ ಪುದ್ಗಲಗಳಿವೆ ಅವೆಲ್ಲವನ್ನು ಅವನು ತಿಳಿದುಕೊಳ್ಳುತ್ತಾನೆ. ಆದರೆ ಪುದ್ಗಲವು ಪುದ್ಗಲದಲ್ಲಿದೆ, ಆತ್ಮನಲ್ಲಿ ಇಲ್ಲ. ಆತ್ಮನು ಆತ್ಮನಲ್ಲಿ ಇದ್ದಾನೆ. ಅವನು ಪುದ್ಗಲದಲ್ಲಿ ಇಲ್ಲವೆಂದು ಭೇದಜ್ಞಾನ ಮಾಡುವುದು ಅದು ಧರ್ಮವಿದೆ.

ಯಾರಿಗೆ ತಂದೆ-ತಾಯಿ ಮೊದಲಾದವರೆಲ್ಲರು ಇದ್ದಾರೆ, ಯಾವುದೇ ರೀತಿಯ ಕಲಂಕವಿಲ್ಲದ ಉತ್ತಮ ಜಾತಿಯವರಿದ್ದಾರೆ, ಒಳ್ಳೆಯ ದೊಡ್ಡ ಮನೆತನಸ್ಥರಿದ್ದಾರೆ ಅಂಥವರ ಉದರದಿಂದ ಜನ್ಮವೆತ್ತಿದ ಮಗುವನ್ನು ಸಜ್ಜಾತಿಯವನೆಂದು ಗಣಿಸಲಾಗುತ್ತಿದ್ದು ಅಂಥವರಿಗೆ ಧರ್ಮವಾಗುತ್ತದೆಯೆಂದು ಕೆಲವರು ಹೇಳುತ್ತಾರೆ. ಆದರೆ ಇದು ಅಜ್ಞಾನೀ ಜೀವರುಗಳ ತರ್ಕವಿದೆ, ವಿಚಾರಸರಣಿಯಿದೆ, ಅಂಥವರಿಗೆ ಹೀಗೆ ಹೇಳುತ್ತಾರೆ.

ಎಲೈ ಸೋದರನೇ ! ಅಂಥ ಶರೀರವು ಅನಂತಬಾರಿ ಪ್ರಾಪ್ತವಾಗಿದ್ದರೂ ಅದರಿಂದ ಧರ್ಮವು ಏಕಾಗಲಿಲ್ಲ?

ಸಜ್ಜಾತಿ ಶರೀರವಿಲ್ಲದವರಿಗೆ ಧರ್ಮ ಪ್ರಾಪ್ತಿಯಾದುದರ ಉದಾಹರಣೆಯನ್ನಾದರೂ ಕೊಡಿರಿ ?

ಅಯ್ಯಾ ಸೋದರನೇ ! ನಿನಗೆ ಶರೀರದ ನಿರ್ಣಯ ಮಾಡುವುದಿದೆಯೋ ಅಥವಾ ಆತ್ಮನ ನಿರ್ಣಯ ಮಾಡುವುದಿದೆಯೋ ? ಯಾರ ದೃಷ್ಟಿಯು ಶರೀರದ ಮೇಲೆ ಇರುತ್ತದೆ ಅವರ ದೃಷ್ಟಿಯು ಶರೀರದಿಂದ ರಹಿತವಾದಂಥ ಆತ್ಮನ ಮೇಲೆ ಇರುವುದಿಲ್ಲ. ತಿರ್ಯಂಚಗಳಿಗೆ ಇಂಥ ಸಂಯೋಗವೆಲ್ಲಿರುತ್ತದೆ ? ಆದಾಗ್ಯೂ ಅವು ಧರ್ಮದ ಪ್ರಾಪ್ತಿಮಾಡಿಕೊಳ್ಳುತ್ತವೆ. ನಾರಕಿಗಳು ಕೂಡ ಧರ್ಮದ ಪ್ರಾಪ್ತಿಮಾಡಿಕೊಳ್ಳುತ್ತಾರೆ. ಆದುದರಿಂದ ಶರೀರದ ಮೇಲಿರುವ

ದೃಷ್ಟಿಯನ್ನು ಬಿಟ್ಟುಕೊಡು ಅವೆಲ್ಲವೂ ಪುದ್ಗಲದ ಪರ್ಯಾಯವಿದ್ದು ನೀನು ಆತ್ಮನಿರುವೆ, ಅದರಿಂದ ಭಿನ್ನನಿರುವೆನೆಂದು ಜ್ಞಾನಮಾಡಿಕೊಳ್ಳುವುದು ಅದು ಧರ್ಮವಿದೆ.

ಕೇವಲೀಭಗವಂತರು ಈ ಜಗತ್ತಿನಲ್ಲಿ ಧರ್ಮ ಮತ್ತು ಅಧರ್ಮವೆಂದು ಎರಡು ಅರೂಪಿ ಪದಾರ್ಥಗಳನ್ನು ನೋಡಿದ್ದಾರೆ. ಅವುಗಳಿಂದ ಆತ್ಮನು ಭಿನ್ನನಿದ್ದಾನೆಂದು ಭೇದಜ್ಞಾನ ಮಾಡುವ ಸಾಮರ್ಥ್ಯವು ಆತ್ಮನಲ್ಲಿ ಇದೆ. ಆತ್ಮನ ಜ್ಞಾನವು ಸ್ವ-ಪರ ಪ್ರಕಾಶಕವಿದೆ. ತನ್ನನ್ನು ತಿಳಿದುಕೊಂಡರೆ ಆರೂ ದ್ರವ್ಯಗಳನ್ನು ತಿಳಿದುಕೊಳ್ಳುತ್ತಾನೆ. ಷಡ್‌ದ್ರವ್ಯ ಸಹಿತ ಆತ್ಮನ ಪ್ರತೀತಿ ಮಾಡುವಂಥದು ಚೈತನ್ಯದ ಸ್ವಭಾವವಿದೆ.

ಈಗ ಮೊದಲು ಧರ್ಮದ್ರವ್ಯದ ಸ್ವರೂಪ ಹೇಳುತ್ತಾರೆ -

ಧಮ್ಮತ್ಥಿಕಾಯಮರಸಂ ಅವಣ್ಣಗಂಧಂ ಅಸದ್ದಮಪ್ಫಾಸಂ ।
ಲೋಗಾಗಾಢಂ ಪುಟ್ಠಂ ಪಿಹುಲಮಸಂಖಾದಿಯಪದೇಸಂ ॥೮೩॥

**ಧರ್ಮಾಸ್ತಿಕಾಯ ಅಸ್ಪರ್ಶ ಅರಸ ಅಗಂಧ ಅವರ್ಣಮೇಣಶಬ್ದವಿದೆ ।**
**ಕೂರ್ಮೆಯಿಂ ಲೋಕವ್ಯಾಪಕ, ಅಖಂಡ, ವಿಶಾಲ ಮತ್ತಸಂಖ್ಯಾತ ಪ್ರದೇಶಿಯಿದೆ ॥೮೩॥**

ಧರ್ಮದ್ರವ್ಯವು ಅಸಂಖ್ಯ ಪ್ರದೇಶಿಯಿದೆ. ಆತ್ಮನು ಅಸಂಖ್ಯ ಪ್ರದೇಶಿ ಅರೂಪಿ ಚೇತನಕಾಯವುಳ್ಳವನಿದ್ದಾನೆ ಮತ್ತು ಧರ್ಮದ್ರವ್ಯವು ಅಸಂಖ್ಯ ಪ್ರದೇಶಿ ಅರೂಪಿ ಅಚೇತನ ಕಾಯವುಳ್ಳದ್ದಿದೆ. ಎರಡರ ಪ್ರದೇಶಗಳು ಸಮಾನವಿವೆ. ಪ್ರತಿಯೊಬ್ಬ ಆತ್ಮನ ಪ್ರದೇಶಗಳು ಸಮಾನವಿವೆ. ಆದರೆ ಅದರಲ್ಲಿ ಪ್ರದೇಶಗಳು ಸಂಕೋಚ ವಿಸ್ತಾರ ಹೊಂದುತ್ತವೆ. ಆದಾಗ್ಯೂ ಪ್ರದೇಶಗಳ ಕ್ಷೇತ್ರವು ಚಿಕ್ಕದು-ದೊಡ್ಡದು ಆಗುವುದಿಲ್ಲ. ಇಲ್ಲಿ ಧರ್ಮದ್ರವ್ಯದ ಮಾತುನಡೆಯುತ್ತಿದೆ. ಅದಕ್ಕೆ ಅಸಂಖ್ಯ ಪ್ರದೇಶಗಳಿವೆ. ಐದು ರಸ, ಐದು ವರ್ಣ, ಎರಡು ಗಂಧ, ಎಂಟು ಸ್ಪರ್ಶ ರಹಿತವಿದೆ ಮತ್ತು ಶಬ್ದ ಪರ್ಯಾಯದಿಂದ ರಹಿತವಿದೆ. ಸಮಸ್ತ ಲೋಕದಲ್ಲಿ ವ್ಯಾಪಿಸಿಕೊಂಡಿದೆ. ಜಡ-ಚೇತನಗಳು ಗಮನಮಾಡಿದರೆ ಅವುಗಳಿಗೆ ನಿಮಿತ್ತವಾಗುತ್ತದೆ. ತನ್ನ ಪ್ರದೇಶಗಳ ಸ್ಪರ್ಶದಿಂದ ಅಸಂಖ್ಯಾತವಿದೆ ಮತ್ತು ಸ್ವಭಾವದಿಂದಲೇ ಇಡೀಲೋಕದಲ್ಲಿ ವಿಸ್ತರಿಸಿಕೊಂಡಿದೆ. ಏಕೆಂದರೆ ಧರ್ಮದ್ರವ್ಯವು ನಿಶ್ಚಯದಿಂದ ಅಖಂಡಿತವಿದ್ದರೂಕೂಡ ವ್ಯವಹಾರದಿಂದ ಅಸಂಖ್ಯ ಪ್ರದೇಶಿಯಿದೆ. ಕೆಲವರಿಗೆ ಧರ್ಮದ್ರವ್ಯದ ವಿಚಾರಕೂಡ ಇಲ್ಲ ಹೆಸರನ್ನು ಕೂಡ ಕೇಳಿರಲಿಕ್ಕಿಲ್ಲ.

**ಪ್ರಶ್ನೆ :-** ಧರ್ಮದ್ರವ್ಯದ ಕಲ್ಪನೆ ಮಾಡುವುದರ ಅವಶ್ಯಕತೆಯಾದರೂ ಏನಿದೆ ?

**ಉತ್ತರ :-** ಅದು ಕಲ್ಪನೆಯಲ್ಲ, ಆದರೆ ಧರ್ಮದ್ರವ್ಯವು ಅನಾದಿ ಅನಂತ ಅರೂಪಿ ವಸ್ತುವಿದೆ. ಅದು ಜೀವ-ಪುದ್ಗಲಗಳ ಗತಿ ಮಾಡುವಲ್ಲಿ ನಿಮಿತ್ತವಾಗುತ್ತದೆ. ಹಾಗೆ ಭಗವಂತರು ನೋಡಿದ್ದಾರೆ ಮತ್ತು ಅದನ್ನು ತಿಳಿದುಕೊಳ್ಳುವವನು ಕೂಡ ಆತ್ಮನಿದ್ದಾನೆ. ಆರು ದ್ರವ್ಯಗಳಲ್ಲಿ ಒಂದು ದ್ರವ್ಯವನ್ನು ಕೂಡ ನ್ಯೂನ ತಿಳಿದುಕೊಂಡರೆ ಜ್ಞಾನವು ಪರಿಪೂರ್ಣವೆಂದು ಸಿದ್ಧವಾಗುವುದಿಲ್ಲ. ಕೇವಲೀ ಭಗವಂತರು ಪ್ರತ್ಯಕ್ಷವಾಗಿ ತಿಳಿದಿದ್ದಾರೆ ಮತ್ತು ಛದ್ಮಸ್ಥ ಜೀವನು ರಾಗ ರಹಿತವಾದ ಜ್ಞಾನ ಸ್ವಭಾವದ ಆಶ್ರಯದಿಂದ ಯಾವ ಸಮ್ಯಕ್‌ಜ್ಞಾನವು ಪ್ರಕಟವಾಗುತ್ತದೆ ಆ ಜ್ಞಾನದ ಅನುಮಾನದಿಂದ ಧರ್ಮದ್ರವ್ಯವನ್ನು ನಿಶ್ಚಿತ ಮಾಡುತ್ತಾರೆ, ಅದು ಕೇವಲ ಕಲ್ಪನೆಯಲ್ಲ, ಆದರೆ ಯಥಾರ್ಥ ವಸ್ತುವಿದೆ.

ಅನ್ಯಮತಗಳಲ್ಲಿ ಜೀವ, ಪುದ್ಗಲ, ಆಕಾಶ, ಕಾಲವೆಂಬ ಹೆಸರುಗಳು ಬರುತ್ತವೆ. ಆದರೆ ಧರ್ಮ, ಅಧರ್ಮದ್ರವ್ಯಗಳ ಹೆಸರು ಬರುವುದಿಲ್ಲ ಅಥವಾ ಆರು ದ್ರವ್ಯಗಳ ಯಥಾರ್ಥ ಸ್ವರೂಪವು ಸರ್ವಜ್ಞರನ್ನು ಹೊರತುಪಡಿಸಿ ಬೇರೆ ಎಲ್ಲಿಯೂ ಇಲ್ಲ, ಸರ್ವಜ್ಞರನ್ನು ಹೊರತುಪಡಿಸಿ ಪರಿಪೂರ್ಣವಾಗಿ ತಿಳಿದುಕೊಳ್ಳುವ ಸಾಮರ್ಥ್ಯವು ಯಾರಲ್ಲಿಯೂ

ಇರುವುದಿಲ್ಲ. ಸರ್ವಜ್ಞರನ್ನು ಮನ್ನಿಸುವಂಥ ಅಲ್ಪಜ್ಞ ಜೀವರುಗಳು ಕೂಡ ತಮ್ಮ ಸ್ವಸಂವೇದ ಜ್ಞಾನದ ಸಾಮರ್ಥ್ಯದಿಂದ ಮತ್ತು ಅನುಮಾನದಿಂದ ಧರ್ಮದ್ರವ್ಯವನ್ನು ತಿಳಿದುಕೊಳ್ಳುತ್ತಾರೆ.

ಯಾವ ಪ್ರಕಾರ ಎಳ್ಳಿನಲ್ಲಿ ಎಣ್ಣೆಯು ವ್ಯಾಪಿಸಿಕೊಂಡಿದೆ, ಆತ್ಮನಲ್ಲಿ ಜ್ಞಾನವು ವ್ಯಾಪಿಸಿಕೊಂಡಿದೆ, ಸಿದ್ಧಕ್ಷೇತ್ರದಲ್ಲಿ ಸಿದ್ಧರು ವ್ಯಾಪಿಸಿಕೊಂಡಿದ್ದಾರೆ, ಅಭವ್ಯಜೀವರುಗಳಲ್ಲಿ ರಾಗ ಮತ್ತು ಮಿಥ್ಯಾತ್ವವು ವ್ಯಾಪಿಸಿಕೊಂಡಿದೆ ಅದೇ ಪ್ರಕಾರ ಇಡೀ ಲೋಕದಲ್ಲಿ ಅಚೇತನ ಅರೂಪಿಧರ್ಮದ್ರವ್ಯವು ವ್ಯಾಪಿಸಿಕೊಂಡಿದೆ. ಅದು ಆತ್ಮನಿಂದ ಭಿನ್ನವಿದೆ, ಆತ್ಮನ ಜ್ಞಾನದ ಜ್ಞೇಯವಿದೆ, ಆತ್ಮನ ಜ್ಞಾನವಾದರೆ ಅದರ ಜ್ಞಾನವಾಗುತ್ತದೆ.

ಈಗ ಧರ್ಮದ್ರವ್ಯದ ಸ್ವರೂಪವನ್ನು ಒಂದಿಷ್ಟು ವಿಶೇಷತೆಯಿಂದ ತಿಳಿಸಿಕೊಡುತ್ತಾರೆ -

**ಅಗುರುಗಲಘುಗೇಹಿಂ ಸಯಾ ತೇಹಿಂ ಅಣಂತೇಹಿಂ ಪರಿಣದಂ ಣಿಚ್ಚಂ ।**
**ಗದಿಕಿರಿಯಾಜುತ್ತಾಣಂ ಕಾರಣಭೂದಂ ಸಯಮಕಜ್ಜಂ ॥೮೪॥**

**ಅದು ಅನಂತ ಅಗುರುಲಘುಗಳರೂಪದಿಂ ಸದೈವ ಪರಿಣಮಿಸುವುದು ।**
**ಅದು ನಿತ್ಯ ಗತಿಕ್ರಿಯೆಯುಕ್ತ ಕಾರಣಭೂತಮೇಣ್‌ಸ್ವಯಮಕಾರ್ಯವಿದೆ ॥೮೪॥**

ಪ್ರತಿಯೊಂದು ದ್ರವ್ಯದಲ್ಲಿ ಅಗುರುಲಘುನಾಮದ ಗುಣವಿದೆ. ಅದು ಧರ್ಮದ್ರವ್ಯದಲ್ಲಿ ಕೂಡ ಇದೆ. ಆದುದರಿಂದ ಧರ್ಮದ್ರವ್ಯದಲ್ಲಿ ಸಮಯ ಸಮಯಕ್ಕೆ ತನ್ನ ಪರ್ಯಾಯದೊಳಗೆ ಅನಂತ ಅವಿಭಾಗ ಪ್ರತಿಚ್ಛೇದರೂಪದ ಪರಿಣಮನವು ಆಗುತ್ತಿರುತ್ತದೆ ಮತ್ತು ಅದು ಟಂಕೋತ್ಕೀರ್ಣ ಅವಿನಾಶಿಯಿದೆ, ಅಲ್ಲದೆ ಜೀವ-ಪುದ್ಗಲಗಳು ಗಮನ ಮಾಡುವಲ್ಲಿ ಅವಕ್ಕೆ ನಿಮಿತ್ತ ಕಾರಣವಿದೆ. ಗತಿ ಹೇತುತ್ವಗುಣವು ತನ್ನದಿದೆ, ಜೀವ-ಪುದ್ಗಲದಲ್ಲಿ ನಿಮಿತ್ತವಿದೆ. ಯಾವ ಈಶ್ವರನು ಧರ್ಮದ್ರವ್ಯವನ್ನು ಉತ್ಪನ್ನ ಮಾಡಿಲ್ಲ, ಆದರೆ ಅದು ಅನಾದಿ ಅನಂತವಿದೆ, ಸಿದ್ಧ ಭಗವಂತರು ಜಗತ್ತಿನಿಂದ ಉದಾಸೀನರಿದ್ದಾರೆ. ಅವರು ಯಾವುದೇ ಜೀವನಿಗೆ ತಮ್ಮ ಸ್ಮರಣೆ ಮಾಡಬೇಕೆಂದು ಹೇಳುವುದಿಲ್ಲ. ಅದರಂತೆ ಯಾವ ಜೀವಕ್ಕೂ ಸಹಾಯ ಮಾಡುವುದಿಲ್ಲ. ಆದರೆ ಯಾವ ಜೀವನು ಸ್ವಯಂ ಸ್ಮರಣೆ ಮಾಡುತ್ತಾನೆ ಅವನಿಗೆ ಸಿದ್ಧಭಗವಂತರು ಸ್ಮರಣೆಯಲ್ಲಿ ನಿಮಿತ್ತರಿದ್ದಾರೆ ಅದೇ ಪ್ರಕಾರ ಧರ್ಮದ್ರವ್ಯವು ಉದಾಸೀನವಿದ್ದು ಅದು ಯಾವುದೇ ಇತರ ಜೀವ-ಪುದ್ಗಲಗಳಿಗೆ ಗಮನ ಮಾಡಿಸುವುದಿಲ್ಲ, ಆದರೆ ಯಾವುದು ಸ್ವಯಂ ಗಮನ ಮಾಡುತ್ತದೆ ಅದಕ್ಕೆ ನಿಮಿತ್ತವೆನಿಸಿಕೊಳ್ಳುತ್ತದೆ. ಧರ್ಮದ್ರವ್ಯದಲ್ಲಿ ಗತಿಹೇತುತ್ವ, ಅರೂಪಿತನ, ಅಚೇತನತೆ, ಅಸ್ತಿತ್ವ, ವಸ್ತುತ್ವ ಮೊದಲಾದ ಅನಂತ ಗುಣಗಳಿವೆ.

**ಭಾವಾರ್ಥ :-** ಧರ್ಮದ್ರವ್ಯವು ಯಾವಾಗಲೂ ಅವಿನಾಶಿ, ಟಂಕೋತ್ಕೀರ್ಣವಾದ ವಸ್ತುವಿದೆ ಆತ್ಮನು ಕೂಡ ಟಂಕೋತ್ಕೀರ್ಣ ಅವಿನಾಶಿಯಿದ್ದಾನೆ. ಆದರೆ ಆತ್ಮನು ಚೇತನನಿದ್ದಾನೆ ಮತ್ತು ಧರ್ಮದ್ರವ್ಯವು ಅಚೇತನವಿದೆ, ಅದು ಜಡವಿದ್ದರು ಕೂಡ ಉತ್ಪಾದ, ವ್ಯಯ, ಧ್ರುವ ಸಹಿತವಿದೆ. ಅಗುರುಲಘುಗುಣದಿಂದ ಷಟ್‌ಗುಣಹಾನಿ ವೃದ್ಧಿರೂಪದ ಪರಿಣಮನ ಮಾಡುತ್ತಿರುತ್ತದೆ.

ಧರ್ಮದ್ರವ್ಯವು ತನ್ನ ಅವಸ್ಥೆಯೊಡನೆ ಅನಾದಿ ಅನಂತ ಇದ್ದಕ್ಕಿದ್ದಹಾಗೆಯೇ ಇರುವುದರಿಂದ ಧರ್ಮದ್ರವ್ಯವು ಕಾರ್ಯರೂಪವಿಲ್ಲ. ಯಾವುದನ್ನಾದರೂ ಉತ್ಪನ್ನಮಾಡಿದ್ದರೆ ಕಾರ್ಯವೆಂದು ಹೇಳಬಹುದಾಗಿತ್ತು. ಆದರೆ ಧರ್ಮದ್ರವ್ಯವು ಅನಾದಿಯಿಂದ ಇದೆ, ಯಾವುದರಿಂದಲೂ ಉತ್ಪನ್ನವಾಗಿಲ್ಲ. ಆದುದರಿಂದ ಅದು ಕಾರ್ಯರೂಪವಿಲ್ಲ, ಧರ್ಮದ್ರವ್ಯವು ಗತಿಯಲ್ಲಿ ನಿಮಿತ್ತವಾಗುತ್ತಿರುವುದರಿಂದ ಕಾರಣರೂಪವಿದೆ, ಆದರೆ ಕಾರ್ಯರೂಪವಿಲ್ಲ.

ಈ ಧರ್ಮಾಸ್ತಿಕಾಯವು ಯಾವ ಪ್ರಕಾರ ಅನಾದಿ ಅನಂತವಿದೆ ಅದೇ ಪ್ರಕಾರ ನೀನು ಕೂಡ ಅನಾದಿ ಅನಂತ ಇರುವೆನೆಂದು ನಿರ್ಣಯ ಮಾಡು. ಅಜ್ಞಾನಿಯು ನನ್ನ ಜ್ಞಾನವು ಪರದಿಂದ ಆಗುತ್ತದೆಯೆಂದು ಹೇಳುತ್ತಾನೆ. ಆದರೆ ಇಲ್ಲಿ ಜಡ ಪದಾರ್ಥಗಳು ನಮ್ಮ ಅಸ್ತಿತ್ವವನ್ನು ನೀನು ನಿರ್ಣಯ ಮಾಡಿರುವೆಯೆಂದು ಹೇಳುತ್ತವೆ. ನಮಗೆ ನಮ್ಮ ಅರಿವು ಇಲ್ಲ ನಮ್ಮ ಸಲುವಾಗಿ ನೀನು ಇಲ್ಲ ನಿನ್ನ ಸಲುವಾಗಿ ನಾವು ಇಲ್ಲ. ಹೀಗೆ ಜಡ ಪದಾರ್ಥಗಳಿಂದ ಆತ್ಮನು ಭಿನ್ನನಿದ್ದಾನೆಂದು ಭೇದಜ್ಞಾನ ಮಾಡಬೇಕಾಗುವುದು.

ಮತ್ತೆ ಯಾವ ಪ್ರಕಾರ ಸಿದ್ಧ ಭಗವಂತರು ಅಕ್ರಿಯರಿದ್ದಾರೆ ಅವರಿಗೆ ರಾಗವಾಗುವುದಿಲ್ಲ ಯಾರಿಗೂ ಒಳಿತು ಕೆಡುಕು ಮಾಡುವುದಿಲ್ಲ, ಅದೇ ಪ್ರಕಾರ ನಿನ್ನ ಸ್ವಭಾವವು ಕೂಡ ಹೀಗೆ ಅಕ್ರಿಯವಿದೆಯೆಂಬ ಮಾತು ಬರುತ್ತಿರುವಂತೆಯೇ ಅಜ್ಞಾನಿಗಳು ಹೇಳುತ್ತಾರೆ. ಇಂಥ ಸಿದ್ಧರು ನಮ್ಮನ್ನು ನೋಡುವುದಿಲ್ಲ, ನಮ್ಮ ಹಾಗೂ ಇತರರ ಒಳಿತು ಮಾಡುವಂತೆ ಸಿದ್ಧರು ಇರಬೇಕಾಗುವುದು. ಹೀಗೆ ಒಳಿತು-ಕೆಡುಕು ಮಾಡುವ ಅಭಿಮಾನಿಯಾದ ಜೀವರುಗಳು ಸಿದ್ಧರ ಅದರಂತೆ ತಮ್ಮ ಸ್ವರೂಪವನ್ನು ಒಪ್ಪಿಕೊಳ್ಳುವುದಿಲ್ಲ. ಅಜ್ಞಾನೀ ಜೀವರುಗಳು ರಾಗ-ದ್ವೇಷ ಮಾಡುತ್ತಾರೆ, ಆದರೆ ಪರದ ಒಳಿತು-ಕೆಡುಕು ಮಾಡುವ ಸಾಮರ್ಥ್ಯವು ಯಾವಜೀವದಲ್ಲಿಯೂ ಇಲ್ಲ. ತಮ್ಮ ಸ್ವಭಾವವಂತೂ ಜ್ಞಾನವೇ ಇದೆ. ಆ ಜ್ಞಾನದಲ್ಲಿ ತನ್ನನ್ನು ತಿಳಿದುಕೊಂಡರೆ ಪರವಾದಂಥ ಧರ್ಮಾಸ್ತಿಕಾಯ ಪದಾರ್ಥವನ್ನು ಹೇಗೆ ಇದೆ ಹಾಗೆ ತಿಳಿದುಕೊಳ್ಳುವುದು ಅದು ಧರ್ಮವಿದೆ.

ಸರ್ವಜ್ಞಭಗವಂತರು ನೋಡಿರುವ ಪದಾರ್ಥಗಳಲ್ಲಿ ಧರ್ಮಾಸ್ತಿಕಾಯವೆಂಬ ಹೆಸರಿನ ಒಂದು ಪದಾರ್ಥವಿದೆ. ಇದು ಅಧ್ಯಾತ್ಮ ಗ್ರಂಥವಿರುವುದರಿಂದ ವಿಶೇಷಯುಕ್ತಿಯಿಂದ ಸಿದ್ಧಮಾಡಲಾಗಿಲ್ಲ. ಚೇತನ ಮತ್ತು ಪುದ್ಗಲಪದಾರ್ಥಗಳು ತಮ್ಮ ಕಾರಣದಿಂದ ಗಮನ ಮಾಡುತ್ತವೆ, ಆಗ ಅದರಲ್ಲಿ ಬೇರೆ ನಿಮಿತ್ತ ಕಾರಣವು ಇರಬೇಕಾಗುವುದು. ಕಾರಣದಲ್ಲಿ ಒಂದು ನಿಮಿತ್ತಕಾರಣ ಮತ್ತು ಇನ್ನೊಂದು ಉಪಾದಾನಕಾರಣವೆಂದು ಎರಡು ಪ್ರಕಾರಗಳಿವೆ. ತನ್ನ ಕಾರಣದಿಂದ ಕ್ಷೇತ್ರಾಂತರವಾಗುವುದು ಅದು ಉಪಾದಾನವಿದೆ ಮತ್ತು ಅದರಲ್ಲಿ ಧರ್ಮದ್ರವ್ಯವು ನಿಮಿತ್ತವಿದೆ. ಯಾವ ಪ್ರಕಾರ ನಿಶ್ಚಯವಿದ್ದರೆ ಅಲ್ಲಿ ವ್ಯವಹಾರವಿರುತ್ತದೆ ಅದೇ ಪ್ರಕಾರ ಉಪಾದಾನ ಕಾರಣವಿರುವಲ್ಲಿ ನಿಮಿತ್ತಕಾರಣವಿರುತ್ತದೆ.

ಈಗ ಧರ್ಮದ್ರವ್ಯವು ಗತಿಯಲ್ಲಿ ನಿಮಿತ್ತಕಾರಣವಿದೆಯೆಂಬುದನ್ನು ದೃಷ್ಟಾಂತದಿಂದ ತಿಳಿಸಿಕೊಡುತ್ತಾರೆ -

ಉದಯಂ ಜಹ ಮಚ್ಛಾಣಂ ಗಮಣಾಣುಗ್ಗಹಕರಂ ಹವದಿ ಲೋಏ ।
ತಹ ಜೀವಪೋಗ್ಗಲಾಣಂ ಧಮ್ಮಂ ದವ್ವಂ ವಿಯಾಣಾಹಿ ।।೮೫।।

**ಹೇಗೆ ಲೋಕದಲ್ಲಿ ನೀರು ಮೀನುಗಳಿಗೆ ಗಮನದಲನುಗ್ರಹ ಮಾಡುವುದು ।**
**ಹಾಗೆ ಧರ್ಮದ್ರವ್ಯ ಜೀವ-ಪುದ್ಗಲಗಳಿಗೆ ಗಮನದಲನುಗ್ರಹ ಮಾಡುವುದು ।।೮೫।।**

ಆತ್ಮನು ತನ್ನಲ್ಲಿ ಇದ್ದುಕೊಂಡು ಎಲ್ಲವನ್ನೂ ತಿಳಿದುಕೊಳ್ಳಬಹುದಾದಷ್ಟು ಸಾಮರ್ಥ್ಯವುಳ್ಳವನಿದ್ದಾನೆ. ಯಾವ ಪ್ರಕಾರ ಒಂದು ನಿರ್ಮಲವಾದ ಕನ್ನಡಿಯ ಎದುರಿಗೆ ಎಷ್ಟು ವಸ್ತುಗಳು ಬರುತ್ತವೆ ಅವೆಲ್ಲವನ್ನೂ ಅದು ಧಾರಣ ಮಾಡಿ ತೋರಿಸಿಕೊಡುತ್ತದೆ. ಅದೇ ಪ್ರಕಾರ ಚೈತನ್ಯ ಕನ್ನಡಿಯು ಜಗತ್ತಿನ ಸಮಸ್ತ ದ್ರವ್ಯಗಳನ್ನು ಪೂರ್ಣ ರೀತಿಯಿಂದ ಪ್ರಕಾಶಪಡಿಸುವಂತಿದೆಯೆಂದು ಯಾರು ತಮ್ಮ ಆತ್ಮನನ್ನು ಮನ್ನಿಸುತ್ತಾರೆ ಅವರು ಆತ್ಮನನ್ನು ಯಥಾರ್ಥವಾಗಿ ಮನ್ನಿಸಿದರೆಂದು ಹೇಳಲಾಗುತ್ತದೆ.

ಇಲ್ಲಿ ಧರ್ಮದ್ರವ್ಯದ ಜ್ಞಾನಮಾಡಿಸಿದ್ದಾರೆ ಅದನ್ನು ತಿಳಿದುಕೊಳ್ಳುವುದು ಅದು ಆತ್ಮನ ಸ್ವಭಾವವಿದೆ. ಯಾವ ಪ್ರಕಾರ ಮೀನುಗಳಿಗೆ ಗಮನ ಮಾಡುವಲ್ಲಿ ನೀರು ನಿಮಿತ್ತಮಾತ್ರವಿದೆ, ನೀರು ಮೀನುಗಳನ್ನು ಬಲವಂತದಿಂದ ಗಮನ ಮಾಡಿಸುವುದಿಲ್ಲ, ಆದರೆ ಯಾವ ಮೀನುಗಳು ಗಮನ ಮಾಡುತ್ತವೆ ಅವಕ್ಕೆ ನೀರು ನಿಮಿತ್ತವೆಂದು ಕರೆಯಿಸಿಕೊಳ್ಳುತ್ತದೆ ಅದೇ ಪ್ರಕಾರ ಜೀವ ಹಾಗೂ ಪುದ್ಗಲಗಳನ್ನು ಧರ್ಮದ್ರವ್ಯವು ಬಲವಂತದಿಂದ ಗಮನಮಾಡಿಸುವುದಿಲ್ಲ. ಆದರೆ ಸ್ವಯಂ ಗಮನ ಮಾಡುತ್ತಿರುವ ಜೀವ-ಪುದ್ಗಗಳಿಗೆ ಧರ್ಮದ್ರವ್ಯವು ನಿಮಿತ್ತವೆಂದು ಕರೆಯಿಸಿಕೊಳ್ಳುತ್ತದೆ. ಮೂಲ ಪಾಠದಲ್ಲಿ 'ಅಣುಗ್ಗಹಕರಂ ಹವದಿ'ಯೆಂಬ ಶಬ್ದವಿದೆ ಅದರ ಅರ್ಥವು ಉಪಕಾರ ಮಾಡುವುದಿದೆ ಎಂದರೆ ನಿಮಿತ್ತ ರೂಪದಿಂದ ಸಹಕಾರಿಕಾರಣವಿರುವುದೆಂದು ತಿಳಿದುಕೊಳ್ಳಬೇಕು.

**ಭಾವಾರ್ಥ :-** ಮೀನುಗಳು ಗಮನ ಮಾಡುತ್ತವೆ ಆ ಸಮಯದಲ್ಲಿ ನೀರು ಅವುಗಳ ಜತೆಯಲ್ಲಿ ಗಮನ ಮಾಡುವುದಿಲ್ಲ. ಅದೇ ಪ್ರಕಾರ ಆ ಮೀನುಗಳನ್ನು ನಡೆಸುವುದೂ ಇಲ್ಲ, ಆದರೆ ಮೀನುಗಳ ಗಮನದಲ್ಲಿ ನಿಮಿತ್ತಮಾತ್ರ ಸಹಾಯರೂಪವಿದೆ. ಈ ಪ್ರಕಾರ ನೀರಿನ ಸ್ವಭಾವವಿದೆ. ಸಹಾಯಕ ಎಂದರೆ ಉಪಸ್ಥಿತರೂಪದಿಂದ ಇರುತ್ತದೆ. ಮೀನುಗಳು ನೀರು ಇಲ್ಲದೆ ಗಮನಮಾಡುವಲ್ಲಿ ಅಸಮರ್ಥವಿರುವುದರಿಂದ ನೀರು ನಿಮಿತ್ತಮಾತ್ರವಿದೆ. ಇಲ್ಲಿ ನೀರಿನ ನಿಮಿತ್ತತೆಯನ್ನು ತಿಳಿಸಿಕೊಡುವುದಿದೆ, ಆದರೆ ಅದರಿಂದ ಮೀನುಗಳು ಗಮನಮಾಡುವಲ್ಲಿ ಅಸಮರ್ಥವಿವೆ, ಪರಾಧೀನವಿವೆಯೆಂದಲ್ಲ. ಮೀನುಗಳು ತಮ್ಮ ಕಾರಣದಿಂದ ಗಮನಮಾಡುವಲ್ಲಿ ನೀರಿನ ನಿಮಿತ್ತವನ್ನು ಸಿದ್ಧಮಾಡುವುದಿದೆ. ನೀರು ಇಲ್ಲದಿದ್ದರೆ ? ಎಂಬ ಪ್ರಶ್ನೆಯೇ ಇಲ್ಲ ಮೀನುಗಳು ತಮ್ಮ ಕಾರಣದಿಂದ ಗಮನ ಮಾಡುವಾಗ ನೀರು ನಿಮಿತ್ತವಿದೆ. ಅದೇ ಪ್ರಕಾರ ಜೀವ ಹಾಗೂ ಪುದ್ಗಲಗಳು ಧರ್ಮದ್ರವ್ಯವಿಲ್ಲದೆ ಗಮನ ಮಾಡುವಲ್ಲಿ ಅಸಮರ್ಥವಿವೆ ಎಂದರೆ ಅವು ಗಮನ ಮಾಡುವಾಗ ಧರ್ಮದ್ರವ್ಯವು ನಿಮಿತ್ತವಿದೆಯೆಂಬುದನ್ನು ಸಿದ್ಧಮಾಡುವದಿದೆ. ಜೀವ ಮತ್ತು ಪುದ್ಗಲಗಳು ಗಮನ ಮಾಡುವಾಗ ಧರ್ಮದ್ರವ್ಯವು ಗಮನ ಮಾಡುವುದಿಲ್ಲ. ಅದರಂತೆ ಧರ್ಮದ್ರವ್ಯವು ಪ್ರೇರಣೆಮಾಡಿ ಜೀವ-ಪುದ್ಗಲಗಳನ್ನು ನಡೆಸುವುದಿಲ್ಲ ಅದು ಸ್ವಯಂ ಉದಾಸೀನವಿದೆ ಆದರೆ ಯಾವ ಜೀವ ಮತ್ತು ಪುದ್ಗಲಗಳು ತಮ್ಮ ಕಾರಣದಿಂದ ಕ್ಷೇತ್ರಾಂತರ ಮಾಡುತ್ತವೆ ಆಗ ಅವುಗಳಿಗೆ ನಿಮಿತ್ತಮಾತ್ರವಾಗುವಂಥದು ಅದರ ಅನಾದಿನಿಧನ ಸ್ವಭಾವವಿದೆ.

ಆಗ ಜಯಸೇನಾಚಾರ್ಯದೇವರ ಸಂಸ್ಕೃತ ಟೀಕೆಯ ಮೇಲಿಂದ ಸ್ಪಷ್ಟೀಕರಣ ಸಂಸ್ಕೃತ ಟೀಕೆಯ ಎರಡನೆಯ ಪಂಕ್ತಿ ಅಥವಾ ಭವ್ಯಾನಾಂ ಸಿದ್ಧಗತೇಃ ಇಲ್ಲಿಂದ ಪ್ರಾರಂಭಮಾಡಿ ಆರನೆಯ 'ಪಂಕ್ತಿಯ ಸಹಕಾರೀ ಕಾರಣಂ ಭವತಿ'ಯ ವರೆಗೆ ಮೊದಲು ಲೋಕೋತ್ತರ ಉದಾಹರಣೆ -(ಉಪಾದಾನ ಮತ್ತು ನಿಮಿತ್ತ ಕಾರಣ ತಿಳಿಸಿದರೆ) ಭವ್ಯಜೀವನು ಹೀಗೆ ತನ್ನ ಆತ್ಮನ ಜ್ಞಾನಮಾಡಿಕೊಳ್ಳುತ್ತಾನೆ ನಾನು ಓರ್ವ ಶುದ್ಧ ಆತ್ಮನಿದ್ದೇನೆ. ದೇಹ, ಮನಸ್ಸು, ವಾಣಿಯ ಕ್ರಿಯೆಗಳು ನನ್ನವುಗಳಲ್ಲ, ಪುಣ್ಯ-ಪಾಪವು ನನ್ನ ಸ್ವರೂಪವಲ್ಲ, ನಾನು ನಿಶ್ಚಯದಿಂದ ರಾಗ ಮೊದಲಾದವುಗಳಿಂದ ರಹಿತನಿದ್ದೇನೆಂದು ಜ್ಞಾನಮಾಡಿಕೊಂಡು ಸಿದ್ಧದಶೆಯನ್ನು ಪಡೆದರೆ ರಾಗಾದಿ ದೋಷಗಳಿಂದ ರಹಿತನಾದ ಶುದ್ಧಾತ್ಮನ ಅನುಭೂತಿಯು ಸಿದ್ಧದಶೆಯ ರೂಪವಾದ ಕಾರ್ಯದ ಉಪಾದಾನ ಕಾರಣವಿದೆ. ಶರೀರದ ಕ್ರಿಯೆಯು ಪರವಿದೆ ಮತ್ತು ಪುಣ್ಯ-ಪಾಪಗಳಂತೂ ಅಪರಾಧವಿವೆ. ತಮ್ಮ ಜ್ಞಾನಾನಂದ ಸ್ವಭಾವದಲ್ಲಿ ಆಂತರ್ಯದೊಳಗೆ ಕ್ರೀಡೆ ಮಾಡುವುದು ಅದು ಮೋಕ್ಷದ ನಿಶ್ಚಯ ಕಾರಣವಿದೆ. ಈಗ ಅದಕ್ಕೆ ನಿಮಿತ್ತ ಕಾರಣ ಯಾವುದೆಂಬುದನ್ನು ತಿಳಿಸಿಕೊಡುತ್ತಾರೆ. ಯಾವುದೇ ಜಾತಿಯ ನಿದಾನವಿಲ್ಲದೆ ಕಟ್ಟಲ್ಪಟ್ಟ ತೀರ್ಥಂಕರ ನಾಮಕರ್ಮದ ಪ್ರಕೃತಿ, ಉತ್ತಮ ಸಂಹನನ, ಬಾದರತನ, ಮನುಷ್ಯತನ ಮೊದಲಾದವು ಸಹಕಾರೀ ಕಾರಣ ಅಥವಾ ನಿಮಿತ್ತ ಕಾರಣವೆಂದು ಕರೆಯಿಸಿಕೊಳ್ಳುತ್ತವೆ. ಯಾವನಾದರೂ ಧರ್ಮಾತ್ಮ ಜೀವನಿಗೆ ಆತ್ಮನ ಜ್ಞಾನವಾದ ನಂತರ ಶುಭರಾಗದ ಭೂಮಿಕೆಯಲ್ಲಿ ತೀರ್ಥಂಕರ ಪುಣ್ಯ ಪ್ರಕೃತಿಯು ಬದ್ಧವಾಗಿ

ಹೋಗುತ್ತದೆ. ಅದನ್ನು ಕಟ್ಟಿಕೊಳ್ಳಬೇಕೆಂಬ ಭಾವನೆಯಿರುವುದಿಲ್ಲ, ಅದರಂತೆ ಅವನು ಅದರ ಪ್ರಭುವಿರುವುದಿಲ್ಲ ಮಿಥ್ಯಾದೃಷ್ಟಿಗಳಿಗಂತೂ ಕಟ್ಟುವುದೇ ಇಲ್ಲ. ಆ ಪ್ರಕೃತಿಯು, ಗಟ್ಟಿಮುಟ್ಟಾದ ಸಂಹನನ ಅಥವಾ ಮನುಷ್ಯತನವು ಸಿದ್ಧದಶೆಯನ್ನು ಮಾಡಿಸುವುದಿಲ್ಲ. ಸಿದ್ಧದಶೆಗೆ ಮತ್ತು ಪ್ರಕೃತಿ ಮೊದಲಾದ ಜಡಕ್ಕೆ ಅತ್ಯಂತ ಅಭಾವವಿದೆ, ಆದರೆ ಸ್ವಯಂ ಸಿದ್ಧದಶೆಯನ್ನು ಪ್ರಕಟಪಡಿಸಿಕೊಂಡರೆ ಪ್ರಕೃತಿ ಮೊದಲಾದ ಯಾವ ಯಾವ ನಿಮಿತ್ತಗಳಿವೆ ಅವೆಲ್ಲವನ್ನು ನಿಮಿತ್ತವೆಂದು ಹೇಳಲಾಗುತ್ತದೆ.

ಇಷ್ಟೋಪದೇಶದಲ್ಲಿ ಪೂಜ್ಯಪಾದಾಚಾರ್ಯದೇವರು ಹೇಳುತ್ತಾರೆ - ನಿಶ್ಚಯದಿಂದ ಆತ್ಮನೇ ತನಗೆ ತಾನು ನಿಶ್ಚಯ ಗುರು ಇದ್ದರೆ ವ್ಯವಹಾರದಿಂದ ಇತರರನ್ನು ಗುರುವೆಂದು ಹೇಳಲಾಗುತ್ತದೆ. ಗುರು ಪರದಲ್ಲಿ ಏನನ್ನೂ ಮಾಡುವುದಿಲ್ಲ. ಈಗಂತೂ ನಿಮಿತ್ತದ ಹೆಸರಿನಲ್ಲಿ ಬಹಳಷ್ಟು ಚರ್ಚೆ ನಡೆಯುತ್ತಿದೆ. ಪರಪದಾರ್ಥದಲ್ಲಿ ಯಾವುದಾದರೂ ಪ್ರೇರಣೆ ಮಾಡುವುದು ಅದು ಪ್ರೇರಕದ ಅರ್ಥವಲ್ಲ, ತಮ್ಮಲ್ಲಿ ಗಮನ ಮಾಡುತ್ತಿರುವಂಥ ಪದಾರ್ಥ ಅಥವಾ ಸಂಕಲ್ಪ-ವಿಕಲ್ಪ ಮಾಡುತ್ತಿರುವ ಜೀವನಿದ್ದರೆ ಅವನನ್ನು ಪ್ರೇರಕನೆಂದು ಹೇಳಲಾಗುತ್ತದೆ ಮತ್ತು ಸ್ಥಿರವಿರುವ ಪದಾರ್ಥವನ್ನು ಉದಾಸೀನವೆಂದು ಹೇಳಲಾಗುತ್ತದೆ. ಧಾವಿಸುತ್ತಿರುವ ಕುದುರೆಯ ಮೇಲೆ ಮನುಷ್ಯನು ಕುಳಿತುಕೊಂಡಿದ್ದಾನೆ ಅಲ್ಲಿ ಮನುಷ್ಯನು ತನ್ನ ಕಾರಣದಿಂದ ಗತಿ ಮಾಡಿದರೆ ಅದರಲ್ಲಿ ಕುದುರೆಯು ಪ್ರೇರಕ ನಿಮಿತ್ತವಿದೆ. ಏಕೆಂದರೆ ಕುದುರೆಯು ಸ್ವಯಂ ಗಮನ ಮಾಡುತ್ತಿದೆ ಮತ್ತು ಅಲ್ಲಿ ಇರುವಂಥ ಧರ್ಮದ್ರವ್ಯವು ಗಮನ ಮಾಡುವುದಿಲ್ಲ, ಅದಕ್ಕಾಗಿ ಧರ್ಮವನ್ನು ಉದಾಸೀನ ನಿಮಿತ್ತವೆಂದು ಹೇಳಲಾಗಿದೆ. ಪ್ರೇರಕ ಎಂದರೆ ತನ್ನಲ್ಲಿ ಸಕ್ರಿಯತೆ ಮತ್ತು ಉದಾಸೀನ ಎಂದರೆ ತನ್ನಲ್ಲಿ ಸಕ್ರಿಯತೆ ಎಂದರೆ ಗತಿರೂಪವಾಗದಿರುವುದು.

ಇಲ್ಲಿ ದೃಷ್ಟಾಂತದಲ್ಲಿ ಸಿದ್ಧದಶೆಯನ್ನು ಪ್ರಾಪ್ತಮಾಡಿಕೊಳ್ಳುವಲ್ಲಿ ಭವ್ಯ ಜೀವದ ಯೋಗ್ಯತೆಯು ಎಂದರೆ ಶುದ್ಧಾತ್ಮನ ಅನುಭೂತಿಯು ಅದು ಉಪಾದಾನಕಾರಣವಿದೆಯೆಂದು ಹೇಳಿದೆ. (ಇಲ್ಲಿ ವರ್ತಮಾನ ಪರ್ಯಾಯವನ್ನು ಉಪಾದಾನ ಕಾರಣವೆಂದು ಸ್ವೀಕರಿಸಿದೆ, ಗುಣವಂತೂ ತ್ರಿಕಾಲವಿದೆ.) ಆದುದರಿಂದ ಮನುಷ್ಯದೇಹ, ಸಂಹನನ, ತೀರ್ಥಂಕರ ಪ್ರಕೃತಿ ಇವು ನಿಮಿತ್ತ ಕಾರಣವಿವೆ. ಆದರೆ ಯಾರಿಗೆ ರಾಗದ ಆದರವಿದೆ, ಕರ್ಮದ ಜತೆಯಲ್ಲಿ ಏಕತೆಯ ಬುದ್ಧಿಯಿದೆ ಅವರು ಮಿಥ್ಯಾದೃಷ್ಟಿಗಳಿದ್ದಾರೆ, ಅವರಿಗೆ ತೀರ್ಥಂಕರ ಪ್ರಕೃತಿಯ ಬಂಧವಾಗುವುದಿಲ್ಲ ಯಾರಿಗೆ ಆತ್ಮನ ಅನುಭವವಿಲ್ಲ ಅವರಿಗೆ ಮನುಷ್ಯ ದೇಹ ಮೊದಲಾದವುಗಳನ್ನು ನಿಮಿತ್ತವೆಂದು ಹೇಳಲಾಗುವುದಿಲ್ಲ, ಇದು ದೃಷ್ಟಾಂತವಿದೆ ಅದೇ ಪ್ರಕಾರ ಜೀವ ಮತ್ತು ಪುದ್ಗಲಗಳು ತಮ್ಮ ಕಾರಣದಿಂದ ಕ್ಷೇತ್ರಾಂತರ ಮಾಡುವುದು ಅದು ಉಪಾದಾನಕಾರಣವಿದೆ ಮತ್ತು ಧರ್ಮಾಸ್ತಿಕಾಯವನ್ನು ಸಹಕಾರೀ ಕಾರಣ ಅಥವಾ ನಿಮಿತ್ತಕಾರಣವೆಂದು ಹೇಳಲಾಗುತ್ತದೆ.

ಇನ್ನೊಂದು ಲೋಕೋತ್ತರ ದೃಷ್ಟಾಂತವು ಹೀಗಿದೆ - ಸಂಸ್ಕೃತ ಟೀಕೆ ಪುಟ ೧೪೩ ರಲ್ಲಿ ಐದನೆಯ ಪಂಕ್ತಿಯಲ್ಲಿ 'ಅಥವಾ ಭವ್ಯಾನಾಮದಿಂದ ಭವತೀತಿ ಭಾವಾರ್ಥ'ವರೆಗೆ ಭವ್ಯ ಮತ್ತು ಅಭವ್ಯರು ನಾಲ್ಕು ಗತಿಗಳಲ್ಲಿ ಪರಿಭ್ರಮಣ ಮಾಡುತ್ತಾರೆ ಅದರಲ್ಲಿ ತಮ್ಮ ತಮ್ಮ ಶುಭಾಶುಭ ಭಾವಗಳು ಉಪಾದಾನ ಕಾರಣವಿವೆ. ದೇವಗತಿಯಲ್ಲಿ ಶುಭ ಪರಿಣಾಮವು, ಮನುಷ್ಯ ಗತಿಯಲ್ಲಿ ಮಧ್ಯಮ ಪರಿಣಾಮವು ತಿರ್ಯಂಚ ಗತಿಯಲ್ಲಿ ಮಾಯೆಯ ಪರಿಣಾಮವು, ನರಕದಲ್ಲಿ ಅಶುಭ ಪರಿಣಾಮವು ಉಪಾದಾನ ಕಾರಣಗಳಿವೆ. ಆಗ ಶರೀರದ ಬಾಹ್ಯಲಿಂಗ ದಾನ-ಪೂಜೆಯ ಸಮಯದಲ್ಲಿ ಆಗುವ ಶರೀರ ಮೊದಲಾದವುಗಳ ಕ್ರಿಯೆ ಮತ್ತು ಬಾಹ್ಯದಲ್ಲಿನ ಶುಭ ಅನುಷ್ಠಾನ, ಮಂದಿರ, ಸಮವಸರಣ, ಮಾನಸ್ತಂಭ ಮೊದಲಾದವುಗಳನ್ನು ಬಹಿರಂಗ ಸಹಕಾರೀ ಕಾರಣವೆಂದು ಹೇಳಲಾಗುತ್ತದೆ.

ಸಿದ್ಧ ಗತಿಯಲ್ಲಿ ಶುದ್ಧ ಆತ್ಮನ ಅನುಭವವು ಅದು ಉಪಾದಾನಕಾರಣವಿದೆ ಮತ್ತು ತೀರ್ಥಂಕರ ಪ್ರಕೃತಿ ಮೊದಲಾದವು ನಿಮಿತ್ತಕಾರಣವಿವೆ. ಶುಭಾಶುಭ ಭಾವಗಳು ನಾಲ್ಕು ಗತಿಗಳಲ್ಲಿ ಉಪಾದಾನ ಕಾರಣವಿವೆ ಮತ್ತು

ಬಾಹ್ಯಲಿಂಗ ಹಾಗೂ ಶರೀರದ ಕ್ರಿಯೆಗಳು ಅವು ನಿಮಿತ್ತಕಾರಣವಿವೆ. ಈ ಪ್ರಕಾರ ಎರಡು ಉದಾಹರಣೆಗಳನ್ನು ಕೊಡಲಾಯಿತು. ಅದೇ ಪ್ರಕಾರ ಜೀವ ಮತ್ತು ಪುದ್ಗಲಗಳು ತಮ್ಮ ಕಾರಣದಿಂದ ಗಮನ ಮಾಡುತ್ತವೆಂಬುದು ಅದು ಉಪಾದಾನಕಾರಣವಿದೆ ಮತ್ತು ಧರ್ಮದ್ರವ್ಯವು ನಿಮಿತ್ತಕಾರಣವಿದೆ. ಬಾವಿಯಲ್ಲಿ ಸ್ಥಿರವಿರುವ ನೀರು ಮೀನುಗಳ ಗತಿಯಲ್ಲಿ ನಿಮಿತ್ತವಿದೆ ಮತ್ತು ಜೀವ ಹಾಗೂ ಪುದ್ಗಲಗಳ ಗಮನದಲ್ಲಿ ಧರ್ಮದ್ರವ್ಯವು ನಿಮಿತ್ತವಿದೆ.

ಯಾವುದೇ ದ್ರವ್ಯವು ಬೇರೆ ಯಾವುದೇ ದ್ರವ್ಯಕ್ಕೆ ಪ್ರೇರಕವಿಲ್ಲವೆಂದು ಪಂ. ಬನಾರಸೀ ದಾಸರು ಹೇಳಿದ್ದಾರೆ.

ಈ ಪ್ರಕಾರ ಜೀವ ಮತ್ತು ಪುದ್ಗಲಗಳ ಕ್ಷೇತ್ರಾಂತರದಲ್ಲಿ ಧರ್ಮಾಸ್ತಿಕಾಯದ ನಿಮಿತ್ತವಿರುವುದನ್ನು ದೃಷ್ಟಾಂತದ ಮೂಲಕ ತಿಳಿಸಿಕೊಡಲಾಯಿತು.

ಈಗ ಅಧರ್ಮದ್ರವ್ಯದ ಸ್ವರೂಪವನ್ನು ತಿಳಿಸಿಕೊಡುತ್ತಾರೆ -

ಜಹ ಹವದಿ ಧಮ್ಮದವ್ವಂ ತಹ ತಂ ಜಾಣೇಹ ದವ್ವಮಧಮಕ್ಖಂ ।
ಠಿದಿಕಿರಿಯಾಜುತ್ತಾಣಂ ಕಾರಣಭೂದಂ ತು ಪುಢವೀವ ॥೮೬॥

**ಆ ಧರ್ಮನಾಮದ ದ್ರವ್ಯದಂತೆ ಅಧರ್ಮನಾದ ದ್ರವ್ಯವಿದೆಯೆಂದರಿವುದು ।**
**ಅಧರ್ಮದ್ರವ್ಯವು ಸ್ಥಿತಿಕ್ರಿಯೆಯುಕ್ತಕೆ ಪೃಥ್ವಿಯಂತೆ ಕಾರಣಭೂತವಿದೆ ॥೮೬॥**

ಜೀವ ಮತ್ತು ಪುದ್ಗಲಗಳು ಗತಿಪೂರ್ವಕ ಸ್ಥಿರವಾಗುವಲ್ಲಿ ಅವಕ್ಕೆ ಅಧರ್ಮದ್ರವ್ಯವು ನಿಮಿತ್ತವಿದೆ. ಯಾವ ಪ್ರಕಾರ ಪೃಥ್ವಿಯು ಯಾವುದಕ್ಕೂ ನಿಂತುಕೊಳ್ಳೆಂದು ಹೇಳುವುದಿಲ್ಲ, ಆದರೆ ಯಾವುವು ನಿಂತುಕೊಳ್ಳುತ್ತವೆ ಅವಕ್ಕೆ ಅದು ನಿಮಿತ್ತವೆನಿಸಿಕೊಳ್ಳುತ್ತದೆ ಅದೇ ಪ್ರಕಾರ ಅಧರ್ಮದ್ರವ್ಯವನ್ನು ತಿಳಿದುಕೊಳ್ಳಬೇಕು.

**ಭಾವಾರ್ಥ :-** ಪೃಥ್ವಿಯು ತನ್ನ ಸ್ವಭಾವದಿಂದ ತನ್ನ ಅವಸ್ಥೆಯಲ್ಲಿ ಸ್ಥಿರವಿದೆ. ಕುದುರೆ ಮೊದಲಾದ ಪರ ಪದಾರ್ಥಗಳನ್ನು ನಿಲ್ಲಿಸುವುದಿಲ್ಲ. ಆದರೆ ಕುದುರೆ ಮೊದಲಾದ ಪದಾರ್ಥಗಳು ತಮ್ಮ ಕಾರಣದಿಂದ ಸ್ಥಿರವಾಗುತ್ತವೆ. ಅವುಗಳಿಗೆ ಪೃಥ್ವಿಯು ಸಹಜ ಉದಾಸೀನ ಅವಸ್ಥೆಯ ರೂಪದಿಂದ ನಿಮಿತ್ತ ಮಾತ್ರವಾಗುತ್ತದೆ. ಇದೇ ದೃಷ್ಟಾಂತದ ಅನುಸಾರ ಅಧರ್ಮದ್ರವ್ಯವು ಕೂಡ ತನ್ನ ಸಹಜ ಅವಸ್ಥೆಯ ರೂಪದಿಂದ ಲೋಕಾಕಾಶದ ಅಸಂಖ್ಯ ಪ್ರದೇಶಗಳ ಪ್ರಮಾಣರೂಪವಾಗಿ ಅನಾದಿಕಾಲದಿಂದ ಇದೆ. ಅದರ ಅಸಂಖ್ಯ ಪ್ರದೇಶಗಳು ಸ್ವಾಭಾವಿಕವಾಗಿ ಲೋಕಪ್ರಮಾಣವಿವೆ. ಯಾವ ಜೀವನು ಕೇವಲೀ ಸಮುದ್ಘಾತ ಮಾಡುತ್ತಾನೆ ಆಗ ಆತನ ಪ್ರದೇಶಗಳು ವಿಸ್ತಾರಹೊಂದಿ ಲೋಕಪ್ರಮಾಣವಾಗುತ್ತವೆ ಅಥವಾ ಯಾವ ಪ್ರಕಾರ ಬಟ್ಟೆಯು ಮೊದಲು ಸಂಕೋಚರೂಪ ಮತ್ತು ಅನಂತರ ವಿಸ್ತಾರವಾಗುತ್ತದೆ ಅದೇ ಪ್ರಕಾರ ಧರ್ಮದ್ರವ್ಯ ಹಾಗೂ ಅಧರ್ಮದ್ರವ್ಯ ಇವೆರಡರ ಪ್ರದೇಶಗಳು ಮೊದಲು ಸಂಕೋಚರೂಪವಾಗಿದ್ದವು ಮತ್ತು ಅನಂತರ ಇಡೀ ಲೋಕ ಪ್ರಮಾಣವಾದುವು ಎಂಬುದಾಗಿಲ್ಲ. ಅವು ಅನಾದಿಯಿಂದಲೇ ಇಡೀ ಲೋಕಪ್ರಮಾಣ ಅಖಂಡ ಅಸಂಖ್ಯ ಪ್ರದೇಶಿಯಿವೆ. ಆ ಅಧರ್ಮದ್ರವ್ಯವು ಸ್ವಭಾವದಿಂದ ಜೀವ-ಪುದ್ಗಲಗಳಿಗೆ ಸ್ಥಿರವಾಗುವಲ್ಲಿ ನಿಮಿತ್ತಕಾರಣವಿದೆ. ಆದರೆ ಆ ದ್ರವ್ಯಗಳನ್ನು ಅದು ಬಲವಂತತೆಯಿಂದ ಸ್ಥಿರ ಮಾಡುವುದಿಲ್ಲ. ಗತಿಮಾನವಾದ ಜೀವ-ಪುದ್ಗಲಗಳು ತಮ್ಮಿಂದಲೇ ಸ್ಥಿರ ಅವಸ್ಥೆಯ ರೂಪವಾಗಿ ಪರಿಣಾಮ ಮಾಡಿದರೆ ಅಧರ್ಮದ್ರವ್ಯವು ತನ್ನ ಸ್ವಾಭಾವಿಕವಾದ ಉದಾಸೀನ ಅವಸ್ಥೆಯ ರೂಪದಿಂದ ನಿಮಿತ್ತಮಾತ್ರ ಸಹಾಯಕವಾಗುತ್ತದೆ.

ಈಗ ಜಯಸೇನಾಚಾರ್ಯದೇವರ ಸಂಸ್ಕೃತ ಟೀಕೆ ಪುಟ ೧೪೪ರಲ್ಲಿ ಐದನೇ ಪಂಕ್ತಿ ''ಶುದ್ಧಾತ್ಮಸ್ವರೂಪೆ''ದಿಂದ ಚೇತಿ ಸೂತ್ರಾರ್ಥಃ''ವರೆಗೆ.

ನಾನು ಶುದ್ಧಸ್ವಭಾವಿಯಾದ ಆತ್ಮನಿದ್ದೇನೆಂದು ಅರಿವು ಉಂಟಾದನಂತರ ಸ್ವಭಾವದಲ್ಲಿ ಸ್ಥಿರತೆಯಾಗುತ್ತದೆ. ಈ ಪ್ರಕಾರ ಶುದ್ಧಾತ್ಮನಲ್ಲಿ ಸ್ಥಿರವಾಗುವುದರ ನಿಶ್ಚಯಕಾರಣವು ವೀತರಾಗ ನಿರ್ವಿಕಲ್ಪ ಸ್ವಸಂವೇದನವಿದೆ. ಶುಭರಾಗವಾಗಲಿ ಅಥವಾ ಪುಣ್ಯವಾಗಲಿ ಅದರಲ್ಲಿ ಕಾರಣವಿಲ್ಲ. ಜೀವನು ತನ್ನ ಪರ್ಯಾಯದಲ್ಲಿ ಆಗುವಂಥ ರಾಗ-ದ್ವೇಷದ ಅಸ್ಥಿರತೆಯನ್ನು ಬಿಟ್ಟುಕೊಟ್ಟು ಶುದ್ಧ ಚಿದಾನಂದ ಸ್ವಭಾವದಲ್ಲಿ ಸ್ಥಿರತೆ ಮಾಡುತ್ತಾನೆ ಅದರಲ್ಲಿ ಸ್ವಸಂವೇದನವು ನಿಶ್ಚಯಕಾರಣವಿದ್ದರೆ ಅರಹಂತ-ಸಿದ್ಧರ ಸ್ಮರಣೆಯ ವಿಕಲ್ಪವು ಅರಹಂತ-ಸಿದ್ಧ ಭಗವಂತರ ಪ್ರತಿಮೆ ಮೊದಲಾದವುಗಳನ್ನು ನಿಮಿತ್ತಕಾರಣವೆಂದು ಹೇಳಲಾಗುತ್ತದೆ. ಆದರೆ ಆ ನಿಮಿತ್ತಗಳು ಸ್ಥಿರ ಮಾಡಿಸುವುದಿಲ್ಲ ತಾನು ಶುದ್ಧ ಚಿದಾನಂದ ಆತ್ಮನ ಶ್ರದ್ಧೆ-ಜ್ಞಾನ ಮಾಡಿದರೆ ಬಾಹ್ಯವನ್ನು ನಿಮಿತ್ತಕಾರಣವೆಂದು ಹೇಳಲಾಗುತ್ತದೆ. ಇಲ್ಲದಿದ್ದರೆ ಅವು ನಿಮಿತ್ತಕೂಡ ಆಗುವುದಿಲ್ಲ ಎಂದರೆ ನಿಮಿತ್ತವೆಂದು ಸಿದ್ಧವಾಗುವುದಿಲ್ಲ.

ಯಾವ ಆತ್ಮನು ದಯೆ-ದಾನಾದಿಗಳಲ್ಲಿ ಧರ್ಮವಿದೆಯೆಂದು ಮನ್ನಿಸಿ ಅಂಥ ಪರಿಣಾಮಗಳನ್ನೇ ಮಾಡುತ್ತಿರುತ್ತಾನೆ ಅವನು ಮಿಥ್ಯಾದೃಷ್ಟಿಯಿದ್ದಾನೆ. ಅವನಿಗೆ ಭಗವಂತರನ್ನು ನಿಮಿತ್ತರೆಂದು ಹೇಳಲಾಗುವುದಿಲ್ಲ. ಪುಣ್ಯ-ಪಾಪದ ಪರಿಣಾಮವು ಶುದ್ಧ ಆತ್ಮನಲ್ಲ, ತ್ರಿಕಾಲೀ ಸ್ವಭಾವವು ಅದು ಶುದ್ಧ ಆತ್ಮನಿದ್ದಾನೆ ಅವನೇ ನಾನಿದ್ದೇನೆಂದು ಜ್ಞಾನದ ಪರ್ಯಾಯವು ಧ್ರುವ ಸ್ವಭಾವವನ್ನು ಹಿಡಿದುಕೊಂಡರೆ ಮತ್ತು ಸ್ಥಿರಗೊಂಡರೆ ಅದನ್ನು ಧರ್ಮದ ಕ್ರಿಯೆಯೆಂದು ಹೇಳುವುದರಲ್ಲಿ ಬರುತ್ತದೆ ಮತ್ತು ಇಂಥ ಸ್ಥಿರತೆಯಲ್ಲಿ ಸ್ವಸಂವೇದನಜ್ಞಾನವು ನಿಶ್ಚಯ ಕಾರಣವಿದ್ದರೆ ಭಗವಂತರ ಸ್ಮರಣೆಯನ್ನು ನಿಮಿತ್ತವೆಂದು ಹೇಳಲಾಗುತ್ತದೆ. ಆ ದೃಷ್ಟಾಂತದಿಂದ ಪುದ್ಗಲ ಮತ್ತು ಚೇತನ ಪದಾರ್ಥಗಳು ತಮ್ಮ ಕಾರಣದಿಂದ ಸ್ಥಿರವಾಗುತ್ತವೆ ಅದು ಉಪಾದಾನ ಕಾರಣವಿದೆ ಮತ್ತು ಅದರಲ್ಲಿ ಅಧರ್ಮದ್ರವ್ಯವು ನಿಮಿತ್ತಕಾರಣವಿದೆಯೆಂದು ಹೇಳಲಾಗುತ್ತದೆ.

ಧರ್ಮ-ಅಧರ್ಮ ದ್ರವ್ಯದಿಂದ ಲೋಕ -ಅಲೋಕದ ವಿಭಾಗವಾಗಿದೆ. ಧರ್ಮ-ಅಧರ್ಮ ದ್ರವ್ಯಗಳನ್ನು ಮನ್ನಿಸದೆ ಹೋದರೆ ಲೋಕ-ಅಲೋಕಗಳು ಸಿದ್ಧವಾಗುವುದಿಲ್ಲ. ಲೋಕ-ಅಲೋಕಗಳನ್ನು ಮತ್ತು ಧರ್ಮ-ಅಧರ್ಮಗಳನ್ನು ತಿಳಿದುಕೊಳ್ಳದಿದ್ದರೆ ಜ್ಞಾನವು ಸುಳ್ಳೆಂದು ಸಿದ್ಧವಾಗುತ್ತದೆ. ಧರ್ಮ-ಅಧರ್ಮ ಇವೆರಡೂ ಇಡೀ ಲೋಕದಲ್ಲಿ ಏಕ ಕ್ಷೇತ್ರದಲ್ಲಿವೆ, ಆದರೆ ಅವೆರಡೂ ಸ್ವಭಾವದಿಂದ ಭಿನ್ನವಿವೆ. ಯಾರು ಧರ್ಮ-ಅಧರ್ಮಗಳನ್ನು ಮನ್ನಿಸುವುದಿಲ್ಲ ಅವರ ಸಮಾಧಾನದ ಸಲುವಾಗಿ ಆಚಾರ್ಯಭಗವಂತರು ಹೀಗೆ ಹೇಳುತ್ತಾರೆ.-

**ಜಾದೋ ಅಲೋಗಲೋಗೋ ಜೇಸಿಂ ಸಬ್ಭಾವದೋ ಯ ಗಮಣಠಿದೀ ।**
**ದೋ ವಿ ಯ ಮಯಾ ವಿಭತ್ತಾ ಅವಿಭತ್ತಾ ಲೋಯಮೇತ್ತಾ ಯ ॥೮೭॥**

**ಯಾವ ಲೋಕ-ಅಲೋಕಮೇಣ್ಗತಿ-ಸ್ಥಿತಿಗಳು ಧರ್ಮಾಧರ್ಮಗಳಿಂದಾಗುವವು ।**
**ಅವೆರಡು ಭಿನ್ನ-ಅಭಿನ್ನವಾಗಿದ್ದು ಸಕಲ ಲೋಕ ಪ್ರಮಾಣವಾಗಿರುವವು ॥೮೭॥**

ಆ ಧರ್ಮ ಮತ್ತು ಅಧರ್ಮ ದ್ರವ್ಯಗಳು ಇರುವುದರಿಂದ ಲೋಕ ಮತ್ತು ಅಲೋಕಗಳಾಗಿವೆ ಮತ್ತು ಅವು ಗತಿ-ಸ್ಥಿತಿಯಲ್ಲಿ ನಿಮಿತ್ತವಿವೆ. ಅವು ಎರಡೂ ತಮ್ಮ ತಮ್ಮ ಸ್ವರೂಪದಿಂದ ಬೇರೆ ಬೇರೆಯಿವೆ, ಆದರೆ ಏಕಕ್ಷೇತ್ರಾವಗಾಹದಿಂದ ಬೇರೆ ಬೇರೆಯಿಲ್ಲ ಮತ್ತು ಅಸಂಖ್ಯ ಪ್ರದೇಶೀ ಲೋಕಮಾತ್ರವಿವೆ.

**ಭಾವಾರ್ಥ ः-** ಇಲ್ಲಿ ಧರ್ಮ -ಅಧರ್ಮಗಳು ಇಲ್ಲವೇ ಇಲ್ಲವೆಂದು ಪ್ರಶ್ನೆ ಮಾಡಲಾಗಿತ್ತು ಆಕಾಶವು ಗತಿ ಹಾಗೂ ಸ್ಥಿತಿಯಲ್ಲಿ ಸಹಾಯಕವಿದೆಯೆಂದು ಮನ್ನಿಸ ಹೋದರೆ ಏನಾಗುತ್ತದೆಯೆಂಬುದರ ಉತ್ತರ ಹೀಗಿದೆ

ಜಗತ್ತು ಅಥವಾ ಲೋಕವು ಸರ್ವತ್ರ ವ್ಯಾಪಕವಿಲ್ಲ. ಈ ಲೋಕವು ಮರ್ಯಾದೆಯುಳ್ಳದ್ದಿದೆ ಮತ್ತು ಬರಿದಾದ ಭಾಗವನ್ನು ಅಲೋಕವೆಂದು ಹೇಳುತ್ತಾರೆ ಕೆಲವರು ಹೀಗೆ ಕೇಳುತ್ತಾರೆ- ಈ ಜಗತ್ತು ಹೇಗೆ ಕಂಡು ಬರುತ್ತಿದೆ ಹಾಗೆ ಸರ್ವತ್ರ ಇದೆಯಲ್ಲವೇ ?. ಹೇಗೆ ಇದೆ ಹಾಗೆ ಎಂದರೆ ಎಲ್ಲಿಯವರೆಗೆ ? ಅನಂತರ ಏನಿದೆ ? ಅದರ ನಂತರ ಏನಿದೆ? ಎರಡು ಭಾಗವನ್ನು ಮನ್ನಿಸಿದಲ್ಲದೆ ಯಥಾರ್ಥ ವಸ್ತುಸ್ಥಿತಿಯ ನಿರ್ಣಯವಾಗುವುದಿಲ್ಲ. ಯಾವ ಪ್ರಕಾರ ಜಡ ಮತ್ತು ಚೇತನ ಎರಡೂ ಭಿನ್ನವಿವೆ ಅದೇ ಪ್ರಕಾರ ಲೋಕ ಮತ್ತು ಅಲೋಕಗಳು ಭಿನ್ನವಿವೆ. ಲೋಕ-ಅಲೋಕಗಳು ತಮ್ಮ ಕಾರಣದಿಂದ ಇವೆ ಅದರಲ್ಲಿ ಧರ್ಮ-ಅಧರ್ಮಗಳನ್ನು ನಿಮಿತ್ತದ ರೂಪದಲ್ಲಿ ಸಿದ್ಧ ಮಾಡಲಾಗಿದೆ. ಧರ್ಮ-ಅಧರ್ಮಗಳು ಅವಶ್ಯವಾಗಿ ದ್ರವ್ಯವಿವೆ. ಅವು ಎರಡು ದ್ರವ್ಯಗಳು ಇಲ್ಲದಿರುತ್ತಿದ್ದರೆ ಲೋಕ-ಅಲೋಕದ ಭೇದವು ಸಿದ್ಧವಾಗುವುದಿಲ್ಲ. ಎಲ್ಲಿ ಜೀವ ಮೊದಲಾದ ಸಮಸ್ತ ಪದಾರ್ಥಗಳಿವೆ ಅದನ್ನು ಲೋಕವೆಂದು ಹೇಳುತ್ತಾರೆ. ಜೀವ ಮೊದಲಾದ ಪದಾರ್ಥಗಳು ಭಾವದಿಂದ ಅನಂತವಾಗಿದ್ದರೂ ಕೂಡ ಅವು ಕ್ಷೇತ್ರದಿಂದ ಅನಂತವಿಲ್ಲ. ಆಕಾಶದ ಕ್ಷೇತ್ರಗಳು ಅನಂತವಿವೆ ಅದರಲ್ಲಿ ಅಸಂಖ್ಯ ಯೋಜನದವರೆಗೆ ಲೋಕವಿದೆ. ಅನಂತರ ಎಲ್ಲಿ ಕೇವಲ ಆಕಾಶವಿದೆ ಅದನ್ನು ಅಲೋಕವೆಂದು ಹೇಳುತ್ತಾರೆ. ಆದುದರಿಂದ ಜೀವ-ಪುದ್ಗಲಗಳ ಗತಿ-ಸ್ಥಿತಿಯು ಲೋಕಾಕಾಶದಲ್ಲಿ ಇದೆ, ಆದರೆ ಅಲೋಕಾಕಾಶದಲ್ಲಿ ಇಲ್ಲ. ಆ ಧರ್ಮ ಅಧರ್ಮದಲ್ಲಿ ಗತಿ - ಸ್ಥಿತಿಯ ನಿಮಿತ್ತತನದ ಗುಣಗಳಿಲ್ಲದೆ ಹೋಗಿದ್ದರೆ ಲೋಕ-ಅಲೋಕದ ಭೇದವೇ ದೂರ ಉಳಿದುಬಿಡುತ್ತಿತ್ತು. ಜೀವ ಮತ್ತು ಪುದ್ಗಲ ಇವೆರಡೂ ತಮ್ಮ ಕಾರಣದಿಂದ ಗತಿ ಅಥವಾ ಸ್ಥಿತಿರೂಪದ ಅವಸ್ಥೆಯನ್ನು ಧಾರಣ ಮಾಡುತ್ತವೆ ಅದರಲ್ಲಿ ಗತಿಗೆ ಬಹಿರಂಗ ನಿಮಿತ್ತವು ಧರ್ಮದ್ರವ್ಯವಿದೆ ಮತ್ತು ಸ್ಥಿತಿಗೆ ಬಹಿರಂಗನಿಮಿತ್ತವು ಅಧರ್ಮ ದ್ರವ್ಯವಿದೆ. ಅವೆರಡೂ ಲೋಕದಲ್ಲಿ ಇವೆ. ಆ ಧರ್ಮ ಮತ್ತು ಅಧರ್ಮ ದ್ರವ್ಯಗಳು ಲೋಕದಲ್ಲಿ ಇಲ್ಲದೆ ಹೋಗಿದ್ದರೆ ಲೋಕ ಅಲೋಕವೆಂಬ ಭೇದವೇ ಆಗುತ್ತಿರಲಿಲ್ಲ ಮತ್ತು ಎಲ್ಲ ಸ್ಥಳದಲ್ಲಿ ಲೋಕವೇ ಇರುತ್ತಿತ್ತು. ಆ ಕಾರಣದಿಂದ ಧರ್ಮ-ಅಧರ್ಮದ್ರವ್ಯಗಳು ಅವಶ್ಯವಾಗಿವೆ.

ಇದು ಅಧರ್ಮಾಸ್ತಿಕಾಯದ ವ್ಯಾಖ್ಯಾನವು ನಡೆಯುತ್ತಿದೆ. ಸರ್ವಜ್ಞ ಭಗವಂತರು ಅಧರ್ಮದ್ರವ್ಯ ಹಾಗೂ ಧರ್ಮದ್ರವ್ಯವೆಂದು ಎರಡು ದ್ರವ್ಯಗಳನ್ನು ನೋಡಿದ್ದಾರೆ. ಯಾರಿಗೆ ಯಾವ ಪದಾರ್ಥವನ್ನು ಭೇದಿಸುವುದಿದೆ ಅವರಿಗೆ ಎಂಥ ಪದಾರ್ಥವನ್ನು ಭೇದಿಸುವುದಿದೆ ಮತ್ತು ಬಾಣ ಬಿಡುವಂಥ ಸಾಮರ್ಥ್ಯವು ಎಷ್ಟಿವೆಯೆಂಬುದನ್ನು ತಿಳಿದುಕೊಳ್ಳಬೇಕಾಗುವುದು. ಯಾವ ಪದಾರ್ಥವನ್ನು ಭೇದಿಸುವುದಿದೆ ಅದರ ಜ್ಞಾನವಿಲ್ಲದೆ ಭೇದಿಸುವ ಸಾಧ್ಯತೆಯಿಲ್ಲ ಮತ್ತು ಬಾಣವು ಭೇದಿಸುವ ಸಾಮರ್ಥ್ಯದಿಂದ ರಹಿತವಾಗಿದ್ದರೂ ಕೂಡ ಭೇದಿಸುವ ಸಾಧ್ಯತೆಯಿಲ್ಲ. ಅದೇ ಪ್ರಕಾರ ಇಲ್ಲಿ ಆತ್ಮನನ್ನು ತಿಳಿದುಕೊಳ್ಳುವುದಿದೆ. ಜ್ಞಾನವು ಆತ್ಮನನ್ನು ಗುರಿಯನ್ನಾಗಿ ಮಾಡಿಕೊಂಡು ಆತ್ಮನನ್ನು ಭೇದಿಸುವುದಿದೆ ಎಂದರೆ ತಿಳಿದುಕೊಳ್ಳುವುದಿದೆ. ಆತ್ಮನು ಲಕ್ಷ್ಯನಿದ್ದಾನೆ ಮತ್ತು ಜ್ಞಾನವು ಅವನ ಲಕ್ಷಣವಿದೆ. ಆದುದರಿಂದ ಆತ್ಮಪದಾರ್ಥನು ಯಾವ ಪ್ರಮಾಣದಲ್ಲಿದ್ದಾನೆ ಮತ್ತು ಆತ್ಮಪದಾರ್ಥನನ್ನು ಲಕ್ಷ್ಯದಲ್ಲಿ ತಂದುಕೊಳ್ಳುವಂಥ ಜ್ಞಾನದ ಸಾಮರ್ಥ್ಯವು ಯಾವ ಪ್ರಮಾಣದಲ್ಲಿದೆಯೆಂಬುದನ್ನು ಕೂಡ ತಿಳಿದುಕೊಳ್ಳಬೇಕಾಗುವುದು. ಇಲ್ಲಿ ಜ್ಞಾನದ ಸಾಮರ್ಥ್ಯವು ಯಾವ ಪ್ರಮಾಣದಲ್ಲಿದೆಯೆಂಬುದನ್ನು ಕೂಡ ತಿಳಿದುಕೊಳ್ಳಬೇಕಾಗುವುದು. ಇಲ್ಲಿ ಜ್ಞಾನದ ಸಾಮರ್ಥ್ಯದ ಮಾತು ನಡೆಯುತ್ತಿದೆ. ಜ್ಞಾನದ ಸಾಮರ್ಥ್ಯವು ಸರ್ವಜ್ಞರನ್ನು ತಿಳಿದುಕೊಳ್ಳುವುದಿದೆ, ಜ್ಞಾನದ ಧ್ಯೇಯನು ಆತ್ಮನಿದ್ದಾನೆ ಅವನ ಲಕ್ಷ್ಯಮಾಡಿದ ಮೇಲೆ ಯಾವ ಜ್ಞಾನವು ಪ್ರಕಟವಾಗುತ್ತದೆ ಅದು ಸಮಸ್ತ ದ್ರವ್ಯಗಳನ್ನು ಯಥಾರ್ಥವಾಗಿ ತಿಳಿದುಕೊಳ್ಳುತ್ತದೆ. ಜಗತ್ತಿನಲ್ಲಿ ಎಷ್ಟು ದ್ರವ್ಯಗಳಿವೆ ಅವೆಲ್ಲವನ್ನು ಸರಿಯಾಗಿ ಜ್ಞಾನದಲ್ಲಿ ತೆಗೆದುಕೊಳ್ಳದಿದ್ದರೆ ಅವನು ಜ್ಞಾನದ ಸಾಮರ್ಥ್ಯವನ್ನು

ತಿಳಿದುಕೊಳ್ಳಲಿಲ್ಲ ಮತ್ತು ಯಾರಿಗೆ ಜ್ಞಾನದ ಸಾಮರ್ಥ್ಯದ ಅರಿವು ಮೂಡಿಲ್ಲ ಅವರು ಆತ್ಮನನ್ನು ಹಿಡಿದುಕೊಳ್ಳುವ ಸಾಧ್ಯತೆಯಿಲ್ಲ.

ಇಲ್ಲಿ ಧರ್ಮದ್ರವ್ಯ ಮತ್ತು ಅಧರ್ಮದ್ರವ್ಯದ ಮಾತು ನಡೆಯುತ್ತಿದೆ, ಆದರೆ ನಿಜವಾಗಿಯಂತೂ ಅವುಗಳನ್ನು ತಿಲಿದುಕೊಳ್ಳುವಂಥ ಜೀವದ ಜ್ಞಾನದ ಗಾಯನವೇ ನಡೆಯುತ್ತಿದೆ. ಈ ಸಮಸ್ತ ದ್ರವ್ಯಗಳನ್ನು ಜ್ಞಾನವು ತನ್ನಲ್ಲಿ ಇದ್ದುಕೊಂಡೇ ತಿಳಿಯುತ್ತದೆ. ಈ ಮಾತುಗಳು ಕಿವಿಯ ಮೇಲೆ ಬಿದ್ದರೂ ಕೂಡ ಯಾರು ನಿರ್ಣಯ ಮಾಡುವುದಿಲ್ಲ ಅವರಿಗೆ ಧರ್ಮವಾಗುವುದಿಲ್ಲ. ಆತ್ಮನ ಸ್ವಭಾವವು ಸರ್ವಜ್ಞವಿದೆ, ಅವನ ಪರ್ಯಾಯವು ತನ್ನನ್ನು ಸಮಸ್ತ ಪರದ್ರವ್ಯಗಳನ್ನು ಹಾಗೂ ಅವುಗಳ ಗುಣ-ಪರ್ಯಾಯಗಳನ್ನು ಬೇರೆ ಬೇರೆಯಾಗಿ ತಿಳಿದುಕೊಳ್ಳುವ ಸಾಮರ್ಥ್ಯವು ವಾಣಿಯಲ್ಲಿ ಇದೆ. ಇಷ್ಟನ್ನು ಯಾರು ತಿಳಿಯುವುದಿಲ್ಲ ಅವರು ಜ್ಞಾನ ಪರ್ಯಾಯದ ಸಾಮರ್ಥ್ಯವನ್ನು ತಿಳಿಯಲಿಲ್ಲ. ಆತ್ಮನು ಜ್ಞಾನಪ್ರಮಾಣನಿದ್ದಾನೆ ಮತ್ತು ಜ್ಞಾನವು ಜ್ಞೇಯಪ್ರಮಾಣವಿದೆ, ಜ್ಞೇಯದಲ್ಲಿ ಸ್ವ-ಪರಗಳೆರಡೂ ಬಂದು ಬಿಡುತ್ತವೆ. ಇಲ್ಲಿ ಧರ್ಮ ಮತ್ತು ಅಧರ್ಮದ್ರವ್ಯದ ಜ್ಞಾನ ಮಾಡಿಸಲಾಗಿದೆ.

**ಭಾವಾರ್ಥ :-** ಎಲ್ಲಿಯವರೆಗೆ ಜೀವ-ಪುದ್ಗಲಗಳು ಗತಿ-ಸ್ಥಿತಿ ಮಾಡುತ್ತವೆ ಅಲ್ಲಿಯ ವರೆಗೆ ಲೋಕವಿದೆ. ಈ ಲೋಕದ ಮರ್ಯಾದೆಯು ಕಟ್ಟಲ್ಪಟ್ಟಿದೆ ಅಲ್ಲಿಯವರೆಗೆ ಜೀವ ಮತ್ತು ಪುದ್ಗಲಗಳು ಗತಿ ಅಥವಾ ಸ್ಥಿತಿ ಮಾಡುವ ಸಾಧ್ಯತೆಯಿದೆ ಮತ್ತು ಅಲ್ಲಿಯವರೆಗಿನ ಕ್ಷೇತ್ರವನ್ನು ಲೋಕವೆಂದು ಹೇಳಲಾಗುತ್ತದೆ. ಲೋಕದ ನಂತರವಿರುವ ಬರಿದಾದ ಭಾಗವನ್ನು ಅಲೋಕವೆಂದು ಹೇಳಲಾಗುತ್ತದೆ. ಅಲ್ಲಿ ಕೇವಲ ಆಕಾಶವಿದೆ, ಲೋಕ-ಅಲೋಕದ ಭೇದವನ್ನು ಧರ್ಮ-ಅಧರ್ಮ ದ್ರವ್ಯದಿಂದ ತಿಳಿದುಕೊಳ್ಳಬೇಕು. ಲೋಕ-ಅಲೋಕದ ಮರ್ಯಾದೆಯಂತೂ ಅನಾದಿಯಿಂದ ಇದೆ ಆದರೆ ಧರ್ಮ ಮತ್ತು ಅಧರ್ಮದ್ರವ್ಯಗಳನ್ನು ಸಿದ್ಧಮಾಡುವ ಸಲುವಾಗಿ ಹೀಗೆ ಹೇಳಲಾಗಿದೆ. ಸರ್ವಜ್ಞ ಭಗವಂತರು ಆರು ದ್ರವ್ಯಗಳನ್ನು ನೋಡಿದ್ದಾರೆ. ಅದರಲ್ಲಿ ಧರ್ಮ-ಅಧರ್ಮಗಳು ಯಾವ ಕ್ಷೇತ್ರದಲ್ಲಿ ಇವೆ ಅಲ್ಲಿಯವರೆಗೆ ಲೋಕ ಮತ್ತು ಉಳಿದ ಬರಿದಾದ ಭಾಗವನ್ನು ಅಲೋಕವೆಂದು ತಿಳಿಯುವುದು.

ಆ ಧರ್ಮ-ಅಧರ್ಮಗಳು ತಾವು ತಮ್ಮ ಪ್ರದೇಶಗಳ ಅಪೇಕ್ಷೆಯಿಂದ ಎರಡೂ ಬೇರೆ ಬೇರೆಯಿವೆ, ಆದರೆ ಒಂದು ಲೋಕಾಕಾಶದ ಅಪೇಕ್ಷೆಯಿಂದ ಬೇರೆಯಿಲ್ಲ. ಏಕೆಂದರೆ ಲೋಕಾಕಾಶದ ಯಾವ ಪ್ರದೇಶಗಳಲ್ಲಿ ಧರ್ಮದ್ರವ್ಯವಿದೆ ಅದೇ ಪ್ರದೇಶಗಳಲ್ಲಿ ಅಧರ್ಮದ್ರವ್ಯವಿದೆ. ಅವೆರಡೂ ಹಲನ ಚಲನದ ಕ್ರಿಯೆಯಿಂದ ರಹಿತ ಎಂದರೆ ಸ್ಥಿರವಿವೆ, ಮತ್ತು ಸರ್ವಲೋಕವ್ಯಾಪಿಯಿವೆ. ಯಾವ ಪ್ರಕಾರ ಲೋಕದ ಅಗ್ರಭಾಗದಲ್ಲಿ ಸಮಸ್ತ ಸಿದ್ಧ ಭಗವಂತರು ಏಕಕ್ಷೇತ್ರದಲ್ಲಿದ್ದಾರೆ ಆದರೆ ಅವರೆಲ್ಲರ ಸತ್ತಾ ಮತ್ತು ಅನುಭವವು ಬೇರೆ ಬೇರೆಯಿದೆ. ಭಾವ ಅಪೇಕ್ಷೆಯಿಂದ ಬೇರೆಯಿದ್ದರು ಕೂಡ ಆಕಾಶ ಕ್ಷೇತ್ರದ ಅಪೇಕ್ಷೇಯಿಂದ ಬೇರೆಯಿಲ್ಲ. ಅದೇ ಪ್ರಕಾರ ಧರ್ಮ-ಅಧರ್ಮಗಳು ಭಾವ ಅಪೇಕ್ಷೆಯಿಂದ ಭಿನ್ನತೆಯಿದ್ದರೂ ಲೋಕಾಕಾಶದಲ್ಲಿ ವಾಸಿಸಿವೆ. ಆಕಾಶದ ಅಪೇಕ್ಷೆಯಿಂದ ಭಿನ್ನತೆಯಿಲ್ಲ, ಧರ್ಮ-ಅಧರ್ಮಗಳು ಸಮಸ್ತ ಲೋಕವ್ಯಾಪಿಯಾದ ಜೀವ ಮತ್ತು ಪುದ್ಗಲದ ಗತಿ-ಸ್ಥಿತಿಯಲ್ಲಿ ನಿಮಿತ್ತ ಕಾರಣವಿರುವುದರಿಂದ ಎರಡೂ ದ್ರವ್ಯಗಳು ಲೋಕದಷ್ಟು ಅಸಂಖ್ಯಾತ ಪ್ರದೇಶಿಯಿವೆ.

ಧರ್ಮ ಮತ್ತು ಅಧರ್ಮ ದ್ರವ್ಯಗಳು ಪ್ರೇರಕವಾಗಿ ಗತಿ-ಸ್ಥಿತಿಯ ಕಾರಣವಿಲ್ಲ ಆದರೆ ಅತ್ಯಂತ ಉದಾಸೀನವಿವೆಯೆಂಬುದನ್ನು ಈಗ ತಿಳಿಸಿಕೊಡುತ್ತಾರೆ -

**ಣ ಯ ಗಚ್ಛದಿ ಧಮ್ಮತ್ಥೀ ಗಮಣಂ ಣ ಕರೇದಿ ಅಣ್ಣದವಿಯಸ್ಸ ।**
**ಹವದಿ ಗದಿಸ್ಸ ಯ ಪಸರೋ ಜೀವಾಣಂ ಪೋಗ್ಗಲಾಣಂ ಚ ।।೮೮।।**

**ಗಮನ ತಾ ಮಾಡುವುದಿಲ್ಲ ಧರ್ಮಾಸ್ತಿ ಪರದ್ರವ್ಯಗಳ ಮಾಡಿಸುವುದಿಲ್ಲ।**
**ಗಮನದಲುದಾಸೀನ ಪ್ರಸಾರಕವಿದೆಯದು ಜೀವ-ಪುದ್ಗಲಗಳಿಗೆ ॥೮೮॥**

೧) ಈ ಗಾಥೆಯಲ್ಲಿ ಜ್ಞಾನದ ಮಹತ್ವವನ್ನು ತಿಳಿಸಿದೆ, ಸಮಸ್ತ ಜ್ಞೇಯಗಳನ್ನು ತಿಳಿದುಕೊಳ್ಳುವ ಸಾಮರ್ಥ್ಯ ತಿಳಿಸಿದೆ.

೨) ಪ್ರತಿಯೊಂದು ಪದಾರ್ಥವು ಸ್ವತಂತ್ರವಿದೆ, ಅದರಲ್ಲಿ ತಮ್ಮಿಂದಲೇ ಕಾರ್ಯವಾಗುತ್ತದೆ. ಅದು ಉಪಾದಾನ ಕಾರಣವಿದೆ ಮತ್ತು ಆಗ ಬೇರೆ ವಸ್ತುಗಳು ಜತೆಯಲ್ಲಿ ಇದ್ದರೆ ಅವನ್ನು ನಿಮಿತ್ತ ಕಾರಣವೆಂದು ಹೇಳಲಾಗುತ್ತದೆ. ನಿಮಿತ್ತದ ದಾರಿಕಾಯಬೇಕಾಗುವುದಿಲ್ಲ ಹೀಗೆ ಎರಡು ಪ್ರಕಾರದ ಜ್ಞಾನಕೂಡ ಮಾಡಿಸಲಾಗಿದೆ.

ಪ್ರತಿಯೊಂದು ದ್ರವ್ಯದಲ್ಲಿ ಸಮಯ ಸಮಯಕ್ಕೆ ಕಾರ್ಯವಾಗುತ್ತಲಿದೆ. ಆ ಕಾರ್ಯದಲ್ಲಿ ಒಂದು ನಿಶ್ಚಯಕಾರಣ ಮತ್ತು ಒಂದು ವ್ಯವಹಾರಕಾರಣವೆಂದು ಎರಡು ಕಾರಣಗಳಿವೆ. ಈ ಕೋಲಿನಲ್ಲಿ ಎರಡು ತುಂಡಾಗುತ್ತವೆ. ಅದರಲ್ಲಿ ಆ ಕೋಲಿನ ಆ ಸಮಯದ ಪರ್ಯಾಯದ ಯೋಗ್ಯತೆಯು ಅದು ಉಪಾದಾನ ಕಾರಣವಿದೆ ಮತ್ತು ಕರಗಸವು ನಿಮಿತ್ತಕಾರಣವಿದೆ. ಕರಗಸದ ಕಾರಣದಿಂದ ಆ ಕೋಲಿನಲ್ಲಿ ತುಂಡುಗಳಾಗುವುದಿಲ್ಲ, ಕರಗಸದ ಕಾರಣದಿಂದ ತುಂಡುಗಳು ಆಗುತ್ತಿದ್ದರೆ ಆಕಾಶದ ತುಂಡುಕೂಡ ಆಗಬೇಕಾಗುವುದು. ಆದರೆ ಆಕಾಶದಲ್ಲಿ ತುಂಡುಗಳಾಗುವ ಯೋಗ್ಯತೆಯಿಲ್ಲದಿರುವುದರಿಂದ ಆಗುವುದಿಲ್ಲ ಮತ್ತು ಕೋಲಿನಲ್ಲಿ ಆ ಯೋಗ್ಯತೆಯಿರುವುದರಿಂದ ತುಂಡುಗಳಾಗುತ್ತವೆ, ಶಿಷ್ಯನ ತಿಳಿದುಕೊಳ್ಳುವ ಯೋಗ್ಯತೆಯು ಅದು ಉಪಾದಾನ ಕಾರಣವಿದೆ ಮತ್ತು ಗುರುಗಳು ನಿಮಿತ್ತ ಕಾರಣರಿದ್ದಾರೆ, ಗುರುಗಳಿಂದ ಶಿಷ್ಯನು ತಿಳಿದುಕೊಳ್ಳುವುದಿಲ್ಲ ಆದರೆ ಶಿಷ್ಯನು ಯಾವಾಗ ತಿಳಿದುಕೊಳ್ಳುತ್ತಾನೆ ಆಗ ಗುರುಗಳು ನಿಮಿತ್ತರೂಪದಿಂದ ಇರುತ್ತಾರೆ. ಚಪಾತಿ ಆಗುವ ಯೋಗ್ಯತೆಯು ಉಪಾದಾನ ಕಾರಣವಿದೆ ಮತ್ತು ಚಪಾತಿ ಬೇಯಿಸುವ ಹೆಂಚು, ಅಗ್ನಿ ಹಾಗೂ ಮಹಿಳೆಯು ನಿಮಿತ್ತ ಕಾರಣಳಿದ್ದಾಳೆ. ಪ್ರತಿಯೊಂದು ಆತ್ಮ ಮತ್ತು ಪರಮಾಣುಗಳು ಸ್ವತಂತ್ರತೆಯಿಂದ ಪರಿಣಮಿಸುತ್ತಲಿವೆ. ಆಗ ಬೇರೆ ವಸ್ತುವನ್ನು ನಿಮಿತ್ತವೆಂದು ಹೇಳಲಾಗುತ್ತದೆ ಅದೇ ಪ್ರಕಾರ ಇಲ್ಲಿ ಜೀವ ಮತ್ತು ಪುದ್ಗಲಗಳು ತಮ್ಮ ಕಾರಣದಿಂದ ಗತಿ-ಸ್ಥಿತಿ ಮಾಡಿದರೆ ಧರ್ಮ-ಅಧರ್ಮಗಳನ್ನು ನಿಮಿತ್ತಕಾರಣವೆಂದು ಹೇಳಲಾಗುತ್ತದೆ.

ಧರ್ಮದ್ರವ್ಯವು ಚಲನೆ-ವಲನೆ ಮಾಡುವುದಿಲ್ಲ ಮತ್ತು ಅನ್ಯಜೀವ-ಪುದ್ಗಲಗಳಿಗೆ ಪ್ರೇರಕವಾಗಿ ಚಲನೆ-ವಲನೆ ಕ್ರಿಯೆಯನ್ನು ಮಾಡಿಸುವುದಿಲ್ಲ. ಧರ್ಮದ್ರವ್ಯವು ಜೀವ-ಪುದ್ಗಲಗಳಿಗೆ ಗತಿಯಲ್ಲಿ ನಿಮಿತ್ತವಿದೆ. ಅದೇ ಪ್ರಕಾರ ಅಧರ್ಮದ್ರವ್ಯವು ಸ್ಥಿತಿಯಲ್ಲಿ ಕೇವಲ ನಿಮಿತ್ತಕಾರಣವಿದೆ.

ಧರ್ಮ-ಅಧರ್ಮದ್ರವ್ಯಗಳು ಪ್ರೇರಕ ಕಾರಣವಿಲ್ಲವೆಂಬುದನ್ನು ತಿಳಿಸಲಾಗಿದೆ. ಗಮನ ಮಾಡುತ್ತಾರುವ ಕುದುರೆಯ ಮೇಲೆ ಮನುಷ್ಯನು ಕುಳಿತುಕೊಂಡಿದ್ದರೆ ಆ ಮನುಷ್ಯನು ಗತಿಯಾಗುವಲ್ಲಿ ಕುದುರೆಯು ಪ್ರೇರಕ ನಿಮಿತ್ತವಿದೆ. ಏಕಂದರೆ ಕುದುರೆಯು ಸ್ವಯಂ ಗಮನಮಾಡುತ್ತಿದೆ ಮತ್ತು ನಂತರ ಅದು ಸ್ಥಿರ ನಿಲ್ಲುತ್ತದೆ ಆದರೆ ಧರ್ಮ-ಅಧರ್ಮ ದ್ರವ್ಯಗಳು ಗಮನಮಾಡಿ ಸ್ಥಿರ ನಿಂತುಕೊಂಡಿವೆಯೆಂಬುದಾಗಿಲ್ಲ. ಆದುದರಿಂದ ಧರ್ಮ-ಅಧರ್ಮಗಳನ್ನು ಉದಾಸೀನ ನಿಮಿತ್ತವೆಂದು ತಿಳಿಯುವುದು.

ಜೀವನು ತನ್ನ ಆತ್ಮನ ಆಶ್ರಯದಿಂದ ಸಿದ್ಧ ದಶೆಯನ್ನು ಪ್ರಕಟಮಾಡಿಕೊಂಡರೆ ಆಗ ತೀರ್ಥಂಕರ ಪ್ರಕೃತಿ, ಸಂಹನನ ಮೊದಲಾದವು ನಿಮಿತ್ತವಿವೆಯೆಂಬ ದೃಷ್ಟಾಂತವನ್ನು ಈ ಮೊದಲು ಹೇಳಲಾಗಿತ್ತು. ಅದೇ ಪ್ರಕಾರ ಧರ್ಮದ್ರವ್ಯವು ಗತಿ ಮಾಡುತ್ತಿರುವ ಜೀವ ಮತ್ತು ಪುದ್ಗಲಗಳಿಗೆ ನಿಮಿತ್ತವಿದೆ ಮತ್ತು ಯಾವ ಜೀವನು ಶುದ್ಧ ಆತ್ಮನಲ್ಲಿ ಸ್ಥಿರತೆ ಮಾಡುತ್ತಾನೆ ಅವನಿಗೆ ಪಂಚಪರಮೇಷ್ಠಿಗಳ ಸ್ಮರಣೆಯು ನಿಮಿತ್ತವಿದೆಯೆಂದು ಹೇಳಲಾಗಿದೆ. ಆದರೆ ಯಾರಿಗೆ?

ಯಾವನು ಪಂಚಪದಗಳ ವಿಚಾರಮಾಡುತ್ತ ಹೀಗೆ ಯೋಚಿಸುತ್ತಾನೆ-ಓಹೋ ! ಆ ಪಂಚಪದಗಳು ಆತ್ಮನವಿವೆ, ಜಡದ್ದು ಇಲ್ಲ. ಅರಹಂತ ಮತ್ತು ಸಿದ್ಧರು ಪೂರ್ಣ ದಶೆಯನ್ನು ಪ್ರಾಪ್ತಮಾಡಿಕೊಂಡಿದ್ದಾರೆ ಮತ್ತು ಆಚಾರ್ಯ, ಉಪಾಧ್ಯಾಯ ಹಾಗೂ ಸಾಧುಗಳು ಅವರು ಪೂರ್ಣ ಪದವನ್ನು ಸಾಧಿಸುವವರಿದ್ದಾರೆ, ಆ ಪದಗಳು ಆತ್ಮನೊಳಗಿಂದ ಆಗುತ್ತವೆಯೆಂದು ತಿಳಿದುಕೊಂಡು ನಾನು ಪರಿಪೂರ್ಣ ಆತ್ಮನಿದ್ದೇನೆಂದು ಜ್ಞಾನ ಮಾಡಿಕೊಂಡು ಸ್ವಭಾವದಲ್ಲಿ ಸ್ಥಿರತೆ ಮಾಡುತ್ತೇನೆಂದು ಹೇಳುವವನಿಗೆ ಪಂಚಪರಮೇಷ್ಠಿಗಳ ಸ್ಮರಣೆಯ ವಿಕಲ್ಪವನ್ನು ನಿಮಿತ್ತವೆಂದು ಹೇಳಲಾಗುತ್ತದೆ.

ಯಾವ ಜೀವನು ಆತ್ಮನ ಯಥಾರ್ಥ ಮಾತುಗಳನ್ನು ಧಾರಣಮಾಡಿ ಇಟ್ಟುಕೊಂಡಿಲ್ಲ ಅವನು ಯಾವ ಪ್ರಕಾರ ವಾದ ಮಾಡುವನು ? ಕುರುಡನಿಗೆ ಸ್ವಪ್ನದಲ್ಲಿ ನೋಡಿದ ಮನುಷ್ಯನ ಅನುಭವವು ಬರುವುದಿಲ್ಲ ಆದರೆ ಕುರುಡ ಮನುಷ್ಯನಿಗೆ ಹೇಗೆ ಬರುವುದಿಲ್ಲ ಹಾಗೆ ಯಾವನಿಗೆ ಪಂಚಪರಮೇಷ್ಠೀ ರೂಪವಾಗುವ ಯೋಗ್ಯತೆಯುಳ್ಳ ನಾನು ಆತ್ಮನಿದ್ದೇನೆಂದು ತನ್ನ ಆತ್ಮನನ್ನು ಧಾರಣಮಾಡಿ ಇಟ್ಟುಕೊಂಡಿಲ್ಲ ಅವನಿಗೆ ಕೂಡ ಪಂಚಪರಮೇಷ್ಠಿಯ ಸ್ಮರಣೆಯು ನಿಮಿತ್ತವಾಗುವುದಿಲ್ಲ. ಆದರೆ ಯಾವ ಆತ್ಮನು ಓಹೋ ! ನಾನು ಆತ್ಮನಿದ್ದೇನೆ, ಪಂಚಪರಮೇಷ್ಠಿಗಳಾಗಿದ್ದಾರೆ ಅವರು ಆತ್ಮನೊಳಗಿಂದಲೇ ಆಗಿದ್ದಾರೆ. ನಾನು ಕೂಡ ಅಂಥ ಆತ್ಮನೇ ಇದ್ದೇನೆಂದು ವಿಚಾರ ಮಾಡಿ ಪ್ರಜ್ಞೆಯೊಡನೆ ಸ್ವಭಾವದಲ್ಲಿ ಸ್ಥಿರತೆ ಮಾಡುತ್ತಾನೆ. ಅವನಿಗೆ ಪಂಚಪರಮೇಷ್ಠಿಗಳ ಸ್ಮರಣೆಯನ್ನು ನಿಮಿತ್ತವೆಂದು ಹೇಳಲಾಗುತ್ತದೆ. ಆ ದೃಷ್ಟಾಂತದ ಅನುಸಾರ ಜೀವ ಮತ್ತು ಪುದ್ಗಲಗಳು ತಮ್ಮ ಕಾರಣದಿಂದ ಗತಿಪೂರ್ವಕ ಸ್ಥಿರತೆ ಮಾಡುತ್ತವೆ. ಅವುಗಳಿಗೆ ಅಧರ್ಮದ್ರವ್ಯವನ್ನು ನಿಮಿತ್ತವೆಂದು ಹೇಳಲಾಗುತ್ತದೆ.

**ಭಾವಾರ್ಥ :-** ಇಲ್ಲಿ ಸ್ವತಂತ್ರತೆಯ ಮಾತು ಹೇಳಿ ಪ್ರೇರಕ ಮತ್ತು ಉದಾಸೀನ ನಿಮಿತ್ತ ಯಾವುದಕ್ಕೆ ಹೇಳುತ್ತಾರೆಂಬುದನ್ನು ತಿಳಿಸಿಕೊಡಲಾಗಿದೆ ಯಾವ ಪ್ರಕಾರ ಗಾಳಿಯು ತನ್ನ ಚಂಚಲ ಸ್ವಭಾವದಿಂದ ಬಾವುಟದ ಚಲನೆ-ವಲನೆ ರೂಪದ ಕ್ರಿಯೆಯ ಕರ್ತೃವಾಗಿ ಕಂಡುಬರುತ್ತದೆ. ಅದೇ ಪ್ರಕಾರ ಧರ್ಮದ್ರವ್ಯವು ಪ್ರೇರಕ ನಿಮಿತ್ತವಿಲ್ಲ. ಅಲ್ಲಿ ಗಾಳಿಯು ಬಾವುಟವನ್ನು ಅಲುಗಾಡಿಸಿದೆಯೆಂಬುದು ಪ್ರೇರಕದ ಅರ್ಥವಲ್ಲ. ಆದರೆ ಗಾಳಿಯ ಕ್ರಿಯೆಯು ಚಲನ-ವಲನವುಳ್ಳದ್ದಿದೆ. ಆದುದರಿಂದ ಗಾಳಿಯನ್ನು ಪ್ರೇರಕವೆಂದು ಹೇಳಲಾಗುತ್ತದೆ. ಪ್ರೇರಕ ನಿಮಿತ್ತವು ಇನ್ನೊಂದಕ್ಕೆ ಹೆಚ್ಚು ಸಹಾಯ ಮಾಡುತ್ತದೆ ಮತ್ತು ಉದಾಸೀನ ನಿಮಿತ್ತವು ಸಹಾಯ ಮಾಡುವುದಿಲ್ಲವೆಂದು ಅದರ ಅರ್ಥವಿಲ್ಲ. ಪವನವು ತನ್ನಲ್ಲಿ ಸಕ್ರಿಯವಿರುವುದರಿಂದ ಪ್ರೇರಕವಿದೆ ಮತ್ತು ಧರ್ಮವು ಗತಿಮಾನವಿಲ್ಲ ಆದರೆ ಸ್ಥಿರವಿದೆ. ಆದುದರಿಂದ ನಿಷ್ಕ್ರಿಯ ಅಥವಾ ಉದಾಸೀನವಿದೆ. ಈ ಪ್ರಕಾರ ನಿಮಿತ್ತದ ಅಂತರದಿಂದ ಉಪಾದಾನದಲ್ಲಿ ಅಂತರವಾಗುತ್ತದೆಯೆಂಬುದು ಇದರ ಅರ್ಥವಿಲ್ಲ. ಲಡ್ಡು ಮಾಡುತ್ತಿರುವ ಸಮಯದಲ್ಲಿ ಕೈಗಳ ಕ್ರಿಯೆಯು ಗತಿ ಮಾಡುತ್ತದೆ ಅದಕ್ಕಾಗಿ ಕೈಗಳನ್ನು ಪ್ರೇರಕ ನಿಮಿತ್ತವೆಂದು ಹೇಳಲಾಗುತ್ತದೆ ಆದರೆ ಕೈಗಳು ಚಲಿಸುತ್ತವೆಂದು ಲಡ್ಡುವಿನಲ್ಲಿ ಕ್ರಿಯೆಯಾಗುತ್ತದೆಯೆಂಬುದು ಇದರ ಅರ್ಥವಿಲ್ಲ ಮತ್ತು ಬಿರುಗಾಳಿಯು ಬೀಸುತ್ತದೆ. ಆಗ ಧೂಳಿನ ಕಣಗಳು ಏಳುತ್ತವೆ. ಅದು ತನ್ನ ಯೋಗ್ಯತೆಯ ಕಾರಣದಿಂದ ಇದೆ ಮತ್ತು ಪವನವು ನಿಮಿತ್ತವಿದೆ ಆದರೆ ಪವನವು ಗತಿ ಮಾಡುತ್ತಿರುವುದರಿಂದ ಪವನವನ್ನು ಪ್ರೇರಕ ಕಾರಣವೆಂದು ಹೇಳಲಾಗುತ್ತದೆ ಮತ್ತು ಧರ್ಮದ್ರವ್ಯವು ಎಂದೂ ಚಲನೆ-ವಲನೆ ಮಾಡುವುದಿಲ್ಲ, ಅದಕ್ಕಾಗಿಯೇ ಅದನ್ನು ಉದಾಸೀನ ನಿಮಿತ್ತವೆಂದು ಹೇಳಲಾಗಿದೆ. ಆ ಧರ್ಮದ್ರವ್ಯವು ಜೀವ ಮತ್ತು ಪುದ್ಗಲದ ಗತಿಯಲ್ಲಿ ಯಾವ ರೀತಿಯಿಂದ ನಿಮಿತ್ತವಾಗುತ್ತದೆಯೆಂಬುದನ್ನು ದೃಷ್ಟಾಂತದಿಂದ ತಿಳಿಸಿಕೊಡಲಾಗಿದೆ.

ನಿಶ್ಚಲವಾದ ಸರೋವರದಲ್ಲಿ ನೀರು ಮೀನುಗಳಿಗೆ ಗತಿಯಲ್ಲಿ ಸಹಕಾರೀ ಕಾರಣವಿದೆ. ನೀರು ಸ್ವಯಂ

ಪ್ರೇರಕವಾಗಿ ಗಮನ ಮಾಡಿಸುವುದಿಲ್ಲ. ನೀರು ಸ್ವಯಂ ಶಾಂತ ನಿಶ್ಚಲವಾಗಿ ನಿಂತುಕೊಂಡಿದೆ. ಆ ಮೀನುಗಳು ತಮ್ಮ ಉಪಾದಾನ ಕಾರಣದಿಂದ ಗಮನ ಮಾಡುತ್ತವೆ ಅವಕ್ಕೆ ನೀರನ್ನು ನಿಮಿತ್ತವೆಂದು ಹೇಳಲಾಗುತ್ತದೆ ಆದರೆ ನೀರು ಇಲ್ಲದೆ ಮೀನುಗಳು ಗಮನ ಮಾಡುವ ಸಾಧ್ಯತೆಯಿಲ್ಲದಿರುವುದರಿಂದ ನೀರು ನಿಮಿತ್ತ ಮಾತ್ರ ಕಾರಣವಿದೆ. ಆ ದೃಷ್ಟಾಂತದ ಅನುಸಾರ ಜೀವ ಮತ್ತು ಪುದ್ಗಲಗಳು ತಮ್ಮ ಕಾರಣದಿಂದ ಕ್ಷೇತ್ರಾಂತರ ಮಾಡುತ್ತವೆ ಅದು ಉಪಾದಾನ ಕಾರಣವಿದೆ ಅಲ್ಲಿ ಧರ್ಮದ್ರವ್ಯವು ಅವನ್ನು ನಡೆಯಿಸುವುದಿಲ್ಲ ಅದರಂತೆ ತಾನು ನಡೆಯುವುದಿಲ್ಲ, ಆದರೆ ಯಾವುದು ಗಮನ ಮಾಡುತ್ತದೆ ಅದಕ್ಕೆ ಶಾಂತ ಜಲದಂತೆ ನಿಮಿತ್ತ ಕಾರಣವಿರುವುದರಿಂದ ಇದನ್ನು ಉದಾಸೀನ ಕಾರಣವೆಂದು ಹೇಳಲಾಗುತ್ತದೆ.

ಈ ಪ್ರಕಾರ ಅಧರ್ಮದ್ರವ್ಯವು ನಿಮಿತ್ತ ಮಾತ್ರವಿದೆ, ಕುದುರೆಯು ಗಮನ ಮಾಡುತ್ತಿರುವಾಗ ಮತ್ತು ಅದು ನಿಂತುಕೊಳ್ಳುತ್ತದೆ. ಆಗ ಮೇಲೆ ಕುಳಿತುಕೊಂಡ ಮನುಷ್ಯನು ಕೂಡ ನಿಂತುಕೊಂಡುಬಿಡುತ್ತಾನೆ. ಅದರಲ್ಲಿ ಆ ಮನುಷ್ಯನ ಆತ್ಮ ಮತ್ತು ಶರೀರವು ಅದೇ ಸ್ಥಾನದಲ್ಲಿ ಸ್ಥಿರವಾಗಿರುವ ಯೋಗ್ಯತೆಯುಳ್ಳದ್ದಿರುವುದರಿಂದ ಆಗ ಕುದುರೆಯು ನಿಂತುಕೊಂಡಿರುವುದನ್ನು ನಿಮಿತ್ತವೆಂದು ಹೇಳುತ್ತಾರೆ ಆದರೆ ಕುದುರೆಯು ನಿಂತುಕೊಂಡಿತು ಅದಕ್ಕಾಗಿ ಆ ಮನುಷ್ಯನಿಗೆ ನಿಂತುಕೊಳ್ಳಬೇಕಾಯಿತೆಂಬ ಪರಾಧೀನತೆಯಿಲ್ಲ. ಎಲ್ಲವೂ ಸ್ವತಂತ್ರವಿವೆ ಆದರೆ ಗಮನ ಮಾಡುತ್ತಿರುವ ಆ ಕುದುರೆಯುನಿಂತುಕೊಳ್ಳುವುದರಿಂದ ಅದು ನಿಮಿತ್ತ ಕಾರಣವಾಯಿತು. ಅದೇ ಪ್ರಕಾರ ಅಧರ್ಮದ್ರವ್ಯವು ಸಕ್ರಿಯ ನಿಮಿತ್ತವಿಲ್ಲವೆಂಬುದನ್ನು ತಿಳಿಸಿಕೊಡುವುದಿದೆ ಅಧರ್ಮದ್ರವ್ಯವು ಮೊದಲು ಗಮನ ಮಾಡುತ್ತಿತ್ತು ಮತ್ತು ನಂತರ ನಿಂತುಕೊಂಡ ಜೀವ-ಪುದ್ಗಲಗಳ ಸ್ಥಿತಿಯಲ್ಲಿ ನಿಮಿತ್ತವಾಯಿತು ಎಂಬುದಾಗಿಲ್ಲ, ಆದರೆ ಅಧರ್ಮದ್ರವ್ಯವು ಗತಿಮಾನವಿಲ್ಲ, ಅದು ಎಲ್ಲಿ ಇದೆ ಅಲ್ಲಿಯೇ ಉಳಿದುಕೊಂಡಿದೆ, ಆದುದರಿಂದ ಅದರಲ್ಲಿ ಗತಿಪೂರ್ವಕ ಸ್ಥಿತಿಯ ಪರಿಣಾಮದ ಅವಸ್ಥೆಯಿರುವುದಿಲ್ಲ ಎಂದಮೇಲೆ ಅಧರ್ಮದ್ರವ್ಯವು ಯಾವರೀತಿಯಿಂದ ಸ್ಥಿತಿಕ್ರಿಯೆಯ ಸಹಕಾರೀ ಕಾರಣವಾಗುತ್ತದೆಂಬುದನ್ನು ತಿಳಿಸಿಕೊಡಲಾಗಿದೆ.

ಗಮನ ಮಾಡುತ್ತಿರವ ಕುದುರೆಯು ನಿಂತುಕೊಂಡು ಬಿಡುತ್ತದೆ. ಅದರಲ್ಲಿ ಕುದುರೆಗೆ ನಿಂತುಕೊಳ್ಳುವಲ್ಲಿ ಪೃಥ್ವಿಯನ್ನು ನಿಮಿತ್ತವೆಂದು ಹೇಳಲಾಗುತ್ತದೆ. ಪೃಥ್ವಿಯು ಮೊದಲು ಗಮನ ಮಾಡುತ್ತಿರಲಿಲ್ಲ ಮತ್ತು ನಂತರ ಸ್ಥಿರವಾಯಿತೆಂಬುದಾಗಿಲ್ಲ, ಆದರೆ ಅದು ಅನಾದಿಯಿಂದಲೇ ಸ್ಥಿರವಿದೆ. ಅದನ್ನು ಗಮನ ಮಾಡುತ್ತಿರುವ ಕುದುರೆಗೆ ಸ್ಥಿರವಾಗುವಲ್ಲಿ ನಿಮಿತ್ತವೆಂದು ಹೇಳಲಾಗುತ್ತದೆ. ಅದೇ ರೀತಿಯಿಂದ ಅಧರ್ಮದ್ರವ್ಯವು ಜೀವ-ಪುದ್ಗಲಗಳಿಗೆ ನಿಂತುಕೊಳ್ಳುವಲ್ಲಿ ಉದಾಸೀನ ನಿಮಿತ್ತವಿದೆ. ಈ ಗಾಥೆಯಲ್ಲಿ ಉಪಾದಾನ ಮತ್ತು ನಿಮಿತ್ತದ ಮಾತನ್ನು ಅತ್ಯಂತ ಸ್ಪಷ್ಟ ಹಾಗೂ ಸರಸವಾಗಿ ತಿಳಿಸಿಕೊಟ್ಟು ಪ್ರೇರಕ ಮತ್ತು ಉದಾಸೀನ ನಿಮಿತ್ತದ ಸ್ಪಷ್ಟತೆ ಮಾಡಲಾಗಿದೆ.

ಧರ್ಮದ್ರವ್ಯವು ಪರದ್ರವ್ಯಗಳನ್ನು ಗಮನಮಾಡಿಸುವುದಿಲ್ಲ, ಆದರೆ ಜೀವ-ಪುದ್ಗಲಗಳು ಸ್ವಯಂ ಗಮನ ಮಾಡುತ್ತಿದ್ದರೆ ಧರ್ಮದ್ರವ್ಯವನ್ನು ನಿಮಿತ್ತವೆಂದು ಹೇಳಲಾಗುತ್ತದೆ. ಮೂಲ ಪಾಠದಲ್ಲಿ 'ಸ್ವಕ ಪರಿಣಾಮೈಃ' ಎಂಬ ಶಬ್ದವಿದೆ ಎಂದರೆ ಜೀವ-ಪುದ್ಗಲಗಳು ತಮ್ಮ ಪರಿಣಾಮದಿಂದ ಗತಿ-ಸ್ಥಿತಿರೂಪಗಳಾಗುತ್ತವೆ. ಜೀವ-ಪುದ್ಗಲಗಳು ಸ್ವಯಂ ಸ್ಥಿರವಾಗುತ್ತವೆ ಆಗ ಅಧರ್ಮದ್ರವ್ಯವನ್ನು ನಿಮಿತ್ತವೆಂದು ಹೇಳಲಾಗುತ್ತದೆ.

ಧರ್ಮದ್ರವ್ಯವು ಎಂದೂ ಗತಿರೂಪವಾದ ಅವಸ್ಥೆಯನ್ನು ಧಾರಣಮಾಡುವುದಿಲ್ಲ ಮತ್ತು ಅಧರ್ಮದ್ರವ್ಯವು ಸ್ವಯಂ ಗತಿಪೂರ್ವಕ ಸ್ಥಿತಿ ಅವಸ್ಥೆಯನ್ನು ಧಾರಣ ಮಾಡುವುದಿಲ್ಲ. ಆದರೆ ಜೀವಪುದ್ಗಲಗಳ ಗತಿ - ಸ್ಥಿತಿಯಲ್ಲಿ ನಿಮಿತ್ತ

ಕಾರಣವಿವೆ, ಆದರೆ ಮುಖ್ಯ ಕಾರಣವಿಲ್ಲವೆಂಬುದನ್ನು ತಿಳಿಸಿಕೊಡಲಾಗಿದೆ.

ಈಗ ಧರ್ಮ ಮತ್ತು ಅಧರ್ಮದ ಉದಾಸೀನತೆಯ ಸಂಬಂಧದಲ್ಲಿ ಹೇತು ಹೇಳುತ್ತಾರೆ -

**ವಿಜ್ಜದಿ ಜೇಸಿಂ ಗಮಣಂ ಠಾಣಂ ಪುಣ ತೇಸಿಮೇವ ಸಂಭವದಿ ।**
**ತೇ ಸಗಮಪರಿಣಾಮೇಹಿಂ ದು ಗಮಣಂ ಠಾಣಂ ಚ ಕುವ್ವಂತಿ ॥೮೯॥**

**ಯಾವವುಗಳಿಗೆ ಗತಿಯಿದೆಯವಕೆ ಮತ್ತೆ ಸ್ಥಿರತೆ ಸಂಭವಿಸುವುದು ।**
**ಅವೆಲ್ಲವು ತಮ್ಮ ಪರಿಣಾಮಗಳಿಂದ ಗತಿ-ಸ್ಥಿತಿಯ ಮಾಡುತಿರುವವು ॥೮೯॥**

ಆ ಜೀವ ಮತ್ತು ಪುದ್ಗಲಗಳ ಗತಿ-ಸ್ಥಿತಿಯಲ್ಲಿ ಧರ್ಮ-ಅಧರ್ಮದ್ರವ್ಯಗಳು ಉಪಾದಾನ ಕಾರಣವಿದ್ದರೆ ಮತ್ತು ಬಲವಂತತೆಯಿಂದ ಅದನ್ನು ನಡೆಯುವಂತೆ ಮಾಡುತ್ತಿದ್ದರೆ ಅಥವಾ ಸ್ಥಿರ ಮಾಡುತ್ತಿದ್ದರೆ ಯಾವ ಪದಾರ್ಥಗಳು ಗತಿಮಾನವಿವೆ ಅವು ಯಾವಾಗಲೂ ಗತಿ ಕಾರ್ಯವನ್ನೇ ಮಾಡಬೇಕು ಮತ್ತು ಯಾವ ಪದಾರ್ಥಗಳು ಸ್ಥಿರವಿವೆ ಅವು ಯಾವಾಗಲೂ ಸ್ಥಿರವಾಗಿಯೇ ಇರಬೇಕು. ಆದರೆ ಹೀಗೆ ಸಂಭವಿಸುವುದಿಲ್ಲ ಮತ್ತು ಇದೇ ಲೋಕದಲ್ಲಿ ಧರ್ಮ-ಅಧರ್ಮಗಳಿವೆ. ಅದು ಮುಖ್ಯಕಾರಣವಿದ್ದರೆ ಧರ್ಮದ್ರವ್ಯವು ನಾನು ಈ ಪದಾರ್ಥಗಳನ್ನು ಗಮನ ಮಾಡಿಸುತ್ತೇನೆಂದು ಹೇಳುವುದು ಮತ್ತು ಅಧರ್ಮದ್ರವ್ಯವು ಅದೇ ಪದಾರ್ಥಗಳನ್ನು ನಾನು ಸ್ಥಿರಗೊಳಿಸುತ್ತೇನೆಂದು ಹೇಳುವುದು. ಹೀಗಾಗುವುದರಿಂದ ಪರಸ್ಪರ ಮತ್ಸರೋ ಭವತಿ ಎಂದರೆ ಧರ್ಮ-ಅಧರ್ಮದಲ್ಲಿ ಕಲಹ ಉಂಟಾಗುವುದು. ಈ ರೀತಿಯಿಂದ ಶ್ರೀ ಜಯಸೇನಾಚಾರ್ಯರು ತರ್ಕ ಮಂಡಿಸಿದ್ದಾರೆ ಅದು ತಿಳಿಸಿಕೊಡುವ ರೀತಿಯಿದೆ. ಧರ್ಮ-ಅಧರ್ಮಗಳು ಗತಿ-ಸ್ಥಿತಿಯಲ್ಲಿ ಮುಖ್ಯ ಕಾರಣವಿಲ್ಲ.

ಜೀವ ಮತ್ತು ಪುದ್ಗಲ ಪದಾರ್ಥಗಳು ತಮ್ಮ ಉದಾಸೀನ ಕಾರಣದಿಂದ ಗತಿ-ಸ್ಥಿತಿಯ ಪರಿಣಾಮವನ್ನು ಪ್ರಾಪ್ತ ಮಾಡಿಕೊಳ್ಳುತ್ತದೆ. ಯಾವುದೇ ಅನ್ಯಪದಾರ್ಥವು ಅವನ್ನು ನಡೆಯಿಸುವುದಿಲ್ಲ ಅಥವಾ ಸ್ಥಿರಗೊಳಿಸುವುದಿಲ್ಲ. ಆದುದರಿಂದ ಧರ್ಮ-ಅಧರ್ಮದ್ರವ್ಯಗಳು ಮುಖ್ಯಕಾರಣವಿಲ್ಲ, ಆದರೆ ವ್ಯವಹಾರನಯದ ಅಪೇಕ್ಷೆಯಿಂದ ಉದಾಸೀನರೂಪದ ನಿಮಿತ್ತಕಾರಣವಿವೆಯೆಂಬುದು ನಿಶ್ಚಿತವಾಗುತ್ತದೆ.

ಈ ಕೋಲು ಮೇಲೇಳುತ್ತದೆ ಅದು ಕೈಯಿಂದ ಮೇಲೇಳುತ್ತದೆಯೋ ಅಥವಾ ತನ್ನಿಂದಲೇ ಏಳುತ್ತದೆಯೋ ? ಈ ಕೋಲು ಕೈಯಿಂದ ಮೇಲೆ ಹೋಗುತ್ತಿದ್ದರೆ ಕೋಲಿನ ವರ್ತಮಾನವೇನು ? ವರ್ತಮಾನಪರ್ಯಾಯವು ಸಿದ್ಧವಾಗುವುದಿಲ್ಲ ಮತ್ತು ವರ್ತಮಾನಪರ್ಯಾಯವು ಸಿದ್ಧವಾಗದಿದ್ದರೆ ಪರ್ಯಾಯವಿಲ್ಲದೆ ದ್ರವ್ಯವು ಉಳಿಯುವುದಿಲ್ಲ.

ವಾಯುವಿನ ಕಾರಣದಿಂದ ಧ್ವಜವು ಚಲಿಸುತ್ತಿದ್ದರೆ ಕುದುರೆಯ ಕಾರಣದಿಂದ ಮನುಷ್ಯನು ಹೋಗುತ್ತಿದ್ದರೆ ವರ್ತಮಾನಪರ್ಯಾಯವಿಲ್ಲದೆ ದ್ರವ್ಯವಾಗುವುದರಿಂದ ದ್ರವ್ಯದ ನಾಶವಾಗುತ್ತದೆ.

ಯಾವ ಪ್ರಕಾರ ನ್ಯಾಯಾಲಯದಲ್ಲಿ ನ್ಯಾಯಾಧೀಶನು ವಾದಗಳನ್ನು ಎದುರಿನಲ್ಲಿಯೇ ಕೇಳುತ್ತಾನೆ ಅದೇ ಪ್ರಕಾರ ಇಲ್ಲಿ ವೀತರಾಗದ ನ್ಯಾಯಾಲಯವಿದೆ. ಎದುರಿನಲ್ಲಿಯೇ ವಾದಗಳನ್ನು ಕೇಳಿ ಸ್ವಯಂ ನ್ಯಾಯಾಧೀಶನಾಗಿ ನಿರ್ಣಯ ಮಾಡಬೇಕಾಗುವುದು. ನಿಮಿತ್ತದಿಂದ ಕಾರ್ಯವಾಗುತ್ತದೆಯೆಂದು ನಿಮಿತ್ತದ ಪಕ್ಷವುಳ್ಳವನು ಹೇಳುತ್ತಾನೆ. ನಿಮಿತ್ತದಿಂದ

ಕಾರ್ಯವಾಗುತ್ತದೆಯೆಂದು ಮನ್ನಿಸಿದರೆ ವರ್ತಮಾನದ ನಾಶವಾಗಿ ದ್ರವ್ಯದ ನಾಶವೂ ಆಗುತ್ತದೆ ಅದಕ್ಕಾಗಿ ಉಪಾದಾನದಲ್ಲಿ ತನ್ನಿಂದ ಕಾರ್ಯವಾಗುತ್ತದೆ ಆಗ ಪರವಸ್ತುವು ನಿಮಿತ್ತರೂಪದಿಂದ ಉಪಸ್ಥಿತವಿರುತ್ತದೆಯೆಂದು ಉಪಾದಾನವಂತನು ಹೇಳುತ್ತಾನೆ. ಆದುದರಿಂದ ಸ್ವಯಂ ತಾವು ಯಥಾರ್ಥ ವಿಚಾರಮಾಡಬೇಕಾಗುವುದು.

ಸರ್ವಜ್ಞ ಭಗವಂತರನ್ನು ಹೊರತುಪಡಿಸಿ ಧರ್ಮ-ಅಧರ್ಮದ್ರವ್ಯದ ಮಾತು ಎಲ್ಲಯೂ ನಡೆಯುವುದಿಲ್ಲ ಇಲ್ಲಿ ಮೂರು ಮಾತುಗಳನ್ನು ಅವಶ್ಯವಾಗಿ ಲಕ್ಷ್ಯದಲ್ಲಿ ಇಟ್ಟುಕೊಳ್ಳಬೇಕು.

೧) ಆತ್ಮನ ಸ್ವಭಾವವು ಅಸ್ತಿರೂಪದಿಂದ ಸರ್ವಜ್ಞವಿದೆ.

೨) ಜಗತ್ತಿನ ಆರುದ್ರವ್ಯಗಳು ಪರಿಪೂರ್ಣವಿವೆ, ಆ ಜ್ಞೇಯಗಳ ಸಾಮರ್ಥ್ಯವು ಕೂಡ ಪರಿಪೂರ್ಣವಿದೆ.

೩) ತನ್ನ ಜ್ಞಾನ ಸ್ವಭಾವದ ಕಡೆಗೆ ಪ್ರವೃತ್ತವಾಗಿ ಯಾವ ಜ್ಞಾನವು ಪ್ರಕಟವಾಗುವುದು ಅದು ಜ್ಞಾನಪರ್ಯಾಯದ ಸಾಮರ್ಥ್ಯವನ್ನು ತಿಳಿಸುತ್ತದೆ. ತನ್ನನ್ನು ತಿಳಿದರೆ ಪರಪದಾರ್ಥಗಳು ಧರ್ಮ-ಅಧರ್ಮಗಳು ಯಥಾರ್ಥವಾಗಿ ತಿಳಿದುಬರುತ್ತದೆ.

ಪ್ರತಿಯೊಂದು ಪದಾರ್ಥವು ತನ್ನ ಕಾರಣದಿಂದ ಗತಿ ಅಥವಾ ಸ್ಥಿತಿರೂಪವಾದ ಪರ್ಯಾಯವನ್ನು ಸ್ವತಂತ್ರವಾಗಿ ಮಾಡುತ್ತದೆ. ಇಂಥ ಅನಂತ ಸ್ವತಂತ್ರ ಪರ್ಯಾಯಗಳನ್ನು ಧಾರಣ ಮಾಡಿರುವಂಥ ಪ್ರತಿಯೊಂದು ಗುಣವು ಸ್ವತಂತ್ರವಿದೆ ಮತ್ತು ಇಂಥ ಅನಂತ ಸ್ವತಂತ್ರ ಗುಣಗಳನ್ನು ಧಾರಣ ಮಾಡಿರುವಂಥ ದ್ರವ್ಯವು ಕೂಡ ಸ್ವತಂತ್ರವಿದೆಯೆಂದು ಇಲ್ಲಿ ಸ್ವತಂತ್ರತೆಯನ್ನು ತಿಳಿಸಿಕೊಡಲಾಗಿದೆ.

ಈ ಕೋಲು ಕೈ ಬೆರಳುಗಳಿಂದ ನಡೆಯುತ್ತದೆಯೆಂದು ಮನ್ನಿಸುವಂಥ ಅಜ್ಞಾನೀ ಜೀವನು ಕೋಲಿನ ಕ್ಷೇತ್ರಾಂತರವಾಗುವ ಧರ್ಮವನ್ನು ಅಥವಾ ಸ್ವಭಾವವನ್ನು ನೋಡುವುದಿಲ್ಲ. ಆದರೆ ಕೈಬೆರಳು ಅಥವಾ ಯಾವುದು ಸಂಯೋಗರೂಪದಿಂದ ಇದೆ ಅದನ್ನು ನೋಡುತ್ತಾನೆ. ಕೋಲು ಕೋಲಿನ ಕಾರಣದಿಂದ ಕ್ಷೇತ್ರಾಂತರ ಮಾಡುತ್ತದೆ. ಆಗ ಕೈಯು ನಿಮಿತ್ತವೆಂದು ಕರೆಯಿಸಿಕೊಳ್ಳುತ್ತದೆ.

ಅದೇ ರೀತಿಯಾಗಿ ಜೀವ ಮತ್ತು ಪುದ್ಗಲಗಳು ತಮ್ಮ ಕಾರಣದಿಂದ ಗಮನ ಮಾಡುತ್ತವೆ ಆಗ ಧರ್ಮಾಸ್ತಿಕಾಯವು ನಿಮಿತ್ತವಿದೆ ಮತ್ತು ಅವು ಸ್ಥಿರವಾಗುತ್ತವೆ ಆಗ ಅಧರ್ಮಾಸ್ತಿಕಾಯವು ನಿಮಿತ್ತವಿದೆ. ಧರ್ಮ ಹಾಗೂ ಅಧರ್ಮ ಇವೆರಡೂ ಅರೂಪೀ ವಸ್ತುಗಳಿವೆ. ಜ್ಞಾನದಲ್ಲಿ ತಿಳಿದುಬರಲು ಯೋಗ್ಯವಿವೆ, ಆದರೆ ಜ್ಞೇಯದ ಕಾರಣದಿಂದ ಜ್ಞಾನವಿಲ್ಲ ಮತ್ತು ಎಷ್ಟು ಜ್ಞೇಯಗಳಿವೆ ಅವೆಲ್ಲವನ್ನು ತಿಳಿದುಕೊಳ್ಳುವ ಸಾಮರ್ಥ್ಯವುಳ್ಳುದ್ದು ಜ್ಞಾನವಿದೆಯೆಂದು ಮನ್ನಿಸದಿದ್ದರೆ ಜ್ಞಾನವು ಸತ್ಯವಾಗುವುದಿಲ್ಲ. ಪ್ರಮಾಣ ಎಂದರೆ ವಿಶೇಷ ರೀತಿಯಿಂದ ಅಳತೆ ಮಾಡುವ ಲಕ್ಷ್ಯದಲ್ಲಿ ತಂದುಕೊಳ್ಳುವ ಜ್ಞಾನವಿದೆ. ಧರ್ಮ-ಅಧರ್ಮ ಮೊದಲಾದವುಗಳ ಮಾತು ಮಾಡಲಾಗಿದೆ ಅದರಲ್ಲಿ ಜ್ಞಾನದ ಮಾಹಾತ್ಮ್ಯವನ್ನು ತಿಳಿಸಲಾಗಿದೆ ಅಥವಾ ಜ್ಞಾನವು ಸೂಕ್ಷ್ಮ ಅರೂಪೀ ಪದಾರ್ಥಗಳನ್ನು ಕೂಡ ತಿಳಿದುಕೊಳ್ಳುತ್ತದೆಯೆಂದು ಜ್ಞಾನಸ್ವಭಾವದ ಮಾಹಾತ್ಮ್ಯವನ್ನು ತಂದುಕೊಂಡರೆ ಸಮ್ಯಕ್‌ಜ್ಞಾನವು ಪ್ರಕಟವಾಗುವುದು ಮತ್ತು ಅಲ್ಪಕಾಲದಲ್ಲಿ ಸಂಪೂರ್ಣ ಪ್ರತ್ಯಕ್ಷ ಕೇವಲಜ್ಞಾನವು ಪ್ರಕಟವಾಗುತ್ತದೆ ಮತ್ತು ಆಗ ಸಮಸ್ತ ಪದಾರ್ಥಗಳು ತಿಳಿದುಬರುತ್ತವೆ. ಹೀಗೆ ಜ್ಞಾನಸ್ವಭಾವದ ಪ್ರತೀತಿ ಮಾಡಿಸುವ ಸಲುವಾಗಿ ಈ ಕಥನವಿದೆ.

ಈಗ ಆಕಾಶದ್ರವ್ಯದ ವ್ಯಾಖ್ಯಾನ ಮಾಡುತ್ತಾರೆ -

**ಸವ್ವೇಸಿಂ ಜೀವಾಣಂ ಸೇಸಾಣಂ ತಹ ಯ ಪೋಗ್ಗಲಾಣಂ ಚ ।**
**ಜಂ ದೇದಿ ವಿವರಮಖಿಲಂ ತಂ ಲೋಗೇ ಹವದಿ ಆಗಾಸಂ ॥೯೦॥**

**ಯಾವುದು ಲೋಕದಿ ಜೀವ-ಪುದ್ಗಲಗಳಿಗೆ ಅಂತೆ ಉಳಿದೆಲ್ಲ ದ್ರವ್ಯಗಳಿಗೆ ।**
**ಅವಕಾಶವನು ಪೂರ್ಣಕೊಡುತಿರುವುದದು ಆಕಾಶನಾಮದ ದ್ರವ್ಯವಿದೆ ॥೯೦॥**

ಆಕಾಶವಿದೆ ಅದಕ್ಕಾಗಿ ಅಸ್ತಿ ಮತ್ತು ಅನಂತ ಪ್ರದೇಶಿಯಿದೆ ಅದಕ್ಕಾಗಿ ಕಾಯ ಹೀಗೆ ಆಕಾಶವು ಅಸ್ತಿಕಾಯವಿದೆ. ನಾನು ಅನಂತ ಜೀವ ಮೊದಲಾದ ದ್ರವ್ಯಗಳಿಗೆ ಅವಕಾಶಕೊಡುತ್ತೇನೆಂದು ಸ್ವಯಂ ಆಕಾಶಕ್ಕೆ ಪ್ರಜ್ಞೆಯಿಲ್ಲ. ಆದುದರಿಂದ ಅದಕ್ಕೆ ಸ್ವಭಾವವಿಲ್ಲವೆಂದು ಅರ್ಥವಲ್ಲ. ಜಡ ಪದಾರ್ಥಗಳು ಕೂಡ ಸ್ವಭಾವವುಳ್ಳವುಗಳಿವೆ. ಇಡೀ ಲೋಕವು ಸೂಕ್ಷ್ಮ ಪರಿಣಮನ ಮಾಡಿದರೆ ಒಂದು ಪ್ರದೇಶದಲ್ಲಿ ಅದು ಎಲ್ಲವುಗಳಿಗೆ ಅವಗಾಹನಕೊಡುವಂಥ ಸಾಮರ್ಥ್ಯವು ಆಕಾಶ ದ್ರವ್ಯದಲ್ಲಿ ಇದೆ. ಹೀಗೆ ಆಕಾಶದ ಸಾಮರ್ಥ್ಯವಿದ್ದರೂ ಕೂಡ ಆ ಆಕಾಶವು ಸ್ವಯಂ ತಿಳಿದುಕೊಳ್ಳುವುದಿಲ್ಲ. ತಿಳಿದುಕೊಳ್ಳುವವನಂತೂ ಆತ್ಮನಿದ್ದಾನೆ. ಅಯ್ಯಾ ! ನನಗೆ ಆಕಾಶದ ಅನಂತತೆಯ ಪ್ರಜ್ಞೆಯಿದೆಯೆಂದು ತಾನು ತನ್ನ ಅಪಾರ ಜ್ಞಾನ ಸ್ವಭಾವವು ರಾಗದಿಂದ ರಹಿತವಿದೆಯೆಂದು ಒಪ್ಪಿಕೊಂಡವನಿಗೆ ಸಮ್ಯಗ್ದರ್ಶನ ಮತ್ತು ಸಮ್ಯಕ್‌ಜ್ಞಾನದ ಪ್ರಕಟತೆಯಾಗುತ್ತದೆ. ಆಕಾಶವು ಸಮಸ್ತ ಜೀವಗಳು, ಧರ್ಮ, ಅಧರ್ಮ, ಕಾಲ ಮತ್ತು ಪುದ್ಗಲಗಳು ಈ ಐದೂ ಪ್ರಕಾರದ ದ್ರವ್ಯಗಳಿಗೆ ಅವಗಾಹನ ಕೊಡುತ್ತದೆ.

ಷಡ್‌ದ್ರವ್ಯಾತ್ಮಕವಾದ ಲೋಕದಲ್ಲಿ ಉಳಿದ ಎಲ್ಲ ದ್ರವ್ಯಗಳಿಗೆ ಯಾವುದು ಸಂಪೂರ್ಣ ಅವಕಾಶಕ್ಕೆ ನಿಮಿತ್ತವಿದೆ ಅದು ಆಕಾಶವಿದೆ. ಏಕೆಂದರೆ ಆ ಆಕಾಶವು ವಿಶುದ್ಧಕ್ಷೇತ್ರರೂಪವಿದೆ.